JJ-51

(B) 25237

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು

KARNATAKA LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ಹದಿಮೂರನೇ ವಿಧಾನಸಭೆಯ ಮೂರನೇ ಅಧಿವೇಶನ

THIRD SESSION OF THE THIRTEENTH LEGISLATIVE ASSEMBLY

ಸಂಪುಟ – ೧೧ (ಕ್ರಮಾಂಕ – ೨)

Volume - 11 (No. 2)

(೨೯ನೇ ಜುಲೈ ೨೦೦೯)

(29th July 2009)

ಭಾಗ – ೨

PART – II

ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು

Karnataka Legislative Assembly Secretariat, Bangalore

(B) 25237

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು
KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

ಹದಿಮೂರನೇ ವಿಧಾನಸಭೆಯ ಮೂರನೇ ಅಧಿವೇಶನ
THIRD SESSION OF THE THIRTEENTH LEGISLATIVE ASSEMBLY

ಸಂಪುಟ – ೧೧ (ಕ್ರಮಾಂಕ – ೨)
Volume - 11 (No. 2)

(೨೯ನೇ ಜುಲೈ ೨೦೦೯)
(29th July 2009)

ಭಾಗ – ೨
PART – II

ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು
Karnataka Legislative Assembly Secretariat, Bangalore

ಕರ್ನಾಟಕ ವಿಧಾನಸಭೆ
ಹದಿಮೂರನೇ ವಿಧಾನಸಭೆ
ಮೂರನೇ ಅಧಿವೇಶನ

ಶ್ರೀ ಜಗದೀಶ್ ಶೆಟ್ಟರ್
ಅಧ್ಯಕ್ಷರು

ಕರ್ನಾಟಕ ವಿಧಾನ ಸಭೆ

ವಿಷಯಾನುಕ್ರಮಣಿಕೆ

ಸಂಪುಟ–11 (ಕ್ರಮಾಂಕ – 2)

(29ನೇ ಜುಲೈ, 2009)

ಬುಧವಾರ, ದಿನಾಂಕ: 29ನೇ ಜುಲೈ, 2009

ಪುಟ ಸಂಖ್ಯೆ

1. ಚುನಾವಣಾ ಪ್ರಸ್ತಾವ : 431–433

ವಿಷಯ: ವಿಧಾನಸಭೆಯ ವಿವಿಧ ಸಮಿತಿಗಳನ್ನು ರಚಿಸುವ ಬಗ್ಗೆ :

– ಶ್ರೀ ಎಸ್. ಸುರೇಶ್‌ಕುಮಾರ್
(ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

2. ಶಾಸನ ರಚನೆ : 434–518

ವಿಷಯ: ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

ಅ) ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕ–2009

– ಶ್ರೀ ಬಿ.ಎಸ್. ಯಡಿಯೂರಪ್ಪ
– ಶ್ರೀ ಟಿ.ಬಿ. ಜಯಚಂದ್ರ
– ಶ್ರೀ ಹೆಚ್.ಡಿ. ರೇವಣ್ಣ
– ಶ್ರೀ ಹೆಚ್.ಸಿ. ಬಾಲಕೃಷ್ಣ
– ಶ್ರೀ ಕಿಮ್ಮನೆ ರತ್ನಾಕರ್
– ಶ್ರೀ ಎಸ್. ಸುರೇಶ್‌ಕುಮಾರ್

ಮಸೂದೆ ಅಂಗೀಕರಿಸಲ್ಪಟ್ಟಿತು
(ಅನುಬಂಧ–1)

ಪುಟ ಸಂಖ್ಯೆ

ಆ) ಕರ್ನಾಟಕ ಸ್ಟಾಂಪ್ (ಎರಡನೇ ತಿದ್ದುಪಡಿ) ವಿಧೇಯಕ 2009

– ಶ್ರೀ ಕರುಣಾಕರ ರೆಡ್ಡಿ
(ಮಾನ್ಯ ಕಂದಾಯ ಸಚಿವರು)

ಮಸೂದೆ ಅಂಗೀಕರಿಸಲ್ಪಟ್ಟಿತು
(ಅನುಬಂಧ–2)

ಇ) ಕರ್ನಾಟಕ ಪೌರಸಭೆಗಳ ಕಾನೂನು ಹಾಗೂ ಇನ್ನೊಂದು ಕಾನೂನಿನ (ತಿದ್ದುಪಡಿ) ವಿಧೇಯಕ 2009

(ಅನುಬಂಧ–3)

– ಶ್ರೀ ಎಸ್. ಸುರೇಶ್‌ಕುಮಾರ್
(ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
– ಶ್ರೀ ಟಿ. ಬಿ. ಜಯಚಂದ್ರ
– ಶ್ರೀ ಹೆಚ್. ಡಿ. ರೇವಣ್ಣ
– ಶ್ರೀ ಎಂ. ಟಿ. ಕೃಷ್ಣಪ್ಪ

ಮಸೂದೆ ಅಂಗೀಕರಿಸಲ್ಪಟ್ಟಿತು

ಈ) ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕ 2009

– ಶ್ರೀ ವಿ.ಎಸ್. ಆಚಾರ್ಯ (ಮಾನ್ಯ ಗೃಹ ಸಚಿವರು)
– ಶ್ರೀ ಟಿ.ಬಿ. ಜಯಚಂದ್ರ

ಮಸೂದೆ ಅಂಗೀಕರಿಸಲ್ಪಟ್ಟಿತು
(ಅನುಬಂಧ–4)

ಉ) ಭಾರತ ದಂಡ ಸಂಹಿತೆ ಮತ್ತು ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ 2009

ಪುಟ ಸಂಖ್ಯೆ

– ಡಾ: ವಿ.ಎಸ್. ಆಚಾರ್ಯ
(ಮಾನ್ಯ ಗೃಹ ಸಚಿವರು)
– ಶ್ರೀ ಬಿ.ಸಿ. ಪಾಟೀಲ್
– ಶ್ರೀ ಎಂ.ಟಿ. ಕೃಷ್ಣಪ್ಪ
– ಶ್ರೀ ಟಿ.ಬಿ. ಜಯಚಂದ್ರ

ಮಸೂದೆ ಅಂಗೀಕರಿಸಲ್ಪಟ್ಟಿತು
(ಅನುಬಂಧ–5)

ಊ) ಕರ್ನಾಟಕ ವ್ಯವಸ್ಥಿತ ಅಪರಾಧಗಳು (ತಿದ್ದುಪಡಿ) ನಿಯಂತ್ರಣ ವಿಧೇಯಕ 2009.

– ಡಾ: ವಿ.ಎಸ್.ಆಚಾರ್ಯ
(ಮಾನ್ಯ ಗೃಹ ಸಚಿವರು)
– ಶ್ರೀ ಬಿ.ಸಿ.ಪಾಟೀಲ್
– ಶ್ರೀ ಯು.ಟಿ.ಖಾದರ್

ಮಸೂದೆ ಅಂಗೀಕರಿಸಲ್ಪಟ್ಟಿತು
(ಅನುಬಂಧ–6)

ಋ) ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ, 10–14 ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವ ಅಪಾಯಕಾರಿ ಚಟುವಟಿಕೆಗಳನ್ನು ತಡೆಗಟ್ಟುವ (ತಿದ್ದುಪಡಿ) ವಿಧೇಯಕ 2009.

– ಡಾ: ವಿ.ಎಸ್. ಆಚಾರ್ಯ
(ಮಾನ್ಯ ಗೃಹ ಸಚಿವರು)
– ಶ್ರೀ ಬಿ.ಸಿ. ಪಾಟೀಲ್
– ಶ್ರೀ ಸಿದ್ದರಾಮಯ್ಯ

ಪುಟ ಸಂಖ್ಯೆ

– ಶ್ರೀ ವಿ. ಉಮೇಶ್ ಕತ್ತಿ
– ಶ್ರೀ ಆರ್. ರೋಷನ್ ಬೇಗ್
– ಶ್ರೀ ಸಿ.ಎಸ್. ಪುಟ್ಟೇಗೌಡ
– ಶ್ರೀ ಕೆ.ಎಂ. ಶಿವಲಿಂಗೇಗೌಡ
– ಶ್ರೀ ಎನ್. ಯೋಗಿಶ್‌ಭಟ್
– ಶ್ರೀ ಯು.ಟಿ. ಖಾದರ್
– ಶ್ರೀ ಬಿ.ಕೆ. ಸಂಗಮೇಶ್ವರ್
– ಶ್ರೀ ಎಸ್.ವಿ. ರಾಮಚಂದ್ರಪ್ಪ

ಮಸೂದೆ ಅಂಗೀಕರಿಸಲ್ಪಟ್ಟಿತು
(ಅನುಬಂಧ–7)

3. ವಿತ್ತೀಯ ಕಾರ್ಯಕಲಾಪ : 518–536

2009–10ನೇ ಸಾಲಿನ ಬೇಡಿಕೆಗಳ ಮೇಲೆ ಚರ್ಚೆ
– ಶ್ರೀ ಆರ್. ರೋಷನ್ ಬೇಗ್

4. ಪ್ರಕಟಣೆ : 536

ವಿಷಯ: ಮಾನ್ಯ ಮುಖ್ಯಮಂತ್ರಿಗಳು ಶಾಸಕರ/ಸಚಿವರ ಗೌರವಾರ್ಥ ಬ್ಯಾಂಕ್ವೆಟ್ ಹಾಲ್‌ನಲ್ಲಿ ಔತಣ ಕೂಟವನ್ನು ಏರ್ಪಡಿಸಿರುವ ಬಗ್ಗೆ.

5. ವಿತ್ತೀಯ ಕಾರ್ಯಕಲಾಪ : 537–699

ವಿಷಯ: 2009–10ನೇ ಸಾಲಿನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ ಮತ್ತು ಸರ್ಕಾರದಿಂದ ಉತ್ತರ

– ಶ್ರೀ ಕೆ.ಎಂ. ಶಿವಲಿಂಗೇಗೌಡ
– ಶ್ರೀ ಪಿ.ಎಂ. ಅಶೋಕ್
– ಶ್ರೀ ಎಂ.ಪಿ. ರೇಣುಕಾಚಾರ್ಯ

ಪುಟ ಸಂಖ್ಯೆ

– ಶ್ರೀ ವೆಂಕಟಸ್ವಾಮಿ
– ಡಾ: ಎ.ಬಿ. ಮಾಲಕರೆಡ್ಡಿ
– ಶ್ರೀ ಹೆಚ್.ಡಿ. ರೇವಣ್ಣ
– ಶ್ರೀ ಸಿದ್ದರಾಮಯ್ಯ
– ಶ್ರೀ ಬಿ.ಎಸ್. ಯಡಿಯೂರಪ್ಪ
(ಮಾನ್ಯ ಮುಖ್ಯಮಂತ್ರಿಗಳು)

(2009–10ನೇ ಸಾಲಿನ ಅನುದಾನ ಬೇಡಿಕೆಗಳ
ಅಂಗೀಕಾರ)

6. 2009–10ನೇ ಸಾಲಿನ ಪೂರಕ ಅಂದಾಜುಗಳ (ಒಂದನೇ ಕಂತು) ಮಂಡನೆ (ಪೂರಕ ಅಂದಾಜುಗಳ ಮಂಡನೆ) **699–700**

– ಶ್ರೀ ಬಿ.ಎಸ್.ಯಡಿಯೂರಪ್ಪ
(ಮಾನ್ಯ ಮುಖ್ಯಮಂತ್ರಿಗಳು)
(2009–10ನೇ ಸಾಲಿನ ಪೂರಕ ಅಂದಾಜುಗಳ
(ಒಂದನೆ ಕಂತು) ಅಂಗೀಕಾರ
(ಅನುಬಂಧ–8)

7. ಶಾಸನ ರಚನೆ : **701–779**

ವಿಧೇಯಕಗಳ ಮಂಡನೆ, ಪರ್ಯಾಲೋಚನೆ ಹಾಗೂ
ಅಂಗೀಕಾರ

1. ಕರ್ನಾಟಕ ಧನ ವಿನಿಯೋಗ (ಸಂಖ್ಯೆ–2) ವಿಧೇಯಕ 2009
(ಅನುಬಂಧ–9)

– ಶ್ರೀ ಬಿ.ಎಸ್.ಯಡಿಯೂರಪ್ಪ
(ಮಾನ್ಯ ಮುಖ್ಯಮಂತ್ರಿಗಳು)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

ಪುಟ ಸಂಖ್ಯೆ

2. ಕರ್ನಾಟಕ ಧನ ವಿನಿಯೋಗ (ಸಂಖ್ಯೆ-3)
ವಿಧೇಯಕ 2009

(ಅನುಬಂಧ-10)

– ಶ್ರೀ ಬಿ.ಎಸ್.ಯಡಿಯೂರಪ್ಪ
(ಮಾನ್ಯ ಮುಖ್ಯಮಂತ್ರಿಗಳು)

(ವಿಧೇಯಕ ಅಂಗೀಕರಿಸಲ್ಪಟ್ಟಿದೆ)

3. ಕರ್ನಾಟಕ ವಿಧಾನ ಮಂಡಲದವರ ವೇತನಗಳು,
ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ)
ವಿಧೇಯಕ 2009

(ಅನುಬಂಧ-11)

– ಶ್ರೀ ಎಸ್. ಸುರೇಶ್‌ಕುಮಾರ್
(ಮಾನ್ಯ ಕಾನೂನು ಹಾಗೂ ಸಂಸದೀಯ
ವ್ಯವಹಾರಗಳ ಸಚಿವರು)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

4. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕ 2009
ಪರ್ಯಾಲೋಚನಾ ಪ್ರಸ್ತಾವ

– ಶ್ರೀ ಎಸ್.ಎ. ರವೀಂದ್ರನಾಥ್
(ಮಾನ್ಯ ಕೃಷಿ ಸಚಿವರು)
– ಶ್ರೀ ಸಿದ್ದರಾಮಯ್ಯ
– ಶ್ರೀ ಹೆಚ್.ಡಿ. ರೇವಣ್ಣ
– ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ

ಪುಟ ಸಂಖ್ಯೆ

– ಶ್ರೀ ಎಂ. ನಾರಾಯಣಸ್ವಾಮಿ
– ಶ್ರೀ ವೆಂಕಟರಾವ್ ನಾಡಗೌಡ
– ಶ್ರೀ ಟಿ.ಬಿ. ಜಯಚಂದ್ರ
– ಶ್ರೀ ಹೆಚ್.ಸಿ. ಬಾಲಕೃಷ್ಣ
– ಶ್ರೀ ಕಿಮ್ಮನೆ ರತ್ನಾಕರ್
– ಶ್ರೀ ಹೆಚ್.ಡಿ.ರೇವಣ್ಣ
– ಶ್ರೀ ಕೆ.ಎಂ.ವಿರೂಪಾಕ್ಷಪ್ಪ
– ಶ್ರೀ ಸಿ.ಎಸ್.ನಾಡಗೌಡ
– ಶ್ರೀ ನ.ಲ.ನರೇಂದ್ರಬಾಬು
– ಶ್ರೀ ಬಿ.ರಮಾನಾಥ ರೈ
– ಶ್ರೀ ಕರಡಿ ಸಂಗಣ್ಣ ಅಮರಪ್ಪ
– ಡಾ: ಎಂ.ಸಿ.ಸುಧಾಕರ್
– ಶ್ರೀ ಎ.ಎಸ್.ಪಾಟೀಲ್
– ಶ್ರೀ ಯು.ಟಿ.ಖಾದರ್
– ಶ್ರೀ ಸಿದ್ದರಾಮಯ್ಯ
– ಶ್ರೀ ಎಸ್.ಸುರೇಶ್‌ಕುಮಾರ್
(ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಮಸೂದೆ ಅಂಗೀಕರಿಸಲ್ಪಟ್ಟಿತು

(ಅನುಬಂಧ–12)

8. ಪ್ರಕಟಣೆ : 780–781

ವಿಷಯ: ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶ.

ಪುಟ ಸಂಖ್ಯೆ

9. ಶಾಸನ ರಚನೆ : 781–792

ವಿಷಯ: ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

1) ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕ 2009

– ಶ್ರೀ ವಿ. ಉಮೇಶ್ ಕತ್ತಿ
(ಮಾನ್ಯ ತೋಟಗಾರಿಕಾ ಸಚಿವರು)
– ಶ್ರೀ ಟಿ.ಬಿ. ಜಯಚಂದ್ರ
– ಶ್ರೀ ಸಿದ್ದರಾಮಯ್ಯ
– ಶ್ರೀ ಕಿಮ್ಮನೆ ರತ್ನಾಕರ್

ಮಸೂದೆ ಅಂಗೀಕರಿಸಲ್ಪಟ್ಟಿತು
(ಅನುಬಂಧ–13)

2) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ 2009 792–798

– ಶ್ರೀ ಅರವಿಂದ ಲಿಂಬಾವಳಿ
(ಉನ್ನತ ಶಿಕ್ಷಣ ಸಚಿವರು)
– ಶ್ರೀ ಟಿ.ಬಿ. ಜಯಚಂದ್ರ
– ಶ್ರೀ ಸಿದ್ದರಾಮಯ್ಯ
– ಶ್ರೀ ಕೆ.ಎಂ. ವಿರೂಪಾಕ್ಷಪ್ಪ
– ಶ್ರೀ ನ.ಲ. ನರೇಂದ್ರಬಾಬು

ಮಸೂದೆ ಅಂಗೀಕರಿಸಲ್ಪಟ್ಟಿತು
(ಅನುಬಂಧ–14)

ಪುಟ ಸಂಖ್ಯೆ

3) ಕರ್ನಾಟಕ ರಾಜ್ಯ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ವಿಧೇಯಕ 2009 798–801

– ಶ್ರೀ ಅರವಿಂದ ಲಿಂಬಾವಳಿ
(ಉನ್ನತ ಶಿಕ್ಷಣ ಸಚಿವರು)

ಮಸೂದೆ ಅಂಗೀಕರಿಸಲ್ಪಟ್ಟಿತು
(ಅನುಬಂಧ–15)

4) ಕರ್ನಾಟಕ ಸಂಸ್ಕೃತ, ವೇದ ವಿಶ್ವವಿದ್ಯಾಲಯ ವಿಧೇಯಕ 2009 801–1637

– ಶ್ರೀ ಅರವಿಂದ ಲಿಂಬಾವಳಿ
(ಉನ್ನತ ಶಿಕ್ಷಣ ಸಚಿವರು)
– ಶ್ರೀ ಸಿದ್ದರಾಮಯ್ಯ
– ಶ್ರೀ ಸಿ.ಟಿ. ರವಿ
– ಶ್ರೀ ಹೆಚ್.ಡಿ. ರೇವಣ್ಣ

(ವಿಧೇಯಕದ ಪರ್ಯಾಲೋಚನೆಯನ್ನು ಮುಂದೂಡಲಾಯಿತು)

(ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಯಿತು)

* * *

ಕರ್ನಾಟಕ ವಿಧಾನ ಸಭೆ

ಬುಧವಾರ 29ನೇ ಜುಲೈ 2009ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆ 55 ನಿಮಿಷಕ್ಕೆ ಸಮಾವೇಶಗೊಂಡಿತು. ಅಧ್ಯಕ್ಷರು ಶ್ರೀ ಜಗದೀಶ್ ಶೆಟ್ಟರ್‌ರವರು ಪೀಠವನ್ನು ಅಲಂಕರಿಸಿದ್ದರು.

(ಸದನವು 10–55 ಗಂಟೆಗೆ ಪ್ರಾರಂಭವಾಯಿತು ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

(11-00 AM)

1. ಚುನಾವಣಾ ಪ್ರಸ್ತಾಪ :

ವಿಷಯ : ವಿಧಾನ ಸಭೆಯ ವಿವಿಧ ಸಮಿತಿಗಳನ್ನು ರಚಿಸುವ ಬಗ್ಗೆ.

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ: 14–07–09 ರಂದು ವಿಧಾನಸಭೆಯ ಸಮಿತಿಗಳನ್ನು ರಚಿಸುವ ಪ್ರಸ್ತಾವನೆಯನ್ನು ಮಂಡಿಸಿದ್ದು, ಚುನಾವಣಾ ಕಾರ್ಯಕ್ರಮಗಳ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ಅಲ್ಲದೆ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯಗಳ ಸೆನೆಟ್‌ಗೆ ಮೂರು ಜನ ಸದಸ್ಯರನ್ನು ಹಾಗೂ ಅನಾಥಾಲಯ ಮತ್ತು ಧಾರ್ಮಿಕ ಸ್ಥಳಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣ ಮಂಡಳಿಗೆ ಇಬ್ಬರು ಸದಸ್ಯರನ್ನು ಚುನಾಯಿಸಲು ಸಹ ಪ್ರಸ್ತಾಪವನ್ನು ಮಂಡಿಸಲಾಗಿರುತ್ತದೆ. ಆದುದರಿಂದ ಸದಸ್ಯರನ್ನು ನಾಮನಿರ್ದೇಶನ ಮಾಡಲು ಈ ಸದನವು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರ ನೀಡಬೇಕೆಂದು ಕೋರುತ್ತದೆ.

ಅಧ್ಯಕ್ಷರು : ಪ್ರಸ್ತಾವ ಮಂಡಿಸಲಾಗಿದೆ. ಮಾನ್ಯ ಸಚಿವರು ಮಂಡಿಸಿದ ಪ್ರಸ್ತಾವಕ್ಕೆ ಸದನದ ಸಹಮತಿ ಇದೆ ಎಂದು ನಾನು ಭಾವಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ.

ಅಧ್ಯಕ್ಷರು : ಮಾನ್ಯ ರೇವಣ್ಣನವರೇ ನೀವೇನು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೀರಿ ಅದು ಬೇಡ, ಡಿಮಾಂಡ್ ಮೇಲೆ ಚರ್ಚೆ

ಮಾಡೋಣ. ಪ್ರತಿ ದಿನಾ ಒಂದೊಂದು ವಿಷಯ ಚರ್ಚೆ ಮಾಡಿದ್ದೀರಿ. ಇವತ್ತು ಕೊನೇ ದಿವಸ. ಇಲ್ಲಿಯವರೆಗೂ ತಾವು ಎಷ್ಟು ನಿಲುವಳಿ ಸೂಚನೆಗಳನ್ನು ಕೊಟ್ಟಿದ್ದೀರಿ ಅದೆಲ್ಲವಕ್ಕೂ ನಾನು ಅವಕಾಶ ಮಾಡಿ ಕೊಟ್ಟಿದ್ದೇನೆ. ಸರ್ಕಾರದವರೂ ಸಾಕಷ್ಟು ಉತ್ತರಗಳನ್ನು ಕೊಟ್ಟಿದ್ದಾರೆ. ಮಾನ್ಯ ರೇವಣ್ಣನವರೆ ನನ್ನದೊಂದು ಮನವಿ ಇದೆ. ಈ ವಿಷಯವನ್ನು ಬಿಟ್ಟು ತಾವು ಡಿಮಾಂಡ್ಸ್ ಮೇಲೆ ಚರ್ಚೆ ಮಾಡಿದರೆ ಇನ್ನಷ್ಟು ಅವಕಾಶ ಕೊಡುತ್ತೇನೆ. ನಿಮಗೆ ಮೊದಲು ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಯಾವ್ಯಾವುದೋ ವಿಷಯವನ್ನು ನಿಲುವಳಿ ಸೂಚನೆ ಮೂಲಕ ತರುವುದಕ್ಕಾಗುವುದಿಲ್ಲ. ಇದು ಒಂದು ವರ್ಷದ ಹಿಂದೆ ಆಗಿರುವುದು. ಇತ್ತೀಚೆಗೆ ಆಗಿರುವುದು ಅಲ್ಲ, ಜರೂರು ವಿಷಯವೂ ಅಲ್ಲ, ನಿರ್ದಿಷ್ಟ ವಿಷಯವೂ ಅಲ್ಲ. ಅದಕ್ಕಾಗಿ ದಯವಿಟ್ಟು ಈ ವಿಧೇಯಕ ಆದ ಮೇಲೆ ಮೊದಲನೆ ಭಾಷಣವೇ ಬೇಡಿಕೆಗಳ ಮೇಲೆ ಅವರೇ ಚರ್ಚೆ ಮಾಡಲಿ.

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ನಾನು ನಿಮಗೆ ಹೇಳಿದ್ದೇನೆ. ನೀವು ಡಿಮ್ಯಾಂಡ್ಸ್ ಮೇಲೆ ಮಾತನಾಡುವಾಗ ಮೊದಲು ಅದನ್ನೇ ಮಾತನಾಡಿ. ಮಾನ್ಯ ಸುರೇಶ್‌ಕುಮಾರ್‌ರವರು ಏನು ಹೇಳಿದರು, ಒಂದು ವರ್ಷದ ಹಿಂದೆ ನಡೆದಂತಹ ಘಟನೆ ಆಗಿರುವುದರಿಂದ ಅದು prima facie ಆಗಿ ಬರುವುದಿಲ್ಲವೆಂದು ನಾನು ಹೇಳಿದ್ದೇನೆ. ನಾನು ಈಗಾಗಲೇ ಡಿಸಿಷನ್ ಕೊಟ್ಟಿದ್ದೇನೆ. ಡಿಮಾಂಡ್ಸ್ ಮೇಲೆ ಮಾತನಾಡುವಾಗ ಅದರ ಬಗ್ಗೆ ಮಾತನಾಡಿ ನಿಮಗೆ ಯಾರೂ ಬೇಡವೆಂದು ಹೇಳುವುದಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, Preliminary Submission ಮಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು : Preliminary Submission ಮಾಡುವುದಕ್ಕೆ ಬರುವುದಿಲ್ಲ. ನಾನು ಈಗಾಗಲೇ ಅದರ ಬಗ್ಗೆ communicate ಮಾಡಿದ್ದೇನೆ. ಡಿಮಾಂಡ್ಸ್ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆಂದು ನಿಮಗೆ ಈಗಾಗಲೇ communicate ಕೂಡ ಮಾಡಿದ್ದೇನೆ. ದಯವಿಟ್ಟು ಬೇಡ. ನಿಮಗೆ ಸಾಕಷ್ಟು ಅವಕಾಶ ಕೊಟ್ಟಿದ್ದೇನೆ. ಬಿಲ್‌ಗಳು ಪಾಸ್ ಆಗಲಿ, ಅದಾದ ಮೇಲೆ ಡಿಮಾಂಡ್ಸ್ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, Chief Secretary ಕೈಯಲ್ಲಿ Affidavit ಕೊಡಿಸಿ ನಂತರ ನೀವು ಆದೇಶ ಹೊರಡಿಸಿದ್ದೀರಿ. 1400 ಕೋಟಿ ರೂಪಾಯಿಗಳ ಹಗರಣ ಇದು.

ಅಧ್ಯಕ್ಷರು : I have already rejected your Adjournment Motion, please discuss it on demands.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರು ಎಲ್ಲಾ ವಿಷಯಗಳನ್ನು ಪ್ರಸ್ತಾಪ ಮಾಡಿದಾಗ ತಾವು ಅದಕ್ಕೆ ಅವಕಾಶ ಕೊಟ್ಟಿದ್ದೀರಿ. ಈ ದಿನ ಕಡೆ ದಿವಸ ಇದೊಂದು ಸಾರಿ ಅವಕಾಶ ಕೊಟ್ಟು ಬಿಡಿ.

ಅಧ್ಯಕ್ಷರು : ಇಲ್ಲಿ important Bills ಇವೆ. Ordinance replace ಮಾಡುವಂಥದ್ದು ಇವೆ. ಇಲ್ಲಿ ಪಾಸಾಗಿ ನಂತರ ಕೌನ್ಸಿಲ್‌ಗೆ ಹೋಗಬೇಕು, ಇಲ್ಲಿಯವರೆಗೆ ಸಹಕಾರ ಕೊಟ್ಟಿದ್ದೀರಿ ಇವತ್ತು ಕೊನೆ ದಿವಸ ಇವತ್ತೂ ಸಹಕಾರ ಕೊಡಿ.

ಮಧ್ಯಾಹ್ನ ಮೂರು ಗಂಟೆಗೆ ಬಜೆಟ್ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕು. ನಾನು ಮೂರು ಗಂಟೆಗೆ ಮುಖ್ಯಮಂತ್ರಿಗಳ ಉತ್ತರ ಎಂದು ನಿಗದಿ ಮಾಡಿದ್ದೇನೆ. ಇಂದು ಮಧ್ಯಾಹ್ನ ಮೂರು ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳು Demands ಮೇಲಿನ ಚರ್ಚೆಗೆ ಉತ್ತರವನ್ನು ಕೊಡಬೇಕೆಂದು ನಿಗದಿ ಮಾಡಿದ್ದೇನೆ. ಅಷ್ಟರೊಳಗಾಗಿ ವಿಧೇಯಕಗಳು ಮತ್ತು ಬೇಡಿಕೆಗಳ ಮೇಲಿನ ಚರ್ಚೆ ಮುಗಿಯಬೇಕು.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ನನಗೆ ಐದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು : ಈಗ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಪರ್ಯಾಲೋಚನಾ ಪ್ರಸ್ತಾವ ಮಂಡಿಸಿ.

2. ಶಾಸನ ರಚನೆ :

ವಿಷಯ : ವಿಧೇಯಕಗಳನ್ನು ಪರ್ಯಾಲೋಚಿಸುವುದು ಮತ್ತು ಅಂಗೀಕರಿಸುವುದು.

ಅ) ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ವಿಧೇಯಕ, 2009

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ವಿಧೇಯಕಗಳನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಇವತ್ತು ಸುಗಮ ಆಡಳಿತದ ದೃಷ್ಟಿಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರದೇಶದಲ್ಲಿ ಸರಾಸರಿ 30 ಸಾವಿರ ಜನಸಂಖ್ಯೆಯುಳ್ಳ ಪುಟ್ಟ ಪುಟ್ಟ ಸಂಘಟಿತವಾಗಿರತಕ್ಕಂಥದ್ದನ್ನು ರಚಿಸುವಂಥದ್ದು ಅವಶ್ಯಕತೆ ಇದೆಯೆಂದು ನಾವು ಚಿಂತನೆಯನ್ನು ಮಾಡಿದ್ದೇವೆ. ಆದುದರಿಂದ ಈ ಮುಂದಿನವುಗಳಿಗೆ ಉಪಬಂಧಗಳನ್ನು ಕಲ್ಪಿಸುವುದಕ್ಕಾಗಿ ಕರ್ನಾಟಕ ಪೌರ ನಿಗಮಗಳ ಅಧಿನಿಯಮ 1976 ಅನ್ನು 1977ರ ಕರ್ನಾಟಕ ಅಧಿನಿಯಮ 14 ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಇದರಲ್ಲಿ ಏನೂ ವಿಶೇಷವಿಲ್ಲ. ನಗರ ಪಾಲಿಕೆಯ ವಾರ್ಡ್‌ಗಳ ಗರಿಷ್ಠ ಸಂಖ್ಯೆಯನ್ನು 200ಕ್ಕೆ ಏರಿಸುವಂಥದ್ದು, ನಗರವಾಸಿಗಳ ಪೈಕಿಯಿಂದ 10 ಸದಸ್ಯರ ನಾಮನಿರ್ದೇಶನದ ಬದಲಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್‌ನ ಒಟ್ಟು ಸದಸ್ಯರ ಶೇಕಡಾ 10ಕ್ಕೆ ಸಮನಾದ ಸಂಖ್ಯೆಯ ಸದಸ್ಯರನ್ನು ನಾಮನಿರ್ದೇಶನ ಮಾಡುವಂಥದ್ದು, ಬೆಂಗಳೂರು ನಗರ ಪಾಲಿಕೆ ಅಥವಾ ಬೆಂಗಳೂರು ಪೌರ ನಿಗಮ ಎನ್ನುವ ಪದಪುಂಜಗಳು ಇರುವ ಕಡೆಗಳಲ್ಲೆಲ್ಲಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಎಂಬ ಪದಪುಂಜಗಳನ್ನು ಪ್ರತಿಯೋಜಿಸುವುದು. ಈ ವಿಷಯ ತುರ್ತಾಗಿರುವುದರಿಂದ ಈ ಒಂದು ಅಧಿವೇಶನದಲ್ಲಿ ಇದಕ್ಕೆ ಅನುಮತಿಯನ್ನು ಕೊಡಬೇಕೆಂದು ಈ ಮನೆಯ ಎಲ್ಲ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದರಲ್ಲಿ ಅಂಥ

ವಿಶೇಷವೇನೂ ಇಲ್ಲ. ಏಕೆಂದರೆ ತಮಗೆ ಗೊತ್ತಿದೆ, ಇವತ್ತು ಆಯವ್ಯಯದ ಮೇಲೆ ಚರ್ಚೆಯಾಗಬೇಕು. ತಾವೆಲ್ಲರೂ ಮಾತನಾಡ ಬೇಕು. ದಯಮಾಡಿ ಸಹಕರಿಸಿ ಎಂದು ನಾನು ವಿನಂತಿಯನ್ನು ಮಾಡುತ್ತೇನೆ. ಇದಕ್ಕೆ ಮಂಜೂರಾತಿಯನ್ನು ಕೊಡಬೇಕೆಂದು ನಾನು ಮತ್ತೊಮ್ಮೆ ವಿನಂತಿಯನ್ನು ಮಾಡುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಬೆಂಗಳೂರಿಗೆ ಸಂಬಂಧಿಸಿದಂಥ ಆಡಳಿತದ ದೃಷ್ಟಿಯಿಂದ ಇಂಥ ಒಂದು ಬೃಹತ್ತಾದ ವಿಧೇಯಕವನ್ನು ತರಬೇಕಾದಾಗ ನೀವು ಬಹಳಷ್ಟು ಯೋಚನೆ ಮಾಡಿ ತರಬೇಕಾಗುತ್ತದೆ. ಈಗಾಗಲೇ ಅವಧಿ ಮುಗಿದು ಬಹಳ ವರ್ಷಗಳಾದ ಮೇಲೂ ಕೂಡ, ಈ ಬಗ್ಗೆ ಜನರು ಕೋರ್ಟಿಗೆ ಹೋಗಿ, ಕೋರ್ಟಿನಿಂದ ನಿರ್ದೇಶನ ಬಂದು, ಕೋರ್ಟ್ ಛೀಮಾರಿ ಹಾಕತಕ್ಕಂಥ ಮಟ್ಟಕ್ಕೆ ಬಂದಂಥ ಸಂದರ್ಭದಲ್ಲಿ ನೀವು ಒಂದು ordinance ಮುಖೇನ ಈ ರೀತಿಯಾಗಿ ರತಕ್ಕಂಥ ಒಂದು ವಿಧೇಯಕವನ್ನು ತರುತ್ತೀರಿ. ಈ ರೀತಿ ತಂದು ತದನಂತರ ಸದನದ ಒಪ್ಪಿಗೆಗೆ ತರತಕ್ಕಂಥದ್ದು. ಬಹುಶಃ ಈಗ ಬೆಂಗಳೂರಿನ ಬಗ್ಗೆ ಯೋಚನೆ ಮಾಡತಕ್ಕಂಥ ಪ್ರಸಕ್ತ ಸಂದರ್ಭದಲ್ಲಿ ನೀವು ಯಾವುದೇ ವಿಧೇಯಕಗಳನ್ನು ತರಬೇಕಾದಂಥ ಸಂದರ್ಭದಲ್ಲಿ ವಿಧಾನಸಭೆಯಲ್ಲಿ ಸಾಧಕ ಬಾಧಕಗಳ ಬಗ್ಗೆ ಚರ್ಚೆ ಮಾಡಿ, ಇದೇ ರೀತಿಯಾಗಿ, ಇದೇ ಮಾದರಿಯಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಏನಾಗಿದೆ ನೋಡಿ ಚರ್ಚಿಸಿ, ಬೆಂಗಳೂರಿನ ಹಿತದೃಷ್ಟಿಯಿಂದ ಏನು ಮಾಡಬೇಕು ಎನ್ನತಕ್ಕಂಥದ್ದರ ಬಗ್ಗೆ ಸದನದಲ್ಲಿ ಸದಸ್ಯರ ಅಭಿಪ್ರಾಯವನ್ನು ಪಡೆದು ಸದನದಲ್ಲಿ ಚರ್ಚೆ ಮಾಡಿ ತದನಂತರ ಇವೆಲ್ಲಾ ವಿಚಾರಗಳನ್ನು ಮಂಡಿಸಿದರೆ ಅದಕ್ಕೆ ಒಂದು ಸರಿಯಾದ ಅರ್ಥ ಬರುತ್ತದೆ. ಆದರೆ ಇವತ್ತೇನು ಭಾವನೆ ಬರುತ್ತದೆಂದರೆ, ನಿಮಗೆ ಸಕಾಲಕ್ಕೆ ಚುನಾವಣೆಯನ್ನು ಮಾಡುವುದಕ್ಕೆ ಆಗಲಿಲ್ಲ, ಕೋರ್ಟಿನ ಆರೋಪವನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರ ಈ ರೀತಿಯಾದಂಥ ವಿಧೇಯಕಗಳನ್ನು ತರುತ್ತೀರಿ. ಇದು ಬೆಂಗಳೂರಿನ ಹಿತದೃಷ್ಟಿಯಿಂದ ಹೌದೇ ಅಥವಾ ಅಲ್ಲವೆ ಎನ್ನತಕ್ಕಂಥ ಅನುಮಾನ ಇವತ್ತು ಜನಗಳ ಮಧ್ಯದಲ್ಲಿದೆ. ಹೀಗಾಗಿ ಬಹುಶಃ ಇಂಥ ಸಂದರ್ಭದಲ್ಲಿಯೂ ಕೂಡ ಇವತ್ತು ನೀವು ಕೂಡ ಯೋಚನೆ ಮಾಡಿ ತದನಂತರ ತರಬೇಕಾಗಿರತಕ್ಕಂಥ ಮಸೂದೆಯನ್ನು, ಯಾವ ರೀತಿಯಲ್ಲಿ, ಯಾವ ಪ್ರಕಾರದಲ್ಲಿ, ಯಾವ ವಿಧಾನದಲ್ಲಿ ತರಬೇಕೋ ಆ ರೀತಿ ಇಂಥ ವಿಧೇಯಕವನ್ನು ತರುವುದನ್ನು ಬಿಟ್ಟು ಇವತ್ತು ಏಕಾಏಕಿ ಈ ರೀತಿಯಾಗಿ, ಇವತ್ತು ಕೋರ್ಟಿನ ಆರೋಪದಿಂದ ಮುಕ್ತರಾಗುವುದಕ್ಕೋಸ್ಕರ ಈ

ರೀತಿಯಾಗಿ ವಿಧೇಯಕ ತಂದಿರತಕ್ಕಂಥ ವಿಧಾನ ಸರಿಯಿಲ್ಲವೆನ್ನುವುದು ನನ್ನ ಅಭಿಪ್ರಾಯ. ಆದರೆ ಈಗಾಗಲೇ ಎಲ್ಲ ಮುಗಿದುಹೋಗಿರತಕ್ಕಂಥ ಹಂತದಲ್ಲಿ post mortem ತೆಗೆದುಕೊಳ್ಳುವುದಕ್ಕೋಸ್ಕರ ಇವತ್ತು ಇಂಥ ಕಾರ್ಯಕ್ರಮ ಎನ್ನುವ ರೀತಿಯಲ್ಲಿ ಇವತ್ತು ಈ ವಿಧೇಯಕವನ್ನು ಸಭೆಯ ಮುಂದೆ ತಂದಿದ್ದೀರಿ. ಆದರೆ ಇವರು ತಂದಿರತಕ್ಕಂಥ ಮಾರ್ಗ ಸರಿಯಿಲ್ಲ ಮತ್ತು ಸಂದರ್ಭವೂ ಕೂಡ ಸರಿಯಿಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಲೇಬೇಕಾಗುತ್ತದೆ.

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಈಗ ಬೆಂಗಳೂರು ಮಹಾನಗರ ಪಾಲಿಕೆಗೆ ಗರಿಷ್ಠ 200 ಸದಸ್ಯರು ಇರುವಂತೆ ವಿಧೇಯಕಕ್ಕೆ ತಿದ್ದುಪಡಿಯನ್ನು ತಂದಿದ್ದಾರೆ. ಕಳೆದ ಮೂರು ವರ್ಷಗಳಿಂದ ಬೆಂಗಳೂರು ಮಹಾನಗರ ಪಾಲಿಕೆಗೆ ಚುನಾವಣೆ ನಡೆದಿಲ್ಲ. ಈಗಾಗಲೇ ಕೆಲವು ಸಾರ್ವಜನಿಕರು ಹಲವಾರು ಬಾರಿ ಕೋರ್ಟಿಗೆ ಹೋಗಿ ಕೂಡಲೇ ಚುನಾಯಿತ ಪ್ರತಿನಿಧಿಗಳ ಆಡಳಿತ ಬರಬೇಕು ಎಂದು ಹಲವಾರು ಬಾರಿ petition ಹಾಕಿದ್ದಾರೆ. ಸರ್ಕಾರ ಕೂಡ ಹಲವಾರು ಸಾರಿ ಚುನಾವಣೆ ಮಾಡುತ್ತೇವೆ ಎಂದು ಹೇಳಿದೆ. ಕೋರ್ಟ್ ಇಂಥ ಡೇಟ್‌ಗೆ ಮಾಡಬೇಕು ಎಂದು ನಿರ್ದೇಶನ ಕೊಟ್ಟರೂ ಕೂಡ ಈ ಸರ್ಕಾರ ಮಾಡಿಲ್ಲ. ಕೋರ್ಟ್ ನಿರ್ದೇಶನವನ್ನು ಕೂಡ ಪಾಲನೆ ಮಾಡುವುದಕ್ಕೆ ಈ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ. ಈ ಸರ್ಕಾರದವರು ಚುನಾವಣೆ ನಡೆಸಲು ಏಕೆ ಹಿಂಜರಿಯುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ಏಕೆಂದರೆ ನಾಲ್ಕಾರು ಬಾರಿ ಕೋರ್ಟ್ ಹೇಳಿದರೂ ಕೂಡ ಇವರಿಗೆ ಚುನಾವಣೆಯನ್ನು ಮಾಡುವುದಕ್ಕಾಗಿಲ್ಲ. ಅಂದರೆ ಈ ಸರ್ಕಾರಕ್ಕೆ ಬೆಂಗಳೂರಿನ ಜನತೆಯ ವಿಶ್ವಾಸವನ್ನು ಗಳಿಸುವುದಕ್ಕೆ ವಿಫಲವಾಗಿದೆ. ಆದುದರಿಂದ ಈಗ ಇಂಥ ಒಂದು ವಿಧೇಯಕವನ್ನು ತಂದಿದ್ದಾರೆಂದು ನಾವು ಹೇಳಬೇಕಾಗುತ್ತದೆ. ಇದರ ಜೊತೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್‌ಗೆ ಶೇಕಡಾ 10ಕ್ಕೆ ಸಮಾನವಾದ ಸದಸ್ಯರನ್ನು ನಾಮ ನಿರ್ದೇಶನ ಮಾಡಲಾಗುವುದು ಎಂದಿದ್ದಾರೆ. ಶೇಕಡಾ 10 ಎಂದರೆ 200 ಸದಸ್ಯರ ಸಂಖ್ಯೆಗೆ 20 ಜನರನ್ನು ನಾಮನಿರ್ದೇಶನವನ್ನು ಮಾಡಿದರೆ ಏಕೆ ಚುನಾವಣೆಯನ್ನು ಮಾಡುವುದಕ್ಕೆ ಹೋಗುತ್ತೀರಿ? 20 ಜನರನ್ನು ನಾಮನಿರ್ದೇಶನ ಮಾಡುವುದಕ್ಕೆ ಈ ವಿಧೇಯಕದಲ್ಲಿ ಅವಕಾಶ ಮಾಡಿಕೊಂಡಿದ್ದೀರಿ. 20 ಜನರ ನಾಮನಿರ್ದೇಶನ

ಮಾಡುವ ಅವಶ್ಯಕತೆ ಇದೆಯೆ? ಅಂಥ ನಾಮಿನೇಶನ್ ಇದ್ದರೆ ಅದನ್ನು ತೆಗೆದುಹಾಕಿ. ಪೂರ್ಣ ಪ್ರಮಾಣದ ಜನ ಪ್ರತಿನಿಧಿಗಳ ಆಡಳಿತವನ್ನು ಕೊಡಬೇಕೆನ್ನುವ ದೃಷ್ಟಿ ಈ ಸರ್ಕಾರಕ್ಕಿದ್ದರೆ, ಈ ನಾಮಿನೇಶನ್ ಏಕೆ ಬೇಕು ಸ್ವಾಮಿ? ನಾಳೆ ಏನಾದರೂ ಚುನಾವಣೆಯಲ್ಲಿ ಸೋಲುತ್ತೇವೆ ಎನ್ನುವ ಭಯ ಭೀತಿಯಿಂದ ನಾಮಿನೇಶನ್ ಮಾಡಿಕೊಳ್ಳುವುದಕ್ಕೆ ನೀವು ಹೊರಟಿದ್ದೀರೇನು? ಜಿಲ್ಲಾ ಪಂಚಾಯತಿಯಲ್ಲಿ ಯಾರು ನಾಮಿನೇಶನ್ ಮಾಡಿದ್ದಾರೆ? ತಾಲ್ಲೂಕು ಪಂಚಾಯತಿ ಸಮಿತಿಯಲ್ಲಿ ಮಾಡಿದ್ದಾರೆಯೆ?

ಶ್ರೀ ಸಿ. ಟಿ. ರವಿ : ಕೆ.ಡಿ.ಪಿ.ಯಲ್ಲಿ ಮಾಡಿದ್ದಾರೆ.

ಶ್ರೀ ಹೆಚ್. ಡಿ. ರೇವಣ್ಣ : ಕೆ.ಡಿ.ಪಿ.ಯಲ್ಲಿ ಏತಕ್ಕೆ ಮಾಡಿದ್ದಾರೆಂದು ನನಗೆ ರವಿಯವರು ಹೇಳಬೇಕಾಗಿಲ್ಲ. ಅದು ನನಗೂ ಗೊತ್ತಿದೆ. ನಾನೂ ಕೂಡ ಕೆ.ಡಿ.ಪಿ, ತಾಲ್ಲೂಕು ಪಂಚಾಯತಿಯ ಅಧ್ಯಕ್ಷನಾಗಿ ಕೆಲಸವನ್ನು ಮಾಡಿದ್ದೇನೆ. ಕೆ.ಡಿ.ಪಿ. ಸಭೆಗೂ ಮತ್ತು ಇದಕ್ಕೂ ಒಂದೇ ರೀತಿ ಮಾಡುತ್ತೀರೇನು? ಇವರಿಗೆ voting rights ಇದೆಯೆ? 20 ಜನರಿಗೆ voting rights ಗೋಸ್ಕರ ನೀವು ಮಾಡುತ್ತಿರುವುದು. ಏಕೆಂದರೆ ಚುನಾವಣೆಯಲ್ಲಿ ಸೋಲುತ್ತೇವೆ ಎನ್ನುವ ಭೀತಿಯಲ್ಲಿ ಇವತ್ತು ನೀವು 20 ಜನರನ್ನು ನಾಮಿನೇಶನ್ ಮಾಡುವುದಕ್ಕೆ ಹೊರಟಿದ್ದೀರಿ. ಇದು ದುರಾದೃಷ್ಟ. ಈ ಬಿಲ್ ಅನ್ನು ದಯಮಾಡಿ ಪುನರ್ ಪರಿಶೀಲಿಸಿ 20 ಜನರ ನಾಮಿನೇಶನ್ ಅನ್ನು ತೆಗೆಯಬೇಕು ಮತ್ತು ಆದಷ್ಟು ಬೇಗ ಬೆಂಗಳೂರು ಮಹಾನಗರ ಪಾಲಿಕೆಗೆ ಚುನಾವಣೆಯನ್ನು ಮಾಡುವ ನಿಟ್ಟಿನಲ್ಲಿ ಸದನದಲ್ಲಿಯೇ ಇವತ್ತು ಕಾನೂನು ಸಚಿವರು ತಿಳಿಸಬೇಕೆಂದು ನಾನು ಮನವಿ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಗರಿಷ್ಠ ಸಂಖ್ಯೆ 200 ಜನರು ಎಂದು ಮಾಡಿದ್ದಾರೆ. ಆದರೆ ಅಲ್ಲಿ 200 ಜನರು ಕುಳಿತು ಕೊಳ್ಳುವುದಕ್ಕೆ ಸ್ಥಳಾವಕಾಶವಿದೆಯೆ? ಏಕೆಂದರೆ ಹಿಂದೆ ಅವರು ಕೂಡ ಅಲ್ಲಿ ಕೆಲಸ ಮಾಡಿದ್ದಾರೆ. ಅಲ್ಲಿಯ ವ್ಯವಸ್ಥೆ, ಅಲ್ಲಿ ಮೂಲಭೂತ ಸೌಕರ್ಯಗಳು, ಇವೆಲ್ಲವೂ ಅಲ್ಲಿ ಸರಿಯಾಗಿದೆಯೆ? 20 ಜನರ ನಾಮಿನೇಶನ್ ಸೇರಿದರೆ 220 ಸದಸ್ಯರ ಸಂಖ್ಯೆಯಾಗುತ್ತದೆ. 20 ಜನರಿಗೆ voting rights ಇದೆಯೆ ಅಥವಾ ಇಲ್ಲವೆ ಎಂಬ ಬಗ್ಗೆ ದಯಮಾಡಿ ಈ ಸದನಕ್ಕೆ ತಿಳಿಸಬೇಕು. ಈಗಾಗಲೇ ವಿರೋಧ ಪಕ್ಷದ ಉಪ ನಾಯಕರು ಹೇಳಿದಂತೆ ಇದೇನು ಈ

ಎಲೆಕ್ಷನ್ ಇದೆ ಇದನ್ನು ಮುಂದೂಡುವುದಕ್ಕೋಸ್ಕರ ಇದನ್ನು ತೆಗೆದುಕೊಂಡು ಬಂದು ಆ ಮೂಲಕ ಎಲೆಕ್ಷನ್ ಮುಂದೂಡುವುದು ಆಗಬಾರದು. ನಮ್ಮ ನಾಯಕರು ಹೇಳಿದಂತೆ ಈ ಸದನದಲ್ಲಿಯೇ ಇಂಥ ದಿವಸ ಎಲೆಕ್ಷನ್ ಮಾಡುತ್ತೇವೆಂದು ಹೇಳಿ. ದಯಮಾಡಿ ಈ ಬಗ್ಗೆ ಹೇಳಬೇಕು ಮತ್ತು ಈ ವಿಧೇಯಕದಲ್ಲಿ ಕೆಲವು ನ್ಯೂನತೆಗಳೇನಿವೆ ಅದನ್ನು ಸರಿಪಡಿಸಿ ಈ ವಿಧೇಯಕವನ್ನು ಮಂಡಿಸಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಆಗ್ರಹಪಡಿಸುತ್ತೇನೆ.

ಶ್ರೀ ಕಿಮ್ಮನೆ ರತ್ನಾಕರ್ : ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು : ಕಿಮ್ಮನೆ ರತ್ನಾಕರ್‌ರವರೆ, ಇದು ಬೆಂಗಳೂರಿಗೆ ಸಂಬಂಧಪಟ್ಟ ವಿಧೇಯಕ. ಇದರ ಮೇಲೆ ನೀವು ಮಾತನಾಡುತ್ತೀರೇನು?

ಶ್ರೀ ಕಿಮ್ಮನೆ ರತ್ನಾಕರ್ : ಒಂದು ನಿಮಿಷ ನಾನು ಮಾತನಾಡುತ್ತೇನೆ.

ಅಧ್ಯಕ್ಷರು : ಮಾತನಾಡಿ.

ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ನನಗೆ ಬಹಳ ನೋವಾಗಿದೆ. ನಾನು proceedings ನೋಡಿಕೊಂಡು ಬರುತ್ತಿದ್ದೇನೆ. 20 ರಿಂದ 25 ವಿಧೇಯಕಗಳನ್ನು ಮಂಡಿಸುತ್ತಿದ್ದೀರಿ. ನಮಗೆ ಅದನ್ನು ಈಗ ಕೊಟ್ಟು ಅದರ ಪರ ಮತ್ತು ವಿರೋಧ ಮಾತನಾಡಿ ಎಂದರೆ ಏನು ಮಾತನಾಡುವುದು. ಎದುರುಗಡೆ ಇರುವವರಿಗೆ ಒಂದೈವತ್ತು ಜನರಿಗೆ ವಿಚಾರ ಗೊತ್ತಿರಬಹುದು. ನಾವ್ಯಾಕೆ ಇಲ್ಲಿಗೆ ಬರುತ್ತಿದ್ದೇವೆ ಎಂದೇ ನನ್ನ ಮನಸ್ಸಿಗೆ ನೋವಾಗಿದೆ. ನಾನು 15, 20 ದಿನಗಳಿಂದ ಓದಿಕೊಂಡು ಬರುತ್ತಿದ್ದೇನೆ. ವಾಸ್ತವವಾಗಿ ಕಾನೂನುಗಳು, ಸಂಪ್ರದಾಯಗಳು, ನಿಯಮಗಳು ಆಕಾಶದಿಂದ ಇಳಿದು ಬಂದವುಗಳಲ್ಲ. ನಾವು ಇವುಗಳನ್ನು ಬದಲಾವಣೆ ಮಾಡಿಕೊಳ್ಳ ಬಹುದಲ್ಲ. ಇಷ್ಟು ತರಾತುರಿಗಳಲ್ಲಿ ತಂದು ವಿಧೇಯಕಗಳನ್ನು ಮಂಡಿಸಿದರೆ ಹೇಗೆ? ನಾವೆಲ್ಲರೂ 224 ಜನರೂ ಇದಕ್ಕೆ ಒಪ್ಪಿಗೆ ಕೊಟ್ಟಂತಾಗುತ್ತದೆ ಎಂದು ಹೇಳಿ ಕಾಯಿದೆಯಾಗುತ್ತದೆ. ಯಾರಿಗೆ ಮಾತನಾಡುವುದಕ್ಕೆ ಅವಕಾಶ ಸಿಕ್ಕಿದೆ? 59 ಸಾವಿರ ಕೋಟಿ ರೂಪಾಯಿಗಳಷ್ಟು ನಾವು ವ್ಯವಹಾರವನ್ನು ಮಾಡುತ್ತಿದ್ದೇವೆ. ನಿನ್ನೆ ಕೂಡ ಒಂದು ಗಂಟೆಯೂ ಸರಿಯಾಗಿ ಚರ್ಚೆ ಮಾಡಿಲ್ಲ. ಇವತ್ತು 5 ಗಂಟೆಯೊಳಗೆ ನಾವು ಸಭೆಯನ್ನು ಮುಗಿಸಬೇಕು. ಹಾಗಾದರೆ ನಾವು ಏಕೆ ಇಲ್ಲಿಗೆ ಬರಬೇಕು? ನನ್ನ ಮನಸ್ಸಿಗೆ ಬಹಳ ನೋವಾಗುತ್ತದೆ. ನಾನು ಹೇಳುವುದೇನೆಂದರೆ, ಈ ರೀತಿ ವಿಧೇಯಕಗಳನ್ನು ತರಾತುರಿಯಲ್ಲಿ ತರಬೇಡಿ. ಈ ಕಾಯಿದೆ, ಕಾನೂನುಗಳನ್ನು ನಮ್ಮ

ಎದುರುಗಡೆ ಇವತ್ತು ಇಟ್ಟರೆ ಜನರಿಗೆ ನಾವೇನು ಉತ್ತರ ಕೊಡಬೇಕು? ಖಂಡಿತವಾಗಿಯೂ ಈ ನಿಯಮಗಳನ್ನು ತಕ್ಷಣದಲ್ಲಿ ಈಗಲೇ ತನ್ನಿ. ನಾನು ಹೇಳುವುದೇನೆಂದರೆ, ಖಂಡಿತವಾಗಿಯೂ ಯಾರಿಗೆ majority ಇದೆಯೋ ಅವರದ್ದನ್ನು ನಾವು ಒಪ್ಪಿಕೊಂಡು ಹೋಗಬೇಕು. ನಿಜ. ಈ ವಿದೇಯಕಗಳೂ ಕೂಡ ಪಾಸ್ ಆಗುತ್ತವೆ ಕಂಡಿತ ಬಿಲ್ ಪಾಸ್ ಆಗಲಿ. ಆದರೆ ವಿಶಾಲವಾಗಿ, ವಿಸ್ತಾರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲವೆಂದರೆ ನಾವು ಇಲ್ಲಿಗೆ ಏಕೆ ಬರಬೇಕು ಎನ್ನತಕ್ಕಂಥದ್ದು ನನ್ನ ಪ್ರಶ್ನೆ. ಈಗ ಒಂದು ವಿಧೇಯಕ ಆಯಿತು. ನಿನ್ನೆ ಒಂದು ವಿಧೇಯಕ ಪಾಸ್ ಆಯಿತು. ನಮಗೆ ಇವುಗಳ ಬಗ್ಗೆ ಮೊದಲೇ ಕೊಡುವುದಿಲ್ಲ. ಈಗ ಇದು ನನಗೆ ತಲುಪಿದೆ. ಇದರ ಮೂಲ ದಾಖಲೆ ಇನ್ನೂ ನನಗೆ ಗೊತ್ತಿಲ್ಲ. ಮೂಲ ಕಾಯಿದೆ ಏನಿದೆ ಎಂಬುದು ನನಗೆ ಗೊತ್ತಿಲ್ಲ. ಆದರೆ ನೀವು ಅಧಿವೇಶನದಲ್ಲಿ ಪಾಸ್ ಮಾಡುವಾಗ ಹೊರಗಡೆ ಹೋದಾಗ 6 ಕೋಟಿ ಜನರಿಗೆ ನಾನು ಕೂಡ ಒಪ್ಪಿಗೆ ಕೊಟ್ಟಿದ್ದೇನೆ ಎಂದು ಹೇಳಿ ಹೋಗಬೇಕು.

ಇದಕ್ಕೆ ಅರ್ಥವಿದೆಯಾ? ಎಲ್ಲೋ ಒಂದು ಕಡೆ ನಾವೆಲ್ಲರೂ ಸೇರಿ ಆರು ಕೋಟಿ ಜನರಿಗೆ ಟೋಪಿ ಹಾಕುತ್ತಿಲ್ಲವೇ? ಯಾವುದೇ ವಿಚಾರ ಗಳಾಗಲಿ ನಾವು ವಿಸ್ತಾರವಾಗಿ ಚರ್ಚೆ ಮಾಡಬೇಕು. ಇನ್ನೂ ಹದಿನೈದು ದಿನ ಮುಂದಕ್ಕೆ ಹೋಗಲಿ. ಏಕೆ ನಾವು ಗಡಿಬಿಡಿ ಮಾಡುವುದು? ನಮಗೆ ರೈಲ್ವೆ ಟಿಕೇಟ್ ತಪ್ಪಿಹೋಗುತ್ತದೆಯೇ? ನಾವು ಏಕೆ ಓದಿಕೊಂಡು ಬರಬೇಕು ಎಂದು ಖಂಡಿತವಾಗಿ ಬಹಳ ನೋವಾಗುತ್ತದೆ.

ಅಧ್ಯಕ್ಷರು : ಕಿಮ್ಮನೆ ರತ್ನಾಕರ್‌ರವರೇ, ನಿಮ್ಮ ಭಾವನೆಗಳನ್ನು ನಾವು ಅರ್ಥ ಮಾಡಿಕೊಳ್ಳುತ್ತೇವೆ. ನೀವೂ ಕೂಡ ಒಂದು ವಿಚಾರವನ್ನು ಅರ್ಥ ಮಾಡಿಕೊಳ್ಳಬೇಕು. ಕಳೆದ 15 ದಿವಸದಿಂದ ಈ ಸದನದಲ್ಲಿ ನೀವೂ participate ಮಾಡಿದ್ದೀರಿ. ಇಲ್ಲಿ ಯಾವ್ಯಾವ ಬಿಸಿನೆಸ್, ಯಾವ್ಯಾವ ಪ್ರೊಸಿಡಿಂಗ್ಸ್ ನಡೆದಿದೆ ಎಂದು ನೀವೂ ನೋಡುತ್ತಿದ್ದೀರಿ. ಕೆಲವೊಮ್ಮೆ ಬಿಲ್‌ಗಳ introduction ಒಂದು ವಾರದ ಮೊದಲೇ ಆಗಿವೆ. ಈಗಾಗಲೇ ಅದರ ಕಾಪಿಗಳನ್ನು ಸರ್ಕಾರ ಸರಬರಾಜು ಮಾಡಿ, ನಿಮಗೆಲ್ಲರಿಗೂ ಕೊಟ್ಟಿದೆ. ಇನ್ನು ಬೇರೆ ಬೇರೆ ರೀತಿ ವಿಷಯಗಳಾದ ನಿಲುವಳಿ ಸೂಚನೆ, ನಿಯಮ 69, ಗಮನ ಸೆಳೆಯುವ ಸೂಚನೆ ಇರಬಹುದು ಇವೆಲ್ಲ ಕೂಡ ಚರ್ಚೆಗೆ ಬರುತ್ತಿವೆ. ಇಲಾಖಾ ಬೇಡಿಕೆಗಳ ಮೇಲೆ ಚರ್ಚೆ ನಿನ್ನೆ ಸಾಯಂಕಾಲ

ಪ್ರಾರಂಭವಾಗಿದೆ ಎಂದ ಮೇಲೆ ಸದನ ಯಾವ ರೀತಿ ನಡೆಯುತ್ತಿ ಎನ್ನುವುದನ್ನು ನೀವು ಅರ್ಥ ಮಾಡಿಕೊಳ್ಳಬೇಕು. ನೀವು ನಿಮ್ಮ ಭಾವನೆ ಳನ್ನಷ್ಟೇ ಹೇಳುತ್ತೀರಿ, ಆದರೆ ಇಲ್ಲಿ ಪರಿಸ್ಥಿತಿ ಏನಿದೆ, ವ್ಯವಸ್ಥೆ ಏನಿ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ನಾವು ನಿಮ್ಮ ಭಾವನೆಗಳಿ ಸ್ಪಂದನೆ ಮಾಡುತ್ತೇವೆ. ನಿಮ್ಮ ಅಭಿಪ್ರಾಯವನ್ನು ನಾವೂ ಒಪ್ಪಿಕೊಳ್ಳುತ್ತೇವೆ ಆದರೆ ಇವತ್ತು ಪರಿಸ್ಥಿತಿ ಹಾಗೂ ವ್ಯವಸ್ಥೆ ಹೇಗಿದೆ ಎನ್ನುವುದನ್ನು ಕೂಡ ತಾವು ಅರ್ಥ ಮಾಡಿಕೊಳ್ಳಬೇಕಾಗಿದೆ.

ಶ್ರೀ ಕಿಮ್ಮನೆ ರತ್ನಾಕರ್ : ಒಂದೇ ಒಂದು ವಿಚಾರ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ......

ಅಧ್ಯಕ್ಷರು : ನೀವು ಆ ರೀತಿಯಾಗಿ ಏನು ವ್ಯವಸ್ಥೆ ಮಾಡಬೇಕು ಎಂದು ಹೇಳಿದಿರಲ್ಲ, ಆದಷ್ಟು ಬೇಗನೆ ಬಿಲ್‌ಗಳನ್ನು ಒಂದು ವಾರ ಅಥವಾ ಹತ್ತು ದಿವಸದ ಮೊದಲೇ ಕೊಡುವಂತಹ ವ್ಯವಸ್ಥೆಯನ್ನು ತರುವುದಕ್ಕೆ ಎಲ್ಲಾ ರೀತಿಯಲ್ಲಿ ಪ್ರಯತ್ನ ಮಾಡೋಣ. ಅದಕ್ಕೆ ಸರ್ಕಾರಕ್ಕೆ ಸೂಚನೆ ಕೊಡುತ್ತೇನೆ.

ಶ್ರೀ ಕಿಮ್ಮನೆ ರತ್ನಾಕರ್ : ಮಾನ್ಯ ಅಧ್ಯಕ್ಷರೆ, ನಾನು ಹೇಳುವುದೇನೆಂದರೆ 53 ಅಥವಾ 54ನೇ ಇಸವಿಯಲ್ಲಿ ಕರ್ನಾಟಕ ರಾಜ್ಯದಲ್ಲಿ 21 ಕೋಟಿ ರೂಪಾಯಿ ಆಯವ್ಯಯ ಇತ್ತು. ಈಗ 58,000 ಕೋಟಿ ರೂಪಾಯಿ ಇದೆ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಕಿಮ್ಮನೆ ರತ್ನಾಕರ್‌ರವರು ವ್ಯಕ್ತಪಡಿಸಿರುವಂತಹ ಭಾವನೆ ಸಂಪೂರ್ಣವಾಗಿ ಒಪ್ಪಿಕೊಳ್ಳುವಂತಹ ಭಾವನೆ. ನಾನು ಈಗಾಗಲೇ ಅವರ ಜೊತೆ ವೈಯಕ್ತಿ ಕವಾಗಿ ಕೂಡ ಮಾತನಾಡಿದ್ದೇನೆ. ಮುಂದಿನ ದಿನಗಳಲ್ಲಿ ಈ ಬಿಲ್‌ಗಳನ್ನು introduce ಮಾಡುವುದಕ್ಕಿಂತ ಮೊದಲೇ ಯಾವ ವಿಧಾನವನ್ನು ಅನುಸರಿಸಬೇಕು ಹಾಗೂ ಅದರ ಬಗ್ಗೆ ವ್ಯಾಪಕವಾಗಿ ಚರ್ಚೆಯಾಗಬೇಕು ಎನ್ನುವ ವಿಚಾರದಲ್ಲಿ ನಾನು ಮಾತನಾಡಿದ್ದೇನೆ. ಸದನ ಮುಗಿದ ತಕ್ಷಣ ಹಿರಿಯ ಸದಸ್ಯರ ಜೊತೆ ಮಾತನಾಡಿ.......

ಅಧ್ಯಕ್ಷರು : ಸುರೇಶ್‌ಕುಮಾರ್‌ರವರೇ, ನಾನು ಒಂದು ವಿಚಾರ ಮಾಡಿದ್ದೇನೆ. ಕೆಲವು ಬಿಲ್‌ಗಳನ್ನು ಉಚಿತವಾಗಿ ಕೊಟ್ಟು ಅದರ ಬಗ್ಗೆ ಒಂದು public debate ಆಗಬೇಕು. ಆ ವ್ಯವಸ್ಥೆ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತಿದ್ದೇನೆ.

ಶ್ರೀ ಎಸ್.ಸುರೇಶ್‌ಕುಮಾರ್ : ಖಂಡಿತ ನಾನು ಅದರ ಬಗ್ಗೆ ಯೋಚನೆ ಮಾಡಿದ್ದೇನೆ. ಈ ಸದನ ಮುಗಿದ ಮೇಲೆ ತಮ್ಮ ಜೊತೆ ಮಾತನಾಡಿ ಸ್ವರೂಪವನ್ನು ಕೂಡ ವಿವರಿಸುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೇ, ಈ ಬಿಲ್‌ಗಳನ್ನು ಮುಂದಕ್ಕೆ ಹಾಕಿ next sessionಗೆ ತೆಗೆದುಕೊಂಡು ಬರೋಣ ಎಂದು ಕಾನೂನು ಸಚಿವರಿಗೆ ಹೇಳಿದ್ದು, ನೀವು ಹೇಳಿದ ಹಾಗೆ ಆಗಲಿ.

ಶ್ರೀ ಎಸ್. ಸುರೇಶ್‌ಕುಮಾರ್ : ನಿಮ್ಮ ಭಾವನೆಯನ್ನು ಕೂಡ ಅರ್ಥ ಮಾಡಿಕೊಂಡಿದ್ದೇವೆ.

ಶ್ರೀ ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ತಮ್ಮ ಒಂದು ನಾಯಕತ್ವದಲ್ಲಿ ಈ ಸದನದಲ್ಲಿ ಸುಧಾರಣೆ ತರುಘಂತಹ ಕೆಲಸವಾಗಲಿ.

ಅಧ್ಯಕ್ಷರು : ಮಾಡೋಣ.

ಶ್ರೀ ರಮಾನಾಥ ರೈ : ಇದರಲ್ಲಿ ನೀವೊಂದು ಸುಧಾರಣೆಯನ್ನು ತಂದು ನಿಮ್ಮಲ್ಲಿ ವಿಶ್ವಾಸವಿಟ್ಟಿರುವಂತಹ ಈ ಮನೆಯ ಸದಸ್ಯರ ಹಕ್ಕಿದೆ, ಅವರಿಗೆ ಮಾತನಾಡುವುದಕ್ಕೆ ಎಲ್ಲಾ ಅವಕಾಶಗಳನ್ನು ಕೊಡುವಂತಹ ಕ್ರಮವಾಗಬೇಕು.

ಅಧ್ಯಕ್ಷರು : ಈ ಬಿಲ್‌ಗಳ ಬಗ್ಗೆ ಖಂಡಿತವಾಗಿ ಸುಧಾರಣೆ ತರುವಂತಹ ಪ್ರಯತ್ನ ಮಾಡೋಣ.

ಶ್ರೀ ಎಸ್.ಸುರೇಶ್‌ಕುಮಾರ್ : ಇವತ್ತು ಕರ್ನಾಟಕ ಪೌರ ನಿಗಮಗಳ ತಿದ್ದುಪಡಿ ವಿಧೇಯಕದ ಬಗ್ಗೆ ಮಾನ್ಯ ಜಯಚಂದ್ರರವರು, ರೇವಣ್ಣನವರು, ಬಾಲಕೃಷ್ಣರವರು, ಕಿಮ್ಮನೆ ರತ್ನಾಕರ್‌ರವರೆಲ್ಲರೂ ಕೂಡ ತಮ್ಮ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಇದು ಬಹಳ ತುರ್ತಾಗಿ ಆಗಬೇಕಾದಂತಹ ವಿಧೇಯಕ. ತಾವು ಹೈಕೋರ್ಟ್‌ನಲ್ಲಿ ಯಾವ ಪರಿಸ್ಥಿತಿ ಇದೆ ಎನ್ನುವುದೆಲ್ಲವನ್ನೂ ಹೇಳಿದ್ದೀರಿ. 1970ನೇ ಇಸವಿಯಲ್ಲಿ ಚುನಾವಣೆ ನಡೆದಿತ್ತು. ಅದಾದ ಮೇಲೆ ನಗರಪಾಲಿಕೆಗೆ ಚುನಾವಣೆ ನಡೆದಿದ್ದು 1983ನೇ ಇಸವಿಯಲ್ಲಿ, ಬಹಳ ದಿನಗಳ ಕಾಲ ನಡೆದಿರಲಿಲ್ಲ. 83ನೇ ಇಸವಿಯಲ್ಲಿ ಸುಮಾರು 87 ಜನ Corporators ಇದ್ದರು. 1996ನೇ ಇಸವಿಯಲ್ಲಿ De-Limitation ಆಯಿತು. De-Limitation ಆದ ಮೇಲೆ ನಗರ ಪಾಲಿಕಾ ಸದಸ್ಯರ ಸಂಖ್ಯೆ ನೂರಾಯಿತು. 2006ನೇ ನವೆಂಬರ್‌ನಲ್ಲಿ ಅದರ ಅವಧಿ ಮುಗಿಯಿತು. ಈ ಬಾರಿಯ ಚುನಾವಣೆ 2006ನೇ ಇಸವಿ ನವೆಂಬರ್‌ನಲ್ಲಿ

ಆಗಬೇಕಾಗಿತ್ತು. ಕಾರಣಾಂತರದಿಂದ ಚುನಾವಣೆ ನಡೆಯಲಿಲ್ಲ. ಈಗ ಈ ಅವಧಿಯಲ್ಲಿ ಸುತ್ತಮುತ್ತಲೂ ಇರುವ CMC ಮತ್ತು ಒಂದು TMC ಎಲ್ಲಾ ಕೂಡ ಬೆಂಗಳೂರು ನಗರಕ್ಕೆ ಸೇರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಎಂದು ವ್ಯಾಪಕವಾಗಿ ವಿಸ್ತಾರವಾಗಿದೆ. ಇವತ್ತು ಬೆಂಗಳೂರು ಬಿಬಿಎಂಪಿ ಏರಿಯಾ 709 sq. km. ಇದೆ. ಹಿಂದೆ ಇದ್ದದ್ದು ಸುಮಾರು 130 sq. kms. So, 709 sq.kms. 2001ನೇ ಇಸವಿ population ನೋಡಿಕೊಂಡರೆ 58 ಲಕ್ಷ ಜನಸಂಖ್ಯೆ ಇತ್ತು. ಇವತ್ತು ನನ್ನ ಹತ್ತಿರ ಮಾಹಿತಿ ಇದೆ. ಉದಾಹರಣೆಗೆ Municipal Corporation of Delhi larger than in BBMP. Amongest the largest in the World next to Tokyo. Tokyo ಬಿಟ್ಟರೆ Delhi Municipal Corporation ದೊಡ್ಡದು. ಅದರ total number of wards ಬಂದು 273. Brahut Mumbai Municipal Corporation area ಬಂದು 437.71 sq. km. ನಮ್ಮ ಬೆಂಗಳೂರಿನ ಏರಿಯಾ 709 sq. km. ಇದೆ. ಮುಂಬೈನಲ್ಲಿ 227 ಮೆಂಬರ್ಸ್ ಇದ್ದಾರೆ. ನಮ್ಮ ಹತ್ತಿರ ಸೂರತ್, ಹೈದರಾಬಾದ್ ಎಲ್ಲ ಕಡೆಯದು ಇದೆ. ಈಗ ಪ್ರಶ್ನೆ ಇರುವುದು ಇಡೀ ದೇಶದಲ್ಲಿ ಬೆಂಗಳೂರು ಯಾವ ವೇಗದಲ್ಲಿ ಬೆಳೆಯುತ್ತಿದೆ ಎನ್ನುವಂಥದ್ದು ನಮಗೆ ಗೊತ್ತಿದೆ, ವಿಶೇಷವಾಗಿ outskirtsನಲ್ಲಿ. ನಮ್ಮ core areaದಲ್ಲಿ population ಅಷ್ಟು ಬೇಗ ಬೆಳೆಯುತ್ತಿಲ್ಲ. ಏಕೆಂದರೆ ಮನೆ ಯಾರೂ ಕಟ್ಟುತ್ತಿಲ್ಲ. ಮನೆಗಳನ್ನು outskirts ನಲ್ಲಿ ಕಟ್ಟುತ್ತಿರುವುದು. ಬೆಂಗಳೂರು ಬಹಳ ವ್ಯಾಪಕವಾಗಿ ಬೆಳೆಯುತ್ತಿದೆ. ನಾವು 2009ನೇ ಇಸವಿಯಲ್ಲಿ ಚುನಾವಣೆಯನ್ನು ಮಾಡಬೇಕಾಗಿದ್ದಾಗ, ನಾವು ಸಮಗ್ರವಾಗಿ ಚಿಂತನೆ ಮಾಡಿಕೊಂಡು, ಒಬ್ಬ ಕಾರ್ಪೊರೇಟರ್‌ಗೆ ಏರಿಯಾದಲ್ಲಿ ಓಡಾಡಿಕೊಂಡು ಕೆಲಸ ಮಾಡುವುದಕ್ಕೆ ಸೂಕ್ತವಾಗಿರಬೇಕು. ಮಾನ್ಯ ಕಿಮ್ಮನೆ ರತ್ನಾಕರ್‌ರವರು ಹೇಳುತ್ತಿದ್ದರು. ನಾನೊಬ್ಬ ಎಂಎಲ್‌ಎ, ನಾನು ಒಂದು ತುದಿಯಿಂದ ಇನ್ನೊಂದು ತುದಿಗೆ ಹೋಗುವುದಕ್ಕೆ 200 ಕಿ.ಮೀ. ಆಗುತ್ತದೆಂದು ಹೇಳಿದರು. ಇದು evenafter delimitation. ಆದುದರಿಂದ ಇವತ್ತು ಬೆಂಗಳೂರಿನಲ್ಲಿ area ಒಂದು ಹಿಡಿತಕ್ಕೆ ಸಿಗುವ ಹಾಗೆ ಇರಬೇಕು, limited population ಇರಬೇಕು, ಆಗ quality of service ಚೆನ್ನಾಗಿರುತ್ತದೆ ಎನ್ನುವ ಭಾವನೆಯಿಂದ ಇವತ್ತು ಈ ಒಂದು ತಿದ್ದುಪಡಿಯನ್ನು ತರುವುದರ

ಮೂಲಕ ಸಂಖ್ಯೆಯನ್ನು ಜಾಸ್ತಿ ಮಾಡುತ್ತಿದ್ದೇವೆ. ಬೆಳೆಯುತ್ತಿರುವ ಬೆಂಗಳೂರು ನಗರಕ್ಕೆ ಬಹಳ ಅವಶ್ಯಕವಾಗಿರುವಂತಹ ಒಂದು ಸಂಖ್ಯೆ ಈಗಾಗಲೇ ಇದಕ್ಕೆ ಮಾನ್ಯ ರಾಜ್ಯಪಾಲರು ordinance ಮುಖಾಂತರ ಅನುಮೋದನೆ ಕೊಟ್ಟಿದ್ದಾರೆ. ಅದನ್ನು ಇವತ್ತು ವಿಧೇಯಕದ ಸ್ವರೂಪದಲ್ಲಿ ತಂದಿದ್ದೇವೆ. ಇದನ್ನು ತಂದಮೇಲೆ ನಮ್ಮ process ಇನ್ನಷ್ಟು ಚುರುಕಾಗುತ್ತದೆ. ಚುನಾವಣೆ ಬೇಗ ಆಗಬೇಕು, ಬೆಂಗಳೂರು ಜನತೆಗೆ ತಮ್ಮ ಪ್ರತಿನಿಧಿಗಳ ಮೂಲಕ ಸೇವೆಯನ್ನು ಪಡೆಯಬೇಕು, ಅಧಿಕಾರ ನಡೆಯಬೇಕು, ಆ ಒಂದು ಕೆಲಸವಾಗುವುದಕ್ಕೆ ದಯವಿಟ್ಟು ತಾವೆಲ್ಲರೂ ಕೂಡ ಈ ಒಂದು ವಿಧೇಯಕಕ್ಕೆ ಅನುಮೋದನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಬಾಲಕೃಷ್ಣರವರು 220 ಜನಕ್ಕೆ ಜಾಗ ಎಲ್ಲಿದೆ ಎಂದು ಕೇಳಿದರು. ಬಾಲಕೃಷ್ಣರವರೇ ಮೊದಲು software ರೆಡಿಯಾದರೆ ಆಮೇಲೆ hardware ಆಗುತ್ತದೆ. ಮೊದಲು ನೀವು softwareಗೆ ಅನುಮತಿ ಕೊಡಿ. ನಾವು hardware ಅನ್ನು ಒಂದು ತಿಂಗಳಲ್ಲಿ ರೆಡಿ ಮಾಡುತ್ತೇವೆ. 220 ಅಲ್ಲ 260 ಜನ ಕುಳಿತುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿಕೊಡುತ್ತೇವೆ.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಸುರೇಶ್ ಕುಮಾರ್‌ರವರೇ, ತಮ್ಮ ಮಾತನ್ನು ನಾನು ಒಪ್ಪುತ್ತೇನೆ. ಕೊನೆ ಪಕ್ಷ ಬೆಂಗಳೂರಿನ ಹಿತದೃಷ್ಟಿಯಿಂದ ನಾಮಿನೇಟೆಡ್ ಮೆಂಬರ್ಸ್ ಏನು ಮಾಡುತ್ತಿದ್ದೀರಿ, ಅದನ್ನು ಶೇಕಡಾ ಹತ್ತರಷ್ಟು ಎಂದು ಲೆಕ್ಕ ಹಾಕಿಕೊಂಡರೆ 20 ಜನರನ್ನು ನೀವು ಮಾಡಬೇಕಾಗುತ್ತದೆ. ಕೊನೆ ಪಕ್ಷ ಇದರಲ್ಲಿ ನೀವೇನಾದರೂ ಒಂದು ಬದಲಾವಣೆ ಮಾಡಿ. ಈಗ ನಿಮ್ಮ ಪಕ್ಷದ ಕಾರ್ಯಕರ್ತರನ್ನು ಹಾಕುವಂತಹ ವಿಚಾರದಲ್ಲಿ ಬೆಂಗಳೂರಿಗೋಸ್ಕರ ಶ್ರಮಿಸಿರತಕ್ಕಂಥ, ಚಿಂತನೆ ಮಾಡತಕ್ಕಂಥ experts ಇದ್ದಾರೆ, ಅಂತಹವರನ್ನು ಹಾಕುವುದಕ್ಕೆ ನೀವು ಬದಲಾವಣೆ ತರುವುದಾದರೆ ಖಂಡಿತವಾಗಿ ನಿಮಗೆ ಒಳ್ಳೆಯದು.

ಶ್ರೀ ಎಸ್.ಸುರೇಶ್‌ಕುಮಾರ್ : It is a very good suggestion. ತಾವು ಹೇಳಿದ ಹಾಗೆ ಬಹಳ ಜನ ನಗರದ ಬಗ್ಗೆ ಯೋಚನೆಯಿರುವಂತಹ town planners ಏನಿದ್ದಾರೆ ಅವರು ಇವತ್ತಿನ ಚುನಾವಣಾ ವ್ಯವಸ್ಥೆಯಲ್ಲಿ ಗೆದ್ದು ಬರುವುದಕ್ಕಾಗುವುದಿಲ್ಲ, ಅದು ನಮಗೆ ಗೊತ್ತು. ಅದಕ್ಕೆ 20 ಜನ ಏಕೆ ಎಂದು ಹೇಳಿದರು. 20 ಜನ ಹೊಸದಲ್ಲ, ಕಳೆದ Actನಲ್ಲಿ ಇದ್ದದ್ದು ಕೂಡ

10%, 10% of 100 ಎಂದರೆ 10 ಜನ, 10% of 200 ಎಂದರೆ 20 ಜನ. ಅದಕ್ಕೋಸ್ಕರ ನಾವು ಯಾವುದೇ ಸಂಖ್ಯೆಯನ್ನು ಜಾಸ್ತಿ ಮಾಡುವುದಕ್ಕೆ ಹೋಗಿಲ್ಲ. ಮಾನ್ಯ ಜಯಚಂದ್ರರವರು ಅತ್ಯಂತ ಆರೋಗ್ಯಕರ, ಸ್ವಾಗತಾರ್ಹ ಒಂದು ಸಲಹೆ ಕೊಟ್ಟಿದ್ದಾರೆ, ಬೆಳೆಯುತ್ತಿರುವಂತಹ ಬೆಂಗಳೂರಿಗೆ ಇಲ್ಲಿನ ಸಮಸ್ಯೆಗಳಿಗೆ ಸ್ಪಂದಿಸುವುದಕ್ಕೆ ಪರಿಣಿತರ ಮಾರ್ಗದರ್ಶನದ ಅಗತ್ಯವಿದೆ. ಅದನ್ನು ಅಳವಡಿಸುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : "2009ನೇ ಸಾಲಿನ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 4ರವರೆಗೆ

ಅಧ್ಯಕ್ಷರು : "ಖಂಡ 2 ರಿಂದ 4ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 4 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,
"ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು): ಮಾನ್ಯ ಅಧ್ಯಕ್ಷರೆ,

2009ರ ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2009ರ ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅನುಬಂಧ–1

ಆ) ಕರ್ನಾಟಕ ಸ್ಟಾಂಪ್ (ಎರಡನೇ ತಿದ್ದುಪಡಿ) ವಿಧೇಯಕ 2009

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ,

2009ರ ಕರ್ನಾಟಕ ಸ್ಟಾಂಪ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಆಯವ್ಯಯದಲ್ಲಿ ಘೋಷಣೆ ಮಾಡಿರುವ ವಿಷಯದಲ್ಲಿ ಮೂರು ವಿಚಾರಗಳನ್ನು ಬಿಟ್ಟು ಹೋಗಿದ್ದವು. ಅದಕ್ಕೆ ಮಾನ್ಯ ರಾಜ್ಯಪಾಲರಿಂದ ಆದ್ಯಾದೇಶವನ್ನು ದಿನಾಂಕ: 04-06-2009ರಲ್ಲಿ ಹೊರಡಿಸಲಾಗಿತ್ತು. ಅದು Apartment ಮತ್ತು plotಗಳಿಗೆ ತಗಲುವ ಮುದ್ರಾಂಕ ಶುಲ್ಕವನ್ನು 7 1/2 ನಿಂದ ಶೇ. 6ಕ್ಕೆ ಇಳಿಸುವುದು, ಅದೇ ರೀತಿ ವಿಮೆಗೆ ಒಳಪಟ್ಟ, ವರ್ಗಾವಣೆಗೆ ಒಳಪಟ್ಟ, ವರ್ಗಾವಣೆ ಪತ್ರಗಳ ಮೇಲೆ ಮುದ್ರಾಂಕ ಶುಲ್ಕವನ್ನು ಶೇ. 7 1/2 ರಿಂದ ಶೇ. 6ಕ್ಕೆ ಇಳಿಸುವುದು, ಅದೇ ರೀತಿ ಸ್ಥಿರಾಸ್ತಿಗಳ ಮಾರಾಟ ಮಾಡಲು ಪ್ರತಿನಿಧಿಗೆ ಅಧಿಕಾರವನ್ನು ನೀಡಿದ ಪಕ್ಷದಲ್ಲಿ ಜಿಪಿಎ ಮುದ್ರಾಂಕ ಶುಲ್ಕವನ್ನು ಕ್ರಯಪತ್ರಗಳಿಗೆ ಅನ್ವಯವಾಗುವಂತೆ ಶೇ.7 1/2 ಯಿಂದ ಶೇ.6ಕ್ಕೆ ಇಳಿಸುವುದು. ಈ ಮೂರು ವಿಷಯಗಳನ್ನು ಸೇರಿಸುವುದಕ್ಕೆ Ordinance ಆಗಿದೆ. ಅದನ್ನು replace ಮಾಡುವುದಕ್ಕೆ ಈ ವಿಧೇಯಕ, ಈ ವಿಧೇಯಕಕ್ಕೆ ಈ ಸದನ ಒಪ್ಪಿಗೆ ಕೊಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಇದು stamp duty ಯನ್ನು ಕಡಿಮೆ ಮಾಡುವುದು.

ಅಧ್ಯಕ್ಷರು : ಪ್ರಸ್ತಾವ ಏಕೆಂದರೆ,

"2009ರ ಕರ್ನಾಟಕ ಸ್ಟಾಂಪ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 3ರವರೆಗೆ

ಅಧ್ಯಕ್ಷರು : "ಖಂಡ 2 ಮತ್ತು 3 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ರಿಂದ 3ರವರೆಗೆ ಎರಡು ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ,

2009ರ ಕರ್ನಾಟಕ ಸ್ಟಾಂಪ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವನೆ ಏನೆಂದರೆ,

"2009ರ ಕರ್ನಾಟಕ ಸ್ಟಾಂಪು (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಸೂದೆಗೆ ಒಪ್ಪಿಗೆ ನೀಡಲಾಯಿತು

ಅನುಬಂಧ–2

ಇ) ಕರ್ನಾಟಕ ಪೌರಸಭೆಗಳ ಕಾನೂನು ಹಾಗೂ ಇನ್ನೊಂದು ಕಾನೂನಿನ (ತಿದ್ದುಪಡಿ) ವಿಧೇಯಕ 2009

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್.ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ, ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ಪೌರಸಭೆಗಳ ಕಾನೂನು ಹಾಗೂ ಇನ್ನೊಂದು ಕಾನೂನಿನ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಸ್.ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ, ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ನಾವು ಇವತ್ತು ಅಸೆಂಬ್ಲಿ ಮತ್ತು ಪಾರ್ಲಿಮೆಂಟ್ ಚುನಾವಣೆಗಳನ್ನು ವಿದ್ಯುನ್ಮಾನ ಯಂತ್ರಗಳ ಮೂಲಕ ಮಾಡುತ್ತಿದ್ದೇವೆ. ಅದೇ ರೀತಿಯಲ್ಲಿ ಪುರಸಭೆಗಳು ಮತ್ತು ನಗರಸಭೆಗಳ ಚುನಾವಣೆಗಳನ್ನು ಕೂಡ ವಿದ್ಯುನ್ಮಾನ ಯಂತ್ರಗಳ ಮೂಲಕ ಚುನಾವಣೆ ಮಾಡಬೇಕೆಂದು ರಾಜ್ಯ ಚುನಾವಣಾ ಆಯೋಗ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿ, ಆ ರೀತಿ ಮಾಡಬೇಕೆಂದು ರಾಜ್ಯ ಚುನಾವಣಾ ಆಯೋಗ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿ, ಆ ರೀತಿ ಮಾಡಬೇಕೆಂದು ತಿಳಿಸಿದೆ. ಈ ರೀತಿ Electronic Voting Machine ಮಾಡುವುದರಿಂದ Ballet paperಗೆ ತಗಲುವ ವೆಚ್ಚ ಕಡಿಮೆಯಾಗುತ್ತದೆ. ಇದಕ್ಕಾಗಿ ಎಷ್ಟು ಮರಗಳು ಹೋಗುತ್ತವೋ, ಎಷ್ಟು ಕಾಡುಗಳು ಹೋಗುತ್ತವೋ ಗೊತ್ತಿಲ್ಲ. ಈ ಯಂತ್ರವನ್ನು ಬಳಸುವುದರಿಂದ ಮತ ಎಣಿಕೆ ಕೂಡ ಸುಲಭವಾಗುತ್ತದೆ. ಈ ದೃಷ್ಟಿಯಿಂದ ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ಮತ್ತು ಕರ್ನಾಟಕ ಪೌರ ನಿಗಮಗಳ ಅಧಿನಿಯಮ ವೆಂದರೆ ಒಂದು ಪುರಸಭೆಗಳಿಗೆ ಇನ್ನೊಂದು ನಗರ ಸಭೆಗಳಿಗೆ 1976ಕ್ಕೆ ಈ ತಿದ್ದುಪಡಿಯನ್ನು ತರುತ್ತಿದ್ದೇವೆ. ಈ ತಿದ್ದುಪಡಿಗಳ ಮೂಲಕ ನಗರ ಸ್ಥಳೀಯ ಸಂಸ್ಥೆಗಳಿಗೆ ಇನ್ನು ಮುಂದೆ ನಡೆಯುವ ಚುನಾವಣೆಗಳಲ್ಲಿ ಮತ ಪತ್ರಗಳನ್ನು ಒಂದು provision ಇಟ್ಟುಕೊಂಡಿರುತ್ತೇವೆ ಮತ್ತೆ ಮತಯಂತ್ರಗಳ ಮೂಲಕ

ಚುನಾವಣೆಯನ್ನು ನಡೆಸುವುದಕ್ಕೆ ನಾವು ಇವತ್ತು ಅವಕಾಶವನ್ನು ಕಲ್ಪಿಸಿಕೊಡುತ್ತಿದ್ದೇವೆ. ಇದು ಕೂಡ ತುರ್ತು ಇತ್ತು, ಈಗ ಬರುವ ಕಾರ್ಪೊರೇಷನ್ ಚುನಾವಣೆಯ ಹಿನ್ನಲೆಯಲ್ಲಿ ಮಾನ್ಯ ರಾಜ್ಯಪಾಲರು ಇದನ್ನು ordinance ಮೂಲಕ ತಮ್ಮ ಅನುಮೋದನೆಯನ್ನು ಕೊಟ್ಟಿದ್ದರು. ಅದನ್ನು ಇಂದು ಸಭೆಯ ಮುಂದೆ ವಿಧೇಯಕವಾಗಿ ಪರಿವರ್ತಿಸಲು ತಾವು ಅನುಮೋದಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಈಗ ಇವರು ಬದಲಾವಣೆಯನ್ನು ತಂದಿರುವಂಥದ್ದು ಒಳ್ಳೆಯದೆ, ಆದರೆ ಒಂದು ಅನುಮಾನ ಬರುತ್ತಿದೆ. ಈ ವಿದ್ಯುನ್ಮಾನ ಯಂತ್ರ ಬಳಕೆ ಮಾಡುವುದರಿಂದ, ನಾನು ಮೊನ್ನೆ manipulationಗೂ ಕೂಡ ಅವಕಾಶವಿದೆಯೆಂಬುದನ್ನು ಟಿ.ವಿ.ಯಲ್ಲಿ ನೋಡಿದೆ. ಈ ರೀತಿ manipulation ಗೂ ಅವಕಾಶವಿದೆ ಯೆನ್ನುವಂಥ ರೀತಿಯಲ್ಲಿ ಬಂದಾಗ ಅದರ ಮೇಲೆ ವಿಶ್ವಾಸವೆನ್ನುವಂಥದ್ದು ಕಡಿಮೆಯಾಗುತ್ತದೆ. ಆ ಕಾರಣಕ್ಕೋಸ್ಕರ ಇವತ್ತು ಏನಾಗಿದೆಯೆಂದರೆ ನಮ್ಮಲ್ಲಿ software ಗಾಗಲಿ, technology ಗಾಗಲಿ, ಯಾವುದೇ ಕೊರತೆ ಇಲ್ಲ. ನೀವು ಈ ಮಿಷನ್‌ಗಳನ್ನು ಯಾವಾಗಲೋ ಒಂದು ಬಾರಿ ಅಂದರೆ ಐದು ವರ್ಷಗಳಿಗೊಂದು ಸಾರಿಯೋ, ಮೂರು ವರ್ಷಗಳಿಗೆ ಒಂದು ಸಾರಿ open ಮಾಡುವಂಥದ್ದು ಮತ್ತೆ ಕೆಟ್ಟಿರುವಂಥದ್ದು, maintain ಮಾಡದೇ ಇರುವಂಥ ದ್ದನ್ನೆಲ್ಲಾ ಇಟ್ಟು, ಅದು ಹೊಲಸಾಗುವುದು ಬೇಡ. ಆದಕ್ಕೋಸ್ಕರ technologyಯನ್ನು upgradation ಮಾಡುವುದರ ಬಗ್ಗೆ ಜನಗಳ ವಿಶ್ವಾಸವನ್ನು ಗಳಿಸುವಂಥ ರೀತಿಯಲ್ಲೂ ಕೂಡ ಇವತ್ತು ನಮ್ಮ ತಾಂತ್ರಿಕತೆಯು ಕೂಡ ಬದಲಾಗಬೇಕಾಗುತ್ತದೆ. ಅಂದರೆ ಜನಗಳಲ್ಲಿ ವಿಶ್ವಾಸ ಮೂಡಬೇಕಾದಾಗ, ಇರಬೇಕಾದಾಗ, ಆ technology upgradation ಬಗ್ಗೆ ಕೂಡ ಚಿಂತನೆ ಮಾಡಬೇಕು. ನಮ್ಮ ರಾಜ್ಯದಲ್ಲಿ ಏನಾಗಿದೆ? ನಮ್ಮ ದೇಶದಲ್ಲಿ ಏನಾಗಿದೆ? ಹೊರದೇಶಗಳಲ್ಲಿ ಏನಾಗಿದೆ? ಅಂಥಾದ್ದೆಲ್ಲವನ್ನು ನೋಡಿಕೊಂಡು ಮಾಡಬೇಕು. ಈಗ ಅಸೆಂಬ್ಲಿ, ಪಾರ್ಲಿಮೆಂಟ್, ಮತ್ತು ಸ್ಥಳೀಯ ಸಂಸ್ಥೆಗಳದೇ ಒಂದು wing ಮಾಡಿ upgradationಗೆ ವಿಶ್ವಾಸ ಬರುವಂಥ ರೀತಿಯಲ್ಲಿ ಮತ್ತು ಅದನ್ನು maintain ಮಾಡತಕ್ಕಂಥದ್ದರ ಬಗ್ಗೆಯೂ ಚಿಂತನೆ ಮಾಡಬೇಕೆಂದು ನನ್ನದು ಒಂದು ಸಲಹೆಯನ್ನು ಹೇಳುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾವು ಯಾರು ಹೇಳಲಿಲ್ಲ, ಬಿ.ಜೆ.ಪಿ.ಯ ನಾಯಕರು ಹೇಳಿರುವುದರಿಂದ ಅವರು ಹೇಳುವುದಕ್ಕೆ ಏಕೆ ಹಿಂದೇಟು ಹಾಕಿದರು? ಅವರು ಹೇಳಿರುವುದರಿಂದ ನಾವು ಹೇಳುತ್ತಿದ್ದೇವೆಯೇ ಹೊರತು ನಮ್ಮದೇನು ಇಲ್ಲ. ಇದನ್ನು ಮಾಡುವುದು ಸೂಕ್ತ, ಆದರೆ ಮಾನ್ಯ ಜಯಚಂದ್ರರವರು ಕೊಟ್ಟಿರುವ ಸಲಹೆಗಳನ್ನು ಸೇರಿಸಿಕೊಂಡು ಮಾಡಬೇಕೆಂದು ನನ್ನ ಭಾವನೆಯಾಗಿದೆ.

ಶ್ರೀ ಎಂ. ಟಿ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಚಿಂತನೆ ಮಾಡಿರುವಂಥದ್ದು ಒಳ್ಳೆಯದು. ಆದರೆ ಮೊನ್ನೆ ಈ ಒಂದು ಓಟಿನ patronನಲ್ಲಿ ನಿವೃತ್ತ ಮುಖ್ಯ ಕಾರ್ಯದರ್ಶಿ, ದೆಹಲಿ, ಇವರು ಒಂದು ಸುದೀರ್ಘವಾದ ವರದಿಯನ್ನು election commissionಗೆ ಕೊಟ್ಟಿದ್ದಾರೆ. ನಾವು 5 ಓಟುಗಳನ್ನು ಮಾಡಿದರೆ 3ನೇ ಓಟನ್ನು ನಾವು ಯಾವ ಪಾರ್ಟಿಗೆ ಬೇಕಾದರೂ change ಮಾಡಿಕೊಳ್ಳಬಹುದೆಂಬುದನ್ನು practical ಮಾಡಿರುವಂಥದ್ದು, ಪತ್ರಿಕೆಗಳಲ್ಲೂ ಬಂದಿದೆ. ಅದರಲ್ಲೂ ವಿಶೇಷವಾಗಿ ಟಿ.ವಿ. ಮಾಧ್ಯಮದಲ್ಲಿ experiment ಎಲ್ಲಾ ಮಾಡಿ ತೋರಿಸಿದ್ದಾರೆ. ಅದನ್ನು ಅಳವಡಿಸಿದರೆ ಏನಾಗಬಹುದೆಂದು ಇದು ಇಲ್ಲಿಗೆ ಮಾತ್ರ ಸೀಮಿತವಲ್ಲ. ಈ ರಾಜ್ಯದ, ಈ ರಾಷ್ಟ್ರದ, ಎಲ್ಲಾ ಕಡೆಗಳಲ್ಲೂ ಚುನಾವಣೆಗಳ ಮೇಲೆ ದುಷ್ಪರಿಣಾಮವಾಗುತ್ತದೆ. ಇದರ ಬಗ್ಗೆ ಏನಾದರೂ prevent ಮಾಡುವ ಚಿಂತನೆ ಇದೆಯಾ? Chief Election Commissioner ರವರು ಸಹ ಇದರ ಬಗ್ಗೆ ಒಂದು ಸಲಹೆಯನ್ನು ನೀಡಿದರು. ಇದನ್ನು ಸುದೀರ್ಘವಾಗಿ enquiry ಮಾಡುತ್ತೇನೆಂದು, ಏಕೆಂದರೆ ಎಲ್ಲೋ ಒಂದು ಕಡೆ ಆಡಳಿತ ಪಕ್ಷಗಳು ಅದು ರಾಜ್ಯ ಆಗಲಿ, ರಾಷ್ಟ್ರವಾಗಲಿ ಎಲ್ಲೇ ಆಗಲಿ ಆ software ಅನ್ನು ಬದಲಾವಣೆ ಮಾಡಿಕೊಂಡು ಬಿಟ್ಟರೆ ಚುನಾವಣಾ ಮೌಲ್ಯ ಕುಸಿದು ಹೋಗುತ್ತದೆ. ಆ ನಿಟ್ಟಿನಲ್ಲಿ ಏನು ಚಿಂತನೆಯನ್ನು ಮಾಡಿದ್ದೀರೆಂಬ ವಿಷಯವನ್ನು ಮಾನ್ಯ ಸಚಿವರು ಹೇಳಬೇಕು. ಇದರ ಜೊತೆಗೆ ಇದು ರಾಜ್ಯಕ್ಕೆ ಸಂಬಂಧಪಟ್ಟ ವಿಚಾರವಲ್ಲ. ಇದು ಚುನಾವಣಾ ಕಮೀಷನ್‌ಗೆ ಸಂಬಂಧಪಟ್ಟ ವಿಷಯ. ಈ ವಿಷಯವಾಗಿ ನಾಲ್ಕಾರು ಬಾರಿ ಪತ್ರಿಕೆಗಳಲ್ಲಿ ಬಂದಿದೆ. ಇದಕ್ಕೆ ಒಂದು enquiry commission ಅನ್ನು ಮಾಡುತ್ತೇವೆಂದು Chief Election Commissioner Delhi, ಇವರು ಹೇಳಿದ್ದಾರೆ. ಅದರ ಬಗ್ಗೆ ಏನಾದರೂ

ಮಾಹಿತಿ ಇದ್ದರೆ ಮಾನ್ಯ ಸಚಿವರು ಸಭೆಗೆ ತಿಳಿಸಬೇಕೆಂದು ವಿನಂತಿಸಿ ಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಇದಕ್ಕೆ Expenditure 11 ಕೋಟಿ ರೂಪಾಯಿಗಳು ಹೇಗೆ ಬೇಕಾಗುತ್ತದೆ. ನಾನು ಇದನ್ನು ಈಗ ನೋಡಿದೆ, I am really surprised.

ಶ್ರೀ ಎಸ್.ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ರೇವಣ್ಣನವರು ಒಂದು ಬಹಳ ಪ್ರಮುಖವಾದ ವಿಚಾರವನ್ನು ವ್ಯಕ್ತಪಡಿಸಿದ್ದಾರೆ. ಅದರಲ್ಲೂ ವಿಶೇಷವಾಗಿ Electronic Voting Machine ಬಗ್ಗೆ ಇತ್ತೀಚೆಗೆ ಬಂದಿರುವಂಥ ಕೆಲವು ಅಭಿಪ್ರಾಯಗಳು, ಸಾರ್ವಜನಿಕವಾಗಿ ನಡೆಯುತ್ತಿರುವಂಥ ಚರ್ಚೆ ಹಾಗೂ ಮಾನ್ಯ ಕೃಷ್ಣಪ್ಪನವರು ಕೂಡ ತಮ್ಮ apprehensionನ್ನು ವ್ಯಕ್ತಪಡಿಸಿದ್ದಾರೆ. ನಾವೆಲ್ಲರೂ ಕೂಡ ಮುಕ್ತವಾದ ಚುನಾವಣೆಯನ್ನು ಬಯಸುವವರು. ದೇಶದಲ್ಲಿ ಜನತೆಗೆ ಅವರಿಗೆ ಬೇಕಾದ ಅಭಿಪ್ರಾಯದ ಮೂಲಕ ಒಂದು ಸರ್ಕಾರ, ಒಂದು ವ್ಯವಸ್ಥೆ ಬರಬೇಕೆಂದು ಇದೆ. ಮಾನ್ಯ ಜಯಚಂದ್ರರವರೆ, 15-20 ವರ್ಷಗಳ ಹಿಂದೆ ನಡೆಯುತಿದ್ದಂಥ ಚುನಾವಣೆಗಳಿಗೆ ಇವತ್ತು ಹೋಲಿಸಿದರೆ ಜನರಿಗೆ ಚುನಾವಣಾ ಆಯೋಗದ ಮೇಲೆ ವಿಶ್ವಾಸ ಹೆಚ್ಚಾಗಿದೆ. ಇದನ್ನು ನಾವು ಒಪ್ಪಿಕೊಳ್ಳುತ್ತೇವೆ. ಅದು ಬಿಹಾರ್ ರಾಜ್ಯದಲ್ಲಿ ನಡೆದಿರುವ ಚುನಾವಣೆ ಇರಬಹುದು, ಯು. ಪಿ. ಚುನಾವಣೆ ಇರಬಹುದು. ಎಲ್ಲಾ ಕಡೆಗಳಲ್ಲೂ ಇವತ್ತು ಚುನಾವಣೆ ಚೆನ್ನಾಗಿ ನಡೆದಿದೆ. ಮೊದಲು ಚುನಾವಣೆ ಆದ ಮಾರನೇ ದಿವಸ ನಾವು ನೋಡುತ್ತಾ ಇದ್ದಿದ್ದು ಎಷ್ಟು percentage ಎನ್ನುವುದಕ್ಕಿಂತ ಎಷ್ಟು ಕಡೆ booth capture ಆಯಿತೆಂದು, ಎಷ್ಟು ಕಡೆಗಳಲ್ಲಿ ನಕಲಿ ಮತದಾನ ಆಯಿತೆಂಬುದನ್ನು, ಎಷ್ಟು ಕಡೆಗಳಲ್ಲಿ re-polling ಆಯಿತೆಂಬುದನ್ನು ಚರ್ಚೆ ಮಾಡುತ್ತಿದ್ದೆವು. ಇವತ್ತು ಆ ವ್ಯವಸ್ಥೆಯನ್ನು ದಾಟಿ ಮುಂದೆ ಬಂದಿದ್ದೇವೆ & Electronic Voting Machine ಇವತ್ತು in general ಒಂದು accepted, ಒಂದು ವ್ಯವಸ್ಥೆ ಮತ್ತೆ ಬಹಳ fair & free ಇರುತ್ತದೆ.

(11-30 AM)

ಇದು ನಿಜವಾಗಿಯೂ ಕೂಡ ಜನರ ಅಭಿಪ್ರಾಯವನ್ನು ವ್ಯಕ್ತ ಮಾಡುತ್ತದೆ ಎಂದು ಸಾರ್ವತ್ರಿಕವಾದ ಅಭಿಪ್ರಾಯವಿದೆ. It is the accepted policy of the Election Commission. ಈಗ ಎರಡು ಮೂರು

ವಿಚಾರಗಳನ್ನು ಹೇಳಿದ್ದಾರೆ. ಯಾವುದೇ system ಅನ್ನು ನಾವು ನಿರಂತರವಾಗಿ fool proof ಮಾಡುವುದಕ್ಕೆ, tamper free ಮಾಡಲಿಕ್ಕೆ ಪ್ರಯತ್ನವನ್ನು ಮಾಡುತ್ತಲೇ ಇರಬೇಕು, ಇದು ನಿಲ್ಲುವುದಿಲ್ಲ. ಮೊನ್ನೆ ನನಗೆ ರಾಜ್ಯ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳು ಒಂದು ಘಟನೆಯನ್ನು ಹೇಳಿದರು. Corporate Hospitalಗಳಲ್ಲಿ ಕೊಡುವ ಎಲ್ಲಾ medicines ಅನ್ನು, ಯಾವ ಟೈಮಿಗೆ ಯಾವ medicine ಕೊಡಬೇಕು ಎನ್ನುವುದನ್ನು computerize ಮಾಡಿರುತ್ತಾರೆ. ಅದನ್ನು ನೋಡಿ ಅದರ ಪ್ರಕಾರ ಮಾಡುತ್ತಾರೆ. ಅದನ್ನು ಯಾರೋ ಅಮೇರಿಕಾದಲ್ಲಿ ಕುಳಿತುಕೊಂಡು ಇಲ್ಲಿನ ಆಸ್ಪತ್ರೆಯ software ಅನ್ನು hack ಮಾಡಿ, ಯಾವ ರೀತಿ ಬದಲಾಯಿಸಿದ, ಅದರಿಂದ ಒಬ್ಬ ತೀರಿಹೋದ ಎನ್ನುವ ಮಾರ್ಮಿಕವಾದ ಒಂದು ಕಥೆಯನ್ನು ಹೇಳಿದರು. ಈ ರೀತಿಯ ವ್ಯಕ್ತಿಗಳು ಇದ್ದಾರೆ, ಈ ರೀತಿಯ ಮನಸ್ಸುಗಳು ಇವತ್ತು ಇವೆ. ಆದ್ದರಿಂದ, ನೀವೆಲ್ಲ ಹೇಳಿದ ಹಾಗೆ ನಾವು ಎಚ್ಚರಿಕೆಯನ್ನು ವಹಿಸಬೇಕು. ಈ ವ್ಯವಸ್ಥೆಯಲ್ಲಿ ಅಕಸ್ಮಾತ್ ಲೋಪವಿದ್ದರೆ, ಅದನ್ನು ಸರಿಪಡಿಸಿ, ಜನರ ಅಭಿಪ್ರಾಯಕ್ಕೆ ಭಂಗ ಬರದ ಹಾಗೆ, electronic voting machine tamper ಆಗದ ಹಾಗೆ ಇನ್ನಷ್ಟು ಭದ್ರ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳಬೇಕು. ನನ್ನ ಈ ಅನುಭವದ ಮೇಲೆ, ನಮ್ಮ ವಿಜ್ಞಾನಿಗಳು ಮತ್ತು ನಮ್ಮ ಚುನಾವಣಾ ಆಯೋಗ ಮಾಡುತ್ತದೆ ಎನ್ನುವ ವಿಶ್ವಾಸವನ್ನು ಕೊಡುತ್ತೇನೆ. ಇನ್ನು, ಎಷ್ಟು ರೇಟ್ ಆಗುತ್ತದೆ ಎಂದು ತಾವು ಕೇಳಿದಿರಿ. ಒಂದು electronic voting machineಗೆ 10,000 ರೂಪಾಯಿ. ನಮಗೆ ಒಟ್ಟು ಬೇಕಾಗಿರುವುದು ಏಳೂವರೆ ಸಾವಿರ machines ಇದರ ಜೊತೆಗೆ, ಅದನ್ನು install ಮಾಡುವುದಕ್ಕೆ ನಮಗೆ ಬೇಕಾಗಿರುವ additional expenses 4,000 ರೂಪಾಯಿ. ಹಾಗಾಗಿ ಒಂದು machine install ಮಾಡಲು ನಮಗೆ ಒಟ್ಟು ಹನ್ನೊಂದೂವರೆ ಸಾವಿರ ರೂಪಾಯಿಗಳು ಬೇಕು. ಅದಕ್ಕೋಸ್ಕರ ಇದೆಲ್ಲವನ್ನೂ ಲೆಕ್ಕ ಹಾಕಿ ಇಷ್ಟು ಹಣ ಬೇಕೆಂದು ಹೇಳಿದ್ದೇವೆ. ರಾಜ್ಯದ assembly, parliament ಮತ್ತು ಸ್ಥಳೀಯ ಸಂಸ್ಥೆಗಳ electionಗಳು ಒಟ್ಟಿಗೆ ನಡೆದರೆ ನಮ್ಮ ಹತ್ತಿರ spare machines ಇರಬೇಕು ಎಂದು ನಾವು ಲೆಕ್ಕ ಹಾಕಿ B.E.L. ನಿಂದ quotation ತೆಗೆದುಕೊಂಡು ನಾವು ಮಾಡುತ್ತಿದ್ದೇವೆ.

ಶ್ರೀ ಹೆಚ್.ಡಿ.ರೇವಣ್ಣ : ಲೋಕಸಭೆ ಮತ್ತು ವಿಧಾನಸಭೆಗಳಿಗೆ ಈಗಾಗಲೇ electronic voting machines ಇವೆ. ಅವುಗಳಿದ್ದರೂ ಹೇಗೆ shortage ಆಗುತ್ತದೆ ಎನ್ನುವುದಕ್ಕೆ ಉತ್ತರ ಬೇಕು.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2009ರ ಕರ್ನಾಟಕ ಪೌರಸಭೆಗಳ ಕಾನೂನು ಹಾಗೂ ಇನ್ನೊಂದು ಕಾನೂನಿನ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 4 ರವರೆಗೆ

ಅಧ್ಯಕ್ಷರು : "ಖಂಡ 2 ರಿಂದ 4ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 4ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ :

ಅಧ್ಯಕ್ಷರು : ಪ್ರಸ್ತಾವ ಏನೆಂದರೆ :

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳು ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ, ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ಪೌರಸಭೆಗಳ ಕಾನೂನು ಹಾಗೂ ಇನ್ನೊಂದು ಕಾನೂನಿನ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2009ರ ಕರ್ನಾಟಕ ಪೌರಸಭೆಗಳ ಕಾನೂನು ಹಾಗೂ ಇನ್ನೊಂದು ಕಾನೂನಿನ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಅನುಬಂಧ-3)

ಈ) ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕ, 2009 ಪರ್ಯಾಲೋಚನಾ ಪ್ರಸ್ತಾವ

ಶ್ರೀ ವಿ. ಎಸ್. ಆಚಾರ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ವಿ.ಎಸ್.ಆಚಾರ್ಯ: ಮಾನ್ಯ ಅಧ್ಯಕ್ಷರೆ, ನಾಗರೀಕ ಸಮಾಜದಲ್ಲಿ ಪ್ರಮುಖವಾದಂಥ ಸೇವೆಗಳು, ಸೌಲಭ್ಯಗಳು ಸುಲಲಿತವಾಗಿ ನಡೆಯಬೇಕಾದರೆ ಅದಕ್ಕೆ ಏನಾದರೂ ಒಂದು ಬಗೆಯ ನಿಯಂತ್ರಣ ಬೇಕು ಎನ್ನುವ ದೃಷ್ಟಿಯಿಂದ ಈ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕವನ್ನು ನಾವು ಇಲ್ಲಿ ತಂದಿದ್ದೇವೆ. ಇದು ಹೊಸದೇನೂ ಅಲ್ಲ, ಹಿಂದೆಯೂ ನಮ್ಮ ರಾಜ್ಯದಲ್ಲಿ ಜಾರಿಯಲ್ಲಿತ್ತು. ಆದರೆ ಅದರ ಅವಧಿ built

in 10 ವರ್ಷವಿದ್ದುದರಿಂದ, 1994 ರಲ್ಲಿ ಅಸ್ತಿತ್ವಕ್ಕೆ ಬಂದಿದ್ದಂಥ ಅದು 2004ರಲ್ಲಿ ತಾನಾಗಿಯೇ lapse ಆಯಿತು. ಆಮೇಲೆ ಮತ್ತೊಂದು ಹೊಸ ಕಾನೂನನ್ನು ತರುವಂಥ ಅಗತ್ಯವಿತ್ತು. ಪ್ರಮುಖವಾಗಿ ಇದರಲ್ಲಿ ನಾಲ್ಕು ವಿಷಯಗಳಿವೆ.

(1) ನೀರಿನ ಪೂರೈಕೆಗೆ ಅಡೆತಡೆಯಾಗಬಾರದು
(2) ವಿದ್ಯುಚ್ಛಕ್ತಿ-ಉತ್ಪಾದನೆ, ವಿತರಣೆ ಮತ್ತು ಸಾಗಾಣಿಕೆಗೆ ಅಡ್ಡಿಯಾಗಬಾರದು
(3) ಮೋಟಾರು ವಾಹನಗಳಲ್ಲಿ ಸರಕು ಮತ್ತು ಪ್ರಯಾಣಿಕರನ್ನು ಸಾಗಿಸುವಂಥದ್ದಕ್ಕೆ ನಿರಾಕರಣೆ ಅಥವಾ ಅಡ್ಡಿ ಆತಂಕ ಮಾಡುವಂಥದ್ದರ ವಿರುದ್ಧ
(4) ನಮ್ಮ ರಾಜ್ಯದ ಕರ್ತವ್ಯಗಳು, ಅಂದರೆ ಸಂವಿಧಾನದ 7ನೇ ಲಿಸ್ಟ್‌ನ 2ನೇ ಪಟ್ಟಿಯಲ್ಲಿ ಬರತಕ್ಕಂಥ ವ್ಯಾಪ್ತಿಗೆ ಬರುವಂಥ ಯಾವುದೇ ಒಂದು ಸೇವೆಗೆ ಅಡ್ಡಿಯಾಗುವಂಥದ್ದರ ವಿರುದ್ಧ.

ಮೇಲೆ ಹೇಳಿದ ಯಾವುದೇ ಒಂದು ಸೇವೆಗೆ ಅಡ್ಡಿಯಾಗುವಂಥ ಸಂದರ್ಭವಿದ್ದರೆ ಅದು ಶಿಕ್ಷಾರ್ಹ ಅಪರಾಧ ಎನ್ನುವುದನ್ನು ಇದರಲ್ಲಿ ತಂದಿದ್ದೇವೆ. ಈ ವಿಧೇಯಕದ ಅವಧಿಯೂ 10 ವರ್ಷ ಎಂದು ಇರುತ್ತದೆ. ಇಂಥ ಅಪರಾಧಗಳನ್ನು ಮಾಡಿದವರಿಗೆ ಒಂದು ವರ್ಷ ಸಜೆ ಅಥವಾ 5,000 ದಂಡ ಎಂದು ನಾನು ಒಂದು ತಿದ್ದುಪಡಿಯನ್ನು ಕಳುಹಿಸಿದ್ದೇನೆ. ಇದು ಈ ರೀತಿಯ ಒಂದು ಕಾನೂನಾಗಿದ್ದು ಇದು ಅವಶ್ಯಕವಾಗಿ ಸಿಕ್ಕುವ ಹಾಗೆ ಒಂದು ವ್ಯವಸ್ಥೆ ಮಾಡಿದ ಹಾಗಾಗುತ್ತದೆ ಎನ್ನುವ ಕಾರಣದಿಂದ ಇದನ್ನು ಮಾಡಿದ್ದೇವೆ. ಈ ಬಗ್ಗೆ 1994ರಿಂದ 2004ರವರೆಗೆ ಹಿಂದಿನ ಕಾನೂನು ಇತ್ತು. ಅದು 2004ರಲ್ಲಿ lapse ಆಗಿತ್ತು. ತಮಗೂ ಗೊತ್ತಿದೆ, 2007ರಲ್ಲಿ ಸರಕು ಸಾಗಾಣಿಕೆಯ ಒಂದು ಭಾರೀ ದೊಡ್ಡ Strike ಆದಾಗ ಇದು ನಮ್ಮ ಗಮನಕ್ಕೆ ಬಂತು. ಆನಂತರದಲ್ಲಿ ಒಂದು ಹೊಸ ಕಾನೂನು ತರಬೇಕು ಎನ್ನುವ ದೃಷ್ಟಿಯಿಂದ ಮತ್ತೆ ಅದೇ ಕಾನೂನನ್ನು ಜಾರಿಗೆ ತರುತ್ತಿದ್ದೇವೆ, ಇದರಲ್ಲಿ ಹೊಸದೇನೂ ಇಲ್ಲ.

ಶ್ರೀ ಟಿ.ಬಿ.ಜಯಚಂದ್ರ : ಒಂದು ಸಲ lapse ಆದ ಮೇಲೆ ಮತ್ತೆ ಹೊಸದಾಗಿ ಈ ವಿಧೇಯಕವನ್ನು ತರುತ್ತಿರುವಿರಾ?

ಶ್ರೀ ವಿ.ಎಸ್. ಆಚಾರ್ಯ : ಅದೇ ವಿಧೇಯಕವನ್ನೇ ಮತ್ತೆ ತರುತ್ತಿದ್ದೇವೆ ಅಷ್ಟೇ, ಬೇರೆ ಏನೂ ಇಲ್ಲ.

ಅಧ್ಯಕ್ಷರು : Subject matter same ಇದೆ. ಅದನ್ನು ಮತ್ತೊಮ್ಮೆ introduce ಮಾಡಿದ್ದಾರೆ.

ಶ್ರೀ ವಿ.ಎಸ್.ಆಚಾರ್ಯ : ಇದರಲ್ಲಿ ಅದೇ ವಿಷಯವಿದೆ. ಮೊದಲನೆಯದು, ಸೇವೆಯಲ್ಲಿರುವವರು ಯಾರಾದರೂ ಕೆಲಸ ಮಾಡಲಿಕ್ಕೆ ನಿರಾಕರಣೆ ಮಾಡಿದರೆ, ಎರಡನೆಯದು, ಅಂಥವರಿಗೆ ಪ್ರಚೋದನೆ ಕೊಡುವವರು ಯಾರಾದರೂ ಇದ್ದರೆ, ಮೂರ್ನೆಯದು, ಅಂಥಾದ್ದಕ್ಕೆ ಹಣಕಾಸಿನ ಸಹಾಯ ಮಾಡುವವರು, ಇದೆಲ್ಲವೂ ಶಿಕ್ಷಾರ್ಹ ಅಪರಾಧ ಎಂದಾಗುತ್ತದೆ. ಮತ್ತು ಸೇವೆಯಲ್ಲಿರುವವರಿಗೆ ಸೇವಾ ನಿಯಮಾವಳಿಗಳ ಪ್ರಕಾರ ಕ್ರಮ ತೆಗೆದುಕೊಳ್ಳಬೇಕು ಎನ್ನುವುದಷ್ಟೇ ಇದೆಯಲ್ಲವೇ ಬೇರೇನೂ ಇಲ್ಲ. ಅಂಥ ಅಪರಾಧಗಳನ್ನು ಮಾಡಿ, ನಾಗರೀಕ ವ್ಯವಸ್ಥೆಗೆ ಆಘಾತಗಳನ್ನು ಉಂಟು ಮಾಡುವವರಿಗೆ ಭಯ ಇರಲಿ ಎನ್ನುವ ದೃಷ್ಟಿಯಿಂದ ಇದನ್ನು ಮಾಡಿದ್ದೇವೆ.

ಶ್ರೀ ಟಿ.ಬಿ.ಜಯಚಂದ್ರ : ಇಷ್ಟೆಲ್ಲಾ ಕಾನೂನು ಇದ್ದಾಗ್ಯೂ ಕೂಡ ಇದೇ ರೀತಿಯಾದ ವಿರೋಧಾಭಾಸಗಳು ಇದ್ದೇ ಇರುತ್ತವಲ್ಲ, ಅದನ್ನು ಹತ್ತಿಕ್ಕುವಂಥ ಕೆಲಸವನ್ನು ಕೂಡ ಮಾಡಬೇಕು. ಇನ್ನೊಂದು ವಿಷಯವೆಂದರೆ ಇನ್ನೂ stringent ಆಗಿ ಮಾಡಬೇಕು.

ಶ್ರೀ ವಿ.ಎಸ್. ಆಚಾರ್ಯ : ESMA ಎಂದು ಮುಂಚೆಯೂ ಇತ್ತು. ಕೇಂದ್ರದ ಲಿಸ್ಟ್‌ನಲ್ಲಿರುವಂಥದ್ದಕ್ಕೆ ಅದು ಇದೆ. ಆದರೆ ಇದು ರಾಜ್ಯದ ಲಿಸ್ಟ್‌ನಲ್ಲಿರುವಂಥದ್ದು ಮತ್ತು ಕೆಲವೊಂದನ್ನು Stateಗೆ specific ಆಗಿ ಬೇಕು ಎನ್ನುವ ದೃಷ್ಟಿಯಿಂದ ಮಾಡಿದ್ದೇವೆ.

ಶ್ರೀ ಸಂಗಣ್ಣ ಕರಡಿ ಅಮರಪ್ಪ : ಮಾನ್ಯ ಅಧ್ಯಕ್ಷರೆ, ಇದರಲ್ಲಿ, ವಾರೆಂಟ್ ಇಲ್ಲದೇ ದಸ್ತಗಿರಿ ಮಾಡಲು ಅಧಿಕಾರ ಎಂದು ಇದೆ. ಸಂಶಯ ಪಟ್ಟು ಪೊಲೀಸ್ ಅಧಿಕಾರಿ ವಾರೆಂಟ್ ಇಲ್ಲದೇ ದಸ್ತಗಿರಿ ಮಾಡತಕ್ಕಂಥದ್ದರ ಬಗ್ಗೆ ಮಾನ್ಯ ಗೃಹ ಸಚಿವರು explain ಮಾಡಬೇಕೆಂದು ತಮ್ಮ ಮೂಲಕ ಕೇಳುತ್ತೇನೆ.

ಶ್ರೀ ವಿ.ಎಸ್.ಆಚಾರ್ಯ : ಇದು ಕೇಂದ್ರದ ಕಾನೂನಿನಲ್ಲಿ ಇರುವಂಥದ್ದು, ಹಿಂದಿನ ನಮ್ಮ ಕಾನೂನಿನಲ್ಲಿ ಇದ್ದಂಥದ್ದು. ವಾರೆಂಟ್ ಇಲ್ಲದೇ ಅರೆಸ್ಟ್ ಮಾಡುವಂಥ ಅಧಿಕಾರ ಇದ್ದರೆ ಮಾತ್ರ ಈ ಕಾನೂನನ್ನು

ಜಾರಿಗೆ ಕೊಡಲಿಕ್ಕೆ ಬರುತ್ತದೆ. ಹಾಗಾಗಿ, ಅದೂ ಸಹ ಕಾನೂನಿನ ಒಂದು ಭಾಗ. ಅದರಲ್ಲಿ ಹೊಸದೇನೂ ಇಲ್ಲ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2009ರ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 3 ರವರೆಗೆ

ಅಧ್ಯಕ್ಷರು : "ಖಂಡ 2 ರಿಂದ 3ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 3ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

(ಖಂಡ 4 ರಿಂದ 6 ರವರೆಗೆ ತಿದ್ದುಪಡಿ)

ಖಂಡ 4 ರಿಂದ 6 ರವರೆಗೆ

ಶ್ರೀ ವಿ.ಎಸ್. ಆಚಾರ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಖಂಡ 4 ರಿಂದ 6 ರವರೆಗೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ;

"ವಿಧೇಯಕದ 4, 5 ಮತ್ತು 6ನೇ ಖಂಡಗಳಲ್ಲಿ "ಎರಡು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳಿಗೆ "ಐದು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು."

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ :

"ವಿಧೇಯಕದ 4, 5 ಮತ್ತು 6ನೇ ಖಂಡಗಳಲ್ಲಿ "ಎರಡು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳಿಗೆ "ಐದು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 4 ರಿಂದ 6 ರವರೆಗೆ ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"ಖಂಡ 4 ರಿಂದ 6 ರವರೆಗೆ ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 4 ರಿಂದ 6 ರವರೆಗೆ ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 7 ರಿಂದ 9 ರವರೆಗೆ

ಅಧ್ಯಕ್ಷರು : "ಖಂಡ 7 ರಿಂದ 9 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 7 ರಿಂದ 9 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"ಮೊದಲನೆಯದು ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳು ವಿಧೇಯಕದ ಭಾಗವಾಗಿರುತ್ತವೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಡಾ: ವಿ.ಎಸ್.ಆಚಾರ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, 2009ನೇ ಸಾಲಿನ ಕರ್ನಾಟಕ ಅತ್ಯವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕ ತಿದ್ದುಪಡಿಯಾಗಿರುವಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2009ನೇ ಸಾಲಿನ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕ ತಿದ್ದುಪಡಿಯಾಗಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ತಿದ್ದುಪಡಿಯಾಗಿರುವಂತೆ ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಅನುಬಂಧ-4

ಉ) ಭಾರತ ದಂಡ ಸಂಹಿತೆ ಮತ್ತು ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ, 2009.

ಪರ್ಯಾಲೋಚನಾ ಪ್ರಸ್ತಾವ

ಡಾ: ವಿ.ಎಸ್. ಆಚಾರ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, 2009ನೇ ಸಾಲಿನ ಭಾರತ ದಂಡ ಸಂಹಿತೆ ಮತ್ತು ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು : ಈಗ ಬಿಲ್ ಬಗ್ಗೆ ವಿವರಣೆ ನೀಡಿ.

ಡಾ: ವಿ.ಎಸ್. ಆಚಾರ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಇದು ಸಣ್ಣ ತಿದ್ದುಪಡಿ. Supreme Courtನ ನಿರ್ದೇಶನದ ಪ್ರಕಾರ, ಶ್ರೀ ಎಸ್.ಜಿ. ಬಂಡಿ, ವಿಭಾಗೀಯ ಸಾರಿಗೆ ಅಧಿಕಾರಿ ವಿರುದ್ಧ ಈ ಒಂದು

ಕೇಸ್‌ನಲ್ಲಿ ನಿರ್ದೇಶನ ಕೊಟ್ಟಿತು. ಇದರಲ್ಲಿ, ಸರ್ಕಾರಿ ಮನೆಗಳು ಮತ್ತು ಆವರಣಗಳ ಹಂಚಿಕೆಗಾಗಿ ವರ್ಷಾನುಗಟ್ಟಲೆ ಕಾಯುತ್ತಿರುವ ಬಹಳಷ್ಟು ಸರ್ಕಾರಿ ನೌಕರರ ಹಿತಾಶಕ್ತಿಗೆ ಬಾಧಕವಾಗುವ ಹಾಗೆ ಮತ್ತು ನಾಗರೀಕ ಸಮಾಜದಲ್ಲಿ ಜಾರಿಯಲ್ಲಿರುವ ಎಲ್ಲಾ ನಿಯಮಗಳನ್ನು ರಾಜಾರೋಷವಾಗಿ ಉಲ್ಲಂಘಿಸಿ ರಾಷ್ಟ್ರದ ಬಹುಪಾಲು ಎಲ್ಲಾ ಭಾಗಗಳಲ್ಲೂ ಸರ್ಕಾರಿ ಮನೆಗಳಲ್ಲಿ, ಆವರಣದಲ್ಲಿ ಅನಧಿಕೃತವಾಗಿ ವಾಸಿಸುತ್ತಿರುವ ಪ್ರಕರಣಗಳು ನಾಯಿಕೊಡೆಯಂತೆ ಬೆಳೆಯುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು, ಉತ್ತರ ಪ್ರದೇಶ ಅಥವಾ ಒರಿಸ್ಸಾ ರಾಜ್ಯಗಳಲ್ಲಿ ಮಾಡಿರುವಂತೆಯೇ ಭಾರತ ದಂಡ ಸಂಹಿತೆ 441ನೇ ಪ್ರಕರಣಕ್ಕೆ ತಿದ್ದುಪಡಿಯನ್ನು ಮಾಡುವುದರ ಅಪೇಕ್ಷಣೀಯ ತೆಯನ್ನು ಭಾರತದ ಎಲ್ಲಾ ಇತರ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳು ಪರಿಗಣಿಸುವುದಕ್ಕೆ ಇದು ಸೂಕ್ತ ಸಮಯ ಎಂದು Supreme Court ಭಾವಿಸುತ್ತದೆಂದು ಹೇಳಿದೆ. ಸರ್ಕಾರಿ ನೌಕರರು ಸರ್ಕಾರಿ ಮನೆ ಮತ್ತು ಆವರಣಗಳನ್ನು ಖಾಲಿ ಮಾಡಬೇಕೆಂದು ಅವರಿಗೆ ನೋಟೀಸ್ ಅನ್ನು ಜಾರಿ ಮಾಡಿದ ಮೇಲೂ ಅವರು ಖಾಲಿ ಮಾಡದೆ ಮುಂದುವರೆದ ಸಂದರ್ಭದಲ್ಲಿ ಸಂಬಂಧಪಡುವಷ್ಟು 441 IPC ಪ್ರಕರಣದ ಅಡಿಯಲ್ಲಿನ ಅಪರಾಧವನ್ನು ಜಾಮೀನಿಯವಲ್ಲವೆಂದು ಮಾಡುವುದಕ್ಕೆ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ ಮೊದಲನೆಯ ಅನುಸೂಚಿಗೆ ತಿದ್ದುಪಡಿ ತರುವುದರ ಅಪೇಕ್ಷಣೀಯತೆಯನ್ನು ಸಹ ಅವರು ಪರಿಗಣಿಸಬೇಕು. ನಿಗದಿಪಡಿಸಿದ ಮುಂದಿನ ದಿನಾಂಕಕ್ಕಿಂತ ಮುಂಚೆ ಈ ಬಗ್ಗೆ ಇತರೇ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳು ಸ್ಪಂದಿಸಬೇಕೆಂದು ಅವರು ತಿಳಿಸಿದರು. ಅದರ ಪ್ರಕಾರ, ನಮ್ಮ IPC 441ರಲ್ಲಿ ಈಗಲೂ ಒಂದು ನಿಯಮ ಇದೆ. ಅಂದರೆ, ಇನ್ನೊಬ್ಬರ ಮನೆ ಆವರಣಕ್ಕೆ ಹೋಗಿ ಗಲಾಟೆ ಮಾಡಿ, ಅವರಿಗೆ ಬೆದರಿಸಿದರೆ ಅಂಥದ್ದು ಶಿಕ್ಷಾರ್ಹ ಅಪರಾಧವೆಂದು ಇದೆ. ಆದರೆ, ಸರ್ಕಾರಿ quartersನಲ್ಲಿ, ಸರ್ಕಾರಿ quartersನ ಆವರಣದಲ್ಲಿ ನೋಟೀಸ್ ಕೊಟ್ಟ ಮೇಲೆಯೂ ಅದಕ್ಕೇನೂ ಗಮನ ಕೊಡದೆ ಅಲ್ಲಿಯೇ ಮುಂದುವರೆದರೆ ಅವ್ಯವಸ್ಥೆಯಾಗುತ್ತದೆ ಇನ್ನೊಬ್ಬರು ಬಂದವರಿಗೆ ಅದು ಸಿಗುವುದಿಲ್ಲವೆನ್ನುವ ದೃಷ್ಟಿಯಿಂದ ಜಾಮೀನೀಯವಲ್ಲದ ಅಪರಾಧ ಎಂದು ಪರಿಗಣಿಸಬೇಕು ಎಂದು Supreme Courtನವರು ನಿರ್ದೇಶನ ಕೊಟ್ಟ ಪ್ರಕಾರ, 441ರಲ್ಲಿ ಒಂದು ಪ್ಯಾರಾವನ್ನು add ಮಾಡಿದ್ದೇವೆ. Cr.P.C.ಯ

447ರ Section ಪ್ರಕಾರ 5ನೇ ಕಾಲಂನಲ್ಲಿ ಪ್ರತಿಯೊಂದಕ್ಕೆ ಏನೇನು ಶಿಕ್ಷೆ ಇದೆ ಎಂಬುದು ಇದೆ. IPC ಪ್ರಕಾರ ಯಾವ ಅಪರಾಧಕ್ಕೆ ಯಾವ ಶಿಕ್ಷೆ ಎಂದಿದೆ. ಅದರಲ್ಲಿ ಈ ರೀತಿಯ ಅಪರಾಧಗಳು ಶಿಕ್ಷಾರ್ಹ ಅಪರಾಧಗಳಾಗುತ್ತವೆ, ಜಾಮೀನು ಇಲ್ಲದಂಥ ಅಪರಾಧವಾಗುತ್ತವೆ ಎಂದು ಸೇರಿಸಿದ್ದಾರೆ. ಇದನ್ನು ಎಲ್ಲಾ ರಾಜ್ಯಗಳಲ್ಲಿ ಅಳವಡಿಸಿಕೊಂಡಿದ್ದಾರೆ. ನಮ್ಮ ರಾಜ್ಯದಲ್ಲಿ ಇದನ್ನು ಅಳವಡಿಸಿಕೊಳ್ಳಬೇಕು. ಈ ಬಿಲ್ ಅನ್ನು ನಾನು ಬೆಳಗಾಂ ಅಧಿವೇಶನದಲ್ಲಿ introduce ಮಾಡಿದ್ದೆ. ಇದಕ್ಕೆ ಸದನದ ಒಪ್ಪಿಗೆ ಬೇಕಾಗಿದೆ. ಒಂದು ಸಣ್ಣ ತಿದ್ದುಪಡಿ ಮಾತ್ರ ಇದಕ್ಕೆ ಮಾಡುವಂಥದ್ದಿದೆ. It is just a formality.

ಶ್ರೀ ಬಿ.ಸಿ.ಪಾಟೀಲ್ (ಹಿರೇಕೆರೂರು) : ಮಾನ್ಯ ಗೃಹ ಸಚಿವರು ಹೇಳುತ್ತಾ, ಎಸ್.ಜಿ.ಬಂಡಿ ವಿರುದ್ಧ ವಿಭಾಗೀಯ ಸಾರಿಗೆ ಅಧಿಕಾರಿ ಕೇಸ್‌ನಲ್ಲಿ Supreme Court ನೀಡಿರುವ ತೀರ್ಪಿನ ಬಗ್ಗೆ ಹೇಳಿದರು. ಸರ್ಕಾರಿ ನೌಕರರು ಸರ್ಕಾರಿ ಮನೆ ಮತ್ತು ಆವರಣಗಳನ್ನು ಖಾಲಿ ಮಾಡಬೇಕೆಂದು ಅವರಿಗೆ ನೋಟಿಸ್ ಅನ್ನು ಜಾರಿ ಮಾಡಿದ ಮೇಲೂ ಅವರು ಖಾಲಿ ಮಾಡದೆ ಮುಂದುವರೆದ ಸಂದರ್ಭಕ್ಕೆ ಸಂಬಂಧಪಡುವಷ್ಟು 441 IPC ಪ್ರಕರಣದಡಿಯಲ್ಲಿನ ಅಪರಾಧವನ್ನು ಜಾಮೀನೀಯವಲ್ಲವೆಂದು ಮಾಡುವುದಕ್ಕೆ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ ಮೊದಲನೆಯ ಅನುಸೂಚಿಗೆ ತಿದ್ದುಪಡಿ ತರುವ ಬಗ್ಗೆ ಹೇಳಿದರು. ಇದು ಬಹುಶಃ ಸರ್ಕಾರಿ ನೌಕರರ ವಿರುದ್ಧ ಬಳಸಿರುವ ಒಂದು ಅಸ್ತ್ರ ಎಂದು ಹೇಳಬೇಕಾಗುತ್ತದೆ. ಸರ್ಕಾರಿ ನೌಕರರು ಯಾವಾಗ ಮನೆಯನ್ನು ಖಾಲಿ ಮಾಡಬೇಕು? ಒಂದು ಸಾರಿ ವರ್ಗಾವಣೆ ಯಾದ ಮೇಲೆ ಮೂರು ತಿಂಗಳ ಕಾಲ ಅವರಿಗೆ ಅವಕಾಶವಿರುತ್ತದೆ. ಮೂರು ತಿಂಗಳಲ್ಲಿ ಅವರು ಖಾಲಿ ಮಾಡದೇ ಇದ್ದ ಸಂದರ್ಭದಲ್ಲಿ ಅವರಿಗೆ ನೋಟಿಸ್ ಅನ್ನು ಕೊಟ್ಟು ಖಾಲಿ ಮಾಡಿಸುವುದಿದೆ. ಆದರೆ, ಇವತ್ತು ಸರ್ಕಾರದಲ್ಲಿ ಪರಿಸ್ಥಿತಿ ಏನಾಗಿದೆ ಎಂದರೆ, ವರ್ಷಕ್ಕೆ 4–5 ಸಲ transfers ಆಗುತ್ತಿರುತ್ತವೆ, ವರ್ಗಾವಣೆ ಹೊಂದಿದ ನಂತರ ಒಬ್ಬ ಅಧಿಕಾರಿ ಮನೆಯನ್ನು ಖಾಲಿ ಮಾಡುವಂಥ ಪರಿಸ್ಥಿತಿ ನಿರ್ಮಾಣವಾಗಿಲ್ಲ. ಏಕೆಂದರೆ, ಇಲ್ಲಿಂದ ಹೋಗಿ ವರ್ಗಾವಣೆಯಾದ ಸ್ಥಳದಲ್ಲಿ ವರದಿ ಮಾಡಿಕೊಂಡ ಎರಡು ತಿಂಗಳಲ್ಲಿ ಮತ್ತೆ transfer ಆದರೆ ಎಷ್ಟು ಸಲ ಮನೆ ಖಾಲಿ ಮಾಡುವುದಕ್ಕಾಗುತ್ತದೆ? ಎಷ್ಟು ಸಾರಿ ನೀವು ನೋಟೀಸ್ ಕೊಡುವುದ

ಕ್ಕಾಗುತ್ತದೆ? ಖಾಲಿ ಮಾಡದವರ ಮೇಲೆ criminal case ಹಾಕಿದರೆ, ಅವರು ನಿರಂತರವಾದ ಅಪರಾಧಿಯಾಗುತ್ತಾರೆ. ಈ ಕಾಯ್ದೆ ಇವತ್ತು ದುರುಪಯೋಗ ವಾಗುತ್ತದೆ. ಏಕೆಂದರೆ, ಇದು non-bailable offence ಅನ್ನಾಗಿ ಮಾಡಿ ತಿದ್ದುಪಡಿ ತರುತ್ತಿದ್ದಾರೆ. ಇದರಲ್ಲಿ ಉದ್ದೇಶವೇನೂ ಇರುವುದಿಲ್ಲ. ನೀವು ವರ್ಗಾವಣೆ ಮಾಡುವ ಸಮಯದಲ್ಲಿ strict ಆಗಿ ಏಪ್ರಿಲ್, ಮೇ ತಿಂಗಳಲ್ಲಿ ಮಾಡಿ ಮುಗಿಸಿ. ವರ್ಗಾವಣೆಯಾದ ಸ್ಥಳದಿಂದ ಎರಡು ವರ್ಷಗಳವರೆಗೆ ನಿಮ್ಮನ್ನು ಬೇರೆಡೆಗೆ ವರ್ಗಾವಣೆ ಮಾಡುವುದಿಲ್ಲವೆನ್ನುವ ಭರವಸೆ ಕೊಟ್ಟರೆ ಆ ಅಧಿಕಾರಿ ಇದ್ದಂಥ ಸ್ಥಳದಿಂದ ಮನೆ ಖಾಲಿ ಮಾಡಿಕೊಂಡು ಹೋಗಬಹುದು. ಈಗ ನೀವು ತಂದಿರುವ ಬಿಲ್ ಪ್ರಕಾರ ಮನೆಯನ್ನು ಬದಲಾವಣೆ ಮಾಡಿಕೊಂಡು ಹೋಗಬಹುದು. ಏಕೆಂದರೆ, ಮೇ, ಜೂನ್, ಜುಲೈ ತಿಂಗಳಲ್ಲಿ schoolಗಳು ಶುರುವಾಗುತ್ತವೆ. ಆಗ ವರ್ಗಾವಣೆಯಾದ ಸ್ಥಳಕ್ಕೆ ಹೋಗಿ ಸಂಬಂಧಪಟ್ಟ ಅಧಿಕಾರಿ settle ಆಗಬಹುದು. ಆದರೆ, ನವೆಂಬರ್, ಡಿಸೆಂಬರ್ ತಿಂಗಳಲ್ಲಿಯೂ ವರ್ಗಾವಣೆ ನಡೆಯುತ್ತದೆ. ಆಗಸ್ಟ್, ಸೆಪ್ಟೆಂಬರ್‌ನಲ್ಲಿ ವರ್ಗಾವಣೆ ನಡೆಯುತ್ತದೆ. ನೀವು ನವೆಂಬರ್, ಡಿಸೆಂಬರ್‌ನಲ್ಲಿ ಇವರಿಗೆ ನೋಟಿಸ್ ಕೊಟ್ಟು ಮನೆ ಖಾಲಿ ಮಾಡಿ ಎಂದರೆ ಅವರಿಗೆ ಬಹಳ ಕಷ್ಟವಾಗುತ್ತದೆ. ಏಕೆಂದರೆ, ಅವರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿ ಓದಿಸುತ್ತಿರುತ್ತಾರೆ, ವರ್ಷದ ಮಧ್ಯೆದಲ್ಲಿ ಆ ಮಕ್ಕಳನ್ನು ಶಾಲೆ ಬಿಡಿಸಿ, shift ಮಾಡಿಕೊಂಡು ಇನ್ನೊಂದು ಊರಿಗೆ ಹೋಗುವುದಕ್ಕಾ ಗುವುದಿಲ್ಲ ಆ ಸಂದರ್ಭದಲ್ಲಿ ಮನೆಗಳನ್ನು ಖಾಲಿ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ, academic year ಬಿಟ್ಟು ಏಪ್ರಿಲ್, ಮೇ ತಿಂಗಳಲ್ಲಿ ವರ್ಗಾವಣೆ ಹೊಂದಿದ ಅಧಿಕಾರಿಗಳಿಗೆ ಮಾತ್ರ ಇದು ಅನ್ವಯಿಸಬೇಕು. ಮಧ್ಯಂತರ ವರ್ಗಾವಣೆಯಾದ ಸಂದರ್ಭದಲ್ಲಿ next academic year ವರೆಗೂ ಅವರಿಗೆ ಅವಕಾಶವನ್ನು ಕಲ್ಪಿಸಿಕೊಟ್ಟರೆ ಬಹಳ ಉಪಯೋಗವಾಗುತ್ತದೆ. ಇಲ್ಲದಿದ್ದರೆ, ಹಿರಿಯ ಅಧಿಕಾರಿಗಳು ಮನಸೋ ಇಚ್ಛೆ ಈ ಕಾನೂನನ್ನು ಬಳಸಿಕೊಂಡು ಕಿರಿಯ ಅಧಿಕಾರಿಗಳಿಗೆ ತೊಂದರೆ ಕೊಡುವಂಥ ಎಲ್ಲಾ ಸಂಭವವೂ ಜಾಸ್ತಿ ಇರುವುದರಿಂದ ಇದರ ಬಗ್ಗೆ ವಿಚಾರ ಮಾಡಬೇಕು. ನಾನು ಹೇಳಿದ ಹಾಗೆ, ಮಧ್ಯಂತರ ವರ್ಗಾವಣೆಗಳನ್ನು ಬಂದ್ ಮಾಡಿ ಏಪ್ರಿಲ್, ಮೇ ತಿಂಗಳಲ್ಲಿ ಮಾತ್ರ ಮಾಡಿ. ಮಧ್ಯಂತರದಲ್ಲಿ ವರ್ಗಾವಣೆಯಾದವರಿಗೆ next academic

yearವರೆಗೂ ಅವಕಾಶ ಕೊಡಬೇಕೆಂದು ನಾನು ನನ್ನ ಅನಿಸಿಕೆಗಳನ್ನು ತಮ್ಮ ಮುಂದಿಟ್ಟಿದ್ದೇನೆ.

ಶ್ರೀ ಎಂ. ಟಿ. ಕೃಷ್ಣಪ್ಪ (ತುರುವೇಕೆರೆ) : ರಾಜ್ಯದ ಹಿತದೃಷ್ಟಿಯಿಂದ ಇವರು ತಂದಿರುವ amendment ಒಳ್ಳೆಯದಿದೆ. ಅದನ್ನು ಯಾವಾಗ apply ಮಾಡಬೇಕು? ಮೊದಲು ಸರ್ಕಾರದಲ್ಲಿ Transfer Policy frame ಮಾಡಬೇಕು. ಯಾವ ತಿಂಗಳಿನಿಂದ ಯಾವ ತಿಂಗಳಿನವರೆಗೆ transfer ಮಾಡಬೇಕು, ಅದಾದಮೇಲೆ transfer ಮಾಡಬಾರದೆಂದು ಮಾಡಬೇಕು. ಬಿ.ಸಿ.ಪಾಟೀಲ್‌ರವರು ಹೇಳಿದ ಹಾಗೆ, ವರ್ಗಾವಣೆಯಾಗಿ report ಮಾಡಿಕೊಳ್ಳುತ್ತಾರೆ, ನಿಮ್ಮ familyಯನ್ನೇಕೆ ಕರೆದುಕೊಂಡು ಬಂದಿಲ್ಲವೆಂದು ಕೇಳಿದರೆ, ಇಲ್ಲ, ಯಾವಾಗ ವರ್ಗಾವಣೆಯ ಆದೇಶ ಬರುತ್ತದೋ ಎನ್ನುವ ಆತಂಕದಲ್ಲಿ ಇರುತ್ತಾರೆ. ಹೀಗಾಗಿ, ಒಂದು ಕಡೆ ಆತನ ಕುಟುಂಬ settle ಆಗಿರುತ್ತದೆ. ಅಂಥವರನ್ನು ಏಕಾಏಕಿ ವರ್ಗಾವಣೆ ಮಾಡಿ ನೀವು ಈ ಆದೇಶದ ಪ್ರಕಾರ quarters ಖಾಲಿ ಮಾಡಿ ಎಂದು ಹೇಳಿದರೆ, ಅವರಿಗೆ ಬಹಳ ತೊಂದರೆಯಾಗುತ್ತದೆ. ಮೊದಲು Transfer Policy frame ಮಾಡಿ. ಈ ಸಾರಿ transfer ಇಲ್ಲವೆಂದು ಹೇಳುತ್ತಾರೆ. ವರ್ಗಾವಣೆಯ ಅರ್ಜಿಗಳನ್ನು ಸ್ವೀಕರಿಸುವುದಿಲ್ಲವೆಂದು ಎಲ್ಲಾ Minister Chamber ಮುಂದೆ ಬೋರ್ಡ್‌ನಲ್ಲಿ ಹಾಕಿದ್ದಾರೆ. ಆದರೆ, ಪ್ರತಿನಿತ್ಯ ವರ್ಗಾವಣೆಯಾಗುತ್ತಿದೆ ಎಂಬುದಾಗಿ ಪತ್ರಿಕೆಯಲ್ಲಿ ವರದಿಯಾಗುತ್ತಿರುವುದನ್ನು ನಾವು ಓದುತ್ತಿರುತ್ತೇವೆ. ಹೀಗಾಗಿ, ಈ Rules ಬಹುಶಃ ಸರ್ಕಾರಿ ನೌಕರರಿಗೆ ಬಹಳ ಮಾರಕವಾಗುತ್ತದೆಂಬುದು ನನ್ನ ಭಾವನೆ. ದಯಮಾಡಿ, ಇದಕ್ಕೊಂದು amendment ತನ್ನಿ. ಯಾವಾಗ ನೀವು Transfer Policy ಯನ್ನು adopt ಮಾಡುತ್ತೀರಿ, ಮಾರ್ಚ್, ಏಪ್ರಿಲ್ ಅಥವಾ ಜೂನ್ end ಒಳಗಡೆ ವರ್ಗಾವಣೆ ಮುಗಿಯಬೇಕು. ಆ ಸಂದರ್ಭದಲ್ಲಿ ವರ್ಗಾವಣೆಯಾದವರಿಗೆ ಈ ಕಾನೂನನ್ನು apply ಮಾಡಿ. ನೀವು ನವೆಂಬರ್, ಡಿಸೆಂಬರ್ ತಿಂಗಳಲ್ಲಿ ವರ್ಗಾವಣೆ ಮಾಡಿ ಈ ಕಾನೂನನ್ನು ಇಟ್ಟುಕೊಂಡರೆ ಏನಾಗಬೇಕು? Primary Schoolಗೆ ಸೇರಿಸಬೇಕಾದರೆ, UKGಗೆ ಸೇರಿಸಬೇಕಾದರೆ, ಕಾಲೇಜಿಗೆ ಸೇರಿಸ ಬೇಕಾದರೆ donation ಕೊಟ್ಟು ಮಕ್ಕಳನ್ನು ಸೇರಿಸಿರುತ್ತಾರೆ.

ನೀವು ನವೆಂಬರ್, ಡಿಸೆಂಬರ್ ತಿಂಗಳಲ್ಲಿ ವರ್ಗಾವಣೆ ಮಾಡಿದರೆ ಅವರ ಮಕ್ಕಳ ಗತಿ ಏನಾಗಬೇಕು? ಆತ ಮತ್ತು ಆತನ ಹೆಂಡತಿ ವರ್ಗಾವಣೆಯಾದ ಸ್ಥಳಕ್ಕೆ ಹೋಗಬಹುದು, ಆದರೆ, ಮಕ್ಕಳು ಎಲ್ಲಿಗೆ ಹೋಗಬೇಕು? ಆದ್ದರಿಂದ, ಈ ಬಿಲ್‌ನಿಂದ ಸರ್ಕಾರಿ ನೌಕರರ ಮೇಲೆ ದೊಡ್ಡ ದುಷ್ಪರಿಣಾಮ ಬೀರುತ್ತದೆ. ಇದಕ್ಕೊಂದು ಸಣ್ಣ amendment ಅನ್ನು ನಾನು Suggestion ಮಾಡುತ್ತೇನೆ, ಮಾರ್ಚ್, ಏಪ್ರಿಲ್, ಮೇ, ಜೂನ್ end ಒಳಗೆ ವರ್ಗಾವಣೆಯಾದ ಪ್ರಕರಣಕ್ಕೆ ಇದನ್ನು adopt ಮಾಡಿ. ಜುಲೈ, ಆಗಸ್ಟ್, ಸೆಪ್ಟೆಂಬರ್, ನವೆಂಬರ್, ಡಿಸೆಂಬರ್‌ನಲ್ಲಿ ನಿಮ್ಮ whims and fancy ರೀತಿ ವರ್ಗಾವಣೆ ಮಾಡುತ್ತೀರಿ, ಆದಕ್ಕೆ, ಈ ಕಾನೂನನ್ನು adopt ಮಾಡಿದರೆ ತೊಂದರೆಯಾಗುತ್ತದೆ. ಆದ್ದರಿಂದ, ದಯಮಾಡಿ, ಈ ಬಿಲ್ ಅನ್ನು ಸದ್ಯಕ್ಕೆ withdraw ಮಾಡುವುದು ಒಳ್ಳೆಯದು.

ಡಾ: ವಿ.ಎಸ್.ಆಚಾರ್ಯ : ಮಾನ್ಯ ಸದಸ್ಯರಾದ ಎಂ.ಟಿ.ಕೃಷ್ಣಪ್ಪ, ಬಿ.ಸಿ.ಪಾಟೀಲ್‌ರವರು ಕೆಲವು ವಿಷಯಗಳನ್ನು ಹೇಳಿದ್ದು ಅದರಲ್ಲಿ ಸತ್ಯಾಂಶವಿದೆ ಮತ್ತು ಅದು ಅವರ ಅನುಭವದ ಮಾತಾಗಿದೆ. ವರ್ಗಾವಣೆ ಪಾಲಿಸಿ ವಿಷಯ ಚರ್ಚೆಯಲ್ಲಿದೆ ಮತ್ತು ನಾವು ಅದನ್ನು ಆದಷ್ಟು ಪಾರದರ್ಶಕವಾಗಿ ಮತ್ತು ಉತ್ತಮ ರೀತಿಯಿಂದ ಮಾಡುವ ಹಾಗೆ ಪ್ರಯತ್ನ ಮಾಡುತ್ತೇವೆ. ಇದರ ಜೊತೆಗೆ eviction notice ನೀಡುವಂಥದ್ದನ್ನು allotment of quarters ನಿಯಮ ಗಳಲ್ಲಿಯೇ ಅದನ್ನು built in ಮಾಡಿಕೊಂಡು ಯಾರಿಗೂ ತೊಂದರೆಯಾಗದ ಹಾಗೆ ಅದನ್ನೂ ಮಾಡುತ್ತೇವೆ. ಈಗ ತಂದಿರುವ ಈ ಸಣ್ಣ ತಿದ್ದುಪಡಿ, Supreme Court ನಿರ್ದೇಶನದ ಪ್ರಕಾರ ಎಲ್ಲಾ ರಾಜ್ಯಗಳಿಗೂ, ಕೇಂದ್ರಾಡಳಿತ ಪ್ರದೇಶಗಳಿಗೂ ಇದನ್ನು ಮಾಡುವಂತೆ ತಿಳಿಸಿದೆ. ಅದರ ಪ್ರಕಾರ ನಾವು ಕಾನೂನು ಮಾಡುತ್ತಿದ್ದು, ಹೊಸದೇನೂ ಅಲ್ಲ. ಇದರಿಂದ ಯಾರಿಗೂ ತೊಂದರೆಯಾಗುವಂಥ ಉದ್ದೇಶವಿಲ್ಲ. ನಮಗೆ ವಿವೇಚನೆ ಇದೆ.

ಶ್ರೀ ಎಂ.ಟಿ.ಕೃಷ್ಣಪ್ಪ : ಇದರಿಂದ ಏನಾಗುತ್ತದೆ ಎಂದರೆ, ತಳಮಟ್ಟದ ಅಧಿಕಾರಿಗಳು Higher Level Officers, IAS, IPS ಅಧಿಕಾರಿಗಳಿಗೆ ಭಯಪಡುವಂಥ ಸಮಸ್ಯೆ ಇದೆ. ಮಾನ್ಯ ಸುರೇಶ್‌ಕುಮಾರ್‌ರವರೆ, ಸಣ್ಣ ತಿದ್ದುಪಡಿ ಮಾಡುವುದು ಅಂತಹ ದೊಡ್ಡದೇನೂ ಅಲ್ಲ. ಅಧಿಕಾರಿಗಳು ಸಹ

ಭಯದ ವಾತಾವರಣದಲ್ಲಿ ಕೆಲಸ ನಿರ್ವಹಿಸಬೇಕಾಗುತ್ತದೆ. ಆಡಳಿತ ಕುಸಿಯುತ್ತದೆ. ನೀವು arrest ಮಾಡುತ್ತೇವೆ, ದಾಳಿ ಮಾಡುತ್ತೇವೆ ಎಂದು ಹೇಳುವುದಲ್ಲ. ಅದು ಹಿಂದೆಯೂ ಇತ್ತು, ಈಗಲೂ ಇದೆ. ಇದನ್ನು ಬಿಗಿ ಮಾಡಬೇಕಷ್ಟೆ. ಇದರಲ್ಲಿ ಹೊಸದೇನೂ ಇಲ್ಲ. ಆದರೆ, ಏನಾಗಿದೆ ಎಂದರೆ until and unless transfer policy frame ಮಾಡದೇ ನೀವು ಆದೇಶ ಮಾಡುವುದು ಬಹುಶಃ ಸಾರ್ವತ್ರಿಕವಾಗಿ 5.5 ಲಕ್ಷ ಸರ್ಕಾರಿ ನೌಕರರಿಗೆ ತೊಂದರೆ ಆಗುತ್ತದೆ. ಏಕೆಂದರೆ, ನಾನು ರಾಜ್ಯ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷನಾಗಿ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ನೀವು ಇದನ್ನು ಮಾಡಿ, ನಮ್ಮ ವಿರೋಧವಿಲ್ಲ. Transper Policy ಅನ್ನು ಜಾರಿ ಮಾಡಿದ ನಂತರ ಇದನ್ನು ಮಾಡಿ. Academic yearನಲ್ಲಿ ಅಂದರೆ April-June or July 15th ಆದರೂ ಪರವಾಗಿಲ್ಲ ಈ ಅವಧಿ ಯೊಳಗೆ ವರ್ಗಾವಣೆ ಮುಗಿಸಿದರೆ ತೊಂದರೆಯಾಗುವುದಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಇದರಲ್ಲಿ ಚುನಾಯಿತ ಪ್ರತಿನಿಧಿಗಳನ್ನು ಸೇರಿಸಬೇಕೇ ಎನ್ನುವ ಬಗ್ಗೆ ಸಹ ಯೋಚಿಸಬೇಕು. ಮಂತ್ರಿಗಳು, ಅವರು ಇವರೆಲ್ಲ ಅಧಿಕಾರ ಇಲ್ಲದಿದ್ದರೂ ವರ್ಷಾನುಗಟ್ಟಲೆ ತಮ್ಮ quarters ಖಾಲಿ ಮಾಡದಿರುವ ಪ್ರಸಂಗಗಳನ್ನು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಇದರಲ್ಲಿ ಅವರನ್ನು ಸೇರಿಸಿಕೊಳ್ಳುವುದಕ್ಕೆ ಅವಕಾಶವಿದೆಯೇ?

ಶ್ರೀ ಎಂ.ಟಿ.ಕೃಷ್ಣಪ್ಪ : ಶಾಸಕರನ್ನೂ ಸೇರಿಸಿ ಮಾಡಿ.

ಶ್ರೀ ಟಿ.ಬಿ.ಜಯಚಂದ್ರ : Supreme Courtನಲ್ಲಿ ಇಂಥ ಬದಲಾವಣೆ ತರಬೇಕು ಎಂದು ಮಾಡಿರುವ ಏನಾದರೂ ಕಾರಣವಿದ್ದರೆ ಮಂತ್ರಿಗಳು ತಮ್ಮ quarters ಖಾಲಿ ಮಾಡದಿರುವುದೇ ಇದಕ್ಕೆ ಪೂರಕ ಕಾರಣವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ, ಇದು Supreme Court ನಿಂದ ಬಂದಿರುವ ತೀರ್ಮಾನವಾಗಿದೆ. ಮಾನ್ಯ ಸದಸ್ಯರ ಅಭಿಪ್ರಾಯವೇನೆಂದರೆ, in the middle of the year transfer ಆದ ಸಂದರ್ಭದಲ್ಲಿ, 2 ತಿಂಗಳಿಗೆ ಒಂದು ಸಲ ವರ್ಗಾವಣೆಯಾದ ಸಂದರ್ಭದಲ್ಲಿ ಏನು ಮಾಡಬೇಕೆನ್ನುವ ಪ್ರಶ್ನೆ ಇದೆ.

ಡಾ: ವಿ.ಎಸ್.ಆಚಾರ್ಯ : ಸರಿ ಇದೆ, ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ : ನೀವು ಈ ಮಸೂದೆಯಲ್ಲಿ un-authorisedly ಎಂದು ಹೇಳಿದ್ದೀರಿ? 'Residing un-authorizedly in a Government quarters…' un-authorisedly ಎಂದರೇನು? ಎನ್ನುವ definition ಅನ್ನು ಹಾಕಬೇಕಾಗಿತ್ತು. In the middle of the year ವರ್ಗಾವಣೆ ಆದ ಸಂದರ್ಭದಲ್ಲಿ ಇದು apply ಆಗುವುದಿಲ್ಲ ಎನ್ನುವ ರೀತಿಯಲ್ಲಿ ಬದಲಾವಣೆ ತಂದರೆ ಬಹುಶಃ ಈ ಎಲ್ಲದಕ್ಕೂ ಕೂಡ ಅನುಕೂಲವಾಗುತ್ತದೆ. ಮೇಲಧಿಕಾರಿಗಳು ಕೆಳಗಿನವರ ಮೇಲೆ ಕ್ರಮ ತೆಗೆದುಕೊಳ್ಳುವುದು, ಆಗುವ ಕಿರುಕುಳವನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎಸ್.ಸುರೇಶ್‌ಕುಮಾರ್ (ನಗರಾಭಿವೃದ್ಧಿ ಮತ್ತು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ನೀವು ಹೇಳುವ ಸಲಹೆಗಳನ್ನು ನಾವು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇವೆ. ಆದರೆ, ಆ notice ಕೊಡುವಾಗ ವರ್ಷದ ಮಧ್ಯೆ ವರ್ಗಾವಣೆಯಾದಾಗ ಇನ್ನೂ ಅವಧಿ ಇರುವಾಗ ವರ್ಗಾವಣೆಯಾದಾಗ ಖಂಡಿತವಾಗಿಯೂ ವಿವೇಚನೆಯಿಂದ ನೋಟೀಸ್ ಕೊಡುತ್ತೇವೆ, ಆ ರೀತಿ ತೊಂದರೆ ಕೊಡುವುದಕ್ಕೆ ಇಷ್ಟಪಡುವುದಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ : Academic year ಎಂದು ಸೇರಿಸಿ.

ಶ್ರೀ ಬಿ.ಸಿ.ಪಾಟೀಲ್ : Whether it applies to Bangalore city also. ಏಕೆ ಈ ಪ್ರಶ್ನೆ ಕೇಳುತ್ತಿದ್ದೇನೆಂದರೆ, ಒಬ್ಬ ಪೊಲೀಸ್ ಅಧಿಕಾರಿ ಒಂದು ಪೊಲೀಸ್ ಸ್ಟೇಷನ್‌ನಲ್ಲಿರುತ್ತಾರೆ ಅವರಿಗೆ designated quarters ಇರುತ್ತದೆ. ಉದಾಹರಣೆಗೆ, ಅವರನ್ನು ಯಶವಂತಪುರದಿಂದ ಮಲ್ಲೇಶ್ವರಂ ಪೊಲೀಸ್ ಸ್ಟೇಷನ್‌ಗೆ ವರ್ಗಾಯಿಸಿದರೆ, ಅಥವಾ ಮಾಗಡಿ ಪೊಲೀಸ್ ಸ್ಟೇಷನ್‌ಗೆ ವರ್ಗಾಯಿಸಿದರೆ quarters vacate ಮಾಡಬೇಕೇ? ಬೆಂಗಳೂರು ನಗರದಲ್ಲಿ 3-3 ವರ್ಷಗಳಿಗೊಮ್ಮೆ quarters ಬದಲಾವಣೆ ಮಾಡಲಿಕ್ಕೆ ಸಾಧ್ಯವಿದೆಯೇ? ಬೆಂಗಳೂರಿನಲ್ಲಿ inside the city transfers ಅಥವಾ ಹುಬ್ಬಳ್ಳಿ-ಧಾರವಾಡದಲ್ಲಿ ಹುಬ್ಬಳ್ಳಿಯಿಂದ ಧಾರವಾಡಕ್ಕೆ, ಧಾರವಾಡದಿಂದ ಹುಬ್ಬಳ್ಳಿಗೆ ವರ್ಗಾವಣೆ ಯಾದಾಗ ಅವರಿಗೆ quarters shift ಮಾಡುವುದಕ್ಕಾಗುವುದಿಲ್ಲ. ಅವರಿಗೆ ಒಂದು ಸಲ allot ಆದಾಗ at least ಇಷ್ಟು ಕಿ.ಮೀ. jurisdiction ಎಂದು ಹಾಕಿಕೊಳ್ಳುವ ಒಂದು ಸಣ್ಣ ತಿದ್ದುಪಡಿ ತಂದರೆ ಸೂಕ್ತ.

ಶ್ರೀ ಟಿ.ಬಿ.ಜಯಚಂದ್ರ : CRPC Section 441 ಇದೆಯಲ್ಲಾ, ಅದು suo-moto ನಾ ಅಥವಾ automatical? Ultimately the Department has to exercise its powers. ಆದ್ದರಿಂದ, ಅಲ್ಲಿ ಸ್ವಲ್ಪ ಎಚ್ಚರಿಕೆ ವಹಿಸಿದರೆ ಕಿರುಕುಳ ಆಗುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಅದು mis-utilize ಆಗದ ರೀತಿಯಲ್ಲಿ ಮಾಡಬೇಕಾದಾಗ Section 441 operate ಮಾಡಬೇಕಾದರೆ Department option ಇರುತ್ತದೆ ಅಲ್ಲ, ಅದನ್ನು They should exercise it with due diligence and care.

ಡಾ: ವಿ.ಎಸ್.ಆಚಾರ್ಯ : ಮಾನ್ಯ ಸದಸ್ಯರು ಏನು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ, ಆ ಬಗ್ಗೆ ನಾನು ಆಗಲೇ ಸ್ವೀಕಾರ ಮಾಡಿಕೊಂಡಿದ್ದೇನೆ. ಯಾವುದೇ ರೀತಿಯಲ್ಲಿ ಅವರಿಗೆ inconvenient ಆಗುವಂಥಹುದಲ್ಲ. ಅವರಿಗೆ notice ಕೊಟ್ಟ ನಂತರವೂ noticeನಲ್ಲಿ ಕೊಟ್ಟಂಥ ಅವಧಿಗಿಂತಲೂ ಹೆಚ್ಚಿಗೆ over stay ಮಾಡಿದಾಗ ಮಾತ್ರ ಇದು operate ಆಗುತ್ತದೆ. Section 441 ಏನಿದೆ, ಅದಕ್ಕೊಂದು additional ಆಗಿ ಈ ರೀತಿಯಾಗಿ ಸರ್ಕಾರಿ ನೌಕರರು Stay ಮಾಡುವಂಥದ್ದು, ಅವಧಿಗಿಂತ ಹೆಚ್ಚಾಗಿ ಇರುವಂಥದ್ದನ್ನು ಸೇರಿಸಿದ್ದಾರೆ. ಅದಕ್ಕೆ ಸಂಲಗ್ನವಾಗಿರುವಂಥ CRPC Section 447ನ್ನು 5ನೇ entryಯಲ್ಲಿ ಜಾಮೀನಿನ ಬದಲು ಜಾಮೀನೀಯವಲ್ಲದ ಎಂದು ಇದೆ. ಇದು ಇಡೀ ದೇಶಕ್ಕೆ ಕೊಟ್ಟ ನಿರ್ದೇಶನವಾಗಿದೆ. ಅದರ ಪ್ರಕಾರ ನಾವು ಮಾಡಿದ್ದೇವೆ. ಆದ್ದರಿಂದ, ಇದನ್ನು ದಯವಿಟ್ಟು consider ಮಾಡಬೇಕು.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2009ನೇ ಸಾಲಿನ ಭಾರತ ದಂಡ ಸಂಹಿತೆ ಮತ್ತು ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ಮತ್ತು 3

ಅಧ್ಯಕ್ಷರು : "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ಮತ್ತು 3 ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಡಾ: ವಿ.ಎಸ್.ಆಚಾರ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, 2009ನೇ ಸಾಲಿನ ಭಾರತ ದಂಡ ಸಂಹಿತೆ ಮತ್ತು ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2009ನೇ ಸಾಲಿನ ಭಾರತ ದಂಡ ಸಂಹಿತೆ ಮತ್ತು ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಅನುಬಂಧ-5

ಊ) ಕರ್ನಾಟಕ ವ್ಯವಸ್ಥಿತ ಅಪರಾಧಗಳು (ತಿದ್ದುಪಡಿ) ನಿಯಂತ್ರಣ ವಿಧೇಯಕ, 2009

ಪರ್ಯಾಲೋಚನಾ ಪ್ರಸ್ತಾವ

ಡಾ: ವಿ.ಎಸ್.ಆಚಾರ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, 2009ನೇ ಸಾಲಿನ ಕರ್ನಾಟಕ ವ್ಯವಸ್ಥಿತ ಅಪರಾಧಗಳು (ತಿದ್ದುಪಡಿ) ನಿಯಂತ್ರಣ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು : ಸಚಿವರೆ, ಸದರಿ ಬಿಲ್ ಬಗ್ಗೆ ವಿವರ ನೀಡಿ.

ಡಾ: ವಿ.ಎಸ್.ಆಚಾರ್ಯ : 2000ನೇ ಇಸವಿಯಲ್ಲಿ ಕೋಕಾ ಅಥವಾ Karnataka Control of Organized Crime ಈ ಕಾಯಿದೆ ಜಾರಿಯಾಯಿತು. ಆಗ ಇದನ್ನು ಯೋಚನೆ ಮಾಡಿರಲಿಲ್ಲ ಅಥವಾ ಅವಗಾಹನೆ ಮಾಡಿರಲಿಲ್ಲ. 'Organized Crime' definitionನಲ್ಲಿ terrorism ಎನ್ನುವ nomenclature ಇರಲಿಲ್ಲ. ಹಾಗಾಗಿ definition clauseನಲ್ಲಿ 'ವ್ಯವಸ್ಥಿತ ಅಪರಾಧ' ಎನ್ನುವ definitionನಲ್ಲಿ ಭಯೋತ್ಪಾದನಾ ಕೃತ್ಯವನ್ನು ಒಂದು ವ್ಯವಸ್ಥಿತ ಅಪರಾಧ ಎಂಬುದಾಗಿ ಸೇರಿಸಲು ಮತ್ತು ಈ ಮುಂದಿನವುಗಳಿಗಾಗಿ ಉಪಬಂಧ ಕಲ್ಪಿಸಲು ಕರ್ನಾಟಕ ವ್ಯವಸ್ಥಿತ ಅಪರಾಧ ನಿಯಂತ್ರಣ ಅಧಿನಿಯಮ 2000ಕ್ಕೆ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಭಾವಿಸಲಾಗಿದೆ. ಎಂದರೆ,

1. ಭಯೋತ್ಪಾದನೆ ಕೃತ್ಯ ಮಾಡಿದ್ದಕ್ಕಾಗಿ ಅಪರಾಧ ಮಾಡುವುದಕ್ಕೆ ಭಯಹುಟ್ಟಿಸುವಂಥ ಮರಣದಂಡನೆ ಅಥವಾ ಆಜೀವ ಕಾರಾವಾಸದ ಮತ್ತು 10 ಲಕ್ಷ ರೂ.ಗಳ ಜುಲ್ಮಾನೆಯ ಶಿಕ್ಷೆಯನ್ನು ವಿಧಿಸುವುದು.
2. ತನಿಖೆ ನಡೆಯುತ್ತಿರುವಾಗ ಆಪಾದಿತನ ಸ್ವತ್ತನ್ನು ಜಪ್ತಿ ಮಾಡುವುದು.
3. ದೋಷಾರೋಪಣ ಪಟ್ಟಿಯನ್ನು ದಾಖಲು ಮಾಡುವುದಕ್ಕಾಗಿನ ಅವಧಿಯನ್ನು ಒಂದು ನೂರ ಎಂಭತ್ತು ದಿನಗಳಿಂದ ಮುನ್ನೂರ ಅರವತ್ತೈದು ದಿನಗಳವರೆಗೆ ವಿಸ್ತರಿಸುವುದು.

ಕಲಂ ಎರಡನೆ ತಿದ್ದುಪಡಿಯಲ್ಲಿ ಈಗಾಗಲೇ ಹೇಳಿದ ಹಾಗೆ ಭಯೋತ್ಪಾದನಾ ಕೃತ್ಯ ಎಂಬುದನ್ನು ವ್ಯವಸ್ಥಿತ ಅಪರಾಧ ಎಂದು ಸೇರಿಸ ಲಾಗಿದೆ. 2000ನೇ ಇಸ್ವಿಯಲ್ಲಿ ಇದನ್ನು ಮೂವ್ ಮಾಡಿರಲಿಲ್ಲ. ಕಲಂ ಮೂರಕ್ಕೆ ತಿದ್ದುಪಡಿ ಮಾಡಿ, ವ್ಯವಸ್ಥಿತ ಅಪರಾಧದಲ್ಲಿ ಮರಣ ಸಂಭವಿಸಿದರೆ ಎಂಬುವುದರ ಜೊತೆಗೆ ಯಾವುದಾದರೂ ಸ್ವತ್ತಿಗೆ ನಷ್ಟ ಅಥವಾ ಹಾನಿ ಉಂಟಾದಲ್ಲಿ ಎಂಬ ಪದಗಳನ್ನು ಸೇರಿಸಲಾಗಿದೆ. ಇದರ (ಬಿ)ನಲ್ಲಿ ಮರಣ ಸಂಭವಿಸಿದರೆ ವಿಧಿಸಬಹುದಾದ ದಂಡವನ್ನು ಒಂದು ಲಕ್ಷಕ್ಕಿಂತ ಕಡಿಮೆಯಾ ಗದಂತೆ ಎಂಬುದರ ಬದಲಾಗಿ ಐದು ಲಕ್ಷಕ್ಕಿಂತ ಕಡಿಮೆಯಾಗದಂತೆ ಎಂದು ಸೇರಿಸಲಾಗಿದೆ. 3 (ಸಿ)ನಲ್ಲಿ ಭಯೋತ್ಪಾಧನ ಕೃತ್ಯದಿಂದ ಮರಣ ಸಂಭವಿಸಿದರೆ ಅಥವಾ ಸ್ವತ್ತಿನ ನಷ್ಟ ಉಂಟಾದರೆ ಅದಕ್ಕಾಗಿ ಮರಣದಂಡನೆ ಹಾಗೂ ಐದು ಲಕ್ಷ ರೂಪಾಯಿಗಳಿಗಿಂತ ಕಡಿಮೆಯಲ್ಲದ ಜುಲ್ಮಾನೆಯನ್ನು ವಿಧಿಸಲು ಉದ್ದೇಶಿಸಲಾಗಿದೆ. ಕಲಂ 21 ಕ್ಕೆ ಒಂದು ತಿದ್ದುಪಡಿ ಮಾಡಿ, ಈ ಅಧಿನಿಯಮ ದಡಿಯಲ್ಲಿ ಅಪರಾಧವನ್ನು ಎಸಗಿದ ಸ್ವತ್ತನ್ನು ತನಿಖೆಯ ಕಾಲದಲ್ಲಿ ಮುಟ್ಟುಗೋಲು ಹಾಕಿಕೊಳ್ಳಲು ಉದ್ದೇಶಿಸಲಾಗಿದೆ. ಕಲಂ 22 ಕ್ಕೆ ತಿದ್ದುಪಡಿ ಮಾಡಿ, ಅಪರಾಧಗಳ ಸೆರೆ ಕಸ್ಟಡಿಯನ್ನು ಮೂವತ್ತು ದಿನಗಳು ಮತ್ತು ತೊಂಭತ್ತು ದಿನಗಳಿಗೆ ಬದಲಿಗೆ ಅರವತ್ತು ದಿನಗಳು ಮತ್ತು ನೂರ ಎಂಭತ್ತು ದಿನಗಳಿಗೆ ವಿಸ್ತರಿಸಲು ಉದ್ದೇಶಿಸಲಾಗಿದೆ.

ಶ್ರೀ ಬಿ.ಸಿ.ಪಾಟೀಲ್ (ಹಿರೇಕೆರೂರು) : ಮಾನ್ಯ ಅಧ್ಯಕ್ಷರೆ, ನಾನು ಸರ್ಕಾರವನ್ನು ಈ ಕಾಯಿದೆ ತಂದಿದ್ದಕ್ಕೆ ಅಭಿನಂದಿಸುತ್ತೇನೆ. ಕಾರಣ ಏನೆಂದರೆ, ನಾವು ತಯಾರಿಸಿದಂಥ ಸೆಲ್ಯೂಟ್ ಚಿತ್ರದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಒಬ್ಬ ಗೃಹ ಮಂತ್ರಿಯಾಗಿ ಒತ್ತಾಯ ಮಾಡಿದ್ದೆ. ಈ ಕೋಕಾ ಆಕ್ಟನ್ನು ಜಾರಿಗೆ ತರಬೇಕು ತಂದರೆ ಅನುಕೂಲವಾಗುತ್ತದೆ ಎಂದು ಹೇಳಿದ್ದಕ್ಕೆ ಮಾನ್ಯ ಮುಖ್ಯಮಂತ್ರಿಗಳು, ಇದನ್ನು ನಾನು ಒಪ್ಪಬಹುದು ಸದನದಲ್ಲಿ ಒಪ್ಪುವುದಿಲ್ಲ ವೆಂದು ಹೇಳುತ್ತಾರೆ. ಆಗ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡಿ ಕೋಕಾ ಆಕ್ಟ್ ಜಾರಿ ಮಾಡಿದ್ದೆ. ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಈ ಕಾಯಿದೆಯನ್ನು ತಂದು ಸದನದ ಒಪ್ಪಿಗೆಯನ್ನು ಪಡೆಯುತ್ತಿದ್ದಾರೆ. ಚಿತ್ರ ಬಿಡುಗಡೆಯಾಗುವುದಕ್ಕಿಂತ ಮುಂಚೆ ಈ ಕಾಯಿದೆ ತರುತ್ತಿರುವುದು ಬಹಳ ಹರ್ಷದಾಯಕ. ಆದ್ದರಿಂದ ಸರ್ಕಾರವನ್ನು ಅಭಿನಂದಿಸುತ್ತೇನೆ.

ಶ್ರೀ ಎಸ್.ಸುರೇಶ್‌ಕುಮಾರ್ : ಈ ತಿದ್ದುಪಡಿಗೆ ನಮ್ಮ ಸಿನಿಮಾನೇ ಸ್ಫೂರ್ತಿ ಎಂದು ತಾವು ಹೇಳುತ್ತೀರಿ.

ಶ್ರೀ ಯು.ಟಿ.ಖಾದರ್ (ಮಂಗಳೂರು) : ಮಾನ್ಯ ಅಧ್ಯಕ್ಷರೆ, ಪ್ರಥಮವಾಗಿ ನಾನು ಮಾನ್ಯ ಸಚಿವರನ್ನು ಅಭಿನಂದಿಸುತ್ತೇನೆ. ಇನ್ನು ಕಠಿಣವಾದ ಶಿಕ್ಷೆ ಕೊಡಲಿಕ್ಕೆ ಸಾಧ್ಯವಿದ್ದರೆ ಅದನ್ನು ಪರಿಗಣಿಸಬೇಕೆಂದು ಕೋರುತ್ತಾ, ನನ್ನ ಒಂದು ಅನಿಸಿಕೆ ಏನೆಂದರೆ, ಇನ್‌ವೆಸ್ಟಿಗೇಷನ್ ಆಫೀಸರ್ ಆಗಿ ಎಎಸ್‌ಪಿ ಗ್ರೇಡ್‌ಗಿಂತ ಮೇಲಿನವರ ಕೈಯಿಂದ ಮಾಡಿಸುವುದು ಒಳ್ಳೆಯದು ಎಂದು ನನ್ನ ಭಾವನೆ.

ಶ್ರೀ ಎಸ್.ಸುರೇಶ್‌ಕುಮಾರ್ : ಇದರಲ್ಲಿ ಆಗಿದೆ.

ಶ್ರೀ ಯು.ಟಿ.ಖಾದರ್ : ಧನ್ಯವಾದಗಳು.

ಕರ್ನಾಟಕ ವ್ಯವಸ್ಥಿತ ಅಪರಾಧಗಳು (ತಿದ್ದುಪಡಿ) ನಿಯಂತ್ರಣ ವಿಧೇಯಕ, 2009

ಪರ್ಯಾಲೋಚನಾ ಪ್ರಸ್ತಾವ

ಡಾ: ವಿ.ಎಸ್.ಆಚಾರ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ವ್ಯವಸ್ಥಿತ ಅಪರಾಧಗಳು (ತಿದ್ದುಪಡಿ ನಿಯಂತ್ರಣ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "2009ರ ಕರ್ನಾಟಕ ವ್ಯವಸ್ಥಿತ ಅಪರಾಧಗಳು (ತಿದ್ದುಪಡಿ) ನಿಯಂತ್ರಣ ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 5 ರವರೆಗೆ

ಅಧ್ಯಕ್ಷರು : "ಖಂಡ 2 ರಿಂದ 5 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 5 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆ ಖಂಡ, ದೀರ್ಘ, ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವ ಅಂಗೀಕಾರ

ಡಾ: ವಿ.ಎಸ್.ಆಚಾರ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ವ್ಯವಸ್ಥಿತ ಅಪರಾಧಗಳು (ತಿದ್ದುಪಡಿ) ನಿಯಂತ್ರಣ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "2009ರ ಕರ್ನಾಟಕ ವ್ಯವಸ್ಥಿತ ಅಪರಾಧಗಳು (ತಿದ್ದುಪಡಿ) ನಿಯಂತ್ರಣ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅನುಬಂಧ-6

ಋ) ಕರ್ನಾಟಕ ಕಳ್ಳಬಟ್ಟಿ ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವ ಅಪಾಯಕಾರಿ ಚಟುವಟಿಕೆಗಳನ್ನು ತಡೆಗಟ್ಟುವ (ತಿದ್ದುಪಡಿ) ವಿಧೇಯಕ, 2009

ಪರ್ಯಾಲೋಚನಾ ಪ್ರಸ್ತಾವ

ಡಾ: ವಿ.ಎಸ್.ಆಚಾರ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ, ಜೂಜು ಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವ ಅಪಾಯಕಾರಿ ಚಟುವಟಿಕೆಗಳನ್ನು ತಡೆಗಟ್ಟುವ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು : ಈ ಬಗ್ಗೆ ವಿವರಣೆ ಕೊಡಿ.

ಡಾ: ವಿ.ಎಸ್.ಆಚಾರ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಆರು ಬಗೆಯ ಅಪರಾಧಕ್ಕೆ ಈಗಾಗಲೇ 1985ರಲ್ಲಿ ಆಕ್ಟ್ ತಂದು ಅದರಲ್ಲಿ ಪ್ರಾವಿಜನ್ಸ್ ಎಲ್ಲಾ ಇಟ್ಟಿದೆ. ಅದರ ಪ್ರಾವಿಜನ್ಸ್ ಚೇಂಜ್ ಮಾಡುತ್ತಿಲ್ಲ. ಶೀರ್ಷಿಕೆಯಲ್ಲಿ ಇದರೊಟ್ಟಿಗೆ ವಿಡಿಯೋ ಮತ್ತು ಆಡಿಯೋ ಪೈರಸಿ ಬಹಳ ದೊಡ್ಡ ಸ್ಕೇಲ್‌ನಲ್ಲಿ ಮಾಡಿ ಏನು ಅನರ್ಥವಾಗುತ್ತದೆ ಅದರ ಬಗ್ಗೆ ಪಕ್ಕದ ರಾಜ್ಯಗಳಲ್ಲಿ ಇದನ್ನು ಗೂಂಡಾ ಆಕ್ಟ್‌ನಲ್ಲಿ ಸೇರಿಸಿದ್ದಾರೆ. ಇವತ್ತು ಕೃತಿಸ್ವಾಮ್ಯ ಅಧಿನಿಯಮ 1957ರ ಕೇಂದ್ರ ಅಧಿನಿಯಮ 14ರ ಅಡಿಯಲ್ಲಿ ದಂಡನೀಯವಾದ, ಸಾರ್ವಜನಿಕ ಸುವ್ಯವಸ್ಥಿತೆಯನ್ನು ಕಾಪಾಡಲು ಪ್ರತಿಕೂಲ ಪರಿಣಾಮ ಬೀರುವ ಅಥವಾ ಪ್ರತಿಕೂಲ ಪರಿಣಾಮ ಬೀರಬಹುದಾದ ಸಿನಿಮ್ಯಾಟೋಗ್ರಾಫ್ ಫಿಲ್ಮಂ ಅಥವಾ ಆ ಫಿಲ್ಮಂಗೆ ಸಂಬಂಧಪಟ್ಟ ಸೌಂಡ್ ಟ್ರ್ಯಾಕಿನ ಯಾವುದೇ ಭಾಗವನ್ನು ಒಳಗೊಂಡ ಧ್ವನಿಮುದ್ರಣದ ಸಂಬಂಧದಲ್ಲಿ ವಾಣಿಜ್ಯ ಲಾಭಕ್ಕಾಗಿ ದೃಶ್ಯ ಅಥವಾ ಧ್ವನಿಯನ್ನು ಕಳ್ಳಮುದ್ರಣದಲ್ಲಿ

ತೊಡಗಿರುವ ಅಥವಾ ಅಂಥ ಚಟುವಟಿಕೆಗಳಲ್ಲಿ ತೊಡಗಲು ಸಿದ್ಧತೆ ಮಾಡಿಕೊಳ್ಳುತ್ತಾ ಇರುವ ಯಾವೊಬ್ಬ ವ್ಯಕ್ತಿಯನ್ನು ಬಂಧಿಸುವುದಕ್ಕಾಗಿ ಉಪಬಂಧವನ್ನು ಕಲ್ಪಿಸುವುದು ಅವಶ್ಯಕವಾಗಿರುವುದರಿಂದ, ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವ ಅಪಾಯಕಾರಿ ಚಟುವಟಿಕೆಗಳನ್ನು ತಡೆಗಟ್ಟುವ ಅಧಿನಿಯಮ 1985 ಅನ್ನು ತಿದ್ದುಪಡಿ ಮಾಡುವುದು ಬಹಳ ಅವಶ್ಯಕವೆಂದು ಭಾವಿಸಿ ಇದರಲ್ಲಿ ಪೈರಸಿಯನ್ನು ಸೇರಿಸಲಾಗಿದೆ. ಇದು ಬಹಳ ವರ್ಷಗಳಿಂದ ಬೇಡಿಕೆಯಿತ್ತು, ಸುಮಾರು 2004ಕ್ಕಿಂತ ಮುಂಚೆ ಇದರ ಬಗ್ಗೆ ಪ್ರಸ್ತಾವನೆ ಇತ್ತು, ಅದು ಏಕೋ ಬಾಕಿ ಉಳಿದುಕೊಂಡು ಬಂದು ಬಿಟ್ಟಿದೆ, ಈಗ ಅದು ಅಗತ್ಯವಾಗಿರುವುದರಿಂದ, ಕರ್ನಾಟಕ ಸಿನಿಮಾ ವಾಣಿಜ್ಯೋದ್ಯಮಿ ಮಂಡಳಿ ಯವರದು ಬೇಡಿಕೆಯಿದೆ ಮತ್ತು ವ್ಯಾಪಕವಾಗಿ ಇತರೆ ಎಲ್ಲಾ ರಾಜ್ಯದಲ್ಲಿ ಅದು ಅಪರಾಧ ಎಂದು ಇರುವಾಗ ನಮ್ಮಲ್ಲಿ ಅದು ಅಪರಾಧ ಎಂದು ಇರದಿದ್ದರೆ ಅನಾವಶ್ಯಕವಾಗಿ ಬಹಳ ದೊಡ್ಡ ರೀತಿಯಲ್ಲಿ ಇದರ ಕಳ್ಳದಂಧೆ ನಡೆಯುತ್ತದೆ, ಇದು ಒಳ್ಳೆಯದಲ್ಲ, ಇದು ಅಪೇಕ್ಷಣೀಯವಲ್ಲ ಎನ್ನುವ ಭಾವನೆಯಿರುವುದರಿಂದ ಗೂಂಡಾ ಆಕ್ಟ್‌ಗೆ ಇದನ್ನು ಸೇರಿಸಿದ್ದೇವೆ.

ಶ್ರೀ ಬಿ.ಸಿ.ಪಾಟೀಲ್ (ಹಿರೇಕೆರೂರು) : ಮಾನ್ಯ ಅಧ್ಯಕ್ಷರೆ, ಸರ್ಕಾರ ಕರ್ನಾಟಕ ಕಳ್ಳಭಟ್ಟಿ, ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ, ಜೂಜು ಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳನ್ನು ತಡೆಗಟ್ಟುವ ವಿಧೇಯಕಕ್ಕೆ ಈ ತಿದ್ದುಪಡಿ ತಂದಿರುವುದ ಸಂತೋಷದ ಸಂಗತಿ. ಇದರಲ್ಲಿ ವಿಶೇಷವಾಗಿ ಆಡಿಯೋ ಮತ್ತು ವೀಡಿಯೋ ಪೈರಸಿ ಬಗ್ಗೆ ಕಲಂ 2ನೇ ಪ್ರಕರಣದಲ್ಲಿ ತಿದ್ದುಪಡಿಯಲ್ಲಿ ತಂದಿರುವುದು ಬಹಳ ಸ್ವಾಗತಾರ್ಹ. ಆಂಧ್ರಪ್ರದೇಶದಲ್ಲಿ ಈ ವೀಡಿಯೋ ಪೈರಸಿ ತಡೆಗಟ್ಟಲಿಕ್ಕೆ, A.P Exhibition of films on Television Screen through Video Cassettes Recording Regulation Act 1993, ಈ ಆಕ್ಟ್‌ನ್ನು ಪ್ರತ್ಯೇಕವಾಗಿ ಜಾರಿಗೆ ತಂದಿದ್ದಾರೆ. Short title encourage and commencement of this Act may be called as the Andhra Pradesh Exhibition of Films on Television Screen through Video Cassettes. ಈ ತರಹ

ಪ್ರತ್ಯೇಕವಾದಂಥ ಒಂದು ಕಾಯಿದೆಯನ್ನು ಈ ವೀಡಿಯೋ ಪೈಸರಿ ತಡೆಗಟ್ಟಲಿಕ್ಕೆ ತಂದರೆ ಬಹಳ ಸೂಕ್ತವೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಕರ್ನಾಟಕ ಚಲನ ಚಿತ್ರರಂಗ ಅತ್ಯಂತ ನಷ್ಟವನ್ನು ಅನುಭವಿಸುತ್ತದೆ. ಪೈರಸಿ ತಡೆಯುವ ಬಗ್ಗೆ ಗೂಂಡಾ ಕಾಯಿದೆಯನ್ನು ತರುವುದಕ್ಕೆ ನಾನು ಇಲ್ಲಿ ಪ್ರಶ್ನೆ ಕೇಳಿದ್ದೆ. ಆದರೆ, ನನ್ನ ಪ್ರಶ್ನೆ ಬರಲಿಲ್ಲ. ಈ ಕಾಯಿದೆ ತಂದಿದ್ದಕ್ಕೆ ಮೊದಲನೆಯದಾಗಿ ಕರ್ನಾಟಕ ಚಲನ ಚಿತ್ರ ವಾಣಿಜ್ಯ ಮಂಡಳಿ, ನಿರ್ಮಾಪಕ, ನಿರ್ದೇಶಕ, ಕಾರ್ಮಿಕ ಒಕ್ಕೂಟ, ಕಲಾವಿದರ ಪರವಾಗಿ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ. ಏಕೆಂದರೆ, ಇವತ್ತು ಚಲನಚಿತ್ರವನ್ನು ನಿರ್ಮಿಸುವುದು, ಆಡಿಯೋ ಕ್ಯಾಸೆಟ್ ಬಿಡುಗಡೆ ಮಾಡುವುದು ಬಹಳ ಕಷ್ಟದ ಕೆಲಸ. ಒಂದು ಚಿತ್ರ ನಿರ್ಮಿಸಬೇಕಾದರೆ ಸುಮಾರು 4 ರಿಂದ 5 ಕೋಟಿ ರೂಪಾಯಿ ಖರ್ಚಾಗುತ್ತದೆ. ಆದರೆ ಚಿತ್ರ ಬಿಡುಗಡೆಯಾಗುವುದಕ್ಕಿಂತ ಮುಂಚೆ ಪೈರಸಿ ಕ್ಯಾಸೆಟ್‌ಗಳು ಹೊರಗೆ ಬರುವಂಥ ಸಂದರ್ಭಗಳು ಹೆಚ್ಚಾಗಿವೆ. ಈಗಾಗಲೇ ಇದರ ಬಗ್ಗೆ ವಾಣಿಜ್ಯ ಮಂಡಳಿಯವರು, ನಿರ್ದೇಶಕರ ಸಂಘದವರು, ಎಲ್ಲರೂ ಸರ್ಕಾರಕ್ಕೆ ಮತ್ತು ವಿರೋಧ ಪಕ್ಷದ ನಾಯಕರಿಗೆ ಈಗಾಗಲೇ ಪತ್ರಗಳನ್ನು ಬರೆದಿದ್ದಾರೆ. ಇಲ್ಲಿ ಏನಾಗುತ್ತದೆ ಎಂದರೆ, ಕೆಲವು ಕಡೆ ನಾವು ಚಿತ್ರವನ್ನು ತಯಾರಿಸುತ್ತೇವೆ. ಸೆನ್ಸಾರ್ ಮಾಡುವುದಕ್ಕಿಂತ ಮುಂಚೆ ಕೆಲವು ಕಡೆ ಪ್ರೊಡಕ್ಷನ್ ಮ್ಯಾನೇಜರ್ ಎಂದು ಇರುತ್ತಾರೆ, ಅಸಿಸ್ಟೆಂಟ್‌ಗಳು ಯಾರೋ ಇರುತ್ತಾರೆ, ಯಾರೋ ಕಡೆಗೆ ನಾವು ಬಾಕ್ಸ್‌ನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸೆನ್ಸಾರ್‌ಗೆ ಕಳುಹಿಸಬೇಕಾದರೆ, ಅಥವಾ ಬೇರೆ ಕೆಲಸಗಳಿಗೆ ಕಳುಹಿಸುವಂಥ ಸಂದರ್ಭದಲ್ಲಿ ಒಬ್ಬ ವ್ಯಕ್ತಿ ಮಾಡುವ ಕೆಲಸದಿಂದ ನಷ್ಟವುಂಟಾಗುತ್ತದೆ. ಹೇಗೆ ಎಂದರೆ, ಒಂದು ವೀಡಿಯೋ ಕ್ಯಾಸೆಟ್ ಅನ್ನು ಅವನು ಏನಾದರೂ ಕದ್ದು ತಯಾರಿಸಿದ ಎಂದರೆ, ನಾಲ್ಕೈದು ಕೋಟಿ ರೂಪಾಯಿ ಖರ್ಚು ಮಾಡಿದ ನಿರ್ಮಾಪಕನಿಗೆ ಸಂಪೂರ್ಣವಾಗಿ ಸೊನ್ನೆ, ಅವನಿಗೆ ಏನೂ ಸಿಗುವುದಿಲ್ಲ.

ಸಿನಿಮಾ ಬಿಡುಗಡೆಯಾಗುವುದಕ್ಕಿಂತ ಮುಂಚಿತವಾಗಿಯೇ piracy cassette ಗಳು ಚಿತ್ರಮಂದಿರದ ಮುಂದೆ ಮಾರಾಟವಾಗುವುದನ್ನು ನಾವೆಲ್ಲಾ ನೋಡುತ್ತಿದ್ದೇವೆ. ಈಗ ಎಂಪಿ-3 ಕ್ಯಾಸೆಟ್‌ಗಳು ಬಂದಿವೆ. ಇದಕ್ಕೆ 20 ರೂಪಾಯಿ ಕೊಟ್ಟರೆ 3-4 ಸಿನಿಮಾ ನೋಡಬಹುದು. ಇಂಥ ಒಂದು ಪರಿಸ್ಥಿತಿಯಲ್ಲಿ ಕನ್ನಡ ಚಿತ್ರರಂಗ ಇವತ್ತಿನ ದಿವಸ ನರಳುತ್ತಿದೆ. ಕರ್ನಾಟಕ

ರಾಜ್ಯದಲ್ಲಿ ಒಟ್ಟು 1850 ಚಿತ್ರಮಂದಿರಗಳಿದ್ದವು. ಆದರೆ, ಇವತ್ತಿನ ದಿವಸ video piracy ಬಂದ ಮೇಲೆ ಚಿತ್ರಮಂದಿರಗಳ ಸಂಖ್ಯೆ 650ಕ್ಕೆ ಇಳಿದಿವೆ. ಅಂದರೆ, 1200 ಚಿತ್ರಮಂದಿರಗಳು ಈಗಾಗಲೇ ಮುಚ್ಚಿವೆ. 1200 ಚಿತ್ರಮಂದಿರಗಳು ಇವತ್ತಿನ ದಿವಸ ಮುಚ್ಚಿದರೆ ಇದರಲ್ಲಿ ಕೆಲಸ ಮಾಡತಕ್ಕಂಥ ಕೂಲಿ ಕಾರ್ಮಿಕರು ಮತ್ತು ಆಪರೇಟರ್‌ಗಳ ಗತಿ ಏನು? ಮತ್ತೆ ಸಿನಿಮಾ ಪೋಸ್ಟರ್ ಅಂಟಿಸುವಂಥ ಕಾರ್ಮಿಕನ ಗತಿ ಏನು? ಇವರ ಬಗ್ಗೆ ಎಲ್ಲಾ ನಾವು ವಿಚಾರ ಮಾಡಬೇಕಾಗುತ್ತದೆ. ಇದರ ಜೊತೆಗೆ ಸರ್ಕಾರಕ್ಕೆ ತೆರಿಗೆ ರೂಪದಲ್ಲಿರುವ ಹಣ ಕೂಡ ನಷ್ಟವಾಗುತ್ತದೆ. ಚಿತ್ರಮಂದಿರಗಳಿಗೆ ಜನರು ಬಂದು ಚಲನ ಚಿತ್ರವನ್ನು ವೀಕ್ಷಣೆ ಮಾಡಿದರೆ ಇದರಿಂದ ಬರುವ ತೆರಿಗೆ ಹಣ ಸರ್ಕಾರಕ್ಕೆ ಬರುತ್ತದೆ. ಆದರೆ, 10–20 ರೂಪಾಯಿ ಖರ್ಚು ಮಾಡಿ video piracy cassette ಅನ್ನು ಮನೆಗೆ ತೆಗೆದುಕೊಂಡು ಹೋಗಿ ಚಲನಚಿತ್ರವನ್ನು ನೋಡಿದರೆ ಒಂದು ಕಡೆ ಸರ್ಕಾರಕ್ಕೆ ಬರುವಂಥ ತೆರಿಗೆ ಕೂಡ ವಂಚಿತವಾಗುತ್ತದೆ. ಇನ್ನೊಂದು ಕಡೆ ಕಾರ್ಮಿಕರ ಹೊಟ್ಟೆಯ ಮೇಲೆ ಹೊಡೆದಂತಾಗುತ್ತದೆ. ಇದರ ಜೊತೆಗೆ ನಿರ್ಮಾಪಕರ ಪರಿಸ್ಥಿತಿ ಕೂಡ ಹೇಳುವುದಕ್ಕೆ ಆಗದ ಸ್ಥಿತಿ ಇದೆ. ಇವತ್ತಿನ ದಿವಸ ಚಿತ್ರರಂಗದಲ್ಲಿ 3 ರಿಂದ 4% ಬಡ್ಡಿ ವ್ಯವಹಾರ ನಡೆಯುತ್ತದೆ. ಇದನ್ನು ಯಾರು ಕೂಡ ಕಂಟ್ರೋಲ್ ಮಾಡುವುದಕ್ಕೆ ಆಗುವುದಿಲ್ಲ. ಚಿತ್ರ ನಿರ್ಮಾಪಕನಿಗೆ ಹಣದ ಅವಶ್ಯಕತೆ ಇರುತ್ತದೆ. ಆದ್ದರಿಂದ, ಬಡ್ಡಿಯ ಮೇಲೆ ಹಣ ತೆಗೆದುಕೊಂಡಿರುತ್ತಾನೆ. ಏಕೆಂದರೆ, ಚಿತ್ರ ನಿರ್ಮಾಣ ಮಾಡಿರುವವನಿಗೆ ಅದರ ಕಷ್ಟ ಏನೆಂದು ಗೊತ್ತಿರುತ್ತದೆ. ಬೇರೆಯವರಿಗೆ ಈ ಕಷ್ಟ ಗೊತ್ತಿರುವುದಿಲ್ಲ. ನಾನು 14 ಸಿನಿಮಾ ಮಾಡಿದ್ದು, ಇದಕ್ಕಾಗಿ ಮನೆಗಳನ್ನು ಮಾರಾಟ ಮಾಡಿದ್ದೇನೆ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಆಂಧ್ರಪ್ರದೇಶದಲ್ಲಿ ಈಗಾಗಲೇ ತಂದಿರುವಂತೆ ಇಲ್ಲಿಯೂ ಕೂಡ Video and Audio piracyಯನ್ನು ಕಂಟ್ರೋಲ್ ಮಾಡುವುದಕ್ಕಾಗಿ ಪ್ರತ್ಯೇಕ ಕಾಯಿದೆಯನ್ನು ತರಬೇಕು. ಆದರೆ, ಇದರಲ್ಲಿ ಕೇವಲ ಒಂದು ತಿದ್ದುಪಡಿಯನ್ನು ತರುವುದರ ಮೂಲಕ ಮಾಡಲಾಗಿದೆ. ಆದರೆ, ಇದನ್ನು ಅಷ್ಟೊಂದು ವ್ಯವಸ್ಥಿತವಾಗಿ ಹತ್ತಿಕ್ಕಲು ಆಗುವುದಿಲ್ಲವೆಂದು ನನಗೆ ಅನಿಸುತ್ತದೆ. ಇನ್ನೊಂದು ವಿಚಾರ ಏನೆಂದರೆ, ಇವತ್ತಿನದಿವಸ video piracyಯನ್ನು ಪತ್ತೆ ಮಾಡುತ್ತಾರೆ. ಅಂದರೆ, ಹುಬ್ಬಳ್ಳಿಯಲ್ಲಿನ ಮಾರ್ಕೆಟ್‌ನಲ್ಲಿ piracy video cassette ಇದೆ ಎಂದು ಮೆಸೇಜ್ ಬರುತ್ತದೆ. ಚಿತ್ರ

ನಿರ್ಮಾಪಕ ಇಲ್ಲಿಂದ ಅಲ್ಲಿಗೆ ಹೋಗಿ ಪೊಲೀಸ್‌ನವರ ಮೂಲಕ ಅವರನ್ನು ಹಿಡಿಸುತ್ತಾರೆ. ಆನಂತರ ಹುಬ್ಬಳ್ಳಿ jurisdiction ಕೋರ್ಟ್‌ಗೆ evidence ಬರುತ್ತದೆ. ಬೆಂಗಳೂರು ಅಥವಾ ಗುಲ್ಬರ್ಗಾ ಅಥವಾ ಮಂಗಳೂರಿನಲ್ಲಿರುವ ನಿರ್ಮಾಪಕ ಹುಬ್ಬಳ್ಳಿಗೆ ಹೋಗಿ ಸಾಕ್ಷಿ ಹೇಳುವುದಕ್ಕೆ ಆಗುವುದಿಲ್ಲ. ಸಾಕ್ಷಿ ಹೇಳುವುದಕ್ಕೆ ಆಗದೆ ಇದ್ದಾಗ ಕೇಸ್ ಬಿದ್ದು ಹೋಗುತ್ತದೆ. ಆದರೆ, ಈ video piracyಯನ್ನು control ಮಾಡುವುದಕ್ಕೆ ಆಂಧ್ರ ಪ್ರದೇಶ ಸರ್ಕಾರ ಹೈದರಾಬಾದ್‌ನಲ್ಲಿ ಒಂದು ವಿಶೇಷವಾದ ನ್ಯಾಯಾಲಯವನ್ನು ಸ್ಥಾಪಿಸಿದೆ. ಅಲ್ಲಿ ವಿಶೇಷವಾದ ನ್ಯಾಯಾಲಯ ಮಾಡಿರುವ ಬಗ್ಗೆ ನನ್ನ ಹತ್ತಿರ ನೋಟೀಫಿಕೇಷನ್ ಇದೆ. ಅದನ್ನು ಬೇಕಾದರೆ ತಮಗೆ ಕೊಡುತ್ತೇನೆ. ಈ ಕೋರ್ಟ್ ಅಲ್ಲಿ ವ್ಯವಸ್ಥಿತವಾಗಿ ನಡೆಯುತ್ತಿದೆ. ಆಂಧ್ರಪ್ರದೇಶದ ಯಾವುದೇ ಭಾಗದಲ್ಲಿ video piracy cassette ಗಳನ್ನು ಹಿಡಿದರೆ ಅದರ ಬಗ್ಗೆ ಹೈದರಾ ಬಾದ್‌ನಲ್ಲಿನ ವಿಶೇಷ ನ್ಯಾಯಾಲಯದಲ್ಲಿಯೇ ವಿಚಾರಣೆಯಾಗುತ್ತದೆ. ಇದೇ ರೀತಿಯಾಗಿ ಅಂದರೆ, ಕರ್ನಾಟಕ ರಾಜ್ಯದಲ್ಲಿ ಎಲ್ಲಿಯಾದರು piracy ಆಗತಕ್ಕಂಥದ್ದನ್ನು ಪತ್ತೆ ಮಾಡಿ ಅದರ ವಿಚಾರಣೆಗೆ jurisdiction ಬೆಂಗಳೂರು ಸಿಟಿ ಮಾಡಿದರೆ ಒಳ್ಳೆಯದು. ಏಕೆಂದರೆ, ಚಿತ್ರರಂಗದ ಮೂಲ ಅಂದರೆ, ಚಿತ್ರರಂಗ ಸಂಪೂರ್ಣವಾಗಿ ಬೆಂಗಳೂರಿನಲ್ಲಿ ಕೇಂದ್ರೀಕೃತವಾಗಿ ರುವುದರಿಂದ ಬೆಂಗಳೂರಿನಲ್ಲಿಯೇ ಒಂದು ವಿಶೇಷ ನ್ಯಾಯಾಲಯವನ್ನು ಸ್ಥಾಪನೆ ಮಾಡಬೇಕು. ಮತ್ತೆ ಇದರ ಜೊತೆಗೆ video piracyಯನ್ನು ತಡೆಗಟ್ಟುವುದಕ್ಕೆ ಪ್ರತ್ಯೇಕವಾದ ಕಾನೂನನ್ನು ತರಬೇಕು. ಹಾಗೆಯೇ this offence should be Non-bailable and cognizable ಆಗಿರಬೇಕು. ಅಂದರೆ, ಹಿಡಿಯುವಂಥ ಅಪರಾಧ ಮತ್ತು ಜಾಮೀನು ಇಲ್ಲದಂಥ ಅಪರಾಧವಾಗಿರಬೇಕು. ಇದಕ್ಕೆ ಶಿಕ್ಷೆಯನ್ನು ಅತಿ ಹೆಚ್ಚಿನ ಪ್ರಮಾಣದಲ್ಲಿ ಕೊಟ್ಟರೆ ಇವತ್ತಿನ ದಿವಸ ಕನ್ನಡ ಚಿತ್ರರಂಗ, ಕನ್ನಡನಾಡಿನ ಸಂಸ್ಕೃತಿ, ಕಲಾವಿದರು, ತಾಂತ್ರಿಕ ವರ್ಗದವರು, ಕಾರ್ಮಿಕರು ಉಳಿಯುತ್ತಾರೆ. ಇದರಿಂದ ಕರ್ನಾಟಕ ಸರ್ಕಾರಕ್ಕೆ ಅತಿ ಹೆಚ್ಚಿನ ತೆರಿಗೆ ಕೂಡ ಬರುತ್ತದೆ. ಆದ್ದರಿಂದ, ಇದರ ಬಗ್ಗೆ ಅತೀ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆಂದು ಈ ಮೂಲಕ ಸರ್ಕಾರ ಮತ್ತು ಮಾನ್ಯ ಗೃಹ ಸಚಿವರಲ್ಲಿ ವಿನಂತಿಸುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಸಚಿವರು ತಂದಿರುವ The Karnataka Prevention of Dangerous Activities of Bootleggers, Drug-Offenders, Gamblersಗೆ ಸಂಬಂಧಪಟ್ಟಂಥ ಈ ಬಿಲ್ ಅನ್ನು ತರಬೇಕೆಂದು ಬಹಳ ದಿವಸಗಳ ಹಿಂದೆಯೇ ಬೇಡಿಕೆ ಇತ್ತು. 2004–05ರಲ್ಲಿ ನಾನು ಹಣಕಾಸಿನ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಚಿತ್ರರಂಗ ಮಂಡಳಿಯವರೆಲ್ಲರೂ ಅನೇಕ ಸಾರಿ ಬಂದು ನನ್ನನು ಭೇಟಿ ಮಾಡಿದ್ದರು. ಇದು ಬಹಳ ಅಗತ್ಯವಾಗಿತ್ತು, ತಡವಾಗಿ ಆದರೂ ಈಗ ತಂದಿದ್ದೀರಿ. ಮಾದಕ ವಸ್ತುಗಳನ್ನು ತಡೆಯುವುದಕ್ಕೆ ನಾವು ಕಾನೂನುಗಳನ್ನು ಮಾಡುತ್ತೇವೆ. ನಮ್ಮ ದೇಶದಲ್ಲಿ ನಡೆಯುವ ಎಲ್ಲಾ ಕ್ರಿಮಿನಲ್ ಆಕ್ಟಿವಿಟಿಸ್‌ಗಳಿಗೆ ಸಂಬಂಧಪಟ್ಟಂತೆ India Penal Codeನಲ್ಲಿ definition ಇದೆ, punishment ಇದೆ, penal clause ಗಳೆಲ್ಲವೂ ಕೂಡ ಇದೆ. ಆದರೆ, ಪ್ರಶ್ನೆ ಏನೆಂದರೆ, ಅಪರಾಧ ಮಾಡದವರಿಗೆ ಸರಿಯಾದ ರೀತಿಯಲ್ಲಿ ಶಿಕ್ಷೆಯಾಗುತ್ತಿಲ್ಲವೆಂಬುದು ಬಹಳ ಮುಖ್ಯವಾದಂಥ ವಿಚಾರವಾಗಿದೆ. ಈ ಸಂದರ್ಭದಲ್ಲಿ ನಿಮ್ಮ ಗಮನಕ್ಕೆ ತರುವುದೇನೆಂದರೆ, ಮಾದಕ ವಸ್ತುಗಳನ್ನು ಮಾರಾಟ ಮಾಡುವವರು, ಉಪಯೋಗಿಸುವವರು, ತೆಗೆದುಕೊಳ್ಳುವವರು ಮತ್ತು ಬೆಳೆಯುವವರು, ಇವರೆಲ್ಲರಿಗೂ ಶಿಕ್ಷಿಸುವುದಕ್ಕೆ ಕಾನೂನಿನಲ್ಲಿ ಅವಕಾಶ ಇದೆ. ಆದರೆ, ಈಗ ಜೈಲುಗಳ ಒಳಗಡೆಯೇ ಇವೆಲ್ಲಾ ಆಗುತ್ತಿವೆ. ನೀವುಗಳು ಇದಕ್ಕೆ ಏನು ಮಾಡುತ್ತಿದ್ದೀರಿ? You go to Parappana Agrahara, Belgaum and Mysore Jail, any as a matter of fact. ಈ ಜೈಲುಗಳ ಒಳಕ್ಕೆ ಗಾಂಜ ಹೋಗುತ್ತದೆ. ಇದರಲ್ಲಿ ನಿಮ್ಮ ಅಧಿಕಾರಿಗಳು ಶಾಮೀಲಾಗಿದ್ದಾರೆ. ಯಾರು ತಪ್ಪು ಮಾಡಿದ್ದಾರೆ ಅವರನ್ನು ನೋಡಿಕೊಳ್ಳತಕ್ಕಂಥವರೆ ಶಾಮೀಲಾಗಿ ಒಳಕ್ಕೆ ಇಂಥವುಗಳೆಲ್ಲವನ್ನು ಕಳುಹಿಸಿಕೊಡುತ್ತಾರೆ. ಈ ರೀತಿ ಇದ್ದಾಗ ಕಾನೂನುಗಳನ್ನು ಮಾಡಿ ಏನು ಪ್ರಯೋಜವಾಗುತ್ತದೆ? ಉಪಯೋಗಗಳೇನು? ಸುಮ್ಮನೆ ಕಾನೂನು ಮಾಡುತ್ತೇವೆ ಇವುಗಳು ಕೇವಲ ಪತ್ರಿಕೆಗಳ ಮೇಲಷ್ಟೇ ಇರುತ್ತವೆ. ಶಿಕ್ಷೆ ಕೊಡುವುದಕ್ಕೆ ಕಾನೂನಿನಲ್ಲಿದೆ. ಮತ್ತೆ ಇನ್ನೊಂದಷ್ಟು ಕಾನೂನು ಮಾಡಿಕೊಂಡು ಹೋದರೆ ಹೇಗೆ? ಕಾನೂನುಗಳನ್ನು ಮಾಡಬೇಡಿ ಎಂದು ನಾನು ಹೇಳುವುದಿಲ್ಲ. Video and Audio piracy ಮಾಡತಕ್ಕಂಥವರಿಗೆ ಶಿಕ್ಷೆ ಆಗಬೇಕು. ಇದನ್ನು ಮಾಡಬೇಕೆಂದು

ಬಹಳ ದಿವಸಗಳಿಂದ ಬೇಡಿಕೆ ಇತ್ತು. ಆದ್ದರಿಂದ, ಇದನ್ನು ಮಾಡಬೇಕಾಗುತ್ತದೆ. The question is ಇವುಗಳೆಲ್ಲವೂ ಜೈಲುಗಳ ಒಳಗಡೆ ಆಗುತ್ತಿವೆ ಇದಕ್ಕೆ ಏನು ಮಾಡಬೇಕು? ಜೈಲಿನಲ್ಲಿ ಡಿ.ಜಿ. ಮತ್ತು ಸೂಪರಿನ್‌ಟೆಂಡೆಂಟ್ ಇರುತ್ತಾರೆ. What they are doing? ಇವತ್ತಿನವರೆಗೆ ಒಬ್ಬರ ಮೇಲೆ ಕ್ರಮ ತೆಗೆದುಕೊಂಡು ಯಾರಿಗಾದರು ಮನೆಗೆ ಕಳುಹಿಸಿದ್ದೀರಾ?

ಡಾ: ವಿ.ಎಸ್.ಆಚಾರ್ಯ : ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಸಿದ್ದರಾಮಯ್ಯ : ಯಾರ ಮೇಲೆ ಎಲ್ಲಿ ತೆಗೆದುಕೊಳ್ಳಲಾಗಿದೆ ಹೇಳಿ? ಪರಪ್ಪನ ಅಗ್ರಹಾರ ಜೈಲಿಗೆ ಹೋಗಿ ನೋಡಿದ್ದೇನೆ. ಜೈಲಿನ ಒಳಕ್ಕೆ ಮೊಬೈಲ್ ಗಳು, ಲಿಕ್ಕರ್, ಬಿರಿಯಾನಿ, ಗಾಂಜಾ ಹೋಗುತ್ತದೆ. ಈ ರೀತಿಯಲ್ಲಿ ಆಗುತ್ತಿವೆ ನೀವೇನು ಮಾಡುತ್ತಿದ್ದೀರೆಂದು ನಿಮ್ಮ ಡಿ.ಜಿ.ಗಳನ್ನು ಕೇಳಿದರೆ ಏನು ಮಾಡುವುದು ಸಾರ್, We are helpless, ನಮ್ಮಲ್ಲಿ ಸಿಬ್ಬಂದಿಗಳಿಲ್ಲವೆಂದು ಕುಂಟುನೆಪಗಳನ್ನು ಹೇಳುತ್ತಿದ್ದಾರೆ. This is not a fact. ಈ ರೀತಿಯಾಗಿ ಜೈಲಿನ ಒಳಗೆ ಹೋಗುತ್ತಿರುವುದರ ಬಗ್ಗೆ ಅಲ್ಲಿರತಕ್ಕಂಥ ಒಬ್ಬರ ಮೇಲಾದರು ಕ್ರಮ ತೆಗೆದುಕೊಂಡಿದ್ದೀರಾ ಹೇಳಿ? ನಮ್ಮ ಜೈಲ್‌ಗಳಲ್ಲಿಯೇ ಈ ರೀತಿ ನಡೆಯುತ್ತಿರುವಾಗ ಗೂಂಡಾ ಆಕ್ಟ್ ಅನ್ನು ಮಾಡಿ ಏನು ಪ್ರಯೋಜನ ಆಗುತ್ತದೆ? ಅಲ್ಲಿ ಸರಬರಾಜು ಮಾಡುವವರು ಯಾರು? ಅದನ್ನು ಉಪಯೋಗಿಸುವವರು ಯಾರು? ಅದನ್ನು ತರಿಸಿಕೊಳ್ಳುವವರು ಯಾರು? ಅವರಿಗೆ ಎಷ್ಟು influence ಇದೆ? ನಿಮ್ಮ ಪೊಲೀಸ್‌ನವರು ಏನು ಮಾಡುತ್ತಿದ್ದಾರೆ? ಇವುಗಳ ಬಗ್ಗೆ ಏನೂ ಮಾಡದೆ ಇಂಥ ಆಕ್ಟ್‌ಗಳನ್ನು ತೆಗೆದುಕೊಂಡು ಬಂದಿದ್ದೇವೆಂದು ಇಷ್ಟಕ್ಕೆ ಬೆನ್ನು ತಟ್ಟಿಕೊಂಡರೆ ಏನು ಆಗುವುದಿಲ್ಲ. ಜೈಲ್ ಮಂತ್ರಿಯಾಗಿರುವ ಮಾನ್ಯ ಉಮೇಶ್ ಕತ್ತಿಯವರೆ, ತಾವು ಯಾವಾಗಲಾದರೂ ಪರಪ್ಪನ ಅಗ್ರಹಾರ ಜೈಲಿಗೆ ಹೋಗಿದ್ದೀರಾ? ಬೆಳಗಾಂ ಜೈಲಿಗೆ ಹೋಗಿದ್ದೀರಾ? ಜೈಲು ಮಂತ್ರಿಯಾಗಿರುವುದರಿಂದ ನೀವು ಜೈಲಿಗೆ ಹೋಗಿದ್ದೀರಾ ಎಂದು ಕೇಳಿದೆ ಅಷ್ಟೆ. ಬೆಂಗಳೂರಿನ ಜೈಲು ಪರಪ್ಪನ ಅಗ್ರಹಾರದಲ್ಲಿದೆ ತಾನೆ? ಅದಕ್ಕೋಸ್ಕರ ಜೈಲು ನೋಡುವುದಕ್ಕೆ ಹೋಗಿದ್ದೀರಾ ಎಂದು ನಾನು ಕೇಳಿದೆ.

ಶ್ರೀ ವಿ. ಉಮೇಶ್ ಕತ್ತಿ (ತೋಟಗಾರಿಕೆ ಮತ್ತು ಬಂದಿಖಾನೆ ಸಚಿವರು): ಮಾನ್ಯ ಅಧ್ಯಕ್ಷರೆ, 20 ವರ್ಷಗಳ ಅವಧಿ ಜೈಲು ಮಂತ್ರಿಗಳಾಗಿದ್ದಂಥವರ್‍ಯಾರು ಕೂಡ ಜೈಲಿಗೆ ಭೇಟಿ ನೀಡಿಲ್ಲ. ಆದರೆ, ನಾನು ಮಂತ್ರಿಯಾದ

ಮೇಲೆ ಮೂರು ಜೈಲಿಗೆ ಭೇಟಿ ಕೊಟ್ಟು ಅಲ್ಲಿನ ಖೈದಿಗಳನ್ನು ವಿಚಾರ ಮಾಡಿ ಬಂದಿದ್ದೇನೆ. 20 ವರ್ಷಗಳಲ್ಲಿ ಯಾರು ಮಾಡದೇ ಇರತಕ್ಕಂಥ ಕೆಲಸವನ್ನು ನಾನು ಮಾಡಿದ್ದೇನೆ.

ಶ್ರೀ ಸಿದ್ದರಾಮಯ್ಯ : ಅಲ್ಲಿ ಎಷ್ಟು ದಿವಸ ಇದ್ದಿರಿ?

ಶ್ರೀ ವಿ.ಉಮೇಶ್ ಕತ್ತಿ : ಬೆಳಿಗ್ಗೆ ಹೋಗಿ ಸಂಜೆವರೆಗೆ ಅಲ್ಲಿದ್ದು ಖೈದಿಗಳನ್ನು ವಿಚಾರ ಮಾಡಿದ್ದೇನೆ. ನಾನು ಜೈಲಿಗೆ ಜೈಲು ಮಂತ್ರಿಯಾಗಿ ಹೋಗಿದ್ದೇನೆ ಹೊರತು ಖೈದಿಯಾಗಿ ಜೈಲಿಗೆ ಹೋಗಿಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಸಚಿವರು) : ಮಾನ್ಯ ಅಧ್ಯಕ್ಷರೆ, ಒಂದು ಹಾಸ್ಯದ ಪ್ರಸಂಗವಾಯಿತು. ನಮ್ಮ ಒಬ್ಬ ನಾಯಕರು ಕೇಳಿದರು. ರೈಲ್ವೆ ಮಿನಿಸ್ಟರ್‌ಗೆ ಒಂದು ಸಲೋನ್ ಇರುತ್ತದೆ, ಒಂದು special ಭೋಗಿ ಇರುತ್ತದೆ. ಅದರಲ್ಲಿ ಅವರು press conference ಮಾಡಬಹುದು, ಕಮಿಟಿ ಮೀಟಿಂಗ್ ಮಾಡಬಹುದು. ಅವರು ಯಾವ ಕಡೆ ಹೋಗುತ್ತಾರೆ, ಆ ಕಡೆ ಹೋಗುವ ರೈಲಿಗೆ ಅಟ್ಯಾಚ್ ಮಾಡಿ ಬಿಡುತ್ತಾರೆ. ಹಾಗೆ ಕರ್ನಾಟಕದ ಸಾರಿಗೆ ಸಚಿವರಿಗೆ ಬಸ್ ಇದೆಯಾ ಎಂದು ನಮ್ಮ ನಾಯಕರೊಬ್ಬರು ಕೇಳಿದರು. ನಾನು what about Umesh Kathi ಎಂದು ಕೇಳಿದೆ.

ಶ್ರೀ ಉಮೇಶ್ ವಿ.ಕತ್ತಿ : ಬೆಳಗಾಂ ಜೈಲಿಗೆ ಮಾನ್ಯ ಸುರೇಶ್ ಕುಮಾರ್‌ರವರು ಎತ್ತಿದ ಪ್ರಶ್ನೆಗೆ ಆ ವ್ಯವಸ್ಥೆ ನಮ್ಮಲ್ಲಿ ಇದೆ. ಯಾರಾದರೂ ಬಯಸಿದರೆ ಆ ವ್ಯವಸ್ಥೆಯನ್ನು ಮಾಡಲಾಗುವುದು.

ಶ್ರೀ ಸಿದ್ದರಾಮಯ್ಯ : VIP cell. ಅದಕ್ಕಾಗಿ ನಾನು ಏನು ಹೇಳುತ್ತೇನೆಂದರೆ, ಈ ಕಾನೂನು ತೆಗೆದುಕೊಂಡು ಬಂದಿರುವುದು ಓಕೆ, ಅದನ್ನು ಸ್ವಾಗತ ಮಾಡೋಣ. ಆದರೆ ನೀವು ನಿಲ್ಲಿಸಬೇಕಲ್ಲವೆ? ಗಾಂಜಾವನ್ನು ಬೇರೆ ಕಡೆ ಮಾರಾಟ ಮಾಡುವುದು ಇರಲಿ, ಜೈಲಿನ ಗೇಟಿನಲ್ಲಿ ತಪಾಸಣೆ ಮಾಡುತ್ತಾರೆ, detective machine ಗಳನ್ನು ಇಟ್ಟುಕೊಂಡಿರುತ್ತಾರೆ. Mobile phoneಗಳನ್ನು ತೆಗೆದುಕೊಂಡು ಹೋಗುತ್ತಾರೆ. ಅವರು ಅಲ್ಲಿ ಏನು ಮಾಡುತ್ತಿರುತ್ತಾರೆ. ಗೇಟಿನವರಿಗೆ ಗೊತ್ತಿಲ್ಲದಂತೆ ಒಳಗಡೆ ಹೋಗುವುದಕ್ಕಾಗುತ್ತದೆಯೆ? Without their knowledge ಹೋಗುವುದಕ್ಕಾಗುತ್ತದೆಯೇ? ಲಾಂಗು ಮಚ್ಚುಗಳು ಹೋಗುತ್ತವೆಂದು ಹೇಳುತ್ತಿದ್ದಾರೆ ಆದರೆ ನಾನು ನೋಡಿಲ್ಲ. ನಾನು ಬಹಳ ಸೀರಿಯಸ್ಸಾಗಿ ಹೇಳುತ್ತಿದ್ದೇನೆ. ಉತ್ತರ ಏನು

ಕೊಡುತ್ತಾರೆ ಗೊತ್ತೆ? ಹೋಗುತ್ತಿರುವುದು ನಿಜ, ನಾವು ತಡೆಗಟ್ಟುವುದಕ್ಕೆ ಆಗಿಲ್ಲ. ಕಾರಣ ಏನು ಎಂದು ಕೇಳಿದರೆ, ನಮಗೆ ಸಿಬ್ಬಂದಿ ಇಲ್ಲವೆಂದು ಹೇಳುತ್ತಾರೆ. ಇದಕ್ಕೋಸ್ಕರ ನಾವು ಕಾನೂನನ್ನು ತರಬೇಕೆ? ಜನರಿಗೆ ನಾವು ರಕ್ಷಣೆ ಕೊಡಲಿಕ್ಕೆ ಕಾನೂನು ತಂದಿದ್ದೇವೆ, ಜನರು ನೆಮ್ಮದಿಯಿಂದ ಇರಬೇಕೆಂದು ಹೇಳುವುದಕ್ಕಾಗುತ್ತದೆಯೆ? ಆದ್ದರಿಂದ ಮೊದಲು ಕಾನೂನನ್ನು ಇಂಪ್ಲಿಮೆಂಟ್ ಮಾಡಬೇಕಾದರೆ How he should be equipped ಎಂದು ಮಾಡಿಕೊಳ್ಳದೆ ಹೋದರೆ, ತಪ್ಪು ಮಾಡಿದವರಿಗೆ ಶಿಕ್ಷೆ ಆಗುವುದಕ್ಕೆ ಕಠಿಣವಾದ ಕ್ರಮ ತೆಗೆದುಕೊಳ್ಳದೆ ಹೋದರೆ ಯಾವ ಕಾನೂನನ್ನು ಮಾಡಿದರೂ ಪ್ರಯೋಜನವಾಗುವುದಿಲ್ಲ. ಅದಕ್ಕಾಗಿ ದಯಮಾಡಿ ಬಿಗಿಯಾದ ಕ್ರಮ ತೆಗೆದುಕೊಳ್ಳುವ ಪ್ರಯತ್ನವನ್ನು ಮಾಡಬೇಕು. ಇಲ್ಲದಿದ್ದರೆ ತೊಂದರೆ ಯಾಗುತ್ತದೆ. ನಿಮ್ಮಲ್ಲಿ enforcement ಇಲ್ಲ.

ಶ್ರೀ ಆರ್.ರೋಷನ್ ಬೇಗ್ (ಶಿವಾಜಿನಗರ) : ಮಾನ್ಯ ಅಧ್ಯಕ್ಷರೆ, ನಾನು ಸರ್ಕಾರಕ್ಕೆ ಒಂದು clarification ಕೇಳುತ್ತೇನೆ. ಇಲ್ಲಿ Karnataka Prevention of Dangerous Activities of Bootleggers, Drug-offenders, Gamblers, Goondas ಎಂದು ಇದೆ. ನೀವು ಶಾಸಕರ ಭವನದಲ್ಲಿ ಎಷ್ಟು ಸಲ ರೈಡ್ ಮಾಡಿದ್ದೀರಿ? ಅಲ್ಲಿ ಜೂಜು ಆಡಿದರೆ ಅದು ಆಗಲ್ಲಾ? IAS Officers Century Clubನಲ್ಲಿ, ಬೆಂಗಳೂರು ಕ್ಲಬ್‌ನಲ್ಲಿ ಸಾಯಂಕಾಲ ಹೋಗಿ ಇಸ್ಪೀಟ್ ಆಡಿಕೊಂಡು ಕುಳಿತಿರುತ್ತಾರೆ ಅದು ಲೀಗಲ್ಲಾ? ಇದರ ಬಗ್ಗೆ ತಾವು ಕ್ಲಾರಿಫೈ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎಸ್.ಪುಟ್ಟೇಗೌಡ (ಶ್ರವಣಬೆಳಗೊಳ) : ಮಾನ್ಯ ಅಧ್ಯಕ್ಷರೆ, ಈ ಬಿಲ್ ಅನ್ನು ತರುತ್ತಿರುವುದಕ್ಕೆ ನಾವು ಕೂಡ ಸ್ವಾಗತಿಸುತ್ತೇನೆ. ಆದರೆ ಈ ಸನ್ನಿವೇಶದಲ್ಲಿ ಏನಾಗಿದೆ ಎಂದರೆ, ಗೂಂಡಾಗಿರಿಯನ್ನು ಬೆಂಗಳೂರು, ಮೈಸೂರು ಇಂತಹ ಕಡೆಗಳಲ್ಲಿ ನೋಡುತ್ತಿದ್ದೆವು. ತಾಲ್ಲೂಕಿನ ಕೇಂದ್ರ ಸ್ಥಾನದಲ್ಲಿಯೂ ಕೂಡ ಇಂತಹ ಸನ್ನಿವೇಶಗಳು ನಡೆಯುತ್ತಿವೆ. ಪೊಲೀಸ್‌ನವರಿಗೆ ರಕ್ಷಣೆ ಇದೆಯಾ ಎಂದು ನನಗೆ ಸಂಶಯ ಇದೆ. ಪೊಲೀಸ್ ಕೆಲಸವನ್ನು ಮಾಡುತ್ತಾರೆ, ಅವರಿಗೂ ಕೂಡ ಭಯಾನಕವಾದ ಹೆದರಿಕೆ ಹುಟ್ಟಿಸುವಂಥ ಕಾರ್ಯಕ್ರಮ ನಡೆಯುತ್ತಿದೆ. ಮಚ್ಚು ಕತ್ತಿ ಇರುವವರಿಗೆ ಯಾವ ತರಹದ ಕಾನೂನು ಇಲ್ಲ. ಇದಕ್ಕೆಲ್ಲಾ ಏನು ಮಾಡಬೇಕೆಂದರೆ, ಕೆಲವೊಂದು ಪೊಲೀಸ್ ವಿಂಗ್‌ನ್ನು ಹೊರಗಡೆಯಿಂದ ತಂದು ಅಲ್ಲಿ

ಹಾಕಬೇಕು ವಿನಹಃ ಲೋಕಲ್ ಪೋಲೀಸ್‌ನವರನ್ನು ತಂದು ಅಲ್ಲಿ ಹಾಕಿದರೆ ಖಂಡಿತವಾಗಿ ಅವರು ಮಾಡುವುದಕ್ಕೆ ಹೆದರುತ್ತಾರೆ. ಏಕೆಂದರೆ, ಅವರಿಗೂ ಸಂಸಾರ ಇದೆ, ಹೆಂಡರು, ಮಕ್ಕಳು ಇದ್ದಾರೆ. ಹಾಸನದಲ್ಲಿ ಒಬ್ಬ ಎಸ್.ಪಿ.ಯವರನ್ನು ಹಗಲು ಹೊತ್ತಿನಲ್ಲಿ ಕಡಿದು ಹಾಕಿದರು ಏನಾಯಿತು? ಅವರ ಮಕ್ಕಳು ಇವತ್ತು ತಬ್ಬಲಿಯಾದರು. ನಾವು ಯಾರಿಗೂ ಶಿಕ್ಷೆ ಆಗಿರುವುದನ್ನು ಎಲ್ಲಿಯೂ ಕೇಳಲೇ ಇಲ್ಲ. "ಹುಚ್ಚರ ಮದುವೆಯಲ್ಲಿ ಉಂಡವನೆ ಜಾಣ" ಎನ್ನುವಂತೆ ಆಯಿತು. ಮಾನ್ಯ ಸಿದ್ದರಾಮಯ್ಯ ಸಾಹೇಬರು ಬಹಳ ಚೆನ್ನಾಗಿ ಹೇಳಿದರು. ನಾವು ಏನೇ ಆಕ್ಟ್ ಮಾಡಿದರೂ ಅದನ್ನು ಆಚರಣೆ ಮಾಡುವಾಗ ಏನೇನು ಅಡ್ಡ ಬರುತ್ತವೆ, ಏನೇನು ಸಮಸ್ಯೆ ಬರುತ್ತವೆ. ಅಲ್ಲಿರತಕ್ಕಂಥ ಪೋಲೀಸ್‌ನವರಿಗೆ ಏನೇನು ವೆಪನ್ಸ್ ಬೇಕು, ಅವರಿಗೆ ಭದ್ರತೆ ಬೇಕು, ಸಿಬ್ಬಂದಿ ಬೇಕು. ಅಲ್ಲಿ ಹಿಡಿದಿರುವವರನ್ನು ಮಟ್ಟ ಹಾಕದಿದ್ದರೆ ಹೇಗೆ? ಬೇರೆ ಕಡೆ ಇರುವ ಪೋಲೀಸ್‌ರನ್ನು ಅಂತಹ ಕಡೆ ಹಾಕಬೇಕು. ನಮ್ಮ ಚನ್ನರಾಯಪಟ್ಟಣದಲ್ಲಿ ಮಚ್ಚುಗಳನ್ನು ಹಿಡಿದುಕೊಂಡು ನೀಟಾಗಿ ತಿರುಗಾಡುತ್ತಾರೆ. ಆ ರೌಡಿಗಳು ಹೊರಗಡೆಯಿಂದ ಬರುವ ಪೋಲೀಸ್ ದಳದವರ ಜೊತೆಯಲ್ಲಿ ಆಟ ಆಡುವುದಕ್ಕಾಗುವುದಿಲ್ಲ. ನಿಮ್ಮ ಮಕ್ಕಳು ಹೆಂಡರು ಇದ್ದಾರೆ ನೀವು ಹುಷಾರಾಗಿರಿ ಎಂದು ರೌಡಿಗಳು ಅವರನ್ನು ಹೆದರಿಸುತ್ತಾರೆ, ಈಗ ಆ ತರಹ ಗುಂಡಾಗಿರಿ ಇವತ್ತು ಇದೆ. ಹಿಂದೆ ಒಬ್ಬ ಪೋಲೀಸ್ ಹಳ್ಳಿಗೆ ಬಂದರೆ ಇಡೀ ಊರಲ್ಲಿರುವವರು ಹೆದರಿಕೊಂಡು ನಿಂತುಕೊಳ್ಳುವವರು. ಪಟೇಲ್‌ರನ್ನು ಕರೆದುಕೊಂಡು ಆಗಿರುವ ತಪ್ಪಿನ ಬಗ್ಗೆ ಒಪ್ಪಿಕೊಂಡು ಬಿಡುತ್ತಿದ್ದರು. ಎಷ್ಟೋ ಜನ ಮಂತ್ರಿಗಳು ಗನ್ ಹಿಡಿದುಕೊಂಡು ತಮಗೆ ರಕ್ಷಣೆ ತೆಗೆದುಕೊಳ್ಳುವ ಕಾಲ ಈಗ ಇರುವಾಗ ನೀವು ಇದರ ಬಗ್ಗೆ ಸುದೀರ್ಘವಾಗಿ ಯೋಚನೆಯನ್ನು ಮಾಡಬೇಕು. ಈ ಗುಂಡಾಗಿರಿಯನ್ನು ಮಟ್ಟ ಹಾಕುವುದಕ್ಕೆ ಒಂದು ಅಮೆಂಡ್‌ಮೆಂಟ್ ಮಾಡಿದ್ದೇವೆಂದು ಹೋದರೆ, ಅವರದೆ ಈಗ ಸಾಮ್ರಾಜ್ಯ. ಅವರಿಗೆ ಇರುವಷ್ಟು ಭದ್ರತೆ, ರಕ್ಷಣೆ, ಆಸ್ತಿ ಖಂಡಿತವಾಗಿ ಮರ್ಯಾದೆಯಾಗಿ ಬದುಕುವವನಿಗೆ ಆ ರಕ್ಷಣೆ ಇವತ್ತು ಇಲ್ಲ. ದಯಮಾಡಿ ಇದರ ಬಗ್ಗೆ ಬಹಳಷ್ಟು ದೂರದೃಷ್ಟಿ ಇಟ್ಟುಕೊಳ್ಳಬೇಕು. ನೀವು ಯಾವುದೋ ಹಳೆಯ ಕಾಲದ ಪದ್ಧತಿ ಇಟ್ಟುಕೊಳ್ಳಬೇಡಿ. ಬ್ರಿಟೀಷರು ಮಾಡಿ ಹೋಗಿದ್ದರು ನಾವು ಮಾಡುತ್ತೇವೆಂದು ಮಾಡಬೇಡಿ. ರೌಡಿಗಳು ಕೂಡ ಬಹಳ ಕಲಾಕಾರರು ಇದ್ದಾರೆ. ಆದ್ದರಿಂದ ಅವರನ್ನು ಹತ್ತಿಕ್ಕುವುದಕ್ಕೆ ಬಹಳ ದೂರದೃಷ್ಟಿ ಮತ್ತು

ಯೋಚನೆ ಮಾಡಿ ನೀವು ಇದನ್ನು ಮಟ್ಟ ಹಾಕಲಿಲ್ಲವೆಂದರೆ ತೊಂದರೆ ಆಗುತ್ತದೆ. ನಮ್ಮ ಊರಿನಲ್ಲಿರುವ ಹೆಣ್ಣು ಮಕ್ಕಳು Sub-Inspector ಬಂದು ನಮ್ಮ ಹೆಣ್ಣು ಹುಡುಗರನ್ನು ಶಾಲೆಗೆ ಕಳುಹಿಸುವುದಕ್ಕಾಗುತ್ತಿಲ್ಲ ಹೇಳುತ್ತಿದ್ದಾರೆ. ಅದು ಯಾರು ಎಂದರೆ, ದೊಡ್ಡ ದೊಡ್ಡ ಹುಡುಗರು ಅಲ್ಲ. PUC ಓದುವ ಹುಡುಗರು ಮಚ್ಚು ಹಿಡಿದುಕೊಂಡು ಪ್ರಾಕ್ಟೀಸ್ ಮಾಡುತ್ತಿದ್ದಾರೆ. ದಯಮಾಡಿ ಇದನ್ನು ತಹಬದಿಗೆ ತರಲಿಕ್ಕೆ ನೀವು ದೂರದೃಷ್ಟಿ ಇಟ್ಟುಕೊಂಡು ಕಾನೂನು ಮಾಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ವಿನಂತಿಸಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಎಂ. ಶಿವಲಿಂಗೇಗೌಡ (ಅರಸೀಕೆರೆ) : ಮಾನ್ಯ ಅಧ್ಯಕ್ಷರೆ, ಈ ವಿಧೇಯಕವನ್ನು ತಂದಿರತಕ್ಕಂಥದ್ದು ಬಹಳ ಸಂತೋಷ. ಆದರೆ ಇದರಲ್ಲಿ ಇನ್ನೊಂದು ವಿಚಾರವನ್ನು ಸೇರಿಸಬೇಕಾಗುತ್ತದೆ. ಅಕ್ರಮ ಮದ್ಯ ಮಾರಾಟ. ಇದು ಕಳ್ಳಭಟ್ಟಿ ನಿಲ್ಲಿಸುವುದು ಎಷ್ಟು ಕೆಟ್ಟದ್ದೋ ಅಷ್ಟೆ ಈ ಅಕ್ರಮ ಮದ್ಯ ಮಾರಾಟದ್ದು ಒಂದು. ಏನು ಸಾರಾಯಿ ಕುಡಿಯಬಾರದು ಎಂದು ಹೇಳಿ ಹಳ್ಳಿ ಹಳ್ಳಿಗಳಲ್ಲಿ ಅಂಗಡಿಗಳನ್ನು ನಿಲ್ಲಿಸಿದ್ದೀರಿ, ಬಹಳ ಸಂತೋಷ. ಆದರೆ ಇವತ್ತು MSILನಿಂದ ಬಿಡುಗಡೆ ಮಾಡಿದಂಥ ಮದ್ಯವನ್ನು ಅಧಿಕೃತ ಅಂಗಡಿಗಳು ಸಂಬಂಧಪಟ್ಟ ಪ್ರದೇಶದಲ್ಲಿ ಇದ್ದರೂ ಕೂಡ ಇವತ್ತು ಗ್ರಾಮೀಣ ಪ್ರದೇಶದಲ್ಲಿ ಸಾರಾಯಿಯನ್ನು ಹೇಗೆ ಸರಬರಾಜು ಮಾಡುತ್ತಿದ್ದರು ಅದೇ ರೀತಿ ಪ್ರತಿ ಊರಿನಲ್ಲಿ ಅಕ್ರಮವಾಗಿ ಮದ್ಯವನ್ನು ತೆಗೆದುಕೊಂಡು ಆ ಕಳ್ಳಭಟ್ಟಿಯನ್ನು ಊರೂರುಗಳಲ್ಲಿ ವಾಹನಗಳಲ್ಲಿ ಊರಿಗೆ 4–5 ಇದೆ. ಆದರೆ ಮೊದಲು ಸಾರಾಯಿ ಅಂಗಡಿ ಊರಿಗೆ ಒಂದು ಇರುತ್ತಿತ್ತು. ಅವರು ಅದನ್ನು ಕಂಟ್ರೋಲ್ ಮಾಡುತ್ತಿದ್ದರು. ಇವತ್ತು ಪ್ರತಿ ಊರುಗಳಲ್ಲಿ 8–10 ಮನೆಗಳಲ್ಲಿ ಅಂಗಡಿಗಳನ್ನು ಇಟ್ಟುಕೊಂಡು ವ್ಯಾಪಾರವನ್ನು ಮಾಡುತ್ತಿದ್ದಾರೆ. ಕೆಲವು ಕಡೆ original shop ಇದ್ದರೆ ಆ ಊರಿನ ಅರಳಿಕಟ್ಟೆಯಲ್ಲಿ ಇಟ್ಟುಕೊಂಡು ಮಾರುತ್ತಾರೆ. ಆ ಮಟ್ಟಕ್ಕೆ ಇವತ್ತು ಬಂದಿದೆ. ಅಂತಹ ಒಂದು ಪರಿಸ್ಥಿತಿಯನ್ನು ನಾವು ಇವತ್ತು ನೋಡುತ್ತಿದ್ದೇವೆ. ಇವತ್ತು ಈ ಮನೆಯವನು ಸಾಲವನ್ನು ಕೊಡಲಿಲ್ಲವೆಂದರೆ, ಬೇರೆ ಮನೆಯವರ ಹತ್ತಿರ ಸಾಲಕ್ಕೆ ಹೋಗುತ್ತಾನೆ. ಮೇಲಿನ ಮನೆಯವನು ಸಾಲ ಕೊಡಲಿಲ್ಲವೆಂದರೆ ಮಧ್ಯದ ಮನೆಯವನ ಹತ್ತಿರ ಸಾಲಕ್ಕೆ ಬರುತ್ತಾನೆ. 15–20 ದಿವಸ ಆದ ಮೇಲೆ ಸಾಲ ವಾಪಸ್ ಕೊಡದಿರುವಾಗ ಸಾಲ ಕೊಟ್ಟವರು ಅವನ ಮನೆಯ ಮುಂದೆ ಹೋಗಿ

ಅವನ ಕುರಿ ಅಥವಾ ಮೇಕೆಯನ್ನು ತೆಗೆದುಕೊಂಡು ಬಂದು ಕಟ್ಟಿ ಹಾಕುವಂಥ ಪರಿಸ್ಥಿತಿ ಇವತ್ತು ಗ್ರಾಮೀಣ ಪ್ರದೇಶದಲ್ಲಿ ಬಂದಿದೆ. MSIL ನಿಂದ ತೆಗೆದುಕೊಂಡ retail shop ನವರು ಯಾವುದೇ ಕಾರಣದಿಂದ ಆ ಒಂದು ಪ್ರದೇಶದಲ್ಲಿ ಮಾರಾಟ ಮಾಡಬೇಕು. ಗ್ರಾಮೀಣ ಪ್ರದೇಶದಲ್ಲಿ ಇವತ್ತು ಯಾವುದೇ ಕಾರಣಕ್ಕೂ ಈ ಮದ್ಯವನ್ನು ಗ್ರಾಮ ಗ್ರಾಮಗಳಲ್ಲಿ ಎಲ್ಲಿ ಬೇಕು ಅಲ್ಲಿ, ಸಂತೆಯಲ್ಲಿ ವ್ಯಾಪಾರ ಮಾಡುವಾಗ ಆ ಬುಟ್ಟಿಯಲ್ಲಿ ಇಟ್ಟುಕೊಂಡು ಬ್ರಾಂಡಿಯನ್ನು ಕೊಡುವಂಥ ಪರಿಸ್ಥಿತಿ ಇವತ್ತು ಇದೆ. ಇವತ್ತು ಈ ಅಬಕಾರಿ ಅಧಿಕಾರಿಗಳು ಅವರ ಜೊತೆಯಲ್ಲಿ ಶಾಮೀಲಾಗಿ ಒಂದು ಕೇಸ್ ಇಂತಿಷ್ಟು percentage ಎಂದು ಫಿಕ್ಸ್ ಮಾಡಿಕೊಂಡು ಇವತ್ತು ಹಳ್ಳಿ ಹಳ್ಳಿಗಳಲ್ಲಿ ಯಾರನ್ನು ಬೇಕಾದರೂ ಕೇಳಿ ಎಲ್ಲಾ ದಿವಸ ಬ್ರಾಂಡಿಯನ್ನು ಕುಡಿದು ದುಡ್ಡಿನ ಸಲುವಾಗಿ ಹೊಡೆದಾಡಿದ ಬಗ್ಗೆ ನಾವು ಪೋಲೀಸ್ ಸ್ಟೇಷನ್‌ಗೆ ಹೇಳಿ ಹೇಳಿ ಸಾಕಾಗಿ ಹೋಗಿದೆ. ಈ ಒಂದು ದಂಧೆಯನ್ನು ನಿಲ್ಲಿಸಬೇಕಾದರೆ ಕಠಿಣವಾದ ಕಾನೂನಿನಲ್ಲಿ ಇದನ್ನು ಅಳವಡಿಸಬೇಕು. ದಯಮಾಡಿ ಈ ಒಂದು ಅಕ್ರಮ ಮದ್ಯ ಮಾರಾಟವನ್ನು ಮಾಡತಕ್ಕಂಥದ್ದು, ಇವತ್ತು ಮೂರನೇ ದರ್ಜೆ ಮದ್ಯವನ್ನು ಮಾರಾಟ ಮಾಡತಕ್ಕಂಥದು ಯಾರಿಗೋಸ್ಕರ ಮಾಡಿದ್ದು, ಇವತ್ತು ಸರ್ಕಾರದವರು ಈ cheap quality of drinksಗೆ 38 ರೂ.ಗಳನ್ನು ಮಾಡಿದೆ. 10 ರೂ.ಗಳ ಸಾರಾಯಿಯನ್ನು ಕುಡಿದು ಮಲಗಿಕೊಳ್ಳುತ್ತಿದ್ದವನು, ಇವತ್ತು ಅದೆ ವಸ್ತುವನ್ನು ಉಪಯೋಗಿಸಿ ಮೂರನೇ ದರ್ಜೆ ಮದ್ಯವನ್ನು ಅವರು ತಯಾರು ಮಾಡುತ್ತಾರೆ.

ಆದ್ದರಿಂದ ಇವತ್ತು 10.00 ರೂಪಾಯಿಗೆ ಸಿಗುತ್ತಿರುವಂತಹದ್ದು 40.00 ರೂಪಾಯಿಗಳು ಆಗಿದೆ. 40.00 ರೂಪಾಯಿಗಳು ಆದ ತಕ್ಷಣ ಅವನು ಕಳ್ಳಭಟ್ಟಿಯನ್ನು ಹುಡುಕಿಕೊಂಡು ಹೋಗುತ್ತಾನೆ. ಎಲ್ಲಿ ಕಡಿಮೆ ರೇಟಿಗೆ ಸಿಗುತ್ತದೆ ಅಲ್ಲಿಗೆ ಹೋಗುತ್ತಾನೆ. ಅದಕ್ಕೋಸ್ಕರ ಈ ಸಾರಾಯಿಯನ್ನು ಯಾವ ಉದ್ದೇಶಕ್ಕಾಗಿ ನಿಲ್ಲಿಸಿದ್ದೀರೋ ಅದು ಸಾಧಕವಾಗಿಲ್ಲ. ಅದಕೋಸ್ಕರವಾಗಿ ಇವತ್ತು ಊರೂರಿನಲ್ಲಿ License Holders ಏನು ಮದ್ಯವನ್ನು ಮಾರಾಟ ಮಾಡುತ್ತಿದ್ದಾರೆ. ಅದನ್ನು ಇನ್ಯಾರು ಬೇರೆಯವರು ಮಾರಾಟ ಮಾಡುತ್ತಿಲ್ಲ. ಇಲ್ಲಿ ಬಂದು ಕುಡಿಯುವುದು ಕಡಿಮೆಯಾಗುತ್ತದೆ ಎಂದು. ಅಲ್ಲಿ ಸಾಲ ಸಿಗುವುದರಿಂದ ಅವನು ಏನು ಮಾಡುತ್ತಾನೆಂದರೆ ಒಂದು ಕ್ವಾಟರ್ ಕುಡಿಯುವವನು ನಾಲ್ಕು ಕ್ವಾಟರ್ ಕುಡಿಯುತ್ತಾನೆ. ಸಾಲವು ಸಿಗದೆ

ಹೋದರೆ ಅವನು ಒಂದು ಕ್ವಾಟರ್ ಕುಡಿಯುತ್ತಾನೆ. ಅದು ಹಳ್ಳಿಯಲ್ಲಿಯೇ ಸಿಗುವುದರಿಂದ ಬಹಳ ಪ್ರಮಾಣದಲ್ಲಿ ಅವ್ಯವಹಾರಗಳು ನಡೆಯುತ್ತಿದೆ. ದಯಮಾಡಿ ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಅಕ್ರಮ ಮದ್ಯ ಮಾರಾಟ ಮತ್ತು 3ನೇ ದರ್ಜೆಯ ಸಾರಾಯಿ, ಪಾನೀಯವನ್ನು ತಯಾರು ಮಾಡುತ್ತಾರೆ. ಅವರ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುವುದರ ಬಗ್ಗೆ ಮಾನ್ಯ ಗೃಹ ಸಚಿವರು ಸೇರಿಸಿದರೆ ನಿಮಗೆ ಪುಣ್ಯ ಬರುತ್ತದೆ. ದಯಮಾಡಿ ಅದನ್ನು ಅಕ್ರಮ ಮದ್ಯ ಮಾರಾಟ ಮತ್ತು 3ನೇ ದರ್ಜೆ...

ಶ್ರೀ ಉಮೇಶ್ ವಿ ಕತ್ತಿ (ಮಾನ್ಯ ತೋಟಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೆ, ಶಿವಲಿಂಗೇಗೌಡರು, ಕುಡಿಯುವುದಿಲ್ಲ. ಕುಡಿದವರನ್ನು ನಂಬುವುದಿಲ್ಲ. ಆದರೆ ಮಾಹಿತಿಯನ್ನು ಇಟ್ಟುಕೊಂಡಿದ್ದೀರಲ್ಲಾ ಅದು ಹೇಗೆ? ಕುಡಿಯುವುದಿಲ್ಲ, ಕುಡುಕರ ಸಹವಾಸ ಇಲ್ಲ. ಕುಡಿದರೆ ನಿದ್ರೆ ಹತ್ತುವುದಿಲ್ಲ. ಆದರೆ 100% ಮಾಹಿತಿ ಎಲ್ಲವೂ ಇದೆ ಇದು ಹೇಗೇ?

ಶ್ರೀ ಕೆ.ಎಂ.ಶಿವಲಿಂಗೇಗೌಡ : ನಿಮಗೆ ನಿಜ ಹೇಳಲೇ, ಕುಡಿಯುವುದರಿಂದ ಅನುಭವ ಬರುವುದಿಲ್ಲ. ಗ್ರಾಮೀಣ ಪ್ರದೇಶದಲ್ಲಿರುವಂತಹ ಜನಗಳ ಸಂಕಷ್ಟಕ್ಕೆ ನಾವುಗಳು ಭಾಗಿಯಾಗುವಂತಹ ಸಂದರ್ಭದಲ್ಲಿ ಇವತ್ತು ನಾವು ಆ ವಿಚಾರಗಳನ್ನು ಪ್ರತಿನಿತ್ಯ ಪೊಲೀಸ್ ಸ್ಟೇಷನ್‌ನಲ್ಲಿ ಯಾರು ಇಲ್ಲಿರುವಂತಹ ಎಲ್ಲಾ ಸದಸ್ಯರುಗಳನ್ನು ಕೇಳಿ ನಾನೊಬ್ಬ ಅಲ್ಲ. ಎಲ್ಲಾ ಸದಸ್ಯರುಗಳ ಕ್ಷೇತ್ರದಲ್ಲೂ ಇದು ಇದೆಯೋ ಇಲ್ಲವೋ ಕೇಳಿ.

ಶ್ರೀ ವೆಂಕಟರಾವ್ ನಾಡಗೌಡ : ಖಂಡಿತವಾಗಿಯೂ ಅವರು ಹೇಳುವು ದರಲ್ಲಿ ಸತ್ಯವಿದೆ. ಎಲ್ಲಿ ಅಂದರೆ ಪಾನ್ ಅಂಗಡಿಯಲ್ಲಿಯೂ ಸಹಿತ bottle ಗಳು ಸಿಗುತ್ತದೆ. ಆಗ ಸಾರಾಯಿ ಅಂಗಡಿಯಲ್ಲಿ ಸಿಗುತ್ತಿತ್ತು. ಈಗ-ಪಾನ್ ಅಂಗಡಿಯಲ್ಲಿಯೂ ಸಹಿತ ಪ್ರತಿ ಹಳ್ಳಿಯಲ್ಲಿಯೂ ಸಿಗುತ್ತದೆ. ಇದರ ಬಗ್ಗೆ ಯಾವುದೇ ಅನುಮಾನವಿಲ್ಲ ಮತ್ತು ನಿಬಂಧನೆಗಳು ಸಹ ಇಲ್ಲ.

ಶ್ರೀ ಬಿ.ಕೆ.ಸಂಗಮೇಶ್ವರ : ಬೀಡಿ ಅಂಗಡಿಗಳಲೂ ಸಹ ಸಿಗುತ್ತದೆ. ಇವೆಲ್ಲವನ್ನೂ ನೋಡಿಯೂ ಸಹ ಅಧಿಕಾರಿಗಳು ಗೊತ್ತಿದ್ದರೂ ಕೂಡ ಕಣ್ಣುಮುಚ್ಚಿಕೊಂಡು ಕುಳಿತಿದ್ದಾರೆ. ಇದರ ಬಗ್ಗೆ serious action ತೆಗೆದುಕೊಳ್ಳಬೇಕು.

ಶ್ರೀ ವೆಂಕಟರಾವ್ ನಾಡಗೌಡ : ಇದೊಂದು ದೊಡ್ಡ ಜಾಲವಾಗಿದೆ. ಅಧಿಕಾರಿಗಳು ಕೂಡ mingle ಆಗಿದ್ದಾರೆ. ಅವರು ಏನು ಮಾಡಿದರೂ ಕೂಡ ಏನು ಆಗುವುದಿಲ್ಲ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಇದನ್ನು ಜಾಲ ಎನ್ನುವುದಕ್ಕಿಂತ ಅಧಿಕಾರಿಗಳ ನಿರ್ಲಕ್ಷತೆ, ಇದರಲ್ಲಿ ಅಧಿಕಾರಿಗಳ involvement ಇರುವುದ ರಿಂದಲೇ ಇದು ಮಾಡುವುದಕ್ಕೆ ಸಾಧ್ಯ. ಇಲ್ಲವೆಂದರೆ ಇದು ಸಾಧ್ಯವಿಲ್ಲ. ಅದಕೋಸ್ಕರ ಇಂತಹ ಒಂದು ಕಾನೂನನ್ನು ತಂದು ದಯಮಾಡಿ ಇದನ್ನು ವ್ಯವಸ್ಥಿತವಾಗಿ ತಡೆಗಟ್ಟಬೇಕು. ಇದರಿಂದ ಗ್ರಾಮಾಂತರ ಪ್ರದೇಶದ ಜನರ ಬದುಕು ನನಸಾಗುತ್ತದೆ. ಅವರ ಬದುಕು ಬಂಗಾರವಾಗುತ್ತದೆ. ಅದಕ್ಕೋಸ್ಕರ ಸರ್ಕಾರವು ಈ ಬಗ್ಗೆ ದೊಡ್ಡ ಮನಸ್ಸು ಮಾಡಬೇಕು. ನಾವು ಪ್ರತಿನಿತ್ಯ ಅವರ ಗೋಳನ್ನು ನೋಡುವುದಕ್ಕಾಗುವುದಿಲ್ಲ. ಆ ಸ್ತ್ರೀಶಕ್ತಿ ಸಂಘದವರು 1 ರಿಂದ 2 ಸಾವಿರ ರೂಪಾಯಿಗಳನ್ನು ಇಟ್ಟುಕೊಂಡಿರುತ್ತಾರೆ. ಇವನು ಕುಡಿದು ಸಾಲ ಮಾಡಿರುವುದರಿಂದ ಎಳೆದುಕೊಂಡು ಬರುತ್ತಿರುತ್ತಾರೆ. ಅವಳು ಸಾಲದ ದುಡ್ಡನ್ನು ಕೊಟ್ಟು ಅವನ ಗಂಡನನ್ನು ಬಿಡಿಸಿಕೊಂಡು ಬರಬೇಕಾಗುತ್ತದೆ. ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ಇಂತಹ ಪರಿಸ್ಥಿತಿಯು ನಡೆಯುತ್ತಿದೆ. ದಯಮಾಡಿ ಇದಕ್ಕೆ ಕಡಿವಾಣವನ್ನು ಹಾಕಬೇಕು.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಅಧ್ಯಕ್ಷರೆ, ಈಗ ಇದರಲ್ಲಿ root cause ಎಲ್ಲಿ ಅನ್ನುವುದನ್ನು findput ಮಾಡುವಂತಹ ಅವಶ್ಯಕತೆ ಇದೆ. ನಮ್ಮಲ್ಲಿರುವಂತಹ ಜಿಲ್ಲೆಗಳಲ್ಲಿ ನಡೆದಿರುವಂತಹ ಅನೇಕ ಅಪರಾಧಗಳ ಹಿನ್ನೆಲೆಯನ್ನು ಗಮನಿಸಿದಾಗ ಮಾದಕದ್ರವ್ಯಗಳ ಮಹತ್ತರ ವಾದಂತಹ ಜಾಲ ಪಸರಿಸಿರುವಂತಹದ್ದು. ಅದಕ್ಕೆ ಸಂಬಂಧಪಟ್ಟಂತಹ ವ್ಯವಹಾರಗಳ ಆಧಾರದಲ್ಲಿ ಅನೇಕ ರೀತಿಯಲ್ಲಿ ಈ ದೊಂಬಿಗಳು ಇನ್ನಿತರ ಅಪರಾಧಗಳು ನಡೆಯುತ್ತಿರುವುದು ಗಮನಕ್ಕೆ ಬಂದಿದೆ. ನಾವು ಕೇವಲ ಅಪರಾಧಿಗಳ ಮೇಲೆ ಕ್ರಮ ಕೈಗೊಳ್ಳುವಂತಹದ್ದಲ್ಲ, ಅಪರಾಧಗಳ ಹಿನ್ನೆಲೆಯಿ ರುವಂತಹ ಈ networkನ್ನು ಎಲ್ಲಿಯ ತನಕ break ಮಾಡುವುದಕ್ಕಾ ಗುವುದಿಲ್ಲ, ಅಲ್ಲಿಯವರೆಗೂ ಖಂಡಿತವಾಗಿಯೂ ಈ ಬಗ್ಗೆ ನಾವು ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇನ್ನು ಎರಡನೆಯದಾಗಿ ವಿದೇಶದಲ್ಲಿರುವಂತಹ ಅಪರಾಧಿಗಳು ಅವರ ಜಾಲವು ಇಲ್ಲಿ ಇರುತ್ತದೆ. ಈ ರಾಜ್ಯದಲ್ಲಿ ಮತ್ತು ಈ ದೇಶದಲ್ಲಿ ಇರುತ್ತದೆ. ಅವರ ಮೂಲಕ

ಮಾಡುವಂತಹ ಬೆದರಿಕೆಗಳು ಮತ್ತು ಬೇರೆ ಬೇರೆ ರೀತಿಯಲ್ಲಿ ಆಗುವಂತಹ ಅಪರಾಧಗಳು ಇದನ್ನು ಕೂಡ ಮಟ್ಟ ಹಾಕುವಂತಹ ಹಿನ್ನೆಲೆಯಲ್ಲಿ ಸರ್ಕಾರವು ಗಂಭೀರವಾಗಿ ತೆಗೆದುಕೊಳ್ಳಬೇಕೆಂಬ ವಿನಂತಿಯನ್ನು ಮಾಡುತ್ತೇನೆ.

ಶ್ರೀ ಯು.ಟಿ.ಖಾದರ್ (ಉಳ್ಳಾಲ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರ ಹಾಗೂ ಸರ್ಕಾರದ ಗಮನಕ್ಕೆ ತರುವುದೇನೆಂದರೆ, ಈಗಾಗಲೇ ಹಲವಾರು ಕಾನೂನುಗಳು ಅಪರಾಧಿಗಳನ್ನು ಶಿಕ್ಷಿಸುವುದು ಬಂದಿದೆ. ಇವತ್ತು ಸಮಾಜದಲ್ಲಿ ಏನಾಗಿದೆ ಎಂದರೆ ಬಹಳಷ್ಟು ಕಾನೂನುಗಳು ಇವೆ. ಆದರೆ ಯಾರಿಗೂ ಕೂಡ ಭಯವಿಲ್ಲ. ಸಮಾಜಘಾತುಕ ಶಕ್ತಿಗಳಿಗೆ ಒಂದು ಪೊಲೀಸರ ಭಯವಂತೂ ಇಲ್ಲ. ಪೊಲೀಸಿನವರು ಅವರನ್ನು ಜೈಲಿಗೆ ಹಾಕಿದ್ದಾರಾ, ಅವರಿಗೆ ಜೈಲಿನ ಭಯವಿಲ್ಲ. ಇವತ್ತು ಯಾರು ಜೈಲಿನಲ್ಲಿದ್ದಾರೆ. ಅವರು ಬಹಳ ಆರಾಮವಾಗಿದ್ದಾರೆ. ಯಾರು ಹೊರಗೆ ಜೀವಿಸುತ್ತಿದ್ದಾನೆ ಅವನು ಹೆದರಿಕೆಯಿಂದ ಜೀವಿಸುವಂತಹ ಪರಿಸ್ಥಿತಿ ಇವತ್ತು ನಿರ್ಮಾಣ ವಾಗಿದೆ. ಅವನು ಜೈಲಿನಲ್ಲಿದ್ದರೆ ಟಿ.ವಿ. ಇದೆ, ಆಟ ಆಡುವುದಕ್ಕೆ ಗ್ರೌಂಡ್ ಇದೆ, ಇಸ್ಕಾನ್‌ರವರ ಊಟವಿದೆ, ಬೇಕಾದರೆ ಮೊಬೈಲ್ ಫೋನ್ ಇದೆ. ಎಲ್ಲಾ ವ್ಯವಸ್ಥೆ ಇರುವಂತಹ ಸಂದರ್ಭದಲ್ಲಿ ಅಲ್ಲಿಯೇ ಕುಳಿತುಕೊಂಡು ಅವನು ಚಟುವಟಿಕೆಗಳನ್ನು ಹೊರಗೆ ಮಾಡುವಂತಹ ಪರಿಸ್ಥಿತಿಯಲ್ಲಿ ಕಷ್ಟಕರವಾದಂತಹ ಕಾನೂನು, ಇವತ್ತು ಈ ಬಗ್ಗೆ ನನ್ನ ಕೋರಿಕೆ ಇಷ್ಟೆ ಯಾವ ಕಾನೂನು ಇದ್ದರೂ ಎಷ್ಟು ವರ್ಷ ಶಿಕ್ಷೆಯನ್ನು ಕೊಡುತ್ತಿಲ್ಲ ಇದಲ್ಲಾ ಒಂದು ಕಾನೂನನ್ನು ಬದಲಾವಣೆ ಮಾಡಬೇಕೆಂಬುದು ನನ್ನ ಅನಿಸಿಕೆ ಯಾಗಿದೆ. ಇದಕ್ಕೆ already confinement ಆಗಬೇಕು. ಅದು ಒಂದೇ ತಿಂಗಳು ಇರಲಿ, ಕಠಿಣವಾದ ಶಿಕ್ಷೆಯು ಜೈಲಿನಲ್ಲಿ ಆದರೆ ಮಾತ್ರ ಜೈಲಿನ ಭಯ ಇರುತ್ತದೆ. ಇವತ್ತು ಯಾವ ಸಣ್ಣ ಹುಡುಗನಿಗೂ ಕೂಡ ಜೈಲಿನ ಭಯವಿಲ್ಲ. ಮಾದಕ ದ್ರವ್ಯಗಳು ಇವತ್ತು ಮೆಡಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜಿನಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೂ ಗಾಂಜಾವನ್ನು ಸೇವಿಸುವಂತಹ ಪರಿಸ್ಥಿತಿ ಇದೆ. ಯಾರು ಸೇವಿಸುತ್ತಿದ್ದಾರೆ ಅದನ್ನು ಮಾರುವವನಲ್ಲ, ಅದನ್ನು ಸೇವಿಸಿ ಯಾರು ಕಾಲೇಜಿಗೆ ಹೋದ ಅವನನ್ನು ಕಾಲೇಜಿನಿಂದ ಡಿಬಾರ್ ಮಾಡುವಂತಹ ಕಾನೂನನ್ನು ಇವತ್ತು ಅತ್ಯಗತ್ಯ ವಾಗಿದೆ. ಇದರ ಜೊತೆಯಲ್ಲಿ ಇವತ್ತು ಹಲ್ಲೆಗಳು, ಇನ್ನಿತರ ಗಲಾಟೆಗಳು

ನಮ್ಮ ಮೆಡಿಕಲ್ ಶಾಪ್‌ನಲ್ಲಿ tablet ಅನ್ನುವ ರೀತಿಯಲ್ಲಿ ಪ್ಯಾಕೇಟ್‌ನಲ್ಲಿ ಕೊಡುವ ಮೂಲಕ ಅದಕ್ಕೂ ಕೂಡ ಕಡಿವಾಣವನ್ನು ಹಾಕುವಂತಹ ಕೆಲಸವು ಆಗಬೇಕು. ಬಹಳಷ್ಟು ತಲೆಬಿಸಿ ಸಮಸ್ಯೆ ಎಂದರೆ ಯಾವೊಬ್ಬ ಶ್ರೀಮಂತನು ಕೂಡ ಇವತ್ತು ಸಮಾಜದಲ್ಲಿ ಬಡವರ ಜೊತೆಯಲ್ಲಿ ಶ್ರೀಮಂತನಿಗೂ ಕೂಡ ಸುಖವಿಲ್ಲ. ದುಬೈನಲ್ಲಿ ಕುಳಿತುಕೊಂಡು ಇನ್ನೊಂದು ದೇಶದಲ್ಲಿ ಕುಳಿತು ಕೊಂಡು ಫೋನ್ ಮುಖಾಂತರ ಬೆದರಿಸಿ ಪ್ರತಿಯೊಬ್ಬರನ್ನು ಕೂಡ ಇಷ್ಟಿಷ್ಟು ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಲೂಟಿ ಮಾಡುತ್ತಿದ್ದಾರೆ. ಇಲ್ಲದಿದ್ದರೆ ನಿಮ್ಮನ್ನು ಕೊಲ್ಲುತ್ತೇನೆಂದು ಬೆದರಿಕೆಯನ್ನು ಹಾಕುವ ಮೂಲಕ foreign phone ಮೂಲಕ ಬೆದರಿಸುವಂತಹ ಪರಿಸ್ಥಿತಿ ಇದೆ. ಈ ಬಗ್ಗೆ department ನವರನ್ನು ಕೇಳಿದರೆ ಹೇಳುತ್ತಾರೆ. ಅವರು ಆ ದೇಶದಲ್ಲಿ ಕುಳಿತುಕೊಂಡು ಮಾತನಾಡುತ್ತಾರೆ ನಾವು ಏನು ಮಾಡುತ್ತೇವೆಂದರೆ ನಾವು phoneನ್ನೆ ತೆಗೆಯುವುದು ಬೇಡ. ಇದು ಎಲ್ಲಿಯತನಕ ಪರಿಸ್ಥಿತಿ ಇದೆಯೆಂದರೆ ನನ್ನ ಫೋನ್ ನಂಬರ್‌ನಲ್ಲಿ ಒಬ್ಬ business manಗೆ ಫೋನ್ ಹೋಯಿತು. ಅವನು ನನ್ನ ಫೋನ್ ಎಂದು ಫೋನ್ ಎತ್ತಿದಾಗ ನಾನು ಖಾದರ್ ಅಲ್ಲಾ ಮಾತನಾಡುತ್ತಿರುವುದು ನಾನು ದುಬೈನಿಂದ ಮಾತನಾಡುತ್ತಿದ್ದೇನೆ. ಇಷ್ಟು ಕೋಟಿ ರೂಪಾಯಿಗಳನ್ನು ಕೊಡು ಎಂದು phone ಅನ್ನು cloning ಮಾಡುವುದು ವ್ಯವಸ್ಥೆ ಇವತ್ತು start ಆಗಿದೆ. ಫೋನ್ ನಂಬರ್‌ನಲ್ಲಿ cloning ನನ್ನದೇ ನಂಬರ್ ಬೇರೆ, ಬೇರೆ. ಇದೇ ರೀತಿಯಲ್ಲಿ ಇನ್ನೊಬ್ಬ ಉದ್ಯಮಿಗೆ ಅವನು ಫೋನೇ ತೆಗೆದುಕೊ ಳ್ಳುವುದಿಲ್ಲ. ಏಕೆ ಎಂದು ಕೇಳಿದರೆ department ನವರು ಹೇಳಿದ್ದಾರೆ ಎನ್ನುತ್ತಾನೆ. ಒಂದು ಸಾರಿ ಹೆಂಡತಿಯ ನಂಬರಿಗೆ ಫೋನ್ ಬಂತು. ಫೋನ್‌ನ್ನು ತೆಗೆದಾಗ ನಂಬರ್ ಮಾತ್ರ ಅಲ್ಲಿ ಇತ್ತು. ಆದರೆ ಅಲ್ಲಿ ದುಬೈನಲ್ಲಿ ಕುಳಿತುಕೊಂಡು ಫೋನ್ ಮಾಡುತ್ತಿರುವುದು. ಇಂತಹ ರೀತಿಯಲ್ಲಿ software ಮತ್ತು underworldನಲ್ಲಿ ನಡೆಯುವಂತಹ ಸಂದರ್ಭದಲ್ಲಿ ಏನಾದರೂ ಸಮಗ್ರವಾದಂತಹ ಚರ್ಚೆಯನ್ನು ನಡೆಸಿ ಯಾರು ವಿದೇಶದಲ್ಲಿ ಕುಳಿತುಕೊಂಡು ಇಲ್ಲಿ ಅವರು ಭಯವನ್ನು ಹುಟ್ಟಿಸುತ್ತಿದ್ದಾರೆ ಅಂತಹವರ ಮೇಲೆ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಸೂಕ್ತವಾದಂತಹ ಕಾನೂನನ್ನು ಮಾನ್ಯ ಸಚಿವರು ಮಾಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಕೆ. ಸಂಗಮೇಶ್ವರ (ಭದ್ರಾವತಿ) : ಮಾನ್ಯ ಅಧ್ಯಕ್ಷರೆ, ಏನು ಈ ವಿಧೇಯಕವನ್ನು ತಂದಿದ್ದಾರೆ ಅದನ್ನು ನಾನು ಸ್ವಾಗತಿಸುತ್ತೇನೆ. ಈ ಜೂಜು ಕೋರರು ಎಂದು ಹೇಳಿ ಏನು ಬದಲಾವಣೆ ಮಾಡಬೇಕೆಂದು ಇದ್ದೀರಿ. ಈ ಓಸಿ. ನಮ್ಮ ಭದ್ರಾವತಿಯಲ್ಲಿ ಓಸಿಯನ್ನು ಬರೆಯುತ್ತಾರೆ ಅವರು ಹೊಟ್ಟೆಪಾಡಿ ಗೋಸ್ಕರ ಬರೆಯುತ್ತಾರೆ. ಅವರ ಮೇಲೆ ಕೇಸ್ ಹಾಕುವುದಕ್ಕಿಂತ ಮೂಲವಾಗಿ ಯಾರು bidder ಇದ್ದಾರೆ ಅವರನ್ನು ಕರೆದುಕೊಂಡು ಬಂದು ಏನಾದರೂ ಮಾಡಿದರೆ ಮಾತ್ರ ಅನುಕೂಲವಾಗುತ್ತದೆ. ಇಲ್ಲದೆ ಹೋದರೆ ಸುಮ್ಮನೆ ಹೊಟ್ಟೆಪಾಡಿಗಾಗಿ 50.00 ರೂಪಾಯಿಗೋಸ್ಕರ ಬರೆಯುವುದಕ್ಕೆ ಹೋದವನಿಗೆ ಪೋಲೀಸ್‌ನವರು ಅವನನ್ನು ಕರೆದುಕೊಂಡು ಬರುವುದು ಅವನ ಮೇಲೆ ಕೇಸ್ ಹಾಕುವುದು ಇದು ಆಗಬಾರದು. ಮೂಲ ಬುಡ ಎಲ್ಲಿದೆ, ಅದನ್ನು ಬುಡದ ಸಮೇತ ಕಿತ್ತುಹಾಕಬೇಕು. ಈ ಬಗ್ಗೆ ಅಧಿಕಾರಿಗಳು ತಪ್ಪು ಮಾಡಿದ ವ್ಯಕ್ತಿಯನ್ನು ಬಿಡುತ್ತಾರೋ ಅಂತಹವರನ್ನು ಸಸ್ಪೆಂಡ್ ಮಾಡಬೇಕು. ಇದರ ಜೊತೆಯಲ್ಲಿ ನಮ್ಮಂತಹ ರಾಜಕಾರಣಿಗಳು ಬಂದಿದ್ದರು ಎಂದು ಒಂದು dairy maintain ಮಾಡಲಿ. ಸುಮ್ಮಸುಮ್ಮನೆ ರಾಜಕಾರಣಿಗಳು ಹೇಳಿದರು ಅದಕ್ಕಾಗಿ ಬಿಟ್ಟೆವು ಎಂದು ಹೇಳುತ್ತಾರೆ. ನಮ್ಮ ರಾಜಕೀಯದವರ ಮೇಲೆ ಅಪಪ್ರಚಾರ ಮಾಡುತ್ತಾರೆ ಇದು ಆಗಬಾರದು. ಅಧಿಕಾರಿಗಳು ಕಾನೂನು ರೀತಿಯಲ್ಲಿ ಕ್ರಮವನ್ನು ಜರುಗಿಸಿದರೆ ಖಂಡಿತವಾಗಿಯೂ ಇದು ನಿಂತುಹೋಗುತ್ತದೆ. ಜೂಜು ಬರೆಯುವವರನ್ನು ಬೇಡ ಮೂಲ ಯಾರು ಇರುತ್ತಾರೆ ಅವರನ್ನು ಬಂಧಿಸಿದರೆ ಒಳ್ಳೆಯದಾಗುತ್ತದೆ.

ಅಧ್ಯಕ್ಷರು : Last ರಾಮಚಂದ್ರಪ್ಪನವರು ಮಾತನಾಡಿ.

ಶ್ರೀ ಬಿ.ಸಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, As a police officer ಆಗಿ ನಾನು ಮಾತನಾಡುತ್ತೇನೆ.

ಅಧ್ಯಕ್ಷರು : ನೀವು ಆಗಲೇ ಮಾತನಾಡಿದ್ದೀರಲ್ಲಾ.

ಶ್ರೀ ಬಿ.ಸಿ.ಪಾಟೀಲ್ : ಇಲ್ಲಾ, ಆಗ ನಾನು ಸಿನಿಮಾದ ಬಗ್ಗೆ ಹೇಳಿದ್ದೆ.

ಅಧ್ಯಕ್ಷರು : ಮಾನ್ಯ ರಾಮಚಂದ್ರಪ್ಪನವರು ಮಾತನಾಡಿದ ಮೇಲೆ ನೀವು ಮಾತನಾಡಿ.

ಶ್ರೀ ಎಸ್.ವಿ.ರಾಮಚಂದ್ರಪ್ಪ : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಮಟ್ಕಾ ನಮ್ಮ ಸಂಗಮೇಶ್ವರರವರು ಹೇಳಿದ ಹಾಗೆ ಹಳ್ಳಿಹಳ್ಳಿಯಲ್ಲಿ ಮೂಲೆ

ಮೂಲೆಯಲ್ಲಿ ಬರೆಯುತ್ತಾರೆ. ಅದರ ಬಗ್ಗೆ ಕ್ರಮವನ್ನು ಕೈಗೊಳ್ಳುತ್ತಿಲ್ಲ. ಅದೇ ರೀತಿಯಾಗಿ brandy process ಬಗ್ಗೆ ಶ್ರೀ ಶಿವಲಿಂಗೇಗೌಡರು ಹೇಳಿದ ಹಾಗೆ ಅದೇ ರೀತಿಯಾಗಿ ನನ್ನ ಕ್ಷೇತ್ರದಲ್ಲಿ ಪೊಲೀಸ್ ಉಸ್ತುವಾರಿಯಲ್ಲಿಯೇ ನಮ್ಮ ಹಳ್ಳಿ ಹಳ್ಳಿಗಳಿಗೆ ಹೋಗುತ್ತಿದೆ. ದಯಮಾಡಿ ಅದನ್ನು ನಿಲ್ಲಿಸಬೇಕು. ಈ ಸಾರಾಯಿ ನಿಂತಿರುವುದರಿಂದ ಬೀಡಿ ಅಂಗಡಿಗಳಲ್ಲಿ ಮಾರುತ್ತಿದ್ದಾರೆ. ಹಳ್ಳಿಗಳಲ್ಲಿ ಮಾರುತ್ತಿದ್ದಾರೆ. ಅಲ್ಲಿ ಹೊಡೆದಾಟಗಳು ಅಹ ಆಗುತ್ತಿದೆ. ದಯಮಾಡಿ ಇದು ಮಸೂದೆಯ ಬುಕ್‌ನಲ್ಲಿ ಆಗಬಾರದು ಇದು ಕಾರ್ಯ ರೂಪಕ್ಕೆ ಬರಬೇಕೆಂಬುದು ನನ್ನ ಕಳಕಳಿ. ರಕ್ಷಣೆಯ ಬಗ್ಗೆ ಹೇಳುವುದಾದರೆ ಮಾನ್ಯ ಮುಖ್ಯಮಂತ್ರಿಗಳು ಬೆಳಗಾಂ ಅಧಿವೇಶನದಲ್ಲಿ ಹೇಳಿದ್ದರು ಎಲ್ಲಾ ಶಾಸಕರುಗಳಿಗೂ ಅಂಗರಕ್ಷಕರನ್ನು ಕೊಡುತ್ತೇವೆಂದು ಹೇಳಿದ್ದರು. ನಾವು ಅಂಗರಕ್ಷಕರನ್ನು ಕೊಡಿ ಎಂದು ಕೇಳಿದರೂ ಕೂಡ ಇದುವರೆಗೂ ಕೊಟ್ಟಿರುವುದಿಲ್ಲ. ಬರೀ ಪುಸ್ತಕದಲ್ಲಿ ಕಾನೂನಿ ನಲ್ಲಿ ಮಾತ್ರ ಇದು ಆಗಬಾರದು. ಇದು ಕಾರ್ಯರೂಪಕ್ಕೆ ಬರಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಸಿ.ಪಾಟೀಲ್ (ಹಿರೇಕೆರೂರು) : ಮಾನ್ಯ ಅಧ್ಯಕ್ಷರೆ, O.C. Gambling ಏನು ಇದೆ ಇದನ್ನು ಪೊಲೀಸ್ ಅಧಿಕಾರಿಗಳು ಮಾತ್ರ control ಮಾಡುವುದಕ್ಕೆ ಸಾಧ್ಯ. ಕಾನೂನಿನಿಂದ ಬಂದ್ ಮಾಡುವುದಕ್ಕೆ ಸಾಧ್ಯವಿಲ್ಲ. ಉದಾಹರಣೆಗೆ ಹೇಳುವುದಾದರೆ, ಆ ಜಿಲ್ಲೆಯ S.P. (Superintendent of Police) ಕಡಕ್ ಆಗಿದ್ದು O.C. ಬಂದ್ ಮಾಡಬೇಕೆಂದು ಮನಸ್ಸು ಮಾಡಿದ್ದರೆ ಮಾತ್ರ ಆ ಜಿಲ್ಲೆಯಲ್ಲಿ ಓಸಿ ನಡೆಯುವುದಕ್ಕೆ ಸಾಧ್ಯವೇ ಇಲ್ಲ. without conveyance of the police officers O.C., cannot be run. ಇವತ್ತು ಅದಕ್ಕೆ ನಾವು ಕೇಸ್ ಮಾಡುತ್ತೇವೆ. It is a bailable offence. It is not non-bailable. ಓಸಿ ಏನು ಇದೆ 87 K.P.Act ನಾವು ಏನು ಹಾಕುತ್ತೇವೆ ಅದು bailable offence ಆಗಿದೆ. ಅವರು ಹಿಡಿದುಕೊಂಡು ಬರುತ್ತಾರೆ. ಯಾರೋ ಒಬ್ಬ ಜಾಮೀನು ಕೊಡುತ್ತಾನೆ, ಜಾಮೀನಿಗೆ ಒಂದಿಷ್ಟು ಫಿಕ್ಸ್ ಮಾಡಿ ಕಳುಹಿಸಿರುತ್ತಾರೆ. ಮಾರನೇ ದಿವಸ ಕೋರ್ಟಿಗೆ ಕಳುಹಿಸುತ್ತಾರೆ. ಕೋರ್ಟ್‌ನಲ್ಲಿ 300 ರಿಂದ 500 ರೂಪಾಯಿಗಳು fine ಆಗುತ್ತದೆ. ಅವನು ಒಪ್ಪಿಕೊಂಡು ಬರುತ್ತಾನೆ ಸಾಯಂಕಾಲ ಮತ್ತೆ ಅವನು ಓಸಿ ಬರೆಯುವುದಕ್ಕೆ start ಮಾಡುತ್ತಾನೆ. ಯಾವಾಗ Police officers with Iron hand

control ಮಾಡಲೇಬೇಕು, ನಿಲ್ಲಿಸಲೇಬೇಕು ಎಂದು ತೀರ್ಮಾನ ಮಾಡಿದಾಗ ಮಾತ್ರ ನಿಲ್ಲಿಸಲು ಸಾಧ್ಯ ಇಲ್ಲದಿದ್ದರೆ ಈ ಕಾಯ್ದೆಯಿಂದ ಇದನ್ನು ನಿಲ್ಲಿಸಲಿಕ್ಕೆ ಸಾಧ್ಯವೇ ಇಲ್ಲ. ಅದಕ್ಕೆ ಈ KCOC act ಅನ್ನು ಏನು ತಂದಿದ್ದೀರಿ, ಅದರಲ್ಲಿ 87 gambling ಏನಿದೆ, ಎರಡು ಸಾರಿ, ಮೂರು ಸಾರಿ conviction ಆದರೆ If anyone is convicted 2-3 times, thay should be brought under KCOCA (The Karnataka Control of Organised Crimes Act)ನಲ್ಲಿ ಆ ಗ್ಯಾಂಬ್ಲಿಂಗ್‌ನವರನ್ನು ಒಳಪಡಿಸಬೇಕು. Normal gambling, rummy gambling ಇರುತ್ತದೆ, ಕ್ಲಬ್‌ಗಳಲ್ಲಿ ನಡೆಯುತ್ತಿರುತ್ತದೆ that is different, but ಈ professional gambling, O.C. ಮಟ್ಕಾ ಎಂದೇನು ಹೇಳುತ್ತೇವೆ, ಇದನ್ನು KCOC actನಲ್ಲಿ ಎರಡು ಮೂರು ಸಾರಿ conviction ಆದರೆ ಅದನ್ನು ಈ ಕಾಯ್ದೆಯಡಿ ಜಾರಿಗೆ ತರಬೇಕು Punishment 5.00 ಲಕ್ಷ ರೂ.ಗಳವರೆಗೆ ಇದೆಯೆಂದು ತಾವು ಹೇಳಿದ್ದೀರಿ. 180 ದಿನಗಳ ಕಾಲ non bailable ಮಾಡಿ ಅದನ್ನು KCOC actನಲ್ಲಿ ತಂದರೆ ಮಾತ್ರ ಆಗುತ್ತದೆ. ಅದಕ್ಕೆ ಪರಿಣಾಮಕಾರಿಯಾಗಿ O.C. ಯನ್ನು ನಿಲ್ಲಿಸಲಿಕ್ಕೆ ಸಾಧ್ಯವಿದೆ. ಮತ್ತೆ ಪೊಲೀಸ್ ಅಧಿಕಾರಿಗಳ ಮೇಲೆ ಸರ್ಕಾರ ಬಿಗಿ ಹಿಡಿತ ಇಟ್ಟುಕೊಂಡು ಪಾರದರ್ಶಕತೆಯಿಂದ ಅವರು ವರ್ಗಾವಣೆ ಆಗಬೇಕು. ಪೊಲೀಸ್ ಅಧಿಕಾರಿ ಹೋಗುವಾಗಲೇ ಅವನು something ಮಾಡಿಬಿಟ್ಟು ಅಲ್ಲಿಗೆ ಹೋಗಿದ್ದರು ಅಂದರೆ ಇಲ್ಲೇನು ಮಾಡಿರುತ್ತಾರೆ ಅದರ ಹತ್ತರಷ್ಟು ಮಾಡಲಿಕ್ಕೆ ಅಲ್ಲಿಗೆ ಹೋಗಿರುತ್ತಾರೆ. ಆಗ ನಾವು ಸುಮ್ಮನೆ O.C. ನಿಲ್ಲಿಸಬೇಕು. Gambling ನಿಲ್ಲಿಸಬೇಕು. ಕೊಲೆಗಳಾಗಬಾರದು, ಕಳ್ಳತನಗಳಾಗಬಾರದು, ನಮ್ಮದು Crime Clean City, Crime Clean State ಆಗಬೇಕೆಂದರೆ ಅದು ಸಾಧ್ಯವಿಲ್ಲ. ಆದ್ದರಿಂದ ಪೊಲೀಸ್ ಅಧಿಕಾರಿಗಳನ್ನು ಅವರ ಅರ್ಹತೆ, ದಕ್ಷತೆಯ ಮೇಲೆ ಸಂಬಂಧಪಟ್ಟ ಪೊಲೀಸ್ ಠಾಣೆಗಳಿಗೆ ಹಾಕಿದರೆ ಖಂಡಿತವಾಗಿ ಇದನ್ನು ತಡೆಯಲಿಕ್ಕೆ ಸಾಧ್ಯವಾಗುತ್ತದೆ. ನನಗೆ ಒಂದು ಸಣ್ಣ ಅನುಭವವಾಯಿತು. ಈ ಬೆಂಗಳೂರು ನಗರದಲ್ಲಿ ಯಾರೋ ಒಬ್ಬ ಒಂದೆರಡು ಮೂರು ಕೇಸುಗಳಲ್ಲಿದ್ದನು. ಆಗ ನನ್ನ ಹತ್ತಿರ ಯಾರೋ ಒಬ್ಬರು ಬಂದು ಇವನಿಗೆ ವಿನಾಕಾರಣವಾಗಿ ಪೊಲೀಸ್ ಅಧಿಕಾರಿಗಳು ತೊಂದರೆ ಕೊಡುತ್ತಿದ್ದಾರೆ. ಆಗ ನಾನು ಆ ಪೊಲೀಸ್ ಅಧಿಕಾರಿಗೆ ಫೋನ್

ಮಾಡಿ ಇವರದು ಹತ್ತು ವರ್ಷಗಳಿಂದ ಯಾವುದೇ ದಾಖಲಾತಿ ಇಲ್ಲ. ಯಾವುದೇ ಕೇಸುಗಳಲ್ಲಿ ಭಾಗಿಯಾಗಿಲ್ಲವೆಂದು ಇದೆ, ನೋಡಿ ಅವರು innocent ಇದ್ದರೆ ಅವರಿಗೆ ತೊಂದರೆ ಕೊಡಬೇಡಿ ಎಂದು ಅವರನ್ನು ಕಳುಹಿಸಿ ಕೊಟ್ಟೆ, ಅಲ್ಲಿಗೆ ಹೋದಾಗ ಆ ಪೋಲೀಸ್ ಅಧಿಕಾರಿ ಅವರ ಹೆಸರನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆ ಅಧಿಕಾರಿ ಆ ಮನುಷ್ಯನಿಗೆ he demanded Rs.5-00 lakhs. ಆಗ ಅವನು ಆ ವಿಷಯವನ್ನು ನನಗೆ ಬಂದು ಹೇಳಿದ, ಆಗ ನನಗೆ ನಾಚಿಕೆಯಾಯಿತು, ನಾನು ಹೇಳಿದ್ದೇ ತಪ್ಪಾಯಿತು, ನನ್ನ ಮೂಲಕ ಹೋಗಿದ್ದರಿಂದ ಅವನಿಗೆ demand ಜಾಸ್ತಿಯಾಯಿತೋ ಏನೋ? ಎಂದು ಹೇಳಿ ಕೊನೆಗೆ ಇಂಥ ವಿಷಯವನ್ನು ನನ್ನ ಹತ್ತಿರ ಹೇಳಬೇಡಿ ಎಂದು ಆತನಿಗೆ ಹೇಳಿದೆ. ಕೊನೆಗೆ he settled it for 1.00 lakh Rupees. ಅಧ್ಯಕ್ಷರೇ, ಈ ವಿಷಯವನ್ನು ನಾನು ಏಕೆ ಇಲ್ಲಿ ಹೇಳುತ್ತೇನೆಂದರೆ, ಇವತ್ತು ಒಬ್ಬ ಅಪರಾಧ ಮಾಡುವುದು ಸಹಜ, ಒಬ್ಬ ವ್ಯಕ್ತಿ ಎಲ್ಲೋ ಏನೋ ತಿಳಿದೋ, ತಿಳಿಯದೆಯೇ ಅಪರಾಧ ಮಾಡಿರುತ್ತಾರೆ, ಒಬ್ಬ ವ್ಯಕ್ತಿ ತಾನು ಮಾಡಿದ ತಪ್ಪಿಗೆ ಪಶ್ಚಾತ್ತಾಪ ಪಟ್ಟರೆ ಅದಕ್ಕಿಂತ ಬೇರೆ ಶಿಕ್ಷೆಯಿಲ್ಲ ಎಂದು ಹೇಳುತ್ತಾರೆ. ಇವತ್ತು ಎಲ್ಲಾ ಬಿಟ್ಟು ನಾವು ಒಳ್ಳೆಯವರಾಗುತ್ತೇವೆಂದು ಹೇಳಿದರೂ ಕೂಡ ಇವತ್ತು ಕೆಲವು ಪೋಲೀಸ್ ಅಧಿಕಾರಿಗಳು ಬಹಳ ಆಯಕಟ್ಟಿನಲ್ಲಿರುವ ಪೋಲೀಸ್ ಅಧಿಕಾರಿಗಳು ಇವತ್ತು ಅವರು ಏನು ಕೊಟ್ಟಿದ್ದಾರೆ ಅದನ್ನು ವಸೂಲು ಮಾಡಿಕೊಳ್ಳಬೇಕಾಗಿದೆ. ಅದಕ್ಕೆ ಇವತ್ತು ಆ ವ್ಯಕ್ತಿ ಯಾರು ಒಂದು ಲಕ್ಷ ರೂ.ಗಳನ್ನು ಕೊಟ್ಟು ಬಂದ, ಮಾರನೇ ದಿವಸ ಮತ್ತೆ ಅದೇ ಉದ್ಯೋಗವನ್ನು ಪ್ರಾರಂಭ ಮಾಡುತ್ತಾನೆ, ರೋಲ್‌ಕಾಲ್ ಪ್ರಾರಂಭ ಮಾಡಬೇಕು. ಯಾರನ್ನಾದರೂ ಹೆದರಿಸಿ ಭೂಮಾಫಿಯ ದಂಧೆ ಮಾಡಿಕೊಂಡು ಅವರನ್ನು ಹೆದರಿಸಿ ಮತ್ತೆ ಒಂದು ಲಕ್ಷ ರೂ.ಗಳಿಗೆ ಐದು ಲಕ್ಷ ರೂ.ಗಳನ್ನು ಮಾಡಿಕೊಂಡು ದುಡಿಯಬೇಕಾಗುತ್ತದೆ. ಇವತ್ತು ರೌಡಿಸಂ ಅನ್ನು ಬಿಡುತ್ತೇವೆಂದು ಹೇಳುವಂಥ ರೌಡಿಗಳು ಇದ್ದಾಗ್ಯೂ ಕೂಡ ಅವನು ರೌಡಿ ಲಿಸ್ಟ್‌ನಿಂದ ಹೊರಗಡೆ ಬಂದರೂ ಕೂಡ ಮತ್ತೆ ನಿನ್ನನ್ನು ರೌಡಿ ಲಿಸ್ಟ್‌ನಲ್ಲಿ ಸೇರಿಸುತ್ತೇನೆ, ನಿನಗೆ 110 ಹಾಕುತ್ತೇನೆ, ನಿನ್ನನ್ನು ಒಳಗೆ ಕಳುಹಿಸುತ್ತೇನೆ ಎಂದು ಈ ರೀತಿ ಹೆದರಿಸಿಬಿಟ್ಟು ಇವತ್ತು ಪೋಲೀಸ್ ಅಧಿಕಾರಿಗಳು ಹಣವನ್ನು ಕೀಳುವಂಥ ಪರಿಪಾಠ ಇವತ್ತು ಬೆಂಗಳೂರು ನಗರದಲ್ಲಿ ಇವತ್ತು ನಡೆಯುತ್ತಿದೆ. ಇದು ಬಹಳ ನೋವಿನ ಸಂಗತಿ, ನಾನು

ಈ ವಿಷಯವನ್ನು ಹೇಳುವಂಥ ಪ್ರಸ್ತಾಪ ನನಗೆ ಬರುತ್ತದೆ ಎಂದು ನಾನು ಅಂದುಕೊಂಡಿರಲಿಲ್ಲ. ಆದರೆ ನಾನೇ ಒಬ್ಬ ಪೊಲೀಸ್ ಅಧಿಕಾರಿಯಾಗಿ, ಒಬ್ಬ ಶಾಸಕನಾಗಿ, ಇವರು ಹೇಳಿದಂಥ ವ್ಯಕ್ತಿ ಯಾವ ರೀತಿಯಾಗಿ ಇವರು ಅವನಿಗೆ ಮಾನಸಿಕ ಹಿಂಸೆಯನ್ನು ಕೊಟ್ಟರು, ಯಾವ ರೀತಿಯಾಗಿ ಹಣವನ್ನು ವಸೂಲು ಮಾಡಿದರು, ಪರಿಸ್ಥಿತಿ ಇದ್ದಾಗ, ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದಂತೆ ಇಂಥ ಕಾಯ್ದೆ ಕೇವಲ ಪುಸ್ತಕ ರೂಪದಲ್ಲಿದ್ದರೆ ಆಗುವುದಿಲ್ಲ. ಇದರ implementation ಆಗಬೇಕೆಂದು ಹೇಳಿದರೆ ಸರ್ಕಾರದ ಬಿಗಿ ಹಿಡಿತ ಈ ಪೊಲೀಸ್ ಅಧಿಕಾರಿಗಳ ಮೇಲೆ ಇರಬೇಕು. ಆಗ ಮಾತ್ರ ನಾವು ಏನು ಕಾಯ್ದೆಗಳನ್ನು ತರುತ್ತೇವೆ ಅದು ಚಾಲನೆಯಲ್ಲಿ ಬರಲಿಕ್ಕೆ ಮತ್ತು ಸಾಮಾನ್ಯ ಜನರಿಗೆ ರಕ್ಷಣೆ ಸಿಗಲಿಕ್ಕೆ ಸಾಧ್ಯವಾಗುತ್ತದೆಂದು ಹೇಳಬಯಸುತ್ತೇನೆ.

ಅಧ್ಯಕ್ಷರು : ಗೃಹ ಸಚಿವರು ಉತ್ತರ ಕೊಡಿ.

ಡಾ: ವಿ.ಎಸ್.ಆಚಾರ್ಯ (ಮಾನ್ಯ ಗೃಹ ಸಚಿವರು) : ನಾನು ಈ ಪರ್ಯಾಲೋಚನೆಗೆ ಮಂಡಿಸಿದಂಥ ಈ ತಿದ್ದುಪಡಿ ವಿಧೇಯಕದ ಬಗ್ಗೆ ಮಾನ್ಯ ಪ್ರತಿ ಪಕ್ಷದ ನಾಯಕರು ಸೇರಿ ಸುಮಾರು ಒಂಭತ್ತು ಮಂದಿ ವ್ಯಾಪಕವಾದಂಥ ಚರ್ಚೆ ಮಾಡಿ ತಮ್ಮ ಅಮೂಲ್ಯವಾದಂಥ, ಅನುಭವಯುತವಾದಂಥ ಸಲಹೆ ಸೂಚನೆಗಳನ್ನು, ವಿಚಾರಗಳನ್ನು ಮಂಡಿಸಿದ್ದಾರೆ. ಅವೆಲ್ಲದಕ್ಕೆ ನಾನು ಅವರಿಗೆ ಅಭಾರಿಯಾಗಿದ್ದೇನೆ. ಏಕೆಂದರೆ ಸಮಾಜದಲ್ಲಿ ಕಾನೂನಿನ ಬಗ್ಗೆ ಭಯ ಬೇಕು, ಪೊಲೀಸರ ಬಗ್ಗೆ ಗೌರವಯುತವಾದಂಥ ಭಾವನೆ ಬೇಕು. ಕಾನೂನಿಗೆ ತಗ್ಗಿ ಬಗ್ಗಿ ನಡೆಯುವಂಥ ವಾತಾವರಣ ನಿರ್ಮಿಸುವಂತಾಗಬೇಕು ಎಂಬುದು ಎಲ್ಲರ ಮಾತಿನ ಧ್ವನಿ. ಇದಕ್ಕೋಸ್ಕರ effective, enforcement of law ಅದು ಆಗಬೇಕು ಎಂದು ಹೇಳುವುದರಲ್ಲಿ ಎರಡು ಮಾತಿಲ್ಲ. ನಾವು ಇವತ್ತಿನ ಈ ಮಾತಿನ ಹಿನ್ನೆಲೆಯಲ್ಲಿ, ಆ ದಿಶೆಯಲ್ಲಿ ಜೈಲಿನಲ್ಲಿ ಆಗುವಂಥ ಸುಧಾರಣೆಯಿರಬಹುದು, ಪೊಲೀಸ್ ಇಲಾಖೆಯಲ್ಲಿ ಆಗುವಂಥದ್ದು ಮತ್ತು ಈ ಕಾನೂನು ಬಾಹಿರ ಚಟುವಟಿಕೆಗಳು, ನಾವು ಏಳು ವಿಪರೀತವಾದಂಥ ಕಾನೂನು ಬಾಹಿರವಾದ ಚಟುವಟಿಕೆಗಳನ್ನೆಲ್ಲಾ ಕೂಡಿಸಿ ಅದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಂಡು ಅದನ್ನು effective, enforcement ಮಾಡುವ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಆಂಧ್ರದಲ್ಲಿ ಪ್ರತ್ಯೇಕವಾದಂಥ ಒಂದು ಕಾನೂನು ಉಂಟು

ಎಂದು ಮಾನ್ಯ ಬಿ.ಸಿ.ಪಾಟೀಲ್‌ರವರು ಹೇಳಿದರು. ಇವತ್ತು ಆ ಆರು illegal activities listನಲ್ಲಿ ಸೇರಿಸಿದ್ದೇವೆ ಮತ್ತು ಸಾಕಷ್ಟು ಕಠಿಣವಾದಂಥ ಕ್ರಮಗಳೊಳಗೆ Video Piracy ಇದನ್ನು ಸೇರಿಸಿದ್ದೇವೆ. ಈ ಬೇಡಿಕೆ ಬಹಳ ಸಮಯದಿಂದ ಇತ್ತು ಅದನ್ನು ಎಲ್ಲರೂ ಒಪ್ಪಿದ್ದಾರೆ. ಹಾಗಾಗಿ ನಿಮ್ಮೆಲ್ಲರ ಸಲಹೆಗಳನ್ನು ಸ್ವೀಕರಿಸುವುದರೊಟ್ಟಿಗೆ ಇವತ್ತು ಈ ವಿಧೇಯಕದ ತಿದ್ದುಪಡಿ ಯನ್ನು ಪರ್ಯಾಲೋಚಿಸಬೇಕೆಂದು ತಮ್ಮಲ್ಲಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2009ನೇ ಸಾಲಿನ ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳನ್ನು ತಡೆಗಟ್ಟುವ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋ ಚಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಕಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 6 ರವರೆಗೆ

ಅಧ್ಯಕ್ಷರು : "ಖಂಡ 2 ರಿಂದ 6 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 6 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವನೆ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಡಾ: ವಿ.ಎಸ್.ಆಚಾರ್ಯ (ಗೃಹ ಸಚಿವರು) : 2009ನೇ ಸಾಲಿನ ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳನ್ನು ತಡೆಗಟ್ಟುವ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2009ನೇ ಸಾಲಿನ ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳನ್ನು ತಡೆಗಟ್ಟುವ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಅನುಬಂಧ-7)

ಅಧ್ಯಕ್ಷರು : ಈಗ ಮಾನ್ಯ ಎಸ್.ಎ.ರವೀಂದ್ರನಾಥ್‌ರವರು ಕೃಷಿ ವಿಜ್ಞಾನಗಳ ವಿಧೇಯಕವನ್ನು ತೆಗೆದುಕೊಳ್ಳಬೇಕು.

ಶ್ರೀ ಹೆಚ್.ಡಿ.ರೇವಣ್ಣ : ಅಧ್ಯಕ್ಷರೇ, ಇಲ್ಲಿಗೆ ನಾವು ಕೇವಲ ಬಿಲ್‌ಗಳನ್ನು ಮಾಡಿಕೊಳ್ಳಕ್ಕೆ ಬಂದಿದ್ದೇವೆಯೇ?

ಅಧ್ಯಕ್ಷರು : ಏನು ಮಾಡೋಣ ಹೇಳಿ.

ಶ್ರೀ ಹೆಚ್.ಡಿ.ರೇವಣ್ಣ : 25 ಬೇಡಿಕೆಗಳಿವೆ. ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ಬಂದಿದ್ದೇವೆಯೇ ಅಥವಾ ಬಿಲ್ ಮಾಡಲಿಕ್ಕೆ ನಾವು ಇಲ್ಲಿಗೆ ಬಂದಿದ್ದೇವೆಯೇ?

ಅಧ್ಯಕ್ಷರು : ಬಿಲ್ಲು ಆಗಬೇಕು, ಚರ್ಚೆಯೂ ಆಗಬೇಕು.

ಶ್ರೀ ಹೆಚ್.ಡಿ.ರೇವಣ್ಣ : ದಯಮಾಡಿ ಇದಕ್ಕೆ ನಾವು ಅವಕಾಶ ಕೊಡಬಾರದು. ಇದರ ಬಗ್ಗೆ 56 ಪುಟಗಳಿವೆ, ಇದನ್ನು ಇವತ್ತು ಓದಿಕೊಂಡು ಬರಬೇಕಾಗಿದೆ, ಹಾಗಾದರೆ ನಾವೇನು ಬಿಲ್ ಮಾಡಲಿಕ್ಕೆ ಬಂದಿದ್ದೇವೆಯೇ ಇಲ್ಲಿ. 25 ಬೇಡಿಕೆಗಳ ಮೇಲೆ ಚರ್ಚೆ ಮಾಡಬೇಕಾಗಿದೆ. ನಾಳೆ ಬೇಕಾದರೆ ಬಿಲ್‌ಗೆ ಸೆಪರೇಟ್ ಆಗಿ ಇಡಿ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ : ಅಧ್ಯಕ್ಷರೇ, ಇದರಲ್ಲಿ 25 ಪುಟಗಳಿವೆ, ಇದನ್ನು ಓದಲಿಕ್ಕೆ ನಮಗೆ ಅವಕಾಶ ಬೇಕು. ಇದು ರೈತರಿಗೆ ಸಂಬಂಧಪಟ್ಟ ವಿಚಾರ. ನಮಗೆ ಇದನ್ನು ಓದಲಿಕ್ಕೆ ಅವಕಾಶ ಕೊಡಬೇಕು.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಇದು ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾನಿಲಯದ ಮೇಲೆ ತಂದಿರುವ ವಿಧೇಯಕವಾಗಿದ್ದು, ಇದರ ಬಗ್ಗೆ ಚರ್ಚೆಯಾಗಬೇಕು, ಇವತ್ತು ಅವಸರದಲ್ಲಿ ತಂದರೆ ಇದು ಅಧಿಕಾರಶಾಹಿ ಮಸೂದೆಯಾಗುತ್ತದೆ. ಇದನ್ನು ಮುಂದಕ್ಕೆ ಹಾಕಬೇಕು.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ಕೂಡ ನಿಮ್ಮಲ್ಲಿ request ಮಾಡಿದ್ದೇನೆ. ಈ demands ಮೇಲೆ ಚರ್ಚೆ ಮಾಡುವುದಕ್ಕೆ ನಮಗೆ ಅವಕಾಶ ಸಿಕ್ಕಿಲ್ಲ. ಬೇರೆ ಬೇರೆ ಕಾರಣಕ್ಕೋಸ್ಕರ ಅವಕಾಶ ಸಿಕ್ಕಿಲ್ಲ. ಒಂದು ಏನೆಂದರೆ, ಬಹಳ ಕಡಿಮೆ ಅವಧಿಯಲ್ಲಿ ವಿಧಾನಸಭೆಯನ್ನು ಕರೆಯಲಾಗಿದೆ. ಇದು ಮೊದಲನೆಯದು. ಮಾನ್ಯ ಸುರೇಶ್‌ಕುಮಾರ್ ನೀವು ಸಂಸದೀಯ ಸಚಿವರು, ಮೊದಲನೆಯದು ಬಹಳ ಕಡಿಮೆ ದಿನಗಳ ಅವಧಿಗೆ ಅಧಿವೇಶನ ಕರೆದಿದ್ದು. ಅದು ಬರೀ 12 ದಿನಗಳಿಗೆ ಮಾತ್ರ ಕರೆದಿದ್ದು. ಅದು ನಮ್ಮ ನಿಯಮಾವಳಿಗಳ ಪ್ರಕಾರ ಕನಿಷ್ಠ 15 ದಿನಗಳು ಡಿಮ್ಯಾಂಡ್ಸ್‌ಗೆ ಕರೆಯಬೇಕು ಎಂದು ಇದೆ. ಡಿಮ್ಯಾಂಡ್ಸ್ ಚರ್ಚೆ ಪಾಸ್ ಆಗುವುದಕ್ಕೆ ಕರೆಯಬೇಕು ಎಂದು ಇದೆ ಮತ್ತು ಇದು ಬಹಳ ಮಹತ್ತರವಾದ ಸಮಾವೇಶ. ಸುಮಾರು 60 ಸಾವಿರ ಕೋಟಿ ರೂಪಾಯಿಗಳಿಗೆ ನಾವು ಇಲ್ಲಿ ಒಪ್ಪಿಗೆ ಕೊಡಬೇಕಾಗುತ್ತದೆ. 60 ಸಾವಿರ ಕೋಟಿ ರೂಪಾಯಿಗಳು, ಅದನ್ನು ಪ್ರತಿ ಇಲಾಖೆಗಳ ಮೇಲೆ ಕೂಡ ಡಿಮ್ಯಾಂಡ್ಸ್ ಅನ್ನು ಇಲ್ಲಿ ಮಂಡಿಸಿದ್ದಾರೆ. ನಾವೆಲ್ಲಾ ಹಿಂದೆ ಪ್ರತಿ ಡಿಮ್ಯಾಂಡ್ ಮೇಲೂ ಕೂಡ Subject committee ಬರುವುದಕ್ಕಿಂತ ಮುಂಚಿತವಾಗಿ 2004–09ರ ವರೆಗೂ ಪ್ರತಿ ಇಲಾಖೆಯ ಮೇಲೆ ಚರ್ಚೆ ಆಗುತ್ತಿತ್ತು. ಆ ಮಂತ್ರಿಗಳು ಕೂಡ ಉತ್ತರ ಕೊಡುತ್ತಿದ್ದರು. ಮಾನ್ಯ

ಮುಖ್ಯಮಂತ್ರಿಗಳು ನಮಗೆ ಹೇಳಿದರು. ಮೂರು ಗಂಟೆಗೆ ಉತ್ತರ ಕೊಡುತ್ತೇವೆ co-operate ಮಾಡಬೇಕು ಎಂದು ಹೇಳಿದರು. ಕೃಷಿ ಮಂತ್ರಿಗಳು ಉತ್ತರ ಕೊಡುವುದಿಲ್ಲ. ಪವರ್ ಮಂತ್ರಿಗಳು ಉತ್ತರ ಕೊಡುವುದಿಲ್ಲ. Home Minister ಏನೂ ಉತ್ತರ ಕೊಡುವುದಿಲ್ಲ. ನಾವು ಸುಮ್ಮನೆ ಪಾಸ್ ಮಾಡಿಕೊಡಬೇಕೇ ಹೇಳಿ?

ಶ್ರೀ ಹೆಚ್.ಡಿ.ರೇವಣ್ಣ : ಅರಣ್ಯ ಮಂತ್ರಿಗಳು ಏನೂ ಮಾಡುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಅರಣ್ಯ ಮಂತ್ರಿಗಳು ಏನೂ ಮಾಡುವ ಆಗಿಲ್ಲ. Health, Rural development, ನೀರಾವರಿ, ಚಿಕೂನ್ ಗುನ್ಯಾ, ಡೇಂಗೆ ಜ್ವರ ಈ ರೀತಿ ಇವತ್ತು ವೈರಸ್ ಎಲ್ಲಾ ಕಡೆ ಹಬ್ಬಿಕೊಂಡಿದೆ. ಸರ್ಕಾರ ಏನೂ ಕ್ರಮ ತೆಗೆದುಕೊಂಡಿಲ್ಲ. ಅಲ್ಲಿ ಆಹಾರ ಮಂತ್ರಿಗಳು ಇದ್ದಾರೆ. ನೆಮ್ಮದಿ ಕೇಂದ್ರದಿಂದ 30 ಲಕ್ಷ ಕಾರ್ಡ್ ಕೊಟ್ಟುಬಿಟ್ಟರು. ಆದರೆ, ಆಹಾರವನ್ನೇ ಕೊಟ್ಟಿಲ್ಲ. ಯಾರಿಗೆ ಹೇಳಬೇಕು ನಾವು? ಆಮೇಲೆ ನೀವು ಉತ್ತರ ಕೊಡಬೇಕಾದಾಗ ಹೇಳಿ. ಚರ್ಚೆ ಮಾಡಿದ ಮೇಲೆ ತಾನೇ ಉತ್ತರ ಕೊಡುವುದು. ಸುಮ್ಮನೆ mention ಮಾಡುತ್ತಿದ್ದೇನೆ.

ಶ್ರೀ ಬಿ.ರಮಾನಾಥ್ ರೈ : ಯಾವುದೇ ವ್ಯವಸ್ಥೆಯೂ ಸರಿಯಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಹಿಂದೆ ಯಾವಾಗಲೂ ಕೂಡ ಈ ತರಹ ಆಗಿಲ್ಲ. ಅದು ಹಾಗೆ ಆಗಬಾರದು. ಚರ್ಚೆ ಇಲ್ಲದೇ ನಾವು ಉತ್ತರ ಕೊಡುತ್ತೇವೆ ಎಂದು ಹೇಳುತ್ತಾರೆ, ಏನೆಂದು ಉತ್ತರ ಕೊಡುತ್ತಾರೆ? ಯಾರಿಗೆ ಉತ್ತರ ಕೊಡುತ್ತಾರೆ? ಏತಕ್ಕೋಸ್ಕರ ಉತ್ತರ ಕೊಡುತ್ತಾರೆ.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ನನ್ನ ವಿನಂತಿ ಏನೆಂದರೆ, ಬಿಲ್ಸ್ ಏನು ಇವೆ ಅವನ್ನು demands ಚರ್ಚೆಯಾದ ಮೇಲೆ ತೆಗೆದುಕೊಳ್ಳೋಣ. ಈಗ demands ಮೇಲೆ ಚರ್ಚೆ ಪ್ರಾರಂಭ ಮಾಡಿ. ಆಮೇಲೆ ಸಾಯಂಕಾಲ ಉಳಿದ ಬಿಲ್ಸ್ ಅನ್ನು ತೆಗೆದುಕೊಳ್ಳೋಣ. ಈಗ Start ಮಾಡಿ. ಎರಡನ್ನೂ ನಾವು ಮಾಡಲೇ ಬೇಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಬಿಲ್ಸ್ ಮಾಡಿ ನನಗೆ ಏನೂ ತಕರಾರು ಇಲ್ಲ. ಬಿಲ್ ಮುಗಿದ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಆಮೇಲೆ ತೆಗೆದುಕೊಳ್ಳಿ. ಬಿಲ್ ಮುಗಿದ ಮೇಲೆ ತೆಗೆದುಕೊಳ್ಳಿ. I have no objection.

(ಗೊಂದಲ)

ಅಧ್ಯಕ್ಷರು : ಡಿಮ್ಯಾಂಡ್ಸ್ ಮುಗಿದ ಮೇಲೆ ತೆಗೆದುಕೊಳ್ಳೋಣ.

ಶ್ರೀ ಸಿದ್ದರಾಮಯ್ಯ : ಆಮೇಲೆ Ministerಗಳು ಬರಲಿ. ಡಿಮ್ಯಾಂಡ್ಸ್ ಇಲ್ಲ ಎಂದು ಅವರು ಈಗ ಇಲ್ಲ. ನಮ್ಮದೇನೂ ತಕರಾರು ಇಲ್ಲ. ಉತ್ತರ ಕೊಡಲಿ. ನಾವು ಏನೂ ಬೇಡ ಎಂದು ಹೇಳಿಲ್ಲ. Co-operate ಮಾಡುವುದಿಲ್ಲ ಎಂದು ಹೇಳಿದ್ದೇವೆಯೇ? ಡಿಮ್ಯಾಂಡ್ ಬಗ್ಗೆ ಚರ್ಚೆ ಮಾಡುವುದಿಲ್ಲ ಎಂದು ಹೇಳಿದ್ದೇವೆಯೇ?

(ಗೊಂದಲ)

ಅಧ್ಯಕ್ಷರು : ನೀವು Start ಮಾಡಿ. ಇಲ್ಲಿ ಏನಾಗುತ್ತದೆ ಎಂದರೆ time limitation ಇದೆ. ನೀವು ಮಾತನಾಡಿ. ಇನ್ನೊಬ್ಬರು ಯಾರಾದರೂ ಮಾತನಾಡಿ. ಎಲ್ಲರಿಗೂ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ. ಈಗ ಮಾನ್ಯ ರೇವಣ್ಣನವರು ಮಾತನಾಡಲಿ. ಲಿಸ್ಟ್ ಪ್ರಕಾರ ಎಲ್ಲರಿಗೂ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ. time limitation ಇದೆ. ನಾವು ಒಂದು time limit ಹಾಕಿಕೊಂಡಿದ್ದೇವೆ. ನೀವು ಮಾತನಾಡಿ. ಆದರೆ, time limitation ಇದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾನು ಒಬ್ಬನೇ ಮಾತನಾಡಿದರೆ ಹೇಗೆ? ಎಲ್ಲರೂ ಮಾತನಾಡಬೇಕಲ್ಲವೇ? ನಮ್ಮ ಮನವಿಯನ್ನು ನೀವು ದಯಮಾಡಿ ಪುರಸ್ಕರಿಸಬೇಕು. ಅವರಿಗೆ ಬೇಕಾದರೆ ನಾಳೆ ಉತ್ತರ ಕೊಡಿ ಎಂದು ಹೇಳಿ.

(ಗೊಂದಲ)

ಅಧ್ಯಕ್ಷರು : ರೂಲ್ 69, ನಿಲುವಳಿ ಸೂಚನೆ ಎಲ್ಲವೂ ಸಿಕ್ಕಿವೆ. ಅಲ್ಲಿ time limitation ಇದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: 31ನೇ ತಾರೀಖಿನವರೆಗೂ ಕೂಡ Appropriation Bill pass ಮಾಡುವುದಕ್ಕೆ ಅವಕಾಶವಿದೆ.

(ಗೊಂದಲ)

ಅಧ್ಯಕ್ಷರು : 29ನೇ ತಾರೀಖಿನೊಳಗೆ ಅಧಿವೇಶನ ಮುಗಿಸಬೇಕೆಂದು ನಿರ್ಧಾರವಾಗಿದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಇವತ್ತೇ ಎಲ್ಲಾ ಮುಗಿಸಬೇಕು ಎಂದು ಏನೂ ಇಲ್ಲ. 31ನೇ ತಾರೀಖಿನವರೆಗೂ ಕೂಡ Appropriation Bill pass ಮಾಡಬಹುದು. Why they are very particular to reply today only? ನಾಳೆ ಕೊಡಲಿ. ನೀವು ಮಾತನಾಡಿ.

(ಗೊಂದಲ)

ಶ್ರೀ ಎಸ್.ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಪ್ರತಿಪಕ್ಷದ ನಾಯಕರು ಅಧಿವೇಶನದ ಮಹತ್ವ ಇರುವ ವಿಚಾರಗಳು, remarks ಬಗ್ಗೆ ಮಾತನಾಡಿದ್ದಾರೆ. ನಾನು ಪ್ರತಿ ಪಕ್ಷದ ನಾಯಕರಿಗೆ ಒಂದು ಪ್ರಶ್ನೆಯನ್ನು ಕೇಳುತ್ತೇನೆ. 9ನೇ ತಾರೀಖಿನಿಂದ ಈ ಅಧಿವೇಶನ ಪ್ರಾರಂಭವಾಯಿತು. 9ನೇ ತಾರೀಖು ಹಾಗೂ ಮಧ್ಯ ಒಂದು ಸಲ ಅಂದರೆ 20ನೇ ತಾರೀಖಿನಂದು ಎರಡು ಸಲ B.A.C. meeting ಆಗಿದೆ. B.A.C. ಯಲ್ಲಿ ಚರ್ಚೆ ಮಾಡಿದ್ದೇವೆ. ಸರ್ಕಾರದ ಕಾರಣದಿಂದ, ಸರ್ಕಾರದ ನಡವಳಿಕೆಯ ಕಾರಣದಿಂದ ಈ ಡಿಮ್ಯಾಂಡ್ಸ್ ಬಗ್ಗೆ ಇಷ್ಟು ದಿನ ಚರ್ಚೆಯಾಗದೇ ಇರುವುದಕ್ಕೆ ನಾವು ಕಾರಣಕರ್ತರೇ? ನಾವು ಬಹಳ ಗಂಭೀರವಾಗಿ ಯೋಚನೆ ಮಾಡೋಣ.

(ಗೊಂದಲ)

ಶ್ರೀ ಬಿ.ರಮಾನಾಥ್ ರೈ : ನೀವು ತಿಳಿದುಕೊಳ್ಳಬೇಕು. ಪರಸ್ಪರ ಸಹಕಾರ ಇರಬೇಕು. ಯಾರೋ ಒಬ್ಬರು ಕಾರಣ ಎಂದು ಹೇಳುವುದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು : ಅವರು ಏನು ಹೇಳುತ್ತಾರೆ ಎಂದು ಮೊದಲು ಕೇಳಿ. ಆಮೇಲೆ ನೀವು ಮಾತನಾಡಿ. ಮಾನ್ಯ ರಮಾನಾಥ್ ರೈರವರೇ ಕುಳಿತುಕೊಳ್ಳಿ. ಅವರು ಏನು ಹೇಳುತ್ತಾರೆ ಎಂದು ಕೇಳಿ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : Rule 60, Rule 69 ರ ಬಗ್ಗೆ ಮಹತ್ತರವಾದ ವಿಚಾರಗಳ ಬಗ್ಗೆ ಚರ್ಚೆಯಾಗಿದೆ. ಇಲ್ಲಿ ಸಮಸ್ಯೆ ಏನು ಎಂದು ನನಗನಿಸುವುದು ಎಂದರೆ ನಾವು ಯಾರೂ ಕೂಡ ಕಾಲದ ಬಗ್ಗೆ ಗಮನ ಕೊಡುವುದಿಲ್ಲ. ಯಾವ ವಿಷಯದ ಬಗ್ಗೆ ಎಷ್ಟು ಹೊತ್ತು ಮಾತನಾಡಬೇಕು ಎಂಬ ನಮ್ಮದೇ ಆದಂಥ ನಿಯಂತ್ರಣವಿಲ್ಲದೇ ಇರುವುದರಿಂದ ಅಲ್ಪಕಾಲಾವಧಿ ಚರ್ಚೆಯೂ ಕೂಡ ದೀರ್ಘ ಕಾಲಾವಧಿ ಚರ್ಚೆ. ದೀರ್ಘ ಕಾಲಾವಧಿ ಚರ್ಚೆನೂ ಕೂಡ ಎರಡು ದಿವಸಗಳ ಚರ್ಚೆಯಾಗುತ್ತಿದೆ. ನಾವು 9ನೇ ತಾರೀಖಿನಂದು ಏನು ತೀರ್ಮಾನ ಮಾಡಿದ್ದೆವು, ಅದರ ಪ್ರಕಾರ ನಾವು ಸ್ವಲ್ಪ ಶಿಸ್ತನ್ನು ಕಾಪಾಡಿಕೊಳ್ಳಬೇಕು. ನೀವು ಹೇಳಿದ್ದು ನಿಜ. ಅವಧಿ ಕಡಿಮೆ. ಅವಧಿ ಜಾಸ್ತಿಯಾಗಬೇಕಾಗಿತ್ತು. ಕನಿಷ್ಠ ನೂರು ದಿವಸ ಕರೆಯಬೇಕಾಗಿತ್ತು. ಇದೆಲ್ಲವನ್ನೂ ನಾವು ಒಪ್ಪಿಕೊಳ್ಳುತ್ತೇವೆ. ಒಪ್ಪಿಕೊಂಡು ನಾವು ಏನು ಮಾಡಬೇಕೆಂದು ಕೂಡ ತೀರ್ಮಾನ ಮಾಡಿದ್ದೇವೆ. ಆದರೆ, 9ನೇ ತಾರೀಖಿನ BAC ಯಲ್ಲಿ ಒಪ್ಪಿಕೊಂಡ ಮೇಲೆ ಒಂದು ಸ್ವಲ್ಪವಾದರೂ ಕೂಡ ನಮಗೆ ಸಂಯಮ, ನಿಯಂತ್ರಣ ಇದ್ದಿದ್ದರೆ, ನಾವು ದಿವಸ ತಂದಿರುವುದನ್ನು welcome ಮಾಡಿ ಚರ್ಚೆಯನ್ನೂ ಮಾಡಿದ್ದೇವೆ. Rule 60 ಹಾಗೂ Rule 69ಕ್ಕೆ ಸಂಬಂಧ ಪಟ್ಟಂತೆ ಅದರ ಸ್ವರೂಪ ಯಾವ ರೀತಿ ಬದಲಾಯಿಸಬಹುದು, ಅದು ಪೀಠಕ್ಕೆ ಸಂಬಂಧಪಟ್ಟಿದ್ದು. ನಿನ್ನೆ ಸನ್ಮಾನ್ಯ ಮುನಿಯಪ್ಪನವರು opening batsman ಆಗಿ ಮಾತನಾಡುವುದಕ್ಕೆ ಪ್ರಾರಂಭ ಮಾಡಿದರು. ಅಲ್ಲಿಯವರೆಗೂ ಡಿಮ್ಯಾಂಡ್ಸ್ ಪ್ರತಿ ದಿನ ಬರುತ್ತಿದೆ. ಪ್ರತಿ ದಿವಸ ಮಂಡಿಸಿದ್ದೇವೆ. ಚರ್ಚೆ ಮಾಡುವುದಕ್ಕೆ ಸದನದಲ್ಲಿ ವ್ಯವಧಾನ, ಆಸಕ್ತಿ, ಸಮಯ ಇಲ್ಲದೇ ಕೊನೆಯ ದಿವಸ ಹೀಗೆ ಮೇಲೆ ಬಿದ್ದರೆ ಏನು ಉಪಯೋಗವಾಗುತ್ತದೆ? 31ನೇ ತಾರೀಖಿನೊಳಗೆ ಮಾಡಬೇಕಾಗಿತ್ತು ಎಂದು ಹೇಳುತ್ತೀರಿ. ಅದು ನಿಜ. ಆದರೆ, ನಾನು ಅಧ್ಯಕ್ಷರಿಗೆ ಹೇಳುವುದು ಏನೆಂದರೆ, ಇವತ್ತು ಸಮಯದ ಪರಿಸ್ಥಿತಿ ಗೊತ್ತಿದೆ. ವಿಷಯಗಳನ್ನು ಮುಗಿಸಬೇಕು. ಉದಾಹರಣೆಗೆ ಕೃಷಿ ಮತ್ತು ತೋಟಗಾರಿಕೆಯ ವಿಧೇಯಕ. ಅದನ್ನು ಹಿಂದೆ ಬೆಳಗಾಂನಲ್ಲಿ ನಾವು introduce ಮಾಡಿದೆವು. ಆಗಲಿಲ್ಲ. ಈಗ ಇದು approve ಆಗಬೇಕು. Approve ಆಗದೇ ಇದ್ದರೆ ಏನು ಪರಿಸ್ಥಿತಿ ಆಗಬಹುದು. ವಿಧೇಯಕಗಳು

approve ಆಗಬೇಕು. ನಾನು ಈಗಲೇ ಮಾಡಿ ಎಂದು ಹೇಳುತ್ತಿಲ್ಲ. ಅದಕ್ಕೋಸ್ಕರ ಚರ್ಚೆ ಮಾಡಿ.

(ಗೊಂದಲ)

ಶ್ರೀ ಬಿ.ರಮಾನಾಥ್ ರೈ : ತಪ್ಪುಗಳು ಏನೂ ಇಲ್ಲ. ಅಧಿಕಾರ ಕೊಡುವುದಕ್ಕೆ ಇದು ಒಂದು ಲಿಸ್ಟ್ ಮಾಡಿ.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ : ಇರುವ ಸಮಯವನ್ನು ಯಾವ ರೀತಿ ತೃಪ್ತವಾಗಿ ಮಾಡಬೇಕು. See, it is not the quantity of time. It is the quality of the time. ನಾವು ಯಾವ ರೀತಿ ಉಪಯೋಗಿಸುತ್ತೇವೆ ಎನ್ನುವುದು ಬಹಳ ಮುಖ್ಯ ಇದನ್ನು ಗಮನದಲ್ಲಿಟ್ಟುಕೊಂಡು ಚರ್ಚೆ ಮಾಡಬೇಕು.

(ಗೊಂದಲ)

ಶ್ರೀ ಎಸ್.ಸುರೇಶ್‌ಕುಮಾರ್ : ಚರ್ಚೆ ಆದಮೇಲಾದರೂ ಕೂಡ ವಿಧೇಯಕವನ್ನು ಮಂಜೂರು ಮಾಡುವುದಕ್ಕೆ ಸಹಕಾರ ಕೊಡಿ. ಅವರು ಸಹಕಾರ ಎಂದು ಒಂದು ಪದವನ್ನು ಹೇಳಿದರು. ಅದಕ್ಕೆ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಕಾನೂನು ಮಂತ್ರಿಗಳು ಹೇಳಿದ ಮೇಲೆ ನೀವು ಏನು ಹೇಳುವುದು.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ : ನೀವು ಮಾತನಾಡುವುದಕ್ಕೆ ಬಿಡುವುದಿಲ್ಲವೆಂದರೆ ಹೇಗೆ? ಮಾನ್ಯ ಅಧ್ಯಕ್ಷರೆ, ಬೆಳಗಾಂ ಅಧಿವೇಶನದಲ್ಲಿ, ಅದಾದ ನಂತರ ಬೆಂಗಳೂರು ಅಧಿವೇಶನದಲ್ಲಿ ಎರಡು ವಿಶ್ವವಿದ್ಯಾನಿಲಯಗಳು ಮತ್ತು ಕಳೆದ 6 ದಿವಸದ ಹಿಂದೆ ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಿದ್ದನ್ನು ನಾನು ಇಲ್ಲಿ introduce ಮಾಡಿದ್ದೇನೆ. ಇಲ್ಲಿ ಚರ್ಚೆ ಮಾಡಿ, ಇದು ಮತ್ತೆ ಮೇಲ್ಮನೆಗೆ ಹೋಗಬೇಕು. ಮೇಲ್ಮನೆಗೆ ಹೋಗಿ ಅಲ್ಲಿ ಪಾಸ್ ಆಗಬೇಕು. ಅದು ತಮಗೆ ಗೊತ್ತಿದೆ ಪದ್ಧತಿ. ಮತ್ತೆ ಅದನ್ನು ಬಿಟ್ಟು ಮೇಲ್ಮನೆಯಲ್ಲಿ ಮೂರು calling attentions ಇವೆ. ಆ ಹಿನ್ನೆಲೆಯಲ್ಲಿ ನಮಗೆ ಹೇಳಿ ಕಳುಹಿಸಿದರು. ಬಿಲ್ ಬರುತ್ತಿದೆ ತಾವು ದಯವಿಟ್ಟು ಬರಬೇಕು ಎಂದು ಹೇಳಿ ಕಳುಹಿಸಿದರು. ಬಿಲ್‌ಗಳು ಆದಮೇಲೆ ಬೇಡಿಕೆಗಳ ಮೇಲೆ ಚರ್ಚೆಯನ್ನು

ಶುರು ಮಾಡಿ. ಈಗ ಬಿಲ್‌ಗಳನ್ನು ಶುರು ಮಾಡಲಾಗಿದೆ. ಬಿಲ್‌ಗಳು ಆದ ಮೇಲೆ ಬೇಡಿಕೆಗಳ ಮೇಲಿನ ಚರ್ಚೆಯನ್ನು ಮುಂದುವರೆಸಿ. ಆ ನಂತರ ಮಾನ್ಯ ಮುಖ್ಯಮಂತ್ರಿಗಳು 3 ಗಂಟೆಗೆ ಉತ್ತರ ಕೊಡುತ್ತೇನೆ ಎಂದು ಹೇಳಿದ್ದಾರೆ. ಆ ಸಂದರ್ಭದಲ್ಲಿ ಉತ್ತರ ಕೊಡಲಿ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ : ವಾರಗಟ್ಟಲೇ ಇದನ್ನೇ ಚರ್ಚೆ ಮಾಡುತ್ತಿದ್ದರೆ ಹೇಗೆ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ದಯಮಾಡಿ, ಮಾನ್ಯ ಸುರೇಶ್ ಕುಮಾರ್‌ರವರು ಹೇಳುತ್ತಾರೆ, 9ನೇ ತಾರೀಖಿನಿಂದ ಇವತ್ತಿನವರೆಗೆ ಬಹಳಷ್ಟು ದಿನಗಳು ಸಿಕ್ಕಿದ್ದವು. ನೀವು ಡಿಮ್ಯಾಂಡ್ಸ್ ಮೇಲೆ ಚರ್ಚೆ ಮಾಡಬೇಕಾಗಿತ್ತು. ನೀವು ಬಳಸಿಕೊಳ್ಳಲಿಲ್ಲ. ಮತ್ತೆ quality, quantity ಎಲ್ಲಾ ಮಾತನಾಡಿದ್ದರೆ. ಆ quality, quantity ನಾವು ಹೇಗೆ ಮಾತನಾಡಬೇಕು ಎಂಬುದು ನಮಗೆ ಗೊತ್ತಿದೆ. ಅದನ್ನು ನಿಯಂತ್ರಣ ಮಾಡುವವರು ಅವರು. quality ಇದೆಯೋ, quantity ಇದೆಯೋ ಎನ್ನುವುದನ್ನು ನೀವು ಹೇಳುವುದಕ್ಕೆ ಬರುವುದಿಲ್ಲ. You have no right. quantity quality ಎಂದು ಹೇಳುವುದಕ್ಕೆ ಬರುವುದಿಲ್ಲ. ನಾವು ಒಂದು ಮಹತ್ತರವಾದಂಥ ವಿಚಾರವನ್ನು ತೆಗೆದುಕೊಂಡು ಬಂದಾಗ ಅದಕ್ಕೆ ಅನುಮತಿ ಕೊಡುವುದು, ಅದಕ್ಕೆ ನಮಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದು, ಅದನ್ನು ನಿಯಂತ್ರಣ ಮಾಡುವುದು, ಎಷ್ಟು ಕಾಲದವರೆಗೆ ಮಾಡಬೇಕು ಎನ್ನುವುದನ್ನು Speaker ಅವರು ಮಾಡುತ್ತಾರೆ. ಅದು Speaker ಗೆ ಬಿಟ್ಟಿದ್ದು.

9ನೇ ತಾರೀಖಿನ Business Advisory Committee ಯಲ್ಲಿಯೇ ಆಗಸ್ಟ್ ತಿಂಗಳಿನಲ್ಲಿಯೂ ಹತ್ತು ದಿನಗಳ ಕಾಲ ಅಧಿವೇಶನವನ್ನು ಮಾಡಬೇಕೆಂದು ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಆವತ್ತು ನಾವೇನು ಒಪ್ಪಿಕೊಂಡಿರಲಿಲ್ಲ. ನೀವು ಹೇಳಿದಿರಿ ನಾವು ಎದ್ದು ಬಂದೆವು ಅಷ್ಟೆ. ನಾವು protest ಮಾಡಿ ಎದ್ದು ಬಂದೆವು. ನಾವು ಒಪ್ಪಲಿಲ್ಲ. ಬಿಲ್‌ಗಳನ್ನು ಬೆಳಗಾಂ ಅಧಿವೇಶನದಲ್ಲಿ ತಂದಿದ್ದು, ಅದು ಆಗಲಿಲ್ಲ. ಈಗಲೂ ಬಿಲ್‌ಗಳನ್ನು ಆಗಸ್ಟ್ ತಿಂಗಳಿನಲ್ಲಿ ತೆಗೆದುಕೊಳ್ಳಿ. Appropriation bill ಮಾಡುವುದಕ್ಕೆ 31ನೇ ತಾರೀಖಿನವರೆಗೂ ಅವಕಾಶವಿದೆ. ನಾವು ಕುಳಿತುಕೊಳ್ಳಲು ತಯಾರಿದ್ದೇವೆ.

ನಾವು ಕುಳಿತುಕೊಳ್ಳಲಿಲ್ಲವೆಂದರೆ ಕಷ್ಟ. We are ready to sit, ರಾತ್ರಿ 12 ಗಂಟೆಯವರೆಗೂ ಕುಳಿತುಕೊಳ್ಳುತ್ತೇವೆ. ಆಗಸ್ಟ್ ತಿಂಗಳಿನಲ್ಲಿಯೂ ಕುಳಿತುಕೊಳ್ಳುತ್ತೇವೆ. Bring all the Bills in the month of August. Why you are in a hurry? ಇವತ್ತೇ ಮುಗಿಯಬೇಕೆಂದು ಏನಿದೆ? ನಿಮಗೆ ಇವತ್ತೇ ಪಾಸ್ ಮಾಡಿಕೊಂಡು ನಾಳೆ ಸಂಬಳ ಕೊಡುವುದಕ್ಕೆ ತೊಂದರೆ ಬಂದಿಲ್ಲ. ಅದು ಬರುವುದು ಆಗಸ್ಟ್ 1ನೇ ತಾರೀಖಿನಿಂದ. ಬಹಳ ಆತುರಾತುರವಾಗಿ ಮಾಡುವುದು ಏನಿದೆ? ನಮಗಿರತಕ್ಕಂಥ ಹಕ್ಕುಗಳನ್ನು ಕಿತ್ತುಕೊಳ್ಳುವಂಥದ್ದು ಸರಿಯಿಲ್ಲ. ಬೇಡಿಕೆಗಳು ಇಟ್ಟು, 60 ಸಾವಿರ ಕೋಟಿ ರೂಪಾಯಿಯ ಬೇಡಿಕೆಗಳು, ಚರ್ಚೆಯಿಲ್ಲದೆ ಹಾಗೆಯೇ ನಾವು ಉತ್ತರ ಕೊಟ್ಟುಬಿಟ್ಟು ಹೋಗುತ್ತೇವೆಂದರೆ, ಮಾನ್ಯ ಮುಖ್ಯಮಂತ್ರಿಗಳು ಯಾರಿಗೆ ಉತ್ತರ ಕೊಡುತ್ತಾರೆ? ಮಾನ್ಯ ಮುಖ್ಯಮಂತ್ರಿಗಳು 3 ಗಂಟೆಗೆ ಉತ್ತರವನ್ನು ಕೊಡಬೇಕೆಂದು ಹಠ ಮಾಡುತ್ತಾರಲ್ಲಾ ಈ ಧೋರಣೆ ಇದೆಯಲ್ಲಾ, it is not correct. ನಮಗೆಲ್ಲಾ ಬೇಡಿಕೆಗಳ ಮೇಲೆ ಮಾತನಾಡಲು ಅವಕಾಶ ಕೊಡಬೇಕು. ಈಗ ಮಾನ್ಯ ರೋಷನ್‌ಬೇಗ್ ಅವರು ಮಾತನಾಡುತ್ತಾರೆ. ನಾನೂ ಕೂಡ ಅವರದ್ದು ಆದ ಮೇಲೆ ಮಾತನಾಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ, Business Advisory Committeeಯಲ್ಲಿ ಬಾರಿ ಯಾವ ಯಾವ ಕಾಲದಲ್ಲಿ ಎಷ್ಟು ದಿವಸಗಳ ಕಾಲ ಅಧಿವೇಶನ ನಡೆಯಬೇಕು, ಏನು ಮಾಡಬೇಕೆಂದು ಚರ್ಚೆಗಳಾಗಿದೆ. ತಮ್ಮ ಮುಂದೆಯೇ ಕುಳಿತಾಗ 28ಕ್ಕೆ ನಾವು ಉತ್ತರ ಕೊಡಬೇಕಾಗಿತ್ತು. ದಯಮಾಡಿ, ಪ್ರತಿಪಕ್ಷದ ನಾಯಕರು, ಸದಸ್ಯರು, ಯಾರು ಮಾತನಾಡುತ್ತಾರೆ, ಮಾತನಾಡಲಿ. ಯಾರಿಗೂ ಅಡ್ಡಿ ಮಾಡಬೇಕೆಂದು ನಮ್ಮ ಉದ್ದೇಶವಿಲ್ಲ ಅಥವಾ ಏನೂ ಚರ್ಚೆಯಾಗದೇ ಬೇಡಿಕೆಗಳ ಮೇಲೆ ಅನುಮತಿ ಕೊಡಿ ಎಂದು ನಾವೇನು ಕೇಳಿಲ್ಲ. ತಾವೇ ಹೇಳಿದಂತೆ ಯಾವುದಕ್ಕೆ ಹೆಚ್ಚು ಮಹತ್ವ ಕೊಡಬೇಕೆನ್ನುವಂಥದ್ದು ನಿಮಗೆ ಬಿಟ್ಟಿದ್ದು. ನಾವು ಯಾವುದೇ ಕಾರಣಕ್ಕೂ ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ರಾಜ್ಯದ ಜನ ಯಾವುದು ಸರಿ, ಯಾವುದು ತಪ್ಪು ಎನ್ನುವುದನ್ನು ಯೋಚನೆ ಮಾಡಲಿ. ನಾನು ಪ್ರತಿಪಕ್ಷದ ನಾಯಕರಿಗೆ ಮತ್ತು ಸದಸ್ಯರಿಗೆ ವಿನಂತಿ ಮಾಡುವುದೇನೆಂದರೆ ಈ ಬಿಲ್ ಇಲ್ಲಿ ಉತ್ತರ ಕೊಟ್ಟು ಪಾಸಾದ ಮೇಲೆ ಆ ಮನೆಗೆ ಹೋಗಿ ಬರಬೇಕು. ಆ ಸಮಯದ ಮಧ್ಯೆ ರಾತ್ರಿ 12 ಗಂಟೆಯಾದರೂ

ಕುಳಿತುಕೊಳ್ಳೋಣ. ದಯಮಾಡಿ ಅವರು ಮಾತನಾಡಲಿ, 3 ಗಂಟೆಗೆ ನನಗೆ ಉತ್ತರ ಕೊಡಲು ತಾವು ಅವಕಾಶ ಮಾಡಿಕೊಡಬೇಕು. ಏನು ಒಪ್ಪಿಗೆಯಾಗಿದೆ ಆ ರೀತಿ ಅವಕಾಶವಾಗಬೇಕು. ನಾಳೆಯಿಂದ ಕಾರ್ಯಕ್ರಮಗಳು ನಿಶ್ಚಯ ವಾಗಿದೆ, ನಾವು ನಿರ್ಧಾರ ಮಾಡಿರುವಂತೆ ರಾಷ್ಟ್ರೀಯ ಮಟ್ಟದ ಬೇರೆ ಕಾರ್ಯಕ್ರಮಗಳು ನಿಶ್ಚಯವಾಗಿ ರುವುದರಿಂದ

ಶ್ರೀ ಸಿದ್ದರಾಮಯ್ಯ : ನಾವು ಒಪ್ಪಿರಲಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ಒಂದು ನಿಮಿಷ, ನೀವು ಮೊಂಡುವಾದ ಮಾಡಿದರೆ, ನಾವೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಮೊಂಡುವಾದವನ್ನು ಮಾಡುತ್ತಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ಇಲ್ಲಿ ಚರ್ಚೆಯಾದಂತೆ ನಡೆದುಕೊಳ್ಳ ಬೇಕಾಗುತ್ತದೆ. ನಿಮ್ಮ ಕೊಠಡಿಯಲ್ಲಿ ಕುಳಿತು Business Advisory Committee ಯಲ್ಲಿ ಒಂದು ಒಪ್ಪಂದಕ್ಕೆ ಬಂದಿದ್ದೆವು. ಅದೇ ರೀತಿ ನೀವು 3 ಗಂಟೆಗೆ ಉತ್ತರ ಕೊಡಲು ನನಗೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡುತ್ತೇನೆ. ಅಲ್ಲಿಯವರೆಗೆ ಯಾರ್‍ಯಾರು ಪ್ರಮುಖರು ಮಾತನಾಡುತ್ತಾರೆ ಮಾತನಾಡಲಿ. ನನ್ನದೇನು ಅಭ್ಯಂತರವಿಲ್ಲ. ತಾವು ಸಮಯವನ್ನು ನಿಗದಿ ಮಾಡಬೇಕು. ಸತ್ಸಂಪ್ರದಾಯಗಳಿವೆ. ಲೋಕಸಭೆಯಲ್ಲೂ ಸಹಾ ಯಾವ್ಯಾವ ವಿಷಯದ ಬಗ್ಗೆ, ಯಾರ್‍ಯಾರು ಎಷ್ಟೆಷ್ಟು ಹೊತ್ತು ಮಾತನಾಡಬೇಕೆಂದು ವ್ಯವಸ್ಥೆಗಳು ಇದೆ. ಇಲ್ಲಿ ಯಾವ್ಯಾವುದೋ ವಿಷಯಗಳನ್ನು ತೆಗೆದುಕೊಂಡರೆ, ಅದು ಅವರಿಗೆ ಸರಿಯಾಗಿ ಕಾಣಬಹುದು. ನಮ್ಮದೇನು ವಿರೋಧವಿಲ್ಲ. ಆದರೆ, ನಾವು ರಾತ್ರಿ 8 ಗಂಟೆ, 9 ಗಂಟೆಯವರೆಗೂ ಕುಳಿತುಕೊಳ್ಳಲು ಸಿದ್ಧರಿದ್ದೇವೆ. ನಾವೇನು ಇಲ್ಲ ಎಂದು ಹೇಳಿಲ್ಲ. ನಿನ್ನೆ ರಾತ್ರಿ 12 ಗಂಟೆಯವರೆಗೂ ಕುಳಿತುಕೊಂಡು ಬಿಲ್ ರೆಡಿ ಮಾಡಿಕೊಂಡಿದ್ದೇವೆ, ಪಾರ್ಲಿಮೆಂಟ್‌ನಲ್ಲೂ ಈ ರೀತಿ ಕುಳಿತಿಲ್ಲ. ಇಲ್ಲಿ ಕುಳಿತಿರುವ ಸದಸ್ಯರು ನಾವ್ಯಾರು ಕುಳಿತುಕೊಳ್ಳಲು ಹಿಂದು ಮುಂದು ನೋಡುತ್ತಿಲ್ಲ. ಆದುದರಿಂದ ಮಾನ್ಯ ಅಧ್ಯಕ್ಷರೆ, ಊಟ ಆದ ತಕ್ಷಣ ನಾನು reply ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಿಮ್ಮಲ್ಲಿ ವಿನಂತಿ ಮಾಡುತ್ತೇನೆ. ನಮಗೆ ಬೇರೆ ದಾರಿಯಿಲ್ಲ. ದಯಮಾಡಿ ತಾವು ಅವಕಾಶ ಮಾಡಿಕೊಡಬೇಕು. ಇದನ್ನೇ ಚರ್ಚೆ ಮಾಡಿ ಮುಂದುವರೆಯುವಂಥದ್ದು ಸರಿಯಲ್ಲ. ನೀವು ನಿಮ್ಮ ತೀರ್ಪನ್ನು ನೀಡಬೇಕು, ಸಭಾಧ್ಯಕ್ಷರ ಹತ್ತಿರ ಏನು ಮಾತುಕತೆಯಾಗಿದೆ

ಅದರಂತೆ ಕಾರ್ಯಕಲಾಪಗಳು ನಡೆಯುವಂತೆ ಅವಕಾಶ ಮಾಡಿಕೊಡಬೇಕು. ನನ್ನ ಉತ್ತರ ಆದಮೇಲೆ ಬಿಲ್‌ಗಳನ್ನು ತೆಗೆದುಕೊಳ್ಳುವುದಕ್ಕೆ ದಯಮಾಡಿ ಅವಕಾಶ ಮಾಡಿಕೊಡಿ. ಬೇಕಾದರೆ, ರಾತ್ರಿ 12 ಗಂಟೆಯವರೆಗೂ ಕುಳಿತುಕೊಳ್ಳೋಣ.

ಶ್ರೀ ಸಿದ್ದರಾಮಯ್ಯ : ನಾವು ಮಾತನಾಡಿದ ಮೇಲೆ ತಾವು ಮುಖ್ಯಮಂತ್ರಿಗಳು ಉತ್ತರವನ್ನು ಕೊಡಿ. ರಾತ್ರಿ ಎಷ್ಟೊತ್ತಾದರೂ ಉತ್ತರ ಕೊಡಿ. ಆದರೆ, ನಾವು ಮಾತನಾಡದೇ 3 ಗಂಟೆಗೆ ಉತ್ತರ ಕೊಡಬೇಕೆನ್ನುವ ಹಠ ಸರಿಯಿಲ್ಲ. 20ನೇ ತಾರೀಖು ನಾವು Business Advisory Committee ಸೇರಿದಾಗ, ಅವರು 29ನೇ ತಾರೀಖಿಗೆ ಅಧಿವೇಶನ ಮುಗಿಸಬೇಕೆಂದು ಹೇಳಿದ್ದರು. ಮಧ್ಯದಲ್ಲಿ ಶ್ರೀಮತಿ ಗಂಗೂಬಾಯಿ ಹಾನಗಲ್ ಅವರು ನಮ್ಮನ್ನು ಅಗಲಿದರು, ಆವತ್ತು ಒಂದು ದಿನ ಹೋಯಿತು. ಅದಕ್ಕೆ 29ನೇ ತಾರೀಖಿನ ಬದಲಾಗಿ 30ನೇ ತಾರೀಖಿನವರೆಗೆ ಮಾಡಬೇಕೆಂದು ನಾನು ನಿಮ್ಮಲ್ಲಿ request ಮಾಡಿದ್ದೆ. ಆವತ್ತು ಮಾನ್ಯ ಮುಖ್ಯಮಂತ್ರಿಗಳು ಇದ್ದರು. ಕಾನೂನು ಮಂತ್ರಿಗಳೂ ಇದ್ದರು. ಬೇರೆಯವರೂ ಇದ್ದರು. ನಾವೆಲ್ಲಾ ಕೂಡ ಇದ್ದೆವು. 30ನೇ ತಾರೀಖಿನವರೆಗೆ ಒಂದು ದಿನ ಮುಂದಕ್ಕೆ ಹಾಕಬೇಕೆಂದು ಹೇಳಿದ್ದೆ. ಒಂದು ವೇಳೆ ಅವರ ಬಿಲ್‌ಗಳೆಲ್ಲವೂ ಬಹಳ ಚರ್ಚೆ ಮಾಡಬೇಕೆಂದರೆ, appropriation bill ಆದ ಮೇಲೆ, ಒಂದು ದಿನ ಅಥವಾ ಎರಡು ದಿನ ನಾವೆಲ್ಲಾ ಕುಳಿತುಕೊಂಡು ಮಾಡೋಣ ಅಥವಾ ಸೆಪ್ಟೆಂಬರ್‌ನಲ್ಲಿ ಅಧಿವೇಶನವನ್ನು ಕರೆಯುವುದಾದರೆ ಆಗ ಬಿಲ್‌ಗಳನ್ನು ತೆಗೆದುಕೊಂಡು ಬನ್ನಿ ಮಾಡೋಣ. ಈಗಾಗಲೇ ಅನೇಕ ಬಿಲ್‌ಗಳು ಪಾಸಾಗಿವೆ. ಆದರೆ, ಮಾನ್ಯ ಮುಖ್ಯಮಂತ್ರಿಗಳು ಹಠ ಮಾಡತಕ್ಕಂಥದ್ದು ಸರಿಯಲ್ಲ. ನೀವು ಹಿಂದೆಯೂ ಕೂಡ ಇಲ್ಲಿ ವಿರೋಧ ಪಕ್ಷದ ನಾಯಕರಾಗಿರುವಾಗ ಅನೇಕ ಸಲ . . . .

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಒಣ ಪ್ರತಿಷ್ಠೆ ಮಾಡುತ್ತಿರುವುದು ವಿರೋಧ ಪಕ್ಷದವರೇ ಹೊರತು, ನಾವು ಯಾವುದೇ ಒಣ ಪ್ರತಿಷ್ಠೆ ಮಾಡುತ್ತಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾವು ಅಧಿಕಾರದಲ್ಲಿದ್ದಾಗ, ಮೊದಲು ವಿರೋಧ ಪಕ್ಷದ ನಾಯಕರಿಗೆ ಮಾತನಾಡಲು ಅವಕಾಶ ಕೊಟ್ಟು ಆಮೇಲೆ ನಾವು ಉತ್ತರ ಕೊಟ್ಟಿರತಕ್ಕಂಥದ್ದು, ಅವರು ಎರಡು ಗಂಟೆ ಮಾತನಾಡಲಿ, ಮೂರು ಗಂಟೆ ಮಾತನಾಡಲಿ, ಅವರಿಗೆ ಅವಕಾಶ ಕೊಟ್ಟು ನಂತರ ನಾವು ಮಾತನಾಡುತ್ತಿದ್ದೆವು. ಈ ತರಹ pull down ಮಾಡತಕ್ಕಂಥ ಕೆಲಸವನ್ನು ಯಾವುದೇ ಸರ್ಕಾರ ಮಾಡಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ಕಾನೂನು ಸಚಿವರು ಮತ್ತು ಸಭಾನಾಯಕರು 9ನೇ ತಾರೀಖು Business Advisory Committee ಯಲ್ಲಿ ನಡೆದಂಥ ವಿಷಯವನ್ನು ತಮಗೆ ಹೇಳಬೇಕಾಗುತ್ತದೆ. ಯಾವುದಾದರೂ important bills ಇದ್ದರೆ ಮಾತ್ರ ಮಾಡೋಣ, ಬಾಕಿ ಇರುವ ಬಿಲ್‌ಗಳನ್ನು ಸೆಪ್ಟೆಂಬರ್‌ನಲ್ಲಿ ಮಾಡೋಣವೆಂದು ತಮ್ಮ ಸಮ್ಮುಖದಲ್ಲೇ ತೀರ್ಮಾನವಾಗಿದೆ. ಅದರ ಜೊತೆಗೆ ನಾನು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಇಬ್ಬರೂ ಸಹ ಹೇಳಿದ್ದೇವೆ, ಕಳೆದ ಸಾರಿ 2007-08ರಲ್ಲಿ 57 ದಿನ ಅಧಿವೇಶನ ನಡೆದಿದೆ. ಈ ಬಾರಿ ಕೇವಲ 14 ದಿನ ನಡೆದಿದೆ. ಮೊನ್ನೆ ಮಾನ್ಯ ಶಿವಲಿಂಗೇಗೌಡರು ಹೇಳಿದರು, ಯಾವುದೇ ವಿಷಯದ ಬಗ್ಗೆ ಚರ್ಚೆಯಾಗಬೇಕಾದರೆ, 15 ದಿವಸ ಮುಂಚೆ ನೋಟಿಸ್ ಕೊಡಬೇಕಾಗುತ್ತದೆ ಎಂದು ಹೇಳಿದ್ದರು. ಸದನವು 9ನೇ ತಾರೀಖಿಗೆ ಪ್ರಾರಂಭವಾಗಿ 24ನೇ ತಾರೀಖು ಮುಕ್ತಾಯವಾಗುವುದೆಂದರೆ, ಕೇವಲ 12 ದಿವಸಗಳು, ಕಾನೂನು ವ್ಯಾಪ್ತಿಯಲ್ಲಿ ಅದು ಬರುವುದಿಲ್ಲ. ಆದರೂ ತಾವು 29ಕ್ಕೆ ಸದನವನ್ನು extend ಮಾಡಿದ್ದೀರಿ. Business Advisory Committee ಯಲ್ಲಿ ಕನಿಷ್ಠ ಆಗಸ್ಟ್ 10ನೇ ತಾರೀಖಿನವರೆಗೂ ಸದನವನ್ನು ಮುಂದುವರೆಸಬೇಕೆಂದು ಹೇಳಿದ್ದೆವು. ಮಾನ್ಯ ಕಾನೂನು ಸಚಿವರು ಹೇಳಿದರು, ಯಾವ್ಯಾವೋ ವಿಷಯಗಳನ್ನು ಚರ್ಚೆ ಮಾಡಿದ್ದರೆ ಎಂದು, ಅವರ ಹಗರಣಗಳನ್ನು ಮುಚ್ಚಿಹಾಕುವುದಕ್ಕೋಸ್ಕರ, ಸದನದ ಕಲಾಪಗಳನ್ನು ಹಾಳು ಮಾಡಿರುವುದು ನಾವಲ್ಲ. ಇದನ್ನು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಹೇಳಬೇಕು. ಅವರ ಹಗರಣಗಳನ್ನು ಮುಚ್ಚಿಹಾಕುವುದಕ್ಕೋಸ್ಕರ, ಇವತ್ತು ಸದನವನ್ನು ಯಾವ ರೀತಿ ನಡೆಸಿಕೊಂಡಿದ್ದಾರೆ ಎನ್ನುವುದನ್ನು ಅವರಿಗೆ ಬಿಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಹಗರಣವನ್ನು ಮುಚ್ಚಿಕೊಳ್ಳುವುದಕ್ಕೋಸ್ಕರ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ಏಕೆ ನೀವು ರೀತಿ ಮಾತನಾಡುತ್ತೀರಿ?

ಶ್ರೀ ಬಿ.ಎಸ್.ಯಡಿಯೂರಪ್ಪ : ಪ್ರತಿಪಕ್ಷದ ಸಾಲಿನಲ್ಲಿ ಕುಳಿತುಕೊಂಡಿರುವ ಒಬ್ಬ ನಾಯಕರಾಗಿ, ನೀವು ಹಗರಣ ಮುಚ್ಚುವ ಪ್ರಯತ್ನವನ್ನು ಮಾಡುತ್ತಿದ್ದೀರಿ ಎನ್ನುವುದು ನಿಮ್ಮ ಬಾಯಿಯಿಂದ ಬರುವುದಾದರೆ, ನೀವು ಯೋಚನೆ ಮಾಡಿ ಸಾರ್, ಈ ರೀತಿ ಮಾತುಗಳನ್ನಾಡಿದರೆ,

ಶ್ರೀ ಎಸ್.ಸುರೇಶ್‌ಕುಮಾರ್ : ಯಾವ intentionನಿಂದ ಹೇಳುತ್ತಿದ್ದೀರೋ ನಮಗೆ ಅರ್ಥವಾಗುತ್ತಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಈಗ ರೈತರಿಗೆ 5 ಲಕ್ಷ ಕೊಟ್ಟು, ಮಂತ್ರಿಗೆ 45 ಲಕ್ಷ ಕೊಟ್ಟಿರುವುದು, ಇದು ಹಗರಣವಲ್ಲವೇ?

ಶ್ರೀ ಬಿ.ಎಸ್.ಯಡಿಯೂರಪ್ಪ : ಯಾವ ಹಗರಣವಿದೆ ಎಂದು ಹೇಳಿ. ಎಲ್ಲವನ್ನೂ ಚರ್ಚೆ ಮಾಡಲಿಕ್ಕೆ ಸಿದ್ಧರಿದ್ದೇವೆ. ಸನ್ಮಾನ್ಯ ಅಧ್ಯಕ್ಷರೆ, ತಾವು ಅನುಮತಿ ಕೊಟ್ಟರೆ, ಹಗರಣಗಳ ಬಗ್ಗೆಯೇ ಚರ್ಚೆ ಮಾಡಲು ಒಂದೆರಡು ದಿನ ವಿಶೇಷ ಅಧಿವೇಶನವನ್ನು ಕರೆಯೋಣ. ನಾನು ಸಿದ್ಧನಿದ್ದೇನೆ. ನಿಮ್ಮ ಕಾಲದಿಂದ, ಅದರ ಹಿಂದಿನಿಂದ, ಇವತ್ತಿನ ಮುಂದಿನ ವರ್ಷದವರೆಗೆ, ಏನೇನು ಆಗಿದೆ ಅದೇ ಚರ್ಚೆ, ಬೇರೇನೂ ವಿಷಯಗಳು ಬೇಡ. ರಾಜ್ಯದ ಜನತೆಗೆ ಗೊತ್ತಾಗಲಿ. ನಾನು ಚರ್ಚೆ ಮಾಡಲಿಕ್ಕೆ ಸಿದ್ಧನಿದ್ದೇನೆ. I am ready my dear friend. I do not want to hide anything.

ಶ್ರೀ ಸಿದ್ದರಾಮಯ್ಯ : Date fix ಮಾಡುವುದಕ್ಕೆ ಹೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ನಾನು ಚರ್ಚೆ ಮಾಡಲು ಸಿದ್ಧನಿದ್ದೇನೆ.

ಶ್ರೀ ಸಿದ್ದರಾಮಯ್ಯ : ಯಾವತ್ತು ಎಂದು ಹೇಳಿ, 1ನೇ, 2ನೇ ಅಥವಾ 3ನೇ ತಾರೀಖು ಮಾಡೋಣವೇ? ದೂರವೇಕೆ? 2ನೇ ಅಥವಾ 3ನೇ ತಾರೀಖಿಗೆ ಮಾಡೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ : ಒಂದು ನಿಮಿಷ ಸಾರ್, ಇಷ್ಟು open ಆಗಿ, ಯಾವುದೇ ಹಗರಣಗಳು ಯಾವುದೇ ಕಾಲದಲ್ಲಿ ಇರಬಹುದು, ನೀವು ಯಾವ ವರ್ಷದಿಂದ ಪ್ರಾರಂಭವಾಗಬೇಕೆಂದು ನೀವು ನಿರ್ಧಾರ ಮಾಡಿ. ಯಾವ ದಿನಾಂಕವನ್ನು ನಿರ್ಧಾರ ಮಾಡಬೇಕೆಂಬುದನ್ನು ನೀವೇ ನಿರ್ಧಾರ

ಮಾಡಿ. I am ready, 2 days ಇರಲಿ, ಇನ್ನೇನು ಚರ್ಚೆ ಬೇಡ. Zero hour ಬೇಡ, ಯಾವುದೂ ಬೇಡ, ಹಗರಣಗಳ ಬಗ್ಗೆಯೇ ಚರ್ಚೆಯಾಗಬೇಕು. ಈ ನಾಡಿನ ಜನತೆಗೆ ಸತ್ಯಾಸತ್ಯತೆಗಳು ಗೊತ್ತಾಗಬೇಕು. ನಮ್ಮ ತಪ್ಪಿದ್ದರೆ ನಾವು ತಿದ್ದಿಕೊಳ್ಳುತ್ತೇವೆ, ನಿಮ್ಮ ತಪ್ಪಾಗಿದ್ದರೆ ನೀವು ತಿದ್ದಿಕೊಳ್ಳಿ. I am ready for any discussion.

ಶ್ರೀ ಸಿ.ಸಿ.ಪಾಟೀಲ್ : ಇವರು 50 ವರ್ಷದಿಂದ ಹಗರಣಗಳನ್ನು ಕಸದಬುಟ್ಟಿಗೆ ಹಾಕಿದ್ದರು. ಈಗ ಬಂದು ನಮ್ಮ ಮೇಲೆ ಕೆಸರು ಎರಚುವ ಪ್ರಯತ್ನವನ್ನು ಮಾಡುತ್ತಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಸಿದ್ದರಾಮಯ್ಯನವರೇ ತಮಗೆ ಗೊತ್ತಿದೆ, ಉಪ ಚುನಾವಣೆ ಬಂದಿದೆ,

ಶ್ರೀ ಸಿದ್ದರಾಮಯ್ಯ : ಚುನಾವಣೆ ಬಂದರೂ ಪರವಾಗಿಲ್ಲ, ಅಧಿವೇಶನ ನಡೆಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮಗೆ ಆ ಶಕ್ತಿಯಿಲ್ಲ. ನಾವು ಚುನಾವಣೆ ಆದ ಮೇಲೆ ಸೆಪ್ಟೆಂಬರ್ ತಿಂಗಳಿನಲ್ಲಿ ಅಧಿವೇಶನದಲ್ಲಿ ಕರೆಯುತ್ತೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, with one condition ಒಪ್ಪಿಕೊಂಡುಬಿಡೋಣ. ಅವರು ಚರ್ಚೆ ಮಾಡಲಿ ಎಲ್ಲೆಲ್ಲಿ ತಪ್ಪು ಕಾಣುತ್ತದೆ, ನಾವೇನು enquiry ಗೆ demand ಮಾಡುತ್ತೇವೆ, whether it is judicial enquiry or CBI enquiry ಅದಕ್ಕೆ ಸರ್ಕಾರ ಒಪ್ಪಿಕೊಳ್ಳಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ : ಒಂದು ನಿಮಿಷ ಸಾರ್, ಸೆಪ್ಟೆಂಬರ್ ತಿಂಗಳಿನಲ್ಲಿ. .

ಶ್ರೀ ಹೆಚ್.ಡಿ.ರೇವಣ್ಣ : ಸೆಪ್ಟೆಂಬರ್ ತಿಂಗಳು ಏಕೆ? ...

ಶ್ರೀ ಬಿ.ಎಸ್.ಯಡಿಯೂರಪ್ಪ : ಸ್ವಲ್ಪ ಸುಮ್ಮನಿರಿ, ನಾನು ಮಾತನಾಡುತ್ತಿದ್ದೇನೆ. ಯಾವಾಗ ಮಾಡಬೇಕೆಂದು ನೀವು ಹೇಳಿದ ಹಾಗೆ ಕೇಳುವುದಕ್ಕಲ್ಲ ನಾನು ಇರುವುದು.

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ಸ್ವಲ್ಪ ಸುಮ್ಮನಿರಿ ಅವರು complete ಮಾಡಲಿ. ನೀವು ಏಕೆ ಹೀಗೆ ಮಾಡುತ್ತಿದ್ದೀರಿ?

ಶ್ರೀ ಬಿ.ಎಸ್.ಯಡಿಯೂರಪ್ಪ : Please hear me. ಆಮೇಲೆ ನಿಮ್ಮ demand ಅನ್ನು ನೀವು ಹೇಳಿ. ಒಂದು ನಿಮಿಷ, ಆ ರೀತಿ ಆಗುವುದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಚುನಾವಣೆಗಿಂತ ಮೊದಲೇ ಅಧಿವೇಶನವನ್ನು ಕರೆಯಿರಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ಇಲ್ಲ, ಆ ರೀತಿ ಆಗುವುದಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಮುಖ್ಯಮಂತ್ರಿಗಳು ಈ ರೀತಿ ಕೋಪಿಸಿಕೊಂಡರೆ ಹೇಗೆ? ನಮಗೆ ಕೋಪ ಬರುವುದಿಲ್ಲವೇ? ನಿಮಗೊಬ್ಬರಿಗೆ ಕೋಪ ಬರುವುದು? ಈ ರೀತಿ ಕೋಪಿಸಿಕೊಂಡರೆ ಆಗುವುದಿಲ್ಲ. No, no, it is not correct.

ಶ್ರೀ ಎಸ್.ಸುರೇಶ್‌ಕುಮಾರ್ : ಮಾನ್ಯ ಮುಖ್ಯಮಂತ್ರಿಗಳಿಗೆ ಕೋಪ ಬರುವುದು ಗೊತ್ತಾಗುತ್ತದೆ. ನೀವು ಕೋಪ ಮಾಡಿಕೊಳ್ಳುವುದನ್ನು ನಾವು ದಿವಸವೂ ನೋಡುತ್ತಿರುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಇಷ್ಟೇ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾಜಿ ರಾಷ್ಟ್ರಪತಿಗಳಾದ ಡಾ: ಎ.ಪಿ.ಜೆ. ಅಬ್ದುಲ್ ಕಲಾಂಜೀಯವರು ಇದೇ ಮನೆಯಲ್ಲಿ ಗ್ರಾಮೀಣಾಭಿವೃದ್ಧಿ, ಮಹಾತ್ಮ ಗಾಂಧೀಜಿಯವರ ಗ್ರಾಮ ರಾಜ್ಯ, ರಾಮರಾಜ್ಯದ ಬಗ್ಗೆ 'PURA' ಎನ್ನುವ ಒಂದು ಕಲ್ಪನೆ ಕೊಟ್ಟರು. ಗ್ರಾಮೀಣ ಪರಿಸ್ಥಿತಿಗಳ ಬಗ್ಗೆ ನಾವು ಚರ್ಚಿಸಿಲ್ಲ. ಸೆಪ್ಟೆಂಬರ್ ತಿಂಗಳಿನಲ್ಲಿ ವಿಶೇಷ ಅಧಿವೇಶನ ಕರೆದು ಮೂರು ದಿವಸಗಳ ಕಾಲ ಈ ರಾಜ್ಯದಲ್ಲಿರುವ ಗ್ರಾಮೀಣ ಜನರು ನಗರಕ್ಕೆ ವಲಸೆ ಬರದಂತೆ ಅಲ್ಲಿಯೇ ಬದುಕುವುದಕ್ಕೆ ಯಾವ ರೀತಿ ಕಾರ್ಯಕ್ರಮಗಳನ್ನು ರೂಪಿಸಬೇಕೆಂದು ನೀವೆಲ್ಲರೂ ಸಲಹೆಗಳನ್ನು ಕೊಡಿ. ಅದರ ಆಧಾರದ ಮೇಲೆ ಮುಂದಿನ ಬಜೆಟ್ ಮಾಡೋಣ. ಅದಕ್ಕೆ ಬೇಕಾಗುವ Additional amount ಸಹ ಒದಗಿಸಿ ಕೊಡೋಣ. ನಮಗೆ ಅನ್ನ ಕೊಡುವ ಅನ್ನದಾತ ಗ್ರಾಮೀಣ ಜನರಾಗಿದ್ದು, ರೈತನಾಗಿದ್ದು, ನಾವು ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದೇವೆ. (ಗದ್ದಲ) ಒಂದು ನಿಮಿಷ. ಮಾತು ಮುಗಿಸುವುದಕ್ಕೆ ಬಿಡುವುದಿಲ್ಲವಲ್ಲ. ಪ್ಲೀಸ್.

(ಗೊಂದಲ)

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ತಮ್ಮ ಮಾತನ್ನು ಮುಗಿಸಲಿ. ದಯಮಾಡಿ ಎಲ್ಲಾ ಶಾಸಕರು ಕುಳಿತುಕೊಳ್ಳಬೇಕು. ಪ್ಲೀಸ್.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ನಿಮ್ಮ ಕೊಠಡಿಗೆ ಬರುತ್ತೇವೆ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಎಲ್ಲರೂ ಸುಮ್ಮನೆ ಕುಳಿತುಕೊಳ್ಳಬೇಕು. ರೇವಣ್ಣನವರೆ, ಏಕೆ ನೀವು ಹೀಗೆ ಮಾಡುತ್ತೀರಿ? ನೀವು ಸೀನಿಯರ್ ಲೀಡರ್ ಆಗಿದ್ದು, ಏಕೆ ಹೀಗೆ ಮಾಡುತ್ತೀರಿ? ಸ್ವಲ್ಪ ಕುಳಿತುಕೊಳ್ಳಿ, ಮುಖ್ಯಮಂತ್ರಿಗಳು ಹೇಳುವುದನ್ನು ಕೇಳಿ. ಅದೇನೂ ನನಗೆ ಅರ್ಥವೇ ಆಗುತ್ತಿಲ್ಲ. (ಗೊಂದಲ) ಪ್ಲೀಸ್, ಎಲ್ಲಾ ಶಾಸಕರುಗಳು ದಯವಿಟ್ಟು ಕುಳಿತುಕೊಳ್ಳಬೇಕು. ಮುಖ್ಯ ಮಂತ್ರಿಗಳು ಮಾತನಾಡುತ್ತಿದ್ದಾರೆ. ಅವರು ತಮ್ಮ ಮಾತುಗಳನ್ನು ಮುಗಿಸಲಿ. ಏನಾದರೂ ಒಂದು conclusion ಆಗಬೇಕಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ, ನಾವು ನಾಡಿನ ಆರು ಕೋಟಿ ಜನರ custodian ಆಗಿ ಇತ್ತ ಕಡೆ ಕುಳಿತಿದ್ದೇವೆ. ನಿಮಗೆ ಎಷ್ಟು responsibility ಇದೆಯೋ, ನಮಗೂ ಅಷ್ಟೇ responsibility ಇದೆ. ಈ ಹಿನ್ನೆಲೆಯಲ್ಲಿ ಈ ನಾಡಿನ ಸಂಪತ್ತನ್ನು ಲೂಟಿ ಮಾಡುವ ಹಗಲು ದರೋಡೆ ನಡೆಯುತ್ತಿದೆ ಎಂಬ ಭಾವನೆ ಜನರಲ್ಲಿ ಏನು ಮೂಡುತ್ತಿದೆ, ಲೋಕಾಯುಕ್ತರು ದಾಳಿ ನಡೆಸಿ ಏನು ನಡೆಯುತ್ತಿದೆ ಎಂಬುದನ್ನು ಬೊಟ್ಟು ಮಾಡಿ ತೋರಿಸುತ್ತಿದ್ದಾರೆ. ಅನೇಕ ವಿಷಯಗಳ ಬಗ್ಗೆ ಚರ್ಚೆಗಳಾಗ ಬೇಕಾಗಿದೆ. ಅದಕ್ಕೋಸ್ಕರ ನಾನು ನಿಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಸನ್ಮಾನ್ಯ ಅಧ್ಯಕ್ಷರು ಮತ್ತು ಸಭಾಪತಿಗಳೊಂದಿಗೆ ಕುಳಿತು ಎರಡು ದಿವಸಗಳ ಕಾಲ ಯಾವ ವರ್ಷಕ್ಕೆ ಸಂಬಂಧಿಸಿದಂತೆ ಚರ್ಚೆಗೆ ತೆಗೆದುಕೊಳ್ಳಬೇ ಕೆಂಬುದನ್ನು ತಾವು ಸಲಹೆ ಕೊಡಿ. ಈ ರಾಜ್ಯದಲ್ಲಾಗಿರುವ ಹಗರಣಗಳ ಬಗ್ಗೆ ಎರಡು ದಿವಸ ಚರ್ಚೆಯಾಗಲಿ. ಬೇರೇನೂ ಚರ್ಚೆಯಾಗುವುದು ಬೇಡ. ಬೆಳಗ್ಗೆ 10.00 ಗಂಟೆಗೆ ಸೇರಿದರೆ ರಾತ್ರಿ 12.00 ಗಂಟೆವರೆಗೆ ಚರ್ಚೆ ಮಾಡೋಣ. ಎರಡು ದಿವಸಗಳ ಕಾಲ ಅದರ ಬಗ್ಗೆ ಚರ್ಚೆ ಮಾಡೋಣ. ಉಳಿದ ಮೂರು ದಿವಸ ಗ್ರಾಮೀಣ ಜನರ ಅಭಿವೃದ್ಧಿ ಗಾಗಿ, ಅವರು ನೆಮ್ಮದಿಯಿಂದ ಬದುಕುವುದಕ್ಕೋಸ್ಕರ ನಾವು-ನೀವು ಸೇರಿ ಚರ್ಚಿಸಿ ಮತ್ತು

ತಾವು ಏನೇನು ಸಲಹೆಗಳನ್ನು ಕೊಡುತ್ತೀರೋ, ಅವರು ಹಳ್ಳಿ ಬಿಟ್ಟು ನಗರಕ್ಕೆ ವಲಸೆ ಬರಬಾರದು, ಅವರಿಗೆ ಮೂಲಭೂತ ಸವಲತ್ತುಗಳು ಸಿಗಬೇಕು, ಅವರು ಗೌರವದಿಂದ ಬದುಕಬೇಕು. ಅದಕ್ಕೋಸ್ಕರ ಮೂರು ದಿವಸಗಳ ಕಾಲ ಚರ್ಚಿಸೋಣ, ಎರಡು ದಿವಸಗಳ ಕಾಲ ಹಗರಣಗಳ ಬಗ್ಗೆ ಚರ್ಚಿಸೋಣ. ಸೆಪ್ಟೆಂಬರ್ ತಿಂಗಳಿನಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಕೇಳಿ ಎರಡನೇ ವಾರ ಆದ ಬಳಿಕ ನಿಮಗೆ convenient date fix ಮಾಡಿ, ನಾವು ಚರ್ಚೆಗೆ ಸಿದ್ಧರಿದ್ದೇವೆ.

(ಆಡಳಿತ ಪಕ್ಷದ ಮಾನ್ಯ ಸದಸ್ಯರೆಲ್ಲರೂ ಮೇಜು ತಟ್ಟಿ ಸ್ವಾಗತಿಸಿದರು)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಅದನ್ನು ನಾವು ಸ್ವಾಗತಿಸುತ್ತೇವೆ. ಟೇಬಲ್ ತಟ್ಟುವುದನ್ನೂ ಸ್ವಾಗತಿಸುತ್ತೇವೆ......(ಗೊಂದಲ) ಹೌದೌದು, ಕುಳಿತುಕೊಳ್ಳಿ. ನೀವೇ ಎಲ್ಲಾ ನೀರು ಕೊಟ್ಟದ್ದು, ಕುಳಿತುಕೊಳ್ಳಿ, ನೀವ್ಯಾಕ್ರಿ (ಅರವಿಂದ ಲಿಂಬಾವಳಿ) ಎದ್ದು ನಿಂತು ಮಾತನಾಡುತ್ತಿರುವುದು? ಆಯಿತು, ಕುಳಿತುಕೊಳ್ಳಿ, ಈ ದೇಶದಲ್ಲಿ ನೀವೇ ಎಲ್ಲಾ ಮಾಡಿರುವುದು, ಎಲ್ಲರಿಗೂ ಗೊತ್ತಿದೆ, ಬಂದು ಒಂದು ವರ್ಷವಾಗಿದೆ, ಆಗಲೇ ಈ ದೇಶವನ್ನು ನೀವೇ ಎಲ್ಲಾ ಮಾಡ್ಬಿಟ್ಟಿದ್ದೀರಿ.

ಶ್ರೀ ಅರವಿಂದ ಲಿಂಬಾವಳಿ : ಒಂದು ವರ್ಷ, ಎರಡು ವರ್ಷ ಅಲ್ಲ..... ಈ ಮಾತನ್ನು ಅವರು ಹಿಂತೆಗೆದುಕೊಳ್ಳಬೇಕು. ಮಾನ್ಯ ವಿರೋಧ ಪಕ್ಷದ ನಾಯಕರು ಈ ಮಾತನ್ನು ಹಿಂತೆಗೆದುಕೊಳ್ಳಬೇಕು. ಒಂದು ವರ್ಷ ಇರಲಿ, ನಾಲ್ಕು ವರ್ಷ ಇರಲಿ, ನಾವು ಈ ಮನೆಯ ಸದಸ್ಯರಾಗಿದ್ದೇವೆ. ನಾವು ಜ್ಯೂನಿಯರ್ ಮೆಂಬರ್ ಆಗಿದ್ದರೂ ಅವರು ಈ ಪಾಠ ಕಲಿಸಬಾರದು. Let me complete Sir. (ಗದ್ದಲ) ಒಂದು ವರ್ಷವಾಯಿತು, ಅವರು ಬಹಳ ಮಾಡಿಬಿಟ್ಟರು ಎಂದರೆ ಏನರ್ಥ? 60 ವರ್ಷ ಇವರು ಏನು ಮಾಡಿದರು? ನಾವು ಒಳ್ಳೆಯ ಕೆಲಸ ಮಾಡುತ್ತಿರುವುದಕ್ಕೆ ನಿಮಗೆ ಸಮಾಧಾನ ಇಲ್ಲವೇ?

ಶ್ರೀ ಸಿದ್ದರಾಮಯ್ಯ : ಈ ತರಹ ಸದನ ನಡೆಸುವುದಾದರೆ, ಈ ತರಹ obstructions ಮಾಡುವುದೇ? ನಂಬರ್‌ನಲ್ಲಿ ನಾವು ಹೆಚ್ಚಿನ ಸಂಖ್ಯೆಯಲ್ಲಿ ದ್ದೇವೆಂದು ಪ್ರತಿ ಬಾರಿಯೂ ಎದ್ದು ಎದ್ದು ಮಾತನಾಡು

ವುದಾದರೆ, ಈ ಸದನವಾದರೂ ಏಕಿರಬೇಕು? ಅಧಿವೇಶನ ಏಕೆ ಕರೆಯುತ್ತೀರಿ? (ಗದ್ದಲ)

ಶ್ರೀ ಅರವಿಂದ ಲಿಂಬಾವಳಿ : ಇವರೂ ಸಹ ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ಮಾತನಾಡುವಾಗಲೂ ಎದ್ದು ನಿಲ್ಲುತ್ತಾರೆ. (ಗದ್ದಲ)

ಶ್ರೀ ಸಿದ್ದರಾಮಯ್ಯ : ......9 ದಿನ ಕರೆಯುತ್ತೇವೆ, ಹೋಗಿ, 12 ದಿನ ಕರೆಯುತ್ತೇವೆ, ಹೋಗಿ, ಮುಖ್ಯಮಂತ್ರಿಯವರು ಇವತ್ತು ಉತ್ತರ ಕೊಡುತ್ತಾರೆ, ಕೇಳಿ.....ಏನು ಇದನ್ನು ಕೇಳುವುದಕ್ಕೆ ನಾವು ಇಲ್ಲಿಗೆ ಬರಬೇಕೇ? ನಿಮಗೆ ಎಷ್ಟು ಜವಾಬ್ದಾರಿ ಇದೆಯೋ, ನಮಗೂ ಅಷ್ಟೇ ಜವಾಬ್ದಾರಿ ಇದೆ. ಪರಸ್ಪರ co-operationನಿಂದ ಸದನ ನಡೆಸಬೇಕಾಗುತ್ತದೆ. If you are really interested in the interest of the State, development of the State, ನೀವು ಕೂಡ ತೆರೆದ ಮನಸ್ಸಿನಿಂದ ಇರಬೇಕಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ನಿಮ್ಮಲ್ಲಿ ನಾನು ಒಂದು ವಿನಂತಿ ಮಾಡಿಕೊಳ್ಳುವುದೇನೆಂದರೆ, ಇವತ್ತು ನಾನು ಈ ಮನೆಯಲ್ಲಿ ಭರವಸೆ ಕೊಡುತ್ತೇನೆ. ಮುಂದಿನ ವರ್ಷದಿಂದ ಪ್ರತಿ ವರ್ಷವೂ 60 ದಿವಸಗಳ ಕಾಲ ಅಧಿವೇಶನ ನಡೆಸಬೇಕೆಂದು ಏನು ಹೇಳಿದ್ದೀರಿ, ನಾವು ಇನ್ನೂ ಒಂದೆರಡು ದಿವಸಗಳ ಕಾಲ ಹೆಚ್ಚಿಗೆ ಅಧಿವೇಶನ ನಡೆಸುತ್ತೇವೆಯೇ ಹೊರತು ಕಡಿಮೆ ನಡೆಸುವುದಕ್ಕೆ ಬಿಡುವುದಿಲ್ಲ. ನಾವು ಒಪ್ಪಿಕೊಂಡಂತೆ ಸುದೀರ್ಘವಾಗಿ 60 ದಿವಸಗಳ ಕಾಲ ಸದನದ ಕಲಾಪ ನಡೆಯಬೇಕು, ಅದಕ್ಕೆ ನಾನು ಬದ್ಧನಾಗಿದ್ದೇನೆ.

ಶ್ರೀ ಸಿದ್ದರಾಮಯ್ಯ : ಈ ಕುರಿತಾದ ಆ್ಯಕ್ಟ್ ಪಾಸ್ ಮಾಡಿ ಎರಡು ವರ್ಷಗಳಾಗಿವೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಒಂದು ನಿಮಿಷ ಸಿದ್ದರಾಮಯ್ಯನವರೆ, ಏಕೆ ನೀವು ಹೀಗೆ ಮಾಡುತ್ತೀರಿ? ನೋಡಿ, ಇದು ಸರಿಯಿಲ್ಲ. ನಾನು ಮಾತನಾಡಲು ಎದ್ದು ನಿಂತಾಗಲೂ ನೀವು ಮಾತನಾಡುತ್ತಿದ್ದೀರಿ.

ಶ್ರೀ ಸಿದ್ದರಾಮಯ್ಯ : ...... Why next year? Let us implement in this year only. There is no bar in the Act. ಮುಂದಿನ ವರ್ಷದಿಂದಲೇ ಮಾಡಬೇಕೆಂದೇನೂ ಹೇಳಿಲ್ಲ. ಈ ವರ್ಷದಿಂದಲೇ 60

ದಿವಸಗಳ ಕಾಲ ಸದನ ನಡೆಸೋಣ. ಈ ಕುರಿತು ಕಾನೂನು ಮಾಡಿಕೊಂಡಿದ್ದೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಆಯಿತು, ಕುಳಿತುಕೊಳ್ಳಿ, ಹೇಳುತ್ತೇನೆ. ಆಗಬಹುದು, ಒಳ್ಳೇ ಕತೆಯಾಯಿತಲ್ಲ, ನಾನು ಹೇಳುತ್ತೇನೆ ಕೇಳಿ, ಆಯಿತು. ಮಾನ್ಯ ಅಧ್ಯಕ್ಷರೆ, ಪ್ರಸಕ್ತ ಸಾಲಿನ ವರ್ಷದ ಮಾರ್ಚನೊಳಗೆ ಹೆಚ್ಚು ದಿವಸ ಅಧಿವೇಶನ ನಡಸುವುದಕ್ಕೆ ನಾನು ಸಿದ್ಧನಿದ್ದೇನೆ, ಅವಕಾಶ ಕಲ್ಪಿಸಿಕೊಳ್ಳೋಣ. ...ಒಂದು ನಿಮಿಷ. ನಾನು ಹಳೆಯದನ್ನು ಮಾತನಾಡಲು ಇಷ್ಟಪಡುವುದಿಲ್ಲ. ಆ್ಯಕ್ಟ್ ಯಾವಾಗ ಜಾರಿಗೆ ಬಂತು? ಎಷ್ಟು ದಿವಸ ಅಧಿವೇಶನ ನಡೆಯಿತೆಂಬುದು ಜಗತ್ತಿಗೆ ಗೊತ್ತಿದೆ. ನಾನು ಭರವಸೆ ಕೊಡುತ್ತಿದ್ದೇನೆ. ಹೆಚ್ಚು ದಿವಸಗಳ ಕಾಲ ಅಧಿವೇಶನ ನಡೆಸಲು ಅನುವು ಮಾಡಿಕೊಡಿ. ಪ್ರತಿ ಸಲವೂ ಹಾಗೆ ಎದ್ದು ನಿಂತು ಮಾತನಾಡುವುದು ತರವಲ್ಲ. ಪ್ರತಿ ಸಲ ಹಾಗೆ ಎದ್ದು ನಿಂತು ಹೇಳುವುದಕ್ಕಾಗುವುದಿಲ್ಲ. ಹೆಚ್ಚು ದಿವಸ ಅಧಿವೇಶನ ನಡೆಸುವುದಕ್ಕೆ ನಾನು ಬದ್ಧನಾಗಿದ್ದೇನೆ. ಅಧಿವೇಶನವನ್ನು ಎಷ್ಟು ದಿವಸಗಳ ಕಾಲ ನಡೆಸಬೇಕೆಂಬ ಬಗ್ಗೆ ನಿಮ್ಮ (ಸಭಾಧ್ಯಕ್ಷರು) ಕೊಠಡಿಯಲ್ಲಿ ಕುಳಿತು ನಾವು ತೀರ್ಮಾನಿಸೋಣ. I am ready. ಇದು ನಮ್ಮ ಕರ್ತವ್ಯ.

ಎರಡನೆಯದು, ನಾನು ಈಗಾಗಲೇ ನಿಮಗೆ ಭರವಸೆ ಕೊಟ್ಟಂತೆ ಪ್ರತಿ ಪಕ್ಷದ ನಾಯಕರೊಂದಿಗೆ ಸಮಾಲೋಚಿಸಿ ಮೂರು ದಿವಸಗಳ ಕಾಲ ನಮ್ಮ ನಾಡಿನ ರೈತರ ಸ್ಥಿತಿಗತಿಗಳನ್ನು ಸುಧಾರಿಸುವುದಕ್ಕೋಸ್ಕರ ಮೂರು ದಿವಸಗಳ ಅಧಿವೇಶನ ಮತ್ತು ಉಳಿದ ಎರಡು ದಿವಸಗಳ ಕಾಲ ಏನೇನು ಹಗರಣಗಳಾಗಿವೆ, ಏನೇನು ಕ್ರಮಗಳನ್ನು ಕೈಗೊಂಡಿದ್ದೇವೆ, ಮುಂದೆ ಏನೇನು ಕ್ರಮಗಳನ್ನು ಕೈಗೊಳ್ಳಬೇಕು, ಬೆಂಗಳೂರು ಭೂ ಹಗರಣವೂ ಒಳಗೊಂಡಂತೆ ಎಲ್ಲಾ ವಿಷಯಗಳ ಬಗ್ಗೆಯೂ ಎರಡು ದಿವಸಗಳ ಕಾಲ ಚರ್ಚೆಯಾದಲ್ಲಿ ಸಹಾಯವಾಗುತ್ತದೆ. ಏಕೆಂದರೆ, ನಮ್ಮ ರಾಜ್ಯದ ಜನತೆಗೆ ವಾಸ್ತವಿಕ ಸತ್ಯ ಸಂಗತಿಗಳು ಗೊತ್ತಾಗಬೇಕು, ರೇವಣ್ಣನವರೆ, ನಾವು ಬಿಚ್ಚು ಮನಸ್ಸಿನಿಂದ ಚರ್ಚೆಗೆ ಸಿದ್ಧರಿದ್ದೇವೆ. ಈ ವರ್ಷದಿಂದಲೇ ಹೆಚ್ಚು ದಿವಸಗಳ ಕಾಲ ಅಧಿವೇಶನ ನಡೆಸುವುದಕ್ಕೆ ನಾನು ಶಪಥ ಮಾಡಿದ್ದೇನೆ, ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಪದೇ ಪದೇ ಹೇಳುತ್ತಾರೆ. ಅವರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ, OK. ಸೆಪ್ಟೆಂಬರ್‌ನಲ್ಲಿ ಮುಂದಿನ ಅಧಿವೇಶನ ಕರೆಯಬೇಕೆಂದು ಹೇಳುತ್ತಾರೆ,

ಕರೆಯೋಣ. ಎರಡು ದಿವಸ ಏಕೆ, ಮೂರು ದಿವಸಗಳು ಏಕೆ, ಹತ್ತು ದಿವಸಗಳ ಕಾಲ ಅಧಿವೇಶನ ಕರೆಯೋಣ. We have no objection. ನಾವು ಬರುವುದಿಲ್ಲ, ನಾವು co-operate ಮಾಡುವುದಿಲ್ಲವೆಂದು ತಾನೇ ನಿಮ್ಮ ತಾಪತ್ರಯ. ನಾವು ಬರುತ್ತೇವೆ. Co-operative ಮಾಡುತ್ತೇವೆ, ಅಧಿವೇಶನವನ್ನು ನೀವು ಎಷ್ಟು ದಿವಸಗಳ ಕಾಲ ಬೇಕಾದರೂ ಕರೆಯಿರಿ. ಈ ಸರ್ಕಾರದಲ್ಲಿ ಮಾತ್ರವಲ್ಲ, ಹಿಂದಿನ ಸರ್ಕಾರಗಳಲ್ಲಿ ಏನೇನು ನಡೆದಿವೆ, ಎಲ್ಲವನ್ನೂ ಚರ್ಚಿಸೋಣ ಮತ್ತು ಈ ಸರ್ಕಾರದಲ್ಲಿ ಏನೇನು ಹಗರಣಗಳಾಗಿವೆಯೋ, ಅದನ್ನೂ ಚರ್ಚಿಸೋಣ. ಯಾರ್‍ಯಾರು ತಪ್ಪು ಮಾಡಿದ್ದಾರೆಂಬುದು ಜನರಿಗೆ ಗೊತ್ತಾಗಲಿ. ಮುಕ್ತ ಮನಸ್ಸಿನಿಂದ ಚರ್ಚಿಸೋಣ. ಆದರೆ, ಮುಂದಿನ ವರ್ಷದಿಂದ ಮಾಡುತ್ತೇವೆ ಎನ್ನುವುದಕ್ಕಿಂತಲೂ ಇವತ್ತು ಒಂದು ದಿವಸ ಮುಂದಕ್ಕೆ ಹೋಗುವುದಕ್ಕೆ ನೀವು ತಯಾರಾಗಿಲ್ಲವೆಂದರೆ, ಸರ್ಕಾರದವರಾದ ನೀವು ಹೇಳಿದ್ದನ್ನೇ ವಿರೋಧ ಪಕ್ಷದವರೆಲ್ಲರೂ ಕೇಳಬೇಕೇ? ಮುಖ್ಯಮಂತ್ರಿಗಳಾಗಿರುವ ನಿಮಗೆ ಸ್ವಲ್ಪ ಉದಾರತೆ ಇರಬೇಕಾಗುತ್ತದೆ. ನೀವು ಮಾತನಾಡಿ ನಾವು ಉತ್ತರಿಸುತ್ತೇವೆಂದು ಹೇಳಬೇಕು. ಇವತ್ತಲ್ಲ ನಾಳೆ ಉತ್ತರ ಕೊಡಿ, ಇಲ್ಲ 3.00 ಗಂಟೆಗೆ ಉತ್ತರ ಕೊಡುತ್ತೇವೆ, ನೀವು ಏನು ಬೇಕಾದರೂ ಮಾಡಿಕೊಳ್ಳಿ ಎಂದು this type of attitude is not correct. ಯಾವುದೇ ಮುಖ್ಯಮಂತ್ರಿಗಳು ಸಹ ಆ ರೀತಿ ಹೇಳಿಲ್ಲ. ಯಾವುದೇ ಸರ್ಕಾರ ಕೂಡ ಹಾಗೆ ಹೇಳಿಲ್ಲ. ಹಿಂದೆ ಅನೇಕ ಸಲ ವಿರೋಧ ಪಕ್ಷದವರು ಮಾತನಾಡಬೇಕೆಂದಾಗ ಉತ್ತರ ಕೊಡುವುದಕ್ಕೆ ನಿಗದಿಯಾಗಿದ್ದರೂ ಮುಂದಕ್ಕೆ ಹಾಕಿರುವ ನಿದರ್ಶನಗಳು ಸಾಕಷ್ಟಿವೆ. ಬೇಕಿದ್ದರೆ, ದಾಖಲೆ ತೆಗೆದು ನೋಡಿ.

ಶ್ರೀ ಬಿ.ಎಸ್.ಬಚ್ಚೇಗೌಡ : BAC meetingನಲ್ಲಿ ಏನಾಗಿದೆ ನೋಡಿ.

ಶ್ರೀ ಸಿದ್ದರಾಮಯ್ಯ : BAC meetingನಲ್ಲಿ ಏನೂ ಆಗಿಲ್ಲ. ನಾವು ಒಪ್ಪಿಯೇ ಇಲ್ಲವಲ್ಲ. ಬಚ್ಚೇಗೌಡರೆ, ಏನೂ ಆಗಿಲ್ಲ. (ಗೊಂದಲ) 29ನೇ ತಾರೀಖಿಗೆ ಅಂತಲೂ ಹೇಳಿಲ್ಲ, 30ನೇ ತಾರೀಖಿಗೂ ಅಂತಲೂ ಹೇಳಿಲ್ಲ, ಏನೂ ಇಲ್ಲ, ಎಲ್ಲಾ ಸುಳ್ಳು, ಗೊತ್ತಿದೆ. ಅದಕ್ಕೆ ರಿಪ್ಲೈ ಕೊಟ್ಟರೆ ಒಪ್ಪಿಕೊಳ್ಳಬೇಕೇಂದೇನಾದರೂ ಇದೆಯೇ? ಹಾಗಂತ ಹೇಳಿದರೆ ಒಪ್ಪಿಕೊಳ್ಳಬೇಕೇಂದೇನಾದರೂ ಇದೆಯೇ? ನಾವು ಡಿಮ್ಯಾಂಡ್ಸ್ ಮೇಲೆ ಮಾತನಾಡಬೇಕೇ? ಬೇಡವೇ? ಹೇಳಿ. ನೀವು ಹಿಂದೆ ಮಂತ್ರಿಯಾಗಿದ್ದೀರಿ, ಡಿಮ್ಯಾಂಡ್ಸ್ ಮೇಲೆ ಹೀಗೆ ಮಾಡಲಾಗುತ್ತಿತ್ತೇ? ನೀವೇ ಹೇಳಿ. ಮಾತನಾಡುವುದಕ್ಕೆ ನಾಳೆ

ಅವಕಾಶ ಕೊಟ್ಟರೆ ಏನಾಗುತ್ತದೆ? ನಾಳೆ ಮುಖ್ಯಮಂತ್ರಿಗಳು ಉತ್ತರ ಕೊಡಲಿ ಬಿಡಿ.

ಅಧ್ಯಕ್ಷರು : ಈಗ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ವಿರೋಧ ಪಕ್ಷದ ನಾಯಕರು, ರೇವಣ್ಣನವರು ಏನು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದರು, ಒಂದು ವಿಷಯವನ್ನು ನಾನು ಹೇಳುವುದೇನೆಂದರೆ, 9ನೇ ತಾರೀಖಿನಿಂದ ಈ ಅಧಿವೇಶನ ಪ್ರಾರಂಭವಾದಾಗಿನಿಂದಲೂ, ಬೇಡಿಕೆ ಮೇಲೆ ಚರ್ಚೆ ಆರಂಭವಾಗಿದ್ದು ನಿನ್ನೆ ಸಂಜೆ. ಅದನ್ನು ಪದೇ ಪದೇ ಮಾನ್ಯ ವಿರೋಧ ಪಕ್ಷದ ನಾಯಕರು ಸೇರಿದಂತೆ ಎಲ್ಲಾ ಗೌರವಾನ್ವಿತ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ಪ್ರತಿದಿವಸ ನಿಲುವಳಿ ಸೂಚನೆ, ಅದು ರೂಲ್ 69ರಲ್ಲಿ ಕನ್‌ವರ್ಟ್ ಆಗುವುದು.

ಶ್ರೀ ಸಿದ್ದರಾಮಯ್ಯ : 69 ತೆಗೆದು ಹಾಕಿಬಿಡಿ.

(ಗೊಂದಲ)

ಅಧ್ಯಕ್ಷರು : ನಾನು 9ನೇ ತಾರೀಖಿನಿಂದ ನೋಡುತ್ತಿದ್ದೇನೆ, ನಾನು ಇದನ್ನು ಪದೇ ಪದೇ ಹೇಳಿದ್ದೇನೆ. ನಾಳೆ ಬೇಡಿಕೆ ಮೇಲೆ ಚರ್ಚೆ ಮಾಡುವುದಕ್ಕೆ ಸಮಯ ಸಿಗುವುದಿಲ್ಲ, ಅದಕ್ಕೆ ಬೇಡಿಕೆ ಮೇಲೆ ಚರ್ಚೆ ಮಾಡೋಣವೆಂದು ಪದೇ ಪದೇ ನಾನು ಎಲ್ಲರ ಗಮನಕ್ಕೆ ತಂದರೂ ಕೂಡ, ನೆನಪು ಮಾಡಿದರೂ ಕೂಡ, ನೀವು ದಿವಸವು ನಿಲುವಳಿ ಸೂಚನೆ ತರುತ್ತಿದ್ದೀರಿ. ನಿಲುವಳಿ ಸೂಚನೆಯನ್ನು ತರುವುದಕ್ಕೆ ನಿಮಗೆ ಹಕ್ಕಿದೆ, ಪ್ರಮುಖವಾದ issues ಇದ್ದಾವೆ, ಅದರ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ. ಆದರೆ ಅದನ್ನು ಗಮನದಲ್ಲಿಟ್ಟು ಕೊಂಡು ನಾನು ಪದೇ ಪದೇ ಹೇಳುತ್ತಿದ್ದೆ. ಪ್ರತಿ ದಿವಸ ನಿಲುವಳಿ ಸೂಚನೆಯನ್ನು ರೂಲ್ಸ್ 69 ಕ್ಕೆ ಕನ್ವರ್ಟ್ ಮಾಡಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟೆ, ಒಂದೆರಡು ದಿವಸ ಧರಣಿ ನಡೆದವು, ಇವೆಲ್ಲಾ ನಡೆದಿದ್ದಾವೆ, ಬೇರೆ ಬೇರೆ ವಿಷಯಗಳು ಚರ್ಚೆಯಾಗಿದ್ದಾವೆ. ಅದೇ ವಿಷಯಗಳಲ್ಲಿ ಕೆಲವೊಂದನ್ನು ನಿಲುವಳಿ ಸೂಚನೆಯ ಮೂಲಕ ತರಬಹುದಾಗಿತ್ತು, ಕೆಲವೊಂದನ್ನು ಬೇಡಿಕೆ ಮೇಲೆ ಚರ್ಚೆ ಮಾಡುವ ಸಂದರ್ಭದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿತ್ತು. ಅದನ್ನು ಬಿಟ್ಟು ಎಲ್ಲವನ್ನು ರೂಲ್ 69, ನಿಲುವಳಿ ಸೂಚನೆ ಚರ್ಚೆ ಮಾಡಬೇಕೆಂದರೆ, ಯಾವ ರೀತಿ ಒಬ್ಬ ಸಭಾಧ್ಯಕ್ಷರಿಗೆ ಸದನವನ್ನು ನಡೆಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ತಾವೆಲ್ಲರೂ ವಿಚಾರ ಮಾಡಬೇಕಾಗುತ್ತದೆ. ಅವತ್ತು ಬಿಎಸಿ ಕಮಿಟಿಯಲ್ಲಿ ಎಲ್ಲರೂ ಚರ್ಚೆ ಮಾಡಿದಾಗ, ಮಾನ್ಯ

ವಿರೋಧ ಪಕ್ಷದ ನಾಯಕರು ಹಾಗೂ ಕೆಲವು ಮಾನ್ಯ ಸದಸ್ಯರು ಇನ್ನು ಹೆಚ್ಚು ದಿವಸ ಸದನವನ್ನು ನಡೆಸಬೇಕೆನ್ನುವ ತಮ್ಮ ಭಾವನೆಯನ್ನು ಹೇಳಿದರು, ಅದು ಇಲ್ಲವೆಂದು ನಾನು ಹೇಳುವುದಿಲ್ಲ. ಆಗಸ್ಟ್‌ನಲ್ಲಿ ಅಧಿವೇಶನವನ್ನು ಇನ್ನು ಹತ್ತು ದಿವಸಗಳ ಕಾಲ ನಡೆಸಬೇಕೆಂದು ಹೇಳಿದಿರಿ. ಹಿಂದೆ ಬಜೆಟ್ ಅಧಿವೇಶನ ಎಷ್ಟೆಷ್ಟು ದಿವಸ ನಡೆದಿದೆ ಎಂಬುದನ್ನು ನಾವು ಪರಾಮರ್ಶೆ ಮಾಡಿದಾಗ 14–16 ದಿವಸ ನಡೆದಿದೆ. ಹಿಂದೆ ಬಜೆಟ್ ಅಧಿವೇಶನದ ಮೇಲೆ ಚರ್ಚೆಯಾಗಿರುವುದನ್ನು ನೋಡಿದಾಗ ಗರಿಷ್ಠ ನಡೆದಿರುವುದು 15 ದಿವಸ. ಮತ್ತೆ ಬೇರೆ ಬೇರೆ ವಿಷಯಕ್ಕೆ ಸಂಬಂಧಿಸಿದಂತೆ ಅಧಿವೇಶನವನ್ನು ನಡೆಸಬೇಕು, ಆದರೆ 10 ವರ್ಷಗಳ ಇತಿಹಾಸವನ್ನು ತೆಗೆದು ನೋಡಿದಾಗ ಬಜೆಟ್ ಮೇಲೆ ಗರಿಷ್ಠ ಚರ್ಚೆ ನಡೆದಿರುವುದು 15 ದಿವಸಗಳು. ಇನ್ನು ಹೆಚ್ಚು ಅವಕಾಶಗಳನ್ನು ಕೊಟ್ಟರೆ ಒಳ್ಳೆಯದು ಇಲ್ಲವೆಂದು ಹೇಳುವುದಿಲ್ಲ. ಸರ್ಕಾರ ಮತ್ತು ವಿರೋಧ ಪಕ್ಷದವರು ಕುಳಿತು ಬಜೆಟ್ ಮೇಲೆ ಇನ್ನು 15 ದಿವಸ ಚರ್ಚೆ ಮಾಡೋಣವೆಂದರೆ ಬೇಡವೆನ್ನುವುದಿಲ್ಲ. ಇಲ್ಲಿ ಕನಿಷ್ಠ 60 ದಿವಸ ಅಧಿವೇಶನ ನಡೆಸಬೇಕು ಎನ್ನುವ ನಿಯಮವನ್ನು ನಾವೇ ಹಾಕಿಕೊಂಡಿದ್ದೇವೆ, 100 ದಿವಸ ಸದನ ನಡೆಸಬೇಕೆಂಬುದಿದೆ. ಆದರೆ ಅದು ಪಾಲನೆಯಾಗುತ್ತಿಲ್ಲ, ಈ ವರ್ಷವೆಂದಲ್ಲ, ಹಿಂದಿನ ವರ್ಷಗಳಲ್ಲೂ ಪಾಲನೆಯಾಗಿಲ್ಲ, ಯಾವ ವರ್ಷ ನಿಯಮವನ್ನು ತಂದರು ಆ ವರ್ಷವೂ 60 ದಿವಸ ಅಧಿವೇಶನ ನಡೆಯಲಿಲ್ಲ. ಆ ಕಾನೂನು ಬಂದ ಮೇಲೆ ಅಲ್ಲಿಂದ ಇಲ್ಲಿಯವರೆಗೆ 60 ದಿವಸ ನಡದೇ ಇಲ್ಲ, ಗರಿಷ್ಠ ನಡೆದಿರುವುದು 52 ದಿವಸ. ಅದಕ್ಕಾಗಿ ಇನ್ನು ಮುಂಬರುವ ದಿವಸಗಳಲ್ಲಿ ಕನಿಷ್ಠ ಪಕ್ಷ 60 ದಿವಸ ನಡೆಸಬೇಕೆಂಬುದಿದೆ. ಅದಕ್ಕೆ ಸರ್ಕಾರ ಮತ್ತು ವಿರೋಧ ಪಕ್ಷ ಎಲ್ಲರೂ ಸಹಕಾರ ಮಾಡಿ 60 ದಿವಸ ನಡೆಸಬೇಕೆನ್ನುವ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದೇನೆ. ಈಗ ನಾನೇನು ವಿಷಯದ ಹಿನ್ನೆಲೆಯನ್ನು ಹೇಳಿದೆ. ಬೇಡಿಕೆ ಮೇಲೆ ಚರ್ಚೆ ಪ್ರಾರಂಭ ಮಾಡಿ, ಕೊನೆಗೆ ಗಿಲಟಿನ್ ಆಗುತ್ತದೆ ಎಂದು ಅದಕ್ಕಾಗಿ ಹೇಳಿದೆ. ಹಿಂದೆ ಹಲವಾರು ಸಾರಿ ಆಗಿದೆ, ನಾವು ವಿರೋಧ ಪಕ್ಷದ ನಾಯಕರಾಗಿದ್ದು, ವೆಲ್‌ನಲ್ಲಿ ಇದ್ದಾಗಲೂ ಸಹ ಗಿಲಟಿನ್‌ನಲ್ಲಿ ಪಾಸ್ ಮಾಡಿದ ಸಾಕಷ್ಟು ಉದಾಹರಣೆಗಳಿದ್ದಾವೆ. ನಾನು ಅದಕ್ಕೆ ಆಸ್ಪದ ಕೊಡುವುದು ಬೇಡ, ಬೇಡಿಕೆ ಮೇಲೆ ಚರ್ಚೆಯಾಗಬೇಕೆಂದು ಪದೇ ಪದೇ ಹೇಳಿದಾಗಲೂ ಕೂಡ ಅವಕಾಶ ಸಿಕ್ಕಿಲ್ಲ. ಅದಕ್ಕೆ ನಾನು ಒಂದನ್ನು ಮನವಿ ಮಾಡುವುದೇನೆಂದರೆ, ವಿರೋಧ ಪಕ್ಷದ ನಾಯಕರು, ಮಾನ್ಯ ರೇವಣ್ಣನವರು

ಫ್ಲೋರ್ ಲೀಡರ್ಸ್ ಮೊದಲು ಮಾತನಾಡಿ. ಆಮೇಲೆ ಟೈಂ ಸಿಕ್ಕರೆ ಬೇರೆ ಸದಸ್ಯರು ಮಾತನಾಡಲಿ, ಒಬ್ಬರು ಇಬ್ಬರನ್ನು ಸೆಲೆಕ್ಟ್ ಮಾಡಿದರೆ ಮಾತ್ರ ಇವತ್ತು ನಾವು ಸದನ ನಡೆಸಲು ಸಾಧ್ಯವಿದೆ. ಲಿಸ್ಟ್‌ನಲ್ಲಿರುವ 10-15 ಜನರೆಲ್ಲಾ ಮಾತನಾಡುತ್ತೇವೆಂದರೆ, ಅವಕಾಶ ಸಿಗುವುದಿಲ್ಲ. ಅವತ್ತು ನಿರ್ಣಯವಾಗಿ 24ನೇ ತಾರೀಖಿನವರೆಗೆ ಮಾತ್ರ ಅಧಿವೇಶನದಲ್ಲಿ ಕರೆದಿದ್ದು. ಆಮೇಲೆ ಎಲ್ಲರೂ ರಿಕ್ವೆಸ್ಟ್ ಮಾಡಿದ ಮೇಲೆ 29 ವರೆಗೆ ನಾವು ವಿಸ್ತರಿಸಿದೆವು. 9ನೇ ತಾರೀಖಲ್ಲದೆ ಮತ್ತೊಂದು ಸಾರಿ ನಾವು ಬಿಎಸಿ ಸಭೆಯನ್ನು ಕರೆದಾಗಲು ಸಹ, 29ನೇ ತಾರೀಖು ಅಧಿವೇಶನದ ಕೊನೆಯ ದಿವಸವೆಂಬುದನ್ನು ಮುಖ್ಯಮಂತ್ರಿಗಳು ಹೇಳಿದರು. ಹೀಗಾಗಿ ಮುಖ್ಯಮಂತ್ರಿಗಳು ಇವತ್ತು ಮಧ್ಯಾಹ್ನ ಉತ್ತರವನ್ನು ಕೊಡುತ್ತೇವೆಂದು ಹೇಳಿದ್ದಾರೆ, ಅವರು 3 ಗಂಟೆಗೆ ಇಲ್ಲ ಅಂದರೆ, 4 ಗಂಟೆಗೆ ಉತ್ತರವನ್ನು ಕೊಡಲಿ, ಅಲ್ಲಿಯವರೆಗೆ ಚರ್ಚೆ ಮಾಡಿ, 4 ಗಂಟೆಗೆ ಅವರು ಉತ್ತರವನ್ನು ಕೊಡಲಿ.

ಶ್ರೀ ಸಿದ್ದರಾಮಯ್ಯ : ಅವರು 6 ಗಂಟೆಗೆ ಉತ್ತರವನ್ನು ಕೊಡಲಿ, ನಾವೇನು ಮಾತನಾಡುವ ಹಾಗೆಯೆ ಇಲ್ಲವೇ?

(ಗೊಂದಲ)

ಅಧ್ಯಕ್ಷರು : ಪ್ಲೀಸ್ ಯಾರೂ ಮಾತನಾಡಬೇಡಿ, ಒಬ್ಬರು ಮಾತನಾಡುವಾಗ ಪದೇ ಪದೇ ಏಕೆ ಎದ್ದು ನಿಲ್ಲುತ್ತೀರಿ? ಸದನದ ಘನತೆಯನ್ನು ಕಾಯ್ದುಕೊಳ್ಳಬೇಕಾಗುತ್ತದೆ, ನಾವೆಲ್ಲಾ ಸೇರಿ decision ತೆಗೆದುಕೊಳ್ಳುತ್ತೇವೆ, ಮಂತ್ರಿಗಳು ಪದೇ ಪದೇ ಎದ್ದು ನಿಲ್ಲಬೇಕಾಗಿಲ್ಲ, we will take decision.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನೀವು ಹೇಳಿದ್ದನ್ನೆಲ್ಲಾ ಒಪ್ಪಿಕೊಂಡಿದ್ದೇವೆ. ಪ್ರಶ್ನೆ ಬಂದಿರುವುದೇನೆಂದರೆ, 9ನೇ ತಾರೀಖು ನಾವು ಒಪ್ಪಿಕೊಂಡಿದ್ದೆವು, ಮತ್ತೊಂದು ಸಾರಿ ಬಿಎಸಿ ಕರೆದಾಗಲು ಸ್ಪಷ್ಟವಾಗಿ ಹೇಳಿದ್ದೆ. ಒಂದು ನಿಯಮಾವಳಿಯನ್ನು ಮಾಡಿಕೊಂಡಿದ್ದೇವೆ, ನಿಯಮ 69ರಲ್ಲಿ ಪ್ರತಿ ದಿವಸ ಒಂದು ವಿಷಯ ತರುವುದಕ್ಕೆ ಅವಕಾಶವಿದೆ, ಅವರು ತಂದಿದ್ದಾರೆ, ನಾವು ತಂದಿದ್ದೇವೆ, ಚರ್ಚೆಯಾಗಿದೆ, ನೀವು ಅನುಮತಿಯನ್ನು ಕೊಟ್ಟಿದ್ದೀರಿ, ಮಾತನಾಡಿ ಆಗಿದೆ. ಅದನ್ನು ಮತ್ತೇ ಪ್ರಸ್ತಾಪ ಮಾಡಿ, ನಾವು ಉದ್ದೇಶ ಪೂರ್ವಕವಾಗಿ ಮಾತನಾಡಿಲ್ಲವೆಂದರೆ ಅದರಲ್ಲಿ ಅರ್ಥವಿಲ್ಲ, ಟೈಂ ಸಿಗಲಿಲ್ಲ. ಇವತ್ತು ಕೊನೆಯ ದಿವಸವೆಂದು ನೀವು ಹೇಳುತ್ತಿರಿ, ನಾನು ಅದಕ್ಕೆ, ಬಿಎಸಿ ಸೇರಿದ ಮೇಲೆ ಒಂದು ದಿವಸ ಹೋಗಿಬಿಟ್ಟಿದೆ, ಅವತ್ತು ಅಸೆಂಬ್ಲಿ

ಮುಂದೂಡುವಂಥ ಸನ್ನಿವೇಶ ನಿರ್ಮಾಣವಾಯಿತು, ಅದಕ್ಕೆ 30ನೇ ತಾರೀಖಿನವರೆಗೆ ನಡೆಸಿ ಎಂದು ನಿಮಗೂ ನಾವೆಲ್ಲಾ request ಮಾಡಿದೆವು. We are under the impression that, ಸರ್ಕಾರ ಇದನ್ನು ಉದಾರವಾಗಿ ಒಪ್ಪಿಕೊಳ್ಳುತ್ತದೆಂದು ತಿಳಿದುಕೊಂಡಿದ್ದು. ಇಲ್ಲ, 29ಕ್ಕೆ ಆಗಬೇಕೆಂದು ನೀವು ಹಠ ಮಾಡಿದರೆ, ನಾವೇನು ಮಾಡುವುದಕ್ಕಾಗುವುದಿಲ್ಲ, ನೀವು ಉತ್ತರವನ್ನು ಕೊಡುವುದೇ ಇಲ್ಲವೆಂದರೆ, ನಾವೇನು ಮಾಡುವುದಕ್ಕಾಗುವುದಿಲ್ಲ. ನಾವೇನು ಕಾನೂನು ರೀತ್ಯ ಪ್ರತಿಭಟನೆಗಳನ್ನು ಮಾಡಬೇಕೋ ಅವನ್ನು ಮಾಡುತ್ತೇವೆ ಅಷ್ಟೆ, that is a different thing. But, the question is, ಒಂದು ಸರ್ಕಾರವನ್ನು ನಡೆಸುವಾಗ, ನೀವು ಸ್ವಲ್ಪ ಉದಾರವಾಗಿದ್ದರೆ ಬಹಳ ಒಳ್ಳೆಯದು. ಚರ್ಚೆಯಾಗಲಿಲ್ಲ, ಗಿಲಟಿನ್ ಮಾಡುತ್ತೇವೆಂದರೆ, ಮಾಡಿಕೊಂಡು ಹೋಗಿ, ನಾವು ಮನೆಗೆ ಹೋಗುತ್ತೇವೆ, ಜನರ ಮುಂದೆ ಹೋಗಿ ಹೇಳುತ್ತೇವೆ. 'ಈ ಸರ್ಕಾರದಲ್ಲಿ ಹೀಗೆ ತಪ್ಪುಗಳಿರುವುದರಿಂದ ಹೀಗೆ ಮಾಡುತ್ತಾರೆಂದು ಹೇಳಬೇಕಾ ಗುತ್ತದೆ. ಆದುದರಿಂದ ಈಗ ರೋಷನ್ ಬೇಗ್ ಅವರು ಮಾತನಾಡುತ್ತಾರೆ, ನಾನು 2 ಗಂಟೆಗೆ ಮಾತನಾಡುತ್ತೇನೆ, ರೇವಣ್ಣ ಸ್ವಲ್ಪ ಮಾತನಾಡಲಿ, ಮುಖ್ಯ ಮಂತ್ರಿಗಳು 6 ಗಂಟೆಗೆ ಉತ್ತರವನ್ನು ಕೊಡಲಿ.

(ಗೊಂದಲ)

ಅಧ್ಯಕ್ಷರು : ಎಲ್ಲರಿಗೂ ಮಾತನಾಡಲು ಅವಕಾಶ ಮಾಡಿಕೊಡುವುದಿಲ್ಲವೆಂದು ನಾನು ಮೊದಲೇ ಹೇಳಿದ್ದೇನೆ, ನಾನು ಮೊದಲಿನಿಂದಲೂ, ನಿಮಗೆ ಬೇಡಿಕೆ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಸಿಗುವುದಿಲ್ಲ, ಪದೇ ಪದೇ ಹೇಳುತ್ತಿದ್ದೇನೆ, ಶಾಸಕರಲ್ಲಿ request ಮಾಡುತ್ತಿದ್ದೇನೆ, ಮತ್ತೆ ಅದೇ ಪರಿಸ್ಥಿತಿ ಉದ್ಭವವಾಗಿದೆ.

3. ವಿತ್ತೀಯ ಕಾರ್ಯಕಲಾಪ :

2009-10ನೇ ಸಾಲಿನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ.

ಶ್ರೀ ಆರ್. ರೋಷನ್ ಬೇಗ್ (ಶಿವಾಜಿನಗರ) : ಮಾನ್ಯ ಅಧ್ಯಕ್ಷರೆ, 2009-10ನೇ ಸಾಲಿನ ಬೇಡಿಕೆಗಳ ಮೇಲೆ ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು. ನಾನು ಆರೋಗ್ಯ ಇಲಾಖೆಯ ಬಗ್ಗೆ ಮಾತನಾಡಲು ಇಷ್ಟಪಡುತ್ತೇನೆ, ಈಗ ಬೆಂಗಳೂರು ನಗರದಲ್ಲಿ, ಇಡೀ

ರಾಜ್ಯದಲ್ಲಿ ಬೀದಿ ಬೀದಿಗಳಲ್ಲಿ ಚಿಕೂನ್ ಗುನ್ಯ, ಡೆಂಗ್ಯು ಮಲೇರಿಯಾ ರೋಗಗಳೆಲ್ಲಾ ಶುರುವಾಗಿದೆ. ಮಂತ್ರಿಗಳಾದಿಯಾಗಿ ಆಸ್ಪತ್ರೆಗಳಿಗೆ ಹೋಗಿ ನೋಡಿರುವುದನ್ನು ಯಾವತ್ತೂ ನಾನು ನೋಡಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಇಲ್ಲಿದ್ದಾರೆ, ಕಾಲರಾ, ಮಲೇರಿಯಾ, ಡೆಂಗ್ಯು ಚಿಕೂನ್ ಗುನ್ಯ ಸೊಳ್ಳೆಗಳಿಂದ ಬರುವುದು ಎಂದು ಹೇಳುತ್ತಾರೆ. ಸೊಳ್ಳೆಗಳಿಂದ ಈ ರೋಗಗಳೆಲ್ಲಾ ಬರುತ್ತದೆಂದು ವೈದ್ಯರೆಲ್ಲಾ ಹೇಳುತ್ತಾರೆ. ಆದರೆ ಬೆಂಗಳೂರು ಮಹಾನಗರ ಪಾಲಿಕೆಯಿಂದ, for eradication of mosquitoesಗೆ ಎಷ್ಟು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದ್ದಾರೆಂದರೆ, ಸುಮಾರು 16 ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ. 2005–06ರವರೆಗೆ ಮೂರೂವರೆ ಕೋಟಿ ರೂಪಾಯಿಗಳು, 2006–07 ರವರೆಗೆ 3 ಕೋಟಿ 80 ಲಕ್ಷ ರೂಪಾಯಿಗಳು, 2007–08 ರವರೆಗೆ 4 ಕೋಟಿ 59 ಲಕ್ಷ ರೂಪಾಯಿಗಳು. ಬೆಂಗಳೂರು ಮಹಾನಗರ ಪಾಲಿಕೆಯಿಂದ for eradication of mosquitoes ಸುಮಾರು 16 ಕೋಟಿ ರೂಪಾಯಿಗಳು ಖರ್ಚಾಗಿರುವುದು. ಇವರೊಬ್ಬ RTI Activist, Right to Information Actನಲ್ಲಿ ಬರೆದು ಮಾಹಿತಿಯನ್ನು ತರಿಸಿದ್ದಾರೆ, ಇದನ್ನು ತಮ್ಮ ಹತ್ತಿರ ಕಳುಹಿಸುತ್ತಿದ್ದೇನೆ. ಇದಕ್ಕೆ 16 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾದರೆ, ನನ್ನ ಮನೆ ಇರುವುದು MLA ಕಾಲೋನಿಯಲ್ಲಿರುವುದು, ನಮ್ಮ ಏರಿಯಾದಲ್ಲಿ ಯಾರು ಒಂದು ದಿವಸ ಫಾಗ್ ಮಾಡಿದ್ದು ನಾನು ನೋಡಿಲ್ಲ.

ನಮ್ಮ areaದಲ್ಲಿ ಒಂದೂ ದಿವಸವೂ ನಾನು ಯಾರೂ ಕೂಡ fog ಮಾಡಿದ್ದನ್ನು ನೋಡಿಲ್ಲ. ಒಂದು ದಿವಸವಾದರೂ ಬೆಂಗಳೂರು ಮಹಾನಗರ ಪಾಲಿಕೆಯವರು ಆ ಕಡೆಗೆ ಬಂದು mosquitoes ಬಗ್ಗೆ camp ಮಾಡಿದ್ದನ್ನು ನಾನು ನೋಡಿಲ್ಲ. ಆದರೆ 2005ರಿಂದ ಇದುವರೆಗೂ ಸಹ 16 ಕೋಟಿ ರೂ.ಗಳು ಇದಕ್ಕಾಗಿ ಖರ್ಚಾಗಿದೆ. ಈ 16 ಕೋಟಿ ರೂ.ಗಳ ಬಗ್ಗೆ ತಾವು ಏನಾದರೂ ತನಿಖೆ ಮಾಡಿಸುತ್ತೀರಾ? ಇದನ್ನು ಏನಾದರೂ ಲೋಕಾಯುಕ್ತಕ್ಕೆ refer ಮಾಡುತ್ತೀರಾ? ಇದನ್ನು CoD ಗೆ ಏನಾದರೂ refer ಮಾಡುತ್ತೀರಾ? ಎಂದು ಹೇಳಬೇಕು. ಈ ಮಾಹಿತಿಯನ್ನು ಮಾನ್ಯ ಅಧ್ಯಕ್ಷರಿಗೆ ನಾನು ಈಗ ಕಳುಹಿಸಿಕೊಡುತ್ತಿದ್ದೇನೆ. ಮಾನ್ಯ ಸಭಾಧ್ಯಕ್ಷರೆ, Health Department ಬಗ್ಗೆ ಇನ್ನೊಂದು ನಾನು ಹೇಳಬೇಕೆಂದರೆ, ಇಲ್ಲಿ ಒಂದು

ದೊಡ್ಡ drug cartel ಇದೆ. ಕೆಲವರು ಶಾಸಕರ ಭವನದಲ್ಲಿ ಮಾತ್ರವೇ ಒಳ್ಳೆಯ ಔಷಧಿ ಸಿಗುತ್ತದೆ ಎನ್ನುತ್ತಾರೆ. High Court Premises ನಲ್ಲಿ High Court Judges ಮತ್ತು High Courtನಲ್ಲಿ lawyersಗೆ ಮತ್ತು ಶಾಸಕರ ಭವನದಲ್ಲಿ ಹಾಗೂ ವಿಧಾನ ಸೌಧದ loungeನಲ್ಲಿ ಏನೊಂದು medicines ಸಿಗುತ್ತದೋ, ಅದು 100% ಪರವಾಗಿಲ್ಲ ಎನ್ನುತ್ತಾರೆ. ಆದರೆ ಬೇರೆ ಕಡೆ chemist ಅಂಗಡಿಗಳಲ್ಲಿ ಸಿಗುವುದು medicines ಅಲ್ಲ. Most of them ನಕಲಿ medicines ಎಂದು ಹೇಳುತ್ತಾರೆ. Spurious medicines stop ಮಾಡುವುದಕ್ಕೆ ಸರ್ಕಾರದವರು ಏನು ಕ್ರಮವನ್ನು ತೆಗೆದುಕೊಳ್ಳುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. Karnataka Antibiotic Pharma Limited (KAPL) ಎಂದು ಇದೆ. ಅದರಲ್ಲಿ State 51% ಮತ್ತು Centre 49% ಪಾಲುಗಾರಿಕೆ ಇದೆ. All the antibiotics have be purchased from KAPL ಎಂದು President Ruleನಲ್ಲಿ orderವೊಂದನ್ನು ಹೊರಡಿಸಲಾಗಿದೆ. Antibiotic medicines ಯಾವುದೇ ಇರಲಿ, ಎಲ್ಲವನ್ನೂ KAPL ನಿಂದ purchase ಮಾಡಬೇಕೆಂದು ಆದೇಶವಾಗಿತ್ತು. ಆದರೆ ನನಗೆ ಆಶ್ಚರ್ಯವಾಗುವುದು ಏನೆಂದರೆ, ಈ ವಾತಾವರಣದಲ್ಲಿ, ವಿಧಾನಸೌಧಕ್ಕೆ ಒಬ್ಬ common man ಬರಬೇಕಾದರೆ ಗಂಟೆಗಟ್ಟಲೆ ಅಲ್ಲಿ ನಿಂತಿರಬೇಕು. ಮಾನ್ಯ ಯಡಿಯೂರಪ್ಪನವರೆ, ಸಾವಿರಾರು ಜನರು ಗಂಟೆಗಟ್ಟಲೆ ಆ ಕಡೆಗೆ ನಿಂತಿರುವುದನ್ನು ತಾವು ನೋಡಿದ್ದೀರಿ. ಅದಕ್ಕೆ ನಾವೇನೂ ಮಾಡಲಿಕ್ಕಾಗುವುದಿಲ್ಲ. ವಾತಾವರಣ ಆ ರೀತಿ ಇದೆ. Securityಯಿಂದಾಗಿ ಯಾರು ಬಂದರೂ ಸಹಿತ ವಿಧಾನಸೌಧದ ಒಳಗಡೆ ಬಿಡಲಿಕ್ಕಾಗುವುದಿಲ್ಲ. ಆದರೆ, ಈ ಜೈಸ್ವಾಲ್ ಯಾರು? ದೀಪಕ್ ಯಾರು? ಘೋಡ್ವಾಲ್ ಯಾರು? ಇವರೆಲ್ಲಾ drug cartel agents. ವಿಧಾನಸೌಧದಲ್ಲಿ ಇವರಿಗೆಲ್ಲಾ ಏನು ಕೆಲಸ? ಯಾರು ಈ ಜೈಸ್ವಾಲ್, ದೀಪಕ್ ಮತ್ತು ಘೋಡ್ವಾಲ್? ವಿಧಾನಸೌಧದ ಒಳಗಡೆ ಬರುವುದಕ್ಕೆ ಬೇರೆಯವರಿಗೆ entry problem ಇದ್ದರೆ, ಇವರೆಲ್ಲಾ ಹೇಗೆ ಬರುತ್ತಾರೆ? These persons are seen in the corridors of power. These persons are the suppliers of drugs. ಮಾನ್ಯ ಅಧ್ಯಕ್ಷರೆ, ಮಾನ್ಯ Health Minister ರವರು function ವೊಂದರಲ್ಲಿ ಹೇಳಿದ್ದಾರೆ. ಆ

function ನಲ್ಲಿ ನಮ್ಮ Women and Child Welfare Minister ಮಾನ್ಯ ನರೇಂದ್ರಸ್ವಾಮಿ ಹಾಗೂ Medical Education Minister ಇಬ್ಬರೂ ಸಹ ಇದ್ದರು. 'Government hospital's stock landing in private drug stores' ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. Medical Education Minister ರವರಾದ ಮಾನ್ಯ ರಾಮಚಂದ್ರೇಗೌಡರು, ನಾವೇನು ಔಷಧಿಗಳನ್ನು ಖರೀದಿ ಮಾಡುತ್ತೇವೋ, ಅದರಲ್ಲಿ ಶೇಕಡಾ 40 ರಷ್ಟು ಔಷಧಿಗಳು ವಾಪಸ್ drug storesಗೆ ಹೋಗುತ್ತದೆಂದು ಹೇಳಿದ್ದಾರೆ. ಇದು ಕೇವಲ ಒಂದು ಪೇಪರ್‌ನಲ್ಲಿ ಮಾತ್ರ ವರದಿಯಾಗಿಲ್ಲ. ಇದು 'The Hindu' paper and 'Indian Express' ಪತ್ರಿಕೆಗಳಲ್ಲಿ ವರದಿಯಾಗಿದೆ. 'Times of Indis' dated January 9th ರಲ್ಲಿ ಸಹ ಆ ಬಗ್ಗೆ ವರದಿಯಾಗಿದೆ. ಸದರಿ function ನಲ್ಲಿ ಹಾಜರಿದ್ದ Ladies Minister ಆಗಿರುವ ಮಾನ್ಯ ನರೇಂದ್ರಸ್ವಾಮಿ ಯವರೂ ಕೂಡ 'ಹೌದು, ನಿಜ' ಎಂದು ಆ ಬಗ್ಗೆ ಒಪ್ಪಿಕೊಳ್ಳುತ್ತಾರೆ.

ಶ್ರೀ ಪಿ.ಎಂ.ನರೇಂದ್ರಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ನನ್ನನ್ನು 'Ladies Minister' ಎಂದು ಹೇಳುತ್ತಿದ್ದಾರೆ. ಅದನ್ನು ಕಡತದಿಂದ ತೆಗೆಯಬೇಕು. ಮಾನ್ಯ ಸದಸ್ಯರಿಗೆ ಈ ಬಗ್ಗೆ ಎಚ್ಚರಿಕೆ ಕೊಡಬೇಕು.

ಅಧ್ಯಕ್ಷರು : ಮಾನ್ಯ ರೋಷನ್ ಬೇಗ್‌ರವರೆ, ಆ ರೀತಿಯ ಪದ ಪ್ರಯೋಗ ಮಾಡುವುದು ಸರಿಯಲ್ಲ.

ಶ್ರೀ ಆರ್.ರೋಷನ್ ಬೇಗ್ : Women and Child Welfare Minister ಕೂಡ ಆ functionನಲ್ಲಿ ಹಾಜರಿದ್ದರು. ಮಾನ್ಯ ಅಧ್ಯಕ್ಷರೆ, ನಾನು ಕೇಳುವುದೇನೆಂದರೆ, ಶೇಕಡಾ 40ರಷ್ಟು drugs drug storesಗೆ ಹೇಗೆ ಹೋಗುತ್ತದೆ? ಅದರ ಬಗ್ಗೆ ಸ್ವಲ್ಪ ತನಿಖೆಯಾಗಬೇಕು. Government of India ದಿಂದ ಒಂದು Circular ಬಂದಿದೆ. ಮಾನ್ಯ ಶಾಸಕರು ದಯವಿಟ್ಟು ಸ್ವಲ್ಪ ಆರಾಮಾಗಿ ಕುಳಿತುಕೊಳ್ಳಿ.

ಅಧ್ಯಕ್ಷರು : ದಯವಿಟ್ಟು ಶಾಸಕರು ತಮ್ಮ ತಮ್ಮ ಸ್ಥಳಗಳಲ್ಲಿ ಕುಳಿತುಕೊಳ್ಳಬೇಕು. ದಯವಿಟ್ಟು ಪರಸ್ಪರ ಮಾತನಾಡಬಾರದು.

ಶ್ರೀ ಆರ್.ರೋಷನ್ ಬೇಗ್ : Principal Secretary, Ministry of Helath, Government of India ರವರು guidelinesವೊಂದನ್ನು

circular ಮೂಲಕ issue ಮಾಡಿದ್ದಾರೆ. ಅದರಲ್ಲಿ ಅವರು ತಮಿಳುನಾಡಿನಲ್ಲಿ ಯಾವ ತರಹ ಇದೆಯೋ, procurement of drugsನಲ್ಲಿ ಅದನ್ನು model ಆಗಿ ಇಟ್ಟುಕೊಳ್ಳಬೇಕೆಂದು ಹೇಳಿದ್ದಾರೆ. ದಯವಿಟ್ಟು ಶಾಸಕರು ಸ್ವಲ್ಪ seriousness ತೋರಿಸಿ, ಕುಳಿತುಕೊಳ್ಳಿ.

ಅಧ್ಯಕ್ಷರು : ದಯವಿಟ್ಟು ಶಾಸಕರು ಕುಳಿತುಕೊಳ್ಳಿ.

ಶ್ರೀ ಆರ್.ರೋಷನ್‌ಬೇಗ್ : ತಮಿಳುನಾಡು model ಬಹಳ ಚೆನ್ನಾಗಿದೆ, ಅದನ್ನು ಎಲ್ಲರೂ adopt ಮಾಡಿಕೊಳ್ಳಿ ಎಂದು Principal Secretary ಯವರು ಹೇಳಿದ್ದಾರೆ. ತಮಿಳುನಾಡಿನವರು procurement of drugs ಯಾವ ತರಹ ಮಾಡುತ್ತಿದ್ದಾರೋ, ಆ ತರಹ ಎಲ್ಲರೂ ಮಾಡಿ ಎಂಬ ಸಲಹೆಯೊಂದನ್ನು Government of India ದವರು ಕೊಟ್ಟಿದ್ದಾರೆ. ಇವತ್ತು ಕರ್ನಾಟಕ ಯಾವ levelನಲ್ಲಿದೆ ಎಂದರೆ, South Indiaದಲ್ಲಿ ಒಂದು ಕಾಲದಲ್ಲಿ Karnataka was No.1 But, ಇವತ್ತು ಬಹಳ ಬೇಜಾರಾಗುವುದು ಏನೆಂದರೆ, Karnataka in number fourth in the list. Health Sectorನಲ್ಲಿ Tamil Nadu is No.1, Kerala is No.2, Andhra Pradesh is No.3 and Karnataka has gone to fourth place. ಅದು ಏಕೆ ಎಂದರೆ, ನಾವು Principal Secretaryಗಳನ್ನು ಆಗಾಗ್ಗೆ Change ಮಾಡುತ್ತಿರುತ್ತೇವೆ. ತಮಿಳುನಾಡಿನಲ್ಲಿ 9 ವರ್ಷಗಳಿಂದ ಒಬ್ಬರೇ Principal Secretary ಇದ್ದಾರೆ. ಗುಜರಾತ್‌ನಲ್ಲಿ ಸುಮಾರು 8 ವರ್ಷಗಳಿಂದ ಒಬ್ಬರೇ Principal Secretary ಇದ್ದಾರೆ, ಅವರೇ ಇವತ್ತೂ ಸಹ continue ಆಗುತ್ತಿದ್ದಾರೆ. Andhra Pradeshನಲ್ಲಿ ಏಕೆ ವ್ಯವಸ್ಥೆ ಬಹಳ ಚೆನ್ನಾಗಿದೆ ಎಂದರೆ, ಸುಮಾರು 6 ವರ್ಷಗಳಿಂದ ಒಬ್ಬರೇ Principal Secretary ಅಲ್ಲಿ continue ಆಗುತ್ತಿದ್ದಾರೆ. ಆದರೆ ಇಲ್ಲಿರುವ Drug Controlನವರು Principal Secretaryಗೆ ನಾವ್ಯಾರೂ ಇಲ್ಲಿರುವುದಕ್ಕೆ ಬಿಡುವುದಿಲ್ಲ ಎಂದು warning ಕೊಡುತ್ತಾರೆ. ಒಬ್ಬ Principal Secretary ಒಳ್ಳೆಯ ಕೆಲಸ ಮಾಡುತ್ತಿದ್ದರೆ, ಒಬ್ಬ Principal Secretary medicines ಖರೀದಿ ಮಾಡುವುದಕ್ಕೆ ಈ ಕಾಯ್ದೆ ಅಥವಾ ಕಾನೂನು follow ಮಾಡಬೇಕೆಂದು ಹೇಳಿದರೆ, Drug Controlನವರು 'ನಿನ್ನನ್ನು ಇಲ್ಲಿಂದ

ಓಡಿಸುತ್ತೇವೆ' ಎಂದು warn ಮಾಡುತ್ತಾರೆ. ಆ Principal Secretary ಯವರನ್ನು ಓಡಿಸಿ, ಬೇರೆಯವರನ್ನು ತರುತ್ತಾರೆ. ಇದೇ ಸರ್ಕಾರ ಒಂದೆರಡು ತಿಂಗಳ ಮುಂಚೆ Principal Secretaryಯಾಗಿದ್ದ ಮದನ್‌ಗೋಪಾಲ್ ರವರನ್ನು ದಿಢೀರ್ ಎಂದು ಎತ್ತಂಗಡಿ ಮಾಡಿತು. ಅವರು ಒಳ್ಳೆಯ officer ಆಗಿದ್ದರು. ನಾನು ಹೇಳುವುದೇನೆಂದರೆ, ತಮಿಳುನಾಡಿನಲ್ಲಿ ಒಬ್ಬ ಒಳ್ಳೆಯ officer 9 ವರ್ಷಗಳಿಂದ ಒಬ್ಬರೇ ಇರುತ್ತಾರೆ ಎಂದರೆ, ನಮ್ಮಲ್ಲಿ ಏಕೆ ಇರುವುದಿಲ್ಲ? ಇವತ್ತು ತಮಿಳುನಾಡು No.1 ಇದೆ ಎಂದರೆ, ದಕ್ಷ ಅಧಿಕಾರಿಯೊಬ್ಬರು 9 ವರ್ಷಗಳಿಂದ ಅಲ್ಲಿ ಕೆಲಸ ಮಾಡುತ್ತಿರುವುದೇ ಕಾರಣವಾಗಿದೆ. ಸುಮಾರು 180 ಕೋಟಿ ರೂ.ಗಳನ್ನು for the purchase of drugs ನಾವು ಖರ್ಚು ಮಾಡುತ್ತಿದ್ದೇವೆ. 1679 Primary Health Centres ನಮ್ಮಲ್ಲಿದೆ. ಈ Primary Health Centresಗೆ ಸುಮಾರು 1 ಲಕ್ಷ ರೂ.ಗಳವರೆಗೂ ಹಾಗೂ General Hospitalsಗೆ 10–50 ಲಕ್ಷ ರೂ.ಗಳವರೆಗೂ for purchase of drugs ಹಣ ಬಿಡುಗಡೆ ಮಾಡುತ್ತೇವೆ. ಈ Primary Health Centres ಬಿಡಿ, ಬೆಂಗಳೂರು ನಗರದಲ್ಲಿರುವ So called ದೊಡ್ಡ ದೊಡ್ಡ ಸರ್ಕಾರಿ ಆಸ್ಪತ್ರೆಗಳಾದ, ಬೌರಿಂಗ್, ಘೋಷಾ, ವಿಕ್ಟೋರಿಯಾ ಮತ್ತು ವಾಣಿವಿಲಾಸ ಆಸ್ಪತ್ರೆಗಳಲ್ಲೆಲ್ಲಾ shortage of medicines ಇರುವುದನ್ನು ನಾನು ನೋಡಿದ್ದೇನೆ. ಒಬ್ಬ ಬಡವ ರೋಗಿ ಹೋದರೂ ಕೂಡ, ಅವನಿಗೆ ಬೇಕಾದ medicines ಅಲ್ಲಿ ಸಿಗುವುದಿಲ್ಲ. ಡಾಕ್ಟರ್ಸ್ 'ಇಲ್ಲಿ medicines ಇಲ್ಲ, ಆಚೆಯಿಂದ ಡ್ರಗ್ಸ್ ತೆಗೆದುಕೊಂಡು ಬನ್ನಿ' ಎಂದು ಹೇಳುತ್ತಾರೆ. ಎಷ್ಟು ಸಾರಿ ನಾನಿಲ್ಲಿ complaint ಮಾಡಿದ್ದೇನೆ. Medical Education Ministerರವರಾದ ಮಾನ್ಯ ರಾಮಚಂದ್ರಗೌಡ ರವರನ್ನು ನಾನು ಅಭಿನಂದಿಸುತ್ತೇನೆ. I should go on record and say that ನಾನು ಯಾವಾಗ ಅವರಿಗೆ ಹೇಳಿದರೂ ಕೂಡ ಅವರು immediate ಆಗಿ ಅದಕ್ಕೆ respond ಮಾಡಿದ್ದಾರೆ. ಬೌರಿಂಗ್ ಆಸ್ಪತ್ರೆಗೆ ನಾನು suggest ಮಾಡಿದ ತಕ್ಷಣ ಮಾನ್ಯ ರಾಮಚಂದ್ರಗೌಡರು ಆ ಆಸ್ಪತ್ರೆಗೆ ECG machines ಇತ್ಯಾದಿಗಳನ್ನೆಲ್ಲಾ ತರಿಸಲು order ಮಾಡಿದ್ದಾರೆ. I should go on record. ಒಳ್ಳೆಯ ಕೆಲಸ ಮಾಡಿದರೆ ಅದನ್ನು ಅಭಿನಂದಿಸಬೇಕು. ನಾನು

ಮಾನ್ಯ ರಾಮಚಂದ್ರಗೌಡರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ಅದೇ ತರಹ ನಾನು Health and Family Welfare Minister ರವರಿಗೆ ನಾಲ್ಕಾರು ಸಲ ಫೋನ್ ಮಾಡಿದರೂ ಕೂಡ, ಅವರು ಫೋನ್‌ನಲ್ಲಿ ಸಿಗುವುದಿಲ್ಲ. ನಾವು ಯಾವಾಗ ಕೇಳಿದರೂ ಸಹ, ಅವರು ಬಳ್ಳಾರಿಗೆ ಹೋಗಿದ್ದಾರೆಂದು ಹೇಳುತ್ತಾರೆ. Officersಗೆ Phone ಮಾಡಿದರೆ ಅವರೂ ಕೂಡ ಸಿಗುವುದಿಲ್ಲ. Principal Secretary ಕೂಡ files ತೆಗೆದುಕೊಂಡು ಬಳ್ಳಾರಿಗೆ ಹೋಗಿರುತ್ತಾರೆ. ಇದರ ಬಗ್ಗೆ ಸ್ವಲ್ಪ ಅವರು ನೋಡಬೇಕು. Health Department ವ್ಯಾಪ್ತಿಗೆ ಬರುವ ಎಷ್ಟೋ ಆಸ್ಪತ್ರೆಗಳಲ್ಲಿ medicines ಮತ್ತು doctors ಇಲ್ಲ.

ನಮ್ಮ ಅಂದಾಜು ಸಮಿತಿಯ ಅಧ್ಯಕ್ಷರಾದ ಅಭಯ ಪಾಟೀಲ್‌ರವರಿಗೆ ಸಜೆಸ್ಟ್ ಮಾಡಿದಾಗ, ನಮ್ಮನ್ನೆಲ್ಲಾ ಘೋಷಾ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಇಲಾಖೆಯವರು ಇಷ್ಟೆಲ್ಲಾ ಸಾಮಾನುಗಳು, ಇಕ್ಯುಪ್‌ಮೆಂಟ್‌ಗಳನ್ನು ಸರಬರಾಜು ಮಾಡಿದ್ದೇವೆಂದು ನಮಗೆ ಒಂದು ಲಿಸ್ಟ್ ಕೊಟ್ಟಿದ್ದರು. ಸಮಿತಿ ಆ ಆಸ್ಪತ್ರೆಗೆ ಹೋದರೆ, ಇಸಿಜಿ ಆಸ್ಪತ್ರೆಯಲ್ಲಿ ಇಲ್ಲವೆ ಇಲ್ಲ. ಆ ಸಮಿತಿಯಲ್ಲಿ ಬಿಜೆಪಿ, ಜೆಡಿಎಸ್ ನಿಂದಲೂ ಸದಸ್ಯರಿದ್ದರು, ಆಸ್ಪತ್ರೆಗೆ ಹೋಗಿ ಚೆಕ್ ಮಾಡಿದರೆ, ಒಂದು ಇಸಿಜಿ ಮೆಷಿನ್ ಇಲ್ಲ, ವೈದ್ಯರು ಸರಿಯಾಗಿಲ್ಲ. ಆಶ್ಚರ್ಯ ಏನಾಗಿದೆ ಎಂದರೆ, ಫಾರ್ಮಸಿ ಸೆಕ್ಷನ್‌ಗೆ ಹೋಗಿ ನೋಡಿದರೆ, 2007ರ out dated medicines ಎಲ್ಲಾ ಅಲ್ಲಿ ಸ್ಟಾಕ್ ಮಾಡಿದ್ದಾರೆ. ಆ ಆಸ್ಪತ್ರೆ ವಿಧಾನಸೌಧದಿಂದ ಒಂದು–ಅರ್ಧ ಕಿ.ಮೀ. ದೂರವಿಲ್ಲ, ಆ ಘೋಷಾ ಆಸ್ಪತ್ರೆಯಲ್ಲಿ out dated medicines ಇರಬೇಕಾದರೆ, ಹಳ್ಳಿಗಳಲ್ಲಿರುವ Primary Health Centre ಗಳಲ್ಲಿ ಏನಾಗಿರಬೇಕು? ಎಲ್ಲಾ date expiry ಆಗಿದೆ.

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ಸಚಿವರು): ನಾನು ಮೊನ್ನೆ ತಾನೆ ಒಂದು ಹಾಸ್ಯ ಪ್ರಸಂಗವನ್ನು ಓದಿದ್ದೆ, ಆರೋಗ್ಯ ಸರಿ ಇಲ್ಲದಿದ್ದರೆ ಡಾಕ್ಟರ್ ಹತ್ತಿರ ಹೋಗಬೇಕಂತೆ, ಏಕೆ? ಡಾಕ್ಟರ್ ಬದುಕಬಾರದಾ? ಆಮೇಲೆ ಡಾಕ್ಟರ್ ಬರೆದುಕೊಟ್ಟ ಮೆಡಿಸಿನ್ಸ್ ಎಲ್ಲಾ ತೆಗೆದುಕೊಳ್ಳಬೇಕಂತೆ ಏಕೆ? ಮೆಡಿಕಲ್ ಸ್ಟೋರ್ಸ್‌ರವರು ಬದುಕಬಾರದಾ? ಆ

ಮೇಲೆ ಅದನ್ನು ತಂದು ಮೋರಿಗೆ ಬಿಸಾಕಬೇಕಂತೆ, ಏಕೆ? ನೀವು ಬದುಕ ಬಾರದಾ?

ಶ್ರೀ ಆರ್. ರೋಷನ್ ಬೇಗ್ : ಈ ಆಸ್ಪತ್ರೆಗಳಲ್ಲಿರುವ ಸೂಪರಿಂಟೆಂಡೆಂಟ್‌ಗಳು ಏನು ಮಾಡುತ್ತಾರೆಂದರೆ, 6 ತಿಂಗಳಿನಷ್ಟು ಪ್ಲಾಸ್ಟಿಕ್ ಮೆಟಿರಿಯಲ್ ಅನ್ನು 25–30 ಸಾವಿರಕ್ಕೆ ಆಕ್ಷನ್ ಮಾಡುತ್ತಾರೆ, ಆ ಪ್ಲಾಸ್ಟಿಕ್ ಮೆಟಿರಿಯಲ್‌ನಲ್ಲಿ ಸರ್ಜಿಕಲ್ ಮೆಷಿನ್ ಇರುತ್ತದೆ, ಅದು ಯಾರಿಗೂ ಗೊತ್ತಾಗುವುದೇ ಇಲ್ಲ. ಇಂಜೆಕ್ಷನ್ ಕೊಡುವುದಕ್ಕೆ ಯಾವುದು instrument ಇರುತ್ತದೆ, ಅದೆಲ್ಲಾ ಪುನಃ ರಿಸೈಕಲ್ ಆಗುತ್ತದೆ. ಈ ಬಗ್ಗೆ ಸರ್ಕಾರ ಬಹಳ ಗಂಭೀರವಾಗಿ ತನಿಖೆ ಮಾಡಬೇಕು.

ಶ್ರೀ ಕೆ.ಜೆ.ಜಾರ್ಜ್ : ಮಾನ್ಯ ರೋಷನ್‌ಬೇಗ್‌ರವರು ಒಂದು ವಿಚಾರವನ್ನು ಈಗಾಗಲೇ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಬೆಂಗಳೂರು ನಗರದಲ್ಲಿ ಈ ಚಿಕೂನ್ ಗುನ್ಯಾ, ಡೆಂಗ್ಯೂ, virus infection ಬಹಳಷ್ಟು ಇದೆ. ಆದರೆ ಯಾವುದೇ ಸರ್ಕಾರಿ ಆಸ್ಪತ್ರೆಯಲ್ಲಿಯೂ ಕೂಡ ಈ ಡೆಂಗ್ಯೂ ರೋಗಕ್ಕೆ ಚಿಕಿತ್ಸೆ ನೀಡುವಂಥ ವ್ಯವಸ್ಥೆ ಇಲ್ಲ. ಇವತ್ತು ಮಣಿಪಾಲ್ ಮತ್ತು ಎಂ.ಎಸ್. ರಾಮಯ್ಯ ಆಸ್ಪತ್ರೆಗಳಲ್ಲಿ ಈ ಡೆಂಗ್ಯೂ ರೋಗಕ್ಕೆ ಚಿಕಿತ್ಸೆ ಮಾಡುತ್ತಾರೆ. ಅಲ್ಲಿಗೆ ಒಬ್ಬ ರೋಗಿ ಹೋದರೆ ಸುಮಾರು 3–4 ಲಕ್ಷ ಖರ್ಚು ಮಾಡಬೇಕಾಗುತ್ತದೆ, ಚಿಕೂನ್ ಗುನ್ಯಾ ಎಂದು ಸರ್ಕಾರಿ ಆಸ್ಪತ್ರೆಗೆ ದಾಖಲಿಸುತ್ತಾರೆ, ಸುಮಾರು 8–9 ದಿವಸವಾಗಿ ಅವರಿಗೆ ಡೆಂಗ್ಯೂ ಬಂದ ಮೇಲೆ ಅವರನ್ನು ಡಿಸ್‌ಚಾರ್ಜ್ ಮಾಡುತ್ತಾರೆ. ಆ blood count ಕಡಿಮೆಯಾಗಿ ಸುಮಾರು ಜನರು ಸಾವನ್ನಪ್ಪಿದ್ದಾರೆ, ಈ ಡೆಂಗ್ಯೂ ಜ್ವರದಿಂದ ಜನರು ಸಾಯುತ್ತಿದ್ದಾರೆ, ಈ ಒಂದು ವಿಚಾರವಾಗಿ ಸರ್ಕಾರದವರು ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಬೇಕು, ಕಾರ್ಪೋರೇಷನ್‌ನಿಂದ ಒಂದು ರೂಪಾಯಿ ಕೂಡ ಪರಿಹಾರವನ್ನು ಕೊಡುತ್ತಿಲ್ಲ, ಅಂಥ ರೋಗಿಗಳಿಗೆ ಚಿಕಿತ್ಸೆ ಕೊಡುವಂಥ ಕೆಲಸವಾಗಬೇಕು.

ಶ್ರೀ ಆರ್. ರೋಷನ್ ಬೇಗ್ : ಈ Primary Health Centresನಲ್ಲಿ ಸರಿಯಾಗಿ ವ್ಯವಸ್ಥೆಗಳಾಗುತ್ತಿಲ್ಲ, Surgical process, Maternity section ಬಗ್ಗೆ ಹೇಳುವುದಕ್ಕಾಗುವುದಿಲ್ಲ. National Rural Health Missionನಿಂದ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳು ಬರುತ್ತದೆ. I think, National Rural Health Missionರವರು ಸುಮಾರು 400 ಕೋಟಿ ರೂಪಾಯಿ

ಗಳನ್ನು ಸರ್ಕಾರಕ್ಕೆ ಕೊಡುತ್ತಿದ್ದಾರೆ, ಆದರೆ ಸರಿಯಾಗಿ ಈ ಹಣ disperse ಆಗುತ್ತಿಲ್ಲ. Director of Drugs Logistics Society ಎಂದು ಇದೆ, ಇವರು drugs purchase ಮಾಡುತ್ತಾರೆ. ಅಲ್ಲಿ ಶಿವಬಸವಯ್ಯ ಎಂದು ಒಬ್ಬ ಒಳ್ಳೆಯ ಅಧಿಕಾರಿ ಇದ್ದರು, ಅವರು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದರು. ಆದರೆ ಅವರನ್ನು ದಿಢೀರ್ ಎಂದು ಚೇಂಜ್ ಮಾಡಿ, ಯಾರೋ ಒಬ್ಬ ರಾಧಾಕೃಷ್ಣ ಎಂಬ ಅಧಿಕಾರಿ ಬಂದಿದ್ದಾರೆ. ಇವರು ಇದಕ್ಕಿಂತ ಮುಂಚಿನ ಇಲಾಖೆಯಲ್ಲಿ 5 ಸಾವಿರ ರೂಪಾಯಿಗಳನ್ನು ಬಿಡುತ್ತಿರಲಿಲ್ಲ. ಈಗ ಇವರು Additional of Druges Logistics Society. 180 crores worth of medicines purchase ಮಾಡಲು ಇವರು in charge? ಸುರೇಶ್ ಕುಮಾರ್‌ರವರೆ, it is a very serious allegation. ಸರ್ಕಾರ ದಯವಿಟ್ಟು ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ನಾನು ಬಿಜೆಪಿ ಸರ್ಕಾರ, ಆ ಸರ್ಕಾರವೆಂದು ಹೇಳುತ್ತಿಲ್ಲ. ಯಾವ ಸರ್ಕಾರವಾದರೇನು, ಕೊನೆಯ ಪಕ್ಷ, ಕೇಂದ್ರ ಸರ್ಕಾರದಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಎಷ್ಟು ಹಣ ಬರುತ್ತಿದೆ, ರಾಜ್ಯ ಸರ್ಕಾರದಿಂದ ಏನು ಹಣ ಹೋಗುತ್ತದೆ, ಕೊನೆಯಪಕ್ಷ ಆ ಬಡರೋಗಿಗಳಿಗೆ ಈ ಹಣದಲ್ಲಿ ಮೆಡಿಸಿನ್ಸ್ ತಲುಪಬೇಕು. ಅವನು ಮೆಡಿಸಿನ್ ಪರ್ಚೇಸ್ ಮಾಡಿಕೊಂಡು ಮನೆಗೆ ಹೋಗಿ ಮಗನಿಗೆ ಕೊಟ್ಟರೆ, if that medicine is only chalk powder ಅಂದರೆ, ಈ ಬಗ್ಗೆ ಮಾನ್ಯ ಯಡಿಯೂರಪ್ಪನವರಿಗೆ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ಈ ಬಗ್ಗೆ ತಾವು ದಯವಿಟ್ಟು ಬಹಳ ಗಂಬೀರವಾಗಿ ನೋಡಿ. ಈ ಸದನದಲ್ಲಿ ನಾನು ಸದಸ್ಯನಾಗುವುದಕ್ಕಿಂತ ಮುಂಚೆ, ಮೇಲೆ ಕುಳಿತುಕೊಂಡು ಇಲ್ಲಿನ ಕಾರ್ಯಕಲಾಪಗಳನ್ನು ನೋಡುತ್ತಿದ್ದೆ. ನಾನು ಇಷ್ಟು ವರ್ಷ ಶಾಸಕನಾಗಿ ನೋಡುತ್ತಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳದ್ದು ಒಂದು ಮಾತನ್ನು ಮೆಚ್ಚುತ್ತೇನೆ, ಅವರು ಏನೇ ಹಠ, ಕೋಪ ಮಾಡಿಕೊಂಡರು, ನಾನು ಇಷ್ಟು ಮುಖ್ಯಮಂತ್ರಿಗಳನ್ನು ನೋಡುತ್ತಿದ್ದೇನೆ, ಆದರೆ ಈ ಮುಖ್ಯಮಂತ್ರಿಗಳು, ಈ ಸದನಕ್ಕೆ ಬಹಳಷ್ಟು ಸಮಯವನ್ನು ಕೊಡುತ್ತಿದ್ದೀರಿ, ತಾವು ಬಹಳ ಕೂಲ್ ಆಗಿ ನೋಡುತ್ತಿದ್ದೀರಿ, ಸರಿಯಾದ ಟೈಂಗೆ ತಾವು ಕುಳಿತುಕೊಳ್ಳುತ್ತಿದ್ದೀರಿ. ಮತ್ತು ನಿಮ್ಮ ಸದಸ್ಯರು ಸರಿಯಾಗಿ ಸದನದಲ್ಲಿರುತ್ತಾರೆಯೇ ಎಂದು ನಿನ್ನೇ ಒಂಭತ್ತೂವರೆ ಗಂಟೆಯವರೆವಿಗೂ ನೋಡಿದೆ, ಒಂಭತ್ತೂವರೆ ಗಂಟೆಯಾದರು ನಿಮ್ಮ ಬಿಜೆಪಿ ಸದಸ್ಯರೆಲ್ಲಾ ಕುಳಿತಿದ್ದರು. ಅದೇ

ಸೀರಿಯಸ್‌ನೆಸ್ ಅನ್ನು ದಯವಿಟ್ಟು ಈ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಕೊಡಿ, ಈ ಬಡರೋಗಿಗಳಿಗೆ ಸಹಾಯ ಮಾಡಿ. ಈ Spurious drugs ಏನಿದೆ, ಆ ಬಗ್ಗೆ ತಾವು ಸ್ವಲ್ಪ ನೋಡಬೇಕೆಂದು ಹೇಳುತ್ತೇನೆ. ಈ Integrated Disease Surverlance Project, ಕೇಂದ್ರ ಸರ್ಕಾರದಿಂದ ಯಾವ್ಯಾವ ಯೋಜನೆಗಳಿವೆ, ಆ ಬಗ್ಗೆ ಒಂದು review exercise ಮಾಡಿ. ಇನ್ನು ನಗರದ ಗೃಹ ಇಲಾಖೆಯ ಬಗ್ಗೆ ಹೇಳಬೇಕೆಂದರೆ, ನಾನು ಗೃಹ ಮಂತ್ರಿಯಾಗಿದ್ದಾಗ, Coastal Police Force ಪ್ರಾರಂಭಿಸಿದೆ ಎಂದು ನಾನು ಬಹಳ ಹೆಮ್ಮೆಯಿಂದ ಹೇಳುತ್ತೇನೆ. ಈಗ ದೇಶದಲ್ಲಿ 26/11 ಗಟ್ಟಿಯಾದ ಮೇಲೆ Coastal Police Force ಬಗ್ಗೆ ಮಾತನಾ ಡುತ್ತಿದ್ದಾರೆ. 1997-98 ರಲ್ಲಿ Karnataka was the first State in the country to start this Costal Police Force. ಆದರೆ ಅಲ್ಲಿ ಬೇಕಾದಷ್ಟು speed boats ಬೇಕು, ಯಾವಾಗ ಯಾರು ಅಟ್ಯಾಕ್ ಮಾಡುತ್ತಾರೆಂದು ಹೇಳುವುದಕ್ಕಾಗು ವುದಿಲ್ಲ. ನಾವು ಇವತ್ತಿನಿಂದಲೇ ರಕ್ಷಣೆ ಮಾಡಿಕೊಂಡಿರಬೇಕಾದರೆ, Coastal Police Force ನಾವು ಮಾಡಬೇಕು, ಸರಿಯಾಗಿ ಎಕ್ಯುಪ್‌ಮೆಂಟ್ಸ್ ಮಾಡಬೇಕು. ಆಮೇಲೆ, The less you talk about the Bangalore City is better. ಬೆಂಗಳೂರು ಸಿಟಿಗೆ ಒಬ್ಬ ಒಳ್ಳೆಯ ಪೊಲೀಸ್ ಕಮಿಷನರ್ ಕೊಟ್ಟಿದ್ದೀರಿ. ಆದರೆ ಬೆಂಗಳೂರು ಸಿಟಿಯಲ್ಲಿ ಏನಾಗುತ್ತಿದೆ ಎಂದರೆ, ಪಾಪ ಗೃಹ ಮಂತ್ರಿಗಳಾದ ಆಚಾರ್ಯರ ಕೈನಿಂದ ಆಗುತ್ತಿಲ್ಲ, ಅವರ ಕೈನಿಂದ ಪೋಸ್ಟಿಂಗ್ಸ್ ಆಗುತ್ತಿಲ್ಲ. Director General of Police, ಅಜಯ್‌ಕುಮಾರ್ ಸಿಂಗ್ ಎನ್ನುವ ಒಬ್ಬ ಒಳ್ಳೆಯ ಹಾನೆಸ್ಟ್ ಪೊಲೀಸ್ ಅಧಿಕಾರಿ, I can proudly say that we have an honest officer as the State Director General of Police. ಆದರೆ ಪ್ರತಿಯೊಂದು ಪೊಲೀಸ್ ಸ್ಟೇಷನ್, ಬೆಂಗಳೂರು ನಗರದಲ್ಲಿ ಪ್ರತಿಯೊಬ್ಬ ಇನ್ಸ್‌ಪೆಕ್ಟರ್ real estate agents ಆಗಿದ್ದಾರೆ. ಕೆಲವು ಮಂತ್ರಿಗಳಿದ್ದಾರೆ, ಅವರಿಗೆ ಬೇಕಾದವರನ್ನು ಹಾಕಿಕೊ ಳ್ಳುವುದು, ಎಷ್ಟು ಮರ್ಡರ್ಸ್ ಆಗುತ್ತಿವೆ ನೋಡುತ್ತಿದ್ದೀರಾ? ಪ್ರತಿ ದಿವಸ ಪೇಪರ್ ನೋಡಿದರೆ, ನಮ್ಮ ಸ್ನೇಹಿತರು, 'ಏನಪ್ಪ ಬೆಂಗಳೂರು ನಗರ ಹಳಾಯಿತ್ತಲ್ಲ' ಎಂದು ಹೇಳುತ್ತಾರೆ. ಡೆಲ್ಲಿ, ಬಾಂಬೆ, ಕಲ್ಕತ್ತ, Crime capital of this country ಎಂದು ಹೇಳಿದರೆ, ಈಗ ಬೆಂಗಳೂರು ನಗರದಲ್ಲಿ ಜೋಡಿ

ಕೊಲೆಗಳು, ಬೀದಿ ಬೀದಿಯಲ್ಲಿ ಕೊಲೆಗಳು. ಮಾನ್ಯ ಮುಖ್ಯಮಂತ್ರಿಗಳು, ಈ ಇಲಾಖೆಯನ್ನು ಸರಿಯಾಗಿ ತಮ್ಮ ಹತೋಟಿಯಲ್ಲಿ ತೆಗೆದುಕೊಂಡು ಕೆಲವು ಡಿಸಿಪಿಗಳು, ಎಸಿಪಿಗಳು ಸರಿಯಾಗಿ ಕೆಲಸ ಮಾಡಲಿಲ್ಲವೆಂದರೆ, ಕೆಲವು ಮಂತ್ರಿಗಳ ಮಾತುಗಳನ್ನು ಕೇಳಿ ಅವರವರ ಚೇಲಾಗಳಿಗೆ ಅವರಿಗೆ ಬೇಕಾದ ವರನ್ನು ಪೊಲೀಸ್ ಠಾಣೆಗಳಿಗೆ ಹಾಕಿದರೆ, ಅವರು ಬರೀ ರೋಲ್‌ಕಾಲ್ ಮಾಡಿಕೊಂಡು ಹೋಗುತ್ತಾರೆ. ನಮ್ಮ ಕಾಲದಲ್ಲಿ ಬಹಳ ಚೆನ್ನಾಗಿತ್ತು ಎಂದು ನಾನು ಹೇಳುತ್ತಿಲ್ಲ. ಬೆಂಗಳೂರಿನಲ್ಲಿ ಲಾ ಅಂಡ್ ಆರ್ಡರ್ ಏನಾಗಿದೆ ಎಂದರೆ, it has gone to dogs. ಡ್ರಗ್ಸ್, ಕೊಕೈನ್ ಯಾವುದು ಬೇಕು? ಎಲ್ಲಾ ಸಿಗುತ್ತದೆ. ಕೆಲಸ ಮುಗಿಸಿಕೊಂಡು 9 ಗಂಟೆ ಸಿನಿಮಾಗೆ ಹೆಂಡತಿ ಮಕ್ಕಳನ್ನು ಕರೆದುಕೊಂಡು ಕುಟುಂಬದ ಜೊತೆಗೆ ಹೋಗುತ್ತಾನೆ. ಈಗ ಹೊಸ ಕಾನೂನನ್ನು ತಂದು 8 ಗಂಟೆಗೆ ಸಿನಿಮಾ ಆರಂಭ, 11.30 ಗಂಟೆಗೆ ಹೋಟೆಲ್ ಬಂದ್. ಏನು ರಾತ್ರಿ 12.30 ಗಂಟೆಗೆ ರೈಲ್ವೆ ಸ್ಟೇಷನ್ ನಿಂದ ಬರುವರ್‍ಯಾರು ಊಟ ಮಾಡಬಾರದೇ? ಎಲ್ಲಿಯಾದರು ಕೂಲಿ ಮಾಡಿಕೊಂಡು, ಅವರು ಬಂದು ಯಾವುದಾದರು ಸಣ್ಣ ಹೋಟೆಲ್‌ನಲ್ಲಿ ಊಟ ಮಾಡಬಾರದೇ? 5 Star hotels, West End, Windsor Manner, Ashoka Hotel, ಈ ಕಡೆಯಲ್ಲೆಲ್ಲಾ Coffee Shop 24/7 ಒಪನ್, ಸಣ್ಣ ಸಣ್ಣ ಹೋಟೆಲ್‌ಗಳ ಹತ್ತಿರ ಮುಚ್ಚಿ ಎಂದು ಪೊಲೀಸರು ನಿಂತುಬಿಡುತ್ತಾರೆ. ಶಿವಾಜಿನಗರದಲ್ಲಿರುವ ರಸಲ್ ಮಾರ್ಕೆಟಿಗೆ ಹೋಗಿ ರಾತ್ರಿ 11.30 ಗಂಟೆಗೆ ಹೋಟೆಲ್ ಕ್ಲೋಸ್ ಮಾಡಿ, ಹೋಟೆಲ್ ಎಲ್ಲಾ ಮುಚ್ಚಿರಿ ಎಂದು ಲೌಡ್ ಸ್ಪೀಕರ್‌ನಲ್ಲಿ ಅನೌನ್ಸ್‌ಮೆಂಟ್. ರಾತ್ರಿ 12 ಗಂಟೆ, 1.00 ಗಂಟೆಯಾದ ಮೇಲೆ ಬಡವರೇನು ಊಟ ಮಾಡಬಾರದಾ? ಬೆಂಗಳೂರಿಗೆ ಡ್ರಗ್ಸ್ ಯಾರು ತೆಗೆದುಕೊಂಡು ಬರುತ್ತಾರೆ, ಗೋವಾದಿಂದ ಯಾವ ಡ್ರಗ್ಸ್ ಬರುತ್ತಿದೆ, ಪಕ್ಕದ ರಾಜ್ಯದಿಂದ ಯಾವ ಯಾವ ಡ್ರಗ್ಸ್ ಬರುತ್ತಿದೆ? ಬೆಂಗಳೂರಿನಲ್ಲಿ ಬೀದಿ ಬೀದಿಯಲ್ಲಿ ಸೇಲ್ ಆಗುತ್ತಿದೆ. ಅದರ ಬಗ್ಗೆ ಯಾರೂ ಗಮನ ಹರಿಸುತ್ತಿಲ್ಲ. ಇವರು ಆಗಾಗ ರೈಡ್ ಮಾಡಿದರೆ ಇದೆಲ್ಲಾ ಗೊತ್ತಾಗುತ್ತದೆ. ಪಬ್ಸ್ ಬಾರ್ಸ್‌ಗಳಲ್ಲಿ ರಾತ್ರಿ ಮೂರು ಗಂಟೆಯವರೆಗೂ ಡ್ಯಾನ್ಸ್ ನಡೆಯುತ್ತಿರುತ್ತದೆ. ನಾನೇ ನಮ್ಮ ಹೈಗ್ರೌಂಡ್ಸ್ ಪೊಲೀಸ್ ಸ್ಟೇಷನ್‌ಗೆ ಫೋನ್ ಮಾಡಿ, ನೋಡಿ ಅಲ್ಲಿ ಮೌಂಟ್ ಕಾರ್ಮೆಲ್ ಕಾಲೇಜಿನ ಹಿಂಭಾಗದಲ್ಲಿ ರೆಸಿಡೆಂಟ್ಸ್ ಎಲ್ಲಾ complaint ಮಾಡುತ್ತಿದ್ದಾರೆ, ಆ ಏರಿಯಾ ಜನ ಎಲ್ಲಾ ನಿದ್ರೆ ಮಾಡುವುದ.

ಕ್ಕಾಗುತ್ತಿಲ್ಲ, ರಾತ್ರಿ ಎರಡು ಎರಡೂವರೆ ಗಂಟೆಯವರೆಗೆ ಫುಲ್ ಸೌಂಡ್‌ನಲ್ಲಿ ಮ್ಯೂಸಿಕ್ ಹಾಕಿಕೊಂಡಿರುತ್ತಾರೆ. ಅದರ ಬಗ್ಗೆ ಹೇಳಿದರೆ ಆ Inspectorಗೆ ಏನೂ ಅರ್ಥವಾಗುವುದಿಲ್ಲ. ಸಿಟಿ ರೋಡ್ beautify ಮಾಡಿ ಎಂದು ಹೇಳುತ್ತೀರಿ ರಾತ್ರಿ ಹೊತ್ತು ಇವರು ಫಿಲಂ ಪೋಸ್ಟರ್ಸ್‌ಗಳನ್ನು ರೋಡ್‌ಗಳಲ್ಲೆಲ್ಲಾ ಹಾಕುತ್ತಿರುತ್ತಾರೆ. ನಿಮ್ಮ ಹೊಯ್ಸಳದವರೆಲ್ಲಾ ಏನು ಮಾಡುತ್ತಿದ್ದಾರೆ? ಮತ್ತೆ ಆ ಪೋಸ್ಟರ್‌ಗಳನ್ನು ಕೀಳುವುದಕ್ಕೆ 10 ಜನರನ್ನು ನೇಮಿಸುವುದು ಮಾಡುತ್ತೀರಿ. ಸಿಟಿಯಲ್ಲಿ ಹಾಳು ಮಾಡುತ್ತಿದ್ದಾರೆ. ಇನ್ನೊಂದು ವಿಷಯವನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ವಾಣಿಜ್ಯ ಕಟ್ಟಡಗಳು ಏನಾಗಿದೆ ಮಾನ್ಯ ಯಡಿಯೂರಪ್ಪ ಸಾಹೇಬರೇ? ತಾವು ಒಂದು ಸಾರಿ ಬಹಳ ಜೋರಾಗಿ ಹೇಳಿದ್ದಿರಿ. 'All unauthorized hoardings will go,' ಎಂದು ಹೇಳಿದ್ದಿರಿ. ತಾವು ಹೇಳಿದ ಮೇಲೆ ನಾವು ಬಹಳ ಖುಷಿ ಆದೆವು. ಬೆಂಗಳೂರು ನಗರಕ್ಕೆ ಯಾರು ಬಂದರೂ ಹೇಳುತ್ತಾರೆ, ಏನ್ರೀ ಈ ನಗರವನ್ನು ಹಾಳು ಮಾಡುತ್ತಿದ್ದೀರಲ್ಲ ಎಂದು ಹೇಳುತ್ತಾರೆ. ಬೆಂಗಳೂರು ಸಿಟಿಯಲ್ಲಿ hoardings ತುಂಬಿ ಹೋಗಿವೆ. ದೆಹಲಿ ಸಿಟಿಯಲ್ಲಿ ಮುನಿಸಿಪಲ್ ಕಮಿಷನರ್ ಆಫೀಸ್‌ನಲ್ಲಿ ಒಬ್ಬ ಆರ್ಡಿನರಿ ಡೆಪ್ಯುಟಿ ಕಮಿಷನರ್ ದೆಹಲಿ ಸಿಟಿಗೆ ಕಂಟ್ರೋಲ್ ಮಾಡುತ್ತಾರೆ. ಅಧ್ಯಕ್ಷರೆ ತಾವೂ ಕೂಡ ಆಗಾಗ ದೆಹಲಿಗೆ ಹೋಗುತ್ತಿರುತ್ತೀರಿ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಆಗಾಗ ದೆಹಲಿಗೆ ಹೋಗುತ್ತಿರುತ್ತಾರೆ. ಅವರು Airportನಿಂದ Karnataka Bhavanಗೆ ಹೋಗುವವರೆಗೆ ಕರ್ನಾಟಕ ಭವನದಿಂದ ಬೇರೆ ಕಡೆ ಮಂತ್ರಿಗಳನ್ನು ಭೇಟಿ ಮಾಡುವುದಕ್ಕೆ ಹೋದಾಗ ದಾರಿಯಲ್ಲಿ ಯಾವ ತರಹ hoardings ಹಾಕುವುದನ್ನು ದೆಹಲಿ ಸರ್ಕಾರದವರು modify ಮಾಡಿದ್ದಾರೆಂದು ನೋಡಿದರೆ ಅವರಿಗೆ ಗೊತ್ತಾಗುತ್ತದೆ. ಬೆಂಗಳೂರು ನಗರ ಹಾಳು ಮಾಡಿ ಬಿಟ್ಟಿದ್ದಾರೆ. ಎಲ್ಲಿ ನೋಡಿದರೂ hoardings ಇವೆ, ಬಹಳ ಜನ ರಾಜಕಾರಣಿಗಳು, I repeat this Charge. ಬಹಳಷ್ಟು ಜನ ರಾಜಕಾರಣಿಗಳಿಗೆ ಅನುಮತಿ ಸಿಕ್ಕಿದೆ. ಅವರು ಬೇನಾಮಿ ಹೆಸರುಗಳಲ್ಲಿ ಬೆಂಗಳೂರು ನಗರದಲ್ಲಿ hoardings ಗಳನ್ನು ತೆಗೆದುಕೊಂಡಿದ್ದಾರೆ. ಮಾನ್ಯ ಸಭಾಧ್ಯಕ್ಷರೆ, ತಾವು ಇಲ್ಲಿಂದ ಮನೆಗೆ ಹೋಗುವಾಗ, ಮತ್ತು ಮನೆಯಿಂದ ಇಲ್ಲಿಗೆ ಬರುವಾಗ ನೋಡಿ ಎರಡೆರಡು

ದಿವಸಕ್ಕೆ ಒಂದೊಂದು ಹೊಸ hoarding ಇರುತ್ತದೆ. ಒಂದು hoardingಗೆ ಎಷ್ಟು ರೆಂಟ್ ಎಂದು ಗೊತ್ತಾ ಅಧ್ಯಕ್ಷರೆ, M.G. road ಕಡೆ cricket stadium ಕಡೆ ವಿಧಾನಸೌಧದ ಸುತ್ತ ಮುತ್ತ ಒಂದು hoarding ಹಾಕಬೇಕೆಂದರೆ ಎರಡರಿಂದ ಮೂರು ಲಕ್ಷ ರೂ. ಒಂದು ತಿಂಗಳಿಗೆ ಬಾಡಿಗೆ. ಮಾನ್ಯ ಮುಖ್ಯಮಂತ್ರಿಗಳು ಅನೌನ್ಸ್ ಮಾಡಿದಾಗ ನಾವೆಲ್ಲಾ ಬಹಳ ಖುಷಿ ಆದೆವು. ಪರವಾಗಿಲ್ಲ ಮಾನ್ಯ ಮುಖ್ಯಮಂತ್ರಿಗಳು ಸೀರಿಯಸ್ಸಾಗಿ ತೆಗೆದು ಕೊಂಡಿದ್ದಾರೆ. All unauthorized hoardings will be removed ಎಂದು. ಆ ಮೇಲೆ ನೀಡಿದರೆ ಅದಕ್ಕಿಂತ ಜಾಸ್ತಿ 20 ರಿಂದ 25% ಜಾಸ್ತಿ ಆಗಿದೆ. ಯಾರ ದುಡ್ಡು ಹೋಗುತ್ತಿದೆ? Who is the concerned officer in charge of this? ಇದರ ಬಗ್ಗೆ ಏನೂ ತನಿಖೆ ಮಾಡುವುದು ಬೇಡವಾ? ನಿಮ್ಮ ಕಡೆಯಿಂದ ಅವರಿಗೇನಾದರೂ flexಗಳನ್ನು ಕೊಟ್ಟು ಬಿಟ್ಟಿದ್ದೀರಾ? ಫ್ಲೆಕ್ಸ್‌ಗಳು ರಾಜಕಾರಣಿಗಳು ಹಾಕುತ್ತಾರೆ. ಅದನ್ನೂ ಕಟ್ ಮಾಡಿ, ಅದನ್ನೂ ಎತ್ತಿ ಬಿಸಾಕಿ. Hoardingsಗೆ ಎರಡೆರಡು–ಮೂರು ಲಕ್ಷ ರೂ.ಗಳನ್ನು ಬಾಡಿಗೆಗಾಗಿ ಕೊಡುತ್ತಾರೆ. ಅದು ನಿಮ್ಮ ಜೇಬಿಗೆ ಹೋಗುತ್ತಿದೆಯಾ? ಯಾವ ರಾಜಕಾರಣಿಗಳು ಬೇನಾಮಿ ಹೆಸರಿನಲ್ಲಿ ತೆಗೆದುಕೊಂಡಿದ್ದಾರೆ ಹೇಳಿ, ಎರಡೆರಡು–ಮೂರು ಲಕ್ಷ ರೂ. ಯಾರ ಜೇಬಿಗೆ ಹೋಗುತ್ತಿದೆ, ಇದರ ಬಗ್ಗೆ ಏಕೆ ನೀವು ತನಿಖೆ ಮಾಡುವುದಿಲ್ಲ? ಒಬ್ಬ ಜಿ.ವಿ.ಕೆ. ರೆಡ್ಡಿ ಎಂದು drains clean ಮಾಡುತ್ತೇವೆಂದು ಹೇಳಿ ಕಾರ್ಪೊರೇಷನ್‌ನಿಂದ ಸುಮಾರು ಏಳೂವರೆ ಕೋಟಿ ರೂ.ಗಳನ್ನು ತೆಗೆದುಕೊಂಡು ಓಡಿ ಹೋಗಿದ್ದಾನೆ. ಅಡ್ರೆಸ್ ಇಲ್ಲ, ಎಲ್ಲಿದ್ದಾನೆ ಗೊತ್ತಿಲ್ಲ. ಅದರ ಬಗ್ಗೆ ಯಾರೂ ಕೇಳುವವರೇ ಇಲ್ಲ. ಯಾರ ಹಣ ಇದು? ಏಳೂವರೆ ಕೋಟಿ ರೂ. ನಿಮ್ಮ ಜೇಬಿನಿಂದ ಏನಾದರೂ ಕೊಟ್ಟಿದ್ದೀರಾ? ಚಲಗಟ್ಟ ವ್ಯಾಲಿ ಪ್ಲಾಂಟ್ ಎಂದು ಹೇಳಿ ಹೆಬ್ಬಾಳದಿಂದ ಪ್ರಾರಂಭ ಮಾಡುತ್ತಾನೆ. ದೂರದರ್ಶನದವರೆಗೂ ಹೋಗುವುದಿಲ್ಲ. ಗಾಯಬ್ ಆಗಿ ಬಿಡುತ್ತಾನೆ. Storm water drainageಗೆ ನೀವು ಎಷ್ಟು ಖರ್ಚು ಮಾಡುತ್ತಿದ್ದೀರಿ, ತಾವು ತಮ್ಮ ಉತ್ತರದಲ್ಲಿ ದಯವಿಟ್ಟು ಹೇಳಬೇಕು. ಬೆಂಗಳೂರು ಅಭಿವೃದ್ಧಿಗೆ JNNURM ನಿಂದ ಎಷ್ಟು ಹಣ ಬಂದಿದೆ, ತಾವು ಪೂರ್ತಿ ಹಣ ಖರ್ಚು ಮಾಡಿಲ್ಲ. ಇನ್ನೂ ದುಡ್ಡು ಮಿಕ್ಕಿದೆ. Two tire cities, three tire cities ಎಂದು ಏನು ಮೈಸೂರು ಮತ್ತು

ಇತರೆ ಸಿಟಿಗಳು ಎಂದು ಹೇಳುತ್ತೇವೆ, ಮಾನ್ಯ ಸುರೇಶ್‌ಕುಮಾರ್ ರವರೇ ತಾವು ಅರ್ಬನ್ ಡೆವಲಪ್‌ಮೆಂಟ್ ಮಿನಿಸ್ಟರ್ ಇದ್ದೀರಿ. ಈ ಹಣ ಮೈಸೂರು ಅಂಡ್ other cityಗಳಲ್ಲಿ underground drainage ಬಗ್ಗೆ ತಾವು ದಯವಿಟ್ಟು importance ಕೊಡಬೇಕು. ಬೆಂಗಳೂರಿನಲ್ಲಂತೂ ಹಾಳಾಯಿತು ಬಿಡಿ. BWSSB ಗೆ ಯಾರೂ ಕೇಳುವವರೇ ಇಲ್ಲ. ಒಬ್ಬ ಒಳ್ಳೆಯ ಅಧಿಕಾರಿ ಇದ್ದರು ಅವರನ್ನು ದಿಢೀರೆಂದು ಎತ್ತಂಗಡಿ ಮಾಡಿದರು.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ, ಮಾತನಾಡುವುದಕ್ಕೆ ಏನಾದರೂ ಇತಿ ಮಿತಿ ಇದ್ದರೆ ಇತಿಮಿತಿಯಲ್ಲಿ ಮಾತನಾಡಬೇಕು. ಅಧಿಕಾರಿ ಒಳ್ಳೆಯವರು ಯಾರು ಕೆಟ್ಟವರು ಯಾರು ಎಂದು ಇವರು ಸರ್ಟಿಫಿಕೇಟ್ ಮಾಡಿದ್ದಾರಾ? ಇವರಿಂದ ಸರ್ಟಿಫಿಕೇಟ್ ಮಾಡಿ ಹಾಕಿಸಿಕೊಳ್ಳಬೇಕಾ? ಇವರ Constituency ಗೆ ಎಂಟು ಗಂಟೆಗೆ ಹೋದರೆ ಇವರೇ 10 ಗಂಟೆಗೆ ಬರುತ್ತಾರೆ. ನಿಮ್ಮ Constituency ಯಲ್ಲಿ ಸಾಯಂಕಾಲ 4 ಗಂಟೆವರೆಗೆ ಇದ್ದೆ. ಅಧಿಕಾರಿಗಳ ಬಗ್ಗೆ BWSSB ಬಗ್ಗೆ ಕೇಳುವವರು ಇಲ್ಲ ಎಂದು ಬೇಜವಾಬ್ದಾರಿ ಮಾತುಗಳನ್ನು ಮಾತನಾಡಬೇಡಿ. ಏನಾದರೂ ಮಾತನಾಡುವುದು ಇದ್ದರೆ ಜವಾಬ್ದಾರಿಯುತವಾಗಿ ಮಾತನಾಡಿ. ನಿಮ್ಮ ಹತ್ತಿರ ಯಾವುದಾದರೂ ಸರಿಯಾದ ಪ್ರೂಫ್ ಇದ್ದರೆ ತೋರಿಸಿ ನೋಡೋಣ.

ಅಧ್ಯಕ್ಷರು : ನಾಯ್ಡುರವರೇ ಕುಳಿತುಕೊಳ್ಳಿ ಮಂತ್ರಿಗಳೇ ಈ ರೀತಿ ಮಾತನಾಡಿದರೆ ಏನು ಮಾಡುವುದು.

ಶ್ರೀ ಸಿದ್ದರಾಮಯ್ಯ : ಅವರೇನು ನಿಮಗೆ ಹೊಗಳುವುದಕ್ಕೆ ಬಂದಿದ್ದಾರಾ?

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು : ಅವರೇನು ಹೊಗಳುವುದು ಬೇಡ. ಅವರು ಹೇಳಿದೆಲ್ಲವನ್ನು ಕೇಳುವುದಕ್ಕೆ ಬಂದಿಲ್ಲ ನಾವೂ ಕೂಡ. ಒಳ್ಳೆಯವರು ಯಾರು ಕೆಟ್ಟವರು ಯಾರೆಂದು ನೀವು ಲಿಸ್ಟ್ ಕೊಡಿ. ಅಧಿಕಾರಿಗಳು ಸರಿ ಇಲ್ಲವೆಂದು ಒಬ್ಬರನ್ನು ಹೊಗಳುವುದು, ಒಬ್ಬರನ್ನು ತೆಗಳುವುದು, ಇದೇನಾ ಕೆಲಸ ನಿಮ್ಮದು?

ಅಧ್ಯಕ್ಷರು : ನಾಯ್ಡುರವರೇ ಏಕೆ ಹೀಗೆ ಮಾಡುತ್ತಿದ್ದೀರಿ ನೀವು ದಯವಿಟ್ಟು ಕುಳಿತುಕೊಳ್ಳಿ.

SRI SIDDARAMAIAH : It is his right.

SRI KATTA SUBRAMANYA NAIDU : It is my discretionary power to change any officer. I did it.

SRI SIDDARAMAIAH : You want to give the reply. You reply it afterwards.

SRI KATTA SUBRAMANYA NAIDU : I know. Simply you are telling one officer is good and other officer is bad and other Minister is bad. Nobody is looking after this. What are you talking? There is a limit to talk anything. Don't go beyond limits.

ಅಧ್ಯಕ್ಷರು : ಬಚ್ಚೇಗೌಡರೇ ಅವರು ಮುಗಿಸಲಿ. ಯಾರ ಹೆಸರು ಹೇಳಿಲ್ಲ ಏನಿಲ್ಲ, ಆಫೀಸರ್ ಹೆಸರು ಹೇಳಿದ್ದಾರಾ ಅವರು?

SRI KATTA SUBRAMANYA NAIDU : They should have some limits I say. What nonsense they are talking? ಎಲ್ಲರ ಬಂಡವಾಳ ಗೊತ್ತಿದೆ, ಎಲ್ಲರ ಹಿನ್ನೆಲೆ ಗೊತ್ತಿದೆ. ಎಲ್ಲರ ಬಂಡವಾಳ ಯಾರ್‍ಯಾರು ಏನೇನು ಎಂದು ಎಲ್ಲಾ ಗೊತ್ತಿದೆ. ಹೊಸದಾಗಿ ಏನೂ ಹೇಳಬೇಕಾಗಿಲ್ಲ. ಎಲ್ಲಾ ಇತಿಹಾಸ ಪುಸ್ತಕಗಳು ಈ ಸದನದಲ್ಲಿ ಒಂದು ಗಂಟೆ ಚರ್ಚೆ ಮಾಡಿದರೆ ಯಾರ ಬಂಡವಾಳ ಏನೆಂದು ಗೊತ್ತಾಗುತ್ತದೆ. ಹೊಸದಾಗಿ ಹಿಸ್ಟರಿ ಹೇಳುವುದಕ್ಕೆ ಬರಬೇಡಿ ಇಲ್ಲಿ.

ಅಧ್ಯಕ್ಷರು : ನೀವು ನಂತರ ರಿಪ್ಲೇ ಕೊಡಿ. ರೋಷನ್ ಬೇಗ್‌ರವರೇ ಮುಂದುವರೆಸಿ. ಮಂತ್ರಿಗಳಾಗಿ ನೀವೇಕೆ ಹೀಗೆ ಮಾಡುತ್ತಿದ್ದೀರಿ ನಂತರ ನೀವು ರಿಪ್ಲೇ ಕೊಡಿ. ಸದನದಲ್ಲಿ ಒಬ್ಬ ಶಾಸಕರೂ ಹೀಗೆ ಮಾಡುವುದಿಲ್ಲ.

ಶ್ರೀ ಬಿ.ರಮಾನಾಥರೈ : ಮಾನ್ಯ ಅಧ್ಯಕ್ಷರೆ, ನಮಗೆ ಟೀಕೆ ಮಾಡುವುದಕ್ಕೆ ಹಕ್ಕು ಇದೆ. ನಾವು ಟೀಕೆ ಮಾಡುತ್ತೇವೆ. ಈ ತರಹ ಮಾಡಿದರೆ ಹೇಗೆ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಏನೇನಿದೆ ಎಂದು ಈ ಸದನಕ್ಕೆ ಲಿಸ್ಟ್ ಕೊಡುತ್ತೇನೆ. ಬೇಕಾಬಿಟ್ಟಿ ಹೇಳಿದ್ದೆಲ್ಲವನ್ನೂ ಕೇಳಿಸಿಕೊಳ್ಳುವುದಕ್ಕೆ ತಯಾರಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಯಾರ ಬಗ್ಗೆಯೂ ಟೀಕೆ ಮಾಡುವ ಹಾಗಿಲ್ಲ, ಮಂತ್ರಿಗಳ ಬಗ್ಗೆ ಟೀಕೆ ಮಾಡುವ ಹಾಗಿಲ್ಲ, ಅಧಿಕಾರಿಗಳ ಬಗ್ಗೆ ಟೀಕೆ ಮಾಡುವ ಹಾಗಿಲ್ಲ, ಸರ್ಕಾರದ ಬಗ್ಗೆ ಟೀಕೆ ಮಾಡುವ ಹಾಗಿಲ್ಲ,

ಎಲ್ಲಾ ಒಳ್ಳೊಳ್ಳೆಯ ಮಾತುಗಳನ್ನಾಡಿ ಹೊಗಳಿ ಬಿಟ್ಟು ಹೊರಟು ಹೋಗಿ ಎಂದು ಹೇಳಿ, ಹೊಗಳಿಬಿಟ್ಟು ಹೊರಟು ಹೋಗೋಣ. Whatever you want to say, you say. ಸರಿ ಇಲ್ಲ ಎಂದು ಹೇಳಿ.

ಶ್ರೀ ಆರ್.ರೋಷನ್ ಬೇಗ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳೇ ರೆಕಾರ್ಡ್ಸ್ ತೆಗೆದು ನೋಡಿ ನಾನು ಬೇಕು ಬೇಕಂತ ಯಾರ ಮೇಲೆಯೂ ಆಪಾದನೆ ಮಾಡಿಲ್ಲ. ಮಾನ್ಯ ರಾಮಚಂದ್ರಗೌಡರು ಒಳ್ಳೆಯ ಕೆಲಸ ಮಾಡಿದ್ದಾರೆಂದು ಇಲ್ಲಿ ಇದೇ ಸದನದಲ್ಲಿ ಹೇಳಿದ್ದೇನೆ.

ಅದೇನೇ ಆಗಲಿ ಮಾನ್ಯ ಅಧ್ಯಕ್ಷರೆ, ಈ BWSSB ಬಗ್ಗೆ ನಾನು ಹೇಳುತ್ತಿದ್ದೆ. ಈ manholesಗಳನ್ನು clean ಮಾಡುವವರು ಯಾರು? ಅವರೆಲ್ಲರೂ ದಲಿತರು. Municipal Corporation of Coimbatore, Municipal Corporation of Madras and other Corporations of Tamilnaduನಲ್ಲಿ ಏನು ಮಾಡಿದ್ದಾರೆಂದರೆ. ಅಲ್ಲಿ ಈ ಗ್ಯಾಂಗ್‌ಮನ್‌ಗಳು ಏನು manholes ಒಳಗೆ ಹೋಗಿ ಕೆಲಸವನ್ನು ಮಾಡುತ್ತಾರೆಯೋ ಅವರಿಗೆ kits ಇದೆ, oxygen ಇದೆ. ಆದರೆ ನಮ್ಮ ಬೆಂಗಳೂರಿನಲ್ಲಿ ಇವು ಇಲ್ಲ. ಕರ್ನಾಟಕದಲ್ಲಿ ಈ ವ್ಯವಸ್ಥೆ ಇಲ್ಲ. ಈ ಗ್ಯಾಂಗ್‌ಮನ್‌ಗಳೇನಿದ್ದಾರೆ ಅವರೆಲ್ಲರೂ ದಲಿತರು. ಎಷ್ಟು ಜನರು ಸತ್ತು ಹೋಗಿದ್ದಾರೆ ಗೊತ್ತೇ? ಹೊಟ್ಟೆಪಾಡಿಗೋಸ್ಕರ ಪಾಪ ಅವನು manhole ಕೆಳಗಡೆ ಹೋಗಬೇಕು. ಕೆಳಗಡೆ ಹೋಗಿ ಅಲ್ಲಿರುವ ಕಸವನ್ನೆಲ್ಲಾ ಎತ್ತುಕೊಂಡು ಬರಬೇಕು. Manhole ಒಳಗಡೆ ಕೆಟ್ಟ ಗ್ಯಾಸಸ್‌ಗಳು ಇರುತ್ತವೆ. ಉಸಿರುಗಟ್ಟಿ ಎಷ್ಟೋ ಜನರು ಸತ್ತು ಹೋಗಿದ್ದಾರೆ. ದಯವಿಟ್ಟು ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ತಕ್ಷಣ ತಮಿಳುನಾಡಿನಲ್ಲಿ ಯಾವ ರೀತಿಯ ಸೌಲಭ್ಯವನ್ನು ಮಾಡಿಕೊಟ್ಟಿದ್ದಾರೆ ಅದೇ ರೀತಿ ಇಲ್ಲಿಯೂ ಕೂಡ ಗ್ಯಾಂಗ್‌ಮನ್‌ಗಳಿಗೆ ಮಾಡಿಕೊಡಬೇಕು. ಪಾಪ ಅವರೆಲ್ಲರೂ ದಲಿತರು. ಅವರಿಗೆ ಕೂಡಲೇ ಅಗತ್ಯ ಸೌಲಭ್ಯಗಳನ್ನು ಮಾಡಿಕೊಡಿ. ಇನ್ನು ಬೆಂಗಳೂರಿನಲ್ಲಿ ಎಷ್ಟೋ manholes ಇನ್ನೂ ಕವರ್ಸ್ ಇಲ್ಲವಾಗಿದೆ. ಆ manholes ಗಳನ್ನು ಕವರ್ ಮಾಡಿ. ಬೀದಿಯಲ್ಲಿ ಮೋರಿ ಕವರ್ ಮಾಡಲಿಲ್ಲವೆಂದರೆ ಹೇಗೆ ಹೇಳಿ? ಡ್ರೈನೇಜ್ ನೀರೆಲ್ಲ ಬೀದಿಯಲ್ಲಿ ಹೋಗುತ್ತಿರುತ್ತದೆ. ಆದುದರಿಂದ ಮೊದಲು ಕವರ್ ಮಾಡಿ. ಇದರ ಜೊತೆಗೆ ಈ

ಗ್ಯಾಂಗ್‌ಮನ್‌ಗಳೇನಿದ್ದಾರೆ ಅವರಿಗೆ ಸವಲತ್ತುಗಳನ್ನು ಮಾಡಿಕೊಡಬೇಕು. ಇನ್ನು ಬೆಂಗಳೂರು ನಗರದಲ್ಲಿ ಕುಡಿಯುವ ನೀರೇನಿದೆ ಅದು contamination ಆಗಿದೆ. ಬೆಂಗಳೂರು ನಗರದ ನಮ್ಮ ಏರಿಯಾದಲ್ಲಿ ಒಂದು ಕಡೆ ವಿಸಿಟ್‌ಗೆ ನಾನು ಹೋಗಿದ್ದಾಗ ಒಬ್ಬ ಮಹಿಳೆ ಒಂದು ಟ್ಯಾಪ್‌ನಲ್ಲಿ ಬರುತ್ತಿದ್ದ ನೀರನ್ನು ಹಿಡಿದು ತೋರಿಸಿದರು. ನೋಡಪ್ಪಾ ಈ ನೀರನ್ನು ಮಕ್ಕಳು ಕುಡಿಯುವುದಕ್ಕೆ ಆಗುತ್ತದೆಯೆ? ಎಂದು ಕೇಳಿದರು. ಈ ನೀರು contamination ಆಗಿದೆಯೆಂದು ತೋರಿಸಿದರು. ಇದೇ ರೀತಿ ಹಲವಾರು ಕಡೆಗಳಲ್ಲಿ ಇದೆ. ಕೇವಲ ನನ್ನ ಕ್ಷೇತ್ರದಲ್ಲಿ ಮಾತ್ರ ಈ ರೀತಿ ಇದೆಯೆಂದು ನಾನು ಹೇಳುತ್ತಿಲ್ಲ. ಹಲವಾರು ಕ್ಷೇತ್ರಗಳಲ್ಲಿ ಇದೇ ರೀತಿ ಇದೆ. ಬೆಂಗಳೂರು ನಗರದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಕೂಡ contamination of water ಆಗುತ್ತಿದೆ. ಇದರಿಂದಾಗಿ ಬಹಳ ಜನರು ರೋಗಿಗಳಾಗಿ ಸಾಯುತ್ತಿದ್ದಾರೆ. ಕುಡಿಯುವ ನೀರಿಗೆ ಸಂಬಂಧಪಟ್ಟಂತೆ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಈ ಹಿಂದೆ ಒಂದು ಸಲಹೆಯನ್ನು ಕೊಟ್ಟಿದ್ದೆ. ಇತ್ತೀಚೆಗೆ ನಡೆದ BWSSB Function ನಲ್ಲಿ ಅವರು ಸಿಂಗಾಪೂರ್‌ಗೆ ಹೋಗುತ್ತೇನೆಂದು ನನಗೆ ಆಶ್ವಾಸನೆಯನ್ನು ಕೊಟ್ಟಿದ್ದರು. ನಾನೂ ಕೂಡ ಅವರಿಗೆ ಸಿಂಗಾಪೂರ್‌ಗೆ ಹೋಗಿ ಎಂದು ಏಕೆ ಹೇಳುತ್ತೇನೆಂದರೆ, ನಾವು ಇಲ್ಲಿ ರೋಡ್‌ನಲ್ಲಿ ಕಣ್ಣಿಗೆ ಕಾಣುವ leakage ಆಗುತ್ತಿರುವ ನೀರನ್ನು ಏನು ನೋಡುತ್ತೇವೆಯೋ ಅದು ಬೇರೆ. The leakage of water which is not visible to the necked eye. ಇದು ಕಣ್ಣಿಗೆ ಕಾಣುವುದಿಲ್ಲ, undergroundನಲ್ಲಿ pipes leak ಆಗುತ್ತಿದೆ. ಬೆಂಗಳೂರಿನಲ್ಲಿ ಇರುವ ಪೈಪ್‌ಗಳು ಬಹಳ ಹಳೆಯ ಪೈಪ್‌ಗಳಾಗಿವೆ. ನಾವು ಕಾವೇರಿಯಿಂದ ಈ phaseನಲ್ಲಿ ನೀರನ್ನು ತೆಗೆದುಕೊಂಡು ಬರುತ್ತೇವೆ. Second phase ಮಾಡುತ್ತೇವೆ, fourth phase ಮಾಡುತ್ತೇವೆ ಎಂದು ಎಷ್ಟು ಬೊಬ್ಬೆ ಹೊಡೆದು ಕೊಂಡರೂ ಕೂಡ, ಯಾವ ಸರ್ಕಾರವಿದ್ದರೂ ಕೂಡ, ಇನ್ನೂ 20 ವರ್ಷವಾದರೂ ಕೂಡ ಈ ಬೆಂಗಳೂರು ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದೇ ಇರುತ್ತದೆ. ಅದಕ್ಕಾಗಿಯೇ ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಈ ನೀರಿನ underground leakage ಬಗ್ಗೆ detect ಮಾಡುವುದಕ್ಕೆ ಸಿಂಗಾಪೂರ್ ನಲ್ಲಿ ನಾನು ಕೇಳಿದ್ದೇನೆಂದರೆ, ಅಲ್ಲಿ ಕೇವಲ 10 %

reduction ಇದೆ. The minimum average leakage in the other cities like Singapore is about 12 ti 13%. The underground leakage in city of Bangalore is more than 45%. ಅದರ ಬಗ್ಗೆ ಗಮನ ಕೊಡಿ.

SRI S.SURESH KUMAR : That leakage under 45%, it includes unaccounted water also. ಅವೆರಡು ಇದರಲ್ಲಿ ಸೇರಿದೆ.

ಶ್ರೀ ಆರ್.ರೋಷನ್ ಬೇಗ್ : ಈ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ನಿಮ್ಮ ಅಧಿಕಾರಿಗಳನ್ನು ಕರೆದುಕೊಂಡು ನೀವು ಸಿಂಗಾಪೂರ್‌ಗೆ ಹೋಗಿ. ಇಂಥ ಸಿಟಿಗಳಲ್ಲಿ ಈಗ latest technology ಬಂದಿದೆ. ಈ latest technologyಯಲ್ಲಿ ಈ water detect ಮಾಡುತ್ತಾರೆ. ಆ ತರಹ detect ಮಾಡಿದರೆ ಒಂದು ವರ್ಷದಲ್ಲಿ leakage percentage ಕಡಿಮೆಯಾದರೆ ಮುಂದಿನ ಜನರಿಗೂ ಸಹ ನೀರು ದೊರೆಯುತ್ತದೆ. ನಾಳೆ ನಮ್ಮ ಮಕ್ಕಳು, ನಮ್ಮ ಮೊಮ್ಮಕಳಿಗೆಲ್ಲರಿಗೂ ಅನುಕೂಲವಾಗುತ್ತದೆ. Otherwise there will be a war over water in Bangalore. ಇದರ ಬಗ್ಗೆ ತಾವು ದಯವಿಟ್ಟು ಗಮನ ಹರಿಸಬೇಕು. BWSSB ಏನಿದೆ ಇದರ ಬಗ್ಗೆ ಗಮನ ಹರಿಸಬೇಕು. ಆಮೇಲೆ ಈಗ Contractors ಕೆಲಸ ಮಾಡಲು ಮುಂದೆ ಬರುತ್ತಿಲ್ಲ. Engineers, Executive Engineersಗೆ ನೀವು ಬಾಯಿಗೆ ಬಂದಂತೆ ಬೈಯ್ದರೆ ಅವರು ಸರಿಯಾಗಿ co-operate ಮಾಡುತ್ತಿಲ್ಲ. ಇದರಿಂದ ಇಂದು ಈ second Phaseನಲ್ಲಿ ಕಾಮಗಾರಿ ಕೆಲಸ ಮಾಡಲು Contractors ಯಾರು ಮುಂದೆ ಬರುತ್ತಿಲ್ಲ. ಆದುದರಿಂದ ದಯವಿಟ್ಟು ಬೇಗ ಬೇಗ ಕೆಲಸವನ್ನು ಶುರು ಮಾಡಿ. BWSSB ಯಲ್ಲಿ ಇನ್ನೂ ಈಗ ಕೆಲಸವನ್ನು ಶುರು ಮಾಡಿದ್ದೀರಿ. ಈಗ ಕೆಲವರಿಗೆ ಕೆಲಸದ ರಿಕ್ರುಟ್‌ಮೆಂಟ್ ಶುರು ಮಾಡಿದ್ದೀರಿ. ಇನ್ನೂ ಬೇಕಾದಷ್ಟು vacancies ಇದೆ. ಇಂದು Water Valve man ಸಿಗುತ್ತಿಲ್ಲ. ಇಷ್ಟು ದೊಡ್ಡ ಬೆಂಗಳೂರಿಗೆ, heart of the city ಬಿಟ್ಟು ನೀವು Airport ಕಡೆಯಾಗಲಿ, ಕನಕಪುರದ ರೋಡ್ ಕಡೆಯಾಗಲಿ ಮತ್ತು ಆ ಕಡೆ ವೈಟ್‌ಫೀಲ್ಡ್ ಕಡೆಯಲ್ಲಾಗಲಿ ಅಲ್ಲಿ Valve Man ಗಳು ಸಿಗುವುದಿಲ್ಲ ಮತ್ತು ಬೇರೆ ಯಾವ ಸಿಬ್ಬಂದಿಗಳು ಸಿಗುವುದಿಲ್ಲ. ನಾನು ಪದೇ ಪದೇ ಹೇಳುತ್ತಿದ್ದೇನೆ 24/7 Hours ಇರುವ Squad ಮಾಡಿ ಎಂದು. ನಾವೇ

ರೋಡ್‌ನಲ್ಲಿ ಏನಾದರೂ ಲೀಕ್ ಆಗುತ್ತಿದ್ದರೆ ಆ ಬಗ್ಗೆ ಪದೇ ಪದೇ ಫೋನ್ ಮಾಡಿ ಹೇಳಬೇಕು. ಆದುದರಿಂದ ನಾಲ್ಕು ಡಿವಿಶನ್‌ನಲ್ಲಿ ಅವರೇ ಒಂದು Flying Squad ಮಾಡಿ ಅವರೇ ಇದರ ಬಗ್ಗೆ ಏಕೆ ಕ್ರಮ ತೆಗೆದುಕೊಳ್ಳುತ್ತಿಲ್ಲ. ಅವರು ಇದನ್ನು ಮಾಡಿ Water leakage detect ಮಾಡಿದರೆ ಕುಡಿಯುವ ನೀರಿಗೆ ಸ್ವಲ್ಪ ಅನುಕೂಲವಾಗುತ್ತದೆ ಎಂದು ಹೇಳಿ ನನಗೆ ಬೇಡಿಕೆ ಮೇಲೆ ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

4. ಪ್ರಕಟಣೆ :

ವಿಷಯ : ಮಾನ್ಯ ಮುಖ್ಯಮಂತ್ರಿಗಳು, ಸಚಿವರ/ಶಾಸಕರ ಗೌರವಾರ್ಥ ಔತಣಕೂಟ ಏರ್ಪಡಿಸಿರುವ ಬಗ್ಗೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು, ಈ ದಿವಸ ಮಧ್ಯಾಹ್ನ ಮಾನ್ಯ ಸಚಿವರುಗಳಿಗೆ ಹಾಗೂ ಮಾನ್ಯ ಶಾಸಕರುಗಳ ಗೌರವಾರ್ಥ ಬ್ಯಾಂಕ್ವೆಟ್ ಹಾಲ್‌ನಲ್ಲಿ ಔತಣಕೂಟವನ್ನು ಏರ್ಪಡಿಸಿರುತ್ತಾರೆ. ತಾವು ದಯವಿಟ್ಟು ಭಾಗವಹಿಸಬೇಕೆಂದು ಕೋರಿದೆ. ಈಗ ಸದನವನ್ನು ಮಧ್ಯಾಹ್ನ 2.45 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2 ಗಂಟೆ 08 ನಿಮಿಷಕ್ಕೆ ಮುಕ್ತಾಯವಾಗಿ ಮತ್ತೆ ಮಧ್ಯಾಹ್ನ 2 ಗಂಟೆ 45 ನಿಮಿಷಕ್ಕೆ ಸಮಾವೇಶಗೊಳ್ಳಲು ನಿಃಶ್ಚಯಿಸಲಾಯಿತು)

(ಮತ್ತೆ ಸಭೆಯು ಮಧ್ಯಾಹ್ನ 2.58 ಗಂಟೆಗೆ ಪ್ರಾರಂಭಗೊಂಡಿತು, ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಅಧ್ಯಕ್ಷರು : ಮಾನ್ಯ ಶಿವಲಿಂಗೇಗೌಡರೆ, ತಾವು ಪ್ರಾರಂಭ ಮಾಡಿ.

5. ವಿತ್ತೀಯ ಕಾರ್ಯಕಲಾಪ :

ವಿಷಯ : 2009-10ನೇ ಸಾಲಿನ ಬೇಡಿಕೆಗಳ ಮೇಲೆ ಮುಂದುವರಿದ ಚರ್ಚೆ :

ಶ್ರೀ ಮಾಲೀಕಯ್ಯ ಗುತ್ತೇದಾರ್ : ಮಾನ್ಯ ಅಧ್ಯಕ್ಷರೆ, ಗಮನ ಸೆಳೆಯುವ ಸೂಚನೆಯನ್ನು ಯಾವಾಗ ತೆಗೆದುಕೊಳ್ಳುತ್ತೀರಿ?

ಅಧ್ಯಕ್ಷರು : ಇದೆಲ್ಲಾ ಮುಗಿಯಲಿ, ಇಲ್ಲಿಂದ ಬಿಲ್ಸ್ ಪಾಸಾಗಿ ಮೇಲ್ಮನೆಗೆ ಹೋಗಿ ಅಲ್ಲಿಂದ ಬರುವುದರೊಳಗೆ ಗಮನ ಸೆಳೆಯುವ ಸೂಚನೆ ಮತ್ತು ಬಿಲ್‌ಗಳು ಎಲ್ಲವನ್ನು ಮುಗಿಸೋಣ.

ಶ್ರೀ ಕೆ. ಎಂ. ಶಿವಲಿಂಗೇಗೌಡ (ಅರಸೀಕೆರೆ) : ಮಾನ್ಯ ಅಧ್ಯಕ್ಷರೆ, ಇಲ್ಲಿ ಬಹಳ ದಿವಸಗಳಿಂದ ಏನು ಚರ್ಚೆಯಾಗುತ್ತಿತ್ತು, ಡಿಮ್ಯಾಂಡ್ಸ್ ಮೇಲೆ ಚರ್ಚೆಯಾಗಬೇಕೆಂದು ಇತ್ತು. ಅದು ನಿನ್ನೆಯಿಂದ ಪ್ರಾರಂಭವಾಗಿ ಇವತ್ತು ಅದು ಒಂದು ಹಂತಕ್ಕೆ ಬಂದಿದೆ. ಆದರೆ ಇವತ್ತು ಈ ಸದನವನ್ನು ಕರೆದಿರುವಂಥದ್ದು ನಮ್ಮಲ್ಲಿರುವಂಥ ಇಲಾಖೆಗಳ ಬೇಡಿಕೆಗಳ ಮೇಲೆ ಯಾವ್ಯಾವ ಇಲಾಖೆಗಳಿಗೆ ಸರ್ಕಾರ ಯಾವ ರೀತಿಯಲ್ಲಿ ಹಣವನ್ನು ತೊಡಗಿಸಿದೆ, ಯಾವ್ಯಾವ ಯೋಜನೆಗಳಿಗೆ ಎಷ್ಟೆಷ್ಟು ಹಣವನ್ನು ತೊಡಗಿಸಿದೆ, ಮತ್ತೆ ಆ ಹಣವನ್ನು ಯೋಜನೆಗಳಿಗೆ ತೊಡಗಿಸುವಂಥ ಸಂದರ್ಭದಲ್ಲಿ ಶಾಸಕರ ಪಾತ್ರ ಏನು? ಆ ಎಲ್ಲಾ ಯೋಜನೆಗಳು ಎಲ್ಲಾ ಶಾಸಕರಿಗೆ ತಿಳಿಯಬೇಕೆಂಬ ದೂರ ದೃಷ್ಟಿಯಿಂದ ಈ ಒಂದು ಸಭೆಯನ್ನು ಕರೆಯುತ್ತಾರೆ. ಆದರೆ ಇಲ್ಲಿ ನೀವು ಹೇಳಿದ ಹಾಗೆ ನಿಯಮಾವಳಿಗಳ ಅಡಿಯಲ್ಲಿ ಕೆಲವೊಂದು ತಪ್ಪು ಎಂದು ಹೇಳುವುದಕ್ಕೆ ಆಗುವುದಿಲ್ಲ.

ಆದರೆ ಇಲ್ಲಿ ನಿಯಮಾವಳಿಗಳ ಅಡಿಯಲ್ಲಿ 69 ಅನ್ನೂ ತೆಗೆದು ಕೊಳ್ಳಬೇಕು, ಅದು ತಪ್ಪು ಎಂದು ಹೇಳಲಿಕ್ಕಾಗುವುದಿಲ್ಲ. ನಿಯಮ 60ರ ಅಡಿಯಲ್ಲಿ ಒಂದು ವಿಷಯವನ್ನು ತಂದಾಗ ಅದನ್ನು ನೀವು ರಿಜೆಕ್ಟ್ ಮಾಡಲು ಬರುವುದಿಲ್ಲ. ಆ ರೀತಿಯಾಗಿ ತಂದಂಥವುಗಳು ರೂಲ್ 69ಗೆ convert ಆಗಿದ್ದು ಮತ್ತು ಬೇಕಾದಷ್ಟು ಸಮಸ್ಯೆಗಳು ಬಂದಿರತಕ್ಕಂಥದ್ದನ್ನು ನಾನು ನೋಡಿದ್ದೇನೆ. ನಾನು point of order ಸಹ ಕೇಳಿದೆ. 15 ದಿವಸಗಳಿಗೆ ಕಡಿಮೆ ಇಲ್ಲದಂತೆ ಸದನವನ್ನು ಇಲಾಖಾ ಬೇಡಿಕೆ ಮೇಲೆ ಚರ್ಚೆ ಮತ್ತು ಮತದಾನಕ್ಕೆ ಮೀಸಲಿಡಬೇಕು ಎನ್ನತಕ್ಕಂಥದ್ದು ನಿಯಮಾವಳಿಗಳಲ್ಲಿದೆ. ಆ

ನಿಯಮಾವಳಿಗಳ ಪ್ರಕಾರ ಸದನ ನಡೆಯುತ್ತಿಲ್ಲ. ಅದಕ್ಕೆ ನಾವು ವಿಷಾದವನ್ನು ವ್ಯಕ್ತಪಡಿಸಬೇಕಾಗುತ್ತದೆ. ಎಲ್ಲ 34 ಇಲಾಖೆಗಳ ಮೇಲೆ ಸಮಗ್ರವಾದ ಚಿಂತನೆಯನ್ನು ಮಾಡಬೇಕಾದರೆ ಬಹುಶಃ 2 ರಿಂದ 3 ಗಂಟೆಗಳ ಕಾಲ ಬೇಕಾಗುತ್ತದೆ. ಇವತ್ತು ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಅದು ಸಾಧ್ಯವಾಗುತ್ತಿಲ್ಲ. ಇದಕ್ಕೆ ನಾವು ಅಧ್ಯಕ್ಷರನ್ನು ಹೊಣೆಗಾರರನ್ನಾಗಿ ಮಾಡಲಿಕ್ಕಾಗುವುದಿಲ್ಲ. ಸಭಾಧ್ಯಕ್ಷರು ನಮಗೆ ಏನೊಂದು ಕಾಲಮಿತಿಯನ್ನು ಕೊಟ್ಟಿದ್ದಾರೆ, ಅದರ ಪರಿಮಿತಿಯೊಳಗೆ ನಾವು ಚರ್ಚೆ ಮಾಡಬೇಕಾದಂಥ ಅನಿವಾರ್ಯ ಪ್ರಸಂಗ ಬಂದಿದೆ. 9ನೇ ತಾರೀಖು ನಾನು ಒಂದು ಪ್ರಶ್ನೆಯನ್ನು ಮಾನ್ಯ ಆರೋಗ್ಯ ಸಚಿವರನ್ನು ಈ ಸದನದಲ್ಲಿ ಕೇಳಿದ್ದೆ. ಹಾಗೆ ಕೇಳಿದಂಥ ಸಂದರ್ಭದಲ್ಲಿ, ಆ ವಿಷಯಕ್ಕೆ ಮಹತ್ವವನ್ನು ಕೊಟ್ಟು ತಾವು ಇದನ್ನು ನಿಯಮಗಳ ಪ್ರಕಾರ ಅರ್ಧ ಗಂಟೆಗಳ ಕಾಲ ವಿಶೇಷ ಚರ್ಚೆಗೆ ಅವಕಾಶವನ್ನು ಕೊಡುತ್ತೇನೆ ಎನ್ನುವ ವಾಗ್ದಾನವೇನಿತ್ತು, ಅದರ ಪ್ರಕಾರ ಅವಕಾಶವನ್ನು ಕೊಡಲಿಕ್ಕೆ ಸಾಧ್ಯವಾಗಲಿಲ್ಲ. ಆದರೂ ಸಹ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆಯ ಸಂದರ್ಭದಲ್ಲೇ ನಾನು ಆ ವಿಚಾರವನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ. ಇದನ್ನು ಯಾರೂ ತಪ್ಪು ಗ್ರಹಿಸಿಕೊಳ್ಳಬಾರದು. ಈ ಯೋಜನೆ ಒಳ್ಳೆಯದು. ಯೋಜನೆಯನ್ನು ನಾನು ಟೀಕೆ ಮಾಡಲಿಕ್ಕೆ ಹೋಗುವುದಿಲ್ಲ. ಯೋಜನೆಯನ್ನು ತಂದಂಥವರನ್ನು ಟೀಕೆ ಮಾಡಲಿಕ್ಕೆ ಹೋಗುವುದಿಲ್ಲ. ಆದರೆ ಈ ಯೋಜನೆಯನ್ನು ಕಾರ್ಯಗತ ಮಾಡತಕ್ಕ ವ್ಯವಸ್ಥೆ ಏನಿದೆ, ಆ ವ್ಯವಸ್ಥೆಯನ್ನು ಪೂರ್ಣ ಪ್ರಮಾಣದಲ್ಲಿ ಟೀಕೆ ಮಾಡಲಿಕ್ಕೆ ಬಯಸುತ್ತೇನೆ. ಇದರಲ್ಲಿರತಕ್ಕಂಥ ಲೋಪದೋಷಗಳನ್ನು ನಾನು ಎತ್ತಿಹಿಡಿಯುತ್ತೇನೆ. ಆದರೆ ಅದು ಸರಿ ಎಂದು ಅವರು ಭಾವಿಸಿದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ಸರ್ಕಾರಕ್ಕೆ ಸಲಹೆ ಸೂಚನೆಗಳನ್ನು ಕೊಡತಕ್ಕಂಥದ್ದು ನಮ್ಮ ಕರ್ತವ್ಯ. ಅದನ್ನು ಪಾಲಿಸುವುದು, ಬಿಡುವುದು ಸರ್ಕಾರದ ಕರ್ತವ್ಯ. ಇಲ್ಲಿ ಏನು ಸಲಹೆಯನ್ನು ಕೊಡುತ್ತಿದ್ದಾರೆ, ಇದು ಉತ್ತಮವಾದಂಥ ಸಲಹೆ, ಈ ಸಲಹೆಯನ್ನು ನಾವು ಪರಿಗಣಿಸಬೇಕು ಎನ್ನತಕ್ಕಂಥ ಭಾವನೆ ಅವರಿಗೆ ಬಂದರೆ ಸಾಕು. ಅದನ್ನು ಪರಿಗಣಿಸುವುದು, ಬಿಡುವುದು ಅವರಿಗೆ ಬಿಟ್ಟಿದ್ದು. ಈ ಯೋಜನೆಯನ್ನು ಕೇಂದ್ರ ಸರ್ಕಾರದ National Rural Health Mission ಎನ್ನತಕ್ಕಂಥ ಒಂದು ಕಾರ್ಯಕ್ರಮವನ್ನು ಕೇಂದ್ರ ಸರ್ಕಾರ ಏನು ಜಾರಿಗೆ ತಂದಿತು. ಅದರ ಅಡಿಯಲ್ಲಿ ಇವತ್ತು ಇಲ್ಲಿ ಈ ಒಂದು

ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಹಾಗೆ ಜಾರಿಗೆ ತರತಕ್ಕಂಥ ಕಾಲದಲ್ಲಿ ಒಂದು ಕಂಪನಿಯ ಜೊತೆಯಲ್ಲಿ M.O.U ಯನ್ನು ಮಾಡಿಕೊಂಡಿದ್ದಾರೆ. ಇದು 221 ಕೋಟಿ ರೂಪಾಯಿಗಳ ಪ್ರಾಜೆಕ್ಟ್, ಇದು ಪಾರದರ್ಶಕತೆಯ ಸರ್ಕಾರ ಎಂದು ಹೇಳುವ ಈ ಸರ್ಕಾರ, ಈ 221 ಕೋಟಿ ರೂಪಾಯಿಗಳ ಪ್ರಾಜೆಕ್ಟನ್ನು ನೇರವಾಗಿ ಒಂದು ಕಂಪನಿಯನ್ನು ಕರೆದು, ಆ ಕಂಪನಿಯ ಜೊತೆಯಲ್ಲಿ ಒಪ್ಪಂದವನ್ನು ಮಾಡಿಕೊಂಡಿದೆ. E.M.R.I. ಎನ್ನುವ ಈ ಕಂಪನಿ Andhramade. ಆ ಕಂಪನಿಯ ಉದ್ದೇಶ ಯಾವುದೇ ಲಾಭದ ಅಂಶವನ್ನು ಹೊಂದಿರತಕ್ಕಂಥದ್ದು ಅಲ್ಲ. ಸಾಮಾಜಿಕ ಸೇವೆಯನ್ನು, ಜನರ ಸಂಕಷ್ಟವನ್ನು ನಿವಾರಣೆ ಮಾಡತಕ್ಕಂಥ ಒಂದು ಸಂಸ್ಥೆಯದು. ಸರ್ಕಾರ ದವರು ಈ ಸಂಸ್ಥೆಯ ಜೊತೆಯಲ್ಲಿ ಏನೊಂದು agreement ಅನ್ನು ಮಾಡಿ ಕೊಂಡಿದ್ದಾರೆ, ಈ ಪುಸ್ತಕದಲ್ಲಿರುವ ಆ agreement ನ್ನು ನಾನು ಓದಿದಾಗ ನನಗೆ ಅರ್ಥವಾದಂಥದ್ದು ಏನೆಂದರೆ, ಈ ಸಂಸ್ಥೆಯ ಉದ್ದೇಶವೆಂದರೆ, ಸಾಮಾಜಿಕ ಸೇವೆ, not for profitable job ಎಂದು ಹೇಳುತ್ತಾರೆ. ಆದರೆ ಆ agreementನಲ್ಲಿರುವ ನ್ಯೂನ್ಯತೆಯನ್ನು ಹೇಳುತ್ತೇನೆ. ಅದರ ಅಂಕಿಅಂಶ ಗಳನ್ನೂ ಕೊಡುವುದಿಲ್ಲ. ಆ ಮಟ್ಟಕ್ಕೆ ಅಲ್ಲಿಯ ಅಧಿಕಾರಿಗಳು ಸತಾಯಿ ಸುತ್ತಾರೆ. 221 ಕೋಟಿ ರೂಪಾಯಿಗಳ ಈ ಯೋಜನೆಯನ್ನು emergency ಸಂದರ್ಭದಲ್ಲಿ ನಾವು ಜನಗಳಿಗೆ ಸೇವೆ ಸಲ್ಲಿಸಬೇಕು ಎನ್ನುವ ದೃಷ್ಟಿಯಿಂದ ನೇರವಾದಂಥ ಒಪ್ಪಂದವನ್ನು ನಾವು ಆ ಸಂಸ್ಥೆಯ ಜೊತೆಯಲ್ಲಿ ಮಾಡಿಕೊಂಡಿದ್ದೇವೆ, ಇದೇ ರೀತಿಯ ಯೋಜನೆ ಆಂಧ್ರದಲ್ಲಿತ್ತು, ಇನ್ನೂ ನಾಲ್ಕೈದು ರಾಜ್ಯಗಳಲ್ಲಿತ್ತು, ಅದಕ್ಕೋಸ್ಕರ ಅದನ್ನೇ ನಾವು copy ಮಾಡಿದ್ದೇವೆ ಎಂದು ಹೇಳತಕ್ಕಂಥದ್ದು ಸರಿಯಲ್ಲ. ಇವತ್ತು ನೀವು ನೇರವಾಗಿ ಆ ಕಂಪನಿಯ ಜೊತೆ ಮಾಡಿಕೊಂಡಿರುವ ಒಪ್ಪಂದದ ಪ್ರಕಾರ ಪ್ರಥಮವಾಗಿ ಅವರಿಗೆ 40 ಕೋಟಿ ರೂಪಾಯಿಗಳ advance ಅನ್ನು ಕೊಡಬೇಕು. 40 ಕೋಟಿ ರೂಪಾಯಿ ಸರ್ಕಾರದ ದುಡ್ಡನ್ನು ಕೊಡಬೇಕು. 40 ಕೋಟಿ ರೂಪಾಯಿಗಳನ್ನು ಕೊಟ್ಟಮೇಲೆ ಅವರೇ Force Motors ಎನ್ನುವ ಕಂಪನಿ ಯಿಂದ Ambulance ಗಳನ್ನು ಖರೀದಿ ಮಾಡುತ್ತಾರೆ. ಸರ್ಕಾರ ಟೆಂಡರ್ ಮುಖಾಂತರ ಖರೀದಿ ಮಾಡಿ ಅವರಿಗೆ ಕೊಡುವ ಹಾಗಿಲ್ಲ. ಆ ಕಂಪನಿಯೇ ಖರೀದಿ ಮಾಡುತ್ತದೆ. Ambulance ಅನ್ನು ಕೊಡತಕ್ಕಂಥದ್ದು ಸರ್ಕಾರ

ದಿಂದಲೇ ಹೊರತು ಆ ಕಂಪನಿಯಿಂದಲ್ಲ. ಅವರು ಒಂದು estimate ಕೊಟ್ಟಿದ್ದಾರೆ. ಆ estimate ಪ್ರಕಾರ, 40 ಕೋಟಿ, 50 ಕೋಟಿ ಹೀಗೆ 221 ಕೋಟಿ ರೂ.ಗಳು ಮುಗಿಯುವವರೆಗೆ 3 ವರ್ಷಗಳ ಕಾಲ ತೆಗೆದು ಕೊಳ್ಳುತ್ತಿರುತ್ತಾರೆ. ಹಾಗೆ ಅವರು ತೆಗೆದುಕೊಂಡಂಥ ಹಣಕ್ಕೆ utilization certificate ಅನ್ನು ಎರಡು ಹಾಳೆಯಲ್ಲಿ ಕೊಡುತ್ತಾರೆ. ನೋಡಿ, ಇವೆರಡು ಹಾಳೆಗಳು 31 ಕೋಟಿ ರೂ.ಗಳಿಗೆ ಅವರು ಕೊಟ್ಟಿರತಕ್ಕಂಥ utilization certificates. ಅವರನ್ನು ಯಾರೂ ಪ್ರಶ್ನೆ ಮಾಡುವ ಹಾಗಿಲ್ಲ. ಅವರ estimate ನಲ್ಲಿ ಏನಿತ್ತು, ಅವರು ಏನು bill ತಂದುಕೊಡುತ್ತಾರೆ, ಅದೇ bill accepted. ಆ bill ಅನ್ನು ಪ್ರಶ್ನೆ ಮಾಡುವ ಹಾಗಿಲ್ಲ. ಆ billಗಳ ಬಗ್ಗೆ ಯಾರೂ ಕೇಳುವ ಹಾಗಿಲ್ಲ. Agreement ಪ್ರಕಾರ ಒಂದು Ambulance 25 ರಿಂದ 30 ಕಿ.ಮೀ.ವರೆಗೆ ಹೋಗಿರಬೇಕು ಎಂದು ಮಾಡಿಕೊಂಡಿದ್ದಾರೆ. ಆ ರೀತಿ ಹೋಗಿರುವ 25 ರಿಂದ 30 ಕಿ.ಮೀ.ಗೆ . . .

ಶ್ರೀ ಸಂಗಣ್ಣ ಕರಡಿ ಅಮರಪ್ಪ : ಮುಖ್ಯವಾದ ಒಂದು ವಿಷಯದ ಬಗ್ಗೆ ಬೆಳಕು ಚೆಲ್ಲುತ್ತಿದ್ದಾರೆ. ಯಾರೂ ನೋಟ್ ಮಾಡಿಕೊಳ್ಳುತ್ತಿರುವುದು ಕಾಣುತ್ತಿಲ್ಲ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಯಾರೂ ನೋಟ್ ಮಾಡಿಕೊಳ್ಳು ವುದಿಲ್ಲ. ಯಾರೂ ಉತ್ತರವನ್ನೂ ಹೇಳುವುದಿಲ್ಲ. ಹೇಳಬೇಕು ಎಂದು ನಾವು ಹೇಳುತ್ತಿದ್ದೇವೆ. ಆರೋಗ್ಯ ಸಚಿವರೂ ಇಲ್ಲಿ ಇಲ್ಲ. ನಾನು ಪ್ರಶ್ನೆ ಕೇಳಿದಾಗ ಆರೋಗ್ಯ ಸಚಿವರ ಹತ್ತಿರ ಆ ಮಾಹಿತಿಯೇ ಇರಲಿಲ್ಲ. ಅವರು ಏನೇನೋ ಉತ್ತರ ಕೊಟ್ಟರು. ಅದಕ್ಕೋಸ್ಕರ ಮಾನ್ಯ ಸಂಸದೀಯ ಸಚಿವರು ಮತ್ತು ಅಧ್ಯಕ್ಷರು ಇದಕ್ಕೆ ವಿಶೇಷ ಚರ್ಚೆಗೆ ಅವಕಾಶ ಕೊಡುತ್ತೇವೆ ಎಂದು ಹೇಳಿದರು. ಇವತ್ತು ಅವರು ಇಲ್ಲ. ಈ ರೀತಿ ಅಧಿಕಾರಿಗಳು ಉತ್ತರ ಕೊಡುವುದಾದರೆ ಇದಕ್ಕೆ ಯಾರಾದರೂ ಪ್ರಜಾಪ್ರಭುತ್ವ ಅನ್ನುತ್ತಾರೆಯೇ ಅಥವಾ ಪ್ರಜಾತಂತ್ರ ಅನ್ನುತ್ತಾರೆಯೇ, ಇದು ಏನು ಎನ್ನುವುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಸಿ.ಎಸ್.ಪುಟ್ಟೇಗೌಡ : ಅಧಿಕಾರಿಗಳು ಇಲ್ಲಿ ಕೂರಿಸಿ ನಾವು ಅಲ್ಲಿ ಕುಳಿತುಕೊಳ್ಳಬೇಕು. ಹೀಗಾದರೆ, ಡೆಮಾಕ್ರಸಿಯಲ್ಲಿ ನಾವು ಇಷ್ಟೆಲ್ಲಾ ಬಡಿದಾಡುವ ಅಗತ್ಯವೇನಿತ್ತು?

ಅಧ್ಯಕ್ಷರು : ಮುಖ್ಯಮಂತ್ರಿಗಳೇ ಇದ್ದಾರೆ.

ಶ್ರೀ ಸಿ.ಎಸ್.ಪುಟ್ಟೇಗೌಡ : ಅಧಿಕಾರಿಗಳು ಬರೆದುಕೊಳ್ಳುತ್ತಾರೆ ಎನ್ನುವ ಮಾತನ್ನು ಹೇಳಬಾರದು. ಅಧಿಕಾರಿಗಳು ಬರೆದುಕೊಳ್ಳುತ್ತಾರೆ ಎಂದರೆ ಅಧಿಕಾರಿಗಳನ್ನು ನಮ್ಮ ಜಾಗದಲ್ಲಿ ಕೂರಿಸಿಬಿಟ್ಟು, ನಮಗೆಲ್ಲ ಇಲ್ಲಿ ಕೆಲಸವೇನು?.

ಅಧ್ಯಕ್ಷರು : ಪುಟ್ಟೇಗೌಡರೇ, ಸ್ವತಃ ಮುಖ್ಯಮಂತ್ರಿಗಳೇ ಇದ್ದಾರೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : 3 ವರ್ಷಗಳಲ್ಲಿ ಎಷ್ಟೆಷ್ಟು Ambulance ಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ. ಮೊದಲನೇ ವರ್ಷ 162 Ambulanceಗಳನ್ನು ತೆಗೆದುಕೊಳ್ಳಬೇಕು, ಎರಡನೇ ವರ್ಷದಲ್ಲಿ 209 Ambulanceಗಳನ್ನು ತೆಗೆದುಕೊಳ್ಳಬೇಕು, ಮೂರನೇ ವರ್ಷದಲ್ಲಿ 517 Ambulance ಗಳನ್ನು ಖರೀದಿ ಮಾಡಬೇಕು. ಈ Ambulance ಗಳಿಗೆ ಹಣವನ್ನು ಕಿ.ಮೀ. ಲೆಕ್ಕದಲ್ಲಿ ಕೊಡುತ್ತಿಲ್ಲ. ಇದು ಈ ರಾಜ್ಯದ ಜನತೆಗೆ ಗೊತ್ತಾಗಬೇಕು ಎಂದು ನಾವು ಬೆಳಕನ್ನು ಚೆಲ್ಲುತ್ತಿದ್ದೇವೆ. Trip ಲೆಕ್ಕದಲ್ಲಿ ಕೊಡುತ್ತಾರೆ. ಒಂದು ಟ್ರಿಪ್‌ಗೆ, ಮೊದಲನೇ ವರ್ಷ 162 ಗಾಡಿ ಇದ್ದಾಗ, ಮೊದಲನೇ ತಿಂಗಳು 25 ರಿಂದ 30 ಕಿ.ಮೀ. ಒಂದು ಟ್ರಿಪ್ ಹೋಗಿ ಬರುವುದಕ್ಕೆ 2,812 ರೂಪಾಯಿ. ಎರಡನೇ ತಿಂಗಳು 1,850 ರೂ.ಗಳು ಕಿ.ಮೀ. ಲೆಕ್ಕ ಅಗ್ರೀಮೆಂಟಿನಲ್ಲಿ ಇಲ್ಲ. ಟ್ರಿಪ್ ಲೆಕ್ಕದಲ್ಲಿ ಅಗ್ರೀಮೆಂಟ್ ಮಾಡಿಕೊಂಡಿದ್ದಾರೆ. ಒಂದು ಟ್ರಿಪ್ ಹೋಗಿಬರುವುದಕ್ಕೆ ಇಷ್ಟು ದುಡ್ಡು ಎಂದು ಒಪ್ಪಂದ ಮಾಡಿಕೊಂಡಿದ್ದಾರೆ. 30 ಕಿ.ಮೀ. ಹೋಗಿ ಬರುವುದಕ್ಕೆ 2,812 ಕಿ.ಮೀ. ಎಂದರೆ ಒಂದು ಕಿ.ಮೀ.ಗೆ ಎಷ್ಟು ಬಿತ್ತು ಎಂದು ನೀವೇ ಊಹಿಸಿಕೊಳ್ಳಬಹುದು. ಆವತ್ತು ಸುಮಾರು 30 ರೂಪಾಯಿ ಎಂದು ಹೇಳಿದರು. ಮೂರನೆ ತಿಂಗಳಿಗೆ 1,250 ರೂಪಾಯಿ, ನಾಲ್ಕನೇ ತಿಂಗಳಿಗೆ 1,216 ರೂಪಾಯಿ, 5ನೇ ತಿಂಗಳಿಗೆ 983 ರೂಪಾಯಿ.

8 ಕಿ.ಮೀ. ಬರುತ್ತದೆಂದು agreement ಮಾಡಿಕೊಂಡಿದ್ದಾರೆ. ಅದರ ಪ್ರಕಾರ ಇಂಧನ ವೆಚ್ಚವನ್ನು ಭರಿಸತಕ್ಕಂಥದ್ದನ್ನು ಮಾಡಿಕೊಂಡಿದ್ದಾರೆ. ಹಿಂದೆ ನಮಗೆ ಗಂಡಸಿ ಸಂತೆಗೆ ಕರೆದುಕೊಂಡು ಹೋಗಿ ಒಂದು ಡಬ್ಬದೊಳಗೆ ಬಾಂಬೆ ನೋಡು, ಕರ್ನಾಟಕ ನೋಡು, ಮೈಸೂರು ನೋಡು, ಜೋಗ್ ಫಾಲ್ಸ್ ನೋಡು ಎಂದು ತೋರಿಸಿ ಹೇಳುತ್ತಿದ್ದರು. ಆ ತರಹ ಇದಾಗಿದೆ. ಯೋಜನೆ ಒಳ್ಳೆಯದಿದೆ, ಆ ಯೋಜನೆಯನ್ನು ಕಾರ್ಯಗತ ಮಾಡತಕ್ಕಂಥದ್ದರಲ್ಲಿ ಆ ಕಂಪನಿಗೆ ನೇರವಾಗಿ ವಹಿಸುವುದರ ಬದಲು, ಆ ಕಂಪನಿ

ಯಾರದು ಸ್ವಾಮಿ? ಅದು ಆಂಧ್ರದಲ್ಲಿ misappropriation ಮಾಡಿ ಒಂದು ಹಗರಣದಲ್ಲಿ ಸಿಕ್ಕಿಹಾಕಿ ಕೊಂಡಿರುವ ಈಗಾಗಲೇ ಜೈಲಿನಲ್ಲಿರುವ ಸತ್ಯಂ ಕಂಪನಿಯವರದು. ಭಾರತ ದೇಶದಲ್ಲಿ ನಡೆದಿರುವ ದೊಡ್ಡ ಹಗರಣಗಳಲ್ಲಿ ಇದೂ ಕೂಡ ಒಂದಾಗಿದೆ. ಆ ಹಗರಣದ ಮಾಲೀಕರು ಇದರ ಮುಖ್ಯಸ್ಥರಾಗಿದ್ದಾರೆ. ಇಂಥ ಒಂದು ಕಂಪನಿಗೆ ನೀವು ನೇರವಾದ ಸಂಬಂಧ ಕಲ್ಪಿಸಬೇಕಾದರೆ, ಕೊಡಬೇಕಾದರೆ, ಆಂಧ್ರದಲ್ಲಿ ಆ ಕಂಪನಿಗೆ ಕೊಟ್ಟಿರ ಬಹುದು, ಆಂಧ್ರದವರದು ನಾವು ಕಾಪಿ ಮಾಡಬೇಕೆಂದೇನೂ ಇಲ್ಲ. ಆಂಧ್ರದಲ್ಲಿ ಬಹಳ ದುಡ್ಡು ಇರಬಹುದು, ಅವರು ವೆಚ್ಚ ಮಾಡಬಹುದು, ಅದನ್ನು ನಾನು ಕೇಳುವುದಕ್ಕೆ ಹೋಗುವುದಿಲ್ಲ. ಆದರೆ, ನೀವು 221 ಕೋಟಿ ರೂಪಾಯಿಗಳ ವ್ಯವಸ್ಥೆ ಇರತಕ್ಕಂಥದ್ದಕ್ಕೆ tender ಕರೆಯಬಹುದಾಗಿತ್ತು. Tender ಕರೆದು ಯಾರೂ ಬರದಿರುವ ಕಾಲಕ್ಕೆ ಆ ಕಂಪನಿಗೆ ನೀವು ಕೊಡಬಹುದಾಗಿತ್ತು. ಪಾರದರ್ಶಕತೆ ಎಂದು ಹೇಳುತ್ತೀರಿ, ಪಾರದರ್ಶಕತೆ ಎಲ್ಲಿದೆ? ಯಾವ ಉದ್ದೇಶದಿಂದ ನೀವು ಪಾರದರ್ಶಕತೆ ಎಂದು ಹೇಳುತ್ತೀರಿ? ಸರ್ಕಾರದಿಂದ ಇಷ್ಟು rate ತೆಗೆದುಕೊಂಡು ನಾನು ಈ ಸಮಾಜಕ್ಕೆ ಸೇವೆ ಮಾಡುವುದಕ್ಕೆ ಬಂದಿದ್ದೇನೆ, 5% discount ಕೊಡುತ್ತೇನೆಂದು ಹೇಳುತ್ತಾರೆ. ನಂತರ ಒಂದು call centre ಇದ್ದು ಅದಕ್ಕೆ ನಾನು ಭೇಟಿ ನೀಡಿದ್ದೆ. Phone ಇಟ್ಟುಕೊಂಡು ಕುಳಿತಿದ್ದಾರೆ. ಅಲ್ಲಿಗೆ phone call ಬರುತ್ತದೆ. ಈಗಿನ ಯುಗದಲ್ಲಿ ಹಳ್ಳಿ ಹಳ್ಳಿಯಲ್ಲಿ, ಗ್ರಾಮ, ಕೊಪ್ಪಲಿನಲ್ಲಿ ಸಹಿತ phone ಗಳು ಇವೆ. ನೀವು ಏನಾದರೂ ಆಸ್ಪತ್ರೆ ಹತ್ತಿರ phone ಇಟ್ಟು phone ಮಾಡಿದ್ದರೆ ಅವರಿಗೆ ಕೇಳಿಸುತ್ತಿರಲಿಲ್ಲವೇ? ಇಲ್ಲಿಂದ call centre ಗೆ phone ಮಾಡಿ ಅಲ್ಲಿಂದ ಆಸ್ಪತ್ರೆಗೆ call ಮಾಡಬೇಕೇ? ನಮ್ಮ ಅರಸೀಕರೆ ಆಸ್ಪತ್ರೆಯ ಮುಂಭಾಗದಲ್ಲಿ ಇಟ್ಟಿದ್ದರೆ phone ಕೇಳುತ್ತಿರಲಿಲ್ಲವೇ? ಇದನ್ನು ದಯಮಾಡಿ ನೀವು ಅರ್ಥ ಮಾಡಿಕೊಳ್ಳಬೇಕು. ಅದಕ್ಕೊಂದು call centre ಅದಕ್ಕಷ್ಟು expenditure, ಅದಕ್ಕಷ್ಟು estimate ಹಾಕಿದ್ದಾರೆ. ಅದಾದ ಮೇಲೆ ಯಾರು nursing training ಮಾಡಿದ್ದಾರೋ ಅವರಿಗೆ 45 ದಿವಸದ ಹೆಚ್ಚುವರಿ nursing training ಕೊಡುತ್ತೇವೆಂದು ಹೇಳಿದ್ದಾರೆ. ಸರಿ. 45 ದಿವಸ traning ಕೊಡುವುದಕ್ಕೆ ಎಷ್ಟು ಖರ್ಚಾಗಬಹುದು? ಅದಕ್ಕೆ

permanent asset ಆದ ಒಂದು building ಕಟ್ಟುವುದಕ್ಕೆ estimateನಲ್ಲಿ provision ಮಾಡಿಕೊಂಡಿದ್ದಾರೆ. ಆಸ್ಪತ್ರೆಗಳಲ್ಲಿ ಬೇಕಾದಷ್ಟು Nurse ಗಳಿರುತ್ತಾರೆ, ಆ Nurseಗಳನ್ನೇ ಇಲ್ಲಿಗೆ ನೇಮಿಸಿಕೊಳ್ಳುವುದಕ್ಕಾಗುವುದಿಲ್ಲವೇ? ಏತಕ್ಕೋಸ್ಕರ ಅವರಿಗೆ ಕೊಡಬೇಕು? ಸರ್ಕಾರಿ ಆಸ್ಪತ್ರೆಗಳಲ್ಲಿರುವ Ambulance ಗಳು ಸರಿಯಾಗಿ ನಡೆಯುವುದಿಲ್ಲವೆಂದರೆ, Taxi type ಎಂದು ತಿಳಿದುಕೊಳ್ಳಬಾರದೆಂದರೆ, ಇವತ್ತು ಎಲ್ಲಾ ರೀತಿಯ ಸುಸಜ್ಜಿತವಾಗಿ ಇಟ್ಟು ಕೊಂಡಿರುವ Ambulanceಗೆ ಅರಸೀಕೆರೆಯಿಂದ ಅಥವಾ ಬೇರೆ Taluk Head quarters ನಿಂದ ಬೆಂಗಳೂರಿಗೆ ಬರಬೇಕಾದರೆ ಕಿ.ಮೀ. 1ಕ್ಕೆ 10 ರೂಪಾಯಿಗಳಂತೆ ಕರೆದುಕೊಂಡು ಬರುತ್ತಾರೆ. ನೀವೇನಾದರೂ ಈ scheme ಅನ್ನು ಅವರಿಗೆ ಕೊಟ್ಟರೆ ಯಾರು ಬೇಕಾದರೂ queue ನಿಂತು ಕೊಂಡು ಕರೆದುಕೊಂಡು ಬರುತ್ತಾರೆ. ಅವರಿಗೆ ಎಲ್ಲಾ facilities ಅನ್ನೂ ಇಟ್ಟಿದ್ದಾರೆ. Ventilators ಅನ್ನೂ ಇಟ್ಟಿದ್ದಾರೆ, ಪ್ರತಿಯೊಂದು facilities ಅನ್ನೂ ಇಟ್ಟಿದ್ದಾರೆ. ಆದರೆ, ನೀವು ಅವರಿಗೆ ಕೊಡುತ್ತಿಲ್ಲ. ಇದೊಂದು ತರಹ scheme ಮಾಡಿ 517 Ambulanceಗಳನ್ನು ಖರೀದಿ ಮಾಡಿ ಅವರ ಮುಖಾಂತರ ಮಾಡಿಸುವುದೇ? ನಮ್ಮ ಸರ್ಕಾರದಿಂದ ಮಾಡುವುದಕ್ಕೆ ಸಾಧ್ಯವಿಲ್ಲವೇ? ಸರ್ಕಾರದಿಂದ ಏತಕ್ಕೋಸ್ಕರ ಆಗುವುದಿಲ್ಲ? ಈಗ ಅರಸೀಕೆರೆ ಯಲ್ಲಿ 108 ಸಂಖ್ಯೆಯ ದೂರವಾಣಿ ಇದೆ. 2 ಜನ drivers, ಒಬ್ಬ Nurse, ಒಬ್ಬರು attender ಹೀಗೆ ಅಲ್ಲಿ 4 ಜನ ಇದ್ದಾರೆ. ಇವರೆಲ್ಲರಿಗೂ ಸೇರಿ ತಿಂಗಳಿಗೆ 22 ಸಾವಿರ ರೂಪಾಯಿಗಳ ಖರ್ಚು ಬರುತ್ತದೆ. ಅವರು ಅರಸೀಕೆರೆಯಿಂದ ತೆಗೆದುಕೊಳ್ಳುವ ಖರ್ಚು ಎಷ್ಟು? Trip ಲೆಕ್ಕ ಹಾಕಿದರೆ ಎಷ್ಟು Trip ಆಗುತ್ತದೆ? 100 trip ಆಗುತ್ತದೆ, 100 trip ಗೆ ದುಡ್ಡು ಎಷ್ಟು? ಅವರಿಗೆ ಕೊಡುವ ಸಂಬಳವೆಷ್ಟು? ಅದಲ್ಲದೇ ಅವರು ಏನೋ ಒಂದು pose ಕೊಟ್ಟು ಆ ತರಹ ಮಾಡಿರತಕ್ಕಂಥದ್ದು ತಪ್ಪು. ಇನ್ನು ಆ utilization certificate ತೆಗೆದುಕೊಳ್ಳುವುದಕ್ಕೆ ಅಲ್ಲಿ ಹೋಗಿ tricks ಮಾಡುತ್ತಾರೆ. ಅವರು ಇಂತಿಷ್ಟು ಎಂದು ಹೇಳಿದ tripsಗೇ ಒಪ್ಪಿಕೊಳ್ಳು ವುದೇ? ಅದನ್ನು ಯಾರೂ ಗಮನಿಸುವವರು ಇಲ್ಲವೇ? ಖಾಸಗಿ Nursing Homeಗೆ ತೆಗೆದುಕೊಂಡು ಹೋಗಬಹುದೆಂದು ಹೇಳುತ್ತೀರಿ. Ambulance ನವರು

ಒಂದು trip ಸಹ ಹೋಗದೇ 5 trip ಹೋಗಿದ್ದೇವೆಂದು ಹೇಳಬಹುದು. ಹಾಗೆಯೇ, 3 trip ಹೋದಮೇಲೆ 5 ಹೆಚ್ಚಿಗೆ trip ಏನಾದರೂ ಹೋದರೆ ಹೆಚ್ಚಿಗೆ ಹಣವನ್ನು claim ಮಾಡುತ್ತಾರೆಯೇ, ಮಾಡಿದರೆ ಅದರ ಮಾಹಿತಿ ಕೊಡಿ ಎಂದು ಅಧಿಕಾರಿಗಳು ಕೇಳಿದರೆ ಮಾಹಿತಿ ಕೊಡುವುದಿಲ್ಲ. ಆ ವಿಚಾರವನ್ನೇ ಪ್ರಸ್ತಾಪ ಮಾಡುವುದಿಲ್ಲ. ಒಳ್ಳೆಯ scheme ಗಳಿವೆ, ಆ scheme ತಂದಿರುವ ಬಗ್ಗೆ ನಮ್ಮ ತಕರಾರು ಇಲ್ಲ. ಆದರೆ, ಕಿ.ಮೀ. ಒಂದಕ್ಕೆ 30 ರಿಂದ 40 ರೂಪಾಯಿ expenditure ಬೀಳುತ್ತದೆ ಎಂದು ಅಧಿಕಾರಿಗಳು ಮಾರ್ಮಿಕವಾಗಿ ಹೇಳುತ್ತಾರೆ. ನಾನು ಈ ಸದನದೊಳಗೆ public ಆಗಿ challenge ಮಾಡುತ್ತೇನೆ. ನನಗೆ ಕಿ.ಮೀ. ಒಂದಕ್ಕೆ 20 ರೂ.ನಂತೆ ಕೊಡಲಿ, ಆ ಸಂಸ್ಥೆ ಏನೇನು ಸವಲತ್ತು ಕೊಟ್ಟಿದೆ ಆ ಎಲ್ಲಾ ಸವಲತ್ತುಗಳನ್ನು ಒದಗಿಸಿ ಈ ರಾಜ್ಯದಲ್ಲಿ ಅದನ್ನು challenge ಆಗಿ ನಡೆಸುವುದಕ್ಕೆ ನಾನು ತಯಾರಿದ್ದೇನೆ. ಅದನ್ನು ನನಗೆ ಕೊಡಲಿಕ್ಕೆ ಸರ್ಕಾರ ಮುಂದೆ ಬರುತ್ತದೆಯೇ ಎಂದು ನಾನು ಸರ್ಕಾರವನ್ನು ಕೇಳಬಯಸುತ್ತೇನೆ. ಇದರ ಬಗ್ಗೆ ನಾನು ಬಹಳಷ್ಟು ವಿಸ್ತಾರವಾಗಿ ಮಾತನಾಡಬೇಕಾಗಿತ್ತು. ಆದರೆ, ಅಧ್ಯಕ್ಷರು ಕಾಲು ಗಂಟೆ ಕೊಟ್ಟಿರುವ ಸಮಯದಲ್ಲಿ ಎಲ್ಲವನ್ನೂ ಮಾತನಾಡುವುದಕ್ಕಾಗುವುದಿಲ್ಲ. ಇದಕ್ಕೋಸ್ಕರವೇ ವಿಶೇಷ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು ಎಂದು ಹೇಳುತ್ತೇನೆ. ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಅದನ್ನು ಕೊಡುವುದಕ್ಕೆ ಆಗುತ್ತಿಲ್ಲ. ಹೋಗಲಿ, ಈ ಸಂಸ್ಥೆಗೆ ಸಂಬಂಧಿಸಿದಂತೆ Audit ಮಾಡಿದ್ದಾರೆಯೇ? ಮಾಡಿದ್ದರೆ, ಅದರ ಕಾಪಿ ಕೊಡಿ ಎಂದು ಕೇಳಿದರೆ ಕೊಡುವುದಿಲ್ಲ. ಆ ವಿಚಾರವನ್ನು ಕೇಳಿದರೆ ಅಧಿಕಾರಿಗಳು ಸ್ಥಳದಿಂದ ಎದ್ದು ಎಲ್ಲೆಲ್ಲೋ ಹೋಗುತ್ತಾರೆ. ಇಂಥ ಪರಿಸ್ಥಿತಿ ಅಲ್ಲಿ ಇದೆ. ಇದು ಒಳ್ಳೆಯ ಯೋಜನೆ ಆದರೆ ಇದನ್ನು ಸರ್ಕಾರದಿಂದ ನಡೆಸಬೇಕು. ಇವತ್ತು ಇದಕ್ಕೆ ಪಾರದರ್ಶಕತೆಯನ್ನು ಚೆಲ್ಲಬೇಕು. ರಾಜ್ಯದೆಲ್ಲವನ್ನೂ ಮಾಡುವುದಕ್ಕೆ ಆಗಲಿಲ್ಲವೆಂದರೆ ಜಿಲ್ಲಾವಾರು tender ಕರೆಯಿರಿ. ಆಗ ಜಿಲ್ಲೆಯಲ್ಲಿ 10–12 Ambulance ಬರಬಹುದು. ಅವರು competition ನಲ್ಲಿ rate ಹಾಕುತ್ತಾರೆ. ಆವಾಗ ನೀವು 517 ಅಲ್ಲ 1000 trip ಓಡಿಸಬಹುದು. ಯಾವುದೋ ಒಂದು ಕಂಪನಿಯನ್ನು ಬದುಕಿಸುವಂಥ ಪ್ರಯತ್ನವನ್ನು ಏಕೆ ಮಾಡುತ್ತೀರಿ? ನಾನು ಈ ಬಗ್ಗೆ ತಿಂದಿದ್ದಾರೆ, ದೋಷಿಗಳು, ಭಾಗಿಗಳು ಎಂದು ಯಾರ ಮೇಲೆಯೂ

ಆಪಾದನೆ ಮಾಡುವುದಿಲ್ಲ. ಆದರೆ, ಒಂದು ಒಳ್ಳೆಯ ಯೋಜನೆಯನ್ನು ತಂದಿದ್ದೀರಿ, ಅದನ್ನು ಕಾರ್ಯಗತ ಮಾಡತಕ್ಕಂಥ ಸಂದರ್ಭದಲ್ಲಿ ನಿಜವಾಗಿಯೂ ಪ್ರಾಮಾಣಿಕತೆ ಎನ್ನುವುದು ಎಲ್ಲೋ ಬಹುದೂರ ಹೋಗಿದೆ. ಪ್ರಾಮಾಣಿಕತೆಗೆ ಹತ್ತಿರವಾದಂಥ agreement ಆಗಿಲ್ಲ. ಇದೆಲ್ಲವನ್ನೂ ಸವಿಸ್ತಾರವಾಗಿ ಅಂದಾಜು ಸಮಿತಿಯಲ್ಲಿ ಮಾನ್ಯ ಉಪನಾಯಕರಾದ ಜಯಚಂದ್ರರವರು, ನಾವೆಲ್ಲ ಈ ವಿಚಾರವನ್ನು ಕೂಲಂಕುಷವಾಗಿ ಚರ್ಚೆ ಮಾಡಿದ್ದೇವೆ. ದಯಮಾಡಿ ಈ ಯೋಜನೆಯನ್ನು ಖಾಸಗಿ ಒಡೆತನದಿಂದ ತಪ್ಪಿಸಿ ಪಾರದರ್ಶಕತೆಯನ್ನು ಚೆಲ್ಲಿ ಇದರಲ್ಲಿ ಆಗಿರುವಂಥ ಅನ್ಯಾಯವನ್ನು ಸರಿದೂಗಿಸಿ ಇನ್ನೂ ಹೆಚ್ಚಿನ ಸೇವೆಯನ್ನು ಈ ರಾಜ್ಯದ ಜನತೆಗೆ ಒದಗಿಸುವಂಥ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಬೇಕೆಂದು ಹೇಳುತ್ತೇನೆ. ಇನ್ನು ಪಡಿತರ ಚೀಟಿ ಬಗ್ಗೆ ಹೇಳುವುದಾದರೆ, ಆಡಳಿತ ಪಕ್ಷದ ಕಡೆ ಕುಳಿತಿರುವ ಸದಸ್ಯರು ಸರ್ಕಾರವನ್ನು defend ಮಾಡಿಕೊಳ್ಳಬಹುದು. ನಾವೆಲ್ಲ ಇಲ್ಲಿ ಕುಳಿತಿದ್ದೇವೆ. ಆದರೆ, ಮಾನ್ಯ ಮುಖ್ಯಮಂತ್ರಿಗಳು ಸೇರಿದಂತೆ 224 ಜನ ಸದಸ್ಯರಿಗೂ ಬಹುಶಃ ಈ ಸಮಸ್ಯೆ ಇದೆಯೆಂದು ನಾನು ಭಾವಿಸಿದ್ದೇನೆ. ನಾನು ಬೆಳಗಾಂ ಅಧಿವೇಶನದಲ್ಲಿ clarification ಕೇಳಿದ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರನ್ನು, ನೆಮ್ಮದಿ ಕೇಂದ್ರದ ಮುಂದೆ ಬಂದವರೆಲ್ಲರಿಗೆ ಯಾವುದೇ ಮಾನದಂಡವಿಲ್ಲದೆ ನೀವು ಅಕ್ಕಿ ವಿತರಣೆ ಮಾಡಲಿಕ್ಕೆ ಸಾಧ್ಯವೇ? ಮಾಡುತ್ತೀರಾ? ಎಂದು ಕೇಳಿದಾಗ, ಪ್ರಶ್ನೆಯಿಲ್ಲ, ಯಾರು ನೆಮ್ಮದಿ ಕೇಂದ್ರದ ಮುಂದೆ 20 ರೂಪಾಯಿ ಛಾಪಾ ಕಾಗದ ತೆಗೆದುಕೊಂಡು ಬರುತ್ತಾರೋ, ಅವರಿಗೆಲ್ಲ ನಾವು ಅಕ್ಕಿ ವಿತರಣೆ ಮಾಡುತ್ತೇವೆನ್ನುವ ವಾಗ್ದಾನವನ್ನು ಮಾಡಿದರು. ಅದರಂತೆ ಇದೇ ಸದನದಿಂದ ಹೋದಂಥ ಒಂದು ಆದೇಶ, message ಏನಿತ್ತು ಅದರ ಪ್ರಕಾರ ಎಲ್ಲರೂ ನೆಮ್ಮದಿ ಕೇಂದ್ರಕ್ಕೆ ಬಂದು ಹೋದರು. ಎಲ್ಲರೂ ಛಾಪಾ ಕಾಗದ ತೆಗೆದುಕೊಂಡು ಹೋಗಿ ನನಗೂ ಏನಿಲ್ಲ ಎಂದು declare ಮಾಡಿ ಕೊಂಡರು. Declare ಆಯಿತು. ಎಲ್ಲರೂ 300 ರೂಪಾಯಿ ಖರ್ಚು ಮಾಡಿದ್ದಾರೋ, 400 ರೂಪಾಯಿ ಖರ್ಚು ಮಾಡಿದ್ದಾರೋ ನೆಮ್ಮದಿ ಕೇಂದ್ರದ ಮುಂದೆ ಹೋದರು. ಅದರಂತೆ Budget Speechನಲ್ಲಿ, ಎಲ್ಲರಿಗೂ ಮಾರ್ಚ್‌ನಿಂದ ಅಕ್ಕಿ ಕೊಡುತ್ತೇವೆಂದು ಹೇಳಿದಿರಿ. ಏಪ್ರಿಲ್ ತಿಂಗಳಿನಿಂದ ಪ್ರಾರಂಭ ಮಾಡಿ 3 ತಿಂಗಳು ಕೊಟ್ಟು ನಂತರ ನಿಲ್ಲಿಸಿದ್ದೀರಿ. ಈಗಾಗಲೇ

ಹಿಂದುಗಡೆಯಿಂದ enquiry ಮಾಡಿಸುತ್ತಿದ್ದೀರಿ. ಇದು ಏತಕ್ಕೆ ಬೇಕಾಗಿತ್ತು? ಆವತ್ತೇ ನಿರ್ದಿಷ್ಟವಾದ ಮಾನದಂಡವನ್ನು ಉಪಯೋಗಿಸಿ ನಿಜವಾದ ಬಡವರು ಯಾರ್‍ಯಾರು ಇದ್ದಾರೆ ನಿರ್ದಿಷ್ಟವಾದ ಜನ ನೆಮ್ಮದಿ ಕೇಂದ್ರದ ಮುಂದೆ ಬಂದಿದ್ದರೆ ಬಹಳಷ್ಟು card ಕಡಿಮೆಯಾಗುತ್ತಿರಲಿಲ್ಲವೇ? ಈ ಹೊರೆ ಕಡಿಮೆಯಾಗುತ್ತಿರಲಿಲ್ಲವೇ? ಆ ಹೊರೆ ಕಡಿಮೆಯಾಗುತ್ತಿರಲಿಲ್ಲವೇ? ಮುಂದೆ Parliament ಚುನಾವಣೆ ಇದ್ದಂಥ ಸಂದರ್ಭದಲ್ಲಿ ಎಲ್ಲರಿಗೂ ಅಕ್ಕಿಯನ್ನು ಕೊಟ್ಟು ಮತವನ್ನು ಪಡೆಯುವ ಕುತಂತ್ರ ರಾಜಕಾರಣ ಎಂದು ಹೇಳಿ ಇಡೀ ಕರ್ನಾಟಕ ರಾಜ್ಯದ ಜನತೆ ಇವತ್ತು ಮಾತನಾಡಿಕೊಳ್ಳುತ್ತಿದ್ದಾರೆ. ಎಲ್ಲರಿಗೂ ಅಕ್ಕಿ ಕೊಡುವುದನ್ನು ನಿಲ್ಲಿಸಿದಿರಿ. ನೆಮ್ಮದಿ ಕೇಂದ್ರದ ಮುಂದೆ ಬಂದ ಪ್ರತಿಯೊಬ್ಬರಿಗೆ ಇವತ್ತು ಅಕ್ಕಿ ಸಿಗುತ್ತಿಲ್ಲ. ಆರ್ಥಿಕ ಸಂಕಷ್ಟವಿರುವುದು ನನಗೂ ಗೊತ್ತಿದೆ. ಇವತ್ತು ಒಂದು ಕೆ.ಜಿ. ಅಕ್ಕಿಗೆ 19 ರೂಪಾಯಿ ಇದೆ ಎಂಬುದು ನನಗೂ ಗೊತ್ತಿದೆ. 3 ರೂಪಾಯಿಗಳಿಗೂ ಅಲ್ಲ, ನೀವು 2 ರೂ. 71 ಪೈಸೆಗೆ ಕೊಡಬೇಕು. ನ್ಯಾಯ ಬೆಲೆ ಅಂಗಡಿ ಮಾಲೀಕನಿಗೆ 24, 29 ಪೈಸೆ ಕಮಿಷನ್ ಹೋಗುತ್ತದೆ. ನಮಗೆ ಸರ್ಕಾರದ ಕಷ್ಟವೂ ಗೊತ್ತಿದೆ, ಇಲ್ಲವೆಂದಲ್ಲ, ಆವತ್ತು ನೀವು ಸಭಾನಾಯಕರಾಗಿ, ಈ ರಾಜ್ಯದ ಮುಖ್ಯಮಂತ್ರಿಯವರಾಗಿ ರಾಜ್ಯದ ರೈತರಿಗೆ, ಜನರಿಗೆ ಸಂದೇಶವನ್ನು ಕೊಡುವ ಸಂದರ್ಭದಲ್ಲಿ ನಿಜವಾಗಿಯೂ ಆಲೋಚನೆಯನ್ನು ಮಾಡಬೇಕಾಗಿತ್ತು. ಆದರೆ, ನೀವು ಆ ಆಲೋಚನೆಯನ್ನು ಮಾಡಲಿಲ್ಲ. ಆತುರದಲ್ಲಿ ಮತದಾರರನ್ನು ಒಲಿಸಿಕೊಳ್ಳುವ ಏಕಮಾತ್ರ ಉದ್ದೇಶದಿಂದ ಅಂದು ತಾವು ಆ ಸಂದೇಶವನ್ನು ರಾಜ್ಯದ ಜನತೆಗೆ ಕೊಟ್ಟಿದ್ದೀರಿ. ಅದಕ್ಕೋಸ್ಕರ ನಿಮಗೆ 5–8 ಸೀಟ್ ಹೆಚ್ಚಿಗೆ ಬಂದವು. 2 ಸಾವಿರ, 3 ಸಾವಿರ, 5 ಸಾವಿರ ಅಂತರದಲ್ಲಿ ಗೆದ್ದಿರುವ ಸ್ಥಾನಗಳೆಲ್ಲ ಆ ಒಂದು ಗಿಮಿಕ್ಸ್‌ನಿಂದಲೇ ಅಂದಿನ ತ್ವರಿತವಾದ ಹೇಳಿಕೆಯಿಂದ ಬಂದ ಸ್ಥಾನಗಳು. Election ದಿನಾಂಕ ನಿಗದಿಯಾದ ಮೇಲೆ ಚುನಾವಣೆ ನೀತಿ ಸಂಹಿತೆ ಉಲ್ಲಂಘನೆ ಮಾಡಿ ಏಪ್ರಿಲ್ ತಿಂಗಳಿನಿಂದ ನೀವು ಅಕ್ಕಿಯನ್ನು ಹಂಚಿದಿರಿ. ಆ ಉದ್ದೇಶಕ್ಕೋಸ್ಕರ ಆವತ್ತು ಜನ ಮತ ಹಾಕಿದರು. ನೆಮ್ಮದಿ ಕೇಂದ್ರದ ಮುಂದೆ ಹೋದವರಿಗೆಲ್ಲ ಅಂದು ಅಕ್ಕಿ ಸಿಕ್ಕಿದೆ. ನಾವೆಲ್ಲ ಮತದಾನ ಇವರಿಗೆ ಮಾಡಬೇಕೆನ್ನುವ ದೃಷ್ಟಿಯಿಂದ ಆವತ್ತು ನಿಮಗೆ ಮತ ಹಾಕಿದರು. ಇದನ್ನು ನೀವು ಅರ್ಥಮಾಡಿಕೊಳ್ಳಬೇಕು. ಇಂಥ ಪರಿಸ್ಥಿತಿಯಲ್ಲಿ, ಸಂದಿಗ್ಧತೆಯಲ್ಲಿ ನಾವು ಗ್ರಾಮಾಂತರ ಪ್ರದೇಶಗಳಿಗೆ ಹೋಗುವ ಹಾಗಿಲ್ಲ.

ನಮಗೆ ಕೊಡುವ ಅಕ್ಕಿಯನ್ನು ನಿಲ್ಲಿಸಿದ್ದಾರೆಂದು ಹೇಳುತ್ತಾರೆ. ಮತ್ತೊಬ್ಬರು ಶಾಸಕರೇ ನಿಲ್ಲಿಸಿದ್ದಾರೆಂದು ಹೇಳುತ್ತಾರೆ. ಗ್ರಾಮಾಂತರ ಪ್ರದೇಶದ ಜನರು ಪ್ರತಿನಿತ್ಯ ಅಕ್ಕಿ ಬೇಕು ಎಂದು ಬರುವುದನ್ನು ನೋಡಿದರೆ ಅಲ್ಲಿ ನಾವು ಹೇಗೆ ಶಾಸಕರಾಗಿ ಕೆಲಸ ನಿಭಾಯಿಸಬೇಕೆನ್ನುವುದನ್ನು ತಾವು ಆಲೋಚಿಸಬೇಕು. ಸರ್ಕಾರ, ಮಾನ್ಯ ಮುಖ್ಯಮಂತ್ರಿಯವರು ಇದನ್ನು ಸಮರೋಪಾದಿಯಲ್ಲಿ ತೆಗೆದು ಕೊಂಡು ಜನರ ಆಶೋತ್ತರಗಳನ್ನು ಈಡೇರಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಅದರ ಜೊತೆಗೆ, ನಿನ್ನೆ ಚರ್ಚೆ ನಡೆಯುವ ಸಂದರ್ಭದಲ್ಲಿ ವ್ಯವಹಾರಿಕವಾಗಿ ತಪ್ಪು ಕಲ್ಪನೆಯಿಂದ ಸ್ವಲ್ಪ ಕಸಿವಿಸಿಯಾಯಿತು. ರೇವಣ್ಣನವರು ಸಾರಿಗೆ ಇಲಾಖೆಗೆ ಸಂಬಂಧಿಸಿದಂತೆ ಒಂದು ವಿಚಾರ ಪ್ರಸ್ತಾಪಿಸಿದರು. ಕೇಂದ್ರ ಸರ್ಕಾರ ತಂದಿರುವ ಮಹತ್ವಪೂರ್ಣವಾದ ಯೋಜನೆಯನ್ನು ಜಾರಿ ಮಾಡುವ ಸಂದರ್ಭದಲ್ಲಿ ವಿಳಂಬವಾಗಿದೆ. ಆ ವಿಳಂಬವಾಗಿರುವ ಸಂದರ್ಭದಲ್ಲಿ ಕಡತವನ್ನು ಇನ್ನೂ ಸರ್ಕಾರದ ಮಟ್ಟದಲ್ಲಿಯೇ ಇಟ್ಟುಕೊಂಡು ಬಹಳ ಯೋಚನೆ ಮಾಡುತ್ತಿದ್ದಾರೆ, ಅದು ಬೀದಿಗೆ ಬರಬೇಕು. ಅದರ ಜೊತೆಯಲ್ಲಿ ಹಿಂದೆ ಯಾರೇ ಟೆಂಡರ್ ಕರೆದಿರಲಿ, ಯಾರು ಏನೇ ಮಾಡಿರಲಿ ಅದು ಪ್ರಶ್ನೆ ಅಲ್ಲ. ಆ ಟೆಂಡರ್ ಕರೆದ ಮೇಲೆ ಆ ದರವನ್ನು ನಮೂದಿಸಿದ ಮೇಲೆ ಅದರಲ್ಲಿ ಸರ್ಕಾರ ಭಾಗಿಯಾಗಿದೆ ಎಂದು ನಾವು ಹೇಳುತ್ತಿಲ್ಲ, ಈ ಸರ್ಕಾರ ನಿಧಾನ ಗತಿಯಿಂದ ನಿರ್ಧಾರ ತೆಗೆದುಕೊಂಡಿದೆ ಎನ್ನುವುದು ಬಿಟ್ಟರೆ, ಪ್ರಯತ್ನ ಮಾಡಿಲ್ಲವೆನ್ನುವುದು ಬಿಟ್ಟರೆ ಸಾರಿಗೆ ಸಚಿವರಾದ ಅಶೋಕ್‌ರವರು ಇದರಲ್ಲಿ ಭಾಗಿಗಳಲ್ಲ. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ರೇವಣ್ಣನವರು ಮಾತನಾಡುವ ಸಂದರ್ಭದಲ್ಲಿ, ಸರ್ಕಾರ ಭಾಗಿಯಲ್ಲ, ಅಶೋಕ್‌ರವರೆ ನಿಮ್ಮ ಮೇಲೆ ದೂಷಣೆ ಮಾಡುತ್ತಿಲ್ಲ, ಆದರೆ ಮುಂದೊಂದು ದಿವಸ ಪಶ್ಚಿಮ ಬಂಗಾಳದಲ್ಲಿ ಏನು ರೇಟ್ ಹಾಕಿದ್ದಾರೆ, ಎಲ್ಲ ಕಡೆ ಈ ರೇಟ್ ಹಾಕಿದ್ದಾರೆ, ಆ ರೇಟ್‌ಗಳನ್ನು ಹಾಕಿದ್ದಂಥ ವ್ಯವಸ್ಥೆಯೊಳಗಡೆ ಇದೇ ರೀತಿ ನಿಮ್ಮ ಸಾರಿಗೆ ಅಧಿಕಾರಿಗಳಾದ ಭಾಸ್ಕರ್‌ರವರು ಒಂದು Press Statement ಕೊಟ್ಟು ನಾವು ಬಹಳ ಶೀಘ್ರವಾಗಿ ಈ ಒಂದು ಯೋಜನೆಯನ್ನು ಕಾರ್ಯಗತಗೊಳಿಸುತ್ತೇವೆಂದು ಹೇಳಿದರು, ಅದು ಎಲ್ಲಿ ಜಾರಿಗೆ ಬರುತ್ತದೆಯೋ, ಅದು ಜಾರಿಗೆ ಬಂದಾಗ ಪಶ್ಚಿಮ ಬಂಗಾಳದಲ್ಲಿ 441 ರೂಪಾಯಿಗಳಿರುವುದು ಇಲ್ಲಿ 1200 ರೂಪಾಯಿಗಳಾದರೆ, ಇಂಥ ರಾಜ್ಯದಲ್ಲಿ ಇಷ್ಟಿಷ್ಟು ಹಣವನ್ನು ಕಡಿಮೆ

ರೇಟ್ quote ಮಾಡಿದ್ದು, ನಮ್ಮ ಕರ್ನಾಟಕದಲ್ಲೇಕೆ ಈ ಮಟ್ಟದ ಹಣವನ್ನು ಕೊಡಬೇಕೆನ್ನುವ ದೃಷ್ಟಿಯಿಂದ ಮುಂದೆ ಈ ರಾಜ್ಯದ ಜನತೆಗೆ ಆಗತಕ್ಕಂಥ ಅನ್ಯಾಯವನ್ನು ತಡೆಗಟ್ಟತಕ್ಕಂಥ ದೃಷ್ಟಿಯಿಂದ 400 ಕೋಟಿ ರೂಪಾಯಿಗಳವರೆಗೆ ಈ ರಾಜ್ಯದ ಜನರಿಗೆ ಅನ್ಯಾಯವಾಗಬಹುದು, ಅದಕ್ಕೋಸ್ಕರ ಈ ಯೋಜನೆಯನ್ನು ಕಾರ್ಯಗತ ಮಾಡುವಾಗ ನೀವು ಯೋಚನೆ ಮಾಡಿ, ಇದರಲ್ಲಿ ಬಹಳ ಪೈಪೋಟಿ ಇದೆ, ಮಧ್ಯವರ್ತಿಗಳ ಕಾಟವಿದೆ, deal ಮಾಡುವವರು ಜಾಸ್ತಿ ಇದ್ದಾರೆ, ಇದರಲ್ಲಿ ಹಣವನ್ನು ಹೊಡೆಯುವ ಉದ್ದೇಶದಿಂದಲೇ ಎರಡು ಕಂಪನಿಗಳ ಮಧ್ಯದಲ್ಲಿ 2005 ರಿಂದ ಹೋರಾಟ ನಡೆಯುತ್ತಿದೆ, ಇದನ್ನು ನಿಜವಾಗಿಯೂ ಯಾವುದೇ ರೀತಿಯಾಗಿ ಮುಂದೆ ಈ ಕರ್ನಾಟಕ ರಾಜ್ಯದ ಜನರಿಗೆ ಅನ್ಯಾಯವಾಗಬಾರದು ಎನ್ನುವ ದೃಷ್ಟಿಯಿಂದ ಅವರು ಹೇಳಿದರು. ಇದೊಂದು ಒಳ್ಳೆಯ ವಿಚಾರ. ಇದನ್ನು ತಪ್ಪಾಗಿ ಗ್ರಹಿಸಲಾಗಿದೆ. ಅದಾಗುವುದು ಬೇಡ. ಈ ರಾಜ್ಯದ ಜನರಿಗೆ ಮುಂದೆ ಏನೂ ತೊಂದರೆ ಆಗುವುದು ಬೇಡ. ಸಾರಿಗೆ ಸಚಿವರು ಉತ್ತರ ಕೊಡುವ ಸಂದರ್ಭದಲ್ಲಿ ಹೇಳಿದರು. ಅವರು ನಿನ್ನೆ ಇಲ್ಲಿ ಉತ್ತರ ಕೊಟ್ಟ ಪ್ರತಿ ನನ್ನಲ್ಲಿದೆ. ಅದರಲ್ಲಿ ಟೆಂಡರ್‌ನಲ್ಲಿ ಯಾವಯಾವ ದರವನ್ನು ನಮೂದಿಸಿದ್ದಾರೆ, ಪಶ್ಚಿಮ ಬಂಗಾಳದಲ್ಲಿ ಯಾವ ರೇಟ್ ನಮೂದಿಸಿದ್ದಾರೆ, ಕರ್ನಾಟಕದಲ್ಲಿ ಯಾವ ರೇಟ್ ಹಾಕಿದ್ದಾರೆ, ಸಿಕ್ಕಿಂನಲ್ಲಿ ಯಾವ ರೇಟ್ ಹಾಕಿದ್ದಾರೆ, ಉತ್ತರ ಪ್ರದೇಶದಲ್ಲಿ ಯಾವ ರೇಟ್ ಹಾಕಿದ್ದಾರೆ? ಎಂದು ಹೇಳಿದರು. ಅವು ನಡೆಯುತ್ತಿವೆಯೋ, ಕಾರ್ಯಗತವಾಗಿವೆಯೋ, ಕೋರ್ಟ್‌ನಲ್ಲಿ ಸ್ಟೇ ಆಗಿವೆಯೋ ನನಗೆ ಗೊತ್ತಿಲ್ಲ. ಆ ರೇಟ್‌ಗಳನ್ನು ಇಲ್ಲಿ ನಮೂದಿಸಿದ್ದಾರೆ. ಅದರಲ್ಲಿ ರೇವಣ್ಣನವರು ಪ್ರಸ್ತಾಪ ಮಾಡಿದ 1200 ರೂಪಾಯಿ, 441 ರೂಪಾಯಿ ಆ ಎಲ್ಲಾ ಅಂಕಿ ಸಂಖ್ಯೆಗಳನ್ನು ಮಾನ್ಯ ಸಾರಿಗೆ ಸಚಿವರು ಹೇಳಿದ್ದಾರೆ. ಅಷ್ಟರಲ್ಲಿ ಅವರಿಗೆ ಉದ್ವೇಗ ಜಾಸ್ತಿಯಾಗಿ ಅವರು ಈ ಉತ್ತರವನ್ನು ಸದನಕ್ಕೆ ಕೊಡಲಿಲ್ಲ. ಕೊಡಲಿಕ್ಕಾಗಲಿಲ್ಲ. ರೇವಣ್ಣನವರು ಇಷ್ಟೇ ಪ್ರಸ್ತಾಪಿಸಿದ್ದು, ಇಲ್ಲಿ ಈ ರೀತಿ ರೇಟ್ ಅನ್ನು ಹೆಚ್ಚಾಗಿ ಹಾಕಿದ್ದು, ಇದೇನಾದರೂ accept ಆಗಿಬಿಟ್ಟರೆ ಸಾರಿಗೆ ಅಧಿಕಾರಿಗಳು ಹೇಳಿದ ರೀತಿಯಲ್ಲಿ ಇದನ್ನು ಬಹಳ ಶೀಘ್ರವಾಗಿ ಜಾರಿಗೆ ತರುತ್ತೇವೆಂದಾಗ ಎಲ್ಲಿಯಾದರೂ ಅದನ್ನು ಜಾರಿಗೆ ತಂದು ಈ ರಾಜ್ಯದ ಜನತೆಯನ್ನು ಸಂಕಷ್ಟದಲ್ಲಿ ಸಿಲುಕಿಸುತ್ತಾರಲ್ಲ ಎನ್ನುವ ಭಾವನೆಯಿಂದ ಈ ವಿಚಾರ ಹೇಳಿದರೇ ಹೊರತು

ರೇವಣ್ಣನವರು ಹೇಳಿದ್ದನ್ನು ಸಮರ್ಥನೆ ಮಾಡಿಕೊ ಳ್ಳಬೇಕು ಎನ್ನುವ ದೃಷ್ಟಿಯಿಂದ ನಾನು ಹೇಳುತ್ತಿಲ್ಲ. ಇದು ವಾಸ್ತವಾಂಶ ಕೂಡ. ದಯಮಾಡಿ, ಈ ಯೋಜನೆಯನ್ನು ಕಾರ್ಯಗತ ಮಾಡುವ ಸಂದರ್ಭದಲ್ಲಿ ರಾಜ್ಯದ ಜನತೆಗೆ ಯಾವುದೇ ಭಾರ ಬೀಳದ ರೀತಿಯಲ್ಲಿ, ಯಾವುದೇ ರೀತಿಯ ಅನ್ಯಾಯವಾಗದ ರೀತಿಯಲ್ಲಿ ಅದನ್ನು ಜಾರಿಗೆ ತರಬೇಕಾಗುತ್ತದೆ. ಇದನ್ನು ಬಹಳಷ್ಟು ದಿವಸ ತಡಮಾಡಬೇಡಿ. ಹಾಗಾದರೆ, ಇದಕ್ಕೆ ಬಹಳ ರೀತಿಯಲ್ಲಿ ವ್ಯಾಖ್ಯಾನಗಳು ಪ್ರಾರಂಭವಾಗುತ್ತವೆ. ದಯಮಾಡಿ, ಇದನ್ನು ಸರಿದೂಗಿಸುವ ವ್ಯವಸ್ಥೆಯನ್ನು ಮಾಡಿ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯ ಸುತ್ತೇನೆ. ಕಂದಾಯ ಇಲಾಖೆಯ ಬಗ್ಗೆ ಹೇಳುವುದಾದರೆ ಕಂದಾಯ ಇಲಾಖೆಯಲ್ಲಿ ನೆಮ್ಮದಿ ಕೇಂದ್ರಗಳು ಪ್ರಾರಂಭವಾಗಿವೆ. ಮಾನ್ಯ ಸಭಾನಾ ಯಕರು reply ಕೊಟ್ಟಿದ್ದಾರೆ. ಆದರೆ, ಇವತ್ತು ಯಾವ ಶಾಸಕರಾದರೂ ನೆಮ್ಮದಿಯಿಂದ ಇದ್ದೇವೆಂದು ಹೇಳಲಿ. ಆ ನೆಮ್ಮದಿ ಕೇಂದ್ರ ನೆಮ್ಮದಿ ಕೆಡಿಸಿದೆ. ಅಲ್ಲಿ ಕರೆಂಟ್ ಇರುವುದಿಲ್ಲ. ಅಲ್ಲಿ ಜನರೇಟರ್ ಇಲ್ಲ. ಸರಿಯಾದ ರೀತಿಯ ವ್ಯವಸ್ಥೆ ಇಲ್ಲ. ಇಲ್ಲಿ ಒಂದು ತರಹ fraud ನಡೆದಿದೆ. ಈ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಯವರು, ಸರ್ಕಾರ ಯೋಚನೆ ಮಾಡಬೇಕು. ಯಾರೋ ಒಬ್ಬರ ಹಿತದೃಷ್ಟಿಯಿಂದ ನೆಮ್ಮದಿ ಕೇಂದ್ರಕ್ಕೆ contract ಕೊಡುವ ಸಂದರ್ಭದಲ್ಲಿ . . . .

ಶ್ರೀ ವೆಂಕಟರಾವ್ ನಾಡಗೌಡ : ನೆಮ್ಮದಿ ಕೇಂದ್ರಕ್ಕೆ ಹೋಗಿ ಅರ್ಜಿ ಕೊಡಬೇಕು. ಅರ್ಜಿ ಕೊಟ್ಟಮೇಲೆ ಆ ಅರ್ಜಿ ತಹಸೀಲ್ದಾರ್ ಆಫೀಸ್‌ಗೆ ಮತ್ತೆ ಬರುತ್ತದೆ. ಅವರು ಇದನ್ನು scrutiny ಮಾಡಿ ಕೊಟ್ಟ ಮೇಲೆ ಅಲ್ಲಿ ಇದು ಶುರುವಾಗಬೇಕು. Income Certificate ಪಡೆಯಬೇಕೆಂದರೆ 25 ದಿನಗಳ ವರೆಗೆ ಸಿಗುವುದಿಲ್ಲ. 1 ತಿಂಗಳಾದರೂ ಸಿಗುತ್ತಿಲ್ಲ. ಅಲ್ಲಿ ವಿದ್ಯಾರ್ಥಿಗಳು strike ಮಾಡುತ್ತಿದ್ದಾರೆ. ನಾನು ಡಿ.ಸಿ.ಯವರಿಗೆ request ಮಾಡಿದ್ದೇನೆ. ನೆಮ್ಮದಿ ಕೇಂದ್ರಗಳ ಬಗ್ಗೆ review ಮಾಡಬೇಕು. ಇದುವರೆಗೂ ಎಲ್ಲಿಯೂ ನೆಮ್ಮದಿ ಕೇಂದ್ರಗಳು ಸರಿಯಾಗಿ ನಡೆಯುತ್ತಿಲ್ಲ. 1–2 ವರ್ಷಗಳಾದರೂ mutation ಆಗುತ್ತಿಲ್ಲ, ದಾಖಲೆಗಳು ಸಿಗುತ್ತಿಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ನೆಮ್ಮದಿ ಕೇಂದ್ರಕ್ಕೆ ಹೋಗಿರುತ್ತೀರಿ, ಅರ್ಜಿ ಹಾಕುವುದಕ್ಕೆ ನಾಡಿದ್ದು ಲಾಸ್ಟ್‌ಡೇಟ್ ಇರುತ್ತದೆ. ಆ ಸಮಯದಲ್ಲಿ ನೆಮ್ಮದಿ ಕೇಂದ್ರದಲ್ಲಿ ಕಂಪ್ಯೂಟರ್ಸ್ ಕೆಟ್ಟುಹೋಗಿರುತ್ತದೆ. ಹಾಗಾದರೆ, ಅವರು

application ಹಾಕಬಾರದೆ? ಕೆಲಸಕ್ಕೆ ಹೋಗಬಾರದೆ? Medicalಗೆ ಹೋಗಬಾರದೆ? ಇದು ಬಹಳ ಸಮಸ್ಯೆಯಾಗಿ ಎದ್ದು ಕಾಣುತ್ತಿದೆ. ಗ್ರಾಮೀಣ ಪ್ರದೇಶದ ಬದುಕನ್ನು ನಿಮ್ಮ ಮುಂದೆ ನಾವು ಹಂಚಿಕೊಳ್ಳುತ್ತಿದ್ದೇವೆ. ನಿಮ್ಮನ್ನು ಟೀಕೆ ಮಾಡಬೇಕು, ನಿಮ್ಮನ್ನು ಯಾವುದೇ ರೀತಿಯಲ್ಲಿ ಸಿಲುಕಿಸಬೇಕೆನ್ನುವ ಭಾವನೆಯಿಂದ ಈ ಮಾತನ್ನು ಹೇಳುತ್ತಿಲ್ಲ.

ಸರ್ಕಾರಕ್ಕೆ ನಾವು ಗ್ರಾಮೀಣ ಪ್ರದೇಶದ ಜನತೆ ಬದುಕಿನಲ್ಲಿ ಅನುಭವಿಸತಕ್ಕಂಥ ಕಷ್ಟ ಸಂಕಷ್ಟಗಳನ್ನು ನಿಮಗೆ ತಿಳಿಸುತ್ತಿದ್ದೇವೆ. ಬಹುಶಃ ಇದನ್ನು ತಾವು ವಿರೋಧ ಪಕ್ಷದವರ ಸಲಹೆ ಎಂದು ತಿರಸ್ಕರಿಸಿದರೆ ಅದು ನಿಮಗೆ ಬಿಟ್ಟಿದ್ದು. ಯಾವ ರೀತಿ ಜನರ ಅಭಿಪ್ರಾಯ ಪಡೆಯುತ್ತೀರೋ ಅದು ನಿಮಗೆ ಬಿಟ್ಟಿದ್ದು. ನೆಮ್ಮದಿ ಕೇಂದ್ರದಿಂದ ನೆಮ್ಮದಿ ಹಾಳಾಗಿದೆ. ನನಗೆ ಗೊತ್ತಿರುವಂತೆ ಯಾರೋ ಕೆಲವು ಅಧಿಕಾರಿಗಳು ನೆಮ್ಮದಿ ಕೇಂದ್ರ ಇದು ಒಳ್ಳೆಯ ಸ್ಕೀಂ ಎಂದು ತಮಗೆ ಹೇಳಿ ಇದನ್ನು ಜಾರಿಗೆ ತಂದಿದ್ದಾರೆ. ಇದನ್ನು ಯಾರ ಕಾಲದಲ್ಲಿ ತಂದಿದ್ದಾರೆಂಬುದನ್ನು ನಾನು ಮರೆತಿದ್ದೇನೆ. ಇದು ತಪ್ಪು. ಮೊದಲೇನು ಕೈಯಲ್ಲಿ ಬರೆದು ಕೊಡುತ್ತಿದ್ದರೋ ಅದು ಚೆನ್ನಾಗಿತ್ತು. ಅವರು ಅಚ್ಚುಕಟ್ಟಾಗಿ ಬರೆದು ಕಳುಹಿಸುತ್ತಿದ್ದರು ಒಂದು ದಿವಸದೊಳಗೆ ಇನ್‌ಕಂ ಸರ್ಟಿಫಿಕೇಟ್ ಸಿಗುತ್ತಿತ್ತು. ಈಗ ಅರ್ಜಿ ತೆಗೆದುಕೊಂಡು ನೆಮ್ಮದಿ ಕೇಂದ್ರಕ್ಕೆ ಹೋಗಬೇಕು, ಅಲ್ಲಿಗೆ ಮೂರು ದಿವಸಗಳಿಂದ ಹೋದರು ಅಲ್ಲಿ ಕರೆಂಟ್ ಇಲ್ಲ ಹೀಗಾಗಿ ಕೆಟ್ಟು ಹೋಗಿದೆ ಎಂದು ವಾಪಸ್ ಕಳುಹಿಸುತ್ತಾರೆ. ಇದಾದ ಮೇಲೆ ಪುನಃ ಅವರ ಕೈಯಲ್ಲಿ ಅರ್ಜಿ ಕೊಡುತ್ತಾರೆ, ಅರ್ಜಿ ತೆಗೆದುಕೊಂಡು ಮತ್ತೆ ವಿಲೇಜ್ ಅಕೌಂಟೆಂಟ್‌ರವರ ಹತ್ತಿರ ಹೋಗಬೇಕು, ವಿಲೇಜ್ ಅಕೌಂಟೆಂಟ್ ಮತ್ತು ರೆವಿನ್ಯೂ ಇನ್ಸ್‌ಪೆಕ್ಟರ್ ಹತ್ತಿರ ಹೋಗಿ ಅಲ್ಲಿಂದ ನಾಡ ಕಛೇರಿಗೆ ಹೋಗಿ ನಂತರ ತಹಸೀಲ್ದಾರ್ ಹತ್ತಿರ ಬರಬೇಕು. ತಹಸೀಲ್ದಾರ್ ಹತ್ತಿರಕ್ಕೆ ಬಂದ ನಂತರ ಅವರು ಇಂಪ್ರೆಶನ್ ಕೊಡಬೇಕು. ಅವರು ಕೊಟ್ಟ ಮೇಲೆ ಅದು ಆರ್ಡರ್ ಆಗಬೇಕು. ಇದು ಹದಿನೈದು ದಿವಸಕ್ಕೆ ಕಡಿಮೆಯಾ ಗುವುದಿಲ್ಲ ಸ್ವಾಮಿ. ಇದು ನೆಮ್ಮದಿ ಕೇಂದ್ರದ ಪದ್ಧತಿ. ಇದರಲ್ಲಿ ಏನು ಗಿಮಿಕ್ಸ್ ಇದೆ ಎನ್ನುವುದಕ್ಕೆ ಇವತ್ತಿನ ದಿವಸ ಯಾರೋ ತಾತ್ಕಾಲಿಕವಾಗಿ ಸರ್ವೆ ಸ್ಕೇಚ್ ಮಾಡುತ್ತಿದ್ದಾರೆ.

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್ : ನೆಮ್ಮದಿ ಕೇಂದ್ರದ ವಿಚಾರ ಏನು ಹೇಳುತ್ತಿದ್ದಾರೆ, ನಿಜವಾಗಿ ಶಾಸಕರ ನೆಮ್ಮದಿ ಕೆಟ್ಟಿದೆ, ಜನರ ನೆಮ್ಮದಿ ಕೆಟ್ಟಿದೆ, ಆದ್ದರಿಂದ ಇದರ ಬಗ್ಗೆ ತ್ವರಿತವಾಗಿ ಏನಾದರೊಂದು ಕ್ರಮ ತೆಗೆದುಕೊಂಡು ಆ ನೆಮ್ಮದಿ ಕೇಂದ್ರಗಳನ್ನು ಸರಿಪಡಿಸುವ ಕೆಲಸ ಆಗಬೇಕಾಗುತ್ತದೆ.

ಶ್ರೀ ಕೆ. ಎಂ. ಶಿವಲಿಂಗೇಗೌಡ : ನಾವು ಬೇರೆ ಯಾವ ಉದ್ದೇಶ ದಿಂದಲೂ ಟೀಕೆ ಮಾಡುವುದಕ್ಕಾಗಿ ಹೇಳುತ್ತಿಲ್ಲ. ನಮ್ಮ ಅನುಭವದ ಮಾತು ಹೇಳುತ್ತೇವೆ. ಅದನ್ನು ಸರ್ಕಾರ ತಿಳಿದುಕೊಂಡರೆ ಅವರಿಗೆ ಒಳ್ಳೆಯದಾಗುತ್ತದೆ ಅಷ್ಟೆ.

ಶ್ರೀ ಪಿ.ಎಂ.ಅಶೋಕ್ : ಸಾರ್ ನಾನು ಮೊನ್ನೆ ಇದರ ಬಗ್ಗೆ ಪ್ರಶ್ನೆ ಕೇಳಿದ್ದೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ಒಂದು ಹೇಳಿಕೆ ಕೊಟ್ಟಿದ್ದಾರೆ. ಆದರೆ, ನಮ್ಮ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಒಂದು ಜನರೇಟರ್ ಕೊಟ್ಟಿದ್ದೇವೆ, ಬ್ಯಾಟರಿ ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದಾರೆ. ಅಧಿಕಾರಿಗಳಿಂದ ಇದರ ಬಗ್ಗೆ ತನಿಖೆ ಮಾಡಿದರೆ ತಮಗೆ ಗೊತ್ತಾಗುತ್ತದೆ, ಯಾವ ಬ್ಯಾಟರಿಯೂ ಇಲ್ಲ, ಯಾವ ಜನರೇಟರ್ ಇಲ್ಲ, ಜನರ ನೆಮ್ಮದಿ ಕೆಟ್ಟಿದೆ. ರಾಜಕೀಯ ಕಾರಣಕ್ಕೋಸ್ಕರ ನಾವು ಈ ಮಾತು ಹೇಳುತ್ತಿಲ್ಲ. ಶಾಸನ ಸಭೆಯಲ್ಲಿರುವಂಥ ಎಲ್ಲಾ ಶಾಸಕರ ನೆಮ್ಮದಿ ಕೆಟ್ಟು ಬಿಟ್ಟಿದೆ. ಆದ್ದರಿಂದ, ತಾವು ಅದನ್ನು ತಕ್ಷಣ ಮಾಡಿಫೈ ಮಾಡಬೇಕು. ಮೊನ್ನೆ ತಾವು ತಮ್ಮ ಉತ್ತರದಲ್ಲಿ ಇದನ್ನು ಕಂಟಿನ್ಯೂ ಮಾಡುತ್ತೇವೆಂದು ಹೇಳಿದ್ದೀರಿ. ಕಂಟಿನ್ಯೂ ಮಾಡಿ ನಾವು ಬೇಡ ಎಂದು ಹೇಳುವುದಿಲ್ಲ, ಇದರಿಂದ ಮುಂದೆ ಜನಗಳಿಗೆ ಒಳ್ಳೆಯದಾಗುತ್ತದೆ. ಆದರೆ ಈಗ ಸಧ್ಯಕ್ಕೆ ಇದನ್ನು ರದ್ದುಗೊಳಿಸಿ ಆರು ತಿಂಗಳು ಅಥವಾ ಒಂದು ವರ್ಷದವರೆಗೆ ಮುಂದಕ್ಕೆ ಹಾಕಿ, ಎಲ್ಲಾ ಸೌಲಭ್ಯಗಳನ್ನು ಕೊಟ್ಟ ನಂತರ ತಾವು ಇದನ್ನು ಕಂಟಿನ್ಯೂ ಮಾಡಿ ಅದಕ್ಕೆ ನಮ್ಮದೇನು ಅಭ್ಯಂತರವಿಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ಕೆ. ಎಂ. ಶಿವಲಿಂಗೇಗೌಡ : ನೆಮ್ಮದಿ ಕೇಂದ್ರದಿಂದ ಏನಾಗಿದೆ ಎಂದರೆ, ರೈತ ಎಲ್ಲರ ಹತ್ತಿರ ಪುನಃ ಸುತ್ತಲೇಬೇಕಾಗುತ್ತದೆ. ಅವನು ಎಲ್ಲರ ಹತ್ತಿರ ಬರೆಸಿಕೊಂಡು ಬರಲೇಬೇಕು. ಅದಕ್ಕೋಸ್ಕರ ಯಾರೋ ಒಬ್ಬ ಆ ನೆಮ್ಮದಿ ಕೇಂದ್ರ ತೆಗೆದುಕೊಂಡಂಥ ಗುತ್ತಿಗೆದಾರನನ್ನು ಉದ್ಧಾರ ಮಾಡಿ, ಬಡ ಬೋರೇಗೌಡನ ದುಡ್ಡು ಏಕೆ ಸ್ವಾಮಿ ಖರ್ಚು ಮಾಡಿಸುತ್ತೀರಾ? ಅವನ ಹತ್ತಿರ ಏಕೆ 10, 15 ರೂಪಾಯಿ ಖರ್ಚು ಮಾಡಿಸುತ್ತೀರಾ? ಇವತ್ತು ಇನ್‌ಕಂ ಸರ್ಟಿಫಿಕೇಟ್ ಬೇಕಾದರೆ 200 ರೂಪಾಯಿಗಿಂತ ಕಡಿಮೆಯಲ್ಲಿ ತರುವುದಕ್ಕೆ

ಆಗುವುದಿಲ್ಲ. ಮೊದಲು ಅದನ್ನು ರದ್ದುಗೊಳಿಸಿ. ಇದರಿಂದ ಏನು ಆಗುವುದಿಲ್ಲ. ಭಾರತ ದೇಶ ಮಾನವ ಸಂಪನ್ಮೂಲವಿರುವಂಥ ದೇಶ. ನಿರುದ್ಯೋಗಿ ಪದವೀಧರರು ಬೀದಿ ಬೀದಿ ಅಲೆಯುತ್ತಿದ್ದಾರೆ. ಅವರಿಗಾದರೂ ಆ ದುಡ್ಡನ್ನು ಕೊಡಿ. ಎಂಪ್ಲಾಯಿಮೆಂಟ್‌ನಿಂದ ನೇಮ್ ತೆಗೆದುಕೊಂಡು ಅವರಿಗಾದರೂ ದುಡ್ಡು ಕೊಡಿ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ನೆಮ್ಮದಿ ಕೇಂದ್ರದ ಮುಂದೆ ಇಡೀ ಒಂದು ದಿವಸ ಸರತಿ ಸಾಲಿನಲ್ಲಿ ನಿಲ್ಲಬೇಕಾಗುತ್ತದೆ. ಮಾರನೇ ದಿವಸ ಹೋಗಿ ಅಲ್ಲಿ ನಿಂತರೂ ಎಂಟ್ರಿ ಆಗುತ್ತದೆ ಎನ್ನುವ ಭರವಸೆ ಇಲ್ಲ. ಅಲ್ಲಿ ಗಣಕ ಯಂತ್ರಗಳಿಲ್ಲ, ಸಿಬ್ಬಂದಿ ಇಲ್ಲ.

ಶ್ರೀ ವೈ.ಎನ್.ರುದ್ರೇಶ್‌ಗೌಡ : ಈ ನೆಮ್ಮದಿ ಕೇಂದ್ರದ ಬಗ್ಗೆ ಗ್ರಾಮೀಣ ಭಾಗದಲ್ಲಿರುವ ಜನ ಬಹಳ ಆಕ್ಷೇಪಣೆ ಎತ್ತಿದ್ದಾರೆ. ಇದರ ಬಗ್ಗೆ ಏನಾದರೂ ರೆಮಿಡಿ ಫೈಂಡ್ ಔಟ್ ಮಾಡಬೇಕು. ಇದರಲ್ಲಿ ಬಾರಿ ಲೋಪದೋಷಗಳಿವೆ. ಪಹಣಿಯಲ್ಲಿ ಮಿಸ್ಟೇಕ್ ಇದೆ, ಅದಕ್ಕೆ ರೈತ ಹೊಣೆಗಾರಿಕೆಯಲ್ಲ, ಅದು ಅಧಿಕಾರಿಗಳು ಮಾಡತಕ್ಕಂಥ ಕರ್ತವ್ಯ, ಡಿಪಾರ್ಟ್‌ಮೆಂಟ್‌ನವರು ಮಾಡತಕ್ಕಂಥ ಕರ್ತವ್ಯ, ಸರ್ಕಾರದ ಕರ್ತವ್ಯ. ಆದುದರಿಂದ, ನಾನು ಏನು ಹೇಳುತ್ತೇನೆಂದರೆ, ಅತಿ ಶೀಘ್ರವಾಗಿ ನೆಮ್ಮದಿ ಕೇಂದ್ರವನ್ನು ಸರಿಪಡಿಸತಕ್ಕಂಥ ಕೆಲಸ ಆಗಬೇಕು. ಗ್ರಾಮೀಣ ಪ್ರದೇಶದ ರೈತರಿಗೆ ತೊಂದರೆ ಕೊಡುವುದನ್ನು ಸ್ವಲ್ಪ ಕಡಿಮೆ ಮಾಡಬೇಕು. ಮೊದಲೇ ಅವರು ತೊಂದರೆಯಲ್ಲಿದ್ದಾರೆ. ಇನ್ನೂ ತೊಂದರೆ ಕೊಟ್ಟು ಹಳ್ಳಿಗಾಡಿನ ಜನ ಎಲ್ಲಿಗೆ ಹೋಗಬೇಕು? ದಯವಿಟ್ಟು ಇದನ್ನು ಬೇಗ ಸರಿ ಮಾಡುವಂಥ ವ್ಯವಸ್ಥೆ ಆಗಬೇಕು.

ಶ್ರೀ ಕೆ. ಎಂ. ಶಿವಲಿಂಗೇಗೌಡ : ಈಗ ಸ್ಕೇಚ್ ಕಾಪಿಯ ಬಗ್ಗೆ ಹೇಳುವುದಾದರೆ, ಅಲ್ಲಿ ಗುತ್ತಿಗೆಯಾಧಾರದ ಮೇಲೆ ಟೆಂಪರಿವರಿಯಾಗಿ ಸ್ಕೇಚ್ ಕಾಪಿ ಮಾಡುತ್ತಿದ್ದಾರೆ, ಅವರನ್ನು ಸ್ವಲ್ಪ ಕಾಪಾಡಿ. ಅವರಿಗೆ 300 ರೂಪಾಯಿ ಕೊಡುತ್ತೀರಿ. ಅವರಿಗೆ ತಿಂಗಳಿಗೆ ಒಂದೋ ಎರಡೋ ಸಿಗುತ್ತವೆ. ಬೆಳಗಾಂನಲ್ಲಿ ನಡೆದ ಅಧಿವೇಶನದಲ್ಲಿ ನಾನು ಪ್ರಶ್ನೆ ಮಾಡಿದಾಗ ಮಾನ್ಯ ಕಂದಾಯ ಸಚಿವರು ಅವರಿಗೆ ಹೆಚ್ಚು ಹಣ ಕೊಡಿಸುತ್ತೇವೆಂದು ಹೇಳಿದ್ದರು. ಆದರೂ ಅವರಿಗೆ ಹೆಚ್ಚಿಗೆ ಸಿಗುತ್ತಿಲ್ಲ. ಈಗ ಯಾರೋ ಒಬ್ಬರು ಬುದ್ಧಿವಂತರು ಬಹುಶಃ ಐಎಎಸ್‌ನವರು ಇರಬಹುದು ಎಂದು ನನಗೆ ಕಾಣಿಸುತ್ತದೆ. ಒಂದು ಸರ್ವೇ ನಂಬರ್‌ನಲ್ಲಿ ಎಷ್ಟು ಖಾತೆಗಳಿವೆ ಅವು ಎಲ್ಲವನ್ನೂ ಸರ್ವೆ ಮಾಡಿ ಎಂದು ಹೇಳುತ್ತಾರಂತೆ. ಒಂದು ಸರ್ವೇ ನಂಬರ್‌ನಲ್ಲಿ 200–300

ಇರುತ್ತವೆ. ಅಂದರೆ, ಎಲ್ಲರೂ ದುಡ್ಡು ಕಟ್ಟಬೇಕು, ಎಲ್ಲರೂ ಪಹಣಿ ತರುವುದಕ್ಕೆ ಹೋಗಬೇಕು. ಅಂದರೆ ಅವರೆಲ್ಲರೂ ಆ ನೆಮ್ಮದಿ ಕೇಂದ್ರದ ಮುಂದೆ ಹೋದರೆ ಇವರಿಗೆ 10 ರೂಪಾಯಿ ಪ್ಲಸ್ ಆಯಿತು. ಇದು ಏನು ಕುತಂತ್ರ ಇದೆ, ಇದನ್ನು ಯೋಚಿಸಿ, ಎಲ್ಲದನ್ನೂ ಆಪಾದನೆ ಮಾಡುವುದಲ್ಲ. ಇದನ್ನು ದಯಮಾಡಿ ಯಾವ ಉದ್ದೇಶ ಇರುತ್ತದೆ ಅವರ ಬದುಕನ್ನು ಸ್ವಲ್ಪ ನೋಡಿ ಎಂದು ಹೇಳುತ್ತಾ ಕೊನೆಯದಾಗಿ ಮೊನ್ನೆ ನಾನೊಂದು ವಿಚಾರವನ್ನು ನಿಯಮ 69 ರಡಿಯಲ್ಲಿ ತಂದಿದ್ದೆ. ಈಗ ನೀವು ಟೈಂ ಕೊಡುತ್ತಿಲ್ಲ. ನಾವು ತಂದಿರುವ ವಿಚಾರವನ್ನು ನಿಯಮ 69ರಲ್ಲಿ ಸಂಪೂರ್ಣ ವಾಗಿ ಚರ್ಚೆ ಮಾಡಬೇಕಾದರೆ ಬಹುಶಃ ಎರಡು ಮೂರು ಗಂಟೆಗಳ ಕಾಲ ಬೇಕಾಗುತ್ತದೆ. ಮಾನ್ಯ ಸಭಾನಾಯಕರು, ಮುಂದೆ ಈ ಹಗರಣಗಳು, ಏನೇನು ತಪ್ಪಾಗಿವೆ, ಈ ಬಗ್ಗೆ ಮೂರು ದಿವಸದ ವಿಶೇಷವಾದ ಸಭೆ ಕರೆದಾಗ ನನಗೆ ಅವಕಾಶ ಕೊಡಿ. ಆವತ್ತು ನಾವು ಹೇಳುತ್ತೇವೆ. ಅಂದಾಜು ಸಮಿತಿಯನ್ನು ಮಿನಿ ಲೆಜಿಸ್ಲೇಚರ್ಸ್ ಎಂದು ಕರೆಯುತ್ತಾರೆ. ಅಂಥ ಮಹತ್ವವಿರುವಂಥ ಒಂದು ಸಮಿತಿ. ಆ ಸಮಿತಿಯಲ್ಲಿ ಕಾಲ ಕಾಲಕ್ಕೆ ಕೆಲವು ನಿರ್ಣಯಗಳನ್ನು ತೆಗೆದುಕೊಂಡು ಸಲಹೆಗಳನ್ನು ಸರ್ಕಾರಕ್ಕೆ ಕೊಟ್ಟಿದ್ದೇವೆ. ಸರ್ಕಾರ ಅದನ್ನು ಮಾನ್ಯತೆ ಮಾಡದೇ ಹೋದರೆ ಕಾನೂನಿನ ಚೌಕಟ್ಟಿ ನೊಳಗೆ, ಕಾನೂನಿನ ಚೌಕಟ್ಟು ಬಿಟ್ಟು ನಾವು ಯಾವತ್ತು ಪ್ರಶ್ನೆ ಮಾಡುವುದಿಲ್ಲ. ಕಾನೂನಿನ ಚೌಕಟ್ಟಿನಲ್ಲಿರುವಂಥ ಕೆಲವು ವಿಚಾರಗಳನ್ನು ಮನ್ನಣೆ ಮಾಡಲಿಲ್ಲ. ಇವತ್ತು ನಾವು ಯಾವುದೋ ಒಂದು ವಿಷಯವನ್ನು ಎತ್ತಿದೆವು. ಅದು ಬಹಳ ಗಂಭೀರವಾದ ವಿಚಾರ. ನಾವು ಇಂಥ ವಿಚಾರವನ್ನು ಎತ್ತಿದಾಗ ನೀವು ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಲಿಲ್ಲವೆಂದರೆ ಹೇಗೆ? ಬೆಳಗಾಂ ನಿಂದ ನಮಗೆ ಫೋನು ಬರುತ್ತವೆ, ನೀವು ರೊಕ್ಕಾ ಒಯ್ದಿದಿದ್ದೀರಿ, ನಿಮ್ಮಿಂದ ನಮ್ಮ ಡ್ಯಾಂ ನಿಂತಿದೆ, ನಿಮಗೆ ಮಾನ ಮರ್ಯಾದೆ ಇದೆಯೆ ಎಂದು ನಮಗೆ ಫೋನು ಮಾಡುತ್ತಾರೆ. ಜನ ಬೆಳಗ್ಗೆ ನಮ್ಮ ರೂಂ ಮುಂದುಗಡೆ ಬರುತ್ತಾರೆ. ಅಲ್ಲಿ ರಾಜಕೀಯದ ವಿಂಗಡಣೆಯಿಂದ ಬಂದು, ನಿಮ್ಮ ಅಂದಾಜು ಸಮಿತಿಯಿಂದ ನೀವು ಅಲ್ಲಿ ಬಂದು ಡ್ಯಾಂ ನಿಲ್ಲಿಸಿ ಬಂದಿರಿ, ಇಲ್ಲದಿದ್ದರೆ ಡ್ಯಾಂ ನಡೆಯುತ್ತಿತ್ತು ಎಂದು ಹೇಳುತ್ತಾರೆ. ಆದರೆ, ಆ ಬಗ್ಗೆ ಸಮಗ್ರವಾದ ಚಿಂತನೆಯಾದರೆ ಯಾರಿಂದ ತಪ್ಪಾಗಿದೆ ಎಂದು ಗೊತ್ತಾಗುತ್ತದೆ. ಇಂಥ ಸಂದರ್ಭದಲ್ಲಿ ಹೇಳುವುದಾದರೆ, ನಾವು ನಮ್ಮ ಮಕ್ಕಳ ಮೇಲೆ ಆಣೆ ಮಾಡಿ ಹೇಳುವುದಾದರೆ, ಆ ಡ್ಯಾಂ

ವಿಚಾರದಲ್ಲಿ ಹತ್ತುಪೈಸೆ ದುಡ್ಡು ತಿಂದಿಲ್ಲ, ಆದರೆ ಅವರು ನೀವು ಹತ್ತು ಲಕ್ಷ ತೆಗೆದುಕೊಂಡಿದ್ದಾರೆ, ಇವರು ಡೀಲ್ ಆಗಿದ್ದಾರೆ, ಏನೇನು ಶಬ್ದಗಳು, ಏನೇನು ಮಾತು ಹೇಳುತ್ತಾರೆ. ಇದ್ಯಾಕೆ ಸ್ವಾಮಿ? ನಾವು ಒಂದು ಕಮಿಟಿಯಲ್ಲಿ ಕೆಲಸ ಮಾಡುವುದು ತಪ್ಪೆ? ಗಂಭೀರವಾದ ವಿಚಾರವನ್ನು ಎತ್ತುವುದು ತಪ್ಪೆ? ಏತಕ್ಕಾಗಿ ಈ ರೀತಿ ಮಾಡುವುದು? ನೀವು ನಿಯಮ 69ರಲ್ಲಿ ಆ ವಿಚಾರ ಚರ್ಚೆಗೆ ಕೊಟ್ಟಿದ್ದರೆ ಬಹುಶಃ ಅದರ ಬಗ್ಗೆ ಏನು ನಡೆದಿದೆ ಎಂದು ಬೆಳಕನ್ನು ಚೆಲ್ಲುವಂಥ ಕೆಲಸ ಆಗುತ್ತಿತ್ತು.

ಶ್ರೀ ಎಂ. ಪಿ. ಅಪ್ಪಚ್ಚು ರಂಜನ್ : ನಿಯಮ 69ರಲ್ಲಿ ತಾವು ಅಲ್ಪಾವಧಿ ಚರ್ಚೆಗೆ ಹಲವಾರು ವಿಷಯಗಳನ್ನು ಕೊಟ್ಟಿದ್ದೀರಿ. ಆದರೆ ತಾವು ಏನು ಸಮಯ ಫಿಕ್ಸ್ ಮಾಡಿದಿರಿ ಅದಕ್ಕೆ ಸರಿಯಾಗಿ ಅವರು ಮಾತನಾಡಲಿಲ್ಲ. ಇಲ್ಲಾಂದ್ರೆ ನಿಯಮ 69ರಲ್ಲಿ ನೀವು ಅವಕಾಶ ಕೊಡಬಹುದಾಗಿತ್ತು. ನೀವು ಎರಡು ಗಂಟೆಗಳ ಅವಕಾಶ ಕೊಟ್ಟರೆ ನಾಲ್ಕೈದು ಗಂಟೆಗಳ ಕಾಲ ಸಮಯ ಹಾಳು ಮಾಡಿದ್ದಾರೆ.

ಶ್ರೀ ಹೆಚ್. ಡಿ. ರೇವಣ್ಣ : ನಿಯಮ 69 ರಲ್ಲಿ ಯಾವುದು ಕನ್‌ವರ್ಟ್ ಮಾಡಿದ್ದಾರೆಂದರೆ, ಅಂದಾಜು ಸಮಿತಿಯ ವರದಿಯನ್ನು ಮೊನ್ನೆ ಇಲ್ಲಿ ಮಂಡನೆ ಮಾಡಿದರಲ್ಲ, ಅದರ ಮೇಲೆ ನಿಯಮ 69ಕ್ಕೆ ಕನ್‌ವರ್ಟ್ ಮಾಡಿದಿರಿ. ಅಂದಾಜು ಸಮಿತಿಯಲ್ಲಿ ಚರ್ಚೆಯಾದ ಹಾಗೆ ಅಧಿಕಾರಿಗಳು ಮಾಡಿರುವ ಲೋಪದೋಷಗಳ ಬಗ್ಗೆ ವರದಿಯಲ್ಲಿ ತಿಳಿಸಿ ಅದನ್ನು ಸಭೆಗೆ ಮಂಡಿಸಿರುವುದರ ಬಗ್ಗೆ ಚರ್ಚೆ ಮಾಡಬೇಕೆಂದು ಅವರು ಹೇಳುತ್ತಿರುವುದು.

ಶ್ರೀ ಕೆ. ಎಂ. ಶಿವಲಿಂಗೇಗೌಡ : ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ಮನವಿ ಮಾಡಿಕೊಳ್ಳುತ್ತೇನೆ. ಅವರು ಬಹಳ ದಿವಸಗಳ ಕಾಲ ವಿರೋಧ ಪಕ್ಷದಲ್ಲಿ ಕೆಲಸ ಮಾಡಿ ಬಂದಂಥವರು. ಅವರು ವಿರೋಧ ಪಕ್ಷದಲ್ಲಿ ಕುಳಿತು ಕೆಲಸ ಮಾಡಿದಾಗ ಸದಸ್ಯರಿಗೆ ಬರುವ ಸಂಕಷ್ಟಗಳನ್ನು ತಿಳಿದುಕೊಳ್ಳಬೇಕು. ಇವತ್ತು ನಾವು ಒಂದು ಒಳ್ಳೆಯ ದೃಷ್ಟಿಯಿಂದ ಹೋಗುತ್ತೇವೆ. ಪರೀಕ್ಷೆ ಮಾಡುತ್ತೇವೆ. ಅಲ್ಲಿ ನಡೆದಂಥ ಘಟನೆಗಳ ಬಗ್ಗೆ ಬೆಳಕು ಚೆಲ್ಲುವುದು ಬೇಡವೆ? ಒಂದು ಸಮಿತಿ ತನ್ನ ವರದಿ ಸರ್ಕಾರಕ್ಕೆ ಒಪ್ಪಿಸುವವರೆವಿಗೂ ನಾವು ಮಾತನಾಡುವುದಕ್ಕೆ ಬರುವುದಿಲ್ಲ. ವರದಿ ಒಪ್ಪಿಸಿದ ಮೇಲೆ ಅಲ್ಲಿ ಏನು ನಡೆಯಿತು, ಏತಕ್ಕಾಗಿ ಈ ವ್ಯವಹಾರ ನಡೆದಿದೆ ಎನ್ನುವುದರ ಬಗ್ಗೆ ಹೇಳಲಿಕ್ಕೆ ಸಾಧ್ಯವಿಲ್ಲ ಎನ್ನುವುದಾದರೆ, ನಾವು ಅದೇ ರೀತಿ ಆಪಾದನೆ ಹೊತ್ತುಕೊಂಡು ಹೋಗಬೇಕೆ? ಇವನು ನಿಯಮ 69ರಲ್ಲಿ ಪ್ರಸ್ತಾಪಿಸಿ ಏನು ಡೀಲ್

ಮಾಡಿಕೊಂಡು ಮನೆಗೆ ಹೋದ ಎಂದು ಆಪಾದನೆ ಹೊತ್ತುಕೊಳ್ಳಬೇಕೇ?
ಸನ್ಮಾನ್ಯ ಅಧ್ಯಕ್ಷರೆ ನೀವು ಹೇಳಿ. ಅದಕ್ಕೋಸ್ಕರ ಮುಂದೆ ಸದನ ನಡೆಸುವ
ಸಂದರ್ಭದಲ್ಲಿ ಗಂಭೀರವಾದ ವಿಷಯಗಳಿಗನುಸಾರವಾಗಿ ಅವಕಾಶ ಕೊಡಿ.
ನಾವು ಅದರಲ್ಲಿ ಬರೆದು ಕೊಟ್ಟಿದ್ದೇವೆ. ನಮ್ಮ ಹಕ್ಕಿನ ಪ್ರಶ್ನೆ ಇದೆ, ನಮ್ಮ
ಮೇಲೆ ಆಪಾದನೆ ಬಂದಿದೆ, ಅಂದಾಜು ಸಮಿತಿಯ ಕೆಲವರು ದುಡ್ಡು
ಹೊಡೆದು ಈ ಘಟನೆ ಸೃಷ್ಟಿಸಿದ್ದಾರೆನ್ನುವ ಆಪಾದನೆ ಇದೆ. ಈ ವಿಚಾರ ಅಲ್ಲಿ
ಬರೆದಿತ್ತು, ಇದನ್ನು ತಾವು ಗಂಭೀರವಾಗಿ ಪರಿಗಣಿಸಿ ಚರ್ಚೆಗೆ ಅವಕಾಶ
ಕೊಡಬೇಕಾಗಿತ್ತು. ಇಕ್ಕಟ್ಟಿನ ಪರಿಸ್ಥಿತಿ ಬಂತು ಹೀಗಾಗಿ ಅವಕಾಶ ಕೊಟ್ಟಿಲ್ಲ.
ಮುಂದೆ ಹಗರಣಗಳ ಸರಮಾಲೆ ಎತ್ತುತ್ತೇವೆ, ವಿಶೇಷ ಸಭೆ ಕರೆಯುತ್ತೇ
ವೆಂದು ಏನು ಹೇಳಿದ್ದಾರೆ ಆಗ ತಾವು ಅವಕಾಶ ಕಲ್ಪಿಸಿ ಕೊಡಬೇಕು. 34
ಇಲಾಖೆಗಳ ಬಗ್ಗೆ ಏನೇನು ನ್ಯೂನತೆಗಳಿವೆ ಅವುಗಳೆಲ್ಲವನ್ನು ಎತ್ತಿ
ಹಿಡಿಯಬಹುದಾಗಿತ್ತು. ಆದರೆ, ನಮ್ಮ ಪ್ರಜಾತಂತ್ರ ವ್ಯವಸ್ಥೆಯೊಳಗಡೆ ನಿಮ್ಮ
ನಿಯಮದಡಿಯಲ್ಲಿ, ಸಭಾನಾಯಕರು ಬಿಎಸಿಯಲ್ಲಿ ಏನು ತೀರ್ಮಾನ
ಮಾಡಿಕೊಂಡಿದ್ದಾರೆ. ನನಗೆ ಗೊತ್ತಿಲ್ಲ. ಸಭಾನಾಯಕರು ಮನಸ್ಸು ಮಾಡಿದ್ದರೆ
ಇನ್ನೂ ಹೆಚ್ಚಿನ ದಿವಸ ಅವಕಾಶ ಕೊಡಬಹುದಾಗಿತ್ತು. ನಮಗೆ ಇನ್ನೇನು
ಇದೆ ಸ್ವಾಮಿ? ನಾವು ಇಲ್ಲಿಗೆ ಬಂದು ನಮ್ಮ ಕ್ಷೇತ್ರದಲ್ಲಿ ಏನು ಆಗಬೇಕೆಂದು
ಕೇಳುವುದಕ್ಕೆ ಆಗಲಿಲ್ಲ. ನಮ್ಮ ಕ್ಷೇತ್ರದ ಸಮಸ್ಯೆ ಹೇಳಲಿಕ್ಕೆ ಆಗಲಿಲ್ಲ. ಯಾವ
ಸಚಿವರಿಗೆ ಹೇಳುವುದು?

ನಾವು ಎಷ್ಟು ಮಾತನಾಡಿದರು ಅಷ್ಟೆ. ದಯಮಾಡಿ ಈ ರೀತಿಯಾ
ಗುವುದೆಲ್ಲ ಬೇಡ. ಹಿಂದೆ ನಾವು ಇಲ್ಲಿಗೆ ಬಂದ ಮೇಲೆ ಪ್ರೇಕ್ಷಕರ
ಗ್ಯಾಲರಿಯಲ್ಲಿ ಕುಳಿತು ಕಲಾಪಗಳನ್ನು ನಾವು ನೋಡುತ್ತಿದ್ದವು. ಇಲ್ಲಿ
ಇಲಾಖಾ ಬೇಡಿಕೆಯ ಮೇಲೆ ಒಂದು ದಿವಸವೆಲ್ಲ ಸುದೀರ್ಘವಾಗಿ ಚರ್ಚೆ
ನಡೆಯುತ್ತಿತ್ತು. ಆನಂತರ ಆ ಇಲಾಖೆಗೆ ಸಂಬಂಧಪಟ್ಟಂಥ ಮಂತ್ರಿಗಳು
ಉತ್ತರ ಕೊಡುತ್ತಿದ್ದರು. ಹಿಂದೆ ನಡೆಯುತ್ತಿದ್ದ ಕಲಾಪಗಳನ್ನು ಈಗ ಜ್ಞಾಪಕ
ಮಾಡಿಕೊಳ್ಳಬೇಕಾಗುತ್ತದೆ. ನಮ್ಮ ಸಭಾ ನಾಯಕರು ಅಂಥದ್ದೆ ಸಂಪ್ರದಾ
ಯವನ್ನು ಬೆಳೆಸಿ ಪ್ರಾಮಾಣಿಕವಾದ ಪ್ರಯತ್ನ ಮಾಡಬೇಕೆಂದು
ಕೇಳಿಕೊಳ್ಳುತ್ತೇನೆ. ಏಕೆಂದರೆ, ಅವರು ಬಹಳ ವರ್ಷಗಳ ಕಾಲ ವಿರೋಧ
ಪಕ್ಷದಲ್ಲಿ ಕುಳಿತು ಈಗ ಅಲ್ಲಿಗೆ ಹೋಗಿದ್ದಾರೆ. ಅವರು ವಿರೋಧ
ಪಕ್ಷದಲ್ಲಿದ್ದಾಗ ಆದಂಥ ಎಲ್ಲಾ ಘಟನಾವಳಿಯನ್ನು ಈಗ ನೆನಪಿಸಿಕೊಳ್ಳು
ತ್ತಾರೆಂದು ನಾವು ತಿಳಿದುಕೊಂಡಿದ್ದೇವೆ. ಆ ರೀತಿಯಾಗಿ ತಿಳಿದುಕೊಂಡು

ವಿರೋಧ ಪಕ್ಷಗಳಿಗೆ ಮಾನ್ಯತೆ ಕೊಡಬೇಕು. ಹಿಂದಿನ ಬಜೆಟ್ ಸ್ಪೀಚ್‌ನಲ್ಲಿ ಒಂದು ಮಾತನ್ನು ಹೇಳಿದ್ದೇನೆ. ಅದೇನೆಂದರೆ, ಕ್ಷೇತ್ರದಲ್ಲಿ ಶಾಸಕರು ಮತ್ತು ಅಧಿಕಾರಿಗಳ ಸಂಬಂಧ ಎಲ್ಲಿಯವರೆವಿಗೂ ಸರಿಯಾಗಿರುವುದಿಲ್ಲವೋ ಅಲ್ಲಿಯವರೆಗೆ ಅಭಿವೃದ್ಧಿ ಕೆಲಸಗಳು ಆಗುವುದಿಲ್ಲ. ಮೂರು ಮೂರು ಸಾರಿ ಸಬ್‌ಇನ್‌ಸ್ಪೆಕ್ಟರ್‌ರವರನ್ನು ವರ್ಗಾವಣೆ ಮಾಡುತ್ತಿದ್ದ ಹಾಗೆ ಶಿವಲಿಂಗೇಗೌಡರು ರಾಜಕೀಯ ಬಿಟ್ಟು ಮನೆಗೆ ಹೋಗುತ್ತಾನೆಂದು ತಾವು ತಿಳಿದುಕೊಂಡಿರಬೇಕು. ಆದರೆ, ಇದು ಸಾಧ್ಯವಿಲ್ಲ. ಯಾರೇ ಅಧಿಕಾರಿ ಬಂದರು ಅಲ್ಲಿ ಕೆಲಸ ಮಾಡುತ್ತಾರೆ. ಆದರೆ, ಬೆಳಿಗ್ಗೆ ಒಬ್ಬ ತಹಸೀಲ್ದಾರ್, ಸಾಯಂಕಾಲಕ್ಕೆ ಒಬ್ಬ ತಹಸೀಲ್ದಾರ್ ಹಾಕುತ್ತಿದ್ದೀರಿ. ನಾವು ಅಧಿಕಾರಿಗಳಿಗೆ ಹೇಳಿದ್ದೇವೆ. ವರ್ಗಾವಣೆ ಮಾಡುವುದಕ್ಕೆ ನಾವು ಯಾರಿಗೂ ಪತ್ರ ಕೊಡುವುದಿಲ್ಲ. ಒಂದು ವೇಳೆ ನಿಮ್ಮ ಬೇಡಿಕೆಯ ಮೇಲೆ ಪತ್ರ ಕೊಡುತ್ತೇವೆ. ನಮಗೆ ಯಾರು ಬೇಕಾದರೂ ಬರಲಿ ಅಥವಾ ಯಾರು ಬೇಕಾದರೂ ಹೋಗಲಿ. ಅಧಿಕಾರಿಗಳನ್ನು ಹಾಕಿಸತಕ್ಕಂಥ ತೆಗೆಯತಕ್ಕಂಥ ಸಾಮರ್ಥ್ಯ ನಮ್ಮ ವಿರೋಧ ಪಕ್ಷದವರಿಗೆ ಇವತ್ತಿನ ರಾಜಕಿಯ ಸನ್ನಿವೇಶದಲ್ಲಿ ಇಲ್ಲವೆಂದು ಹೇಳುತ್ತಿದ್ದೇನೆ. ಶಾಸಕರುಗಳಿಗೆ ತಾಲ್ಲೂಕು ಲೆವೆಲ್ ಅಧಿಕಾರಿಗಳನ್ನು ಇಟ್ಟುಕೊಳ್ಳತಕ್ಕಂಥ ವ್ಯವಸ್ಥೆಯನ್ನು ಮುಂದಾದರೂ ಮಾನ್ಯ ಮುಖ್ಯಮಂತ್ರಿಗಳು ಮಾಡಿಕೊಡಬೇಕು. ಸಾಮರಸ್ಯವಾಗಿ ಕೆಲಸ ನಡೆದರೆ ನಿಜವಾಗಿಯೂ ಕೂಡ ಒಳ್ಳೆಯದಾಗುತ್ತದೆಂಬ ದೃಷ್ಟಿಯಿಂದ ಸನ್ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡಿಕೊಂಡು ಮಾನ್ಯ ಸಭಾಧ್ಯಕ್ಷರು ಮನಸ್ಸು ಮಾಡಿ ಮಾತನಾಡು ವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಎಲ್ಲರಿಗೂ ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ವೆಂಕಟಸ್ವಾಮಿ : ಮಾನ್ಯ ಅಧ್ಯಕ್ಷರೆ, ನಮ್ಮ ತಾಲ್ಲೂಕಿನಲ್ಲಿ ರೈತರು ಹೋರಾಟ ಮಾಡುತ್ತಿದ್ದಾರೆ. ಮತ್ತೆ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿದೆ. ದಯವಿಟ್ಟು ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು : ಅವಕಾಶ ಕೊಡುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಪಿ.ಎಂ.ಅಶೋಕ್ (ರಾಮದುರ್ಗ) : ಮಾನ್ಯ ಅಧ್ಯಕ್ಷರೆ, ಶಿಕ್ಷಣ ಇಲಾಖೆಯವರು ಎಸ್‌ಡಿಎಂಸಿ ಎಂದು ಮಾಡಿದ್ದಾರೆ. ಇವತ್ತಿನ ದಿವಸ ಎಸ್‌ಡಿಎಂಸಿಯಲ್ಲಿ ಬಹಳ ಅವ್ಯವಹಾರ ಪ್ರಾರಂಭವಾಗಿದೆ. ಮೊದಲು ಪ್ರೈಮರಿ ಮತ್ತು ಮಿಡ್ಲ್ ಸ್ಕೂಲ್‌ನಲ್ಲಿ ರಾಜಕೀಯ ಇರಲಿಲ್ಲ. ಈಗ ಎಸ್‌ಡಿಎಂಸಿ ಗೆ ಅಧ್ಯಕ್ಷರನ್ನು ನೇಮಕ ಮಾಡಿ ಸ್ಕೂಲ್ ಕೊಠಡಿಗಳನ್ನು

ಕಟ್ಟಿಸಬೇಕೆಂದು ಅಧಿಕಾರ ಕೊಟ್ಟಿದ್ದರಿಂದ ಆ ಪಕ್ಷ ಈ ಪಕ್ಷ ಎಂದು ಅಲ್ಲಿಯೂ ಕೂಡ ರಾಜಕೀಯ ಪ್ರಾರಂಭವಾಗಿದೆ. ಮತ್ತೆ ಎಸ್‌ಡಿಎಂಸಿ ಅಧ್ಯಕ್ಷರ ಜೊತೆಯಲ್ಲಿ ಹೆಡ್‌ಮಾಸ್ಟರ್ ಕೂಡ ಸೇರಿಕೊಂಡು ರೂಮ್ ಕಟ್ಟುವುದಕ್ಕೆ ಗುತ್ತಿಗೆ ಕೆಲಸವನ್ನು ಮಾಡುತ್ತಿದ್ದಾರೆ. ಆದ್ದರಿಂದ, ಎಸ್‌ಡಿಎಂಸಿ ಯನ್ನು ದಯವಿಟ್ಟು ರದ್ದು ಮಾಡಿ. ಬೇಕಾದರೆ ಎಸ್‌ಡಿಎಂಸಿ ಅಧ್ಯಕ್ಷ ಏನು ಮಾಡುತ್ತಾನೆಂಬುದನ್ನು ಇಲ್ಲಿರತಕ್ಕಂಥ ಎಲ್ಲಾ ಶಾಸಕರಿಗೂ ಕೇಳಿ. ಆತ ಹೆಡ್ ಮಾಸ್ಟರ್ ಜೊತೆ ಸೇರಿಕೊಂಡು ಆತ ಗುತ್ತಿಗೆ ತೆಗೆದುಕೊಂಡು ಕೊಠಡಿಯನ್ನು ಕಟ್ಟುತ್ತಿದ್ದಾರೆ. ಮತ್ತೆ ಬಹಳ ಕಳಪೆ ಕೆಲಸವನ್ನು ಮಾಡುತ್ತಿದ್ದಾರೆ. ಹಾಗೆಯೇ ಕೊಠಡಿ ಕಟ್ಟುವುದಕ್ಕೆ ಪರಿಜ್ಞಾನ ಕೂಡ ಇರುವುದಿಲ್ಲ. ಈ ಕೆಲಸವನ್ನು PWD ಅಥವಾ ಜಿಲ್ಲಾ ಪಂಚಾಯತ್‌ಗೆ ಕೂಡ ಕೊಟ್ಟಿಲ್ಲ. ಇಲಾಖೆಯವರು ಯಾವುದೋ ಒಂದು ಏಜೆನ್ಸಿಗೆ ಈ ಕೆಲಸ ಕೊಟ್ಟಿದ್ದಾರೆ.

ಶ್ರೀ ಮಾಲೀಕಯ್ಯ ವಿ.ಗುತ್ತೇದಾರ್ : ಮಾನ್ಯ ಅಧ್ಯಕ್ಷರೆ, ಎಸ್‌ಡಿಎಂಸಿ ಯನ್ನು ರದ್ದು ಮಾಡಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಕಾನೂನು ಚೌಕಟ್ಟಿನೊಳಗೆ ಎಸ್.ಡಿ.ಎಂ.ಸಿ.ಗೆ ಹೆಚ್ಚಿನ ಶಕ್ತಿ ಕೊಟ್ಟಿದ್ದಾರೆ. ಗ್ರಾಮ ಪಂಚಾಯತಿಯಲ್ಲಿ ಉದ್ಯೋಗ ಭರವಸೆ ಯೋಜನೆಯಲ್ಲಿ ಸಾಕಷ್ಟು misappropriation ಆಗುತ್ತಿದೆ. ಮತ್ತೆ ಆಶ್ರಯ ಯೋಜನೆಯಲ್ಲಿಯೂ ಕೂಡ ಸಾಕಷ್ಟು ಅವ್ಯವಹಾರ ಆಗಿದೆ. ಆಶ್ರಯ ಮನೆಗಳ ವಿಚಾರ ಶಾಸಕರುಗಳಿಗೆ ಕೊಡುವುದಕ್ಕೆ ಕಾಂಗ್ರೆಸ್‌ನವರು ಒಪ್ಪಿಲ್ಲ. ಏಕೆಂದರೆ, ಗ್ರಾಮಪಂಚಾಯಿತಿಗೆ ನಾವು ಹೆಚ್ಚಿನ ಒತ್ತನ್ನು ಕೊಟ್ಟಿದ್ದೇವೆ. ಆದರೆ, ಕೊನೆಯಲ್ಲಿ ಮಾನಿಟರಿಂಗ್ ಮಾಡುವುದಕ್ಕೆ ಶಾಸಕರ ಅನುಮತಿ ತೆಗೆದುಕೊಂಡು ಫೈನಲ್ ಮಾಡಬೇಕೆಂದು ಅಧಿಕಾರ ಕೊಟ್ಟಿದ್ದರಿಂದ ಸ್ವಲ್ಪ ಮಟ್ಟಿಗೆ ಕಡಿವಾಣವಾಗಿದೆ. ಅಂದರೆ, ಇಲ್ಲಿ ವಿಜಿಲೆನ್ಸ್ ಕಮಿಟಿ ಮಾಡಿದ್ದೀರಿ. ಅದೇ ರೀತಿಯಾಗಿ ಎಸ್‌ಡಿಎಂಸಿ ಗೂ ಕೂಡ ಶಾಸಕರ ನೇತೃತ್ವದಲ್ಲೊಂದು ವಿಜಿಲೆನ್ಸ್ ಕಮಿಟಿ ಮಾಡಿ. ಅಂತಿಮವಾಗಿ ಶಾಸಕರ ಸಹಿ ಇದ್ದರೆ ಮಾತ್ರ ಅದಕ್ಕೆ ಅನುಮತಿ ಕೊಡುವಂಥ ವ್ಯವಸ್ಥೆ ಇದ್ದಾಗ ಮಾತ್ರ ಇಲ್ಲಿ ಆಗುವ ಅವ್ಯವಹಾರವನ್ನು ತಡೆಯಬಹುದು. ಇಲ್ಲಿ ಈಗ ಏನಾಗಿದೆ ಎಂದರೆ, ಮನಸ್ಸಿಗೆ ಬಂದ ಹಾಗೆ ಪ್ಲಾನ್ ಮತ್ತು ಡಿಸೈನ್ ಮಾಡಿಕೊಂಡು ಕಟ್ಟಡ ನಿರ್ಮಾಣ ಮಾಡುತ್ತಿದ್ದಾರೆ. ಮತ್ತೆ ಎಸ್ಟಿಮೇಟ್ ಕೂಡ ಯದ್ವಾತದ್ವಾ ಮಾಡಿಕೊಂಡಿರುತ್ತಾರೆ. ಇದರಿಂದ

ಸಿಕ್ಕಾಪಟ್ಟೆ ಅವ್ಯವಹಾರವಾಗುತ್ತಿದೆ ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಗಮನಹರಿಸಬೇಕು.

ಶ್ರೀ ಪಿ.ಎಂ.ಅಶೋಕ್ : ಮಾನ್ಯ ಶಿಕ್ಷಣ ಸಚಿವರು ಇಲ್ಲಿದ್ದರೆ ಚೆನ್ನಾಗಿತ್ತು. ಈ ವಿಷಯದ ಬಗ್ಗೆ ಶಾಸಕರು ಮಾನ್ಯ ಸಚಿವರ ಹತ್ತಿರ ಹೋಗಿ ಮನವಿ ಮಾಡಿದ್ದೇವೆ. ಇದು ಅವರ ಗಮನಕ್ಕೆ ಬಂದಿದೆ. ಎಸ್‌ಡಿಎಂಸಿಯನ್ನು ರದ್ದು ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಈಗ ಕೂಡ ಮನವಿ ಮಾಡಿಕೊಳ್ಳುತ್ತೇನೆ. ನಮ್ಮ ರಾಮದುರ್ಗ ತಾಲ್ಲೂಕಿನಲ್ಲಿ ಹೆಡ್‌ಮಾಸ್ಟರ್ ಮತ್ತು ಎಸ್‌ಡಿಎಂಸಿ ಅಧ್ಯಕ್ಷರು ಸೇರಿಕೊಂಡು ಕೊಠಡಿ ಕೆಲಸವನ್ನು ಅರ್ಧಕ್ಕೆ ನಿಲ್ಲಿಸಿ ಅದರ ದುಡ್ಡು ತೆಗೆದುಕೊಂಡು ಇಬ್ಬರು ಓಡಿ ಹೋಗಿದ್ದಾರೆ. ಅಲ್ಲಿ ಕೆಲಸ ಅರ್ಧಕ್ಕೆ ನಿಂತುಹೋಗಿದೆ. ಈ ಕೆಲಸ ನಿಂತು ಸುಮಾರು 5 ವರ್ಷಗಳಾಗಿವೆ. ಈಗ ಕಟ್ಟಡ incomplete ಆಗಿದೆ. ಇದುವರೆಗೂ ಅವರ ಮೇಲೆ ಕ್ರಮ ತೆಗೆದುಕೊಂಡಿಲ್ಲ. ದಯವಿಟ್ಟು ಅವರ ಮೇಲೆ ತನಿಖೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ತಮಗೆಲ್ಲಾ ಗೊತ್ತಿರುವ ಹಾಗೆ ಶಾಸಕರ ನೇತೃತ್ವದಲ್ಲಿ ಆಶ್ರಯ ಮನೆಗಳು ಇರುತ್ತಿತ್ತು. ಆದರೆ, ಈಗ Decentralization ಮಾಡಿರುವುದರಿಂದ ಇವತ್ತಿನ ದಿವಸ ಹೆಚ್ಚಿನ corruption ಆಗುತ್ತಿದೆ. ಬಡವ ಬಂದಿದ್ದಾನೆ ಈತನಿಗೆ ಆಶ್ರಯ ಯೋಜನೆ ಅಡಿಯಲ್ಲಿ ಮನೆ ಕೊಡಿ ಎಂದು ಗ್ರಾಮಪಂಚಾಯತಿ ಛೇರ್ಮನ್‌ಗೆ ನಾವು ಶಾಸಕರಾಗಿ ಹೇಳಿದರೂ ಕೂಡ ಮನೆ ಕೊಡುತ್ತಿಲ್ಲ. ಇವರು ಮತ್ತು ಕಾರ್ಯದರ್ಶಿಯವರು ಒಂದಾಗಿ 5–10 ಸಾವಿರ ರೂಪಾಯಿ ಪಡೆದುಕೊಳ್ಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರ ಕ್ಷೇತ್ರದಲ್ಲಿಯೂ ಕೂಡ ನಡೆಯುತ್ತಿದೆ ಎಂದು ನನಗೆ ಅನುಮಾನ ಬಂದಿದೆ. ಏಕೆಂದರೆ, ರಾಜ್ಯದಲ್ಲೆಲ್ಲಾ ಇದೇ ರೀತಿಯಾಗಿ ನಡೆಯುತ್ತಿದೆ. ಆದ್ದರಿಂದ, ಗ್ರಾಮ ಪಂಚಾಯತಿ ಛೇರ್ಮನ್ ರವರಿಗೆ ಕೊಟ್ಟಿರುವ ಅಧಿಕಾರವನ್ನು ಕಿತ್ತು ಹಾಕಬೇಕು. ಇಲ್ಲದಿದ್ದರೆ ಅದನ್ನು ಮಾಡಿಫಿಕೇಶನ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ಒಂದು ಕಡೆ ಸುಮಾರು 50 ಮನೆ ಇದ್ದಾಗ ಹರಿಜನರಿಗೆ 10 ಮನೆ ಕೊಡಬೇಕೆಂದು ರಿಸರ್ವ್ ಮಾಡಿರುತ್ತೇವೆ. ಹರಿಜನರಿಗೆ ಇನ್ನು 15 ಮನೆ ಹೆಚ್ಚಿಗೆ ಕೊಡಿ. ಆದರೆ, ಕೆಲವು ಕಡೆ ಮನೆಗಳನ್ನು ಕೊಟ್ಟಂಥ ಹರಿಜನರಿಗೆ ಮತ್ತೆ ಕೊಟ್ಟು ಗ್ರಾಮಪಂಚಾಯಿತಿ ಚೇರ್ಮನ್ ಮತ್ತು ಕಾರ್ಯದರ್ಶಿಯವರು ಸುಮ್ಮನೆ ಬೇರೆಯವರ ಹೆಸರುಗಳನ್ನು ಹಾಕಿ ದುಡ್ಡು ಮಾಡುತ್ತಿದ್ದಾರೆ. ಹರಿಜನರು ಎಲ್ಲಿ

ಇರುವುದಿಲ್ಲವೋ ಅಲ್ಲಿ ಉಳಿದಿರತಕ್ಕಂಥ ಮನೆಗಳನ್ನು ಜನರಲ್‌ಗೆ ಅಥವಾ ಹಿಂದುಳಿದ ವರ್ಗಗಳಿಗೆ ಆದರೂ ದಯವಿಟ್ಟು ಕನ್‌ವರ್ಟ್ ಮಾಡಿ ಎಂದು ಕೇಳಿಕೊಳ್ಳುತ್ತಿದ್ದೇನೆ. ಇದು ಬಹಳ ಮುಖ್ಯವಾದಂಥದು. ಇವತ್ತಿನ ದಿವಸ ಗ್ರಾಮಪಂಚಾಯತಿ ಸದಸ್ಯರು ಯಾವ ಶಾಸಕರ ಮಾತನ್ನು ಕೇಳುತ್ತಿಲ್ಲ. ಆದ್ದರಿಂದ, ಇದರ ಬಗ್ಗೆ ಸರ್ಕಾರ ಬಹಳ ಸೀರಿಯಸ್ ಆಗಿ ಯೋಚನೆ ಮಾಡಿ ಅವರ ಹಕ್ಕುಗಳನ್ನು ಮೊಟಕುಗೊಳಿಸದಿದ್ದರೆ ನೀವು 10 ಸಾವಿರ ಮನೆಗಳನ್ನು ಕೊಟ್ಟರೂ ಸಹ ಬಡ ಫಲಾನುಭವಿಗಳಿಗೆ ಇದು ಮುಟ್ಟುವುದಿಲ್ಲ. ಅವರ ಸಂಬಂಧಿಕರಿಗೆ ಮತ್ತು ಅಣ್ಣತಮ್ಮಂದಿರಿಗೆ ಮತ್ತು ದುಡ್ಡು ಕೊಟ್ಟಂಥವರಿಗೆ ಕೊಡುತ್ತಿದ್ದಾರೆ. ಆದ್ದರಿಂದ ಇದರ ಬಗ್ಗೆ ಸಮಗ್ರ ತನಿಖೆ ನಡೆಸಿದರೆ ಎಲ್ಲಾ ಗ್ರಾಮ ಪಂಚಾಯತಿಯ ಛೇರ್ಮನ್‌ರವರು ಮತ್ತು ಕಾರ್ಯದರ್ಶಿಯವರು ಜೈಲಿಗೆ ಹೋಗುವಂಥ ಸ್ಥಿತಿ ಬರುತ್ತದೆ. ಕೆಲವು ಕಡೆ ಹರಿಜನ ಮಹಿಳೆಯರು ಛೇರ್ಮನ್ ಆಗಿದ್ದಾರೆ, ಅವರಿಗೆ ಏನು ಗೊತ್ತಿಲ್ಲ. ಇವರಿಗೆ ದುಡ್ಡಿನ ಆಮಿಷ ತೋರಿಸಿ ಹೆಬ್ಬೆಟ್ಟು ಗುರ್ತು ಹಾಕಿಸಿಕೊಳ್ಳುತ್ತಿದ್ದಾರೆ. ಹರಿಜನರಿಗೆ ಕೊಟ್ಟಿರುವ ಸವಲತ್ತುಗಳಲ್ಲಿಯೂ ಕೂಡ ದುರುಪಯೋಗ ವಾಗುತ್ತಿದೆ. ಆದ್ದರಿಂದ, ಅದನ್ನು ದಯವಿಟ್ಟು ರದ್ದು ಪಡಿಸಬೇಕು. ಇಲ್ಲದಿದ್ದರೆ ಅದನ್ನು ಮಾಡಿಫಿಕೇಷನ್ ಮಾಡಿ ಅದಕ್ಕೆ ಏನಾದ ರೊಂದು ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬೇಳೂರು ಗೋಪಾಲ ಕೃಷ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಅದನ್ನು ರದ್ದು ಪಡಿಸಬೇಕು. ಹಿಂದಿನ ಸಾಲಿನಲ್ಲಿ ನೀಡಿರುವ ಆಶ್ರಯ ಮನೆಗಳು ಇದುವರೆಗೂ ರಿಜಿಸ್ಟ್ರೇಷನ್ ಆಗಿಲ್ಲ. ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಬಹಳ ಅವ್ಯವಹಾರ ನಡೆಯುತ್ತಿದೆ. ಆದ್ದರಿಂದ, ಇದರ ಬಗ್ಗೆ ತಿದ್ದುಪಡಿ ತರಲೇಬೇಕಾಗುತ್ತದೆ. ಇಲ್ಲದಿದ್ದರೆ ಈ ರಾಜ್ಯದಲ್ಲಿ ಬಡವರಿಗೆ ಮನೆ ಸಿಗುವುದಿಲ್ಲ. ಆದ್ದರಿಂದ ಇದನ್ನು ಸರ್ಕಾರ ತಕ್ಷಣ ರದ್ದು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ.ರೇಣುಕಾಚಾರ್ಯ (ಹೊನ್ನಾಳಿ) : ಮಾನ್ಯ ಅಧ್ಯಕ್ಷರೆ, ಪ್ರತಿಪಕ್ಷದ ಸದಸ್ಯರು ಆಶ್ರಯ ಯೋಜನೆ ವಿಷಯವನ್ನು ಪ್ರಸ್ತಾಪ ಮಾಡಿರತಕ್ಕಂಥದ್ದು ಸ್ವಾಗತಾರ್ಹ. ಒಂದೊಂದು ಗ್ರಾಮ ಪಂಚಾಯಿತಿಗೆ ಸುಮಾರು 40-50 ಮನೆಗಳನ್ನು ಸರ್ಕಾರ ಕೊಡುತ್ತಿದೆ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ : ಆಶ್ರಯ ಕಮಿಟಿಯನ್ನು ರದ್ದು ಮಾಡಿ ಎಂದು ನಮ್ಮವರು ಹೇಳಿಲ್ಲ. ತಪ್ಪು ಮೆಸೇಜ್ ಹೋಗುತ್ತಿದೆ. ಅಲ್ಲಿ ಅವ್ಯವಹಾರ ಆಗುತ್ತಿದೆ ಅದನ್ನು ತಡೆಯಿರಿ ಎಂದು ಹೇಳುತ್ತಿದ್ದೇವೆ. ನಮ್ಮ ಕಾಂಗ್ರೆಸ್ ಸರ್ಕಾರ ಇದ್ದಾಗಲೇ ಇದನ್ನು ಮಾಡಿದ್ದೇವೆ. ಆದ್ದರಿಂದ, ತಪ್ಪು ಮಾಹಿತಿ ಇಲ್ಲಿಂದ ಹೋಗಬಾರದು.

ಶ್ರೀ ಎಂ.ಪಿ.ರೇಣುಕಾಚಾರ್ಯ : ಸನ್ಮಾನ್ಯ ಅಧ್ಯಕ್ಷರೆ, ಅಧಿಕಾರ ವಿಕೇಂದ್ರೀಕರಣವನ್ನು ನಾವ್ಯಾರು ವಿರೋಧ ಮಾಡುತ್ತಿಲ್ಲ. ಆದರೆ, ಅಧಿಕಾರ ವಿಕೇಂದ್ರೀಕರಣ ನೆಪದಲ್ಲಿ ಶಾಸಕರ ಹಕ್ಕುಗಳನ್ನು ಮೊಟಕುಗೊಳಿಸುವಂಥ ಕೆಲಸ ಆಗುತ್ತಿದೆ. ಗ್ರಾಮಪಂಚಾಯತಿಯಲ್ಲಿ ಒಂದು ಮನೆ ಕಟ್ಟುವುದಕ್ಕೆ 40 ಸಾವಿರ ರೂಪಾಯಿ ಕೊಡುತ್ತಿದ್ದಾರೆ. ಈಗ ಸರ್ಕಾರ ಸುಮಾರು 40 ಸಾವಿರ ರೂಪಾಯಿವರೆಗೆ ಇದನ್ನು ಹೆಚ್ಚು ಮಾಡುತ್ತಿದೆ. ಇದೇ ರೀತಿಯಲ್ಲಿ ಪಂಚಾಯತಿ ಸದಸ್ಯರಲ್ಲಿ ಭ್ರಷ್ಟಾಚಾರ ಇದೆ. ಒಂದು ಮನೆ ಕೊಡುವುದಕ್ಕೆ ಸುಮಾರು 5 ರಿಂದ 10 ಸಾವಿರ ರೂಪಾಯಿ ಪಡೆದುಕೊಳ್ಳುತ್ತಿದ್ದಾರೆ. ನಿಜವಾದ ಬಡ ಫಲಾನುಭವಿಗಳಿಗೆ ಮನೆಯನ್ನು ಕೊಡುತ್ತಿಲ್ಲ. ಪಂಚಾಯತಿಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರು ಅವರುಗಳ ಸಂಬಂಧಿಕರಿಗೆ ಮತ್ತು ಮನೆಯವರಿಗೆ ಹಾಗೂ ಅವರ ಚೇಲಾಗಳಿಗೆ ಮನೆಗಳನ್ನು ಕೊಡುತ್ತಿದ್ದಾರೆ. ಆದ್ದರಿಂದ, ಶಾಸಕರ ಅಧ್ಯಕ್ಷತೆಯಲ್ಲಿ ಆಶ್ರಯ ಸಮಿತಿಗಳನ್ನು ಮಾಡಬೇಕು. ಸರ್ಕಾರ ಈಗಾಗಲೇ ವಿಜಿಲೆನ್ಸ್ ಕಮಿಟಿ ಮಾಡಿದೆ. ಆಶ್ರಯ ಯೋಜನೆಯಲ್ಲಿ ಮನೆ ನೀಡತಕ್ಕಂಥ ದ್ದರಲ್ಲಿ ತಪ್ಪು ಆಯ್ಕೆ ಆಗಿದ್ದರೆ ಅದನ್ನು ತೆಗೆದು ಹಾಕತಕ್ಕಂಥ ಕೆಲಸ ಮಾತ್ರ ನಮಗೆ ಇದೆ. ಆದರೆ, ಮನೆ ಇದ್ದಂಥವರಿಗೆ ಮತ್ತೆ ಮನೆ ಕೊಟ್ಟಿರತಕ್ಕಂಥದ್ದನ್ನು ನಾವು ಹೊಡೆದು ಹಾಕಿದರೆ ಹಳ್ಳಿಗಳಲ್ಲಿ ನಮ್ಮ ವಿರುದ್ಧ ಜನರನ್ನು ಎತ್ತಿಕಟ್ಟುವ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ನಾನು ಹೇಳುವುದೇನೆಂದರೆ, ವಿಜಿಲೆನ್ಸ್ ಕಮಿಟಿಯ ಅಧಿಕಾರ ನಮಗೆ ಬೇಡ. ಹಳ್ಳಿಗಳಲ್ಲಿ ಒಂದು ಮಾತನ್ನು ಹೇಳುತ್ತಾರೆ. ಅದೇನೆಂದರೆ, ಸಂಬಳ–ಸಾರಿಗೆ ಇಲ್ಲ ನನ್ನ ಗಂಡ ಜಮೇದಾರ ಎನ್ನುವ ಹಾಗೆ ನಾವು ಇಲ್ಲಿ ಸುಮ್ಮನೆ ಇದ್ದೇವೆ. ಜನರು ನಮಗೆ ಅಲ್ಲಿ ಛೀಮಾರಿ ಹಾಕುತ್ತಾರೆ. ಆದ್ದರಿಂದ, ಆಶ್ರಯ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ಶಾಸಕರನ್ನು ನೇಮಕ ಮಾಡಬೇಕು. ಹಳ್ಳಿಯ ಜನರಿಗೆ ನಿಜವಾದ ನ್ಯಾಯ ಕೊಡುವುದಕ್ಕೆ ನಮಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ. ಎಂ. ಅಶೋಕ : ಮಾನ್ಯ ಅಧ್ಯಕ್ಷರೆ, ನಮಗೆ ಹಕ್ಕು ಏನಿದೆ ಎಂದರೆ, ವಿಜಿಲೆನ್ಸ್ ಕಮಿಟಿ ಎಂದು ಮಾಡಿದ್ದಾರೆ ಅದು ತಮಗೆ ಗೊತ್ತಿರಬಹುದು. ಅಲ್ಲಿ ಶಾಸಕರಿಗೆ ಏನು ಅಧಿಕಾರವಿಲ್ಲ. ಗ್ರಾಮ ಪಂಚಾಯತಿ ಯವರು ಏನಾದರೂ ತಪ್ಪು ಮಾಡಿದರೆ ಅದನ್ನು ಹೊಡೆದು ಹಾಕಿ ಮತ್ತೆ ಅಲ್ಲಿಗೆ ಕಳುಹಿಸಿ ಕೊಡಬೇಕು. ಮತ್ತೆ ಅವರು ಅದೇ ಹೆಸರನ್ನು ಹಾಕಿ ಕಳುಹಿಸುತ್ತಾರೆ. ನಾವು ಎಷ್ಟು ಸಾರಿ ವಾಪಸ್ಸು ಕಳುಹಿಸುವುದು, ಎಷ್ಟು ಸಲ ಹೇಳುವುದು ಹೇಳಿ? ಅವರು ಮನೆ ಕೊಡುತ್ತೇವೆಂದು ದುಡ್ಡು ತಿಂದಿರುವು ದರಿಂದ ಅವರು ಅದೇ ಹೆಸರನ್ನು ಹಾಕಿ ಕಳುಹಿಸಿ ಕೊಡುತ್ತಾರೆ. ದಯವಿಟ್ಟು ಎಲ್ಲಾ ಶಾಸಕರುಗಳ ಅಭಿಪ್ರಾಯ ಏನೆಂದರೆ, ಇದನ್ನು modification ಮಾಡಿ ಅದಕ್ಕೆ amendment ತರಬೇಕು. ಇಲ್ಲದಿದ್ದರೆ 5–10 ಸಾವಿರ ಮನೆಗಳನ್ನು ಕೊಟ್ಟರೂ ಯಾವ ಬಡವರಿಗೂ ಮುಟ್ಟುವುದಿಲ್ಲ. ಬಡವರು ಬಂದು ಶಾಸಕರೆ ನೀವು ನಮಗೆ ಮನೆ ಕೊಡಿ ಎಂದು ಕೇಳುತ್ತಾರೆ. ಬಡವರಿಗೆ ಮನೆ ಕೊಡಿ ಎಂದು ಹೇಳಿದರೆ ಆಯಿತು ಕೊಡುತ್ತೇವೆಂದು ಮೊದಲು ನಮಗೆ ಹೇಳುತ್ತಾರೆ. ಗ್ರಾಮ ಸಭೆ ನಡೆಯುವಾಗ ಎಲ್ಲರಿಗೂ ಮನೆ ಕೊಡುತ್ತೇವೆಂದು ಹೇಳಿಕೊಂಡು ಬರುತ್ತಾರೆ. ಆಮೇಲೆ ಯಾರು ದುಡ್ಡು ಕೊಡುತ್ತಾರೆ ಅವರ ಹೆಸರಿಗೆ ಮನೆ ಕೊಡುತ್ತಾರೆ. ಇದು ಎಲ್ಲಾ ಕ್ಷೇತ್ರಗಳಲ್ಲಿ ನಡೆಯುತ್ತಿರುವುದು. ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಿ ಇದಕ್ಕೆ ಪರ್ಯಾಯ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. Action plan ಮಾಡಬೇಕಾದರೆ ಅಧಿಕಾರಿಗಳು ಯಾವ ಶಾಸಕರನ್ನು ಕೇಳುವುದಿಲ್ಲ. ಸುವರ್ಣಗ್ರಾಮ action plan ಯಾರು ಮಾಡುತ್ತಾರೆಂದರೆ, ಗ್ರಾಮ ಪಂಚಾಯತಿ ಅಧ್ಯಕ್ಷರು ಹೇಳಿದ್ದನ್ನು ಮಾಡುತ್ತಾರೆ. ಅಲ್ಲಿ ಶಾಸಕರಿಗೆ ಬೆಲೆ ಇಲ್ಲ. ಅಧ್ಯಕ್ಷರು ಬಹಳ ಕಳಪೆ ಮಟ್ಟದ್ದು ಇರುವುದನ್ನು ತೋರಿಸುತ್ತಾರೆ.

ಅಧ್ಯಕ್ಷರು : ಎಲ್ಲರೂ ಅದೇ ವಿಷಯವನ್ನು ಮಾತನಾಡುವುದು ಬೇಡ.

ಶ್ರೀ ಯು.ಟಿ.ಖಾದರ್ : ಸುವರ್ಣ ಗ್ರಾಮ ಕಾರ್ಯಕ್ರಮ ಸರ್ಕಾರದ ಒಂದು ಅತ್ಯುತ್ತಮವಾದ ಕಾರ್ಯಕ್ರಮ.

ಅಧ್ಯಕ್ಷರು : ನೀವು ಯೀಲ್ಡ್ ಆದರೆ ಎಲ್ಲರೂ ಮಾತನಾಡುತ್ತಾರೆ. ನೀವು ಬೇಗ ಮುಗಿಸಿ ಬಿಡಿ.

ಶ್ರೀ ಪಿ.ಎಂ. ಅಶೋಕ : ಮಾನ್ಯ ಅಧ್ಯಕ್ಷರೆ, ಸುವರ್ಣಗ್ರಾಮ action Plan ಮಾಡುವಾಗ ಶಾಸಕರ ಅಧ್ಯಕ್ಷತೆಯಲ್ಲಿ ಸಭೆ ನಡೆದರೆ ಬಹಳ ಒಳ್ಳೆಯದು. ಏಕೆಂದರೆ ನಮಗೆ ಕಾಳಜಿ ಇರುತ್ತದೆ. ನಮಗೆ ಯಾವ ಹಳ್ಳಿಯಲ್ಲಿ ಏನು ಕೆಲಸ ಮಾಡಬೇಕು, ನಮಗೆ ಏನು ಹೆಸರು ಬರುತ್ತದೆಂದು ಗೊತ್ತಿರುತ್ತದೆ. ಆದ್ದರಿಂದ ಶಾಸಕರ ಅಧ್ಯಕ್ಷತೆಯಲ್ಲಿ action Plan ಮಾಡಬೇಕೆಂದು ನಾನು ತಮ್ಮ ಮೂಲಕ ಆಗ್ರಹಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಜನಸ್ಪಂದನ ಕಾರ್ಯಕ್ರಮವೆಂದು ಬಹಳ ಒಳ್ಳೆಯದನ್ನು ಮಾಡಿದ್ದಾರೆ. ಆದರೆ ಆ ಕಾರ್ಯಕ್ರಮದೊಳಗೆ ಅಧಿಕಾರಿಗಳು ಬರುತ್ತಾರೆ. ಈಗ old age pension and widow pension ಮತ್ತು ಅಂಗವಿಕಲರ pensionಗಳು ಬರುತ್ತವೆ. ಮತ್ತೆ ನಾವು ಜನಸ್ಪಂದನ ಕಾರ್ಯಕ್ರಮಕ್ಕೆ ಹೋದಾಗ ಯಾವ ಕೆಲಸಗಳು ಆಗಿರುವುದಿಲ್ಲ. ಅಲ್ಲಿ ಅಧಿಕಾರಿಗಳು ಯಾರ ಮಾತನ್ನು ಕೇಳುತ್ತಿಲ್ಲ. ನಾವು ಹೋದಾಗ ಸುಮ್ಮನೆ ಸಿಕ್ಕಾಪಟ್ಟೆ ಬೈಯ್ಯಿಸಿಕೊ ಳ್ಳುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಜನಸ್ಪಂದನ ಕಾರ್ಯಕ್ರಮಕ್ಕೆ ಹೋಗಿ ಎಂದು ಹೇಳುತ್ತಾರೆ. ಅಲ್ಲಿ ಏನೋ ಅದ್ಭುತವಾದ ಮ್ಯಾಜಿಕ್ ನಡೆಯುತ್ತ ದೆಂದು ಹೋಗಿದ್ದೆವು. ಆದರೆ ಅಲ್ಲಿ ಏನು ನಡೆಯುತ್ತಿಲ್ಲ. ಅದಕ್ಕಾಗಿ ನಾವು ಜನಸ್ಪಂದನ ಕಾರ್ಯಕ್ರಮಕ್ಕೆ ಹೋಗುವುದನ್ನು ಬಿಟ್ಟಿರುತ್ತೇವೆ. ರಾಮದುರ್ಗ ತಾಲ್ಲೂಕಿನಲ್ಲಿ ವಿಡೋ ಪೆನ್ಷನ್‌ಗೆ ಅರ್ಜಿಗಳು ಬಂದು ಆರು ತಿಂಗಳಾಯಿತು, ಅವರಿಗೆ 'ಎರಡು ಸಾವಿರ ರೂ.ಗಳವರೆಗೆ ಯಾರು ಕೊಡುತ್ತಾರೆ, ಅವರಿಗೆ ಮಾತ್ರ ಮಂಜೂರು ಮಾಡಿ ಕೊಡುತ್ತಿದ್ದಾರೆ. ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ನಾನು ಮುಖ್ಯಮಂತ್ರಿಗಳಿಗೆ, ಡಿ.ಸಿ.ಯವರಿಗೆ ಪತ್ರ ಬರೆದಿದ್ದೇನೆ. ಆದರೆ ಯಾರು ಕ್ರಮ ತೆಗೆದುಕೊಂಡಿಲ್ಲ. 15–20 ವರ್ಷದಿಂದ ಅದೇ ಅಧಿಕಾರಿಗಳು Revenue Departmentನಲ್ಲಿ ಬೀಡು ಬಿಟ್ಟಿದ್ದಾರೆ. ಎಲ್ಲಾ ಶಾಸಕರುಗಳಿಗೆ ಇಬ್ಬರು Personal Assistantಗಳನ್ನು ಕೊಡಬೇ ಕೆಂದು ಕೇಳಿಕೊಳ್ಳುತ್ತೇನೆ. ಈಗ ಒಬ್ಬರನ್ನು P.A. ಕೊಟ್ಟಿರುತ್ತೀರಿ. ನಾವೆಲ್ಲಾ ಹಳ್ಳಿಯಿಂದ ಇಲ್ಲಿಗೆ ಬರುತ್ತೇವೆ. ನಾವು ಬೆಂಗಳೂರಿಗೆ ಬಂದಾಗ ಹಳ್ಳಿಗಳಲ್ಲಿ ನಮ್ಮ ಕೆಲಸಗಳನ್ನು ನೋಡಿಕೊಳ್ಳುವುದಕ್ಕೆ ಯಾರು ಇರುವುದಿಲ್ಲ. ಆದ್ದರಿಂದ ಇಬ್ಬರು P.A.ಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಾವು ಆಗಲೇ ಪ್ರಸ್ತಾವನೆಯನ್ನು ಮಂಡಿಸಿರುತ್ತೇವೆ. ಶಾಸಕರಿಗೆ ಈಗ ಕೊಡುತ್ತಿರುವ ವೇತನ ಬಹಳ ಕಡಿಮೆ ಇದೆ. ಅದನ್ನು ಜಾಸ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ರೇಣುಕಾಚಾರ್ಯ : ಮಾನ್ಯ ಅಧ್ಯಕ್ಷರೆ, ಇಲ್ಲಿರುವ ಕೆಲವು ಅಧಿಕಾರಿಗಳು ವ್ಯವಸ್ಥಿತವಾಗಿ ಶಾಸಕರ ಹಕ್ಕನ್ನು ಮೊಟಕುಗೊಳಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಅಧಿಕಾರ ವೀಕೇಂದ್ರೀಕರಣದ ನೆಪದಲ್ಲಿ ಕೆಲವು ಅಧಿಕಾರಿಗಳು ಸರ್ಕಾರದ ಹಾದಿಯನ್ನು ತಪ್ಪಿಸುತ್ತಿದ್ದಾರೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಪಿ.ಎಂ. ಅಶೋಕ : ನಾನು ಬೆಂಗಳೂರು ನಗರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ, ಮುಖ್ಯ ಕಾರ್ಯದರ್ಶಿಗಳಿಗೆ ಒಂದು ಪತ್ರವನ್ನು ಬರೆದಿರುತ್ತೇನೆ. ವಿಧಾನಸೌಧ ಸುತ್ತಮುತ್ತಲೂ fencing ಹಾಕಿರುತ್ತಾರೆ. ಅದಕ್ಕೆ flex ಹಾಕಬೇಡಿ, ದಯವಿಟ್ಟು ಅವರ ಮೇಲೆ ದಂಡ ಹಾಕಿ. ಅದನ್ನು ನೋಡಿದರೆ ನಮಗೆ ಬೇಜಾರಾಗುತ್ತಿದೆ, ಬರೀ ಹುಟ್ಟುಹಬ್ಬದ ಫ್ಲೆಕ್ಸ್‌ಗಳನ್ನು ವಿಧಾನಸೌಧದ ಸುತ್ತಮುತ್ತ ನಾವು ನೋಡುತ್ತಿದ್ದೇವೆ. ಅವರು ಬೇಕಾದರೆ ಎಲ್ಲಾದರೂ ಸರ್ಕಲ್ ಅಥವಾ ಹೊಟೇಲ್ ಮುಂದುಗಡೆ ಹಾಕಿಕೊಳ್ಳಲಿ. ವಿಧಾನಸೌಧದ ಸುತ್ತಮುತ್ತ ಬಹಳ ದಿವಸಗಳಿಂದ ಕಾನೂನು ಪ್ರಕಾರ ಬ್ಯಾನ್ ಮಾಡಲಾಗಿದೆ. ಆದರೂ ಕೂಡ ಶಾಸಕರ ಭವನದ ಹತ್ತಿರವಾಗಲಿ ಎಂಟ್ರೆನ್ಸ್ ಹತ್ತಿರ, ಬರೀ ಫ್ಲೆಕ್ಸ್‌ನ ಕಟೆಕಟೆ ಕಟ್ಟುತ್ತಾರೆ. ದಯವಿಟ್ಟು ಅದನ್ನು ವಿಧಾನಸೌಧ ಸುತ್ತಮುತ್ತ ಯಾರು ಕಟ್ಟುತ್ತಾರೆ. ಅವರಿಗೆ ಸರಿಯಾದ ರೀತಿಯಲ್ಲಿ ದಂಡ ಹಾಕಿ ಅವರಿಗೆ ಶಿಕ್ಷೆ ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಡಾ: ಎ.ಬಿ.ಮಾಲಕರೆಡ್ಡಿ : ಮಾನ್ಯ ಅಧ್ಯಕ್ಷರೆ, ಆರೋಗ್ಯ ಇಲಾಖೆಯ ಮೇಲೆ ಮಾನ್ಯ ರೋಷನ್ ಬೇಗ್ ರವರು ಸ್ವಲ್ಪ ಬೆಳಕನ್ನು ಚೆಲ್ಲಿದರು.

ಅಧ್ಯಕ್ಷರು : ಡಾ: ಮಾಲಕರೆಡ್ಡಿಯವರನ್ನು ನಾನು ಕರೆದಿರುತ್ತೇನೆ. ಬೇರೆಯವರು ಕುಳಿತುಕೊಳ್ಳಿ.

ಒಬ್ಬ ಮಾನ್ಯ ಸದಸ್ಯರು : ನಮ್ಮ ದೇವನಹಳ್ಳಿ ಶಾಸಕರಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ವೆಂಕಟಸ್ವಾಮಿ (ದೇವನಹಳ್ಳಿ) : ಮಾನ್ಯ ಅಧ್ಯಕ್ಷರೆ, ಮೊದಲನೇ ಬಾರಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ಅಭಿನಂದಿಸುತ್ತೇನೆ. ನನ್ನ ತಾಲ್ಲೂಕಿನಲ್ಲಿ ಸುಮಾರು ಮೂರು ದಿವಸದಿಂದ 10 ಸಾವಿರಕ್ಕಿಂತ ಹೆಚ್ಚು ಜನರು ತಹಶೀಲ್ದಾರ ಮಾಡಿರುವ ಅವ್ಯವಹಾರದ ಬಗ್ಗೆ ಸ್ಟ್ರೈಕ್ ಮಾಡುತ್ತಿದ್ದಾರೆ. ಇವತ್ತು ಕೂಡ 12-15 ಸಾವಿರ ಜನ ತಾಲ್ಲೂಕು ಕಛೇರಿ ಮುಂದೆ ಕುಳಿತುಕೊಂಡು ಹೋರಾಟ ಮಾಡುತ್ತಿದ್ದಾರೆ. ಸರ್ಕಾರ

ದಿಂದ ಇವತ್ತಿನವರೆಗೆ ಏನು ಮಾನ್ಯತೆ ಇಲ್ಲ. ಅಲ್ಲಿ ಪರಿಸ್ಥಿತಿ ಇವತ್ತು ವಿಕೋಪಕ್ಕೆ ಹೋಗಿದೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ತಹಶೀಲ್ದಾರ್ ಬಂದು ಆರು ತಿಂಗಳಾದರೂ ಸಾರ್ವಜನಿಕರಿಗೆ ಸ್ಪಂದಿಸುತ್ತಿಲ್ಲ. ಒಂದೇ ಕುಟುಂಬಕ್ಕೆ 86 ಎಕರೆ ಖಾತೆ ಮಾಡಿರುವುದು ಮತ್ತು ಸಂಧ್ಯಾ ಸುರಕ್ಷಾ ಯೋಜನೆಯಲ್ಲಿ ಹಿಂದೆ ಇರುವಂಥ ತಹಶೀಲ್ದಾರ್‌ರವರು ಆರೂವರೇ ಸಾವಿರ ಜನಕ್ಕೆ ಕೊಟ್ಟಿರು ವುದನ್ನು ಇವತ್ತಿನವರೆಗೆ ಅವರಿಗೆ ಯಾವುದೇ ರೀತಿ ಕ್ರಮ ತೆಗೆದುಕೊಂಡಿಲ್ಲ. ಅಕ್ರಮ ಸಕ್ರಮ ಯೋಜನೆ ಅಡಿಯಲ್ಲಿ ಭೂರಹಿತ ಫಲಾನುಭವಿಗಳಿಗೆ ಏನೂ ಮಂಜೂರಾತಿ ಮಾಡಿ ಕೊಟ್ಟಿಲ್ಲ. ರೈತಾಪಿ ಜನಗಳು ಹೋದರೆ ಅವರಿಗೆ ಸರಿಯಾಗಿ ಸ್ಪಂದಿಸುತ್ತಿಲ್ಲ. ಅಧಿಕಾರಿಗಳಿಗೆ ಜನಸ್ಪಂದನ ಸಭೆಯಲ್ಲಿ ಏಕವಚನದಲ್ಲಿ ಮಾತನಾಡುತ್ತಾರೆ. ಪೋಲೀಸ್ ಪೇದೆಗೆ ಹೊಡೆದು ಇವತ್ತು 25 ಸಾವಿರ ರೂ.ಗಳ ಜುಲ್ಮಾನೆ ಆಗಿರುವುದರಿಂದ ನನ್ನ ತಾಲ್ಲೂಕಿನಲ್ಲಿ ಬಹಳಷ್ಟು ತಹಶೀಲ್ದಾರ್‌ರವರಿಂದ ಅವ್ಯವಹಾರವಾಗಿದೆ. ಈ ತಹಶೀಲ್ದಾರ್ ರವರ ಬಗ್ಗೆ ಪರಿಶೀಲನೆ ಮಾಡಿ ಕೂಡಲೇ ಅವರನ್ನು ವರ್ಗಾವಣೆ ಮಾಡಿಕೊಡಬೇಕೆಂದು ಕೇಳಿಕೊಂಡು ಅವರನ್ನು suspend ಮಾಡಬೇಕೆಂದು ಮನವಿಯನ್ನು ಮಾಡಿಕೊಳ್ಳುತ್ತೇನೆ. ಇವರ ಬಗ್ಗೆ ಸುಮಾರು ಪತ್ರಿಕೆಗಳಲ್ಲಿ ಬಂದಿದೆ. ನಾನು ಸರ್ಕಾರಕ್ಕೆ ಎಲ್ಲಾ ಮಾಹಿತಿಯನ್ನು ಕೊಟ್ಟಿದ್ದೇನೆ. ದಯಮಾಡಿ ನನ್ನ ಕ್ಷೇತ್ರದ ಜನತೆಗೆ ಇದೊಂದು ನ್ಯಾಯವನ್ನು ಒದಗಿಸಿ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ವೆಂಕಟರಾವ್ ನಾಡಗೌಡ (ಸಿಂಧನೂರು) : ಮಾನ್ಯ ಅಧ್ಯಕ್ಷರೆ, ಕಳೆದ 25 ದಿವಸಗಳಿಂದ ಬಿಜಾಪುರದಲ್ಲಿ ಸ್ಟ್ರೈಕ್ ನಡೆಯುತ್ತಿದೆ.

ಅಧ್ಯಕ್ಷರು : ನೋಡಿ ಈಗ ಡಿಮ್ಯಾಂಡ್ಸ್ ಮೇಲೆ ಚರ್ಚೆ ನಡೆಯುತ್ತಿದೆ. ನೀವು ಶೂನ್ಯವೇಳೆ ಮತ್ತು ಇನ್ನಾವುದೇ ವಿಷಯವನ್ನು ಚರ್ಚೆ ಮಾಡುವುದಕ್ಕೆ ಹೋಗಬೇಡಿ.

ಶ್ರೀ ವೆಂಕಟರಾವ್ ನಾಡಗೌಡ : ನಾನು ಅದೇ ವಿಷಯವನ್ನು ಚರ್ಚೆ ಮಾಡುತ್ತಿದ್ದೇನೆ. ಅಲ್ಲಿ ಸ್ಟ್ರೈಕ್ ನಡೆದಿರುವುದನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು : ಇಲ್ಲಾ, ಈಗ ಡಿಮಾಂಡ್ಸ್ ಮೇಲೆ ಚರ್ಚೆ ನಡೆಯುತ್ತಿದೆ; ಡಾ: ಮಾಲಕರೆಡ್ಡಿಯವರೆ ನೀವು ಪ್ರಾರಂಭ ಮಾಡಿ.

ಡಾ: ಎ.ಬಿ.ಮಾಲಕರೆಡ್ಡಿ (ಯಾದಗಿರಿ) : ಮಾನ್ಯ ಅಧ್ಯಕ್ಷರೆ, ಈ ಗಡಿಬಿಡಿಯಲ್ಲಿ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡುವುದಿಲ್ಲ. ಆರೋಗ್ಯ ಇಲಾಖೆ ನನಗೆ ತಿಳಿದ ಮಟ್ಟಿಗೆ ಬಹಳ ಒಂದು lucky department. World Bank ನಿಂದ ಸಾಕಷ್ಟು funds ಬರುತ್ತವೆ. National Rural Health Mission (NRHM), Government of India Scheme ಇದರಿಂದಲೂ ಹಣ ಬರುತ್ತದೆ ಮತ್ತು State Government ದಿಂದಲೂ ಹಣ ಬರುತ್ತದೆ. ಈ ಮೂರು ಸಂಪನ್ಮೂಲಗಳಿಂದ ಹಣ ಬಂದರೂ ಇಲಾಖೆ ದುಸ್ಥಿತಿಯಲ್ಲಿದೆ. ಕಾರಣ ಸೋಂಕುರೋಗ ಮತ್ತು ಈ ಇಲಾಖೆಯಲ್ಲಿ ಪ್ರತಿಯೊಂದಕ್ಕೂ ಡಾಕ್ಟರ್‌ಗಳ ಅಭಾವ, ನರ್ಸ್‌ಗಳ ಅಭಾವ, ಔಷಧಿಗಳ ಅಭಾವ, ಆಂಬ್ಯುಲೆನ್ಸ್ ಅಭಾವ, ಇಷ್ಟೊಂದು ಸಂಪನ್ಮೂಲಗಳು ಇದ್ದರೂ ಆರೋಗ್ಯ ಇಲಾಖೆ ಇನ್ನು ತನ್ನ ಕುಂಬಕರ್ಣ ಮೂಡಿನಿಂದ ಹೊರಗೆ ಬಂದಿಲ್ಲ. ಮಾನ್ಯ ರೋಷನ್ ಬೇಗ್‌ರವರು ಮುಂಜಾನೆ ಹೇಳಿದರು. ಈ ರಾಜ್ಯದ ಮುಖ್ಯಸ್ಥರೊಬ್ಬರನ್ನು ಎಷ್ಟು ಪ್ರಯತ್ನ ಪಟ್ಟರು ಸಂಪರ್ಕ ಮಾಡುವುದಕ್ಕೆ ಸಾಧ್ಯವಾಗಿಲ್ಲವೆನ್ನುವ ಮಾತನ್ನು ಅವರು ಹೇಳಿದರು. ಪ್ರತಿಯೊಬ್ಬರದ್ದು ಕೂಡ ಅದೇ ಅನುಭವ, ನನ್ನದು ಕೂಡ ಅದೇ ಅನುಭವವಾಗಿದೆ.

ಯಾವುದೇ ಒಂದು ಇಲಾಖೆಯಲ್ಲಿ ಉತ್ತಮವಾಗಿ ಕೆಲಸವನ್ನು ಮಾಡಬೇಕಾಗಿದ್ದರೆ ಒಂದು 4-5 parameter ಇರುತ್ತದೆ. ಮೊದಲನೆಯದು, Infrastructure. ಅದು buildingಗೆ accommodation ಆಗಿರಬಹುದು. equipments ಆಗಿರಬಹುದು ಮತ್ತು furniture ಆಗಿರಬಹುದು ಹಾಗೂ ಇತರೆ ಇತರೆ ಇರಬಹುದು. ಆಮೇಲೆ ಇಲಾಖೆಯನ್ನು ನಿರ್ವಹಣೆ ಮಾಡುವುದಕ್ಕೆ staff. ಆರೋಗ್ಯ ಇಲಾಖೆಯಲ್ಲಿ technically qualified staff. ಇದನ್ನು ಮೂರನೆಯದು governance. ಇಲ್ಲಿ accommodation ಕೂಡ ಚೆನ್ನಾಗಿದೆ. ಇದಕ್ಕಾಗಿ ಸಾಕಷ್ಟು ಹಣವು ಸಹ ಬರುತ್ತಿದೆ. ನಾನು ಆರೋಗ್ಯ ಸಚಿವನಾಗಿ ಕೆಲಸವನ್ನು ಮಾಡುವಂತಹ ಕಾಲಕ್ಕೆ KHSDPಗೆ ಎಂದು World Bankನಿಂದ ಸುಮಾರು 600 ಕೋಟಿ ರೂಪಾಯಿಗಳು ಬಂದಿತ್ತು. ಆ ಹಣದಿಂದ secondary level ಆಸ್ಪತ್ರೆಗಳನ್ನು ನಾವು develop ಮಾಡಿದ್ದೇವೆ. ಈ ಆರೋಗ್ಯ ಇಲಾಖೆಯಲ್ಲಿ ಮೂರು ಮಟ್ಟದ ಶಿಬಿರ ಇರುತ್ತದೆ. Primary Health Services, Secondary Level Health

Services, Tertiary Level? Health Services, ಈ ಮೂರು ಮಟ್ಟದಲ್ಲಿ ಬೇರೆ ಬೇರೆ ರೀತಿಯ ಸೌಲಭ್ಯಗಳು ಜನರಿಗೆ ಲಭ್ಯವಾಗಿರುತ್ತದೆ. Primary Health Serviceನಲ್ಲಿ ಇನ್ನೊಂದು component ಇರುತ್ತದೆ. That is Public Health Component. ಅಲ್ಲಿ ಕೇವಲ ಚಿಕಿತ್ಸೆಯಷ್ಟೇ ಅಲ್ಲ. ಅಲ್ಲಿ ಚಿಕಿತ್ಸೆಗಿಂತ ಹೆಚ್ಚಾಗಿ Public Health Component ಇರುತ್ತದೆ. ಅಲ್ಲಿ 70% activity at the Primary Health Centre level come under public health. ಅಂದರೆ preventive medicine. Primary Health Services are very, very important. All the National Level Health Schemes are implemented at the Primary Health Level. Plus the schemes devised by the State Government. ಆದರೆ ಇಷ್ಟೊಂದು ಡಾಕ್ಟರ್‌ಗಳ ಕೊರತೆ ಇದ್ದಾಗ ಈ ಸದನಕ್ಕೆ ಉತ್ತರವನ್ನು ಕೊಡುವಂತಹ ಕಾಲಕ್ಕೆ ಮಾನ್ಯ ಸಚಿವರು ಹೇಳುತ್ತಿದ್ದರು. ಸುಮಾರು 997 Specialists ಕೊರತೆ ಇದೆ ಎಂದು ಹೇಳಿದ್ದರು. ಡಾಕ್ಟರ್‌ಗಳ ಕೊರತೆ 1800 ಎಂದು ಹೇಳಿದರು.

(ಈ ಹಂತದಲ್ಲಿ ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ್ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಆಮೇಲೆ ನರ್ಸಸ್ ಕೊರತೆಯಂತೂ ಹೇಳತೀರದು. ಒಂದು ವೇಳೆ ಡಾಕ್ಟರ್‌ಗಳ ಕೊರತೆ ಇದ್ದರೆ ಅದು ನಡೆಯುತ್ತದೆ, ನರ್ಸಸ್ ಕೊರತೆ ಇದ್ದರೆ ಅದು ನಡೆಯುವುದಿಲ್ಲ. ನಾನು ಒಂದು simple exampleನ್ನು ಕೊಡುತ್ತೇನೆ. ಈಗ ಯಾದಗಿರಿ ಜಿಲ್ಲೆಯನ್ನು ತೆಗೆದುಕೊಂಡು ಇದನ್ನು ತಾತ್ವಿಕವಾಗಿ ಘೋಷಣೆಯನ್ನು ಮಾಡಿದ್ದೀರಿ. ಅಲ್ಲಿ Additional District Health Office ಎಂದು ಇದೆ. ಅದನ್ನು ನಾನು review ಮಾಡುವಂತಹ ಕಾಲಕ್ಕೆ ಗೊತ್ತಾಯಿತು. ಬರೀ ನಾಲ್ಕು ತಾಲ್ಲೂಕುಗಳು. ನಾಲ್ಕು ತಾಲ್ಲೂಕಿನಲ್ಲಿ 47 ನರ್ಸಸ್‌ಗಳ ಕೊರತೆ ಇದೆ. ಡಾಕ್ಟರ್ ಕೊರತೆ ಮತ್ತು ನರ್ಸ್‌ಗಳ ಕೊರತೆಯೂ ಇದ್ದಾಗ ರೋಗಿಗಳ ಸೇವೆಯನ್ನು ಮಾಡುವವರು ಯಾರು? ನಾನು ಈಗಲೂ ಸಹ ಹೇಳಿದ್ದೇನೆ, Primary Health Levelನಲ್ಲಿ ಕೇವಲ ಚಿಕಿತ್ಸೆಯಷ್ಟೆ ಅಲ್ಲ. Preventive medicine ಕೆಲಸವು ಸಹ ನಡೆಯುತ್ತದೆ.

Preventation medicine ಎಂದರೆ ಯಾವುವು? Leprosy Eradication Programme, Tuberculosis Eradication Programme. ಮತ್ತು World Health Organizationನಲ್ಲಿ India and Pakistan have become laughing stocks. ಏಕೆಂದರೆ ಎಲ್ಲಾ ದೇಶಗಳಲ್ಲಿಯೂ Tuberculosis control ಮಾಡಿದರೂ ಕೂಡ ಭಾರತ ಮತ್ತು ಪಾಕಿಸ್ಥಾನದಲ್ಲಿ Tuberculosis percentage ಇನ್ನು ಹೆಚ್ಚಾಗುತ್ತಿದೆ. Every seventh man in India is dieing of Tuberculosis. ಇಷ್ಟೊಂದು manpower ಇದ್ದರೂ ಕೂಡ technical know how ತಂತ್ರಗಾರಿಕೆ ಇದ್ದರೂ ಕೂಡ World Bank ಕೂಡ ಕೊಡುತ್ತಿದೆ. ಅದರಲ್ಲೂ ಕರ್ನಾಟಕಕ್ಕೆ ವಿಶೇಷವಾಗಿ ಕೊಡುತ್ತಿದ್ದಾರೆ. ಈ Karnataka Health System Development and Reform Programm ಏನು ಇದೆ, ಅದು ನಿಮಗೆ ಹಿಂದಿನ ಸರ್ಕಾರದಿಂದ ಕೊಟ್ಟಂತಹ ಬಳುವಳಿಯಾಗಿದೆ. ನಾನು personal interest ತೆಗೆದುಕೊಂಡು ಸಾಕಷ್ಟು ಎಲ್ಲಾ ಅಧಿಕಾರಿಗಳನ್ನು ಸ್ವಲ್ಪ ಅದಕ್ಕೆ ಉತ್ತೇಜನವನ್ನು ಕೊಟ್ಟು motivate ಮಾಡಿ ಶೀಘ್ರಗತಿಯಲ್ಲಿ World Bank Programmನ್ನು ನಾವು fulfill ಮಾಡಿದ್ದೇವೆ. ನನ್ನ ಕಾಲದಲ್ಲಿ ಒಂದು ವರ್ಷ ಈ Programmeನ್ನು ಆ World Bank Loanನ್ನು avail ಮಾಡಿದಂತಹ ಪಂಜಾಬ್ ಮತ್ತು ವೆಸ್ಟ್ ಬೆಂಗಾಲ್ ನಮಗಿಂತ ಒಂದು ವರ್ಷ ಮೊದಲೇ 600 ಕೋಟಿ ರೂಪಾಯಿಗಳ ಲೋನ್ ತೆಗೆದುಕೊಂಡಿದ್ದಾರೆ. After two years review ಮಾಡಿದಾಗ ಅವರ performance ಪಂಜಾಬ್‌ದು 40%, ವೆಸ್ಟ್ ಬೆಂಗಾಲ್‌ದು 47%, ಆದರೆ ಕರ್ನಾಟಕದ್ದು ಒಂದು ವರ್ಷ ಆದಮೇಲೆ ನಾವು ಲೋನ್ ತೆಗೆದುಕೊಂಡರೂ ಕೂಡ Karnataka's performance was 83%. Every three months they come and review. ಅದನ್ನು review ಮಾಡಿದ ಮೇಲೆ ಎಷ್ಟು ಸಂತೋಷವಾಯಿತು. World Bank ಕಡೆಯಿಂದ 4 ಕೋಟಿ ರೂಪಾಯಿಗಳ ರೊಕ್ಕವನ್ನು ಕೊಟ್ಟರು. ಈ World Bank Loan Secondary Lavel Hospital Develop ಮಾಡುವುದಕ್ಕೆ Taluk Level & District Level. ಆದರೆ Primary Hospitals, Primary Level Health Services should be improved. ಅದಕ್ಕಾಗಿ ನಾವೇ ಸರ್ವೆ

ಮಾಡುತ್ತೇವೆಂದು ಹೇಳಿ ಸರ್ವೆ ಮಾಡಿ 890 ಕೋಟಿ ರೂಪಾಯಿಗಳನ್ನು ಕೊಟ್ಟರು. ಮಾನ್ಯ ಅಶೋಕ್‌ರವರು Health Minister ಇದ್ದಾಗ ಅದು approve ಆಗಿ ಬಂತು. ಆದರೆ Central Governmentನವರು ಅದನ್ನು ಕೊಟ್ಟಿದಲ್ಲ. ಹಮೀಜ್ ಚೌದರಿ ಆಗ Health Secretary ಆಗಿದ್ದರು. ಅವರು World Bank ಗೆ ಇದನ್ನು forward ಮಾಡುವ ಬಗ್ಗೆ ಸ್ವಲ್ಪ delay ಮಾಡಿದರು. ನಾನು ಏಕೆ delay ಮಾಡಿದ್ದೀರಿ ಎಂದು ಕೇಳಿದಾಗ ಅವರು 'No, already Karnataka State has availed Rs.600 crores under KHSDP. We want to help Rajastan and Madhya Pradesh. Because they are very very backward in health services' ಎಂದರು. But I told him; 'Mr. Chowdary, you are not the chooser. It is the World Bank who choose which State they have to help.' And when I interacted with the World Bank, they said; 'Karnataka has got sound health infrastructure and hence they are in a position to utilize the bank loan. Whereas Madhya Pradesh and Rajastan don't have proper infrastructure and naturally our money will go waste' ಎಂದು ಹೇಳಿ ಮತ್ತೆ Finance Secretary ಯವರನ್ನು ಭೇಟಿಯಾಗಿ ಮತ್ತು ಬೇರೆಯವರನ್ನು ಭೇಟಿಯಾಗಿ ಅದನ್ನು clear ಮಾಡಿಸಿದೆವು. ಅದು ಮಾನ್ಯ ಅಶೋಕ್‌ರವರು Health Minister ಇದ್ದಾಗ ಅದು ಬಂದು implement ಆಯಿತು. ಇದರಿಂದ ಎರಡು ಕಾರ್ಯಕ್ರಮಗಳಿಗೆ ಕೊಟ್ಟಿದ್ದಾರೆ. 1) ನೀವು buildingನ್ನು ಸಹ ಕಟ್ಟಬಹುದು, 35%. 2) Organisation of the Department, the structure through which we deliver the Health Services. 3) Central Governmentನ Scheme ಇವೆ. T.B. Eradication, Leprosy Eradication, Eradication of blindness and Eradication of Malaria, Filaria, Chikun Gunya, Dengue, Communicable diseases, Cholera, these are all National Programmes for the Government of India gives funds. ಇವುಗಳನ್ನು supplement ಮಾಡುವುದಕ್ಕೆ World Bank ನವರು ಎಂತಹ ಉದಾತ್ತ ಭಾವನೆಯಿಂದ ಅವರು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಹಣವನ್ನು ಕೊಡುತ್ತಾರೆ. ಇವತ್ತು

ಇದರ ಬಗ್ಗೆ ಇಂತಹ ಗಂಭೀರವಾದ ಚರ್ಚೆಯು ನಡೆಯುತ್ತಿದೆ. ಆರೋಗ್ಯ ಇಲಾಖೆಯ ಮುಖ್ಯಸ್ಥರೇ ಇಲ್ಲಿ ಕಾಣುತ್ತಿಲ್ಲ. ಈಗ 2 ವರ್ಷಗಳಾಯಿತು. 800 ಕೋಟಿ ರೂಪಾಯಿಗಳ programme implement ಆಗಿ ಈಗಾಗಲೇ 2 ವರ್ಷಗಳು ಆಗಿದೆ. World Bank ನವರು ಇದನ್ನು review ಮಾಡುವ ಸಂಬಂಧ ಆಗಾಗ್ಗೆ ಬರುತ್ತಿರುತ್ತಾರೆ. ನೋಡಿ The Karnataka Government which had a very good record earlier would have to out a sorry figure. 2 ವರ್ಷಗಳಾದರೂ ಕೂಡ ನಾವು ಕೊಟ್ಟಿರುಂತಹ 897 ಕೋಟಿ ರೂಪಾಯಿಗಳು ಸರಿಯಾಗಿ ಉಪಯೋಗವಾಗುತ್ತಿಲ್ಲವೆಂದು ತಿಳಿದುಕೊಂಡು ಅವರು ಮುಂದೆ reportನ್ನು ಮುಂದೆ ಬರತಕ್ಕಂತಹ ಅನುಕೂಲತೆಗಳು ಕೂಡ stop ಆಗುತ್ತದೆ. ಅದಕ್ಕಾಗಿ ಸನ್ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಈ department ಬಗ್ಗೆ ಕಾಳಜಿಯನ್ನು ವಹಿಸಬೇಕು. ಅವರೇನೋ ಉದಾತ್ತಭಾವನೆಯಿಂದ ಕೊಟ್ಟಿರಬಹುದು. ಇಲ್ಲಿ ಹಿಂದುಳಿದ ಜನಾಂಗದವರು ಇದ್ದಾರೆ. ಈ ಆರೋಗ್ಯ ಇಲಾಖೆಯು ಪರಿಸ್ಥರದಲ್ಲಿ ಹೆಚ್ಚಾಗಿ ಇದು ಸೇವೆಯನ್ನು ಕೊಡುವಂತಹದ್ದು, ಇದನ್ನು ಸುಧಾರಣೆಯನ್ನು ಮಾಡಲಿ ಎಂದು ಅವರು ಕೊಟ್ಟಿರಬಹುದು. ನಾವು ಅದರ ಮೇಲೆ ನಿಗಾವನ್ನು ಇಡದೇ ಇದ್ದರೆ ಇಂತಹ ಅನಾಹುತಗಳು ಆಗುವಂತಹ ಪ್ರಸಂಗಗಳು ಬರುತ್ತವೆ. ಏಕೆಂದರೆ, National Health Programmನಲ್ಲಿ ಇಷ್ಟೊಂದು ಹಣವನ್ನು ನಾವು ಬಳಕೆ ಮಾಡಿ, at various levels ಅದರ review ಆಗುವುದನ್ನು ತಿಳಿದುಕೊಂಡು ನೀವು ಆರೋಗ್ಯ ರಕ್ಷಾ ಕಮಿಟಿ ಎಂದು ಮಾಡಿದ್ದೀರಿ. ಇದನ್ನು ಏಕೆ ಮಾಡಿದರು ಅಂದರೆ ಆರೋಗ್ಯ ಇಲಾಖೆ ಸಾಕಷ್ಟು ಹಣವು ಬರುತ್ತಿದೆ. ಕೇವಲ ಅಧಿಕಾರಿಗಳನ್ನು ನಂಬಿ ಕೂರುವುದಕ್ಕಾಗುವುದಿಲ್ಲ. Public Private Participation ಇರಲಿ ಎಂದು ತಿಳಿದುಕೊಂಡು Public representatives ಅನ್ನು include ಮಾಡಿ ಆರೋಗ್ಯ ರಕ್ಷಾ ಕಮಿಟಿ ಎಂದು ಮಾಡಿ Primary Health Centre Levelನಲ್ಲಿ ಮಾಡಿದ್ದೀರಿ. ಇದೇ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ ಮಾಡಿದ್ದೀರಿ. ತಾಲ್ಲೂಕು ಲೆವೆಲ್‌ನಲ್ಲಿ ಮಾಡಿದ್ದೀರಿ, ಜಿಲ್ಲಾ ಲೆವೆಲ್‌ನಲ್ಲಿಯೂ ಸಹ ಮಾಡಿದ್ದೀರಿ ಹಾಗೂ State Levelನಲ್ಲಿಯೂ ಸಹ ಮಾಡಿದ್ದೀರಿ. 2 ವರ್ಷಗಳಾದರೂ ಕೂಡ ಇವರೆಲ್ಲರೂ ಏನು ಮಾಡುತ್ತಿದ್ದಾರೆ? ಕಣ್ಣು ಮುಚ್ಚಿ ಕುಳಿತಿದ್ದಾರಾ? ಇವರೆಲ್ಲಾ

ಏನು ಮಾಡುತ್ತಿದ್ದಾರೆಂದು ನಾನು ಕೇಳುತ್ತಿದ್ದೇನೆ. ಸಾಂಕ್ರಾಮಿಕ ರೋಗಗಳು ಏಕೆ ಹೆಚ್ಚಾಗುತ್ತಿದೆ. ಮಾನ್ಯ ರಾಮಚಂದ್ರಗೌಡರಿಗೆ ಶ್ರೀ ರೋಷನ್‌ಬೇಗ್‌ರವರು complements ಕೊಟ್ಟರು. ಇವರು phone ಮಾಡಿದಾಗ ಅವರು respond ಮಾಡಿದರು ಎಂದು. ಅದು ಹಾಗಲ್ಲ. ಹೈಕೋರ್ಟ್ ಒಂದು judgment ಕೊಟ್ಟಿದ್ದಾರೆ. ಹೈಕೋರ್ಟಿನ ಪುಣ್ಯದಿಂದ ಇವತ್ತು hospitalಗಳು ನಡೆಯುತ್ತಿದೆ. ಇವತ್ತು ಹೈಕೋರ್ಟ್ ನಮ್ಮ ರಕ್ಷಣೆಗೆ ಬರದೆ ಇದ್ದರೆ ಇಡೀ ಕರ್ನಾಟಕದ ತುಂಬಾ ಹಾಹಾಕಾರ ಆಗುತ್ತಿತ್ತು. ಪರಿಸರ ಮತ್ತು ಮಾಲಿನ್ಯ ಮಂಡಳಿಯವರು ಎಲ್ಲಾ ಆಸ್ಪತ್ರೆ ಅಂದರೆ Major Hospitals including Boring Hospital, Victoria Hospital ಗಳಿಗೆ, ಪರಿಸರ ಮಾಲಿನ್ಯ, ನಿಮ್ಮದೆ department ಅದು ಒಂದು ಸರ್ಕಾರದ ಅಂಗ ಸಂಸ್ಥೆ, ಅದು ಸರ್ಕಾರ create ಮಾಡಿರುವಂತಹ ಸಂಸ್ಥೆ immediately Hospitalನ್ನು Close ಮಾಡಿ ಎಂದು notice ಕೊಟ್ಟಿದ್ದಾರೆ. ಏಕೆಂದರೆ, ತ್ಯಾಜ್ಯ ವಸ್ತುಗಳ ವಿಲೇವಾರಿಗೆ ಏನೂ infrastructure ಇಲ್ಲ.

ನಾನು ಇದ್ದಾಗಿನಿಂದಲೂ ಇದು ನಡೆದಿತ್ತು. Central Government ನಿಂದ directions after directions, ಇವತ್ತಿಗೂ ನಾವು ಒಂದು 10% ಅಷ್ಟು ಹೆಜ್ಜೆಯನ್ನೂ ಕೂಡ ಮುಂದಿಡಲಾರದಂಥ ಪರಿಸ್ಥಿತಿಯಲ್ಲಿದ್ದೇವೆ. ಇವತ್ತು corporation ನಿಮ್ಮ ಕೈಯಲ್ಲಿದೆ. corporation ನವರ ಸಹಾಯ ತೆಗೆದುಕೊಂಡು invigilatorಗಳನ್ನು ಹಾಕಿ. ಪ್ರತಿಯೊಂದು ಹಾಸ್ಪಿಟಲ್‌ಗೆ attach ಮಾಡಿ. ಅವುಗಳನ್ನು ವಿಲೇವಾರಿ ಮಾಡಲಿಕ್ಕೆ ಏನು ತೊಂದರೆ? ಮತ್ತೆ ಪರಿಸರ ಮಾಲಿನ್ಯ ಆಗಿದೆ ಎಂದರೆ ಪಾಪ ಅವರು ಏನು ಮಾಡಿದ್ದಾರೆ? ಇವತ್ತು ಆಸ್ಪತ್ರೆಗಳು ಚಿಕಿತ್ಸೆ ಕೊಡುವಂಥ ಕೇಂದ್ರಗಳಾಗಿಲ್ಲ. ನಮ್ಮೆಲ್ಲಾ ಆಸ್ಪತ್ರೆಗಳೂ ಸೋಂಕು ರೋಗವನ್ನು ಹಚ್ಚುವಂಥ ಕೇಂದ್ರಗಳಾಗಿವೆ. ಮತ್ತೆ ಇದೇ ಕಾರಣದಿಂದಲೇ ಚಿಕೂನ್ ಗುನ್ಯಾ, ಮಲೇರಿಯಾ, ಫೈಲೇರಿಯಾ ಮುಂತಾದ ರೋಗಗಳು ಹೆಚ್ಚಾಗುತ್ತವೆ. ತಿಳುವಳಿಕೆ ಕೊಡಲಿಕ್ಕೆ staff ಇಲ್ಲ. ನನಗೆ ತಿಳಿದ ಮಟ್ಟಿಗೆ 17,000 ಸಿಬ್ಬಂದಿಗಳ ಕೊರತೆ ಇದೆ, ನೀವೆಲ್ಲರೂ ಒಪ್ಪುತ್ತೀರಿ ಎಂದೆನಿಸುತ್ತದೆ, ಆರೋಗ್ಯ ಮತ್ತು ಶಿಕ್ಷಣ ಇವೆರಡೂ ಇಲಾಖೆಗಳಿಗೆ recruitment restrictions ಇರಬಾರದು. ಕೇಂದ್ರ ಸರ್ಕಾರದವರು ಚೇಂಜ್ ಮಾಡುತ್ತಿರುತ್ತಾರೆ, ಏಕೆ ಚೇಂಜ್ ಮಾಡುತ್ತಾರೆ? ಹಿಂದಿನ

ಸರ್ಕಾರ ಮಾಡಿದ್ದು ಅವರಿಗೆ ತೃಪ್ತಿ ತರಲಿಲ್ಲ ಅದಕ್ಕೆ ಚೇಂಜ್ ಮಾಡಿದರು. ಮತ್ತೆ ನಾವು ಮಾಡಿದ್ದೇನು? Succeeding Government ಬಂದು ಅವರು ಮಾಡಿದ್ದೇನು? ಅವರೂ ಕೂಡ ಇದೇ ಕೆಲಸವನ್ನು ಮಾಡಿದರೆ ಜನರು ಎಲ್ಲಿಗೆ ಹೋಗಬೇಕು? ಎಲ್ಲಾ ಸರ್ಕಾರದವರ ಹಣೆ ಬರಹ ಇದೇ ಆದರೆ ಅವರು ಎಲ್ಲಿಗೆ ಹೋಗಬೇಕು. Recruitment ಆಗುತ್ತಿಲ್ಲ, ಮಲೇರಿಯಾ, ಫೈಲೇರಿಯಾಗಳು ಏಕೆ ಹೆಚ್ಚಾಗುತ್ತಿದೆ ಎಂದರೆ Junior Health Workers ಇಲ್ಲ. ನನ್ನ ತಾಲ್ಲೂಕಿನಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ, ಕೇವಲ ನಾಲ್ಕು ತಾಲ್ಲೂಕುಗಳಲ್ಲಿ ಹಿರಿಯ ಆರೋಗ್ಯ ಅಧಿಕಾರಿಗಳು 21 ಜನ ಇರಬೇಕಾಗಿತ್ತು. ಮತ್ತೊಂದು ವಿಷಯವೇನೆಂದರೆ Finance Secretary ಕೂಡ ಇಲ್ಲೇ ಕುಳಿತಿದ್ದಾರೆ, ಈಗೇನು ನಾವು structure, numbers of doctors ಆಗಲಿ, Nurses ಆಗಲಿ, ಆರೋಗ್ಯ ಸಹಾಯಕರಾಗಲಿ, ಈ proportion ಅನ್ನು ಯಾವಾಗ ಮಾಡಿದ್ದಾರೆಂದರೆ ಇಪ್ಪತ್ತು ವರ್ಷಗಳ ಹಿಂದೆ ಮಾಡಿದ್ದಾರೆ. ಈಗ ನಾವೇನು ಮಾಡುತ್ತಿದ್ದೇವೆಂದರೆ, ನಾಯಿ ಕೊಡೆಗಳು ಬೆಳೆದ ಹಾಗೆ ಬೆಳೆಯುತ್ತಿವೆ. ನಾನು Health Minister ಆಗಿ ಯಾರಾದರೂ ಬಂದರು, ಅವರನ್ನು please ಮಾಡಲಿಕ್ಕೆ. ನಾನು ಇದ್ದಾಗ 1600 Health Centres ಇದ್ದವು. ಈಗ 2400 Health Centres ಇವೆ. Sub centres ಎಷ್ಟಿದ್ದಾವೆ? ನಾನಿದ್ದಾಗ ಕೇವಲ 6,000 ಇತ್ತು, ಈಗ 8043 ಇವೆ. Community Health Centreನಲ್ಲಿ 30 ಬೆಡ್ಸ್, ಅವನ್ನು ಹೆಚ್ಚಿಗೆ ಮಾಡುತ್ತಲೇ ಇದ್ದೇವೆ, ಹಾಸ್ಪಿಟಲ್ ಗಳನ್ನು ಹೆಚ್ಚಿಗೆ ಮಾಡುತ್ತಲೇ ಇದ್ದೇವೆ. ಇಲ್ಲದಿದ್ದರೆ Minister, Chief Minister popular ಆಗುವುದಿಲ್ಲ. ಹೆಚ್ಚಿಗೆ ಮಾಡುತ್ತಲೇ ಇರುವುದು. Primary Health Centres ನಮ್ಮಲ್ಲಿ Surplus ಆಗಿವೆ. 25,000 ಜನಸಂಖ್ಯೆಗೆ ಒಂದು ಇರಬೇಕಾಗುತ್ತದೆ. ಈಗ ಎಲ್ಲಿದೆ? ಅದರ ಪ್ರಕಾರ ನೋಡಿದರೆ 16,000 ಜನರಿಗೆ ಒಂದು Primary Health Centres ಇದೆ. ನೀವು ಸುಮ್ಮನೆ ಏಕೆ ಮಾಡುತ್ತೀರಿ? ಅಲ್ಲಿ ಸ್ಟಾಫ್ ಇರುವುದಿಲ್ಲ. ಔಷಧಿಗಳು ಇರುವುದಿಲ್ಲ. ನಾವು ಔಷಧಿಗಳಿಗೋಸ್ಕರ ಎಷ್ಟು ಖರ್ಚು ಮಾಡುತ್ತಿದ್ದೇವೆ? ಅದರ ಲೆಕ್ಕಾಚಾರ ಮಾಡುವುದಿಲ್ಲ, ಕೇವಲ mechanically, Minister ಆಗುವುದು, ಅಧಿಕಾರಿಗಳು ಏನು ಹೇಳುತ್ತಾರೆ ಅದರಂತೆ ಮಾಡುವುದು..

ಶ್ರೀ ಅಮರೇಗೌಡ ಬಯ್ಯಾಪುರ : ಈ ಔಷಧಗಳ ಬಗ್ಗೆ ಹೇಳಬೇಕೆಂದರೆ ರಾಜ್ಯ ಸರ್ಕಾರದಿಂದ ಬರುವುದು, ಜಿಲ್ಲಾ ಪಂಚಾಯಿತಿಯಿಂದ ಬರುವಂಥ ಔಷಧ. ಹೋದ ವರ್ಷ ಬರಬೇಕಾದುದು ಇದುವರೆಗೆ ಬಂದಿಲ್ಲ, ಹೋದ ವರ್ಷದ್ದು ಎಂದು ಹೇಳಿ ಈಗ ಕೊಡುತ್ತಿದ್ದಾರೆ. ಅಂದರೆ ಇವರು ಯಾವ ರೀತಿ ಔಷಧವನ್ನು ಖರ್ಚು ಮಾಡುತ್ತಾರೆ? ಹೋದ ವರ್ಷ ಅವರು ಕೊಡಬೇಕಾಗಿರುವಂಥ ಔಷಧವನ್ನು ಈ ವರ್ಷ ಕೊಟ್ಟರೆ ಅದನ್ನು ಖರ್ಚು ಮಾಡಲು ಇರುವ ದಾರಿ ಏನು? ಅದಕ್ಕೆ ದಯವಿಟ್ಟು ಆಯಾಯ ವರ್ಷದ ಅನುದಾನವನ್ನು ಮಾಲಕರೆಡ್ಡಿಯವರು ಹೇಳಿದ ಹಾಗೆ ಶಿಕ್ಷಣ ಇಲಾಖೆ ಮತ್ತು ವೈದ್ಯಕೀಯ ಕ್ಷೇತ್ರಕ್ಕೆ ಹೆಚ್ಚು ಅವಕಾಶವನ್ನು ಕೊಡಬೇಕೆಂದು ಹೇಳಿ ಸನ್ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಇದರ ಬಗ್ಗೆ ಗಮನ ಹರಿಸಬೇಕು. ಏಕೆಂದರೆ ಸುಮಾರು 6,000 Staff Nurse posts ಖಾಲಿ ಇವೆ. ಹೀಗಾದರೆ ಏನು ಮಾಡಲಿಕ್ಕಾಗುತ್ತದೆ? ದಯವಿಟ್ಟು ಅದರ ಕಡೆ ಗಮನಹರಿಸಿ ಅದಕ್ಕೆ ಹೆಚ್ಚು ಆದ್ಯತೆಯನ್ನು ಕೊಡಬೇಕು ಎಂದು ಹೇಳುತ್ತೇನೆ.

ಶ್ರೀ ವೈ.ಎಸ್.ರುದ್ರೇಶ್ ಗೌಡ (ಬೇಲೂರು) : ನಮ್ಮಲ್ಲಿ ರ್‍ಯಾಬಿಸ್‌ನ ಮೆಡಿಸಿನ್ ಇಲ್ಲ ಸ್ವಾಮಿ. ಅಲ್ಲಿ ಸರ್ಕಾರಿ ಆಸ್ಪತ್ರೆಗೆ ನಾಯಿ ಕಡಿದು ಬರುವವರೆಲ್ಲಾ ಬಡವರೇ, ಅಲ್ಲಿ anti Rabies ಮೆಡಿಸಿನ್ ಇಲ್ಲ. ಯಾವ ಕಾರಣಕ್ಕೂ ಮೆಡಿಸಿನ್ ಇಲ್ಲ. ಆಮೇಲೆ ಹೊರಗೆ ಹೋಗಿ ಎರಡು ರೂಪಾಯಿ ವಸೂಲು ಮಾಡುವುದರಲ್ಲಿಯೂ ಮೀಟ್ ಮಾಡಲಿಕ್ಕೆ ಆಗುತ್ತಿಲ್ಲ. ಈಗ ವರ್ಷಕ್ಕೆ ಒಂದೂವರೆ ಲಕ್ಷ ರೂ.ಗಳನ್ನು ಅದಕ್ಕೆ ಕೊಡುತ್ತೇವೆ. ಅಂಥದ್ದರಲ್ಲಿಯೂ ಸಾಕಾಗುವುದಿಲ್ಲ. ಅದಕ್ಕೇನಾದರೂ ಒಂದು ಪರಿಹಾರ ಮಾಡಿ ಸ್ವಾಮಿ. ಏಕೆಂದರೆ ಹಳ್ಳಿಗಳಿಂದ ಬರುವವರೆಲ್ಲಾ ಬಡವರು. ನಾಯಿ ಕಡಿದದ್ದಕ್ಕೆ ಅವರಿಗೆ anti Rabies ಕೊಡಲಿಕ್ಕಾಗಲಿಲ್ಲವೆಂದರೆ ಸರ್ಕಾರಕ್ಕೆ ಇದು ಸರಿಹೋಗುವುದಿಲ್ಲ ಎಂಬುದು ನನ್ನ ಭಾವನೆ.

ಶ್ರೀ ಎ.ಬಿ.ಮಾಲಕರೆಡ್ಡಿ : Public Health ವಿಷಯದಲ್ಲಿಯೂ ಕೂಡ ನಾವು ಫೇಲಾಗಿದ್ದೇವೆ. ಚಿಕಿತ್ಸೆ ಮಾಡುವುದರಲ್ಲಿಯೂ ಕೂಡ ನಾವು ಫೇಲಾಗಿದ್ದೇವೆ. ಏಕೆಂದರೆ ವಿಚಾರಪೂರಿತವಾಗಿ ಇದು ನಡೆಯುತ್ತಿಲ್ಲ. Medicine purchase ಮಾಡುವ ವಿಷಯಕ್ಕೂ ನಾನು ಈಗ ಬರುತ್ತೇನೆ. ಅಲ್ಲಿ ಎಡವಿದ್ದಾರೆ, ಔಷಧ ಇಲಾಖೆಯೊಂದು ರೂಪದರ್ಶಿ ಇರುವ ರೀತಿಯಲ್ಲಿ ಇದ್ದ ಹಾಗೆ ಆಗಿದೆ. ಯಾರು ಅಲ್ಲಿ in charge ಆಗಿ ಬರುತ್ತಾರೆ,

ಅದರ ಹಿಂದೆ ಎಷ್ಟು ಹಣವನ್ನು ಲೂಟಿ ಮಾಡಬೇಕು, ಎಷ್ಟು enjoy ಮಾಡಬೇಕು ಅಷ್ಟೇ. ಔಷಧ ಇಲಾಖೆಯೆಂದರೆ ಹೀಗಾಗಿದೆ, ಎರಡೂ ವರ್ಷವಾಯಿತು, ಪೂರಾ ಹಳಿ ತಪ್ಪಿದೆ, ಇಪ್ಪತ್ತು ವರ್ಷದಿಂದ ಅಲ್ಲಿ well established tested and tried system ಇತ್ತು. Drug purchase ಮಾಡುವುದು, rate contract system ಎಂದು ಇತ್ತು. ಆಯಿತು ಯಾರದೋ ಒಂದು brain ಇದೆ, ಇಲ್ಲಿ ನೂರಾರು ಕೋಟಿ ರೂಪಾಯಿ ಹಣವಿದೆ, ಈ ಹಣದಲ್ಲಿ neat ಆಗಿ ವರ್ಷಕ್ಕೆ 8–10 ಕೋಟಿ ರೂಪಾಯಿಗಳ ಹಣ ಮಾಡಬೇಕು ಎಂದು ತಿಳಿದುಕೊಂಡು ಅವರ brain ನಲ್ಲಿ ಬಂತು. One time purchase ಎಂದು. How do you visualize the entire system here, the type of medicine every hospital requires in the State? ಅವನೆಂಥಾ genius ಇರಬೇಕು, IAS Officer, one time purchase ಎಂದು ಮಾಡಿದ್ದಾರೆ. Rate Contract system ಎಂದರೆ every two year we call for rate contract system and once it is finalized, it operates for two years and if the Government wants, it can extend also. You purchase any time any quantity you required. ಆದರೆ One time purchase ಮಾಡಿ ಏನು ಲಾಭವಿದೆ? ಏಕೆಂದರೆ ನೀವು ಸರ್ಕಾರದಲ್ಲಿ ಅಧಿಕಾರಿ ಗಳನ್ನು frequent ಆಗಿ transfer ಮಾಡುತ್ತೀರಿ, ಹೇಗೂ transfer ನೆಪದಲ್ಲಿ ಹೇಗೂ ಈ Drug Department ನನ್ನ ಕೈಗೆ ಸಿಗುವುದಿಲ್ಲ. ಇರುವಾಗಲೇ 8–10 ಕೋಟಿ ರೂಪಾಯಿಗಳ ಹಣ ಮಾಡಿಬಿಡಬೇಕು ಎಂದು ಈ system ತಂದಿದ್ದಾರೆ. What is the meaning in it? For example, ಈಗ ಯಾದಗಿರಿಯಲ್ಲಿ ಕಾಲರಾ ಬಂತು, ಹುಬ್ಬಳ್ಳಿಯಲ್ಲಿ ಕಾಲರಾ ಬಂತು, ಎಲ್ಲಾ ಕಡೆಯಲ್ಲಿ ಕಾಲರಾ ಬರುವುದಿಲ್ಲ, ಹಾಗೆ ಕಾಲರಾ ಬಂದಾಗ ಆಗ Anribiotics ಖರೀದಿಸಬೇ ಕಾಗುತ್ತದೆ. Preventive measures ಸಲುವಾಗಿ medicines ಕೊಂಡುಕೊಳ್ಳಬೇಕಾ ಗುತ್ತದೆ. Extra Staff mobilize ಮಾಡಬೇಕಾಗುತ್ತದೆ. ಇಂಥವನ್ನು how you can visualize? ಮತ್ತೆ ಆಗ ನೀವು constringency medicine ಬೇಕಾದಾಗ ಇನ್ನೊಂದು ಟೆಂಡರ್ ಕರೆಯಬೇಕಾಗುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಗಳೇ ಆಗ ಇನ್ನೊಂದು ಟೆಂಡರ್ ಕರೆಯಬೇಕಾಗುತ್ತದೆ. ರೇಟ್

ಕಾಂಟ್ರಾಕ್ಟ್‌ನಲ್ಲಿ ಹಾಗೆ ಆಗುವುದಿಲ್ಲ. ಎರಡು ವರ್ಷಗಳಿಂದ ಅದೇ ಟೆಂಡರ್ ಇರುತ್ತದೆ. ಆದ್ದರಿಂದ ಸರ್ಕಾರಕ್ಕೆ ಸಾಕಷ್ಟು saving ಆಗುತ್ತದೆ, misuse ಆಗುವುದಿಲ್ಲ. ಎರಡನೆಯದು ಕೇವಲ ಡ್ರಗ್ಸ್‌ನವರಷ್ಟೇ ಕೊಂಡುಕೊಳ್ಳುವುದಿಲ್ಲ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯಿತಿಯವರು ಕೊಂಡುಕೊಳ್ಳುತ್ತಾರೆ. ವೈದ್ಯಕೀಯ ಶಿಕ್ಷಣ ಇಲಾಖೆಯವರು ಕೊಂಡುಕೊಳ್ಳುತ್ತಾರೆ. The same rate contract operates there also. Threre you do not call for tender. ಅದನ್ನು ಬಿಟ್ಟು, ಈಗ ಏನಾಗುತ್ತದೆಂದರೆ, ಅವರು ಮತ್ತೆ ಟೆಂಡರ್ ಕರೆಯಬೇಕಾಗುತ್ತದೆ. ಆಗ ಅವರಿಗೊಂದು ರೇಟ್, ಇವರಿಗೊಂದು ರೇಟ್. ಒಟ್ಟು ನನಗನ್ನಿಸುತ್ತದೆ ಆ ವಿಲಿಯಮ್ ಶೇಕ್ಸ್‌ಪಿಯರ್ ಹ್ಯಾಮ್ಲೇಟ್‌ನಲ್ಲಿ ಹೇಳಿದಂತೆ – "There is something wrong in the State of Denmark.' Total chaos. ಏಕೆ? ಆ ರಾಜನಲ್ಲಿ ನೀತಿ ಇಲ್ಲ. ತನ್ನ ಅಣ್ಣನನ್ನೇ ಕೊಂದ. ಆ ರೀತಿ ರಾಜನಲ್ಲಿ ನೀತಿ ತಪ್ಪಿದಾಗ ದೇಶ ಹೇಗಾಗುತ್ತದೆ? ಹೀಗಾಗಿ totally ಇದೊಂದು topless Department ಆಗಿದೆ, It is a highly technical Department. It requires lot of understanding. ಮತ್ತೆ ಅದಿಲ್ಲದಿದ್ದಾಗ ಅಲ್ಲಿಗೆ ಯಾರು greedy Officers ಬರುತ್ತಾರೆ, ತಮಗೆ ತಿಳಿದ್ದದನ್ನು ಮಾಡುತ್ತಾರೆ, Fastidious people. Present Health Secretary ಏನೋ ಅವರು ಬಯಸಿ ತೆಗೆದು ಕೊಂಡಿದ್ದಾರೆ. He appears to be a broad minded human. ಏನು ಮಾಡುತ್ತಾರೆ ನೋಡೋಣ. ಆದರೆ ವಿಚಾರಪೂರಿತವಾಗಿ ಇಲಾಖೆ ನಡೆಯುತ್ತಿಲ್ಲ, there is total chaos. ಅದಕ್ಕೆ ನಿಮಗೆ ಚಿಕೂನ್ ಗುನ್ಯಾ, ಮಲೇರಿಯಾ ಎಲ್ಲಾ ರೋಗಗಳು ಹೆಚ್ಚಾಗುತ್ತಿವೆ. ಮಲೇರಿಯಾ ಸಲುವಾಗಿ ಯಾರೋ ಒಂದು ಪ್ರಶ್ನೆಯನ್ನು ಕೇಳಿದ್ದರು. ಮಲೇರಿಯಾ, ಫೈಲೇರಿಯಾ, ಚಿಕೂನ್ ಗುನ್ಯಾ ನಿವಾರಣೆಗೆ ಎಷ್ಟು ಬಂದಿದೆ ಎಂದು ಕೇಳಿದ್ದಕ್ಕೆ ಅವರು 49.00 ಲಕ್ಷ ರೂ.ಗಳು ಎಂದು ಉತ್ತರ ಬಂದಿದೆ. ಇಷ್ಟಕ್ಕೆ ಸಾಕಾಗುತ್ತದೆಯೇ ಕೇವಲ ಕಾರ್ಪೊರೇಷನ್‌ನಲ್ಲಿ 16.00 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದಾರೆಂದು ಮಾನ್ಯ ರೋಷನ್ ಬೇಗ್‌ರವರು ಹೇಳಿದರು. ಇಡೀ ಸಮಗ್ರ ಕರ್ನಾಟಕ ರಾಜ್ಯಕ್ಕೆ 49.00 ಲಕ್ಷ ರೂ.ಗಳು ಎಂದರೆ ಹೇಗಾಗುತ್ತದೆ? ಇಲಾಖೆಯಿಂದ ಇದರ ನಿರ್ಮೂಲನೆಗಾಗಿ ಎಷ್ಟು ಖರ್ಚು ಮಾಡಿದ್ದೀರಿ

ಎಂದು ಕೇಳಿದ್ದಕ್ಕೆ 49.00 ಲಕ್ಷ ರೂ.ಗಳು ಎಂದು ಉತ್ತರ ಕೊಟ್ಟಿದ್ದಾರೆ, ನಾನು ಅದನ್ನು ಸಂಗ್ರಹ ಮಾಡಿ ನೋಡಿದ್ದೇನೆ. ಅದಕ್ಕೆ ತಮ್ಮಲ್ಲಿ ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುವುದೇನೆಂದರೆ ಮೊದಲು Governance ಹೆಚ್ಚು ಮಾಡಿ, Governance ಇಲ್ಲ, Lack of Governance. ನಿಮ್ಮಲ್ಲಿ ಸಾಕಷ್ಟು ಹಣ ಇದೆ, ನಿಮ್ಮಲ್ಲಿ ಅಷ್ಟೇನೂ ಕೊರತೆ ಇಲ್ಲ. ಇದೇ Health Department ತೆಗೆದುಕೊಂಡು ಮತ್ತೆ Previous administration ನಲ್ಲಿ 83% performance ಹೇಗೆ ಮಾಡಿ ತೋರಿಸಿದ್ದೇವೆ? Same Department. A.K.M. ನಾಯಕ್‌ರವರು ಆಗ Health Secretary ಆಗಿದ್ದರು, ಅವರನ್ನು ನಾನು ತೆಗೆದುಕೊಂಡಾಗ ನನಗೆ ಬಹಳ ಮಂದಿ ಹೇಳಿದರು, ಆತ rule minded ಆತನನ್ನು ತೆಗೆದುಕೊಳ್ಳಬೇಡ ಎಂದು ಬಹಳ ಜನ ನನಗೆ advise ಮಾಡಿದರು. ಅದಕ್ಕೆ ನಾನು ನನಗೆ Rule Minded Officer ಬೇಕಾಗಿದ್ದಾರೆ ಎಂದು ಹೇಳಿದೆ. ಏಕೆಂದರೆ ನಮ್ಮ ಉತ್ಸಾಹದಲ್ಲಿ ನಾವು ತಪ್ಪು ಕೂಡ ಮಾಡಬಾರದು. There should be transparency in our functioning. ಅದಕ್ಕೆ ಇದ್ದ ಸಿಬ್ಬಂದಿಯಲ್ಲಿ ನಾವು ಕೆಲಸವನ್ನು ತೆಗೆದುಕೊಳ್ಳುವಂಥದ್ದನ್ನು ಸುಧಾರಿಸಿಕೊಂಡೆವು ಎಂದರೆ automatically ಕೆಲಸ ಮಾಡುತ್ತಾರೆ.

Our officers are good. They rise to the occasion. ಹಾಗೆಂದು ಏನೂ ಇಲ್ಲ. ಈಗ ನಮ್ಮಲ್ಲೇ ದೋಷ ಇದ್ದಾಗ ಅವರು ಏನೂ ಮಾಡುವುದಕ್ಕೆ ಆಗುತ್ತದೆ? ಮಾಸ್ಟರ್‌ಗಳೇ ಮಕ್ಕಳ ಬಗ್ಗೆ ಕಾಳಜಿ ಮಾಡಲಿಲ್ಲವೆಂದರೆ ಮಕ್ಕಳು ಏನು ಮಾಡುತ್ತಾರೆ. ಮಕ್ಕಳು ಆಟ ಆಡುತ್ತಾರೆ. ತುಂಟಾಟ ಮಾಡುತ್ತಾರೆ ಅಷ್ಟೆ. ಉಳಿದಿದ್ದು ಏನು ಆಗುವುದಿಲ್ಲ. ಅದೇ ಕೆಲಸವನ್ನು ಈ departmentನಲ್ಲಿ ನಡೆಸುತ್ತಾರೆ. ಈಗ ದರ್ಶನಿ ಹಾಸ್ಪಿಟಲ್, medical level hospitals - ನಾನು ಹೇಳುತ್ತೇನೆ 6 ಮೆಡಿಕಲ್ ಕಾಲೇಜ್ ಇವೆ. ನಾನು Health Minister ಆಗಿದ್ದಾಗ 65 ಜನ Professor ಬೇಕಾಗಿದ್ದರು. Next year ಮತ್ತೆ 6 ಮೆಡಿಕಲ್ ಕಾಲೇಜು ತರಬೇಕು. ಎಲ್ಲಿಂದ ಅವರಿಗೆ Professorಗಳನ್ನು ತರುತ್ತೀರಿ? ಎಲ್ಲಿಂದ ತರುತ್ತೀರಿ? ನೀವು Lecturers ಅನ್ನು appoint ಮಾಡಬಹುದು, General Duty Medical Officerಗಳನ್ನು appoint ಮಾಡಬಹುದು. ಆದರೆ, Professor

ಗಳನ್ನು ಹೇಗೆ appoint ಮಾಡುತ್ತೀರಿ? Professor ಆಗಬೇಕಾದರೆ ಅವರು ಮೂರು ವರ್ಷಗಳ ಕಾಲ Lecturer ಆಗಿ, 10 ವರ್ಷ Assistant Professor ಆಗಿ ಆಮೇಲೆ Professor ಆಗಬೇಕು. ಹೀಗೆ ಇರುವಾಗ ಅವರನ್ನು ಎಲ್ಲಿಂದ ತರುತ್ತೀರಿ? IMC ಯಲ್ಲಿ ಕಾಲೇಜುಗಳನ್ನು ಕಡಿಮೆ ಮಾಡಿ ಎಂದರೆ ಹೇಗೆ ಕಡಿಮೆ ಮಾಡುತ್ತಾರೆ? ಇದು ಯಾವುದೇ ಆಗಲಿ, ಈಗಾಗಲೇ ಯಾರು ಕೆಲಸ ಮಾಡುತ್ತಿದ್ದಾರೆ ಅವರಿಗೆ promotion ಕೊಡಬೇಕು, Lecturerಗೆ Promotion ಕೊಟ್ಟರೆ Assistant Professor ಆಗುತ್ತಾರೆ. ಮುಂದೆ ಆತ 10 ವರ್ಷ teaching experience ಪಡೆದುಕೊಂಡು Professor ಆಗುತ್ತಾರೆ. ನಿಮ್ಮ Department ನ Officer ಗಳಲ್ಲಿ ಎಷ್ಟು Worst ಚಟ ಇದೆ ಎಂದರೆ, I don't know, ಈಗ IAS officer ಗಿಂತಲೂ ದೊಡ್ಡ Officer ಯಾರು ಇದ್ದಾರೋ ನನಗೆ ಗೊತ್ತಿಲ್ಲ. They are the top officers in the State and the Country. ಅವರಿಗಿಂತಲೂ ಮೇಲೆ ಇನ್ನು ಒಬ್ಬರು ಯಾರಾದರೂ ಇದ್ದರೆ ಹೇಳಿ ಅವರನ್ನೂ ನೋಡೋಣವಂತೆ. ಇಷ್ಟು ಕೂಡ ಅವರಿಗೆ common sense ಇಲ್ಲವೇ? I don't know where they mortgage their common sense. Don't they have patriotism? I want to know. Why the Minister is necessary for all these things? I want to know. Administration ಅವರು ಮಾಡುವುದು. Minister ಮಾಡುವುದಲ್ಲ. Ministerಗಳಿಗೆ ಪಾಲಿಸಿ matters ಬರುತ್ತವೆ. Minister review ಮಾಡಬೇಕು. Minister has to view constantly. It is they who have to run the show and further failure, the Government gets the bad name. Of course, review ಮಾಡಬೇಕು. ಈಗ ಉದಾಹರಣೆಗೆ ರಾಯಚೂರು. ಆ ಒಂದು ರಾಯಚೂರು ಆಸ್ಪತ್ರೆ ಕಟ್ಟಬೇಕಾದರೆ 42 ಕೋಟಿ ರೂಪಾಯಿಗಳಾಗಿದ್ದು, ನಾನು first time Minister ಇದ್ದಾಗ shortage ಆಗಿದ್ದುದನ್ನು ನನ್ನ ಕೈಯಿಂದಲೇ ಹಾಕಿ, Second time Minster ಇದ್ದಾಗ ನನ್ನ ಕೈಯಲ್ಲಿ Inauguration ಮಾಡಿದ್ದೇನೆ. ನಾವು ಅಲ್ಲಿ ಏತಕ್ಕೆ ಮಾಡಿದ್ದೇವೆ? See the concept, why they started super specialty centre at Raichur? Because that area is very very backward.

ಜನರಿಗೆ ಇಲ್ಲಿಗೆ ಬಸ್ಸಿನಲ್ಲಿ ಬರುವುದಕ್ಕೆ ಹಣವಿಲ್ಲ. ರೈಲಿನಲ್ಲಿ ಬರುವುದಕ್ಕೆ ಹಣವಿಲ್ಲ. ಅವರ ಜೊತೆಗೆ attender ಬರುವುದಕ್ಕೆ ಅವರಿಗೆ ಹಣವಿಲ್ಲ. ಬೆಂಗಳೂರಿನಲ್ಲಿರುವ ಜಯದೇವ ಆಸ್ಪತ್ರೆಗೆ ಏನಾದರೂ ಅರ್ಜೆಂಟಾಗಿ ಬರುವುದಕ್ಕೆ ಅವರ ಹತ್ತಿರ ಹಣವಿಲ್ಲವೆಂದು ತಿಳಿದುಕೊಂಡು ಅಲ್ಲಿ 42 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ 16 ಕೋಟಿ ರೂಪಾಯಿಗಳನ್ನು Instrument ಗೆ ಹಾಕಿದರೂ ಏನೂ ಕೆಲಸವಾಗುತ್ತಿಲ್ಲ. ಏಕೆ ಆಗುತ್ತಿಲ್ಲ? ಈಗ Minister ಮೊನ್ನೆ review ಮಾಡಿದ್ದಾರಲ್ಲಾ, He is a Chairman to the Governing Body. ಈ ಕೆಲಸವನ್ನು ಯಾರು ಮಾಡಬೇಕು? ಬಂದು ಒಂದು ವರ್ಷ ಆಯಿತು. ಜನರು ಸರ್ಕಾರವನ್ನು ಏಕೆ Change ಮಾಡಬೇಕು ಹೇಳಿ ನೋಡೋಣ. ಏನಾದರೂ ನಮ್ಮ ಜೀವನದಲ್ಲಿ ಸುಧಾರಣೆ ಆಗುತ್ತದೆ ಎಂದು ಸರ್ಕಾರವನ್ನು ಜನರು Change ಮಾಡಿದ್ದಾರೆ. ಈಗಾಗಲೇ ನಾನು ಹೇಳಿದೆ. ಮಾನ್ಯ ಮುಖ್ಯಮಂತ್ರಿಗಳು ಸದುದ್ದೇಶದಿಂದ ಒಬ್ಬ ಹಿಂದುಳಿದಂಥ ಮನುಷ್ಯರನ್ನು ಮಂತ್ರಿ ಮಾಡಿದ್ದಾರೆ. ಮತ್ತೆ ಅದನ್ನು ಬಡವರಿಗಾಗಿ ಉಪಯೋಗ ಮಾಡಲಿಲ್ಲ ಎಂದರೆ ಹೇಗೆ? ಮತ್ತೆ ಯಾರು improve ಮಾಡಬೇಕು? ಈಗ ಜಯದೇವ ಆಸ್ಪತ್ರೆಗೆ ಎಂದರೆ Chief Minister ಇರುತ್ತಾರೆ, Health Minister ಇರುತ್ತಾರೆ, free treatment ಎಂದು ಹೇಳಬಹುದು.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರಾದ ಜಗದೀಶ್ ಶೆಟ್ಟರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಮೊನ್ನೆ ಯಾದಗಿರಿಯಲ್ಲಿ ಹಾಸ್ಪಿಟಲ್‌ಗೆ 75 ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. I was surprised. ನಮ್ಮ ಲೆಟರ್ ಮೇಲೆ ಬರೆದು ಕೊಟ್ಟಿದ್ದಾರೆ. ಅಲ್ಲಿ ಯಾರು ಬರೆದು ಕೊಡಬೇಕು? ನೀವು ಹಣ ಇಡಬೇಕು. ಅದಕ್ಕೆ 6 ಕೋಟಿ ರೂಪಾಯಿಗಳ ರೊಕ್ಕ ಅಲ್ಲಿ ನಾವು ಇಟ್ಟಿದ್ದೇವೆ. ಡಿ.ಸಿ. ನೇತೃತ್ವದಲ್ಲಿ, ಲೋಕಲ್ ಸಿ.ಇ.ಓ. ನೇತೃತ್ವದಲ್ಲಿ ಮೀಟಿಂಗ್ ಮಾಡಿ ಅದನ್ನು release ಮಾಡಿಸುವುದು. ಅಲ್ಲಿ Health Minister ಇರುವುದಿಲ್ಲ, Chief Minister ಇರುವುದಿಲ್ಲ. ಮತ್ತೆ ಬಡವರಿಗೆ ಯಾರು help ಮಾಡಬೇಕು? ಅವರಿಗೆ 60 ಸಾವಿರ–70 ಸಾವಿರ ರೂಪಾಯಿಗಳನ್ನು

H-252-21

ಹಾಗೂ ಒಂದು ಲಕ್ಷ–ಎರಡು ಲಕ್ಷ ರೂಪಾಯಿಗಳನ್ನು operationಗೆ ಕೊಡುವುದಕ್ಕೆ ಆಗುತ್ತದೆಯೇ? ಹೀಗಾಗಿ ಅಲ್ಲಿ operation ಕಾರ್ಯ ನಡೆಯುತ್ತಿಲ್ಲ. ಎಲ್ಲಾ stop ಆಗಿದೆ. ಮತ್ತೆ ನಾವು ಏಕೆ ಇಲ್ಲಿ ಬಜೆಟ್‌ನಲ್ಲಿ ಓದುತ್ತೇವೆ. ಕಿದ್ವಾಯಿ ಮಾದರಿಯಲ್ಲಿ, ಜಯದೇವ ಮಾದರಿಯಲ್ಲಿ, ರೆವಿನ್ಯೂ ಡಿವಿಜನ್‌ನಲ್ಲಿ, ಕೇಂದ್ರದಲ್ಲಿ ನಾವು Super Specialty ತರುತ್ತೇವೆ ಎಂದು ಮತ್ತೆ ಹೇಳುತ್ತೇವೆ. ಈಗ 62 ವರ್ಷ ಸಾಕಾಗಿಲ್ಲವೇನು ನಮಗೆ? ಚೆನ್ನಾಗಿ ವೈಜ್ಞಾನಿಕವಾಗಿ ವಿಚಾರ ಮಾಡಿ ಕೆಲಸ ಮಾಡುವುದಕ್ಕೆ ಸಾಕಾಗಿಲ್ಲವೇನು? ಏಕೆ ಸಾಕಾಗಿಲ್ಲ ಎಂದು ನಾನು ಕೇಳುತ್ತೇನೆ. ಇದು ಒಳ್ಳೆಯದಲ್ಲ. ಮತ್ತೆ ಹೀಗೆ ಏಕೆ ಇದೆ ನಮ್ಮ society ಎಂದು ಹೇಳುತ್ತೀರಿ. ಕಳ್ಳತನ ನಮ್ಮಲ್ಲಿ ಎಂದು ನಾನು ಹೇಳುವುದಿಲ್ಲ. ಆದರೆ, ಕೆಲಸ ಮಾಡುವುದರಲ್ಲಿ ಮಾತ್ರ ನಾವು fail ಆಗುತ್ತಿದ್ದೇವೆ. ಕೆಲಸ ಮಾಡುವುದರಲ್ಲಿ ನಾವು ಸಂಪೂರ್ಣವಾಗಿ fail ಆಗುತ್ತಿದ್ದೇವೆ. ಆರೋಗ್ಯ ಇಲಾಖೆಗೆ ಬಡವರು ಈ ಸೋಂಕು ರೋಗದ ಕಾರಣದಿಂದ, their vitality is totally defeated. Man-days are lost. ಬಡವರು ಬಡವರಾಗುತ್ತಲೇ ಇದ್ದಾರೆ. ಏಕೆ ಬಡವರಾಗುತ್ತಿದ್ದಾರೆ. ಅವರಿಗೆ ಕೆಲಸ ಸಿಗುತ್ತಿಲ್ಲ. ಈ ಮಲೇರಿಯಾ, Tuberculosis ಅವರ ಪ್ರಾಣವನ್ನು ತೆಗೆದುಕೊಳ್ಳುವುದಿಲ್ಲ. ಆದರೆ, ಮನುಷ್ಯರನ್ನು ಸದೃಢರನ್ನಾಗಿ ಕೂಡ ಮಾಡುವುದಿಲ್ಲ. ಹೀಗಾಗಿ ಅವರು ಕೊರಗಿ ಕೊರಗಿ ಹಾಗೆಯೇ ಸತ್ತು ಹೋಗುತ್ತಾರೆ. ಮಾನ್ಯ ಅಧ್ಯಕ್ಷರೆ, ಈಗ ಶ್ರೀಲಂಕಾ ತೆಗೆದುಕೊಳ್ಳಿ. Infant mortality rate in Srilanka, it was in most unfortunate State for the last 20 years. Because it was devastated by internal war. Even then, the Finance Minister must note. They earmark 9% of year budget to health. Tehre is the reason to see how steady and strong they are. See the common people in Srilanka, how steady how steady they are. You give 5% not 9%. I had fore mix with Advaniji, When he came to deliver speech at Kanaka Jayanthi, our Hon'ble Chief Minister was also sitting there. I saw him. They had fore mix on the dias. "Sir, you are the Deputy Prime Minister of theis mighty Nation. Can this mighty Nation not provide you 4% of health budget? Government of India does not even spend 1%?. Then how can you improve the

general health of the people?' ಈಗ ನಮ್ಮ ಕರ್ನಾಟಕದಲ್ಲಿ ಬರೀ 4 ಪರ್ಸೆಂಟ್ ನಾವು ಖರ್ಚು ಮಾಡುತ್ತಿದ್ದೇವೆ. ಪರವಾಗಿಲ್ಲ. Central Government ಗಿಂತ ಹೆಚ್ಚು ಖರ್ಚು ಮಾಡುತ್ತಿದ್ದೇವೆ ಮತ್ತು Aid ಗಳು ಬರುತ್ತಿವೆ. But ಇಲ್ಲಿ the failure of administration. Failure of meaningful guidance from above. Failure of review. Review meetings ಇಲ್ಲ. ಹಿಂದಿನ ಸರ್ಕಾರಗಳಲ್ಲಿ 83% performance ಎರಡು ವರ್ಷದಲ್ಲಿ ಏಕೆ ಆಯಿತು? I told the Hon'ble Chief Minister, "you give me the son of the soil." I don't know why unfortunately every time I become Health Minister, IAS Officers from some other States become the Health Secretary. "You give me the son of the soil." Of course he gave me and we produced the result. That is the reason why your Government got Rs.897 Crores. Because of the exemplary performance of the Health Department. ಅದಕ್ಕೆ ದಯಮಾಡಿ ತಾವು instead of ಈಗ National Rural Health Mission. 'Helath for all,' is its concept. ಎಲ್ಲಕ್ಕಿಂತಲೂ ಮುಖ್ಯ ಅವರು address ಮಾಡುವುದು ಏನು ಎಂದರೆ, ತಾಯಿಯ ಆರೋಗ್ಯ ಮತ್ತು ಮಕ್ಕಳ ಆರೋಗ್ಯ ಕಾಪಾಡುವುದು. Infant mortality rate in the village is 65% ನಿಮ್ಮ ಅಂಕಿ-ಸಂಖ್ಯೆಯನ್ನು ನಾನು ತೆಗೆದುಕೊಂಡಿದ್ದೇನೆ. ಇದು ನನ್ನದಲ್ಲ. ಸಿಟಿಯಲ್ಲಿ 25% ಇದೆ. ಹಳ್ಳಿಯಲ್ಲಿ 65% ಇದೆ. Average 48% ಎಂದು ನೀವು ಬರೆದಿರಿ. ಆದರೆ ಮಾನ್ಯ ಮುಖ್ಯಮಂತ್ರಿಗಳು ಯಾವಾಗಲೂ ಹೇಳುತ್ತಿರುತ್ತಾರೆ.

ಡಾ: ಬಗಲಿ ಸಾರ್ವಭೌಮ ಸಾತಗೌಡ : ಅದು 64%, 65%, ಅಲ್ಲ.

ಡಾ: ಎ.ಬಿ.ಮಾಲಕರೆಡ್ಡಿ : ಹೌದು 64% Figures vary. ನಾನು average ಅನ್ನು ಹೇಳುತ್ತಿಲ್ಲ. ಗ್ರಾಮಾಂತರದಲ್ಲಿ 64% ಅಥವಾ 65% ಸಿಟಿಯಲ್ಲಿ 25% ಎಂದು ಸರ್ಕಾರದವರು performance budgetನಲ್ಲಿ ಕೊಟ್ಟಿದ್ದಾರೆ. ಅದನ್ನು ನಾನು ಹೇಳುತ್ತಿದ್ದೇನೆ. Averageನಲ್ಲಿ 48% ಎಂದು ಕೊಟ್ಟಿದ್ದಾರೆ. ಇರಲಿ. ಆದರೆ, ನಮ್ಮ concern ಇರುವುದು ಹಳ್ಳಿಗಳ ಬಗ್ಗೆ. World Bankನವರು Specific ಆಗಿ Rs.897 crores ಎಂದು ಕೊಟ್ಟಿದ್ದಾರೆ.

ಮಾನ್ಯ ಈಶ್ವರಪ್ಪನವರೇ, ಇದನ್ನು Primary Health Centre and public health at village level, that too remote villages, where people don't have access to health services. ಅವರಿಗೇ ಖರ್ಚು ಮಾಡಬೇಕೆನ್ನುವ ನಿರ್ದೇಶನವಿದೆ. ಅಲ್ಲಿ 65 ಮಕ್ಕಳು ಸಾಯುತ್ತಾರೆ. ಒಂದು ಸಾವಿರ delivery ಆದರೆ 65 ಮಕ್ಕಳು ಸಾಯುತ್ತಾರೆ. ಒಂದು ಸಾವಿರ delivery ಆದರೆ ಮೂವರು ತಾಯಂದಿರು ಸಾಯುತ್ತಾರೆ. ಆದರೆ, ideal ಏನು ಇರಬೇಕು ಎಂದರೆ, one percent ಇರಬೇಕು. ಅಂಕಿ-ಸಂಖ್ಯೆ ಆಧಾರದ ಮೇಲೆ ನಮ್ಮಲ್ಲಿ 3 ಜನ ಸಾಯುತ್ತಿದ್ದಾರೆ. ಅದಕ್ಕೆ ನೀವು ಇದನ್ನು strengthen ಮಾಡುವ ಬದಲು ಇನ್ನೂ ಇದನ್ನು ವೀಕ್ ಮಾಡುತ್ತಿದ್ದೀರಿ. ಮತ್ತೆ Primary health centre building ಕಟ್ಟುವುದಕ್ಕೆ, sub center ಕಟ್ಟುವುದಕ್ಕೆ ಇನ್ನೂ ಮೂರು ಸಾವಿರ sub center building ಅನ್ನೇ ನಾವು ಕಟ್ಟಿಲ್ಲ. ಬರೀ sanction ಮಾಡುವುದೇ ಆಗಿದೆ. ಯಾರು Minister ಆಗುತ್ತಾರೆ ಅವರು ನನ್ನ ಕಾಲದಲ್ಲಿ ಇಷ್ಟು ಮಾಡಿದ್ದೇವೆ ಎಂದು ಹೇಳುವುದು. ಹೈಸ್ಕೂಲ್‌ಗಳನ್ನು ಕೊಡುವುದೇ ಕೊಡುವುದು. ಆದರೆ, building, Head Master ಹಾಗೂ Teacher ಇರುವುದಿಲ್ಲ. ಕೊಡುವುದನ್ನೇ ಕೊಡುವುದು. ಯಾವುದೇ ವಿವೇಚನೆ ಇಲ್ಲ. ಮೊದಲೇ ನೀವು expert ಅಲ್ಲ ಬಂದ ಮೇಲಾದರೂ ಅರ್ಥಮಾಡಿಕೊಳ್ಳಬೇಕಲ್ಲವೇ? There are experts to help us, to guide us. ಅದಕ್ಕೆ ಮೊದಲು ratio ಹೆಚ್ಚಿಗೆ ಮಾಡಿ. ಮೊದಲು patient–doctor ratio ಮಾಡಿ, extra doctor appointmentಗೆ proposal ಬಂದಾಗ Finance Secretary must approve with alacrity. He should approve with alacrity. ನಾಳೆ 40 ನರ್ಸಸ್ ಅನ್ನು ತೆಗೆದುಕೊಂಡು ಬನ್ನಿ. ಕೇವಲ 47 ಮಂದಿ ನರ್ಸ್‌ಗಳು ಇದ್ದಾರೆ. ನೀವು 20 ವರ್ಷದಿಂದ ಮಾಡಿದ ratio ನಲ್ಲಿಯೇ ಇನ್ನೂ ನಮಗೆ 50% ಸ್ಟಾಫ್ ತುಂಬಲಿಕ್ಕೆ ಆಗಲಿಲ್ಲ. Bed strength ಹೆಚ್ಚಾಗುತ್ತದೆ. ಆದರೆ, ಡಾಕ್ಟರ್ಸ್, ನರ್ಸ್‌ಗಳ ಸಂಖ್ಯೆ ಹೆಚ್ಚು ಮಾಡಿಲ್ಲ. ಏಕೆ ಹೆಚ್ಚು ಮಾಡಲಿಲ್ಲವೆಂದರೆ, ಹಣಕಾಸು ಇಲಾಖೆಯಿಂದ approve ಆಗಿಲ್ಲವೆಂದು ಹೇಳುತ್ತಾರೆ. ಅದಕ್ಕೆ ಮೊದಲು ನಾವು war footingನಲ್ಲಿ ಕೆಲಸ ಮಾಡಬೇಕಾಗಿದ್ದರೆ,

ಸದೃಢಕಾಯ ಆರೋಗ್ಯವಂತ ಜನಾಂಗದವರನ್ನು ನಾವು ತಯಾರು ಮಾಡೋಣ. ಅವರು ತಾವಾಗಿಯೇ ದುಡಿದುಕೊಳ್ಳುತ್ತಾರೆ. After the liberalization, ಈಗ GDP level ಹೆಚ್ಚು ಆಗಿಲ್ಲವೇ/ ಹೆಚ್ಚಾಗಿದೆಯಲ್ಲವೇ? 9%ಗೆ ಹೋಗಿತ್ತು, world recession ಆದ ಮೇಲೆ ಸ್ವಲ್ಪ ಕಡಿಮೆಯಾಗಿದೆ. ಈ ವರ್ಷ ಮತ್ತೆ 8%ಗೆ ಮುಟ್ಟಬಹುದೆಂದು ಹಣಕಾಸು ಸಚಿವರು statement ಕೊಟ್ಟಿದ್ದಾರೆ. ಜನರ ಕೈಯಲ್ಲಿ ಶಕ್ತಿಯಿದೆ, ಹೆಚ್ಚು ಶಿಕ್ಷಣವನ್ನು ಹೊಂದುತ್ತಿದ್ದಾರೆ, experts ಹೆಚ್ಚಾಗಿದ್ದಾರೆ, ಹೀಗಾಗಿ ಜನರು ಉಪಯೋಗ ಮಾಡಿಕೊಳ್ಳುತ್ತಾರೆ.

ಅಧ್ಯಕ್ಷರು : ಡಾ.ಎ.ಬಿ. ಮಾಲಕರೆಡ್ಡಿಯವರೆ, time ಆಯಿತು.

ಡಾ: ಎ. ಬಿ. ಮಾಲಕರೆಡ್ಡಿ : ಸರ್ಕಾರವು ತಕ್ಷಣ ಮಾಡಬೇಕಾದ ಕೆಲಸ ವೇನೆಂದರೆ, Drug purchase Departmentನಲ್ಲಿ ಮೊದಲು rate contract ಏನಿತ್ತು ಅದು ಆರೇಳು ತಿಂಗಳು ತೆಗೆದುಕೊಳ್ಳುತ್ತದೆ. 15–30 ವರ್ಷಗಳ ಹಿಂದೆ ಏನು ಹಳೆಯ ಪದ್ಧತಿ ಇತ್ತು, it was a sound system. ಆ rate contract system ನಿಂದ ಅದನ್ನು ತಾವು ಮಾಡಿ, ನಿಮಗೆ ಏನಾದರೂ contingency fund ಬೇಕಾಗಿತ್ತೆಂದರೆ, Karnataka Transparency in Public Procurement Act ನ ಅಡಿಯಲ್ಲಿ, 4G ನಲ್ಲಿ emergencyಗೆ ನೀವು ಏನು contingency purchase ಮಾಡಬೇಕಾಗಿದೆಯೋ ಅದನ್ನು ಮಾಡಬಹುದು. Nothing prevents you from purchasing a large stock at a time in contingency when you require. ನಮ್ಮಲ್ಲಿ ಒಂದು ಸಲ ಹೀಗೆ ಪ್ರಾರಂಭವಾಯಿತು, ಯಾವ ಕಂಪನಿ drug supply ಮಾಡುತ್ತಿತ್ತು, ಅಲ್ಲಿ strike ಆಯಿತು L1, lowest ಇದ್ದಾಗ, ಅದರ Next L2, next lowest ಯಾರಿದ್ದರು ಅವರಿಗೆ ಈ system ನಲ್ಲಿ advantage. ಅವರಿಗೆ ನಾವು ಈ order ಅನ್ನು place ಮಾಡಬಹುದು. ಆದರೆ, one time purchase ಮಾಡಬೇಕೆಂದು ಸಿದ್ಧ ಮಾಡುತ್ತಿದ್ದಾರೆ, ಅದರಲ್ಲಿ ಹಾಗೆ ಆಗುವುದಿಲ್ಲ. ಮತ್ತೆ ಇನ್ನೊಂದು ಟೆಂಡರ್ ಅನ್ನು ಕರೆಯಬೇಕಾಗುತ್ತದೆ. ಆದರೆ, ಹಳೆ ಟೆಂಡರ್ system ಪ್ರಕಾರ, L3 ಗೆ ನೀವು ಹೋಗಬೇಕಾಗುತ್ತದೆ. Strike, lock-out ಇದ್ದರೆ L2 ಗೆ order

place ಮಾಡಿ, storeನಲ್ಲಿ drugs ಅನ್ನು ಯಾವಾಗಲೂ ಸಂಪೂರ್ಣವಾಗಿ ತಾವು ಇಡಬಹುದು. ಇದರಿಂದ ಜನರಿಗೆ ಅನುಕೂಲವಾಗುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಗಳೇ, ನನ್ನ ಮತಕ್ಷೇತ್ರ, ಎರಡು ಹೊಳೆಗಳ ನಡುವೆ ಬರುತ್ತದೆ. ಭೀಮಾ ಮತ್ತು ಕೃಷ್ಣಾ. ಅಲ್ಲಿ 11 lift irrigation ಇವೆ. ಸರ್ಕಾರ 11 lift irrigation ಗೆ ಎಷ್ಟು ಖರ್ಚು ಮಾಡಿರಬಹುದೆಂದು ಎನ್ನುವುದನ್ನು ತಾವೇ ಲೆಕ್ಕ ಹಾಕಿ. ಆದರೆ ಅಲ್ಲಿ ಒಂದೇ ಒಂದು ನೂರು ಎಕರೆ irrigation ಆಗುತ್ತಿಲ್ಲ. ಸರ್ಕಾರವನ್ನು ಕೇಳಿದರೆ, ಮೊದಲನೆಯದಾಗಿ, ಇದುವರೆಗೂ AFCT Bill ಕೊಟ್ಟಿಲ್ಲವೆಂದು ಹೇಳುತ್ತಾರೆ. ಎರಡನೆಯದಾಗಿ, ಮೋಟಾರುಗಳು ಕೆಟ್ಟುಹೋಗಿವೆ ಅವುಗಳ ರಿಪೇರಿ ಮಾಡುವುದಕ್ಕೆ ಹಣವನ್ನು ಕೊಟ್ಟಿಲ್ಲ. ಒಂದು ಊರಿನಲ್ಲಿ ಬಹಳ ಜಗಳವಾಡಿದರು ಎಂದು ಹೇಳಿ ನಮ್ಮ personal ಹಣ ಕೊಟ್ಟು ರಿಪೇರಿ ಮಾಡಿಸಿದ್ದೇವೆ. ಹಾಗಿದಿದ್ದರೆ ನೀವು ಮಾಡುತ್ತಾ ಇರಲಿಲ್ಲ. ಮುಂದೆ ಮಾಡುವುದಕ್ಕೆ ಹೋಗಬೇಡಿ. ಹಿಂದೆ invest ಮಾಡಿದ್ದರೆ, ಅದರ ಉಪಯೋಗ ಪಡೆಯಬೇಕಾಗಿತ್ತಲ್ಲವೇ? Food Production ಹೆಚ್ಚಾಗಬೇಕೆಂದರೆ ಹೇಗೆ ಆಗುತ್ತದೆ?

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಅಫಜಲ್‌ಪುರ) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ, ಗುಲ್ಬರ್ಗಾ ಜಿಲ್ಲೆಯಲ್ಲಿ ಸುಮಾರು 30 ರಿಂದ 35 ರವರೆಗೆ ಏತ ನೀರಾವರಿ ಯೋಜನೆಗಳಿವೆ. ವಿದ್ಯುತ್ ಬಿಲ್ ಕಟ್ಟದೇ ಏತ ನೀರಾವರಿ ಯೋಜನೆಗಳೆಲ್ಲವನ್ನೂ ಈಗ ನಿಲ್ಲಿಸಿದ್ದಾರೆ. ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಗಳು ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಏಕೆಂದರೆ, ಇದು ಬಹಳ ಪ್ರಾಮುಖ್ಯವಾದುದು. ಬ್ಯಾರೇಜ್ ಗಳನ್ನು ಮಾಡಿದ್ದೇವೆ. ಮೊದಲು ನೀರು ಇರುತ್ತಿರಲಿಲ್ಲ. Lift irrigation ಮುಖಾಂತರ ನೀರು ಕೊಡುವಂತಾಗುತ್ತದೆ. ಮೋಟರ್‌ಗಳ system ಎಲ್ಲಾ ಕೆಟ್ಟುಹೋಗಿದೆ. ದಯವಿಟ್ಟು ವಿಶೇಷವಾಗಿ ಇದರ ಬಗ್ಗೆ ಚರ್ಚೆ ಮಾಡಿ. Lift irrigation ಏರಿಯಾದಲ್ಲಿ ಬರುವ ರೈತರ ಒಂದು ಸೊಸೈಟಿ ಮಾಡುವುದರ ಮುಖಾಂತರ ಎಲ್ಲಾ lift irrigationಗಳನ್ನು ಪುನಃಶ್ಚೇತನ ಮಾಡಿ ವ್ಯವಸ್ಥೆ ಮಾಡಿಕೊಟ್ಟರೆ, ಸಾಕಷ್ಟು 4–5 ಸಾವಿರ ಎಕರೆಗೆ ನೀರಾವರಿಯಾಗುತ್ತದೆ.

ಡಾ: ಎ. ಬಿ. ಮಾಲಕರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ, ಈಗ ಗುಲ್ಬರ್ಗಾದಲ್ಲಿ ಡಿ.ಸಿ.ಯಿಂದ ರಿಪೋರ್ಟ್ ಬಂದಿರಬಹುದು, ಬಹಳ ಗಂಭೀರ ಸ್ವರೂಪದ ಅಭಾವ ಪರಿಸ್ಥಿತಿ ಇದೆ. ಒಂದು ಹನಿ ಮಳೆಯಿಲ್ಲ. ಈಗ ಆಷಾಡ ಇತ್ತು. ಆಷಾಡದಲ್ಲಿ ಗಾಳಿ ಬೀಸಿ, ಬೀಸಿ, ಇದ್ದ ಬೆಳೆಗಳೂ ಕೂಡ ಪೂರ್ಣವಾಗಿ ಒಣಗಿ ಹೋಗುತ್ತಿವೆ. ಜನರಿಗೆ ಪಡಿತರ ಚೀಟಿ ಕೊಡಬೇಕೆಂದು ನೀವು ನೆಮ್ಮದಿ ಕೇಂದ್ರಗಳ ಮುಖಾಂತರ ಅರ್ಜಿ ಸ್ವೀಕಾರ ಮಾಡಿದಿರಿ. ಈಗ ಅದು ಇಲ್ಲ. Real survey ನಡೆದಿದೆ ಎಂದು ತಿಳಿದುಕೊಂಡು ಈಗ ಆ ಪಡಿತರ ಚೀಟಿಯನ್ನು temporary ಆಗಿ ಕೊಡುತ್ತಾರೆ. ಆದರೆ ಅಲ್ಲಿ ವಿತರಣೆಯಾಗುತ್ತಿಲ್ಲ. ಮೊದಲೇ ಅಭಾವ ಪರಿಸ್ಥಿತಿ, ಜನರಿಗೆ ಕೂಲಿ ಸಿಗುತ್ತಿಲ್ಲ. ಜನರಲ್ಲಿ ಹಣವಿಲ್ಲ. ಅಲ್ಪ ಸ್ವಲ್ಪ ಹಣ ಸಂಪಾದಿಸಿದರೂ ಕೂಡ ಪಡಿತರ ಅಂಗಡಿಗೆ ಹೋದರೆ, ಅಲ್ಲಿ ಪಡಿತರ ಕೊಡುತ್ತಿಲ್ಲ. ಆದುದರಿಂದ ಸರ್ಕಾರದವರು ತಕ್ಷಣವೇ ಕಾಮಗಾರಿಗಳ ಕೆಲಸವನ್ನು ಕೈಗೊಳ್ಳಬೇಕು. ನೀರು ಇಲ್ಲದಲ್ಲಿ ಕೊಳವೆಬಾವಿಗಳನ್ನು ತೋಡಿಸಬೇಕು. ಡಿ.ಸಿ.ಗೆ order ಮಾಡಿ, ಗುಲ್ಬರ್ಗಾ ಬರಪೀಡಿತ ಪ್ರದೇಶವೆಂದು ತಿಳಿದುಕೊಂಡು ತಾವು ಘೋಷಣೆ ಮಾಡಿ, ಸಾಕಷ್ಟು ಶೀಘ್ರಗತಿಯಲ್ಲಿ ಕೆಲಸವನ್ನು ಕೈಗೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಯು.ಟಿ.ಖಾದರ್ : ಮಾನ್ಯ ಅಧ್ಯಕ್ಷರೆ, ಕರಾವಳಿ ಜಿಲ್ಲೆಯ ಬಗ್ಗೆ ಎರಡೇ ನಿಮಿಷ ಅವಕಾಶ ಕೊಡಿ ಪ್ರಸ್ತಾಪಿಸುತ್ತೇನೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಎದ್ದು ನಿಂತಿದ್ದಾರೆ. ಅವರು ಮಾತನಾಡಲಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ರೇವಣ್ಣನವರು 20 ನಿಮಿಷ ಮಾತನಾಡುತ್ತಾರಂತೆ, ನಾನು 5 ಗಂಟೆಗೆ ಪ್ರಾರಂಭ ಮಾಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ) : ಮಾನ್ಯ ಅಧ್ಯಕ್ಷರೆ, 2009-10ನೇ ಸಾಲಿನ ಸುಮಾರು 25 ಬೇಡಿಕೆಗಳ ಮೇಲೆ ಸದನದಲ್ಲಿ ನಾವು ಚರ್ಚೆ ಮಾಡಬೇಕಾಗಿದೆ. ನಿಯಮಾವಳಿ ಪ್ರಕಾರ ಬೇಡಿಕೆ ಮೇಲೆ ಚರ್ಚೆ ಮಾಡುವಂಥ ಸಂದರ್ಭದಲ್ಲಿ ಕನಿಷ್ಠ 15 ದಿವಸ ಕಾಲಾವಕಾಶ

ಕೊಡಬೇಕಾಗಿತ್ತು. ಸದನವು 9ನೇ ತಾರೀಖಿಗೆ ಪ್ರಾರಂಭವಾಗಿ 24ನೇ ತಾರೀಖಿಗೆ ಮುಗಿಸಬೇಕೆಂದು ಇತ್ತು. 9ನೇ ತಾರೀಖಿನಿಂದ 24ನೇ ತಾರೀಖಿನವರೆಗೆ ಅಂದರೆ, 12 ದಿವಸಗಳ ಕಾರ್ಯಕ್ರಮವಾಗಿದೆ. ನಿಯಮಾವಳಿ ಪ್ರಕಾರ ಕನಿಷ್ಠ ಒಟ್ಟು 15 ದಿವಸಗಳು ಇರಬೇಕೆಂದು ಇದೆ. ಆದರೆ ಅದನ್ನು ಮಾಡಿಲ್ಲ. ಬಿಎಸಿಯಲ್ಲಿ 29ನೇ ತಾರೀಖಿನವರೆಗೂ ಸದನ ನಡೆಯಬೇಕೆಂದು ನಿರ್ಣಯ ಮಾಡಿದಿರಿ. ಕನಿಷ್ಠ ಅಧಿವೇಶನವನ್ನು ಆಗಸ್ಟ್ 10ನೇ ತಾರೀಖಿನವರೆಗೂ ಮಾಡಬೇಕೆಂದು ನಾನು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರ ಬೇಡಿಕೆಯಿತ್ತು. ಆದರೆ, ಸರ್ಕಾರ ಕಾರಣಾಂತರದಿಂದ ಇದನ್ನು ಮಾಡಿಲ್ಲ. ಅದಕ್ಕೆ ಮುಂದೆಯಾದರೂ ಮಾಡಲಿ ಎಂದು ಹೇಳಿ, ಉದ್ದೇಶಪೂರ್ವಕವಾಗಿಯೋ ಅಥವಾ ಕಾರಣಾಂತರವಾಗಿಯೋ ಸಮಯದ ಅಭಾವವಿದೆ. ಅದು ಸರ್ಕಾರಕ್ಕೆ ಬಿಟ್ಟಿದ್ದು. ಬೇಡಿಕೆ ಸಂಖ್ಯೆಯಲ್ಲಿ ಮೊದಲನೆಯದ್ದು ಕೃಷಿ ಇಲಾಖೆಗೆ ಕೊಟ್ಟಿದ್ದೀರಿ. ಸನ್ಮಾನ್ಯ ಮುಖ್ಯಮಂತ್ರಿಗಳು ರೈತರ ಹೆಸರಿನಲ್ಲಿಯೇ ಪ್ರಮಾಣ ವಚನ ಸ್ವೀಕಾರ ಮಾಡಿದ್ದಾರೆ. ಒಂದು ಉದಾಹರಣೆಯನ್ನು ಕೊಡಬೇಕಾಗುತ್ತದೆ. ಬಿಜಾಪುರ ಜಿಲೆಯ ಕಬ್ಬು ಬೆಳೆಗಾರರ ಹೋರಾಟ ಸಮಿತಿ. ದಿನಾಂಕ: 10.6.2009 ಸನ್ಮಾನ್ಯ ಯಡಿಯೂರಪ್ಪನವರು, ಮುಖ್ಯಮಂತ್ರಿಗಳು, ಕರ್ನಾಟಕ ರಾಜ್ಯ ಸರ್ಕಾರ, 2006-07ನೇ ಸಾಲಿನಲ್ಲಿ ಕಾರ್ಖಾನೆಗೆ ವರ್ಗಾವಣೆಯಾಗಿ ಉಳಿದ ಕಬ್ಬಿನ ಪರಿಹಾರವನ್ನು ಬಿಡುಗಡೆ ಮಾಡುವ ಬಗ್ಗೆ. ದಿನಾಂಕ: 18-2-2009ರ ಸಂಪುಟ ಸಭೆಯಲ್ಲಿ 31 ಕೋಟಿ ರೂಪಾಯಿ ಪರಿಹಾರ ಕೊಡುವುದಾಗಿ ಈ ಅರ್ಜಿಯಲ್ಲಿ ಎಲ್ಲವೂ ತಿಳಿಸಿದ್ದಾರೆ. ಇದಲ್ಲದೇ ಒಂದು ಸರ್ಕಾರಿ ಆದೇಶವನ್ನೂ ಹೊರಡಿಸಿದ್ದಾರೆ. 12 ತಿಂಗಳು ಪೂರೈಸದ ಪಕ್ಷದಲ್ಲಿ ಕಟಾವು ಆಗದ ಜಮೀನಿನಲ್ಲಿ ಉಳಿದಿರುವ ಕಬ್ಬಿನ ರೈತರಿಗೆ ಪ್ರತಿ ಹೆಕ್ಟೇರ್‌ಗೆ 25 ಸಾವಿರ ರೂಪಾಯಿ ಸಹಾಯಧನ ಎಂದು ಹೇಳಿ, ಆನಂದ್ ಕುಮಾರ್ ಪೀಠಾಧಿಕಾರಿಗಳು, ಸಕ್ಕರೆ ಮತ್ತು ವಾಣಿಜ್ಯ ಕೈಗಾರಿಕೆ ಇಲಾಖೆ 13-06-2007ರಲ್ಲಿ ಒಂದು ಸರ್ಕಾರಿ ಆದೇಶವನ್ನು ಹೊರಡಿಸಿದ್ದಾರೆ. ಇವತ್ತು ಸುಮಾರು 14 ಜಿಲ್ಲೆಗಳಲ್ಲಿ ಕಬ್ಬು ಬೆಳೆಗಾರರು ಇದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ಚುನಾವಣೆ ಸಂದರ್ಭದಲ್ಲಿ ಬಿಜಾಪುರ ಜಿಲ್ಲೆಗೆ ಹೋದಂಥ ಸಂದರ್ಭದಲ್ಲಿ ಬಿ.ಜೆ.ಪಿ. ಅಧಿಕಾರಕ್ಕೆ ಬಂದರೆ, ಇಲ್ಲಿಯ ಕಬ್ಬು ಬೆಳೆಗಾರರಿಗೆ ಪರಿಹಾರ ಕೊಡುವುದಾಗಿ ಹೇಳಿದ್ದಾರೆ.

ನಾವು ಇಲ್ಲದೇ ಇರುವುದನ್ನು ಹೇಳುವುದಕ್ಕಾಗುವುದಿಲ್ಲ. ಇಲ್ಲದಿದ್ದರೆ, ದಾಖಲೆ ಇದ್ದರೆ, ದಾಖಲೆ ಸಮೇತ ಕೊಡಿ ಎಂದು ಕೇಳುತ್ತಾರೆ. ಅದಕ್ಕೋಸ್ಕರ, ಪತ್ರಿಕೆಯಲ್ಲಿ ಬಂದಿರುವುದನ್ನು ಹೇಳುತ್ತಿದ್ದೇನೆ. ***"ವಿಜಯ ಕರ್ನಾಟಕ"*** ಪತ್ರಿಕೆಯಲ್ಲಿ ವಿಧಾನಸಭಾ ಚುನಾವಣಾ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿ ಗಳು ಭಾಷಣ ಮಾಡಿದ್ದಾರೆ. ಬಿಜಾಪುರ ಜಿಲ್ಲೆ 2007 ಹಂಗಾಮಿನಲ್ಲಿ ಕಾರ್ಖಾನೆಗೆ ಸಾಗಾಣಿಕೆಯಾಗದೇ ಉಳಿದ ಕಬ್ಬಿನ ಪರಿಹಾರವಾಗಿ 31 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲು ಫೆಬ್ರವರಿಯಲ್ಲಿ ನಡೆದ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳಲಾಗಿತ್ತು. ಸರ್ಕಾರ ಹಣ ಮಂಜೂರು ಮಾಡಿದೆ. ಕೆಲವೇ ದಿನಗಳಲ್ಲಿ ಪರಿಹಾರದ ಚೆಕ್ ವಿತರಣೆಯಾಗುವುದೆಂದು ಮುಖ್ಯಮಂತ್ರಿ ಯಡಿಯೂರಪ್ಪನವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಗೋವಿಂದ ಕಾರಜೋಳ್‌ರವರು ಘೋಷಿಸಿದರು. ಇಲ್ಲಿಯವರೆಗೆ ರೈತರಿಗೆ ಪರಿಹಾರ ಮಾತ್ರ ಮರೀಚಿಕೆಯಾಗಿದೆ ಎಂದು ಪತ್ರಿಕೆಯಲ್ಲಿ ದಿನಾಂಕ: 11-07-09ರಲ್ಲಿ ಬರೆದಿದ್ದಾರೆ.

ಚುನಾವಣಾ ಸಂದರ್ಭದಲ್ಲಿ ಆ ಭಾಗದ ಜನರಿಗೆ, ವಿಧಾನಸಭಾ ಚುನಾವಣೆ ಇರಬಹುದು, ಲೋಕಸಭಾ ಚುನಾವಣೆಯಲ್ಲಿ ಆ ಭಾಗದ ಸುಮಾರು 9,000 ರೈತರು ಕಳೆದ ಹತ್ತು ದಿವಸಗಳಿಂದ ಉಪವಾಸ ಸತ್ಯಾಗ್ರಹ ಕುಳಿತಿದ್ದಾರೆ. ಸದನದಲ್ಲಿ ಸಚಿವರಾದ ಗೋವಿಂದ ಕಾರಜೋಳ್ ರವರು ಇಲ್ಲ. ಮುಖ್ಯಮಂತ್ರಿಗಳಿದ್ದಾರೆ. ಅವರು ಈ ಹೇಳಿಕೆ ಕೊಟ್ಟಿದ್ದಾರೆ. ಗೋವಿಂದ ಕಾರಜೋಳ್‌ರವರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾರೆ. ಅವರು ಈಗ ಸದನದಲ್ಲಿ ಇಲ್ಲ. ಅವರು ಇರಬೇಕಾಗಿತ್ತು. ಬಿಜಾಪುರ ಜಿಲ್ಲೆಯಲ್ಲಿ ಕಳೆದ ಹತ್ತು ದಿವಸಗಳಿಂದ ಸತತವಾಗಿ ರೈತ ಹೋರಾಟ ಸಮಿತಿಯವರು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಅರ್ಜಿ ಕೊಟ್ಟಿದ್ದಾರೆ. ಜೊತೆಗೆ, ಸತ್ಯಾಗ್ರಹ ಮಾಡುತ್ತಿದ್ದಾರೆ. ಇವತ್ತಿನವರೆಗೂ ಸರ್ಕಾರ ರೈತರತ್ತ ತಿರುಗಿ ನೋಡಿಲ್ಲ. ನೀವು ಸತ್ಯಾಗ್ರಹವನ್ನಾ ದರೂ ಮಾಡಿಕೊಳ್ಳಿ, ವಿಧಾನಸಭೆ ಚುನಾವಣೆಯಾಯಿತು, ನಾವು ಗೆದ್ದಾಯಿತು, ಲೋಕಸಭೆ ಚುನಾವಣೆ ಯಾಯಿತು, ನಾವು ಗೆದ್ದಾಯಿತು. ಇನ್ನು ನಾಲ್ಕು ವರ್ಷಗಳಾದ ನಂತರ ರೈತರನ್ನು ನೋಡಿಕೊಳ್ಳೋಣ. ಈಗ ರೈತರು ಈ ಸರ್ಕಾರಕ್ಕೆ ಬೇಕಿಲ್ಲ. ಏಕೆಂದರೆ, ವಿಧಾನಸಭೆ ಚುನಾವಣೆಯಲ್ಲಿ ಹೇಳುತ್ತಾರೆ.

ಶ್ರೀ ಸಿ. ಟಿ. ರವಿ : ಕೆ.ಎಂಎಫ್ ಚುನಾವಣೆ ಗೆದ್ದಾಯಿತು. ಅದನ್ನೂ ಹೇಳಿ.

ಶ್ರೀ ಎ. ಎಸ್. ಪಾಟೀಲ್ ನಡಹಳ್ಳಿ : ರವಿಯವರೆ, ನಮ್ಮ ಜಿಲ್ಲೆಯ ಜನರಿಗೆ, ರೈತರಿಗೆ ಅನ್ಯಾಯ ಮಾಡಿ ಗೆದ್ದಿರುವುದನ್ನು ಅವರು ಸ್ಪಷ್ಟವಾಗಿ ಹೇಳುತ್ತಿದ್ದಾರೆ. ಏಕೆಂದರೆ, ರೈತರ ಹೆಸರಿನಲ್ಲಿ ತಾನೇ ನೀವು ಪ್ರಮಾಣ ವಚನ ಸ್ವೀಕರಿಸಿದ್ದು. ಎರಡು ಚುನಾವಣೆಯಲ್ಲೂ ಮೋಸ ಮಾಡಿದಿರಿ. ರೈತರಿಗೆ ಮೋಸ ಮಾಡುತ್ತಿರುವುದನ್ನು ನೀವು ಒಪ್ಪಿಕೊಳ್ಳಿ. (ಗದ್ದಲ)

ಶ್ರೀ ಸಿ.ಟಿ.ರವಿ : ನೀವೆಲ್ಲರೂ ಉಳಿಸಿರುವ ಸಮಸ್ಯೆಗಳೇ ಇರುವುದು. ನೀವು ಮೋಸ ಮಾಡಿದ್ದೀರೆಂತಲೇ ನಮ್ಮನ್ನು ಆರಿಸಿ ಗೆಲ್ಲಿಸಿ ಕಳುಹಿಸಿ ರುವುದು.

ಒಬ್ಬ ಮಾನ್ಯ ಸದಸ್ಯರು : ಇವರು ಬಹಳ ಸತ್ಯಹರಿಶ್ಚಂದ್ರರು!!

ಅಧ್ಯಕ್ಷರು : ಕುಮಾರಸ್ವಾಮಿ, ಸಿ.ಟಿ.ರವಿ, ಪ್ಲೀಸ್ ಕುಳಿತುಕೊಳ್ಳಿ. ರೇವಣ್ಣನವರೇ, ತಾವು ಮುಂದುವರೆಸಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ಒಂದು ಉದಾಹರಣೆ ಕೊಡುತ್ತಿದ್ದೇನೆ. ಈ ಸರ್ಕಾರ ರೈತರ ಬಗ್ಗೆ ಯಾವ ರೀತಿ ನಡೆದುಕೊಳ್ಳುತ್ತಿದೆ ಎಂದರೆ, ರಾಜ್ಯದ 27 ಜಿಲ್ಲೆಗಳಲ್ಲಿ ರೈತರ ಬೇಡಿಕೆ ಇದ್ದುದು ಗೊಬ್ಬರ.. ಹಾವೇರಿಯದು. ಕಳೆದ ಸಲ ಸರ್ಕಾರ ಬಂತು. ಪಾಪ! ಉಸ್ತುವಾರಿ ಸಚಿವರಾಗಿರುವ ಉದಾಸಿಯವರದು ಅಮಾಯಕ ಸ್ವಭಾವ, ಪಾಪ! ನಾವೇಕೆ ಅವರನ್ನು ಜವಾಬ್ದಾರಿ ಮಾಡಬೇಕು, ಬೇಡ. ಹೋಗಲಿ, ಬಿಡಿ ಸರ್, ನೀವು ಒಳ್ಳೆಯವರಿದ್ದೀರಿ, ನೀವು ತಾಳ್ಮೆಯಿಂದಿರುವ ಜನರು, ಗೊಬ್ಬರ ಹೋಗುತ್ತಿಲ್ಲ, ಅಷ್ಟೆ, ರೈತರು ಸಾಯುತ್ತಿದ್ದಾರಷ್ಟೆ, ಅದೊಂದು ಕಡೆ ಇರಲಿ.

ಶ್ರೀ ಉಮೇಶ್ ವಿ.ಕತ್ತಿ : ಉದಾಸಿಯವರು ಒಳ್ಳೆಯವರೆಂದು ಒಂದು ಕಡೆ ಹೇಳುತ್ತೀರಿ. ಇನ್ನೊಂದು ಕಡೆ, ಹಾವೇರಿಯಲ್ಲಿ ಗೊಬ್ಬರದ ಗಲಾಟೆ ಮಾಡಿಸಿದರು ಎಂದು ಅದನ್ನೂ ಹೇಳುತ್ತೀರಿ. ಯಾವುದು ಸತ್ಯ?

ಶ್ರೀ ಹೆಚ್.ಡಿ.ರೇವಣ್ಣ : ನಾವೇನು ಮಾಡಲಿ ಸ್ವಾಮಿ? ಅಧ್ಯಕ್ಷರೆ, ನಾನು ಮಾತನಾಡುವಾಗಲೇ ಎಲ್ಲಾ ಮಂತ್ರಿಗಳು ಎದ್ದು ನಿಂತುಕೊಳ್ಳುತ್ತಾರಲ್ಲ, ಏನು ಸಮಾಚಾರ?

ಅಧ್ಯಕ್ಷರು : ಉದಾಸಿಯವರನ್ನು ಏಕೆ ನೀವು ಹಗಲಿನಲ್ಲಿ ನೆನಪು ಮಾಡಿಕೊಳ್ಳುತ್ತೀರಿ? ಅವರನ್ನು ನೆನಪಿಸಿಕೊಳ್ಳದಿದ್ದರೆ ನಮಗೆ ಸಮಾಧಾನ ಇಲ್ಲವೇ? ನೀವು ಉದಾಸಿಯವರನ್ನು ಯಾವಾಗಲೂ ನೆನಪಿಸಿಕೊಳ್ಳು ತ್ತಿರಬೇಕು.

ಶ್ರೀ ಹೆಚ್. ಡಿ. ರೇವಣ್ಣ : ನಮಗೆ ಅವರ ಬಗ್ಗೆ ಪ್ರೀತಿ ಜಾಸ್ತಿ ಸ್ವಾಮಿ.

ಅಧ್ಯಕ್ಷರು : ನಿಮಗೂ ಮತ್ತು ಅವರಿಗೂ ಹಳೆಯದು ನೆನಪಾಗುತ್ತದೇನೋ?

ಒಬ್ಬ ಮಾನ್ಯ ಸದಸ್ಯರು : ಅವರಿಬ್ಬರೂ ಒಂದೇ portfolioನಲ್ಲಿ ಅಂದರೆ, PWD ನಲ್ಲಿ ಇದ್ದರಲ್ಲ, ಅದಕ್ಕೋಸ್ಕರ....

ಶ್ರೀ ಸಿ.ಟಿ.ರವಿ : ಅಧ್ಯಕ್ಷರೆ, ಅವರು ಉದಾಸಿಯವರನ್ನು ನೆನಪು ಮಾಡಿಕೊಳ್ಳುತ್ತಿಲ್ಲ. ಉದಾಸಿಯವರ ಖಾತೆಯನ್ನು ನೆನಪು ಮಾಡಿಕೊಂಡು ಸಂಕಟ ಪಡುತ್ತಿದ್ದಾರೆ.

ಶ್ರೀ ಹೆಚ್. ಡಿ. ರೇವಣ್ಣ : ನಾನು ರವಿಯವರ ತರಹ ಸಂಕಟ ಪಡುವುದು ನನ್ನ ಜೀವನದಲ್ಲಿಯೇ ಇಲ್ಲ. ಆದರೆ, ರವಿಯವರಿಗೆ ಏನೂ ಅನುಕೂಲವಾಗಲಿಲ್ಲವೆಂದು ಹೇಳುತ್ತಿದ್ದೇವೆ. ಅದು ಒತ್ತಟ್ಟಿಗಿರಲಿ. ಬಿಜಾಪುರ ಜಿಲ್ಲೆಯ ಕಬ್ಬು ಬೆಳೆಗಾರರು ಕಳೆದ ಹತ್ತು ದಿವಸಗಳಿಂದ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಇವತ್ತು ಜಿಲ್ಲಾಧಿಕಾರಿಗಳು ಪತ್ರ ಬರೆಯುತ್ತಾರೆ. ಜಿಲ್ಲಾಧಿಕಾರಿಗಳು ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಗಳಿಗೆ ಪತ್ರ ಬರೆದರೂ ಅದಕ್ಕೆ ಯಾವುದೇ ಜವಾಬು ಇಲ್ಲ ಮತ್ತು ಜಿಲ್ಲಾಧಿಕಾರಿಗಳು ಆಯುಕ್ತರಿಗೆ ಕಬ್ಬು ಬೆಳೆಗಾರರಿಗೆ ಸಂಬಂಧಿಸಿದಂತೆ 10-4-2009ರಂದು ಪತ್ರ ಬರೆದರೂ ಇವತ್ತಿನವರೆಗೂ ಯಾರೂ ನಿಗಾ ವಹಿಸುತ್ತಿಲ್ಲ. ದಯಮಾಡಿ ಸನ್ಮಾನ್ಯ ಮುಖ್ಯಮಂತ್ರಿಗಳು, ಬಿಜಾಪುರ ಜಿಲ್ಲೆಯ ಕಬ್ಬು ಬೆಳೆಗಾರರ ಹೋರಾಟ ಏನಿದೆ, ತಾವು ಉತ್ತರಿಸುವ ಸಂದರ್ಭದಲ್ಲಿ 31 ಕೋಟಿ ರೂ.ಗಳನ್ನು ಯಾವಾಗ ಬಿಡುಗಡೆ ಮಾಡುತ್ತೀರಿ? ಅದರ ಜೊತೆಗೆ, ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ನೀವೇ ಆ ಜನತೆಗೆ ಆಶ್ವಾಸನೆ ಕೊಟ್ಟಿರುವಂತೆ ಈಡೇರಿಸಬೇಕು.

ವಿಜಾಪುರ ಜಿಲ್ಲೆಯ ಜೊತೆಗೆ ನಮ್ಮದೂ ಒಂದು ಸೇರಿಕೊಂಡು ಬಿಟ್ಟಿದೆ. ದಿನಾಂಕ: 18-03-08ರಲ್ಲಿಯೇ ಬಂದಿದೆ. ಈ ಸರ್ಕಾರ ಬಂದ ನಂತರ ದಿನಾಂಕ: 18-3-08ರಲ್ಲಿ ಕೃಷಿ ಇಲಾಖೆಯ ಅಧಿಕಾರಿಗಳು ಕಳುಹಿಸಿಕೊಟ್ಟಿದ್ದಾರೆ. ಸುಮಾರು 8 ತಾಲ್ಲೂಕುಗಳಿಂದ 9,337 ಎಕರೆ, ಹಾಸನ ಜಿಲ್ಲೆಯದು 9,307 ಎಕರೆ, ಅರಸೀಕೆರೆ, ಆಲೂರು, ಹಾಸನ, ಸಕಲೇಶಪುರ, ಅರಕಲಗೂಡು, ಹೊಳೆನರಸೀಪುರ, ಚನ್ನರಾಯಪಟ್ಟಣ ಸೇರಿ ಸುಮಾರು 9,337 ಎಕರೆ. ಅದರಲ್ಲಿ 7 ಕೋಟಿ 93 ಲಕ್ಷ. ಒಂದು ಕಡೆ ಬಿಜಾಪುರ ಜಿಲ್ಲೆಯಲ್ಲಿ 31 ಕೋಟಿ, ಹಾಸನ ಜಿಲ್ಲೆಯದು 7 ಕೋಟಿ 93

ಲಕ್ಷ, ಒಟ್ಟು 7 ಕೋಟಿ 93 ಲಕ್ಷ. ಇದನ್ನು ಯಾವಾಗ ಬಿಡುಗಡೆ ಮಾಡುತ್ತಾರೆ? ಅಥವಾ ರೈತರ ಮೇಲಿನ ದ್ವೇಷದಿಂದ, ದ್ವೇಷ ತೀರಿಸಿಕೊಳ್ಳ ಬೇಕೆಂಬ ಉದ್ದೇಶ ಈ ಸರ್ಕಾರಕ್ಕೇನಾದರೂ ಇದೆಯೇ? ಅದೇನೆಂದು ನನಗೆ ಗೊತ್ತಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಹಣಕಾಸು ಬೇಡಿಕೆಗಳ ಮೇಲೆ ಅನುಮತಿ ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ಇದಕ್ಕೆ ಉತ್ತರ ಕೊಡಬೇಕೆಂದು ಮನವಿ ಮಾಡುತ್ತೇನೆ ಮತ್ತು ಆ ಭಾಗದ ರೈತರನ್ನು ಉಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇದಲ್ಲದೆ, ಇವತ್ತು ಹಾಸನ ಜಿಲೆಯಲ್ಲಿ ಆಲೂಗಡ್ಡೆ ಬೆಳೆಗಾರರು ಸುಮಾರು 71,000 ಹೆಕ್ಟೇರ್ ಪ್ರದೇಶದಲ್ಲಿ ಆಲೂಗಡ್ಡೆ ಬೆಳೆಯುತ್ತಿದ್ದಾರೆ. 2008–09ರಲ್ಲಿ 71,000 ಹೆಕ್ಟೇರ್ ಜಮೀನಿನಲ್ಲಿ ಆಲೂಗಡ್ಡೆ ಬೆಳೆಯುತ್ತಿರುವುದು. ಅದರಲ್ಲಿ 55,000 ಹೆಕ್ಟೇರ್ ಜಮೀನಿನಲ್ಲಿ ಬೆಳೆದಿದ್ದ ಆಲೂಗಡ್ಡೆ ಬೆಳೆ ಸಂಪೂರ್ಣ ನಾಶವಾಗಿದೆ. ಅದಕ್ಕೆ ಜಿಲ್ಲಾಧಿಕಾರಿಗಳೇ ಸರ್ಕಾರಕ್ಕೆ ವರದಿಯೊಂದನ್ನು ಕಳುಹಿಸಿಕೊಟ್ಟಿದ್ದಾರೆ. ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ತೋಟಗಾರಿಕೆ ಅಧಿಕಾರಿಗಳು ಸೇರಿ 100 ಕೋಟಿ ರೂ.ಗಳಷ್ಟು ನಷ್ಟವಾಗಿದೆ ಎಂದು ಹೇಳುತ್ತಾರೆ. ಕಳೆದ ವರ್ಷ 77,000 ಹೆಕ್ಟೇರ್‌ನಲ್ಲಿ ಆಲೂಗಡ್ಡೆ ಬೆಳೆದಿದ್ದು, ಆಲೂಗಡ್ಡೆ ನಾಶವಾದ ಕಾರಣ ಈ ವರ್ಷ ಕೇವಲ 17,000 ಹೆಕ್ಟೇರ್ ಜಮೀನಿಗೆ ಕುಸಿದಿದೆ. 77,000 ಹೆಕ್ಟೇರ್ ಪ್ರದೇಶದಲ್ಲಿ ಆಲೂಗಡ್ಡೆ ಬೆಳೆಯುತ್ತಿದ್ದ ರೈತರು ಇವತ್ತು ಕೇವಲ 17,000 ಹೆಕ್ಟೇರ್‌ಗೆ ಬಂದಿದ್ದಾರೆಂದರೆ, ಸುಮಾರು 60,000 ಹೆಕ್ಟೇರ್ ಜಮೀನನ್ನು ಕೈಬಿಟ್ಟಿದ್ದಾರೆ. 60,000 ಹೆಕ್ಟೇರ್ ಜಮೀನಿನಲ್ಲಿ ಒಂದು ವರ್ಷದಲ್ಲಿ ರೈತರು ನಿಲ್ಲಿಸಿದ್ದಾರೆಂದರೆ, ಆ ರೈತರು ಯಾವ ಪರಿಸ್ಥಿತಿಯಲ್ಲಿದ್ದಾರೆ, ಈ ಸರ್ಕಾರ ರೈತರ ಬಗ್ಗೆ ಯಾವ ರೀತಿಯ ಧೋರಣೆ ತಾಳಿದೆ ಎಂಬುದನ್ನು ಯೋಚಿಸಬೇಕು. ಏಕೆಂದರೆ, ಉಮೇಶ್ ಕತ್ತಿಯವರು ತಾವು ಮೂರು ಸಲ ಜೈಲಿಗೆ ಹೋಗಿ ಭೇಟಿ ಕೊಟ್ಟು ಬಂದಿರುವುದಾಗಿ ಹೇಳಿದರು, ಸಂತೋಷ. ಬೆಳಗಾಂನಲ್ಲಿ ವಿಐಪಿ ರೂಮ್ ಸಹ ಇದೆಯೆಂದರು. ರೈತರಿಗೆ ಹಾಸನದಲ್ಲಿ ಒಂದು ವಿಐಪಿ ರೂಮ್ ಮಾಡಿಕೊಡಿ. ಸಾಯುವ ರೈತರು ಅಲ್ಲಿಗೆ ಬಂದು ಹಾಸನ ಜೈಲಿನಲ್ಲಿ ಬೇಕಾದರೆ ಮಲಗಿರಲಿ. ಅವರು ಮಂತ್ರಿಯಾದ ಮೇಲೆ ಈ ಕೆಲಸವಾದರೂ ಮಾಡಿ ಕೊಡಲಿ, ಅವರ ಬಗ್ಗೆ ನನಗೆ ವಿಶ್ವಾಸವಿದೆ, ಅವರು ಎಲ್ಲಿದ್ದರೂ ನಮ್ಮ ಪಾರ್ಟಿಯವರೇ.

ಶ್ರೀ ಉಮೇಶ್ ವಿ.ಕತ್ತಿ : ರೈತರ ಸಹಾಯಕ್ಕೆ ಧಾವಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ. ಮುಖ್ಯಮಂತ್ರಿಗಳು ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿ, ರೈತರ ಬಗ್ಗೆ ಕಳಕಳಿವುಳ್ಳ ಸರ್ಕಾರ ರಾಜ್ಯದಲ್ಲಿದೆ. ಹಾಸನಕ್ಕೆ ವಿಐಪಿ ಸೂಟ್ ಬೇಕಾಗಿದ್ದಲ್ಲಿ, ರೇವಣ್ಣನವರು ಅಲ್ಲಿ ಏನಾದರೂ ಉಪಯೋಗಿಸಿಕೊಳ್ಳು ವಂತಿದ್ದರೆ, ಬಹಳಷ್ಟು ಜವಾಬ್ದಾರಿಗಳನ್ನು ಹೊತ್ತುಕೊಳ್ಳುತ್ತೇವೆ. ಅದರಿಂದೇನೂ ತೊಂದರೆಯಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ವಿಐಪಿ ಸೂಟ್ ಬೆಳಗಾಂನಲ್ಲಿ ಇದೆಯೆಂದು ಹೇಳಿದರಲ್ಲ, ನಮ್ಮ ರೈತರು 60,000 ಹೆಕ್ಟೇರ್ ಪ್ರದೇಶದಲ್ಲಿ ಆಲೂಗಡ್ಡೆ ಬೆಳೆಯುವುದಕ್ಕಾಗಿಲ್ಲ. ಕಳೆದ ವರ್ಷ 77,000 ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಂತಹ ಆಲೂಗಡ್ಡೆ, ಗಲಾಟೆಯಾಗಿ ಮತ್ತೆ ರೈತರು ಹೋರಾಟ ಮಾಡಿದರು. ಏಕೆಂದರೆ, ರೈತರ ಜೊತೆ ನಾನೂ ಹೋಗಿ ಧರಣಿ ಕುಳಿತುಕೊಳ್ಳಬೇಕಾಗುತ್ತದೆ. ಅದಕ್ಕೆ ಅವಕಾಶವಾಗುವುದು ಬೇಡ. ನನಗೇನೂ ವಿಐಪಿ ರೂಮ್ ಬೇಕಾಗಿಲ್ಲ.

ಉಮೇಶ್ ಕತ್ತಿಯವರಿಗೆ ಬೆಳಗಾಂನಲ್ಲಿ ವಿಶೇಷವಾಗಿ VIP room ಇರಬೇಕು. ಆ ಉದ್ದೇಶದಿಂದ ಅವರು ಮಾಡಿಕೊಂಡಿದ್ದಾರೆ. ಸಂತೋಷ. ನಮಗೆ VIP jail ಬೇಡ. ರೈತರು ಕಳೆದ ಸಾರಿ ಆಲೂಗಡ್ಡೆ ಬೆಳೆಯಿಂದ ನಷ್ಟವನ್ನು ಹೊಂದಿದ್ದಾರೆ. 55 ಸಾವಿರ ಹೆಕ್ಟೇರ್‌ನಲ್ಲಿ 100 ಕೋಟಿ ರೂಪಾಯಿ ಇದೆ. ಮಾನ್ಯ ಮುಖ್ಯಮಂತ್ರಿಯವರು ಅಥವಾ ತೋಟಗಾರಿಕಾ ಸಚಿವರು ಉತ್ತರ ಕೊಡುವ ಸಂದರ್ಭದಲ್ಲಿ ಈ ಬಗ್ಗೆ ಹೇಳಬೇಕು.

ಶ್ರೀ ಉಮೇಶ್ ವಿ. ಕತ್ತಿ : ಜೈಲ್‌ನ್ನು ನಾವು ಕಟ್ಟಿಕೊಟ್ಟಿಲ್ಲ, ಅದನ್ನು ಬ್ರಿಟೀಷರು ಕಟ್ಟಿದ್ದು. ಆ VIP suitನಲ್ಲಿ ಹೆಗಡೆಯವರು, ಪಟೇಲರು, ಬೊಮ್ಮಾಯಿಯವರು, ದೇವೇಗೌಡರವರು, ಯಾರ್ಯಾರಿದ್ದರು ಅವರೆಲ್ಲರೂ ಈ ರಾಜ್ಯದ ಮುಖ್ಯಮಂತ್ರಿಗಳಾದರು. ಹಾಗೆಯೇ, ನೀವೂ ಒಂದು ದಿನ ಹಾಗಾಗಬೇಕೆಂದು ಹೇಳಿ VIP suit ಕಟ್ಟಿಕೊಡಿ ಎಂದರೆ ಕಟ್ಟಿಸಿಕೊಡುತ್ತೇವೆ. ತಾವು ವಿಚಾರ ಮಾಡಿ ಹೇಳಿ. ಹಾಗೆಯೇ, ಹಾಸನದಲ್ಲಿ ಕಟ್ಟಿಕೊಟ್ಟರೆ ನಿಮಗೂ ಒಂದು chance ಸಿಗುತ್ತದೆಯೇ ಎಂದು ನೋಡಿಕೊಳ್ಳಿ. ತಾವು ಹೇಳಿದಿರೆ ಮಾಡಿಕೊಡುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ : ತೋಟಗಾರಿಕಾ ಮಂತ್ರಿಯವರು ಒಳ್ಳೆಯ ಮಾತು ಹೇಳಿದ್ದಾರೆ. ಬೆಳಗಾಂನಲ್ಲಿ VIP jail ನಲ್ಲಿದ್ದವರೆಲ್ಲ ಮುಖ್ಯಮಂತ್ರಿಗಳಾಗಿದ್ದಾರೆಂದು ಅವರು ಹೇಳಿದ್ದಾರೆ. ಅವರೊಂದು ಸಾರಿ ಆ ಜೈಲಿನಲ್ಲಿದ್ದು ಬರಲಿ. ಆಮೇಲೆ, ಅವರೂ ಮುಖ್ಯಮಂತ್ರಿ ಆಗುತ್ತಾರೆ.

(ಗೊಂದಲ)

ಅಧ್ಯಕ್ಷರು : ವಿಷಯಾಂತರವಾಗುತ್ತಿದೆ.

(ಗೊಂದಲ)

ಶ್ರೀ ಉಮೇಶ್ ವಿ.ಕತ್ತಿ : ಮುಖ್ಯಮಂತ್ರಿಯಾಗುವುದು ನಿಜ. ಹಾಗೆಯೇ, ತಾವೂ ಒಂದು ದಿನ ಮುಖ್ಯಮಂತ್ರಿಯಾಗಬೇಕೆಂಬುದು ನನ್ನ ಆಸೆ.

(ಗೊಂದಲ)

ಅಧ್ಯಕ್ಷರು : ರೇವಣ್ಣನವರೆ, ವಿಷಯಾಂತರವಾಗುತ್ತದೆ.

ಶ್ರೀ ಹೆಚ್.ಡಿ.ರೇವಣ್ಣ : ಅವರು ಕೇಳುತ್ತಿದ್ದರೆ ನಾನು ಇನ್ನೇನು ಮಾಡಲಿ?

ಅಧ್ಯಕ್ಷರು : ನೀವು ಉಮೇಶ್ ಕತ್ತಿಯವರ, ಉದಾಸಿಯವರ ಹೆಸರು ಹೇಳಬೇಡಿ. ಅವರ ಹೆಸರು ಹೇಳಿದಾಗ ಅವರು ಏನಾದರೂ ಹೇಳುತ್ತಾರೆ.

ಶ್ರೀ ಹೆಚ್.ಡಿ.ರೇವಣ್ಣ : ಕಳೆದ ವರ್ಷ 77 ಸಾವಿರ ಹೆಕ್ಟೇರ್ ಜಮೀನಿನಲ್ಲಿ ಆಲೂಗೆಡ್ಡೆ ಬೆಳೆದಿದ್ದರು. ಈ ವರ್ಷ ರೈತರು ಸುಮಾರು 17 ಸಾವಿರ ಹೆಕ್ಟೇರ್‌ನಲ್ಲಿ ಆಲೂಗೆಡ್ಡೆಯನ್ನು ಬೆಳೆದಿದ್ದಾರೆ. ಅದರಲ್ಲಿ 5 ಸಾವಿರ ಹೆಕ್ಟೇರ್ ಜಮೀನಿನಲ್ಲಿ ಬೆಳೆದ ಆಲೂಗೆಡ್ಡೆ ಬೆಳೆ ಇವತ್ತು ನಷ್ಟವಾಗಿದೆ. ಈ ವರ್ಷ ಮತ್ತೆ 15-20 ಕೋಟಿ ರೂಪಾಯಿ ನಷ್ಟವಾಗುತ್ತಿದೆ. ಅದರಲ್ಲಿ ಇವತ್ತು 30% ಆಲೂಗೆಡ್ಡೆ ಬೆಳೆ ಸಂಪೂರ್ಣವಾಗಿ ಹಾಳಾಗಿದೆ. ಇದಕ್ಕೆ ಸರ್ಕಾರ ಪರಿಹಾರ ಕೊಡಬೇಕು. ಆ ಪರಿಹಾರವನ್ನು ಇವರಾದರೂ ಕೊಡಲಿ, ಕೇಂದ್ರ ಸರ್ಕಾರವಾ ದರೂ ಕೊಡಲಿ. ಆ ಪರಿಹಾರವನ್ನು ಯಾವ ರೀತಿ ಕೊಡುತ್ತಾರೆನ್ನುವುದನ್ನು ಯೋಚಿಸಬೇಕು. ಆ ರೈತರನ್ನು ಉಳಿಸುವ ಶಕ್ತಿ ಈ ಸರ್ಕಾರಕ್ಕಿದೆಯೋ, ಇಲ್ಲವೋ ನನಗೆ ಗೊತ್ತಿಲ್ಲ. ಆ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಯವರು ಹೇಳಬೇಕು. ರಾಜ್ಯದಲ್ಲಿ ಗೊಬ್ಬರದ ಪರಿಸ್ಥಿತಿ ಯಾವ ರೀತಿ ಇದೆ ಎಂಬುದು ಗೊತ್ತಿಲ್ಲ. ನೀರಾವರಿ ಪ್ರದೇಶಗಳಿಗೆ ಇನ್ನೊಂದು ವಾರದಲ್ಲಿ ನೀರು ಹರಿಸುತ್ತಾರೆ. ನಮ್ಮ ಕಡೆಯ ನಾಲೆಗಳಿಗೆ ಈಗಾಗಲೇ ನೀರು ಹರಿಸಿದ್ದಾರೆ. ಮಂಡ್ಯ, ಹಾಸನ ಜಿಲ್ಲೆಗಳಲ್ಲಿರುವ ಯೂರಿಯಾ ಬೇರೆ

ಕಡೆ shift ಆಗಿದೆ ಎಂದು ಮೊನ್ನೆ ಹೇಳಿದರು. ಇತ್ತೀಚೆಗೆ ನೀರಾವರಿ ಸಲಹಾ ಸಮಿತಿಯ ಮೀಟಿಂಗ್ ನಡೆಯಿತು. ಆ ಸಮಯದಲ್ಲಿ ಜಯಚಂದ್ರರವರೂ ಇದ್ದರು. ತುಮಕೂರಿಗೆ ಕೊಟ್ಟಂಥ ಯೂರಿಯಾವನ್ನು ಹಾವೇರಿಗೇನೋ shift ಮಾಡಿದ್ದಾರೆಂದು ಅಲ್ಲಿಯ Joint Director ಹೇಳುತ್ತಿದ್ದರು. ಏಕೆಂದರೆ, ಈಗ ನಾಲೆಗಳಿಗೆ ನೀರು ಹರಿಸಿದ್ದಾರೆ. ಹೇಮಾವತಿ, ಕೆ.ಆರ್.ಎಸ್., ಕಬಿನಿ ನಾಲೆಗಳಿಗೆ ನೀರು ಹರಿಸಿದ್ದಾರೆ. ಆ ರೈತರಿಗೆ ಸರಿಯಾದ ರೀತಿಯಲ್ಲಿ ಗೊಬ್ಬರ ಒದಗಿಸಬೇಕೆಂದು ಕೃಷಿ ಸಚಿವರನ್ನು ನಾನು ಒತ್ತಾಯ ಮಾಡುತ್ತೇನೆ. 2008–09ರಲ್ಲಿ ರಸ್ತೆ ಇರಬಹುದು, buildings ಇರಬಹುದು, ಎಲ್ಲಾ ಸೇರಿ 4,350 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಇಟ್ಟಿದ್ದೇವೆಂದು ಲೋಕೋಪಯೋಗಿ ಸಚಿವರು ಹೇಳಿದರು. ಅದರಲ್ಲಿ ಕೇವಲ 3350 ಕೋಟಿ ರೂಪಾಯಿಗಳು ಖರ್ಚಾಗಿದ್ದು, 1 ಸಾವಿರ ಕೋಟಿ ರೂಪಾಯಿಗಳು ಇನ್ನೂ ಖರ್ಚಾಗಿಲ್ಲ. ಇದು ಕೇವಲ ಲೋಕೋಪಯೋಗಿ ಇಲಾಖೆ ಯೊಂದರಲ್ಲೇ ಆಗಿರುವುದು. ಮತ್ತೆ 2009–10ರಲ್ಲಿ ಸುಮಾರು 2989 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಈಗಾಗಲೇ 5 ತಿಂಗಳು ಕಳೆದಿದ್ದು ಅದರಲ್ಲಿ ಖರ್ಚಾಗಿರುವುದು ಕೇವಲ 400 ಕೋಟಿ ರೂಪಾಯಿಗಳು ಮಾತ್ರ. ಉಳಿದ 2400 ಕೋಟಿ ರೂಪಾಯಿಗಳನ್ನು ಯಾವಾಗ ಖರ್ಚು ಮಾಡುತ್ತೀರಿ? ಲೋಕೋಪಯೋಗಿ ಇಲಾಖೆಯಲ್ಲಿ ಇಲ್ಲಿಯವರೆಗೆ ಉತ್ತರ ವಿಭಾಗದಲ್ಲಿ 367 ಕೋಟಿ ರೂಪಾಯಿಗಳು ಎಂದು ಇರಬಹುದು, ದಕ್ಷಿಣದ ವಿಭಾಗದಲ್ಲಿ 530 ಕೋಟಿ ರೂಪಾಯಿಗಳಿರಬಹುದು ಒಟ್ಟು 897 ಕೋಟಿ ರೂಪಾಯಿಗಳ ಬಿಲ್ ಪೆಂಡಿಂಗ್ ಇದೆ. ಅದಲ್ಲದೆ, ಬಜೆಟ್‌ನಲ್ಲಿಟ್ಟು 1000 ಕೋಟಿ ರೂಪಾಯಿಗಳನ್ನೇ ಈ ಸರ್ಕಾರದ ಕೈಯಲ್ಲಿ ಖರ್ಚು ಮಾಡುವುದಕ್ಕಾಗಲಿಲ್ಲ. ಮತ್ತೆ ಈ ವರ್ಷ 2900 ಕೋಟಿ ರೂಪಾಯಿಗಳನ್ನಿಟ್ಟಿದ್ದರಲ್ಲಿ 400 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದು ಇನ್ನೂ 2400 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಆ ಹಣವನ್ನು ಇನ್ನುಳಿದಿರುವ 7 ತಿಂಗಳಿನಲ್ಲಿ ಖರ್ಚು ಮಾಡುತ್ತಾರೆಯೇ? ಇಲ್ಲಿ ನೀರಾವರಿ ಮಂತ್ರಿಯವರು ಇಲ್ಲ. ಚುನಾವಣೆಗಿಂತ ಮುಂಚೆ ಹೊಗೆನಕಲ್ ಜಲಾಶಯಕ್ಕೆ ಸನ್ಮಾನ್ಯ ಮುಖ್ಯಮಂತ್ರಿಯವರು ಮತ್ತು ಇಂಧನ ಸಚಿವರಾದ ಈಶ್ವರಪ್ಪನವರು ದೋಣಿ ತೆಗೆದುಕೊಂಡು ಹೋದರು. ಆ ದೋಣಿಯನ್ನು ಎಲ್ಲಿ ಬಿಟ್ಟರೋ ಗೊತ್ತಿಲ್ಲ. ಚುನಾವಣೆಯಾದ ಮೇಲೆ ಹೊಗೆನಕಲ್ ವಿಷಯವೇ ಇಲ್ಲ.

ತಮಿಳುನಾಡಿನದು ಏನೆಂದರೆ, ಇಲ್ಲೊಂದು ಪ್ರತಿಮೆ ಅವರು ಸ್ಥಾಪಿಸುವುದು, ಅಲ್ಲಿ ಇವರೊಂದು ಪ್ರತಿಮೆ ಸ್ಥಾಪಿಸುವುದು. ಆ ಟೈಪ್ ಇದೆ. ಇವತ್ತು ಹೊಗೇನಕಲ್ ವಿಷಯವೇನಾಯಿತು? ಆ ದೋಣಿ ಎಲ್ಲಿ ಹೋಯಿತು? ಹೊಗೇನಕಲ್ ವಿಷಯದಲ್ಲಿ ಚುನಾವಣೆಗಿಂತ ಮುಂಚೆ 15 ದಿನ ಪೂರ್ತಿ ಮುಖ್ಯಮಂತ್ರಿಯವರು ಮತ್ತು ಈಶ್ವರಪ್ಪನವರು ದೋಣಿಯಲ್ಲಿ ಹೋದದ್ದು ಟಿ.ವಿ.ಯಲ್ಲಿ ನೋಡಿದೆವು. ಇವತ್ತಿನವರೆಗೆ ಆ ದೋಣಿ ಎಲ್ಲಿ ಹೋಯಿತೆಂದು ನಾವು ಪತ್ತೆ ಮಾಡಬೇಕಾಗಿದೆ. ಕಾವೇರಿ ಬೇಸಿನ್ ರೈತರಿಗಾಗಿ ಎಷ್ಟು ಹಣ ಇಟ್ಟಿದ್ದೀರಿ? ಯಾವ್ಯಾವ ಬೇಸಿನ್‌ಗೆ ಎಷ್ಟೆಷ್ಟು ಹಣ ಇಟ್ಟೇದ್ದೀರಿ? ಎಷ್ಟು ಹಣ ಖರ್ಚು ಮಾಡಿದ್ದೀರಿ? ಇವತ್ತು ಅಲ್ಲಿ ಸಂಬಳ ಕೊಡುವುದಕ್ಕೆ ಹಣವಿಲ್ಲ. ಪಂಚಾಯಿತಿಗಳ ಮುಖೇನ ರಸ್ತೆ ನಿರ್ಮಿಸುವುದು, ಕೆರೆಕಟ್ಟೆಗಳ ಕೆಲಸ ಮಾಡುವುದಕ್ಕೆ ಇರುವ ಕೇಂದ್ರ ಸರ್ಕಾರದ ಉದ್ಯೋಗ ಖಾತರಿ ಯೋಜನೆಯ ಹಣದಲ್ಲಿ ನಾಲೆಯ ಸಿಲ್ಟು, ಗಿಡ ತೆಗೆಯಿರಿ ಪರಿಸ್ಥಿತಿ ಈ ಸರ್ಕಾರದ್ದಿದೆ. ನಾನು ಅಧಿಕಾರಿಗಳನ್ನು ಕೇಳಿದಾಗ ಅವರು, ಈ ಸಾರಿ ಕಾವೇರಿ ಬೇಸಿನ್ ವಿಷಯಕ್ಕೆ ರೆಡ್ ಇಂಕ್ ಹಾಕಿದ್ದಾರೆ, ಈ ಭಾಗದಲ್ಲಿ ಜಾಸ್ತಿ ಆಯ್ಕೆಯಾಗಿರುವ ಪ್ರತಿನಿಧಿಗಳೆಲ್ಲ ವಿರೋಧ ಪಕ್ಷದಲ್ಲಿರುವ ಪ್ರತಿನಿಧಿಗಳು, ಅದಕ್ಕೋಸ್ಕರ ಈ ಭಾಗಕ್ಕೆ ಹಣ ಕೊಡುವುದಿಲ್ಲ, ಕೇವಲ ಸಂಬಳಕ್ಕೆ ಮಾತ್ರ ಇದೆ ಎಂದು ಹೇಳಿದರು. ಕಾವೇರಿ ಬೇಸಿನ್‌ಗೆ ಇಟ್ಟಿರುವ ಹಣ ಕೇವಲ ಅಧಿಕಾರಿಗಳ ಸಂಬಳ ಕೊಡಲು ಮಾತ್ರ. ಮೊನ್ನೆ ಮಾನ್ಯ ನೀರಾವರಿ ಸಚಿವರು, ಕಾವೇರಿ ಬೇಸಿನ್‌ಗೆ ಎಷ್ಟು ಬೇಕಾದರೂ ಹಣ ಕೊಡುತ್ತೇವೆ, ಈ ವರ್ಷದಲ್ಲಿ ನಾವು ಯಾವ ಕೆಲಸವನ್ನೂ ಬಿಡುವುದಿಲ್ಲವೆಂದು ಹೇಳಿದರು. ಯಾವ ಕಾರ್ಯಕ್ರಮ ರೂಪಿಸಿದ್ದೀರಿ? ಇವತ್ತಿನವರೆಗೆ ಯಾವುದಾದರೂ programme approve ಆಗಿದೆಯೇ? ಕಾವೇರಿ ಬೇಸಿನ್‌ನಲ್ಲಿ 4–5 ತಿಂಗಳಾಯಿತು, ಯಾವುದಾದರೊಂದು programme approve ಆಗಿದೆಯೇ? ಮೊನ್ನೆಯ ಮೀಟಿಂಗ್‌ನಲ್ಲಿ ಕೇಳಿದಾಗ ಕಾವೇರಿ ಬೇಸಿನ್‌ನಲ್ಲಿ ಸುಮಾರು 200–300 ಕೋಟಿ ರೂಪಾಯಿಗಳ ಬಿಲ್ ಪೆಂಡಿಂಗ್ ಇದೆ ಎಂದು ಹೇಳಿದರು. ಈ ಕಡೆಗೆ ಎಷ್ಟು ಹಣ ಕೊಟ್ಟಿದ್ದಾರೆಂಬುದನ್ನು ಹೇಳಲಿ. ಇವತ್ತು ಸರ್ಕಾರ ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎಂದು ಹೇಳಬೇಕಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, SC/ST ಸಮಾಜಕ್ಕೆ ಕೊಡುವ IP Set ಬಗ್ಗೆ ಈಗಾಗಲೇ ಮೇಲ್ಮನೆಯಲ್ಲಿ ಚರ್ಚೆಯಾಗಿದೆ. ಆ ಬಗ್ಗೆ ಇವತ್ತಿನ

ಪೇಪರ್‌ನಲ್ಲಿ ವರದಿಯಾಗಿದೆ. ಏನಾದರೂ ಹೇಳುವುದಕ್ಕೆ ಹೋದರೆ ಅದಕ್ಕೆ ನಮ್ಮ ಮೇಲೆ ವಾಗ್ದಾಳಿ ಶುರುವಾಗುತ್ತದೆ., ಉದಾಹರಣೆಗೆ ಹೇಳುವುದಾದರೆ, ಸರ್ಕಾರದ ವಿರುದ್ಧ 150 ಕೋಟಿ ರೂಪಾಯಿಗಳ ಪಂಪ್‌ಸೆಟ್ ಖರೀದಿ ಹಗರಣ, ಒಂದೇ ಕಂಪನಿ ಬೇರೆ ಬೇರೆ ದರದಲ್ಲಿ ಪಂಪ್‌ಸೆಟ್ ಖರೀದಿ ಮಾಡಿದೆ ಎಂದು ವರದಿಯಾಗಿದೆ. ಪರಿಶಿಷ್ಟ ಜಾತಿ ಪಂಗಡಕ್ಕೆ ಸೇರಿದ್ದರಲ್ಲಿ 150 ಕೋಟಿ ರೂಪಾಯಿ ಹಗರಣ ಆಗುತ್ತದೆಂದರೆ ಏನರ್ಥ? ಯಾರವರು? ಇದರ ಹಿಂದೆ ಯಾರಿದ್ದಾರೆ? ಉದಾಹರಣೆಗೆ ಹೇಳುವುದಾದರೆ, ಸಮಾಜ ಕಲ್ಯಾಣ ಇಲಾಖೆಯಲ್ಲಿ 5 ಹೆಚ್.ಪಿ.ಗೆ 29,050 ರೂಪಾಯಿ ತೆಗೆದುಕೊಳ್ಳುತ್ತಾರೆ. ಅದೇ ರೀತಿ ಬೆಂಗಳೂರು ಜಲ ಮಂಡಳಿಯಲ್ಲಿ 61,680 ರೂಪಾಯಿ ತೆಗೆದುಕೊಳ್ಳುತ್ತಾರೆ, ಕರ್ನಾಟಕ ನೀರು ಸರಬರಾಜು ಮಂಡಳಿಯಲ್ಲಿ 55 ಲಕ್ಷ ತೆಗೆದುಕೊಳ್ಳುತ್ತಾರೆ. ಇದೇ ರೀತಿ 10 ಹೆಚ್.ಪಿ.ಯದು ಎಲ್ಲದರ ದಾಖಲೆ ಹೇಳುವುದಕ್ಕೆ ಹೋದರೆ ಇದೇನು ಸ್ವಾಮಿ? ಪರಿಶಿಷ್ಟ ಜಾತಿ ಪಂಗಡಕ್ಕೆ ಕೇಂದ್ರ ಸರ್ಕಾರವೂ ಹಣ ಕೊಡುತ್ತದೆ. ರಾಜ್ಯ ಸರ್ಕಾರವೂ ಹಣ ಕೊಡುತ್ತದೆ.

ಶ್ರೀ ಸಿದ್ದು ಸವದಿ : ರೇವಣ್ಣನವರು ಆ ಪೊಳ್ಳು ಆಪಾದನೆಯನ್ನು ಸಿದ್ಧ ಮಾಡಿ ತೋರಿಸಲಿ? ಏನು ಶಿಕ್ಷೆಯಾಗುತ್ತದೆ ಅದನ್ನು ಅನುಭವಿಸಲು ನಾವು ಸಿದ್ಧರಿದ್ದೇವೆ. ಈ ಅಧಿವೇಶನ ಎಂದಿನಿಂದ ಶುರುವಾಗಿದೆ ಅಂದಿನಿಂದ ತಳಬುಡವಿಲ್ಲದೆ ಆಪಾದನೆ ಮಾಡುವುದೇ ಆಗಿದೆ. ಸರ್ಕಾರದ ಮೇಲೆ ಗೂಬೆ ಕೂರಿಸುವ ಕೆಲಸ ಮಾಡುವುದೇ ವಿನಃ ಅದರಲ್ಲಿ ಯಾವಾಗಲೂ ಎಳ್ಳಷ್ಟೂ ಸತ್ಯಾಂಶವಿಲ್ಲ. (ಗೊಂದಲ) ಅದಕ್ಕೇ ಇಲ್ಲಿ ರೆಕಾರ್ಡ್ ಇದೆ. ಸುಳ್ಳು ಆಪಾದನೆ ಮಾಡುವುದಕ್ಕೂ ಒಂದು ಮಿತಿ ಬೇಕಲ್ಲವೇ?

(ಗೊಂದಲ)

ಶ್ರೀ ವೈ.ಎನ್. ರುದ್ರೇಶ್‌ಗೌಡ : ಪತ್ರಿಕೆಯಲ್ಲಿ ಬಂದಿದೆ.

ಶ್ರೀ ಬಿ.ರಮಾನಾಥ ರೈ : ಪತ್ರಿಕೆಯಲ್ಲಿ ಬಂದಿರುವುದು ಸುಳ್ಳಾದರೆ ಗೌರವಾನ್ವಿತ ಸದಸ್ಯರು ಪತ್ರಿಕೆ ಮೇಲೆ ಮಾನನಷ್ಟ ಮೊಕದ್ದಮೆ ಹೂಡಲಿ.

ಶ್ರೀ ಸಿದ್ದ ಸವದಿ : ಮಾನ್ಯ ಅಧ್ಯಕ್ಷರೆ, ಈಗ ಇವರೇನು ಪಂಪ್‌ಸೆಟ್ ಹಗರಣದ ಬಗ್ಗೆ ಆಪಾದನೆ ಮಾಡಿದ್ದಾರೆ ಇದರಲ್ಲಿ ಎಳ್ಳಷ್ಟೂ ಸತ್ಯಾಂಶವಿಲ್ಲ. ಅವರು ಕೇವಲ ಆ ಕಂಪನಿಯ ಅಂಕಿ ಸಂಖ್ಯೆಯನ್ನು ಕೊಟ್ಟಿದ್ದಾರೆ. ಮೂರು ವರ್ಷದ ಟರ್ನ್ ಓವರ್ ಅವರದ್ದು. ಕರ್ನಾಟಕ ರಾಜ್ಯದೊಳಗೆ ಒಂದೂವರೆ ಕೋಟಿ ಪಂಪ್‌ಸೆಟ್‌ಗಳನ್ನು ಮಾತ್ರ ಈ ಮೂರು ಇಲಾಖೆಗಳಿಗೆ ಅವರು

ಕೊಟ್ಟಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಒಂದೂ ಪಂಪ್‌ಸೆಟ್‌ನ್ನು ಕೊಟ್ಟಿಲ್ಲ.

(ಗೊಂದಲ)

ಅಧ್ಯಕ್ಷರು : ಈ ಹಗರಣಗಳ ಬಗ್ಗೆ ವಿಶೇಷ ಅಧಿವೇಶನದಲ್ಲಿ ಮಾತನಾಡುವಿರಂತೆ. ಆಗ ನಿಮಗೆ ಇದರ ಬಗ್ಗೆ ಮಾತನಾಡಲು ಅವಕಾಶ ಕೊಡುತ್ತೇನೆ.

ಶ್ರೀ ಸಿದ್ದು ಸವದಿ : ಇವರು ಈ ರೀತಿ ಸತ್ಯಕ್ಕೆ ದೂರವಾದ ಆಪಾದನೆ ಮಾಡಿ ಸದನದ ಅತ್ಯಂತ ಅಮೂಲ್ಯವಾದ ಸಮಯವನ್ನು ಹಾಳು ಮಾಡಿದ್ದಾರೆ. ಒಂದು ಚೂರೂ ಕೂಡ ಅದರಲ್ಲಿ ಸತ್ಯಾಂಶವಿಲ್ಲ. ಎಳ್ಳಷ್ಟೂ ಸಹಿತ ಸತ್ಯ ಹೊರಗೆ ಬರುವುದಿಲ್ಲ.

ಶ್ರೀ ಹೆಚ್. ಡಿ. ರೇವಣ್ಣ : ನಾನು ಅದರ ಬಗ್ಗೆ ಹೇಳುತ್ತೇನೆ.

ಅಧ್ಯಕ್ಷರು : ರೇವಣ್ಣನವರೆ, ಸಿದ್ದು ಸವದಿಯವರೆ, ಈ ಹಗರಣಗಳ ಬಗ್ಗೆಯೇ ವಿಶೇಷ ಅಧಿವೇಶನದಲ್ಲಿ ನಿಮಗೆ ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

ಶ್ರೀ ಸಿದ್ದು ಸವದಿ : ಇವರು ಈ ರೀತಿಯ ಪೊಳ್ಳು ಆಪಾದನೆ ಮಾಡಿದಾಕ್ಷಣ ಈ ರಾಜ್ಯದಲ್ಲಿ ಬಿ.ಜೆ.ಪಿ.ಗಿರುವ ಹೆಸರೇನು ಕೆಡುವುದಿಲ್ಲ. ನಾವು ಮತ್ತಷ್ಟು ಮೇಲೆ ಬರುತ್ತೇವೆ ಮತ್ತು ನೀವು ಮತ್ತಷ್ಟು ಕೆಳಮಟ್ಟಕ್ಕೆ ಹೋಗುತ್ತೀರಿ. ಅದನ್ನು ಅರ್ಥ ಮಾಡಿಕೊಳ್ಳಿ. ಜನರು ನಿಮ್ಮ ಬಗ್ಗೆ ಚೆನ್ನಾಗಿ ತಿಳಿದು ಕೊಂಡಿದ್ದಾರೆ.

ಅಧ್ಯಕ್ಷರು : ಸಿದ್ದುರವರೆ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, 25 ಇಲಾಖೆಗಳ ಬೇಡಿಕೆಗಳ ಮೇಲೆ ಚರ್ಚೆ ನಡೆಯುತ್ತಿರುವುದು. ಸುಮಾರು 60 ಸಾವಿರ ಕೋಟಿ ರೂಪಾಯಿಗಳ ಬೇಡಿಕೆಗೆ ನಾವು ಇವತ್ತು ಒಪ್ಪಿಗೆಯನ್ನು ಕೊಡಬೇಕಾಗಿದೆ. ಈ ರೀತಿ ಒಪ್ಪಿಗೆಯನ್ನು ಕೊಡುವ ಮುಂಚೆ ವಿರೋಧ ಪಕ್ಷದಲ್ಲಿರುವ ನಾವುಗಳು ಮಾತನಾಡಬಾರದೆ? ಅವರು ಹೇಳಲಿ, ದಯವಿಟ್ಟು ನೀವು ಮಾತನಾಡಬೇಡಿ, ಸ್ವಾಮಿ ನಾವು ಏನು ಬೇಕಾದರೂ ಲೂಟಿ ಮಾಡಿಕೊಂಡು ಹೋಗುತ್ತೇವೆಂದರೆ, ನಾನು ಸುಮ್ಮನೆ ಕುಳಿತುಕೊಂಡು ಬಿಡುತ್ತೇನೆ ಸ್ವಾಮಿ. ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಹೇಗೆ ನಡೆಯುತ್ತಿದೆ ಎಂಬುದಕ್ಕೆ ನಾನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಒಂದು ಉದಾಹರಣೆ ಕೊಡುತ್ತೇನೆ. ದಿನಾಂಕ: 31-07-2007 ರಲ್ಲಿ ರಾಜ್ಯದ ಮುಖ್ಯ

ಕಾರ್ಯದರ್ಶಿಗಳು ಸುಪ್ರೀಂಕೋರ್ಟ್ ಮುಂದೆ affidavit ಹಾಕುತ್ತಾರೆ. ಅದರಲ್ಲಿ ಏನು ಹೇಳಿದ್ದಾರೆಂದರೆ ಪೌಷ್ಠಿಕ ಆಹಾರವನ್ನು ಸರಬರಾಜು ಮಾಡಲಾಗುವುದು ಎಂದಿದ್ದಾರೆ. ಸುಪ್ರೀಂಕೋರ್ಟ್ ಡೈರೆಕ್ಷನ್ 2001ರಲ್ಲಿ ಬರುತ್ತದೆ. 31-05-2007ರೊಳಗೆ, ರಾಜ್ಯದಲ್ಲಿರುವ ಎಲ್ಲಾ ಅಂಗನವಾಡಿ ಕೇಂದ್ರಗಳಲ್ಲಿ ಫಲಾನುಭವಿಗಳಿಗೆ ಆಹಾರವನ್ನು ವಿತರಿಸುವುದು, ಮಹಿಳಾ ಮಂಡಳಿಗಳಿಗೆ, ಸ್ವಶಕ್ತಿ ಗುಂಪುಗಿಗೆ ಹಾಗೂ ಗ್ರಾಮ ಸಮುದಾಯಗಳಿಗೆ ಎರಡು ವರ್ಷದಲ್ಲಿ ಕೊಡುತ್ತೇವೆಂದು ಹೇಳಿದ್ದಾರೆ. ಎರಡು ವರ್ಷದಲ್ಲಿ ಇವೆಲ್ಲವನ್ನೂ ಕೊಡುತ್ತೇವೆ, ಯಾವುದೇ ಟೆಂಡರ್ ಕರೆಯುವುದಿಲ್ಲವೆನ್ನುತ್ತಾರೆ. ಇದಕ್ಕೆ ಕೇಂದ್ರ ಸರ್ಕಾರದಿಂದ ಮತ್ತು ರಾಜ್ಯ ಸರ್ಕಾರದಿಂದ ಕೂಡ ಹಣ ಬರುತ್ತದೆ. ಉದಾಹರಣೆಗೆ ಹೇಳುವುದಾದರೆ, ಮೊನ್ನೆ 19-06-2009ರಲ್ಲಿ ಒಂದು ಅದೇಶವನ್ನು ಹೊರಡಿಸಿದ್ದಾರೆ, ಸರ್ಕಾರಿ ಆದೇಶ 86 ಐಸಿಡಿ, 2009, ದಿನಾಂಕ: 19-06-2009ರ ಸರ್ಕಾರಿ ಆದೇಶದಲ್ಲಿ 112 ಐಸಿಡಿಸಿ, 2007, 28-06-2007, 5 ವರ್ಷದವರೆಗೆ ಮತ್ತೆ ಟೆಂಡರ್ ಇಲ್ಲಾ, ಏನೂ ಇಲ್ಲಾ, 5 ವರ್ಷದವರೆಗೆ without Tender,. ಸುಪ್ರೀಂಕೋರ್ಟ್‌ಗೆ ಒಂದು ಕಡೆ Chief Secretary ಯವರು 31-07-2009 ರೊಳಗೆ ನಾನು ಪೂರ್ಣವಾಗಿ ಆಹಾರ ಸರಬರಾಜು ಮಾಡುತ್ತೇವೆಂದು affidavit ಕೊಡುತ್ತಾರೆ. 60 ಸಾವಿರ ಕೋಟಿ ರೂಪಾಯಿಗಳ ಬೇಡಿಕೆಗಳ ಬಗ್ಗೆ ಒಪ್ಪಿಗೆ ಕೇಳುತ್ತಿದ್ದಾರೆ. ಇದೊಂದು ಇಲಾಖೆಯಲ್ಲಿ ನಡೆದಿರುವುದನ್ನು ಹೇಳಲೇಬೇಕಾಗುತ್ತದೆ. ತಮಿಳುನಾಡಿನಲ್ಲಿ ಹುರಿಗಡಲೆ ಮತ್ತು ಬೇಳೆ ತಯಾರಿಕೆಯ ಕ್ರಿಸ್ಟಿ ಸಂಸ್ಥೆ ಎಂಬುದಿದೆ. ಪಾಪ ಪುಣ್ಯಾತ್ಮರು ಅವರು. ಅವರಿಗೆ . . .

ಅಧ್ಯಕ್ಷರು : ರೇವಣ್ಣನವರೆ, ಟೈಂ ಆಯಿತು, ಬೇಗ ಮುಗಿಸಿ.

ಶ್ರೀ ಹೆಚ್.ಡಿ. ರೇವಣ್ಣ : 60 ಸಾವಿರ ಕೋಟಿ ರೂಪಾಯಿಗಳ ಬೇಡಿಕೆಗಳಿಗೆ ಅನುಮೋದನೆ ಕೊಡಬೇಕಾದರೆ ಇಂಥ ಒಂದು ಉದಾಹರಣೆಯನ್ನು ಹೇಳಲೇಬೇಕಾಗುತ್ತದೆ. ನೀವೇನು ಹೇಳಬೇಡಿ ಎಂದರೆ ನಾವು ಸುಮ್ಮನಿದ್ದುಬಿಡುತ್ತೇವಷ್ಟೆ.

ಶ್ರೀ ಪಿ.ಎಂ.ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) : ಮಾನ್ಯ ರೇವಣ್ಣನವರೆ, ಟೆಂಡರ್ ಯಾರ ಕಾಲದಲ್ಲಿ ಆಗಿದ್ದು.? ಯಾರು ಇದರ ಪಿತಾಮಹರು? ಯಾರು ಇದಕ್ಕೆ ಕಾರಣಕರ್ತರು ಎಂಬ ಬಗ್ಗೆ ಕೂಡ ಸದನಕ್ಕೆ ಸ್ವಲ್ಪ ಬೆಳಕು ಚೆಲ್ಲಿದರೆ ಒಳ್ಳೆಯದಾಗುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖಾ ಸಚಿವರು ಯಾರ ಕಾಲದಲ್ಲಿ ಇದು ಆಯಿತು? ಯಾರು ಇದಕ್ಕೆ ಕಾರಣರು ಎಂಬ ಬಗ್ಗೆ ಕೇಳಿದ್ದಾರೆ. ಅದನ್ನೂ ಬೇಕಾದರೆ ಅವರು ತನಿಖೆ ಮಾಡಿಸಲಿ. ನಾನೇನೂ ಬೇಡವೆಂದು ಹಿಡಿದುಕೊಳ್ಳುವುದಿಲ್ಲ. ಆದರೆ ದಿನಾಂಕ: 31-05-2007 ರಂದು ಸುಪ್ರೀಂಕೋರ್ಟ್‌ಗೆ, ಯಾರಿಗೂ ಕಾಂಟ್ರ್ಯಾಕ್ಟ್ ಕೊಡುವುದಿಲ್ಲವೆಂದು ಹೇಳಿ ಅಫಿಡವಿಟ್ ಕೊಟ್ಟಿದ್ದೀರೋ ಇಲ್ಲವೋ ಹೇಳಿ? ಕೊಟ್ಟಿಲ್ಲವೆಂದರೆ ಹೇಳಿ, ಅದೂ ರೆಕಾರ್ಡ್ ಆಗಲಿ, 31-05-2007 ರಲ್ಲಿ ಈ ರಾಜ್ಯದ Chief Secretaryಯವರು ಸುಪ್ರೀಂಕೋರ್ಟ್ ಮುಂದೆ affidavit ಕೊಟ್ಟಿಲ್ಲವೆಂದು ಹೇಳಲಿ ನೋಡೋಣ: ನಾನು ತಮಗೆ ಸುಪ್ರೀಂಕೋರ್ಟ್ ಆದೇಶದ ಪ್ರತಿಯನ್ನು ಕೊಡುತ್ತೇನೆ.

ಶ್ರೀ ಪಿ. ಎಂ. ನರೇಂದ್ರಸ್ವಾಮಿ : ನಾನು ಆ ರೀತಿ ಹೇಳಲಿಲ್ಲ.

ಶ್ರೀ ಹೆಚ್. ಡಿ. ರೇವಣ್ಣ : ನೀವು ಇಲ್ಲವೆಂದು ಹೇಳುತ್ತೀರಲ್ಲ. ನಿಮಗೆ ಸುಪ್ರೀಂಕೋರ್ಟ್ ಆದೇಶದ ಪ್ರತಿಯನ್ನು ತಮಗೆ ಕೊಡುತ್ತೇನೆ. ನಿಮಗೆ ರಿಟ್ ನಂಬರ್‌ನ್ನೂ ಕೂಡ ಹೇಳಿಬಿಡುತ್ತೇನೆ. Writ Petition No. 196, IP 40/41, 2004, ನ್ಯಾಯಮೂರ್ತಿಗಳು ವೈ.ಕೆ. ಸಬರ್‌ವಾಲ್, ನಾಯಮೂರ್ತಿ ತರುಣ್ ಚಟರ್ಜಿ, ಗುತ್ತಿಗೆದಾರರ ಪೌಷ್ಠಿಕ ಆಹಾರವನ್ನು ಅಂಗನವಾಡಿಗೆ ಸರಬರಾಜು ಮಾಡುವಂತಿಲ್ಲ. ಅದರಲ್ಲಿಯೂ ಐಸಿಡಿಸಿ ಅನುದಾನವನ್ನು ಆದ್ಯತೆ ಮೇರೆಗೆ ಗ್ರಾಮ ಸಮುದಾಯ, ಸ್ವಶಕ್ತಿ ಗುಂಪು, ಮಹಿಳಾ ಮಂಡಳಿ ಮೂಲಕ ಆಹಾರ ಧಾನ್ಯಗಳನ್ನು ಊಟ ತಯಾರಿಸಲು ಕ್ರಮ ಜರುಗಿಸುವಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯ ಆದೇಶ ಮಾಡಿದೆ. ಅದನ್ನು ನೀವು, ನಮ್ಮ ಹತ್ತಿರ ಇಲ್ಲ ಮಾಡುವುದಕ್ಕೆ ಎಂದು ಹೇಳಿದ್ದೀರಿ.

ಶ್ರೀ ಪಿ.ಎಂ. ನರೇಂದ್ರಸ್ವಾಮಿ : ಆ ರೀತಿ ಹೇಳಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಒಂದೆರಡು ನಿಮಿಷ ಇರಿ ಸಾರ್. ನೀವು ಮಾಡಿಲ್ಲ. ಆದರೆ ಇದರಲ್ಲಿ ಕಾಣದ ಕೈಗಳ ಕೈವಾಡವಿದೆ. ನೀವೇಕೆ ತಲೆ ಕೆಡಿಸಿಕೊಳ್ಳುತ್ತೀರಿ. ಇದರಲ್ಲಿ ಕಾಣದ ಕೈಗಳು ಇವೆ. ಪಾಪ ನಿಮಗೆ ಇದು ಗೊತ್ತಿಲ್ಲ. ಪಾಪ, ಅವರು ಹೇಳಿದ ಕಡೆಯಲೆಲ್ಲಾ ನೀವು ಸಹಿ ಹಾಕಿದ್ದೀರಿ. ಆದುದರಿಂದ ಇವೆಲ್ಲವೂ ನಿಮಗೆ ಗೊತ್ತಾಗಲಿ ಎಂದು ಹೇಳುತ್ತಿದ್ದೇನೆ. ಇದೊಂದರಲ್ಲಿಯೇ ಮೂರು ವರ್ಷಕ್ಕೆ ಪ್ರತಿ ವರ್ಷ 470 ಕೋಟಿ ರೂ.ಗಳಂತೆ 1400 ಕೋಟಿ ರೂಪಾಯಿಗಳ ಲಾಸ್ ಸರ್ಕಾರಕ್ಕೆ ಆಗುತ್ತದೆ.

ಯಾರೋ ಒಬ್ಬ ತಮಿಳುನಾಡಿನ ಕಂಪನಿಯವನಿಗೆ ಕೊಟ್ಟರೇ ಹೇಗೆ? ಈ ರಾಜ್ಯದಲ್ಲಿ 55 ಸಾವಿರ ಅಂಗನವಾಡಿಗಳಿವೆ.

ಶ್ರೀ ಎಸ್.ಶಿವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರಿಗೆ 400 ಕೋಟಿ, 400 ಕೋಟಿ ಎಂದು ಹೇಳುವುದೇ ಜಾಸ್ತಿಯಾಗಿದೆ. ದುರಾದೃಷ್ಟ ಬರೇ 400 ಕೋಟಿ, 400 ಕೋಟಿ ಎಂದೇ ಹೇಳುತ್ತಿದ್ದೀರಲ್ಲ, ನನಗಂತೂ ಅರ್ಥವಾಗುತ್ತಿಲ್ಲ. 400 ಚಿಲ್ಲರೆ ಕೋಟಿ ಕೆ.ಎಸ್.ಆರ್.ಟಿ.ಸಿ.ಯದ್ದು ಹೇಳಿದರು. ಈಗ ಇದ್ಯಾವುದೋ 400 ಕೋಟಿಯದ್ದು ಎಂದು ಹೇಳುತ್ತಿದ್ದಾರೆ. ಅದೆಷ್ಟು 400 ಕೋಟಿ ರೂಪಾಯಿಗಳದ್ದು ಇವೆಯೋ ಅವೆಲ್ಲವನ್ನೂ ಒಂದೊಂದಾಗಿ ಹೇಳಿಬಿಡಿ. ಸದನಕ್ಕೆ ಬೆಳಕು ಚೆಲ್ಲಿದಂತಾಗುತ್ತದೆ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ 1 ಲಕ್ಷ 40 ಸಾವಿರ ಸ್ತ್ರೀಶಕ್ತಿ ಸಂಘಗಳಿವೆ. ಇವರು ಅವರ ಮುಖಾಂತರ ಮಾಡಿಸಿದ್ದರೆ ಯಾರಾದರೂ ಬೇಡವೆನ್ನುತ್ತಿದ್ದರೆ? ಸುಮಾರು 55 ಸಾವಿರ ಅಂಗನವಾಡಿಗಳಿವೆ. ಅವರ ಕಡೆಯಿಂದ ಮಾಡಿಸಿದ್ದರೆ ಯಾರಾದರೂ ಬೇಡವೆನ್ನುತ್ತಿದ್ದರೆ? ಯಾರಾದರೂ ಇವುಗಳ ಮುಖಾಂತರ ಮಾಡಿಸಬೇಡಿ ಎಂದು ಹಿಡಿದುಕೊಂಡಿದ್ದರೆ? ಟೆಂಡರ್ ಕರೆಯದೆ ಯಾವ ಉದ್ದೇಶಕ್ಕೆ ಇವರಿಗೆ ಕೊಟ್ಟರು?

ಶ್ರೀ ಪಿ.ಎಂ.ನರೇಂದ್ರಸ್ವಾಮಿ: ಈ ಆಗಸ್ಟ್ ಒಂದರಿಂದಲೇ ನಾವು ಸ್ತ್ರೀಶಕ್ತಿ ಗುಂಪುಗಳ ಮುಖಾಂತರವೇ . . . .

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, 137 ತಾಲ್ಲೂಕುಗಳದ್ದನ್ನು ಈಗಾಗಲೇ ಬೇರೆಯವರಿಗೆ ಆರ್ಡರ್ ಕೊಟ್ಟಿದ್ದಾರೆ. ಇದರಿಂದಾಗಿ ಸುಮಾರು ಮೂರು ವರ್ಷಕ್ಕೆ 1400 ಕೋಟಿ ರೂಪಾಯಿಗಳ ನಷ್ಟವಾಗುತ್ತದೆ. ಮುಖ್ಯ ಕಾರ್ಯದರ್ಶಿಗಳು ದಿನಾಂಕ: 31-05-2007ರಲ್ಲಿ ಸುಪ್ರೀಂ ಕೋರ್ಟ್‌ಗೆ ಅಫಿಡವಿಟ್ ಕೊಡುತ್ತಾರೆ. 31-07-2009 ರೊಳಗೆ ನಾವು ಆಹಾರ ಸರಬರಾಜು ಮಾಡುತ್ತೇವೆಂದು ಅಫಿಡವಿಟ್ ಕೊಡುತ್ತಾರೆ. ನಿಮ್ಮ ಮುಖ್ಯ ಕಾರ್ಯದರ್ಶಿಗಳ ಅಫಿಡವಿಟ್ ಏನಾಯಿತು ಸ್ವಾಮಿ? ಇದರ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರೆಂದು ದಯಮಾಡಿ ಹೇಳಿ. ಉದಾಹರಣೆಗೆ ಹೇಳುವುದಾದರೆ, ಈ ನಿಮ್ಮ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಇದೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ಗೆ ಕೊಟ್ಟಿಲ್ಲವೆ? ಟೆಂಡರ್‌ಗೆ ಹೋಗಬೇಕಾದ ಇದರ ಎಂ.ಡಿ. ಇವರ ಜೊತೆ collude ಆಗಿ ಅರ್ಧ ಗಂಟೆ

ಲೇಟಾಗಿ ಹೋಗುತ್ತಾನೆ. ಈ ಎಂ.ಡಿ. ಮೇಲೆ ಕ್ರಮ ತೆಗೆದುಕೊಳ್ಳುತ್ತೀರ? ನೀವು ಬೇರೆಯವರಿಗೆ 400 ಕೋಟಿಗೆ ಕೊಟ್ಟಿದ್ದೀರಲ್ಲ, ಅದೇ 100 ಕೋಟಿ ರೂಪಾಯಿಗೆ ಆಗ್ರೋ ಇಂಡಸ್ಟ್ರೀಸ್‌ನವರಿಗೆ ಕೊಟ್ಟಿದ್ದರೆ. . .

ಶ್ರೀ ಪಿ.ಎಂ.ನರೇಂದ್ರಸ್ವಾಮಿ : ಒಂದು ನಿಮಿಷ ಯೀಲ್ಡ್ ಆಗಿ. ಇದರ ಬಗ್ಗೆ ಸಂಪೂರ್ಣವಾಗಿ ಚರ್ಚೆ ಮಾಡಲು ಅವಕಾಶವಿದೆ. ವಿಶೇಷ ಅಧಿವೇಶನ ಇದಕ್ಕಾಗಿ ನಡೆಸಬಹುದು ಎಂದು ಮಾನ್ಯ ಮುಖ್ಯಮಂತ್ರಿಗಳು ಕೂಡ ಹೇಳಿದ್ದಾರೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತೆ ವಿಶೇಷ ಅಧಿವೇಶನ ಕರೆದಾಗ ಇದರ ಬಗ್ಗೆ ಚರ್ಚೆ ಮಾಡೋಣ. ಆದರೆ ಈಗಾಗಲೇ 137 ತಾಲ್ಲೂಕುಗಳದ್ದನ್ನು ಕೊಟ್ಟಿದ್ದೀರಲ್ಲ ಅದನ್ನು ಇವತ್ತೇ ಸ್ಟಾಪ್ ಮಾಡಿ.

ಶ್ರೀ ಪಿ. ಎಂ. ನರೇಂದ್ರಸ್ವಾಮಿ : ಒಂದು ನಿಮಿಷ ಯೀಲ್ಡ್ ಆಗಿ.

ಶ್ರೀ ಹೆಚ್. ಡಿ. ರೇವಣ್ಣ : ಏನು ಯೀಲ್ಡ್ ಆಗುವುದು.

ಶ್ರೀ ಪಿ.ಎಂ. ನರೇಂದ್ರಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ಅವರು ಆಗ್ರೋ ಪ್ರಾಡಕ್ಟ್ಸ್ ಕಂಪನಿಯ ಬಗ್ಗೆ ಮಾತನಾಡುತ್ತಿದ್ದರೆ, ಅದರ ಪೂರ್ಣ ವೃತ್ತಾಂತ ವನ್ನು ಚರ್ಚೆ ಮಾಡಬೇಕಾದರೆ ಕನಿಷ್ಠವಾದರೂ ಅರ್ಧಗಂಟೆ ಬೇಕಾಗುತ್ತದೆ. ಅವರು ಯಾವ್ಯಾವ ಸಂದರ್ಭದಲ್ಲಿ failure ಆಗಿದ್ದಾರೆ, ಇದಕ್ಕೆ eligible ಇದ್ದರೋ ಇಲ್ಲವೋ supply ಮಾಡುವ capacity ಇತ್ತೋ ಇಲ್ಲವೋ ಇದರ ಬಗ್ಗೆ ನಿಮಗೆ ಮಾಹಿತಿ ಇದ್ದರೂ ಕೂಡ, ನೀವು ಅಧಿಕಾರದಲ್ಲಿದ್ದಾಗ ಸಂಪುಟ ಸಭೆಯಲ್ಲಿ ಇದಕ್ಕೆ ಅನುಮೋದನೆಯನ್ನು ಕೊಟ್ಟಿರುವುದನ್ನು, ಮತ್ತು ನಾವು ಅದನ್ನೇ ಅನುಷ್ಠಾನಗೊಳಿಸುವುದನ್ನು, ಸುಪ್ರೀಂ ಕೋರ್ಟ್ ತೀರ್ಪು ಕೊಟ್ಟಿರುವುದನ್ನು ಯಥಾವತ್ತಾಗಿ ನಾವು ಜಾರಿಗೊಳಿಸುತ್ತಿದ್ದೇವೆ. ಈ ಬಗ್ಗೆ ತಪ್ಪು ಮಾಹಿತಿಯನ್ನು ಸದನಕ್ಕೆ ಕೊಡುತ್ತಿರುವುದು ಸರಿಯಲ್ಲವೆಂಬುದನ್ನು ನಾನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾನೇನಾದರೂ ತಪ್ಪು ಮಾಹಿತಿಯನ್ನು ಕೊಟ್ಟರೆ, ಉತ್ತರ ಕೊಡುವವರು ರೆಕಾರ್ಡ್ ತೆಗೆದುಕೊಂಡು ಹೇಳಲಿ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಮಂತ್ರಿಗಳು ಕೊಟ್ಟಿರುವ ಉತ್ತರ ಸರಿಯಾದ ನಿರ್ಧಾರವಲ್ಲ. ಒಂದು ವರ್ಷಕ್ಕೆ ಮಕ್ಕಳಿಗೆ ಸುಮಾರು 150 ಕೋಟಿ ರೂಪಾಯಿಗಳಷ್ಟು ಆಹಾರ ಸಾಮಗ್ರಿಗಳನ್ನು ಒದಗಿಸುತ್ತೀರಿ. ಆಗ್ರೋ ಪ್ರೋಟೀನ್ ಅವರು ಸರಿಯಾಗಿ ಮಾಡಲಿಲ್ಲವೆನ್ನುವ ಕಾರಣಕ್ಕೋಸ್ಕರ ತಮಿಳುನಾಡು ಕಂಪನಿಗೆ ಕೊಡುತ್ತೀರಿ. ನಿಮ್ಮ ಇಲಾಖೆ ಮತ್ತು ಆಗ್ರೋ ಪ್ರೋಟೀನ್ ಅವರು ಕುಳಿತುಕೊಂಡು captive unit ಆಗಿ convert ಮಾಡಿ ಮಾಡಿಕೊಡಲು ನಿಮಗೆ ಆಗುತ್ತಿರಲಿಲ್ಲವೇ? ನೀವು Bureucratic ಆಗಿ answer ಮಾಡುತ್ತೀರಲ್ಲಾ? ನೀವು ಯಾರೋ ತಮಿಳುನಾಡು ಕಂಪನಿಗೆ ಸಹಾಯ ಮಾಡುವುದಕ್ಕೆ ಹೊರಟಿದ್ದೀರಿ. ಏಕೆ ಸರ್ಕಾರದ ಸ್ವಾಮ್ಯದಲ್ಲಿರುವ ಸಂಸ್ಥೆಗೆ ನೀವೇ ಹಣ ಕೊಟ್ಟು ಮಾಡುವುದಕ್ಕಾಗುತ್ತಿರಲಿಲ್ಲವೇ?

ಶ್ರೀ ಪಿ.ಎಂ.ನರೇಂದ್ರಸ್ವಾಮಿ : ಈ ಬಗ್ಗೆ ಸಿಎಜಿ ವರದಿ ಇದೆ.

ಶ್ರೀ ಟಿ.ಬಿ.ಜಯಚಂದ್ರ : ನಿಮ್ಮ ಸಿಎಜಿ ವರದಿಯನ್ನು ನಾನು ನೋಡಿದ್ದೇನೆ, ಸಿಎಜಿ ವರದಿ ಬೇಡ, ನೀವು ಮಾಡಿರುವ ತಪ್ಪಿಗೆ ಸಿಎಜಿ ವರದಿ ಕೊಡುತ್ತಾರೆ. ನೀವು ಒಂದು captive unit ಆಗಿ ಏತಕ್ಕೆ ರನ್ ಮಾಡಲಾಗುವುದಿಲ್ಲ. ಅದು ಅರ್ಥವಾಗುವುದಿಲ್ಲವೇ ನಿಮಗೆ? captive unit ಆಗಿ ಮಾಡಿದರೆ 150 ಕೋಟಿ ರೂಪಾಯಿಗಳಷ್ಟು ಗುಣಮಟ್ಟದ ಆಹಾರ ಸಾಮಗ್ರಿಳನ್ನು ಒದಗಿಸಲು ಸಾಧ್ಯವಾಗುತ್ತದೆ. ನೀವು ಏಕೆ, ಈ ರೀತಿಯಾಗಿ ಉತ್ತರವನ್ನು ಕೊಡುತ್ತೀರಿ? ನಿಮ್ಮಲ್ಲಿ ಮಾಡುವುದಕ್ಕೆ ಅವಕಾಶವಿದೆ, ಶಕ್ತಿ ಇದೆ, ಹಣವಿದೆ, ನಮ್ಮ ಮಕ್ಕಳಿಗೆ ಸೇರುವುದನ್ನು ಮಾಡಿ, ಬೇರೆ ರಾಜ್ಯದವರಿಗೆ ಸಹಾಯ ಮಾಡುವುದನ್ನು ಕೈಬಿಡಿ. ಸಿಎಜಿ ವರದಿಯನ್ನು ಭಾರಿ ದೊಡ್ಡದಾಗಿ ಇಟ್ಟು ಕೊಂಡು, ಸಿಎಜಿ ವರದಿ ಎಂದು ಹೇಳುವುದಕ್ಕೆ ಬಂದಿದ್ದೀರಾ? ನೀವು ಮಾಡುವುದಕ್ಕಾಗಲಿಲ್ಲವೆಂಬುದನ್ನು ಒಪ್ಪಿಕೊಳ್ಳಿ.

ಶ್ರೀ ಪಿ.ಎಂ.ನರೇಂದ್ರಸ್ವಾಮಿ : ತಾವು ಕೂಡ ಕೃಷಿ ಸಚಿವರಾಗಿದ್ದೀರಿ, ತಮ್ಮ ಅವಧಿಯಲ್ಲಿಯೆ ಇದು ನಡೆಯುತ್ತಿತ್ತು.

ಶ್ರೀ ಟಿ.ಬಿ.ಜಯಚಂದ್ರ : ನನ್ನ ಕಾಲದಲ್ಲಿ ಇದನ್ನು ಕೊಟ್ಟಿರಲಿಲ್ಲ, ಗುಣಮಟ್ಟ ಇಂಪ್ರೂವ್ ಮಾಡುವುದಕ್ಕೆ 5–6 ಕೋಟಿ ರೂಪಾಯಿಗಳ ಬಂಡವಾಳವನ್ನು ಹಾಕಿದರೆ ಸಾಕು.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ರೇವಣ್ಣನವರು without tender ಖರೀದಿ ಮಾಡಲೇ ಇಲ್ಲವೆಂದು ಹೇಳಿದರು ಹಾಗೆ ಹೇಳಿದರೆ ಏನರ್ಥ?

ಶ್ರೀ ಹೆಚ್.ಡಿ.ರೇವಣ್ಣ : ಇವರಿಗೆ without tender ಕರೆಯದೇ ಕೊಟ್ಟಿದ್ದಾರೆ.

ಶ್ರೀ ಅರವಿಂದ ಲಿಂಬಾವಳಿ : without tender ಕರೆಯದೆ ಎಂದರೆ ಏನರ್ಥ?

ಶ್ರೀ ಹೆಚ್.ಡಿ.ರೇವಣ್ಣ : ನನಗೆ ಗೊತ್ತಿಲ್ಲ, ನಾನು ನಿಮ್ಮಷ್ಟು ಬುದ್ಧಿವಂತನಲ್ಲ.

ಶ್ರೀ ಹೆಚ್.ಜಿ.ಬಾಲಕೃಷ್ಣ : ಟೆಂಡರ್ ಕರೆಯದೆ ಖರೀದಿ ಮಾಡುವುದಕ್ಕೆ ಹೊರಟಿದ್ದಾರೆಂದು ಹೇಳಿದರು, ನೀವೆಲ್ಲಾ ಮೇಧಾವಿಗಳು, ಬುದ್ಧಿವಂತರು, ಉನ್ನತ ಶಿಕ್ಷಣ ಸಚಿವರು, ನಾವೆಲ್ಲಾ ದಡ್ಡರಿದ್ದೇವೆ, ಹೇಳಿಕೊಡಿ.

ಅಧ್ಯಕ್ಷರು : ರೇವಣ್ಣನವರೆ ಟೈಂ ಆಯಿತು ಬೇಗ ಮುಗಿಸಿ.

ಶ್ರೀ ಹೆಚ್.ಡಿ.ರೇವಣ್ಣ : ಇದು 450 ಕೋಟಿ ರೂಪಾಯಿಗಳ ಹಗರಣ, 60,000 ಕೋಟಿ ರೂಪಾಯಿಗಳ ಆಯವ್ಯಯಕ್ಕೆ ಅಪ್ರೂವ್ ಕೊಡುತ್ತಿದ್ದೇವೆ, ನಾನು ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ.

ಅಧ್ಯಕ್ಷರು : ವಿಶೇಷ ಅಧಿವೇಶನದಲ್ಲಿ ಇದನ್ನೆಲ್ಲಾ ಪ್ರಸ್ತಾಪ ಮಾಡಬಹುದಲ್ಲಾ.

ಶ್ರೀ ಹೆಚ್.ಡಿ.ರೇವಣ್ಣ : ಇದಕ್ಕೆ ಅನುಮೋದನೆ ಕೊಡುತ್ತಿರುವಾಗ, ನಿಮ್ಮ ಇಲಾಖೆಯಲ್ಲಿ ಈ ರೀತಿ ಇದೆ ಎಂದು ನಾನು ಹೇಳಬೇಕಲ್ಲ.

(ಗೊಂದಲ)

ಶ್ರೀ ಹೆಚ್.ಜಿ.ಬಾಲಕೃಷ್ಣ : ನಿಯಮ ಅರವತ್ತರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ, ಅವರಿಗೆ ಮಾತನಾಡುವುದಕ್ಕೆ ಸ್ವಲ್ಪ ಅವಕಾಶ ಕೊಡಿ.

ಅಧ್ಯಕ್ಷರು : ರೇವಣ್ಣನವರ ಸಲುವಾಗಿ ವಿಶೇಷ ಅಧಿವೇಶನವಿದೆ, ಆಗ ಎಲ್ಲವನ್ನು ನೀವು ಮಂಡನೆ ಮಾಡಿ.

ಶ್ರೀ ಹೆಚ್.ಡಿ.ರೇವಣ್ಣ : ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ದಿನಾಂಕ: 19–6–2009ರಲ್ಲಿ 5 ವರ್ಷಕ್ಕೆ ಆದೇಶವನ್ನು ಹೊರಡಿಸಿದ್ದಾರೆ, ಪೂರ್ತಿ ಚರ್ಚೆಯಾಗುವವರೆಗೆ ಆ ಆದೇಶವನ್ನು ತಡೆಹಿಡಿದು, 1400 ಕೋಟಿ ರಾಜ್ಯದ ಹಣವನ್ನು ಉಳಿಸಬೇಕಾಗುತ್ತದೆ, ಅದಕ್ಕೆ ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಿಗಳಲ್ಲಿ ಹೇಳುತ್ತಿದ್ದೇನೆ. ಇವತ್ತು ಈ ರಾಜ್ಯದ ಪರಿಸ್ಥಿತಿ ಯಾವ ರೀತಿ ಇದೆ ಎಂದರೆ, 2005ರಲ್ಲಿ 41,000 ಕೋಟಿ ಸಾಲ ಇತ್ತು, ಸನ್ಮಾನ್ಯ ಮುಖ್ಯಮಂತ್ರಿಗಳು ಹಣಕಾಸಿನ ಸಚಿವರಾದ ದಿವಸದಿಂದ ಇಲ್ಲಿಯವರೆಗೆ, ಇವತ್ತು ಈ ರಾಜ್ಯದ ಸಾಲವೆಷ್ಟು ಎಂದರೆ 41,000 ಕೋಟಿಯಿಂದ ಸುಮಾರು 60,000 ಕೋಟಿಗೆ ಏರಿದ್ದು, 20,000 ಕೋಟಿ ಹೆಚ್ಚಿಗೆ ಸಾಲ ಮಾಡಿದ ಕೀರ್ತಿ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಸೇರುತ್ತದೆ. ಅದರ ಜೊತೆಗೆ 2009–10ರಲ್ಲಿ ಈಗ 9000 ಕೋಟಿ ಸಾಲ. ಅದಲ್ಲದೆ ನಿನ್ನೆ ಒಂದು ಬಿಲ್ ತಂದಿದ್ದಾರೆ, 3% ಇರುವುದನ್ನು 4% ಮಾಡಿ, 2009–10ನೇ ಸಾಲಿನಲ್ಲಿ 9000 ಕೋಟಿ ಸಾಲ ತರಲಾಗಿದೆ. ಒಟ್ಟು ಇವತ್ತು ರಾಜ್ಯದ ಜನತೆಯ ಮೇಲಿರುವ ಸಾಲವೆಷ್ಟು ಎಂದರೆ, 60,000 ಕೋಟಿ. ಅದರಲ್ಲಿ ತಾವು ಮುಖ್ಯಮಂತ್ರಿಗಳಾದ ಮೇಲೆ 20,000 ಕೋಟಿ ರೂಪಾಯಿಗಳನ್ನು ರೈತರ ಹೆಸರಿನಲ್ಲಿ ಸಾಲ ಮಾಡಿದ್ದಾರೆ. ಈ ರಾಜ್ಯದ ಐದೂವರೆ ಕೋಟಿ ಜನತೆಗೆ ಈ ಸರ್ಕಾರ ಕೊಟ್ಟಂಥ ಕೊಡುಗೆ ಎಂದರೆ, 2009–10ರಲ್ಲಿ 9000 ಕೋಟಿ ಸಾಲ.

ಒಬ್ಬ ಎಂಪಿ ಗೆದ್ದು 2 ಜನ MLA ಇದ್ದು ದೇವೇಗೌಡರು ಮುಖ್ಯಮಂತ್ರಿಗಳಾಗಿ, ಪ್ರಧಾನಮಂತ್ರಿಗಳಾಗಿ ತೋರಿಸಿದ್ದಾರೆ, ಸ್ವಲ್ಪ ಇರಿ, ಜನರು ಇವರಿಗೆ ಬುದ್ಧಿಕಲಿಸುವ ಕಾಲ ಬರುತ್ತದೆ ಏಕೆ ತಲೆ ಕೆಡಿಸಿಕೊಳ್ಳುತ್ತೀರಿ, 20,000 ಕೋಟಿ ಸಾಲ ಮಾಡಿರುವುದು ಇವರ ಕೀರ್ತಿ. ಇದು ಪ್ರಗತೀನಾ?. ಇವತ್ತು 60,000 ಕೋಟಿ ಬಜೆಟ್ ಇಡುತ್ತೀರಿ, ಮಹಿಳಾ ಮತ್ತು ಮಕ್ಕಳ ಇಲಾಖೆಯಿಂದ 1400 ಕೋಟಿ ಹಗರಣವಿದೆ, ನಾನು ರೂಲ್ 60 ರಲ್ಲಿ ಚರ್ಚೆ ಮಾಡಲು ತರುತ್ತೇನೆಂದರೆ ಎಲ್ಲರು ಕೂಗಾಡುತ್ತಾರೆ, ಪಾರದರ್ಶಕವಾದ ಸರ್ಕಾರ ಇದಕ್ಕೆ ಏತಕ್ಕೆ ಹೆದರಿಕೊಳ್ಳಬೇಕು. ಇವತ್ತು ಈ ಸರ್ಕಾರ 60,000 ಕೋಟಿ ಬಜೆಟ್ ಮಂಡನೆ ಮಾಡುವ ಸಂದರ್ಭದಲ್ಲಿ, ನಾನು ಕೆಲವು ಇಲಾಖೆಗಳ ಮೇಲೆ, ಅದು ಸಾರಿಗೆ ಇಲಾಖೆ ಇರಬಹುದು; ಸಾರಿಗೆ ಇಲಾಖೆಯಲ್ಲಿ ಇವತ್ತು 400 ಕೋಟಿ ರೂಪಾಯಿಗಳ ಹಗರಣವಾಗಿದೆ.

ಅಧ್ಯಕ್ಷರು : ಮತ್ತೆ ರಿಪೀಟ್ ಆಗುವುದು ಬೇಡ.

ಶ್ರೀ ಹೆಚ್.ಡಿ.ರೇವಣ್ಣ : ನಾನು 400 ಕೋಟಿ ರೂಪಾಯಿಗಳ ಹಗರಣವಾಗಿರುವುದು ಕಡತದಲ್ಲಿರುವುದು ಇಲ್ಲವೆಂದರೆ ತನಿಖೆ ಮಾಡು ವುದಕ್ಕೆ ಹೇಳಿ. ಇವತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯದು 400 ಕೋಟಿ, ಪಂಪ್ ಸೆಟ್ ಹಗರಣ 150 ಕೋಟಿ, ನಾವು ಇದನ್ನೆಲ್ಲಾ ಇಲ್ಲಿ ತರುವುದಕ್ಕೆ ಕುಳಿತುಕೊಳ್ಳಿ ಎಂದು ಹೇಳುತ್ತಾರೆ. ಈ ಸರ್ಕಾರದ ಒಂದೂಕಾಲು ವರ್ಷದ ರಾಜ್ಯದ ಜನತೆಗೆ ಕೊಡುಗೆ ಏನೆಂದರೆ, ಈ ವರ್ಷ 9000 ಕೋಟಿ ಸಾಲ, ಮತ್ತೆ 2800 ಕೋಟಿ ಸಾಲಕ್ಕೆ ಅನುಮತಿ ತೆಗೆದುಕೊಂಡಿದ್ದು ಎರಡು ಬಿಟ್ಟರೆ ಹೊಸದಾಗಿ ಏನೂ ಇಲ್ಲ.

ಶ್ರೀ ಬಿ.ಎನ್.ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ಕೆಎಂಎಫ್‌ನಲ್ಲಿ ಹಾಲಿನಂತೆ ಹುದ್ದೆ ಇತ್ತು ಕೆ.ಎಂ.ಎಫ್‌ನಲ್ಲಿ ಅದನ್ನು ಕಳೆದುಕೊಂಡರು ಮಾನ್ಯ ರೇವಣ್ಣನವರಿಗೆ, ಒದಗಿತ್ತು ಉಪ ಮುಖ್ಯಮಂತ್ರಿಗಳ ಸ್ಥಾನ ಇಪ್ಪತ್ತು-ಇಪ್ಪತ್ತರಲ್ಲಿ, ಆಗ ಇವರ ಪಕ್ಷ ವಚನ ಭ್ರಷ್ಟರಾದರು, ನೀವು ಮಾಡಿದ್ದು ಒಂದು ಪ್ರಮಾದ, ಇಡೀ ಜೀವನದಲ್ಲಿ ನೀವು ಮುಖ್ಯಮಂತ್ರಿಗಳಾಗುವುದಿಲ್ಲ, ಅವರು ಹಿಂಡಲಗ ಜೈಲಿನಲ್ಲಿರುವವರು ಮುಖ್ಯಮಂತ್ರಿಗಳಾಗುತ್ತಾರೆಂದು ಹೇಳಿದರಲ್ಲಾ, ನೀವು ಏನು ಆಗುವುದಿಲ್ಲ, ಈ ಕವಿತೆ ನಿಮ್ಮ ರಾಜಕೀಯದಲ್ಲಿ ಮಾಡಿರುವ ಪ್ರಮಾದ.

ಶ್ರೀ ಹೆಚ್.ಡಿ.ರೇವಣ್ಣ : ವಚನ ಭ್ರಷ್ಟರು ನಾವಲ್ಲ, 9000 ಕೋಟಿ ರೂಪಾಯಿಗಳ ಸಾಲ ಮಾಡಿ ನೀವು ವಚನ ಭ್ರಷ್ಟರು. ಬಚ್ಚೇಗೌಡರಿಂದ ನಾನೇನು ಕಲಿಯಬೇಕಾಗಿಲ್ಲ. ನಾನು ಮುಖ್ಯಮಂತ್ರಿಯಾಗಬೇಕೆಂದು ಇಲ್ಲಿ ಹೇಳುವುದಕ್ಕೆ ಬಂದಿಲ್ಲ, ಬಚ್ಚೇಗೌಡರ ಹತ್ತಿರ ಅರ್ಜಿ ಹಾಕಿಲ್ಲ. ಅವರು ಯಾವ ರೀತಿ ಅಧಿಕಾರಕ್ಕೆ ಬಂದರೆಂಬುದು ಇಡೀ ರಾಜ್ಯದ ಜನತೆಗೆ ಗೊತ್ತಿದೆ. ಇವತ್ತು ಈ ರಾಜ್ಯದ ಜನತೆ ತಿಳಿದುಕೊಳ್ಳಬೇಕಾಗಿರುವುದು, 9000 ಕೋಟಿ ಸಾಲ ತೆಗೆದುಕೊಳ್ಳಲಾಗಿದೆ. ಬಚ್ಚೇಗೌಡರ ಪರಿಸ್ಥಿತಿ ನನಗೆ ಗೊತ್ತಿದೆ, 1972 ರಿಂದ ನಾನು ಸಣ್ಣ ಹುಡುಗನಿಂದಲೂ ನೋಡಿದ್ದೇನೆ, ಚಿಕ್ಕೇಗೌಡರ ಕಾಲದಿಂದಲೂ ಬೇಕಾದರೆ ಒಂದು ದಿವಸ ಚರ್ಚೆ ಮಾಡೋಣ, ನಾನು ಚರ್ಚೆಗೆ ರೆಡಿ ಇದ್ದೇನೆ.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವುದು.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ನಾನು ಎಷ್ಟು ಹೊತ್ತು ಮಾತನಾಡಲಿ.

ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಇವತ್ತೇ ಉತ್ತರ ಕೊಡುತ್ತೀರೋ ಅಥವಾ ನಾಳೆ ಕೊಡುತ್ತೀರೋ? ಏಕೆಂದರೆ ನೀವು ಸಾಯಂಕಾಲ ಹೇಳಿದ್ದೆಲ್ಲ ಪತ್ರಿಕೆಗಳಲ್ಲಿ ಬರುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ನಾನು ಬೇಕಾದರೆ ಉತ್ತರವೂ ಕೊಡುವುದಿಲ್ಲ. ನೀವು ಹೇಳಿದ್ದೆಲ್ಲವೂ ಸರಿ ಇದೆ ಎಂದು ಹೇಳಿ ಬೇಕಾದರೆ ಕುಳಿತುಕೊಳ್ಳುತ್ತೇನೆ. ನನಗೇನೂ ಪತ್ರಿಕೆಗಳಲ್ಲಿ ಬರಬೇಕಾಗಿಲ್ಲ, ನನಗೆ ಯಾವುದೇ ಪ್ರಚಾರ ಬೇಕಾಗಿಲ್ಲ. ನಿಮ್ಮ ಅನುಭವದ ಮಾತುಗಳನ್ನು ಕೇಳುವುದಕ್ಕೆ ನಾನು ಇಲ್ಲಿ ಕುಳಿತಿದ್ದೇನೆ.

ಶ್ರೀ ಸಿದ್ದರಾಮಯ್ಯ : I am a true democrat ನಾನೂ ನೀವು ಹೇಳುವುದೆಲ್ಲ ಕೇಳುವುದಕ್ಕೆ ತಯಾರಾಗಿದ್ದೇನೆ. ನಾವು ಹೇಳುವುದೂ ಕೂಡ ಅಷ್ಟೇ ತಾಳ್ಮೆಯಿಂದ ತಾವು ಕೇಳಬೇಕಾಗುತ್ತದೆ. ನಾವು ಹೇಳುವುದೂ ನೀವು ಕೇಳಬೇಕು, ನೀವು ಹೇಳಿದ್ದನ್ನೂ ನಾವು ಕೇಳುತ್ತೇವೆ. Take and give ಇರಲೇಬೇಕು, Give and take ತೆಗೆದುಕೊಳ್ಳಲೇಬೇಕು, that is the democracy. ಮಾನ್ಯ ಅಧ್ಯಕ್ಷರೆ, ನನಗೆ 2009-10ರ ಆಯವ್ಯಯಕ್ಕೆ ಸಂಬಂಧಪಟ್ಟ ಹಾಗೇ ಸರ್ಕಾರದ ಎಲ್ಲಾ ಇಲಾಖೆಗಳನ್ನೂ ಒಟ್ಟಿಗೆ ಹಾಕಿ ಬಿಟ್ಟಿದ್ದೀರಿ. ಪ್ರತಿ ಇಲಾಖೆ ಬಗ್ಗೆ ಪ್ರತ್ಯೇಕವಾಗಿ ಮಾತನಾಡಲಿಕ್ಕೆ ಸಮಯ ಸಿಗಲಿಲ್ಲ. ಸಮಯ ಸಿಕ್ಕಿದ್ದರೆ ಬಹಳ ಹೆಚ್ಚು ಪರಿಣಾಮಕಾರಿಯಾಗಿ ಚರ್ಚೆಯಾಗುತ್ತಿತ್ತು. ಈ ಕಡೆ ಮತ್ತು ಆ ಕಡೆಯ ಅನೇಕ ಜನ ಮಾನ್ಯ ಶಾಸಕರುಗಳಿಗೆ ಅವಕಾಶ ಸಿಗುತ್ತಿತ್ತು. ಡಿಮಾಂಡ್ಸ್ ಮೇಲೆ ಬರೀ ವಿರೋಧ ಪಕ್ಷದವರೇ ಮಾತನಾಡಬೇಕೆಂದೇನೂ ಇಲ್ಲ. ಆಡಳಿತ ಪಕ್ಷದವರೂ ಕೂಡ ಮಾತನಾಡಿ ಅವರ ಅಭಿಪ್ರಾಯಗಳನ್ನು ಸಲಹೆಗಳನ್ನು ಕೊಡಬಹುದು. ಏಕೋ? ಅವರೂ ಕೂಡ ಒಬ್ಬರೂ ಮಾತನಾಡುವುದಕ್ಕೆ ತಯಾರಿಲ್ಲ. ಸಮಯವೂ ಇಲ್ಲ, ಬೇಕೂ ಇಲ್ಲ. ಮಾನ್ಯ ಶ್ರೀನಿವಾಸ್‌ರವರು ನಮ್ಮ ಸ್ನೇಹಿತರು ನಾನು ಮಾತನಾಡುತ್ತೇನೆಂದೇ ನೀವು ಮನೆಗೆ ಹೋಗದೆ ಕುಳಿತಿದ್ದೀರಿ. ನಮ್ಮ ಕಡೆ ಬಹಳ ಜನ ಸದಸ್ಯರು ಮಾತನಾಡುವುದಕ್ಕೆ ತಯಾರಾಗಿ ಕುಳಿತಿದ್ದರು. ಅವರಿಗೆಲ್ಲಾ ಸಮಯ ಸಿಗಲಿಲ್ಲವೆಂದು ನಾನು ಅವರ ಪರವಾಗಿ ವಿಷಾದ ವ್ಯಕ್ತ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ತಮ್ಮಲ್ಲಿಯೂ ಮನವಿ ಮಾಡುತ್ತೇನೆ, ಸರ್ಕಾರ ಇನ್ನು ಮುಂದೆ

ಆದರೂ ಕೂಡ ಅವಕಾಶ ಮಾಡಿಕೊಡಬೇಕು. ಈ ಸದನ ಕರೆದಿರುವುದೇ demands ಮೇಲೆ ಚರ್ಚೆ ಮಾಡಿ ಅವರು ಇಟ್ಟಿರತಕ್ಕಂತಹ ಬೇಡಿಕೆಗಳನ್ನು ನಾವು ಮಂಜೂರು ಮಾಡುವಾಗ ಆ ಇಲಾಖೆಗೆ ಅಷ್ಟು ಹಣ ಮಂಜೂರು ಮಾಡುವುದಕ್ಕೆ ಅವರು ಅರ್ಹರಿದ್ದಾರೋ ಇಲ್ಲವೋ ಎಂದು ನೋಡಬೇಕು. ಏಕೆಂದರೆ ಇಲ್ಲಿ ಸುಮಾರು 60,000 ಕೋಟಿ ರೂ.ಗಳನ್ನು 2009-10ನೇ ಸಾಲಿನ ಆರ್ಥಿಕ ವರ್ಷದಲ್ಲಿ ಸರ್ಕಾರ ಖರ್ಚು ಮಾಡಲಿಕ್ಕೆ ಈ ಸದನದ ಎಲ್ಲಾ ಸದಸ್ಯರ ಒಪ್ಪಿಗೆ ಕೇಳಿ ಇಲ್ಲಿ ಮಂಡಿಸಿದ್ದೀರಿ. ಸಾಮಾನ್ಯವಾಗಿ demandಗಳನ್ನು ವಿರೋಧ ಮಾಡಬಾರದು. ಏಕೆಂದರೆ ನಾಲ್ಕು ತಿಂಗಳವರೆಗೆ ನೀವು Vote on account ತೆಗೆದುಕೊಂಡಿದ್ದೀರಿ. ಈ ತಿಂಗಳು ಕೊನೆಗೆ ಅಂದರೆ 31ನೇ ತಾರೀಖು ಮುಗಿಯುತ್ತಿದೆ. ಆಗಸ್ಟ್ 1ನೇ ತಾರೀಖಿನಿಂದ. ಈ ಸದನ ಏನು ಅನುದಾನಗಳನ್ನು ಕೇಳಿದ್ದೀರಿ ಅದು ಮಂಜೂರು ಮಾಡಿಕೊಳ್ಳದೇ ಹೋದರೆ ಸರ್ಕಾರ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. Since it is a constitutional obligation ನಮಗೆ ಎಷ್ಟೇ ಅಸಮಾಧಾನಗಳು ಇದ್ದರೂ ಕೂಡ ಚರ್ಚೆ ಮಾಡಲಿಕ್ಕೆ ಸಾಕಷ್ಟು ಅವಕಾಶ ಸಿಗಲಿಲ್ಲ ಸರ್ಕಾರ ಈ ಸಾರಿ ಹೆಚ್ಚು ದಿನಗಳ ಕಾಲ ವಿಧಾನಸಭೆ ನಡೆಸಿ ಎಲ್ಲರಿಗೂ ಅವಕಾಶ ಕೊಡಲಿಲ್ಲ ಎನ್ನುವ ಅಸಮಾಧಾನ ಇದೆ. ನಾನು ಈಗಾಗಲೇ ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೂ ಕೂಡ ಹೇಳಿದ್ದೇನೆ. ಇನ್ನು ಮುಂದಾದರೂ ಕೂಡ ಮುಂದಿನ ಬಜೆಟ್ ಮಂಡಿಸುವಾಗ ಇವರೇ ಅಧಿಕಾರದಲ್ಲಿದ್ದರೆ, General Budget and Demands ಇವಕ್ಕೆ ಹೆಚ್ಚು ದಿನಗಳನ್ನು allot ಮಾಡಿ ಎಲ್ಲರೂ ಕೂಡ ಚರ್ಚೆಗೆ ಭಾಗವಹಿಸಲಿಕ್ಕೆ ಅವಕಾಶ ಮಾಡಿ ಕೊಡತಕ್ಕಂಥದ್ದು ಸರ್ಕಾರದ ಜವಾಬ್ದಾರಿ. It is an obligation on the part of the Government. ನಮ್ಮ ಮೇಲೆ ನೀವು ನಿಯಮ 60ರಲ್ಲಿ ವಿಷಯಗಳನ್ನು ತಂದು ಬಿಟ್ಟಿರಿ, ನಿಯಮ 69ರಲ್ಲಿ ವಿಷಯಗಳನ್ನು ತಂದು ಬಿಟ್ಟಿರಿ, ನಿಯಮ 191 ರಲ್ಲಿ ವಿಷಯ ತಂದು ಬಿಟ್ಟಿರಿ ಎಂದು ಹೇಳುವುದಕ್ಕಾಗುವುದಿಲ್ಲ, ಅವೆಲ್ಲ ತರಲೇ ಬೇಕಾಗುತ್ತದೆ. ನೀವು ಸರ್ಕಾರ ನಡೆಸುವಾಗ ನಮಗೆ ಏನು ತಪ್ಪು ಎಂದು ಕಾಣಿಸುತ್ತದೆ ಯಾವುದು ಭ್ರಷ್ಟಾಚಾರ ಎಂದು ಕಾಣಿಸುತ್ತದೆ, ಯಾರು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ ಎಲ್ಲಿ ಅದಕ್ಷತೆ ಇದೆ, ಹಣ ಸರಿಯಾಗಿ ಖರ್ಚು ಮಾಡಿಲ್ಲ, ದುರುಪಯೋಗ ಮಾಡಿದ್ದಾರೆ ಎಂದು ಕಂಡಾಗ ಅದು ನಾವು ತರದೇ ಹೋದರೆ, ನಾವು

ಕರ್ತವ್ಯದಿಂದ ಆತ್ಮವಂಚನೆ ಮಾಡಿಕೊಂಡ ಹಾಗಾಗುತ್ತದೆ, ಕರ್ತವ್ಯ ಚ್ಯುತಿ ಆಗುತ್ತದೆ. ಆ ಕಾರಣಕ್ಕೋಸ್ಕರವಾಗಿ ನಾವು ಅದನ್ನು ಮಾಡಲೇ ಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೆ ತಮಗೂ ಕೂಡ ಇವೆಲ್ಲಾ ಗೊತ್ತಿದೆ. ನೀವೂ ಕೂಡ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು ಇಲ್ಲಿ ಮೂರು ಸಾರಿ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ. ಇಲ್ಲಿ ಕುಳಿತದ್ದನ್ನು ಮರೆತುಬಿಟ್ಟಿದ್ದಾರೆ. ಅಲ್ಲಿಗೆ ಹೋದ ತಕ್ಷಣ ಮುಖ್ಯಮಂತ್ರಿಗಳಾಗಿ ವಿರೋಧ ಪಕ್ಷದಲ್ಲಿದ್ದಾಗ ನಾವು ಏನೇನು ಮಾಡಿದೆವು, ಯಾವ ರೀತಿ ಸರ್ಕಾರಕ್ಕೆ ಟೀಕೆ ಮಾಡುತ್ತಿದ್ದೆವು, ಯಾವ ಭಾಷೆಗಳನ್ನು ಬಳಸುತ್ತಿದ್ದೆವು, ಇವೆಲ್ಲವನ್ನೂ ಕೂಡ ಮರೆತಿದ್ದಾರಲ್ಲೆನ್ನುವುದು ನನಗೆ ಬಹಳ ಬೇಸರ ತರತಕ್ಕಂತಹ ವಿಚಾರ. ಇನ್ನು ಮೇಲಾದರೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ಉದಾರವಾಗಿ ಚರ್ಚೆ ಮಾಡಿ, ನಮ್ಮದು ಪಾರದರ್ಶಕ ಸರ್ಕಾರ ನಾವೆಲ್ಲಾ ಉತ್ತರ ಕೊಡುವುದಕ್ಕೆ ತಯಾರಾಗಿದ್ದೇವೆ, ವಿರೋಧ ಪಕ್ಷದವರು ನೀವು ಏನು ಟೀಕೆ ಮಾಡುತ್ತೀರಿ ಮಾಡಿ. ದಾಖಲಾತಿಗಳ ಮೂಲಕ ಏನು ಆರೋಪಗಳನ್ನು ಮಾಡುತ್ತೀರಿ ಮಾಡಿ, ಇವೆಲ್ಲಕ್ಕೂ ಕೂಡ ಉತ್ತರ ಕೊಡುವುದಕ್ಕೆ ತಯಾರಾಗಿದ್ದೇವೆಂದು ಹೇಳಿದ್ದಾರೆ. ಇಂತಹ ತೆರೆದ ಮನಸ್ಸಿನ ಸರ್ಕಾರ ಇದ್ದರೆ ಚರ್ಚೆ ಕೂಡ ಬಹಳ ಎತ್ತರಕ್ಕೆ ಹೋಗುತ್ತದೆ. ನಮ್ಮ debate ಎತ್ತರಕ್ಕೆ ಹೋಗಬೇಕು. ಅದರ ಗುಣಮಟ್ಟ ಕಡಿಮೆ ಆಗಬಾರದು. ಅದನ್ನು ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಾ, ಮಾನ್ಯ ಅಧ್ಯಕ್ಷರೆ, ಸಮಯ ಬಹಳ ಕಡಿಮೆ ಇದೆ ಆದ್ದರಿಂದ ನಾನು ಇನ್ನು ಹೆಚ್ಚು ದೀರ್ಘವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. introduction ಕಡಿಮೆ ಮಾಡಿ ಬಿಡುತ್ತೇನೆ.

ನಿಮಗೆ ಮತ್ತು ನಮಗೆ ಏಕೆ ಜಗಳ? ಹೇಗೆ ಮಾತನಾಡಬೇಕೆಂಬುದನ್ನು ಬರೆದು ಕೊಟ್ಟು ಬಿಡಿ. ನಾನು ಅದೇ ರೀತಿ ಮಾತನಾಡಿ ಕುಳಿತುಬಿಡುತ್ತೇನೆ. ಜಗಳವೇ ಬೇಡ, ಇಬ್ಬರೂ ಚೆನ್ನಾಗಿ ಇರೋಣ.

ಶ್ರೀ ಅರವಿಂದ ಲಿಂಬಾವಳಿ : ನೀವು ಚೆನ್ನಾಗಿ ಮಾತನಾಡುತ್ತೀರಿ ಎಂದು ತಿಳಿದು ನಿಮ್ಮ ಮಾತುಗಳನ್ನು ಕುಳಿತು ಕೇಳುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಕಳೆದ ಮೂರು ವರ್ಷಗಳಿಂದ ಹಣಕಾಸಿನ ಮಂತ್ರಿಗಳಾಗಿದ್ದಾರೆ. ಅವರೇನು ಈ ವರ್ಷ ಹಣಕಾಸಿನ ಮಂತ್ರಿಗಳಾದವರಲ್ಲ. ಅವರು ಈ ಒಂದೇ

ಬಜೆಟ್ ಅನ್ನು ಮಂಡಿಸಿಲ್ಲ. ಅವರು ಒಟ್ಟು 3 ಆಯವ್ಯಯಗಳನ್ನು ಮಂಡಿಸಿದ್ದಾರೆ. ಅವರಿಗೆ ಸಾಕಷ್ಟು ಅನುಭವವಾಗಿದೆ. ಅವರು ನಮ್ಮದು ಒಂದೇ ವರ್ಷದ ಸರ್ಕಾರವೆಂದು ಹೇಳುವಂತಿಲ್ಲ. ಹಿಂದೆ ಕೂಡ 20 ತಿಂಗಳು ಸರ್ಕಾರ ನಡೆಸಿದ್ದಿರಿ. ಆಗಲೂ ನೀವೇ ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಹಣಕಾಸಿನ ಮಂತ್ರಿಗಳಾಗಿದ್ದಿರಿ. ಹಾಗಾಗಿ ಕಳೆದ 3 ವರ್ಷಗಳಿಂದ ಈ ರಾಜ್ಯದ ಹಣಕಾಸನ್ನು ನೋಡಿಕೊಳ್ಳತಕ್ಕ ಜವಾಬ್ದಾರಿ ಮಾನ್ಯ ಯಡಿಯೂರಪ್ಪ ಅವರದೇ ಆಗಿತ್ತು. ಮಧ್ಯೆ ಯಾರೂ ಬಂದಿಲ್ಲ. ಮಧ್ಯೆದಲ್ಲಿ ರಾಷ್ಟ್ರಪತಿಗಳ ಆಡಳಿತ ಸ್ವಲ್ಪ ದಿನ ಬಂದಿತ್ತು. ಅದು ಹೋದ ಮೇಲೆ ಮತ್ತೆ ಇವರೇ ಹಣಕಾಸಿನ ಮಂತ್ರಿಗಳಾಗಿದ್ದಾರೆ. 2004-05 ಮತ್ತು 2005-06, ಈ ಆರ್ಥಿಕ ವರ್ಷಗಳಲ್ಲಿ ನಾನು ಬಜೆಟ್ ಅನ್ನು ಮಂಡಿಸಿದ್ದೆ. ಇವರು 2007-08, 2008-09 ಮತ್ತು 2009-10 ಬಜೆಟ್‌ಗಳನ್ನು ಮಂಡಿಸಿದ್ದಾರೆ. ನಾನು 2005-06ರ ಬಜೆಟ್ ಮಂಡಿಸಿದ್ದರೂ ಕೂಡ, ಅದು ಮೇ ತಿಂಗಳವರೆಗೆ ಮಾತ್ರ ಇತ್ತು. ಆಮೇಲೆ ನಾನು ಹಣಕಾಸಿನ ಸಚಿವ ಸ್ಥಾನ ಬಿಡಬೇಕಾದ ಪರಿಸ್ಥಿತಿ ಬಂದಿತು. ಬೇರೆಯವರು ಅದನ್ನು ನೋಡಿ ಕೊಂಡಿದ್ದರು. ನಾನು ಆಗ ಹೆಚ್ಚು ಕಡಿಮೆ ಕೇವಲ 1 ವರ್ಷ 1 ತಿಂಗಳು ಮಾತ್ರ ಹಣಕಾಸಿನ ಸಚಿವನಾಗಿದ್ದೆ. ಈ ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ, ಈ ರಾಜ್ಯದ ಸರ್ವತೋಮುಖ ಬೆಳವಣಿಗೆಯಾಗಬೇಕು. ಇದು ಬೆಳವಣಿಗೆ ಆಗಬೇಕಾದರೆ ನಾವು ಹೆಚ್ಚು ಸಂಪನ್ಮೂಲಗಳನ್ನು ಕ್ರೋಢೀಕರಣ ಮಾಡಿಕೊ ಳ್ಳಬೇಕು. ಸಂಪನ್ಮೂಲಗಳ ಕ್ರೋಢೀಕರಣ ಮಾಡದೇ, ನಮ್ಮ ಸ್ವಂತ ತೆರಿಗೆಯನ್ನು ಹೆಚ್ಚು ಮಾಡಿಕೊಳ್ಳದೇ, ಕೇಂದ್ರ ಸರ್ಕಾರದಿಂದ ಬರತಕ್ಕಂಥ ನಮ್ಮ ತೆರಿಗೆ ಪಾಲು ಮತ್ತು ಅನುದಾನಗಳು ಹೆಚ್ಚಾಗದೇ, ರಾಜ್ಯದ ಅಭಿವೃದ್ಧಿಯ ವೇಗವನ್ನು ನಾವು ಕಾಪಾಡಿಕೊಂಡು ಹೋಗುವುದಕ್ಕಾ ಗುವುದಿಲ್ಲ. ಮಾನ್ಯ ಯಡಿಯೂರಪ್ಪನವರು ಅವರು ಮುಖ್ಯಮಂತ್ರಿಗಳಾಗಿ ಒಂದು ವರ್ಷವಾದ ಮೇಲೆ 'ವಿಕಾಸ ಸಂಕಲ್ಪ ಯಾತ್ರೆ'ಯನ್ನು ಮಾಡಿದರು. ಇವರೇ 3 ವರ್ಷಗಳ ಕಾಲ ಹಣಕಾಸಿನ ಮಂತ್ರಿಗಳಾಗಿದ್ದರು. 'ವಿಕಾಸ ಸಂಕಲ್ಪ ಯಾತ್ರೆ' ಸರ್ಕಾರದ ಖರ್ಚಿನಲ್ಲಿ ಮಾಡಿದರು. ಕೋಟಿಗಟ್ಟಲೆ ಹಣ ಆ functionಗಳಿಗೆ ಖರ್ಚು ಮಾಡಿದರು. ಮೈಸೂರು, ಹುಬ್ಬಳ್ಳಿ, ಬೆಳಗಾಂ, ಗುಲ್ಬರ್ಗಾ, ಬೆಂಗಳೂರು, ಮಂಗಳೂರು ಮತ್ತು ದಾವಣಗೆರೆಗಳಲ್ಲಿ ಯಾತ್ರೆಗಳನ್ನು ಮಾಡಿದರು. ನಾನು ದಾವಣಗೆರೆಗೆ ಹೋಗಿದ್ದಾಗ, ಅಲ್ಲಿಯ ಡಿ.ಸಿ.ಯವರನ್ನು ಭೇಟಿಯಾಗಿದ್ದೆ. ನಾನು ಅವರನ್ನು 'ಈ ವಿಕಾಸ ಸಂಕಲ್ಪ

ಯಾತ್ರೆ ಹೇಗೆ ಮಾಡಿದ್ದೀರಿ? ಇದಕ್ಕೆ ಎಷ್ಟು ಖರ್ಚಾಯಿತು?' ಎಂದು ಕೇಳಿದೆ. ಅದಕ್ಕೆ ಅವರು 'ಬಸ್ಸುಗಳಿಗಾಗಿ KSRTC ಯವರಿಗೆ ದುಡ್ಡು ಕೊಟ್ಟಿದ್ದೆವು, ಶಾಮಿಯಾನ ಹಾಕಿಸಿದೆವು, ಕರೆದುಕೊಂಡು ಬಂದಿರುವ ವರಿಗೆಲ್ಲಾ ಊಟ ಹಾಕಿಸಿದ್ದೆವು' ಎಂದರು. ಡಿ.ಸಿ.ಯವರೇ ಇದನ್ನೆಲ್ಲಾ ಮಾಡಿದ್ದರು. 'ಇದಕ್ಕಾಗಿ ನಿಮಗೆ ವಿಶೇಷ ಅನುದಾನವನ್ನು ಏನಾದರೂ ಕೊಟ್ಟಿದ್ದಾರೆಯೇ?' ಎಂದು ನಾನು ಅವರನ್ನು ಕೇಳಿದೆ. Regional imbalance ತಪ್ಪಿಸಲು ಹಿಂದುಳಿದ ಪ್ರದೇಶಗಳ 5 ಜಿಲ್ಲೆಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದಿಂದ ದುಡ್ಡು ಬರುತ್ತದೆ, 'ಆ ಹಣವನ್ನು ಇದಕ್ಕಾಗಿ ವೆಚ್ಚ ಮಾಡಿದ್ದೇವೆ' ಎಂದು ಡಿ.ಸಿ. ನನಗೆ ಹೇಳಿದರು. 'ಈ ಹಣವನ್ನು ಹೇಗೆ ನೀವು ಖರ್ಚು ಮಾಡಿದಿರಿ?' ಎಂದು ನಾನು ಕೇಳಿದ್ದಕ್ಕೆ ಅವರು, ಆ ಬಗ್ಗೆ ಹೊರಡಿಸಲಾಗಿರುವ ಆದೇಶವನ್ನೂ ನನಗೆ ತೋರಿಸಿದರು. 'ಪ್ರಚಾರಕ್ಕಾಗಿ ನಮ್ಮ ಹತ್ತಿರ ದುಡ್ಡಿದೆ, ಆದರೆ ಈ ದುಡ್ಡನ್ನೇ ನಮಗೆ ಖರ್ಚು ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ' ಎಂದರು. ಈ ದುಡ್ಡು ಖರ್ಚು ಮಾಡಿ, ವಿಕಾಸ ಸಂಕಲ್ಪ ಯಾತ್ರ ಮಾಡಿ ಎಂದು ಕೇಂದ್ರದವರು ನಿಮಗೆ ಕೊಟ್ಟಿದ್ದಾರೆಯೇ? ದಾವಣಗೆರೆ ಮುನಿಸಿಪಾಲಿಟಿಗೆ ಕೊಟ್ಟಿದಂತಹ ಹಣವನ್ನು, ಅಲ್ಲಿಯ ಮುನಿಸಿಪಲ್ ಕಮಿಷನರ್‌ರವರಿಗೆ ಹೇಳಿ, ಆ ಹಣವನ್ನು ಖರ್ಚು ಮಾಡಿ ಎಂದು orders issue ಮಾಡಿದ್ದೀರಿ. It is in writing. ನಾನು ಯಾವ ರೀತಿಯಾಗಿ ಈ ಹಣವನ್ನು ಖರ್ಚು ಮಾಡಲಿಕ್ಕೆ ಬರುತ್ತದೆಂದು ಅವರಿಗೆ ಕೇಳಿದೆ. 'ಇಲ್ಲ ಸಾರ್, ನಮ್ಮ ಡಿ.ಸಿ.ಯವರು orders ಕೊಟ್ಟಿದ್ದಾರೆ, ಅದಕ್ಕಾಗಿ ಆ ಹಣವನ್ನು ಖರ್ಚು ಮಾಡಿದ್ದೇವೆ' ಎಂದು ಅವರು ನನಗೆ ಹೇಳಿದರು. ಕೇಂದ್ರ ಸರ್ಕಾರದಿಂದ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಬಂದಿರತಕ್ಕಂಥ ಹಣವನ್ನು ವಿಕಾಸ ಸಂಕಲ್ಪ ಯಾತ್ರೆಗಳಿಗೆ ಖರ್ಚು ಮಾಡಿದ್ದು ಸರಿಯಲ್ಲ. ಹೋಗಲಿ, ಏನಾದರೂ ವಿಕಾಸವಾದರೂ ಆಗಿದೆಯೇ? ಎಂದು ನೋಡಿದರೆ, ಏನೂ ಆಗಿಲ್ಲ. 3 ವರ್ಷಗಳಿಂದ ಇವರೇ ಹಣಕಾಸಿನ ಮಂತ್ರಿಗಳಾಗಿದ್ದರು. ಈ 3 ವರ್ಷಗಳಲ್ಲಿ ರಾಜ್ಯದ ವಿಕಾಸ ಆಗಿರಬೇಕಲ್ಲವೇ? ರಾಷ್ಟ್ರಮಟ್ಟದಲ್ಲಿ ಇವತ್ತು ಕಳೆದ 4-5 ವರ್ಷಗಳಿಂದ ನಮ್ಮ ರಾಜ್ಯದ ಆದಾಯ ಮತ್ತು ಪ್ರತಿ ತಲಾ ಆದಾಯ 7ನೇ ಸ್ಥಾನದಿಂದ ಮೇಲಕ್ಕೆ ಹೋಗಿಲ್ಲ. ಅಲ್ಲೇ ಇದೆ. ಅವರೇ ಇದನ್ನು ಹೇಳಿದ್ದಾರೆ. 2008-09ನೇ ವರ್ಷಕ್ಕಾಗಿ ಕೊಟ್ಟಿರುವ ಕಳೆದ ವರ್ಷದ Economic Survey Reportನಲ್ಲಿ

ಅವರು ಅದನ್ನು ಹೇಳಿದ್ದಾರೆ. 'ಕರ್ನಾಟಕ ರಾಜ್ಯದ ಆದಾಯ ಮತ್ತು ತಲಾ ಆದಾಯದಲ್ಲಿ 7ನೇ ಸ್ಥಾನದಲ್ಲಿದೆ' ಎಂದು ಅದರಲ್ಲಿ ಹೇಳಿದ್ದಾರೆ. ಇದು ಕಳೆದ 4–5 ವರ್ಷಗಳಿಂದ repeat ಆಗುತ್ತಿದೆ ಹಾಗಾದರೆ ವಿಕಾಸ ಯಾವುದು? ನೀವು ಬಂದ ಮೇಲೆ ವಿಕಾಸವಾಗಿರಬೇಕಾಗಿತ್ತಲ್ಲವೇ? ಕನಿಷ್ಠ ಪಕ್ಷ 6ನೇ ಸ್ಥಾನಕ್ಕಾದರೂ ಹೋಗಿರಬೇಕಲ್ಲವೇ? ಮೊದಲನೇ ಸ್ಥಾನಕ್ಕೆ ಹೋಗುವುದು ಬೇಡ. ಕನಿಷ್ಠ 7 ರಿಂದ 6 ಕ್ಕೆ ಒಂದು ಸ್ಥಾನವಾದರೂ ಜಂಪ್ ಆಗಬೇಕಾಗಿ ತ್ತಲ್ಲವೇ? ಹಾಗಾದರೆ ಮಾತ್ರವೇ ವಿಕಾಸವಾಯಿತು ಎಂದು ಹೇಳಬಹುದಾಗಿತ್ತು. ಇದು ಪ್ರಚಾರ ಮಾಡಿಕೊಳ್ಳುವುದಕ್ಕೆ ಮಾಡಿದಂತಹ ಯಾತ್ರೆಯಾಯಿತು. ಅಭಿವೃದ್ಧಿ ಆಗದಿದ್ದರೂ ಕೂಡ ಜನರ ಮುಂದೆ ಹೋಗಿ, ಕೇಂದ್ರ ಸರ್ಕಾರದಿಂದ ಬಂದಿರತಕ್ಕ ಹಣವನ್ನು ಖರ್ಚು ಮಾಡಿ ಯಾತ್ರೆ ಮಾಡಿದ್ದೀರಿ. ಅನೇಕ ಜಿಲ್ಲೆಗಳಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಮಾಡಿದ್ದೀರಿ. ಮೈಸೂರು, ದಾವಣಗೆರೆ, ಹುಬ್ಬಳ್ಳಿ, ಬೆಳಗಾಂ, ಗುಲ್ಬರ್ಗಾನಲ್ಲೂ ಸಹ ಮಾಡಿದ್ದೀರಿ. ಅನೇಕ ಜಿಲ್ಲೆಗಳಿಗೆ ಹೋಗಿ ಮಾಡಿದ್ದೀರಿ. ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಸಂಪನ್ಮೂಲಗಳ ಕ್ರೋಢೀಕರಣ ಕಳೆದ ವರ್ಷ ಏಕೆ ಹೆಚ್ಚಾಗಿ ಆಗಲಿಲ್ಲ? ಸಾಲ ಏಕೆ ಮಾಡಿದೆವು ಎನ್ನುವುದಕ್ಕೆ ಕಾರಣ ಏನು ಕೊಡುತ್ತಿದ್ದಾರೆ ಎಂದರೆ, 'Global recession ಇದೆ, ಆ ಕಾರಣದಿಂದ ನಮಗೆ ತೆರಿಗೆ ನಿರೀಕ್ಷಿತ ಮಟ್ಟಕ್ಕೆ ಬರಲಿಲ್ಲ, ಅದಕ್ಕೋಸ್ಕರ budgeted estimate ಅನ್ನು revised estimate ಮಾಡಿ, ತೆರಿಗೆಯಲ್ಲಿ ನಮಗೆ ಬಹಳ ಖೋತಾ ಆಯಿತು' ಎಂದು ಹೇಳುತ್ತಾರೆ. ಮಾನ್ಯ ಅಧ್ಯಕ್ಷರೆ, 2007–08ರಲ್ಲಿ ಆಗ ಇನ್ನೂ recession ಇರಲಿಲ್ಲ. 2008–09ರಲ್ಲಿ recession defence ತೆಗೆದುಕೊಳ್ಳುತ್ತಾರೆ. 2007–08ರ ಬಜೆಟ್ ಬಗ್ಗೆ 2007–08ರ CAG Reportನ ಪೇಜ್ 39ರಲ್ಲಿ ಹೇಳಿದ್ದಾರೆ. 2007–08ಕ್ಕೆ ಎಷ್ಟು ಖರ್ಚು ಮಾಡಬೇಕಾಗಿತ್ತೋ, ಅದರಲ್ಲಿ ಸುಮಾರು 1957 ಕೋಟಿ ರೂ.ಗಳು ಕಳೆದ ವರ್ಷ ಇವರು ಖರ್ಚು ಮಾಡಿಲ್ಲ. ಈ ವರ್ಷಕ್ಕೆ ಇದುವರೆಗೂ ಲೆಕ್ಕ ಸಿಕ್ಕಿಲ್ಲ, ಏಕೆಂದರೆ, ಅಕೌಂಟ್ಸ್ ಇನ್ನೂ ಆಗಿಲ್ಲ. CAGನಲ್ಲೂ ಕೂಡ ಲೆಕ್ಕ ಆಗಿಲ್ಲ. ಅದು ಇನ್ನೂ ಬಹುಶಃ September or October ನಲ್ಲಿ ಬರುತ್ತದೆಂದು ಕಾಣುತ್ತದೆ.

ಅವರು ಕೊಟ್ಟಿರತಕ್ಕಂಥ ಅಂಕಿಅಂಶಗಳ ಪ್ರಕಾರ 2008-09ಕ್ಕೆ actuals 60, 497 ಕೋಟಿ ರೂಪಾಯಿ ಖರ್ಚು ಮಾಡುತ್ತೇವೆಂದು ಹೇಳಿದ್ದರು. ಇದೂ ಕೂಡ correct ಲೆಕ್ಕ ಅಲ್ಲ, ಅದಕ್ಕಿಂತ ಇನ್ನೂ ಕಡಿಮೆಯಾಗಬಹುದು. I don't know, because according to them own figures furnished by the Finance Department, 2008-09ಕ್ಕೆ 51,073 ಕೋಟಿ ರೂಪಾಯಿ ಖರ್ಚಾಗಬಹುದು ಎಂದು ಕೊಟ್ಟಿದ್ದಾರೆ. That means to say ಇವರ ಲೆಕ್ಕದ ಪ್ರಕಾರವೇ 9,424 ಕೋಟಿ ರೂಪಾಯಿ 2008-09ಕ್ಕೆ ಇವರು ಕೊಟ್ಟಿರುವ ಅಂಕಿಅಂಶದ ಪ್ರಕಾರ ಖರ್ಚು ಮಾಡುವುದಕ್ಕೆ ಆಗುವುದಿಲ್ಲ. ನಾವು Budget Estimate ಹೆಚ್ಚಾಗಿ ಹಾಕಿಕೊಂಡು ಬಿಟ್ಟಿದ್ದೆವು, ಅದನ್ನು revise estimate ನಲ್ಲಿ ಕಡಿಮೆ ಮಾಡಿಕೊಂಡಿದ್ದೇವೆ ಎಂದು ಅದಕ್ಕೂ ಒಂದು ಉತ್ತರ ಹೇಳಬಹುದು. ಇದರ ಜೊತೆಗೆ 1,900 ಕೋಟಿ ರೂಪಾಯಿಯ Supplementary estimate ತೆಗೆದುಕೊಂಡು ಬಂದಿದ್ದಾರೆ, ಅಂದರೆ ಸುಮಾರು 2000 ಕೋಟಿ ರೂಪಾಯಿ. ಅದರಲ್ಲಿ 300 ಕೋಟಿ ರೂಪಾಯಿ account adjustment ಆಗುತ್ತದೆ. ನೀವು Supplementary estimate ತೆಗೆದುಕೊಳ್ಳಬೇಡಿ ಎಂದು ಹೇಳುವುದಿಲ್ಲ. ಸುಮಾರು 1,600 ಕೋಟಿ ರೂಪಾಯಿ ಇದು first installment, second installment may come, third installment may come. ಇಲ್ಲಿ Supplementary estimate ಮಂಡಿಸಿದ್ದಾರೆ. ಅದೂ ಕೂಡ ಚರ್ಚೆಯಾಗಬೇಕು. ಸುಮಾರು 1,600 ಕೋಟಿ ಚಿಲ್ಲರೆ ರೂಪಾಯಿ Supplementary estimate ಇದೆ. 9,424 ಕೋಟಿ ರೂಪಾಯಿಗೆ 1,600 ಕೋಟಿ ರೂಪಾಯಿ ಸೇರಿಸಿದರೆ Mr. Basavaraj, it will go.... ಇದರಲ್ಲಿ ಇನ್ನು 11,000 ಕೋಟಿ ರೂಪಾಯಿ ಇಲ್ಲದ ಹಾಗೆ ಆಗುತ್ತದೆ, ಏನಾಗುತ್ತದೆ ಗೊತ್ತಿಲ್ಲ. ಎಲ್ಲಿದೆ resources? 60,000 ಕೋಟಿ ರೂಪಾಯಿಗೆ 1,400 ಕೋಟಿ ರೂಪಾಯಿ ಸೇರಿಸಿದರೆ 1,200 ಕೋಟಿ ರೂಪಾಯಿಯಲ್ಲಿ 51,000 ಕೋಟಿ ರೂಪಾಯಿ ಅಷ್ಟೇ ಆಗುವುದು ಎಂದರೆ ಇವರು ಮುಂದಿನ ವರ್ಷಕ್ಕೆ ಸೇರಿಸಿದ್ದಾರೆ. ಇಷ್ಟು ದುಡ್ಡು 9,424 ಕೋಟಿ ರೂಪಾಯಿ. ಮಾನ್ಯ ಮುಖ್ಯಮಂತ್ರಿಗಳು ಬಹಳ ಹೇಳಿದರು. ಇಷ್ಟೊಂದು ದೊಡ್ಡ plan size

ಯಾರೂ ಮಾಡಿರಲಿಲ್ಲ, ನಾನು ಮಾಡಿದ್ದೇನೆ. ನೀವೆಲ್ಲ ಯೋಜನಾ ಗಾತ್ರ ಇಷ್ಟಿಷ್ಟು ಮಾಡುತ್ತಿದ್ದಿರಿ, ನಾವು ಇಷ್ಟು ಮಾಡಿದ್ದೇವೆ. ಕಳೆದ ವರ್ಷದ plan size 25, 952 ಕೋಟಿ ರೂಪಾಯಿ. ಇದರಲ್ಲಿ ಕೊಟ್ಟಿರುವ ಅಂಕಿಅಂಶದ ಪ್ರಕಾರ ಸುಮಾರು 19,950 ಕೋಟಿ ರೂಪಾಯಿಯಷ್ಟು ಖರ್ಚು ಮಾಡುವುದಕ್ಕೆ ಆಗಿರುವುದು, ಅಂದರೆ ಸುಮಾರು 2,600 ಕೋಟಿ ರೂಪಾಯಿ. ಸುಮಾರು 20,000 ಕೋಟಿ ರೂಪಾಯಿ ಖರ್ಚು ಮಾಡುತ್ತೇವೆಂದು ಹೇಳಿದ್ದೀರಿ, I don't think they will reach even this figure also. ನನ್ನ ಪ್ರಕಾರ ಇದನ್ನು reach ಆಗುವುದಕ್ಕೆ ಆಗುವುದಿಲ್ಲ. ಒಟ್ಟು 6,000 ಕೋಟಿ ರೂಪಾಯಿ ನೀವು plan ನಲ್ಲಿ ಖರ್ಚು ಮಾಡಿಲ್ಲ. ಈ ಆರ್ಥಿಕ ವರ್ಷಕ್ಕೆ 29,500 ಕೋಟಿ ರೂಪಾಯಿ plan ಇಟ್ಟುಕೊಂಡಿದ್ದಾರೆ. ಆಶಾಗೋಪುರಗಳನ್ನು ಕಟ್ಟುವುದು ಬಹಳ ಸುಲಭ. ಇದರ ಜೊತೆಗೆ ನೀವೇ ಕೊಟ್ಟಿರುವ ಅಂಕಿ ಅಂಶದ ಪ್ರಕಾರ ಕಳೆದ ವರ್ಷ ಸಾಲ ಕೂಡ ಹೆಚ್ಚಿಗೆ ತೆಗೆದುಕೊಂಡಿದ್ದೀರಿ. 8–9 ಸಾವಿರ ಕೋಟಿ ರೂಪಾಯಿ ಸಾಲ ಕೂಡ ತೆಗೆದುಕೊಂಡು ಇನ್ನೂ 6,000 ಕೋಟಿ ರೂಪಾಯಿ ನೀವು ಯೋಜನೆಗೆ ಖರ್ಚು ಮಾಡುವುದಕ್ಕೆ ಆಗಲಿಲ್ಲ. ಯೋಜನೆಗೆ ಖರ್ಚು ಮಾಡಲಿಲ್ಲವೆಂದರೆ ರಾಜ್ಯದ ಅಭಿವೃದ್ಧಿ ಕುಂಠಿತವಾಗುತ್ತದೆ. ರಾಜ್ಯದ ಅಭಿವೃದ್ಧಿ ಕುಂಠಿತವಾದರೆ ನೀವು ವಿಕಾಸ ಯಾತ್ರೆ ಏಕೆ ಮಾಡಿದಿರಿ? When you have failed to achieve the plan target, how can you go to the people and tell them? ರಾಜ್ಯ ವಿಕಾಸವಾಯಿತು ಎಂದು ಹೇಗೆ ಹೇಳುತ್ತೀರಿ? This is Quite contradictory. ನೀವು ಹೇಗೆ ಹೇಳುವುದ ಕ್ಕಾಗುತ್ತದೆ? ಇದೇ ಈಗ ಜನರ ಮುಂದೆ ಇರುವಂತಹ ಪ್ರಶ್ನೆ. ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇವರು ತೆರಿಗೆ ವಸೂಲು ಮಾಡುವುದಕ್ಕೆ ಯಾವ ಪ್ರಯತ್ನ ಮಾಡಿದ್ದಾರೆ? I want to know. Non-developmental expenditure cut down ಮಾಡುವುದಕ್ಕೆ ಏನು ಮಾಡಿದ್ದಾರೆ? Recession ಬಂತು O.K. What are the steps the Government has taken to reduce the non-development expenditure, wasteful expenditure? What are your programmes? ಅದನ್ನು ಇಲ್ಲಿ ಹೇಳಬೇಕು. ನನಗೆ ಗೊತ್ತಿರುವ ಮಟ್ಟಿಗೆ

ನೀವು ಹೇಳಿರುವುದರಲ್ಲಿ ಇಲ್ಲೆಲ್ಲೂ ಕಾಣಿಸಲಿಲ್ಲ. Wasteful expenditure ಅನ್ನು cut down ಮಾಡುವುದಕ್ಕೆ ಇಂತಿಂತಹ ಕ್ರಮಗಳನ್ನು ತೆಗೆದುಕೊಂಡಿದ್ದೇವೆಂದು ಮಾನ್ಯ ಮುಖ್ಯಮಂತ್ರಿಗಳು ಉತ್ತರದಲ್ಲಿ ಹೇಳುತ್ತಾರೇನೋ ಗೊತ್ತಿಲ್ಲ. I don't know. ನಿನ್ನೆ ಒಂದು ಬಿಲ್ ಪಾಸ್ ಮಾಡಿದೆವು. ಸಾಲ ತೆಗೆದುಕೊಳ್ಳುವುದಕ್ಕೋಸ್ಕರ fiscal deficit ಅನ್ನು 3%ನಿಂದ 4%ಗೆ ಮಾಡಿಕೊಳ್ಳುವುದಕ್ಕೆ ಆಗುವು ದಿಲ್ಲ. ಸಾಲ ತೆಗೆದುಕೊಳ್ಳುವುದಕ್ಕೋಸ್ಕರ ಅಲ್ಲ. Resources mobilization ಮಾಡುವುದಕ್ಕೆ ನಮ್ಮ ಎಲ್ಲಾ ಪ್ರಯತ್ನಗಳನ್ನೂ ಮಾಡಿ, wasteful expenditure cut down ಮಾಡುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡಿ, non plan expenditure cut down ಮಾಡುವುದಕ್ಕೆ ಪ್ರಯತ್ನ ಮಾಡಿ. ಆಮೇಲೆ ಸಾಲ ತೆಗೆದುಕೊಳ್ಳಬೇಕು. ಸಾಲ ತೆಗೆದುಕೊಳ್ಳಬೇಡಿ ಎಂದು ಹೇಳುವುದಿಲ್ಲ. ಸಾಲ ಯಾವಾಗ ತೆಗೆದು ಕೊಳ್ಳಬೇಕು? What is the basic principle? ಸಾಲ ಸಿಗುತ್ತದೆ ಎಂದು ಸಾಲ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ನಮ್ಮ ರಾಜ್ಯದ ಸಾಮರ್ಥ್ಯಕ್ಕೆ ಅನುಗುಣವಾಗಿ ಸಾಲ ತೆಗೆದುಕೊಳ್ಳಬೇಕು. ನಾವು loan ತೆಗೆದುಕೊಳ್ಳುವುದು not on the basis of availability, on the base of affordability. ಇಲ್ಲಿ ಅದನ್ನು ಮಾಡಿದ್ದೀರಾ? There is no iota, as to this type of the approach by the Governemnet. Nothing is there. ಈ ರೀತಿಯಾಗಿ ಸಾಲ ಮಾರ್ಚ್ 2009ಕ್ಕೆ 60,000 ಕೋಟಿ ರೂಪಾಯಿಯಾಗಿದೆ. ಇದರ ಜೊತೆಗೆ half yearly budget ಸೇರಿಸಿದರೆ ಸುಮಾರು 6,000 ಚಿಲ್ಲರೆ ಕೋಟಿ ರೂಪಾಯಿ ಆಗುತ್ತದೆ. The total bedt burden will be 66,000 crores. ಏನಾಗುತ್ತದೆ ಎಂದರೆ 20,000 ಕೋಟಿ ರೂಪಾಯಿ ಸಾಲ ಕಳೆದ ಮೂರ್‍ನಾಲ್ಕು ವರ್ಷಗಳಲ್ಲಿ ಜಾಸ್ತಿಯಾಗಿದೆ. What will be the debt burden? ಈಗಾಗಲೇ ನೀವು economic recessionನಿಂದ ಹೊರಗಡೆ ಬಂದಿದ್ದೀರಿ. Fiscal deficit ಅನ್ನು 2004–05ರಲ್ಲಿ ತೆಗೆದು ಹಾಕಲಾಯಿತು. Less than 3% ಇರುವುದನ್ನು ತಂದು 2.42%ಗೆ ಹೋಗಿತ್ತು. ಕಳೆದ ವರ್ಷವೇ I think ನನಗೆ ಇರುವ imformation ಪ್ರಕಾರ it may cross 4%. ಇದು ಈ ವರ್ಷ 5%ಕ್ಕಿಂತ ಮೇಲೆ ಹೋಗಬಹುದು. 2000ನೇ

ಇಸವಿಯಲ್ಲಿ it was more than 5% ಎಂದು ಎಲ್ಲಾ Fiscal Responsibility Act ಅನ್ನು ತಂದು ಎಲ್ಲಾ reforms ಗಳನ್ನೆಲ್ಲಾ ಮಾಡಿ, ಅನೇಕ fiscal corrections ಗಳನ್ನೆಲ್ಲಾ ಮಾಡಿ, fiscal consolidation ಎಲ್ಲಾ ಮಾಡಿ, debts swapping ಎಲ್ಲಾ ಮಾಡಿ, ಇವೆಲ್ಲವನ್ನು ಮಾಡಿದ ಮೇಲೆ 3% ಗೆ ತೆಗೆದುಕೊಂಡು ಬಂದಿದ್ದು, less than 3% of the GDP. ಇದು ರಾಜ್ಯದ ಒಟ್ಟು ಉತ್ಪನ್ನ, Gross Domestic Product ಎಂದು ಇಂಗ್ಲೀಷಿನಲ್ಲಿ ಕರೆಯುತ್ತೇವೆ. ಇದು 3ರಷ್ಟಕ್ಕೆ ಬಂದಿತ್ತು, ಈಗ 4ಕ್ಕೆ ಬಂದಿದೆ, ಮುಂದಿನ ವರ್ಷ ಮಾರ್ಚ್ ತಿಂಗಳು ಕಳೆಯುವ ವೇಳೆಗೆ it may cross 5% also. ಅದಕ್ಕೋಸ್ಕರವೇ every year along with the budget ಒಂದು medium term fiscal plan ಅನ್ನು every year ಇಲ್ಲಿ ಇಡಬೇಕು. ಇದರ ಜೊತೆಗೆ Section 5 of the Fiscal Responsibilty Actನಲ್ಲಿ 6 ತಿಂಗಳಿಗೊಮ್ಮೆ review report ಅನ್ನು ಇಡುವಂಥ ಪ್ರಯತ್ನಗಳನ್ನು ಮಾಡುತ್ತೇವೆ. It is all mandatory on the part of the Government, because ಮತ್ತೆ ಯಾವ ಕಾರಣಕ್ಕೂ ಕೂಡ ನಾವು ಸಾಲವನ್ನು ತೆಗೆದುಕೊಂಡು ಬಂದು revenue ಖರ್ಚುಗಳನ್ನು ನಿಭಾಯಿಸುವಂಥ ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿ ಬರಬಾರದು. ಅಂಥ ಪರಿಸ್ಥಿತಿ ಮತ್ತೆ ಉದ್ಭವವಾಗಬಾರದು. ಮತ್ತೆ ರಾಜ್ಯ ಸಾಲದ ಸುಳಿಗೆ ಸಿಕ್ಕಿಹಾಕಿಕೊಳ್ಳಬಾರದು. ಇವತ್ತು ನಾನು ಹೇಳುವುದೇನೆಂದರೆ ನೀವು ಇದೇ ರೀತಿಯಲ್ಲಿ ಮುಂದು ವರೆದರೆ resources ಅನ್ನು ಹೆಚ್ಚು ಮಾಡಿಕೊಳ್ಳುವಂಥ ಪ್ರಯತ್ನಗಳನ್ನು ಮಾಡದೇ, tax base ಅನ್ನು ಹೆಚ್ಚು ಮಾಡದೇ ಇದ್ದರೆ there is lot of scope, what are your efforts to increase the non-tax revenue? There are no efforts at all. Non-tax revenue ಅನ್ನು ಹೆಚ್ಚು ಮಾಡುವುದಕ್ಕೆ ಏನು ಮಾಡುತ್ತಿದ್ದೀರಿ? 1,900 ಕೋಟಿ, 2,000 ಕೋಟಿ, 2,300 ಕೋಟಿ, ಅಷ್ಟೆ ಇದೆ. ಅದಕ್ಕಿಂತ ಹೆಚ್ಚಿಗೆ non-tax revenue ಹೋಗಿಲ್ಲ. ಅನೇಕ ವರ್ಷಗಳಿಂದ ಇದು ಅಷ್ಟೆ ಇದೆ, ಇದನ್ನು ಹೆಚ್ಚು ಮಾಡುವ ಪ್ರಯತ್ನ ಮಾಡಿಲ್ಲ. Planning Commission ನವರು Plan size ನಿಗದಿ ಮಾಡುವುದಕ್ಕೆ ಹೋದಾಗಲೆಲ್ಲಾ ಪದೇ ಪದೇ ಹೇಳುತ್ತಿರುತ್ತಾರೆ.

ನೀವು non-tax revenue ವನ್ನು ಹೆಚ್ಚು ಮಾಡುವುದಕ್ಕೆ ಏನೂ ಕ್ರಮ ತೆಗೆದುಕೊಂಡಿಲ್ಲವೆಂದು ಹೇಳುತ್ತಿರುತ್ತಾರೆ. But, here also, non-tax revenue ವನ್ನು ಹೆಚ್ಚು ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿಲ್ಲ. ಇಂಧನ ಸಚಿವರಾದ ಮಾನ್ಯ ಈಶ್ವರಪ್ಪನವರು ಈ ಸದನದಲ್ಲಿದ್ದಾರೆ. ನಾವು food ಸಬ್ಸಿಡಿ, energy ಸಬ್ಸಿಡಿ, ಬೇರೆ ಬೇರೆ ಸಬ್ಸಿಡಿಗಳನ್ನೆಲ್ಲಾ ಕೊಡುತ್ತೇವೆ. ಆ ಸಬ್ಸಿಡಿಗಳನ್ನು ಸಕಾರಣವಾಗಿ ಕಡಿಮೆ ಮಾಡಬೇಕೆಂದು ಹೇಳುತ್ತಾರೆ. ಇದನ್ನು ಇವತ್ತಿನವರೆಗೂ ಸಕಾರಣವಾಗಿ ಕಡಿಮೆ ಮಾಡುವ ಪ್ರಯತ್ನಗಳು ನಡೆದಿಲ್ಲ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ನಾನು ಮೊನ್ನೆ ಯಾವುದೋ ಒಂದು reportನಲ್ಲಿ ನೋಡಿದೆ. ಮಾನ್ಯ ಈಶ್ವರಪ್ಪನವರೆ, ತಾವು ನೋಡಿರಬಹುದು. ಆಂಧ್ರಪ್ರದೇಶವನ್ನು ಬಿಟ್ಟರೆ ಕರ್ನಾಟಕ ರಾಜ್ಯ power theftನಲ್ಲಿ ಎರಡನೆಯ ಸ್ಥಾನದಲ್ಲಿದೆ. ಇಲ್ಲಿ ಆಂಧ್ರಪ್ರದೇಶ ಮೊದಲನೆಯ ಸ್ಥಾನದಲ್ಲಿದ್ದು, ಕರ್ನಾಟಕ ಎರಡನೆಯ ಸ್ಥಾನದಲ್ಲಿದೆ. Even State like Bihar ನಲ್ಲಿ ಈ power theft ಇಲ್ಲ.

ಶ್ರೀ ಎ. ಉಮೇಶ್ ಕತ್ತಿ : ಅಲ್ಲಿ ಕರೆಂಟೇ ಇಲ್ಲ.

ಶ್ರೀ ಸಿದ್ದರಾಮಯ್ಯ : ಹಾಗಾದರೆ ಅಲ್ಲಿ ಕಳ್ಳತನವೇ ಇಲ್ಲವೇ? ಅಲ್ಲಿಯೂ ಕರೆಂಟ್ ಇದೆ. ಅಲ್ಲಿ ಅವರೆಲ್ಲಾ ಕತ್ತಲೆಯಲ್ಲಿ ಇದ್ದಾರ? They are not living in dark.

ಶ್ರೀ ಎ.ಉಮೇಶ್ ಕತ್ತಿ : ಸರ್ ಕರೆಂಟ್ ಇದ್ದರೆ theft ಮಾಡುವುದು, ಇಲ್ಲದಿದ್ದರೆ ಏನು ಮಾಡುವುದು?

ಶ್ರೀ ಸಿದ್ದರಾಮಯ್ಯ : ಆಯಿತು, ಈ argument ಅನ್ನೇ ತೆಗೆದು ಕೊಳ್ಳೋಣ. ಈ argument is valid argument. O.K. ಇದನ್ನು ನಾನು ಹೇಳಿರುವುದಲ್ಲ, ಇದು ಪಾರ್ಲಿಮೆಂಟ್‌ನಲ್ಲಿ ಮೊನ್ನೆ ಬಹುಶಃ 21ನೇ ತಾರೀಖಿನಂದು ಉತ್ತರ ಬಂದಿದೆ. ಇದನ್ನು ಮಾನ್ಯ ಈಶ್ವರಪ್ಪನವರೆ ನೋಡಿದ್ದಿರಾ? ತಾವು ಆಮೇಲೆ ಉತ್ತರವನ್ನು ಹೇಳಿ.

ಶ್ರೀ ಕೆ.ಎಸ್.ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಕಳ್ಳತನ ತುಂಬಾ ಹೆಚ್ಚಿಗೆ ಆಗುತ್ತಾ ಇದ್ದದ್ದು ನಿಜ. ಅದನ್ನು ಯಾರು ಹಿಡಿದಿರಲಿಲ್ಲ, ಈಗ ಕಳ್ಳತನ ಆಗುತ್ತಿದ್ದಂಥದ್ದನ್ನು ಹಿಡಿದು ಜಾಸ್ತಿ ರೆವಿನ್ಯೂ ರಾಜ್ಯ ಸರ್ಕಾರಕ್ಕೆ ತಂದಿರುವುದರಿಂದ, ಈಗ ನಮ್ಮ ರಾಜ್ಯದಲ್ಲಿ ಕಳ್ಳತನ ಜಾಸ್ತಿ ಆಗುತ್ತಿದೆಯೆಂಬ ಭಾವನೆಯನ್ನು ಕೇಂದ್ರ ಸರ್ಕಾರದವರು mention ಮಾಡಿದ್ದಾರೆ. ಈ Theft ಏನು ಆಗುತ್ತಿತ್ತು. ಕಳೆದ ಅನೇಕ ವರ್ಷಗಳಿಂದ 18 ಕೋಟಿ ರೂಪಾಯಿಗಳು ಈ theft ನಿಂದ ಹಣ ರಾಜ್ಯ ಸರ್ಕಾರಕ್ಕೆ ಬರುತ್ತಿದ್ದರೆ, ನಾವು ಒಂದೇ ವರ್ಷದಲ್ಲಿ 55 ಕೋಟಿ ರೂಪಾಯಿಗಳನ್ನು ಆ theft ಮೂಲಕ ದಂಡ ವಸೂಲು ಮಾಡಿದ್ದೇವೆ.

ಶ್ರೀ ಸಿದ್ಧರಾಮಯ್ಯ : ನಾನು ನಿಮ್ಮ ಮೇಲೆ ಆರೋಪ ಮಾಡಲಿಲ್ಲವಲ್ಲಾ.

ಶ್ರೀ ಕೆ.ಎಸ್.ಈಶ್ವರಪ್ಪ : ಆರೋಪವೆಂದು ಅಲ್ಲ, ನಾನು ಹೇಳುತ್ತಿರುವಂಥದ್ದು ಬೇರೆ. ಹಿಂದೆ ಕಳ್ಳತನವಾಗುತ್ತಿರುವಂಥದ್ದು ಹಾಗೆ ಇತ್ತು. ಈಗ ದಂಡವನ್ನು ವಸೂಲಿ ಮಾಡಿ, theft ಅನ್ನು ಕಡಿಮೆ ಮಾಡಿಸುತ್ತಿದ್ದೇವೆ. ಇದನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ.

ಶ್ರೀ ಸಿದ್ಧರಾಮಯ್ಯ : O.K. thank you, ನಾನು ಏನು ಬೇಡವೆಂದು ಹೇಳಲಿಲ್ಲ. ನೀವು ಕಡಿಮೆ ಮಾಡಿದ್ದರೆ, ನಿಮಗೆ ಶಹಭಾಷ್ ಗಿರಿಯನ್ನು ಕೊಡೋಣ. We have no objection. ತಾವು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ. ತಾವು ಒಳ್ಳೆಯ ಕೆಲಸ ಮಾಡಿದ್ದರೆ ಅದನ್ನು ಹೇಳಬೇಕು, ಅದು ನಮ್ಮ ಧರ್ಮ. ಆದರೆ ಏನು ಆಗಿದೆಯೆಂದರೆ 2005-06ರಲ್ಲಿ ನಾನು ಇದನ್ನು ಸುಮ್ಮನೆ ಹೇಳುತ್ತಿಲ್ಲ, ಆಗ ನೀವು ಇರಲಿಲ್ಲ. ನೀವು 2007-08 ಮತ್ತು 2008-09ರಲ್ಲಿ ಬಂದಿರುವಂಥದ್ದು. ಕರ್ನಾಟಕದಲ್ಲಿ theft caseಗಳು 16,706 register ಆಗಿರುವಂಥದ್ದು. 2006-07ರಲ್ಲಿ 14,435, 2007-08ರಲ್ಲಿ 2006-07ಕ್ಕಿಂತ ಹೆಚ್ಚಿಗೆ 14,840 ಆಗಿದೆ. ಈ ವರ್ಷ 2008-09ಕ್ಕೆ ಎಷ್ಟಾಗಿದೆಯೆಂಬುದನ್ನು ನೀವು ಉತ್ತರ ಕೊಡುವಾಗ ಹೇಳಿ. ಇದು constant ಆಗಿ 15,000, 14,000 theft caseಗಳು ಇವೆ. ಕರ್ನಾಟಕದಲ್ಲಿ ಒಟ್ಟು ಇಲ್ಲಿಯವರೆಗೂ 45, 982 theft caseಗಳಾಗಿವೆ. ಇಲ್ಲಿ ಆಂಧ್ರಪ್ರದೇಶ ಮೊದಲನೆಯ ಸ್ಥಾನದಲ್ಲಿದ್ದು, ಕರ್ನಾಟಕ ಎರಡನೆಯ ಸ್ಥಾನದಲ್ಲಿದ್ದು, ಮಾನ್ಯ

ಉಮೇಶ್ ಕತ್ತಿಯವರೆ, ತಾವು ಬಿಹಾರ್‌ನಲ್ಲಿ ವಿದ್ಯುತ್ ಇಲ್ಲವೆಂದು ಹೇಳಿದ್ದಿರಲ್ಲಾ, ಅಲ್ಲೂ ಸಹ 2,500 theft case ಆಗಿದೆಯಲ್ಲಾ, ಇವು ಸುಳ್ಳು ಕೇಸೇ? ತಾವು ಲಕ್ನೊ, ಪಾಟ್ನಾ ರಾಜ್ಯಗಳಿಗೆ ಹೋಗಿದ್ದೀರಾ? ನೀವು ಬೆಳಗಾಂ ಬಿಟ್ಟು ಬೇರೆ ಎಲ್ಲೂ ಹೋಗಿಲ್ಲ.

ಶ್ರೀ ವಿ.ಉಮೇಶ್ ಕತ್ತಿ : ಮಾನ್ಯ ಉಪಾಧ್ಯಕ್ಷರೆ, ಬಿಹಾರ ರಾಜ್ಯದಲ್ಲಿ ವಿದ್ಯುತ್ generation 80 MW ಇದೆ. Central ನಿಂದ ತೆಗೆದುಕೊಳ್ಳುವ power ಅಲ್ಲಿಗೆ ಬರುತ್ತಿದೆ. ಅದರಲ್ಲಿ 2,500 theft ಇರಬಹುದು.

ಶ್ರೀ ಸಿದ್ದರಾಮಯ್ಯ : I appreciate you. Is it very relevant answer?

ಶ್ರೀ ವಿ.ಉಮೇಶ್ ಕತ್ತಿ : 80 MW only there is a generation of that State.

ಶ್ರೀ ಸಿದ್ದರಾಮಯ್ಯ : O.K. ಜನಸಂಖ್ಯೆಗೆ ಅನುಗುಣವಾಗಿ ಎಂದರೆ ಆಂಧ್ರಪ್ರದೇಶಕ್ಕೂ ನಮಗೂ ಎಷ್ಟು ವ್ಯತ್ಯಾಸವಿದೆ? ಗುಜರಾತ್‌ಗೂ ನಮಗೂ ಎಷ್ಟು ವ್ಯತ್ಯಾಸವಿದೆ? ನಮ್ಮದು 2001ನೇ ಇಸವಿಯ Census ಪ್ರಕಾರ 5 ಕೋಟಿ 26 ಲಕ್ಷ, ಗುಜಾರಾತ್ ರಾಜ್ಯದಲ್ಲಿ ಹೆಚ್ಚು ಕಡಿಮೆ 5 ಕೋಟಿ ಜನಸಂಖ್ಯೆ ಇದೆ. ಗುಜರಾತ್‌ನಲ್ಲಿ 2007–08ರಲ್ಲಿ 1,604 ಇದೆ. ಇಲ್ಲಿ 5 ಕೋಟಿ ಜನರಿದ್ದಾರೆ, ಅಂದ ಮೇಲೆ ಇಲ್ಲಿ ಏಕೆ ಹೀಗೆ ಆಗಿದೆ. ಹಾಗಾದರೆ ನಿಮ್ಮ argument, not a valid argument ಎಂದು ಆಯಿತಲ್ಲಾ. O.K. ನಾನು ಏಕೆ ಹೇಳುತ್ತಿದ್ದೇನೆಂದರೆ ಇಂಧನ ಇಲಾಖೆಯಲ್ಲಿ 1997 ಅಥವಾ 1998 ರಲ್ಲಿ ಎಂದು ಕಾಣುತ್ತದೆ, I am not remembering correctly, I was the Chairman of the Sub-Committee. ಆಗ ನಾನು ಮಂತ್ರಿಯಾಗಿದ್ದಾಗ ಈ theft, transmission loss, distribution loss ಇದನ್ನು ಕಡಿಮೆ ಮಾಡುವುದಕ್ಕೋಸ್ಕರ ಒಂದು Sub Committee ಮಾಡಿದ್ದೆವು. ಆಗ ಮಾನ್ಯ ಜೆ.ಹೆಚ್.ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದರು. ನಾನು ಅವತ್ತು ಪ್ರಾರಂಭ ಮಾಡಿದ್ದು, ಅವತ್ತಿನವರೆಗೆ from the inception of KEB, energy auditನ್ನೇ ಮಾಡಿರಲಿಲ್ಲ. ಇವತ್ತಿಗೂ ಸಂಪೂರ್ಣವಾಗಿ energy audit ಅನ್ನು ಮಾಡಿಲ್ಲ. ಇದಕ್ಕೆ ಕಾರಣ ಏನೆಂದು ಹೇಳುತ್ತಾರೆಂದರೆ ರೈತರು ಪಂಪ್‌ಸೆಟ್‌ಗಳಿಗೆ ಮೀಟರ್‌ಗಳನ್ನು ಹಾಕುವುದಕ್ಕೆ

ಬಿಟ್ಟಿಲ್ಲ. ಅದಕ್ಕೋಸ್ಕರವಾಗಿ ನಾವು ಮಾಡುವುದಕ್ಕೆ ಆಗಿಲ್ಲವೆಂದು ಹೇಳುತ್ತಾರೆ. ಈಗ ಮಾಡಬಹುದಾಗಿತ್ತು, ಅವರಿಗೆ 10 ಹೆಚ್.ಪಿ.ವರೆಗೆ ಪುಕ್ಕಟೆಯಾಗಿ ಕರೆಂಟ್ ಕೊಟ್ಟಿದ್ದೇವೆಂದು ಘೋಷಣೆ ಮಾಡಿದ್ದೀರಿ. ಈಗ ರೈತರು ಒಪ್ಪಿಕೊಳ್ಳುತ್ತಿದ್ದರು, ಈಗ ಮಾಡಬಹುದಾಗಿತ್ತು.

ನನ್ನ ಪ್ರಕಾರ K.P.T.C.L. ನವರು ಕೊಡುವ no figure is correct as far as the transmission, distribution loss and theft are concerned. It is because, there is no proper audit. Because energy audit ಆಗಿರುವುದು about 35% or maximum 40%. The remaining 60%, ಇವತ್ತಿನವರೆಗೆ ಆಡಿಟ್ ಆಗಿಲ್ಲ. Then how can you say ನಾವು ಕಡಿಮೆ ಮಾಡಿಬಿಟ್ಟಿದ್ದೇವೆ ಎಂದು K.P.T.C.L. ನವರು ಹೇಳುತ್ತಾರೆ? ಯಾವ basis ಮೇಲೆ ಹೇಳುತ್ತಾರೆ? What are the figures? Have you come to any conclusion? ನನಗೆ ಗೊತ್ತಿರುವ ಮಟ್ಟಿಗೆ 2002-03ರಲ್ಲಿ, the transmission loss, distribution loss was 39%. ಈಗ K.P.T.C.L. ನವರು 20% ಗೆ ಬಂದಿದ್ದೇವೆ ಎಂದು ಹೇಳುತ್ತಾರೆ. ಅದು 35% ಇತ್ತು, ನಂತರ 25% ಬಂತು, ಈಗ 20%ಗೆ ಬಂದಿದ್ದೇವೆ ಎಂದು ಹೇಳುತ್ತಾರೆ. ಎನರ್ಜಿ ಆಡಿಟ್ ಮಾಡದೇ ಯಾವ ಯಾವ ಬಾಬುಗಳಿಗೆ ಎಷ್ಟೆಷ್ಟು power consume ಆಗುತ್ತದೆ ಎನ್ನುವುದು ಗೊತ್ತಾಗದೇ ಇವರು ಹೇಗೆ ಹೇಳುತ್ತಾರೆ? ಏಕೆಂದರೆ ನಮ್ಮ ರಾಜ್ಯದಲ್ಲಿ ಸುಮಾರು ಹದಿನೇಳು-ಹದಿನೇಳೂವರೆ ಲಕ್ಷ ಪಂಪುಸೆಟ್ಟುಗಳಿವೆ. ಎಲ್ಲ ಲಾಸ್ ಅನ್ನು ತೆಗೆದುಕೊಂಡು ಹೋಗಿ ಅವುಗಳ ಮೇಲೆ ಹಾಕಿಬಿಡುತ್ತಾರೆ. ಏಕೆಂದರೆ, ಅಲ್ಲಿ ಲೆಕ್ಕ ಸಿಕ್ಕುವುದಿಲ್ಲವಲ್ಲ. ಲೆಕ್ಕ ಸಿಕ್ಕದೇ ಇರುವುದರಿಂದ K.P.T.C.L. ನವರು ಏನು ಮಾಡುತ್ತಾರೆ ಎಂದರೆ, ರೈತರು ವಿರೋಧ ಮಾಡುತ್ತಿರುವುದರಿಂದ ನಾವು ಮೀಟರ್ ಹಾಕುವುದಕ್ಕೆ ಆಗಿಲ್ಲ, ಮೀಟರ್ ಹಾಕದೇ ಇರುವುದರಿಂದ ನಾವು ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿ, ಆಗುತ್ತಿರುವ ಲಾಸ್‌ನೆಲ್ಲ ಆ ರೈತರ ಮೇಲೆ ಹಾಕಿಬಿಡುತ್ತಾರೆ. ಹಳ್ಳಿಗಳಲ್ಲಿ ಕರೆಂಟೇ ಇಲ್ಲ ಎಂದು ನಾನು ಹೇಳುತ್ತೇನೆ. ನಿಮ್ಮ ಪ್ರಕಾರವೇ, ನೀವು ಹಳ್ಳಿಗಳಿಗೆ 6 ಗಂಟೆಗಳ ಕಾಲ three phase ಕರೆಂಟ್ ಕೊಡುತ್ತೇವೆ ಎಂದು ಹೇಳುತ್ತೀರಿ. ಆದರೆ ಹಳ್ಳಿಗಳಲ್ಲಿರುವ ಎಲ್ಲರ ಅಭಿಪ್ರಾಯ ಮತ್ತು ಅನುಭವವೇನೆಂದರೆ, ಹಗಲು ಹೊತ್ತು 3 ಗಂಟೆ

ಮತ್ತು ರಾತ್ರಿ ಹೊತ್ತು 3 ಗಂಟೆ ಕರೆಂಟ್ ಸಿಗುವುದಿಲ್ಲ. ಅದು ಇನ್ನೂ ಕಡಿಮೆ ಇದೆ. ಹಗಲು ಹೊತ್ತು 2 ಗಂಟೆ ಮತ್ತು ರಾತ್ರಿ ಹೊತ್ತು 2 ಗಂಟೆ ಸಿಗುತ್ತದೆ. ಅದೂ ಸಹ ರಾತ್ರಿ 12 ಗಂಟೆಯ ನಂತರ ಯಾರೂ ಹೊಲಗಳಿಗೆ ಹೋಗುವುದಿಲ್ಲ, ಹಾವು–ಗೀವು ಕಚ್ಚಿಬಿಡುತ್ತವೆ, ದೆವ್ವ–ಗಿವ್ವ ಇವೆ ಎಂದು ಆಗ ಯಾರೂ ಕೂಡ ಹೋಗುವುದಿಲ್ಲ. ಈಗ ದೆವ್ವ ಇದೆ ಎಂದರೆ ಯಾರೂ ನಂಬುವುದಿಲ್ಲ. ಮೊದಲು ಹಳ್ಳಿಗಳಲ್ಲಿ ರಾತ್ರಿ ಹೊತ್ತು ಆ ಕಡೆಗಳಿಗೆ ಹೋದರೆ ದೆವ್ವ ಇದೆ ಎಂದು ಹೆದರಿಸಿಬಿಡುತ್ತಿದ್ದರು.

ಶ್ರೀ ಸಂಗಣ್ಣ ಕರಡಿ ಅಮರಪ್ಪ : ಈಗ ರಾತ್ರಿಯ ಹೊತ್ತು 12 ಗಂಟೆಯ ಮೇಲೆ ಬೆಳಗಿನವರೆಗೆ ಕರೆಂಟೇ ಇರುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಹಳ್ಳಿಗಳಲ್ಲಿ ಕರೆಂಟೇ ಇಲ್ಲದಿರುವಾಗ ಇವರು ಹೇಗೆ ಎಲ್ಲ ಲಾಸ್ ಅನ್ನು ಪಂಪುಸೆಟ್ಟುಗಳ ಮೇಲೆ ಹಾಕುತ್ತಿದ್ದಾರೆ? ಅಲ್ಲಿಗೆ ಕರೆಂಟೇ ಕೊಡದೇ, ಎಲ್ಲ ಲೆಕ್ಕವನ್ನು ಅಲ್ಲಿಗೆ ಹಾಕಿಬಿಡುವುದು ಮಾಡುತ್ತಿದ್ದಾರೆ. ನಮ್ಮ ಕಡೆ ಒಂದು ಗಾದೆ ಇದೆ, ಅದು ಒಳ್ಳೆಯ ಗಾದೆಯಲ್ಲ, ಹಾಗಾಗಿ ಅದನ್ನು ಇಲ್ಲಿ ಹೇಳಬಾರದು. ಮಾನ್ಯ ಅಧ್ಯಕ್ಷರೆ, ನಾನು ಇನ್ನೂ one hour ಮಾತನಾಡಲೇ? ಮುಖ್ಯಮಂತ್ರಿಗಳೇ ಇನ್ನೂ one hour ಮಾತನಾಡಿ ಮುಗಿಸಿಬಿಡುತ್ತೇನೆ. ಅದಕ್ಕೆ ನಿಮ್ಮ permission ಕೇಳುತ್ತಿದ್ದೇನೆ. ಅವರನ್ನೂ ಕೇಳುತ್ತೇನೆ, ನಿಮ್ಮನ್ನೂ ಕೇಳುತ್ತಿದ್ದೇನೆ. ಏಕೆಂದರೆ ನೀವೂ co-operate ಮಾಡಬೇಕಲ್ಲವೇ?

ಶ್ರೀ ಬಿ.ಎಸ್.ಯಡಿಯೂರಪ್ಪ : ನೀವೇ ಭರವಸೆಕೊಟ್ಟಿರಿ, ನಾನು 6 ಗಂಟೆಗೆ ಮುಗಿಸುತ್ತೇನೆ, ನೀವು 6 ಗಂಟೆಗೆ ಉತ್ತರ ಕೊಡಿ ಎಂದು ಹೇಳಿದಿರಿ.

ಶ್ರೀ ಸಿದ್ದರಾಮಯ್ಯ : ಮಧ್ಯ ಮಧ್ಯದಲ್ಲಿ ಬೇರೆಯವರು ಮಾತನಾಡಿ ಬಿಟ್ಟರಲ್ಲ, ಅದಕ್ಕೋಸ್ಕರ ಕೇಳುತ್ತಿದ್ದೇನೆ. ಇನ್ನೂ ನಾನು ಒಂದನ್ನೂ ಹೇಳೇ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಹೇಳಿದ್ದು Gentlemen agreement ಎಂದು ನಾನು ತಿಳಿದುಕೊಂಡಿದ್ದೆ.

SRI SIDDARAMAIAH : It is a gentleman agreement up to 8.00 p.m. ಆಮೇಲೆ ನೀವು ಎಷ್ಟು ಹೊತ್ತು ಉತ್ತರ ಕೊಟ್ಟರೂ ನಾನು ಇಲ್ಲಿಯೇ ಕುಳಿತುಕೊಳ್ಳುತ್ತೇನೆ. ಇಲ್ಲಿ ಕುಳಿತುಕೊಂಡು, ನೀವು ಹೇಳಿದುದನೆಲ್ಲ ಕೇಳಿ ನಿಮ್ಮ ಉತ್ತರವಾದ ಮೇಲೆ pass ಮಾಡಿಬಿಟ್ಟು ಹೋಗುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಇದು ಧರ್ಮವಲ್ಲ.

ಶ್ರೀ ಸಿದ್ದರಾಮಯ್ಯ : ಧರ್ಮವಲ್ಲ, ಅಧರ್ಮವೂ ಅಲ್ಲ. ನೀವು ದಯಮಾಡಿ ಕುಳಿತುಕೊಳ್ಳಿ, ನಾನು ಎಷ್ಟು ಸಾಧ್ಯವೋ ಅಷ್ಟು ಬೇಗ ಮುಗಿಸಿಬಿಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ : 6 ಗಂಟೆಗೇ ಉತ್ತರ ಕೊಡಬೇಕು ಎಂದು ಆಗಿತ್ತು.

ಶ್ರೀ ಸಿದ್ದರಾಮಯ್ಯ : ಆ ರೀತಿ ಇವುಗಳನ್ನೆಲ್ಲ ಕರಾರುವಕ್ಕಾಗಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ಅದು ಇನ್ನೂ ಆ ಮನೆಗೆ ಹೋಗಿ ಬರಬೇಕು.

ಉಪಾಧ್ಯಕ್ಷರು : ಆದಷ್ಟು ಬೇಗ ಮುಗಿಸಿ.

ಶ್ರೀ ಸಿದ್ದರಾಮಯ್ಯ : ನಾಳೆ ಬೆಳಗ್ಗೆ ಎಲ್ಲ ಪತ್ರಿಕೆಗಳಲ್ಲಿ ನಿಮ್ಮ ಮಾತುಗಳೆಲ್ಲ ಚೆನ್ನಾಗಿ ಬರಬೇಕು. ಅಥವಾ ನಾಳೆ ಬೆಳಗ್ಗೆಯೇ ಒಂಭತ್ತೂವರೆಗೆ ಸದನ ಕರೆದು ಆಗ ಬಂದು ಉತ್ತರ ಕೊಟ್ಟುಬಿಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ವಿಶೇಷ ಕಾರಣಕ್ಕಾಗಿ ಇರುವುದಕ್ಕೆ ಆಗುವುದಿಲ್ಲ ಎಂದು ನಾನು ಹೇಳಿದ್ದೇನೆ. ಇಲ್ಲದಿದ್ದರೆ ನಾನೇಕೆ ನಿಮ್ಮನ್ನು ಪರೀಕ್ಷೆ ಮಾಡಲಿ?

ಶ್ರೀ ಸಿದ್ದರಾಮಯ್ಯ : ನಿಮ್ಮ urgency ಏನೋ ನನಗೆ ಗೊತ್ತಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ನನ್ನ ಪ್ರಾಮಾಣಿಕತೆಯನ್ನು ದಯವಿಟ್ಟು ಅರ್ಥ ಮಾಡಿಕೊಳ್ಳಿ. ನಾನು ಆರೂವರೆಗಾದರೂ ಉತ್ತರ ಕೊಡುವ ಹಾಗೆ ಮಾಡಿ. ಮಾತನಾಡಬೇಕು ಎಂದರೆ ಮತ್ತೆ ವಿಶೇಷ ಅಧಿವೇಶನ ಕರೆಯುತ್ತೇವಲ್ಲ ಆಗಬೇಕಾದ್ದು ಹೇಳಿ. ನಿಮ್ಮ ಅನುಭವವನ್ನು ಹಂಚಿಕೊಳ್ಳುವುದಕ್ಕೆ ನಾನು ಸಿದ್ಧನಿದ್ದೇನೆ. ನಿಮ್ಮ ಸಲಹೆ, ಅನುಭವಗಳನ್ನು ಕೇಳುವುದಕ್ಕೆ ನಾನು ಸಿದ್ಧನಿದ್ದೇನೆ.

ಉಪಾಧ್ಯಕ್ಷರು : ಆದಷ್ಟು ಬೇಗ ಮುಗಿಸಿ.

ಶ್ರೀ ಸಿದ್ದರಾಮಯ್ಯ : ಆದಷ್ಟು ಬೇಗ ಮುಗಿಸುತ್ತೇನೆ ಮುಖ್ಯಮಂತ್ರಿಗಳೇ. ಎಲ್ಲರೂ ಮಾತನಾಡಿದ್ದರೆ ನಾನು ಕಡಿಮೆ ಮಾತನಾಡುತ್ತಿದ್ದೆ. ಬೇರೆಯವರೆಲ್ಲ ಮಾತನಾಡಿದ್ದರೆ ನಾನು ಮಾತನಾಡುವುದಕ್ಕೇ ಹೋಗುತ್ತಿರಲಿಲ್ಲ. ಮಾತನಾಡಲಿಲ್ಲವೆಂದರೆ ಏನಾಗುತ್ತದೆ ಎಂದರೆ, ವಿರೋಧ ಪಕ್ಷದವರು ಬಜೆಟ್ ಮೇಲೆ ಚರ್ಚೆಯನ್ನೇ ಮಾಡಲಿಲ್ಲ ಎಂದು ಜನರು

ನಮ್ಮನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. ಈಗ ಚುನಾವಣೆ ಬೇರೆ ಬಂದಿದೆ, ನಾವು ಜನಗಳ ಹತ್ತಿರ ಹೋಗಬೇಕಲ್ಲ. ಅವರು ಇದನ್ನು advantage ಆಗಿ ತೆಗೆದುಕೊಂಡುಬಿಟ್ಟರೆ ಏನು ಮಾಡುವುದು? ಅವರು ಆ ರೀತಿ advantage ತೆಗೆದುಕೊಳ್ಳಬಾರದು ಎಂದು ನಾನು ಸ್ವಲ್ಪ ಮಾತನಾಡಬೇಕಾಗಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಇವತ್ತು ಮಧ್ಯಾಹ್ನ ಊಟ ಮಾಡಬೇಕಾದರೆ ನನಗೂ, ಅವರಿಗೂ ಒಂದು ಅಗ್ರೀಮೆಂಟ್ ಆಗಿದೆ. ಈ ಚುನಾವಣೆಯಲ್ಲಿ ರಾಜ್ಯದಲ್ಲಿ ಅವರೂ ಪ್ರವಾಸ ಮಾಡಬಾರದು, ನಾನೂ ಪ್ರವಾಸ ಮಾಡಬಾರದು, ನಾವಿಬ್ಬರೂ ಯಾವುದಾದರೂ ಹೊರದೇಶಕ್ಕೆ ಹೋಗಬೇಕು, ಇಲ್ಲಿ ಶಾಂತವಾಗಿ ಚುನಾವಣೆ ನಡೆಯಬೇಕು ಎಂದು ಅವರು ಒಪ್ಪಿಕೊಂಡಿದ್ದಾರೆ. ಅದನ್ನು ಅವರು ಇಲ್ಲಿ ಮತ್ತೊಮ್ಮೆ ಹೇಳಿಬಿಟ್ಟರೆ ನಾನು ಆ ರೀತಿ ನಡೆದುಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ : 5 ಕ್ಷೇತ್ರಗಳ ಚುನಾವಣೆಗಳಿಗೂ ಹೋಗಬಾರದೇ?

ಶ್ರೀ ಬಿ.ಎಸ್.ಯಡಿಯೂರಪ್ಪ : ನೀವು, ನಾವು ಇಬ್ಬರೂ ಹೋಗುವುದು ಬೇಡ. ನಾವಿಬ್ಬರೂ ಒಟ್ಟಾಗಿ ಎಲ್ಲಾದರೂ ಹೊರದೇಶಕ್ಕೆ ಹೊರಟುಹೋಗೋಣ. ಶಾಂತವಾಗಿ ಚುನಾವಣೆ ನಡೆಯಲಿ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಅವರಿಬ್ಬರಲ್ಲಿ ಏನೋ ಒಪ್ಪಂದ ವಾಗಿದೆ. ಆ ಒಪ್ಪಂದಕ್ಕೆ ನಮ್ಮೆಲ್ಲರ ಸಹಮತ ಇದೆ.

ಶ್ರೀ ಸಿ.ಎಸ್.ಪುಟ್ಟೇಗೌಡ : ನೀವಿಬ್ಬರೂ ಒಟ್ಟಾಗಿ ಹೋದರೆ ಜನ ಬೇರೇನೋ ತಿಳಿದುಕೊಳ್ಳುತ್ತಾರೆ.

ಶ್ರೀ ಸಿದ್ದರಾಮಯ್ಯ : ನಾವಿಬ್ಬರೂ ಒಟ್ಟಿಗೆ ಹೋದರೆ ಜನ ನಮ್ಮ bonafides ಅನ್ನು question ಮಾಡಿಬಿಡುತ್ತಾರೆ. ಅವತ್ತೊಂದು ದಿನ ನೀವು ನನ್ನನ್ನು ಕಾಗಿನೆಲೆಯಿಂದ ಹೆಲಿಕಾಪ್ಟರ್‌ನಲ್ಲಿ ಕರೆದುಕೊಂಡು ಹೋಗಿದ್ದಕ್ಕೇ ಇನ್ನೂ ಜನರು ನನ್ನನ್ನು ಬಿಡುತ್ತಿಲ್ಲ. ಆವತ್ತು ಈಶ್ವರಪ್ಪನವರೂ ಇದ್ದರು.

ಶ್ರೀ ಬಿ.ಎಸ್.ಯಡಿಯೂರಪ್ಪ : ಕಾಗಿನೆಲೆಯಿಂದ ನಾವು ನೀವು ಹೆಲಿಕಾಪ್ಟರ್‌ನಲ್ಲಿ ಹೋಗಿದ್ದಕ್ಕೇ ಇವತ್ತು ನೀವು ಅಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದೀರಿ. ಇಲ್ಲದಿದ್ದರೆ ನೀವು ಅತ್ತ ಕಡೆಗೂ ಇಲ್ಲ, ಇತ್ತ ಕಡೆಗೂ ಇಲ್ಲ ಎನ್ನುವಂತೆ ಅತಂತ್ರರಾಗಿ ಬಿಡುತ್ತಿದ್ದಿರಿ. ಯಡಿಯೂರಪ್ಪನವರ ಜೊತೆ ಸಿದ್ದರಾಮಯ್ಯನವರು ಹೋಗುತ್ತಿದ್ದಾರೆ ಎನ್ನುವುದು ತಿಳಿದ ಮೇಲೆ

ಕಾಂಗ್ರೆಸ್ಸಿನವರು ಗಾಬರಿಯಾಗಿ ನಿಮಗೆ ಆ ಜಾಗವನ್ನು ಕೊಟ್ಟಿದ್ದಾರೆ. ಅದು ಸತ್ಯವೋ, ಅಲ್ಲವೋ ಎನ್ನುವುದನ್ನು ನೀವೇ ಕೇಳಿ. ಆವತ್ತು ನಾನು ನಿಮ್ಮನ್ನು ಕರೆದುಕೊಂಡು ಹೋಗಿ ಒಂದು ರೀತಿ ಟೋಪಿ ಬಿದ್ದೆ. ಆದರೆ ಈಗ ನೀವು ವಿರೋಧ ಪಕ್ಷದ ನಾಯಕನ ಸ್ಥಾನದಲ್ಲಿ ಕುಳಿತಿದ್ದೀರಿ. ಅದು ನನಗೆ ಸಮಾಧಾನ ತಂದಿದೆ.

ಶ್ರೀ ಬಿ.ಸಿ.ಪಾಟೀಲ್ : ಕಾಗಿನೆಲೆಯಿಂದ ಮೈಸೂರಿಗೆ ಒಟ್ಟಿಗೆ ಬಂದಿದ್ದಕ್ಕೆ ನೀವು ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ಬಂದಿರಿ. ಈಗ ನಿಮ್ಮನ್ನು ಅವರು ವಿದೇಶಕ್ಕೆ ಕರೆದುಕೊಂಡು ಹೋದರೆ ನೀವು ಆ ಕಡೆಗೆ ಹೋಗಿಬಿಡುತ್ತೀರಿ.

ಶ್ರೀ ಸಿದ್ದರಾಮಯ್ಯ : ಆ ಕಡೆಗೆ ಬೇಡ. ಅವರೇ ಅಧಿಕಾರ ಮಾಡಲಿ. ಜನ ಅವರಿಗೆ ಇನ್ನೊಂದಷ್ಟು ದಿನ ಟೈಂ ಕೊಟ್ಟಿದ್ದಾರೆ, ಅವರೇ ಮಾಡಲಿ.

ಶ್ರೀ ಕೆ.ಎಸ್.ಈಶ್ವರಪ್ಪ : ಕಾಗಿನೆಲೆಯ ಪ್ರಭಾವದಿಂದ ನೀವು ವಿರೋಧ ಪಕ್ಷದ ನಾಯಕರಾಗಿದ್ದಂತೂ ಸತ್ಯ. ಆದರೆ ನನ್ನ ಭಯವೆಂದರೆ, ನೀವಿಬ್ಬರೂ ಒಟ್ಟಿಗೆ ವಿದೇಶಕ್ಕೆ ಹೋದರೆ ಆ ವಿದೇಶದ ಗತಿ ಏನು?

ಶ್ರೀ ಸಿದ್ದರಾಮಯ್ಯ : ಆಗ ನಿಮಗೇನಾದರೂ chance ಸಿಗುತ್ತದೆಯೇ ಹೇಳಿ? ಹಾಗಿದ್ದರೆ ಕರೆದುಕೊಂಡು ಹೊರಟುಹೋಗುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ : ಕೊನೆಯವರೆಗೆ ಅವರು ನಮ್ಮ ನಾಯಕರು ಎಂದು ತೀರ್ಮಾನ ಮಾಡಿದ್ದೇವೆ. ನಮ್ಮಿಬ್ಬರಲ್ಲಿ ಒಡಕು ಉಂಟುಮಾಡಲು ಯಾರಿಂದಲೂ ಸಾಧ್ಯವಿಲ್ಲ.

ಶ್ರೀ ಸಿದ್ದರಾಮಯ್ಯ : ಅವರು ಹೊರಗಡೆಗೆ ಹೋದರೆ, ನಿಮಗೆ chance ಸಿಕ್ಕುವುದಾದರೆ ನೋಡಿ. ಹಾಗಿದ್ದರೆ ಜೊತೆಯಲ್ಲಿ ಹೋಗುತ್ತೇವೆ. ಏನಾದರೂ ಅಪವಾದ ಬರಲಿ, ಹೋಗೋಣ. ಕಟ್ಟಾ ಸುಬ್ರಮಣ್ಯ ನಾಯ್ಡು ರವರೇ, ನೀವು ಈಶ್ವರಪ್ಪನವರ ಪರ ಎನ್ನುವುದು ಗೊತ್ತಿದೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಅವರಿಗೋಸ್ಕರ.

ಶ್ರೀ ಸಿದ್ದರಾಮಯ್ಯ : ಅವರಿಗೋಸ್ಕರವೋ, ಯಾರಿಗೋಸ್ಕರವೋ, ಒಟ್ಟಿನಲ್ಲಿ ಈಶ್ವರಪ್ಪನವರ ಪರ ಇದ್ದೀರಿ. ನಾನು ಎಲ್ಲರ ಪರ ಇದ್ದೇನೆ. ನೀವು Chief Minister ಆಗುವುದಾದರೆ ನಿಮ್ಮ ಪರವೂ ಇದ್ದೇನೆ, ಕಾರಜೋಳ ರವರು Chief Minister ಆಗುವುದಾದರೆ ಅವರ ಪರವೂ ಇದ್ದೇನೆ.

ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರೇ, ನಿಮಗೇನಾದರೂ ಅಂಥ ಅವಕಾಶ ಸಿಕ್ಕಿದರೆ ನಿಮ್ಮ ಪರವೂ ಇರುತ್ತೇನೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ನಮಗೆ ಆ ಅವಕಾಶವೇ ಇಲ್ಲ.

ಶ್ರೀ ಸಿದ್ದರಾಮಯ್ಯ : ಬೇಡಬಿಡಿ, ನೀವು ಆ ಸಹವಾಸಕ್ಕೇ ಹೋಗಬೇಡಿ.

ಶ್ರೀ ಉಮೇಶ್ ಕತ್ತಿ : ಇವರು ಶ್ರೀಕಂಠಯ್ಯನವರ ಶಿಷ್ಯರು. ಹಾಗಾಗಿ, ಆ ಒಂದು chance ಅನ್ನೇ ತೆಗೆದುಕೊಳ್ಳುವುದಿಲ್ಲ.

ಶ್ರೀ ಸಿದ್ದರಾಮಯ್ಯ : ನಾನು ಪವರ್ ಬಗ್ಗೆ ಮಾತನಾಡುತ್ತಿದ್ದೆ. ನೀವು ಎನರ್ಜಿ ಆಡಿಟ್ ಅನ್ನು ಕಂಪ್ಲೀಟ್ ಮಾಡದೇ ಹೋದರೆ, because, I don't know, ನನಗಿರುವ ಅನುಮಾನವೆಂದರೆ, ಏಕೆಂದರೆ, ಆವತ್ತು ನಾನು ಇದ್ದಾಗ ನಾನು ಪತ್ತೆ ಹಚ್ಚಿದ್ದಂತೆ, ಅನೇಕ ಜನ ಅಧಿಕಾರಿಗಳು, They do not want to cooperate and they do not want to complete energy audit because, ಯಾರ್ಯಾರು ಏನೇನು ಮಾಡುತ್ತಾರೆ, ಅವುಗಳೆಲ್ಲದರಿಂದ ತಪ್ಪಿಸಬೇಕು ಎನ್ನುವ ಕಾರಣಕ್ಕಾಗಿ ಅವರು co-operate ಮಾಡುವುದಿಲ್ಲ. ಏಕೆಂದರೆ, ವಿದ್ಯುತ್ ಕಳ್ಳತನದಲ್ಲಿ ಕೆಲವರು ಸೇರಿಕೊಂಡಿದ್ದಾರೆ. Transmission, distribution lossನಲ್ಲೂ ಹಾಗೇ ಆಗಿದೆ. ಇವುಗಳನ್ನೆಲ್ಲ improve ಮಾಡಿಬಿಟ್ಟರೆ ಅವರಿಗೆ ಆಮೇಲೆ ಏನು ಸಿಗುತ್ತದೆ? ಹಾಗಾಗಿ ಮಾಡುವುದಿಲ್ಲ. System improvement ಮಾಡುತ್ತಾ ಹೋಗಬೇಕಲ್ಲವೇ.

ಶ್ರೀ ಬಿ.ಎಸ್.ಯಡಿಯೂರಪ್ಪ : ನಾನು ಮತ್ತು ಈಶ್ವರಪ್ಪನವರು ಇಲ್ಲಿಯೇ ಇದ್ದೇವೆ, ನಿಮಗೆ ಅನುಭವ ಇದೆ. ಬಹಳ ಸಂತೋಷದಿಂದ ಈ ಮನೆಯಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ, Energy Department ನಲ್ಲಿ ಅತ್ಯಂತ ಪ್ರಾಮಾಣಿಕ ಅಧಿಕಾರಿಗಳಿದ್ದಾರೆ, ಸುಧಾರಣೆಯಾಗುತ್ತಿದೆ, ಇನ್ನೆರಡು ವರ್ಷಗಳಲ್ಲಿ ಕ್ರಾಂತಿಕಾರಿ ಬದಲಾವಣೆಯಾಗುವುದಿದೆ, transmission loss ನಲ್ಲಿರಬಹುದು, ವಿದ್ಯುತ್ ಸರಬರಾಜಿನಲ್ಲಿರಬಹುದು, system improve ment ಬಗ್ಗೆ ಇರಬಹುದು.

ಶ್ರೀ ಸಿದ್ದರಾಮಯ್ಯ : ಹಾಗೆ ಆದರೆ ಸಂತೋಷ. ಕಣ್ಣು ಇಲ್ಲದ ಕುರುಡ ಕಣ್ಣು ಬೇಕೆಂದು ಕೇಳುವುದಿಲ್ಲವೇ? ನೀವು ಮಾಡಿದರೆ ಪಾಪ, ನೀವು ಕುರುಡರಿದ್ದೀರಿ ಕಣ್ಣು ಬಂದರೆ ಬಹಳ ಸಂತೋಷ, ನಾವು

ನೋಡುತ್ತೇವಲ್ಲವೆ? ನಮಗೇನೂ ತೊಂದರೆಯಿಲ್ಲ. ಕುರುಡರಿಗೆ ಏನು ಬೇಕಾಗಿದೆ? ಕಣ್ಣು ಬೇಕು. ನಮಗೆ ಏನು ಬೇಕಾಗಿದೆ? ನಮಗೆ ಕರೆಂಟ್, ಬೆಳಕು ಬೇಕು. ಆ ಬೆಳಕನ್ನು ನೀವು ಕೊಡುತ್ತೀರಿ ಎನ್ನುವ ಆಶಾಭಾವನೆ ಯನ್ನು ಇಟ್ಟುಕೊಂಡಿ ದ್ದೀರಿ. ನಿಮ್ಮ ಆಶಾಭಾವನೆ ಹೇಗಿದೆಯೆಂದರೆ, ಛತ್ತೀಸ್‌ಗಡದಲ್ಲಿ MOU ಮಾಡಿಕೊಂಡಿದ್ದೀರಿ. ಬಿಜಾಪುರದಲ್ಲಿ 2000 ಮೆ.ವ್ಯಾ. ವಿದ್ಯುತ್ ಮಾಡಬೇ ಕೆಂದಿದ್ದೀರಿ, ಬಳ್ಳಾರಿಯಲ್ಲಿ ಪ್ರಾರಂಭ ಮಾಡುವುದಕ್ಕೆ ಎಷ್ಟು ದಿವಸವಾಯಿತು? ಎಷ್ಟು ವರ್ಷಗಳ ನಂತರ ವಿದ್ಯುತ್ ಉತ್ಪಾದನೆ ಮಾಡಲಾಯಿತು? Raichur Thermal Plant ಒಂದೊಂದು ಘಟಕದಲ್ಲಿಯೂ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಎಷ್ಟೆಷ್ಟು ದಿನಗಳಾಗಿವೆ? Thermal Plant ಗೆ ಕಲ್ಲಿದ್ದಲು ಇಲ್ಲದೆ ವಿದೇಶದಿಂದ ಕಲ್ಲಿದ್ದಲು ತಂದಿದ್ದೀರಿ. ಆ ಕಲ್ಲಿದ್ದಲಿಗೆ 4 ರಿಂದ 5 ಪಟ್ಟು ಜಾಸ್ತಿ ರೇಟ್ ಕೊಟ್ಟಿದ್ದೀರಿ. ನಮ್ಮ ಭಾರತದ ಕಲ್ಲಿದ್ದಲು 2000 ರೂ. ಚಿಲ್ಲರೆ ಸಿಕ್ಕಿದರೆ ವಿದೇಶದಲ್ಲಿ 9 ಸಾವಿರ ಚಿಲ್ಲರೆ, 10 ಸಾವಿರ ಕೊಟ್ಟಿದ್ದೀರಿ, ಅಂದರೆ ಎಷ್ಟು ಖರ್ಚಾಗುತ್ತದೆ? ಇದನ್ನು ಮಾಡಬೇಕಾದರೆ ಎಷ್ಟು ದಿನ ಬೇಕು? ಇನ್ನೂ ಕೂಡ ರಾಯಚೂರಿನ 8ನೇ ಘಟಕ ಪ್ರಾರಂಭವಾಗಿದೆಯೋ, ಇಲ್ಲವೋ ಗೊತ್ತಿಲ್ಲ. ಅದನ್ನು ಮಾಡಿದರೆ ಒಂದೊಂದಕ್ಕೆ 210 ಮೆ.ವ್ಯಾ. ವಿದ್ಯುತ್ ಸಿಗುತ್ತದೆ. 7ನೇ ಘಟಕವನ್ನು ಮಾಡಿದ್ದರಿಂದ 210 ಮೆ.ವ್ಯಾ. ವಿದ್ಯುತ್ ಸಿಗುತ್ತದೆ. ನಮಗೆ ಇನ್ನೂ ಸಹ 3 ಸಾವಿರದಿಂದ 4 ಸಾವಿರ ಮೆಗಾವ್ಯಾಟ್ ವಿದ್ಯುತ್ ಬೇಕು. Demand ಗೂ Supply ಗೂ There is a big gap. ಅಷ್ಟು ವರ್ಷಗಳಿಂದ ಮಾಡಿಕೊಂಡು ಬಂದದ್ದು ಒಟ್ಟು 5700 ಮೆ.ವ್ಯಾ. ಜಲವಿದ್ಯುತ್ ಅನ್ನು 3700–800 ಮೆಗಾವ್ಯಾಟ್ ಮಾಡಿಕೊಂಡಿದ್ದೇವೆ ಇನ್ನೂ 7700 ಮೆಗಾವ್ಯಾಟ್ potential ಇದೆ. ಇಲ್ಲಿಯವರೆಗೆ ನಾವು 50% ಮಾಡಿರುವುದು, ಇನ್ನೂ 50% ಹಾಗೆಯೇ ಉಳಿದಿದೆ. ಅದಕ್ಕೆ ನೂರೆಂಟು ಅಡಚಣೆಗಳು ಉಂಟಾಗುತ್ತವೆ. ಅದಕ್ಕೆ ನೀವು ಪದೇ ಪದೇ ಹಿಂದಿನ ಸರ್ಕಾರಗಳು ಮಾಡಿಲ್ಲ, ಅದಕ್ಕೆ ನಾವೇನೂ ಮಾಡಲಿಲ್ಲ, ನಮ್ಮ ಕೈಯಿಂದ ಆಗಲಿಲ್ಲ, ಅದರಿಂದ ಈ ತೊಂದರೆ ಅನುಭವಿಸುತ್ತಿದ್ದೇವೆ ಎಂದು ಹೇಳುತ್ತಿದ್ದೀರಿ. 1970ರಲ್ಲಿ ನಮ್ಮದು surplus power ಇತ್ತು. ಆವತ್ತಿನಿಂದ ಮಾಡಬೇಕಾಗಿತ್ತು. Demandಗೆ ಅನುಗುಣವಾಗಿ Production ಕೂಡ ಆಗಬೇಕಾಗಿತ್ತು. Demand and supply should go together. Demand

ಒಂದು ಕಡೆ Supply ಒಂದು ಕಡೆ ಆಗಿಬಿಟ್ಟಿದೆ. ಹಾಗಾಗಿ, ಈ ಪರಿಸ್ಥಿತಿ. ನಾವು ಯಾರನ್ನೂ ದೂಷಣೆ ಮಾಡುವುದಕ್ಕಾಗುವುದಿಲ್ಲ. We cannot throw the blame on the previous Governments. ಆದರೆ, ನಾವೇನು ಮಾಡಬೇಕೆನ್ನುವುದು ಬಹಳ ಮುಖ್ಯ. ನೀವೇನು ಮಾಡಬೇಕು? 3000 ಮೆ.ವ್ಯಾ. ವಿದ್ಯುತ್ ಕೊರತೆ ಇದೆ. How to meet it? ಅದಕ್ಕೆ ಏನು ಮಾಡಬೇಕು? ಕಳೆದ ವರ್ಷ ಸುಮಾರು 1800 ಕೋಟಿಯಷ್ಟು ವಿದ್ಯುತ್ ಕೊಂಡುಕೊಂಡಿದ್ದೀರಿ. ಬಹುಶಃ ಇದು ಹೆಚ್ಚು ಆದದ್ದು ಏಕೆ? ಚುನಾವಣೆ ಸಮಯದಲ್ಲಿ ಜಲವಿದ್ಯುತ್ ಇತ್ಯಾದಿಯಿಂದ ಹೆಚ್ಚು ವಿದ್ಯುತ್ ಅನ್ನು ಉತ್ಪಾದನೆ ಮಾಡಿದಿರಿ. ಏಪ್ರಿಲ್, ಮೇ ತಿಂಗಳಲ್ಲಿ ಹೆಚ್ಚು ವಿದ್ಯುತ್ ಉತ್ಪಾದನೆ ಆಯಿತು. ಹೆಚ್ಚು ಉತ್ಪಾದನೆ ಮಾಡಿದ್ದರಿಂದ ನಿಮಗೆ ನೀರು ಸಾಕಾಗದೆ ಹೋಯಿತು. Power generation ಕಡಿಮೆ ಆಯಿತು. ಹಾಗಾಗಿ, ಅದನ್ನು ಸರಿದೂಗಿಸಿಕೊಳ್ಳುವುದಕ್ಕೋಸ್ಕರ ಹೊರಗಡೆಯಿಂದ per unit ವಿದ್ಯುತ್‌ಗೆ 8 ರೂಪಾಯಿಗಳಿಂದ 10.5 ರೂಪಾಯಿ ಗಳವರೆಗೆ ಕೊಟ್ಟಿದ್ದೀರಿ. ನಮ್ಮಲ್ಲಿ ಉತ್ಪಾದನೆಯಾಗುವ Thermal ವಿದ್ಯುತ್ per unitಗೆ 3.20 ರೂಪಾಯಿ ಅಥವಾ 3.12 ರೂಪಾಯಿಗಳಿರಬಹುದು. ನಮ್ಮ ರಾಯಚೂರು Thermal Plantನಲ್ಲಿ per unit ವಿದ್ಯುತ್‌ಗೆ 3.00 ರೂ. ಇರಬಹುದು. ಜಲವಿದ್ಯುತ್ ಉತ್ಪಾದನೆ cost ಬಹಳ ಕಡಿಮೆ ಎಂದರೆ 52 ಪೈಸೆ per unit ಗೆ ಇದೆ.

ಶ್ರೀ ಹೆಚ್.ಡಿ.ರೇವಣ್ಣ : ಮಂಗಳೂರಿನಲ್ಲಿ 1500 ಮೆ.ವ್ಯಾ ವಿದ್ಯುತ್ ಉತ್ಪಾದನೆಗೆ ರೂ. 2.50 ರಂತೆ ನಾಗಾರ್ಜುನ ವಿದ್ಯುತ್ ಯೋಜನೆಗೆ ನೀವೇ approve ಮಾಡಿರುವುದು.

ಶ್ರೀ ಕೆ.ಎಸ್.ಈಶ್ವರಪ್ಪ : ವಿದ್ಯುತ್ ವಿಚಾರದಲ್ಲಿ ಚರ್ಚೆ ಮಾಡಲು ವಿಶೇಷವಾದ ಅಧಿವೇಶನ ಕರೆಯಬೇಕೆಂದು ಆವತ್ತಿನಿಂದಲೂ ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದರು. ಬರೀ ಮಾತನಾಡುತ್ತಿದ್ದೀರಿ. ಒಂದು ಸಲವೂ ಆಗುತ್ತಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಅಧಿವೇಶನವನ್ನು ನಾಳೆಗೂ continue ಮಾಡಿ ಸರ್. ಮಾನ್ಯ ಮುಖ್ಯಮಂತ್ರಿಯವರು ಇಲ್ಲದಿದ್ದರೂ ಪರವಾಗಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ : ಹೀಗೆ ಹೇಳಿ ಇದು ಆಗಬಾರದೆಂದು ತೀರ್ಮಾನ ಮಾಡುವುದಷ್ಟೆ, ನೀವೇ Business Advisory Committee

ಯಲ್ಲಿ ಕುಳಿತುಕೊಂಡು 29ರವರೆಗೆ ಅಧಿವೇಶನ ಮಾಡಿ ಎಂದು ಮಾತನಾಡಿ ಕೊಂಡು ಬಂದಿದ್ದೀರಿ.

ಶ್ರೀ ಹೆಚ್.ಡಿ.ರೇವಣ್ಣ : ನಾವು ಆ ರೀತಿ ಹೇಳಿಲ್ಲ. ಆಗಸ್ಟ್ 10ನೇ ತಾರೀಖಿನ ತನಕ ಅಧಿವೇಶನ ನಡೆಸಿ ಎಂದು ಹೇಳಿದ್ದೆವು.

ಶ್ರೀ ಕೆ.ಎಸ್.ಈಶ್ವರಪ್ಪ : ಆಯಿತು. ಮಾನ್ಯ ಉಪಾಧ್ಯಕ್ಷರೆ, ನಾನು ಖಂಡಿತ ತುಂಬಾ ಪ್ರಾಮಾಣಿಕವಾಗಿ ಹೇಳಿದ್ದೇನೆ. ನಾವೆಲ್ಲ ಹೊಸದಾಗಿ ಬಂದು ಕುಳಿತಿದ್ದೇವೆ. ನೀವೆಲ್ಲ ಅನುಭವಸ್ಥರು ಇದ್ದೀರಿ. ನಮಗೆ ಮಾರ್ಗ ದರ್ಶನ ಮಾಡಿ ಎಂದು ಆವತ್ತಿನಿಂದ ಹೇಳುತ್ತಲೇ ಇದ್ದೇವೆ. ಹೂಂ ಎನ್ನುತ್ತೀರಿ, ನಂತರ ಅದಕ್ಕೇನೂ response ಇರುವುದಿಲ್ಲ. ಏಕೆಂದರೆ ಆವತ್ತಿನಿಂದ ಅಧಿವೇಶನ ನಡೆಯುತ್ತಿದೆ, ಆದರೆ, ಈಗ ವಿದ್ಯುತ್‌ನ ಬಗ್ಗೆ ಬಾಯಿ ಬಿಡುತ್ತಿದ್ದೀರಿ. Session ಪ್ರಾರಂಭವಾಗಿದ್ದು ಯಾವತ್ತು? ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಿಮಗೆ ಅನುಭವವಿದೆ.. ನಿಮ್ಮ ಅನುಭವವನ್ನು ನಮಗೆ ಹೇಳಿ, ಹಂಚಿಕೊಳ್ಳಿ ಎಂದು ಹೇಳಿದರೆ ಅದು ಮಾಡುವುದಿಲ್ಲ. ಕೊನೆಯ ದಿವಸದಲ್ಲಿ ನೀವು ವಿದ್ಯುತ್‌ನ ಬಗ್ಗೆ ಹೇಳುವುದಕ್ಕೆ ಹೊರಟಾಗ ನಾವು ಉತ್ತರ ಕೊಡುವುದಕ್ಕೂ ಅವಕಾಶವಿರುವುದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ನಾನು ಅವರಿಗೆ ಒಂದು ವಾರ ಮುಂಚಿತ ವಾಗಿಯೇ ಹೇಳಿದ್ದೇವೆ. ಅವರೇ time fix ಮಾಡದಿದ್ದರೆ ನಾವೇನು ಮಾಡುವುದಕ್ಕಾಗುತ್ತದೆ? ನಾವು ಬೇಡವೆಂದು ಹೇಳಿದ್ದೇವೆಯೇ? ಈ ವಿಷಯದ ಬಗ್ಗೆ ಚರ್ಚೆ ನಾಳೆ ಮಾಡಿ, ನಾಡಿದ್ದು ಮಾಡಿ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : ನಾಳೆ ಅಧಿವೇಶನ ಮುಂದುವರಿಸಿದರೆ ಆಗಲೂ ಒಂದು ಹೊಸ ನಿಲುವಳಿ ಸೂಚನೆ ಬರುತ್ತದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಒಂದು status paper ಕೊಟ್ಟುಬಿಡಿ. Discussion will start automatically.

ಶೀ ಕೆ.ಎಸ್.ಈಶ್ವರಪ್ಪ : Gentleman speech ಮಾಡುತ್ತೇವೆಂದು ಹೇಳಿದರಲ್ಲ.

ಶ್ರೀ ಸಿದ್ದರಾಮಯ್ಯ : Yes.

ಶ್ರೀ ಕೆ.ಎಸ್.ಈಶ್ವರಪ್ಪ : ಹಾಗೆಯೇ ಮುಂಚೆ ವಿಶೇಷ ಅಧಿವೇಶನ ಕರೆದಾಗ ಅವರಿಂದ ನಿಲುವಳಿ ಸೂಚನೆ guarantee ಇಲ್ಲವೇ?

ಶ್ರೀ ಸಿದ್ದರಾಮಯ್ಯ : ಆವತ್ತಿನವರೆಗೆ ನೀವು ಏನು ತಪ್ಪು ಮಾಡದಿದ್ದರೆ ಏನೂ ಮಾಡುವುದಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ : ಯಾವುದೇ ತಪ್ಪು ಮಾಡದಿದ್ದರೆ ಅಂದರೆ, ವಿರೋಧ ಪಕ್ಷ ಇರುವುದೇ ತಪ್ಪು ಹುಡುಕುವುದಕ್ಕೆ. (ಗೊಂದಲ) Government ನದೇ ಹೇಳುತ್ತಿರುವುದು. ಹುಡುಕಿ ತೆಗೆಯುವುದಕ್ಕೋಸ್ಕರ ವಿರೋಧ ಪಕ್ಷ ಇರುವುದು, ತಪ್ಪಲ್ಲ. ಮಾಡಬೇಕು. ಆದರೆ, ವಿಶೇಷ ಅಧಿವೇಶನ ನಡೆದಾಗಲೂ ನೀವು ನಿಲುವಳಿ ಸೂಚನೆ ತಂದರೆ ನಾವು ಏನು ಮಾಡಲಿ?

ಶ್ರೀ ಸಿದ್ದರಾಮಯ್ಯ : Agreement ಮಾಡಿಕೊಳ್ಳೋಣ. ಯಡಿಯೂರಪ್ಪನವರು ಹೇಳಿದ್ದಾರೆ. September ತಿಂಗಳಲ್ಲಿ 10 ದಿವಸ ಅಧಿವೇಶನ ಕರೆದು ಕೆಲವು Subject ಗಳ ಮೇಲೆ ಚರ್ಚೆ ಮಾಡೋಣ ಎಂದು ಹೇಳಿದ್ದಾರೆ.

ಶ್ರೀ ಹೆಚ್.ಡಿ.ರೇವಣ್ಣ : ರೈತರಿಗೆ ವಿದ್ಯುತ್ ಅನ್ನು ಸರಿಯಾದ ರೀತಿಯಲ್ಲಿ ಕೊಡುತ್ತಿಲ್ಲ ಎಂದು ಅವರು ಚುನಾವಣೆ ಸಂದರ್ಭದಲ್ಲಿ ಹೇಳಿದ್ದರು.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಆಗ ನೀವು ಚರ್ಚೆ ಮಾಡಲಿಲ್ಲ. ಈಗ ಹೇಳುತ್ತಿದ್ದೀರಿ.

ಶ್ರೀ ಹೆಚ್.ಡಿ.ರೇವಣ್ಣ : ನಾವು ಹೇಳಿದ್ದೇವಲ್ಲ ರೀ. ನಾವು ready ಇದ್ದೇವೆ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಆರೋಪ ಮಾಡುವುದು ಬಿಟ್ಟರೆ ಇನ್ನೇನಿದೆ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ನಾವು ಇರುವುದನ್ನು, ನಡೆದಿರುವುದನ್ನು ಹೇಳುತ್ತೇವೆ. ಅದು ನಿಮಗೆ ಅರೋಪವೆಂದು ಕಾಣಿಸುತ್ತದೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ನೋಡಿ, ಸುಳ್ಳು ಆರೋಪಗಳು ಹೇಗಿವೆ?

ಶ್ರೀ ಹೆಚ್.ಡಿ.ರೇವಣ್ಣ : ಸುಳ್ಳು ಆರೋಪಗಳಿದ್ದರೆ ನೀವು ಹೇಳಿ.

(ಗೊಂದಲ)

ಉಪಾಧ್ಯಕ್ಷರು : ನೀವು ನೀವು ಏಕೆ ಚರ್ಚೆ ಮಾಡಿಕೊಳ್ಳುತ್ತಿದ್ದೀರಿ?

(ಗೊಂದಲ)

(ಈ ಹಂತದಲ್ಲಿ ಸಭಾಧ್ಯಕ್ಷರು ಪೀಠವನ್ನಲಂಕರಿಸಿದರು)

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾನು ಆರೋಪ ಮಾಡಿರುವುದೆಲ್ಲ ನಿಜ ಇದೆಯೇ ಹೊರತು ಯಾವುದೂ ಸುಳ್ಳಲ್ಲ.

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಎಲ್ಲಾ ನೂರಕ್ಕೆ ನೂರು ಸುಳ್ಳೇ ಹೇಳುತ್ತಿದ್ದೀರಿ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ನಾನೇನಾದರೂ ಸುಳ್ಳು ಹೇಳಿದ್ದರೆ ನೀವು ಏನು ಹೇಳುತ್ತೀರೋ ಅದಕ್ಕೆ ಬದ್ಧನಾಗಿರುತ್ತೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಈಶ್ವರಪ್ಪನವರೆ, ಒಂದು ವಿಷಯವನ್ನು ಮಾತ್ರ ಹೇಳುತ್ತೇನೆ, KEBಯಲ್ಲಿ ಒಳ್ಳೆಯ ಅಧಿಕಾರಿಗಳು ಇದ್ದಾರೆ, ಇಲ್ಲವೆಂದು ಹೇಳುತ್ತಿಲ್ಲ. ಆದರೆ, ಅಷ್ಟೇ ಕೆಟ್ಟವರೂ ಇದ್ದಾರೆ. ಇದನ್ನು ಒಪ್ಪಿಕೊಳ್ಳಬೇಕು. ಈ ಮಾತನ್ನೇಕೆ ಹೇಳುತ್ತಿದ್ದೇನೆಂದರೆ, I don't blame all the Officers. ಅವರೆಲ್ಲ ಕೆಟ್ಟವರೆಂದು ಹೇಳುವುದಕ್ಕೆ ಹೋಗುವುದಿಲ್ಲ. ಒಂದೊಂದು transformer ಅನ್ನು 3–3, 7–8 ತಿಂಗಳಾದರೂ ಹಾಕುವುದಿಲ್ಲ. ಹಳ್ಳಿಗಳಲ್ಲಿ ಅದರಿಂದಾಗಿಯೇ ಕುಡಿಯುವ ನೀರಿನ ಸಮಸ್ಯೆ ಯಾಗುವುದು, not because of shortage of power. ಕೆಟ್ಟು ಹೋದದ್ದನ್ನು 2–3 ತಿಂಗಳಾದರೂ ಬದಲಾಯಿಸುವುದೇ ಇಲ್ಲ. ಚಾಮುಂ ಡೇಶ್ವರಿ ಕಂಪನಿಯವರಿಗೆ ಇನ್ನೂ ಏಕೆ ಬದಲಾಯಿಸಿಲ್ಲವೆಂದು ಕೇಳಿದರೆ, transformer stock ಇಲ್ಲ, ತಂದಿಲ್ಲ ಸಾರ್ ಎಂದು ಹೇಳುತ್ತಾರೆ. ನನ್ನ ಊರಿನಲ್ಲಿಯೇ ಕೆಟ್ಟು ಹೋಗಿತ್ತು. ನಾನು 4–5 ಸಾರಿ ಫೋನ್ ಮಾಡಿದ ಮೇಲೆ ಒಂದು ತಿಂಗಳ ಬಳಿಕ ತಂದು ಹಾಕಿದರು. ಹೀಗಾಗಿ, ಒಂದು alternative transformer ಇಟ್ಟುಕೊಳ್ಳದಿದ್ದರೆ ಈ ತೊಂದರೆ ಯಾಗುತ್ತದೆ. ಏಕೆಂದರೆ, ಅದನ್ನು ಬಿಚ್ಚಿ ರಿಪೇರಿಗೆ ತೆಗೆದುಕೊಂಡು ಹೋಗುವ ಹೊತ್ತಿಗೆ ಒಂದು ತಿಂಗಳಾಗುತ್ತದೆ. Subsidy cut ಮಾಡದೆ non developmental

expenditure ಅನ್ನು ಹೇಗೆ ಕಡಿಮೆ ಮಾಡುತ್ತೀರಿ? ಹಾಗಾಗಿ, ನೀರಾವರಿ ಇಲಾಖೆಗೆ ಕಳೆದ ವರ್ಷ ಕೊಡಬೇಕಾಗಿದ್ದ 1000 ಕೋಟಿ ರೂಪಾಯಿಗಳನ್ನು ಕೊಟ್ಟಿಲ್ಲ. ಹಾಗಾಗಿ, ನೀರಾವರಿಯನ್ನು ಹೆಚ್ಚು ಮಾಡಿ ಎಂದರೆ ಹೇಗೆ ಮಾಡುವುದಕ್ಕೆ ಸಾಧ್ಯ? ಎ.ಎಸ್.ಪಾಟೀಲ್‌ರವರು ಏತ ನೀರಾವರಿಗೆ ಹಣ ಕೊಟ್ಟಿಲ್ಲವೆಂದು ತಮ್ಮ ದುಃಖವನ್ನು ವ್ಯಕ್ತಪಡಿಸಿದರು. ಬಿಜಾಪುರದಲ್ಲಿ, ಗುಲ್ಬರ್ಗಾದಲ್ಲೂ ಏತ ನೀರಾವರಿಗೆ ಹಣ ಕೊಟ್ಟಿಲ್ಲ. ಅದರಲ್ಲಿ ನೀರಾವರಿ ಸಚಿವರಾದ ನಿಮ್ಮ ತಪ್ಪು ಏನೂ ಇಲ್ಲ. ಮುಖ್ಯಮಂತ್ರಿಯವರು ಹಣ ಕೊಟ್ಟಿಲ್ಲ, ಅದಕ್ಕಾಗಿ ನೀವು ಕೊಡುವುದಕ್ಕಾಗಿಲ್ಲ. 45 ಲಕ್ಷ potential ಇದೆ, 34 ಲಕ್ಷ ಮಾಡಿದ್ದೇವೆ, ಇನ್ನು 11 ಲಕ್ಷ potential create ಮಾಡಬೇಕೆಂದು ಹೇಳುತ್ತಲೇ ಇದ್ದಾರೆ, ಅದು 11 ಲಕ್ಷದಿಂದ ಕೆಳಕ್ಕೆ ಇಳಿಯಲೇ ಇಲ್ಲ. 34 ಲಕ್ಷದಿಂದ ಮೇಲಕ್ಕೇರಲೇ ಇಲ್ಲ. ನನ್ನ ಸಲಹೆ ಏನೆಂದರೆ, ಆಂಧ್ರದವರು ಮಾಡಿದ ರೀತಿಯಲ್ಲಿ as a top priority program, 5 ವರ್ಷ ನೀರಾವರಿ ಮತ್ತು ಇಂಧನ ಎರಡಕ್ಕೂ ಕೂಡ ಎಷ್ಟು ಹಣವಾಗುತ್ತದೆಯೋ ಅಷ್ಟನ್ನೂ time bound program ಹಾಕಿಕೊಂಡು, 3 ವರ್ಷಗಳಲ್ಲಿ, 4 ವರ್ಷಗಳಲ್ಲಿ ಮಾಡಿ ಮುಗಿಸಬೇಕು. ಮಾನ್ಯ ಮುಖ್ಯಮಂತ್ರಿ ಯವರೇ, ತಾವು ರೈತರ ಮೇಲೆ ಪ್ರಮಾಣ ಮಾಡಿದ್ದೀರಿ. ಇದ್ನು ಮೊದಲು ಮಾಡಿ. Otherwise, all the projects are lingering. Project ಗಳು ಆಗುತ್ತಲೇ ಇರುತ್ತವೆ, ಮುಗಿಯುವುದೇ ಇಲ್ಲ. 1978–79 ರಲ್ಲಿ ವರುಣಾ ನಾಲೆ 18.5 ಕೋಟಿ ರೂಪಾಯಿಗಳ Project ಆಗಿತ್ತು. ಈಗ ಅದಕ್ಕೆ ಬಹುಶಃ 400–500 ಕೋಟಿ ರೂಪಾಯಿಗಳಾಗಿರಬಹುದು. ಇನ್ನೂ not totally completed.

Likewise, all the projects. ಅದಕ್ಕೆ my suggestion is to you, 3 ವರ್ಷ time bound programme ಹಾಕಿಕೊಂಡು ಅದಕ್ಕೋಸ್ಕರ 6000–7000 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ. 11ನೇ ಪಂಚವಾರ್ಷಿಕ ಯೋಜನೆಯಲ್ಲಿ ಮುಗಿಸಿಬಿಡುತ್ತೇವೆಂದು ತೀರ್ಮಾನ ಮಾಡಿಕೊಳ್ಳಿ. 11ನೇ ಪಂಚವಾರ್ಷಿಕ ಯೋಜನೆಯಲ್ಲಿ ಇದು ಮೂರನೇ ವರ್ಷ. ಈ ವರ್ಷ, ಮುಂದಿನ ವರ್ಷ, ಆಚೆ ವರ್ಷ ಮೂರು ವರ್ಷಗಳಲ್ಲಿ ಮುಗಿಸಬೇಕು. ಅದಕ್ಕೋಸ್ಕರವಾಗಿ ಇದಕ್ಕೆ ಹೆಚ್ಚಾಗಿ ಹಣವನ್ನು ಇಡುತ್ತೇವೆ. ಮುಗಿಸುತ್ತೇವೆ. ಆಮೇಲೆ, maintenance work ಇದ್ದೇ ಇರುತ್ತದೆ.

ಇಲ್ಲದಿದ್ದರೆ, ಪ್ರತಿ ವರ್ಷ ನೀವು ನೀರಾವರಿಗೆಂದು 2000 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೀರಿ. Escalation 2 ಸಾವಿರ ಕೋಟಿ ರೂಪಾಯಿಗಳು ಜಾಸ್ತಿ ಆಗಿರುತ್ತದೆ. ಇದರಿಂದಾಗಿ ಎರಡು ಹೆಜ್ಜೆ ಮುಂದಕ್ಕೆ ಹೋಗುವುದು, ಎರಡು ಹೆಜ್ಜೆ ಹಿಂದಕ್ಕೆ ಬರುವುದಾಗುತ್ತದೆ. ಹೀಗಾಗಿ, all the projects ಹಾಗೇ ಇವೆ. ಇದುವರೆಗೆ ಬಹುಶಃ ನೀರಾವರಿಗೋಸ್ಕರ 25 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರಬಹುದು. To complete all the on going projects, ಇನ್ನೂ 20–30 ಸಾವಿರ ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಬೇಕಾಗುತ್ತದೆ. ನೀರಾವರಿಗೆ ಸಂಬಂಧಿಸಿದ ಈ on going projects ಅನ್ನು ವರ್ಷಕ್ಕೆ 10 ಸಾವಿರ ಕೋಟಿ ರೂಪಾಯಿಗಳಂತೆ ಮೂರು ವರ್ಷಗಳಲ್ಲಿ ಮುಗಿಸಿಬಿಡಿ. ಇದಕ್ಕೆ ನಾವೆಲ್ಲ ಒಪ್ಪಿಗೆ ಕೊಡುತ್ತೇವೆ. Every year 10000 crores of rupees ನಂತೆ ಮಾಡಿಮುಗಿಸಿ. We have no objection. ನಾವು ಸದನದಲ್ಲಿ ಒಪ್ಪಿಗೆ ಕೊಟ್ಟುಬಿಡೋಣ. ತಮಿಳುನಾಡಿನಲ್ಲಿ ಬೇರೆ ಬೇರೆ ಕಾರ್ಯಕ್ರಮಗಳನ್ನು ಹೆಚ್ಚು ಏಕೆ ಮಾಡುತ್ತಾರೆಂದರೆ, because, ಅವರು ನೀರಾವರಿಗೆ ಹಣ ಖರ್ಚು ಮಾಡುವುದಿಲ್ಲ. ಕೇರಳದಲ್ಲಿ ನೀರಾವರಿಗೆ ಹಣ ಖರ್ಚು ಮಾಡುವುದಿಲ್ಲ. ಹಾಗಾಗಿ, there will be lot of money for other programmes. ಏನೂ ಮಾಡದೆ ಹಾಗೆಯೇ ಇಟ್ಟುಕೊಂಡರೆ, ಪ್ರತಿ ವರ್ಷ ನಾವು 23% ಖರ್ಚು ಮಾಡಿದ್ದೇವೆಂದು ಹೇಳುವುದು, ನೀವು 17% ಖರ್ಚು ಮಾಡಿದ್ದೇವೆಂದು ಹೇಳುವುದು. ಆದರೆ, ಆ project ಅಲ್ಲಿಯೇ ನಿಂತಿದೆ. ಎ.ಎಸ್.ಪಾಟೀಲ್ ರವರು ನನಗೆ ಇಲ್ಲಿ ತಂದುಕೊಟ್ಟರು. ಎ.ಎಸ್. ಪಾಟೀಲರ ಕ್ಷೇತ್ರಕ್ಕೆ ನೀರಾವರಿಗೋಸ್ಕರ ಹೆಚ್ಚು ಹಣವನ್ನು ಕೊಡಿ. ಜನ ಅಲ್ಲಿ ಬಯ್ಯುತ್ತಿದ್ದಾರಂತೆ, ಚಳವಳಿ. ಪಾದಯಾತ್ರೆ ಮಾಡಿದ್ದಾರಂತೆ.

ಶ್ರೀ ಎ.ಎಸ್.ಪಾಟೀಲ್ (ನಡಹಳ್ಳಿ) : ಒಂದು ವರ್ಷದಿಂದ 3 ಸಾರಿ ಟೆಂಡರ್ ರದ್ದು ಮಾಡುತ್ತಲೇ ಇದ್ದಾರೆ. ಬಸವರಾಜ ಬೊಮ್ಮಾಯಿಯವರು ಮಂತ್ರಿಯಾದ ಮೇಲೆ ಕೇವಲ ಟೆಂಡರ್ ರದ್ದು ಮಾಡುವುದನ್ನೇ ಮಾಡುತ್ತಿದ್ದಾರೆ.

ಅಧ್ಯಕ್ಷರು : ಹೊಸದಾಗಿ ಆರಿಸಿ ಬಂದಿದ್ದರೂ, ಪಾಟೀಲ್‌ರವರು ನೀರಾವರಿ ಬಗ್ಗೆ assembly ಯಲ್ಲಿ ಸಾಕಷ್ಟು ಮಾತನಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ : ಅವರು ಇವತ್ತು ನೀರಾವರಿ ವಿಚಾರವಾಗಿ ಮಾತನಾಡಬೇಕೆಂದು ಎಲ್ಲ ಸಿದ್ಧತೆ ಮಾಡಿಕೊಂಡಿದ್ದರು. ಅವರಿಗೆ ಅವಕಾಶ ಸಿಗಲಿಲ್ಲವೆಂದು ಅದನ್ನು ನನ್ನ ಕೈಗೆ ಕೊಟ್ಟುಹೋದರು. ಆದ್ದರಿಂದ, ಆ ವಿಚಾರವಾಗಿ ನಾನು ಮಾತನಾಡಲಿಲ್ಲವೆಂದರೆ, ಅವರಿಗೆ ಕಷ್ಟವಾಗುತ್ತದೆ. ಆದ್ದರಿಂದ, priority basis ಮೇಲೆ ಮೊದಲು ನೀರಾವರಿಗೆ ಸಂಬಂಧಪಟ್ಟ ಯೋಜನೆಗಳನ್ನು ಮುಗಿಸಿ. ನಂತರ, power ಅನ್ನು ಇನ್ನೊಂದು priority ಮೇಲೆ ತೆಗೆದುಕೊಳ್ಳಿ, ಬೇರೆಯ ಕೆಲಸಗಳನ್ನು ನಿಲ್ಲಿಸಿ ಎಂದು ನಾನು ಹೇಳುವುದಿಲ್ಲ. ಈ ತರಹ ಮಾಡಿದರೆ ಒಳ್ಳೆಯದೆಂದು ನನ್ನ ಸಲಹೆಯಾಗಿದೆ. ಇನ್ನು ತೆರಿಗೆಯನ್ನು ಈ ಸಲ ಸರ್ಕಾರದಿಂದ ಸರಿಯಾಗಿ ವಸೂಲು ಮಾಡುವುದಕ್ಕಾಗಿಲ್ಲ. ಸುಮಾರು 7–8 ಸಾವಿರ ಕೋಟಿ ರೂಪಾಯಿಗಳು ನಿಮ್ಮ budgeted estimate ಏನಿತ್ತು, ಆ budgeted estimate ನ actuals ನ more than 8000 crores of Rupees cannot be collected. ಮುಂದಿನ ವರ್ಷಕ್ಕೆ ಇದೇ ತರಹ ಮುಂದುವರೆದರೆ, ಮತ್ತೆ revenue deficitಗೆ ಹೋಗುತ್ತದೆ. Fiscal deficit is more than 5%. ಇದರಿಂದ ಮತ್ತೆ ಸಾಲ ತೆಗೆದುಕೊಂಡು ಬಂದು ಸಂಬಳ ಕೊಡಬೇಕಾದ ಪರಿಸ್ಥಿತಿಗೆ ಬರುವ ದಿನಗಳು ಬರಬಾರದೆಂದು ನಾನು ನಿಮಗೆ ಈ ಸಲಹೆಯನ್ನು ಕೊಡುತ್ತಿದ್ದೇನೆ. ಈ ಬಗ್ಗೆ ಹೆಚ್ಚು ಎಚ್ಚರಿಕೆಯನ್ನು ವಹಿಸಬೇಕು. Taxpayers ಅನ್ನು ಹೆಚ್ಚು ಮಾಡಬೇಕು. ಸುಮಾರು 6600 ಕೋಟಿ ರೂಪಾಯಿ ಚಿಲ್ಲರೆ ಬಾಕಿ ಇದೆ. Commercial, excise, Motor Vehicle Tax ಎಲ್ಲಾ ಬಾಕಿ ಇವೆ. Commercial Tax arrears ಅನ್ನು ಏಕೆ ವಸೂಲು ಮಾಡುತ್ತಿಲ್ಲ? ಕಟ್ಟುನಿಟ್ಟಾಗಿ arrears ಅನ್ನು ವಸೂಲು ಮಾಡಿ. ವಸೂಲು ಮಾಡದಿದ್ದರೆ resource mobilization ಹೆಚ್ಚು ಮಾಡುವುದು ಹೇಗೆ? Exciseನಲ್ಲಿ One time settlement ಎಂದು ಮಾಡಿದಿರಿ. ಬಹುಶಃ ಇದರಲ್ಲಿ 50–60 ಕೋಟಿ ರೂಪಾಯಿಗಳು ಬಂದಿದೆ ಎಂದು ತೋರುತ್ತದೆ. ಆದರೆ, arrears ಸುಮಾರು 500–600 ಕೋಟಿ ರೂಪಾಯಿಗಳಿದೆ. ಈ One time settlementನಿಂದ ಕೆಲವರಿಗೆ ಅನುಕೂಲವಾಯಿತು, ಆದರೆ, ಬಾಕಿ ಎಲ್ಲಾ ಹಾಗೆಯೇ ಉಳಿದುಕೊಂಡಿತು. ಹಾಗಾಗಿ, ನೀವು ಬಾಕಿ ವಸೂಲಿ ಮಾಡಬೇಕು, taxpayers ಹೆಚ್ಚು ಮಾಡಬೇಕು, non developmental expenditure cut

down ಮಾಡಬೇಕು. On the other hand, ನೀವು ಸಾಲ ತೆಗೆದುಕೊಳ್ಳುವುದನ್ನು ಸಾಧ್ಯವಾದ ಮಟ್ಟಿಗೆ ಕಡಿಮೆ ಮಾಡಬಹುದು. ಇಲ್ಲದೇ ಹೋದರೆ, dept burden, debt service ಹೆಚ್ಚಾಗಿ ಕಷ್ಟದ ಪರಿಸ್ಥಿತಿಗೆ ಈ ರಾಜ್ಯ ಬರುತ್ತದೆನ್ನುವ ಮಾತು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು, ಕೃಷಿ ಬಗ್ಗೆ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ನಾವೀಗಾಗಲೇ ಚರ್ಚೆ ಮಾಡಿದ್ದೇವೆ. ಕೃಷಿ ಇಲಾಖೆಯಲ್ಲಿ food Production ಅನ್ನು double ಮಾಡಬೇಕೆಂದು, ನೀರಾವರಿ ಇಲಾಖೆಗೆ ಹಣ ಖರ್ಚು ಮಾಡುತ್ತೇವೆ, ಕೃಷಿ ಇಲಾಖೆಗೆ ಬೇಕಾದಷ್ಟು ಹಣ ಖರ್ಚು ಮಾಡುತ್ತೇವೆ, ಸಾವಯವ ಕೃಷಿ ಎಂದು ಹೇಳುತ್ತೇವೆ, ಭಾರತದ ಕೃಷಿ ವಿಕಾಸ ಯೋಜನೆ ಎಂದು ಇದೆ, ವಿಮಾ ಯೋಜನೆ ಎಂದು ಇದೆ, ಕೃಷಿ ಮಿಷನ್ ಎಂದು ಕರ್ನಾಟಕದವರು 2007–08ರಲ್ಲಿ vision document ಎಂದು ಕೃಷಿಯಲ್ಲಿ Production double ಮಾಡಬೇಕೆಂದು ಎಲ್ಲಾ ಮಾಡಿದ್ದೀರಿ. But, what is the production today? ಕಳೆದ ವರ್ಷ 125 ಲಕ್ಷ ಟನ್ ಬೆಳೆಯುತ್ತೇವೆಂದು ಗುರಿ ಇಟ್ಟುಕೊಂಡು ಅವರು target reach ಆಗಿರುವುದು about 107 ಲಕ್ಷ ಟನ್. ಎಣ್ಣೆಕಾಳಂತೂ ಅರ್ಧಕ್ಕರ್ಧ ಬರಲೇ ಇಲ್ಲ.

ಶ್ರೀ ಎಸ್. ಎ. ರವೀಂದ್ರನಾಥ್ (ಕೃಷಿ ಸಚಿವರು) : ಮಳೆ ಬಾರದ ಕಾರಣ ಈ ರೀತಿಯಾಗಿದೆ.

ಶ್ರೀ ಸಿದ್ದರಾಮಯ್ಯ : ಹೌದು, ಮಳೆ ಬರಲಿಲ್ಲ. ಮಳೆ ಬರಲಿಲ್ಲವೆಂದರೆ alternative crop ಅನ್ನಾದರೂ ಬೆಳೆಯಬೇಕಲ್ಲವೇ? ನೀವು ರೈತರಿಗೆ 1000 ರೂಪಾಯಿಗಳನ್ನು ಕೊಟ್ಟಿರಿ. ಕೇಂದ್ರ ಸರ್ಕಾರದಿಂದ ಕೃಷಿ ವಿಕಾಸ ಯೋಜನೆಗೆ ಬೇಕಾದಷ್ಟು ಹಣ ಬರುತ್ತದೆ. About 373 crores of Rupees also ಕಳೆದ ವರ್ಷ ಬಂದಿದೆ.

ಕೃಷಿ acceleration program ನೀರಾವರಿ acceleration ಇವೆಲ್ಲಾ ಮಾಡಿದ ಮೇಲೆ ಉತ್ಪಾದನೆ ಜಾಸ್ತಿಯಾಗಬೇಕಲ್ಲವೇ? ಹತ್ತು ವರ್ಷದಿಂದ ನೋಡುವುದಾದರೆ food production is stagnant. ಮುಖ್ಯಮಂತ್ರಿಗಳು ಬೆಲೆ ಜಾಸ್ತಿಯಾದರೆ ರೈತರಿಗೆ ಬೆಲೆ ಸಿಗುತ್ತದೆ ಎಂದು ಹೇಳಿದರು. ಪಾಪ ರೈತರಿಗೆ ಸಿಗುವುದು ಎರಡು ಸಾವಿರ ರೂಪಾಯಿ. ಇವರು ಮಾರುಕಟ್ಟೆಯಲ್ಲಿ ಒಂದು ಕೆ.ಜಿ.ಗೆ 70 ರಿಂದ 80 ರೂಪಾಯಿಗೆ ಮಾರುತ್ತಿದ್ದಾರೆ. ಈಗ ನೀವು

ಹೋಗಿ ಹಿಡಿಯುವುದಕ್ಕೆ ಪ್ರಾರಂಭ ಮಾಡಿದಿರಿ ಇದು ಒಳ್ಳೆಯದು ಮಾಡಿ. ಯಾರ್ಯಾರು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಾಟ ಮಾಡುತ್ತಾರೆ, ಯಾರ್ಯಾರು ಇಲ್ಲೀಗಲ್ ಆಗಿ hoardings ಇಟ್ಟುಕೊಂಡಿದ್ದಾರೆ, ಅವರೆಲ್ಲರಿಗೂ ಮಾಡಿ, ಅವರು ಯಾರಾದರೂ ಇರಲಿ. ಅವರ ಹಿಂದುಗಡೆ ಯಾರಾದರೂ ಇರಲಿ. ಆಹಾರ ಪದಾರ್ಥಗಳ ಬೆಲೆ ಏರಿಕೆಗೆ ಕೇಂದ್ರ ಸರ್ಕಾರವೂ ಕಾರಣ ಇರಬಹುದು, ನಾನು ಇಲ್ಲವೆಂದು ಹೇಳುವುದಿಲ್ಲ. I don't say, ಕೇವಲ ನಿಮ್ಮದೇ ಜವಾಬ್ದಾರಿ ಎಂದು ಹೇಳುವುದಿಲ್ಲ. Hoardings ಇಟ್ಟುಕೊಳ್ಳು ವವರು ನೀವು. hoardings ಇಟ್ಟುಕೊಂಡಿದ್ದೀರಲ್ಲಾ ಅವರ ಮೇಲೆ ರೈಡ್ ಮಾಡಿ, ಕಾಳಸಂತೆ ಕೋರರು, ಅಕ್ರಮವಾಗಿ ಬಚ್ಚಿಟ್ಟುಕೊಂಡವರು, ದಾಸ್ತಾನು ಮಾಡಿರುವವರು, ಇವರೆನ್ನಲ್ಲಾ ಮೊದಲು ಬಲಿ ಹಾಕಿ. ಕಳ್ಳಸಂತೆಯಲ್ಲಿ ಗೊಬ್ಬರ ಮಾರುವವರನ್ನು, ಅಕ್ರಮವಾಗಿ ದಾಸ್ತಾನು ಮಾಡಿದವರನ್ನು ಹಿಡಿದಿದ್ದರೆ ರೈತರು ಇವತ್ತು ಬೀದಿಗೆ ಬಂದು ಗೊಬ್ಬರ ಬೇಕೆಂದು ನಿಮ್ಮನ್ನು ಕೇಳುತ್ತಿರಲಿಲ್ಲ. ನೀವು ಈ ಕೆಲಸ ಮಾಡಲಿಲ್ಲ ಎಂದು ಈ ಪರಿಸ್ಥಿತಿ ನಿರ್ಮಾಣವಾಗಿದೆ. ಈಗ ಹೊರಟಿದ್ದೀರಿ, ಎಲ್ಲಾ ಆಗಿ ಹೋದ ಮೇಲೆ, ಊರೆಲ್ಲಾ ಕೊಳ್ಳೆ ಹೊಡೆದ ಮೇಲೆ ದಿಡ್ಡಿ ಬಾಗಿಲು ಹಾಕಿಕೊಂಡರೆ ಏನು ಪ್ರಯೋಜನ? ಮಂತ್ರಿಗಳು ಒಳ್ಳೆಯವರು, ನೀವು ಸ್ವಲ್ಪ ಜೋರಾಗಬೇಕು. ಬರೆ ಒಳ್ಳೆತನ ಸರ್ಕಾರದಲ್ಲಿ ದಂಡ ಹಿಡಿದ ಮೇಲೆ ನಡೆಯುವುದಿಲ್ಲ. You must take hard decision. ಪಾಪ ರೈತರೆಲ್ಲರೂ ಇವತ್ತು ಬೀದಿಗಿಳಿದು ಗೊಬ್ಬರಕ್ಕಾಗಿ ಹಾಹಾಕಾರ ಮಾಡುತ್ತಿದ್ದಾರೆ. ಇದು ನಿಮ್ಮ ತಪ್ಪಿನಿಂದ ಆಗಿರುವುದು. ನಾವು ಮೊನ್ನೆ ಪ್ರವಾಹ ಬಂದಿರುವ ಬಗ್ಗೆ ಚರ್ಚೆ ಮಾಡಿದೆವು. ಮಾನ್ಯ ಕೃಷಿ ಮಂತ್ರಿಗಳಿಗೆ ಹಾಗೂ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಇವತ್ತು 11 ಜಿಲ್ಲೆಗಳಲ್ಲಿ ಅತಿವೃಷ್ಟಿಯಾಯಿತು ಎಂದು ಚರ್ಚಿಸಿದ್ದೇವೆ. ಅಲ್ಲಿ ನೊಂದ ಜನರಿಗೆ ಪರಿಹಾರ ಕೊಡಬೇಕೆಂದು ಹೇಳಿದ್ದೇವೆ. ಅದೇ ತರಹ ಕರ್ನಾಟಕದಲ್ಲಿ ಇವತ್ತು ಸುಮಾರು 15–16 ಜಿಲ್ಲೆಗಳಲ್ಲಿ ಬರ ಇದೆ. ಕೇಂದ್ರ ಸರ್ಕಾರದವರು ದುಡ್ಡು ಕೊಟ್ಟಿಲ್ಲ ಹೀಗಾಗಿ ನಾವು ಅವರಿಗೆ ಏನು ಮಾಡುವುದಕ್ಕೆ ಆಗಿಲ್ಲವೆಂದು ಕೇಂದ್ರ ಸರ್ಕಾರದ ಮೇಲೆ ರೆವಿನ್ಯೂ ಮಂತ್ರಿಗಳು ಹೇಳಿಬಿಟ್ಟರು. ನಾನು ಆ ದಿವಸ ಅವರು ಕೊಟ್ಟಿರುವ ಉತ್ತರಕ್ಕೆ ಹೇಳಿದೆ. ಕೇಂದ್ರ ಸರ್ಕಾರ ದುಡ್ಡು ಕೊಟ್ಟಿದೆ, ನೀವು ದುಡ್ಡು ಖರ್ಚು ಮಾಡಿಲ್ಲ, ಕಳೆದ ಸಾರಿ ಕೊಟ್ಟಿರುವ 127 ಕೋಟಿ ಹಣ

ನಿಮ್ಮ ಡಿ.ಸಿ.ಹತ್ತಿರ ಇದೆ. ಬರಗಾಲ ಇರುವುದರಿಂದ ನೀವು ಈ ಕೂಡಲೇ ಗಮನ ಕೊಡಬೇಕು. ಎಲ್ಲೆಲ್ಲಿ ಮಳೆ ಬಿದ್ದಿದೆ ಎಂದರೆ, ಮಲೆನಾಡು ಮತ್ತು ಕರಾವಳಿ ಪ್ರದೇಶಗಳಲ್ಲಿ ಮಾತ್ರ ಮಳೆ ಬಿದ್ದಿದೆ. ಅಲ್ಲಿ ಬಿಟ್ಟರೆ, ಕೋಲಾರ, ಚಾಮರಾಜನಗರ, ಮೈಸೂರು, ತುಮಕೂರು, ಬಿಜಾಪುರ, ಬಾಗಲಕೋಟೆ, ಗುಲ್ಬರ್ಗಾ, ಬೀದರ್, ಹೀಗೆ ಸುಮಾರು 15-16 ಜಿಲ್ಲೆಗಳಲ್ಲಿ ಮಳೆ ಬಿದ್ದಿಲ್ಲ. ಮುಂಗಾರಿನಲ್ಲಿ ನನಗೆ ತಿಳಿದಿರುವಂತೆ ಸುಮಾರು 50 ರಿಂದ 60% ಬಿತ್ತನೆಯಾಗಿರಬೇಕು. about 70 ಲಕ್ಷ ಹೆಕ್ಟೇರ್ಸ್‌ನಲ್ಲಿ ನನ್ನ ಪ್ರಕಾರ 40 ಲಕ್ಷ ಹೆಕ್ಟೇರ್ಸ್‌ನಲ್ಲಿ ಬಿತ್ತನೆ ಆಗಿದ್ದರೆ ಹೆಚ್ಚು. ಇನ್ನು 30 ರಿಂದ 35 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಲಿಲ್ಲ. ಈ ತಿಂಗಳು ಕಳೆದು ಹೋದರೆ ಮುಂಗಾರಿನಲ್ಲಿ ಬೆಳೆ ಹಾಕುವುದಕ್ಕೆ ಆಗುವುದಿಲ್ಲ. ನನಗೆ ಗೊತ್ತಿರುವ ಮಟ್ಟಿಗೆ ಮುಂಗಾರು ಮುಗಿಯುವುದು ಈ ತಿಂಗಳ ಕೊನೆ. ಆಮೇಲೆ ಇಲ್ಲ. ರೈತರಿಗೆ ಬಾರಿ ಕಷ್ಟವಾಗುತ್ತದೆ. ನೀವು ಈಗಲೇ ಎಚ್ಚೆತ್ತುಕೊಳ್ಳಬೇಕು. ಕೂಡಲೇ ನೀವು ಅವರಿಗೆ ಪರಿಹಾರ ಕಾರ್ಯ ಮಾಡುವ ಕೆಲಸ ಮಾಡಬೇಕು. ಕೈ ಕಟ್ಟಿಕೊಂಡು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಕುಡಿಯುವ ನೀರಿನ ಸಮಸ್ಯೆ ಉದ್ಭವವಾಗುತ್ತದೆ. ಯಾವ್ಯಾವ ಜಿಲ್ಲೆಗಳಲ್ಲಿ ಮಳೆ ಬಿದ್ದಿಲ್ಲ, ಬಿತ್ತನೆಯಾಗಿಲ್ಲ, ಮುಂಗಾರು ಬೆಳೆ ಫೇಲ್ ಆಗುತ್ತದೆ, ಅನೇಕ ಕಡೆ ಜೂನ್‌ನಲ್ಲಿ ಮಳೆ ಬಂದು ಬಿತ್ತನೆ ಕಾರ್ಯ ಶುರುವಾಯಿತು. ಮಳೆ ಹೊರಟು ಹೋಯಿತು. ನಮ್ಮ ಕಡೆ ಚಾಮರಾಜನಗರ ಜಿಲ್ಲೆಯಲ್ಲಿ ಗುಂಡ್ಲುಪೇಟೆ ಆ ಭಾಗದಲ್ಲಿ ಮೇ ತಿಂಗಳ ಕೊನೆಯಲ್ಲಿ ಮಳೆ ಬಂತು. ಬಿತ್ತನೆ ಎಲ್ಲಾ ಆಯಿತು, ಈಗ ಮಳೆ ಆಗಿಲ್ಲ, ಪಾಪ ಅವರು ಸಾಲ ಮಾಡಿ ಗೊಬ್ಬರ, ಬೀಜ, ತಂದು ಬಿತ್ತನೆ ಮಾಡಿ ಅವರೆಲ್ಲರೂ ಕಷ್ಟಕ್ಕೆ ಸಿಕ್ಕಿ ಹಾಕಿಕೊಂಡಿದ್ದಾರೆ. ಇದಕ್ಕೆ ಕೂಡಲೇ ನೀವು ಪರಿಹಾರ ಕೊಡಬೇಕು. ಇಲ್ಲದಿದ್ದರೆ ಜನ ಗುಳೇ ಹೋಗುವುದಕ್ಕೆ ಪ್ರಾರಂಭ ಮಾಡುತ್ತಾರೆ. ಕೇಂದ್ರ ಸರ್ಕಾರ NREGSನಲ್ಲಿ ದುಡ್ಡು ಬಂದಿದೆ. ನೀವು ದುಡ್ಡು ಹಾಕಿ. ಕೇಂದ್ರ ಸರ್ಕಾರಕ್ಕೆ Memorandum ಅನ್ನು ಕಳುಹಿಸಿ ಕೊಡಿ. ಕೇಂದ್ರ ಸರ್ಕಾರದ ಬಳಿ ಹೋಗೋಣ. ನಾವು ಜೊತೆಗೆ ಬರುತ್ತೇವೆ. ಎಲ್ಲರೂ ಸೇರಿ ಕುಳಿತು ಅವರ ಜೊತೆಗೆ ಚರ್ಚಿಸಿ ಕೇಳೋಣ. ಈ ವರ್ಷ ನಮಗೆ ಇಷ್ಟು ಜಿಲ್ಲೆಗಳಲ್ಲಿ ಬರಗಾಲ ಇದೆ, ಇಷ್ಟು ಜಿಲ್ಲೆಗಳಲ್ಲಿ ಪ್ರವಾಹ ಬಂದಿದೆ, ಎಂದು ಹೇಳಿ. ಇವೆನ್ನೆಲ್ಲಾ ಸಮರೋಪಾದಿಯಲ್ಲಿ ಮಾಡಬೇಕಾಗುತ್ತದೆ. ನಾನು ಪೂರಕ ಅಂದಾಜಿನಲ್ಲಿ ನೋಡಿದೆ. 2005-06ನೇ ಇಸ್ವಿಯಲ್ಲಿ ಪ್ರವಾಹ

ಬಂದಿದ್ದಾಗ ನೊಂದಂತವರಿಗೆ ಇವತ್ತಿನವರೆಗೂ ಪರಿಹಾರ ಕೊಡುವುದಕ್ಕೆ ಆಗಿಲ್ಲ. ಬೆಳಗಾಂ ಜಿಲ್ಲೆಯ ಅಥಣಿ ಆ ಭಾಗದಲ್ಲಿ, ಗುಲ್ಬರ್ಗಾದಲ್ಲಿ, ಹುನಗುಂದ ಈ ಭಾಗದಲ್ಲಿ ಪುನರ್ ವಸತಿ ಕಲ್ಪಿಸಿಕೊಡಲಿಕ್ಕೆ ಆಗಿಲ್ಲ. ದಯವಿಟ್ಟು ನೀವು ಆ ರೀತಿ ಮಾಡುವುದಕ್ಕೆ ಹೋಗಬೇಡಿ. ನೀವು ಕಳೆದ ಇಡೀ ವರ್ಷದಲ್ಲಿ ಖರ್ಚು ಮಾಡಿರುವುದು 321 ಕೋಟಿ. CRF. NC, ಎಲ್ಲಾ ಸೇರಿಸಿ ರಾಜ್ಯದಿಂದ ನೀವು ಬರೀ 321 ಕೋಟಿ ಮಾತ್ರ ಖರ್ಚು ಮಾಡಿದ್ದೀರಿ. ಕೇಂದ್ರ ಸರ್ಕಾರದಿಂದ ಕಳೆದ ವರ್ಷ 288 ಕೋಟಿ ಬಂದಿದೆ. ಅದನ್ನು ಖರ್ಚು ಮಾಡುವುದಕ್ಕೆ ಆಗದೇ, . . .

ಶ್ರೀ ವೆಂಕಟರಾವ್ ನಾಡಗೌಡ : NREGS ನಲ್ಲಿ ಬರೀ 380 ಕೋಟಿ ಖರ್ಚು ಮಾಡಿದ್ದಾರೆ, ಆಂಧ್ರ 1,500, ಗುಜರಾತ್ 2,500 ರಷ್ಟು ಖರ್ಚು ಮಾಡಿದೆ.

ಶ್ರೀ ಸಿದ್ದರಾಮಯ್ಯ : NREGSನಲ್ಲಿ Rural Development Minister ಇದ್ದಾರೆ, ಎರಡು ವರ್ಷದಲ್ಲಿ ಬರೀ 40% ಮಾತ್ರ ಖರ್ಚು ಮಾಡಿರುವುದು. There is 60% of money unspent. ಅದು ಬಿಟ್ಟರೆ ಖರ್ಚು ಮಾಡುವುದಕ್ಕೆ ನೀವು ಬೇರೆ ದುಡ್ಡು ಕೊಡುತ್ತಿಲ್ಲ, because you have no money. ನಿಮ್ಮ ಟ್ರಜರಿಯಲ್ಲಿ ದುಡ್ಡು ಇಲ್ಲ. ಬರಗಾಲಕ್ಕೆ ದುಡ್ಡು ಇಲ್ಲವೆಂದು ಹೇಳಬಾರದು. ಕೇಂದ್ರ ಸರ್ಕಾರದ ಕಡೆಗೆ ಕೈ ತೋರಿಸಿಕೊಂಡು ಕುಳಿತುಕೊಳ್ಳಬಾರದು. ನೀವು ಕೇಂದ್ರ ಸರ್ಕಾರದ ಬಳಿ ಹೋಗಬೇಕು. ಅವರಿಗೆ Memorandum ಕೊಟ್ಟು ಒತ್ತಾಯ ಹಾಕಬೇಕು. ರಾಜ್ಯದ ಪರಿಸ್ಥಿತಿ ಈ ರೀತಿ ಇದೆ ಎಂದು ಹೇಳಬೇಕು. ಅವರಿಗೆ ಕನ್‌ವಿನ್ಸ್ ಮಾಡಬೇಕು. ಕನ್‌ವಿನ್ಸ್ ಮಾಡಿ ದುಡ್ಡು ಹೆಚ್ಚಿಗೆ ತರುವುದರ ಜೊತೆಗೆ ನೀವು ಕೈ ಕಟ್ಟಿಕೊಂಡು ಕುಳಿತುಕೊಳ್ಳುವುದಕ್ಕೆ ಹೋಗಬೇಡಿ. ರಾಜ್ಯದ ಜನರು ನಮ್ಮನ್ನು ಕ್ಷಮಿಸುವುದಿಲ್ಲ. ಶಾಪ ಹಾಕುತ್ತಾರೆ. ಬರಗಾಲದ ಕಾಮಗಾರಿಗಳನ್ನು ಕೂಡಲೇ ಪ್ರಾರಂಭಿಸಬೇಕೆಂದು ಒತ್ತಾಯಿಸುತ್ತೇನೆ. ಇವತ್ತು ಬಹಳ ಜನ ಕುರಿಗಾರರು ಬಂದಿದ್ದರು. ಮಂತ್ರಿಗಳು ಇದ್ದಾರೋ ಏನೋ ನನಗೆ ಗೊತ್ತಿಲ್ಲ. ಕುರಿಯ ಔಷಧಿಗಾಗಿ ದುಡ್ಡು ಕೊಟ್ಟರೂ ಕೂಡ ಔಷಧಿ ತೆಗೆದುಕೊಳ್ಳುವುದಕ್ಕೆ ಖರ್ಚು ಮಾಡಿಲ್ಲ. ಕುರಿಗಳಿಗೆ ರೋಗ ಬಂದಿದೆ ಎಂದು ಹೇಳುತ್ತಾರೆ. ಕೊಟ್ಟಿರುವ ದುಡ್ಡು ಖರ್ಚು ಮಾಡಲ್ಲ. ಏಕೆ ಈ ರೀತಿ ಮಾಡುತ್ತೀರಿ? ದುಡ್ಡು ಖರ್ಚು ಮಾಡುವುದಕ್ಕೆ ಅಪ್ರೂವಲ್ ಮಾಡಿಕೊಡಿ ಎಂದು ಇಲ್ಲಿ ನೀವು ಏಕೆ ನಮ್ಮನ್ನು

H-952 - 98

ಕೇಳುತ್ತೀರಿ? ದನ ಕರುಗಳಿಗೆ ರೋಗ ಬಂದರೆ ಔಷಧಿ ಇಲ್ಲವೆಂದು ಹೇಳುತ್ತೀರಿ. ಕುರಿ ವಿಮೆ ಮಾಡುವುದಕ್ಕಾಗಿಯೇ ದುಡ್ಡು ಇಟ್ಟಿದ್ದೆವು. ಒಂದು ವರ್ಷ ಮಾಡಿದರು. 10% ಕುರಿಗಳು ಕವರ್ ಆಯಿತು. Another 90% remained uncover. ಪಾಪ ಅವರು ಏನು ಮಾಡಬೇಕು? ಮಳೆ ರೋಗ ಬರುತ್ತವೆ, blue tongue ರೋಗ ಬರುತ್ತವೆ, ಕುರಿಗಳೆಲ್ಲ ಸತ್ತು ಹೋಗುತ್ತವೆ. ಪ್ರವಾಹ ಬಂದಾಗ ಹೊರಟು ಹೋಗಿ ಬಿಡುತ್ತವೆ. ಅವರಿಗೆ ಯಾವ ಪರಿಹಾರ ಕೊಡುವುದ್ಕೆ ಆಗುವುದಿಲ್ಲ. ಅದಕ್ಕೋಸ್ಕರವೇ ಅವರಿಗೆ ವಿಮೆ ಯೋಜನೆ ತೆಗೆದುಕೊಂಡು ಬಂದಿದ್ದು. ಕರ್ನಾಟಕದಲ್ಲಿ ಬಹಳ ಹೆಚ್ಚು ಎಂದರೆ 35 ಲಕ್ಷ ಕುರಿಗಳು ಇವೆ. ಮೊದಲು ಒಂದು ಕೋಟಿ ಇದ್ದವು. ಈಗ ದಿನೇ ದಿನೇ ಕಡಿಮೆಯಾದವು. ತಿನ್ನುವವರು ಜಾಸ್ತಿಯಾಗಿಬಿಟ್ಟರಲ್ಲ, by birth vegetarian ಇದ್ದವರೆಲ್ಲ non-vegetarian ಆಗಿ convert ಆಗಿ ಬಿಟ್ಟಿದ್ದಾರೆ. ಶ್ರಾವಣ ಮಾಸದಲ್ಲಿ ತಿನ್ನುತ್ತಾರೆ. ಪಾಪ ಮಾನ್ಯ ಯಡಿಯೂರಪ್ಪನವರೊಬ್ಬರು ತಿನ್ನಲಿಲ್ಲ ನಾನು ಅವರ ಪಕ್ಕದಲ್ಲಿಯೇ ಕುಳಿತುಕೊಂಡು ನೋಡಿದೆ. ಯಾವಾಗಲಾದರೂ ಹಿಂದೆ ತಿಂದಿದ್ದೀರಾ? ಅವರು ತಿನ್ನುವುದೇ ಇಲ್ಲ ಬಿಡಿ. ಬಹಳ ಜನ ನಿಮ್ಮ ತರಹ ಇದ್ದಾರೆ ಬಹಳ ಚೆನ್ನಾಗಿ ತಿನ್ನುತ್ತಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಬಸವರಾಜ್ ಬೊಮ್ಮಾಯಿರವರು ತಿನ್ನುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಅವರು ಬಹಳ ಸಾತ್ವಕರು. ಅವರ ತಂದೆಯವರ ಜೊತೆಯಲ್ಲಿ ನಾವು ಚೆನ್ನಾಗಿ ತಿನ್ನುತ್ತಿದ್ದೆವು. ಮಾನ್ಯ ಜೆ.ಹೆಚ್.ಪಟೇಲ್‌ರವರು ಒಂದು ಸಾರಿ, ಗುಬ್ಬಿಯವರು ಮಾನ್ಯ ರೇವಣ್ಣನವರು ಎನ್ನುವ ಒಬ್ಬ ಮಂತ್ರಿ ಇದ್ದರು.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಸಿದ್ದರಾಮಯ್ಯನವರೆ, ಅಧ್ಯಕ್ಷರಿಗೆ ಏಕೆ ಹೇಳುತ್ತೀರಿ ಅವರಿಗೆ ಅದರ ವಾಸನೆ ಕಂಡರೆ ಆಗುವುದಿಲ್ಲ.

ಮಾನ್ಯ ಜೆ.ಹೆಚ್.ಪಟೇಲ್‌ರವರು ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಮೊಟ್ಟೆ ಮತ್ತು ಕೋಳಿ ಮಾಂಸವನ್ನು ತಿನ್ನುತ್ತಿದ್ದರು. ಪಟೇಲ್‌ರವರೆ, ನೀವು ಮೊಟ್ಟೆ ತಿನ್ನುತ್ತೀರಾ ಎಂದು ಮಾನ್ಯ ರೇವಣ್ಣನವರು ಆಗ ಕೇಳಿದರು. ಮೊಟ್ಟೆ ಏಕೆ ಅದರ ಅವ್ವ-ಅಪ್ಪನನ್ನು ತಿನ್ನುತ್ತೇನೆಂದು ಜೆ.ಹೆಚ್.ಪಟೇಲ್‌ರವರು ಹೇಳಿದರು. ಮಾನ್ಯ ರೇವಣ್ಣನವರಿಗೆ ಅರ್ಥವಾಗಲಿಲ್ಲ. ಇವರು ಅವರ ಅವ್ವ-ಅಪ್ಪರವರನ್ನು ತಿನ್ನುತ್ತೇವೆಂದು ಹೇಳುತ್ತಿದ್ದಾರೆಂದು ಹೇಳಿದರು. ಮಾನ್ಯ

ಜೆ.ಹೆಚ್.ಪಟೇಲ್ ರವರು ಯಾವಾಗಲೂ ಸಹ ಬಹಳ humorous ಆಗಿ ಇರುತ್ತಿದ್ದರು. ಮಾನ್ಯ ಜೆ.ಹೆಚ್.ಪಟೇಲ್‌ರವರು ಆ ಕಡೆ ಕುಳಿತುಕೊಂಡಿದ್ದಾಗ ಮಾನ್ಯ ಯಡಿಯೂರಪ್ಪ ನವರು ಈ ಕಡೆ ಕುಳಿತುಕೊಂಡಿದ್ದರು. ಮಾನ್ಯ ಯಡಿಯೂರಪ್ಪನವರು ಮುಖ ಕೆಂಪು ಮಾಡಿಕೊಂಡು ಮಾತನಾಡುವುದಕ್ಕೆ ಎದ್ದು ನಿಂತುಕೊಂಡಾಗ ಮಾನ್ಯ ಜೆ.ಹೆಚ್.ಪಟೇಲರು ಯಾವುದೊಂದು ಜೋಕ್‌ನ್ನು ಹೇಳಿದಾಗ ಮಾನ್ಯ ಯಡಿಯೂರಪ್ಪನವರು ದಾರಿ ತಪ್ಪುತ್ತಿದ್ದರು. ಅವರು ತುಂಬಾ ಒಳ್ಳೆಯ ಮನುಷ್ಯರಾಗಿದ್ದರು ಆದ್ದರಿಂದ ಅವರನ್ನು ಜ್ಞಾಪಕ ಮಾಡಿಕೊಳ್ಳುತ್ತಿದ್ದೇನೆ. ಪಶುಸಂಗೋಪನೆಯಲ್ಲಿ ದುಡ್ಡು ಇರುವುದರಿಂದ ಉಳಿದ ಕುರಿಗಳಿಗೆಲ್ಲ ವಿಮೆ ಮಾಡಿ ಎಂದು ಹೇಳುವುದಕ್ಕೆ ಬಯಸುತ್ತೇನೆ. ಕುರಿ ಕಾಯತಕ್ಕಂಥವರು ಬೆಳಗಾಂನಿಂದ ಹೊರಟು ಹಾಸನದ ಕಡೆಗೆ ಬರುತ್ತಾರೆ. ಮತ್ತೆ ಹಾಸನದಿಂದ ಹೊರಟು ಮೈಸೂರು ಕಡೆಗೆ ಕುರಿ ಹೊಡೆದುಕೊಂಡು ಬರುತ್ತಾರೆ. ಇವರ ಮಕ್ಕಳಿಗೆ ವಿದ್ಯಾಭ್ಯಾಸ ಇರುವುದಿಲ್ಲ. ಅವರು ಅಲೆಮಾರಿ ಜನ ಆಗಿದ್ದಾರೆ. 7–8 ವರ್ಷಗಳ ಕುರಿಗಳನ್ನು ಹೊಡೆದು ಕೊಂಡು ಹೋಗುತ್ತಾರೆ. ಕುರಿ ಮಂದೆ ಸಮಯದಲ್ಲಿ ಕಳ್ಳರು ಅವರ ಕುರಿಗಳನ್ನು ಸಹ ಕದ್ದು ಬಿಡುತ್ತಾರೆ. ಬೆದರಿಸುವುದಕ್ಕೋಸ್ಕರ ಮತ್ತು ಪ್ರೊಟೆಕ್ಷನ್‌ಗೋಸ್ಕರ ಅವರುಗಳಿಗೆ ಗನ್ ಕೊಡಿ ಎಂದರೂ ಕೂಡ ಕೊಡುತ್ತಿಲ್ಲ. ಆದ್ದರಿಂದ, ನಾನು ಹೇಳಿರತಕ್ಕಂಥವುಗಳನ್ನು ದಯವಿಟ್ಟು ಮಾಡಬೇಕಾಗುತ್ತದೆ. ಇವುಗಳೆಲ್ಲವನ್ನು ಮಾಡಿದಾಗ ನಾವು ಇಲ್ಲಿ ಅಪ್ರೂವ್ ಮಾಡಿಕೊಟ್ಟಿದ್ದಕ್ಕಾಗಿ ಸಾರ್ಥಕವಾಗುತ್ತದೆಂದು ನನ್ನ ಭಾವನೆ, 2007–08ನೇ ಸಾಲಿನಲ್ಲಿ ಮಾನ್ಯ ಯಡಿಯೂರಪ್ಪನವರು ಅಮೃತ್ ಮಹಲ್ ಕಾವಲ್‌ನ್ನು ರಾಮಚಂದ್ರ ಮಠಕ್ಕೆ ಕೊಡುತ್ತೇವೆಂದು ಹೇಳಿದ್ದರು. ಆನಂತರ ಅದನ್ನು ಬದಲಾವಣೆ ಮಾಡಿ ಇದನ್ನು ಇಲಾಖೆಯಲ್ಲಿಯೇ ಇಟ್ಟುಕೊಂಡು ಅಮೃತ್ ಮಹಲ್ ತಳಿಯನ್ನು ಅಭಿವೃದ್ಧಿ ಪಡಿಸುತ್ತೇವೆಂದು ಹೇಳಿದ್ದೀರಿ. ಆದರೆ, ಈಗ ಮತ್ತೆ ಅದನ್ನು ಖಾಸಗಿಯವರಿಗೆ ಕೊಡಬೇಕೆಂಬುದರ ಬಗ್ಗೆ ಚರ್ಚೆ ನಡೆಯುತ್ತಿದೆ. ರೈತರು ಅಲ್ಲಿ ಚಳುವಳಿ ಮಾಡುತ್ತಿದ್ದಾರೆ. ಚಿಕ್ಕಮಗಳೂರಿಗೆ ಹೋದಾಗ ಅಜ್ಜಂಪುರದ ಹತ್ತಿರ ಇರುವ ಅಮೃತ್ ಮಹಲ್ ಕಾವಲ್‌ಗೆ ನಾನು ಹೋಗಿದ್ದೆ. ಆ ಸಂದರ್ಭದಲ್ಲಿ ರೈತರು ನನಗೊಂದು ಮನವಿಯನ್ನು ಕೊಟ್ಟರು ಅದು ಎಷ್ಟರಮಟ್ಟಿಗೆ ಹಾಳಾಗಿದೆ ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಅಲ್ಲಿಗೆ ಹೋಗಿ ನೋಡಿಕೊಂಡು ಬರಬೇಕು. ನಾನು ಪಶುಸಂಗೋಪನೆ ಇಲಾಖೆಯ ಸಚಿವನಾಗಿ ಕೆಲಸ

ಮಾಡಿದ್ದೇನೆ. ಅದನ್ನು ನೋಡಿದಾಗ ಈ ಸರ್ಕಾರದ ಅಧಿಕಾರಗಳು ಏನು ಮಾಡುತ್ತಿದ್ದಾರೆಂದು ಮತ್ತು ಸರ್ಕಾರ ಇದೆಯೋ ಅಥವಾ ಇಲ್ಲವೋ ಎಂದು ನನಗೆ ಅನಿಸುತ್ತದೆ. 53 ಸಾವಿರ ಎಕರೆ ಜಾಗ ಅಮೃತ್ ಮಹಲ್ ಕಾವಲ್‌ಗೆ ಸೇರಿದೆ. ಅಲ್ಲಿ ಒಟ್ಟು 59 ಕಾವಲ್‌ಗಳಿವೆ. ನಾನು ಅಲ್ಲಿಗೆ ಹೋದಾಗ ಮಾನ್ಯ ಕೃಷ್ಣಮೂರ್ತಿಯವರು ಸಹ ಬಂದಿದ್ದರು. ಈಗ ಅಲ್ಲಿ ಸುಮಾರು 30 ಸಾವಿರ ಎಕರೆ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಇದು ನಿಜವಾಗಿಯೂ ಗಂಭೀರವಾದಂಥ ವಿಚಾರ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಪಶುಸಂಗೋಪನೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದವರು ನಿವೃತ್ತಿಯಾದ ಮೇಲೆ ಮತ್ತೆ ಕೆಲವರು voluntary retirement ತೆಗೆದುಕೊಂಡು ಅಲ್ಲಿ ಜಾಗವನ್ನು ಆಕ್ರಮಿಸಿಕೊಂಡು ಅಡಿಕೆ ತೋಟಗಳನ್ನು ಮಾಡಿಕೊಂಡಿದ್ದಾರೆ. It is a very sad state of affairs. ವಿಜಯನಗರದ ಅರಸರು ಈ ಜಾಗವನ್ನು ಹಿಂದೆ ಕೊಟ್ಟಿದ್ದರು. ಆ ನಂತರ ಹೈದರಾಲಿ ಮತ್ತು ಮೈಸೂರು ಮಹಾರಾಜರು ಇದನ್ನು ಉಳಿಸಿಕೊಂಡು ಬಂದರು. ಸುಮಾರು 1 ಲಕ್ಷ ಎಕರೆ ಇದ್ದಂಥದು 53 ಸಾವಿರ ಎಕರೆಗೆ ಬಂದಿದೆ. ಆದರೆ, 53 ಸಾವಿರದಿಂದ 23 ಸಾವಿರ ಎಕರೆಗೆ ಈಗ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನ ಕೊಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ, ಅಮೃತ್ ಮಹಲ್ ತಳಿಯನ್ನು ಹಾಳು ಮಾಡಿಕೊಳ್ಳುವುದು ಬೇಡ. ಅಮೃತ್ ಮಹಲ್ ತಳಿ ಇವತ್ತಿಗೂ ಕೂಡ ವ್ಯವಸಾಯ ಮಾಡುವುದಕ್ಕೆ ಯೋಗ್ಯವಾಗಿದೆ. ನಮ್ಮ ಎತ್ತಿನಗಾಡಿ ಮತ್ತು ಹೊಲ ಉಳುಮೆ ಮಾಡಬೇಕಾದರೆ ಈ ತಳಿಯ ಎತ್ತುಗಳನ್ನು ಉಪಯೋಗ ಮಾಡುತ್ತಾರೆ. ಇವತ್ತಿನದಿವಸ ಎಲ್ಲರೂ ಟ್ರಾಕ್ಟರ್‌ಗಳನ್ನು ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಆದ್ದರಿಂದ, ಅಮೃತ್ ಮಹಲ್ ತಳಿಯನ್ನು ಉಳಿಸಿಕೊಂಡು ಅದನ್ನು ಅಭಿವೃದ್ಧಿಪಡಿಸತಕ್ಕಂಥದ್ದು ಸರ್ಕಾರದ ಜವಾಬ್ದಾರಿಯಾಗಿದೆ. ಅಲ್ಲಿ ಅಕ್ರಮವಾಗಿ ಯಾರಾದರು ಬಡವರು, ದಲಿತರು ಮಾಡಿಕೊಂಡಿದ್ದರೆ ಪರವಾಗಿರಲಿಲ್ಲ. ಆದರೆ, those who are not eligible under the law ಇವರೆಲ್ಲಾ ಮಾಡಿಕೊಂಡಿದ್ದಾರೆ. Land Revenue Act ಪ್ರಕಾರ ಯಾರ್‍ಯಾರು ಎಲಿಜಿಬಿಲಿಟಿ ಇಲ್ಲವೋ ಅಂಥವರೆಲ್ಲರೂ ಕೂಡ ಅಲ್ಲಿ ಜಾಗವನ್ನು ಆಕ್ರಮಿಸಿಕೊಂಡಿದ್ದಾರೆ. ಆದ್ದರಿಂದ, ಅವರಿಗೆ ಆ ಜಾಗವನ್ನು ಬಿಡುವುದು ಅಷ್ಟೊಂದು ಚೆನ್ನಾಗಿ ಕಾಣಿಸುವುದಿಲ್ಲ. ಆದರೆ, ಅದನ್ನು Preserve ಮಾಡಿ

develop ಮಾಡತಕ್ಕಂಥದ್ದು ಅತ್ಯಂತ ಅವಶ್ಯಕತೆ ಇರುವುದರಿಂದ ದಯಮಾಡಿ ಇದನ್ನು ಮಾಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ಸಮಾಜ ಕಲ್ಯಾಣ ಇಲಾಖೆ ಬಗ್ಗೆ ಹೇಳುತ್ತೇನೆ. ನಿನ್ನೆ ದಿವಸ ತಾವು ಇಲ್ಲಿ ಸಾಮಾಜಿಕ ನ್ಯಾಯದ ಬಗ್ಗೆ ಹೇಳುತ್ತಿದ್ದೀರಿ. ದಲಿತರು, ಹಿಂದುಳಿದ ವರ್ಗದವರ ಬಗ್ಗೆ ನಾವು ಅಪಾರ ಕಾಳಜಿಯನ್ನು ಇಟ್ಟುಕೊಂಡಿದ್ದೇವೆ. ಮತ್ತೆ ಅವರಿಗೆ ಎಲ್ಲಾ ರೀತಿಯ ಅನುಕೂಲ ಮಾಡಿಕೊಡುತ್ತೇವೆಂದು ಹೇಳುತ್ತಿದ್ದೀರಿ. ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುವುದೇನೆಂದರೆ, 2005-06ನೇ ಸಾಲಿನಲ್ಲಿ ನಾನು ಬಜೆಟ್ ಅನ್ನು ಮಂಡಿಸಿ ಎಲ್ಲಾ ಜನರ ಜಾತಿವಾರು ಸೆನ್ಸ್‌ಸ್ ಆಗಬೇಕೆಂದು ಬಜೆಟ್‌ನಲ್ಲಿ ನಾನು ಎರಡುಕೋಟಿ ರೂಪಾಯಿ ಇಟ್ಟಿದೆ. ಮತ್ತೆ ಈ ಕೆಲಸಕ್ಕೋಸ್ಕರ ಕೇಂದ್ರ ಸರ್ಕಾರದಿಂದ 22 ಕೋಟಿ ರೂಪಾಯಿ ಬಂದಿತ್ತು. ಇದಕ್ಕಾಗಿ ಒಟ್ಟು 24 ಕೋಟಿ ಇಡಲಾಗಿತ್ತು. ಆದರೆ, since three years it is lying with the permanent Backward Class Commission. ಇವತ್ತಿನವರೆಗೂ ಕೂಡ ಆ ಕೆಲಸ ಪ್ರಾರಂಭವಾಗಿಲ್ಲ. ನಾನು ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ 2005ರ ಮೇ ತಿಂಗಳಲ್ಲಿ ಈ ಕೆಲಸ ಪ್ರಾರಂಭ ಮಾಡಬೇಕೆಂದು inauguration ಮಾಡಿದೆ. ಆದರೆ ಇವತ್ತಿನವರೆಗೂ ಕೂಡ the money is lying. ಜಾತಿವಾರು ಸಮೀಕ್ಷೆ ಇವತ್ತಿನವರೆಗೂ ಪ್ರಾರಂಭವಾಗಿಲ್ಲ. Socio-Economic ಬಗ್ಗೆ Everybody says. ನಾನೂ ಕೂಡ ಹಿಂದುಳಿದ ವರ್ಗದವನೆಂದು ಎಲ್ಲರೂ ಹೇಳುತ್ತಾರೆ. ನಾವು Schedule tribe. Schedule cast ಎಂದು ಎಲ್ಲರೂ ಇವತ್ತಿನದಿವಸ ಹೇಳುತ್ತಾರೆ. ಈ ರೀತಿಯಾಗಿ ಹೇಳುವಂಥವರನ್ನು ಲೆಕ್ಕ ಹಾಕಿಕೊಂಡರೆ ಕರ್ನಾಟಕ ರಾಜ್ಯದಲ್ಲಿನ ಜನಸಂಖ್ಯೆ 6 ಕೋಟಿ ಅಲ್ಲ ಸುಮಾರು 20 ಕೋಟಿ ಆಗುತ್ತದೆ. ಮಂಡಲ್ ಪಂಚಾಯತ್ ಕಮಿಷನ್ ಬಗ್ಗೆ ಮತ್ತು Backward Class ಹಾಗೂ ಇತರೇ ವಿಷಯಗಳ ಬಗ್ಗೆ ಚರ್ಚೆಯಾದಾಗ Where is the authenticated document ಎಂದು ಸುಪ್ರೀಂ ಕೋರ್ಟ್‌ನವರು ಕೇಳಿದರು. ಇಂತಿಂತ ಜಾತಿಯವರು ಇಷ್ಟು ಜನರಿದ್ದಾರೆಂದು ಹೇಳುವುದಕ್ಕೆ What is the authenticated document? What is the evidence? ಈ ರೀತಿಯಾಗಿ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ನಲ್ಲಿ ಕೇಳಿದ್ದಾರೆ. ಜಾತಿವಾರು ಸಮೀಕ್ಷೆ ಆಗಬೇಕು ಮತ್ತು ಅವರ Socio-economic

conditions ಗೊತ್ತಾಗಬೇಕೆಂದು 2005-06ರಲ್ಲಿ ನಾನು ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಹೇಳಿದ್ದೆ. Those who are deserving, ಅವರಿಗೆ ಮೀಸಲಾತಿ ಸಿಗಬೇಕು. ಮತ್ತೆ ಅವರಿಗೆ ವಿಶೇಷವಾದಂಥ ಸವಲತ್ತುಗಳು ಸಿಗಬೇಕು. ಹಾಗೆಯೇ ಅವರೂ ಕೂಡ ಮುಖ್ಯವಾಹಿನಿಗೆ ಬರಬೇಕು. ಮತ್ತೆ ಅವರಿಗೂ ಸಹ ಸಾಮಾಜಿಕ ನ್ಯಾಯ ಸಿಗಬೇಕು. ಹಾಗೂ ಸಂವಿಧಾನಬದ್ಧವಾದಂಥ ಹಕ್ಕು ಅವರಿಗೂ ಸಹ ದೊರಕಬೇಕೆಂಬ ಉದ್ದೇಶದಿಂದ ಇದನ್ನು ಮಾಡಬೇಕೆಂದು ತೀರ್ಮಾನ ತೆಗೆದುಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ನಾನು ನಿಮ್ಮಲ್ಲಿ ಒತ್ತಾಯ ಮಾಡುವುದೇನೆಂದರೆ, ಕೂಡಲೇ Socio-economic survey ಮಾಡಿಸುವುದಕ್ಕೆ Permanent Backward Class Commissionಗೆ ಬೇಕಾಗಿರತಕ್ಕಂಥ ಎಲ್ಲಾ ಸವಲತ್ತುಗಳನ್ನು ಕೊಟ್ಟು ಈ ಕೆಲಸವನ್ನು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನೊಂದು ವಿಷಯ ಏನೆಂದರೆ, backward class ನವರಿಗೆ income ceiling ಇಟ್ಟಿದ್ದಾರೆ. ಕೇಂದ್ರ ಸರ್ಕಾರದವರು ಈ income ceiling ಅನ್ನು 2.5 ಲಕ್ಷದಿಂದ 4.5 ಲಕ್ಷ ಮಾಡಬೇಕೆಂದು ಶಿಫಾರಸ್ಸು ಮಾಡಿದ್ದಾರೆ. Permanent Backward Class Commission has also recommended. ಇದನ್ನು ಬಹಳ ಹಿಂದೆಯೇ ಮಾಡಲಾಗಿತ್ತು. Permanent Backward Class Commission ನವರು ಏನು ಶಿಫಾರಸ್ಸು ಮಾಡಿದ್ದಾರೆಯೋ ಅದನ್ನು ಇಲ್ಲಿ ಒಪ್ಪಿಕೊಂಡು ಹೊಸ ಆದೇಶವನ್ನು ದಯವಿಟ್ಟು ಹೊರಡಿಸಬೇಕೆಂದು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತಿದ್ದೇನೆ. ಇವತ್ತಿನ ದಿವಸ ಬಡವರಿಗೆ ಇದು ಸಿಗುತ್ತಿಲ್ಲ.

ಶ್ರೀ ಹೆಚ್.ಹಾಲಪ್ಪ : 4.5 ಲಕ್ಷ ಮಾಡಿದರೆ ನೌಕರರ ಮಕ್ಕಳಿಗೆ ಮತ್ತು ಶ್ರೀಮಂತರಿಗೆ ಸಿಗುತ್ತದೆ ಹೊರತು ಬಡವರ ಮತ್ತು ರೈತರ ಮಕ್ಕಳಿಗೆ ಸಿಗುವುದಿಲ್ಲ.

ಶ್ರೀ ಸಿದ್ದರಾಮಯ್ಯ : ನೀವು ಕುಳಿತುಕೊಳ್ಳಿ ನಾನು ಹೇಳುತ್ತೇನೆ. ಈ ರೀತಿಯಾಗಿ ಹೇಳಿ ಹಿಂದುಳಿದ ವರ್ಗದವರ್‍ಯಾರು ಬಂದಿಲ್ಲವೆಂದು ಅನೇಕ ಕಡೆ ಬೇರೆಯವರು ಕೆಲಸ ತೆಗೆದುಕೊಂಡಿದ್ದಾರೆ. ಇದು ನಿಮಗೆ ಗೊತ್ತಿದೆಯೇ? Do you know what happened in Mysore University? Mysore University ಯಲ್ಲಿ eligible ಯಾರು ಇಲ್ಲವೆಂದು ಬೇರೆಯವರನ್ನು ಕೆಲಸವನ್ನು ತೆಗೆದು ಕೊಂಡಿದ್ದಾರೆ. ಇದರ ಬಗ್ಗೆ ನಿಮ್ಮ

ಅಭಿಪ್ರಾಯ ಏನೇ ಇರಲಿ. ಆದರೆ, This is my opinion. And it is the opinion of the Backward Class Commission and it is the recommendation of the Backward Class Commission. Government of India ದವರು ಇದರ ಬಗ್ಗೆ order issue ಮಾಡಿದ್ದಾರೆ. It applies to Mandal Commission Report, why not our report? ಮಂಡಲ್ commission ರಿಪೋರ್ಟ್‌ಗೆ ಅದು ಅಪ್ಲೈ ಆಗುತ್ತಿರುವಾಗ ಇಲ್ಲಿ ಬೇಡವೆಂದರೆ ಬಿಡುತ್ತೀರಾ?

ಈಗಾಗಲೇ ಕೇಂದ್ರ ಸರ್ಕಾರದವರು ಮಂಡಲ್ ಕಮೀಷನ್ ರಿಪೋರ್ಟ್‌ಗೆ ಅನ್ವಯವಾಗುವ ರೀತಿಯಲ್ಲಿ ಒಂದು ಆರ್ಡರ್ ಇಷ್ಯೂ ಮಾಡಿಬಿಟ್ಟಿದ್ದಾರೆ. ನಮ್ಮ ಜಿಲ್ಲೆಯಲ್ಲಿ ನಾಯಕ ಜನಾಂಗ, ಪರಿವಾರ ಎನ್ನುವವರನ್ನು SC/ST ಗೆ ಸೇರಿಸುವುದಕ್ಕೆ ಇನ್ನೊಮ್ಮೆ ದಯಮಾಡಿ ಶಿಫಾರಸ್ಸು ಮಾಡಿ ಕಳುಹಿಸಿ. ಕಟ್ಟಾ ಸುಬ್ರಮಣ್ಯ ನಾಯ್ಡುರವರು ಕಾಣುತ್ತಿಲ್ಲ. ಅವರು ಹೊರಟುಹೋದರೇ?

ಅಧ್ಯಕ್ಷರು : ಅವರು ಎಲ್ಲೋ ಹಿಂದೆ ಕುಳಿತಿದ್ದರು. ಅವರನ್ಯಾಕೆ ಎಬ್ಬಿಸಿದಿರಿ?

ಶ್ರೀ ಸಿದ್ದರಾಮಯ್ಯ : ಮುಂದೆ ಬರಲಿ ಅವರು, ಬಂದರೆ ಅನುಕೂಲ. ಮಾನ್ಯ ಯಡಿಯೂರಪ್ಪನವರು, ಸಾರಾಯಿ ನಿಲ್ಲಿಸುವುದರಿಂದ ಹಳ್ಳಿಗಳಲ್ಲಿ ಕುಡಿಯುವವರೆಲ್ಲ ಕುಡಿಯುವುದನ್ನು ನಿಲ್ಲಿಸಿಬಿಡುತ್ತಾರೆ, ಹಳ್ಳಿಗಳವರ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗುತ್ತದೆ, ಅಲ್ಲಿರತಕ್ಕಂಥ ಹೆಣ್ಣುಮಕ್ಕಳ ಕಣ್ಣೀರು ಹರಿಯುವುದು ನಿಂತು ಹೋಗುತ್ತದೆ ಎಂದು ಹೇಳಿ 2007-08ರಲ್ಲಿ ಅವರು Finance Minister, Deputy Chief Minister ಆಗಿದ್ದಾಗ ಅದನ್ನು ನಿಲ್ಲಿಸಿದರು. ಅದರಂತೆ ಬಹಳ ಜನ ಹೆಣ್ಣುಮಕ್ಕಳು ಬಂದು ಇವರಿಗೆ ಹೂವಿನ ಹಾರವನ್ನೂ ಹಾಕಿದರು. ಇವತ್ತು ಆ ವಿಷಯದಲ್ಲಿ ಇಲ್ಲಿರುವ ಎಲ್ಲ ಮಾನ್ಯ ಸದಸ್ಯರ ಅಭಿಪ್ರಾಯವನ್ನು ಕೇಳಿ. ಎಲ್ಲ ಕಡೆ ಹಳ್ಳಿಹಳ್ಳಿಗಳಲ್ಲಿ, ಮನೆ ಮನೆಗಳಲ್ಲಿ, ಬೀದಿ ಬೀದಿಗಳಲ್ಲಿ, ಟೀ ಅಂಗಡಿಗಳಲ್ಲಿ, ಕಿರಾಣಿ ಅಂಗಡಿಗಳಲ್ಲಿ ಎಲ್ಲ ಕಡೆ seconds, thirds quarter bottleಗಳು ಒದ್ದಾಡುತ್ತವೆ. ಅವು ಎಲ್ಲಿಂದ ಬರುತ್ತವೋ ಏನೋ ಗೊತ್ತಿಲ್ಲ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : Seconds, thirds ಎನ್ನುವುದು ಎಲ್ಲಿಯೂ ನಮಗೆ ಪತ್ತೆಯಾಗಲಿಲ್ಲ. ನಮ್ಮ ಅಧಿಕಾರಿಗಳು ಸಮರ್ಪಕವಾಗಿ

ಕೆಲಸ ಮಾಡುತ್ತಿದ್ದಾರೆ, ಜೊತೆಗೆ ಪೋಲೀಸ್ ಇಲಾಖೆ ಕೂಡ ಕೆಲಸ ಮಾಡುತ್ತಿದೆ. ಆ ರೀತಿ ಇದ್ದರೆ immediate ಆಗಿ ನಾವು ಎಲ್ಲರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

(ಗೊಂದಲ)

ಶ್ರೀ ಕೆ. ಎಂ. ಶಿವಲಿಂಗೇಗೌಡ : ಅಧಿಕಾರಿಗಳನ್ನು ನೀವು defend ಮಾಡಿಕೊಳ್ಳುವುದಕ್ಕೆ ಹೋಗಬೇಡಿ ಬಿಡಿ.

ಶ್ರೀ ಹೆಚ್. ಸಿ. ಬಾಲಕೃಷ್ಣ : ಯಾರೂ ಹೇಳುವುದು ಬೇಡ. ಅಧ್ಯಕ್ಷರೇ, ನಿಮ್ಮ ಕ್ಷೇತ್ರದ್ದು ಹೇಳಿ ಸಾಕು.

(ಗೊಂದಲ)

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರೇ, ಇದಕ್ಕೇ ನಾನು ಅವರನ್ನು ಕರೆಯಬೇಡಿ ಎಂದು ಹೇಳಿದ್ದು.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : Petty shop ಗಳಲ್ಲಿ ಎಲ್ಲ Brand ಸಿಗುತ್ತದೆ.

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ : ಹಾಗೆ ಊರುಗಳಲ್ಲಿ ಮಾರುವುದಕ್ಕೆ ಒಂದು ಊರಿಗೆ ಇಷ್ಟು ದುಡ್ಡು ಎಂದು ಹರಾಜು ಮಾಡಿಕೊಂಡಿದ್ದಾರೆ.

ಅಧ್ಯಕ್ಷರು : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ, ಸಿದ್ದರಾಮಯ್ಯನವರೇ ನೀವು continue ಮಾಡಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ಈ ರೀತಿಯಾದರೆ ಸರಿಹೋಗುವುದಿಲ್ಲ ಅಧ್ಯಕ್ಷರೆ.

(ಗೊಂದಲ)

ಶ್ರೀ ಬಿ.ರಮಾನಾಥ ರೈ : ಅವರದೇ ಪಕ್ಷದ ಸದಸ್ಯರು ಇದನ್ನು ಇಲ್ಲ ಎಂದು ಹೇಳಿಬಿಡಲಿ. ಇದನ್ನು ಈ ಸದನದ ಎಲ್ಲ ಸದಸ್ಯರೂ ಒಪ್ಪುತ್ತಾರೆ.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆಯಿಂದ . . . .

ಅಧ್ಯಕ್ಷರು : ಜಯಚಂದ್ರವರೇ ಈಗ ಬೇಡ, ಟೈಮಾಗುತ್ತದೆ. ಉತ್ತರ ಆರೂವರೆಗೆ ಎಂದು ಹೇಳಿದೆವು, ಮತ್ತೆ ಅದನ್ನು 7 ಗಂಟೆಗೆ ಎಂದು

ಹೇಳಿದ್ದೇವೆ. ಈಗ ಅದು ಬೇಡಬಿಡಿ. ಸಿದ್ದರಾಮಯ್ಯನವರು continue ಮಾಡಲಿ.

ಶ್ರೀ ಟಿ. ಬಿ. ಜಯಚಂದ್ರ : ಒಂದು ವಿಚಾರವನ್ನು ನಾವು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ವಿರೋಧ ಪಕ್ಷದ ನಾಯಕರ ಪರವಾಗಿ ನಾನು ಒಂದು ಮಾತನ್ನು ಹೇಳುತ್ತಿದ್ದೇನೆ. ಕಳೆದ 2–3 ತಿಂಗಳಿಂದ ಕಳ್ಳಭಟ್ಟಿ ಎನ್ನತಕ್ಕಂಥದ್ದು, seconds, thirds ನಿರಂತರವಾಗಿ ಎಲ್ಲ ಕಡೆಗಳಲ್ಲೂ, ಎಲ್ಲ ಅಂಗಡಿಗಳಲ್ಲೂ sale ಆಗುತ್ತಿದೆ. ಕಾರಣವೇನೆಂದರೆ, ಇವತ್ತು ನಮಗೆ ವ್ಯಾಪಾರ ಗಿಟ್ಟುವುದಿಲ್ಲ, ನಮಗೆ ಲಾಭಾಂಶ ಕಡಿಮೆ ಮಾಡಿದ್ದಾರೆ, ಹಾಗಾಗಿ ನಾವು ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. M.R.P. ಮೇಲೆ 4 ರೂಪಾಯಿ, 5 ರೂಪಾಯಿಗಳನ್ನು ಇಟ್ಟು ಮಾರುತ್ತಿದ್ದಾರೆ. ಇದನ್ನು ಏನು ಮಾಡಿದ್ದೀರಿ? ಎಷ್ಟು ಲೈಸೆನ್ಸ್ ಸಸ್ಪೆಂಡ್ ಮಾಡಿದ್ದೀರಿ? ಯಾರ ಮೇಲೆ action ತೆಗೆದುಕೊಂಡಿದ್ದೀರಿ? ಕಳ್ಳಭಟ್ಟಿ ಏಕೆ ಜಾಸ್ತಿಯಾಗಿದೆ ಎಂದರೆ, income generation ಒಂದನ್ನು ಮಾತ್ರ ನೀವು ಗಮನದಲ್ಲಿಟ್ಟುಕೊಂಡು ಏನೆಲ್ಲ ನಿಯಂತ್ರಣ ಮಾಡಲಿಕ್ಕೆ ಹೋದಿರಲ್ಲ, ಆ ಕಾರಣಕ್ಕೋಸ್ಕರ ಇವತ್ತು ಕಳ್ಳಭಟ್ಟಿ ಜಾಸ್ತಿಯಾಗಿದೆ, ನಿಮ್ಮ ದುರಾಸೆಯಿಂದ ಕಳ್ಳಭಟ್ಟಿ ಜಾಸ್ತಿಯಾಗಿದೆ. ಅದರಿಂದ ಜನಗಳ ಆರೋಗ್ಯದ ಮೇಲೆ ಎಂಥ ದುಷ್ಪರಿಣಾಮವಾಗುತ್ತದೆ ಎನ್ನುವ ಬಗ್ಗೆ ನಿಮಗೆ ಗಮನವಿಲ್ಲ. ಏಕೆ ಈ ರೀತಿಯಾಗುತ್ತಿದೆ ಎನ್ನುವುದನ್ನು ನೀವು ಕಂಡುಹಿಡಿಯಬೇಕು. ಇದನ್ನು ಕಂಡುಹಿಡಿದು ಸರಿಪಡಿಸುವಂಥ ಕೆಲಸ ಮಾಡಿ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ಸಿದ್ದರಾಮಯ್ಯನವರೇ ನೀವು continue ಮಾಡಿ.

ಶ್ರೀ ಎಂ. ಟಿ. ಕೃಷ್ಣಪ್ಪ : ಇದು important subject ಆಗಿದೆ ಅಧ್ಯಕ್ಷರೆ.

ಶ್ರೀ ಹೆಚ್. ಸಿ. ಬಾಲಕೃಷ್ಣ : ಮಂತ್ರಿಗಳು ಈ ವಿಚಾರವನ್ನು ಮಾತನಾಡದೇ ಹೋಗಿದ್ದರೆ ಇದು ಚರ್ಚೆ ಆಗುತ್ತಲೇ ಇರಲಿಲ್ಲ.

ಶ್ರೀ ಸಿದ್ದರಾಮಯ್ಯ : ಮಾನ್ಯ ಮಂತ್ರಿಗಳು ಏನಾದರೂ ಉತ್ತರ ಹೇಳಲಿ. ನನ್ನ ಅನುಭವ ಪ್ರಕಾರ, ನನಗಿರತಕ್ಕ ಮಾಹಿತಿಗಳ ಪ್ರಕಾರ, ಹಳ್ಳಿಗಳಲ್ಲಿ ಜನಗಳ ಜೊತೆಗೆ ನನಗೆ ಸಂಪರ್ಕವಿರುವುದರಿಂದ ಹೇಳುತ್ತಿದ್ದೇನೆ,

ಹಳ್ಳಿಗಳಲ್ಲಿ ಎಲ್ಲ ಕಡೆ ವ್ಯಾಪಕವಾಗಿ non duty paid liquor ಮಾರಾಟ ವಾಗುತ್ತಿದೆ. ಎಲ್ಲ ಅಂಗಡಿಗಳಲ್ಲೂ ಬೇಕಾದಷ್ಟು ಮಾರುತ್ತಿದ್ದಾರೆ. ಕುಡಿಯುವ ಚಟ ಇರುವವನು ಕುಡಿಯುವುನ್ನು ಬಿಟ್ಟು ಬಿಡುತ್ತಾನೆಯೇ? ಒಂದು quarter bottle ಅನ್ನು 38 ರೂಪಾಯಿಗೆ ಮಾರಬೇಕು ಎಂದು ಹೇಳಿದ್ದೀರಿ. ಆದರೆ 38 ರೂಪಾಯಿಗಳಿಗೆ ಮಾರುತ್ತಿಲ್ಲ, 48 ರೂಪಾಯಿ, 50 ರೂಪಾಯಿಗಳಿಗೆ ಮಾರುತ್ತಿದ್ದಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಒಂದು ನಿಮಿಷ ವಿರೋಧ ಪಕ್ಷದ ನಾಯಕರೇ . . . . .

ಅಧ್ಯಕ್ಷರು : ಶಿವಲಿಂಗೇಗೌಡರೇ ಕುಳಿತುಕೊಳ್ಳಿ, ಸಿದ್ದರಾಮಯ್ಯ ನವರೇ ನೀವು continue ಮಾಡಿ ಶಿವಲಿಂಗೇಗೌಡರೇ ನಾನು ನಿಮಗೆ ಅಲೋ ಮಾಡಿಲ್ಲ, ಅವರು ಯೀಲ್ಡ್ ಆಗಿಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಸರ್ಕಾರಿ ಅಧಿಕಾರಿಗಳೇ 22 ಸಾವಿರ ಕೇಸುಗಳನ್ನು ನಾವು ಮಾರಲೇಬೇಕು, ಇಲ್ಲದಿದ್ದರೆ commissioner ಕರೆದು ನಮಗೆ ದಂಡ ಹಾಕುತ್ತಾರೆ, ಛೀಮಾರಿ ಹಾಕುತ್ತಾರೆ, ನಾವು ಏನು ಮಾಡುವುದು, ಹಳ್ಳಿಹಳ್ಳಿಗಳಲ್ಲಿ ಮಾರಲೇಬೇಕು ಎಂದು ಸರ್ಕಾರಿ ಎಕ್ಸೈಜ್ ಸೂಪರಿಂಟೆಂಡೆಂಟರು ಹೇಳಿದ ಮಾತು ಇದು. ಇದು ಸತ್ಯ.

ಅಧ್ಯಕ್ಷರು : ಶಿವಲಿಂಗೇಗೌಡರೇ ನಾನು ನಿಮಗೆ ಅಲೋ ಮಾಡಿಲ್ಲ, ನೀವು ಏಕೆ ಮಾತನಾಡುತ್ತಿದ್ದೀರಿ?

ಶ್ರೀ ಕೆ.ಎಂ. ಶಿವಲಿಂಗೇಗೌಡ : ಇಂಥವುಗಳಿಗೂ ನೀವು ಚರ್ಚೆಗೆ ಅವಕಾಶ ಕೊಡಲಿಲ್ಲವೆಂದರೆ ಹೇಗೆ? ಅವರು ಮಾತನಾಡುತ್ತಿರುವಾಗ ನಾವು ಇಂಥ ಕೆಲವು ವಿಚಾರಗಳನ್ನು ಹೇಳಬೇಕು, ಸರ್ಕಾರದ ಗಮನಕ್ಕೆ ತರಬೇಕು. ಅವರ ಎಕ್ಸೈಜ್ ಸೂಪರಿಂಟೆಂಡೆಂಟರು ಹೇಳುತ್ತಿರುವ ಮಾತಿದು.

ಅಧ್ಯಕ್ಷರು : Please ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ಕಟ್ಟಾ ಸುಬ್ರಮಣ್ಯ ನಾಯ್ಡುರವರೇ ನೀವು ನನ್ನ ಜೊತೆಯಲ್ಲಿ ಬನ್ನಿ. ನಾವು ನೀವು ಬೇರೆ dress ಹಾಕಿಕೊಂಡು ಹೋಗೋಣ. ನೀವು ನಮ್ಮ ಕಡೆ ಬಂದಿಲ್ಲ. ಹಾಗಾಗಿ ನೀವು ಬಂದರೂ ಗೊತ್ತಾಗುವುದಿಲ್ಲ. ಟೋಪಿ ತೆಗೆದುಹಾಕಿಬಿಡಿ ಸಾಕು. ಏಕೆಂದರೆ, ಅದನ್ನೊಂದನ್ನು ಜ್ಞಾಪಕ ಇಟ್ಟುಕೊಂಡಿರುತ್ತಾರೆ. ನಾನು ನೀವು ಜೊತೆಯಲ್ಲಿ ಹೋಗೋಣ. ನಿಮಗೆ ಯಾವ ಊರಿನಲ್ಲಿ ಬೇಕು, non duty paid liquor ಎಷ್ಟು ಬೇಕು, ಅಷ್ಟನ್ನು

ಕೊಡಿಸುತ್ತೇನೆ. ಆಗಬಹುದೇ? It is a fact. ಕೂಡಲೇ ಅದರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಹಳ್ಳಿಗಳಲ್ಲಿ ಒಂದು quarter ಕುಡಿಯಬೇಕಾದರೆ 40 ರೂಪಾಯಿ, 48 ರೂಪಾಯಿ, 50 ರೂಪಾಯಿಗಳನ್ನು ಕೊಡಬೇಕಾಗುತ್ತದೆ. It all depends on the availability. ಸಿಕ್ಕಿದರೆ 38 ರೂಪಾಯಿಗೂ ಸಿಗುತ್ತದೆ, ಇಲ್ಲವೆಂದರೆ 48 ರೂಪಾಯಿ ಆಗುತ್ತದೆ, ಇಲ್ಲವೆಂದರೆ 50 ರೂಪಾಯಿ ಆಗುತ್ತದೆ. ಪೊಲೀಸ್‌ನವರನ್ನು ಮತ್ತು ಎಕ್ಸೈಜ್ ಡಿಪಾರ್ಟ್‌ಮೆಂಟಿನವರನ್ನು ಅದನ್ನು ನಿಲ್ಲಿಸಿ ಎಂದು' ಹಾಕಿದ್ದೇವೆ. ಇದು ಹೇಗಾಗಿದೆ ಎಂದರೆ, ಕುರಿ ಕಾಯುವುದಕ್ಕೆ ತೋಳವನ್ನು ಹಾಕಿದ ಹಾಗಾಗಿದೆ. ಸಂಬಳವೇ ಬೇಡ ಎನ್ನುವ ಮಟ್ಟಕ್ಕೆ ಅವರು ಹೋಗಿದ್ದಾರೆ. ಇದು ತಮಾಷೆಯಲ್ಲ, I am not joking. ಬೇಕಾದರೆ ನೀವು ನಿಮ್ಮ intelligence ನಿಂದ report ತರಿಸಿಕೊಳ್ಳಿ. ನಾನೂ ಒಂದು ವರ್ಷ Excise Minister ಆಗಿದ್ದೆ. ಅವರಿಗೆ ಸಂಬಳವೇ ಬೇಡ ಎನ್ನುವಂತಾಗಿದ್ದಾರೆ. ಇವರು ಹೋಗಿ ಇವರೊಂದಿಷ್ಟು ತೆಗೆದುಕೊಂಡು ಬರುತ್ತಾರೆ, ಅವರು ಹೋಗಿ ಅವರೊಂದಿಷ್ಟು ತೆಗೆದುಕೊಂಡು, ನೀನು ಹೇಗಾದರೂ ಮಾರಿಕೊಳ್ಳಪ್ಪಾ ಎಂದು ಹೇಳಿ ಬರುತ್ತಾರೆ. ಇದರ ಬಗ್ಗೆ ನಾನು ಲಘುವಾಗಿ ಮಾತನಾಡುತ್ತಿಲ್ಲ. With all responsibility, at my command ನಾನು ಮಾತನಾಡುತ್ತಿದ್ದೇನೆ. ಕಟ್ಟಾರವರೇ, Small Scale Industries minister ನೀವೇ ಅಲ್ಲವೇ?

ಅಧ್ಯಕ್ಷರು : ವೆಂಕಟರಮಣಪ್ಪನವರು.

ಶ್ರೀ ಸಿದ್ದರಾಮಯ್ಯ : ವೆಂಕಟರಮಣಪ್ಪನವರೇ. ಇವರದ್ದು M.S.I.L. ಈಗ ನೀವು M.S.I.L. ಮೂಲಕ ಏನೋ ಮಾರಿಸಲು ಹೊರಟುಬಿಟ್ಟಿದ್ದೀರಲ್ಲ.

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು : ಕೆಲವು ಭಾಗಗಳಲ್ಲಿ ಹೆಚ್ಚಿನ ಬೆಲೆಗೆ ಮಾರುತ್ತಿದ್ದಾರೆ ಎಂದು ಅಧಿಕಾರಿಗಳು ನಮ್ಮ ಗಮನಕ್ಕೆ ತಂದಾಗ ಕೆಲವು ಲೈಸೆನ್ಸ್‌ಗಳನ್ನು ರದ್ದು ಮಾಡಿದ್ದು ಆಗಿದೆ. ಕೆಲವು ಅಧಿಕಾರಿಗಳನ್ನೂ ಸಸ್ಪೆಂಡ್ ಮಾಡಿದ್ದೆವು. 431 ಅಂಗಡಿಗಳವರು ಪರವಾನಗಿಯನ್ನು renewal ಮಾಡಿಕೊಂಡಿರಲಿಲ್ಲ. ಆ ಅಂಗಡಿಗಳಲ್ಲಿ ಕಡ್ಡಾಯವಾಗಿ M.R.P. rate ಗೆ ಮಾರಬೇಕು ಎಂದು ನಾವು M.S.I.L. ಮುಖಾಂತರ ಅನುಮತಿ

ಕೊಟ್ಟಿದ್ದೇವೆ. ಬೇರೆ ಬೇರೆ ತಾಲ್ಲೂಕುಗಳಲ್ಲಿ ಅವರು ಅದನ್ನು ಪ್ರಾರಂಭ ಮಾಡುತ್ತಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ : ಜನತಾ ಬಜಾರ್‌ಗಳಲ್ಲಿ ನೀವು CL2 ಲೈಸೆನ್ಸ್ ಗಳನ್ನು ಇಟ್ಟು ಕೊಂಡಿದ್ದಿರಲ್ಲ, ಅವುಗಳೆಲ್ಲವನ್ನೂ ಕೈಬಿಟ್ಟು ಬಿಟ್ಟಿರಲ್ಲ, ಏಕೆ? ಈಗ ನೀವು M.S.I.L. ಗೆ ಕೊಟ್ಟರೆ ನಡೆಯುತ್ತದೆ ಎಂದು ತಿಳಿದುಕೊಂಡಿರುವಿರಾ? ನಿಮ್ಮ ಸರ್ಕಾರಿ ಅಂಗಡಿಗಳು ಜನತಾ ಬಜಾರ್ ವ್ಯಾಪ್ತಿಯಲ್ಲಿದ್ದವು. ಇವತ್ತು ಅವುಗಳು ಮುಚ್ಚಿಹೋಗಿಲ್ಲವೇ? ಏತಕ್ಕೆ ನೀವು ಸುಮ್ಮನೆ ಇಲ್ಲದನ್ನೆಲ್ಲ ಹೇಳುವುದಕ್ಕೆ ಹೋಗುತ್ತೀರಿ? ನೀವು seconds, thirds ಮಾರುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೀರಿ ಅಷ್ಟೇ, ಇನ್ನೇನು ಆಗುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಇನ್ನು.. ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದಲ್ಲಿ,....

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರೆ, ಬೇಗ conclude ಮಾಡಿಬಿಡಿ.

ಶ್ರೀ ಸಿದ್ದರಾಮಯ್ಯ : ಹೇಳುವುದಕ್ಕೆ ಬೇಕಾದಷ್ಟು ಇವೆ. ಇವುಗಳನ್ನೆಲ್ಲ ವಾಪಸ್ಸು ಹೊತ್ತುಕೊಂಡು ಹೋಗಲೇ? ನೀವು ಅವಕಾಶ ಕೊಡುತ್ತೀರಿ ಎಂದು ಎಷ್ಟೊಂದು ತಂದು ಬಿಟ್ಟಿದ್ದೇನೆ ನೋಡಿ.

ಅಧ್ಯಕ್ಷರು : ಈಗ ಟೈಮಿಲ್ಲ. ನಾನು ಅವಕಾಶ ಕೊಡುತ್ತಿದ್ದೆ. ಆದರೆ time limitation ಇದೆ.

ಶ್ರೀ ಸಿದ್ದರಾಮಯ್ಯ : ಹಾಗಾದರೆ ನಮಗೆ ಬಹಳ ನೋವಾಗುತ್ತದೆ. ನಾನು ರಾತ್ರಿಯೆಲ್ಲ ಕುಳಿತು ಓದಿಕೊಂಡು ಬಂದಿದ್ದೇನೆ.

ಅಧ್ಯಕ್ಷರು : ಸಾಕು ಈಗ, conclude ಮಾಡಿಬಿಡಿ. ನೀವು ಹೇಳಿದ ಪ್ರಕಾರವೇ ನಿಮ್ಮ ಟೈಂ ಮುಗಿಯಿತು.

ಶ್ರೀ ಸಿದ್ದರಾಮಯ್ಯ : ಚುನಾವಣೆಗಳು ನಡೆಯತಕ್ಕಂಥ ಸಂದರ್ಭದಲ್ಲಿ, code of conduct ಜಾರಿಯಲ್ಲಿರುವಾಗ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮದಲ್ಲಿ, ಅಲ್ಲಿರತಕ್ಕಂಥ General Managerರವರು code of conduct ಅನ್ನೂ ಲೆಕ್ಕಿಸದೇ, ಅದನ್ನು violate ಮಾಡಿ stray siteಗಳನ್ನು ಅಲಾಟ್ ಮಾಡಿದ್ದಾರೆ.

Small Scale Industriesನವರು ಅವರಿಗೆ ಎಷ್ಟು ಧೈರ್ಯ ಇರಬೇಕು? ಛೇರ್ಮನ್ ಅವರು ನಿಮಗೆ ಪತ್ರವನ್ನು ಬರೆದಿದ್ದಾರೆಯೇ? ಇದನ್ನು ನಾನು ಹೇಳುವುದಲ್ಲ, Chairman ಅವರು ನಿಮ್ಮ ಪಾರ್ಟಿಯವರೆ, ಅವರೇ ಪತ್ರವನ್ನು ಬರೆದಿದ್ದಾರೆ. ಇವರ ಮೇಲೆ enquiry ಮಾಡಿಕೊಳ್ಳಿ ಈ ತರಹ ಮಾಡಿರುವುದು ಸತ್ಯವೆಂದು ಹೇಳಿ ಪತ್ರವನ್ನು ಬರೆದಿದ್ದಾರೆ. ಇದುವರೆಗೂ ಅವರ ಮೇಲೆ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಈಗ ವೆಂಕಟರಮಣಪ್ಪ ನವರು ಇದ್ದಾರೆ, ಅವರು ಕ್ರಮವನ್ನು ತೆಗೆದುಕೊಂಡಿ ದ್ದಾರೋ ಇಲ್ಲವೋ ಗೊತ್ತಿಲ್ಲ. ನಿಮಗೆ ಪತ್ರವನ್ನು ಬರೆದಿದ್ದಾರೆ. ನಾನು ಇವೆಲ್ಲವನ್ನು ಬೇಕಾದರೆ ನಿಮಗೆ ಕಳುಹಿಸಿಕೊಡುತ್ತೇನೆ. ಈ ತರಹ ಬಾಗಲಕೋಟೆಯ ನಗರಾಭಿವೃದ್ಧಿ ಪ್ರಾಧಿಕಾರ ಇದೆಯಲ್ಲಾ ಅಲ್ಲಿ ಇಬ್ಬರಿಗೆ ಕೈಗಾರಿಕೆಯ ಸಲುವಾಗಿ 8 ಎಕರೆ ಜಾಗವನ್ನು ಕೊಟ್ಟಿದ್ದಾರೆ. ಅವರ ಹೆಸರನ್ನು ನೋಡಿ ಹೇಳುತ್ತೇನೆ. ಒಂದೊಂದಾಗಿ ಹೇಳೋಣವೆಂದರೆ ಟೈಮ್ ಇಲ್ಲ.

ಅಧ್ಯಕ್ಷರು : ಮಾನ್ಯ ಸಿದ್ದರಾಮಯ್ಯನವರೆ ತಾವು conclude ಮಾಡಿಬಿಡಿ. ಈಗಾಗಲೇ ತಾವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ಒಂದೂವರೆ ಗಂಟೆಯಾಗಿದೆ. ತಮಗೆ maximum timeನ್ನು ಕೊಟ್ಟಿದ್ದೇನೆ, ನಿಮಗೆ ಇದ್ದಂತಹ ಅವಕಾಶದಲ್ಲಿ ಎಷ್ಟು ಕೊಡಬೇಕೋ ಅಷ್ಟು ಸಮಯವನ್ನು ಕೊಟ್ಟಿದ್ದೇನೆ.

ಶ್ರೀ ಸಿದ್ದರಾಮಯ್ಯ : ಸುಮ್ಮನೆ just mention ಮಾಡುತ್ತೇನೆ.

ಅಧ್ಯಕ್ಷರು : ತಾವು ಆ ಮೇಲೆ ಕಳುಹಿಸಿಕೊಡಿ.

ಶ್ರೀ ಸಿದ್ದರಾಮಯ್ಯ : ಆ ಮೇಲೆ ಕಳುಹಿಸಿಕೊಡಲೇ,

ಅಧ್ಯಕ್ಷರು : ಆ ಮೇಲೆ ಕಳುಹಿಸಿಕೊಡಿ.

ಶ್ರೀ ಬಿ.ಸಿ.ಪಾಟೀಲ್ : ನಾನು ಹೇಳಿಬಿಡುತ್ತೇನೆ.

ಅಧ್ಯಕ್ಷರು : ಮಾನ್ಯ ಬಿ.ಸಿ.ಪಾಟೀಲ್‌ರವರೆ ಬೇಡ ಸಾಕು ಈಗ. ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಲಿ.

ಶ್ರೀ ಸಿದ್ದರಾಮಯ್ಯ: ಮಲ್ಲಿಕಾರ್ಜುನ ಸಿ.ಚರಂತಿಮಠ್, ಶಿವಕುಮಾರ್ ಸಿ.ಚರಂತಿಮಠ್ ಇವರಿಗೆ 8 ಎಕರೆ ಜಾಗವನ್ನು ಕೊಟ್ಟಿದ್ದಾರೆ.

ಶ್ರೀ ಗೋವಿಂದ ಎಂ.ಕಾರಜೋಳ (ಸಣ್ಣ ನೀರಾವರಿ ಸಚಿವರು) ಸನ್ಮಾನ್ಯ ಸಭಾಧ್ಯಕ್ಷರೆ, ಅವರು ಮುಳುಗಡೆ ಸಂತ್ರಸ್ಥರಿದ್ದಾರೆ. ಅವರದ್ದು ಜಮೀನು ಫ್ಯಾಕ್ಟರಿ, ಆಯಿಲ್ ಮಿಲ್ ಮುಳುಗಡೆಯಾಗಿರುವುದಕ್ಕಾಗಿಯೇ

ಕೊಟ್ಟಿದ್ದಾರೆ. ಕಾನೂನು ಪ್ರಕಾರವಾಗಿಯೇ ಅವರಿಗೆ ಕೊಟ್ಟಿದ್ದಾರೆ. ಕಾನೂನನ್ನು ಬಿಟ್ಟು ಅವರಿಗೆ ಕೊಟ್ಟಿರುವುದಿಲ್ಲ.

ಶ್ರೀ ಸಿದ್ದರಾಮಯ್ಯ : If it is legal O.K. If it is illegal, take action.

ಶ್ರೀ ಗೋವಿಂದ ಎಂ.ಕಾರಜೋಳ : ಕಾನೂನು ಪ್ರಕಾರವೇ ಅವರಿಗೆ ಕೊಟ್ಟಿದೆ. .

ಶ್ರೀ ಸಿದ್ದರಾಮಯ್ಯ : If it is illegeal, You take action.

ಶ್ರೀ ಗೋವಿಂದ ಎಂ.ಕಾರಜೋಳ : ಆಯಿತು.

ಶ್ರೀ ಸಿದ್ದರಾಮಯ್ಯ : According to me it is illegal. According to you it is legal. Look into it, if it is within the perview of law take action otherwise ಬಿಟ್ಟು ಬಿಡು ಎಂದು ಹೇಳಿದನಲ್ಲ.

ಅಧ್ಯಕ್ಷರು : ಆಯಿತು.

ಶ್ರೀ ಸಿದ್ದರಾಮಯ್ಯ : ಈಗ ಅದನ್ನು ನಿಮಗೆ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು : ಕಳುಹಿಸಿಕೊಡಿ.

ಶ್ರೀ ಸಿದ್ದರಾಮಯ್ಯ : 8 ಎಕರೆ ಅದನ್ನು ಹೇಳಿಬಿಡುತ್ತೇನೆ. ಈಗ facts ಏನೆಂದರೆ ಜಮೀನು ಕಳೆದುಕೊಂಡ ಸಂತ್ರಸ್ಥರಿಗೆ ಕೊಟ್ಟು ಬಿಟ್ಟಿದ್ದಾರೆಂದು. 1 ಎಕರೆ 33 ಗುಂಟೆ ಜಮೀನನ್ನು ಕಳೆದುಕೊಂಡಿದ್ದಾರೆ. ಅವರಿಗೆ 2 ಕೋಟಿ ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದಾರೆ. ಅವರು industries ಮಾಡುತ್ತಿದ್ದದನ್ನು ಬಹಳ ವರ್ಷಗಳ ಹಿಂದೆಯೇ ನಿಲ್ಲಿಸಿಬಿಟ್ಟಿದ್ದಾರೆ. ಅವರು ಅದನ್ನು ನಿಲ್ಲಿಸಿರುವುದಕ್ಕೆ ಅವರಿಗೆ 8 ಎಕರೆ ನಿಮಗೆ ಬರುತ್ತದೆ. ಅದು ಯಾವ ನಿಯಮದಲ್ಲಿದೆ. Industries ಮುಚ್ಚಿಹೋಗಿರುವವರಿಗೆ ಈಗ ಕೊಡುವುದಕ್ಕಾಗುತ್ತದೆಯೇ? ಅದಕ್ಕೆ provision ಇದ್ದರೆ ಕೊಡಿ. provision ಇಲ್ಲದೇ ಇದ್ದರೆ take action.

(ಗೊಂದಲ)

ಶ್ರೀ ವೀರಣ್ಣ ಚಂದ್ರಶೇಖರ ಚರಂತಿಮಠ್ : ನಮ್ಮ brothers ಹೆಸರನ್ನು ಹೇಳಿದ್ದೀರಿ ಅವರ ಜಮೀನು 6 ಎಕರೆ ಮುಳುಗಡೆಯಾಗಿದೆ.

ಶ್ರೀ ಸಿದ್ದರಾಮಯ್ಯ : ಅದು ನಿಮ್ಮದೇ? ನಿಮ್ಮ ಹೆಸರನ್ನು ನಾನು ಹೇಳಲಿಲ್ಲ. ಅವರೇನು ನಿಮ್ಮ brothers?

ಶ್ರೀ ವೀರಣ್ಣ ಚಂದ್ರಶೇಖರ ಚರಂತಿಮಠ್ : ಹೌದು.

ಶ್ರೀ ಸಿದ್ದರಾಮಯ್ಯ : ಹಾಗಾದರೆ ತಾವು ಕುಳಿತುಕೊಳ್ಳಿ.

ಶ್ರೀ ವೀರಣ್ಣ ಚಂದ್ರಶೇಖರ ಚರಂತಿಮಠ್ : 6 ಎಕರೆ ಮುಳುಗಡೆ ಯಾಗಿದೆ.

ಶ್ರೀ ಸಿದ್ದರಾಮಯ್ಯ : ನನಗೆ ನಿಮ್ಮ brothers ಎಂದು ಗೊತ್ತಿಲ್ಲ. ನನಗೆ ಗೊತ್ತಿದ್ದರೆ ನಾನು ಹೇಳುತ್ತಾ ಇರಲಿಲ್ಲ. ಮಾನ್ಯ ಚರಂತಿಮಠ್‌ರವರೆ ಅವರಿಗೆ 8 ಎಕರೆಯನ್ನು ಕೊಟ್ಟು ಬಿಟ್ಟಿದ್ದಾರೆ.

ಶ್ರೀ ವೀರಣ್ಣ ಚಂದ್ರಶೇಖರ ಚರಂತಿಮಠ್ : ಅಲ್ಲಿ 6 ಎಕರೆ ಮುಳುಗಡೆ ಯಾಗಿದೆ. ಕಾನೂನು ಪ್ರಕಾರವಾಗಿ ಕೊಟ್ಟಿದ್ದಾರೆ ಇಲ್ಲದಿದ್ದರೆ enquiry ಮಾಡಿಸಿ.

ಶ್ರೀ ಸಿದ್ದರಾಮಯ್ಯ : Industries ರವರೆಲ್ಲರಿಗೂ ಕೊಟ್ಟಿದ್ದೀರಾ?

(ಗೊಂದಲ)

ಶ್ರೀ ಸಿದ್ದರಾಮಯ್ಯ : You are not the Chairman? . . .. . ಮಂತ್ರಿಗೆಲ್ಲಾ order ಕೊಡುವಂತಹ ಅಧಿಕಾರವಿದೆಯೇ?

ಅಧ್ಯಕ್ಷರು : ಆಯಿತು, conclude ಮಾಡಿ.

ಶ್ರೀ ವೀರಣ್ಣ ಚಂದ್ರಶೇಖರ ಚರಂತಿಮಠ್ : ಅದನ್ನು ಕಾನೂನು ಪ್ರಕಾರವಾಗಿ ಕೊಟ್ಟಿರದಿದ್ದರೆ enquiry ಮಾಡಿಸಿ. ಅದರ ಬಗ್ಗೆ ಏನಾದರೂ ದೋಷವಿದ್ದರೆ enquiry ಮಾಡಿಸಿ.

ಶ್ರೀ ಸಿದ್ದರಾಮಯ್ಯ : ನಾನು ಅಷ್ಟೇ ಅಲ್ಲವೇ ಹೇಳಿರುವುದು.

ಶ್ರೀ ವೀರಣ್ಣ ಚಂದ್ರಶೇಖರ ಚರಂತಿಮಠ್ : Yes.

ಶ್ರೀ ಸಿದ್ದರಾಮಯ್ಯ : ನಾನು ಏನು ಹೇಳಿದೆ, ಬೈದನೇ.

ಶ್ರೀ ವೀರಣ್ಣ ಚಂದ್ರಶೇಖರ ಚರಂತಿಮಠ್ : ಇಲ್ಲಾ, ಇಲ್ಲಾ,

ಶ್ರೀ ಸಿದ್ದರಾಮಯ್ಯ : enquiry ಮಾಡಿ ಎಂದು ಹೇಳಿದನಲ್ಲಾ.

ಅಧ್ಯಕ್ಷರು : ಆಯಿತು.

ಶ್ರೀ ಸಿದ್ದರಾಮಯ್ಯ : ನಾನು ಬೈದೇ ಇಲ್ಲಾ. 8 ಎಕರೆ illegal ಆಗಿ ಕೊಟ್ಟು ಬಿಟ್ಟಿದ್ದಾರೆಂದು ಹೇಳಿದೆ.

ಶ್ರೀ ವೀರಣ್ಣ ಚಂದ್ರಶೇಖರ ಚರಂತಿಮಠ್ : ನಾನು ನಿಮಗೆ ಬೈದಿಲ್ಲಾ ಸಾರ್.

ಶ್ರೀ ಸಿದ್ದರಾಮಯ್ಯ : ಆಯಿತು.

ಶ್ರೀ ಗೋವಿಂದ ಎಂ.ಕಾರಜೋಳ : ಅವರು ಬೈಯುತ್ತಿಲ್ಲ. ಕಾನೂನು ಪ್ರಕಾರವಾಗಿ ಕೊಟ್ಟಿದ್ದಾರೆ. If it is illegal cinduct an enquiry ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ಓ.ಕೆ.

ಶ್ರೀ ಸಿದ್ದರಾಮಯ್ಯ : ಅವರು ಯಾರು ನಿಮ್ಮ ಬ್ರದರ್‌ಗೆ ಕೊಟ್ಟಿದ್ದಾರೆ ಅದು ಸರಿಯಿಲ್ಲವೆಂದು ನಾನು ಹೇಳಿದೆ.

ಶ್ರೀ ಗೋವಿಂದ ಎಂ.ಕಾರಜೋಳ : Conduct enquiry ಎಂದು ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : O.K. Enquiryಯನ್ನು ಮಾಡಿಸೋಣ. ಅವರಿಗೆ enquiry ಮಾಡಿ ಎಂದು ಹೇಳಿದ್ದೇನೆ. ಮಾನ್ಯ ಸುರೇಶ್‌ಕುಮಾರ್‌ರವರೆ ಅದು ನಿಮಗೆ ಬರುತ್ತದೆ enquiry ಮಾಡಿ. enquiry ಮಾಡಿ Whetehr it is legal or illegal ಎಂದು ಮಾಡಿ.

ಅಧ್ಯಕ್ಷರು : ಮಾನ್ಯ ಸಿದ್ದರಾಮಯ್ಯನವರೆ ತಾವು Please, conclude ಮಾಡಿ. ಈ ಬಿಲ್ Council ಗೆ ಹೋಗಿ ಬರಬೇಕು. ಅವರು 6 ಗಂಟೆಯಿಂದ ಕುಳಿತಿದ್ದಾರೆ.

ಶ್ರೀ ಸಿದ್ದರಾಮಯ್ಯ : ನಿಮಗೋಸ್ಕರವೇ ಕುಳಿತಿರುವುದು.. ಈಗ ನಾನು conclude ಮಾಡುತ್ತಿದ್ದೇನೆ.

ಅಧ್ಯಕ್ಷರು : ನೀವೇ 7 ಗಂಟೆ ಎಂದು ಹೇಳಿದ್ದೀರಿ.

ಶ್ರೀ ಸಿದ್ದರಾಮಯ್ಯ : ನಾನು conclude ಮಾಡುತ್ತಿದ್ದೇನೆ, ಮಾಡಬೇಕೋ ಅಥವಾ ಬೇಡವೋ ಹೇಳಿ.

ಅಧ್ಯಕ್ಷರು : ಮಾಡಿ. ಮೊದಲು ತಾವು ಬೇಗನೆ ಮುಗಿಸಿ.

ಶ್ರೀ ಸಿದ್ದರಾಮಯ್ಯ : ಈಗ ನಾನು ಓದಿರುವುದೆಲ್ಲವೂ ವ್ಯರ್ಥವಾಯಿತು. ಇಷ್ಟೆಲ್ಲಾ ಓದಿಕೊಂಡು ಬಂದು ತಾವು ಹೇಳುವುದಕ್ಕೆ ಬಿಡದೆ ಹೋದರೆ......

ಅಧ್ಯಕ್ಷರು : Special Session ಮತ್ತೆ ಇದೆ.

ಶ್ರೀ ಸಿದ್ದರಾಮಯ್ಯ : ಈ ವರ್ಷದ್ದು ಇಲ್ಲಿ approve ಮಾಡಬೇಕಲ್ಲಾ, ಈ ವರ್ಷದ್ದು ಮುಂದಿನ ವರ್ಷ approve ಮಾಡುವುದಕ್ಕಾಗುತ್ತದೆಯೇ?

ಅಧ್ಯಕ್ಷರು : ಉಳಿದಿರುವುದನ್ನು ಮಾನ್ಯ ಸಿದ್ದರಾಮಯ್ಯನವರೆ,......

ಶ್ರೀ ಸಿದ್ದರಾಮಯ್ಯ : ಆ ತರಹ ಆಗುವುದಿಲ್ಲ ಕುಳಿತುಕೊಳ್ಳಿ.

ಅಧ್ಯಕ್ಷರು : ಮಾನ್ಯ ಸಿದ್ದರಾಮಯ್ಯನವರೆ, ...

ಶ್ರೀ ಸಿದ್ದರಾಮಯ್ಯ : ಈ ವರ್ಷ ಖರ್ಚು ಮಾಡುವುದಕ್ಕೆ ದುಡ್ಡನ್ನು ನಾವು ಕೊಡಬೇಕಲ್ಲಾ.

(ಗೊಂದಲ)

ನಾನು ಬೇರೆ ಇಲಾಖೆಗಳ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಇವರು ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಎಲ್ಲವೂ mis-management ಆಗುತ್ತಿದೆ. Mr. Yediyurappaನವರು 3 ವರ್ಷದಿಂದ ಹಣಕಾಸಿನ ಪರಿಸ್ಥಿತಿಯನ್ನು ಮತ್ತೆ taking back to 2001-02, ಆ ಮಟ್ಟಕ್ಕೆ ಹೋಗುತ್ತಿದೆ. ಈ trend ನಲ್ಲಿ ಹೋದರೆ ಮಾನ್ಯ ಯಡಿಯೂರಪ್ಪನವರೆ, ಬಹಳ ವರ್ಷಗಳ ನಂತರ ತಾವು ಮುಖ್ಯಮಂತ್ರಿಯಾಗಿದ್ದೀರಿ. ಈ ರಾಜ್ಯದ ಜನರು ಮತ್ತೆ ನಿಮಗೆ ಶಾಪವನ್ನು ಹಾಕುತ್ತಾರೆ. ಈ ರಾಜ್ಯದ ಹಣಕಾಸಿನ ಪರಿಸ್ಥಿತಿ ಹಾಳಾಯಿತು. ಮಾನ್ಯ ಯಡಿಯೂರಪ್ಪನವರು ಹಣಕಾಸಿನ ಮಂತ್ರಿಯಾಗಿರುವುದರಿಂದ ಹಾಳಾಯಿತು ಎಂದು ಆಗಬಾರದು. ನಿಮಗೆ ಖರ್ಚು ಮಾಡುವುದಕ್ಕೆ ಹಣವೇ ಇಲ್ಲ. ಅದಕ್ಕೋಸ್ಕರವೇ ಸಾಲವನ್ನು ತೆಗೆದು ಕೊಳ್ಳುವುದು. ಅದಕ್ಕೋಸ್ಕರವೇ ನಿಮಗೆ ತೆರಿಗೆಯನ್ನು ವಸೂಲು ಮಾಡುವುದಕ್ಕಾಗಲಿಲ್ಲ. ಇದನ್ನು ಸರಿಪಡಿಸಿಕೊಳ್ಳಬೇಕೆಂದು ಹೇಳುತ್ತೇನೆ. ನಾವೆಲ್ಲರೂ ಏತಕ್ಕಾಗಿ ವಿರೋಧವನ್ನು ಮಾಡುತ್ತಿದ್ದೇವೆಂದರೆ, ನಿಮಗೆ ನಾವೆಲ್ಲಾ ಹಣವನ್ನು ಖರ್ಚು ಮಾಡಿ ಈ ರಾಜ್ಯವನ್ನು ಸಮಾನ ಬೆಳವಣಿಗೆ ಮಾಡಿ ಎಂದು ಹೇಳಿ ನಾವು ಇಲ್ಲಿ ಹಣವನ್ನು approve ಮಾಡಿಕೊಡುತ್ತೇವೆ. ನೀವು ತೆಗೆದುಕೊಂಡು ಹೋಗಿ ನಿಮಗೆ ಬೇಕಾದಂತಹ ಎಂಎಲ್‌ಎಗಳಿಗೆ ಕೊಟ್ಟುಬಿಟ್ಟರೆ ಹೇಗೇ? ಅವರವರಿಗೆ ಹೆಚ್ಚಾಗಿ ಕೊಟ್ಟಿರುವುದೇಕೇ? ಮತ್ತೇ ನಾವು ಏಕೆ ಇಲ್ಲಿ approve ಮಾಡಬೇಕು. That is why we are opposing it. Please put an end to this. I request you to Please put an end to this. Otherwise ನಾವು ಸಮಾನ ಬೆಳವಣಿಗೆಯನ್ನು ಮಾಡುವುದಕ್ಕಾಗುವುದಿಲ್ಲ. inclusive growth ಆಗುವುದಿಲ್ಲ. ಮತ್ತೇ ಅಸಮಾನತೆ ನಿರ್ಮಾಣವಾಗುತ್ತದೆ. ಒಂದು ಸಾರಿ ಡಾ: ನಂಜುಂಡಪ್ಪನವರ ವರದಿಯ ಪ್ರಕಾರ ಮಾಡುತ್ತೇವೆನ್ನುತ್ತೀರಿ.

ಡಾ: ನಂಜುಂಡಪ್ಪನವರ ವರದಿ ಎಂದರೆ ಯಾವುದು Most Backward, More Backward, ಇಲ್ಲದೇ ಇರುವುದಕ್ಕೆ ಹೆಚ್ಚಾಗಿ ದುಡ್ಡನ್ನು ಕೊಡುತ್ತೀರಿ. How do you defend this? ತಾರತಮ್ಯ.

ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು) : ಯಾರ್ರಿ ಅವರು ಚೀಟಿಯನ್ನು ತಂದು ತಂದು ಕೊಡುತ್ತಿರಲ್ಲಾ?

ಶ್ರೀ ಸಿದ್ದರಾಮಯ್ಯ : ಇದನ್ನು ನಾನು ನೋಡುವುದಿಲ್ಲ. ಇದನ್ನು ನಾನು ಎಸೆದುಬಿಡುತ್ತೇನೆ. ಇಲ್ಲೇ ಬೇಕಾದಷ್ಟು ಇದೆ. ಚೀಟಿ ಏಕೆ ನನಗೆ ಬೇಕು?

ಅಧ್ಯಕ್ಷರು : ಅವುಗಳನ್ನೆಲ್ಲಾ ...

ಶ್ರೀ ಸಿದ್ದರಾಮಯ್ಯ : ರಾಶಿ ಇದೆ. ಹೇಳಲಿಲ್ಲ ಇವತ್ತು ಇನ್ನು ಬೇಕಾದಷ್ಟು ಹೇಳಿ ನಿಮಗೆ ತೊಂದರೆಯಾಗುತ್ತದೆಂದು ನಾನು ಹೇಳುವುದಕ್ಕೆ ಹೋಗಲಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : Thank you sir.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರೆ, Special session ಇದೆಯಲ್ಲಾ ಆಗ ಹೇಳುವುದಕ್ಕೆ stock ಇಡಿ.

ಶ್ರೀ ಸಿದ್ದರಾಮಯ್ಯ : ಇಂತಹದ್ದು ಬಹಳ ಇದೆ ಶ್ರೀನಿವಾಸ್.

ಶ್ರೀ ಎಂ. ಶ್ರೀನಿವಾಸ್ : Mutual understanding ಇದೆ.

ಶ್ರೀ ಸಿದ್ದರಾಮಯ್ಯ : ಇವರು ಬಹಳ embarrass ಆಗಿ ಜಗಳಕ್ಕೆ ಬಂದುಬಿಡುತ್ತಿದ್ದರು. ನಾನು ಅದಕ್ಕೆ ಬೇಡ ಸುಮ್ಮನೆ ಏನು ಹೇಳುವುದಕ್ಕೆ ಹೋಗಲಿಲ್ಲ. ಇನ್ನೊಂದು ಸಾರಿ ಬಂದಾಗ ಎಲ್ಲವನ್ನು ಹೇಳುತ್ತೇನೆ. ನೋಡಿ ಇಲ್ಲಿ ಬೇಕಾದಷ್ಟು ಇವೆ. ತಾವು ಪೊಲೀಸ್‌ನವರ ಬಗ್ಗೆ ಸ್ವಲ್ಪ ಗಮನವನ್ನು ಕೊಟ್ಟುಬಿಡಿ.

ಅಧ್ಯಕ್ಷರು : ಅವರು ಬೆಳಿಗ್ಗೆ ಹೇಳಿದ್ದಾರೆ. ಬೆಳಿಗ್ಗೆ ಮಾನ್ಯ ಬಿ.ಸಿ.ಪಾಟೀಲ್‌ರವರು ಎಲ್ಲವನ್ನು ಹೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ : ಪೊಲೀಸ್‌ನವರಿಗೆ ಅವರಿಗೆ ಒಂದೆ ಜೊತೆ ಯೂನಿಫಾರಂ ಕೊಟ್ಟಿರುವುದು. ಅವರಿಗೆ ಸಂಬಳ ಹೆಚ್ಚಿಲ್ಲ.. ದಯಮಾಡಿ ಕೆಳಗೆ ಇರುವಂತಹವರಿಗೆ ಜಾಸ್ತಿ ಮಾಡಿ. ಮೇಲುಗಡೆ ಇರುವಂತಹ ಅಧಿಕಾರಿಗಳಿಗೆ ಕಡಿಮೆ ಮಾಡಿ.

ಶ್ರೀ ಬಿ.ಸಿ.ಪಾಟೀಲ್ : ಮಾನ್ಯ ಅಧ್ಯಕ್ಷರೆ ಒಂದು ನಿಮಿಷ, ತಾವು ಅವಕಾಶವನ್ನು ಕೊಟ್ಟರೆ ನಾನು ಮಾತನಾಡುತ್ತೇನೆ.

ಅಧ್ಯಕ್ಷರು : ಬೇಡ. ಬೇಗನೆ ಮುಗಿಸೋಣ. ಮಾನ್ಯ ಪಾಟೀಲ್‌ರವರೆ ತಾವು ಮಾತನಾಡುವುದು ಬೇಡ.

ಶ್ರೀ ಸಿದ್ದರಾಮಯ್ಯ : ಪಾಪ ಅವರು ಹಗಲು ಮತ್ತು ರಾತ್ರಿ ಹೊತ್ತಿನಲ್ಲಿ ಹೀಗೆ ನಿಂತಿರುತ್ತಾರೆ ತಾವು ನೋಡಬೇಕು. ಅವರ ಬಗ್ಗೆ ತಾವು ಹೆಚ್ಚು ಗಮನವನ್ನು ಕೊಡಬೇಕು.

ಅಧ್ಯಕ್ಷರು : ಮಾನ್ಯ ಬಿ.ಸಿ.ಪಾಟೀಲ್‌ರವರೇ ತಾವು ಮಾತನಾಡುವುದು ಬೇಡ. ಈಗ ಅವರು conclude ಮಾಡುತ್ತಾರೆ.

ಶ್ರೀ ಸಿದ್ದರಾಮಯ್ಯ : ಪೊಲೀಸ್ ಕಾನ್ಸ್‌ಟೇಬಲ್‌ರವರ ಬಗ್ಗೆ ಗಮನವನ್ನು ಕೊಡಬೇಕು. ಅವರಿಗೆ ಸಂಬಳ ಕಡಿಮೆ.

ಅಧ್ಯಕ್ಷರು : ಮತ್ತೇ ಯಾರಿಗೂ ಮಾತನಾಡುವುದಕ್ಕೆ ಅವಕಾಶವಿಲ್ಲ ಈಗ ಮುಗಿಯಿತು. ಈಗ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ.

ಶ್ರೀ ಸಿದ್ದರಾಮಯ್ಯ : ಇವರು ತಾರತಮ್ಯವನ್ನು ಮಾಡುತ್ತಿರುವುದರಿಂದ, ಈ ರಾಜ್ಯವನ್ನು ಮತ್ತೇ ಅಸಮಾನತೆಯ ಬೆಳವಣಿಗೆಯ ಕಡೆಗೆ ತೆಗೆದುಕೊಂಡು ಹೋಗುತ್ತಿರುವುದರಿಂದ, ಸಮಾನತೆಯ ಬೆಳವಣಿಗೆಗೆ ವಿರುದ್ಧ ಆಗಿರುವುದರಿಂದ, ಇವರು inclusive growthನ್ನು ಮಾಡದೇ ಇರುವುದರಿಂದ ನಾನು ಎಲ್ಲಾ ಇವರ ಡಿಮ್ಯಾಂಡ್ಸ್‌ಗಳನ್ನು ಕೂಡಾ ಸಾರಾಸಗಟಾಗಿ ವಿರೋಧ ಮಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಮುಖ್ಯಂತ್ರಿಗಳು ಉತ್ತರವನ್ನು ಕೊಡಲಿ.

ಶ್ರೀ ಸಿದ್ದರಾಮಯ್ಯ : ಏಕೆಂದರೆ, ನೀವು ಎಲ್ಲಕ್ಕೂ ಉತ್ತರವನ್ನು ಕೊಟ್ಟರೆ ನಾವು ಎಲ್ಲಕ್ಕೂ ಸಮಾನವಾಗಿ ವಿರೋಧ ಮಾಡುತ್ತೇನೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಮಾನ್ಯ ಅಧ್ಯಕ್ಷರೆ, ...ಹೈದರಾಬಾದ್ ಕರ್ನಾಟಕದ ಸಮಸ್ಯೆಯ ಬಗ್ಗೆ ಮಾತನಾಡುವುದಕ್ಕೆ 5 ನಿಮಿಷ ಸಮಯ ಕೊಡಿ.

ಅಧ್ಯಕ್ಷರು : ನಾನು ಯಾರಿಗೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ. Please ಯಾರಿಗೂ ಅವಕಾಶವಿಲ್ಲ. ಈಗ ಮುಗಿಯಿತು. ಈಗ ಮಾನ್ಯ ಮುಖ್ಯಮಂತ್ರಿಗಳೆ, ತಾವು ಉತ್ತರವನ್ನು ಕೊಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಡಾ: ನಂಜುಂಡಪ್ಪನವರ ವರದಿಯ ಬಗ್ಗೆ ದುಡ್ಡನ್ನು ಕೊಟ್ಟಿಲ್ಲ, 19,000 ಕೋಟಿ ರೂಪಾಯಿಗಳು ಖರ್ಚಾಗಿದೆ. ಅದರ ಒಳಗಡೆಯೇ ಎಲ್ಲವನ್ನೂ ಮಾಡುತ್ತಿದ್ದಾರೆ. ಇದನ್ನು ನಾನು ತೀವ್ರವಾಗಿ ವಿರೋಧ ಮಾಡಿ ನಾನು ತಾವು ಇಷ್ಟು ಹೊತ್ತು ಮಾತನಾಡುವುದಕ್ಕೆ ಸಮಯ ಕೊಟ್ಟಿರುವುದಕ್ಕೆ ನಿಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕು.

(ಗೊಂದಲ)

(ಕೆಲವು ಮಾನ್ಯ ಸದಸ್ಯರುಗಳು ಸದನದ ಬಾವಿಗೆ ಬಂದು ಧರಣಿ ಮಾಡಿದರು)

(ಗೊಂದಲ)

ಅಧ್ಯಕ್ಷರು : ಇಲ್ಲ, ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ, ಈಗ ನಾನು ತಮಗೆ ಅವಕಾಶ ಕೊಡುವುದಿಲ್ಲ, No, No, ನೀವು ನಿಮ್ಮ ಸ್ಥಳಗಳಿಗೆ ಹೋಗಿ, ನಾನು ಬೆಳಿಗ್ಗೆ ಹೇಳಿದ್ದೇನೆ, ನೀವು ದಿನಾಂಕ: 9-07-2009 ರಿಂದ ಮಾತನಾಡುತ್ತಿದ್ದೀರಿ ಈಗ ಆಗುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು) : ಶ್ರೀ ವಿ.ಮುನಿಯಪ್ಪನವರಿಗೆ, ದಿನೇಶ್ ಗುಂಡೂರಾವ್‌ರವರಿಗೆ, ಪಿ.ಎಂ. ಅಶೋಕರವರಿಗೆ, ಡಾ: ಎ.ಬಿ.ಮಾಲಕರೆಡ್ಡಿಯವರಿಗೆ, ಹೆಚ್.ಡಿ.ರೇವಣ್ಣ ನವರಿಗೆ, ಸಿದ್ದರಾಮಯ್ಯನವರಿಗೆ, ಇವತ್ತು 8 ಜನ ಸದಸ್ಯರು ಮಾತನಾಡಿದ್ದಾರೆ. ಅವರೆಲ್ಲರಿಗೂ ಸಹ ನಾನು ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ.

(ಗೊಂದಲ)

(ಈ ಹಂತದಲ್ಲಿ ಜೆ.ಡಿ.ಎಸ್.ಮತ್ತು ಕಾಂಗ್ರೆಸ್‌ನ ಕೆಲವು ಶಾಸಕರು ಬಾವಿಗಿಳಿದು ಧರಣಿ ಮಾಡುತ್ತಾ ಒಟ್ಟಿಗೆ ಮಾತನಾಡುತ್ತಿದ್ದರು.)

(ಗೊಂದಲ)

ಅಧ್ಯಕ್ಷರು : ಇಲ್ಲ, ಇದು ಸರಿಯಲ್ಲ, ನೀವು ಮಾಡುತ್ತಿರುವುದು ಸದನದ ಗೌರವಕ್ಕೆ ಚ್ಯುತಿ ಬಂದಂತಾಗುತ್ತದೆ, ಮುಖ್ಯಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ನೀವು ಹೀಗೆ ಧರಣಿ ಮಾಡುತ್ತಿರುವುದು ಸರಿಯಲ್ಲ. ನಿಮ್ಮ ಸ್ಥಾನಗಳಿಗೆ ದಯಮಾಡಿ ಹಿಂತಿರುಗಿ.

(ಗೊಂದಲ)

ಅಧ್ಯಕ್ಷರು : ಇಲ್ಲ, ಸಾಧ್ಯವಿಲ್ಲ, ನಿಮಗೆ ಮಾತನಾಡಲಿಕ್ಕೆ ಅವಕಾಶ ಕೊಡುವುದಿಲ್ಲ. ಅವರು ಉತ್ತರ ಕೊಟ್ಟ ಮೇಲೆ ಸ್ಪಷ್ಟೀಕರಣ ಕೇಳಿ. ಆಗ ಮಾತನಾಡಿ, ಈಗ ಆಗುವುದಿಲ್ಲ, ದಯಮಾಡಿ ತಮ್ಮ ಸ್ಥಾನಗಳಿಗೆ ಹೋಗಿ.

ಮುಖ್ಯಮಂತ್ರಿಗಳಿಂದ ಉತ್ತರ

ಶ್ರೀ ಬಿ.ಎಸ್.ಯಡಿಯೂರಪ್ಪ : ವಿಧಾನ ಮಂಡಲದ ಅಧಿವೇಶನ ಎಂದರೆ ನಾಡಿನ ಜನತೆ ಕುತೂಹಲದಿಂದ ಮಹದಾಸೆಯಿಂದ ಅಪಾರ ನಿರೀಕ್ಷೆಯೊಂದಿಗೆ ಸದನದ ಕಲಾಪಗಳತ್ತ ದೃಷ್ಟಿ ಹರಿಸುತ್ತಿದ್ದಾರೆ. ಅದರಲ್ಲೂ ಬಜೆಟ್ ಅಧಿವೇಶನವೆಂದರೆ ವಿವಿಧ ಇಲಾಖೆಗಳ ಬೇಡಿಕೆಗಳ ಮೇಲೆ ಚರ್ಚೆ, ಮತ್ತಿತರ ವಿತ್ತೀಯ ಕಾರ್ಯಕಲಾಪಗಳ ಬಗ್ಗೆ ತೀವ್ರತರ ಕುತೂಹಲ ಹಾಗೂ ವಿಶೇಷ ಗಮನ ಹರಿಸಿ ನಾಡಿನಲ್ಲಿ ಶಾಂತಿಯನ್ನು ಕಾಪಾಡುವ ಬಗ್ಗೆ, ಸಂಪನ್ಮೂಲಗಳ ಕ್ರೋಢೀಕರಣ, ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ.

(ಗೊಂದಲ)

ಅಧ್ಯಕ್ಷರು : ಈ ರೀತಿ ಮಾಡುವುದು ಸರಿಯಲ್ಲ, ಹೋಗಿ ನಿಮ್ಮ ಸ್ಥಾನಕ್ಕೆ ಹೋಗಿ, ಪ್ಲೀಸ್, ಈ ರೀತಿ ವರ್ತನೆ ಮಾಡುವುದು ಸರಿಯಲ್ಲ, ದಯವಿಟ್ಟು ನಿಮ್ಮ ಸ್ಥಳಕ್ಕೆ ಹೋಗಿ, ನೀವು ಈ ರೀತಿ ಹಠ ಮಾಡಬಾರದು. ಪ್ಲೀಸ್,

(ಗೊಂದಲ)

ಅಧ್ಯಕ್ಷರು : ಈ ರೀತಿ ವರ್ತನೆ ಮಾಡುವುದು ಸರಿಯಲ್ಲ. ಪ್ಲೀಸ್. ಆಮೇಲೆ ಅವಕಾಶ ಕೊಡುತ್ತೇನೆ. ಈಗ ನಿಮ್ಮ ಸ್ಥಾನಗಳಿಗೆ ಹೋಗಿ. ನೀವು ಈ ರೀತಿ ಹಠ ಮಾಡಬಾರದು, ಪ್ಲೀಸ್.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಗಂಭೀರ ಅರ್ಥಪೂರ್ಣ ಮತ್ತು ಉಪಯುಕ್ತ ಚರ್ಚೆಯನ್ನು ಜನ ಎದುರು ನೋಡುತ್ತಿದ್ದಾರೆ. ಸಮಾವೇಶಗೊಂಡಿ ರುವಂಥ ಸದನದ ಪ್ರತಿ ಕ್ಷಣ ಅಮೋಘ ಸಮಯವನ್ನು ಅಪವ್ಯಯ ಮಾಡದಂತೆ ರಚನಾತ್ಮಕ ಸಲಹೆಗಳು ಮತ್ತು ಚಿಂತನೆ, ಮಂಥನ ಈ ಸದನದ ವೇದಿಕೆಯಲ್ಲಿ ನಡೆಯಬೇಕು....

ಅಧ್ಯಕ್ಷರು : ನಿಮ್ಮ ನಾಯಕರುಗಳಿಗೆ ಮಾತನಾಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೇನೆ, ಅವರು ಮಾತನಾಡಿದ್ದಾರೆ. ನಿಮಗೆ ಅವಕಾಶ

ಬೇಕಾಗಿದ್ದರೆ ನಿಮ್ಮ ಪಕ್ಷದ ವತಿಯಿಂದ ಕಳುಹಿಸಬೇಕಾಗಿತ್ತು. ನಿಯಮ 96ರಲ್ಲಿ ಎಲ್ಲದರಲ್ಲಿಯೂ ಮಾತನಾಡಲಿಕ್ಕೆ ನಿಮಗೆ ಅವಕಾಶ ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ಈ ಚರ್ಚೆಗಳಲ್ಲಿ ಶಾಸಕರು ತಲ್ಲೀನರಾಗಿ ತಮ್ಮ ಅಭಿಪ್ರಾಯಗಳನ್ನು ನೀಡುವುದರ ಜೊತೆಗೆ ರಚನಾತ್ಮಕವಾದ ಟೀಕೆ ಟಿಪ್ಪಣಿಗಳನ್ನು ಮಾಡುವುದಕ್ಕೆ ಅಧಿವೇಶನ ವೇದಿಕೆ ಒದಗಿಸುತ್ತದೆ. ಇದಕ್ಕೆ ಅವಕಾಶ ಕಲ್ಪಿಸಿಕೊಡುವಂಥದ್ದು ಸರ್ಕಾರದ ಕರ್ತವ್ಯ.

(ಗೊಂದಲ)

ಅಧ್ಯಕ್ಷರು : ಇಲ್ಲ, ಇಲ್ಲ, ಆಗುವುದಿಲ್ಲ, ಎಲ್ಲರಿಗೂ ಅವಕಾಶ ಕೊಟ್ಟಿದ್ದೇನೆ ನೀವು ಉತ್ತರದ ನಂತರ ಸ್ಪಷ್ಟೀಕರಣ ಕೇಳಿ.

(ಗೊಂದಲ)

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಹೈದರಾಬಾದ್ ಕರ್ನಾಟಕದವರಿಗೆ ಒಬ್ಬರಿಗಾದರೂ ಅವಕಾಶ ಕೊಡಿ.

ಅಧ್ಯಕ್ಷರು : ಆಗುವುದಿಲ್ಲ, ಈಗ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ತಮ್ಮ ಸಲಹೆಗಳನ್ನು ಅಭಿವ್ಯಕ್ತಗೊಳಿಸುವಂಥದ್ದು ಈ ಸದನದ ಸದಸ್ಯರ ಹಕ್ಕು ಕೂಡ ಆಗಿರುತ್ತದೆ. ಜುಲೈ 9 ರಿಂದ ಪ್ರಾರಂಭವಾದ ಪ್ರಸಕ್ತ ಅಧಿವೇಶನದ ಕಾರ್ಯಕಲಾಪಗಳನ್ನು ಗಮನಿಸುತ್ತಿರುವಂಥ ನಾಡಿನ ಜನತೆ ನಿರಾಶರಾಗಿದ್ದಾರೆ.

(ಗೊಂದಲ)

ಅಧ್ಯಕ್ಷರು : ಇಲ್ಲ, ಮುಖ್ಯಮಂತ್ರಿಗಳು ಉತ್ತರ ಪ್ರಾರಂಭಿಸಿದ್ದಾರೆ. ಈಗ ಅವಕಾಶವನ್ನು ಕೊಡುವುದಿಲ್ಲ. ಅವರು ಉತ್ತರ ಕೊಟ್ಟ ಮೇಲೆ ನೀವೇ ಮಾತನಾಡಿ. ಅವರು ಉತ್ತರ ಕೊಟ್ಟ ಮೇಲೆ ನೀವೇ ಮೊದಲು ಮಾತನಾಡಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಇದಕ್ಕೆ ಆಶ್ಚರ್ಯಪಡಬೇಕಾಗಿಲ್ಲ. ಈ ಭಾವ ನಮ್ಮೆಲ್ಲರನ್ನು ಆವರಿಸಿದೆ, ಇದಕ್ಕೆ ಕಾರಣರು ಯಾರು? ಇಂದಿನ ಬೆಳವಣಿಗೆಯ ಬಗ್ಗೆ ಮತ್ತೆ ಪ್ರಸ್ತಾಪಿಸುವುದಕ್ಕೆ ನಾನು ಬಯಸುವುದಿಲ್ಲ. ಸದನದ ಕಾರ್ಯಕಲಾಪಗಳಲ್ಲಿ ಗಂಭೀರ ಪ್ರಶ್ನೆಗಳಿಗೆ ಈ ಅಧಿವೇಶನದ ವೇಳೆಯಲ್ಲಿ ಸಿಂಹಪಾಲು ದೊರಕಬೇಕಾಗಿತ್ತು ಆದರೆ ಹಾಗಾಗಲಿಲ್ಲ

ಎನ್ನುವುದು ಅತ್ಯಂತ ನೋವು ತರುವಂಥ ಸಂಗತಿ. ಇವತ್ತು ಗಮನ ಸೆಳೆಯುವಂಥ ಸೂಚನೆಗಳು, ನಿಲುವಳಿ ಸೂಚನೆಗಳು, ಇವೇ ಮೊದಲಾದ ಚರ್ಚೆಗಳಲ್ಲಿ ಹಾಗೂ ಅದಕ್ಕೆ ಸಿಕ್ಕ ಉತ್ತರವನ್ನು..

ಅಧ್ಯಕ್ಷರು : ನಿಮ್ಮ ನಾಯಕರಿಗೆ ಹೋಗಿ ಹೇಳಿ. ಮುಖ್ಯಮಂತ್ರಿಗಳು ಮಾತನಾಡುವಾಗ ಈ ರೀತಿ ತಾವು ಹಠ ಮಾಡಬಾರದು, ಈ ರೀತಿ ಮಾಡುವುದು ಒಳ್ಳೆಯ ಸಂಪ್ರದಾಯವಲ್ಲ, ಮುಖ್ಯಮಂತ್ರಿಗಳು ಮಾತನಾಡುವಾಗ ಈ ರೀತಿ ಮಾಡುವುದು ನಿಮಗೆ ಗೌರವವಲ್ಲ. ದಯವಿಟ್ಟು ತಾವು ತಮ್ಮ ಸ್ಥಾನಗಳಿಗೆ ಹೋಗಿ. ಸ್ಪಷ್ಟೀಕರಣಕ್ಕೆ ನಿಮಗೆ ಅವಕಾಶ ಮಾಡಿಕೊಡುತ್ತೇನೆ. ನಿಮ್ಮ ನಾಯಕರುಗಳಿಗೆ ಹೇಳಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಚರ್ಚೆಗಳಲ್ಲಿ ಅನೇಕ ವಿಚಾರಗಳು, ಮೊದಲಾದ ಗಂಭೀರವಾದಂಥ ವಿಚಾರಗಳ ಬಗ್ಗೆ ಚರ್ಚೆಯಾಗಬೇಕಾಗಿತ್ತು. ವಿವಿಧ ಇಲಾಖೆಗಳ ಬೇಡಿಕೆಗಳ ಬಗ್ಗೆ ಚರ್ಚೆಗೆ ಸರಿಯಾದ ಅವಕಾಶ ಆಗಲಿಲ್ಲವೆನ್ನುವಂಥದ್ದು ನನ್ನ ಮನಸ್ಸಿಗೂ ಸಹ ನೋವಿದೆ. ಆದ್ದರಿಂದ ಸನ್ಮಾನ್ಯ ಅಧ್ಯಕ್ಷರೆ, ಬರುವಂಥ ದಿವಸಗಳಲ್ಲಿ ಹೆಚ್ಚು ದಿವಸ ಸದನದ ಕಾರ್ಯಕಲಾಪವನ್ನು ನಡೆಸುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ. ಇವತ್ತು ಒಂದು ಒಪ್ಪಂದವಾಗಿ ಪ್ರತಿಪಕ್ಷಗಳು 7.00 ಗಂಟೆಗೆ ಚರ್ಚೆಯನ್ನು ಮುಗಿಸಿ ನಂತರ ಕ್ಲಾರಿಫಿಕೇಶನ್‌ಗೆ ಅವಕಾಶ ಕೊಡುತ್ತೇವೆಂದು ಹೇಳಿದ ಮೇಲೂ ಸಹ ಇವತ್ತು ಈ ರೀತಿ ಬಾವಿಗೆ ಬಂದು ಕಾರ್ಯಕಲಾಪಗಳನ್ನು ತಡೆಯುವಂಥದ್ದು ಏನು ನಡೆಯುತ್ತಿದೆ ಇದು ಪ್ರಜಾತಂತ್ರ ವ್ಯವಸ್ಥೆಗೆ ಶೋಭೆ ತರುವಂಥದ್ದಲ್ಲ. ಒಂದು ಸಾರಿ ಬಿ.ಎ.ಸಿ.ಯಲ್ಲಿ ಚರ್ಚೆಯಾಗಿ ನಿಮ್ಮ ಸಹಮತ ವ್ಯಕ್ತಪಡಿಸಿ ಈ ರೀತಿ ಮಾತನಾಡುವುದು ಯಾರಿಗೂ ಗೌರವ ತರುವಂಥದ್ದಲ್ಲ, ದಯಮಾಡಿ ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ, ಈಗಾಗಲೇ ಒಪ್ಪಂದವಾದಂತೆ ಕಾರ್ಯಕಲಾಪಗಳನ್ನು ನಡೆಯು ವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು ಎಂದು ಹೇಳಿ ನಾನು ವಿನಂತಿಯನ್ನು ಮಾಡುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ನೀವು ಈ ರೀತಿ ಮಾಡುತ್ತಿರುವುದು ಏಕೆಂದು ನನಗೆ ಅರ್ಥ ಆಗುತ್ತಿಲ್ಲ, ತಾವು ತಮ್ಮ ಸ್ಥಳಗಳಿಗೆ ಹೋಗಿ ಕುಳಿತುಕೊಳ್ಳಿ. ನಾನು Clarification ಗೆ ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಅಧಿವೇಶನ ಪ್ರಾರಂಭವಾದಾಗಿನಿಂದ ಇವತ್ತಿನವರೆಗೂ ಇದೇ ರೀತಿ ಅಡ್ಡಿ ಆತಂಕಗಳನ್ನು ಮಾಡುವಂಥದ್ದು ಯಾರಿಗೂ ಶೋಭೆ ತರುವಂಥದ್ದಲ್ಲ, ನಾವು ಹೇಳಿದ್ದೆವು, ರಾತ್ರಿ 8–10.00 ಗಂಟೆಯವರೆಗೂ ಬೇಕಾದರೆ ಸದನದ ಕಾರ್ಯಕಲಾಪಗಳು ನಡೆಯಲಿ, ನಾವು ಸಹಕಾರ ಕೊಡುತ್ತೇವೆಂದು ಹೇಳಿದ ಮೇಲೂ ಸಹ ಈ ರೀತಿ ಅಡ್ಡಿ ಆತಂಕಗಳನ್ನು ಮಾಡುವುದರ ಮೂಲಕ ಇವತ್ತು ಈ ರೀತಿಯ ಪರಿಸ್ಥಿತಿ ತಂದಿರುವುದು ಯಾರಿಗೂ ಶೋಭೆ ತರುವಂಥದ್ದಲ್ಲ.

(ಗೊಂದಲ)

ಅಧ್ಯಕ್ಷರು : ಈ ರೀತಿ ಮಾಡುವುದು ಸರಿಯಲ್ಲ, everyday ನಿಯಮ 69ರಲ್ಲಿ ಅನೇಕ ವಿಷಯಗಳು ಚರ್ಚೆಯಾಗಿವೆ, ಸದನವನ್ನು ನಡೆಸಿದವರು ಯಾರು? ಇಲ್ಲಿ ಚರ್ಚೆ ಮಾಡಿದ್ದು ಯಾವ ವಿಷಯ? ಪದೇ ಪದೇ ಏನು ಮಾತನಾಡುತ್ತೀರಿ, ನಾನು ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೇನೆ. ದಯವಿಟ್ಟು ನಿಮ್ಮ ಸ್ಥಾನಗಳಿಗೆ ಹೋಗಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಅಧ್ಯಕ್ಷರ ಮಾತನ್ನು ಕೇಳಿ, ಸುಮ್ಮನೆ ಕುಸ್ತಿ ಮಾಡಲಿಕ್ಕೆ ಬರುತ್ತಿರುವಿರಾ? ಅವರ ರೂಲಿಂಗ್ ಮೇಲೆ ನಿಮಗೆ ಗೌರವವಿಲ್ಲವೇ? ಈ ರೀತಿ ನಡೆದುಕೊಂಡರೆ ಯಾರು ನಿಮಗೆ ಉತ್ತರ ಕೊಡುತ್ತಾರೆ? ಯಾರು ಇದನ್ನೆಲ್ಲಾ ನಿಮಗೆ ಹೇಳಿಕೊಡುತ್ತಾರೋ? ಈ ರೀತಿ ಮಾಡಿದರೆ ಕಾರ್ಯಕಲಾಪ ನಡೆಸುವುದಾದರೂ ಹೇಗೆ? ಇದು ನಿಮಗೆ ಗೌರವ ತರುವಂಥದ್ದಲ್ಲ. ಇಷ್ಟು ವರ್ಷ ಆಡಳಿತ ಪಕ್ಷದಲ್ಲಿದ್ದಿರಿ, ಇದೇ ರೀತಿ ನಡೆಯುತ್ತಿತ್ತೇ? ಈ ರೀತಿ ಮಾಡುವುದರಿಂದ ಯಾರಿಗೂ ಗೌರವ ತರುವಂಥದ್ದಲ್ಲ. ಅಧ್ಯಕ್ಷರ ಮೇಲೆ ಕುಸ್ತಿ ಮಾಡಲಿಕ್ಕೆ ಬಂದಿದ್ದೀರಾ? ವಿರೋಧ ಪಕ್ಷದ ನಾಯಕರು ಹೇಳಿದ ಮೇಲೂ ಸಹ ತಾವು ಈ ರೀತಿ ಮಾಡುವುದು ಸರಿಯಲ್ಲ, ನೀವು ಈ ರೀತಿ ವರ್ತಿಸಿದರೆ ನಾವೇನು ಮಾಡಲಿಕ್ಕಾಗುತ್ತದೆ? ನನ್ನ ಕೆಲಸವಲ್ಲ ಇದು, ನಿಮ್ಮ ಕೆಲಸ.

ಅಧ್ಯಕ್ಷರು : ತಾವು ಈ ರೀತಿ ಮಾಡುವುದು ಒಳ್ಳೆಯದಲ್ಲ, ನಾನು ಎಲ್ಲಿಯೂ ನೋಡಿಲ್ಲ ಈ ರೀತಿ, ವಿನಂತಿ ಮಾಡಿಕೊಂಡರೂ ನಿಮಗೆ ಅರ್ಥವಾಗುತ್ತಿಲ್ಲ, ಇದು ಒಳ್ಳೆಯದಲ್ಲ, ಸ್ಪಷ್ಟೀಕರಣಕ್ಕೆ ಅವಕಾಶ ಕೊಡುತ್ತೇನೆಂದು ಹೇಳುತ್ತಿದ್ದೇನೆ, ಇದರಿಂದ ಯಾರಿಗೂ ಗೌರವ ಬರುವುದಿಲ್ಲ. ಸದನದ ಘನತೆ ಉಳಿಯುವುದಿಲ್ಲ. ನಿಮ್ಮ ನಾಯಕರಿಗೆ ಕೇಳಿ. ಇದು

ಒಳ್ಳೆಯದಲ್ಲ, This is too much. ಹತ್ತು ಜನ ಬಂದು ಎಲ್ಲರೂ ಒಟ್ಟಿಗೆ ಮಾತನಾಡುತ್ತೀರಿ, ಎಲ್ಲರಿಗೂ ಕೊಡಬೇಕೆಂದರೆ ಹೇಗೆ? ಆಮೇಲೆ ಸ್ಪಷ್ಟೀಕರಣಕ್ಕೆ ಅವಕಾಶ ಕೊಡುತ್ತೇನೆಂದರೆ ನೀವು ಕೇಳುತ್ತಿಲ್ಲ. ನೀವು ನಿಮ್ಮ ಸ್ಥಾನಗಳಿಗೆ ಹೋಗಿ, ಈ ರೀತಿ ಪದೇ ಪದೇ ಮಾಡುತ್ತಿರುವುದು ಸರಿಯಲ್ಲ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಈ ರೀತಿ ಅಧ್ಯಕ್ಷರ ಬಳಿ ಬಂದು ಕುಸ್ತಿ ಮಾಡುವುದು ಸರಿಯೇ ನಿಮಗೆ? ಇದನ್ನು ಕುಸ್ತಿ ಅಖಾಡ ಎಂದು ಭಾವಿಸಿದ್ದೀರಾ? ನಾವು ಆ ರೀತಿ ಮಾಡಲಿಕ್ಕೆ ಬಿಡುವುದಿಲ್ಲ. ಇವತ್ತು ಈ ಸದನಕ್ಕೆ ಒಂದು ಘನತೆ ಗಾಂಭೀರ್ಯತೆ ಇದೆ, ಗೌರವ ಇದೆ, ಸತ್ಸಂಪ್ರದಾಯಗಳಿವೆ, ಆ ಎಲ್ಲಾ ಸತ್ಸಂಪ್ರದಾಯಗಳನ್ನು ಗಾಳಿಗೆ ತೂರಿ ಈ ರೀತಿ ಮಾಡಿದರೆ ಹೇಗೆ? ತಾವು ಮೂರು ಗಂಟೆಗೆ ಮುಗಿಸುತ್ತೇವೆಂದು ಒಪ್ಪಂದ ಆದಮೇಲೂ ಸಹ ಈ ರೀತಿ ಬಾವಿಗೆ ಬಂದರೆ ಇಷ್ಟು ವರ್ಷಗಳ ಕಾಲ ನೀವು ಆಡಳಿತ ನಡೆಸಿ ಏನು ಪಾಠ ಕಲಿತ ಹಾಗಾಯಿತು? ನಿಮ್ಮನ್ನು ನೋಡಿ ಯಾರು ಮಾರ್ಗದರ್ಶನ ಕಲಿಯಬೇಕು? ಯಾರಿಗೂ ಇದು ಶೋಭೆ ತರುವಂಥದ್ದಲ್ಲ, ಎಷ್ಟರಮಟ್ಟಿಗೆ ಸರಿ ನೀವು ನಡೆದುಕೊಳ್ಳುವಂಥ ರೀತಿ?

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ನಿಮಗೆ ಅವಕಾಶ ದೊರೆತಾಗ ಚರ್ಚೆ ಮಾಡಲಿಲ್ಲ, ಈಗ ಬಾವಿಗಿಳಿದು ಅಡ್ಡಿ ಮಾಡುವುದು ಯಾರಿಗೆ ಶೋಭೆ ತರುತ್ತದೆ?

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಅಧ್ಯಕ್ಷರೆ, ಇವರೆಲ್ಲಾ ಬಾವಿಯಲ್ಲಿ ನಿಂತು ಕೂಗುತ್ತಿದ್ದಾರೆ, ಇದು ಎಷ್ಟರಮಟ್ಟಿಗೆ ಸರಿ? ನಿಮಗೆ ಇವರು ಕೊಡುವ ಗೌರವ, ಮರ್ಯಾದೆ ಇದೇನಾ? ಎಲ್ಲರೂ ಬಂದು ಚೀರುತ್ತೀರಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಬಿಲ್‌ಗಳನ್ನು ಪಾಸ್ ಮಾಡಿಕೊಡಿ, ಇವರು ಉತ್ತರ ಹೇಳುವುದಕ್ಕೆ ಬಿಡುತ್ತಿಲ್ಲ. ಬಿಲ್‌ಗಳನ್ನು ತೆಗೆದುಕೊಳ್ಳಿ, ಈ ರಾಜ್ಯದ ಜನತೆಗೆ ಇವರ ನಡವಳಿಕೆ ಏನು ಎಂದು ಗೊತ್ತಾಗಲಿ. ಪ್ರತಿಪಕ್ಷದ ಸದಸ್ಯರ ವರ್ತನೆ ಏನು ಎಂದು ಗೊತ್ತಾಗಲಿ. ಇದನ್ನು ಕುಸ್ತಿ ಅಖಾಡ ಮಾಡಿಕೊಂಡಿದ್ದೀರಾ ನೀವು? ಹೇಳುವವರು,

H-352-31

ಕೇಳುವವರು ನಿಮಗೆ ಇಲ್ಲಿ ಯಾರು ಇಲ್ಲವೇ? ಪ್ರತಿಪಕ್ಷದ ನಾಯಕರು ಹೇಳಿದ ಮೇಲೂ ಅವರಿಗೆ ಗೌರವ ಕೊಡುವಂಥ ನಡವಳಿಕೆ ಇಲ್ಲವೇ?

(ಗೊಂದಲ)

ಅಧ್ಯಕ್ಷರು : ಐದು ನಿಮಿಷ ಅವಕಾಶ ಕೊಟ್ಟರೆ ಹೈದರಾಬಾದ್ ಕರ್ನಾಟಕದ ಎಲ್ಲಾ ಸಮಸ್ಯೆಗಳು ಬಗೆಹರಿಯುತ್ತವೆಯೇ?

(ಗೊಂದಲ)

ಅಧ್ಯಕ್ಷರು : ಯಾವಾಗಲೂ ನಿಯಮ 69. ಬೆಳಿಗ್ಗೆ ಪ್ರಾರಂಭವಾದರೆ.., ಸಂಜೆಯವರಿಗೂ ಅದನ್ನೇ ಚರ್ಚೆ ಮಾಡುತ್ತಿದ್ದೀರಿ. ಈಗ ನಾನು ಯಾರಿಗೂ ಮಾತನಾಡಲಿಕ್ಕೆ ಅವಕಾಶ ಕೊಡುವುದಿಲ್ಲವೆಂದು ಬೆಳಿಗ್ಗೆಯೇ ಹೇಳಿದ್ದೆನು. ಮತ್ತೂ ಅದೇ ಹಠ ಮಾಡುತ್ತಿದ್ದೀರಿ. ಇದು ಒಳ್ಳೆಯದಲ್ಲ, ಇದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು : ಯಾರಿಗೂ ಅವಕಾಶ ಇಲ್ಲವೆಂದು ನಾನು ಬೆಳಿಗ್ಗೆ ಹೇಳಿದ್ದೇನೆ, ಆದರೂ ನೀವು ಹಠ ಮಾಡುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು : ಇದು ಸರಿಯಲ್ಲ. ಐದು ನಿಮಿಷ ಮಾತನಾಡಿಬಿಟ್ಟರೆ ಐದಾರು ವರ್ಷದ ಹೈದರಾಬಾದ್ ಕರ್ನಾಟಕದ ಸಮಸ್ಯೆಗಳು ಪರಿಹಾರ ಆಗಿಬಿಡುತ್ತದೆಯೇ? ಇಷ್ಟು ವರ್ಷ ನೀವು ಮಾತನಾಡಿಲ್ಲವೇ? ಹೈದರಾಬಾದ್ ಕರ್ನಾಟಕದ ಬಗ್ಗೆ ಮಾತನಾಡಲಿಕ್ಕೆ ನಿಮಗೆ ಯಾವತ್ತೂ ಅವಕಾಶ ಸಿಗಲಿಲ್ಲವೇ? ಈಗ ಮಾತನಾಡಿಬಿಟ್ಟರೆ ನಿಮ್ಮ ಎಲ್ಲಾ ಸಮಸ್ಯೆ ಬಗೆಹರಿದು ಬಿಡುತ್ತದೆಯೇ? ಸರ್ಕಾರ ಪರವಾಗಿ ಮುಖ್ಯಮಂತ್ರಿಗಳು ಉತ್ತರ ಕೊಡುವಂಥ ಸಂದರ್ಭದಲ್ಲಿ, ಈ ರೀತಿ ಬಾವಿಗೆ ಬಂದು ಧರಣಿ ಮಾಡುವುದು ಸರಿಯಲ್ಲ. ತಾವು ಬೆಳಿಗ್ಗಿನಿಂದ ಮಾತನಾಡಿದ್ದೀರಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನಾನು ಏನು ಮಾತನಾಡಬೇಕೆಂದುಕೊಂಡಿದ್ದೆ ಅದನ್ನೆಲ್ಲಾ ಲಿಖಿತ ಮೂಲಕ ತಮಗೆ ಕೊಡುತ್ತಿದ್ದೇನೆ, ಅದನ್ನು ಈ ಸದನ ನಡವಳಿಕೆಗಳಲ್ಲಿ ದಾಖಲು ಮಾಡುವುದು. ನಾನು ಓದುವ ಉತ್ತರ ಪ್ರತಿಗಳನ್ನು ಮಾಧ್ಯಮಗಳಿಗೂ ಕೊಡುತ್ತೇನೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಲಿಖಿತ ರೂಪದಲ್ಲಿ ಕೊಟ್ಟಿರುವ ಉತ್ತರದ ಪ್ರತಿಗಳನ್ನು ಸದನದ ನಡವಳಿಕೆಗಳಲ್ಲಿ ದಾಖಲಿಸುವುದು.

(ಗೊಂದಲ)

ಅಧ್ಯಕ್ಷರು : ಬೆಳಿಗ್ಗೆಯಿಂದ ಎಲ್ಲಾ ಸದಸ್ಯರು ಮಾತನಾಡಿ ಈಗ ಕೆಲವು ಸದಸ್ಯರಿಗೆ ಐದು ನಿಮಿಷ ಮಾತನಾಡಲಿಕ್ಕೆ ಅವಕಾಶ ಕೊಡಲಿಲ್ಲವೆಂದು ಬಾವಿಗೆ ಬರುವುದೆಂದರೆ ಇವರ ನಡವಳಿಕೆ ನನಗೆ ಅರ್ಥವಾಗುತ್ತಿಲ್ಲ. ಆಮೇಲೆ ಸ್ಪಷ್ಟೀಕರಣಕ್ಕೆ ಅವಕಾಶ ಕೊಡುತ್ತೇನೆಂದು ಹೇಳಿದರೂ ತಾವು ಕೇಳುತ್ತಿಲ್ಲ. ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ನೀವು ಬಾವಿಗೆ ಬಂದು ಸದನದ ಗೌರವಕ್ಕೆ ಧಕ್ಕೆ ತಂದಿದ್ದೀರಿ, ಇದರಿಂದ ಸದನಕ್ಕೆ ಗೌರವ ಬರುವುದಿಲ್ಲ.

(ಗೊಂದಲ)

1. ಈ ವರ್ಷದ ಆಯವ್ಯಯದ ಚರ್ಚೆ ಮತ್ತು ಅನುಮೋದನೆಗೆ ಕರೆಯಲಾದ ಈ ಅಧಿವೇಶನದಲ್ಲಿ ಕಳೆದ 20 ದಿನಗಳಿಂದ ಬಜೆಟ್ ವಿಷಯಗಳ ಮೇಲೆ ಆಳವಾದ ಚರ್ಚೆಯಾಗದಿರುವುದನ್ನು ತಾವು ಗಮನಿಸಿದ್ದೀರಿ. ಕೇವಲ ಪ್ರತಿಪಕ್ಷದ ಸದಸ್ಯರಲ್ಲದೆ ನಮ್ಮ ಪಕ್ಷದ ಸದಸ್ಯರೂ ಹಲವಾರು ವಿಷಯಗಳ ಬಗ್ಗೆ, ಅವರ ಕ್ಷೇತ್ರ ಮತ್ತು ಜಿಲ್ಲೆಗಳ ಅಭಿವೃದ್ಧಿಯ ಬಗ್ಗೆ ಕೂಲಂಕುಷವಾಗಿ ಚರ್ಚೆ ಮಾಡಲು ಆಸಕ್ತಿ ಹೊಂದಿದ್ದರು.
2. ಪ್ರಥಮ ಬಾರಿಗೆ ಆಯ್ಕೆಯಾಗಿ ಬಂದ ಸದಸ್ಯರಂತೂ ಹಲವು ವಿಷಯಗಳ ಬಗ್ಗೆ ದೀರ್ಘ ಅಧ್ಯಯನ ಮಾಡಿ ಈ ಸದನದ ಮೂಲಕ ಸರ್ಕಾರಕ್ಕೆ ತಮ್ಮ ಚಿಂತನೆಗಳು ಮತ್ತು ಉಪಯುಕ್ತ ಸಲಹೆಗಳನ್ನು ನೀಡಬಯಸಿದ್ದರು. ಅದು ಅವರ ಹಕ್ಕೂ ಕೂಡ.
3. ಆದರೆ ಈ ಸದನದಲ್ಲಿ ಅವರಿಗೂ ಕೂಡ ಆಯವ್ಯಯದ ಮೇಲಿನ ಚರ್ಚೆಗೆ ಅವಕಾಶ ಸಿಗದಿರುವುದು ಅವರನ್ನು ನಿರಾಸೆಗೊಳಿಸಿರುವುದರಲ್ಲಿ ಸಂದೇಹವಿಲ್ಲ.
4. ಈ ಸದನದಲ್ಲಿ ಬೇರೆ ತುರ್ತು ವಿಷಯಗಳನ್ನು ಅಥವಾ ಸಾರ್ವಜನಿಕ ಮಹತ್ವದ ವಿಷಯಗಳನ್ನು ಚರ್ಚೆ ಮಾಡಬಾರದೆಂದು ನಾನು ಹೇಳುತ್ತಿಲ್ಲ. ಪ್ರಜಾಪ್ರಭುತ್ವದಲ್ಲಿ ಈ ಸದನದ ನಿಯಮಗಳ ಅನ್ವಯ ಅಂತಹ ವಿಷಯಗಳ ಬಗ್ಗೆ ಚರ್ಚೆ ಅತ್ಯಗತ್ಯ.

5. ಸರ್ಕಾರದ ಗಮನವನ್ನು ತುರ್ತು ಮತ್ತು ಮಹತ್ವದ ವಿಷಯಗಳ ಬಗ್ಗೆ ಸೆಳೆಯುವುದರ ಜೊತೆಗೆ, ಎಲ್ಲಿಯಾದರೂ ಸರ್ಕಾರ ಲೋಪವೆಸಗಿದಲ್ಲಿ ಅದರ ಬಗ್ಗೆ ಸಹ ಬೇರೆ ಬೇರೆ ರೂಪದಲ್ಲಿ ಸದನದಲ್ಲಿ ಚರ್ಚೆ ಮಾಡಿ ಸರ್ಕಾರ ಲೋಪ ದೋಷಗಳನ್ನು ತಿದ್ದುಕೊಳ್ಳಲು ಮಾರ್ಗದರ್ಶನ ಮಾಡಬಹುದು.
6. ಆದರೆ ಜುಲೈ 9 ರಿಂದ ಮೊನ್ನೆಯವರೆಗೆ ಸದನದಲ್ಲಿ ಗಮನ ಸೆಳೆಯುವ ಸೂಚನೆ, ನಿಲುವಳಿ ಸೂಚನೆ, ಮತ್ತಿತರ ವಿಷಯಗಳ ಬಗ್ಗೆ ಚರ್ಚೆ ಹಾಗೂ ಈ ದಿಸೆಯಲ್ಲಿ ಸದನದ ಬಾವಿಗೆ ಬಂದು ನಡೆಸಿದ ಧರಣಿ, ಸರ್ಕಾರದ ವಿರುದ್ಧ ಧಿಕ್ಕಾರದ ಕೂಗಾಟ, ಸದನದಿಂದ ಹೊರನಡೆಯುವುದು ಮತ್ತು ಸದನದ ಹಠಾತ್ ಮುಂದೂಡಿಕೆಯಲ್ಲೇ ಬಹಳಷ್ಟು ವೇಳೆ ಕಳೆದು ಹೋಯಿತು.
7. ಇದಕ್ಕೆ ನಾನು ಕಾರಣಗಳನ್ನು ಹುಡುಕಲು ಹೋಗುತ್ತಿಲ್ಲ. ಆದರೆ ಯಾವುದೇ ಇಲಾಖೆಯ ಬೇಡಿಕೆಗಳ ಬಗ್ಗೆ ಸುದೀರ್ಘವಾದ ಮತ್ತು ಅರ್ಥಪೂರ್ಣ ಚರ್ಚೆ ಆಗಿಲ್ಲವೆಂಬುದನ್ನು ತಾವೂ ಸಹ ಒಪ್ಪುತ್ತೀರೆಂದು ನಂಬುತ್ತೇನೆ.
8. ಬಹಳಷ್ಟು ಜನ ಶಾಸಕರು ಈ ವಿಚಾರದಲ್ಲಿ ತಮ್ಮ ಅನಿಸಿಕೆಗಳನ್ನು ನನ್ನ ಜೊತೆ ಹಂಚಿಕೊಂಡಿರುತ್ತಾರೆ.
9. ಆದರೂ ಸಹ ಸರ್ಕಾರ ಕಳೆದ ಒಂದು ವರ್ಷದಲ್ಲಿ ಮಾಡಿದ ಸಾಧನೆ ಮತ್ತು ಯೋಜನೆಗಳ ಅನುಷ್ಠಾನದ ಅನುಭವದ ಆಧಾರದ ಮೇಲೆ ತಯಾರಿಸಿದ ನಮ್ಮ ಆಯವ್ಯಯದ ಬಗ್ಗೆ ಮತ್ತು ನಮ್ಮ ಮುಂದಿನ ಅಭಿವೃದ್ಧಿಯ ಚಿಂತನೆಗಳ ಬಗ್ಗೆ ಈ ಸದನದ ಮೂಲಕ ನಾಡಿನ ಆರು ಕೋಟಿ ಜನರಿಗೆ ತಿಳಿಸಬಯಸುತ್ತೇನೆ.

ಆರ್ಥಿಕ ಪರಿಸ್ಥಿತಿ ಮತ್ತು ನಿರ್ವಹಣೆ :

10. ಕಳೆದ ಒಂದೂವರೆ ವರ್ಷದಿಂದ ಜಗತ್ತಿನಾದ್ಯಂತ ಆರ್ಥಿಕ ಹಿನ್ನಡೆ ಯಾಗಿದ್ದು, ಅದರ ಬಿಸಿ ನಮ್ಮ ದೇಶದ ಮತ್ತು ನಮ್ಮ ರಾಜ್ಯದ ಆರ್ಥಿಕ ಸ್ಥಿತಿಗೂ ತಟ್ಟಿದೆ ಇದರಿಂದಾಗಿ ಕೇಂದ್ರ ಮತ್ತು ರಾಜ್ಯದ ಸಂಪನ್ಮೂಲಗಳ ಸಂಗ್ರಹದಲ್ಲಿ ಹಿನ್ನಡೆಯಾಗಿದೆ.
11. ಇದರಿಂದಾಗಿ, ಕೇಂದ್ರ ಮತ್ತು ರಾಜ್ಯಗಳ ವಿತ್ತೀಯ ಕೊರತೆ (ಫಿಸ್ಕಲ್ ಡೆಫಿಸಿಟ್) ಹೆಚ್ಚುತ್ತಿದೆ. ಕೇಂದ್ರದ ವಿತ್ತೀಯ ಕೊರತೆ ಶೇ.6 ರಿಂದ ಶೇ.68 ಕ್ಕೆ ಏರಿದ್ದು ಕೇಂದ್ರ ಸರ್ಕಾರವೇ ರಾಜ್ಯ ಸರ್ಕಾರಗಳಿಗೆ ಈ

ವರ್ಷ ವಿತ್ತೀಯ ಕೊರತೆಯ ಮಿತಿಯನ್ನು ಶೇ.3.5 ರಿಂದ ಶೇ.4 ಕ್ಕೆ ಏರಿಸಲು ಸಲಹೆ ನೀಡಿದೆ.

12. ಕೇಂದ್ರ ಸರ್ಕಾರ ತನ್ನ 10 ಲಕ್ಷ ಕೋಟಿ ಆಯವ್ಯಯದ ವೆಚ್ಚದಲ್ಲಿ 4 ಲಕ್ಷ ಕೋಟಿಗೂ ಮೀರಿ ಸಾಲ ಪಡೆಯಬೇಕಾದ ಪರಿಸ್ಥಿತಿಯನ್ನು ಕೇಂದ್ರ ಅರ್ಥ ಸಚಿವರು ವಿವರಿಸಿರುತ್ತಾರೆ.

13. ಹೀಗಿದ್ದರೂ ಸಹ ಈ ವರ್ಷದ ನಮ್ಮ ಆಯವ್ಯಯದಲ್ಲಿ ವಿತ್ತೀಯ ಕೊರತೆಯನ್ನು ಶೇ.3 ಕ್ಕಿಂತ ಕಡಿಮೆ ಮಿತಿಯಲ್ಲಿಡಲು ಯೋಜಿಸಲಾಗಿದೆ. ಒಂದು ವೇಳೆ ಆರ್ಥಿಕ ಹಿನ್ನಡೆಯಿಂದ ನಿರೀಕ್ಷಿತ ಮಟ್ಟದಲ್ಲಿ ತೆರಿಗೆಗಳ ಸಂಗ್ರಹವಾಗದಿದ್ದಲ್ಲಿ ಈ ವಿತ್ತೀಯ ಕೊರತೆಯನ್ನು ಶೇ.4 ಹೆಚ್ಚಿಸಲು ಅವಕಾಶವಿದೆ.

14. 2008–09ರಲ್ಲಿ ವಿತ್ತೀಯ ಕೊರತೆಯನ್ನು ಶೇ.3.5ಕ್ಕೆ ಹೆಚ್ಚಿಸಲು ಅವಕಾಶವಿದ್ದರೂ ಸಹ ನಾವು ಶೇ 3.29ಕ್ಕೆ ಮಿತಿಗೊಳಿಸಿದೆವು.

15. ಕಳೆದ 5 ವರ್ಷಗಳಿಂದ ರಾಜ್ಯದಲ್ಲಿ ರಾಜಸ್ವ ಕೊರತೆ ಇರುವುದಿಲ್ಲ. ಕಳೆದ ವರ್ಷ ರೂ.1,570 ಕೋಟಿ ರಾಜಸ್ವ ಹೆಚ್ಚಳವಾಗಿತ್ತು.

ಸಾಲಗಳ ಪ್ರಮಾಣ:

16. ಕೆಲವರು ನಾವು ಹೆಚ್ಚು ಸಾಲವನ್ನು ಮಾಡಿದ್ದೇವೆಂದು ಟೀಕೆ ಮಾಡಿರುತ್ತಾರೆ. ನಾವು 2008–09ಕ್ಕೆ ಹೊಸದಾಗಿ ಪಡೆದ ಸಾಲ ರೂ.6,878 ಕೋಟಿ. ಇದನ್ನೂ ಸೇರಿಸಿ ನಾವು ಈವರೆಗೆ ತೆಗೆದುಕೊಂಡ ಸಂಚಿತ ಸಾಲದ ಮೊತ್ತ ರೂ.66,419 ಕೋಟಿ. ಇದು ರಾಜ್ಯದ ಒಟ್ಟು ಆದಾಯದ ಶೇ.24.77 ರಷ್ಟಾಗಿದೆ. ಇದು ಕಳೆದ 7 ವರ್ಷಗಳಲ್ಲಿ ರಾಜ್ಯದ ಒಟ್ಟು ಆದಾಯದ ಅತ್ಯಂತ ಕಡಿಮೆ ಶೇಕಡವಾರು ಮಟ್ಟದಲ್ಲಿದೆ. ಈ ಹಿಂದೆ 2003–04ರಲ್ಲಿ ಒಟ್ಟು ಸಾಲಗಳ ಪ್ರಮಾಣ ರಾಜ್ಯದ ಆದಾಯದ ಶೇ.32.91 ಇತ್ತು.

ಬಡ್ಡಿ ಸಂದಾಯಃ

17. 2002–03ರಲ್ಲಿ ರಾಜ್ಯದ ಬಡ್ಡಿ ಸಂದಾಯದ ಪ್ರಮಾಣ ರಾಜಸ್ವ ಆದಾಯದ (Revenue Receipt) ಶೇ.20.36 ಇತ್ತು. ಇದನ್ನು 2008–09ರಲ್ಲಿ ಶೇ. 10.46ಕ್ಕೆ ಇಳಿಸಿದ್ದೇವೆ. ಕಳೆದ ವರ್ಷ ಬಡ್ಡಿ ಸಂದಾಯ ಮಾಡಿದ ಮೊತ್ತ ರೂ.4,532 ಕೋಟಿ.

18. ಸಧ್ಯದ ಪ್ರತಿಕೂಲ ಆರ್ಥಿಕ ಪರಿಸ್ಥಿತಿಯಲ್ಲಿಯೂ ರಾಜ್ಯ ಸರ್ಕಾರ ಆರ್ಥಿಕ ಶಿಸ್ತನ್ನು ಪಾಲಿಸಿದೆ. ಹಣಕಾಸಿನ ವ್ಯವಹಾರವನ್ನು ಸಮರ್ಥವಾಗಿ ನಿರ್ವಹಿಸಿದೆ. ವಿತ್ತೀಯ ಕೊರತೆ, ರಾಜಸ್ವ ಹೆಚ್ಚಳ, ಒಟ್ಟು ಸಾಲಗಳ ಮೊತ್ತ, ಸರ್ಕಾರಿ ಖಾತ್ರಿಗಳ ಮೊತ್ತ, ಇತ್ಯಾದಿ ಅಂಶಗಳು ವಿತ್ತೀಯ ಹೊಣೆಗಾರಿಕೆ ಮತ್ತು ಆಯವ್ಯಯ ನಿರ್ವಹಣೆ ಅಧಿನಿಯಮದ (Fiscal Responsibility and Budget Management Act) ಮಾನದಂಡಗಳ ಪ್ರಕಾರವೇ ಇವೆ.

19. ಇತರೆ ರಾಜ್ಯಗಳಿಗೆ ಹೋಲಿಸಿ ನೋಡಿದರೆ ನಮ್ಮ ರಾಜ್ಯದ ಆರ್ಥಿಕ ವ್ಯವಸ್ಥೆ ಮತ್ತು ನಿರ್ವಹಣೆ ಬಹಳ ಉತ್ತಮವಾಗಿದೆ. 2007–08 ರವರೆಗೂ ಸಹ ಕೆಲವು ರಾಜ್ಯಗಳ ವಿತ್ತೀಯ ಕೊರತೆ ಶೇ.3ಕ್ಕಿಂತ ಹೆಚ್ಚಾಗಿತ್ತು (ಉದಾ: ಪಶ್ಚಿಮ ಬಂಗಾಳ, ಪಂಜಾಬ್, ಕೇರಳ, ಇತ್ಯಾದಿ).

20. ಈ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರದ ವಿತ್ತೀಯ ಕೊರತೆ ರೂ.4 ಲಕ್ಷ ಕೋಟಿಗೆ ಹೋಲಿಸಿದರೆ ನಮ್ಮ ವಿತ್ತೀಯ ಕೊರತೆ ರೂ.8,493 ಕೋಟಿ ಮಾತ್ರ, ಇದು ಕೇಂದ್ರ ಸರ್ಕಾರದ ವಿತ್ತೀಯ ಕೊರತೆಯ ಕೇವಲ ಶೇ.2.12 ಮಾತ್ರ, ನೆರೆಯ ರಾಜ್ಯಗಳಾದ ಆಂಧ್ರ ಪ್ರದೇಶದ ವಿತ್ತೀಯ ಕೊರತೆ ರೂ. 12,092 ಕೋಟಿ ಮತ್ತು ತಮಿಳುನಾಡಿನಲ್ಲಿ ರೂ.11,824 ಕೋಟಿಯಾಗಿದೆ.

21. 13ನೇ ಹಣಕಾಸಿನ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು ರಾಜ್ಯಕ್ಕೆ ಭೇಟಿ ನೀಡಿದ ಸಮಯದಲ್ಲಿ (ಜನವರಿ 2009) ನಮ್ಮ ರಾಜ್ಯದ ಆರ್ಥಿಕ ಶಿಸ್ತಿನ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ. ಇದೇ ರೀತಿ ಭಾರತೀಯ ರಿಸರ್ವ್ ಬ್ಯಾಂಕ್ ಗವರ್ನರ್‌ರವರು ಕಳೆದ ಮೇ ತಿಂಗಳಲ್ಲಿ ರಾಜ್ಯಕ್ಕೆ ಬಂದಾಗ ರಾಜ್ಯ ಸರ್ಕಾರದ ಆರ್ಥಿಕ ನಿರ್ವಹಣೆಯ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿರುತ್ತಾರೆ.

2008–09ನೇ ಸಾಲಿನ ವಿತ್ತೀಯ ಸಾಧನೆಗಳು:

22. 2008–09ನೇ ಸಾಲಿನ ಒಟ್ಟು ರೂ.52,382 ಕೋಟಿ ವೆಚ್ಚದಲ್ಲಿ ಬಂಡವಾಳ ವೆಚ್ಚ ರೂ.10,632 ಕೋಟಿ ಮತ್ತು ರಾಜಸ್ವ ವೆಚ್ಚ ರೂ.41,750 ಕೋಟಿಯಾಗಿತ್ತು. 2007–08ಕ್ಕೆ ಹೋಲಿಸಿದರೆ, ಒಟ್ಟು

ವೆಚ್ಚದಲ್ಲಿ ಶೇ. 12ರಷ್ಟು ಮತ್ತು ಬಂಡವಾಳ ವೆಚ್ಚದಲ್ಲಿ ಶೇ. 13 ರಷ್ಟು ಹೆಚ್ಚಳ ಸಾಧಿಸಲಾಗಿದೆ.

23. ಕಳೆದ ವರ್ಷ ಪ್ರಮುಖ ತೆರಿಗೆಗಳ (ವಾಣಿಜ್ಯ, ಅಬಕಾರಿ ಮತ್ತು ವಾಹನ ತೆರಿಗೆ) ಸಂಗ್ರಹ ರೂ.23,463 ಕೋಟಿಯಾಗಿದ್ದು ಇದು ಹಿಂದಿನ ವರ್ಷಕ್ಕಿಂತ ಶೇ.8.6 ಹೆಚ್ಚಾಗಿರುತ್ತದೆ. ರಿಯಲ್ ಎಸ್ಟೇಟ್ ವ್ಯವಹಾರ ಕುಂಠಿತವಾದ ಕಾರಣ, ನೋಂದಣಿ ಮತ್ತು ಮುದ್ರಾಂಕ ಆದಾಯದಲ್ಲಿ ಸುಮಾರು ಶೇ.10 ಕಡಿಮೆಯಾಗಿರುತ್ತದೆ. (2008–09ರ ಸಂಗ್ರಹ ರೂ.3,063 ಕೋಟಿ).

ಯೋಜನಾ ವೆಚ್ಚ:

24. 2008–09ನೇ ಸಾಲಿನಲ್ಲಿ ಯೋಜನಾ ವೆಚ್ಚ ರೂ.21,819 ಕೋಟಿಯಾಗಿದ್ದು ಇದು 2007–08ರ ಯೋಜನಾ ವೆಚ್ಚ ರೂ.17,227 ಕೋಟಿಗೆ ಹೋಲಿಸಿದರೆ ಶೇ.27 ರಷ್ಟು ಹೆಚ್ಚಾಗಿರುತ್ತದೆ.

25. ಆರ್ಥಿಕ ಹಿನ್ನಡೆಯಲ್ಲಿಯೂ ಸಹ ಯೋಜನಾ ವೆಚ್ಚವನ್ನು ಶೇ.27 ರಷ್ಟು ಹೆಚ್ಚಿಸಿರುವುದು ಒಂದು ಮೆಚ್ಚಬೇಕಾದ ಸಾಧನೆ ಎಂಬುದು ಆರ್ಥಿಕ ತಜ್ಞರ ಅಭಿಪ್ರಾಯ.

26. ಹೆಮ್ಮೆ ಪಡುವ ಒಂದು ವಿಷಯವೆಂದರೆ, ನಮ್ಮ ಯೋಜನೇತರ ವೆಚ್ಚದಲ್ಲಿ ಹಿಡಿತ ಸಾಧಿಸಿರುವುದು. ಹಿಂದಿನ 5 ವರ್ಷಗಳಲ್ಲಿ ಈ ಯೋಜನೇತರ ವೆಚ್ಚದ ಹೆಚ್ಚಳ ಶೇ.11.60ರಿಂದ ಶೆ.18.40 ರಷ್ಟು ಇತ್ತು. ಆದರೆ 2007–08ಕ್ಕೆ ಹೋಲಿಸಿದರೆ ಯೋಜನೇತರ ವೆಚ್ಚ 2008–09 ರಲ್ಲಿ ಸುಮಾರು 6 ಪ್ರತಿ ಶತದಷ್ಟು ಮಾತ್ರ ಹೆಚ್ಚಳವಾಗಿದೆ.

2009–10ರ ಸಾಲಿನ ಆಯವ್ಯಯದ ಅಂದಾಜುಗಳು :

27. 2009–10ನೇ ಸಾಲಿನಲ್ಲಿ ರೂ.47,237 ಕೋಟಿ ರಾಜಸ್ವ ವೆಚ್ಚ ಮತ್ತು ರೂ.11,622 ಕೋಟಿ ಬಂಡವಾಳ ವೆಚ್ಚ ಸೇರಿದಂತೆ ಒಟ್ಟು ರೂ.58,860 ಕೋಟಿ ವೆಚ್ಚ ಮಾಡಲು ಪ್ರಸ್ತಾಪಿಸಲಾಗಿದೆ. ಇದಲ್ಲದೆ ಸುಮಾರು ರೂ.1,740 ಕೋಟಿ ಪೂರಕ ಅಂದಾಜಿಗೂ ಸಹ ಈ ಸದನದ ಅನುಮೋದನೆ ಕೋರಲಾಗಿದೆ.

28. ಪೂರಕ ಅಂದಾಜಿನಲ್ಲಿ ಪ್ರಮುಖವಾಗಿ ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿ (ರೂ.150 ಕೋಟಿ), ನಗರ ಸ್ಥಳೀಯ ಸಂಸ್ಥೆಗಳು (ರೂ. 150 ಕೋಟಿ). ಪಡಿತರ ಸಹಾಯಧನ (ರೂ. 117 ಕೋಟಿ), ಗ್ರಾಮೀಣ

ರಸ್ತೆಗಳು (ರೂ.77 ಕೋಟಿ), ಕೆ.ಪಿ.ಸಿ.ಎಲ್. (ರೂ.175 ಕೋಟಿ) ಹಾಗೂ ಇತರ ಅಭಿವೃದ್ಧಿ ಕಾರ್ಯಕ್ರಮಗಳು ಸೇರಿವೆ.

ಯೋಜನಾ ಗಾತ್ರ :

29. ಆರ್ಥಿಕ ತಜ್ಞರ ಪ್ರಕಾರ, ಆರ್ಥಿಕ ಹಿನ್ನಡೆಯ ಸಮಯದಲ್ಲಿ ಮೂಲಭೂತ ಸೌಲಭ್ಯಗಳ ಮೇಲಿನ ಬಂಡವಾಳ ಖರ್ಚು ಮತ್ತು ಇತರೆ ಸರ್ಕಾರಿ ಯೋಜನೆಗಳ ಮೇಲೆ ಹೆಚ್ಚು ಖರ್ಚು ಮಾಡುವುದರಿಂದ ಆರ್ಥಿಕ ಹಿನ್ನಡೆಯನ್ನು ತಡೆದು ಪುನಃಶ್ಚೇತನಗೊಳಿಸಲು ಸಾಧ್ಯವಾಗುತ್ತದೆ.

30. ಈ ಹಿನ್ನೆಲೆಯಲ್ಲಿ ಆರ್ಥಿಕ ಹಿನ್ನಡೆಯಿದ್ದರೂ ನಮ್ಮ ಸರ್ಕಾರ ಯೋಜನಾ ಗಾತ್ರವನ್ನು ರೂ.29,500 ಕೋಟಿಗೆ ಹೆಚ್ಚಿಸಿದೆ. ಇದು 2008-09ರ ಯೋಜನಾ ವೆಚ್ಚಕ್ಕೆ ಹೋಲಿಸಿದರೆ ಸುಮಾರು ಶೇ.35 ರಷ್ಟು ಹೆಚ್ಚಳವಾಗಿದೆ. ವಿವಿಧ ನಿಗಮಗಳು ಮತ್ತು ಪ್ರಾಧಿಕಾರಗಳು (ಕೆ.ಪಿ.ಸಿ.ಎಲ್., ಕೆ.ಐ.ಎ.ಡಿ.ಬಿ., ಕೆ.ಆರ್.ಡಿ.ಸಿ.ಎಲ್., ಬಿ.ಬಿ.ಎಂ.ಪಿ., ಬಿ.ಡಿ.ಎ.ಇತ್ಯಾದಿ) ಸ್ವಂತ ಸಂಪನ್ಮೂಲ ಹಾಗೂ ಇತರ ಮೂಲಗಳಿಂದ ಸುಮಾರು ರೂ.5000 ಕೋಟಿ ವೆಚ್ಚ ಮಾಡಲಿವೆ.

ಸಂಪನ್ಮೂಲ ಸಂಗ್ರಹಣೆ :

31. ವಿವಿಧ ತೆರಿಗೆಗಳ ಮೂಲಕ ಈ ವರ್ಷ ರೂ.32,721 ಕೋಟಿ ಸಂಗ್ರಹಿಸಲು ಯೋಜಿಸಲಾಗಿದೆ. ತೆರಿಗೆಯೇತರ ಆದಾಯ ಸುಮಾರು ರೂ.2,130 ಕೋಟಿ ಎಂದು ಅಂದಾಜಿಸಲಾಗಿದೆ.

32. ಸದ್ಯದ ಮಂದಗತಿಯ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ರಾಜ್ಯದ ತೆರಿಗೆ ಸಂಗ್ರಹಣೆಯಲ್ಲಿ ಅಂದಾಜಿಗಿಂತಲೂ ಕಡಿಮೆಯಾಗುವ ಸಂಭವವನ್ನು ತಳ್ಳಿಹಾಕುವಂತಿಲ್ಲ. ಆಯವ್ಯಯ ಭಾಷಣದಲ್ಲಿಯೂ ಈ ಬಗ್ಗೆ ಪ್ರಸ್ತಾಪಿಸಲಾಗಿದ್ದು ಈ ವರ್ಷದ ಉತ್ತರಾರ್ಧದಲ್ಲಿ ಆರ್ಥಿಕ ಪರಿಸ್ಥಿತಿಯು ಉತ್ತಮಗೊಳ್ಳುವ ಸಾಧ್ಯತೆ ಇದೆ. ಸದನದಲ್ಲಿ ಮುಂದೆ ಪ್ರಸ್ತುತಪಡಿಸುವ ಮಧ್ಯಮಾವಧಿ ವಿತ್ತೀಯ ಪರಿಶೀಲನೆಯಲ್ಲಿ ಈ ಬಗ್ಗೆ ಹೆಚ್ಚಿನ ವಿವರಗಳನ್ನು ನೀಡಲಾಗುವುದು.

ರಾಜಸ್ವದ ನಿರ್ವಹಣೆಗೆ ಮಾರ್ಗೋಪಾಯಗಳು :

33. ಆರ್ಥಿಕ ಹಿಂಜರಿತದಿಂದಾಗಿ ಸಂಪನ್ಮೂಲಗಳ ಸಂಗ್ರಹಣೆಯಲ್ಲಿ, ಪ್ರಮುಖವಾಗಿ ವಾಣಿಜ್ಯ ತೆರಿಗೆ ಮತ್ತು ಮುದ್ರಾಂಕ ಶುಲ್ಕದಲ್ಲಿ ಕುಂಠಿತವಾಗುವ ಸಾಧ್ಯತೆಯನ್ನು ಮನಗಂಡು ಸಂಪನ್ಮೂಲ ಕೊರತೆಯನ್ನು ನಿರ್ವಹಿಸಲು ಕೆಲವು ಕ್ರಮಗಳನ್ನು ಕೈಗೊಂಡಿದೆ.
34. ಅಬಕಾರಿ ಚಿಲ್ಲರೆ ಸನ್ನದುದಾರರಿಗೆ ಮಾರಾಟದ ಮೇಲೆ ಶೇ.20ರಷ್ಟು ಲಾಭಾಂಶವನ್ನು ಸಾರಾಯಿ ನಿಷೇಧ ನಂತರ ಭಾರತೀಯ ಮದ್ಯಗಳ ಮಾರಾಟವು (IMFL) ಇಮ್ಮಡಿಯಾಗಿರುವುದರಿಂದ ಲಾಬಾಂಶವನ್ನು ಈ ವರ್ಷದಿಂದ ಶೇ.10 ಕ್ಕೆ ಇಳಿಸಲಾಗಿದೆ. ಇದರಿಂದ ಪ್ರತಿ ವರ್ಷ ಸುಮಾರು ರೂ. 750 ಕೋಟಿ ಹೆಚ್ಚಿನ ಆದಾಯ ನಿರೀಕ್ಷಿಸಿದೆ.
35. ಗ್ರಾಮೀಣ ಪ್ರದೇಶಗಳು ಮತ್ತು ಸಣ್ಣ ಪಟ್ಟಣಗಳಲ್ಲಿ ಅಬಕಾರಿ ಸನ್ನದು ಶುಲ್ಕವನ್ನು ಹೆಚ್ಚಿಸಲಾಗಿದ್ದು ಇದರಿಂದ ಸುಮಾರು ರೂ.25 ಕೋಟಿ ಆದಾಯ ಹೆಚ್ಚಲಿದೆ.
36. ಮಾರಾಟ ತೆರಿಗೆ ಸಂಗ್ರಹದಲ್ಲಿ ಹೆಚ್ಚಿನ ದಕ್ಷತೆಯನ್ನು ಮೂಡಿಸಲು ಎಲೆಕ್ಟ್ರಾನಿಕ್ ಯಂತ್ರಗಳ ಮೂಲಕ ವಹಿವಾಟಿನ ಮಾಹಿತಿ ಸಂಗ್ರಹಿಸುವ ವ್ಯವಸ್ಥೆಯನ್ನು ರೂಪಿಸಲಾಗುತ್ತಿದೆ.
37. ಕೇಂದ್ರ ಪುರಸ್ಕೃತ ಯೋಜನೆಗಳಡಿ (JNNURM, NREGA, AIBP, PMGSY, IAY ಇತ್ಯಾದಿ) ಕೇಂದ್ರದಿಂದ ಹೆಚ್ಚಿನ ಅನುದಾನ ಪಡೆಯಲು ಯತ್ನಿಸಲಾಗುವುದು.
38. ರಾಜ್ಯದ ಪ್ರಮುಖ ಮೂಲ ಸೌಕರ್ಯ ಯೋಜನೆಗಳನ್ನು ಖಾಸಗಿ ಸಹಭಾಗಿತ್ವದೊಡನೆ (PPP) ಅನುಷ್ಠಾನ ಮಾಡಲು ಯೋಜಿಸಲಾಗುವುದು.
39. ಯೋಜನೇತರ ಮತ್ತು ಅಭಿವೃದ್ಧಿಯೇತರ ವೆಚ್ಚವನ್ನು ನಿಯಂತ್ರಿಸಲು ಹೆಚ್ಚಿನ ಗಮನವನ್ನು ನೀಡಲಾಗುವುದು. ಈ ದಿಸೆಯಲ್ಲಿ ಸರ್ಕಾರ ವೆಚ್ಚ ಸುಧಾರಣಾ ಆಯೋಗ ರಚಿಸಿದೆ.

ಸಾಧನೆಯ ಒಂದು ವರ್ಷ – ವಿಕಾಸ ಸಂಕಲ್ಪ :

40. ನಾನು ಆಶ್ವಾಸನೆ ನೀಡಿದಂತೆ 100 ದಿನ 200 ದಿನ ಮತ್ತು ಒಂದು ವರ್ಷದ ನಂತರ ನಮ್ಮ ಸರ್ಕಾರದ ಸಾಧನೆಗಳನ್ನು ಜನರ ಮುಂದೆ ಇಟ್ಟಿದ್ದೇವೆ. ಒಂದು ವರ್ಷದ ಸಾಧನೆಯನ್ನು ವಿಕಾಸ ಸಂಕಲ್ಪ ಉತ್ಸವದ ಮೂಲಕ ರಾಜ್ಯದ 7 ಕಡೆ ಬಿಂಬಿಸಿರುತ್ತೇವೆ.

41. ಈ ಸಂದರ್ಭದಲ್ಲಿ ನಾಡಿನ ಜನತೆಗೆ ನಮ್ಮ ಪ್ರಗತಿಯ ವಿವರಗಳನ್ನು ನೀಡುವುದರ ಜೊತೆಗೆ ಸುಮಾರು ಒಂದು ಲಕ್ಷ ಫಲಾನುಭವಿಗಳಿಗೆ ನೇರವಾಗಿ ಸರ್ಕಾರದ ವಿವಿಧ ಯೋಜನೆಗಳ ಸೌಲಭ್ಯಗಳನ್ನು ನೀಡಿರುತ್ತೇವೆ.

42. ಈ ಒಂದು ವರ್ಷದಲ್ಲಿ ಸುಮಾರು 1.2 ಕೋಟಿ ಕುಟುಂಬಗಳಿಗೆ ಯಾವುದಾದರೊಂದು ರೂಪದಲ್ಲಿ ನಮ್ಮ ಯೋಜನೆಗಳ ಪ್ರಯೋಜನ ತಲುಪಿದೆ.

43. ಅನ್ನದಾತನ ಸಂಕಷ್ಟಗಳ ಪರಿಹಾರಕ್ಕಾಗಿ ಶೇ. 3ರ ದರದಲ್ಲಿ ಸಾಲ, ಪ್ರತಿ ಲೀಟರ್ ಹಾಲಿಗೆ ರೂ.2 ಪ್ರೋತ್ಸಾಹ ಧನ, ಒಣಭೂಮಿ ಆಶ್ರಿತ ರೈತರಿಗೆ ರೂ.1000 ಸಹಾಯಧನ, ಕೃಷಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್, ರೈತರ ವಿದೇಶಿ ಅಧ್ಯಯನ ಪ್ರವಾಸ, ಸಾವಯವ ಕೃಷಿಗೆ ಪ್ರೋತ್ಸಾಹ, ಇತ್ಯಾದಿ ನೂತನ ಕಾರ್ಯಕ್ರಮಗಳ ಮೂಲಕ ಕೃಷಿಕನ ಜೀವನವನ್ನು ಹಸನು ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ.

44. ಸಂಧ್ಯಾ, ಸುರಕ್ಷಾ, ಭಾಗ್ಯಲಕ್ಷ್ಮಿ, ಆರೋಗ್ಯ ಕವಚ, ಮಡಿಲು, ಅಂಗವಿಕಲರಿಗೆ ರೂ.1000 ಮಾಸಾಶನ, ಇತ್ಯಾದಿ ಹೊಸ ಜನಪರ ಯೋಜನೆಗಳ ಮುಖಾಂತರ ಬಡವರ ಬಾಳಲ್ಲಿ ಸ್ವಲ್ಪವಾದರೂ ಬೆಳಕು ತರಲು ಯತ್ನಿಸಿದ್ದೇವೆ.

45. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಶಿಕ್ಷಣ ಮತ್ತು ವಿದ್ಯಾರ್ಥಿ ನಿಲಯಗಳಿಗೆ ಅತಿ ಹೆಚ್ಚಿನ ನೆರವು ನೀಡಿದ್ದೇವೆ.

46. ಕೌಶಲ್ಯ ಆಯೋಗ ರಚಿಸಿ ಉದ್ಯೋಗ ಮೇಳದ ಮುಖಾಂತರ ಸುಮಾರು 58 ಸಾವಿರ ಮಂದಿ ನಿರುದ್ಯೋಗಿ ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ. ಹಾಗೂ ಇನ್ನೂ ಸುಮಾರು 75 ಸಾವಿರ ಜನರಿಗೆ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡಲಾಗುತ್ತಿದೆ.

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ :

47. ನಮ್ಮ ಸರ್ಕಾರ ಎಸ್.ಸಿ. / ಎಸ್.ಟಿ.ಗಳ ಅಭಿವೃದ್ಧಿಯಲ್ಲಿ ನೈಜ ಕಾಳಜಿ ಹೊಂದಿದೆ. 2005–06ರಲ್ಲಿ ಈ ವರ್ಗಕ್ಕೆ ಕೇವಲ ರೂ.655 ಕೋಟಿ ಅನುದಾನ ಮಾತ್ರ ಒದಗಿಸಲಾಗಿತ್ತು. ಕಳೆದ ವರ್ಷ ಈ ಅನುದಾನ ವನ್ನು ರೂ.3,958 ಕೋಟಿಗೆ ಹೆಚ್ಚಿಸಲಾಯಿತು. ಅಂದರೆ 3 ವರ್ಷದಲ್ಲಿ ಆರು ಪಟ್ಟು ಹೆಚ್ಚು ಅನುದಾನವನ್ನು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಅಭಿವೃದ್ಧಿಗೆ ಒದಗಿಸಿದ್ದೇವೆ.

48. ಅಲ್ಪಸಂಖ್ಯಾತರ ಅಭಿವೃದ್ಧಿಗೂ ನಮ್ಮ ಸರ್ಕಾರ ವಿಶೇಷ ಗಮನ ಹರಿಸಿದೆ. 2004–05ರಲ್ಲಿ ಕೇವಲ ರೂ.10 ಕೋಟಿ, 2005–06ರಲ್ಲಿ ರೂ.14 ಕೋಟಿ ಅನುದಾನವನ್ನು ಮಾತ್ರ ಅಲ್ಪಸಂಖ್ಯಾತರ ಅಭಿವೃದ್ಧಿಗೆ ನೀಡಲಾಗಿತ್ತು. ನಾವು 2008–09ನೇ ಆಯವ್ಯಯದಲ್ಲಿ ಈ ಅನುದಾನವನ್ನು ರೂ.143 ಕೋಟಿಗೆ ಏರಿಸಿದೆವು.

49. ಡಾ: ಡಿ.ಎಂ.ನಂಜುಂಡಪ್ಪ ಶಿಫಾರಸ್ಸುಗಳ ಜಾರಿಗೆ ಪ್ರತ್ಯೇಕ ಶೀರ್ಷಿಕೆ ಯಡಿ 2008–09 ರಲ್ಲಿ ರೂ.2,547 ಕೋಟಿ ಅನುದಾನ ಹಂಚಿಕೆ ಮಾಡಲಾಗಿತ್ತು. (ರೂ.1,739 ಕೋಟಿ ಖರ್ಚು ಮಾಡಲಾಗಿದೆ). ಡಾ: ನಂಜುಂಡಪ್ಪ ವರದಿ ಅನುಷ್ಠಾನಕ್ಕಾಗಿ ಶ್ರೀ ಶಶೀಲ್ ನಮೋಶಿ ಅವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದೆ.

50. ಖಾಸಗಿ ಕ್ಷೇತ್ರಗಳ ಪರಿಣತರು ಮತ್ತು ತಜ್ಞರ ಅನುಭವ ಮತ್ತು ಜ್ಞಾನವನ್ನು ಬಳಸಿಕೊಂಡು ಸರ್ಕಾರದ ಯೋಜನೆಗಳ ಅನುಷ್ಠಾನದಲ್ಲಿ ಸುಧಾರಣೆ ತರಲು ಮತ್ತು ಗುಣಮಟ್ಟ ಹೆಚ್ಚಿಸಲು ವಿವಿಧ ಕಾರ್ಯಪಡೆಗಳನ್ನು ರಚಿಸಲಾಗಿದೆ.

51. ಡಾ: ಕಸ್ತೂರಿ ರಂಗನ್ ಅಧ್ಯಕ್ಷತೆಯಲ್ಲಿ ಜ್ಞಾನ ಆಯೋಗ, ಡಾ: ಸಿ.ಎನ್.ಆರ್.ರಾವ್ ಅಧ್ಯಕ್ಷತೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ವಿಷನ್ ಗ್ರೂಪ್, ಶ್ರೀ ನಂದನ್ ನೀಲೆಕಣಿ ಅವರ ಅಧ್ಯಕ್ಷತೆಯಲ್ಲಿ ಇ–ಆಡಳಿತ, ಶ್ರೀ ಕ್ರಿಸ್ ಗೋಪಾಲಕೃಷ್ಣರವರ ಅಧ್ಯಕ್ಷತೆಯಲ್ಲಿ ಕೈಗಾರಿಕಾ ಕಾರ್ಯಪಡೆ, ಹೀಗೆ ಹಲವು ಕಾರ್ಯಪಡೆಗಳ ಮುಖಾಂತರ ನಮ್ಮ ಆಡಳಿತದಲ್ಲಿ ನವೀನತೆ, ದಕ್ಷತೆ ಮತ್ತು ಪಾರದರ್ಶಕತೆಯನ್ನು ತರಲು ಪ್ರಯತ್ನ ಮಾಡಿದ್ದೇವೆ.

ವಿದ್ಯುತ್ ಸಮಸ್ಯೆ ಮತ್ತು ನಿವಾರಣೆಗೆ ಕ್ರಮ :

52. ದೇಶದಲ್ಲೆ ಪ್ರಪ್ರಥಮವಾಗಿ ವಿದ್ಯುತ್ ಉತ್ಪಾದಿಸಿದ ರಾಜ್ಯ ಕರ್ನಾಟಕ ವಾಗಿದ್ದರೂ ದೂರದೃಷ್ಟಿಯ ಕೊರತೆಯಿಂದಾಗಿ ನಾವೀಗ ವಿದ್ಯುತ್ ಅಭಾವ ಎದುರಿಸುತ್ತಿದ್ದೇವೆ.

53. ಕಳೆದ ವರ್ಷ ಜಲಾಶಯಗಳ ನೀರಿನ ಮಟ್ಟ ಕನಿಷ್ಠ ಮಟ್ಟಕ್ಕೆ ಇಳಿದು ರಾಜ್ಯದಲ್ಲಿ ತೀವ್ರ ವಿದ್ಯುತ್ ಅಭಾವ ತೋರಿತ್ತು. ಸುಮಾರು ರೂ.3000 ಕೋಟಿ ಹೆಚ್ಚುವರಿ ವಿದ್ಯುತ್ ಖರೀದಿಸಿ ಈ ವಿದ್ಯುತ್ ಕ್ಷಾಮವನ್ನು ನಾವು ಸಮರ್ಥವಾಗಿ ಎದುರಿಸಿದೆವು.

54. ಈ ವರ್ಷ ಭಗವಂತನ ಕೃಪೆಯಿಂದ ಜುಲೈ ತಿಂಗಳಲ್ಲಿ ಸಂತಸ ತರುವ ರೀತಿಯಲ್ಲಿ ರಾಜ್ಯದಲ್ಲಿ ಮಳೆಯಾಗಿ ಜಲಾಶಯಗಳಿಗೆ ಹೆಚ್ಚು ಪ್ರಮಾಣದಲ್ಲಿ ನೀರು ಹರಿದು ಬಂದಿದೆ. ಬಹಳಷ್ಟು ಜಲಾಶಯಗಳು ತುಂಬಿವೆ, ಇಲ್ಲ ತುಂಬುತ್ತಿವೆ.

55. ಲಿಂಗನಮಕ್ಕಿಯಲ್ಲಿ ಕಳೆದ 10 ವರ್ಷದಲ್ಲಿಯೇ ಅತಿ ಹೆಚ್ಚು ನೀರು ಸಂಗ್ರಹವಾಗಿದ್ದು ಇದರಿಂದ ನಮ್ಮ ವಿದ್ಯುತ್ ಸಮಸ್ಯೆ ಬಹಳಷ್ಟು ಮಟ್ಟಿಗೆ ನೀಗಲಿದೆ ಎಂದು ನಿರೀಕ್ಷಿಸಲಾಗಿದೆ.

56. ನಮ್ಮ ಎಲ್ಲ ಉಷ್ಣ ಸ್ಥಾವರಗಳಲ್ಲಿ ಸಾಕಷ್ಟು ಪ್ರಮಾಣದ ಕಲ್ಲಿದ್ದಲು ದಾಸ್ತಾನು ಮಾಡಲಾಗಿದೆ. ಕರ್ನಾಟಕ ವಿದ್ಯುತ್ ನಿಗಮದ ಕೇಂದ್ರಗಳು ಶೇ. 95 ರಷ್ಟು ಕಾರ್ಯಕ್ಷಮತೆಯಲ್ಲಿ ಕೆಲಸ ಮಾಡುತ್ತಿವೆ.

57. ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆ ನೀಡಿದಂತೆ ನಮ್ಮ 5 ವರ್ಷದ ಅವಧಿಯಲ್ಲಿ 5000 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸುವತ್ತ ದಾಪುಗಾಲು ಹಾಕುತ್ತಿದ್ದೇವೆ. ಕಳೆದ ವರ್ಷ ಸುಮಾರು 1000 ಮೆಗಾವ್ಯಾಟ್ ವಿದ್ಯುತ್ ಸಾಮರ್ಥ್ಯವನ್ನು ಹೊಸದಾಗಿ ಸೇರಿಸಿದ್ದೇವೆ. ಈ ವರ್ಷ ಇನ್ನೂ ಸುಮಾರು 1300 ಮೆಗಾವ್ಯಾಟ್ ಹೆಚ್ಚುವರಿ ಸಾಮರ್ಥ್ಯವನ್ನು ವಿದ್ಯುತ್ ಜಾಲಕ್ಕೆ ಸೇರಿಸಲಿದ್ದೇವೆ.

58. ಕಳೆದ ಅಕ್ಟೋಬರ್ 2008ರಲ್ಲಿ ಶಂಕುಸ್ಥಾಪನೆ ಮಾಡಿದ 2 ಸೋಲಾರ್ ಪವರ್ ಸ್ಟೇಷನ್‌ಗಳಲ್ಲಿ ಈ ವರ್ಷದ ಅಕ್ಟೋಬರ್ ತಿಂಗಳಿಂದ 6 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಪ್ರಾರಂಭಿಸ ಲಾಗುವುದು. ಇಡೀ ದೇಶದಲ್ಲಿಯೇ ಸೌರ ಶಕ್ತಿಯಿಂದ ಇಷ್ಟೊಂದು

ದೊಡ್ಡ ಪ್ರಮಾಣದಲ್ಲಿ ಉತ್ಪಾದನೆ ಮಾಡುತ್ತಿರುವುದು ಇದೇ ಮೊದಲಾಗಿದೆ.

59. ಕೆ.ಪಿ.ಸಿ.ಎಲ್. ಮುಖಾಂತರ ರಾಯಚೂರು, ಬಳ್ಳಾರಿ ಮತ್ತು ಛತ್ತೀಸ್ ಗಢಗಳಲ್ಲಿ ವಿದ್ಯುತ್ ಕೇಂದ್ರಗಳನ್ನು ಸ್ಥಾಪಿಸುವ ಕಾರ್ಯ ಚುರುಕಾಗಿ ನಡೆಯುತ್ತಿದೆ. ಈ ದಿಶೆಯಲ್ಲಿ ಈಗಾಗಲೇ ಪವರ್ ಪೈನಾನ್ಸ್ ಕಾರ್ಪೋರೇಷನ್ ಮುಖಾಂತರ ರೂ.7,046 ಕೋಟಿ ಸಾಲ, ಇಂಡಸ್ಟ್ರೀಯಲ್ ಪೈನಾನ್ಸ್ ಕಾರ್ಪೋರೇಷನ್ ಆಫ್ ಇಂಡಿಯಾ ಮುಖಾಂತರ ರೂ.683 ಕೋಟಿ ಷೇರು ಬಂಡವಾಳ ಮತ್ತು ವಿವಿಧ ಬ್ಯಾಂಕುಗಳ ಮುಖಾಂತರ ರೂ.843 ಕೋಟಿ ಸಾಲ ಮಂಜೂರಾಗಿದೆ.

60. ಭಾರತ ಸರ್ಕಾರದ ನಿಗಮದ ಬಿ.ಹೆಚ್.ಇ.ಎಲ್. ಜೊತೆ ಜಂಟಿಯಾಗಿ ರಾಯಚೂರು ಪವರ್ ಕಾರ್ಪೋರೇಷನ್ ಎಂಬ ಒಂದು ಉಪ ಸಂಸ್ಥೆಯನ್ನು ರಚಿಸಲಾಗಿದೆ.

61. ಛತ್ತೀಸ್ ಗಢದಲ್ಲಿ ಅತ್ಯಂತ ಆಧುನಿಕ ತಂತ್ರಜ್ಞಾನವನ್ನು ಬಳಸಿ ಎಲ್. ಅಂಡ್ ಟಿ. ಸಹಭಾಗಿತ್ವದಲ್ಲಿ ವಿದ್ಯುತ್ ಕೇಂದ್ರ ಸ್ಥಾಪಿಸುವುದಕ್ಕಾಗಿ ಭೂ ಸ್ವಾಧೀನ ಪ್ರಕ್ರಿಯೆ ಪ್ರಾರಂಭವಾಗಿದೆ.

62. ಬಿಜಾಪುರ ಜಿಲ್ಲೆ ಕೂಡ್ಗಿಯಲ್ಲಿ ಎನ್.ಟಿ.ಪಿ.ಸಿ. ಮುಖಾಂತರ 4000 ಮೆಗಾವ್ಯಾಟ್ ವಿದ್ಯುತ್ ಸ್ಥಾವರ ಸ್ಥಾಪನೆಗೆ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭವಾಗಿದೆ.

63. ಮಹಾರಾಷ್ಟ್ರದ ಧಬೋಲ್‌ನಿಂದ ಬೆಂಗಳೂರಿಗೆ ಗ್ಯಾಸ್ ಪೈಪ್‌ಲೈನ್ ಹಾಕುವ ಪ್ರಕ್ರಿಯೆಗೆ ಕೇಂದ್ರ ಸರ್ಕಾರದ ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಸಂಸ್ಥೆ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಇದರಿಂದ ಬೆಂಗಳೂರು ಬಳಿ ಅಲ್ಲದೆ ಮಾರ್ಗ ಮಧ್ಯದಲ್ಲಿ ವಿವಿಧೆಡೆ ಗ್ಯಾಸ್ ಆಧಾರಿತ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಲು ಸಾಧ್ಯವಾಗುವುದು.

64. ಒಟ್ಟಿನಲ್ಲಿ ನಾವು ಆಶ್ವಾಸನೆ ನೀಡಿದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದಿಸಲು ನಮ್ಮ ಸರ್ಕಾರ ಎಲ್ಲ ಸಿದ್ಧತೆಗಳನ್ನು ಮತ್ತು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

65. ಬಹು ದಿನಗಳಿಂದ ನನೆಗುದಿಗೆ ಬಿದ್ದಿದ್ದ ಶಿವನಸಮುದ್ರಂ ಜಲ ವಿದ್ಯುತ್ ಯೋಜನೆಯ ಅನುಷ್ಠಾನಕ್ಕೆ ತೀವ್ರ ಚಾಲನೆ ನೀಡಿ ಭಾರತ ಸರ್ಕಾರ ದಿಂದ ಪ್ರಾಥಮಿಕ ಅನುಮತಿ ಪಡೆದುಕೊಳ್ಳಲಾಗಿದೆ.

66. ಹಾಸನ ಜಿಲ್ಲೆಯಲ್ಲಿ ಗುಂಡ್ಯಾ ಜಲವಿದ್ಯುತ್ ಯೋಜನೆಗೂ ಶಂಕುಸ್ಥಾಪನೆ ನಡೆಸಲಾಗಿದ್ದು ಶೀಘ್ರದಲ್ಲಿ ಕೆಲಸ ಪ್ರರಂಭವಾಗಲಿದೆ.

67. ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನೆಗೂ ಹೆಚ್ಚಿನ ಪ್ರೋತ್ಸಾಹ ನೀಡಿದೆ.

ಬೆಂಗಳೂರು ಅಭಿವೃದ್ಧಿಗೆ ತೀವ್ರ ಚಾಲನೆ :

68. ಅಂದು ನಾಡಪ್ರಭು ಕೆಂಪೇಗೌಡರು ಕಟ್ಟಿದ ಬೆಂಗಳೂರು ಇಂದು ಜಾಗತೀಕ ನಗರವಾಗಿ ಬೃಹದಾಕಾರವಾಗಿ ಬೆಳೆಯುತ್ತಿದೆ.

69. ನೂರಾರು ಅಂತರರಾಷ್ಟ್ರೀಯ ಕಂಪನಿಗಳ ಹಾಗೂ ಐ.ಟಿ.ಬಿ.ಟಿ. ಕೈಗಾರಿಕೆಗಳ ಉಗಮ ಸ್ಥಾನವಾಗಿ ಮತ್ತು ಅಭಿವೃದ್ಧಿ ತಾಣವಾಗಿ ಏಷಿಯಾ ಖಂಡದಲ್ಲಿಯೇ ಅತಿ ವೇಗದಲ್ಲಿ ಬೆಳೆಯುವ ಮಹಾನಗರ ನಮ್ಮ ಬೆಂಗಳೂರು.

70. ಆದರೆ ಕಳೆದ ಎರಡು ಮೂರು ದಶಕಗಳಲ್ಲಿ ನಗರದ ಬೆಳವಣಿಗೆಯ ವೇಗಕ್ಕೆ ಹಾಗೂ ಜನರ ಆಶೋತ್ತರಗಳಿಗೆ ತಕ್ಕಂತೆ ಇಲ್ಲಿನ ರಸ್ತೆಗಳು ಮೇಲುಸೇತುವೆಗಳು, ಸಮೂಹ ಸಾರಿಗೆ ಸೌಲಭ್ಯಗಳು, ನೀರು ಮತ್ತು ಒಳಚರಂಡಿ ವ್ಯವಸ್ಥೆಗಳು. ಉದ್ಯಾನವನಗಳು ಮತ್ತು ಕೆರೆಗಳು ಅಭಿವೃದ್ಧಿಯಾಗಲಿಲ್ಲ.

71. ದೂರದೃಷ್ಟಿ ಮತ್ತು ಇಚ್ಛಾಶಕ್ತಿಯ ಕೊರತೆಯಿಂದಾಗಿ ಈ ನಗರದಲ್ಲಿ ಜನದಟ್ಟಣೆ ಮತ್ತು ವಾಹನದಟ್ಟಣೆ ಸಮಸ್ಯೆಗಳು ಹಿರಿದಾಗಿ ಬೆಳೆದು ಮೂಲಸೌಲಭ್ಯಗಳ ಕೊರತೆ ಎದ್ದು ಕಾಣುತ್ತಿದೆ.

72. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ನಾವು ನಮ್ಮ ರಾಜಧಾನಿಯ ಅಭಿವೃದ್ಧಿಗೆ ವಿಶೇಷ ಗಮನ ಹರಿಸಿ ನನ್ನ ಅಧ್ಯಕ್ಷತೆಯಲ್ಲಿ ನಗರದ ತಜ್ಞರು ಮತ್ತು ಗಣ್ಯರನ್ನು ಒಳಗೊಂಡಂತೆ ABIDe (ಅಜೆಂಡಾ ಫಾರ್ ಬೆಂಗಳೂರು ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್) ಎಂಬ **ಕಾರ್ಯಪಡೆಯನ್ನು** ರಚಿಸಲಾಯಿತು.

73. ಈ ಕಾರ್ಯಪಡೆ ಎಲ್ಲ ವರ್ಗಗಳ ಜನರು ಮತ್ತು ಪರಿಣಿತರ ಸಲಹೆ ಪಡೆದು ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಯೋಜನೆಗಳನ್ನು ರೂಪಿಸಿದೆ.

74. ನಮ್ಮ ಬೆಂಗಳೂರಿನ ಜನರು ನೆಮ್ಮದಿಯ ಬಾಳು ಬಾಳಲು ನನ್ನದೇ ಆದ ಒಂದು ಕನಸನ್ನು ಇಟ್ಟುಕೊಂಡಿದ್ದೇನೆ.

75. ನನ್ನ ಕನಸಿನ ಬೆಂಗಳೂರು

ನನ್ನ ಕನಸಿನ ಬೆಂಗಳೂರಲಿ
ದಿನ ದಿನವೂ ನಸುಕಿನಲೆ
ಕಸವೆಲ್ಲ ದೂರ ಸಾಗಿ ರಸವಾಗಬೇಕು
ಬೀದಿ-ಬೀದಿಗಳೂ
ಸ್ವಚ್ಛತೆಯ ಬಿಂಬಿಸಬೇಕು

ಮನೆ ಮನೆಯಲ್ಲೂ,
ನಳ ತಿರುವಿದರೆ ಸಾಕು
ಜುಳು-ಜುಳು ನೀರು ಧುಮುಕಬೇಕು
ಸ್ವಿಚ್ ಹಾಕಿದರೆ ಸಾಕು
ವಿದ್ಯುತ್ ದೀಪ ಚಮಕಬೇಕು

ನಡೆದ ದೂರದಲೆ
ಮಕ್ಕಳಿಗೆ ಶಾಲೆ – ಮೈದಾನಗಳು
ಯುವಕರಿಗೆ ಮನರಂಜನೆ ಸ್ಥಳಗಳು
ಕಲೋಪಾಸಕ್ತರಿಗೆ ಸಾಂಸ್ಕೃತಿಕ ಕೇಂದ್ರಗಳು
ವೃದ್ಧರಿಗೆ ಪಾರ್ಕುಗಳು ತಲೆ ಎತ್ತಬೇಕು
ಐ.ಟಿ. – ಬಿ.ಟಿ. ಟೆಕ್ಕಿಗಳಿಗೆ
ನಗರದೆಲ್ಲೆಡೆ ವೈಫೈ ಜಾಲ ಹಬ್ಬಿರಬೇಕು

ಪ್ರತಿ ಬಡಾವಣೆಯೂ
ಉದ್ಯಾನವನದ ಬೀಡಾಗಬೇಕು
ಪ್ರತಿ ಕೆರೆಯೂ
ವಿಹಾರದ ಸಂಗಮವಾಗಬೇಕು

ನಗರದ ಉದ್ದಗಲಕ್ಕೂ
ಮೆಟ್ರೋ – ಮೋನೋಗಳು
ಮನೆ ಮಾತಾಗಬೇಕು

ವಾಹನ ದಟ್ಟಣೆಗೆ
ಜನ – ತಾನೇ ಕಡಿವಾಣ ಹಾಕಬೇಕು
ಪಾದಚಾರಿಗಳು ಸುಗಮವಾಗಿ ಸಾಗಬೇಕು
ಅಪಾಯದ ಅಂಜಿಕೆಯಿಲ್ಲದೇ
ರಸ್ತೆ ದಾಟಬೇಕು
ಕೊಳಚೆ ಪ್ರದೇಶಗಳು
ಭರದಲ್ಲಿ ಬದಲಾವಣೆಯಾಗಬೇಕು
ಬಡವರ ಸುಂದರ ತಾಣವಾಗಬೇಕು

ನನ್ನ ಕನಸಿನ ಬೆಂಗಳೂರಲಿ
ಮಧ್ಯರಾತ್ರಿಯೂ ಮಹಿಳೆಯು
ನಿರ್ಭಯವಾಗಿ ಮನೆ ತಲುಪಬೇಕು
ಸರ್ವರೂ ನೆಮ್ಮದಿಯ
ಬಾಳ – ಬಾಳಬೇಕು

ಶ್ರೀ ವೆಂಕಟರಾವ್ ನಾಡಗೌಡ (ಸಿಂಧನೂರು) : ಮಾನ್ಯ ಅಧ್ಯಕ್ಷರೆ, ಈ ವಿಧೇಯಕವನ್ನು ಕೃಷಿ ಸಚಿವರು ಮಂಡಿಸುವಾಗ Indian Council of Agriculture Research (ICAR) ಬಗ್ಗೆ ರೆಫರ್ ಮಾಡಿದರು. ಈ ಐ.ಸಿ.ಎ.ಆರ್. ರವರು Government of India ದಲ್ಲಿ ಏನು suggestion ಕೊಟ್ಟಿದ್ದಾರೆ, ನನಗೆ ತಿಳಿದ ಮಟ್ಟಿಗೆ, it is under the consideration of Government of India. ಅದು ಅಲ್ಲಿ consider ಆಗಿಲ್ಲ. ಕೇಂದ್ರದ ಕೃಷಿ ಸಚಿವರಾದ ಶ್ರೀ ಶರದ್‌ಪವಾರ್ ರವರು ಇದ್ದು ಅವರ ರಾಜ್ಯವಾದ ಮಹಾರಾಷ್ಟ್ರದಲ್ಲೇ ಇದು ಇನ್ನು implement ಆಗಿಲ್ಲ. ಈ ಐ.ಸಿ.ಎ.ಆರ್.ನ್ನು ರೆಫರ್ ಮಾಡಿ ಇವತ್ತು ಈ ಕಾಯಿದೆಗೆ ಸಮಗ್ರವಾಗಿ ತಿದ್ದುಪಡಿಯನ್ನು ತರಲು ಹೊರಟಿದ್ದಾರೆ. ಇದರಲ್ಲಿ ಮೂಲಭೂತವಾಗಿ ಅಧಿಕಾರಿಗಳು ತಮ್ಮ ಬಲವನ್ನು ಹೆಚ್ಚಿಸಿಕೊಂಡು non-officials ನ್ನು ಕಡಿಮೆ ಮಾಡುವುದಕ್ಕೆ ಅವಕಾಶ ಮಾಡಿದ್ದಾರೆ. ಅದರಲ್ಲೂ ರೈತರು, non-officials ಯಾರೂ ಇರಬಾರದು ಎಂದು 6 ಮತ್ತು 6 ಇದ್ದದನ್ನು 15 ಮತ್ತು 6 ಕ್ಕೆ ತಂದಿದ್ದಾರೆ. ನೀವು ಅಧಿಕಾರಿಗಳನ್ನು 6 ಬಿಟ್ಟು 10 ಮಾಡಿಕೊಳ್ಳಿ. ಅದರ ಜೊತೆಗೆ ರೈತರನ್ನೂ 10 ಮಾಡಿ. ಅದಕ್ಕೆ ನಮ್ಮ ತಕರಾರೇನಿಲ್ಲ. ಇಲ್ಲದಿದ್ದರೆ ಈ ಮೊದಲು ಏನು 1963 ರ Act ನಲ್ಲಿತ್ತು ಅದನ್ನಾದರು maintain ಮಾಡಿ. ಮೊದಲು ಇದ್ದ Act ನಲ್ಲಿ ಕಾರ್ಯದರ್ಶಿ ಅಥವಾ ಜಂಟಿ ಕಾರ್ಯದರ್ಶಿಗಿಂತ ಕಡಿಮೆ ಇಲ್ಲದ ಅಧಿಕಾರಿ ಎಂದು ಇತ್ತು. ಅಲ್ಲಿ ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಅಥವಾ ಕಾರ್ಯದರ್ಶಿಗಳು ಅಥವಾ ಇಲಾಖೆ ಅಥವಾ ಉಪಕಾರ್ಯದರ್ಶಿಗಳು ಎಂದು ಮಾಡಿದ್ದಾರೆ. ಅಂದರೆ, ಜಂಟಿ

ಕಾರ್ಯದರ್ಶಿಗಳು ತೆಗೆದು ಉಪಕಾರ್ಯ ದರ್ಶಿಗಳನ್ನು ಮಾಡುತ್ತಾರೆ. ಉಪಕಾರ್ಯದರ್ಶಿಗಳು ಅಲ್ಲಿ ಹಿರಿಯ ಅಧಿಕಾರಿಗಳ ಮುಂದೆ ಮಾತನಾಡುವಂತಿಲ್ಲ, ನೋಡುವಂತಿಲ್ಲ. ಈ ಹಿಂದಿನ ದಾಖಲೆಗಳನ್ನು ನೋಡಿದರೆ ಈ ಅಧಿಕಾರಿಗಳು ಎಂದಿಗೂ ಹೋಗಿಲ್ಲ. ಹೋಗುವುದೂ ಇಲ್ಲ. ಯಾವಾಗ ಅವಶ್ಯಕತೆ ಇರುತ್ತದೋ ಅವತ್ತು ಹೋಗಿ ಮಾಡಿ ಮುಗಿಸಿಬರುತ್ತಾರೆ. ಆ ರೀತಿಯಾಗಿ ಅವರನ್ನು 15 ಮತ್ತು 6 ಮಾಡುವುದ ಬದಲು ನಮ್ಮನ್ನಾದರೂ ಕಳುಹಿಸಿದರೆ ನಾವು ಅಲ್ಲಿ ಹೋಗಿ ಚರ್ಚೆಯಾದರು ಮಾಡುತ್ತೇವೆ. ಡೀನ್ ಮತ್ತು ಇತರ ಹಿರಿಯ ಅಧಿಕಾರಿಗಳನ್ನು ಆಡಳಿತ ಮಂಡಳಿಯವರೇ ನೇಮಕ ಮಾಡುತ್ತಾರೆ. ಅಂತವರನ್ನು ಮತ್ತೆ ಅದರ ಸದಸ್ಯರನ್ನಾಗಿ ಮಾಡುತ್ತಾರೆ. ಯಾರು ಆಡಳಿತ ಮಂಡಳಿಯಿಂದ ನೇಮಕವಾಗಿದ್ದಾರೆ ಅವರು ಆಡಳಿತ ಮಂಡಳಿಯಲ್ಲಿ ಅದಸ್ಯರಾಗಿ ಬಂದು ಕುಳಿತುಕೊಳ್ಳುವುದು ಎಷ್ಟು ಸಮಂಜಸ? ಎಜಿಸ್ಟ್ರಾರ್ ಇರಬಹುದು, ಡೀನ್ ಇರಬಹುದು ಅವರೆಲ್ಲಾ appointed by the Board. ಆ ರೀತಿ ಬೋರ್ಡ್‌ನಲ್ಲಿ appoint ಆಗಿರುವವರೇ ಮತ್ತೆ ಇಲ್ಲಿ Member ಮಾಡುವುದಕ್ಕೆ ಅವಕಾಶ ಮಾಡಿದ್ದಾರೆ. ಈ ರೀತು ಹತ್ತು ಹಲವು ನ್ಯೂನತೆಗಳಿದೆ. ಕರ್ನಾಟಕ ಕೃಷಿ ವಿಶ್ವವಿದ್ಯಾನಿಲಯಗಳ ಅಧಿನಿಯಮ 63ರ ಅಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾನಿಲಯದ ಉಪಕುಲಪತಿಗಳ ಪದವನ್ನು ಧಾರಣ ಮಾಡುವ ವ್ಯಕ್ತಿ ಒಬ್ಬರೆ, ತಮಗಷ್ಟೆ ಇಟ್ಟುಕೊಂಡರು. ಈ ಮೊದಲು ಕುಲಪತಿಗಳು ಮತ್ತು ಆಡಳಿತ ಮಂಡಳಿ ಎಂದು ಇತ್ತು. ಆಡಳಿತ ಮಂಡಳಿಯನ್ನು ತೆಗೆದುಹಾಕಿದರು. ಏಕೆ? ಆಡಳಿತ ಮಂಡಳಿ ಇರಬಾರದೇ? ಈ ರೀತಿಯ ನ್ಯೂನತೆಗಳನ್ನು ಬೇಕಾದಷ್ಟು ಮಾಡಿದ್ದಾರೆ. ಆದ್ದರಿಂದ ಈ ವಿಧೇಯಕ ಇವತ್ತು ಏಕೆ ಮಂಡನೆಯಾಗಿದೆಯೆಂದರೆ, ಹೊಸ ಕೃಷಿ ವಿಶ್ವವಿದ್ಯಾನಿಲಯ ರಾಯಚೂರಿನಲ್ಲಿ ಆಗುತ್ತಿದೆ. ಅದಕ್ಕೆ ತಿದ್ದುಪಡಿಗಳನ್ನು ಮಾಡಬೇಕಾದ ಅವಶ್ಯಕತೆ ಇದೆ. ಅಷ್ಟಕ್ಕೇ ಬೇಕಾದರೆ ತಿದ್ದುಪಡಿಗಳನ್ನು ಮಾಡಿಕೊಳ್ಳಲಿ. ಉಳಿದ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಿ ಮಾಡಿಕೊಳ್ಳಲಿ. ಇಲ್ಲಾ ಈ ಮೊದಲು ಇದ್ದ 1964ರ Act ಪ್ರಕಾರವೇ ಮಾಡುತ್ತೇವೆಂದರೆ ನಾವೇನು ಚರ್ಚೆ ಮಾಡುವುದಿಲ್ಲ. 63ರ Act ನಲ್ಲಿ ಏನೇನು ನ್ಯೂನತೆಗಳಿವೆ, ಏಕೆ ಇದರ ಬದಲಾವಣೆಯಾಗುತ್ತಿದೆ, ಇಂಥ ಕಾರಣಕ್ಕೆ ಇದನ್ನು ತಿದ್ದುಪಡಿ ಮಾಡುತ್ತಿದ್ದೇವೆ ಎನ್ನುವ ಬಗ್ಗೆ ಸಚಿವರು ಬೆಳಕು ಚೆಲ್ಲಬೇಕು. ಐ.ಸಿ.ಎ.ಆರ್, ಅನ್ನು ರೆಫರ್ ಮಾಡಿ ಅಧಿಕಾರಿಗಳ

ಕೈಯಲ್ಲಿ ಎಲ್ಲವನ್ನು ಮಾಡಿಸುವುದು ಎಷ್ಟು ಸಮಂಜಸ ಎಂಬ ಬಗ್ಗೆ ಯೋಚನೆ ಮಾಡಬೇಕು. ಈ ನಿಟ್ಟಿನಲ್ಲಿ ಇದರ ಬಗ್ಗೆ ಇನ್ನೊಂದು ಸಲ ಆಲೋಚನೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಹೇಳಬ ಯಸುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ (ಶಿರಾ) : ಮಾನ್ಯ ಅಧ್ಯಕ್ಷರೆ, ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾನಿಲಯ ವಿಧೇಯಕವನ್ನು ಮಾನ್ಯ ಸಚಿವರು ಸದನದ ಒಪ್ಪಿಗೆ ಗೋಸ್ಕರ ಮಂಡಿಸಿದ್ದಾರೆ. ಅವರು ಮಂಡಿಸುವಾಗ ಯಾವ ಉದ್ದೇಶಕ್ಕೋಸ್ಕರ ಈ ಮಸೂದೆಯನ್ನು ಮಂಡನೆ ಮಾಡಿದ್ದೇವೆಂದು ಹೇಳುವಾಗ ಅವರು ಆಧರಿಸಿರತಕ್ಕದ್ದು ಭಾರತೀಯ ಕೃಷಿ ಸಂಶೋಧನಾ ಪರಿಷತ್ತಿನವರು 9-2-1995 ರಂದು ಒಂದು ಮಾದರಿ ಕೃಷಿ ವಿಶ್ವವಿದ್ಯಾನಿಲಯ ವಿಧೇಯ ಕವನ್ನು ಕಳುಹಿಸಿಕೊಟ್ಟಿದೆ. 15 ವರ್ಷಗಳ ಹಿಂದೆ ಇದನ್ನು ಕಳುಹಿಸಿಕೊಟ್ಟಿದೆ. 2008ರಲ್ಲಿ ಒಂದು ಪರಿಷ್ಕೃತ ಮಾದರಿಯನ್ನೂ ಕಳುಹಿಸಿಕೊಟ್ಟಿದೆ. ಅದನ್ನು ಆಧರಿಸಿ ಈ ವಿಧೇಯಕಕ್ಕೆ ಸದನದ ಒಪ್ಪಿಗೆಗೆ ತಂದಿದ್ದೇವೆಂದು ಹೇಳುತ್ತಾರಲ್ಲಾ, ಒಂದು ಮಾತನ್ನು ನಾನು ಮಾನ್ಯ ಸಚಿವರಲ್ಲಿ ಕೇಳಲು ಇಚ್ಛೆಪಡುತ್ತೇನೆ. ಕೃಷಿ ಸಂಶೋಧನಾ ಪರಿಷತ್ ಅದು ಒಂದು ಸಂಸ್ಥೆಯೇ? ಅದು ಯಾವ ರೀತಿಯಾದ ಸಂಸ್ಥೆ? ಅದಕ್ಕೆ ಏನಾದರು statute ಇದೆಯೇ? ಜವಾಬ್ದಾರಿಕೆ ಇದೆಯೇ? ಎನ್ನುವ ವಿಚಾರಗಳನ್ನು ನೀವು ಅರ್ಥಮಾಡಿ ಕೊಂಡಿದ್ದರೆ ಬಹುಶಃ ಈ ಸದನದ ಮುಂದೆ ಈ ರೀತಿಯ ತಪ್ಪು ಹೇಳಿಕೆಯನ್ನು ನೀವು ಮಾಡುತ್ತಿರಲಿಲ್ಲ. ಮಾನ್ಯ ಸದಸ್ಯರ ಗಮನಕ್ಕೆ ಒಂದು ವಿಷಯವನ್ನು ನಾನು ತರುತ್ತೇನೆ. Indian Council of Agriculture Research (ICAR) – September 23, 2008, ಅವರು ಕಳುಹಿಸಿಕೊಟ್ಟಿ ರುವುದು ಯಾವ ಉದ್ದೇಶಕ್ಕೋಸ್ಕರ ಅಂದರೆ: Indian Council of Agriculture Research (ICAR), New Delhi has revised the ICAR Model Act for Agriculture Universities in India. Any comments, suggestions of the Vice Chancellors of the Agricultural Universities on the revised draft are welcome and you may be communicated to the following within 15 days.

(ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಅವರು Vice Chancellorಗಳನ್ನು 1995 ರಲ್ಲಿ ತಂದಿದ್ದೇವೆ, ಈ 2000 ರಲ್ಲಿ ಮಾಡಿಫೈ ಮಾಡಿ ತರಬೇಕು ಎಂದು ಉದ್ದೇಶ ಮಾಡಿದ್ದೇವೆ, ಅದಕ್ಕೆ ನಿಮ್ಮ ಕಾಮೆಂಟ್ಸ್ ಕೊಡಿಯೆಂದು ಅವರು ಕೇಳಿದರೆ ನೀವು ಕಾಮೆಂಟ್ಸ್ ಬಿಟ್ಟು ಬದಲಾವಣೆ ಮಾಡಲು ಹೊರಟುಬಿಟ್ಟಿರಿ. ಕೇಂದ್ರ ಕೃಷಿ ಸಚಿವರಾದ ಶ್ರೀ ಶರದ್ ಪವಾರ್. ಅವರು ಮಹಾರಾಷ್ಟ್ರದವರು. ಇವತ್ತು ಕೃಷಿಯಲ್ಲಿ ಕ್ರಾಂತಿಯನ್ನು ಮಾಡಿರುವಂಥ ಮಹಾರಾಷ್ಟ್ರದಂಥ ರಾಜ್ಯದಲ್ಲೇ ಈ ರೀತಿಯಾದ ವಿಧೇಯಕವನ್ನು ತರಲಿಲ್ಲ, ಪಾಸ್ ಮಾಡಲಿಲ್ಲ. ಈ ದೇಶದಲ್ಲಿ ಯಾವ ರಾಜ್ಯದಲ್ಲೂ ಈ ವಿಧೇಯಕವನ್ನು ಪಾಸ್ ಮಾಡಿದಂಥ ಸಂದರ್ಭ ಇಲ್ಲ.

ಶ್ರೀ ಬಿ.ಎಸ್.ಬಚ್ಚೇಗೌಡ : ಮಾಡಬಾರದೆಂದೂ ಸಹ ಇಲ್ಲ.

ಶ್ರೀ ಟಿ.ಬಿ.ಜಯಚಂದ್ರ : ತಮ್ಮ ಬಾಯಿಯಲ್ಲಿ ಈ ರೀತಿ ಮಾತು ಬರಬಾರದು. ಅವರು ನಿಮಗೆ ಇದರ ಬಗ್ಗೆ ಸಲಹೆಗಳನ್ನು ಕೊಡಿಯೆಂದು ಕೇಳಿದರೆ ವಿನಹಃ ವಿಧೇಯಕ ಮಾಡಿ ಎಂದಿಲ್ಲ. ಈ ವಿಧೇಯಕದಿಂದ ಲಾಭವೇನು ಎನ್ನತಕ್ಕದ್ದು, ನಾನೂ ಕೃಷಿ ಸಚಿವನಾಗಿದ್ದಾಗ ಇದೇ ಸಮಸ್ಯೆ ನಮ್ಮ ಮುಂದೆ ಬಂತು. ಆ ಸಂದರ್ಭದಲ್ಲೂ ಕೂಡ ವಿಶ್ವವಿದ್ಯಾನಿಲಯದ ಅಧಿಕಾರಿಗಳು ನಾವು New model Act ಪ್ರಕಾರ ಪಾಸ್ ಮಾಡಿಬಿಟ್ಟರೆ ನೂರಾರು ಕೋಟಿ ಹಣ ಬರುತ್ತದೆ ಎನ್ನತಕ್ಕ ರೀತಿಯಲ್ಲಿ ಮಾಹಿತಿ ಹೇಳಿದ್ದರು. ನಾವಿದ್ದಾಗ ಆ ರೀತಿ ಇತ್ತು. ಆದರೆ, ನಿಮ್ಮ ಕಾಲದಲ್ಲಿ ನೂರಾರು, ಸಾವಿರಾರು ಕೋಟಿ ಬರುವಂತಿದ್ದರೆ, ನಾವು ಇದುವರೆಗೆ ಐ.ಸಿ.ಎ.ಆರ್. ನಿಂದ ನಮಗೆ ಕೊಟ್ಟಿರುವ ಹಣದ ಪ್ರಮಾಣ 5–6 ಕೋಟಿ ಮೀರುವುದಿಲ್ಲ. ಅದೇ ಇನ್ನು ಅಂತಿಮ ತೀರ್ಮಾನವಾಗಿಲ್ಲ, ಆದರೆ, ನೀವು ಆಗಲೇ ಬದಲಾವಣೆ ಮಾಡುವುದಕ್ಕೆ ಹೊರಟಿದ್ದೀರಲ್ಲಾ? ನಿಮ್ಮ ಹಳೆಯ Act 1963 ಏನಿತ್ತು ಒಳ್ಳೆಯ ರೀತಿಯಿಂದ ಚರ್ಚೆ ಮಾಡಿ. ನಾವು ಕೃಷಿಯಲ್ಲಿ, ಇವತ್ತು ಕೃಷಿ ವಿಶ್ವವಿದ್ಯಾನಿಲಯ ಸಾಕಷ್ಟು ರೀತಿಯಲ್ಲಿ ಪ್ರಗತಿ ಮಾಡುವುದಕ್ಕೆ ಸಾಧ್ಯವಾಗಿದೆ.

ಅದು ಕೇವಲ ವಿಶ್ವವಿದ್ಯಾನಿಲಯಗಳಲ್ಲಿ ಬೋಧನೆಯಲ್ಲ, extension ಕೂಡ ಇದೆ, ಸಂಶೋಧನೆಗೂ ಕೂಡ ಇದೆ. ಅದೆಲ್ಲವನ್ನೂ ಕೂಡ ಸಮರ್ಪಕವಾಗಿ ಮಾಡಿಕೊಂಡು ಇವತ್ತು ಧಾರವಾಡ ವಿಶ್ವವಿದ್ಯಾನಿಲಯ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯ ಇಡೀ ರಾಷ್ಟ್ರದಲ್ಲಿ No.1

ಮತ್ತು 2ನೇ ಸ್ಥಾನದಲ್ಲಿ ಇರತಕ್ಕ ವಿಶ್ವವಿದ್ಯಾನಿಲಯಗಳಾಗಿವೆ. ಆದರೆ ಇವತ್ತು ಆ ವಿಶ್ವವಿದ್ಯಾನಿಲಯಗಳ Act ನಲ್ಲಿ ನೀವು ಬದಲಾವಣೆ ಮಾಡಬೇಕೆಂದು ಹೊರಟಿದ್ದೀರಿ. ಇದು ಇವತ್ತೇನಲ್ಲ, ಈಗಾಗಲೇ ಸುಮಾರು 4-5 ತಿಂಗಳುಗಳಿಂದ ಈ Act ಅನ್ನು ತರಬೇಕು ಅನ್ನುವಂತಾದ್ದು ಇತ್ತು. ಅದರ ಉದ್ದೇಶ ಏನು ಎನ್ನುವಂಥಾದ್ದು ಎಲ್ಲರಿಗೂ ಗೊತ್ತಿದೆ, ಈಗಾಗಲೇ ಬೆಳಗಾಂನಲ್ಲಿ ಅದನ್ನು ಮಂಡನೆ ಮಾಡಿದ್ದೀರಿ. ಮಂಡನೆ ಮಾಡಿ ಅಲ್ಲಿ ಪಾಸ್ ಆಗುವುದಿಲ್ಲ. ಇವತ್ತು ಇಲ್ಲಿ ತಂದಿದ್ದೀರಿ. ದಯಮಾಡಿ ತಾವು ತಮ್ಮ ಯಾವುದಾದರೂ ವಿಧೇಯಕವನ್ನು ತಂದಾಗ, ಅದರಲ್ಲೂ ಕೃಷಿಗೆ ಸಂಬಂಧಪಟ್ಟ, ಸಂಶೋಧನೆಗೆ ಸಂಬಂಧಪಟ್ಟ, ವಿಶ್ವವಿದ್ಯಾನಿಲಯದ ಒಂದು ಸಮಗ್ರವಾದಂತಹ ವಿಧೇಯಕವನ್ನು ತರಬೇಕಾದಾಗ, ಅದನ್ನು ಸಾರ್ವಜನಿಕವಾಗಿ ಯಾವ ರೀತಿಯಾಗಿ ಜನ receive ಮಾಡಿದ್ದಾರೆ ಎನ್ನುವುದನ್ನು ನೋಡಬೇಕಾಗುತ್ತದೆ. ಈ ಬಗ್ಗೆ ನಾನು ಹೆಚ್ಚು ಹೇಳತಕ್ಕಂಥ ಅವಶ್ಯಕತೆಯಿಲ್ಲ ಎಂದು ಭಾವನೆ ಮಾಡಿದ್ದೇನೆ. ಆದರೂ ಕೂಡ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ನಮ್ಮಲ್ಲಿ ಕೃಷಿ ತಜ್ಞರಿದ್ದಾರೆ, ಪರಿಣಿತರಿದ್ದಾರೆ, ಕೃಷಿ ವಿಜ್ಞಾನಿಗಳಿದ್ದಾರೆ. ಕರ್ನಾಟಕದಲ್ಲಿ ಕೃಷಿಗೋಸ್ಕರ ತ್ಯಾಗ ಮಾಡಿರತಕ್ಕಂಥ ಜನ ಒಬ್ಬರಲ್ಲ, ನೂರಾರು ಜನ ಇರತಕ್ಕದ್ದನ್ನು ನಾವು ನೋಡಿದ್ದೇವೆ. ಇವತ್ತು ಕೃಷಿ ಎನ್ನತಕ್ಕದ್ದು ನಾವು ತಿಳಿದುಕೊಂಡಷ್ಟು ಸುಲಭವಾದಂತಹ subject ಅಲ್ಲ. ಕೃಷಿಯಲ್ಲ ಕ್ರಾಂತಿಯಾಗಬೇಕಾಗಿರತಕ್ಕಂಥ ಹಿನ್ನೆಲೆಯಲ್ಲಿ, ಪ್ರಸಕ್ತ ಸಂದರ್ಭದಲ್ಲಿ ಇವತ್ತು ಕೃಷಿ ಯಾವ ಮಟ್ಟಕ್ಕೆ ಹೋಗಿದೆ ಎಂದು ನೋಡಬೇಕಾಗಿದೆ. ನಮ್ಮ Agriculture production ಇವತ್ತು ಯಾವ ನಾಗಾಲೋಟದಲ್ಲಿ ಬೆಳೆಯಬೇಕಾಗಿತ್ತೋ, ಆ ವೇಗದಲ್ಲಿ ಅದು ಬೆಳೆಯುತ್ತಿಲ್ಲ. ಅದಕ್ಕೆ ಕಾರಣಗಳು ಏನೇ ಇದ್ದರೂ ಕೂಡ, ಇವತ್ತು University ಅದಕ್ಕೆ ಮೂಲಾಧಾರವಾಗಿದೆ. ಇದೆಲ್ಲವನ್ನೂ ಕೂಡ assess ಮಾಡಬೇಕಾದಾಗ ಇವತ್ತು ಆ ವಿಶ್ವವಿದ್ಯಾನಿಲಯಗಳದ್ದೂ ನೋಡಬೇಕಾಗುತ್ತದೆ. ವಿಶ್ವವಿದ್ಯಾನಿಲಯಗಳಲ್ಲಿ ಏನಾದರೂ ತಪ್ಪಿದ್ದು, ಅದರಲ್ಲಿ ಏನಾದರೂ ಸಮಗ್ರ ಬದಲಾವಣೆ ಮಾಡುವುದರಿಂದ ಕೃಷಿಗೆ ಸಹಾಯವಾಗುತ್ತದೆ ಎನ್ನುವುದಾದರೆ ಅದನ್ನು ನಾನೂ ಕೂಡ ಒಪ್ಪುತ್ತಿದ್ದೆ. ಹಳೆಯ Act ನ್ನು ತಲೆ ಮೇಲೆ ಹೊತ್ತಿಕೊಳ್ಳಬೇಕು ಎನ್ನತಕ್ಕಂಥ ಪ್ರಶ್ನೆಯಲ್ಲ. ಇವತ್ತು ಹೊಸ Act ನಲ್ಲಿ ಮಾಡಿರತಕ್ಕಂಥದ್ದು ಏನಿದೆ ಎಂಬ ಬಗ್ಗೆ ಒಂದೆರಡು ಮಾತನ್ನು ಹೇಳುತ್ತೇನೆ.

'ಕೃಷಿ ವಿಶ್ವದ್ಯಾನಿಲಯದ ವಿಧೇಯಕ: ರೈತರ ಕಂಗೆಣ್ಣು' ಇದು ಬೆಳಗಾಂನಲ್ಲಿ ಬಿಲ್ ಮಂಡನೆಯಾದಂತಹ ಸಂದರ್ಭದಲ್ಲಿ ಪತ್ರಿಕೆಯಲ್ಲಿ ಬಂದಂತಹ ಒಂದು comment. ಎಲ್ಲಾ ಪತ್ರಿಕೆಗಳಲ್ಲಿ ವರದಿಯಾಗಿರುವುದನ್ನ ಓದಿ ಹೇಳಬೇಕಾದರೆ ಸಮಯವಾಗುತ್ತದೆ. ಬಹುಶಃ ನಿಮಗೆಲ್ಲಾ ಅದು ಗೊತ್ತಿರುತ್ತದೆ, ಗೊತ್ತಿಲ್ಲವೆಂದಲ್ಲ. ಓದಿ ಹೇಳಬೇಕೆಂದರೆ ನಾನು ಹೇಳುತ್ತೇನೆ. ಇದರಿಂದ ಏನು message ಹೋಗಿದೆ ಎಂದರೆ, "ಈಗಾಗಲೇ ಜಾರಿಯಲ್ಲಿ ಇರತಕ್ಕಂಥ 1963ನೇ ಕಾಯ್ದೆ ರೈತರ ಪರವಾಗಿದ್ದು, ಹೊಸ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾನಿಲಯ ಸ್ಥಾಪನೆ ನೆಪದಲ್ಲಿ ಹೊಸ ಸುಗ್ರೀವಾಜ್ಞೆ ವಿಶ್ವವಿದ್ಯಾನಿಲಯಗಳನ್ನು ಸರ್ಕಾರಿ ಸಂಸ್ಥೆಗಳನ್ನಾಗಿ ಪರಿವರ್ತಿಸಲಾಗುತ್ತಿದೆ ಎಂಬುದು ರೈತ ಮುಖಂಡರ ಆರೋಪವಾಗಿದೆ. ಕೃಷಿ ವಿಶ್ವವಿದ್ಯಾನಿಲಯದ ಕಾಯ್ದೆ ತಿದ್ದುಪಡಿ ಮಾಡುವ ಹುನ್ನಾರದ ಹಿಂದೆ ಅಧಿಕಾರಶಾಹಿಗಳ ಕೈವಾಡವಿದೆ." ಈ ಪತ್ರಿಕಾ ವರದಿಗಳೆಲ್ಲವನ್ನೂ ಸಹ ನಾನು ನಿಮಗೆ ಕಳುಹಿಸಿಕೊಡುತ್ತೇನೆ. ಇದರಲ್ಲಿ ಎಲ್ಲೋ ಒಂದು ಕಡೆ ಏನಾಗಿದೆ ಎಂದರೆ, ವಿಶ್ವವಿದ್ಯಾನಿಲಯ ಎಂದರೆ ಅದೊಂದು ರೈತರ ಸಂಸ್ಥೆ, ರೈತರ ಮಾರ್ಗದರ್ಶನದಲ್ಲಿ ನಡೆಯತಕ್ಕಂಥ ಒಂದು ಸಂಸ್ಥೆ, ರೈತರಿಗೋಸ್ಕರ ಇರತ್ತಕಂಥ ಸಂಸ್ಥೆ ಎನ್ನತಕ್ಕಂಥ ಭಾವನೆಯಿತ್ತು. ಇವತ್ತು ನೀವು ಏನು ಮಾಡಿದ್ದೀರಿ ಎಂದರೆ, ಅದನ್ನು ಅಮೂಲಾಗ್ರವಾಗಿ ಬದಲಾವಣೆಯನ್ನು ಮಾಡಿ, ಎಲ್ಲೋ ಕೆಲವು ಜನ ಅಧಿಕಾರಿಗಳ ಕೈಗೆ ಕೊಡತಕ್ಕಂಥ ರೀತಿಯಲ್ಲಿ ಇವತ್ತು ನೀವು ಮಾಡಿದ್ದೀರಲ್ಲಾ, ಇದರಿಂದಾಗಿ ಆ ಕೃಷಿಯ ಸ್ವಾಮ್ಯತೆ ಎನ್ನುವುದು ಇದೆಯಲ್ಲಾ, ಆ ರೈತರ supremacy ಎಂಬುದು ಇದೆಯಲ್ಲಾ? ಅದು ಉಳಿಯುವುದಕ್ಕೆ ಸಾಧ್ಯವೇ? ಎನ್ನುವುದನ್ನು ದಯವಿಟ್ಟು ಅರ್ಥಮಾಡಿಕೊಳ್ಳಿ. ಇದೊಂದು ವಿಚಾರವಲ್ಲ. ಇನ್ನೂ ಕೆಲವು comments ಇದೆ. 'Ordinance and Farm Varsities were criticized' ಡಾ: ದ್ವಾರಕನಾಥ್ ಎಂಬುವವರು Vice Chancellor ಆಗಿ ಬಹಳ ವರ್ಷಗಳಿದ್ದರು. ನಾವು ಕೃಷಿ ಮಂತ್ರಿಯಾಗಿದ್ದ ಸಂದರ್ಭದಲ್ಲಿ ಅವರು ಕೃಷಿ ಆಯೋಗದ ಅಧ್ಯಕ್ಷರಾಗಿದ್ದರು. ಡಾ: ಸ್ವಾಮಿನಾಥನ್‌ರವರ ಸಲಹೆಯಂತೆ ಧಾರವಾಡದಲ್ಲಿ ನಡೆದಂತಹ Agriculture summitನ ಅಧ್ಯಕ್ಷರನ್ನಾಗಿ ಡಾ: ದ್ವಾರಕನಾಥ್‌ರವರನ್ನು ಮಾಡಲಾಯಿತು. ಅವರು ಸರ್ಕಾರಕ್ಕೆ ಸಾಕಷ್ಟು ರೀತಿಯಲ್ಲಿ ಸಲಹೆಗಳನ್ನು ಕೊಟ್ಟರು. ಅವತ್ತು ದ್ವಾರಕನಾಥ್‌ರವರು, ಈ ಮಸೂದೆಯನ್ನು ಮಂಡನೆ

ಮಾಡಲಾಗುತ್ತದೆಂದು ತಿಳಿದಾಗ, ಅವರು comment ಮಾಡಿರತಕ್ಕದ್ದು ಇಲ್ಲಿದೆ. "Mr.Dwarkanath, who is also a former Vice Chancellor of University for Agriculture Sciences, Bangalore took exception to the increasing representation to bureaucracy in the University Governing Board which is headed by the Vioce Chancellor. He told the 'Hindu'; Having 5 IAS officers on the Board will affect the autonomy of the universities as the officials will dominate the Board proceedings. This will harm the interest of the University. He pointed out that the University powers to appoint a controller has also been curtailed though the Vice Chancellor had given the power to appoint the controller from the panel of three persons. The actual selection of the panel would be made by the Government. He noted. Referring to the statement in the Ordinance, it is based on the model Bill recommended by ICAR, Mr. Dwarkanath said; actual amendment affected through the Ordinance went beyond the suggestion made by the ICAR." ಅಂದರೆ ICAR ನಲ್ಲಿ ಏನು letter and spirit ಇದೆ, ಅದನ್ನು ಬಿಟ್ಟು, ಬೇರೆಯದನ್ನೇ ಮಾಡಿದ್ದೀರಿ ಎನ್ನತಕ್ಕಂಥ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅದರ ಜೊತೆಗೆ ಮೊನ್ನೆ ಕೂಡ 'ಪ್ರಜಾವಾಣಿ' ಪೇಪರ್‌ನಲ್ಲಿ 'ಮಸೂದೆ ರೈತರ ಪ್ರಾತಿನಿಧ್ಯಕ್ಕೆ ಕೊಡಲಿಪೆಟ್ಟು' ಎಂಬ ವರದಿ ಬಂದಿದೆ. ಇದೆಲ್ಲವನ್ನೂ ಕೂಡ ನಾನು ಇಲ್ಲಿ ಓದಿ ಹೇಳತಕ್ಕಂಥ ಅವಶ್ಯಕತೆ ಇಲ್ಲ. ದಯಮಾಡಿ ನೀವು ಇದನ್ನು ಅರ್ಥಮಾಡಿ ಕೊಳ್ಳಬೇಕು. ಇವತ್ತು ನೀವು ತಂದಿರತಕ್ಕಂಥ ಮಸೂದೆ ಏನಿದೆ, ಅದು ಕೇವಲ ಏಕಪಕ್ಷೀಯವಾಗಿರತಕ್ಕಂಥದ್ದು. ನನಗೆ ಒಂದು ದುಃಖ ಏನೆಂದರೆ, ಇವತ್ತು ಪರಿಣಿತ ಇರತಕ್ಕಂಥ ಅಧಿಕಾರಿಗಳು ನಿಮ್ಮಲ್ಲಿದ್ದಾರೆ. ಅವರು ಏಕೆ ಈ ರೀತಿಯಾಗಿ advice ನಿಮಗೆ ಮಾಡಿ, ನೀವು ಈ ಬಿಲ್ ತಂದಿದ್ದೀರೋ ನನಗೆ ಅರ್ಥವಾಗಲಿಲ್ಲ. ಎಲ್ಲೋ ಒಂದು ಕಡೆಗೆ ಮಂತ್ರಿಗಳ ಒಳ್ಳೆಯತನ ಎನ್ನುವುದು ದುರುಪಯೋಗವಾಗುತ್ತಿದೆ ಎನ್ನುವುದಕ್ಕೆ ಇದಕ್ಕಿಂತ ಬೇರೆ ನಿದರ್ಶನ ಬೇಕಾಗಿಲ್ಲ. ಇವತ್ತು ಮಾನ್ಯ ಯಡಿಯೂರಪ್ಪನವರು ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿರತಕ್ಕಂಥವರು, ರೈತರ ಬಗ್ಗೆ ಅಲ್ಪ ಸ್ವಲ್ಪ ಕಾಳಜಿ ಇರತಕ್ಕಂಥವರು, ಅವರ ಕಾಲದಲ್ಲೇ ಇಂತಹ ರೈತರಿಗೆ

ಕೊಡಲಿಪೆಟ್ಟು ಕೊಡತಕ್ಕಂಥ ಮಸೂದೆಯನ್ನು ನೀವು ಮಂಡನೆ ಮಾಡಿರುವುದು ಸರಿಯಲ್ಲ. ಈ ಬಗ್ಗೆ ನೀವು ಏನಾದರೂ ಯೋಚನೆ ಮಾಡಿದ್ದೀರಾ? ನೀವು ರೈತರಾಗಿ ಚಿಂತನೆ ಮಾಡಿದ್ದೀರಾ? ದಯಮಾಡಿ ನಾನು ಹೇಳುತ್ತೇನೆ. ಇದನ್ನು ಪಾಸ್ ಮಾಡುವುದಕ್ಕೆ ಹೋಗಬೇಡಿ. ನಿಮ್ಮ ಮಸೂದೆಯಲ್ಲಿ ಇರತಕ್ಕಂಥದ್ದು ಏನೆಂದರೆ, ಕೇವಲ ಐ.ಎ.ಎಸ್. ಅಧಿಕಾರಿಗಳಿಗೆ ಅಧಿಕಾರ ಕೊಡತಕ್ಕಂಥದ್ದು. ಸಭೆ ಕರೆಯಬೇಕಾದಾಗ ಆಗಲಿ, ಕೋರಂ ಕರೆಯಬೇಕಾದಾಗ ಆಗಲಿ, ಏನು ಮಾಡಬೇಕಾದರೂ ಐ.ಎ.ಎಸ್. ಅಧಿಕಾರಿಗಳು ಮತ್ತು Vice Chancellor ಗೆ ಸಂಪೂರ್ಣವಾಗಿ ಇರತಕ್ಕಂಥ ಅಧಿಕಾರವನ್ನು ಕೊಟ್ಟಿದ್ದೀರಿ. ಒಂದು ರೀತಿಯಲ್ಲಿ ಹೇಳಬೇಕೆಂದರೆ, Universityಯನ್ನೇ ಅವರಿಗೆ ಒತ್ತೆ ಇಟ್ಟಂಥ ರೀತಿಯಲ್ಲಿ ಇವತ್ತು ಮಸೂದೆಯನ್ನು ತಂದಿದ್ದೀರಲ್ಲಾ, ಇದು ಸರಿಯೇ? ದಯಮಾಡಿ ಕೃಷಿ ಮಂತ್ರಿಗಳೇ, ನಾನು ಕೇಳುತ್ತೇನೆ. ನೀವು ಇಷ್ಟು ಹೊತ್ತು ಓದಿ ಹೇಳಿದಿರಿ. ಅದರಲ್ಲಿ ICARಗೆ ಸಂಬಂಧಪಟ್ಟಂತಹ ಏನಾದರೂ ಒಂದು ವಿಚಾರ ಇದೆಯೇ? ಬರೀ letter and spirit. ಬರೀ ಎಲ್ಲಾ ಅವರಿಗೆ ಅಧಿಕಾರ ಕೊಡು, ಇವರಿಗೆ ಕಿತ್ತು ಹಾಕು; ಇವರಿಗೆ ಅಧಿಕಾರ ಬೇಡ, ಅವರಿಗೆ ಇರಲಿ. Board of Management ಎಂದು ಇರಲಿ, Board of Regents ಎಂದು ಬೇಡ. ಏನು ಇದೆಲ್ಲಾ? ಈ ರೀತಿಯಾಗಿರತಕ್ಕಂಥ ಮಸೂದೆಯನ್ನು ತಂದಿರತಕ್ಕದ್ದು ನಿಜವಾಗಿಯೂ ಕೂಡ ನಾಚಿಕೆಗೇಡು ಎನ್ನತಕ್ಕ ಮಾತನ್ನು ಹೇಳುತ್ತೇನೆ. ದಯಮಾಡಿ ಇದನ್ನು ಅರ್ಥ ಮಾಡಿಕೊಂಡಿದ್ದೀರಿ ಎಂದು ಕೊಂಡಿದ್ದೇನೆ. ದಯಮಾಡಿ ಸೂಕ್ತವಾಗಿರತಕ್ಕಂಥ amendment ಅನ್ನು ತರುವುದಕ್ಕೆ ಪ್ರಯತ್ನ ಪಡಿ. ಈಗಲೂ ಕೂಡ ಸಮಗ್ರವಾಗಿ ತಿದ್ದುಪಡಿ ತನ್ನಿ. ಕೇವಲ ಈ ಭಾಗದಲ್ಲಿ ಇರತ್ಕಕಂಥ ಶಾಸಕರು ಎಂದಲ್ಲ, ಆ ಭಾಗದ ಎಲ್ಲಾ ಶಾಸಕರಿಗೂ ಕೂಡ ಇವತ್ತು ಈ ಮಸೂದೆ ಎಷ್ಟರಮಟ್ಟಿಗೆ ಪೂರಕವಾಗಿ ಸಹಾಯವಾಗಿದೆ ಎನ್ನತಕ್ಕಂಥದ್ದು ಗೊತ್ತಿದೆ. ಹಾಗಾಗಿಯೇ ಈ ಮಸೂದೆ ಪಾಸ್ ಆಗುವುದು ಯಾರಿಗೂ ಬೇಕಾಗಿಲ್ಲ. ಆದರೆ ನಿಮಗೆ ಬಹುಮತ ಇದೆ ಎನ್ನುವ ಕಾರಣಕ್ಕೋಸ್ಕರ ಇವತ್ತು ಕೈ ಎತ್ತಿ ಪಾಸ್ ಮಾಡುವುದಾದರೆ, ರೈತರಿಗೆ ದೊಡ್ಡ ಅನ್ಯಾಯ ಮಾಡಿದಂತಾಗುತ್ತದೆ ಎನ್ನುವುದನ್ನು ನೀವು ಮರೆಯಬೇಡಿ. ಅಂತಹ ಒಂದು ಕರಾಳ ತೀರ್ಮಾನ ನಿಮ್ಮ ಕಾಲದಲ್ಲಿ ಆಗಬಾರದು ಎನ್ನುವುದು ನನ್ನ ಅಪೇಕ್ಷೆ. ದಯಮಾಡಿ ನಾನು ಹೇಳುತ್ತೇನೆ.

ಈಗಾಗಲೇ ಸೂಕ್ಷ್ಮವಾಗಿ ಮಾತನಾಡಿದಂತಹ ಎಲ್ಲರೂ ಕೂಡ ಏನೇನು ಬದಲಾವಣೆಗಳನ್ನು ತರಬೇಕು ಎನ್ನುವುದರ ಬಗ್ಗೆ ಹೇಳಿದ್ದಾರೆ. ಬಹುಶಃ ನೀವು ಅವಕಾಶ ಕೊಟ್ಟರೆ ಏನೇನು ಬದಲಾವಣೆ ತರಬೇಕು ಎಂದು ಹೇಳುವುದಕ್ಕೆ ನಾನೂ ತಯಾರಾಗಿದ್ದೇನೆ. ದಯಮಾಡಿ ಈಗ ನಮ್ಮ ಮುಂದೆ ಉಳಿದಿರತಕ್ಕಂಥದ್ದು ಇಷ್ಟೇ. ಇವತ್ತು ನಾವು ಕೊಡತಕ್ಕಂಥ ಸಲಹೆಯನ್ನು ರೈತರ ಹಿತದೃಷ್ಟಿಯಿಂದ ಒಪ್ಪಿಕೊಳ್ಳಿ. ಇದನ್ನು ಪಾಸ್ ಮಾಡುವುದಕ್ಕೆ ಇಷ್ಟ ಪಡುತ್ತೀರೋ ಅಥವಾ ಇಲ್ಲವೋ? ನಾನು ತಂದಿದ್ದೇ ಸರಿ, ನಾನು ಮಾಡಿದ್ದೇ ಮಾಡಿದ್ದು ಎನ್ನತಕ್ಕಂಥ ರೀತಿಯಲ್ಲಿ ಏನಾದರೂ ಹೇಳುತ್ತೀರೋ, ಅದರ ಮೇಲೆ ಇವತ್ತು ಅವಲಂಬಿಸಿದೆ. ದಯಮಾಡಿ ನಾನು ಹೇಳುತ್ತೇನೆ. ಏಕಪಕ್ಷೀಯವಾಗಿ ಅಧಿಕಾರಿಗಳಿಗೆ ಮತ್ತು Vice Chancellor ಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟು, ಅಧಿಕಾರ ಮತ್ತು ಹಣದ ದುರುಪಯೋಗ ಮಾಡತಕ್ಕಂಥ ಎಲ್ಲಾ ಅವಕಾಶಗಳನ್ನೂ ಕೂಡ ಅವರಿಗೆ ಕಲ್ಪಿಸಿಕೊಟ್ಟಿದ್ದೀರಿ. ಈ ಬಗ್ಗೆ ನಿಮಗೆ ಯಾರು Advice ಮಾಡಿದರೋ, ನನಗಂತೂ ಅರ್ಥವಾಗಲಿಲ್ಲ. ಬಹುಶಃ ನಾನು ನಿಜವಾಗಿಯೂ ಕೂಡ ಹೇಳಬೇಕೆಂದರೆ, ಇದನ್ನು ಎಲ್ಲರೂ ಕೂಡ ಒಕ್ಕೊರಲಿನಿಂದ ಇವತ್ತು ವಿರೋಧವನ್ನು ಮಾಡಬೇಕಾಗುತ್ತದೆ. ದಯಮಾಡಿ ನಾನು ಹೇಳುತ್ತೇನೆ. ಈ ಮಸೂದೆಯನ್ನು ವಾಪಸ್ ಪಡೆಯಿರಿ. ಬೇಕಾದರೆ ಶಾಸಕರನ್ನು ಕರೆದು, ಅದರಲ್ಲಿ ಯಾರ್ಯಾರು interested ಇರುತ್ತಾರೋ, ಅವರನ್ನು ಕರೆದು ಸಲಹೆಯನ್ನು ಕೇಳಿ, ತದನಂತರ ತನ್ನಿ.

ಈಗ ನಿಮಗೆ ಅರ್ಜೆನ್ಸಿ ಇರುವುದೇನೆಂದರೆ, ಬಾಗಲಕೋಟೆ ಮತ್ತು ರಾಯಚೂರು, ಅಲ್ಲಿ Agriculture University ಮಾಡಿದ್ದೀರಿ, ಇಲ್ಲಿ Horticulture University ಮಾಡಿದ್ದೀರಿ. ಆ ಯೂನಿವರ್ಸಿಟಿಗಳನ್ನು ಮಾಡುವುದಕೋಸ್ಕರ ಈ ಮಾಡೆಲ್ ಆಕ್ಟ್‌ನ್ನು ತರುವುದಕ್ಕೆ ಯಾರು ನಿಮಗೆ ಸಲಹೆ ಮಾಡಿದ್ದು, ನನಗಂತು ಅರ್ಥವಾಗಲಿಲ್ಲ. ನಿಮ್ಮ 1963 ರ ಆಕ್ಟ್ ಪ್ರಕಾರ ಬಾಗಲಕೋಟೆ ಮತ್ತು ರಾಯಚೂರು ವಿಶ್ವವಿದ್ಯಾಲಯಗಳ ಮಸೂದೆಯನ್ನು ತನ್ನಿ ನಾವು ಪಾಸ್ ಮಾಡಿಕೊಡುತ್ತೇವೆ, ಅದರಿಂದ ಖಂಡಿತವಾಗಿಯೂ ಸಹಾಯವಾಗುತ್ತದೆ. ಅದಾದ ಮೇಲೆ ನೀವೇನು ICAR ಗೈಡ್ ಲೈನ್ಸ್ ಪ್ರಕಾರ ಆಗಬೇಕೆಂದು ಹೇಳುತ್ತೀರಿ, ಆ ಗೈಡ್ ಲೈನ್ಸ್ ಅಂತಿಮವಾಗಲಿ, ನಂತರದ ಸಂದರ್ಭದಲ್ಲಿ ಆ ಬದಲಾವಣೆಯನ್ನು

ಮಾಡುವುದಕ್ಕೆ ಪ್ರಯತ್ನ ಮಾಡೋಣ. ಈಗ ಮಾತ್ರ ಹಳೆಯ ಆಕ್ಟ್ ಪ್ರಕಾರ ಎರಡು ವಿಶ್ವವಿದ್ಯಾಲಯಗಳ ಆಕ್ಟ್ ಪಾಸ್ ಆಗಲಿ ಎಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಇದಕ್ಕೆ ಪ್ರತ್ಯುತ್ತರ, ಯಾವುದೇ ಸಬೂಬನ್ನು ಹೇಳುವುದಕ್ಕೆ ಹೋಗದ ರೀತಿಯಲ್ಲಿ, ದಯಮಾಡಿ ಸೌಹಾರ್ದವಾಗಿ ಎಲ್ಲರ ಸಲಹೆ, ಅಭಿಪ್ರಾಯವನ್ನು ಪಡೆದು ಇವತ್ತು ಮಸೂದೆಯನ್ನು ತರುವುದು, ಬದಲಾವಣೆಯನ್ನು ತರುವುದು ಸೂಕ್ತವೆನ್ನುವ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಇಲ್ಲ, ಇದೇನಾಗುತ್ತದೆ ನೋಡೋಣವೆನ್ನುವುದಾದರೆ ನಿಮಗೆ ಒಂದು ಸಹಾಯವನ್ನು ಮಾಡಬಹುದು. ಈಗ 1963ರ ಆಕ್ಟ್ ಪ್ರಕಾರ ರಾಯಚೂರು ಮತ್ತು ಬಾಗಲಕೋಟೆ ವಿಶ್ವವಿದ್ಯಾಲಯಗಳ ಆಕ್ಟನ್ನು ಪಾಸ್ ಮಾಡಿಕೊಟ್ಟು, ಮಿಕ್ಕ ವಿಚಾರಗಳನ್ನೇ ಬೇಕಾದರೆ ಜಂಟಿ ಸದನ ಸಮಿತಿಗೆ ಕೊಡಿ. ಜಂಟಿ ಸದನ ಸಮಿತಿಯವರು ಕುಳಿತು ಅದನ್ನು ವಿಚಾರ ಮಾಡಿ, ಯಾವುದನ್ನು ಸೇರಿಸಬೇಕು, ಯಾವುದನ್ನು ಸೇರಿಸಬಾರದೆಂಬುದನ್ನು ವಿಚಾರ ಮಾಡೋಣ. ನಿಜವಾಗಿ ನೀವು ತಿಳಿದುಕೊಳ್ಳಬೇಕು, ICAR ಅವರ ಉದ್ದೇಶವೇನೆಂದರೆ, ಇವತ್ತು ICAR ನಲ್ಲಿರುವುದು ಸಂಶೋಧನೆ, extension & teachingಗೆ ಹೆಚ್ಚು ಒತ್ತು ಬರಬೇಕೆಂಬುದು, ಅವರ ಗುರಿ ಮತ್ತು ಆಶಯವಾಗಿದೆ. ಆ ಗುರಿಯನ್ನು ಬಿಟ್ಟು ಇವತ್ತು ಮೂಲವಾಗಿ ತರುವ ಆಕ್ಟನಲ್ಲೇ ಎಲ್ಲವೂ ಕೂಡ ಅಡಕವಾಗಿದೆ, ಅದನ್ನು ನೆಗ್ಲೆಕ್ಟ್ ಮಾಡಿ, ಯಾರೋ ಒಬ್ಬ Vice Chancellor ಮತ್ತು ಒಬ್ಬ ಅಧಿಕಾರಿಯನ್ನು ಮೆಚ್ಚಿಸುವುದಕ್ಕೋಸ್ಕರ ಇಂಥ ಒಂದು ಬಿಲ್ ಅನ್ನು ತಂದಿದ್ದರಲ್ಲ, ನಿಜವಾಗಿ ಇಂಥ ಒಂದು ಬಿಲ್ಲನ್ನು ತಾವು ತರಬಾರದಾಗಿತ್ತು, ಯೋಚನೆ ಮಾಡಬೇಕಾಗಿತ್ತು. ಇವತ್ತಿನ ಪತ್ರಿಕೆಗಳಲ್ಲಿ ಸಾಕಷ್ಟು ರೀತಿಯಲ್ಲಿ ಕಾಮೆಂಟ್ಸ್ ಬಂದಿವೆ. ಇವತ್ತು ಕೃಷಿ ತಜ್ಞರನ್ನು ನೀವಾಗಿಯೇ ಸಂಪರ್ಕಿಸಬಹುದಾಗಿತ್ತು, ಅದನ್ನೆಲ್ಲಾ ನೀವು ಮಾಡುವುದನ್ನು ಬಿಟ್ಟು, ಇವತ್ತು ಏಕಾಏಕಿಯಾಗಿ ಮಸೂದೆಯನ್ನು ತಂದು, ನಮಗೆ ಬಹುಮತವಿದೆ, ನಾವು ಪಾಸ್ ಮಾಡಿಕೊಳ್ಳುತ್ತೇವೆಂದು ಪಾಸ್ ಮಾಡಿಕೊಳ್ಳುವುದಾದರೆ, ನಿಜವಾಗಿಯು ರೈತರಿಗೆ ಮತ್ತು ವಿಶ್ವವಿದ್ಯಾಲಯಗಳಿಗೆ ವಿಶೇಷವಾಗಿ ಸಂಶೋಧನೆಗೆ ಹೆಚ್ಚು ಕೊಡಲಿಪೆಟ್ಟಾಗುತ್ತದೆಂಬುದನ್ನು ತಿಳಿದುಕೊಳ್ಳಬೇಕು. ಬಹುಶಃ ಎಲ್ಲೋ ಒಂದು ಕಡೆ ನಮ್ಮ ವಿಶ್ವವಿದ್ಯಾಲಯಗಳಲ್ಲಿರುವ ವಿಜ್ಞಾನಿಗಳು ಎಲ್ಲೋ Multi National Companyಗೆ ಒಂದಲ್ಲ ಒಂದು ರೀತಿ ಯೀಲ್ಡಾಗಿ,

ಸಂಶೋಧನೆಯನ್ನು ಕಾಣದಂತೆ ಮಾಡುವ ಸಂದರ್ಭಗಳು ಬರುತ್ತದೆ. ದಯಮಾಡಿ ಇದಕ್ಕೆಲ್ಲಾ ಅವಕಾಶ ಕೊಡಬೇಡಿ, Vice Chancellor ಗೆ ಸಂಪೂರ್ಣವಾಗಿರುವ ವಿಶ್ವವಿದ್ಯಾಲಯಗಳನ್ನು ಮಾಡತಕ್ಕಂಥ ರೀತಿಯಲ್ಲಿ ಅಧಿಕಾರವನ್ನು ಕೊಡುವುದಲ್ಲ. ಇವತ್ತು ರೈತ ಪ್ರತಿನಿಧಿಗಳಿರುವ ಆ ಬಾಡಿ ಇದೆಯಲ್ಲ, Board of Regents ಎಂದು ಹೇಳುತ್ತಾರಲ್ಲ, ಆ Board of Regents ಅಧಿಕಾರವಿರಬೇಕು ಮತ್ತು ಯಾವುದೇ ಸಂದರ್ಭದಲ್ಲಿ ಅಧಿಕಾರವನ್ನು ಚಲಾಯಿಸಬೇಕಾದಾಗ ಇವತ್ತು Vice Chancellor ಅಲ್ಲ, ಬೋರ್ಡ್ ಅಧಿಕಾರವನ್ನು ಚಲಾಯಿಸಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) : ಮಾನ್ಯ ಸದಸ್ಯರು, ಹಿಂದೆ ಕೃಷಿ ಸಚಿವರಾಗಿದ್ದರು. What is the difference in the earlier 1963 Act and Board of Management in the 2008 Act? ಅದರಲ್ಲಿ difference ಏನಿದೆ? What difference do you find in that?

ಶ್ರೀ ಟಿ.ಬಿ.ಜಯಚಂದ್ರ : ಇಲ್ಲಿ ಕೇಳಿ ಸ್ವಾಮಿ, Board of Management ಅಂದರೆ ಏನು, Board of Regents ಎಂದರೆ ಏನು ಎನ್ನುವ ಅರ್ಥವನ್ನು ಅವರೇ ಹೇಳಬೇಕು.

(ಗೊಂದಲ)

SRI B.N.BACHCHEGOWDA : You were Agriculture Minister, you did not take any stand in this case and you are representing now, ಈ ತರಹ ಇರಲಿ, ಆ ತರಹ ಇರಲಿ ಅಂತ you are arguing. What is the difference between the Board of Regents and the Board of Management? Either Regents in those days or managing the affairs of University as a Board, what is the difference you are seeing in that? Opposing every thing, is the way?

ಶ್ರೀ ಟಿ. ಬಿ. ಜಯಚಂದ್ರ : ರೈತರ ಪರವಾಗಿರುವ ಮಂತ್ರಿಗಳು ಈ ರೀತಿ ಮಾತನಾಡಬಾರದು.

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು (ಅಬಕಾರಿ ಸಚಿವರು) : ಬಚ್ಚೇಗೌಡರೆ, ಅವರ ತೊಂದರೆ ಬೇರೆ, ಅದೇನೆಂದರೆ, ನನ್ನ ಕಾಲದಲ್ಲಿ ನಾನೇನು ಮಾಡಲಿಲ್ಲವಲ್ಲ, ಬಿಜೆಪಿ ಸರ್ಕಾರ ಬಂದು ಇದನ್ನು ತರುತ್ತಿದ್ದಾರಲ್ಲ, ಇದನ್ನು

ಹೇಗೆ ಸಹಿಸಿಕೊಳ್ಳುವುದು, ಇವರಿಗೆ ಒಳ್ಳೆಯ ಹೆಸರು ಬರುತ್ತದಲ್ಲ; ಇದರ ಬಗ್ಗೆ ಏನಾದರು ಹುಡುಕಬೇಕಲ್ಲ ಎಂಬುದು.

ಶ್ರೀ ರಮಾನಾಥ ರೈ : ಅಧಿಕಾರಶಾಹಿಗಳಿಗೆ ಮಣೆ ಹಾಕತಕ್ಕಂಥ ಧೋರಣೆ, ಇದು ರೈತರ ಪ್ರಗತಿಪರವಾಗಿದ್ದಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ಇದು Fishery ಅಲ್ಲ Agriculture. This is not Fishery, it is Agriculture, ಕುಳಿತುಕೊಳ್ಳಿ.

ಶ್ರೀ ಟಿ. ಬಿ. ಜಯಚಂದ್ರ : ಯಾಕೆ ಮಾತನಾಡುತ್ತೀರಿ, Fishery ಸಹ Agriculture ನಲ್ಲೇ ಬರುತ್ತದೆ.

ಶ್ರೀ ಬಿ.ಎನ್.ಬಚ್ಚೇಗೌಡ : ನೀವು ಏನು ಅಗ್ರಿಕಲ್ಚರ್ ಮಾಡುತ್ತೀರಿ?

ಶ್ರೀ ಟಿ.ಬಿ.ಜಯಚಂದ್ರ : ನೀವು ಏನು ಮಾತನಾಡುತ್ತೀರಿ? Fishery is also a part of Agriculture.

SRI B. N. BACHCHEGOWDA : Fishery is different.

SRI T. B. JAYACHANDRA : Who told you?

(ಗೊಂದಲ)

ಶ್ರೀ ರಮಾನಾಥ ರೈ : ನಾವು ಕೂಡ ಸಾವಿರಾರು ಎಕರೆ ಜಮೀನಿನಲ್ಲಿ ಕೃಷಿ ಮಾಡಿದವರು, ತಾವು ಆ ರೀತಿಯಾಗಿ ಮಾತನಾಡಬೇಡಿ, ನಾವು ರೈತರೆ, ರೈತರಿಗೆ ಮೋಸ ಮಾಡುವಂಥದ್ದು ಇದಾಗಿದೆ.

ಶ್ರೀ ಬಿ.ಎನ್.ಬಚ್ಚೇಗೌಡ : ಮಾಜಿ ಕೃಷಿ ಸಚಿವರಲ್ಲಿ ಅವರ ಅನುಭವವನ್ನು ನಾನು ಕೇಳಿದೆ.

ಶ್ರೀ ಟಿ.ಬಿ.ಜಯಚಂದ್ರ : ತಾವು ಆಗಲೇ ಫಿಷರೀಸ್, ತಮಗೆ ಸಂಬಂಧವಿಲ್ಲವೆಂದು ಹೇಳಿದಿರಿ.

ಶ್ರೀ ಬಿ. ಎನ್. ಬಚ್ಚೇಗೌಡ : ಮಾನ್ಯ ಜಯಚಂದ್ರರವರೆ, Earlier the Regent was the agent, now the Management is the ...

ಶ್ರೀ ಬಿ.ಟಿ.ಜಯಚಂದ್ರ : ಮಾನ್ಯ ಬಚ್ಚೇಗೌಡರೆ, ನಾವೆಲ್ಲಾ ವ್ಯವಸಾಯ ಮಾಡುವವರು, ಅದಕ್ಕಾಗಿ ಯೂನಿವರ್ಸಿಟಿಗಳು ಬಹಳ ಮುಖ್ಯ, ಆ ಕಾರಣಕ್ಕೋಸ್ಕರ ಹೇಳಿದೆ, Board of Regents and Board of Management ಎನ್ನುವುದಕ್ಕೆ ಬಹಳ ವ್ಯತ್ಯಾಸವಿಲ್ಲ. ಆದರೆ Board of Regents ಎನ್ನುವುದು, ಇವತ್ತಿನಿಂದಲ್ಲ ಬಹಳ ವರ್ಷಗಳಿಂದಲೂ. ಯುನಿವರ್ಸಿಟಿಗಳಿಗೆ Board of Regents ಎಂದರೆ ಒಂದು ದೊಡ್ಡ ಘನತೆ

ತರುವಂಥ ಶಬ್ಧವಷ್ಟೆ, ಅದರಲ್ಲೇನು ಬಹಳ ಬದಲಾವಣೆ ಇದೆ ಎಂದಲ್ಲ. ಬಚ್ಚೇಗೌಡ, ಬಚ್ಚೇಗೌಡ್ರು ಎಂಬುದಕ್ಕೆ ಎಷ್ಟು ವ್ಯತ್ಯಾಸವಿದೆ ಎಂಬುದು ಮುಖ್ಯ. ಅದು ಬರೀ nomenclature ಆಯಿತು ಬಿಡಿ. ಬೇರೆ ಬೇರೆ ವಿಚಾರ ಗಳಿಗೆ ಸಂಬಂಧಿಸಿದಂತೆ, ಎಲ್ಲಾ ಅಧಿಕಾರವನ್ನು ಕಿತ್ತು Vice Chancellorಗೆ ಕೊಡುವುದು ಮತ್ತು Board of Regents of Management, ಅವರಿಗೆ ಯಾವುದೇ ರೀತಿಯ ಅಧಿಕಾರವಿಲ್ಲರುವುದು. ಒಂದು ನಿದರ್ಶನವನ್ನು ನಾನು ಹೇಳಬೇಕಾಗುತ್ತದೆ. ನಾನು ಕೃಷಿ ಮಂತ್ರಿಯಾಗಿದ್ದೆ, ನನ್ನ ಹತ್ತಿರ ಒಳ್ಳೆಯ ಮಂತ್ರಿಗಳಿದ್ದರು. ಇವತ್ತು ನನ್ನ ಹತ್ತಿರ ಯಾರು ಕಮಿಷನರ್ ಆಗಿದ್ದರೊ, ಅವರು ಇವತ್ತು ಅಗ್ರಿಕಲ್ಚರ್ ಸೆಕ್ರೆಟರಿಯಾಗಿದ್ದಾರೆ. ಒಳ್ಳೆಯ ಅಧಿಕಾರಿ, ನಿಮ್ಮ ಅಧಿಕಾರವಿರುವಾಗ ಅವರನ್ನು 4 ವರ್ಷ ಬದಲಾವಣೆ ಮಾಡಬೇಡಿ ಎಂದು ನಾನು ಅನೇಕ ಸಾರಿ ಹೇಳಿದ್ದೇನೆ. ಅವರೆಲ್ಲರೂ ಇದ್ದಾಗಲೂ ಈ ಮಸೂದೆಯನ್ನು ಏತಕ್ಕೆ ತಂದರೆಂಬುದು ನನ್ನ ಆಕ್ರೋಶ. ಇದು ಸತ್ಯವನ್ನು ಹೇಳುತ್ತಿದ್ದೇನೆ, ಒಬ್ಬರು ಡೆವಲಪ್‌ಮೆಂಟ್ ಕಮಿಷನರ್ ಇದ್ದರು, ಒಂದು ಜಾಗ ಖಾಲಿಯಾದಾಗ, ಬಹಳ ದಿವಸ ಖಾಲಿ ಇದ್ದಾಗ ಒಬ್ಬ ಡೆವಲಪ್‌ಮೆಂಟ್ ಕಮಿಷನರ್ ಅನ್ನು ಆಯ್ಕೆ ಮಾಡಿಕೊಂಡೆವು, ಪರವಾಗಿಲ್ಲ ಇವರನ್ನು ಹಾಕಿ ಕೊಡಿ ಎಂದು ಮುಖ್ಯಮಂತ್ರಿಗಳ ಹತ್ತಿರ ಹೇಳಿದೆ. ರೈತರ ಮುಖಂಡರ ಸಭೆಯನ್ನು ಕರೆದು, ಹೊಸ ಹೊಸ ವಿಚಾರಗಳನ್ನು ಚರ್ಚೆ ಮಾಡುವಾಗ, ಅಡಿಷನಲ್ ಚೀಫ್ ಸೆಕ್ರೆಟರಿಯಾಗಿರುವ ಡೆವೆಲಪ್‌ಮೆಂಟ್ ಕಮಿಷನರ್ ನನ್ನ ಚೇಂಬರ್‌ಗೆ ಬಂದಾಗ ಒಂದು ಮಾತನ್ನು ಕೇಳಿದರು.

ಕೊಬ್ಬರಿಯಲ್ಲಿ ನೀರನ್ನು ಹೇಗೆ ವಾಪಸ್ ತೆಗೆಯುತ್ತೀರಿ ಎಂದು ಕೇಳಿದರು. ಕೊಬ್ಬರಿಯಲ್ಲಿ ನೀರನ್ನು ಹೇಗೆ ವಾಪಸ್ ತೆಗೆಯುತ್ತೀರಿ, ಅದು ಹೇಗೆ ಕೊಬ್ಬರಿ ಆಗುತ್ತದೆ ಎಂದು ಕೇಳಿದವರು Development Commissioner. ಅವರ ಕೈಯಲ್ಲಿ ಇಡೀ ಕೃಷಿ ಇಲಾಖೆಯನ್ನು ಕೊಟ್ಟಿದ್ದಾರೆ.

ಶ್ರೀ ಎಸ್. ಎ. ರವೀಂದ್ರನಾಥ್ : ಮಾನ್ಯ ಉಪಾಧ್ಯಕ್ಷರೆ, ಪ್ರಧಾನ ಮಂತ್ರಿ ಆದಂತಹವರು ಕೆಂಪು ಮೆಣಸಿನ ಕಾಯಿಗೂ ಹಸಿ ಮೆಣಸಿನ ಕಾಯಿಗೂ ಏನು ವ್ಯತ್ಯಾಸ ಎಂದು ಕೇಳಿದ್ದರು. ತಮಗೆಲ್ಲಾ ಗೊತ್ತಿರುವುದೇ ಇದು.

ಶ್ರೀ ಟಿ.ಬಿ.ಜಯಚಂದ್ರ : ಒಬ್ಬ ಪ್ರಧಾನಮಂತ್ರಿ ತಪ್ಪು ಮಾಡಬಹುದು, ಒಬ್ಬ ಅಧಿಕಾರಿ ತಪ್ಪು ಮಾಡಬಾರದು. ಪ್ರಧಾನಮಂತ್ರಿ is guided by So

many officers not by one officer. ಏನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಹೋಗುತ್ತೀರಿ. ನೀವು. ಒಬ್ಬ ಅಭಿವೃದ್ಧಿ ಅಧಿಕಾರಿ ಆಗಿರುವವನು ಈ ಮಟ್ಟಕ್ಕೆ ಕೃಷಿ ಬಗ್ಗೆ ತಿಳಿದುಕೊಂಡಿದ್ದಾರೆಂದು ಇವರಿಂದ ಸುಧಾರಣೆ ಆಗುತ್ತದೆ ಎಂದು ನೀವೇನಾದರೂ ಹೇಳುವುದಾದರೆ, ನನಗನ್ನಿಸುತ್ತದೆ, ಖಂಡಿತ ಸುಧಾರಣೆ ಆಗುವುದಕ್ಕೆ ಸಾಧ್ಯವಿಲ್ಲ. ಅಮೆಂಡ್‌ಮೆಂಟ್ ಏನೇನು ಬದಲಾವಣೆ ಮಾಡಬೇಕೆಂದು ಕೇಳಿ ನಾನು ಹೇಳುವುದಕ್ಕೆ ತಯಾರಿದ್ದೇನೆ. ಈಗಾಗಲೇ ಸೂಕ್ಷ್ಮವಾಗಿ ಏನೇನು ಬದಲಾವಣೆ ಮಾಡಬೇಕೆಂದು ಎಲ್ಲರೂ ಹೇಳಿದ್ದಾರೆ. ನಮ್ಮ ಒಟ್ಟಾರೆ ಅಭಿಪ್ರಾಯ ಏನೆಂದರೆ, ವಿಶ್ವವಿದ್ಯಾನಿಲಯದಲ್ಲಿ Board of Management ಅಂತಲೇ ಕರೆದುಕೊಳ್ಳಿ ಯಾರು ಬೇಡ ಎಂದರು? ಅವರಿಗೆ ಹೆಚ್ಚಿನ ಅಧಿಕಾರ ಇರಬೇಕು. ಯಾವ ದಿಕ್ಕಿನಲ್ಲಿ ಸಂಶೋಧನೆ ಆಗಬೇಕೆಂದು ಹೇಳಿ, ಇವತ್ತು ನಮ್ಮ ಯೂನಿವರ್ಸಿಟಿಯಲ್ಲಿ ಕೇವಲ ಬೋಧನೆ ನಡೆಯುತ್ತಿರುವುದು. ಬರೀ ಟೀಚಿಂಗ್ ಅಷ್ಟೇ ಆಗುತ್ತಿದೆ. ಹೆಚ್ಚಾಗಿ ಸಂಶೋಧನೆ ಆಗುತ್ತಿಲ್ಲ. ಸಂಶೋಧನೆ ಹೊರಗಡೆ ಬರುತ್ತಿಲ್ಲ, extension work ಜಾಸ್ತಿ ಆಗುತ್ತಿಲ್ಲ. ಅದು ಆಗಬೇಕೆಂದರೆ ರೈತರ ಪ್ರತಿನಿಧಿಗಳು, ರೈತರ ಬಗ್ಗೆ ಕಾಳಜಿ ಇರತಕ್ಕಂತಹ ಜನಗಳು ಇರಬೇಕೇ ವಿನಹಃ ಅಧಿಕಾರಿಗಳು ಮತ್ತು ಯೂನಿವರ್ಸಿಟಿ ಪ್ರೊಫೆಸರ್‌ಗಳು ಇದ್ದರೆ ಮಾತ್ರ ಸಾಧ್ಯವಾಗುವುದಿಲ್ಲ. ಇವತ್ತು ನೀವು ಅವರಿಗೇ ಹೆಚ್ಚು ಮಾನ್ಯತೆ ಕೊಟ್ಟಿರುವುದರಿಂದ ದಯಮಾಡಿ ಈ ಮಸೂದೆಯನ್ನು ನೀವು ವಾಪಸ್ ತೆಗೆದುಕೊಳ್ಳಿ. ಇಲ್ಲದಿದ್ದರೆ Joint Select Committee ಮಾಡಿ. ಇಲ್ಲವೆಂದರೆ ಬದಲಾವಣೆ ತರುವುದಕ್ಕೆ ನೀವು ಒಪ್ಪಿಗೆ ಕೊಟ್ಟರೆ ಏನೇನು ಬದಲಾವಣೆ ತರಬೇಕೆಂದು ನಾನು ಸೂಕ್ಷ್ಮವಾಗಿ ಹೇಳುತ್ತೇನೆ. ಆಗ ನೀವು ತರುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : (ಮಾಗಡಿ) ಮಾನ್ಯ ಉಪಾಧ್ಯಕ್ಷರೆ, ಈ ತಿದ್ದುಪಡಿ ಬಗ್ಗೆ ನಮ್ಮದೇನೂ ತಕರಾರು ಇಲ್ಲ. ಇದು ಸಮಗ್ರವಾದ ಬದಲಾವಣೆ. ಯಾವುದೋ ಒಂದು ಕ್ಲಾಸ್‌ಗೆ ತಿದ್ದುಪಡಿ ತಂದಿದ್ದರೆ ಈಗಲೇ ಯೋಚನೆ ಮಾಡಿ, ಚರ್ಚೆ ಮಾಡಿ, ಕ್ಲೀಯರ್ ಮಾಡಿ ಎಂದು ಸರ್ಕಾರಕ್ಕೆ ಹೇಳಬಹುದಾಗಿತ್ತು. ಇದು ರೈತರಿಗೆ ಬಹಳ ಅವಶ್ಯಕವಾಗಿರುವಂಥದ್ದು. ಈ Act ನಿಂದ ರೈತರಿಗೆ ಅನುಕೂಲ ಆಗುತ್ತದೋ ಅನಾನುಕೂಲ ಆಗುತ್ತದೋ ಎಂದು ಯೋಚನೆ ಮಾಡಬೇಕಾಗುತ್ತದೆ. ಏಕೆಂದರೆ ಸರ್ಕಾರ ರೈತರ

ಹೆಸರಿನಲ್ಲಿ ಪ್ರಮಾಣವಚನ ಸ್ವೀಕಾರ ಮಾಡಿದೆ, ಗೊಬ್ಬರದ ಸಮಸ್ಯೆಯಾದಂತೆ ಆಗುವುದು ಬೇಡ. ಗೊಬ್ಬರ ಇದೆ ಎಂದು ಒಬ್ಬರು ಹೇಳುವುದು, ಅಲ್ಲಿ ಸ್ಟ್ರೈಕ್ ನಡೆಯುವುದು ಆ ಕೆಲಸ ಆಗುವುದು ಬೇಡ ಇದರಲ್ಲಿ. ಈ ವಿಧೇಯಕ 55 ಪುಟ ಇದೆ, ಇದನ್ನು ನಾವೆಲ್ಲಾ ಓದುವುದು ಬೇಡವಾ? ಅವರೇನೋ ಕೃಷಿ ಸಚಿವರಾಗಿದ್ದರು ಅವರಿಗೆ ಅದರ ಬಗ್ಗೆ ಹೆಚ್ಚು ಜ್ಞಾನ ಇದೆ, ಅವರು ಅರಿತುಕೊಂಡಿದ್ದರು, ಅದರ ಬಗ್ಗೆ ಚರ್ಚೆ ಮಾಡಿದರು. ಇದು ಏನೆಂದು ನಮಗೆ ಇನ್ನೂ ಗೊತ್ತೇ ಇಲ್ಲ. ICAR Act ಅಂದರೆ ಏನು, ಅದು ಏಕೆ, ಅದು ಬೇಕಾ? ಬೇಡವಾ? ಅದರಿಂದ ರೈತರಿಗೆ ಅನುಕೂಲ ಏನು? ಅನಾನುಕೂಲ ಏನು? ಎನ್ನುವುದರ ಬಗ್ಗೆ ಚರ್ಚೆ ಆಗಬೇಕಾಗುತ್ತದೆ. ಇಲ್ಲಿ ಮೇಲ್ನೋಟಕ್ಕೆ ಏನು ಕಾಣುತ್ತಿದೆ ಎಂದರೆ, ವೈಸ್‌ಚಾನ್ಸಲರ್‌ಗೋ ಯಾರಿಗೋ ಅಧಿಕಾರಿಗಳಿಗೆ ಅನುಕೂಲ ಮಾಡಿಕೊಡತಕ್ಕಂತಹ ರೀತಿಯಲ್ಲಿ ಈ ಬದಲಾವಣೆಯನ್ನು ತರಲಿಕ್ಕೆ ಹೊರಟಿದ್ದಾರೆಂದು ಮೇಲ್ನೋಟಕ್ಕೆ ಕಾಣುತ್ತಿದೆ. 1963 Actನಿಂದ ಇದುವರೆಗೆ ಏನು ತೊಂದರೆ ಆಗಿದೆ, ಅದನ್ನು ಇದರಲ್ಲಿ ವಿವರಿಸಬೇಕು, ಆ Act ನಿಂದ ಏನು ತೊಂದರೆ ಇದೆ?. ಸಣ್ಣ ಪುಟ್ಟ ಬದಲಾವಣೆ ಮಾಡಿಕೊಂಡು ಇದುವರೆಗೂ ಚೆನ್ನಾಗಿ ನಡೆಸಿಕೊಂಡು ಬಂದಿದ್ದಾರೆ. ಇವತ್ತು ಅಧಿಕಾರಿಗಳಿಗೆ ನೀವು ಹೆಚ್ಚಿನ ಒತ್ತು ಕೊಡುತ್ತಿದ್ದೀರಿ. ಹೊಸ ತಿದ್ದುಪಡಿಯಲ್ಲಿ 15 ಜನ ಅಧಿಕಾರಿಗಳಲ್ಲಿ 10 ಜನ ಅಧಿಕಾರಿಗಳು 5 ಜನ ರೈತರ ಪ್ರತಿನಿಧಿಗಳು ಇದ್ದಾರೆ. ಇದನ್ನು ನೀವು ಈಗಲೇ ಅಮೆಂಡ್‌ಮೆಂಟ್ ಪಾಸ್ ಮಾಡುವ ಬದಲು ರೈತ ಪ್ರತಿನಿಧಿಗಳಿಗೆ ಬಿಡಿ ಅವರು ಚರ್ಚೆ ಮಾಡಲಿ, ವ್ಯಾಪಕವಾಗಿ ಚರ್ಚೆ ಆಗಲಿ, ನಿಮಗೂ ಒಳ್ಳೆಯ ಹೆಸರು ಬರಲಿ, ಏನೋ ಕೃಷಿ ಸಚಿವರು ಒಳ್ಳೆಯ ತಿದ್ದುಪಡಿಯನ್ನು ಮಂಡಿಸಿದ್ದಾರೆ, ಇದರಿಂದ ಅನುಕೂಲ ಆಗುತ್ತದೆ ಎಂದಾದರೆ, ಇದರ ಬಗ್ಗೆ ಚರ್ಚೆ ಆಗಲಿ. ಮುಂದಿನ ಅಧಿವೇಶನದಲ್ಲಿ ಇದನ್ನು ಮಂಡಿಸಿ. ನಾವೇನು ಅದನ್ನು ವಿರೋಧ ಮಾಡುವುದಿಲ್ಲ. ಇದರಿಂದ ರೈತರಿಗೆ ಅನುಕೂಲ ಆಗುವುದಾದರೆ ಆಗಲಿ. ಕೋರಂ ಇಲ್ಲದೆ ಮೀಟಿಂಗ್ ಮಾಡುವುದು ಈ ದೇಶದಲ್ಲಿ ನಾವು ಇದೇ ಮೊದಲನೆಯದಾಗಿ ಕೇಳುತ್ತಿರುವುದು, ಒಂದು ಸಲ ಕೋರಂ ಇಲ್ಲದೇ ಮೀಟಿಂಗ್ ಮುಂದಕ್ಕೆ ಹಾಕಿದರೆ, ಇನ್ನೊಂದು ಸಲ ಮೂರು ಜನ ಇರಲಿ, ನಾಲ್ಕು ಜನ ಇರಲಿ, ಅವರಿಗೆ ಬೇಕಾದ ವಿಷಯಗಳನ್ನು ಕೋರಂ ಇಲ್ಲದೆ ಪಾಸ್ ಮಾಡಿಕೊಂಡು ಹೋಗುವುದು.

ಇದು ಎಲ್ಲಾದರೂ ಕೇಳಿದ್ದೇವಾ? 1/3rd ಕೋರಂ ಬೇಡ, ಅದೂ ಇಲ್ಲದ ಎರಡನೇ ಮೀಟಿಂಗ್ ಮಾಡಬಹುದು. ಕೋರಂ ಇಲ್ಲದೆ ಮೀಟಿಂಗ್ ಮಾಡುವುದು ಇದು ಹೊಸದಾಗಿ ಕೇಳುತ್ತಿದ್ದೇವೆ. ದಯಮಾಡಿ ಮಾನ್ಯ ಸಚಿವರು ಇದರ ಬಗ್ಗೆ ಗಮನ ಹರಿಸಬೇಕು. ಸರಿಯಾದ ರೀತಿಯಲ್ಲಿ ಕೆಲಸ ಮಾಡಿದರೆ ರೈತ ಪ್ರತಿನಿಧಿಗಳು ಎಲ್ಲರೂ ಬಂದು ಸಹಕಾರ ಕೊಡುತ್ತಾರೆ. ಇದು ಬಹಳ ಸಮಗ್ರವಾದ ಬದಲಾವಣೆ. ಯಾವುದೋ ಒಂದು ಕ್ಲಾಸ್ ತಿದ್ದುಪಡಿ ಮಾಡಿದ್ದರೆ ನಾವು ನಿಮಗೆ ಕೇಳುತ್ತಿರಲಿಲ್ಲ. ಏನೋ ನೋಡಿಕೊಂಡು ಅದರ ಬಗ್ಗೆ ನಮಗೆ ಏನು ವಿಚಾರ ಗೊತ್ತಿತ್ತು ಅದನ್ನು ಹೇಳುತ್ತಿದ್ದೆವು. ಆದ್ದರಿಂದ ಈ ICAR Act ಬಗ್ಗೆ ಅನೇಕರು ಚರ್ಚೆಗಳನ್ನು ಮಾಡಿದ್ದಾರೆ. ಕೇಂದ್ರದ ಕೃಷಿ ಸಚಿವರು ಇರತಕ್ಕಂತಹ ರಾಜ್ಯದಲ್ಲಿಯೇ ICAR Act implement ಮಾಡಿಲ್ಲ. ICAR Act ನಿಂದ ಈ ವಿಶ್ವವಿದ್ಯಾನಿಲಯಗಳಿಗೆ ಬಹಳಷ್ಟು ಹಣ ಬರುವುದಿಲ್ಲ. ಅದಕ್ಕಾಗಿ ನಾನು ಹೇಳುತ್ತಿರುವುದು ಇದರ ಬಗ್ಗೆ ಚರ್ಚೆ ಮಾಡೋಣ. ಆತುರವಾಗಿ ಪಾಸ್ ಮಾಡಿಕೊಂಡು ಹೋಗುವಂತಹ ಅವಶ್ಯಕತೆ ಏನು? ನಾನು ಆಗಲೇ ನೋಡಿದೆ, ಮಾನ್ಯ ಸುರೇಶ್ ಕುಮಾರ್‌ರವರು ಮಾನ್ಯ ಕೃಷಿ ಸಚಿವರ ಪಕ್ಕದಲ್ಲಿ ಕುಳಿತು ಹೇಳಿಕೊಂಡು ಬಂದರು. ಅವರು ಏನಾದರೂ ಹೇಳಿಕೊಳ್ಳಲಿ ಪಾಸ್ ಮಾಡೋಣ. ನೀವು ಫ್ರೀ ಆಗಿ ಇರಿ ಎಂದು ಹೇಳಿದರು. Regents ಎಂದರೆ ಏನು management ಅಂದರೆ ಏನು ಎಂದು ಮಾನ್ಯ ಬಚ್ಚೇಗೌಡರು ಮಾಜಿ ಕೃಷಿ ಸಚಿವರಿಗೆ ಕೇಳಿದರು. ಕೆಲವು ಗೌರವಾನ್ವಿತ ಪದಗಳು ಇರುತ್ತವೆ, ಅದನ್ನು ಉಪಯೋಗಿಸಿ. ರೈತರಿಗಾಗಲಿ, ರೈತ ಪ್ರತಿನಿಧಿಗಳಿಗಾಗಲಿ ಗೌರವಾನ್ವಿತ ಪದಗಳನ್ನು ಉಪಯೋಗಿಸಿ ಎನ್ನತಕ್ಕಂಥದ್ದು ಇದರಲ್ಲಿ ಅಡಕವಾಗಿದೆ. ಅದು ಬಿಟ್ಟರೆ ನೀವು ಗೌರವ ಕೊಟ್ಟರೂ ರೈತನೇ, ನೀವು ಗೌರವ ಕೊಡದಿದ್ದರೂ ರೈತ ರೈತನೇ. ಅದನ್ನು ಮಾಜಿ ಕೃಷಿ ಸಚಿವರಿಗೆ ತಾವು ಕೇಳಿದಿರಿ. ಇದು ಸಮಗ್ರವಾದ ಬದಲಾವಣೆ ಆಗಿರುವುದರಿಂದ, ಅಧಿಕಾರಿಗಳಿಗೆ ಹೆಚ್ಚಿನ ಶಕ್ತಿ ಕೊಡತಕ್ಕಂತ ಬಿಲ್ ಆಗಿರುವುದರಿಂದ ಇದನ್ನು ನಾವು ವಿರೋಧ ಮಾಡುತ್ತೇವೆ. ದಯಮಾಡಿ ಇದರ ಬಗ್ಗೆ ಹಠಕ್ಕೆ ಬೀಳಬೇಡಿ, ಏನೋ ನಾನು ಮಂಡಿಸಿಬಿಟ್ಟಿದ್ದೇನೆ, ಇದನ್ನು ನಾನು ಪಾಸ್ ಮಾಡಿಸಬೇಕು ಎನ್ನುವುದನ್ನು ಬಿಡಿ. ಇದು ರೈತರ ವಿಚಾರ. ಇದು ಯಾರದೋ ಒಬ್ಬರು ಇಬ್ಬರ ವಿಚಾರ ಅಲ್ಲ, ರೈತರಿಗೆ

ತೊಂದರೆ ಆಗತಕ್ಕಂತಹ ವಿಚಾರ. ಆದ್ದರಿಂದ ರೈತರ ಬಗ್ಗೆ ಅಪಾರವಾದ ಕಾಳಜಿ ಇಟ್ಟುಕೊಂಡಿರತಕ್ಕಂತಹ ಕೃಷಿ ಸಚಿವರು ದಯಮಾಡಿ ಇದರ ಬಗ್ಗೆ ವ್ಯಾಪಕವಾದ ಚರ್ಚೆ ಆಗುವುದಕ್ಕೆ ಹೊರಗಡೆ ಬಿಡಿ. ರೈತ ಪ್ರತಿನಿಧಿಗಳು ಚರ್ಚೆ ಮಾಡಲಿ. ಅವರು ಅವರ ಅಭಿಪ್ರಾಯಗಳು ಏನು ಕೊಡುತ್ತಾರೆ ಕೊಡಲಿ. ಮತ್ತೆ ಮುಂದಿನ ಅಧಿವೇಶನದಲ್ಲಿ ಇದನ್ನು ಪಾಸ್ ಮಾಡಿಕೊಳ್ಳಿ ನಾವೇನು ಬೇಡವೆಂದು ಹೇಳುವುದಿಲ್ಲ. ಇದರಿಂದ ಅನುಕೂಲ ಆಗುವುದಾದರೆ ಖಂಡಿತ ಪಾಸ್ ಮಾಡಿಕೊಳ್ಳಿ ಎಂದು ಹೇಳಿ, ಇವತ್ತು ತಂದಿರತಕ್ಕಂತಹ ಬಿಲ್ಲನ್ನು ತಿರಸ್ಕಾರ ಮಾಡಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರಾದ ಬಾಲಕೃಷ್ಣರವರು ಹೇಳಿದರು. ಈ ಸದನಕ್ಕೆ ಬಂದ ಮೇಲೆ ನನಗೆ ಬಹಳ ದೊಡ್ಡ ಸಮಸ್ಯೆ ಆಗಿರುವುದು ಎಂದರೆ, ಈ ವಿಧೇಯಕಗಳ ಮಂಡನೆ. ಮೊದಲು ಏನು Act ಇರುತ್ತದೆ ಎಂದು ನಮಗೆ ಗೊತ್ತಿಲ್ಲ. ಅದನ್ನು ನಾವು ಯಾರೂ ಓದುವುದಿಲ್ಲ. ಅದನ್ನು ನಮ್ಮ ಕೈಗೆ ಕೊಡುವುದಿಲ್ಲ. ಇದನ್ನು ನೀವು ತಿದ್ದುಪಡಿ ಮಾಡಬೇಕು. ನಾವು ಏನನ್ನು ತಿದ್ದುಪಡಿ ಮಾಡಬೇಕು. ನಾವು ಏನನ್ನು ತಿದ್ದುಪಡಿ ಮಾಡುವುದು? ಮೊದಲು ಏನು Act ಇತ್ತು ಎನ್ನುವುದನ್ನು you have not supplied for us. ಮೊದಲನೇ Actಗೆ ನೀವು ಅಮೆಂಡ್‌ಮೆಂಟ್ ತರುತ್ತಿದ್ದೀರಿ. ಈಗ ಅಮೆಂಡ್‌ಮೆಂಟ್ ಏನಿದೆ, ಈಗ ನೀವು ಏನು ಅಮೆಂಡ್‌ಮೆಂಟ್ ತರಬೇಕು, ಅದನ್ನು ನೀವು ನಮ್ಮ ಕೈಗೆ ಕೊಟ್ಟಿದ್ದೀರಿ. ಮೊದಲಿನ Act ಏನಿತ್ತು ಎಂದು ಯಾರಿಗೆ ಗೊತ್ತಿದೆ? you have not supplied. We are not Presumed to be know of things. ಇದು ಒಂದು ಭಾಗ. ಇದರೊಳಗೆ ಬಹಳ ನೋವಾಗತಕ್ಕಂಥದ್ದು ಎಂದರೆ ನೀವು ರೈತರ ಪರವಾಗಿ 40–50 ವರ್ಷ ಹೋರಾಟ ಮಾಡಿದಂತಹ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಇಂತಹ ಒಂದು ಅಮೆಂಡ್‌ಮೆಂಟ್ ತರತಕ್ಕಂಥದ್ದು ಇದು ಖಂಡಿತ ಸಾಧುವಲ್ಲ ಎಂದು ನನ್ನ ಭಾವನೆ. ಅವರು ಅನೇಕ ವರ್ಷಗಳ ಕಾಲ ಹೋರಾಟ ಮಾಡಿದ್ದಾರೆ. ನಾನು ಒಬ್ಬ ವಕೀಲನಾಗಿದ್ದಾಗಲೂ ಕೂಡ ಶಿಕಾರಿಪುರದಿಂದ 2000 ದಿಂದ 3000 ಜನ ರೈತರನ್ನು ಕರೆದುಕೊಂಡು ಕಾಲ್ನಡಿಗೆಯಲ್ಲಿ ಶಿವಮೊಗ್ಗಕ್ಕೆ ಬಂದು ರೈತರ ಪರವಾಗಿ ಪ್ರತಿಭಟನೆಯನ್ನು ಮಾಡಿರು

ವಂಥದನ್ನು ನೋಡಿದ್ದೇನೆ. ಸೈದ್ಧಾಂತಿಕವಾಗಿ ನಾವು ಭಿನ್ನ ಇರಬಹುದು ಆದರೆ ಅವರು ಹೋರಾಟವನ್ನು ಮೆಚ್ಚಬೇಕಾಗುತ್ತದೆ. ಇದರಲ್ಲಿ ಮಾನ್ಯ ಕೃಷಿ ಸಚಿವರು ಮತ್ತು ಮಾನ್ಯ ಕಾರ್ಮಿಕ ಸಚಿವರು ಅನೇಕ ಸಾರಿ ಇದರೊಳಗೆ ಮಾತನಾಡಿದರು. ರೈತರ ಪರವಾಗಿರತಕ್ಕಂತಹ ಒಂದು ತಿದ್ದುಪಡಿಯನ್ನು ನೀವು ಇದರಲ್ಲಿ ತೋರಿಸಿದರೆ/ ರೈತರಿಗೆ ಪೂರಕವಾಗಿರತ್ತಕಂಥ ಒಂದು ತಿದ್ದುಪಡಿಯನ್ನು ನೀವು ತೋರಿಸಿದರೆ, ನಾನು ಸಭೆಯಿಂದ ಹೊರಗಡೆ ಹೋಗುತ್ತೇನೆ. ಮಾನ್ಯ ಅಧ್ಯಕ್ಷರೆ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದರಲ್ಲಿ ರೈತರ ಪರವಾಗಿರುವ ಒಂದು ತಿದ್ದುಪಡಿ ಸಹ ಇಲ್ಲ. 1963ರ Act ನಲ್ಲಿ ಇರತಕ್ಕಂಥದ್ದರಲ್ಲಿ ನೀವು ಕರ್ನಾಟಕ ರಾಜ್ಯದಲ್ಲಿ ಎಷ್ಟು ವಿಶ್ವವಿದ್ಯಾನಿಲಯಗಳನ್ನು ಬೇಕಾದರೂ ಮಾಡಬಹುದು. ಆ Actನಲ್ಲಿಯೇ ಇದೆ. ಆ Act ನಲ್ಲಿ Provision ಇದೆ. There is a provision. You can make number of universities. ನೀವು ರಾಯಚೂರು ಜಿಲ್ಲೆಯಲ್ಲಿ ಒಂದು ಮಾಡಬಹುದು, ಬಾಗಲಕೋಟೆಯಲ್ಲಿ ಒಂದು ಮಾಡಬಹುದು, there is a provision. ಆ ಪ್ರಾವಿಷನ್ ಒಳಗೆ ನೀವು ಇನ್ನೊಂದು ಯೂನಿವರ್ಸಿಟಿ ಮಾಡಬಹುದು. ಈಗ ಅಮೆಂಡ್‌ಮೆಂಟ್ ತಂದಿರತಕ್ಕಂಥದ್ದರೊಳಗೆ ನಾನು ಇದರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆಡಳಿತ ಪಕ್ಷ ವಿರೋಧ ಪಕ್ಷ ಎಂದು ಎನ್ನತಕ್ಕಂಥ ಯೋಚನೆ ಮಾಡುವುದು ಬೇಡ. ಇವತ್ತು ನೀವು ಇರಬಹುದು, ನಾಳೆ ನಾನು ಹೋಗಬಹುದು. ಈಗ 15 ಜನರನ್ನು ಮಾಡಿದ್ದೀರಿ. 10 ಜನ ಅಧಿಕಾರಿಗಳು. ವೈಸ್‌ಚಾನ್ಸಲರ್‌ರನ್ನು ಪಾರ್ಟಿ ಮಾಡಿ ವೈಸ್‌ಚಾನ್ಸಲರ್‌ಗಿಂತ ಕೆಳಗಿರತಕ್ಕ ಅಧಿಕಾರಿ ವಿಚಾರಣೆ ಮಾಡತಕ್ಕದ್ದು. 9 ಜನ ಅಧಿಕಾರಿಗಳು, ವೈಸ್‌ಚಾನ್ಸಲರ್‌ಗಿಂತ ಕೆಳಗಿರತಕ್ಕ ಅಧಿಕಾರಿಗಳು. ಈ ತಿದ್ದುಪಡಿ ಹೇಗಿದೆ ಎಂದರೆ, ಒಬ್ಬ ಡಿಸಿ ಮೇಲೆ ರೆವಿನ್ಯೂ ಇನ್ಸ್‌ಪೆಕ್ಟರ್‌ಗೆ ನೀನು investigate ಮಾಡು ಎಂದು ಹೇಳಿದ ಹಾಗೆ. ವೈಸ್‌ಚಾನ್ಸಲರ್‌ಗಿಂತ ಕೆಳಗಿರತಕ್ಕಂತಹ 9 ಜನ ಅಧಿಕಾರಿಗಳು ವೈಸ್‌ಚಾನ್ಸಲರ್‌ಗಿಂತ ಕೆಳಗಿರತಕ್ಕಂತಹ ಅಧಿಕಾರಿಗಳು. ಆ ಅಧಿಕಾರಿಗಳು ವೈಸ್‌ಚಾನ್ಸಲರ್ ಹೇಳಿದ್ದಕ್ಕೆ ಸಹಿ ಹಾಕಿ ಹೋಗುತ್ತಾರೆ ವಿನಹಃ ವೈಸ್‌ಚಾನ್ಸಲರ್ ಎದುರುಗಡೆ ನಿಂತು ನೀವು ಇದನ್ನು ಮಾಡಿದ್ದು ತಪ್ಪು ಎಂದು ಹೇಳುವುದಿಲ್ಲ. ತಾವು ಅರ್ಥ ಮಾಡಿಕೊಳ್ಳಬೇಕು. ಈ ತಿದ್ದುಪಡಿಯಲ್ಲಿ ಏನಿದೆ ಎಂದರೆ, 13 ಜನರಲ್ಲಿ 10 ಜನ ಅಧಿಕಾರಿಗಳು ಮೂರು ಜನ ರೈತರು ಇದ್ದಾರೆ.

ಇದರಲ್ಲಿ ರೈತರ ಪರವಾಗಿರತಕ್ಕಂಥ ಒಂದಂಶವನ್ನು ನೀವು ತೋರಿಸಿದರೂ ಕೂಡ ನಾನು ಈ ಸಭೆಯಿಂದ ಹೊರಗೆ ಹೋಗುತ್ತೇನೆ. ಇದರೊಳಗೆ ಲಾಭ ನಷ್ಟಗಳ ಪ್ರಶ್ನೆಯಲ್ಲ. ನೀವು ಹೇಳಿರುವಂತೆ ಈ ಮೀಟಿಂಗ್‌ನಲ್ಲಿ 13 ಜನರು ಇದ್ದಾರೆ, ಈ Vice Chancellor ಏನೋ ತಪ್ಪು ಮಾಡಿದ್ದರು, ಯಾವನೋ ಒಬ್ಬ ಅಧಿಕಾರಿ ತಪ್ಪು ಮಾಡಿದ್ದ ಎಂದರೆ ಆಗ No Confidence Motion Move ಮಾಡಬೇಕು ಎಂದರೆ ಏನಿದೆ ಇದರೊಳಗೆ? ಯಾರು ಇದನ್ನು ವಿರೋಧ ಮಾಡಬೇಕು? ಕೆಳಗಡೆ ಇದ್ದ ಅಧಿಕಾರಿಗಳು ಯಾರೂ ಮಾಡುವುದಿಲ್ಲ. ಆದರೆ ಈ ಹಿಂದೆ ಇರುವುದ ರೊಳಗೆ 6 ಜನ ರೈತರು, 6 ಜನ ಅಧಿಕಾರಿಗಳು, ಒಬ್ಬರು Vice Chancellor ಇದ್ದರು. Enquiryಯನ್ನು conduct ಮಾಡಬಹುದಾಗಿತ್ತು. ಆದರೆ ಈಗ Vice Chancellor ಗಿಂತ ಕೆಳಗಡೆಯ ಅಧಿಕಾರಿಗಳು ಅಲ್ಲಿರತಕ್ಕಂಥದ್ದು. 9 ಜನರಿದ್ದಾರೆ. ನೀವು ಅದನ್ನು ಹೇಗೆ ಮಾಡುತ್ತೀರಿ? ಈಗಾಗಲೇ ಹಾಲಿ ಇರತಕ್ಕಂಥದ್ದರಲ್ಲಿ ಇರುವ ತೊಂದರೆಯಾದರೂ ಏನು? ಮಾನ್ಯ ಕಾರ್ಮಿಕ ಸಚಿವರು ಉತ್ತರ ಕೊಡುತ್ತಾ ರೀಜೆಂಟ್‌ಗೂ ಮತ್ತು ಈಗಿರತಕ್ಕಂಥದ್ದಕ್ಕೂ ಏನು ವ್ಯತ್ಯಾಸ ಎಂದು ಕೇಳಿದರು. ವ್ಯತ್ಯಾಸವೇನೂ ಇಲ್ಲ. It is only a language. ಅಲ್ಲಿ ಆಡಳಿತ ಮಂಡಳಿ ಎಂದು ಇದೆ. ಇಲ್ಲಿ ರೀಜೆಂಟ್ ಎಂದು ಇದೆ. ವ್ಯತ್ಯಾಸವೇನೂ ಇಲ್ಲ. ಏನೆಂದರೆ ಈ Act ಅನ್ನು ಬದಲಾವಣೆ ಮಾಡಿದಾಗ Name will be different ಅಷ್ಟೆ. ಇಬ್ಬರದ್ದೂ ಒಂದೇ. ಅಲ್ಲಿ 10 ಜನರಿದ್ದರು. ಇಲ್ಲಿ 13 ಜನರಾದರು. ಅಲ್ಲಿ 6 ಜನ ರೈತರು ಮತ್ತು 6 ಜನ ಅಧಿಕಾರಿಗಳಿದ್ದರು. ಇಲ್ಲಿ ಕೇವಲ 3 ಜನ ರೈತರಿದ್ದಾರೆ ಮತ್ತು 10 ಜನ ಅಧಿಕಾರಿಗಳಿದ್ದಾರೆ. ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ರೈತ ಹೋರಾಟಗಳನ್ನು ಮಾಡಿರುವಂಥ ಯಡಿಯೂರಪ್ಪನವರ ನೇತೃತ್ವದ ಸರ್ಕಾರದಲ್ಲಿ ರೈತರಿಗೆ ಅವಕಾಶವೇ ಇಲ್ಲದಿರತಕ್ಕಂಥದ್ದು ಸರಿಯಲ್ಲ. ಇನ್ನೊಂದು ಬಹಳ ಪ್ರಮುಖ ಅಂಶವಿದೆ. ಬಹುಶಃ ಇದನ್ನು ನೀವು ಅಧ್ಯಯನ ಮಾಡಿಲ್ಲ. Vice Chancellor is having every right to remove any nominated person on the next day itself. ಇವತ್ತು ಮೂರು ಜನರನ್ನು nominate ಮಾಡಿ, he is having liberty to remove him. ಇವತ್ತು nominate ಮಾಡುತ್ತಾರೆ. He can remove it on the

following day. But ಹಿಂದಿನ Act ನಲ್ಲಿ they cannot be removed till 3 years. ಹಿಂದಿನ Act ನಲ್ಲಿ ಮೂರು ವರ್ಷ ಅವರು ಅಬಾಧಿತ, ಈಗ ಸರ್ಕಾರ ಮೂರು ಜನರನ್ನು ನಾಮಿನೇಟ್ ಮಾಡುತ್ತದೆ. ಅಥವಾ ಹಿಂದಿನ Actನಲ್ಲಿ 6 ಜನರನ್ನು ನಾಮಿನೇಟ್ ಮಾಡುವುದಕ್ಕೆ ಸರ್ಕಾರಕ್ಕೆ ಅವಕಾಶವಿದೆ. ಆ ಆರು ಜನರನ್ನು Vice Chancellor cannot be removed.

ಶ್ರೀ ಬಿ.ಎನ್. ಬಚ್ಚೇಗೌಡ : ಈಗ ರಾಜ್ಯಪಾಲರು ಮೂರು ಜನರನ್ನು nominate ಮಾಡುತ್ತಾರೆ. ಸರ್ಕಾರದವರು ಮೂರು ಜನರನ್ನು nominate ಮಾಡುತ್ತಾರೆ.

ಶ್ರೀ ಕಿಮ್ಮನೆ ರತ್ನಾಕರ್ : ನಾನು ಅದರ ಬಗ್ಗೆ ಹೇಳುತ್ತೇನೆ. I am addressing the Speaker, Please. He is listening to me.

ಶ್ರೀ ಅಮರೇಗೌಡ ಬಯ್ಯಾಪುರ್ : ಸರ್ಕಾರವೇ ಅಧಿಕಾರ ತೆಗೆದು ಕೊಂಡರೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಆ ಅಧಿಕಾರವನ್ನು ಒಬ್ಬ ವ್ಯಕ್ತಿಗೆ ಕೊಡುವುದು ಸರಿಯಲ್ಲ.

(ಗೊಂದಲ)

ಶ್ರೀ ಉಮೇಶ್ ವಿ.ಕತ್ತಿ : ಮಾನ್ಯ ಉಪಾಧ್ಯಕ್ಷರೆ, ಕೆ.ಜಿ.ಎಫ್.ಗೆ ನಾಮಿನೇಟ್ ಮಾಡಿದರೆ ಅದಕ್ಕೂ ವಿರೋಧ ಮಾಡುತ್ತಾರೆ. ಇಲ್ಲಿಗೆ ನಾಮಿನೇಟ್ ಮಾಡಿದರೆ ಇದಕ್ಕೂ ವಿರೋಧ ಮಾಡುತ್ತಾರೆ.

ಶ್ರೀ ಅಮರೇಗೌಡ ಬಯ್ಯಾಪುರ್ : ನಾಮಿನೇಶನ್‌ಗೆ ನಮ್ಮ ವಿರೋಧ ವಿಲ್ಲ. ಆದರೆ ಅದು ಸರ್ಕಾರದ ಸ್ವತ್ತಾಗಿರಬೇಕು. ಅದು ವೈಸ್‌ಛಾನ್ಸಲರ್‌ನ ಸ್ವತ್ತಿಗೆ ಹೋಗಬಾರದು. ಅವರ ಅಧಿಕಾರಕೊಳ್ಳಪಡಬಾರದು ಎಂಬುದೇ ನಮ್ಮ ಮನವಿ.

ಉಪಾಧ್ಯಕ್ಷರು : ಹೀಗೆ ಎಲ್ಲರೂ ಮಾತನಾಡಿದರೆ ಅದು ದಾಖಲೆಗೆ ಹೋಗುವುದಿಲ್ಲ.

ಶ್ರೀ ಬಿ. ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ಅಧಿಕಾರಿಗಳ ಸಂಖ್ಯೆಯೇ ಹೆಚ್ಚಾದರೆ, , ,

ಉಪಾಧ್ಯಕ್ಷರು : ರಮಾನಾಥ ರೈರವರೆ, ನಾನು ನಿಮಗೆ ಮಾತನಾಡಲು allow ಮಾಡಿಲ್ಲ. ನೀವು ಇಬ್ಬರು ಮಾತನಾಡಿದ್ದು ದಾಖಲೆಗೆ ಹೋಗುವುದಿಲ್ಲ. ಪ್ಲೀಸ್, ನೀವು ಆಮೇಲೆ ಮಾತನಾಡಿ.

ಶ್ರೀ ಕಿಮ್ಮನೆ ರತ್ನಾಕರ್ : I will conclude my speech. ನಾನು ಹೇಳತಕ್ಕಂಥದ್ದು Vice Chancellorಗೆ ಈಗಿನ Actನಲ್ಲಿ ಯಾವುದೇ nominated member ಅನ್ನು at any movement he can be removed. ಆದರೆ ಹಿಂದೆ ಇದ್ದಂಥ Actನಲ್ಲಿ ಮೂರು ವರ್ಷದೊಳಗೆ ಆ ರೈತನನ್ನು ತೆಗೆಯುವುದಕ್ಕೆ ಆಗುವುದಿಲ್ಲ. ಇದು liberty ಇದೆ.

(ಗೊಂದಲ)

ಶ್ರೀ ಬಿ.ಎನ್. ಬಚ್ಚೇಗೌಡ : ಪಾಟೀಲ್ ಎನ್ನುವವರು 4 ಟರ್ಮ್ ಇದ್ದಾರೆ. ಅವರೇ ಸಾಯುವವರೆಗೂ ಇದ್ದುಬಿಡಬೇಕೆ?

(ಗೊಂದಲ)

ಉಪಾಧ್ಯಕ್ಷರು : ಕಿಮ್ಮನೆ ರತ್ನಾಕರ್‌ರವರು ಮಾತನಾಡುವಾಗ ಬೇರೆಯವರು ಮಧ್ಯೆ ಮಾತನಾಡಬೇಡಿ. ಪ್ಲೀಸ್. ರತ್ನಾಕರ್‌ರವರೆ ನೀವು ಬೇಗ ಮುಗಿಸಿ.

ಶ್ರೀ ಟಿ.ಬಿ.ಜಯಚಂದ್ರ : ಪಾಟೀಲ್‌ರವರು ಮೂರು ಟರ್ಮ್ ಇರುತ್ತಾರೋ, ನಾಲ್ಕು ಟರ್ಮ್ ಇರುತ್ತಾರೋ ಅದು ಪ್ರಶ್ನೆಯಲ್ಲ. ಸರ್ಕಾರ ಬೇಕೆಂದರೆ ಅವರನ್ನು one time ಮಾಡಬಹುದು ಅಥವಾ Two time ಮಾಡಬಹುದು. ಒಟ್ಟಿನಲ್ಲಿ ಆ ಅಧಿಕಾರವನ್ನು ಸರ್ಕಾರಕ್ಕೇ ಬಿಡಿ. ನೀವು ಆ ಅಧಿಕಾರವನ್ನೇಕೆ ಮೊಟಕು ಮಾಡುತ್ತಿದ್ದೀರಿ.

ಉಪಾಧ್ಯಕ್ಷರು : ಆಯಿತು ಅವರು ಉತ್ತರ ಕೊಡುತ್ತಾರೆ ಬಿಡಿ. ಪ್ಲೀಸ್, ರತ್ನಾಕರ್‌ರವರೆ ನೀವು ಬೇಗ ಮುಗಿಸಿ.

ಶ್ರೀ ಕಿಮ್ಮನೆ ರತ್ನಾಕರ್ : Sir, My humble request to learned Hon'ble Minister is not to interfere. ನಮ್ಮ ಬಚ್ಚೇಗೌಡರವರು ಗೌರವಾನ್ವಿತ ಸಚಿವರಾಗಿದ್ದಾರೆ. ಅವರು ನನಗೆ interfere ಮಾಡುತ್ತಾರೆ. ದಯವಿಟ್ಟು ನಾನು ಮೊದಲು ಹೇಳಿಬಿಡುತ್ತೇನೆ. ಆಮೇಲೆ ಅವರು ಉತ್ತರ ಕೊಡಲಿ. ನಾನು ಏನು ಅರ್ಥ ಮಾಡಿಕೊಂಡಿದ್ದೇನೆ ಅದನ್ನು ಸಭೆಯ ಗಮನಕ್ಕೆ ತರುವ ಪ್ರಯತ್ನವನ್ನು ಮಾಡುತ್ತೇನೆ. ದಯವಿಟ್ಟು ಮಧ್ಯದಲ್ಲಿ ನನ್ನನ್ನು mislead ಮಾಡಬೇಡಿ. Please, request ಮಾಡುತ್ತೇನೆ. You are at liberty to reply. ನನ್ನ ನಂತರದಲ್ಲಿ ನೀವು reply ಮಾಡಬಹುದು. ಇದರಲ್ಲಿ ಇರತಕ್ಕಂಥದ್ದರಲ್ಲಿ ಏನಿದೆಯೆಂದರೆ, ಅಕಸ್ಮಾತ್ Vice Chancellor

ಏನಾದರೂ ದುರ್ನಡತೆಗೆ ಸಾಬೀತಾದರೆ ಆಡಳಿತ ಮಂಡಳಿಯ ಎರಡನೇ ಮೂರರಷ್ಟು ಸದಸ್ಯರ ಶಿಫಾರಸ್ಸಿನನ್ವಯ ಕುಲಪತಿಯನ್ನು ಸ್ಥಾನದಿಂದ ತೆರವು ಗೊಳಿಸಬಹುದು. ಈಗೇನಾಗುತ್ತದೆಂದರೆ, ಅವರೆಲ್ಲ subordinates ಕುಳಿತು ಕೊಂಡು ಇವರನ್ನು remove ಮಾಡುವುದಾಗಲಿ enquiry ಮಾಡುವು ದಾಗಲಿ ಬರುವುದಿಲ್ಲ. Only option is High Court. One cannot question him. ಏಕೆಂದರೆ ಈಗ ರೆವಿನ್ಯೂ ಇನ್ಸ್‌ಪೆಕ್ಟರ್, ತಹಶೀಲ್ದಾರ್‌ರವರು ಡಿ.ಸಿ.ಯವರನ್ನು question ಮಾಡುವುದಕ್ಕೆ ಹೋಗುವುದಿಲ್ಲ. ಅದೇ ರೀತಿ Vice Chancellorರವರನ್ನು question ಮಾಡತಕ್ಕಂಥ ಯಾವುದೇ ಅಧಿಕಾರಿ ಇದರೊಳಗೆ ಇಲ್ಲ. ಇದರಲ್ಲಿ ಮಾಡಬಹುದು, he is equal to that. Suppose if on Official Vice Chancellor ಗೆ equal ಆಗಿರತಕ್ಕಂಥ cadre ಇರತಕ್ಕಂಥ Officials ಇದ್ದಾರೆಂದರೆ, it is not like that. All of them are subordinates to them. ಈಗ ನೀವೇನು ತಿದ್ದುಪಡಿಯನ್ನು ತಂದಿದ್ದೀರಿ all of them are subordinates. ನಾನು ಹೇಳತಕ್ಕಂಥದ್ದು ಏನೆಂದರೆ, ಇಂಥ ವಿಸ್ತಾರವಾದ ವ್ಯವಸ್ಥೆ ಇರಬೇಕಾದರೆ, ನಾನು ರಾಜಕೀಯ ವ್ಯವಸ್ಥೆಯಲ್ಲಿ ಇದ್ದುಕೊಂಡು ಈ ರೀತಿ ಹೇಳುತ್ತಿಲ್ಲ. ಖಂಡಿತವಾಗಿ ಇದರೊಳಗೆ ಸರ್ಕಾರ ನೇಮಕ ಮಾಡುವವರೇ ಬರುವವರು. ನಾನು ಹೇಳಿದವರು ಬರುವುದಿಲ್ಲ. ನೀವು ನೇಮಕ ಮಾಡುವವರೇ ಅದರೊಳಗೆ ಇರುವವರು. 6 ಜನ ರೈತರನ್ನು ಮಾಡಿ. ಆ ಅಧಿಕಾರಿಗಳನ್ನು ತೆಗೆಯಿರಿ ಎಂದು ನಾನು ಹೇಳುತ್ತಿರುವುದು. It is your liberty. The Government is having a right to nominate. ನೀವೇ ಸರ್ಕಾರದವರೇ ಇಟ್ಟುಕೊಂಡು ನೀವೇ ನಿಮ್ಮ ಅಧಿಕಾರಿಗಳನ್ನು ಕೂರಿಸುವ ಬದಲು ರೈತರನ್ನೇಕೆ ಕೂರಿಸಬಾರದು? ಎಷ್ಟು ಜನ ರೈತರಿದ್ದಾರೆ. ಕರ್ನಾಟಕದಲ್ಲಿ ಕೃಷಿಕ ರತ್ನ ಪಡೆದವರು ಇದ್ದಾರೆ. ಇಡೀ ಪ್ರಪಂಚದಲ್ಲಿಯೇ recognize ಮಾಡಿರುವಂಥ ರೈತರಿದ್ದಾರೆ. You give an opportunity for them.

ಶ್ರೀ ಉಮೇಶ್ ವಿ.ಕತ್ತಿ : ಮಾನ್ಯ ಉಪಾಧ್ಯಕ್ಷರೆ, ಈ ರೀತಿ ಗಂಟೆಗಟ್ಟಲೆ ಭಾಷಣ ಮಾಡಿದರೆ ಹೇಗೆ. ಈಗಾಗಲೇ ಆ ಕಡೆ ಬಹಳಷ್ಟು ಜನರು ಮಾತನಾಡಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು : ರತ್ನಾಕರ್‌ರವರೆ, ಬೇಗ ಮುಗಿಸಿ.

ಶ್ರೀ ಕಿಮ್ಮನೆ ರತ್ನಾಕರ್ : ಮಾನ್ಯ ಉಪಾಧ್ಯಕ್ಷರಲ್ಲಿ ಮತ್ತು ಮಾನ್ಯ ಸಚಿವರಲ್ಲಿ ನನ್ನ ವಿನಂತಿ ಇಷ್ಟೆ. ನಿಮಗೆ ಇರತಕ್ಕಂಥ ಅಧಿಕಾರದಲ್ಲಿ ನೀವು ಆರು ಜನ ರೈತರನ್ನು ಅಲ್ಲಿ ಕೂರಿಸಿ. ನಿಮ್ಮ ಕಡೆಯವರನ್ನೇ ಕೂರಿಸಿ. ಆದರೆ ನೀವು ಅಲ್ಲಿ ಅಧಿಕಾರಿಗಳನ್ನು ಕೂರಿಸಿ ನಿಮಗೆ ಅಧಿಕಾರ ಕೊಟ್ಟಂಥ ರೈತರನ್ನು ಮರೆಯಬೇಡಿ. ಇವತ್ತು ಈ ರಾಜ್ಯದಲ್ಲಿ ನಿಮ್ಮನ್ನು ಈ ಸ್ಥಾನದಲ್ಲಿ ಯಾರಾದರೂ ಕೂರಿಸಿದ್ದರೆ ಅವರು ಕಂಡಿತ ರೈತರು ಎನ್ನತಕ್ಕಂಥದ್ದನ್ನು ನೀವು ಮರೆಯ ಬಾರದು. ಖಂಡಿತ ನೀವು 6 ಜನ ಅಧಿಕಾರಿಗಳನ್ನು ತೆಗೆದು ಅಲ್ಲಿ 6 ಜನ ರೈತರನ್ನು ಸೇರಿಸಿ. ಈ ರೀತಿ ಮಾಡಿದರೆ ನಿಮಗೆ ಯಾವ ತೊಂದರೆಯೂ ಇದರೊಳಗೆ ಇರುವುದಿಲ್ಲ. ಈ ರೀತಿ ತೀರ ಆತುರದಲ್ಲಿ ಇದನ್ನು ಮಂಡನೆ ಮಾಡಿ ಒಪ್ಪಿಗೆ ತೆಗೆದುಕೊಳ್ಳಬೇಕೆಂದು ನೀವು ಪ್ರಯತ್ನ ಮಾಡದೆ ರೈತರ ಹಿತ ಕಾಪಾಡುವ ದೃಷ್ಟಿಯಿಂದ ಇದನ್ನು ವಾಪಸ್ ತೆಗೆದುಕೊಳ್ಳಿ. ಮುಂದಿನ ಅಧಿವೇಶನದಲ್ಲಿ ಇದರ ಬಗ್ಗೆ ವಿಸ್ತಾರವಾಗಿ, ವಿಸ್ತೃತವಾಗಿ ಚರ್ಚಿಸಲು ಮಂಡಿಸತಕ್ಕಂಥದ್ದು ಒಳ್ಳೆಯದು ಎಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : (ಹೊಳೆನರಸೀಪುರ) ಮಾನ್ಯ ಅಧ್ಯಕ್ಷರೇ ಕೃಷಿ ವಿಶ್ವವಿದ್ಯಾಲಯ ವಿಧೇಯಕ 2009, ಇದು ಸುಮಾರು 56 ಪುಟಗಳ ಪುಸ್ತಕವನ್ನು ಕೊಟ್ಟಿದ್ದಾರೆ, ಇದನ್ನು ಅರ್ಧ ಗಂಟೆಯಲ್ಲಿ ಓದಿ ಮಾತನಾಡಿ ಮುಗಿಸಿ ಎಂದು ಹೇಳುತ್ತಿದ್ದಾರೆ. ನಾನು ಒಂದು ಉದಾಹರಣೆ ಕೊಡಬೇಕಾ ಗುತ್ತದೆ. ಮಾನ್ಯ ಕಾನೂನು ಸಚಿವರು ವಿರೋಧ ಪಕ್ಷದ ನಾಯಕರಿಗೆ ನೀಡುತ್ತಿರುವ ಸವಲತ್ತಿನ ಬಗ್ಗೆ ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿರುವಂತಹ ಒಂದು ವಿಚಾರವನ್ನು ಮೊನ್ನೆ quote ಮಾಡಿದರು.

(ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಹೆಚ್.ಡಿ.ರೇವಣ್ಣ : "ಕೃಷಿ ವಿಶ್ವವಿದ್ಯಾನಿಲಯ ವಿಧೇಯಕ, ರೈತರ ಕೆಂಗಣ್ಣು" ಇದನ್ನು ಬರೆದಿರುವುದು ನಾನಲ್ಲ, ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ಅದನ್ನು

ತಮಗೆ ಕಳುಹಿಸಿಕೊಡುತ್ತೇನೆ. ಈ ವಿಧೇಯಕ ಸುಮಾರು 56 ಪುಟ ಇದೆ. ಮಾನ್ಯ ಮಂತ್ರಿಗಳಿಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಮಂತ್ರಿಗಳಿಗೆ ಅಧಿಕಾರಿಗಳು ಇದನ್ನು ಮಾಡಿ ಕಳುಹಿಸಿಕೊಟ್ಟಿದ್ದಾರೆ ಎಂದು ಹೇಳಬೇಕಾಗುತ್ತದೆ. 1963ರ ಆಕ್ಟ್ ಏನಿದೆ ಅದರ ಪ್ರಕಾರ ಆರು ಜನ ರೈತರು ಮತ್ತು ಆರು ಜನ ಅಧಿಕಾರಿಗಳೂ ಇರುತ್ತಾರೆ. ಆದರೆ ಈಗ ಹೊಸದಾಗಿ ತಂದಿರುವ ಆಕ್ಟ್‌ನಲ್ಲಿ ಕೇವಲ ಮೂರು ಜನ ರೈತರು ಮತ್ತು ಹತ್ತು ಜನ ಅಧಿಕಾರಿಗಳು. ಅದರಲ್ಲಿ ಒಂದು ಸಾಮಾನ್ಯ ವರ್ಗಕ್ಕೆ, ಒಂದು ಪರಿಶಿಷ್ಟ ಜಾತಿ ವರ್ಗಕ್ಕೆ, ಒಂದು ಮಹಿಳಾ ವರ್ಗಕ್ಕೆ ಎಂದು ಇಟ್ಟಿದ್ದಾರೆ. ಉದಾಹರಣೆಗೆ ಹೇಳುವುದಾದರೆ ICAR ನಿಂದ 18 ಕೋಟಿ ರೂಪಾಯಿ ಹಣ ಬರುತ್ತದೆ ಎಂದು ಇದರಲ್ಲಿ ಹೇಳಿದ್ದಾರೆ. ಕೇಂದ್ರದ ಕೃಷಿ ಸಚಿವರು ಇರುವಂತಹ ಮಹಾರಾಷ್ಟ್ರ ರಾಜ್ಯದಲ್ಲೇ ಇವತ್ತು 1963 ಆಕ್ಟ್ ಚಾಲ್ತಿಯಲ್ಲಿದೆ. ಅವರು ICAR ನಿಂದ ಏನಾದರೂ ತೆಗೆದುಕೊಂಡಿದ್ದಾರಾ? ಮಹಾರಾಷ್ಟ್ರ ಸರ್ಕಾರ ಏನಾದರೂ ಮಾಡಿದೆಯಾ? ಇದರಲ್ಲಿರುವ ಕೆಲವು ಅಮೆಂಡ್‌ಮೆಂಟ್‌ನ ಭಾಗಗಳನ್ನು ತಮ್ಮ ಗಮನಕ್ಕೆ ತರಬೇಕಾಗುತ್ತದೆ. ಮೊದಲನೆಯದು ಕುಲಪತಿಯವರು ಆದಷ್ಟು ಬೇಗ ವ್ಯವಸ್ಥಿತ ಮಂಡಳಿಯನ್ನು ರಚಿಸತಕ್ಕದ್ದು. ಅದರಲ್ಲಿ ಈಗಾಗಲೇ ರಚಿತವಾಗಿರುವ ಬೆಂಗಳೂರು, ಧಾರವಾಡ ಬಗ್ಗೆ ಹೇಳಿದ್ದೀರಿ, ಆಯಿತು ಅದನ್ನು ಒಪ್ಪಿಕೊಳ್ಳೋಣ. ಕೆಲವು ಅಮೆಂಡ್‌ಮೆಂಟ್‌ನಲ್ಲಿ ಏನಿದೆ ಎಂದರೆ ಉದಾಹರಣೆಗೆ ಹೇಳುವುದಾದರೆ ಮಂಡಲಿಯ ಸಭೆಗೆ 1/3 ಭಾಗದಷ್ಟು ಸದಸ್ಯರು ಕೋರಂಗೆ ಇರತಕ್ಕದ್ದು, ಪರಂತು ಕೋರಂ ಇಲ್ಲದಿದ್ದರೆ ಮಂಡಳಿಯ ಒಂದು ಸಭೆಯನ್ನು ಮುಂದೂಡಿದರೆ ಅದೇ ವ್ಯವಹಾರಗಳನ್ನು ನಡೆಸುವುದಕ್ಕೆ ಮುಂದಿನ ಸಭೆಗೆ ಅಧಿಕಾರ ಕೊಟ್ಟಿದ್ದೀರಿ. ಆದರೆ 1963ರ ಆಕ್ಟ್‌ನಲ್ಲಿ 1/3 ಭಾಗದಷ್ಟು ಸದಸ್ಯರು ಕೋರಂಗೆ ಇರಬೇಕೆಂದು ಇದೆ. ಇವತ್ತು 13 ಜನರಲ್ಲಿ 3 ಅಥವಾ 4 ಜನ ಮೆಂಬರ್ಸ್ ಇದ್ದರೆ ಏನು ಬೇಕಾದರೂ ಮಾಡಿಕೊಳ್ಳಬಹುದು. ಇದು ಏಕೆ ಇರಬೇಕು? ಮೂರು ಜನ ನಾಮಿನೇಷನ್ ಮೆಂಬರ್ಸ್ ಇದ್ದು, ಅದರಲ್ಲಿ ಮಹಿಳಾ, ಸಾಮಾನ್ಯ ಹಾಗೂ ಪರಿಶಿಷ್ಟ ಜಾತಿ ಎಂದು ರೈತರನ್ನು ಇಡುತ್ತೀರಿ. ಇನ್ನು ಬಾಕಿ ಹತ್ತು ಜನ ಅಧಿಕಾರಿಗಳಲ್ಲಿ ನಾಲ್ಕು ಜನ ಹೋದರೆ ಇದ್ದವರು ಏನು ಹೇಳಿದರೂ ಕೂಡ ಅದನ್ನು ಮಾಡಿಕೊಳ್ಳಬಹುದು ಎಂದು ಕಾನೂನು ಇದ್ದರೆ ಪ್ರಜಾವಾಣಿ ಪತ್ರಿಕೆಯಲ್ಲಿ ಬರೆದಿರುವುದೆಲ್ಲ ನಿಜ ಎಂದು ಹೇಳಬೇಕಾಗುತ್ತದೆ.

ಇದು ಯಾವ ಮಟ್ಟಕ್ಕೆ ಇದೆ ಎನ್ನುವುದನ್ನು ಹೇಳಬೇಕಾಗುತ್ತದೆ. ಮೂರು ಜನರ ಪ್ರತಿನಿಧಿಗಳು ಇದ್ದುದ್ದನ್ನು ಆರು ಜನ ಮಾಡಿದ್ದಾರಲ್ಲ, ಇದು ಸರಿಯೇ, ನಾಮಿನೇಷನ್ ಬಗ್ಗೆ ಹೇಳುವುದಾದರೆ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ Non officials ಅನ್ನು ತೆಗೆಯುವ ಅಧಿಕಾರ ಇದೆಯಲ್ಲ ಅದರ ಬಗ್ಗೆ ಸ್ಟೇ ಇದೆ. ಇದರ ಬಗ್ಗೆ ಹೈಕೋರ್ಟ್‌ನಲ್ಲಿ ಕೇಸ್ ಇದೆ ಎಂದು ತಾವೇ ಹೇಳಿದಿರಿ, ಮಾನ್ಯ ಬಚ್ಚೇಗೌಡರು point of Order ಎಂದು ಹೇಳಿದರು. ಮಾನ್ಯ ಸುರೇಶ್‌ಕುಮಾರ್‌ರವರು ಹೇಳಿದರು. ಹೈಕೋರ್ಟ್‌ನಲ್ಲಿ ಯಾವುದೇ ಕೇಸ್ ಇದ್ದರೂ ಕೂಡ.....

ಶ್ರೀ ಬಿ.ಎನ್. ಬಚ್ಚೇಗೌಡ : ರೇವಣ್ಣನವರೇ, ಈ ಆಕ್ಟ್ ಹೈಕೋರ್ಟ್‌ಗೆ ಹೋಗುವ ಹಾಗೆ ಇಲ್ಲ. ಇದು ಹಳೆಯ ಆಕ್ಟ್ ಅಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಹಳೆಯ ಆಕ್ಟ್ ಮೇಲೆ ಸ್ಟೇ ತೆಗೆದುಕೊಂಡು ಬಂದಿದ್ದಾರೆ. ಬಚ್ಚೇಗೌಡರೇ, ನನಗೆ ಗೊತ್ತಿಲ್ಲ, ನೀವು point of Order, Court ಎಂದು ಹೇಳುತ್ತೀರಿ ಅದಕ್ಕೆ ಹೇಳುತ್ತಿರುವುದು.

ಅಧ್ಯಕ್ಷರು : ಹೈಕೋರ್ಟ್‌ನ ಆರ್ಡರ್ ಕಾಪಿ ಕಳುಹಿಸಿಕೊಡಿ.

ಶ್ರೀ ಹೆಚ್.ಡಿ.ರೇವಣ್ಣ : ಕಳುಹಿಸಿಕೊಡುತ್ತೇನೆ. ಇವತ್ತು ಹೈಕೋರ್ಟ್‌ನಲ್ಲಿ ಸ್ಟೇ ಆರ್ಡರ್ ಇದ್ದು, ಇಲ್ಲಿ ನೀವು ಹೇಗೆ ಅಮೆಂಡ್‌ಮೆಂಟ್ಸ್ ತರುತ್ತೀರಿ? ಇದು ಯಾವುದೇ ಆಕ್ಟ್ ಇರಲಿ ಮೆಂಬರ್ಸ್ ಅನ್ನು ತೆಗೆಯಬಾರದು ಎಂದು ಇದೆ. ಇದರಲ್ಲಿ Vice Chancellor ಅಧಿಕಾರ ಕೊಡುವುದು ಎಂದು ಇದೆ. ಅದರ ಬಗ್ಗೆ ಕೋರ್ಟ್‌ನಲ್ಲಿ ತೀರ್ಮಾನವಾಗಲಿ. ಆಮೇಲೆ ಬಿಲ್ ತೆಗೆದುಕೊಂಡು ಬನ್ನಿ. ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನಾವು ಚರ್ಚೆ ಮಾಡಬೇಕೆಂದರೆ ಕನಿಷ್ಠ ಒಂದು ದಿನ ಬೇಕಾಗುತ್ತದೆ. ಇದು ಒಂದೆರಡು ಪುಟ ಅಲ್ಲ, 56 ಪುಟ ಇದೆ. 56 ಪುಟದ ಪುಸ್ತಕ ಮಾಡಿ ಸಾಯಂಕಾಲ ಏಳೂವರೆ ಗಂಟೆಯಲ್ಲಿ ಕೊಟ್ಟು ಏಳೂ ಮುಕ್ಕಾಲು ಗಂಟೆಗೆ ಪಾಸ್ ಮಾಡಿ ಎಂದರೆ ಯಾರು ಪಾಸ್ ಮಾಡುತ್ತಾರೆ? ಮೊನ್ನೆ BACನಲ್ಲಿ ಯಾವುದು important bills ಇವೆ ಅವು ಹತ್ತು ಬಿಲ್‌ಗಳನ್ನು ಪಾಸ್ ಮಾಡಿ ನಮ್ಮದೇನೂ ಅಭ್ಯಂತರವಿಲ್ಲವೆಂದು ಹೇಳಿದ್ದಾರೆ. ಈ ಬಿಲ್ ಬೇಡವೆಂದು ಹೇಳಿದ್ದೆವು. ಆದರೆ ಇದನ್ನೇ prestige ಆಗಿ ಇಟ್ಟುಕೊಂಡು ತಂದಿದ್ದಾರೆ. ಒಂದು ಕಡೆ ರೈತರ ಹೆಸರಿನಲ್ಲಿ ರೈತರ ಪರವಾಗಿ ಪ್ರಮಾಣ ವಚನ ಸ್ವೀಕಾರ ಮಾಡುತ್ತೀರಿ, ಇನ್ನೊಂದು ಕಡೆ ಪತ್ರಿಕೆಯಲ್ಲಿ ರೈತರ ಕೆಂಗಣ್ಣಿಗೆ ಗುರಿ ಎಂದು

ಬಂದಿದೆ. ಮಾನ್ಯ ಸುರೇಶ್ ಕುಮಾರ್‌ರವರು ಯಾವುದು ಕೇಳಿದರೂ ಪ್ರಜಾವಾಣಿ ಎಡಿಟೋರಿಯಲ್, ಸಂಯುಕ್ತ ಕರ್ನಾಟಕ ಎಡಿಟೋರಿಯಲ್ ಎಂದು ಹೇಳುತ್ತಾರೆ. ಪ್ರಜಾವಾಣಿ ಎಡಿಟೋರಿಯಲ್‌ನಲ್ಲಿ ಏನು ಬಂದಿದೆ ಹೇಳಿ.

ಶ್ರೀ ಎಂ. ಶ್ರೀನಿವಾಸ್ : ಮಾನ್ಯ ಅಧ್ಯಕ್ಷರೆ, ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದಂತಹ ಮಾನ್ಯ ಯಡಿಯೂರಪ್ಪನವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ ಎಂದು ಅನೇಕ ಪೇಪರ್‌ನಲ್ಲಿ ಬಂದಿದೆ. ಆದರೆ ಈ ರೀತಿ ಯಾವುದೋ ಒಂದು ಪೇಪರ್‌ನಲ್ಲಿ. ಬಂದಿರುವುದನ್ನು ಮಾತ್ರ ತಾವು ಹೇಳುತ್ತಿದ್ದೀರಿ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೇ, 50,000 ಕೋಟಿ ರೂಪಾಯಿಗಳ ಬಜೆಟ್ ಅನ್ನು ಪಾಸ್ ಮಾಡುವಾಗ ಹತ್ತು ನಿಮಿಷ ಹೈದರಾಬಾದ್ ಕರ್ನಾಟಕದ ಕುಂದುಕೊರತೆಯನ್ನು, ಆ ಭಾಗದ ಸದಸ್ಯರು ಹೇಳುತ್ತೇವೆಂದರೆ ಅದಕ್ಕೆ ಅವಕಾಶ ಕೊಡುವಷ್ಟು ತಾಳ್ಮೆ ಇಲ್ಲ. ಅದನ್ನು ಪತ್ರಿಕೆಯಲ್ಲಿ ಬರೆಯಬೇಕೆ? ಮಾನ್ಯ ಮುಖ್ಯಮಂತ್ರಿಯವರು ನಾಳೆ ಬೆಳಿಗ್ಗೆ 10 ಗಂಟೆಗೆ ಉತ್ತರ ಹೇಳಲಿ ಎಂದರೂ ಕೇಳಲಿಲ್ಲ, ಈ ಸರ್ಕಾರ ಈಗ written statement ಮಾಡಿಸಿದ್ದಾರೆ, ಈ ಸರ್ಕಾರದವರಿಗೆ ಯಾವುದನ್ನು ಕೇಳಿದರೂ written statement ಮಾಡಿಸಿ ಕೊಡುತ್ತಾರೆ. ಈ ವಿಧೇಯಕದ 56 ಪುಟಗಳನ್ನು written statement ಮಾಡಿಸಿಕೊಂಡು ಬಂದು ಕೊಟ್ಟುಬಿಡಿ. ಈಗ ಚರ್ಚೆ ಏಕೆ ಬೇಕು? ಮಾನ್ಯ ಮುಖ್ಯಮಂತ್ರಿಯವರು 60,000 ಕೋಟಿ ರೂಪಾಯಿಗಳಿಗೆ ಬಜೆಟ್ ಮೇಲೆ ನಡೆದ ಚರ್ಚೆಗೆ ಅಧ್ಯಕ್ಷರೆ, ನಮ್ಮ ಅಧಿಕಾರಿಗಳು written statement ಬರೆದುಕೊಟ್ಟಿದ್ದಾರೆ, ಅದನ್ನೆ ನಡಾವಳಿ ಗಳಲ್ಲಿ ಬರೆದುಕೊಳ್ಳಿ ಸ್ವಾಮಿ ಎಂದು ಹೇಳಿದ್ದಾರೆ, ತಾವು ಅದನ್ನೆ ಬರೆದುಕೊಂಡು ಆಯಿತು ತಾನೇ? ಏಕೆಂದರೆ ಈ ಸರ್ಕಾರ written statement ನಲ್ಲಿ ಉತ್ತರ ಕೊಡುವ ಸರ್ಕಾರ ಎಂದು ಹೇಳಬೇಕಾಗುತ್ತದೆ. Oppositionನವರು ಯಾರೂ ಕೂಡ ಹೈದರಾಬಾದ್-ಕರ್ನಾಟಕ ಭಾಗಕ್ಕೆ ಅನ್ಯಾಯವಾದರೆ ಕೇಳುವುದಕ್ಕೆ ಹೋಗಬೇಡಿ, ರೈತರ ಬಗ್ಗೆ ಯಾರೂ ಕೇಳುವುದಕ್ಕೆ ಹೋಗಬೇಡಿ, ಮಲೆನಾಡು ಅಭಿವೃದ್ಧಿ ಬಗ್ಗೆ ಕೇಳುವುದಕ್ಕೆ ಹೋಗಬೇಡಿ, ಬಯಲು ಸೀಮೆ ಪ್ರದೇಶ ಅಭಿವೃದ್ಧಿ ಬಗ್ಗೆ ಕೇಳುವುದಕ್ಕೆ

ಹೋಗಬೇಡಿ. ನೀವು ಕೇಳಿದರೆ ನಾವು ಉತ್ತರ written statement ನಲ್ಲಿ ಮಾಡುತ್ತೇವೆ. ವಿರೋಧ ಪಕ್ಷದ ನಾಯಕರು ಆರು ಗಂಟೆಗೆ ನಿಂತುಕೊಳ್ಳಿ ಎಂದರೆ ಆರು ಗಂಟೆಗೆ ನಿಂತುಕೊಳ್ಳಬೇಕು. ಕುಳಿತುಕೊಳ್ಳಿ ಎಂದರೆ ಕುಳಿತುಕೊಳ್ಳಬೇಕು, ನಿಮ್ಮ ಹತ್ತಿರ ಯಾವ ಕಡತ ಇದ್ದರೂ ಬೀರುವಿನಲ್ಲಿ ಇಟ್ಟುಕೊಳ್ಳಿ, ಆಮೇಲೆ ನೋಡೋಣ, ಇನ್ನು ನಾಲ್ಕು ವರ್ಷ ಟೈಂ ಇದೆಯಲ್ಲ. 60,000 ಕೋಟಿ ರೂಪಾಯಿಗೆ ನಾಲ್ಕು ವರ್ಷ ಟೈಂ ಇದೆ.

ಶ್ರೀ ಉಮೇಶ್ ವಿ.ಕತ್ತಿ : ವಿರೋಧ ಪಕ್ಷದ ನಾಯಕರಿಗೆ HKDB ಬಗ್ಗೆ ಮಾತನಾಡುವುದಕ್ಕೆ ಜವಾಬ್ದಾರಿ ಇದೆ. ಅವರು ಹಾಸನದ ಆಲೂಗಡ್ಡೆ ಬಗ್ಗೆ ಮಾತನಾಡುತ್ತಾರೆ, ಹಾಸನದಲ್ಲಿ ಮಳೆ ಬಗ್ಗೆ ಮಾತನಾಡುತ್ತಾರೆ, HKDB ಬಗ್ಗೆ ಮಾತನಾಡುವಂತಹ......

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಬಿಜಾಪುರದ ಕಬ್ಬು ಬೆಳೆಗಾರರ ವಿಚಾರದಲ್ಲಿ ನಾನು ಮಾತನಾಡಿದೆ. ಎಷ್ಟು ಜನ ಮೆಂಬರ್ಸ್ ಇದ್ದರು? ಈ ಸರ್ಕಾರದ್ದು ಏನೆಂದರೆ ಬಜೆಟ್ ಮೇಲೆ ನಡೆದ ಚರ್ಚೆಗೆ written statement ಮೂಲಕ ಉತ್ತರ ಕೊಟ್ಟರು. ಆ ಬಗ್ಗೆ ರಾಜ್ಯದ ಜನತೆಗೆ ಬೆಳಕು ಚೆಲ್ಲಬೇಕಲ್ಲ.

ಅಧ್ಯಕ್ಷರು : ರೇವಣ್ಣನವರೇ, ಬಿಲ್ ಬಗ್ಗೆ ಮಾತನಾಡಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಮಾನ್ಯ ಜಯಚಂದ್ರರವರೇ, ಇನ್ನೊಂದು ಪ್ರಮುಖ ವಿಷಯ ತಾವು ಮರೆತಿದ್ದೀರಿ. ಈ ಬೋರ್ಡ್, ಮೆಂಬರ್ಸ್, ಅಧಿಕಾರ, ಮ್ಯಾನೇಜ್‌ಮೆಂಟ್, ರಿಜೆಂಟ್ ಅದು ಒಂದು ಕಡೆ ಇರಲಿ, ಈಗಿರುವಂತಹ 1963ರ ಆಕ್ಟ್‌ನಲ್ಲಿ private Agriculture colleges ಬರುವುದಕ್ಕೆ ಅವಕಾಶ ಇಲ್ಲ. ಈ ಹೊಸ ಆಕ್ಟ್ ಪ್ರಕಾರ Private Agriculture colleges ಬರುವುದಕ್ಕೆ ಅವಕಾಶಗಳಿವೆ. ಅದು ಮೇಜರ್ ಚೇಂಜ್.

ಅಧ್ಯಕ್ಷರು : ರೇಣ್ಣನವರೇ continue ಮಾಡಿ.

ಶ್ರೀ ಬಸವರಾಜ ಬೊಮ್ಮಾಯಿ : ಈಗ ಯೂನಿವರ್ಸಿಟಿಯಿಂದ ಫಂಡ್ ತೆಗೆದುಕೊಳ್ಳುವುದಕ್ಕೆ ಬಹಳಷ್ಟು ಸುಲಭವಾಗಿ ಈ ಆಕ್ಟ್‌ನಲ್ಲಿ ಪ್ರಾವಿಜನ್ ಮಾಡಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ : ಅಧಿಕಾರವನ್ನು ರೈತರ ಕೈಗೆ ಕೊಡಿ ಎಂದು ಅಷ್ಟೇ ಕೇಳಿರುವುದು.

ಶ್ರೀ ಟಿ.ಬಿ.ಜಯಚಂದ್ರ : Vice Chancellorಗೆ ಅಧಿಕಾರ ಕೊಡಬಾರದು ಎಂದು ಮಾತ್ರ ಕೇಳಿದ್ದೇವೆ.

ಶ್ರೀ ಹೆಚ್.ಡಿ.ರೇವಣ್ಣ : ಈ ಸರ್ಕಾರ ಬಜೆಟ್‌ಗೆ ಉತ್ತರ ಕೊಡುವಾಗ written statement ಮೂಲಕ ಉತ್ತರ ಕೊಟ್ಟರು. ಈ ಬಿಲ್ 56 ಪುಟಗಳ written statement ಇದ್ದ ಹಾಗೆ ಇದೆ. ಕೃಷಿ ಸಚಿವರಿಗೆ ಇದರ ಬಗ್ಗೆ ಏನೂ ಗೊತ್ತಿಲ್ಲ. ಅಧಿಕಾರಿಗಳು ಮತ್ತು ಕೃಷಿ ವಿಶ್ವವಿದ್ಯಾನಿಲಯದ Vice Chancellor ರವರು ಏನು ಬರೆದು ಕೊಟ್ಟಿದ್ದಾರೋ ಅದನ್ನೇ ಬಿಲ್ ರೂಪದಲ್ಲಿ ತಂದು ಮಂಡಿಸಿದ್ದಾರೆ. ಈ ಬಿಲ್‌ನಲ್ಲಿ 10 ಜನ ಅಧಿಕಾರಿಗಳಿದ್ದಾರೆ. ನಾಚಿಕೆಯಾಗಬೇಕು. ಈ ಸರ್ಕಾರ ರೈತರ ಹೆಸರಿನ ಮೇಲೆ ಪ್ರಮಾಣವಚನ ತೆಗೆದುಕೊಳ್ಳುತ್ತಾರೆ. 10 ಜನ ಅಧಿಕಾರಿಗಳು, 3 ಜನ ರೈತರು ಅವರು ಅಲ್ಲಿ ಮಾತನಾಡುವುದಕ್ಕೆ ಅವಕಾಶವಿಲ್ಲ. ಕೋರಂ ಇಲ್ಲದೆ ಮೀಟಿಂಗ್ ಮಾಡುವುದೇ? ಇಂತಹ ಬಿಲ್‌ಗೆ ನಾವು ಅನುಮತಿಯನ್ನು ಕೊಡಬೇಕೆ, ಮಾನ್ಯ ವಿರೋಧ ಪಕ್ಷದ ನಾಯಕರ ಸವಲತ್ತಿನ ಬಗ್ಗೆ ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ ಎಂದು ಹೇಳಿದರು. ಅದನ್ನೇ ಮಾನ್ಯ ಕಾನೂನು ಸಚಿವರು ಸಹ ಹೇಳಿದರು. ಈಗ ಇದಕ್ಕೆ ಏನು ಹೇಳುತ್ತಾರೆ?. ಈ ಮಸೂದೆಯು ರೈತರ ಪ್ರಾತಿನಿಧ್ಯಕ್ಕೆ ಬಿದ್ದ ಕೊಡಲಿಪೆಟ್ಟು ಎಂದು ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ ಇದಕ್ಕೆ ಏನು ಹೇಳುತ್ತಾರೆ. ಇದನ್ನು ಬೇಕಾದರೆ ತಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಉಮೇಶ್ ವಿ.ಕತ್ತಿ : ಇದೇ ವಿಷಯ ಬೇರೆ ಬೇರೆ ರೀತಿಯಾಗಿ ಪತ್ರಿಕೆಯಲ್ಲಿ ಬಂದಿರಬಹುದು.

ಅಧ್ಯಕ್ಷರು : ಮಾನ್ಯ ಉಮೇಶ್ ಕತ್ತಿಯವರೆ, ತಾವು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಮಂತ್ರಿಗಳು ಮಧ್ಯದಲ್ಲಿ ಮಾತನಾಡುವುದು ಸರಿಯಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ನಂಬರ್ ಪ್ಲೇಟ್.....

ಅಧ್ಯಕ್ಷರು : ಮಾನ್ಯ ರೇವಣ್ಣನವರೆ conclude ಮಾಡಿ ಮುಗಿಸಿ. ಅವರು ಮಾತನಾಡುವುದನ್ನು complete ಮಾಡಲಿ.

(ಗೊಂದಲ)

ಶ್ರೀ ಉಮೇಶ್ ವಿ. ಕತ್ತಿ : ಅವರು ಏನು ಬೇಕಾದರೂ ವಾದ ಮಂಡಿಸಲಿ.

ಅಧ್ಯಕ್ಷರು : ಮಂತ್ರಿಗಳು ಪದೇ ಪದೇ ಈ ರೀತಿ ಉತ್ತರವನ್ನು ಕೊಡುವುದಕ್ಕೆ ಹೋಗಬೇಡಿ. ಮಾನ್ಯ ರೇವಣ್ಣನವರು ಮೊದಲು ಮಾತನಾಡಿ ಮುಗಿಸಲಿ. ಪದೇ ಪದೇ ಎಲ್ಲರೂ reply ಕೊಡುವುದಕ್ಕೆ ಹೋದರೆ ಅದಕ್ಕೆ end ಇಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ತೋಟಗಾರಿಕೆ ಮಂತ್ರಿಗಳು ನಂಬರ್ ಪ್ಲೇಟ್ ಬಗ್ಗೆ ಹೇಳುತ್ತಾರೆ. ಅವರು ತನಿಖೆ ಆದೇಶ ವನ್ನು ಮಾಡಲಿ, ಇವತ್ತು ನಾನು prove ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರು, ಈ ಬಗ್ಗೆ ಸ್ವಲ್ಪ ಹೇಳಬೇಕು. ನಾನು ಮೊದಲನೇ ದಿನವೂ ಹೇಳಿದೆ ಈಗಲೂ ಸಹ ಹೇಳುತ್ತಿದ್ದೇನೆ. ನಿಮ್ಮ ಅನುಮತಿಯನ್ನು ಕೇಳಿದ ಮೇಲೆ ಎದ್ದು ನಿಂತು ಅವರು ಮಾತನಾಡ ಬೇಕಲ್ಲವೇ?

ಅಧ್ಯಕ್ಷರು : ಅವರು ಪದೇ ಪದೇ ಎದ್ದು ನಿಂತುಕೊಳ್ಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : ಮಂತ್ರಿಗಳೇ ಈ ರೀತಿಯಾಗಿ ಮಾಡಿದರೆ ಏನು ಮಾಡಬೇಕು?

ಅಧ್ಯಕ್ಷರು : ಆ ಬಗ್ಗೆ ನಾನು ಅವರಿಗೆ ಹೇಳುತ್ತಿದ್ದೇನೆ. ಆದರೂ ಪದೇ ಪದೇ ಎದ್ದುನಿಂತುಕೊಂಡು ಮಾತನಾಡುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : ಮೇಷ್ಟ್ರೆ ಈ ರೀತಿಯಾಗಿ ಎದ್ದುನಿಂತುಕೊಂಡು ಕುಣಿದರೆ ಸ್ಟೂಡೆಂಟ್ಸ್ ಏನು ಮಾಡುತ್ತಾರೆ?

ಅಧ್ಯಕ್ಷರು : ಮಾನ್ಯ ಕೃಷಿ ಸಚಿವರು ಉತ್ತರವನ್ನು ಕೊಡಬೇಕು. ಅವರು ಉತ್ತರವನ್ನು ಕೊಡುತ್ತಾರೆ.

ಶ್ರೀ ಸಿದ್ದರಾಮಯ್ಯ : This is not correct.

ಅಧ್ಯಕ್ಷರು : ಯಾರಾದರೂ explain ಮಾಡಲಿ.

ಶ್ರೀ ಸಿದ್ದರಾಮಯ್ಯ : ನಾನು ಕೊಡುತ್ತೇನೆ ಎಂದು ಮಂತ್ರಿಗಳು ಕೇಳಬೇಕು. ಅವರು ಅನುಮತಿಯನ್ನು ತೆಗೆದುಕೊಂಡು ಮಾತನಾಡಲಿ.

ಶ್ರೀ ಹೆಚ್.ಡಿ.ರೇವಣ್ಣ : ನಮ್ಮ ಬ್ರದರ್ ಮಾತನಾಡಲಿ, ಆಮೇಲೆ ಏನಾದರೂ ಹೊಸ ವಿಷಯ ಇದ್ದರೆ ಮಾತನಾಡೋಣ.

ಅಧ್ಯಕ್ಷರು : ತಮ್ಮದು ಇನ್ನು ಮುಗಿದಿಲ್ಲವೇ?

ಶ್ರೀ ಹೆಚ್.ಡಿ.ರೇವಣ್ಣ : ಯಾವುದಾದರೂ ಇದ್ದರೆ ಬೆಳಗಾಂದು......

ಶ್ರೀ ಎಸ್.ಸುರೇಶ್‌ಕುಮಾರ್ : ಮಾನ್ಯ ರೇವಣ್ಣನವರೆ ಒಂದು ನಿಮಿಷ ತಾಳಿ ನಾನು ಮಾತನಾಡುತ್ತೇನೆ. ಈ ಸದನದಲ್ಲಿ......

ಶ್ರೀ ಸಿದ್ದರಾಮಯ್ಯ : ಮಂತ್ರಿಗಳೆಲ್ಲರನ್ನು ಬಿಟ್ಟುಬಿಟ್ಟಿದ್ದೀರಾ?

ಶ್ರೀ ಎಸ್.ಸುರೇಶ್‌ಕುಮಾರ್ : ಅವರೆಲ್ಲರೂ ಕುಳಿತಿದ್ದಾರೆ.

ಶ್ರೀ ಸಿದ್ದರಾಮಯ್ಯ : ಒಂದು ನಿಮಿಷ ಅವರು request ಮಾಡಬೇಕು. ಅವರು yield ಆಗುತ್ತೀರಾ ಎಂದು ಕೇಳಬೇಕು. ಇದನ್ನು ಯಾರು ಕೇಳುವುದಿಲ್ಲ. ನೀವು ಅನುಮತಿಯನ್ನು ಕೊಡುತ್ತೀರಾ ಎಂದು ಯಾರೂ ಕೇಳುವುದಿಲ್ಲ. Point of Order raise ಮಾಡಿದ್ದೇವೆಂದು ಅದನ್ನು ಸಹ ಹೇಳುವುದಿಲ್ಲ. ಸುಮ್ಮನೆ ನಿಂತುಕೊಂಡು ಏನಾದರೂ ಹೇಳುತ್ತಾರೆ.

ಶ್ರೀ ಎಸ್.ಸುರೇಶ್‌ಕುಮಾರ್ : ನಾನು ಪಾಠವನ್ನು ಕಲಿತಿದ್ದೇನೆಂದು ಆಯಿತು.

ಶ್ರೀ ಸಿದ್ದರಾಮಯ್ಯ : ನಾನು ನಿಮಗೆಲ್ಲಾ ಹೇಳುತ್ತಿರುವುದು.

ಶ್ರೀ ಎಸ್. ಸುರೇಶ್‌ಕುಮಾರ್ : Thank you.

ಶ್ರೀ ಸಿದ್ದರಾಮಯ್ಯ : Not to you. ನಾನು ನಿಮಗಲ್ಲ ಹೇಳುತ್ತಿರುವುದು ಜನರಲ್ ಆಗಿ ಹೇಳುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ತಾವು continue ಮಾಡಿ.

ಶ್ರೀ ಸಿದ್ದರಾಮಯ್ಯ : ತಾವು ಕೋಪಿಸಿಕೊಂಡರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ನಾನು ಕಾನೂನು ಸಚಿವರಲ್ಲಿ ಮನವಿಯನ್ನು ಮಾಡುವುದಿಷ್ಟೇ. ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ನಿಲುವಳಿ ಸೂಚನೆಯನ್ನು ತಂದರು. ರಾಜ್ಯದಲ್ಲಿ ಏನಾಗಿದೆ ಅದರ ಬಗ್ಗೆ ಚರ್ಚೆ ಮಾಡೋಣವೆಂದು ತಂದರು. ಅವರು ಪ್ರಜಾವಾಣಿ ಪತ್ರಿಕೆಯನ್ನು ಕೋಟ್ ಮಾಡಿದರು. ನಾನು ಅದೇ ಉದ್ದೇಶಕ್ಕಾಗಿ ಮಾನ್ಯ ಕಾನೂನು ಸಚಿವರಿಗೆ ಹೇಳುತ್ತೇನೆ. ವಿರೋಧ ಪಕ್ಷದ ನಾಯಕರಿಗೆ ಇರುವ ಸವಲತ್ತನ್ನು ಸರ್ಕಾರದ ದಾಖಲಾತಿಯಲ್ಲಿ 60,000 ಕೋಟಿ ರೂಪಾಯಿಗಳ ಬಗ್ಗೆ ದಾಖಲಾತಿಯನ್ನು ತೆಗೆದುಕೊಳ್ಳಬೇಕಲ್ಲ. ಒಬ್ಬ ವಿರೋಧ ಪಕ್ಷದ ನಾಯಕರು ಅದರ ಬಗ್ಗೆ ಕೇಳಿದಾಗ ಪ್ರಜಾವಾಣಿ ಪತ್ರಿಕೆಯ editorialನಲ್ಲಿ ಬಂದಿದೆ ಎಂದು

ಹೇಳಿದರು. ಈ ಪ್ರಜಾವಾಣಿ ಪತ್ರಿಕೆಯ editorial ನಲ್ಲಿ ಈ ಮಸೂದೆಯ ಬಗ್ಗೆ ಏನು ಬಂದಿದೆ. ಇದನ್ನು ಓದಬೇಕೇ, ಮಾನ್ಯ ಶ್ರೀನಿವಾಸ್‌ರವರೆ, ಪ್ರಜಾವಾಣಿ ಪತ್ರಿಕೆ ಸೋಮವಾರ 17ನೇ ಜುಲೈ "ರೈತರ ಪ್ರಾತಿನಿಧ್ಯಕ್ಕೆ ಕೊಡಲಿ ಪೆಟ್ಟು" ಇದನ್ನು ಮಾನ್ಯ ಸಭಾಧ್ಯಕ್ಷರೆ ನಿಮಗೂ ಸಹ ಕಳುಹಿಸಿ ಕೊಡುತ್ತೇನೆ. ಇದನ್ನು ತಾವು ದಯಮಾಡಿ ಓದಿ.

ಅಧ್ಯಕ್ಷರು : ಕಳುಹಿಸಿಕೊಡಿ.

ಶ್ರೀ ಹೆಚ್.ಡಿ.ರೇವಣ್ಣ : ಈಗ ಈ ಮಸೂದೆ 56 ಪುಟ ಇದೆ, ಒಬ್ಬ ವಿರೋಧ ಪಕ್ಷದ ನಾಯಕರಿಗೆ ವಿರೋಧ ಪಕ್ಷದ ಸದಸ್ಯರಿಗೆ ಈ ಸರ್ಕಾರ written statement ಮೂಲಕ ಉತ್ತರ ಕೊಡುತ್ತಾರೆ. 60,000 ಕೋಟಿ ರೂಪಾಯಿಗಳ ಬಜೆಟ್ ಮೇಲೆ ಮಾನ್ಯ ಮುಖ್ಯಮಂತ್ರಿಗಳು ನಾಳೆ ಬೆಳಿಗ್ಗೆ 10.00 ಗಂಟೆಗೆ ಉತ್ತರವನ್ನು ಕೊಡುತ್ತಾರೆ. ಈ ಸರ್ಕಾರವು ಅಧಿಕಾರಿಗಳು ಬರೆದುಕೊಟ್ಟ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡಬೇಕಾಗಿದೆ ಎಂದು ತಾವು ನನಗೆ ಮಾತನಾಡುವುದಕ್ಕೆ ಕಾಲಾವಕಾಶವನ್ನು ಕೊಡಲಿಲ್ಲ. ಈ ರಾಜ್ಯದ 5 ಕೋಟಿ ಜನರ ಹಿತ ಮುಖ್ಯವೋ ಅವರ ಪಕ್ಷದ ಕಾರ್ಯಕಾರಿ ಸಮಿತಿಯ ಸಭೆ ಮುಖ್ಯವೋ ಎಂದು ದಯಮಾಡಿ ಹೇಳಲಿ.

ಅಧ್ಯಕ್ಷರು : ತಾವು ಬಿಲ್ ಬಗ್ಗೆ ಮಾತನಾಡಿ.

ಶ್ರೀ ಹೆಚ್.ಡಿ.ರೇವಣ್ಣ : ನಾನು ಬಿಲ್ ಬಗ್ಗೆಯೇ ಮಾತನಾಡು ತ್ತಿರುವುದು.

(ಗೊಂದಲ)

ಈ ಬಿಲ್‌ನ್ನು ವಾಪಸ್ಸು ತೆಗೆದುಕೊಳ್ಳಬೇಕು. ..

(ಗೊಂದಲ)

ಅಧ್ಯಕ್ಷರು : ಮಾನ್ಯ ರಮಾನಾಥರೈರವರೆ ತಾವು ಮಾತನಾಡಿ.

ಒಬ್ಬ ಮಾನ್ಯ ಸದಸ್ಯರು : ಬಿಲ್ ಬಗ್ಗೆ ಮಾತನಾಡಿ.

ಶ್ರೀ ಹೆಚ್.ಡಿ.ರೇವಣ್ಣ : ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಬಿಲ್ ತಂದಿರುವುದು ಒಳ್ಳೆಯದು ಎಂದು ತಾವು ಒಪ್ಪಿಕೊಂಡರೆ ನೀವು ಹೇಳಿದನ್ನು ನಾವು ಒಪ್ಪಿಕೊಳ್ಳುತ್ತೇವೆ ಸ್ವಾಮಿ.

ಅಧ್ಯಕ್ಷರು : ಮಾನ್ಯ ರಮಾನಾಥ ರೈರವರೆ ತಾವು ಮಾತನಾಡಿ.

ಶ್ರೀ ಹೆಚ್.ಡಿ.ರೇವಣ್ಣ : ಈ ಬಿಲ್‌ನಲ್ಲಿ ಇರುವುದೆಲ್ಲಾ ರೈತರ ಪರವಾಗಿದೆ ಎಂದು ತಾವು ಒಪ್ಪಿಕೊಂಡರೆ ತಾವು ರೈತರ ಮಕ್ಕಳಿದ್ದೀರಿ

ಎಂದು ಅರ್ಥ. ಈ ಬಿಲ್ ರೈತರ ಪರವಾಗಿದೆ ಎಂದು ಹೇಳಿದರೆ ನಾವು ಈ ಬಗ್ಗೆ ಏನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಈ ಬಿಲ್ 56 ಪುಟಗಳಷ್ಟಿದೆ. ಒಂದು written statement ಅನ್ನು ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ಗೆ ಉತ್ತರವಾಗಿ ಕೊಟ್ಟಿದ್ದಾರೆ. ಅದೇ ರೀತಿಯಾಗಿ ಈ ಬಿಲ್ ರೈತರ ಪರವಾಗಿದ್ದರೆ ನಾನು ಒಪ್ಪಿಕೊಂಡು ಬಿಡುತ್ತೇನೆ. ನಾನು ರೈತರ ಪರವಾಗಿ ಹೇಳುವುದು ಈ ಬಿಲ್ ರೈತರ ಪರವಾಗಿಲ್ಲ. ಆದ್ದರಿಂದ ದಯಮಾಡಿ ವಾಪಸ್ಸು ತೆಗೆದುಕೊಳ್ಳಿ. Septemberನಲ್ಲಿ ಈ ರಾಜ್ಯದ ಹಗರಣಗಳ ಬಗ್ಗೆ ಚರ್ಚೆ ಮಾಡಲು ವಿಶೇಷ ಅಧಿವೇಶನ ಕರೆಯುತ್ತಿದ್ದೀರಿ. ಆ ಟೈಮ್‌ನಲ್ಲಿ ಸವಿಸ್ತಾರವಾಗಿ ಒಂದು ಅರ್ಧದಿನ ರೈತರ ಪರವಾಗಿ ಚರ್ಚೆ ಮಾಡೋಣ. 1963ರ Act ಪ್ರಕಾರ ರಾಯಚೂರಿನಲ್ಲಿ Agriculture university ಮಾಡುವುದಕ್ಕಾಗುವುದಿಲ್ಲವೇ? ಎರಡು ಕಡೆಯಲ್ಲಿ university ಮಾಡಿ. ನಾವು ಬೇಡವೆಂದು ಹೇಳುವುದಿಲ್ಲ. ಹಳೆಯ act ನಲ್ಲಿಯೇ university ಯನ್ನು ಮಾಡಿ.

ಶ್ರೀ ಕೆ.ಎಸ್.ಈಶ್ವರಪ್ಪ : ನಾನು ಒಂದು ನಿಮಿಷ ಮಾತನಾಡುತ್ತೇನೆ.

ಶ್ರೀ ಬಿ.ರಮಾನಾಥರೈ : ಮಾನ್ಯ ಈಶ್ವರಪ್ಪನವರೆ, ಮಾನ್ಯ ಸಭಾಧ್ಯಕ್ಷರು ನನ್ನ ಹೆಸರನ್ನು ಕರೆದಿದ್ದಾರೆ. ನಮಗೇನು ಮಾತನಾಡುವ ಚಪಲ ಇಲ್ಲ.

(ಗೊಂದಲ)

ಅಧ್ಯಕ್ಷರು : ಎಲ್ಲರೂ ಒಂದು ಸಾರಿ ಮಾತನಾಡಿ ಮುಗಿಸಲಿ.

ಶ್ರೀ ವೆಂಕಟರಾವ್ ನಾಡಗೌಡ : ಮಾನ್ಯ ಅಧ್ಯಕ್ಷರೆ., ನಾನು ಮಾತನಾಡುತ್ತೇನೆ.

ಅಧ್ಯಕ್ಷರು : ಮಾನ್ಯ ನಾಡಗೌಡರೆ ತಮಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ವೆಂಕಟರಾವ್ ನಾಡಗೌಡ : ಹಾಗಾದರೆ ಮಾತ್ರ ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಸನ್ಮಾನ್ಯ ಅಧ್ಯಕ್ಷರೆ, ಇದು act ನಲ್ಲಿ ಇಲ್ಲ.

ಅಧ್ಯಕ್ಷರು " ಅವರದು ಮುಗಿಯಲಿ ನಿಮಗೂ ಸಹ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ. ಮಾನ್ಯ ಮಂತ್ರಿಗಳು ಏನು intervene ಮಾಡಿದ್ದಾರೆ.

ಶ್ರೀ ಎಸ್.ಎ.ರವೀಂದ್ರನಾಥ್ : ಕೃಷಿ ವಿಶ್ವವಿದ್ಯಾನಿಲಯದ ಬಿಲ್‌ನ್ನು ತಂದಿರುವುದು ಇದು ರೈತರ ಪರವಾಗಿ ಇರುವುದೇ ಹೊರತು ಬೇರೆ ಏನು ಅಲ್ಲ. ನಮ್ಮ ರೈತರಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಅಧಿಕಾರೇತರೆಲ್ಲರಿಗೂ ಸಹ ರೈತರ ಪ್ರತಿನಿಧಿಗಳಾಗಿ ಅವರು ಸಹ ಸರ್ಕಾರದ ಪ್ರತಿನಿಧಿಗಳನ್ನಾಗಿ ರಾಜ್ಯಪಾಲರೆ ನಾಮಿನೇಷನ್ ಮಾಡುತ್ತಾರೆ. ಇನ್ನು 3 ಜನರನ್ನು ಸರ್ಕಾರದವರು ಮಾಡುತ್ತಾರೆ. ನಮ್ಮ ಎಲ್ಲಾ ಅಧಿಕಾರಿಗಳು ಇರುವಂತಹದ್ದು ಸ್ಪಷ್ಟವಾಗಿರುವಂತಹದ್ದು.

ಅಧ್ಯಕ್ಷರು : ನಿಮಗೂ ಅವಕಾಶ ಕೊಡುತ್ತೇನೆ ಇಲ್ಲವೆಂದು ಹೇಳುವುದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಕಾನೂನು ಸಚಿವರಿಗೆ ಹೇಳುವುದು ಇಷ್ಟೆ. 1963 ರ ಆಕ್ಟ್‌ನಲ್ಲಿ 6 ಜನ ರೈತಾಪಿ ಜನರು ಇರುತ್ತಿದ್ದರು ಅದನ್ನು ತರಲಿ. 6 ಜನರನ್ನು Nomination ಅವರೇ ಮಾಡಿ ಕೊಳ್ಳಲಿ ನಮ್ಮ ಅಭ್ಯಂತರವೇನಿಲ್ಲ. 1963ರ ಆಕ್ಟ್‌ನಲ್ಲಿ ಏನು ಇತ್ತು ಅದನ್ನು ಮಾಡಲಿ. ಒಂದು ಸಲ Nomination ಆದ ಮೇಲೆ ಅವರ ಅಧಿಕಾರವನ್ನು Vice Chancellor ಯಾವಾಗ ಬೇಕಾದರೂ ತೆಗೆಯಬಹುದು. ಏಕೆಂದರೆ ಸರ್ಕಾರಗಳು ಚೇಂಜ್ ಆಗುತ್ತವೆ ರೈತರು ಮೂರು ವರ್ಷಕ್ಕೆ Nomination ಆದ ಮೇಲೆ ಅವರು ಮೂರು ವರ್ಷ ಇರಬೇಕು. ಅದಕ್ಕೆ ಬೇಕಾದ Amendment ಏನಿದೆ ಅದು ತರಬೇಕು. ಮೂರು-ನಾಲ್ಕು ಜನ ಅಧಿಕಾರಿಗಳು ಸೇರಿ ಮಾಡಿಕೊಳ್ಳುವ ಕೋರಂ ಏನು ಇದೆಯಲ್ಲಾ, ಅದಕ್ಕೆ Amendment ತರಬೇಕಾಗುತ್ತದೆ. 56 ಪುಟಗಳ ಒಂದು ಬಿಲ್ ಇದೆ ಇದನ್ನು ಬೇಕಾದರೆ ಮುಂದಿನ ಅಧಿವೇಶನಕ್ಕೆ ತರಲಿ. ಮಾನ್ಯ ವಿರೋಧ ಪಕ್ಷದ ನಾಯಕರು ಎಲ್ಲಾ ವಿಷಯವನ್ನು ಬಜೆಟ್ ಮೇಲೆ ಹೇಳಿದ್ದಾರೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳ ಉತ್ತರದಲ್ಲಿ, ಒಂದಾದರೂ ಉತ್ತರ ಇದೆಯಾ ಸ್ವಾಮಿ. ಇದರಲ್ಲಿ ಉತ್ತರ ಇದ್ದರೆ ನಾನು ಒಪ್ಪಿಕೊಂಡು ಬಿಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮತ್ತು ಸದಸ್ಯರುಗಳಿಗೆ ಅವಕಾಶವನ್ನು ಕೊಟ್ಟು ಚರ್ಚೆ ಮಾಡಿದ ಮೇಲೆ ವಿರೋಧ ಪಕ್ಷದ ನಾಯಕರು ಹೇಳಿರುವುದಕ್ಕೆ ಗೌರವವಾದರೂ ಬೇಡವೇ? ಸರ್ಕಾರ ಕೊಟ್ಟ Written statementನಲ್ಲಿ ಸರ್ಕಾರದ ಏನು ಉತ್ತರ ಇದೆ, ಅಧಿಕಾರಿಗಳು ಬರೆದು ಕೊಟ್ಟರು, ಮಾನ್ಯ ಮುಖ್ಯಮಂತ್ರಿಗಳು ಒಂದು Written statement ಕೊಡುತ್ತೇನೆಂದು

ಅಧ್ಯಕ್ಷರಿಗೆ ಹೇಳಿದ ಮೇಲೆ ಅವರು ಏನು ಮಾಡುತ್ತಾರೆ ಅವರು ಅದನ್ನೇ ಬರೆದುಕೊಳ್ಳಬೇಕಾಗುತ್ತದೆ. ಅದೇ ನಾಳೆ ಬೆಳಗ್ಗೆ ಪತ್ರಿಕೆಯಲ್ಲಿ ಬರುತ್ತದೆ. ವಿರೋಧ ಪಕ್ಷದ ನಾಯಕರು ಹೇಳಿದ್ದಕ್ಕೆ ಇಲ್ಲಿ ಉತ್ತರವೇ ಇಲ್ಲವೆಂದು ಹೇಳಬೇಕಾಗುತ್ತದೆ. Written statement ಸರ್ಕಾರದ ಉತ್ತರವೆಂದು ಹೇಳಬೇಕಾಗುತ್ತದೆ. ಆದ್ದರಿಂದ ಈಗ ಈ ಬಿಲ್‌ನ್ನು ವಾಪಸ್ಸು ತೆಗೆದುಕೊಂಡು ಸೆಪ್ಟೆಂಬರ್‌ನಲ್ಲಿ ತೆಗೆದುಕೊಂಡು ಬರಲಿ, ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ (ಹುನಗುಂದ) : ಮಾನ್ಯ ಅಧ್ಯಕ್ಷರೆ, ಕೃಷಿ ವಿಜ್ಞಾನ ವಿಶ್ವವಿದ್ಯಾನಿಲಯಗಳ ವಿಧೇಯಕ-2009ನ್ನು ನಾನು ಸ್ವಾಗತ ಮಾಡುತ್ತೇನೆ. ಇದರಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡುವುದರ ಮುಖಾಂತರ ಈ ವಿಧೇಯಕವನ್ನು ಅಂಗೀಕರಿಸಬೇಕೆಂದು ಸರ್ಕಾರಕ್ಕೆ ತಮ್ಮ ಮೂಲಕ ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ. ಈ ಮೊದಲು ಇದ್ದಂತೆ 6 ಜನ ರೈತ ಪ್ರತಿನಿಧಿಗಳು ಇರಬೇಕು. ಈಗಾಗಲೇ ಈ ವಿಧೇಯಕದಲ್ಲಿ ತಂದಿರತಕ್ಕಂಥ ಕೆಲವು ಅಧಿಕಾರಿಗಳನ್ನು ಕೈಬಿಟ್ಟು ಅಂದರೆ, Commissioner of Agriculture ಮತ್ತು ಒಬ್ಬರು Dean ಏನಿದ್ದಾರೆ ಅವರನ್ನು ಕೈಬಿಡಬೇಕು ಮತ್ತು Registrar ಅವರನ್ನು ಕೈಬಿಟ್ಟು ಅವರ ಜಾಗಕ್ಕೆ ಇನ್ನುಳಿದ ರೈತ ವರ್ಗದವರನ್ನು ಮತ್ತು Agriculture Graduate ಗಳನ್ನು ಇನ್ನು ಹೆಚ್ಚಿಗೆ ಮಾಡಿ ಈ ಒಂದು ವಿಧೇಯಕವನ್ನು ಅಂಗೀಕರಿಸಬೇಕು. ಈ ಮೊದಲು 6 ಜನ ರೈತ ಪ್ರತಿನಿಧಿಗಳ ಅವಕಾಶ ಇತ್ತು ಅದೇ ರೀತಿ ಮಾಡಿ ಈ ವಿಧೇಯಕವನ್ನು ಅಂಗೀಕರಿಸಬೇಕೆಂದು ನಾನು ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಕೆ. ಎಂ. ವಿರೂಪಾಕ್ಷಪ್ಪ (ಚನ್ನಗಿರಿ) : ಮಾನ್ಯ ಅಧ್ಯಕ್ಷರೆ, ಕೃಷಿ ವಿಶ್ವವಿದ್ಯಾನಿಲಯಗಳ ವಿಧೇಯಕ-2009ನ್ನು ಏನು ತಂದಿದ್ದಾರೆ, ಇದೊಂದು ಪ್ರಗತಿಪರ ಬದಲಾವಣೆ ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಈ ಹಿಂದೆ Nomination ಮಾಡತಕ್ಕಂಥ ಸಂದರ್ಭದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಅವಕಾಶ ಇರಲಿಲ್ಲ. ಅಂತಹ ಅವಕಾಶವನ್ನು ಈ ಮಸೂದೆಯನ್ನು ಕಲ್ಪಿಸಿದ್ದಾರೆ, ಇದು ನಿಜಕ್ಕೂ ಮೆಚ್ಚಬೇಕಾದಂಥ ಮತ್ತು ಪರಿಶಿಷ್ಟ ಜಾತಿ:ಪಂಗಡದವರ ಪರವಾಗಿ ಇರತಕ್ಕಂಥ ಸರ್ಕಾರ ಎನ್ನುವುದನ್ನು ತೋರಿಸುವ ಒಂದು ವಿಧೇಯಕ ಇದು. ಆದ್ದರಿಂದ ಇದನ್ನು ಸ್ವಾಗತಿಸ

ಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಕೃಷಿ ಸಚಿವರು ಮಾತನಾಡುತ್ತಾ ಹೇಳಿದರು. ಈಗ ತಿದ್ದುಪಡಿಯನ್ನು ನಾನು ಮಾಡುತ್ತೇನೆಂದು ಹೇಳಿದರು. ಅಧಿಕಾರಿಗಳಿಗಿಂತ ಅಧಿಕಾರೇತರ ಸದಸ್ಯರನ್ನು ಹೆಚ್ಚಾಗಿ ಮಾಡುವುದರ ಮೂಲಕ ಈ ವಿಧೇಯಕವನ್ನು ಇಲ್ಲಿ ಪಾಸ್ ಮಾಡಬೇಕು. ಇಲ್ಲಿ Vice Chancellorಗಳಿಗೆ ಒಂದು termಗೆ ಅವಕಾಶವನ್ನು ಕಲ್ಪಿಸಿದ್ದಾರೆ. ಒಬ್ಬೊಬ್ಬ Vice Chancellor ಗಳು ಎರಡೆರಡು ಭಾರಿ ಆಯ್ಕೆಯಾಗುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಕೃಷಿ ತಜ್ಞರು ಒಂದು ನಿಮಿಷ ಕೇಳಿ ಇದರಲ್ಲಿ ಇದೆ. ಒಂದು ನಿಮಿಷ ಮಾತನಾಡುವುದಕ್ಕೆ ನನಗೆ ಅವಕಾಶವನ್ನು ಕೊಡಿ, ನೀವು ಮಾತನಾಡುವಾಗ ನಾವು ಕೇಳಲಿಲ್ಲವೆ?

ಅಧ್ಯಕ್ಷರು : ದಯವಿಟ್ಟು ಮಧ್ಯೆದಲ್ಲಿ interpret ಮಾಡುವುದರಲ್ಲಿ ಹೋಗಬೇಡಿ.

ಶ್ರೀ ಕೆ.ಎಂ. ವಿರೂಪಾಕ್ಷಪ್ಪ : ಇರುವ ಅವಕಾಶವನ್ನು ಒಂದೇ ಬಾರಿಗೆ nominate ಆಗುವುದಕ್ಕೆ ಅವಕಾಶವನ್ನು ಕಲ್ಪಿಸಿದ್ದಾರೆ. Board of Membersಗೆ ಕೂಡ ಒಂದು termಗೆ ಮಾತ್ರ ಅವಕಾಶವನ್ನು ಕಲ್ಪಿಸಿದ್ದಾರೆ. ಉದಾಹರಣೆಗೆ ಧಾರವಾಡದಲ್ಲಿ ಒಬ್ಬರು ನಾಲ್ಕು ಸಲ ಸದಸ್ಯರಾಗಿದ್ದಾರೆ. ಬೆಂಗಳೂರಿನಲ್ಲಿ ಎರಡೆರಡು ಬಾರಿ ಸದಸ್ಯರಾಗಿದ್ದಾರೆ. ಅಂಥವರಿಗೆ ಅವಕಾಶ ವಿಲ್ಲದಂತೆ ಒಂದೇ ಬಾರಿಗೆ ಅವಕಾಶ ಮಾಡಿರುವುದರಿಂದ ಬಹಳಷ್ಟು ಜನ ಬುದ್ಧಿವಂತ ಕೃಷಿಕರು ಮತ್ತು ಕೃಷಿ ತಜ್ಞರು ಸದಸ್ಯರಾಗುವುದಕ್ಕೆ ಅವಕಾಶವಿದೆ. ಆದ್ದರಿಂದ ಕೃಷಿ ಸಚಿವರು ತಂದಿರುವ ಈ ಬಿಲ್‌ನ್ನು ಪಾಸ್ ಮಾಡಬೇಕು. ಅಧಿಕಾರೇತರ ಸದಸ್ಯರನ್ನು ಜಾಸ್ತಿ ಮಾಡಬೇಕು. ಸಭೆಯನ್ನು ನಡೆಸತಕ್ಕಂಥ ಸಂದರ್ಭದಲ್ಲಿ ಇರುವ quorum ಗೆ ತಿದ್ದುಪಡಿಯನ್ನು ಮಾಡಬೇಕು. ಅದರಲ್ಲಿ ಕೊನೆಯ ಪಕ್ಷ 50% ಜಾಸ್ತಿ ಸದಸ್ಯರನ್ನು ಇಟ್ಟುಕೊಂಡು ಸಭೆಯನ್ನು ನಡೆಸಬೇಕು. ಸಣ್ಣಪುಟ್ಟ ತಿದ್ದುಪಡಿಗಳೊಂದಿಗೆ ಈ ಬಿಲ್‌ನ್ನು ಪಾಸ್ ಮಾಡಬೇಕೆಂದು ಹೇಳಿ ತಮ್ಮ ಮೂಲಕ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಎಸ್.ನಾಡಗೌಡ (ಅಪ್ಪಾಜಿ) : ಮಾನ್ಯ ಅಧ್ಯಕ್ಷರೆ, ಈ ವಿದೇಯಕದ ಮೇಲೆ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತಾ, ಮೊದಲನೆಯದಾಗಿ ನಮ್ಮ ಕೃಷಿ ಮಂತ್ರಿಗಳಿಗೆ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಯಾವ ಕಾರಣಕ್ಕೋಸ್ಕರ ಈ ಮಸೂದೆಯನ್ನು

ತಂದಿದ್ದೀರಿ. ಇದು ನಿಜಕ್ಕೂ ಮೇಲ್ನೋಟಕ್ಕೆ ಆ ಮಸೂದೆ ತಾವು ಹೇಳುವ ರೀತಿಯಲ್ಲಿ ನಾವು ರೈತರ ಮತ್ತು ವ್ಯವಸಾಯ ಮಾಡತಕ್ಕಂಥ ವರ್ಗಕ್ಕೆ ಹೆಚ್ಚು ಪ್ರಾತಿನಿಧ್ಯ ಕೊಡಬೇಕು ಮತ್ತು Universityಗಳಲ್ಲಿ ಒಂದು ಗುಣಮಟ್ಟದ ಆಡಳಿತ ಬರಬೇಕೆಂದು ಏನು ಹೇಳುತ್ತೀರಿ, ಅದರ ಬಗ್ಗೆ ಮಾಜಿ ಉಪ ಕುಲಪತಿಗಳು ಹಿಂದೂ ಪತ್ರಿಕೆಯಲ್ಲಿ 19-1-2009ರಲ್ಲಿ Mr. Dwarakanath, who is also a former Vice Chancellor of University of Agriculture Sciences, Bangalore took exception to increasing the representation to bureaucracy in the University's Governing Board, which is headed by the Vice Chancellor. He told the Hindu. Having 5 IAS officers on the Board will affect the autonomy of the University, as officials will dominate the Board proceedings. This will harm the interest of the university. ಇದನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಆಮೇಲೆ ತಾವು ಈಗ ಸ್ಪಷ್ಟೀಕರಣ ಕೊಟ್ಟಿರುತ್ತೀರಿ. ಇದಕ್ಕೆ ತಿದ್ದುಪಡಿ ಮಾಡಿ ರೈತ ಸಮುದಾಯ ದಿಂದ ಹೆಚ್ಚು ಜನ ಬರುವವರಿಗೆ ಅನುಕೂಲವಾಗುವಂತೆ ಒಂದು ತಿದ್ದುಪಡಿ ತಂದು ಇಬ್ಬರನ್ನು ಕಡಿಮೆ ಮಾಡಿ ಪ್ರಾತಿನಿಧ್ಯ ಹೆಚ್ಚಿಸುತ್ತೇವೆಂದು ಹೇಳಿದಿರಿ ಅದನ್ನು ಸ್ವಾಗತಿಸುತ್ತೇವೆ. ಅಲ್ಲಿ ಇನ್ನೊಂದು ಪದವನ್ನು ಉಪಯೋಗ ಮಾಡಿದ್ದಾರೆ. ಏನೆಂದರೆ Second Term ಯಾರು ನಿಮ್ಮ Elected Members ಇದ್ದಾರೆ ಅವರು ಪುನಃ ಅಲ್ಲಿ ಹೋಗುವುದಕ್ಕೆ ಅವಕಾಶವಿಲ್ಲ. ಏಕೆ ಇದನ್ನು ತರುತ್ತಿದ್ದೀರಿ? ಅಲ್ಲಿ ನಾಲ್ಕು ಜನ ಬಂದಿದ್ದಾರೆಂದು ಹೇಳಿದ್ದೀರಲ್ಲಾ? Yes, ನಾನು ಏಕೆ ಹೇಳುತ್ತಿದ್ದೇನೆಂದರೆ, ಯಾಕೆ ಈ ಷರತ್ತನ್ನು ಹಾಕುತ್ತಿದ್ದೀರಿ. ಎರಡು ಸಲ ತಮ್ಮ ಪಕ್ಷದ ಬಿಜೆಪಿ ಸದಸ್ಯರು ಅಲ್ಲಿ ಬರಲಿಲ್ಲವೆ? Why do you Prevent them when we feel, they are experts in the subject ಅವರ servicesನ್ನು ತೆಗೆದು ಕೊಳ್ಳೋಣ. ಅವರ ಅನುಭವವನ್ನು ಪಡೆಯಬೇಕು ವಿನಹಃ ಅವರು ಒಂದು ಪಕ್ಷಕ್ಕೆ Loyal ಇಲ್ಲವೆಂದು ದಿಢೀರನೆ ಬದಲಾವಣೆ ಮಾಡತಕ್ಕಂಥ ಈ ಶಾಸನ ಸರಿಯಿಲ್ಲ. ಈ ಶಾಸನ ರೈತರ interestಗೆ ಧಕ್ಕೆ ತರುವಂಥದ್ದು ಆಗುವುದಿಲ್ಲವೆ? ದಯವಿಟ್ಟು ಇದರ ಬಗ್ಗೆ ಚಿಂತನೆಯನ್ನು ಮಾಡಿ. ಕೊನೆಯ ಪಕ್ಷ ಎರಡು term ಎನ್ನುವುದಾದರೂ introduce ಮಾಡಿ. ಇವತ್ತು Reservation

policy ಯನ್ನು let us all admit here. Reservation roster system ಅನ್ನು ಜಿಲ್ಲಾ ಪಂಚಾಯತ್‌ನಲ್ಲಿ 20 ಮತ್ತು 10 ತಿಂಗಳಿಗೊಂದು ಸಲ ಜಿಲ್ಲಾ ಪಂಚಾಯತಿಯಲ್ಲಿ roster systemನ್ನು ತಂದಿದ್ದೇವಲ್ಲಾ ಯಾವ ಮಟ್ಟದಲ್ಲಿ ಇವತ್ತು ಅಲ್ಲಿ ದುಷ್ಪರಿಣಾಮವಾಗಿದೆ ಎನ್ನುವುದು ತಮಗೆ ಗೊತ್ತು ಅದನ್ನು 5 ವರ್ಷಕ್ಕೆಂದು ಸೀಮಿತ ಮಾಡಬೇಕಾಗಿತ್ತು. ಅವನಿಗೆ ಒಂದು term ಎಂದ ಮೇಲೆ ಅವನು ವ್ಯಾಪಾರ ಮಾಡಿಕೊಂಡು ಮನೆಗೆ ಹೋಗುತ್ತಾನೆ. ಅವನು ಒಳ್ಳೆಯ ಹೆಸರು ತೆಗೆದುಕೊಳ್ಳಬೇಕು ಅಥವಾ ನಾನು ಕೀರ್ತಿ ತೆಗೆದುಕೊಳ್ಳಬೇಕು. ಅಲ್ಲಿ ಸೇವೆ ಸಲ್ಲಿಸಬೇಕು ಎನ್ನುವ ಮನೋಭಾವನೆ ಅವನ ಹತ್ತಿರ ಉಳಿದುಕೊಳ್ಳುವುದಿಲ್ಲ. ಅವನು ಮುಂದೆ ಯಾವ ಸರ್ಕಾರ ಬರುತ್ತದೆ ನಾನು nominate ಆಗುತ್ತೇನೋ ಇಲ್ಲವೆಂದು ತಿಳಿದುಕೊಳ್ಳುತ್ತಾನೆ. ಏಕೆ ನೀವು ಈ ತರವಾದಂಥ ಯಾರದೋ ಮಾತನ್ನು ಕೇಳಿಕೊಂಡು ಈ ಬಿಲ್ ತರುತ್ತೀರಿ? ಒಂದನ್ನು ತಮಗೆ ಇಲ್ಲಿ ಹೇಳುತ್ತೇನೆ. ಇಲ್ಲಿ ಕೆಲವರು ಕುಳಿತಿರುತ್ತಾರಲ್ಲಾ ಅವರು ನಮ್ಮ ಅಧಿಕಾರವನ್ನು ಮೊಟಕುಗೊಳಿಸುವಂಥ ರೀತಿಯಲ್ಲಿ ವಿಚಾರವನ್ನು ನಿಮ್ಮ ಹತ್ತಿರ ಬಂದು ಪದೇ ಪದೇ ಹೇಳುತ್ತಾರೆ, ಅದನ್ನು ನೀವು ತಲೆಯಲ್ಲಿ ಹಾಕಿಕೊಳ್ಳಬೇಡಿ. ಶಾಸಕರ ಮತ್ತು ಜನಪ್ರತಿನಿಧಿಗಳ ಅಧಿಕಾರವನ್ನು ಯಾವ ರೀತಿಯಾಗಿ ಮೊಟಕುಗೊಳಿಸಬೇಕೋ ಅದಕ್ಕೆ ಎಲ್ಲಾ ಪ್ರಯತ್ನಗಳು ನಡೆಯುತ್ತವೆ. This Legislature Assembly should not become a victim of that.

ನಮ್ಮ ಸದನ ಇಂಥ ಮಸೂದೆ ತರತಕ್ಕಂಥ ಪೂರ್ವದಲ್ಲಿ ನಾನು ಹೇಳುವುದಿಲ್ಲ, ಈ ಮಸೂದೆ ಬಗ್ಗೆ ಸುಮಾರು ಮೂರು ತಾಸು ಚರ್ಚೆ ಮಾಡಿದ್ದೇವೆ. ಅದೇ ಸಲಹೆಯನ್ನು Parliamentary Affairs and Law Ministerರವರಾದ ಸುರೇಶ್‌ಕುಮಾರ್‌ರವರಿಗೆ ಕೊಡುತ್ತಿದ್ದೆ. ಇಂಥ important billಗಳನ್ನು ತರುವಾಗ ನಿಮ್ಮಲ್ಲಿಯೇ ಒಂದು core committeeಯನ್ನು ಮೊದಲು ರಚನೆ ಮಾಡಿ. ಆ core committee ಯಲ್ಲಿ exports ಅನ್ನು, ಇಲ್ಲಿ ಹಿರಿಯರಾದ, ಅನುಭವಿಗಳಾದ ಉದಾಸಿ ಇದ್ದಾರೆ, ಇಂಥವರನ್ನೆಲ್ಲ involve ಮಾಡಿಕೊಳ್ಳಿ. ಈ ಮಸೂದೆಯನ್ನು ತರುವುದು ಸೂಕ್ತ ಹೌದೋ, ಅಲ್ಲವೋ ಎನ್ನುವ ನಿರ್ಣಯವನ್ನು ನಿಮ್ಮ ಪಕ್ಷದಲ್ಲಿ ತೆಗೆದುಕೊಂಡು ನಂತರ ಸದನಕ್ಕೆ ಬನ್ನಿ. ಇಲ್ಲಿ ಚರ್ಚೆ ಮಾಡುವುದಕ್ಕೂ

ಅನುಕೂಲವಾಗುತ್ತದೆ. ಸಮಯವನ್ನು ನಾವು ವ್ಯರ್ಥವಾಗಿ ಕಳೆಯುವುದಿಲ್ಲ. ಆದ್ದರಿಂದ ದಯವಿಟ್ಟು ಈ ಮಸೂದೆಗೆ ಮಹತ್ವವಾದ ಬದಲಾವಣೆಗಳನ್ನು ತಾವು ತಂದಿದ್ದೇ ಆದರೆ ನಾವು ಇದಕ್ಕೆ ಒಪ್ಪಿಗೆ ಕೊಡುತ್ತೇವೆ.

ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮೀ ಲೇಔಟ್) : ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯ ವಿಧೇಯಕ, 2009 ಇದರ ಸುಗ್ರೀವಾಜ್ಞೆಗೆ ತಿದ್ದುಪಡಿ ಬಂದಿದೆ. ನನ್ನ ಮನಸ್ಸಿಗೆ ಬಹಳ ನೋವಾಗುತ್ತದೆ. ರೈತರ ಹೆಸರಿನಲ್ಲಿ ಪ್ರಮಾಣ ವಚನ ಮಾಡಿದಂಥ ಸರ್ಕಾರ ಇಂಥ ತಿದ್ದುಪಡಿಯನ್ನು ಯಥಾವತ್ತಾಗಿ ಅನುಷ್ಠಾನ ಮಾಡಿದರೆ ಇದು ರೈತರಿಗೆ ಪೂರಕವಾಗುವುದಿಲ್ಲ, ಮಾರಕವಾಗುತ್ತದೆ. ಈ ಶಾಸನವನ್ನು ಖಂಡಿತವಾಗಿಯೂ ಯಥಾವತ್ತಾಗಿ ಅನುಷ್ಠಾನ ಮಾಡಿದರೆ ಅದು ಮರಣ ಶಾಸನವಾಗುತ್ತದೆ, ಪ್ರಜಾಪ್ರಭುತ್ವದ ವಿರೋಧಿ ನೀತಿಯಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಏಕೆಂದರೆ, ಈ ವಿಶ್ವವಿದ್ಯಾನಿಲಯದ ಅಧಿವೇಶನಗಳಾಗಲಿ, ಸಂಶೋಧನೆಗಳಾಗಲಿ ಇವತ್ತು ರೈತರಿಗೂ, ಅಲ್ಲಿ ಆಗತಕ್ಕಂಥ ಅಧಿವೇಶನ, ಸಂಶೋಧನೆಗಳಿಗೂ ದಿನೇ ದಿನೇ ಕಂದಕ ಜಾಸ್ತಿಯಾಗುತ್ತಿದೆ. ಈ ತಿದ್ದುಪಡಿ ವಿಧೇಯಕವನ್ನು ನೋಡಿದಾಗ ಬಹುಶಃ ಇದನ್ನು ಯಾರು ಬಹಳ ವ್ಯವಸ್ಥಿತವಾಗಿ ಈ ವಿಧೇಯಕವನ್ನು ಮಾನ್ಯ ಸಚಿವರ ಮುಖೇನ ಮಂಡನೆ ಮಂಡಿಸುತ್ತಿರುವುದನ್ನು ನೋಡಿದಾಗ ವಿರೋಧ ಪಕ್ಷದಲ್ಲಿದ್ದಂಥವರು ಆಡಳಿತ ಪಕ್ಷಕ್ಕೆ ಹೋದಾಗ ಬಹುಶಃ ಆ ಸ್ಥಳ ಮಹಿಮೆಯೋ ಏನೋ ಗೊತ್ತಾಗು ವುದಿಲ್ಲ. ಅಧಿಕಾರಿಗಳ ಕೈಗೊಂಬೆಗಳಾಗಿ ಬಿಡುತ್ತಾರಲ್ಲ ಎಂದು ಮನಸ್ಸಿಗೆ ನೋವಾಗುತ್ತದೆ. ಇದು ಬಹಳ ಮುಖ್ಯವಾಗಿರತಕ್ಕಂಥದ್ದು. ರೈತರ, ರೈತರಿಗೋಸ್ಕರ, ರೈತರಿಂದ, ರೈತರ ಹಿತಕ್ಕೋಸ್ಕರ ಮಾಡಬೇಕಾಗಿದ್ದಂಥ ಈ ತಿದ್ದುಪಡಿ ವಿಧೇಯಕ, ಆದರೆ 1963ರ Act ಪ್ರಕಾರವಾಗಿ ಈ ವಿಧೇಯಕ ಇಲ್ಲ. 1963ರ ಆಕ್ಟ್‌ನಲ್ಲಿ ಬಹುಶಃ ಅಲ್ಲಿನ ಪ್ರತಿಯೊಂದು ಸಂಖ್ಯೆಗಳನ್ನು ನೋಡಿದಾಗ Vice Chancellor ಬರುತ್ತಾರೆ. Officers 6, farmers 6 ಎಂದು ಇದೆ. Comparisonನಲ್ಲಿ ಸಂಖ್ಯೆ University of Agriculture Science Ordinance 2009ರ ಪ್ರಕಾರವಾಗಿ 5 ಜನ ರೈತರು, Officers 10 ಜನ ಇದ್ದಾರೆ. ಇವತ್ತು ICAR model Act ಪ್ರಕಾರವಾಗಿ Officers 8, farmers 5, MLA or MLC 1 ಎಂದು ಬರುತ್ತದೆ. ನಮ್ಮ ನಾಡಗೌಡರವರು ಹೇಳಿದ ಹಾಗೆ, ಇಂಥ ಪ್ರಮುಖವಾದ ವಿಧೇಯಕ, ಮುಂದಿನ 25

ವರ್ಷಗಳ ನಂತರ ತಿದ್ದುಪಡಿ ತರತಕ್ಕಂಥದ್ದು ಇದೆ. ಪದೇ ಪದೇ ತರತಕ್ಕಂಥದ್ದರ ಅಗತ್ಯತೆ ಇಲ್ಲ. ದೇಶದ ಬೆನ್ನಲುಬಾದ ರೈತರ ಬಗ್ಗೆ ಸಮಗ್ರವಾದ ಚಿಂತನೆ ಮಾಡತಕ್ಕಂಥ ಈ ಸದನ ತೀರ್ಮಾನ ಮಾಡುವಾಗ Party levelನಲ್ಲೋ ಅಥವಾ ಇನ್ನೆಲ್ಲೋ ಚರ್ಚೆಯಾಗಿ ಅಥವಾ Joint Committee ಮುಂದೆ refer ಮಾಡಿ ಕೊಡುವುದು ಸೂಕ್ತ. ಇಲ್ಲದಿದ್ದರೆ, ಖಂಡಿತವಾಗಿಯೂ ಇದು ಬಹಳಷ್ಟು ಮಾರಕವಾಗುತ್ತದೆ. They have not at all followed the model Act of ICAR in total ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. Ordinance Sl.No.12, Board of Managementನಲ್ಲಿ 8 ಜನರಲ್ಲಿ, not below the rank of the Professor from the outside ಎಂದು ಹೇಳುತ್ತಾರೆ. ಈ ವಾಕ್ಯವನ್ನು ತೆಗೆಯಬೇಕು ಮತ್ತು ಅದರಲ್ಲಿ 13,14,15 ಇದರ ಪರವಾಗಿ ಅಲ್ಲಿ ಪ್ರಗತಿಪರ ರೈತರನ್ನು ಸೇರಿಸಿಕೊಳ್ಳಬೇಕು. Registrar who shall be the Member Secretary ಎನ್ನತಕ್ಕಂಥ ಪದ ತೆಗೆಯಬೇಕು. ಹಲವಾರು ತಿದ್ದುಪಡಿಗಳನ್ನು ತೆಗೆಯಲೇಬೇಕಾಗಿರುತ್ತೆ. ಇಲ್ಲದಿದ್ದರೆ, ಖಂಡಿತವಾಗಿಯೂ ಮರಣ ಶಾಸನವಾಗುತ್ತದೆ. Sl. No.5ರ ಪ್ರಕಾರ, one third of the Members of the Board shall from the quorum ಎನ್ನುವುದು 50% ಎಂದಾಗಬೇಕು. Once in every three months ಎನ್ನುವುದು 2 months ಎಂದು ಆಗಬೇಕು. ಈ ರೀತಿಯಾಗಿ ಹಲವಾರು ವಿಚಾರಗಳನ್ನು ಹೇಳುವುದಿತ್ತು. ಆದರೆ, ನಾವು ಹೇಳಲೇಬೇಕೆಂದಿದ್ದರೂ ಸಹ ಈಗ ಇದು ತುರ್ತಾಗಿ ಆಗಬೇಕೆಂದು ತಾವು ಹೇಳುತ್ತೀರಿ. ನಮ್ಮ ಶಾಸಕರು ಹೇಳಿದ ಹಾಗೆ ಈ ಬಿಲ್ ಕೊನೆಯ ಗಳಿಗೆಯಲ್ಲಿ ಬಂದಿದೆ. ಇದನ್ನು ಅಧ್ಯಯನ ಮಾಡುವುದಕ್ಕೂ ಸಮಯವಿಲ್ಲ, Previous Acts ಬಗ್ಗೆ Academic interest ನಿಂದ ಮೊದಲಿನಿಂದ ಅದರ ಬಗ್ಗೆ ಪರಿಣಿತಿ ಇದ್ದವರಿಗೆ ಗೊತ್ತಾಗುತ್ತದೆ. ಈ ದೃಷ್ಟಿಯಿಂದ ನಾವು ಬಹಳಷ್ಟು ವಿಚಾರಗಳನ್ನು ತಿಳಿದುಕೊಳ್ಳಬೇಕು. ನಾಳೆಯ ದಿವಸ ರೈತರ ಬಳಿಗೆ ಹೋದಾಗ ನಾವು ಉತ್ತರ ಕೊಡಬೇಕಾಗುತ್ತದೆ. ಇದು ರೈತರ ವಿಶ್ವವಿದ್ಯಾಲಯವೋ, ಅಥವಾ IAS Officers ವಿಶ್ವವಿದ್ಯಾಲಯವೋ ಎನ್ನುವ ಬಗ್ಗೆ ಉತ್ತರ ಕೊಡಬೇಕಾಗುತ್ತದೆ. ಇದನ್ನು ಯಥಾವತ್ತಾಗಿ ಅನುಷ್ಠಾನ ಮಾಡತಕ್ಕಂಥದ್ದು ಸರಿಯಲ್ಲ. ಇದು ರೈತ ವಿರೋಧಿಯಾಗುತ್ತದೆ. ಇದನ್ನು Joint

Committeeಗೆ refer ಮಾಡಿ ನಂತರ September ತಿಂಗಳಲ್ಲಿ ಸದನದ ಮುಂದೆ ತರಲಿಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಹೇಳಬಯಸುತ್ತೇನೆ.

ಶ್ರೀ ಬಿ.ರಮಾನಾಥ ರೈ : ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯಗಳ ವಿಧೇಯಕ 2009ರ ಬಗ್ಗೆ ಈ ಸದನದಲ್ಲಿರತಕ್ಕಂಥ ವಿರೋಧ ಪಕ್ಷದ ಸದಸ್ಯರಿರಬಹುದು, ಬಹಳಷ್ಟು ಮಂದಿ ಅನೇಕ ವಿಷಯಗಳನ್ನು ಮಾತನಾಡಿದ್ದಾರೆ. ಮಾನ್ಯ ಬಚ್ಚೇಗೌಡರು ಮಾತನಾಡುವಾಗ ನಿಮಗ್ಯಾಕೆ ರೈತರ ವಿಷಯ ಎನ್ನುವ ಮಾತನ್ನು ಹೇಳಿದರು. ನಾನು ಈ ಸದನದ ಸದಸ್ಯರೆಲ್ಲರ ಗಮನಕ್ಕೆ ತರಬಯಸುವುದೇನೆಂದರೆ, ನಾನು ಕೃಷಿ ಮತ್ತು ಗ್ರಾಮೀಣ ಬ್ಯಾಂಕ್‌ನಲ್ಲಿ 6 ವರ್ಷ ಅಧ್ಯಕ್ಷನಾಗಿ ಕೆಲಸ ಮಾಡಿದ್ದೆ. ಆನಂತರ, 5 ಸಲ ನಾನು ವಿಧಾನ ಸಭೆಗೆ ಬಂದಿದ್ದೇನೆ. ಬಹಳ ಸಣ್ಣ ವಯಸ್ಸಿನಲ್ಲಿ ಪ್ರಾಥಮಿಕ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ನನ್ನ ತಂದೆ ದೊಡ್ಡ ಕೃಷಿಕರಾಗಿ 18 ವರ್ಷ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಈ ಇತಿಹಾಸವನ್ನು ನಾನು ಇಲ್ಲಿ ಹೇಳಬೇಕಾಗಿದೆ. ಸುಮ್ಮನೆ ಲಘುವಾಗಿ ನಿಂತುಕೊಂಡು ನಿಮಗೇನು ಕೃಷಿ ಬಗ್ಗೆ ಗೊತ್ತಿದೆ ಎಂದು ಈ ರೀತಿ ಹೇಳಬಾರದು. ನಾನು ಈ ಶಾಸನ ಸಭೆಗೆ 5 ಸಲ ಆಯ್ಕೆಯಾಗಿ ಬಂದವನು. ನನಗೆ ಮಾತನಾಡುವ ಚಟವಿಲ್ಲ. ಏನಾದರೂ ಮಹತ್ವದ ವಿಷಯವಿದ್ದಾಗ ಮಾತ್ರ ನಾನು ಮಾತನಾಡುತ್ತೇನೆ. ನಾಡಗೌಡ ರವರು, ಮಾಜಿ ಕೃಷಿ ಸಚಿವರು ಇವರೆಲ್ಲ ಬಹಳಷ್ಟು ಹೇಳಿದ್ದಾರೆ. ಅವರು ಹೇಳಿದ್ದನ್ನು ನಾನು ಪುನಃ ಹೇಳುವುದಕ್ಕೆ ಹೋಗುವುದಿಲ್ಲ. ರೈತರಿಗೆ ಇಲ್ಲಿ ಜಾಸ್ತಿ ಪ್ರಾತಿನಿಧ್ಯ ಇರತಕ್ಕಂಥದ್ದಾಗಬೇಕು. 1963ರ Act ಏನಿತ್ತು ಅದನ್ನೇಕೆ ಬದಲಾಯಿಸಿ, ಈಗ ಈ ಒಂದು ಹೊಸ ವಿಧೇಯಕ ತರಬೇಕೆನ್ನುವ ಪ್ರಶ್ನೆ ಬಗ್ಗೆ ಎಲ್ಲರೂ ಮಾತನಾಡಿದ್ದಾರೆ. ಪರಿಶಿಷ್ಟ ಜಾತಿಯವರಿಗೆ ಅವಕಾಶ ಕೊಡಬೇಕೆನ್ನುವುದರ ಬಗ್ಗೆ ನಮ್ಮದೇನೂ ವಿರೋಧವಿಲ್ಲ. ಆದರೆ, ರೈತರ ಪ್ರಾತಿನಿಧ್ಯವನ್ನು ಕಡಿಮೆ ಮಾಡಿ ಅಧಿಕಾರಿಗಳನ್ನು ಜಾಸ್ತಿ ಮಾಡುವ ಮೂಲಕ ಅಧಿಕಾರಿಗಳ ಕೈಗೆ ಅಧಿಕಾರ ಕೊಡುವುದರ ಮೂಲಕ ರೈತರಿಗೆ ವ್ಯವಸ್ಥಿತವಾಗಿ ವಂಚನೆ ಮಾಡತಕ್ಕಂಥ ದೃಷ್ಟಿಕೋನ ಇದರಲ್ಲಿ ನಮಗೆ ಕಾಣುತ್ತದೆ. ಪರೋಕ್ಷವಾಗಿ ಯಾವುದೋ ಒಂದು ಉದ್ದೇಶ ಇದರ ಹಿಂದೆ ಇದೆ ಎಂದು ಸ್ಪಷ್ಟವಾಗಿ ನಮಗೆ ಗೊತ್ತಾಗುತ್ತದೆ. ಅಧಿಕಾರಶಾಹಿಗಳು ಈ ವಿಶ್ವವಿದ್ಯಾನಿಲಯವನ್ನು ಮಾರಾಟ ಮಾಡತಕ್ಕಂಥ ಒಂದು ಸಂಚು ನಡೆದಿದೆ ಎಂದು

ಹೇಳಿದರೂ ತಪ್ಪಾಗಲಾರದು. ನಾನು ಇದನ್ನು ವಿಮರ್ಶೆ ಮಾಡುವುದಕ್ಕೆ ಹೋಗುವುದಿಲ್ಲ. ನೀವು ಈ ವಿಧೇಯಕವನ್ನು ಯಥಾವತ್ತಾಗಿ ತಂದರೆ ರೈತರಿಗೆ ಮಾರಕವಾಗುವ ವಿಧೇಯಕವಾಗುತ್ತದೆಂದು ನಾವು ಖಂಡಿತ ವಾಗಿಯೂ ಹೇಳಬೇಕಾಗಿದೆ. ಈ ವಿಧೇಯಕವನ್ನು ತರುವುದರಲ್ಲಿ ಯಾವುದೇ ಒಳ್ಳೆಯ ದೃಷ್ಟಿಕೋನವಿಲ್ಲವೆನ್ನುವುದು ತಮಗೆಲ್ಲ ಗೊತ್ತಿರುವ ವಿಚಾರ. ಆದ್ದರಿಂದ, ಹಿಂದೆ 13 ಜನ ಸದಸ್ಯರಿದ್ದಾಗ 6 ಜನ ರೈತ ಪ್ರತಿನಿಧಿಗಳಿದ್ದರು.

ಅಧ್ಯಕ್ಷರು : ಏನಾದರೂ ಹೊಸ points ಇದ್ದರೆ ಹೇಳಿ. ಈಗ ಎಲ್ಲರೂ ಹೇಳಿರುವುದನ್ನೇ ಹೇಳುವುದರ ಬದಲು ಹೊಸ points ಇದ್ದರೆ ಹೇಳಿ. ಎಲ್ಲರೂ ಹೇಳಿದ್ದನ್ನೇ ಹೇಳುವುದರಲ್ಲಿ ಅರ್ಥವಿಲ್ಲ.

ಶ್ರೀ ಬಿ.ರಮಾನಾಥ ರೈ : ಈಗ ತಿದ್ದುಪಡಿ ತಂದಿದ್ದೇವೆಂದು ಹೇಳಿದ್ದಾರೆ. ನಾವು ಹೇಳುವುದೇನಂದರೆ, ಈ ವಿಧೇಯಕವನ್ನು ವಾಪಸ್ ತೆಗೆದುಕೊಂಡು ಹೊಸದಾಗಿ ತಿದ್ದುಪಡಿಗಳೊಂದಿಗೆ ತರುವುದನ್ನು ಮಾಡಿ ಮತ್ತು ಅದಕ್ಕೆ ತಜ್ಞರ ಸಮಿತಿಯನ್ನು ಮಾಡಿ, ಆ ಸಮಿತಿಯಿಂದ ಇದರ ಬಗ್ಗೆ ಅಭಿಪ್ರಾಯಗಳನ್ನು ಸಂಗ್ರಹಿಸಿ ಇದ್ನು ತರತಕ್ಕಂಥದ್ದು ಉಚಿತ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕದ ಬಗ್ಗೆ ಈಗಾಗಲೇ ಅನೇಕ ಅನುಭವಿ ಶಾಸಕರು ಮಾತನಾಡಿದ್ದಾರೆ ಮತ್ತು ಏನು ನ್ಯೂನತೆಗಳಿವೆ ಎನ್ನುವುದನ್ನೂ ಕೂಡ ತಮ್ಮ ಗಮನಕ್ಕೆ ತರುವುದನ್ನು ಮಾಡಿದ್ದಾರೆ. ಈಗಾಗಲೇ ಎಲ್ಲಾ ವಿಚಾರಗಳನ್ನೂ ಸದನದ ಮುಂದೆ ತರುವ ಕೆಲಸವಾಗಿದೆ. ಬಹಳ ಪ್ರಾಮುಖ್ಯವಾದುದೆಂದರೆ, ಕೋರಂ ಇಲ್ಲದೇ ಇರುವುದು. ಮೊದಲನೇ ಸಭೆಗೆ ಕೋರಂ ಇಲ್ಲದಿದ್ದರೆ ಮುಂದಕ್ಕೆ ಹಾಕಬೇಕೆನ್ನುವ ನಿಯಮವನ್ನಿಟ್ಟುಕೊಂಡಿದ್ದಾರೆ. ಎರಡನೇ ಸಭೆಗೆ ಕೋರಂ ಇರಲಿಲ್ಲವೆಂದು ಮಾನ್ಯ ಬಾಲುರವರು ಹೇಳಿದರು. ಎರಡನೇ ಸಭೆಗೆ ಕೋರಂ ಇಲ್ಲದ ಸಭೆಯಲ್ಲಿ ನಿರ್ಣಯ ಮಾಡುವ ಅಧಿಕಾರ ಸರಿಯಲ್ಲ. ಅದಕ್ಕೆ ಕೋರಂಗೆ ಅವಕಾಶವಿರಬೇಕು. ಎರಡನೆಯದಾಗಿ, ಕೋರಂ ಇಲ್ಲದೆ ಸಭೆ ನಡೆಸಿ, ಅದರಲ್ಲಿ ಅಧಿಕಾರಿಗಳು ನಿರ್ಣಯ ಮಾಡಿ ರೈತರ ಪರವಾದಂಥ ನಿಲುವನ್ನು ಹೇಗೆ ತೆಗೆದುಕೊಳ್ಳುವುದಕ್ಕಾಗುತ್ತದೆ? ಆ ಕಾರಣಕ್ಕಾಗಿ ಕೋರಂ ಇರಬೇಕೆನ್ನುವ ಆ ನಿಯಮವನ್ನು ಅದರಲ್ಲಿ ಅಳವಡಿಸಬೇಕೆಂದು ನನ್ನ ಕೋರಿಕೆ.

ಎರಡನೆಯದಾಗಿ, ರೈತ ಪ್ರತಿನಿಧಿಗಳು ಹೆಚ್ಚು ಜನ ಇರಬೇಕೆಂದು ಎಲ್ಲರೂ ವಾದ ಮಾಡಿದ್ದಾರೆ. ಅದನ್ನು ನಾವೆಲ್ಲ ಒಪ್ಪಿಕೊಳ್ಳಬೇಕಾಗುತ್ತದೆ. ಸುಮಾರು 5–8 ಜನ ರೈತರನ್ನು ಆ ಸಭೆಯಲ್ಲಿ ಹಾಕುವ ಕೆಲಸವಾಗಬೇಕು. ಆ ಕಾರಣಕ್ಕಾಗಿ ನಾನು ಒತ್ತಾಯಿಸುತ್ತೇನೆ, ಕೃಷಿಗೆ ಸಂಬಂಧಪಟ್ಟ ಸಂಸ್ಥೆಯಲ್ಲಿ ರೈತನಿಗಾಗುವ ಅನ್ಯಾಯಗಳ ಬಗ್ಗೆ ಬೆಳಕು ಚೆಲ್ಲಬೇಕಾಗುತ್ತದೆ. ಅಧಿಕಾರಿಗಳಿಗೆ ರೈತರ basic ತೊಂದರೆಗಳ ಅರಿವು ಇರುವುದಿಲ್ಲ. ಆ ರೈತನಿಗೆ ಸಂಕಷ್ಟ ಏನಾಗಿರುತ್ತದೆ, ಅನುಭವ ಏನಾಗಿರುತ್ತದೆ ಎನ್ನುವ ಬಗ್ಗೆ ಬೆಳಕು ಚೆಲ್ಲಬೇಕಾದರೆ ಸಂಸ್ಥೆಯಲ್ಲಿ ರೈತ ಪ್ರತಿನಿಧಿ ಇರಬೇಕಾಗುತ್ತದೆ. ಮಾನ್ಯ ಕೃಷಿ ಮಂತ್ರಿಯವರೂ ಸಹ ಅದನ್ನು ತಿದ್ದುಪಡಿ ಮಾಡುತ್ತೇನೆಂದು ಹೇಳಿದ್ದಾರೆ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆ ಕಾರಣಕ್ಕಾಗಿ ಈ ಎರಡು ತಿದ್ದುಪಡಿಗಳನ್ನು ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಡಾ: ಎಂ.ಸಿ.ಸುಧಾಕರ : ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕವನ್ನು ಸರ್ಕಾರ ಏನು ಮಂಡಿಸಿದೆ, ಇದರ ಬಗ್ಗೆ ಹೆಚ್ಚಿಗೆ ಮಾತನಾಡುವುದಿಲ್ಲ. ರೈತ ಪ್ರತಿನಿಧಿಗಳ ಸಂಖ್ಯೆಯನ್ನೇನು ಕಡಿಮೆ ಮಾಡಿದ್ದಾರೆ ಅದನ್ನು ಇತರೆ ಸದಸ್ಯರಿಗೆ ಸಮಾನವಾಗಿ ಮಾಡಬೇಕಾಗುತ್ತದೆ. ಅಂದರೆ, ಅಧಿಕಾರಿಗಳು ಮತ್ತು ರೈತರು ಸಮಾನವಾಗಿ ಇರಬೇಕಾಗುತ್ತದೆ. ನಾವು ಎಷ್ಟೇ ವಿದ್ಯಾವಂತರಾದರೂ, ಎಷ್ಟೇ ಸಂಶೋಧನೆ ಮಾಡಿದ್ದರೂ ನಮ್ಮದೇ ಆದ ಪ್ರಯೋಗಗಳನ್ನು ಮಾಡಿ, ಹೊಸ ತಂತ್ರಜ್ಞಾನವನ್ನು ನಾವು ಅಳವಡಿಕೆ ಮಾಡತಕ್ಕಂಥ ಪ್ರಯತ್ನ ಮಾಡಿದ ಸಂದರ್ಭದಲ್ಲಿ ಪ್ರಗತಿಪರ ರೈತರು ಅವರದೇ ಆದಂಥ ಆಲೋಚನೆಯಲ್ಲಿ ಬಹಳಷ್ಟು ಬದಲಾವಣೆಗಳನ್ನು ಕೃಷಿ ವ್ಯವಸ್ಥೆಯಲ್ಲಿ ತರುತ್ತಿರುವುದನ್ನು ನಾವು ಗಮನಿಸಿದ್ದೇವೆ. ಕೋಲಾರ ಜಿಲ್ಲೆಯಲ್ಲಿ ರೈತರದೇ ಆದ ವ್ಯವಸ್ಥೆಯನ್ನು ಕೃಷಿಯಲ್ಲಿ ತಂದಿದ್ದಾರೆ. ರೇಷ್ಮೆಗೆ ಸಂಬಂಧಪಟ್ಟ ಹಾಗೆ, Kolar Gold ಎನ್ನತಕ್ಕಂಥ ಒಂದು ತಳಿಯನ್ನು ಅಲ್ಲಿಯ ರೈತರೇ ತರುವ ಪ್ರಯತ್ನವಾಗಿದೆ. ಈ ರೀತಿಯಾಗಿ ಅಲ್ಲಿ ರೈತರ ಪ್ರಾತಿನಿಧ್ಯವನ್ನು ಅಧಿಕಾರಿಗಳ ಸಮಾನವಾಗಿ ತರಬೇಕು. ಜೊತೆಗೆ, ಈ ವಿಧಾನಸಭೆಯಲ್ಲಿ ನಾವು ಎಲ್ಲಾ ವಿಶ್ವವಿದ್ಯಾನಿಲಯಗಳಿಗೆ ಅಧಿಕಾರ ಕೊಡುತ್ತೇವೆ. ನಮ್ಮ ಕ್ಷೇತ್ರದಲ್ಲಿಯೇ ಒಂದು ಕೃಷಿ ಕಾಲೇಜು ಮತ್ತು ರೇಷ್ಮೆ ಕಾಲೇಜಿದೆ. ಅಲ್ಲಿ ನಡೆಯುವ ಯಾವುದೇ ಕಾರ್ಯಕ್ರಮಗಳನ್ನು ನಮ್ಮ ಗಮನಕ್ಕೆ ತರುವುದಿಲ್ಲ. ಅವರದೇ ಆದಂಥ ವ್ಯವಸ್ಥೆ ಮಾಡಿಕೊಂಡು ಕನಿಷ್ಠ

ಸೌಜನ್ಯಕ್ಕಾದರೂ ಆ ವಿಷಯವನ್ನು ನಮಗೆ ತಿಳಿಸುವುದಿಲ್ಲ. ಕೇಳಿದರೆ, ಇದು ನಿಮಗೆ ಸಂಬಂಧವಿಲ್ಲ, ಇದು ವಿಶ್ವವಿದ್ಯಾಲಯ, ಶಾಸಕರಿಗಾಗಲಿ, ಸರ್ಕಾರಕ್ಕಾಗಲಿ ಸಂಬಂಧವಿಲ್ಲವೆನ್ನುವ ರೀತಿಯಲ್ಲಿ ಮಾಡುತ್ತಾರೆ. ಈ ವಿದೇಯಕವನ್ನು ಇವತ್ತು ಯಥಾವತ್ತಾಗಿ ಅಂಗೀಕರಿಸಿದರೆ, ಅಧಿಕಾರಶಾಹಿಗಳಿಂದಾಗಿ ಜನರ ಭಾವನೆ ಏನಿದೆ ಅದಕ್ಕೆ ವಿರುದ್ಧವಾಗಿ ನಡೆಯುವ ಕೆಲಸವಾಗುತ್ತದೆ. ನಾನು ಕೃಷಿ ಸಚಿವರಿಗೆ ವಿನಂತಿಸುತ್ತೇನೆ, ನಾವು ಏನೇ ಒಂದು ವ್ಯವಸ್ಥೆ ಮಾಡಿದಾಗ, ಒಂದು ಕಡೆ ಅಧಿಕಾರಿಗಳ ಜೊತೆಯಲ್ಲಿ, ಕೃಷಿಗೆ ಸಂಬಂಧಿಸಿದಂತೆ ರೈತರ ಗಮನವನ್ನಿಟ್ಟುಕೊಂಡು ನಾವು ಈ ವಿಧೇಯ ಕವನ್ನು ತರಬೇಕಾಗುತ್ತದೆ. ದಯವಿಟ್ಟು, ಇದರ ಬಗ್ಗೆ ತಾವು ಮತ್ತೊಮ್ಮೆ ಪರಿಶೀಲಿಸಿ, ನಂತರ ಇದರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಿ ಮತ್ತೆ ಮಂಡಿಸುವುದು ಸೂಕ್ತವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ.ಎಸ್.ಪಾಟೀಲ್ (ನಡಹಳ್ಳಿ) : ಈ ವಿಧೇಯಕದ 13ನೇ ಪುಟ (vii) ರಲ್ಲಿ ಸರ್ಕಾರದಿಂದ ನಾಮನಿರ್ದೇಶಿತರಾದ ವಿಶ್ವವಿದ್ಯಾಲಯದ ಅಧಿಕಾರ ಕ್ಷೇತ್ರ ವ್ಯಾಪ್ತಿಯಲ್ಲಿರುವ ಇಬ್ಬರು ಪ್ರಗತಿಪರ ಕೃಷಿಕರು ಇವರ ಪೈಕಿ ಒಬ್ಬರು ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಕ್ಕೆ ಸೇರಿದವರಾಗಿರತಕ್ಕದ್ದು ಎಂದು ಇರುವುದನ್ನು ನಾವೆಲ್ಲರೂ ಕೂಡ ಸ್ವಾಗತ ಮಾಡುತ್ತೇವೆ. ಅದರ ಜೊತೆಯಲ್ಲಿ, ವಿರೋಧ ಪಕ್ಷದ ಮತ್ತು ಆಡಳಿತ ಪಕ್ಷದ ಇಬ್ಬರು ಸ್ನೇಹಿತರು ಮಾತನಾಡುವ ಸಂದರ್ಭದಲ್ಲಿ ಸಲಹೆಗಳನ್ನೇನು ಕೊಟ್ಟಿದ್ದಾರೆ ಅದನ್ನೂ ಸಹ ನಾನು ಸ್ವಾಗತ ಮಾಡುತ್ತೇನೆ. ಪುಟ 13ರ (viii)ರಲ್ಲಿ ಕುಲಾಧಿಪತಿಯವರು ನಾಮನಿರ್ದೇಶನ ಮಾಡಿದ ಕೃಷಿ ಮತ್ತು ಸಂಬಂಧಿಸಿದ ವಿಜ್ಞಾನಗಳ ಕ್ಷೇತ್ರದಿಂದ ವಿಶ್ವವಿದ್ಯಾನಿಲಯದ ಅಧಿಕಾರ ಕ್ಷೇತ್ರ ವ್ಯಾಪ್ತಿಯ ಹೊರಗಿನವರಾದ ಪ್ರೊಫೆಸರ್ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಎಂದಿದೆ. ಹಾಗೆಂದರೇನು ಅರ್ಥ? ಅಂದರೆ, ನಾವು ಇಲ್ಲಿ ಬೇರೆಯವರನ್ನು ಮಾಡಿದ್ದೇವೆಂದು ತೋರಿಸಿ, ಹಿಂದಿನ ಬಾಗಿಲಿನಿಂದ ಇಲ್ಲಿ ಯಾರನ್ನು ಕರೆದುಕೊಂಡು ಬರುತ್ತಿದ್ದೀರೆಂದರೆ, ವಿಶ್ವವಿದ್ಯಾಲಯದ retire ಆಗಿರುವ Professor ಅನ್ನು ಇಲ್ಲಿ ಮತ್ತೆ ತಾವು ನಾಮನಿರ್ದೇಶನ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತದೆ. ಆದ್ದರಿಂದ, ದಯಮಾಡಿ, 'Professor ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ" ಎನ್ನುವುದನ್ನು ತಾವು ತಿದ್ದುಪಡಿ

ಮಾಡಬೇಕು. ಎರಡನೆಯದಾಗಿ, ಪುಟ 14ರ-(5)ರಲ್ಲಿ- "ಮಂಡಳಿಯ ಸಭೆಗಾಗಿ ಮಂಡಳಿಯ ಸದಸ್ಯರ ಮೂರನೇ ಒಂದು ಭಾಗದಷ್ಟು ಸದಸ್ಯರು ಸಭೆಯ ಕೋರಂ ಆಗಿರತಕ್ಕದ್ದು"- ಎಂದಿದೆ. ಅಂದರೆ, 15 ಜನರಲ್ಲಿ 5 ಬಂದರೆ ಸಾಕು, ಅದು ಕೋರಂ ಆಗುತ್ತದೆ. ತಾವು ರೈತರ ಪ್ರತಿನಿಧಿಗಳನ್ನು ಹೆಚ್ಚು ಮಾಡಬಹುದು. 8 ಜನರನ್ನೂ ಮಾಡಬಹುದು, 9 ಜನರನ್ನೂ ಮಾಡಬಹುದು. ಆದರೆ, ಇಲ್ಲಿ 5 ಜನರು ಮಾತ್ರ ಬಂದರೆ ಕೋರಂ ಆಗುತ್ತದೆಂದಾದರೆ, 5 ಜನ ಅಧಿಕಾರಿಗಳು ಸೇರಿಕೊಂಡು ಕೋರಂ ಮಾಡುತ್ತಾರೆ. ಅದರಲ್ಲಿ 15ರಲ್ಲಿ 1/3rd ಕೋರಂ ಮಾಡುವುದಕ್ಕಾಗದಿದ್ದರೂ ಕನಿಷ್ಠ ಅರ್ಧದಷ್ಟಾದರೂ ಅಂದರೆ, 15ರಲ್ಲಿ 8 ಜನರಾದರೂ ಇದ್ದರೆ ಮಾತ್ರ ಕೋರಂ ಆಗುತ್ತದೆಂದು ದಯಮಾಡಿ ತಾವು ತಿದ್ದುಪಡಿ ತರಬೇಕು. ಅದರಲ್ಲಿಯೇ ಇನ್ನೊಂದು ಅಂಶವಿದೆ, "ಪರಂತು ಕೋರಂ ಇಲ್ಲದಿರುವುದರಿಂದಾಗಿ ಮಂಡಳಿಯ ಒಂದು ಸಭೆಯನ್ನು ಮುಂದೂಡಿದ್ದರೆ, ಅದೇ ವ್ಯವಹಾರಗಳನ್ನು ನಡೆಸುವುದಕ್ಕಾಗಿ ಕರೆದ ಮುಂದಿನ ಸಭೆಯಲ್ಲಿ ಕೋರಂನ ಅವಶ್ಯಕತೆ ಇರುವುದಿಲ್ಲ." ಅಂದರೆ, ಇದರಲ್ಲಿ ಸಂಪೂರ್ಣವಾದ ಸರ್ವಾಧಿಕಾರವನ್ನು ಕೊಟ್ಟಂಥ ಮಸೂದೆಯಾಗಿದೆ. ಇದರ ಜೊತೆಗೆ, ಪುಟ 14ರ (3)ರಲ್ಲಿ- "ಪದ ನಿಮಿತ್ತ ಸದಸ್ಯರುಗಳನ್ನು ಹೊರತುಪಡಿಸಿ ಮಂಡಳಿಯ ಸದಸ್ಯರ ಪದಾವಧಿಯು ಸಂದರ್ಭಾನುಸಾರ ಸರ್ಕಾರ ಅಥವಾ ಕುಲಾಧಿಪತಿಯವರ ಇಚ್ಛೆಗೊಳಪಟ್ಟು" ಅಂದರೆ, under the pleasure of Government or under the pleasure of Vice Chancellor. ಅಂದರೆ, ಅವರ ಇಚ್ಛೆಗೊಳಪಟ್ಟು ಮೂರು ವರ್ಷಗಳಾಗಿ ರತಕ್ಕದ್ದು ಅಂದರೆ ಅವರು ಬೇಡವೆಂದರೆ, ಅವರನ್ನು ತಕ್ಷಣ ತೆಗೆದು ಹಾಕಬಹುದು. ಸರ್ಕಾರದಿಂದ ಯಾರಿಗೆ ಅಲ್ಲಿಗೆ ನಾಮನಿರ್ದೇಶನ ಮಾಡಿರುತ್ತೇವೆ, ಅಲ್ಲಿ ಅಕಸ್ಮಾತ್ ಆಗಿ Vice Chancellor, ಅಧಿಕಾರಿಗಳು ತೆಗೆದುಕೊಂಡಿರುವ ನಿರ್ಧಾರಗಳು ಒಂದು ವೇಳೆ ರೈತರ ವಿರುದ್ಧವಾಗಿದ್ದರೆ, ಅಲ್ಲಿ ತಾವೇ ನೇಮಿಸಿರುವ ರೈತರ ಪ್ರತಿನಿಧಿಗಳು ಅದರ ವಿರುದ್ಧ ಮಾತನಾಡಿದರೆ ತಕ್ಷಣ ಅವನನ್ನು ತೆಗೆದುಹಾಕತಕ್ಕಂಥ ಅಧಿಕಾರವಿದೆ. ಅಂದರೆ, ಕೇವಲ ಹೆಸರಿಗೆ ಮಾತ್ರ ರೈತರನ್ನು ನಾಮನಿರ್ದೇಶನ ಮಾಡುತ್ತೇವೆ ಎಂದು ಹೇಳಿ ಇಲ್ಲಿ ಸಂಪೂರ್ಣವಾದ ಅಧಿಕಾರವನ್ನು ಆಡಳಿತ ಮಂಡಳಿಗೆ ಮತ್ತು Vice Chancellorಗೆ ಕೊಟ್ಟಿದ್ದೀರಿ. ಅವರಿಗಿಲ್ಲಿ ಅಧಿಕಾರವನ್ನು ಏತಕ್ಕೆ ಕೊಟ್ಟಿದ್ದೀರಿ? ವಿಶ್ವವಿದ್ಯಾ

ಲಯದ ಹಣಕಾಸು ಅಂದಾಜುಗಳ ಮತ್ತು ಆಯವ್ಯಯಗಳನ್ನು ಪರಿಗಣಿಸುವುದು ಮತ್ತು ಅನುಮೋದಿಸುವುದು ಎಂದು ಇದೆ. ನೂರಾರು ಕೋಟಿ ರೂಪಾಯಿಗಳು ರೈತರ ಹಣವಾಗಿದೆ. ಇವರಿಗೆ ಅಧಿಕಾರ ಕೊಟ್ಟಿದ್ದೀರಿ. ಹಾಗಾದರೆ, ನಾಳೆ ಕುಲಾಧಿಪತಿಗಳು ಇಷ್ಟೆಲ್ಲಾ ಅಧಿಕಾರವನ್ನು ಪಡೆದು ಕೊಂಡು, ವಿಶ್ವವಿದ್ಯಾನಿಲಯಕ್ಕೆ ಬಂದಿರುವ ಸಂಪೂರ್ಣ ಹಣಕಾಸಿನ ಅವ್ಯವಹಾರ ನಡೆಯಿತೆಂದು ಇಟ್ಟುಕೊಳ್ಳಿ, ನಿಮಗೆ, ಸರ್ಕಾರಕ್ಕೆ ವಿಶ್ವವಿದ್ಯಾನಿಲಯವನ್ನು ಕಂಟ್ರೋಲ್ ಮಾಡುವ ಅಧಿಕಾರವಿಲ್ಲ. ಇವರು ಇದರಲ್ಲಿ, ಹೈಕೋರ್ಟ್ ನ್ಯಾಯಾಧೀಶರಿಂದಲೇ ತನಿಖೆಯಾಗಬೇಕೆಂದು ಹೇಳಿದ್ದಾರೆ.

ಮೂರುವರ್ಷ ಮುಗಿದು ಹೋಗುತ್ತದೆ, ಮನೆಗೆ ಹೋಗಿರುತ್ತಾರೆ, ಆಗ ತಾವು ಯಾರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೀರಿ? ಎಂಬುದಕ್ಕೆ ಸರ್ಕಾರ ಜವಾಬ್ದಾರಿಯಾಗಬೇಕಾಗುತ್ತದೆ. ರೈತ ವಿರೋಧಿಯಾಗಿರತಕ್ಕಂಥ ಈ ವಿಧೇಯಕವನ್ನು ಸರ್ಕಾರ ದಯಮಾಡಿ ವಾಪಸ್ ತೆಗೆದುಕೊಳ್ಳಬೇಕು. ಏಕೆಂದರೆ, ಆಡಳಿತ ಪಕ್ಷದಲ್ಲಿರುವಂಥ ನಮ್ಮ ಅನೇಕ ಜನ ಶಾಸಕ ಮಿತ್ರರೆಲ್ಲರೂ ಕೂಡ ರೈತರು ಇದ್ದಾರೆ. ಅವರೆಲ್ಲರಿಗೂ ಕೂಡ ಮಾತನಾಡುವುದಕ್ಕೆ ಅವಕಾಶ ಕೊಡಿ. ಇನ್ನು ಎರಡು ಗಂಟೆಯಾದರೂ ಪರವಾಗಿಲ್ಲ. ದಯಮಾಡಿ ಅವರಿಗೆ ಅವಕಾಶ ಕೊಟ್ಟಾಗ ಅವರ ಅಭಿಪ್ರಾಯವೂ ನಮ್ಮ ಅಭಿಪ್ರಾಯದಂತೆ ಇರುತ್ತದೆ ಎನ್ನುವ ವಿಶ್ವಾಸ ವ್ಯಕ್ತಪಡಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಯು.ಟಿ.ಖಾದರ್ (ಮಂಗಳೂರು) : ಮಾನ್ಯ ಅಧ್ಯಕ್ಷರೆ, ಇವತ್ತು ಮಂಡಿಸಿರುವ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯ ವಿಧೇಯಕವನ್ನು ನಾವು ಎಲ್ಲರೂ ವಿರೋಧಿಸುವ ಕೆಲಸ ಇದು ನಮ್ಮ ಜವಾಬ್ದಾರಿ ಎಂದು ಹೇಳುವುದಕ್ಕೆ ಇಚ್ಚಿಸುತ್ತೇನೆ. ಏಕೆಂದರೆ, ಇವತ್ತು ಭಾರತ ದೇಶ ವಿಶ್ವದಲ್ಲಿ ಒಂದನೇ ಸ್ಥಾನಕ್ಕಾಗಿ ಸ್ವಾಭಿಮಾನದಿಂದ ಮುನ್ನುಗ್ಗುತ್ತಿದ್ದರೆ, ಅದು ಯಾವುದೇ ಅಧಿಕಾರಿಗಳ ಕೊಡುಗೆ ಅಲ್ಲ. ಅದು ಈ ದೇಶ ರೈತರ ದುಡಿಮೆಯ ಕೊಡುಗೆ ಎಂದು ಹೇಳಲಿಕ್ಕೆ ಇಚ್ಛಿಸುತ್ತೇನೆ. ಸ್ವತಂತ್ರ ಪೂರ್ವದಲ್ಲಿ ಭಾರತ ದೇಶದ ಜನಸಂಖ್ಯೆ 37 ಕೋಟಿ ಇದ್ದಾಗಲೂ ಕೂಡ ಸರಾಗವಾಗಿ ಅಕ್ಕಿ, ಗೋಧಿ, ಬೇಳೆ, ಇನ್ನಿತರ ಆಹಾರ ಧಾನ್ಯಗಳು ಸಿಗುತ್ತಿರಲಿಲ್ಲ. ವಿದೇಶದಿಂದ ನಾವು ಇಂಪೋರ್ಟ್ ಮಾಡುವ ವ್ಯವಸ್ಥೆಯಿತ್ತು. ಆದರೆ, ಭಾರತ ದೇಶ 60 ವರ್ಷಗಳ ನಂತರ ಸುಮಾರು 107 ಕೋಟಿ ಜನಸಂಖ್ಯೆಯಿದ್ದರೂ ಕೂಡ ಇಷ್ಟು ಜನರಿಗೂ ಆಹಾರ ಒದಗಿಸಿ ಹೆಚ್ಚಿಗೆ export ಮಾಡುವ ಶಕ್ತಿ ಭಾರತ

ದೇಶಕ್ಕೆ ಬಂದಿದ್ದರೆ ಅದು ಈ ರೈತರ ಕೊಡುಗೆ ಎಂದು ಆಲೋಚನೆ ಮಾಡಿಕೊಂಡು ಅದು ನಮ್ಮ ಜವಾಬ್ದಾರಿ, ಅವರ ಹಿತವನ್ನು ಕಾಯುವ ಕೆಲಸ ನಾವೆಲ್ಲ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಯಾರು ಕೂಡ ನಮ್ಮನ್ನು ಕ್ಷಮಿಸಲಿಕ್ಕೆ ಸಾಧ್ಯವಿಲ್ಲ. ಆದಕಾರಣ ಇದರಲ್ಲಿ ಹಲವಾರು ಲೋಪದೋಷಗಳಿವೆ. ಅದನ್ನೆಲ್ಲಾ ನಮ್ಮ ಎಲ್ಲಾ ಹಿರಿಯ ನಾಯಕರು, ಸದಸ್ಯರು ತಮ್ಮ ಮುಂದೆ ಇಟ್ಟಿದ್ದಾರೆ. ನಾನು ಅದರ ಬಗ್ಗೆ ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ನನ್ನ ಕಳಕಳಿಯ ಮನವಿ ಇಷ್ಟೆ. ಎಲ್ಲಾ ಲೋಪದೋಷಗಳನ್ನು ಸರಿಪಡಿಸಿ, ತಿದ್ದುಪಡಿ ಮಾಡಿ ವಿಧೇಯಕವನ್ನು ಮಂಡಿಸಿದಾಗ, ಅದರಲ್ಲಿ ಏನಾದರೂ ಲಾಭವಿದ್ದರೆ, ಅಥವಾ ಅಧಿಕಾರ ಜಾಸ್ತಿಯಿದ್ದರೆ, ಆ ಅಧಿಕಾರ ರೈತ ವರ್ಗಕ್ಕೆ ಹೋಗಬೇಕೆಂದು ಹೇಳುತ್ತೇನೆ. ಇವತ್ತೇನು ಎಲ್ಲಾ ಇಲಾಖೆಯಲ್ಲಿ ಅಧಿಕಾರಿಗಳು octopuses ತರಹ ಮುಂದೆ ಹೋಗುತ್ತಾರೆ, ಅವರ ಸಂಪೂರ್ಣ ಸಹಕಾರ ನಮಗೆ ಬೇಕು, ನಾವು ಕೂಡ ಅವರಿಗೆ ಸಂಪೂರ್ಣ ಸಹಕಾರ ಕೊಡುತ್ತಿದ್ದೇವೆ. ಅವರ ಶ್ರಮಕ್ಕೆ ನಮ್ಮ ಗೌರವ ಇದೆ. ಆದರೆ, ಈ ಸಮಾಜದಲ್ಲಿ ನೈಜವಾದ ಪರಿಸ್ಥಿತಿಯನ್ನು ಅರಿತುಕೊಂಡು ಮುಂದಿನ ಕ್ರಮ ಕೈಗೊಳ್ಳಬೇಕೆಂದು ಕಳಕಳಿಯಿಂದ ಕೇಳಿಕೊಂಡು ಆದಷ್ಟು ಬೇಗನೆ ಉತ್ತಮವಾದ ತಿದ್ದುಪಡಿಯ ಮೂಲಕ ಮತ್ತೆ ಈ ಒಂದು ವಿಧೇಯಕ ಈ ಸದನದಲ್ಲಿ ಮುಂದಿನ ದಿನಗಳಲ್ಲಿ ಮಂಡನೆಯಾಗಲಿ, ಅದರ ಮುಖಾಂತರ ಈ ರಾಜ್ಯದ ಎಲ್ಲಾ ರೈತರ ಪ್ರೀತಿಗೆ ಪಾತ್ರರಾಗಿ ಭಾರತ ದೇಶದಲ್ಲಿ ಮಾದರಿಯಾದ ವಿಧೇಯಕವನ್ನು ಮಂಡಿಸಿದ ಕೀರ್ತಿ ನಿಮಗೆ ಬರಲಿ ಎಂದು ಶುಭ ಹಾರೈಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಟಿ. ಕೃಷ್ಣಪ್ಪ : ಬಜೆಟ್ ಮೇಲೂ ಇಷ್ಟು ಅವಕಾಶ ಸಿಗಲಿಲ್ಲ. 56 ಸಾವಿರ ಕೋಟಿಯ ಬಜೆಟ್ ಮೇಲೂ ಇಷ್ಟು ವ್ಯಾಪಕವಾಗಿ ಚರ್ಚೆ ಮಾಡಲು ಅವಕಾಶ ಸಿಗಲಿಲ್ಲ. ಆದರೆ ಈ ವಿಧೇಯಕ ಮೇಲೆ ಇಷ್ಟು ಅವಕಾಶ ಸಿಕ್ಕಿದೆ.

ಶ್ರೀ ಎ.ಎಸ್.ಪಾಟೀಲ್ (ನಡಹಳ್ಳಿ) : ವಿರೋಧ ಪಕ್ಷದ ನಾಯಕರು ಮಾತನಾಡಿದ ಮೇಲೆ ಕ್ಲೋಸ್ ಮಾಡಿಬಿಡಿ.

ಅಧ್ಯಕ್ಷರು : ಅದಕ್ಕೆ ಈಗ compensate ಮಾಡಿದ್ದೇವೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಇನ್ನೊಂದು ದಿನ demands ಮೇಲೆ ಚರ್ಚಿಸುವುದಕ್ಕೆ ಅವಕಾಶ ಸಿಕ್ಕಿದ್ದರೆ, ಪಾಪ ಎಲ್ಲರಿಗೂ

ಸಮಾಧಾನ ಆಗುತ್ತಿತ್ತು. ಸಿಗದೇ ಇರುವುದರಿಂದ ಈ ಪರಿಸ್ಥಿತಿ ನಿರ್ಮಾಣ ವಾಗಿದೆ. ಶಿವಣ್ಣನವರೆ ಏಕೆ ನೀನು ಮಾತನಾಡುತ್ತಿಲ್ಲ?

ಶ್ರೀ ಎಸ್.ಶಿವಣ್ಣ : ಭತ್ತ ಕುಟ್ಟಿದ್ದೇ ಕುಟ್ಟುತ್ತಾರೆ ಎಂದು ಹಳ್ಳಿಕಡೆ ಹೇಳುತ್ತಾರೆ, ನೀವು ಕುಟ್ಟಿದ್ದೇ ಕುಟ್ಟುತ್ತಿದ್ದರೆ ನಾವು ಕೇಳಿಕೊಂಡು ಕುಳಿತಿದ್ದೇವೆ, ನಾವು ಇನ್ನೇನು ಮಾಡೋಣ?

ಶ್ರೀ ಸಿ.ಎಸ್.ಪುಟ್ಟೇಗೌಡ : ಶಿವಣ್ಣನಿಗೆ ಮಂತ್ರಿ ಮಾಡಿಲ್ಲ. ವೈರಾಗ್ಯ ಬಂದು ಬಿಟ್ಟಿದೆ.

ಶ್ರೀ ಎಸ್. ಶಿವಣ್ಣ : ತಾವು ಅಲ್ಲ ಸಾರ್, ತಪ್ಪು ತಿಳಿದುಕೊಳ್ಳಬೇಡಿ. ಬೇರೆಯವರು ಕುಟ್ಟುತ್ತಾರಲ್ಲ ಅದಕ್ಕೆ ಬೇಸರ ಅಷ್ಟೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ, ದಿನ ಸಾಯುವವರ ಮನೆಯಲ್ಲಿ ಅಳುವವರು ಯಾರು?

ಶ್ರೀ ಸಿದ್ದರಾಮಯ್ಯ : ಹಾಗಾದರೆ ನೀವು ಒಂದು ಕೆಲಸ ಮಾಡಿ. ನೀವು ಈ ಕಡೆ ಕುಳಿತುಕೊಳ್ಳಿ ನಾವು ಆ ಕಡೆ ಕುಳಿತುಕೊಳ್ಳುತ್ತೇವೆ, ಆಗ ನಿಮಗೆ ಕೇಳುವುದು ತಪ್ಪಿ ಹೋಗುತ್ತದೆ.

ಶ್ರೀ ಎಸ್.ಶಿವಣ್ಣ : ಅಲ್ಲಿ ಇದ್ದು ಇದ್ದು ಸಾಕಾಗಿ ಹೋಗಿದೆ. ಅದಕ್ಕೆ ಈ ಕಡೆಗೆ ಬಂದಿದ್ದೇವೆ.

ಶ್ರೀ ಸಿದ್ದರಾಮಯ್ಯ : ಹಾಗಾದರೆ ನಾವು ಹೇಳುವುದನ್ನು ನೀವು ಹೇಳಿ.

ಶ್ರೀ ಎಸ್.ಶಿವಣ್ಣ : ನಿಮ್ಮದು ಕೇಳುತ್ತೇವೆ, ಬೇರೆಯವರು ಕೇಳುವುದಕ್ಕೆ ಬಹಳ ಕಷ್ಟವಾಗುತ್ತದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಈ ವಿಧೇಯಕ ತಂದಿದ್ದೀರಲ್ಲಾ, ಯಾವಾಗಲೂ ಹೊಸ amendments ತರುವುದು, ಹೊಸ ಕಾನೂನುಗಳನ್ನು ಮಾಡುವುದು ಸಮಾಜದಲ್ಲಿ ಹೊಸ ಹೊಸ ಸಮಸ್ಯೆಗಳಿಗೆ ಪರಿಹಾರ ಹುಡುಕಬೇಕಾದಾಗ. These are new challengers. ಆ Challengesಗಳನ್ನು meet ಮಾಡಲಿಕ್ಕೆ ಬದಲಾವಣೆಗಳನ್ನು ಮಾಡಬೇಕು. ಸುಮ್ಮನೆ ಇರುವ ಕಾಯಿದೆ ಬದಲಾಯಿಸಿ ಇನ್ನೊಂದು ಕಾಯಿದೆ ಬದಲಾಯಿ ಸುವುದರಿಂದ You cannot call it, this bill is a very progressive Bill. Progressive Bill ಆಗಬೇಕಾದರೆ ಯಾವಾಗ, ನೀವು ತಂದಿರುವ Bill ನಿಂದ ಗ್ರಾಮೀಣ ಜನರ ಬದುಕಿನಲ್ಲಿ ಒಂದು ಹೊಸ ಬದಲಾವಣೆ

ತರುತ್ತದೆ, ಒಂದು ಕ್ರಾಂತಿಕಾರಕ ಬದಲಾವಣೆ ಆಗುತ್ತದೆ, ಈಗ ಈ ವಿಧೇಯಕದಲ್ಲಿ Vice Chancellorsಗೆ 1963ರ Actನಲ್ಲಿ ಇರುವುದಕ್ಕಿಂತ ಹೆಚ್ಚು Powers ಕೊಟ್ಟರೆ ಇನ್ನೊಂದು ಹಸಿರು ಕ್ರಾಂತಿಯಾಗುತ್ತದೆಯೇ? I don't think, ಒಬ್ಬ bureaucratಗೆ, Vice Chancellorಗೆ more powers ಕೊಟ್ಟರೆ ಕ್ರಾಂತಿ ಆಗುತ್ತದೆಯೆ? ಇದ್ದಕ್ಕಿದ್ದ ಹಾಗೆ ಒಂದು ಲಕ್ಷ ಮೂವತ್ತು ಮಿಲಿಯನ್ ಟನ್ ಆಹಾರದಿಂದ ಎರಡೂವರೆ ಲಕ್ಷ ಮಿಲಿಯನ್ ಟನ್ ಆಹಾರ ಉತ್ಪಾದನೆಯಾಗುತ್ತದೆಯೆ? O.k. ಕೊಡೋಣ. What purpose is going to be served. Board of Regents ಇರುವುದನ್ನು Board of Management ಎಂದ ತಕ್ಷಣ ಏನು ಬದಲಾವಣೆ ಆಗುತ್ತದೆ? What is that you are going to achieve? Board of Regents ಎನ್ನುವುದರಲ್ಲಿ ಈಗಿರುವ ನಮ್ಮ ಕೃಷಿ ಪದ್ಧತಿಗೆ ಏನು ಮಾರಕವಾಗುತ್ತದೆ? Why you have to change? ಅವು ಏನಾದರೂ ಕೆಟ್ಟ ಪದಗಳೆ? ಅಥವಾ ಇಡೀ ಜಗತ್ತಿನಲ್ಲಿ ಈ ತರಹದ ಪದಗಳು ಇಲ್ಲವೆ? Board of Regents ಇರುವುದನ್ನು Board of Management ಎಂದರೆ ಚೆನ್ನಾಗಿ ಕಾಣಿಸುತ್ತದೆಯೆ? ಇದರಲ್ಲಿ ಯಾವುದಾದರೊಂದು ಮಹತ್ವದ ಉದ್ದೇಶವಿದೆ, ಇವತ್ತು ಇಂತಿಂಥ ಬದಲಾವಣೆಗಳಾಗಿವೆ ಆ ಬದಲಾವಣೆಗಳಿಗಾಗಿ ಈ ಕಾನೂನು ಮೂಲಕ ಪರಿಹರಿಸಲಿಕ್ಕೆ ಈ ವಿಧೇಯಕ ತಂದಿದ್ದೇವೆ. ಅದೇನು ಇದರಲ್ಲಿ ಇಲ್ಲ. 1963ರ Act itself ನೀವು ಹೊಸ University ಮಾಡಬೇಕನ್ನುವಂತಹದ್ದು, ನೀವು ರಾಯಚೂರಿನಲ್ಲಿ ಒಂದು ಹೊಸ ಯೂನಿವರ್ಸಿಟಿ ಮಾಡಿದ್ದೀರಿ. ಮಾಡಿ fine. We also welcome it. But why do you want to bring this Bill? ಅದನ್ನು 1963ರ ಆಕ್ಟ್‌ನಲ್ಲಿ ಮಾಡುವುದಕ್ಕೆ ಬರುವುದಿಲ್ಲವೆ? Is there any problem? ಅಲ್ಲಿಯೇ amendment ಮಾಡಿ ತರಬಹುದಾಗಿತ್ತಲ್ಲವೆ? Bangalore Agriculture University ಆದಮೇಲೆ ನಾವು Dharwad Agriculture University ಮಾಡಿಲ್ಲವೆ? Under the same 1963 Act ಮಾಡಿದ್ದೇವೆ. ಹಾಗೆಯೇ ರಾಯಚೂರಿನಲ್ಲಿ ಮಾಡಿ. Increasing the official Members for Board of Management ಇದರಿಂದ ಯಾವ ಪುರುಷಾರ್ಥ ಸಾಧನೆಯಾ

ಗುತ್ತದೆ? ಅಲ್ಲಿ ಆಗಬೇಕಾಗಿರುವುದು ನಮ್ಮ ಬೋಧನೆ ಮಟ್ಟ ಹೆಚ್ಚಾಗಬೇಕು. Research ಹೆಚ್ಚಾಗಬೇಕು. Agriculture Servicesನಲ್ಲಿ ಹೊಸ ಹೊಸ ತಳಿಗಳು ಬರಬೇಕು. Food Productivity ಹೆಚ್ಚಾಗಬೇಕು. Cost of production ಕಡಿಮೆಯಾಗಬೇಕು. Cost of cultivation ಕಡಿಮೆಯಾಗಬೇಕು. ಆ ತರಹದ ಯಾವುದೇ Researchಗೆ ಅನುಕೂಲವಾಗುತ್ತದೆ ಎಂದರೆ ಮಾಡೋಣ. ಅಂಥ ಬಹಳ ದೊಡ್ಡ Research ಆಗುತ್ತದೆ ಎಂದರೆ ಮಾಡೋಣ. Bill ಬದಲಾಯಿಸಿ ಬಿಟ್ಟರೆ ಅದಕ್ಕೇನು ಅನುಕೂಲವಾಗುತ್ತದೆ? ಹೆಚ್ಚು ಅಧಿಕಾರಿಗಳನ್ನು ಹಾಕಿ ಬಿಟ್ಟರೆ ಅದರಿಂದ ಬರುತ್ತದೆಯೆ? Then, why do you want to give more sweeping powers to the Vice Chancellors? ನನಗೆ ಅರ್ಥವಾಗುವುದಿಲ್ಲ. What warranted the Government to take this type of step? ರೈತರನ್ನು ಕಡಿಮೆ ಮಾಡಿ, ನನ್ನ ಪ್ರಕಾರ ಹಳೆಯ ಆಕ್ಟ್‌ನಲ್ಲಿ 13 ಜನ ಇದ್ದರಲ್ಲ ಅದಕ್ಕೆ ಇನ್ನೊಂದೆರಡು ಜನ ರೈತರನ್ನು ಜಾಸ್ತಿ ಮಾಡಿ 8 ಜನ ಮಾಡಿ. ಹಾಗಾದರೆ ನೀವು ಚೈನಾ ದೇಶಕ್ಕೆ ಏಕೆ ರೈತರನ್ನು ಕಳುಹಿಸಿದಿರಿ?

ಶ್ರೀ ಬಿ.ಎನ್.ಬಚ್ಚೇಗೌಡ : ತಾವು Academic ಮಾತನಾಡಿ, ಈ ತರಹ ಮಾತನಾಡಬಾರದು.

ಶ್ರೀ ಸಿದ್ದರಾಮಯ್ಯ : ಇನ್ನು ಯಾವ ತರಹ ಮಾತನಾಡುವುದು? Academic ಎಂದರೇನು ಎಂಬುದನ್ನು ಸ್ವಲ್ಪ ಹೇಳಿ ಕೊಡಿ.

ಶ್ರೀ ಬಿ.ಎನ್. ಬಚ್ಚೇಗೌಡ : ತಾವು Vice Chancellor ಬೇಡವೆಂದರೆ ಹೇಗೆ, He will be the head of the University. Agriculturist, can he become the head of the University? Board is different, University is different. There are so many faculties. ತಾವು ಆ ರೀತಿಯಾಗಿ ಮಾತನಾಡಿದರೆ ಹೇಗೆ? If you generalize the issues as an Opposition Leader ಏನು ಇಂಪ್ರೆಷನ್ ಬರುತ್ತದೆ ನೀವೇ ಹೇಳಿ? This is the way you are presenting........

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಮಗೇನು ಹೇಳಿಕೊಡುವುದು ಬೇಕಾಗಿಲ್ಲ, This is the way one should not talk.

ಶ್ರೀ ಬಿ.ಎನ್.ಬಚ್ಚೇಗೌಡ : ನಾನು ನಿಮಗೆ ಹೇಳುವುದೇನೆಂದರೆ, ತಾವು ಇದನ್ನು ಓದಿದ್ದೀರೋ ಅಥವಾ ಇಲ್ಲವೋ ಗೊತ್ತಿಲ್ಲ.

ಶ್ರೀ ಸಿದ್ದರಾಮಯ್ಯ : ನಾನು ಓದಿಕೊಂಡು ಬಂದಿದ್ದೇನೆ.

ಶ್ರೀ ಬಿ.ಎನ್.ಬಚ್ಚೇಗೌಡ : ತಾವು ದಯಮಾಡಿ ಓದಿ.

ಶ್ರೀ ಸಿದ್ದರಾಮಯ್ಯ : ಏನೆಂದು ನೀವೇ ಓದಿ ಹೇಳಿ?

SRI B.N. BACHE GOWDA : what is the authority of the University? Who is the Board of Management? Who is the Academic Council? Who is the Research Council? Who is the Academic Schools and Education Council?

ಶ್ರೀ ಸಿದ್ದರಾಮಯ್ಯ : ನಾನು ಅದನ್ನೆ ಹೇಳುತ್ತಿದ್ದೇನೆ. ತಾವು ಸ್ವಲ್ಪ ಕುಳಿತುಕೊಳ್ಳಿ ನಾನು ಹೇಳುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ : ಇದನ್ನು ತೆಗೆದುಕೊಂಡು ಬಂದು ಅಗ್ರಿಕಲ್ಚರಿಸ್ಟ್‌ಗಳ ಕೈಗೆ ಕೊಟ್ಟುಬಿಡೋಣವೆ? I object to this. ತಾವು ವಕೀಲರಿದ್ದೀರಿ. ತಮ್ಮಿಂದ ಈ ರೀತಿ ನಾನು ನಿರೀಕ್ಷೆ ಮಾಡಿರಲಿಲ್ಲ. ಇದರ ಬಗ್ಗೆ ಯೋಚನೆ ಮಾಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾವು ಹೇಳುವುದನ್ನು ಶಾಂತವಾಗಿ ಕುಳಿತುಕೊಂಡು ಕೇಳಿ. ಆಮೇಲೆ you object ಮಾಡಿ. Give a reply.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಈಗಾಗಲೇ ರೈತರ ಜಾಗವೆಲ್ಲವನ್ನು ಮಾರಾಟ ಮಾಡಲಾಗಿದೆ. ಈಗ ರೈತರನ್ನು ಮಾರಾಟ ಮಾಡಿಬಿಡಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಬಚ್ಚೇಗೌಡರೆ, ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಈಗ ಕುಳಿತುಕೊಳ್ಳಿ. ನೀವು ಉತ್ತರ ಕೊಡುವಾಗ this is not the academic argument ಎಂದು ಬೇಕಾದರೆ ಹೇಳಿ. It is not in the interest of the …

(ಗೊಂದಲ)

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಮೊದಲು ಹೇಳಲಿ. ಆನಂತರ ತಾವು ಉತ್ತರ ಕೊಡಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ತಾವು ಅವರ ಕಡೆಯಿಂದಲೇ ಮಾತನಾಡಿಸಿ.

(ಗೊಂದಲ)

ಶ್ರೀ ಬಿ.ಎನ್.ಬಚ್ಚೇಗೌಡ : Vice Chancellor ಏಕೆ ಬೇಕೆಂದು ಅವರು ಹೇಳಿದ್ದಕ್ಕೆ ನಾನು ಹೇಳಿದೆ. Sorry, ಅವರೇ ಮಾತನಾಡಲಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಬಚ್ಚೇಗೌಡರೆ, ನಾನು ಹೇಳುವುದೇನೆಂದರೆ, ಇದೇ ರೀತಿಯಾಗಿ, ಇದೇ ವಿಷಯವನ್ನು ಮಾತನಾಡಬೇಕೆಂದು ನೀವು ಅವರಿಗೆ ಡಿಕ್ಟೇಟ್ ಮಾಡುವುದಕ್ಕೆ ಬರುವುದಿಲ್ಲ. ಮಂತ್ರಿಗಳಿಗೆ ನೀವು ಇದೇ ರೀತಿಯಾಗಿ ಉತ್ತರ ಕೊಡಬೇಕೆಂದು ಅವರೂ ಸಹ ಹೇಳುವುದಕ್ಕೆ ಬರುವುದಿಲ್ಲ. ಆದ್ದರಿಂದ, ಅವರು ಮಾತನಾಡಿ ಮುಗಿಸಲಿ. ಆನಂತರ ಅದಕ್ಕೆ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಆರು ಮಂದಿಯನ್ನು ತೆಗೆದು ಅಲ್ಲಿ ಎಲ್ಲರು ಅಧಿಕಾರಿಗಳೆ ಬೇಕಾದರೆ ಇರಲಿ. ಇದಕ್ಕೆ ನಮ್ಮದೇನು ಅಭ್ಯಂತರ ಇಲ್ಲ. ಸರ್ಕಾರ ಬೇಡವೆಂದರೆ ನಾವೇಕೆ ಬೇಕೆಂದು ಹೇಳಬೇಕು? ಇದನ್ನು ರೈತರಿಗೆ ಕೊಡಿ ಎಂದು ನಾವೇನು ಕೇಳಿಲ್ಲ.

(ಗೊಂದಲ)

ಅಧ್ಯಕ್ಷರು : ಆಯಿತು. ತಾವು ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ನಾವು ಹೇಗೆ ಮಾತನಾಡಬೇಕೆಂಬುದು ನಮಗೆ ಗೊತ್ತಿದೆ. ನೀವು ಹೇಗೆ ಉತ್ತರ ಕೊಡಬೇಕೆಂದು ನೀವು ಕೊಡಿ. ಯಾವ ರೀತಿಯಾಗಿ ಮಾತನಾಡಬೇಕೆಂದು ಮತ್ತು ಯಾವರೀತಿಯಾಗಿ argument ಮಾಡಬೇಕೆಂದು ನಾವು ನಿಮ್ಮಿಂದ ಕಲಿಯಬೇಕೇ? ಮತ್ತೆ academic and non academic ಆಗಿ ಹೇಗಿರಬೇಕೆಂದು ನಾವೇನು ನಿಮ್ಮಿಂದ ಕಲಿಯ ಬೇಕಾಗಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನೀವೆಲ್ಲರೂ ಹೇಳಿದ ಹಾಗೆ ಕೇಳಿಕೊಂಡು ಕುಳಿತುಕೊಳ್ಳುವುದಕ್ಕೆ ನಾವು ಇಲ್ಲಿಗೆ ಬರುವುದೇ?

ಅಧ್ಯಕ್ಷರು : ನಾನು ಎಷ್ಟು ಸಾರಿ ಹೇಳಬೇಕು. ನೀವು ಸುಮ್ಮನೆ ಕುಳಿತುಕೊಳ್ಳಿ. ನಿಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಅವರು ಮಾತನಾಡುತ್ತಿಲ್ಲ. ತಾವೇಕೆ ಕುಳಿತುಕೊಂಡು ಅಕ್ಕಪಕ್ಕದಲ್ಲಿ argument ಮಾಡುತ್ತೀರಿ? ನೀವು ಸುಮ್ಮನೆ ಕುಳಿತುಕೊಳ್ಳಿ, ಸಂಬಂಧಪಟ್ಟ ಸಚಿವರು ಉತ್ತರ ಕೊಡುತ್ತಾರೆ. ಪದೇ ಪದೇ ಎಷ್ಟು ಸಲ ನಿಮಗೆ ಹೇಳಬೇಕು? ನನಗೂ ಕೂಡ ಸಾಕಾಗಿದೆ. ಅಲ್ಲೇ ಕುಳಿತುಕೊಂಡು ಪರಸ್ಪರ ಮಾತನಾಡಿಕೊಳ್ಳುತ್ತೀರಿ ಮತ್ತೆ argument ಕೂಡ ಮಾಡುತ್ತಿದ್ದೀರಿ. ಇದು ಸದನಕ್ಕೆ ಗೌರವತರತಕ್ಕಂಥದ್ದೆ? ಇದಕ್ಕೆ ಸಂಬಂಧ ಪಟ್ಟಂಥ ಸಚಿವರು ಉತ್ತರ ಕೊಡುತ್ತಾರೆ. ಎಲ್ಲರೂ ನಿಂತುಕೊಂಡರೆ ಹೇಗೆ? ಅವರು ಮಾತನಾಡುತ್ತಿದ್ದಾರೆ ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ, 9ನೇ ತಾರೀಖಿನಿಂದ ಸದನ ನಡೆಯುತ್ತಿದೆ. ಹೈದರಾಬಾದ್ ಕರ್ನಾಟಕದ ಬಗ್ಗೆ ಯಾವತ್ತಾದರು ಚರ್ಚೆ ಮಾಡಿದ್ದಾರೆಯೇ? ಮತ್ತೆ ಗಮನ ಸೆಳೆಯುವ ಸೂಚನೆ ಅಥವಾ ನಿಲುವಳಿ ಸೂಚನೆ ತಂದು ಏನಾದರೂ ಚರ್ಚೆ ಮಾಡಿದ್ದಾರೆಯೇ? ಇಷ್ಟು ದಿವಸ ಏತಕ್ಕೋಸ್ಕರ ಚರ್ಚೆ ಮಾಡಲಿಲ್ಲ? ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ ಮೇಲೆ ಕೂಡ ಅವರಿಗೆ ಅಗೌರವ ಆಗುವ ರೀತಿಯಲ್ಲಿ ನಡೆದುಕೊಂಡರು. ನಾನು ಅದರ ಬಗ್ಗೆ ಹೇಳಿದೆ ಅಷ್ಟೆ.

(ಗೊಂದಲ)

ಅಧ್ಯಕ್ಷರು : ಯಾರಿಗೆ ಏನು ಹೇಳಬೇಕಾಗಿದೆಯೋ ಅದನ್ನು ನಾನು ಈಗಾಗಲೇ ಹೇಳಿದ್ದೇನೆ. ಸಭಾಧ್ಯಕ್ಷರಿಗೆ ಈ ರೀತಿಯಾಗಿ argument ಮಾಡುವುದು ಸರಿಯಲ್ಲ. ತಾವೊಬ್ಬ ಸಚಿವರಾಗಿ ಈ ರೀತಿಯಾದ ನಿಮ್ಮ ನಡವಳಿಕೆಗಳು ಸರಿಯಲ್ಲ. ಒಬ್ಬ ಮಂತ್ರಿಯಾಗಿ ಈ ರೀತಿಯಾಗಿ argument ಮಾಡುವುದು ಒಳ್ಳೆಯದಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಿಮ್ಮಿಂದ ನಾನು ಏನು ಕಲಿಯಬೇಕಾಗಿಲ್ಲ, ತಾವು ಕುಳಿತುಕೊಳ್ಳಿ.

ಅಧ್ಯಕ್ಷರು : ನಿಮಗೆಷ್ಟು ಸಲ ಹೇಳಬೇಕು. ಅವರು ನಿಮ್ಮ ಇಲಾಖಾ ಬೇಡಿಕೆ ಬಗ್ಗೆ ಚರ್ಚೆ ಮಾಡುತ್ತಿದ್ದಾರೆಯೇ? ಏಕೆ intervene ಆಗುತ್ತೀರಿ?

ಶ್ರೀ ಸಿದ್ದರಾಮಯ್ಯ : ನಮಗಿಂಥ ಬಹಳ ವರ್ಷಗಳಿಂದ ನಾನು ಇಲ್ಲಿದ್ದೇನೆ. ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಅವರವರ knowledgeಗೆ ತಕ್ಕಂತೆ ಮಾತನಾಡುತ್ತಾರೆ.

ಶ್ರೀ ಸಿದ್ದರಾಮಯ್ಯ : ನಿಮ್ಮ knowledge ನ್ನು ನೀವು ಇಟ್ಟುಕೊಳ್ಳಿ. ನನ್ನ knowledge ನನ್ನ ಹತ್ತಿರ ಇರುತ್ತದೆ. ನೀವ್ಯಾರು ನನಗೆ ಹೇಳುವುದಕ್ಕೆ? ಸುಮ್ಮನೆ ಕುಳಿತುಕೊಳ್ಳಿ. It is none of your busines.

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ಇಲ್ಲಿಂದ ಬಿಲ್ ಪಾಸ್ ಆಗಿ ಬರುತ್ತದೆಂದು ಆ ಮನೆಯಲ್ಲಿಯೂ ಕೂಡ ಕಾಯುತ್ತಿದ್ದಾರೆ. ಅವರ ಸಲಹೆಗಳು ಏನಿವೆಯೋ ಅದನ್ನು ಶಾಂತವಾಗಿ ಕೇಳಿ. ಇಲ್ಲಿಂದ ಇನ್ನು ಎರಡು–ಮೂರು ಬಿಲ್ ಪಾಸ್ ಆಗಿ ಆ ಮನೆಗೆ ಹೋಗಬೇಕಾಗಿದೆ.

ಶ್ರೀ ಬಿ.ಎನ್.ಬಚ್ಚೇಗೌಡ : ನಾವು ಮಧ್ಯೆ ಎದ್ದು ಮಾತನಾಡುವುದಕ್ಕೆ ಹೋದರೆ ಅವರು ಸುಮ್ಮನೆ ಕೋಪ ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : ನೀವೇ ಮಾತನಾಡಿ.

ಅಧ್ಯಕ್ಷರು : ನೀವು ಮಧ್ಯೆ ಮಧ್ಯೆ intervene ಮಾಡಿದರೆ ಹೇಗೆ? ಸಂಬಂಧಪಟ್ಟ ಸಚಿವರು intervene ಮಾಡಲಿ.

(ಗೊಂದಲ)

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು : ಎಲ್ಲದಕ್ಕೂ ದಬ್ಬಾಳಿಕೆ ಮಾಡಿಕೊಂಡು ಬರುತ್ತಿದ್ದೀರಿ. ಯಾವ ವಿಷಯದ ಬಗ್ಗೆ ಸರಾಗವಾಗಿ ಮಾತನಾಡುವುದಕ್ಕೆ ಅವರು ಬಿಟ್ಟಿದ್ದಾರೆ. 9ನೇ ತಾರೀಖಿನಿಂದ ಸದನ ಪ್ರಾರಂಭವಾಗಿದೆ. ಅವತ್ತಿನಿಂದ ಇವತ್ತಿನವರೆಗೆ ವಿರೋಧ ಪಕ್ಷ ಯಾವುದಕ್ಕೆ ಸಹಕಾರ ಕೊಟ್ಟಿದೆ? ಬಜೆಟ್, ಬೇಡಿಕೆಗಳ ಬಗ್ಗೆ ಯಾವತ್ತು ಚರ್ಚೆ ಮಾಡಿದ್ದೀರಿ? ಯಾವತ್ತೂ ಕೂಡ ಮಾಡಿಲ್ಲ. ಅವತ್ತಿನಿಂದ ಇವತ್ತಿನವರೆಗೂ ಕೂಡ ಸಹಕಾರ ಕೊಟ್ಟಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಏಕೆ ಕೊಡಬೇಕು? ಇಲ್ಲಿ ಹುಡುಗಾಟ ಆಡುತ್ತಿದ್ದೀರಿ. ನೀವು ಹೇಳಿದಂತೆ ನಾವು ಕೇಳಬೇಕೆ? ಈ ಬಿಲ್ ಬಗ್ಗೆ ಮಾತನಾಡಬೇಡಿ ಎಂದು ಇಷ್ಟು ಹೊತ್ತು ಮಾತನಾಡಿ ಹೇಳಬೇಕಾಗಿಲ್ಲ.

ನಾವು ಏನು ಹೇಳುತ್ತೇವೆಯೋ ಅದಕ್ಕೆ ಸಂಬಂಧಪಟ್ಟಂಥ ಸಚಿವರು ಉತ್ತರ ಕೊಡುತ್ತಾರೆ. ಸರಿ ಇಲ್ಲದಿದ್ದರೆ ಅವರು ಏನು ಬೇಕಾದರು ಹೇಳುತ್ತಾರೆ. ಈ ರೀತಿಯಾದರೆ ಬಹಳ ಕಷ್ಟವಾಗುತ್ತದೆ. I am sorry. ನಾವು ಯಾವುದೊ ಒಂದು ವಿಷಯದ ಬಗ್ಗೆ ಹೇಳುತ್ತಾ ಇರುತ್ತೇವೆ. ಆಗ academic ಆಗಿ ಹೇಳಿ, un-academic ಆಗಿ ಹೇಳಿ ಎಂದು ಹೇಳುವುದಕ್ಕೆ ಬರುತ್ತಾರೆ. ರೈತರನ್ನು ಕಡಿಮೆ ಮಾಡುವುದು ಮತ್ತು ಅಧಿಕಾರಿಗಳನ್ನು ಜಾಸ್ತಿ ಮಾಡುವುದು academic? ನಾವು ಹೇಳುವುದೇನೆಂದರೆ, ಈಗ ಇರುವ ಆಕ್ಟ್‌ನಲ್ಲಿ 6 ಜನ ರೈತರಿದ್ದರು. ಮತ್ತೆ ಇದರಲ್ಲಿ ಒಟ್ಟು 13 ಜನ ಇದ್ದರು, ಈಗ ಅದನ್ನು 15 ಜನ ಮಾಡಿದ್ದೀರಿ. ಇದರಲ್ಲಿ ಏನು ಡಿಫರೆನ್ಸ್ ಆಯಿತು? ಗುಣಾತ್ಮಕವಾಗಿ ಏನು ಬದಲಾವಣೆಯಾಯಿತ್ತೆಂಬುದರ ಬಗ್ಗೆ I want to know. ವಿಶ್ವವಿದ್ಯಾಲಯಗಳಿಗೆ ಎಂಎಲ್ಎ ಮತ್ತು ಎಂಎಲ್‌ಸಿಗಳನ್ನು ಕಳುಹಿಸಿಕೊಡುತ್ತೇವೆ. ಇಲ್ಲಿಂದ 3 ಜನ ಎಂಎಲ್ಎ ಗಳನ್ನು ಹಿಂದೆ ಕಳುಹಿಸಿಕೊಡುತ್ತಿದ್ದೆವು. ಎಂ.ಎಲ್.ಎಗಳು ಅಲ್ಲಿದ್ದರೆ ಯೂನಿವರ್ಸಿಟಿಗಳು ಕೆಟ್ಟು ಹೋಗುತ್ತದೆಯೇ? ಹಾಗಾದರೆ Traditional Universityಗಳಿಗೆ ಎಂಎಲ್ಎ ಮತ್ತು ಎಂಎಲ್‌ಸಿ ಗಳನ್ನು ಏಕೆ ಕಳುಹಿಸಿಕೊಡುತ್ತೇವೆ. ಅವರುಗಳು ಶಾಸಕರಾಗಿರುತ್ತಾರೆ ಮತ್ತೆ ಅವರ ಅನುಭವಗಳು ಉಪಯೋಗಕ್ಕೆ ಬರಲೆಂಬ ಉದ್ದೇಶದಿಂದ ಮತ್ತು ಅವರು ರೈತರ ಜೊತೆ ಇರುತ್ತಾರೆ ಹಾಗೆಯೇ ಹಳ್ಳಿಗಾಡಿನ ಬದುಕು ಮತ್ತು ಕೃಷಿ ಗೊತ್ತಿರುವುದರಿಂದ ಇಂಥವರೆಲ್ಲರೂ ಅಲ್ಲಿದ್ದರೆ ಅನುಕೂಲವಾಗುತ್ತದೆಂಬ ಉದ್ದೇಶದಿಂದ ಕಳುಹಿಸಿಕೊಡುತ್ತೇವೆ. ನನ್ನ ಪ್ರಕಾರ 1963ರ ಆಕ್ಟ್‌ನಲ್ಲಿದ್ದಂತದನ್ನು ಬದಲಾವಣೆ ಮಾಡುವ ಅಗತ್ಯತೆ ಇಲ್ಲವೆಂಬುದು ನನ್ನ ಭಾವನೆ. ನೀವು ಯಾರನ್ನಾದರು ಹಾಕಿಕೊಳ್ಳಿ. ಏಕೆಂದರೆ ನಾವು ಹೇಳುವವರನ್ನು ತಾವೇನು ಹಾಕುವುದಿಲ್ಲ. ನೀವು ಯಾರನ್ನಾದರು ಹಾಕಿಕೊಳ್ಳಿ, ಅಧಿಕಾರದಲ್ಲಿದ್ದಾಗ ನಾವು ಹಾಕಿಕೊಳ್ಳುತ್ತೇವೆ. ನೀವು ಅಧಿಕಾರದಲ್ಲಿರುವಾಗ ನೀವು ಹಾಕಿಕೊಳ್ಳಿ. Vice Chancellor ಗೆ at the pressure of the Government 3 ವರ್ಷ ಮೆಂಬರ್ ಇರುವುದಕ್ಕೆ ಬಿಡಬೇಕು. ಆದರೆ, ಏಕೆ ತೆಗೆದು ಹಾಕುತ್ತೀರಿ? ರೈತ ಮೆಂಬರ್ ಆಗಿದ್ದರೆ ಆತ ಮೂರು ವರ್ಷಗಳು ಅಲ್ಲಿರಬೇಕು. ಆದರೆ, at the preasure of the Government or at the preasure of the Vice

Chancellor ಎಂದು ಎರಡು ರೀತಿಯಲ್ಲಿ ಕೂಡ ಇದರಲ್ಲಿ ಹೇಳಿದ್ದಾರೆ. ನಾಮಿನೇಟೆಡ್ ಮೆಂಬರ್ ಮೂರು ವರ್ಷ ಅಲ್ಲಿರುವುದಕ್ಕೆ ಬಿಡದೆ Vice Chancellor ತೆಗೆದುಹಾಕಬಹುದೆ? ನಾಮಿನೇಟೆಡ್ ಮೆಂಬರ್ ಅಲ್ಲಿ ಮೂರು ವರ್ಷ ಇರುವುದಕ್ಕೆ ಬಿಡುವುದಿಲ್ಲ ಮತ್ತೆ ಅಲ್ಲಿರುವವರು ಏನನ್ನು ಮಾತನಾಡು ವಂತಿಲ್ಲ. ಮತ್ತೆ ಕೋರಂ ಇಲ್ಲದೆ ಸಭೆಯನ್ನು ಒಂದು ಸಾರಿ ಮುಂದಕ್ಕೆ ಹಾಕಿದರೆ ಮತ್ತೆ ಸಭೆ ನಡೆಸುವುದಕ್ಕೆ ಕೋರಂ ಬೇಡ ಎಂದು ಇದೆ. ಅವರಿಗೆ ಇಷ್ಟ ಬಂದ ಹಾಗೆ ವಿಷಯಗಳನ್ನು ಪಾಸ್ ಮಾಡಿಕೊಂಡು ಹೋಗಬಹುದೆ? ಈ ರೀತಿಯಾದರೆ ಕೋರಂ ಏಕೆ ಬೇಕು? ಮುಂದಿನ ಸಭೆಗೂ ಕೋರಂ ಇರಬೇಕೆಂದು ಹೇಳಿ. ಇಲ್ಲಿ ಒಂದು ಸಾರಿ assembly adjourn ಆದರೆ, ಮತ್ತೆ ಸೇರುವುದಕ್ಕೆ ಕೋರಂ ಬೇಡವೇ? ಕೋರಂ ಇಡಬೇಕು, ಈಗ ಏಕೆ ಅದನ್ನು ಬದಲಾವಣೆ ಮಾಡಿದ್ದೀರಿ? ಯಾರದೋ personal interest ಗೋಸ್ಕರ ಈ ರೀತಿಯಾಗಿರಬೇಕೆಂಬ ಭಾವನೆಗಳು ಬರುತ್ತವೆ. ಯಾರದೋ ಆಸಕ್ತಿಯನ್ನು ಕಾಪಾಡುವುದಕ್ಕೋಸ್ಕರ ಈ ರೀತಿಯಾಗಿ ಬಂದಿರಬಹುದು. ಮತ್ತೆ ಈ ರೀತಿಯಾಗದೆ ಇರಬಹುದು. I don't know. But the question is, ಅಲ್ಲಿರತಕ್ಕಂಥ ಸದಸ್ಯರನ್ನು at the pressure of Vice Chancellor ತೆಗೆದು ಹಾಕಬಹುದೆಂದರೆ ಏನರ್ಥ? ಗೌರವಯುಕ್ತರಾಗಿರುವಂಥವರನ್ನು ಮತ್ತು ಅವರಿಂದ ಉಪಯೋಗವಾ ಗುತ್ತದೆಂಬ ಉದ್ದೇಶದಿಂದ ಸರ್ಕಾರ ಕೆಲವರನ್ನು ನಾಮಿನೇಟ್ ಮಾಡುತ್ತದೆ. Vice Chancellors ಹೇಳಿದಂತೆ ಕೇಳುವುದಕ್ಕೋಸ್ಕರ ನಾವು ನಾಮಿನೇಟ್ ಮಾಡುವುದೇ? Vice Chancellors ಮೇಲೆ ಎಲ್ಲದಕ್ಕೂ ಕಡಿವಾಣ ಹಾಕಿ ಎಂದು ಮತ್ತು ಅವರಿಗೆ ಕೊಟ್ಟಿರುವ ಅಧಿಕಾರವೆಲ್ಲವನ್ನು ಸರ್ಕಾರ ಕಿತ್ತುಕೊಳ್ಳಿ ಎಂದು ನಾನು ಹೇಳುವುದಿಲ್ಲ. ಅಲ್ಲಿ ಚರ್ಚೆ ಮಾಡುವುದಕ್ಕೆ ರೈತರ ಸಮಸ್ಯೆ ಹೇಳುವುದಕ್ಕೆ ಮತ್ತು ಅನುಭವ ಇರತಕ್ಕಂಥ ರೈತರು ಮತ್ತು rural background ಇರತಕ್ಕಂಥವರು ಮತ್ತು ಸ್ವತಃ ವ್ಯವಸಾಯ ಮಾಡಿಕೊಂಡು ಬಂದಿರುವವರು ಅಲ್ಲಿದ್ದರೆ ಹೆಚ್ಚು ಅನುಕೂಲವಾಗುತ್ತದೆ. ಅಲ್ಲಿ ಯಾರೊಬ್ಬ ಅಧಿಕಾರಿಯನ್ನು ಹೆಚ್ಚಿಗೆ ಮಾಡಿರುತ್ತೀರೆಂದು ತಿಳಿದುಕೊಳ್ಳೋಣ. ಉದಾಹರಣೆಗೆ ಹೇಳುವು ದಾದರೆ, Secretary to the Co-operative Department ಇರಬಹುದು. ಅಲ್ಲಿ ಇವರಿಗಿಂಥ ಒಬ್ಬ ರೈತ ಉಪಯೋಗಕ್ಕೆ ಬರುತ್ತಾನೋ ಅಥವಾ Co-

operative Departmentನ Secretary ಅಲ್ಲಿ ಉಪಯೋಗಕ್ಕೆ ಬರುತ್ತಾರೆಯೇ? ಆದರೆ, ಅಲ್ಲಿ ಕೃಷಿ ಇಲಾಖೆಯ ಕಾರ್ಯದರ್ಶಿಗಳು ಮತ್ತು ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳು ಇರಬೇಕಾಗುತ್ತದೆ. Because so many financial implications ಇರುತ್ತವೆ. ರೈತರನ್ನು ಏಕೆ ಕಡಿಮೆ ಮಾಡುತ್ತೀರಿ? ಇಲ್ಲಿ ಇನ್ನು ಇಬ್ಬರು ಅಧಿಕಾರಿಗಳನ್ನು ಹೆಚ್ಚು ಮಾಡಬೇಕಾದರೆ ಇಲ್ಲಿ ಇನ್ನು ಇಬ್ಬರು ರೈತರನ್ನು ಸಹ ಹೆಚ್ಚು ಮಾಡಿ. ಇನ್ನಿಬ್ಬರನ್ನು ಜಾಸ್ತಿ ಮಾಡಿದರೆ ಏನು ಆಗುವುದಿಲ್ಲ. 15 ಇರತಕ್ಕಂಥದ್ದನ್ನು 17 ಮಾಡಿ, ಅಲ್ಲಿ ಹೆಚ್ಚಾಗಿ ರೈತರು ಸಹ ಇರಲಿ. ಹೆಚ್ಚಾಗಿ ರೈತರು ಇರಲಿ. Why you are reducing the representation of the farmers? Because it is the University of Agriculture. This University is meant for the farming community. That is my point. ಇದು ಬಹಳ progressive bill ಏನಲ್ಲ. Progressive ಆಗಿದ್ದರೆ ಒಪ್ಪಿಕೊಳ್ಳೋಣ. ರೈತರಿಗೆ ಒಳ್ಳೆಯದು ಆಗುತ್ತದೆಂದರೆ ಒಪ್ಪಿಕೊಳ್ಳೋಣ. Farming Communityಗೆ ಅನುಕೂಲ ಆಗುತ್ತದೆಂದರೆ ಒಪ್ಪಿಕೊಳ್ಳೋಣ. Agricultural production · ಹೆಚ್ಚಾಗುತ್ತ ದೆಂದರೆ ಒಪ್ಪಿಕೊಳ್ಳೋಣ. ಅದು ಏನು ಇಲ್ಲದೆ ಈ ತರಹ ತೆಗೆದುಕೊಂಡು ಬಂದು ICARನವರು ಈ ಆಕ್ಟ್ ಬದಲಾಯಿಸಿ ಹೊಸ ಆಕ್ಟ್ ತೆಗೆದುಕೊಂಡು ಬನ್ನಿ ಎಂದು ಹೇಳಿದ್ದಾರಾ? ಅವರು ಏನು ಹೇಳಿಲ್ಲ. ಮಾನ್ಯ ಎಲ್ಲಾ ಸದಸ್ಯರ ಭಾವನೆಗಳು ಏನಿದೆ ಎಂದರೆ, ಈ ತರಹದು ಬೇಡ. ನೀವು ಇದನ್ನು ಈಗ ವಾಪಸ್ಸು ತೆಗೆದುಕೊಂಡು ತಿದ್ದುಪಡಿ ಮಾಡಿ ಇನ್ನೊಂದು ಸಲ ತೆಗೆದುಕೊಂಡು ಬನ್ನಿ. ಅದಕ್ಕೆ ಅಮೆಂಡ್‌ಮೆಂಟ್ ಮಾಡಿ, 1963ರ ಆಕ್ಟ್ ಮೇಲೆ University ಮಾಡಲಿ. ಇದನ್ನು ಇನ್ನು ಸಮಗ್ರವಾಗಿ ಇಡಿ ದೇಶದಲ್ಲಿ ಅಗ್ರಿಕಲ್ಚರ್ ಬಗ್ಗೆ ಏಕರೂಪದ ಒಂದು ಕಾನೂನು ಬರಲಿ ಎನ್ನುವಂತೆ ಇದ್ದರೆ ಒಂದು ಕಾನೂನು ಮಾಡಿ. We have no objection. ಅದು ಬಿಟ್ಟು ಸುಮ್ಮನೆ ಇಲ್ಲಿ ತೆಗೆದುಕೊಂಡು ಬಂದು ಯಾರಿಗೊ ಅನುಕೂಲವಾಗು ತ್ತದೆಂದು ಮಾಡಿದರೆ ವಿರೋಧ ಮಾಡಲೇ ಬೇಕಾಗುತ್ತದೆ. ನಾವು ಇದನ್ನು ವಿರೋಧ ಮಾಡುತ್ತಿದ್ದೇವೆ. ದಯವಿಟ್ಟು ಇದನ್ನು ವಾಪಸ್ಸು ತೆಗೆದುಕೊಂಡು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ.

ಅಧ್ಯಕ್ಷರು : ಮಾನ್ಯ ಸಚಿವರು ಉತ್ತರವನ್ನು ಕೊಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1986 ರಿಂದ ಇಲ್ಲಿ ಶಾಸಕರು ಸದಸ್ಯರಾಗಿ ಇಲ್ಲ. ಹಿಂದೆ ಇರಲಿಲ್ಲ ಈಗ ಮಾಡಬಾರದೆಂದು ನಾನೇನು ಹೇಳುತ್ತಿಲ್ಲ. ಆದರೆ ಇಲ್ಲಿರುವಂಥ ನಮ್ಮ ಸನ್ಮಾನ್ಯ ಸದಸ್ಯರಿಗೆ ಶಾಸಕರು ಇದ್ದದ್ದನ್ನು ತೆಗೆದರೂ ಎನ್ನುವ ಭಾವನೆ ಬರುವುದು ಬೇಡ. ಆದ್ದರಿಂದ ನೀವು ಏನು ಸಲಹೆಯನ್ನು ಕೊಟ್ಟಿದ್ದೀರಿ, ಅದರಂತೆ ಮೂರು ಜನ ಹೆಚ್ಚುವರಿಯಾಗಿ ರೈತರನ್ನು ಮೂರು ಜನ ಶಾಸಕರಿಗೆ ಅವಕಾಶ ಮಾಡಿಕೊಡುತ್ತೇವೆ. ದಯಮಾಡಿ ಈ ಬಿಲ್‌ನ್ನು ಒಪ್ಪಿಕೊಳ್ಳಿ.

ಶ್ರೀ ಸಿದ್ದರಾಮಯ್ಯ : The term at the pleasure of the Government and at the pleasure of the Vice Chancellor ಎಂದು ಇರುವುದನ್ನು ತೆಗೆದು ಹಾಕಬೇಕು.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಮಾನ್ಯ ಕಾನೂನು ಸಚಿವರೆ, ಇದರಲ್ಲಿ ಇನ್ನು ಬಹಳಷ್ಟು ತಿದ್ದುಪಡಿ ಮಾಡಬೇಕೆಂದು ನಿಮ್ಮ ಮನಸ್ಸಿನಲ್ಲಿದೆ. ಅದರ ಬಗ್ಗೆ ಸಮರ್ಪಕವಾಗಿ ಎಲ್ಲರೂ ಪೂರ್ಣವಾಗಿ ಹೇಳಿ ಏಕೆಂದರೆ ಇನ್ನು ಅದರಲ್ಲಿ 4–5 ತಿದ್ದುಪಡಿಯನ್ನು ಮಾಡಬೇಕಾಗಿದೆ. ಅದನ್ನು ತಾವು ಹೇಳಬೇಕು. ನಿಮ್ಮ ಮನಸ್ಸಿನಲ್ಲಿ ಇದೆ. ಆದರೆ ಏಕೋ ನೀವು ಹೇಳುತ್ತಿಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ನೀವು ಇನ್ನೊಂದು ತೋಟಗಾರಿಕೆ ಬಿಲ್ ನೋಡಿ ಅದರಲ್ಲಿ 8–4 ಎಂದಿದೆ. ಬೇಕಾದರೆ ಅದನ್ನು 8–6 ಮಾಡಿ.

ಶ್ರೀ ಎಸ್.ಸುರೇಶ್‌ಕುಮಾರ್: Section 12(3) ಪ್ರಕಾರ, it is very clear. ಅದೆಲ್ಲೋ ಸ್ವಲ್ಪ communication gap ಆಗುತ್ತಿದೆ. "ಪದ ನಿಮಿತ್ತ ಸದಸ್ಯರುಗಳನ್ನು ಹೊರತುಪಡಿಸಿ ಮಂಡಳಿಯ ಸದಸ್ಯರ ಪದಾವಧಿಯು ಸಂದರ್ಭಾನುಸಾರ ಸರ್ಕಾರ ಅಥವಾ ಕುಲಾಧಿಪತಿಯವರ ಇಚ್ಛೆಗೊಳಪಟ್ಟು" ಎಂದಿದೆ, not Vice Chancellor, Governor or the Government. So, ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ, Vice Chancellor ಕಂಟ್ರೋಲ್‌ನಲ್ಲಿ ಇರುವುದಿಲ್ಲ. ಏಕೆಂದರೆ they are not nominated by the Vice Chancellor.

ಶ್ರೀ ಸಿದ್ದರಾಮಯ್ಯ : ಅವರ conduct ಸರಿಯಿಲ್ಲದೆ ಹೋಗಿದ್ದರೆ, ಅವರು ಕೆಟ್ಟದಾಗಿ ನಡೆದುಕೊಂಡರೆ ತೆಗೆದು ಹಾಕಿ.

ಶ್ರೀ ಎಸ್.ಸುರೇಶ್‌ಕುಮಾರ್ : ಅದೇ ಇರುವುದು.

ಶ್ರೀ ಸಿದ್ದರಾಮಯ್ಯ : ಆ ತರಹ ಇಲ್ಲ.

ಶ್ರೀ ಸುರೇಶ್‌ಕುಮಾರ್ : ಸುಮ್ಮಸುಮ್ಮನೆ ಯಾರು ತೆಗೆದು ಹಾಕುತ್ತಾರೆ. Government ಯಾರನ್ನೋ ಒಬ್ಬರನ್ನು nominate ಮಾಡುತ್ತದೆ. Any Government, this Government or that Governmnet, ಅವರು ತಾವೇ nominate ಮಾಡಿದವರನ್ನು ಏಕೆ ತೆಗೆದು ಹಾಕುತ್ತಾರೆ, unless there is a misconduct.

ಶ್ರೀ ಸಿದ್ದರಾಮಯ್ಯ : Let him complete his three years term. ಮಧ್ಯೆ ಮಧ್ಯೆ ತೆಗೆದು ಹಾಕುವುದು ಅಷ್ಟು ಚೆನ್ನಾಗಿ ಕಾಣುವುದಿಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್ : ನೀವೇ ಒಂದು ಮಾತನ್ನು ಹೇಳಿದಿರಿ, unless there is a misconduct. Misconduct ಇದ್ದರೆ ಯಾರು ತೆಗೆದು ಹಾಕಬೇಕು.

SRI SIDDARAMAIAH : It is always understood.

ಶ್ರೀ ಸುರೇಶ್‌ಕುಮಾರ್ : But, there should be a provision.

ಶ್ರೀ ಸಿದ್ದರಾಮಯ್ಯ : ಬೇರೆ ಕಡೆ ಮೂರು ವರ್ಷಕ್ಕೆ ಮಾಡಲಾಗಿದೆ.

ಶ್ರೀ ಎಸ್.ಸುರೇಶ್‌ಕುಮಾರ್: ಸರ್ ತಾವು ಇದನ್ನು ಒಪ್ಪಿಕೊಳ್ಳಬೇಕು. Vice Chancellor, official, casual ಎಂದು ಇರುವುದಿಲ್ಲ, only the Governor, definitely he will consider all those things. ಇದನ್ನು ಯಾರು misconduct ಎನ್ನುತ್ತಾರೆ. Government which has nominated. ಇದನ್ನು ತಾವು ಒಪ್ಪಿಕೊಳ್ಳಬೇಕು. ಪದನಿಮಿತ್ತ ಸದಸ್ಯರುಗಳನ್ನು ಹೊರತುಪಡಿಸಿ ಮಂಡಳಿಯ ಸದಸ್ಯರ ಪದಾವಧಿಯು ಸಂದರ್ಭಾನುಸಾರ ಸರ್ಕಾರ ಅಥವಾ ಕುಲಾಧಿಪತಿಗಳ ಇಚ್ಛೆಗೊಳಪಟ್ಟು ಅದಕ್ಕೆ ಎಲ್ಲಾ ಸೆಕ್ಷನ್‌ನಲ್ಲೂ ಇದ್ದದ್ದೇ ಇದು.

ಶ್ರೀ ಹೆಚ್.ಡಿ.ರೇವಣ್ಣ : Point of order, Court matter ತಮಗೆ ಕಳುಹಿಸಿ ಕೊಡುತ್ತೇನೆ.

ಅಧ್ಯಕ್ಷರು : Court matter ಬೇರೆ ಇದೆ. ನೀವು ಕಳುಹಿಸಿದ್ದನ್ನು ನಾನು ನೋಡಿರುತ್ತೇನೆ.

ಶ್ರೀ ಹೆಚ್. ಡಿ. ರೇವಣ್ಣ : Sir, members ವಿಷಯನೇ ಇದು.

ಅಧ್ಯಕ್ಷರು : Interim order ನಾನು ನೋಡಿದ್ದೇನೆ. ಇದಕ್ಕೆ ಯಾವುದು stay ಇಲ್ಲ, ಇದಕ್ಕೆ ಏನು ಸಂಬಂಧವಿಲ್ಲ.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, The term of the office of the members of the Board other than the Ex-officio member, shall be subject to the pleasure of the Government or the Chancellor as the case may be for three years and they shall not be eligible for re-nomination. What does it mean? ನೀವು ಬೇರೆ ಆಕ್ಟನ್ನು ನೋಡಿಕೊಂಡು ಬನ್ನಿ. ಒಂದು term MLC ಆದವರು ಇನ್ನೊಂದು termಗೆ MLC ಆಗಬಾರದೆ? Power vested with the Government ಯಾರಾದರೂ ಬರಲಿ, ಅದನ್ನು ಏಕೆ ಮಾಡಬೇಕು. Unnecessary ಆಗಿ ಇದನ್ನು develop ಮಾಡುತ್ತಿದ್ದೀರಿ? ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎಸ್. ಎ. ರವಿಂದ್ರನಾಥ್ : ಬೇರೆ ರೈತರು ಆಗಲಿ ಎನ್ನುವುದು ಅಷ್ಟೆ ನನ್ನ ಉದ್ದೇಶ, ಬೇರೆ ಉದ್ದೇಶ ಏನು ಇಲ್ಲ.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ : ನೋಡಿ ನಾನು ಹೇಳಿ ಬಿಡುತ್ತೇನೆ. ನೀವು ನಾವು ಚಿಂತನೆ ಮಾಡುತ್ತಿರುವುದಕ್ಕೆ ಏನು ತುಂಬಾ ಬದಲಾವಣೆ ಇಲ್ಲ. ಈಗ Section-11 ರಲ್ಲಿ "Board of Regents" ಎನ್ನುವುದಕ್ಕೆ ಬದಲಾಗಿ "Board of Management" ಎಂದು ಇಡಿ ಎಂದು ನಾವು ಕೇಳುತ್ತಿದ್ದೇವೆ. ಅದರಲ್ಲಿ ಏನು ಮಹಾ ಬದಲಾವಣೆ ಆಗುತ್ತದೆ.

ಅಧ್ಯಕ್ಷರು : ಈಗ nomination ನನ್ನು ಒಪ್ಪಿಕೊಂಡಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ : Section-12ರಲ್ಲಿ Board of Management ಅಂದರೆ Board of Regent ಎಂದು.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಬಹಳ important demand ಏನು? ಬೋರ್ಡಿನಲ್ಲಿ ಕೃಷಿಕರು, ರೈತರು, Non-

official ಸಂಖ್ಯೆ ಜಾಸ್ತಿ ಇರಬೇಕು. That is the Government has conceded. ಎರಡನೇಯದು, ಇಲ್ಲಿ ಒಂದು ಗ್ರಹಿಕೆ ಇತ್ತು. Vice Chancellor ನ್ನು ಮೂರು ವರ್ಷದಲ್ಲಿ ತೆಗೆದುಹಾಕಬಹುದು ಅಂತ, that has been made it very clear. ದಯವಿಟ್ಟು ಇದಕ್ಕೆ ಒಪ್ಪಿಗೆ ಕೊಡಿ.

ಅಧ್ಯಕ್ಷರು : ಇದನ್ನು ಮುಗಿಸೋಣ.

ಶ್ರೀ ಟಿ. ಬಿ. ಜಯಚಂದ್ರ : Universityಯಲ್ಲಿ ನಾನು Pro-Chancellor ಆಗಿದ್ದವನು ನನಗೆ ಗೊತ್ತಿದೆ ಅಲ್ಲಿ ಏನು ನಡೆಯುತ್ತಿದೆ ಎಂದು. ಈಗ 1/3rd of the Board Members ಅನ್ನುವ ಬದಲು 50% ಇಡಿ. ಏಕೆಂದರೆ, 1/3rd ಆದರೆ ಬರೀ officials membersನ್ನೇ ಇಟ್ಟುಕೊಂಡು ಸಭೆ ಮಾಡಿ ಬಿಡುತ್ತಾರೆ. ಅದು ಅಲ್ಲಿ ಬರುವ problem.

(ಗೊಂದಲ)

ಇಲ್ಲಿ ಏನಾಗಿದೆ ಎಂದರೆ, Board ಅಂದರೆ ಬರೀ promotion, transfer ಇನ್ನೊಂದು politics ಬಿಟ್ಟರೆ, ಸಂಶೋಧನೆ ಬಗ್ಗೆ ಚರ್ಚೆಯಾಗುವುದಿಲ್ಲ, ಬೇರೆ ಏನು ವಿಚಾರಗಳು ಚರ್ಚೆಯಾಗುವುದಿಲ್ಲ. ಅದಕ್ಕೋಸ್ಕರ ನಾನು ಹೇಳುವುದು. ರೈತ ಪ್ರತಿನಿಧಿಗಳು ಜಾಸ್ತಿ ಇರಬೇಕು.

ಅಧ್ಯಕ್ಷರು : ಅವರು ಮೀಟಿಂಗ್‌ಗೆ ಹೋಗುವುದಿಲ್ಲವೆಂದರೆ ಏನು ಮಾಡುವುದಕ್ಕಾಗುವುದಿಲ್ಲ. ಅಂದರೆ ಅವರಿಗೆ ಜವಾಬ್ದಾರಿ ಇಲ್ಲವೆಂದು ಆಗುತ್ತದೆ. ತಾವು ತಾವೇ ಮಾಡಿಕೊಳ್ಳುವುದಕ್ಕೆ ಹೇಗಾಗುತ್ತದೆ. ಮೆಂಬರ್ ಆದ ಮೇಲೆ ಅವರು ಸಭೆಗೆ ಬರಬೇಕಾಗುತ್ತದೆ.

ಶ್ರೀ ಟಿ. ಬಿ. ಜಯಚಂದ್ರ : ಅವರು ಹೇಳುವುದಕ್ಕೂ ನಾವು ಹೇಳುವುದಕ್ಕೂ ಏನು difference ಇಲ್ಲ. Smooth ಆಗಿ ನಡೆಯಬೇಕಾದರೆ, ಅದರಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳಬೇಕು.

ಅಧ್ಯಕ್ಷರು : ಎಲ್ಲಿ ಇದೆ ರೂಲ್ಸ್. ಕೋರಂ ಎಲ್ಲಾ ಕಡೆ ನೋಡಲಾಗಿದೆ. ಆಯಿತು ಮುಗಿಸೋಣ.

ಶ್ರೀ ಹೆಚ್. ಡಿ. ರೇವಣ್ಣ : ಅಮೆಂಡ್‌ಮೆಂಟ್ ಬಗ್ಗೆ ಏನು ಹೇಳಲಿಲ್ಲ.

ಶ್ರೀ ಎಸ್.ಸುರೇಶ್‌ಕುಮಾರ್ : 1/3 ಕೋರಂ ಇರಬೇಕು. ಎರಡು ಸಂಗತಿಗಳನ್ನು ನಾವು Clarification ಮಾಡಿದ್ದೇವೆ.

ಶ್ರೀ ಹೆಚ್. ಸಿ. ಬಾಲಕೃಷ್ಣ : ಮೊದಲ ಬಾರಿ ಕೋರಂ ಇಲ್ಲದಿದ್ದರೆ ಸಭೆ ಮಾಡುವಂತಿಲ್ಲ. ಆದರೆ, ಎರಡನೇ ಸಲ ಕೋರಂ ಇಲ್ಲದಿದ್ದರೂ ಸಭೆ ಮಾಡಬಹುದು ಎಂದು ಇರುವುದನ್ನು ಮಾತ್ರ ಬದಲಾವಣೆ ಮಾಡಬೇಕು. ಸಭೆ ಮಾಡುವುದಕ್ಕೆ ಕೋರಂ ಅವಶ್ಯಕತೆ ಇರಬೇಕು ಎಂಬುದನ್ನು ಮಾಡಿ.

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಈಗ ಒಂದು ಸ್ಪಷ್ಟೀಕರಣವನ್ನು ಸಭೆಗೆ ಕೊಡುತ್ತಿದ್ದೇನೆ. ಸಭೆಯ ಎಲ್ಲರ ಭಾವನೆಯನ್ನು ಒಪ್ಪಿಕೊಂಡು ಅಧಿಕಾರೇತರ ಸಂಖ್ಯೆಯನ್ನು ಜಾಸ್ತಿ ಮಾಡಿ ಮೂರು ಜನ ರೈತರು, ಮೂರು ಜನ ಶಾಸಕರನ್ನು ಇವತ್ತು ನೇಮಕ ಮಾಡುತ್ತಿದ್ದೇವೆ. ಮೂರು ಜನ ರೈತರು ಮೂರು ಜನ ಶಾಸಕರನ್ನು ಹೆಚ್ಚಾಗಿ ನೇಮಕ ಮಾಡುತ್ತಿದ್ದೇವೆ. ಎರಡನೆಯದು, ವೈಸ್‌ಚಾನ್ಸಲರ್ ರವರ ಕಂಟ್ರೋಲ್‌ಗೆ ಬರುತ್ತದೆಂದು ಏನು ಹೇಳಿದ್ದೀರಿ, ಆ ರೀತಿ ಅಲ್ಲ. ಇಲ್ಲಿ **Government** ಮತ್ತು **Governor**ರವರ ಕಂಟ್ರೋಲ್ ನಲ್ಲಿದೆ. ಕೋರಂ ವಿಚಾರವನ್ನು ಹೇಳಿದ್ದೀರಿ. ಯಾವುದೇ ಸಭೆಯಲ್ಲೂ ಮೂರನೇ ಒಂದು ಭಾಗ ಕೋರಂ ಇರಲೇ ಬೇಕು.

ಪರ್ಯಾಲೋಚನಾ ಪ್ರಸ್ತಾವ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "2009ರ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು
ಖಂಡ 2 ರಿಂದ 68 ರವರೆಗೆ

ಅಧ್ಯಕ್ಷರು : "ಖಂಡ 2 ರಿಂದ 68ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 68ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ಕಂಡ 2ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

(a) for item (vii) the following shall substituted, namely:-

> "(vii) Five progressive farmers from the jurisdiction of the university of which two persons belonging to the Scheduled Castes or the Scheduled Tribes to be nominated by the State Government.
>
> (viii) Two members of the Karnataka State Legislative Assembly to be nominated by the Speaker and one Member of the Karnataka Legislative Council to be nominated by the Chairman"
> (b) The item (viii) to (xv) shall be respondent-numbered as item (ix) to (xvi) ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ ವಿಧೇಯಕದ 2ನೇ ಖಂಡದಲ್ಲಿ (a) For item (vii) the following shall be substituted, namely:-

> "(vii) Five progressive farmers from the jurisdiction of the university of which two persons belonging to the Scheduled Castes or the Scheduled Tribes to be nominated by the State Government.
>
> (viii) Two members of the Karnataka State Legislative Assembly to be nominated by the Speaker and one Member of the Karnataka Legislative Council to be nominated by the Chairman"
> (b) The item (viii) to (xv) shall be respondent-numbered as item (ix) to (xvi) ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 2 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಖಂಡ 2 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ".

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 2 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್.ಎ.ರವೀಂದ್ರನಾಥ್ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ "2009ರ ಕೃಷಿ ವಿಜ್ಞಾನಗಳ ವಿಧೇಯಕವನ್ನು" ತಿದ್ದುಪಡಿಯೊಂದಿಗೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "2009ರ ಕೃಷಿ ವಿಜ್ಞಾನಗಳ ವಿಧೇಯಕವನ್ನು" ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು
(ಅನುಬಂಧ–12)

8. ಪ್ರಕಟಣೆ :

ವಿಷಯ : ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶ.

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು 2009ನೇ ಸಾಲಿನ ಈ ಕೆಳಕಂಡ ವಿಧೇಯಕಗಳನ್ನು ಈ ದಿನ, ದಿನಾಂಕ: 29-07-2009ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಲಾಗಿದೆಯೆಂದು ತಿಳಿಸಿರುತ್ತಾರೆ.

1) ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ಎರಡನೇ ತಿದ್ದುಪಡಿ) ವಿಧೇಯಕ 2009
2) ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ವಿಧೇಯಕ 2009
3) ಕರ್ನಾಟಕ ಪೌರಸಭೆಗಳ ಕಾನೂನು ಹಾಗೂ ಇನ್ನೊಂದು ಕಾನೂನಿನ (ತಿದ್ದುಪಡಿ) ವಿಧೇಯಕ 2009

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು 2009ನೇ ಸಾಲಿನ ಈ ಕೆಳಕಂಡ ವಿಧೇಯಕಗಳನ್ನು ಈ ದಿನ ದಿನಾಂಕ: 29-07-2009ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಲಾಗಿದೆಯೆಂದು ತಿಳಿಸಿರುತ್ತಾರೆ.

1) ಭಾರತ ದಂಡ ಸಂಹಿತೆ ಮತ್ತು ದಂಡ ಪ್ರಕ್ರಿಯಾ (ಕರ್ನಾಟಕ ತಿದ್ದುಪಡಿ) ವಿಧೇಯಕ 2009
2) ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕ 2009
3) ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳನ್ನು ತಡೆಗಟ್ಟುವ (ತಿದ್ದುಪಡಿ) ವಿಧೇಯಕ 2009

4) ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ 2009
5) ಕರ್ನಾಟಕ ಸ್ಟಾಂಪು (ಎರಡನೇ ತಿದ್ದುಪಡಿ) ವಿಧೇಯಕ 2009
6) ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗಗಳ (ತಿದ್ದುಪಡಿ) ವಿಧೇಯಕ 2009

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು 2009ನೇ ಸಾಲಿನ ಈ ಕೆಳಕಂಡ ವಿಧೇಯಕಗಳನ್ನು ಈ ದಿನ ದಿನಾಂಕ: 29-07-2009ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಲಾಗಿದೆಯೆಂದು ತಿಳಿಸಿರುತ್ತಾರೆ.

1) ಕರ್ನಾಟಕ ಧನವಿನಿಯೋಗ (ಸಂಖ್ಯೆ:2) ವಿಧೇಯಕ 2009
2) ಕರ್ನಾಟಕ ಧನವಿನಿಯೋಗ (ಸಂಖ್ಯೆ:3) ವಿಧೇಯಕ 2009
3) ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ 2009
4) ಕರ್ನಾಟಕ ವ್ಯವಸ್ಥಿತ ಅಪರಾಧಗಳು (ತಿದ್ದುಪಡಿ) ವಿಧೇಯಕ 2009

9. ಶಾಸನ ರಚನೆ :

1) ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕ, 2009

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಉಮೇಶ್ ವಿ. ಕತ್ತಿ (ತೋಟಗಾರಿಕೆ ಸಚಿವರು) ಮಾನ್ಯ ಅಧ್ಯಕ್ಷರೆ, "2009ರ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕವನ್ನು" ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಉಮೇಶ್ ವಿ. ಕತ್ತಿ (ತೋಟಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೆ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿದೇಯಕಕ್ಕೂ ತೋಟ ಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿದೇಯದಕ್ಕೂ ಅಷ್ಟೊಂದು ವ್ಯತ್ಯಾಸವಿಲ್ಲ. ಇದರ ಜೊತೆ amendmentನ್ನೂ ಮಂಡಿಸುತ್ತಿದ್ದೇವೆ. ಒಟ್ಟು 14 ಜನ ನಾಮನಿರ್ದೇಶಕರಿರುತ್ತಾರೆ. ಅದರಲ್ಲಿ 6 ಜನ ಸರ್ಕಾರದ ಅಧಿಕಾರಿಗಳು. ಅಧಿಕಾರೇತರರು 8 ಜನ. ಅದರಲ್ಲಿ 3 ಜನ ಶಾಸಕರು, 5 ಜನ ರೈತ ಪ್ರತಿನಿಧಿಗಳನ್ನು ನೇಮಿಸಿದ್ದೇವೆ. ಕುಲಪತಿಯವರು 4 ವರ್ಷ ಇರುತ್ತಾರೆ. ಆಡಳಿತ ಮಂಡಳಿಯ ಸದಸ್ಯರ ಅವಧಿಯನ್ನು 4 ವರ್ಷ ಎಂದು ಮಾಡಲಾಗಿದೆ. ಕೋರಂನಲ್ಲಿಯೂ ಸಹ simple quorum ನ್ನು ನಿಗದಿ ಮಾಡಲಾಗಿದೆ.

ಶ್ರೀ ಟಿ. ಬಿ. ಜಯಚಂದ್ರ (ಸಿರಾ) : ಮಾನ್ಯ ಅಧ್ಯಕ್ಷರೆ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯ ವಿಧೇಯದಕ್ಕೂ ಇದಕ್ಕೂ basically difference ಜಾಸ್ತಿ ಇಲ್ಲ. ಆದರೆ, ತಾವು Section-1 ರಲ್ಲಿ Horticulture ಎಂದರೆ ಏನು define ಮಾಡಿದ್ದೀರೆಂದರೆ, Sericulture ಅನ್ನೂ Horticulture ಎಂದು define ಮಾಡುತ್ತೀರಲ್ಲಾ? ಅದರಲ್ಲಿ ಜೇನು ಸಾಕಾಣಿಕೆ ಮತ್ತು ರೇಷ್ಮೆ ವ್ಯವಸಾಯ. ರೇಷ್ಮೆ ವ್ಯವಸಾಯವನ್ನು ತೋಟಗಾರಿ ಕೆಯೆಂದು ಹೇಳಿದರೆ ಇದನ್ನು oppose ಮಾಡಬೇಕೊ ಬೇಡವೊ ನೀವೇ ಹೇಳಿ. ರೇಷ್ಮೆ ತೋಟಗಾರಿಕೆಯಲ್ಲಿ ಬರುತ್ತದೆಯೇ? ನೀವು billನ್ನು ನೋಡಿದ್ದಿರೊ ಇಲ್ಲವೋ ಗೊತ್ತಿಲ್ಲ. ಆದರೆ, bill ನಲ್ಲಿ ಆ ರೀತಿ ಇದೆ. ಪುಟ 4 ರಲ್ಲಿ 5ನೇ ಸಾಲಿನಲ್ಲಿ ಹೈನುಗಾರಿಕೆ, ವಿಜ್ಞಾನ ತಂತ್ರಜ್ಞಾನ ಎಂಬ ಸಾಲಿನಲ್ಲಿದೆ. ಅದನ್ನು ಬಿಡಬೇಕು. ಪುಟ ಸಂಖ್ಯೆ 4 ರಲ್ಲಿ ನೋಡಿ. ಹೋಗಲು ಅದನ್ನು ಬಿಡಿ, ಇನ್ನೊಂದು ಬಹಳ ಮುಖ್ಯವಾಗಿ ನೀವು Horticulture University ಎಂದು ಮಾಡುತ್ತಿರಬೇಕಾದಾಗ, ಯಾರು ತೋಟಗಾರಿಕೆಯಲ್ಲಿ ಪರಿಣತರು ಇರುತ್ತಾರೆ, ಅವರನ್ನೇ Vice Chancellor ಆಗಿ ಮಾಡಬೇಕೆಂದು ತಮ್ಮಲ್ಲಿ ಒತ್ತಾಯ ಮಾಡುತ್ತಿರುವುದು. ಅದನ್ನು ಒಪ್ಪಿಕೊಳ್ಳಿ, ಏಕೆಂದರೆ Agriculture and Hortiulture ಅನ್ನು ಯಾವತ್ತೂ ಕೂಡ ಬೇರೆ ಮಾಡಬಾರದಾಗಿತ್ತು. ಅದನ್ನು ಮಾಡಲಾಗಿದೆ. ಅದಕ್ಕೆ ಹೆಚ್ಚು

ಪ್ರೋತ್ಸಾಹ ದೊರೆಯುತ್ತಿದೆ. ಅದಕ್ಕೆ ಇದು ದುರುಪಯೋಗವಾಗಬಾರದು. ನೀವು Horticulturist ಅವರನ್ನೇ ಮಾಡಿ ಎಂದು ಹೇಳುತ್ತಿದ್ದೇವೆ.

ಶ್ರೀ ಬಸವರಾಜ ಬೊಮ್ಮಾಯಿ : ನೀವು ಎಲ್ಲಾ ಯೂನಿವರ್ಸಿಟಿ ನೋಡುತ್ತೀರಿ, ಆ ಸಬ್ಜೆಕ್ಟ್‌ನಲ್ಲಿ ಸ್ಪಷ್ಟೀಕರಣ. Vice Chancellor is above that.

ಶ್ರೀ ಟಿ. ಬಿ. ಜಯಚಂದ್ರ : ನೀವು ಆ ರೀತಿ argue ಮಾಡಬೇಡಿ.

ಶ್ರೀ ಬಸವರಾಜ ಬೊಮ್ಮಾಯಿ : ನೀವು argue ಮಾಡಬೇಡಿ ಎಂದು ಹೇಳುತ್ತೀರಲ್ಲಾ. ನನ್ನ ವಿಚಾರವನ್ನು ಕೇಳಿ ಸ್ವಲ್ಪ. Vice Chancellor is academician as well as administrator.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ : ನೀವು ಮುಖ್ಯಮಂತ್ರಿಗಳನ್ನು ಕೇಳಿ. Horticulturist ಅನ್ನೇ Vice Chancellor ಮಾಡಿ ಅಷ್ಟೇ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಸಚಿವರ ಬಿಲ್ಲಿನಲ್ಲಿಲ್ಲ, ನಮ್ಮ ಬಿಲ್ಲಿನಲ್ಲಿದೆ, ಇದರಲ್ಲೇನು ಹೆಚ್ಚು ಕಡಿಮೆ ಆಗಿದೆ ಎಂದು ಸಚಿವರೇ ಹೇಳಬೇಕು.

ಶ್ರೀ ಬಸವರಾಜ ಬೊಮ್ಮಾಯಿ : ಇಲ್ಲ, ಅದರಲ್ಲಿ ಏನೂ ಇಲ್ಲ.

ಶ್ರೀ ಹೆಚ್. ಡಿ. ರೇವಣ್ಣ : ಈ ರೀತಿ ಬಿಲ್ಲು ಕೊಟ್ಟು ಸದನವನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ, ನಮಗೊಂದು ಬಿಲ್ ಕೊಟ್ಟು ಸಚಿವರಿಗೊಂದು ಬಿಲ್ ಕೊಟ್ಟಿದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ : ಇಲ್ಲ ಅದರಲ್ಲಿದೆ, ಏನು ಗದ್ದಲದಲ್ಲಿ ಬಂದಿದೆ ಅಷ್ಟೆ. ಸ್ವಲ್ಪ ಹೆಚ್ಚು ಕಡಿಮೆ ಆಗಿದೆ. ನೀವು ಹೇಳಿಬಿಡಿ.

ಅಧ್ಯಕ್ಷರು : ಬಾಲಕೃಷ್ಣ ನೀವು confuse ಮಾಡಲಿಕ್ಕೆ ಹೋಗಬೇಡಿ. ಯಾವುದೋ page ತೋರಿಸಿ ಅಲ್ಲಿ ಇಲ್ಲಿ ಮಾಡಿ confuse ಮಾಡಲಿಕ್ಕೆ ಹೋಗಬೇಡಿ.

ಶ್ರೀ ಬಸವರಾಜ ಬೊಮ್ಮಾಯಿ : Rural development, economics ಇದರಲ್ಲಿ ಎಲ್ಲವೂ include ಆಗಿದೆ. The campus of Horticulture ಎಲ್ಲಾ ಸೇರಿದೆ. ಈಗ Sericulture ನಲ್ಲಿ Mulberry growth ಇದೆ. ಇನ್ನೊಂದು ಇದೆ. So it includes. Vast field

ಮಾಡಿದ್ದಾರೆ. ಅದನ್ನು ಸ್ವಾಗತ ಮಾಡುವುದನ್ನು ಬಿಟ್ಟು ಇದರಲ್ಲಿ ತಪ್ಪು ಕಂಡು ಹಿಡಿದರೆ ಹೇಗೆ?

ಶ್ರೀ ಟಿ.ಬಿ. ಜಯಚಂದ್ರ : ನೀವು Agriculture and Horticulture ಎಂದು ಬೇರೆ ಬೇರೆ ಮಾಡಿದ ಮೇಲೆ Agriculture ಅಂದರೆ ಯಾವುದು Horticulture ಅಂದರೆ ಯಾವುದು ಎಂದು correct ಆಗಿ definition ಹಾಕುವುದನ್ನು ಮಾಡದೇ ಹೋದರೆ ಏನು ನೀವು ಇದನ್ನೆಲ್ಲಾ ನೋಡದೆ ತರುತ್ತೀರಿ ಅಷ್ಟೇ. ಅದೇ ಸಮಸ್ಯೆ ಆಗಿರುವುದು.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಗೊತ್ತಿರುವವರೇ ಇಷ್ಟೆಲ್ಲಾ ಸಮಸ್ಯೆ ಮಾಡುತ್ತೀರೆಂದರೆ ಹೇಗೆ? ಇದರಲ್ಲಿ Rural development, irrigation ಇದೆ.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ : Agriculture and Horticulture ಎಂದು ಎರಡು University ಆದ ಮೇಲೆ ಅದರಲ್ಲಿ Horticulture ಯಾವುದು, Agriculture ಯಾವುದು ಎನ್ನುವುದನ್ನು ಸರಿಯಾಗಿ differentiate ಮಾಡಿ. ಎಲ್ಲವನ್ನು ಪ್ರಿಂಟ್ ಮಾಡಿ ಕಳುಹಿಸಿದರೆ ಹೇಗೆ?

ಅಧ್ಯಕ್ಷರು : ಬೊಮ್ಮಾಯಿಯವರೇ ಒಂದು ನಿಮಿಷ, ಉಮೇಶ್ ಕತ್ತಿಯವರು ಮಾತನಾಡುತ್ತಾರೆ.

ಶ್ರೀ ಬಸವರಾಜ ಬೊಮ್ಮಾಯಿ : ಒಂದು ನಿಮಿಷ ಸಾರ್, "Horticulture includes the basic and applied Sciences." ಇಲ್ಲಿದೆ. You have to read completely.

ಶ್ರೀ ಟಿ. ಬಿ. ಜಯಚಂದ್ರ : ಅದು ಬೇರೆ ಕೇಸ್. ಮುಖ್ಯಮಂತ್ರಿಗಳು ಒಳ್ಳೆಯ ಉದ್ದೇಶದಿಂದ ಈ ಬಿಲ್ ಅನ್ನು ತಂದಿದ್ದಾರೆ ದಯಮಾಡಿ ಅದನ್ನು ತಾವು ಅರ್ಥ ಮಾಡಿಕೊಳ್ಳಿ. Agriculture and Horticulture ಯಾವುದನ್ನು ನೀವು decide ಮಾಡಲಿಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಜಯಚಂದ್ರರವರೇ, You read the simple meaning. Don't try to read in between lines.

(ಗೊಂದಲ)

ಅಧ್ಯಕ್ಷರು : ಬೊಮ್ಮಾಯಿಯವರೇ ಈಗ ಮಂತ್ರಿಗಳು ಉತ್ತರ ಕೊಟ್ಟ ಮೇಲೆ ನೋಡುವಿರಂತೆ, ಈಗ ಸಚಿವರು ಮಾತನಾಡಲಿ.

ಶ್ರೀ ಉಮೇಶ್ ವಿ.ಕತ್ತಿ (ಮಾನ್ಯ ತೋಟಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ತೋಟಗಾರಿಕೆ ಬಿಲ್ ಅನ್ನು ಮಂಡಿಸುವ ಸಂದರ್ಭದಲ್ಲಿ ಕೆಲವು specific ಆಗಿ ಕೋಳಿ ಸಾಕಾಣಿಕೆ, ಹೈನುಗಾರಿಕೆ, ಕೃಷಿ, ಗ್ರಾಮೀಣಾಭಿವೃದ್ಧಿ, ರೇಷ್ಮೆ ವ್ಯವಸಾಯ ಈ ರೀತಿ ಸೇರಿದೆ. ಅದನ್ನು ಕೈಬಿಟ್ಟು ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟ ವಿಷಯವನ್ನು ಮಾತ್ರ ಇದರಲ್ಲಿ ಅಳವಡಿಸಲಿಕ್ಕೆ ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ : Horticulture University ಮಾಡಿದ ಮೇಲೆ Horticulturist ಇರುತ್ತಾರೆ ಅವರನ್ನು ಮಾತ್ರ Vice Chancellor ಮಾಡಿ, ಬೇರೆಯವರನ್ನು ಮಾಡಲಿಕ್ಕೆ ಹೋಗಬೇಡಿ ಎಂಬುದು ನಾಳೆ ದುರುಪಯೋಗವಾಗುವುದು ತಪ್ಪುತ್ತದೆ. ಈಗ ನನಗೆ ನಿಮ್ಮ ಮನಸ್ಸಿನಲ್ಲಿ ಯಾರನ್ನು Vice Chancellor ಮಾಡಬೇಕೆಂದಿದೆ ಎಂಬುದು ಅರ್ಥವಾಗುತ್ತದೆ. ಹಾಗೆಲ್ಲಾ ಮಾಡಲಿಕ್ಕೆ ಹೋಗಬೇಡಿ. Horticulturist ಅನ್ನು ಮಾತ್ರ ಮಾಡಿ.

ಶ್ರೀ ಎಸ್. ಶಿವಣ್ಣ : ಅದು ಸರ್ಕಾರಕ್ಕೆ ಬಿಟ್ಟಿದ್ದು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಸಚಿವರೇ ಅದೇನು ದೊಡ್ಡ ವಿಷಯವಾಗುವುದಿಲ್ಲ, ಈಗ Agriculture University ಯಿಂದ Horticulture University ಅನ್ನು ಪ್ರತ್ಯೇಕವಾಗಿ ಮಾಡುತ್ತಿದ್ದೀರಿ. ಏಕೆ ಮಾಡುತ್ತಿದ್ದೀರಿ? Horticulture ನಲ್ಲಿ ಹೆಚ್ಚು ಸಂಶೋಧನೆ ಆಗಲಿ, ಅಲ್ಲಿ ಹೆಚ್ಚು ಬೆಳವಣಿಗೆಯಾಗಲಿ, Horticulture produce ಹೆಚ್ಚಾಗಲಿ, ರೈತರು ಹೆಚ್ಚು ಹೆಚ್ಚು traditional crops ನಿಂದ alternative crops ಕಡೆಗೆ ಹೋಗಲಿ. ಅದಕ್ಕೆ ಆ ಯೂನಿವರ್ಸಿಟಿಯಲ್ಲಿ ಹೆಚ್ಚು ಬೆಳವಣಿಗೆಯಾಗಬೇಕಾದರೆ ಅದರ ಬಗ್ಗೆ ಹೆಚ್ಚು ಜ್ಞಾನ ಬೆಳವಣಿಗೆಯಾಗಬೇಕಾದರೆ Horticulture field ನಲ್ಲೇ ಹೆಚ್ಚು ಪರಿಣತಿ ಇರತಕ್ಕಂಥವರೇ Vice Chancellor ಆದರೆ ಇನ್ನು ಹೆಚ್ಚು

58-47

ಉಪಯೋಗವಾಗುತ್ತದೆ. ಜಯಚಂದ್ರರವರು ಕೊಡುತ್ತಿರುವಂಥ ಸಲಹೆ ಚೆನ್ನಾಗಿದೆ ಆ ರೀತಿ ಮಾಡಿ.

ಶ್ರೀ ಕಿಮ್ಮನೆ ರತ್ನಾಕರ್ : ನನ್ನ ವಿನಂತಿಯೇನೆಂದರೆ, ಈ ತೋಟಗಾರಿಕೆಯಲ್ಲಿ ಅಡಿಕೆ ಬೆಳೆ ಬರುತ್ತದೆ, ಇಡೀ ರಾಷ್ಟ್ರದಲ್ಲೇ ಅಡಿಕೆ ಬೆಳೆಯುವುದರಲ್ಲಿ ಸುಮಾರು 7.00 ಲಕ್ಷ ಟನ್‌ನಲ್ಲಿ ಸುಮಾರು 5.00 ಲಕ್ಷ ಟನ್ ಶಿವಮೊಗ್ಗ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಚಿಕ್ಕಮಗಳೂರು ಈ ಭಾಗಗಳಿಗೆ ಬರುವಂಥದ್ದು. ನಮ್ಮ ಶೃಂಗೇರಿ, ತೀರ್ಥಹಳ್ಳಿ, ಮೂಡಿಗೆರೆಯಲ್ಲಿ ಈ ತೋಟಗಾರಿಕೆ ಬಗ್ಗೆ ಸಂಶೋಧನೆ ಕೇಂದ್ರಗಳಿವೆ.

ಶ್ರೀ ಟಿ. ಬಿ. ಜಯಚಂದ್ರ : ಅದರಲ್ಲಿ ಸೇರಿದೆ ನೋಡಿ.

ಶ್ರೀ ಕಿಮ್ಮನೆ ರತ್ನಾಕರ್ : ಒಂದು ನಿಮಿಷ ನಾನು ಹೇಳಿಬಿಡುತ್ತೇನೆ. ಇದರಲ್ಲಿ ಏನಾಗಿದೆಯೆಂದರೆ ತೋಟಗಾರಿಕೆಯೊಳಗೆ ಅಡಿಕೆ ಸಂಶೋಧನೆ ಕೇಂದ್ರ ಬಾಗಲಕೋಟೆಗೆ ಬರುತ್ತದೆ. ನನ್ನ ವಿನಂತಿಯೇನೆಂದರೆ ಈ ವಿಧೇಯಕ ತರುವುದರಲ್ಲಿ ನಮ್ಮ ಅಭ್ಯಂತರವೇನಿಲ್ಲ. ನಮ್ಮ ವ್ಯಾಪ್ತಿ ಏನಿದೆ ಅದನ್ನು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿಟ್ಟುಕೊಳ್ಳಬೇಕೆಂಬುದು ನನ್ನ ವಿನಂತಿ. ಏಕೆಂದರೆ 5.00 ಲಕ್ಷ ಟನ್ ಅಡಿಕೆ ಬೆಳೆಯುವಂಥ ಏರಿಯಾ ಏನಿದೆ, ಇದರಲ್ಲಿ ನಮಗೆ ಇರುವ ಸಮಸ್ಯೆ ಈ ಕಡೆ ಇಲ್ಲ, ವಾಸ್ತವವಾಗಿ ತೀರ್ಥಹಳ್ಳಿ, ಹೊಸನಗರ, ಸಾಗರದಲ್ಲಿರುವಂಥ ಸಮಸ್ಯೆ, ಸೊರಬ, ಚನ್ನಗಿರಿಯಲ್ಲಿಲ್ಲ. ನಾವು ಅಲ್ಲಿ ಮೂರು ಸಾರಿ ಔಷಧ ಹಾಕಿ ನಾಲ್ಕು ಸಾರಿ spray ಮಾಡಬೇಕು, ಅದನ್ನು ಹಿಡಿದುಕೊಂಡು ಬಾಗಲಕೋಟೆಗೆ ಹೋಗಲಿಕ್ಕೆ ಕಷ್ಟವಾಗುತ್ತದೆ. ನಮ್ಮ ವಿನಂತಿ ಏನೆಂದರೆ Agriculture and Horticulture ಇದರಲ್ಲಿ ಬಹಳ ವ್ಯತ್ಯಾಸವೇನಿಲ್ಲ, ಈಗೆಲ್ಲವೂ ಏನಿದೆ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಮ್ಮ Jurisdiction ಏನಿದೆ ಅದನ್ನು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಉಳಿಸಿಕೊಳ್ಳಬೇಕೆಂದು ನಮ್ಮ ವಿನಂತಿ.

ಅಧ್ಯಕ್ಷರು : ಆಯಿತು. ಮುಂದೆ ಅದರಲ್ಲಿರುವ practical problem ನೋಡಿಕೊಂಡು ಅದರ ಬಗ್ಗೆ decision ತೆಗೆದುಕೊಳ್ಳಲಿ.

ಶ್ರೀ ಕಿಮ್ಮನೆ ರತ್ನಾಕರ್ : ಹಿಂದೆ ಶ್ರೀ ಸಿ.ಟಿ.ರವಿಯವರು ಕೂಡ ಮಾತನಾಡುವಾಗ ಇದರಲ್ಲಿ ಸಪೋರ್ಟ್ ಮಾಡುತ್ತೇವೆಂದು ಹೇಳಿದ್ದರು.

ಅಧ್ಯಕ್ಷರು : ಆಯಿತು, ಇದರ ಬಗ್ಗೆ ಮೊನ್ನೆ ಚರ್ಚೆ ಮಾಡಿದ್ದೀರಿ. ಈಗ ಪರ್ಯಾಲೋಚನಾ ಪ್ರಸ್ತಾವ. ತಿದ್ದುಪಡಿ ಸಹಿತ ಮಾಡುವಿರಾ? ಅದು

Jurisdiction point ಆಗಿದೆ, ಅದರಲ್ಲಿ practical ಆಗಿ ಏನಾದರೂ ತೊಂದರೆ ಇದ್ದರೆ ಮುಂದೆ ಅದನ್ನು ಸರಿಮಾಡೋಣ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2009ನೇ ಸಾಲಿನ **ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ** ವಿಧೇಯಕನ್ನು ಪರ್ಯಾಲೋಚಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಶ್ರೀ ಉಮೇಶ್ ವಿ.ಕತ್ತಿ (ತೋಟಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೇ, ಖಂಡ 2 ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

"In sub-clause (19) , in item (w) the words" and Sericulture "Shall be omitted."

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "In sub-clause (19) , in item (w) the words" and Sericulture "Shall be omitted."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 2 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಖಂಡ 2 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 2 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 3–11 ರವರೆಗೆ

ಅಧ್ಯಕ್ಷರು : "ಖಂಡ 3–11 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 3 ರಿಂದ 11 ವರೆಗೂ ಎರಡೂ ಸೇರಿದಂತೆ ವಿಧೇಯಕ್ಕೆ ಸೇರಿಸಲಾಯಿತು)

ಶ್ರೀ ಉಮೇಶ್ ವಿ.ಕತ್ತಿ (ತೋಟಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೇ, ಕಂಡ 12ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

(1) "In sub-clause (2), For item (iv) the following shall be substituted, namely:-

'(viii) Two members of the Karnataka State Legislative Assembly to be nominated by the Speaker and one Member of the Karnataka Legislative Council to be nominated by the Chairman.'

(2) In item (vii) for the words "Two" the words "three" shall be substituted."

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "In sub-clause (2), For item (iv) the following shall be substituted, namely:-
'(viii) Two members of the Karnataka State Legislative Assembly to be nominated by the Speaker and one Member of the Karnataka Legislative Council to be nominated by the Chairman.'

(2) In item (vii) for the words "Two" the words "three" shall be substituted."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 12 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಖಂಡ 12 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 12 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 13–67 ರವರೆಗೆ

ಅಧ್ಯಕ್ಷರು : ಖಂಡ 13 ರಿಂದ 67 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 13 ರಿಂದ 67 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಉಮೇಶ್ ವಿ.ಕತ್ತಿ (ತೋಟಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೇ, 2009ನೇ ಸಾಲಿನ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕವನ್ನು ತಿದ್ದುಪಡಿಯಾದಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2009ನೇ ಸಾಲಿನ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು
(ಅನುಬಂಧ-13)

ಅಧ್ಯಕ್ಷರು : ಈಗ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ : ಮಾನ್ಯ ಅಧ್ಯಕ್ಷರೆ, ನಾಳೆ ಮಧ್ಯಾಹ್ನದವರೆಗೆ ಅಧಿವೇಶನ ಮುಂದುವರೆಸಿ. ಇಲ್ಲದಿದ್ದರೆ ಇದನ್ನು ನಾಳೆ ಮಧ್ಯಾಹ್ನ ತೆಗೆದುಕೊಳ್ಳಿ. ನಮ್ಮದು Calling attention ಸುಮಾರು 10-12 ದಿವಸಗಳಿಂದ ತೆಗೆದುಕೊಂಡಿಲ್ಲ. ನಾಳೆ ಮುಗಿದು ಹೋಗುತ್ತದೆ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ : ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ-2009ನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಖಮರುಲ್ ಇಸ್ಲಾಂ : ನಮ್ಮದು Calling attention ಇದೆ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶ ಕೊಡುತ್ತೀನಿ ಎಂದು ಹೇಳಿದಿರಿ. ಚರ್ಚೆ ಮಾಡಬೇಕು.

(ಗೊಂದಲ)

ಶ್ರೀ ಮಾಲೀಕಯ್ಯ ವಿ.ಗುತ್ತೇದಾರ್ : ನಾಳೆ ಮಧ್ಯಾಹ್ನದವರೆಗೆ ತೆಗೆದುಕೊಳ್ಳಿ, ನಾವು 12 ದಿವಸಗಳಿಂದ ಕಾಯುತ್ತಿದ್ದೇವೆ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ : ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ–2009ನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ ಸ್ವಾಮಿ.

(ಗೊಂದಲ)

ಅಧ್ಯಕ್ಷರು : ದಾವಣಗೆರೆ ವಿಶ್ವವಿದ್ಯಾನಿಲಯದ್ದು ಇದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಇರಲಿ. ನಾಳೆ ಪಾಸ್ ಮಾಡಿಕೊಳ್ಳೋಣ. ನಾಳೆ ಮಾಡೋಣ. ಅವುಗಳನ್ನು ಮೊದಲು ಮಾಡಿ, ಉಳಿದವುಗಳನ್ನು ಆ ಮೇಲೆ ಮಾಡೋಣ. ಇನ್ನೂ ಬೇರೆ ಬಿಲ್‌ಗಳು ಚರ್ಚೆಯಾಗಬೇಕಾಗಿದೆ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ : ಸ್ವಾಮಿ ದಯವಿಟ್ಟು, ಇದು 5 ನಿಮಿಷದ ಕೆಲಸ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಎರಡು ಬಿಲ್‌ಗಳು ಮಾತ್ರ ಇವೆ. ಬೇರೆ ಯಾವುದು ಇಲ್ಲ. ಇದು ಒಂದು ಮತ್ತು ಇನ್ನೊಂದು ಸಂಸ್ಕೃತಕ್ಕೆ ಸಂಬಂಧಪಟ್ಟಿದ್ದು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಸಂಸ್ಕೃತ ಅಂದರೆ ಅದೆಲ್ಲವನ್ನು ನಾವು ವಿರೋಧ ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ವಿರೋಧ ಮಾಡಿ. ನಾವು ಬೇಡ ಎಂದು ಹೇಳಲಿಲ್ಲ. ಇನ್ನೂ ಒಂದು ಅರ್ಧ ಗಂಟೆ ವಿರೋಧ ಮಾಡಿ. ಆಮೇಲೆ ಪಾಸ್ ಮಾಡಿಕೊಳ್ಳೋಣ.

ಶ್ರೀ ಸಿದ್ದರಾಮಯ್ಯ : ನಾಳೆ ಮಾಡೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ : ದಯವಿಟ್ಟು ಇವತ್ತು ಆಗಬೇಕು ಸ್ವಾಮಿ.

(ಗೊಂದಲ)

ಅಧ್ಯಕ್ಷರು : ಮೊದಲು ದಾವಣಗೆರೆಯದನ್ನು ಮುಗಿಸೋಣ.

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ-2009ನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ರೂಲ್ 69 ಇದೆ.

(ಗೊಂದಲ)

ಅಧ್ಯಕ್ಷರು : ಈ ಬಿಲ್ ಆದಮೇಲೆ ರೂಲ್ 69ರ ಮೇಲೆ ಚರ್ಚೆಗೆ ತೆಗೆದುಕೊಳ್ಳೋಣ. ಈಗ ಎರಡು ಬಿಲ್ ಇದೆ ಅಷ್ಟೆ ಈ ಎರಡು ಬಿಲ್ ಆದಮೇಲೆ 69 ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಅದನ್ನು ಒಟ್ಟಿಗೆ ನಾಳೆ ತೆಗೆದುಕೊಳ್ಳೋಣ. ರೂಲ್ 60 ಇದೆ ಹಾಗೂ ರೂಲ್ 69 ಕೂಡ ಇದೆ. ನಾಳೆ ಬೆಳಿಗ್ಗೆ ಅದನ್ನು ತೆಗೆದುಕೊಳ್ಳೋಣ ದೀರ್ಘವಾಗಿ ಚರ್ಚೆ ಮಾಡೋಣ.

2) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ-2009

ಪರ್ಯಾಲೋಚನಾ ಪ್ರಸ್ತಾವ :

ಶ್ರೀ ಅರವಿಂದ ಲಿಂಬಾವಳಿ (ಮಾನ್ಯ ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ-2009 ಅನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಅಧ್ಯಕ್ಷರೆ, ಇವತ್ತು ಕರ್ನಾಟಕದಲ್ಲಿ ಉನ್ನತ ಶಿಕ್ಷಣ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಆಕರ್ಷಿತರಾಗಿರುವಂಥ ಹಿನ್ನೆಲೆಯಲ್ಲಿ ಮತ್ತು ಈ ಉನ್ನತ ಶಿಕ್ಷಣದ ವಿಶ್ವವಿದ್ಯಾನಿಲಯಗಳು de-centralize ಆಗಬೇಕು ಎನ್ನುವಂಥ UGC ಯವರ ಒಂದು recommendation ಏನು ಇದೆ, 60 ರಿಂದ 70 ಕಾಲೇಜುಗಳನ್ನು ಒಳಗೊಂಡಿರತಕ್ಕಂಥ ವಿಶ್ವವಿದ್ಯಾನಿಲಯಗಳು ಆಗಬೇಕು. ಮಾನ್ಯ ಅಧ್ಯಕ್ಷರೆ, ಹಾಗಾಗಿ ಅದಕ್ಕೆ ಹೆಚ್ಚಿನ concentration ಅಗತ್ಯವಿದೆ

ಎನ್ನುವಂಥ ಸಲಹೆಯನ್ನು University Grant Commission ನವರು ಕೊಟ್ಟಿದ್ದಾರೆ. ಆ ಹಿನ್ನೆಲೆಯಲ್ಲಿ ಇವತ್ತು ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾನಿಲಯ ಏನಿದೆ, ಅದರಲ್ಲಿ ಬರುವಂಥ ಚಿತ್ರದುರ್ಗ ಮತ್ತು ದಾವಣಗೆರೆ, ಈ ಎರಡೂ ಜಿಲ್ಲೆಗಳನ್ನು ಒಳಗೊಂಡಂಥ ಈ ಹೊಸ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕು ಎನ್ನುವಂಥ ಸರ್ಕಾರದ ಯೋಚನೆ ಇದೆ. ಈ ಜಿಲ್ಲೆಯಲ್ಲಿ ಒಟ್ಟು 104 ಕಾಲೇಜುಗಳು ಬರುತ್ತವೆ. ಎರಡು ಜಿಲ್ಲೆಗಳನ್ನು ಒಳಗೊಂಡಂತೆ ಸುಮಾರು 28 ಸಾವಿರಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಓದುತ್ತಿದ್ದಾರೆ ಮತ್ತು ಈಗಾಗಲೇ ಅಲ್ಲಿ ಒಂದು P.G.Centre ಕೂಡ ನಮಗೆ available ಇದೆ. 170 ಎಕರೆ ಜಮೀನಿನಲ್ಲಿ ಆ P.G.Centre ಈಗ ಇದೆ. ಅದರ ಒಂದು facilityಯನ್ನು ಉಪಯೋಗಿಸಿಕೊಂಡು, ಸಣ್ಣ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಬೇಕೆಂದು UGCಯವರು ಏನು recommend ಮಾಡಿದ್ದಾರೆ, ಆ ಹಿನ್ನೆಲೆಯೊಳಗೆ ಈ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕು ಎನ್ನುವ ಕಾರಣಕ್ಕಾಗಿ ಈ ಒಂದು ವಿಧೇಯಕವನ್ನು ಪಾಸ್ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಈ universityಗಳನ್ನು ಮಾಡುವುದು ಎಂದರೆ ಅದು academic interest ಗಿಂತ ಹೆಚ್ಚಾಗಿ political interest ನಿಂದ ಆಗುತ್ತಿರುವಂಥದ್ದು ದುರಾದೃಷ್ಟಕರ. ನೀವು university ಗಳನ್ನು ಜಾಸ್ತಿ ಮಾಡಿಕೊಂಡು ಹೋಗುತ್ತಿದ್ದೀರಿ. ಆದರೆ, ನೀವು ಬಜೆಟ್‌ನಲ್ಲಿ ಕೊಡತಕ್ಕಂಥ ಹಣ ಲಿಮಿಟೆಡ್ ಆಗಿರುತ್ತದೆ. ಯಾರೋ ಒಬ್ಬರು Special Officer ಅನ್ನು ಮಾಡುತ್ತೀರಿ. ಆಮೇಲೆ ಒಬ್ಬರು Vice Chancellor ಅನ್ನು ಮಾಡುತ್ತೀರಿ. ಆಮೇಲೆ ಅವರಿಗೆ ಸಂಬಳ ಕೊಡುವುದಕ್ಕೆ ಕಷ್ಟವಾಗುತ್ತದೆ. ಈಗ ಉದಾಹರಣೆಗೆ ಇವತ್ತು ನಿಮ್ಮ ಮುಂದೆ ಇರತಕ್ಕಂಥದ್ದು ತುಮಕೂರಿನ ವಿಶ್ವವಿದ್ಯಾನಿಲಯ. ತುಮಕೂರಿನಲ್ಲಿಯೂ ಕೂಡ ಇದೇ ರೀತಿಯಾಗಿ ಆಗಿದೆ. ಏನಾಗಿದೆ ಎಂದರೆ, ಇಲ್ಲಿಯವರೆಗೆ ಜಾಗ ಕೊಡುವುದಕ್ಕೆ ಆಗಿಲ್ಲ, ಒಂದು ಕಛೇರಿ ಇಲ್ಲ. ಅಲ್ಲಿ Vice Chancellor ಒಬ್ಬರು ಹೋಗಿ ಇನ್ನೊಬ್ಬರು ಬಂದರು. ಅವರು 6 ತಿಂಗಳುಗಳು ಆದರೂ ಫೈಲ್‌ಗಳನ್ನು ಕೊಟ್ಟಿಲ್ಲ. ಇದು ಎಲ್ಲಾ ಏನು ಇದು? ಇದು ಒಂದು ರೀತಿಯಲ್ಲಿ ತಾಲ್ಲೂಕು ಆಫೀಸ್‌ಗಳ ಟೈಪ್ ಆಗುತ್ತಿದೆ. ದಯಮಾಡಿ ನಾನು ಹೇಳುತ್ತೇನೆ.

H-359-43

Universityಗಳು ಎಂದರೆ ಸ್ವಲ್ಪ ಘನತೆ ಇರಬೇಕು. ಆ Universityಗಳು Political centers ಆಗಬಾರದು. ಆ ದೃಷ್ಟಿಯಿಂದ ನೀವು ನೋಡಬೇಕಾಗುತ್ತದೆ. ಆಯಿತು ಈಗ ದಾವಣಗೆರೆ University ತಂದಿದ್ದೀರಿ. ನಾವು ಏನೂ ವಿರೋಧ ಮಾಡುವುದಿಲ್ಲ. ಆದರೆ ತುಮಕೂರು Universityಯನ್ನು ಮಾಡಬೇಕಾದಾಗ ಆಗಿದ್ದಂಥ ಕಹಿ ಅನುಭವ ಇಲ್ಲಿ ಆಗಬಾರದು ಎನ್ನುವ ಉದ್ದೇಶದಿಂದ ನಾನು ಈ ಸಲಹೆಯನ್ನು ಕೊಡುತ್ತಿದ್ದೇನೆ. ದಯಮಾಡಿ ಈ Universityಗಳನ್ನು ಮಾಡುವುದನ್ನು ಇನ್ನು ನಿಲ್ಲಿಸಿಬಿಡಿ. ನಿಲಿಸಿಬಿಟ್ಟು ಈಗ ಇರತಕ್ಕಂಥ Universityಗಳನ್ನೇ ಸ್ವಲ್ಪ effective ಆಗಿ function ಆಗುವುದಕ್ಕೆ ಹೆಚ್ಚಿನ ಹಣವನ್ನು ಮತ್ತು ಸವಲತ್ತನ್ನು ಕೊಟ್ಟು ಅದನ್ನು ಸರಿ ಮಾಡತಕ್ಕಂಥದ್ದನ್ನು ಮಾಡಿ. ದಯಮಾಡಿ ಈಗ 4 ವರ್ಷ ಅಲ್ಲ, ಇನ್ನು 5 ವರ್ಷದವರೆವಿಗೂ ಸಹ ಇನ್ನು ಯಾವ Universityಯನ್ನು ಮಾಡುವುದು ಬೇಡ, ಅಷ್ಟು Universityಗಳನ್ನು ಈಗಾಗಲೇ ಮಾಡಿ ಆಗಿದೆ. ದಯಮಾಡಿ Universityಗಳ ಘನತೆ, ಗಾಂಭೀರ್ಯ ಇರುವಂಥ ರೀತಿಯಲ್ಲಿ ನಡೆಯುವುದಕ್ಕೆ ಮೂಲಭೂತವಾಗಿರತಕ್ಕಂಥ ಎಲ್ಲಾ ಸೌಕರ್ಯಗಳನ್ನು ಕೊಡುವುದರ ಬಗ್ಗೆ ಗಮನ ಹರಿಸಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಜಯಚಂದ್ರರವರು ಬಹಳ ಸಮಂಜಸವಾದಂಥ ಒಂದು ವಿಚಾರವನ್ನು ಹೇಳಿದ್ದಾರೆ. ಈ ಕುವೆಂಪು Universityಯಲ್ಲಿ ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳು ಇವೆ. ಕುವೆಂಪು Universityಯಿಂದ ಈ ಎರಡು ಜಿಲ್ಲೆಗಳನ್ನು ತೆಗೆದುಹಾಕಿ. ದಾವಣಗೆರೆಯಲ್ಲಿ ಒಂದು University ಮಾಡುತ್ತಿದ್ದೀರಿ. ಅದರಿಂದ higher educationಗೆ ಹೆಚ್ಚು ಅನುಕೂಲವಾಗುತ್ತದೆ ಎನ್ನುವುದು ನಿಮ್ಮ ವಾದ. ಕುವೆಂಪು Universityಗೆ ಹೋಗಬೇಕಾದರೆ ಬಹಳ ತಾಪತ್ರಯವಾಗುತ್ತದೆ, ಅಲ್ಲಿ ಒಳ್ಳೆಯ facultyಗಳು ಇಲ್ಲ, professorಗಳು ಇಲ್ಲ, ಅದಕ್ಕೆ ಇಲ್ಲಿ University ಮಾಡಬೇಕು ಎನ್ನುವುದು. ಆ ರೀತಿ ಏನೂ ಇಲ್ಲ. ಸುಮ್ಮನೆ ತಮಾಷೆಗೆ ಹೇಳಿದೆ. ಈಗ ನಾನು ಏನು ಹೇಳುತ್ತೇನೆ ಎಂದರೆ ಮೊದಲು ಬೆಂಗಳೂರು University ಇತ್ತು. ಈಗ ತುಮಕೂರನ್ನು ತೆಗೆದುಕೊಂಡು ಒಂದು University ಮಾಡಿಬಿಟ್ಟರು. ಕೋಲಾರದವರು ಅಲ್ಲಿಗೆ

ಹೋಗುವುದಿಲ್ಲ. ಕೋಲಾರ ಹಾಗೂ ತುಮಕೂರನ್ನು ಸೇರಿಸಿ ಒಂದು University ಮಾಡಬೇಕು ಎಂದು ಇದ್ದರು, ಕೋಲಾರದವರು ನಾವು ಅಲ್ಲಿಗೆ ಹೋಗುವುದಿಲ್ಲ ಎಂದು ಹೇಳಿದರು. ಕೋಲಾರ ಅಲ್ಲೇ ಉಳಿದುಕೊಂಡಿತು. ಜಿಲ್ಲೆಗೆ ಒಂದು University ಆಯಿತು. ತುಮಕೂರಿಗೆ ಒಂದು University ಆಯಿತು. ಆ ಒಂದು University ಆಗಿದ್ದರೂ ಕೂಡ ಅದಕ್ಕೆ ಇವತ್ತಿನ ವರೆಗೂ ನಮಗೆ ಜಾಗ ಕೊಡುವುದಕ್ಕೆ ಆಗಿಲ್ಲ. ಅದಕ್ಕೆ ಬೇಕಾದಂಥ infrastructure develop ಮಾಡಿಕೊಡುವುದಕ್ಕೆ ಆಗಿಲ್ಲ. ಅದರಿಂದ University ಘನತೆ ಕಡಿಮೆಯಾಗುವುದು ಬೇಡ ಎನ್ನುವುದು ನನ್ನ ಭಾವನೆ ಅಷ್ಟೆ. ಒಂದು University ಎಂದರೆ, ಈ ಹಿಂದೆ Vice Chancellor ಎಂದರೆ ಅವರಿಗೆ academic status ಬಹಳ ದೊಡ್ಡದಾಗಿರುತ್ತಿತ್ತು. ಮೈಸೂರು Universityಗೆ ಮಾನ್ಯ ಪಡಿಕರ್ ಎಂದು Vice Chancellor ಇದ್ದರು. ಆ ಕಾಲದಲ್ಲಿ Vice Chancellorಗಳಿಗೆ ಎಂತಹ ಗೌರವ ಇರುತ್ತಿತ್ತು. ಮಾನ್ಯ ಕುವೆಂಪುರವರು Vice Chancellorಗಳಾಗಿದ್ದರು. ಆ ರೀತಿಯ ಮಟ್ಟ ಈಗ ಕಡಿಮೆಯಾಗುತ್ತಿದೆ. ಅದನ್ನು ನಾವು ಮತ್ತಷ್ಟು ಕಡಿಮೆ ಮಾಡುವುದು ಬೇಡ. Universityಗೆ higher educationಗೆ ನಾವು ಕೊಡತಕ್ಕಂಥ grants ಕೂಡ ಕಡಿಮೆ ಇದೆ. ನಾನು ಬೆಂಗಳೂರು Universityಯಲ್ಲಿ ಕೇಳಿದೆ. ಅನೇಕ ಸಾರಿ ಸಂಬಳ ಕೊಡುವುದಕ್ಕೂ ಕಷ್ಟವಾಗಿದೆ ಪರಿಸ್ಥಿತಿ ಎಂದು ಹೇಳುತ್ತಾರೆ. ರಾಜ್ಯ ಸರ್ಕಾರದಿಂದ ಮತ್ತೆ ಕೇಳುವುದಕ್ಕೆ ಬರುತ್ತಾರೆ. ಬೇರೆ ಬೇರೆ buildingಗಳನ್ನು ಕಟ್ಟುವುದಕ್ಕೆ ಹಾಗೂ ಇನ್ನಿತರ ಕೆಲಸಗಳಿಗೆ ಎಂದು ಕೇಳುವುದಕ್ಕೆ ಬರುತ್ತಾರೆ. University ಗಳಿಗೆ ಸ್ವಯಂ ಆಗಿ funds generate ಮಾಡಿಕೊಳ್ಳುವ ಶಕ್ತಿ ಇರುತ್ತದೆಯೇ? ನಾವೇ ಹೆಚ್ಚು ಕೊಡಬೇಕಾಗುತ್ತದೆ. ಇದನ್ನು ಮಾಡುವುದರಿಂದ ನಮಗೆ ಹೆಚ್ಚು ಅನುಕೂಲವಾಗುತ್ತದೆ ಎಂದು ನನಗೆ ಅನಿಸುವುದಿಲ್ಲ. It is going to be a political decision. Political ಆಗಿ ಸಮಾಧಾನವಾಗಬಹುದು. ಚಿತ್ರದುರ್ಗ ಜಿಲ್ಲೆಯವರು, ದಾವಣಗೆರೆ ಜಿಲ್ಲೆಯವರು ನಮಗೆ ಒಂದು University ಬಂದಿದೆ ಎಂದು ಅಷ್ಟಕ್ಕೇ ಸಮಾಧಾನವಾಗುತ್ತಾರೆಯೇ ಹೊರತು ಅದಕ್ಕಿಂತ ಇನ್ನು ಏನೂ ಹೆಚ್ಚು ಅನುಕೂಲವಾಗಲಾರದು ಎನ್ನುವುದು ನನ್ನ ಭಾವನೆ.

ಯೋಚನೆ ಮಾಡಿ. I am not going to oppose it. But, ಇನ್ನೂ ಹೆಚ್ಚು ಉಪಯೋಗವಾಗಲಾರದು ಎನ್ನುವುದು ನನ್ನ ಭಾವನೆ.

ಶ್ರೀ ಕೆ.ಎಂ.ವಿರೂಪಾಕ್ಷ (ಚೆನ್ನಗಿರಿ) : ದಾವಣಗೆರೆ ಜಿಲ್ಲೆ ಕರ್ನಾಟಕ ರಾಜ್ಯದ ಮಧ್ಯಭಾಗದಲ್ಲಿರುವಂಥ ಜಿಲ್ಲೆ. ಈ ಜಿಲ್ಲೆ "ಕರ್ನಾಟಕದ ಹೃದಯ" ಎಂದು ಹೇಳಿದರೂ ತಪ್ಪಾಗಲಾರದು. ಇವತ್ತು ವಿದ್ಯಾರ್ಥಿಗಳ ಸಂಖ್ಯೆ ಮೊದಲಿಗಿಂತಲೂ ಹೆಚ್ಚಾಗುತ್ತಿದೆ ಮತ್ತು ಕಾಲೇಜುಗಳ ಸಂಖ್ಯೆಯೂ ಸಹ ಹೆಚ್ಚಾಗಿರುವುದರಿಂದ, ವಿಶ್ವವಿದ್ಯಾಲಯಗಳನ್ನು ಹೆಚ್ಚು ಮಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ದಾವಣಗೆರೆ ವಿಶ್ವವಿದ್ಯಾಲಯವನ್ನು ಕೊಟ್ಟಿರುವುದನ್ನು ನಾನು ಸ್ವಾಗತಿಸುತ್ತೇನೆ. ಆ ಬಿಲ್ ಅನ್ನು ಪಾಸ್ ಮಾಡಬೇಕೆಂದು ಎಲ್ಲರಲ್ಲಿಯೂ ನಾನು ವಿನಂತಿ ಮಾಡುತ್ತೇನೆ.

ಶ್ರೀ ನೆ.ಲ.ನರೇಂದ್ರಬಾಬು (ಮಹಾಲಕ್ಷ್ಮೀ ಲೇಔಟ್) : ಮಾನ್ಯ ಅಧ್ಯಕ್ಷರೆ, ನನ್ನದೊಂದು ಸಲಹೆಯೇನೆಂದರೆ, ವಿಶ್ವವಿದ್ಯಾಲಯಗಳನ್ನು ಹೆಚ್ಚು ಮಾಡುತ್ತಿರುವುದನ್ನು ನೋಡಿದರೆ, ನಿಜವಾಗಿಯೂ ಆತಂಕವಾಗುತ್ತದೆ. ಇವತ್ತು ವಿಶ್ವವಿದ್ಯಾಲಯಗಳು ಕಾಲೇಜುಗಳ ತರಹ open ಆಗುತ್ತಿವೆಯೆಂದು ನಮ್ಮ ಹಿರಿಯ ಸದಸ್ಯರು ಹೇಳಿದರು. ಬೆಂಗಳೂರು ನಗರದಲ್ಲಿ ಮಹಡಿ ಮೇಲೆ, Foreign University, boardಗಳು ಬಹಳ ಕಾಣಿಸುತ್ತಿವೆ. ವಿಶ್ವವಿದ್ಯಾಲಯಗಳನ್ನು ಇದೇ ರೀತಿ ಜಾಸ್ತಿ ಮಾಡುತ್ತಾ ಹೋದರೆ, ಈಗ ತೋಟಗಾರಿಕೆ ವಿಶ್ವವಿದ್ಯಾಲಯ ಮಾಡಿದಿರಿ, ಹಾಗೆಯೇ ಜಿಲ್ಲೆಗೊಂದು ತೋಟಗಾರಿಕೆ ವಿಶ್ವವಿದ್ಯಾನಿಲಯ ಹೀಗೆ ಮತ್ತೊಂದು, ಮಗದೊಂದು ಆಗಿ, ಅದು ಪಾವಿತ್ರ್ಯತೆ ಕಳೆದುಕೊಳ್ಳುತ್ತದೆ. ಕೋಲಾರ, ತುಮಕೂರಿನಲ್ಲಿ ವಿಶ್ವವಿದ್ಯಾಲಯಗಳು ಈಗ ಯಾವ ಸ್ಥಿತಿಯಲ್ಲಿದೆ ಎಂದು ತಮಗೆ ಗೊತ್ತಿದೆ. ದಯವಿಟ್ಟು ವಿಶ್ವವಿದ್ಯಾಲಯಗಳನ್ನು ಹೆಚ್ಚು ಮಾಡುವುದನ್ನು ನಿಲ್ಲಿಸಬೇಕೆಂದು ಹೇಳಿ, ಈ ಸಂದರ್ಭದಲ್ಲಿ ಈ ವಿಧೇಯಕ ಅಗತ್ಯವಿಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರತಕ್ಕಂಥ ಸಲಹೆಗಳನ್ನು ಗಣನೆಗೆ ತೆಗೆದುಕೊಂಡು, ಯು.ಜಿ.ಸಿ. recommendation ಪ್ರಕಾರವೇ ಇವತ್ತು 60 ರಿಂದ 70 ಕಾಲೇಜುಗಳ ವ್ಯಾಪ್ತಿಯಲ್ಲಿ ಒಂದು ವಿಶ್ವವಿದ್ಯಾಲಯವನ್ನು ಮಾಡಬೇಕೆಂದು ಹೇಳಿದ್ದಾರೆ. ಆ ಹಿನ್ನಲೆಯೊಳಗೆ ಕರ್ನಾಟಕದಲ್ಲಿ de-centralization ನಡೆಯುತ್ತಿದೆ. ಮಾನ್ಯ ಜಯಚಂದ್ರ

ಅವರು ಹೇಳಿರುವಂಥ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ತುಮಕೂರು ವಿಶ್ವವಿದ್ಯಾಲಯದಲ್ಲಿ ಬಹಳ ಕುಂಠಿತವಾಗಿ ಕೆಲಸಗಳು ನಡೆಯುತ್ತಿವೆ. ಆದರೆ, ಈ ಸಮಸ್ಯೆ ದಾವಣಗೆರೆ ವಿಶ್ವವಿದ್ಯಾಲಯಕ್ಕೆ ಬರುವುದಿಲ್ಲ. ಏಕೆಂದರೆ, ಈಗಾಗಲೇ 170 ಎಕರೆ ಜಮೀನು ಅಲ್ಲಿದೆ ಮತ್ತು ಯೂನಿವರ್ಸಿಟಿಯಲ್ಲಿ ಬಹಳ ವ್ಯವಸ್ಥಿತವಾದಂತಹ ಪಿ.ಜಿ. ಸೆಂಟರ್ ಅನ್ನು ನಡೆಸುತ್ತಿದ್ದಾರೆ. ನಾನು ಅಲ್ಲಿ ಸ್ವತಃ ಭೇಟಿ ಕೊಟ್ಟು ಬಂದಿದ್ದೇನೆ. ತಾವು ಹೇಳಿದ ಹಾಗೆ ಹಣಕಾಸಿನ ಕೊರತೆಯನ್ನು ನೀಗಿಸುವ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳು ಈ ಬಜೆಟ್‌ನಲ್ಲಿ ಮತ್ತು ಹಿಂದಿನ ಬಜೆಟ್‌ನಲ್ಲಿ ಉನ್ನತ ಹೆಚ್ಚಿನ ಆದ್ಯತೆ ಕೊಟ್ಟಿದ್ದಾರೆ. ವಿಶ್ವವಿದ್ಯಾಲಯಕ್ಕೂ ಕೂಡ 17 ಕೋಟಿ ಇದ್ದಂಥಾ ಅನುದಾನವನ್ನು 32 ಕೋಟಿಗೆ ಏರಿಸಿದ್ದಾರೆ. ಇದೂ ಸಾಕಾಗುತ್ತದೆ ಎಂದು ನಾನು ಹೇಳುವುದಿಲ್ಲ. ಆದಷ್ಟು ಹಣಕಾಸಿನ ಇತಿಮಿತಿಯನ್ನು ನೋಡಿಕೊಂಡು ಇವತ್ತು ನಮಗೆ ಅನುದಾನ ಸಿಗುತ್ತಿದೆ. ಆ ಹಿನ್ನಲೆಯೊಳಗೆ, ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) 2009 ವಿಧೇಯಕವನ್ನು ಅಂಗೀಕರಿಸಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2009ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 9ರವರೆಗೆ

ಅಧ್ಯಕ್ಷರು : "ಖಂಡ 2 ರಿಂದ 9ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 9ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, "2009ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2009ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಅನುಬಂಧ-14)

(ಗೊಂದಲ)

ಅಧ್ಯಕ್ಷರು : ಈಗ ಕರ್ನಾಟಕ ರಾಜ್ಯ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ವಿಧೇಯಕ 2009 ತೆಗೆದುಕೊಳ್ಳೋಣ.

3) ಕರ್ನಾಟಕ ರಾಜ್ಯ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ವಿಧೇಯಕ, 2009

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, "2009ನೇ ಸಾಲಿನ ಕರ್ನಾಟಕ ರಾಜ್ಯ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ವಿಧೇಯಕ"ವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2009ನೇ ಸಾಲಿನ ಕರ್ನಾಟಕ ರಾಜ್ಯ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 65ರವರೆಗೆ

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಸದರಿ ವಿಧೇಯಕಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ;

"ಸದರಿ ವಿಧೇಯಕದ ಹೆಸರು, ಪೀಠಿಕೆ ಮತ್ತು ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ ಹಾಗೂ ವಿಧೇಯಕದ ಇತರೆಡೆಗಳಲ್ಲಿ "ಕರ್ನಾಟಕ ರಾಜ್ಯ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ" ಎಂಬ ಪದಗಳ ಪ್ರತ್ಯಾಯೋಜಿಸತಕ್ಕದ್ದು."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"ಸದರಿ ವಿಧೇಯಕದ ಹೆಸರು, ಪೀಠಿಕೆ ಮತ್ತು ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ ಹಾಗೂ ವಿಧೇಯಕದ ಇತರೆಡೆಗಳಲ್ಲಿ "ಕರ್ನಾಟಕ ರಾಜ್ಯ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ" ಎಂಬ ಪದಗಳ ಬದಲಾಗಿ "ಕರ್ನಾಟಕ ರಾಜ್ಯ ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"ವಿಧೇಯಕ ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿದೇಯಕ ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಅಧ್ಯಕ್ಷರು : "ಖಂಡ 2 ರಿಂದ 65ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 65ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"ಮೊದಲನೆಯ ಕಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶಿರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, "ಕರ್ನಾಟಕ ರಾಜ್ಯ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ" ವಿಧೇಯಕವನ್ನು ತಿದ್ದುಪಡಿಯಾಗಿರುವಂತೆ ಅಂಗೀಕರಿಸ ಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಕರ್ನಾಟಕ ರಾಜ್ಯ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ" ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಶ್ರೀ ನೆ.ಲ.ನರೇಂದ್ರಬಾಬು : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ, ಈ ವಿಶ್ವವಿದ್ಯಾಲಯ ಮಾಡುತ್ತಿದ್ದಾರಲ್ಲಾ, performing arts, dance, music

ಎಂದು ಹೇಳಿ, ಎಷ್ಟು ಕಾಲೇಜುಗಳಿವೆ? ಕರ್ನಾಟಕದಲ್ಲಿ ಅಂಗೀಕೃತವಾಗಿರುವ ಈ ತರಹ ಎಷ್ಟು ಕಾಲೇಜುಗಳಿವೆ? ಯಾರಿಗೋಸ್ಕರ ಮಾಡುತ್ತಿದ್ದಾರೆ? ನಾನು ಒಬ್ಬ ಕಲಾವಿದನಾಗಿ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ವಿಶ್ವವಿದ್ಯಾಲಯಗಳನ್ನು ಇಷ್ಟೊಂದು ಮಾಡುತ್ತಿದ್ದೀರಲ್ಲಾ. . .

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ನರೇಂದ್ರಬಾಬುರವರೆ, ಇದಕ್ಕೆ affiliated college ನ concept ಇಲ್ಲ.

ಶ್ರೀ ನೆ.ಲ.ನರೇಂದ್ರ ಬಾಬು : ಎಷ್ಟಿದೆ ಹೇಳಿ?

ಶ್ರೀ ಅರವಿಂದ ಲಿಂಬಾವಳಿ : ಹಂಪಿ ಕನ್ನಡ ವಿಶ್ವವಿದ್ಯಾಲಯದ concept ಏನಿದೆಯೋ, ಆ concept ಅನ್ನು ಇದಕ್ಕೆ ತಂದಿದ್ದೇವೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು
(ಅನುಬಂಧ-15)

4) ಕರ್ನಾಟಕ ಸಂಸ್ಕೃತ-ವೇದ ವಿಶ್ವವಿದ್ಯಾಲಯ ವಿಧೇಯಕ, 2009
ಪರ್ಯಾಲೋಚನಾ ಪ್ರಸ್ತಾವ

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, "2009ರ ಕರ್ನಾಟಕ ಸಂಸ್ಕೃತ-ವೇದ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಂಡನೆಗೇ ವಿರೋಧ ಮಾಡುತ್ತಿದ್ದೇವೆ.

ಅಧ್ಯಕ್ಷರು : ಈಗಾಗಲೇ ಮಂಡನೆ ಆಗಿಬಿಟ್ಟಿದೆ.

ಶ್ರೀ ಸಿದ್ದರಾಮಯ್ಯ : ಎಲ್ಲಿ ಮಂಡನೆಯಾಗಿದೆ?

ಅಧ್ಯಕ್ಷರು : ಇಲ್ಲೇ ಮಂಡನೆಯಾಗಿದೆ.

ಶ್ರೀ ಸಿದ್ದರಾಮಯ್ಯ : ಮಂಡನೆಯಾಗಿದೆಯೇ? ಆಯಿತು.

ಅಧ್ಯಕ್ಷರು : ಇದು ಪರ್ಯಾಲೋಚನೆ ಪ್ರಸ್ತಾವ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಮೊದಲಿಗೆ ನಾನು, ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ಮಾನ್ಯ ಮುಖ್ಯಮಂತ್ರಿಗಳಿಗೂ ಹೇಳುತ್ತೇನೆ. ಏಕೆಂದರೆ, ಸಾರ್ವಜನಿಕವಾಗಿ ದೊಡ್ಡ ಚರ್ಚೆಯಾಗುತ್ತಿದೆ. ಸ್ವಲ್ಪ ದಿನ ಚರ್ಚೆಯಾಗಲಿ, ಇನ್ನೊಂದು ಸಲ ತೆಗೆದುಕೊಂಡು ಬನ್ನಿ,

H-332-HY

ಸಂಸ್ಕೃತ ವಿಶ್ವವಿದ್ಯಾಲಯವು ಸಮಾಜಕ್ಕೆ ಅತ್ಯಂತ ಅಗತ್ಯವಾಗಿದೆ ಎಂದೇನಿಲ್ಲ. ದಯವಿಟ್ಟು ನಿಮ್ಮಲ್ಲಿ ನನ್ನ ಸಲಹೆ ಏನೆಂದರೆ, ಈ ಬಿಲ್ ಅನ್ನು ಸಾರ್ವಜನಿಕವಾಗಿ ಚರ್ಚೆ ಮಾಡುವುದಕ್ಕೆ ಬಿಡೋಣ. ಚರ್ಚೆಯಾಗಲಿ. ಮತ್ತೆ ಇನ್ನೊಂದು ಸಲ ಇಲ್ಲಿ ಪರ್ಯಾಲೋಚನೆಗೆ ತೆಗೆದುಕೊಂಡು ಬನ್ನಿ, ಚರ್ಚೆ ಮಾಡಿ ನಂತರ ತೀರ್ಮಾನಕ್ಕೆ ಬರೋಣ. ಅದನ್ನೇನು ಮಾಡದೇ ಈಗಾಗಲೇ ಇದರ ಬಗ್ಗೆ ಬಹಳ ಪರವಾಗಿ, ವಿರೋಧವಾಗಿ, ಎಲ್ಲಾ ಚರ್ಚೆಗಳೆಲ್ಲಾ ನಡೆಯುತ್ತಿವೆ. ಬಹಳ ವಿದ್ವಾಂಸರೂ ಕೂಡ ಇದರ ಬಗ್ಗೆ ಪರವಾಗಿಯೂ ಇದ್ದಾರೆ, ವಿರೋಧವಾಗಿಯೂ ಇದ್ದಾರೆ. ಇದು ಸಾರ್ವಜನಿಕವಾಗಿ ಚರ್ಚೆಯಾದ ಮೇಲೆ, ಒಂದು ಅಭಿಪ್ರಾಯಕ್ಕೆ ಬಂದ ಮೇಲೆ ಇದನ್ನು ಮುಂದಿನ ಅಧಿವೇಶನದಲ್ಲಿ ತೆಗೆದುಕೊಂಡು ಬನ್ನಿ, ನಂತರ ಅದರ ಬಗ್ಗೆ ದೀರ್ಘವಾಗಿ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರೋಣ. ಆದುದರಿಂದ ಇದನ್ನು ಆತುರಾತುರವಾಗಿ ಮಾಡಬೇಕಾಗಿರುವ ಅಗತ್ಯವಿಲ್ಲ.

ಶ್ರೀ ಸಿ. ಟಿ. ರವಿ (ಚಿಕ್ಕಮಗಳೂರು) : ಮಾನ್ಯ ಅಧ್ಯಕ್ಷರೆ, ಪೂರ್ವಗ್ರಹ ಪೀಡಿತ ಗ್ರಹಚಾರ ಎನ್ನುವ ಕೆಲಸ ಆಗಬಾರದು. ಜರ್ಮನ್ ದೇಶದವರು ಸಂಸ್ಕೃತ ವಿಶ್ವವಿದ್ಯಾಲಯವನ್ನು ಅಲ್ಲಿ ಪ್ರಾರಂಭ ಮಾಡುತ್ತಾರೆ, ಅಮೇರಿಕಾದ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತಕ್ಕೆ ಪ್ರಾಧ್ಯಾನತೆ ಕೊಟ್ಟು ಅಲ್ಲಿ ಅಭ್ಯಾಸ ಮಾಡಲಿಕ್ಕೆ ಮಾಡುತ್ತಾರೆ. ನಾಲ್ಕಾರು ಪೂರ್ವಗ್ರಹ ಪೀಡಿತರಾಗಿ ವರ್ತನೆ ಮಾಡಬಾರದು. ಇದಕ್ಕೆ ಅವಕಾಶ ಕೊಡಬೇಕು. ನೀವು ಮಂಡಿಸಬೇಕು.

ಶ್ರೀ ಸಿದ್ದರಾಮಯ್ಯ : ಮಾನ್ಯ ರವಿಯವರೆ, ಆಯಿತು ನಿಮ್ಮ ಅಭಿಪ್ರಾಯ ಹೇಳಿ. ಇದರಲ್ಲಿ ಪೂರ್ವಗ್ರಹವೂ ಇಲ್ಲ. ಪಶ್ಚಿಮಗ್ರಹವೂ ಇಲ್ಲ.

ಶ್ರೀ ಸಿ. ಟಿ. ರವಿ : ನನ್ನ ಅಭಿಪ್ರಾಯವನ್ನು ಹೇಳಿದ್ದೇನೆ. ನೀವ್ಯಾರು ವಿರೋಧ ಮಾಡಿದ್ದೀರೆಂದು ನಾನು ಹೇಳುತ್ತಿಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಒಟ್ಟಿನಲ್ಲಿ ಇದರ ಬಗ್ಗೆ ಚರ್ಚೆಯಾಗಬೇಕು ಅಷ್ಟೆ.

ಶ್ರೀ ಸಿ. ಟಿ. ರವಿ : ನನ್ನ ಅಭಿಪ್ರಾಯವನ್ನು ಮಂಡಿಸುವುದಕ್ಕೆ ನನಗೆ ಹಕ್ಕು ಇದೆ, ನಾನು ಹೇಳಿದ್ದೇನೆ.

Sri Siddaramaiah : Is it necessary for Karnataka ಎನ್ನುವುದು ಪ್ರಶ್ನೆಯಾಗಬೇಕಾಗುತ್ತದೆ. ಇದರ ಬಗ್ಗೆ ರಾಜ್ಯಾದ್ಯಂತ ವ್ಯಾಪಕವಾಗಿ ಚರ್ಚೆಯಾಗುತ್ತಿದೆ. ಇನ್ನೂ ಚರ್ಚೆಯಾಗಲಿ, ಇನ್ನೊಮ್ಮೆ ಈ

ವಿಧೇಯಕವನ್ನು ತನ್ನಿ, ಮುಂದಿನ ಸೆಪ್ಟೆಂಬರ್‌ನಲ್ಲಿ ಮತ್ತೆ ಅಧಿವೇಶನದಲ್ಲಿ ಸೇರುತ್ತೇವಲ್ಲ, ಆಗ ತೆಗೆದುಕೊಂಡು ಬನ್ನಿ, ಚರ್ಚಿಸೋಣ.

ಶ್ರೀ ಸಿ.ಟಿ. ರವಿ : ಅಧ್ಯಕ್ಷರೆ, ಶಿವಕುಮಾರ್‌ರವರು ಶ್ಲೋಕ ಹೇಳಿದಾಗ ಎಲ್ಲರೂ ಚಪ್ಪಾಳೆ ತಟ್ಟಿದ್ದರು.

ಶ್ರೀ ಎನ್. ಯೋಗೀಶ್‌ಭಟ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಡಿ.ಕೆ.ಶಿವಕುಮಾರ್ ಕಾಂಗ್ರೆಸ್ ಪಕ್ಷದ ಎಕ್ಸಿಕ್ಯೂಟಿವ್ ಅಧ್ಯಕ್ಷರು, ಅವರೇ ಸಂಸ್ಕೃತ ಬಗ್ಗೆ ಅಧ್ಯಯನ ಮಾಡುತ್ತಿರುವುದು ನಮಗೆಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ ಮತ್ತು ಖಂಡಿತವಾಗಿಯೂ ಹೇಳುತ್ತೇನೆ. ಇದರ ಬಗ್ಗೆ ಯೂನಿವರ್ಸಿಟಿ ಸ್ಥಾಪಿಸಿ ಅದಕ್ಕೆ ಪ್ರೋತ್ಸಾಹ ಕೊಡುವುದೇನಿದೆ, ಅದು ತೀರಾ ಅವಶ್ಯಕತೆ ಇದೆ ಮತ್ತು ನಾವು ಅದನ್ನು ಪ್ರೋತ್ಸಾಹಿಸಿ, ಬೆಂಬಲಿಸ ಬೇಕಾಗುತ್ತದೆ. ಇದನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ತಾವು ಹೇಳಿದ ಬಿಲ್ ಗಳನ್ನೆಲ್ಲಾ ಪಾಸ್ ಮಾಡಿಕೊಟ್ಟಿದ್ದೇವೆ. ಈಗ ರಾತ್ರಿ 11.00 ಗಂಟೆಯಾಗುತ್ತಿದೆ. ಇನ್ನೂ ನಿಯಮ 69ರಡಿ ಮತ್ತು ಗಮನ ಸೆಳೆಯುವ ಸೂಚನೆಗಳಡಿ ಪ್ರಸ್ತಾಪಿಸಬೇಕಾದ ಸಾಕಷ್ಟು ವಿಷಯಗಳಿವೆ. ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರು ಹೇಳಿದಂತೆ, ಇವೆಲ್ಲವನ್ನೂ ವಾಪಸ್ಸು ತೆಗೆದುಕೊಂಡು ಮುಂದಿನ ಸಲ ತನ್ನಿ. ಈ ವಿಧೇಯಕಕ್ಕೆ ಸಂಬಂಧಿಸಿದಂತೆ 44 ಪುಟಗಳಿವೆ.

(ಗೊಂದಲ)

ಅಧ್ಯಕ್ಷರು : ಅರವಿಂದ ಲಿಂಬಾವಳಿಯವರೆ, ಈ ವಿಧೇಯಕವನ್ನು ಮುಂದಿನ ಸಲ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಹೆಚ್. ಸಿ. ಬಾಲಕೃಷ್ಣ : ವಿಧೇಯಕವನ್ನು ಓದಬೇಕಾಗಿದೆ, ಆನಂತರ ಚರ್ಚೆಯಾಗಲಿ.

(ಗೊಂದಲ)

ಅಧ್ಯಕ್ಷರು : ವಿಧೇಯಕವನ್ನು ಮುಂದಿನ ಅಧಿವೇಶನಕ್ಕೆ ತೆಗೆದು ಕೊಳ್ಳೋಣ.

(ಗೊಂದಲ)

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಸಭಾಧ್ಯಕ್ಷರು ರೂಲಿಂಗ್ ಕೊಟ್ಟಾಗಿದೆ.

ಶ್ರೀ ಅರವಿಂದ ಲಿಂಬಾವಳಿ : ಕರ್ನಾಟಕದಲ್ಲಿ ವಿದ್ಯಾರ್ಥಿಗಳ ಸಮಸ್ಯೆ ಏನಿದೆ ಎಂಬುದನ್ನು ಹೇಳುತ್ತೇನೆ. ಎಷ್ಟೋ ವಿದ್ಯಾರ್ಥಿಗಳಿಗೆ ಅನ್ಯಾಯ ವಾಗುತ್ತದೆ. ಆದಕಾರಣ, ಈ ವಿಧೇಯಕವನ್ನು ತೆಗೆದುಕೊಳ್ಳಿ. ದೇಶದ 12 ರಾಜ್ಯಗಳಲ್ಲಿ ವಿಶ್ವವಿದ್ಯಾನಿಲಯಗಳಿವೆ. ಆ ವಿಶ್ವವಿದ್ಯಾನಿಲಯಗಳ ಮುಖಾಂತರ ಬೇರೆ ಬೇರೆ ಉನ್ನತ ಶಿಕ್ಷಣಕ್ಕೋಸ್ಕರ, ಸಂಸ್ಕೃತದ ವಿಶೇಷ ಅಧ್ಯಯನಕ್ಕೋಸ್ಕರ ವಿದ್ಯಾರ್ಥಿಗಳು ಬೇರೆ ಬೇರೆ ಕಡೆಗಳಿಗೆ ಹೋಗುತ್ತಿದ್ದಾರೆ. ಕರ್ನಾಟಕದ ವಿದ್ಯಾರ್ಥಿಗಳು ಇದರಿಂದ ವಂಚಿತರಾಗುತ್ತಿದ್ದಾರೆ. ಕರ್ನಾಟಕದ ಮೂಲ ಸಂಸ್ಕೃತ ಅಧ್ಯಯನ ಮಾಡಿರುವ, ಪಾಂಡಿತ್ಯವಿರುವ ಬಹಳ ವಿದ್ಯಾರ್ಥಿಗಳು ಇಲ್ಲಿದ್ದಾರೆ. ಇಂತಹ ಸಂದರ್ಭದಲ್ಲಿ ಈ ಅವಕಾಶದಿಂದ ಅನೇಕ ವರ್ಷಗಳಿಂದ ವಂಚಿತರಾಗುತ್ತಿದ್ದೇವೆ. ಇಲ್ಲಿ 12 ಮಹಾ ವಿದ್ಯಾಲಯಗಳಿವೆ, 250 ಪಾಠಶಾಲೆಗಳಿವೆ. ಈ ಪಾಠಶಾಲೆಗಳಲ್ಲಿ ಓದಿ ಹೊರ ಬರುವ ವಿದ್ಯಾರ್ಥಿಗಳಿಗೆ ರಾಜ್ಯದ ಬೇರೆಡೆಗೆ, ದೇಶದ ಬೇರೆಡೆಗೆ ಹೋದರೆ ಅದರಲ್ಲೂ ಮಾನ್ಯತೆ ಸಿಗದಿರುವ ಪ್ರೈಮರಿ ಸ್ಕೂಲ್‌ನಡಿ ಅವರುಗಳು ಓದುತ್ತಿದ್ದಾರೆ. ಅಂತಹ ಪರಿಸ್ಥಿತಿ ಇದೆ. ಆ ಹಿನ್ನೆಲೆಯಲ್ಲಿ ಮತ್ತು ಸಂಸ್ಕೃತದ ಬಗ್ಗೆ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಗೊತ್ತೇ ಇದೆ. ಮಹಾಭಾರತವನ್ನು ವೇದವ್ಯಾಸರು, ಅವರು ಯಾರೆಂಬುದು ತಮಗೆ ಗೊತ್ತು. ರಾಮಾಯಣ ರಚಿಸಿದ್ದು ವಾಲ್ಮೀಕಿ, ಅದೇ ರೀತಿ ಗಾಯತ್ರಿ ಮಂತ್ರ ರಚಿಸಿದ್ದು ವಿಶ್ವಾಮಿತ್ರರು, ಅದೇ ರೀತಿ ಸಂಸ್ಕೃತದಲ್ಲಿ ಶಾಕುಂತಲಾ ನಾಟಕ ರಚಿಸಿದರು ಮಹಾಕವಿ ಕಾಳಿದಾಸರು. ಹೀಗಾಗಿ ಸಂಸ್ಕೃತ...

ಶ್ರೀ ಟಿ.ಬಿ.ಜಯಚಂದ್ರ : ಸಂಸ್ಕೃತ ನಿಮಗೆ ಬರುತ್ತದೆಯೇ?

ಶ್ರೀ ಅರವಿಂದ ಲಿಂಬಾವಳಿ : ಸಂಸ್ಕೃತ ನನಗೆ ಬರುತ್ತದೋ ಇಲ್ಲವೋ ಗೊತ್ತಿಲ್ಲ. ಆದರೆ, ಡಿ.ಕೆ.ಶಿವಕುಮಾರ್‌ರವರಿಗೆ ಇತ್ತೀಚೆಗೆ ಸಂಸ್ಕೃತ ಬರುತ್ತಿದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಅವರೂ ಚರ್ಚೆಗೆ ಬರಲಿ, ಅವರೂ ಚರ್ಚೆಯಲ್ಲಿ ಭಾಗವಹಿಸಲಿ.

ಶ್ರೀ ಅರವಿಂದ ಲಿಂಬಾವಳಿ : ನಮ್ಮ ವಿದ್ಯಾರ್ಥಿಗಳು.....

ಶ್ರೀ ಸಿದ್ದರಾಮಯ್ಯ : ನೀವು explain ಮಾಡುತ್ತಿದ್ದೀರಾ?

ಶ್ರೀ ಅರವಿಂದ ಲಿಂಬಾವಳಿ : ಹೌದು. ನಮ್ಮ ವಿದ್ಯಾರ್ಥಿಗಳು ವಂಚಿತರಾಗುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : ಏಕೆ ಹಠ ಮಾಡುತ್ತಿದ್ದೀರಿ?

ಶ್ರೀ ಅರವಿಂದ ಲಿಂಬಾವಳಿ : ಹಠ ಮಾಡುತ್ತಿಲ್ಲ.

ಶ್ರೀ ಸಿದ್ದರಾಮಯ್ಯ : ಹಾಗಾದರೆ, ಇದರ ಬಗ್ಗೆ ಸ್ವಲ್ಪ ಚರ್ಚೆಯಾಗಲಿ ಬಿಡಿ. ಸಾರ್ವಜನಿಕವಾಗಿ ಚರ್ಚೆಯಾದ ಬಳಿಕ ಮುಂದಿನ ಅಧಿವೇಶನದಲ್ಲಿ ತೆಗೆದುಕೊಳ್ಳೋಣ. No, No, ವಿಧೇಯಕವನ್ನು ನೀವು ತರಲೇಬೇಕೆನ್ನು ವುದಾದರೆ, ಮುಂದಿನ ಅಧಿವೇಶನಕ್ಕೆ ತೆಗೆದುಕೊಂಡು ಬನ್ನಿ, ಚರ್ಚಿಸೋಣ. ನಾವು ಸ್ವಲ್ಪ ಅಧ್ಯಯನ ಮಾಡಿಕೊಂಡು ಬರುತ್ತೇವೆ, ಚರ್ಚಿಸೋಣ.

ಶ್ರೀ ಅರವಿಂದ ಲಿಂಬಾವಳಿ : ನಾನು ಹಠ ಮಾಡುತ್ತಿಲ್ಲ. ನಮ್ಮ ಸಮಸ್ಯೆ ಏನೆಂದರೆ, ನಮ್ಮ ಕರ್ನಾಟಕದ ವಿದ್ಯಾರ್ಥಿಗಳು.....

ಶ್ರೀ ಸಿದ್ದರಾಮಯ್ಯ : ಇದರ ಬಗ್ಗೆ ಸ್ವಲ್ಪ ಡಿಬೇಟ್ ಆಗಲಿ, ಅನಂತರ ಈ ವಿಧೇಯಕವನ್ನು ತನ್ನಿ.

ಅಧ್ಯಕ್ಷರು : ಆಯಿತು, ಇದನ್ನು ಮುಂದಿನ ಅಧಿವೇಶನದಲ್ಲಿ ತೆಗೆದುಕೊಳ್ಳೋಣ. ಬಹಳಷ್ಟು ಶಾಸಕರು ಈ ಕುರಿತಾದ ಚರ್ಚೆಯಲ್ಲಿ ಭಾಗವಹಿಸಬೇಕೆಂದು ಹೇಳುತ್ತಿದ್ದಾರೆ. ಅದಕ್ಕೋಸ್ಕರ, ಈಗ ಸಮಯಭಾವ ಇದೆ. ಆ ದೃಷ್ಟಿಯಿಂದ ಇದನ್ನು ಮುಂದಿನ ಅಧಿವೇಶನದಲ್ಲಿ ತೆಗೆದು ಕೊಳ್ಳೋಣ. ರೇವಣ್ಣನವರೆ, ಈಗ 10.45 ಗಂಟೆಯಾಗಿದ್ದು, ಉಳಿದಿರುವ ಕಲಾಪವನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ. ಹೀಗಾಗಿ, ಇದನ್ನು ಮುಂದಕ್ಕೆ ಹಾಕಿದ್ದೇನೆ. ಸಮಯಾಭಾವ ಇದ್ದುದ್ದರಿಂದ ಒಂದು ಬಿಲ್ ಅನ್ನು ಮುಂದಕ್ಕೆ ಹಾಕಿದ್ದೇನೆ. ಇನ್ನು ಸಾಕು, ಈಗ ಮುಗಿಸೋಣ, ಉಳಿದುದನ್ನು ಮುಂದಿನ ವಿಶೇಷ ಅಧಿವೇಶನದಲ್ಲಿ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಒಂದು ನಿಮಿಷ ಹೇಳಿಬಿಡುತ್ತೇನೆ. ಆನಂತರ, ನೀವು ತೀರ್ಪು ಕೊಡಿ.

ಅಧ್ಯಕ್ಷರು : ಆಯಿತು, ಈಗ ಮುಗಿಸೋಣ. ಈಗಾಗಲೇ ನಾನು ಹೇಳಿದ್ದೇನೆ. ತಾವು ಬ್ರೀಫ್ ಮಾಡಿಬಿಡಿ. ಚರ್ಚೆ ಮಾಡಬೇಕೆಂದರೆ, ಇನ್ನು ಒಂದು ಗಂಟೆಯಾದರೂ ಬೇಕಾಗುತ್ತದೆ. ಏಕೆ ಹಠ ಮಾಡುತ್ತೀರಿ? ಇವತ್ತು ಆಗುವುದಿಲ್ಲವೆಂದರೆ ಮುಂದಿನ ಅಧಿವೇಶನದಲ್ಲಿ ಆಗುತ್ತದೆ. ಮಂಡನೆ ಯಾಗಿದೆ. ಈಗ ಚರ್ಚೆ ಪ್ರಾರಂಭಿಸಿದರೆ ಇನ್ನೂ ಒಂದು ಗಂಟೆಯಾದರೂ ಬೇಕಾಗುತ್ತದೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ಈಗ ಈ ಕಡತಗಳನ್ನು ನಿಮಗೆ ಕಳುಹಿಸಿಕೊಡುತ್ತೇನೆ. ಲೂಟಿಯಾಗುತ್ತಿದೆ. ಮಹಿಳಾ ಮತ್ತು ಮಕ್ಕಳ

ಕಲ್ಯಾಣ ಇಲಾಖೆಗೆ ಸಂಬಂಧಿಸಿದ ಕಡತವನ್ನೂ ಕಳುಹಿಸಿಕೊಡುತ್ತೇನೆ. ಮತ್ತು ನಿಯಮ 69ರಡಿಯಲ್ಲಿ.. ....

(ಗೊಂದಲ)

ಅಧ್ಯಕ್ಷರು : ಈಗ ಸಮಯ ಇಲ್ಲವೆಂದು ಉಳಿದಿರುವ ಕಲಾಪಗಳೆಲ್ಲವನ್ನೂ ಮುಂದಕ್ಕೆ ಹಾಕುತ್ತಿದ್ದೇವೆ. ಈಗ ಕ್ಲೋಸ್ ಮಾಡೋಣ. ಒಬ್ಬರಿಗೆ ಮಾತನಾಡಲು ಅವಕಾಶ ಕೊಟ್ಟರೆ ಎಲ್ಲರಿಗೂ ಕೊಡಬೇಕಾಗುತ್ತದೆ.

ಈಗ 13ನೇ ವಿಧಾನಸಭೆಯ ಮೂರನೇ ಅಧಿವೇಶನ ಕಾರ್ಯ ಕಲಾಪಗಳ ಸಂಕ್ಷಿಪ್ತ ವರದಿಯನ್ನು ಓದುತ್ತೇನೆ.

ಹದಿಮೂರನೇ ವಿಧಾನಸಭೆಯ ಮೂರನೇ ಅಧಿವೇಶನವು ದಿನಾಂಕ: 9ನೇ ಜುಲೈ, 2009 ರಿಂದ ದಿನಾಂಕ: 29ನೇ ಜುಲೈ, 2009 ರವರೆಗೆ ಸಮಾವೇಶಗೊಂಡು, ಒಟ್ಟು 15 ದಿನಗಳಲ್ಲಿ 70 ಗಂಟೆಗಳ ಕಾಲ ಸರ್ಕಾರಿ ಕಾರ್ಯಕಲಾಪಗಳನ್ನು ನಡೆಸಲಾಗಿದೆ.

ಈ ಅಧಿವೇಶನದಲ್ಲಿ ಇತ್ತೀಚೆಗೆ ನಿಧನ ಹೊಂದಿದ ಮಾಜಿ ಸಚಿವರಾಗಿದ್ದ ಶ್ರೀ ಹಾರನಹಳ್ಳಿ ರಾಮಸ್ವಾಮಿ, ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಬಿ.ಎಂ. ಇದಿನಬ್ಬ, ಶ್ರೀ ವಿ. ವಾಸುದೇವ, ಶ್ರೀ ಜಿ. ಶಂಕರೇಗೌಡ, ಶ್ರೀ ಎಂ. ಬಿ. ದಿವಟರ್, ಶ್ರೀ ಬಿ. ಪಿ. ಗಂಗಾಧರ್, ಶ್ರೀ ಪ್ರಭಾಕರರಾವ್ ತೇಲ್ಕರ್, ಶ್ರೀ ರಾಜಾ ಅಮರಪ್ಪ ನಾಯಕ್ ಹಾಲಿ ವಿಧಾನ ಪರಿಷತ್ತಿನ ಹಾಗೂ ಸದಸ್ಯರಾದ ಶ್ರೀ ಬಿ. ಟಿ. ಚನ್ನಬಸಪ್ಪ ಮತ್ತು ಖ್ಯಾತ ಹಿಂದೂಸ್ತಾನಿ ಗಾಯಕಿ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯೆಯಾಗಿದ್ದ ಡಾ: ಗಂಗೂಬಾಯಿ ಹಾನಗಲ್ ಅವರುಗಳು ನಿಧನ ಹೊಂದಿರುವ ಬಗ್ಗೆ ಮತ್ತು 1999ರ ಮೇ-ಜುಲೈನಲ್ಲಿ ನಡೆದ ಕಾರ್ಗಿಲ್ ಯುದ್ಧದಲ್ಲಿ ಮಡಿದ ವೀರಯೋಧರ ಸ್ಮರಣಾರ್ಥ ಸದನದಲ್ಲಿ ಸಂತಾಪ ನಿರ್ಣಯಗಳನ್ನು ಮಂಡಿಸಿ ಅಂಗೀಕರಿಸಲಾಗಿದೆ.

2009-10ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಎರಡು ದಿನ ಚರ್ಚೆ ನಡೆದು ದಿನಾಂಕ: 29-07-2009ರಂದು ಮಾನ್ಯ ಮುಖ್ಯಮಂತ್ರಿಯವರ ಉತ್ತರದೊಂದಿಗೆ ಬೇಡಿಕೆಗಳ ಮೇಲಿನ ಚರ್ಚೆಯನ್ನು ಮುಕ್ತಾಯಗೊಳಿಸಿ ಸದನವು ಅನುದಾನ ಬೇಡಿಕೆಗಳಲ್ಲಿನ ಮೊತ್ತಕ್ಕೆ ಅನುಮೋದನೆ ನೀಡಿರುತ್ತದೆ. ಅಲ್ಲದೆ ದಿನಾಂಕ: 28-07-2009ರಂದು 2009-10ನೇ ಸಾಲಿನ ಪೂರಕ ಅಂದಾಜು (ಒಂದನೇ ಕಂತು)ಗಳನ್ನು ಸದನದಲ್ಲಿ ಮಂಡಿಸಲ್ಪಟ್ಟು ದಿನಾಂಕ: 29-07-2009 ರಂದು ಅಂಗೀಕರಿಸಲ್ಪಟ್ಟಿರುತ್ತದೆ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ದಿನಾಂಕ: 31-03-2008ರ ಅಂತ್ಯದವರೆಗಿನ ಪಂಚಾಯತ್ ರಾಜ್ ಸಂಸ್ಥೆಗಳ ವರದಿಯನ್ನು ಸದನದಲ್ಲಿ ಮಂಡಿಸಲಾಗಿದೆ.

ವಿಧಾನಮಂಡಲದ ವಿವಿಧ ಸಮಿತಿಗಳನ್ನು ರಚಿಸುವ ಮತ್ತು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಸೆನೆಟ್‌ಗೆ ಮೂರು ಜನ ಸದಸ್ಯರನ್ನು ಹಾಗೂ ಅನಾಥಾಲಯ ಮತ್ತು ಧರ್ಮ ಸಂಸ್ಥೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಮಂಡಳಿಗೆ ಇಬ್ಬರು ಸದಸ್ಯರನ್ನು ನಾಮನಿರ್ದೇಶನ ಮಾಡಲು ದಿನಾಂಕ : 14-07-2009ರಂದು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಮಂಡಿಸಿದ ಪ್ರಸ್ತಾವಕ್ಕೆ ಸದನವು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರ ನೀಡಿದೆ.

ಈ ಅಧಿವೇಶನದಲ್ಲಿ ನಿಯಮ 60ರ ಮೇರೆಗೆ, ಹನ್ನೆರಡು ಸೂಚನೆಗಳನ್ನು ಸ್ವೀಕರಿಸಿದ್ದು, ಆ ಪೈಕಿ ಎಂಟು ಸೂಚನೆಗಳ ಬಗ್ಗೆ ಪ್ರಾಸ್ತಾವಿಕವಾಗಿ ನಂತರ ಅವುಗಳನ್ನು ನಿಯಮ 69ರಡಿಯಲ್ಲಿ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಅಲ್ಪಕಾಲಾವಧಿ ಚರ್ಚೆಗೆ ಅವಕಾಶ ಮಾಡಿ ಚರ್ಚಿಸಲಾಗಿರುತ್ತದೆ ಹಾಗೂ ನಿಯಮ 69ರಡಿ ಒಂಭತ್ತು ಅಲ್ಪಕಾಲಾವಧಿ ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ ಏಳು ಸೂಚನೆಗಳನ್ನು ಅಂಗೀಕರಿಸಲಾಗಿದೆ ಅವುಗಳಲ್ಲಿ ಮೂರು ಸೂಚನೆಗಳನ್ನು ಚರ್ಚಿಸಲಾಗಿರುತ್ತದೆ.

ಈ ಅವಧಿಯಲ್ಲಿ ಒಟ್ಟು 1371 ಪ್ರಶ್ನೆಗಳನ್ನು ಸ್ವೀಕರಿಸಿ 1218 ಪ್ರಶ್ನೆಗಳನ್ನು ಅಂಗೀಕರಿಸಿದ್ದು, 1033 ಪ್ರಶ್ನೆಗಳಿಗೆ ಉತ್ತರಿಸಲಾಗಿದೆ. ನಾಲ್ಕು ಅರ್ಧಗಂಟೆ ಕಾಲಾವಧಿ ಚರ್ಚೆಯನ್ನು ಅಂಗೀಕರಿಸಿದ್ದು, ಚರ್ಚೆಯಾಗಿ ರುವುದಿಲ್ಲ. ಇನ್ನೂರ ಹದಿನೈದು ಗಮನ ಸೆಳೆಯುವ ಸೂಚನೆಗಳನ್ನು ಸ್ವೀಕರಿಸಿದ್ದು, ಅದರಲ್ಲಿ 199 ಸೂಚನೆಗಳನ್ನು ಅಂಗೀಕರಿಸಿ 97 ಸೂಚನೆಗಳಿಗೆ ಸರ್ಕಾರದಿಂದ ಉತ್ತರ ಪಡೆದಿದ್ದು, ಆ ಪೈಕಿ 13 ಸೂಚನೆಗಳು ಸದನದಲ್ಲಿ ಚರ್ಚೆಯಾಗಿರುತ್ತವೆ ಹಾಗೂ 16 ಸೂಚನೆಗಳು ತಿರಸ್ಕೃತವಾಗಿರುತ್ತವೆ.

ಸದರಿ ಅವಧಿಯಲ್ಲಿ ಅಧ್ಯಾದೇಶ, ಅಧಿಸೂಚನೆ ಮತ್ತು ವಾರ್ಷಿಕ ವರದಿಗಳು ಸೇರಿ ಒಟ್ಟು 143 ಕಾಗದಪತ್ರಗಳನ್ನು ಸಭೆಯ ಮುಂದಿಡಲಾಗಿದೆ.

ನಿಯಮ 351 ರಡಿಯಲ್ಲಿ 120 ಸೂಚನೆಗಳನ್ನು ಸ್ವೀಕರಿಸಿ ಅಂಗೀಕರಿಸಲಾಗಿದೆ.

ಧನವಿನಿಯೋಗ ವಿಧೇಯಕವು ಸೇರಿದಂತೆ ಒಟ್ಟು 17 ವಿಧೇಯಕಗಳನ್ನು ಮಂಡಿಸಿ ಅಂಗೀಕರಿಸಲಾಗಿದೆ.

ಕರ್ನಾಟಕ ವಿಧಾನಮಂಡಲದ 2008–09ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಮೂರು ಮತ್ತು ನಾಲ್ಕನೇ ವರದಿಗಳನ್ನು, ಸಾರ್ವಜನಿಕ ಉದ್ಯಮಗಳ ಸಮಿತಿಯ ನೂರಹದಿನೇಳು ಮತ್ತು ನೂರಹದಿನೆಂಟನೇ ವರದಿಗಳನ್ನು, 2005–06ನೇ ಸಾಲಿನ ಅರ್ಜಿಗಳ ಸಮಿತಿಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದ ಎರಡನೇ ವರದಿಗೆ ಅನುಸರಣಾ ವರದಿಯನ್ನು, 2008–09ನೇ ಸಾಲಿನ ಅಂದಾಜುಗಳ ಸಮಿತಿಯ ಮೊದಲನೇ ವರದಿಯನ್ನು ಹಾಗೂ ಖಾಸಗಿ ಸದಸ್ಯರುಗಳ ನಿರ್ಣಯಗಳ ಸಮಿತಿಯ ಮೊದಲನೆಯ ವರದಿಯನ್ನು ಸದನಕ್ಕೆ ಒಪ್ಪಿಸಲಾಗಿದೆ. ಬೆಳಗಾಂ ತಾಲ್ಲೂಕಿನ ಕಂಗ್ರಾಳಿ ಬಿಕೆ ಗ್ರಾಮದ ಸರ್ವೆ ನಂ:36/1ರಲ್ಲಿನ 8 ಎಕರೆ 31 ಗುಂಟೆ ಕ್ಷೇತ್ರವನ್ನು ಕೆ.ಐ.ಎ.ಡಿ.ಬಿ.ಯಿಂದ ಮರಳಿ ಪಡೆದು ಭೂ ಮಾಲೀಕರಿಗೆ ಹಸ್ತಾಂತರಿಸುವ ಬಗ್ಗೆ ಅರ್ಜಿಯನ್ನು ಸದನಕ್ಕೆ ಒಪ್ಪಿಸಲಾಗಿದೆ. ಸದನದ ಕಾರ್ಯಕಲಾಪದಲ್ಲಿ ಭಾಗವಹಿಸಿ ಸಹಕರಿಸಿದಂಥ ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಯವರಿಗೆ, ಮಾನ್ಯ ವಿರೋಧ ಪಕ್ಷ ನಾಯಕರಿಗೆ, ಸಚಿವ ಸಂಪುಟದ ಸದಸ್ಯರಿಗೆ, ಮಾನ್ಯ ಉಪ ಸಭಾಧ್ಯಕ್ಷರಿಗೆ, ಜನತಾ ದಳ (ಎಸ್) ಶಾಸಕಾಂಗ ಪಕ್ಷದ ನಾಯಕರಿಗೆ ಸದನದ ಎಲ್ಲಾ ಮಾನ್ಯ ಸದಸ್ಯರಿಗೆ, ಸದನದ ಕಾರ್ಯಕಲಾಪಗಳನ್ನು ಮಾಧ್ಯಮದಲ್ಲಿ ಪ್ರಸಾರ ಮಾಡಲು ಹಾಗೂ ಪತ್ರಿಕೆಗಳಲ್ಲಿ ಪ್ರಕಟಿಸಲು ಸಹಕರಿಸಿದ ಎಲ್ಲಾ ಮಾಧ್ಯಮ ಮತ್ತು ಪತ್ರಿಕಾ ಪ್ರತಿನಿಧಿಗಳಿಗೆ ಸರ್ಕಾರದ ವಿವಿಧ ಇಲಾಖೆಯು ಅಧಿಕಾರಿ:ನೌಕರರ ವರ್ಗದವರಿಗೆ, ಕರ್ನಾಟಕ ವಿಧಾನ ಸಭೆ ಸಚಿವಾಲಯದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ತಾವು ಇಷ್ಟೊಂದು ಒಳ್ಳೆ ರೀತಿಯಲ್ಲಿ ಸದನವನ್ನು ನಡೆಸುವುದಕ್ಕೆ ಸಹಕಾರವನ್ನು ಕೊಟ್ಟಿದ್ದೀರಿ. ವಿರೋಧ ಪಕ್ಷದ ನಾಯಕರೂ ಸಹಕಾರ ಕೊಟ್ಟಿದ್ದಾರೆ. ನಿಮಗೆಲ್ಲರಿಗೂ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ನಮಗೆ ಇನ್ನೂ ಸದನ ನಡೆಸಬೇಕೆಂದು ಇತ್ತು. ತಾವು 15 ದಿವಸಗಳ ಕಾಲ ಕುಳಿತುಕೊಂಡು, ಉಪಾಧ್ಯಕ್ಷರು ತಾವು ಬಹಳ ಚೆನ್ನಾಗಿ ಸದನವನ್ನು ನಡೆಸಿದ್ದೀರಿ. ಅನೇಕ

ವಿಚಾರಗಳಲ್ಲಿ ಒಂದೊಂದು ಸಲ ಮನಸ್ಸಿಗೆ ನೋವಾಗುವ ರೀತಿಯಲ್ಲಿ ಮಾತುಗಳು ಆಗಬಹುದು. ಆದರೂ ತಾವು ಅದನ್ನು ಬಹಳ ಸ್ಪೋರ್ಟಿವ್ ಆಗಿ ತೆಗೆದುಕೊಂಡು ಬಹಳ ನಗುನಗುತ್ತಾ ಸದನವನ್ನು ನಡೆಸಿಕೊಟ್ಟಿದ್ದೀರಿ. ಸರ್ಕಾರ ಸಹ ಇನ್ನೂ ಹೆಚ್ಚು ದಿವಸ ಕೊಟ್ಟಿದ್ದರೆ ಹೆಚ್ಚು ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತಿತ್ತು. ಇನ್ನು ಮುಂದೆ ಹೆಚ್ಚು ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶವಾಗಬೇಕು. ವರ್ಷದಲ್ಲಿ ಕನಿಷ್ಠ ಪಕ್ಷ 60 ದಿವಸ ಸದನ ನಡೆಸಬೇಕೆಂದು ನಾವುಗಳೇ ಕಾನೂನು ಮಾಡಿದ್ದೇವೆ. Law makers, law breakers ಆಗಬಾರದು. ಮುಂದೆ 60 ದಿವಸ ಸದನ ನಡೆಯುವಂತೆ ನೋಡಿಕೊಳ್ಳಬೇಕು. ತಾವು ಮತ್ತು ಸರ್ಕಾರ ಅದಕ್ಕೆ ಸಹಕಾರ ಕೊಡಬೇಕು. ಈ 15 ದಿವಸಗಳಲ್ಲಿ ಎಲ್ಲಾ ರೀತಿಯಲ್ಲಿ ಸಹಕಾರ ನೀಡಿದಂಥ ತಮಗೆ, ಎಲ್ಲಾ ಸಚಿವರುಗಳಿಗೆ, ಎಲ್ಲಾ ಮಾನ್ಯ ಸದಸ್ಯರುಗಳಿಗೆ ಧನ್ಯವಾದಗಳನ್ನು ಹೇಳಿ ತಮಗೆ ಮತ್ತೊಮ್ಮೆ ಧನ್ಯವಾದಗಳು.

ಶ್ರೀ ಹೆಚ್.ಡಿ.ರೇವಣ್ಣ (ಜೆ.ಡಿ.ಎಸ್. ಶಾಸಕಾಂಗ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ತಮ್ಮ ಅಧ್ಯಕ್ಷತೆಯಲ್ಲಿ ವಿರೋಧ ಪಕ್ಷದವರಿಗೆ ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೀರಿ ಅದಕ್ಕೆ ಮೊದಲನೆಯದಾಗಿ ಧನ್ಯವಾದಗಳು. ಅದರ ಜೊತೆಗೆ ನಿಯಮ 69ರಲ್ಲಿ ಇರಬಹುದು, ಗಮನ ಸೆಳೆಯುವ ಸೂಚನೆಯಲ್ಲಿ ಇರಬಹುದು ಬಾಕಿ ಉಳಿದಿರುವುದನ್ನು ಮುಂದಿನ ಅಧಿವೇಶನದಲ್ಲಿ ತೆಗೆದುಕೊಳ್ಳಲು ಅವಕಾಶ ಕೊಡಬೇಕು. ಮಾನ್ಯ ಸಭಾನಾಯಕರು 15 ದಿವಸ ಈ ಸದನವನ್ನು ನಡೆಸಿದ್ದಾರೆ. ಈ ವರ್ಷವೇ ಅವರು 60 ದಿವಸ ನಡೆಸೋಣವೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅದಕ್ಕೆ ಅವರನ್ನು ಅಭಿನಂದಿಸುತ್ತೇನೆ. ಕಾನೂನು ಸಚಿವರಿಂದ ಹಿಡಿದು ಎಲ್ಲಾ ಸಚಿವರನ್ನು, ವಿರೋಧ ಪಕ್ಷದ ನಾಯಕರನ್ನು ಪತ್ರಿಕಾ ಮಿತ್ರರೆಲ್ಲರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್.ಎ. ಹ್ಯಾರೀಶ್ : ಮಾನ್ಯ ಅಧ್ಯಕ್ಷರೆ, ಹೊಸದಾಗಿ ಬಂದಿರುವ ಸದಸ್ಯರುಗಳಿಗೆ ಮಾತನಾಡಲು ಅವಕಾಶ ಲಭ್ಯವಾಗಿಲ್ಲ. ಆದ್ದರಿಂದ ಮುಂದಿನ ಬಾರಿ ಸದನ ನಡೆಯುವಾಗ ಕೊನೆಯ ಪಕ್ಷ ಹತ್ತತ್ತು ನಿಮಿಷ ಎಲ್ಲಾ ಸದಸ್ಯರಿಗೂ ಮಾತನಾಡಲು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಈಗ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಗಿದೆ.

(ಸದನವನ್ನು ರಾತ್ರಿ 10 ಗಂಟೆ 55 ನಿಮಿಷಕ್ಕೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಯಿತು)

ಅನುಬಂಧ – 1

KARNATAKA LEGISLATIVE ASSEMBLY
THIRTEENTH LEGISLATIVE ASSEMBLY
THIRD SESSION

THE KARNATAKA MUNICIPAL CORPORATIONS (AMENDMENT) BILL, 2009
(L.A. Bill No. 31 of 2009)

A Bill further to amend the Karnataka Municipal Corporations Act, 1976.

Whereas it is expedient further to amend the Karnataka Municipal Corporations Act, 1976 (Karnataka Act 14 of 1977) for the purposes hereinafter appearing;

Be it enacted by the Karnataka State Legislature in the Sixtieth year of the Republic of India, as follows:-

1. Short Title and Commencement.- (1) This Act, may be called the Karnataka Municipal Corporations (Amendment) Act, 2009.

(2) It shall be deemed to have come into force with effect from Fourth day of June, 2009.

2. Amendment of Section 7.- In the Karnataka Municipal Corporations Act,1976 (Karnataka Act 14 of 1977) (hereinafter referred to as the principal Act) , in section 7 in sub-section (1),-

(i) for clause (a) the following shall be substituted namely:- "(a) such number of elected councillors not being less than thirty and not more than two hundred as the Government may, by notification, determine"; and

(ii) in clause (b) for the words "not more than ten persons in the case of Bangalore City Corporation" the words "not exceeding ten

percent of the total number of Councillors in the case of Bruhat Bangalore Mahanagara Palike" shall be substituted.

3. Substitution of certain expressions.- In the principal Act, for the expressions "Bangalore City Corporation" or "Corporation of the City of Bangalore" wherever they occur, the expression "Bruhat Bangalore Mahanagara Palike" shall be substituted.

4. Repeal and Savings.- (1) The Karnataka Municipal Corporations (Amendment) Ordinance, 2009 (Karnataka Ordinance No.4 of 2009) is hereby repealed.

(2) Notwithstanding such repeal anything done or any action taken under the principal Act as amended by the said Ordinance, shall be deemed to have been done or taken under the principal Act as amended by this Act.

STATEMENT OF OBJECTS AND REASONS

It is considered necessary to constitute smaller and compact wards with an average population of 30,000 in the Bruhat Bangalore Mahanagara Palike area to have smooth administration.

Therefore, it is considered necessary to amend the Karnataka Municipal Corporations Act, 1976 (Karnataka Act 14 of 1977) to provide for,-

(i) enhancement of maximum number of wards for a Corporation to 200 ;

(ii) nomination of members equal to ten percent of the total number of members in the council, instead of ten members, from among the residents of the city to the Bruhath Bangalore Mahanagara Palike; and

(iii) substitution of expression "Bangalore City Corporation" or "corporation of city of Bangalore" by "Bruhath Bangalore Mahanagara Palike".

As the matter was urgent, and both the Houses of the Karnataka State Legislature were not in session, the Governor of Karnataka had promulgated the Karnataka Municipal Corporations (Amendment) Ordinance, 2009 (Karnataka Ordinance No.4 of 2009).

This Bill seeks to replace the said Ordinance.

Hence, this Bill.

Explanatory statement as required under sub-rule (1) of rule 80 of the Procedure and Conduct of Business Rules of the Karnataka Legislative Assembly.

It is considered necessary to constitute smaller and compact wards with an average population of 30,000 in the Bruhat Bangalore Mahanagara Palike area to have smooth administration.

Therefore, it is considered necessary to amend the Karnataka Municipal Corporations Act, 1976 (Karnataka Act 14 of 1977) to provide for,-

(i) enhancement of maximum number of wards for a Corporation to 200;

(ii) nomination of members equal to ten percent of the total number of members in the council, instead of ten members, from among the residents of the city to the Bruhath Bangalore Mahanagara Palike; and

(iii) substitution of expression "Bangalore City Corporation" or "corporation of city of Bangalore" by "Bruhath Bangalore Mahanagara Palike".

As the matter was urgent, and both the Houses of the Karnataka State Legislature were not in session, the Governor of Karnataka had promulgated the Karnataka Municipal Corporations (Amendment) Ordinance, 2009 (Karnataka Ordinance No.4 of 2009).

ಅನುಬಂಧ

ಕರ್ನಾಟಕ ಸ್ಟಾಂಪು ಅಧಿನಿಯಮ 1957 ರ (1957ರ ಕರ್ನಾಟಕಅಧಿನಿಯಮ 32) ಉದ್ಧೃತ ಭಾಗ

XX XX XX

20(1) .- ಪರಂತು, ವಿಮಾ ನಿಯಂತ್ರಕ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ ಮನ್ನಣೆ ಪಡೆದ ಯಾವುದೇ ವಿಮ ಕಂಪನಿಯು ನೀಡಿದ ಕ್ರಮಬದ್ಧವಾದ ಹಕ್ಕುಮೂಲ ವಿಮಾ ಪಾಲಿಸಿಯಿಂದ ಹಸ್ತಾಂತರಣವು ಸಮರ್ಥಿತವಾಗಿದ್ದರೆ, ಸುಂಕವು ಸ್ವತ್ತಿನ ಮಾರುಕಟ್ಟೆ ಬೆಲೆಯ ಶೇಕಡ ಏಳು ಆಗಿರತಕ್ಕದ್ದು.

ಮತ್ತು ಪರಂತು, ಯಾವುದೇ ಬಾಡಿಗೆ - ಮಾರಾಟ ಒಪ್ಪಂದವನ್ನು ಬರೆದುಕೊಟ್ಟಿದ್ದಕ್ಕೆ 5ನೇ ಅನುಚ್ಛೇದದ (ಡಿ) ಬಾಬಿನ ಅಡಿಯಲ್ಲಿ ಅಗತ್ಯಪಡಿಸಲಾದಂತೆ ಕ್ರಯಾನುಸಾರ ಸ್ಟಾಂಪು ಶುಲ್ಕದೊಡನೆ ಸ್ಟಾಂಪು ಮಾಡಿದ್ದು ಮತ್ತು ಅಂಥ ಒಪ್ಪಂದವು ಮುಂದುವರೆದಿದ್ದು ತದನಂತರ ಹಸ್ತಾಂತರವನ್ನು ಬರೆದುಕೊಟ್ಟಿದ್ದರೆ ಅಂಥ ಹಸ್ತಾಂತರಣದ ಮೇಲಿನ ಸುಂಕವು ಹತ್ತು ರೂಪಾಯಿಗಳನ್ನು ಮೀರದ ಅಥವಾ ತದನಂತರ ಬರೆದುಕೊಟ್ಟ ಹಸ್ತಾಂತರಣದ ಮೇಲಿನ ಸುಂಕವಾಗಿರತಕ್ಕದ್ದು, ಅಂಥ ಹಸ್ತಾಂತರಣದ ಮೇಲೆ ಸಂದಾಯವಾಗುವ ಸುಂಕವು ಅಂಥ ನಿವೇಶನದ ಬಾಡಿಗೆ-ಮಾರಾಟ ಒಪ್ಪಂದ ಜಾರಿಗೆ ಬರುವ ದಿನಾಂಕದಂದು ಇರುವ ಮಾರುಕಟ್ಟೆ ಮೌಲ್ಯದ ಮೇಲೆ ಇರತಕ್ಕದ್ದು

XX XX XX

(2) ಅದು ಪ್ರವರ್ತಕನು ಬರೆದು ಕೊಟ್ಟಿದ್ದ ಮೊದಲ ಹಸ್ತಾಂತರಣ ಲಿಖಿತಕ್ಕೆ ಸಂಬಂಧಪಟ್ಟಿದ್ದರೆ, ಭೂ ಮಾಲೀಕ ಅಥವಾ ಅಭಿವೃದ್ಧಿಗಾರ ಎಂಬ ಯಾವುದೇ ಹೆಸರಿನಿಂದ ಕರೆಯಲ್ಪಟ್ಟಿರಲಿ, ಕರ್ನಾಟಕ ಮಾಲೀಕತ್ವ	ಮೌಲ್ಯದ ಏಳೂವರೆ	ಶೇಕಡ

ಫ್ಲಾಟುಗಳ (ನಿರ್ಮಾಣ, ಮಾರಾಟ, ವ್ಯವಸ್ಥಾಪನೆ ಮತ್ತು ವರ್ಗಾವಣೆಗೆ ಉತ್ತೇಜನದ ಸಕ್ರಮ) ಅಧಿನಿಯಮ, 1972ರ (1973ರ ಕರ್ನಾಟಕ ಅಧಿನಿಯಮ 16) 2ನೇ ಪ್ರಕರಣದ (ಎ) ಖಂಡದಲ್ಲಿ ಪರಿಭಾಷಿಸಲಾದಂತೆ 'ಫ್ಲಾಟ್' ನ ಅಥವಾ ಕರ್ನಾಟಕ ಅಪಾರ್ಟ್‌ಮೆಂಟ್‌ಗಳ ಮಾಲೀಕತ್ವ ಅಧಿನಿಯಮ, 1972ರ (1973ರ ಕರ್ನಾಟಕ ಅಧಿನಿಯಮ 17) 3ನೇ ಪ್ರಕರಣದ (ಎ) ಖಂಡದಲ್ಲಿ ಪರಿಬಾಷಿಸಲಾದಂತೆ 'ಅಪಾರ್ಟ್‌ಮೆಂಟ್'ನ ಆವರಣಗಳಿಗೆ

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2009-10ನೇ ವರ್ಷದ ಆಯವ್ಯಯ ಭಾಷಣದಲ್ಲಿ ಕೃಷಿ ಭೂಮಿಯೂ ಸೇರಿದಂತೆ ಎಲ್ಲಾ ವಿಧವಾದ ಸ್ಥಿರ ಸ್ವತ್ತುಗಳ ಮಾರಾಟ ವ್ಯವಹಾರಗಳಲ್ಲಿ ಸ್ಟಾಂಪು ಶುಲ್ಕವನ್ನು ಶೇಕಡ ಏಳೂವರೆಯಿಂದ ಶೇಕಡ ಆರಕ್ಕೆ ಇಳಿಸುವುದಾಗಿ ಘೋಷಿಸಲಾಗಿದೆ.

ಆದ್ದರಿಂದ ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 34) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾದದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಎರಡೂ ಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ ಕರ್ನಾಟಕ ರಾಜ್ಯಪಾಲರು ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧ್ಯಾದೇಶ, 2009ನ್ನು (2009ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 5) ಪ್ರಖ್ಯಾಪಿಸಿರುತ್ತಾರೆ.

ಈ ವಿಧೇಯಕವನ್ನು ಸದರಿ ಅಧ್ಯಾದೇಶದ ಬದಲಾಗಿ ತರಲಾಗಿದೆ.

ಆದ್ದರಿಂದ ಈ ವಿಧೇಯಕ.

FINANCIAL MEMORANDUM

There will be an approximate expenditure of rupees one crore by the proposed Legislative measure.

B.S. YEDDYURAPPA
Chief Minister

S.B. PATIL
Secretary
Karnataka Legislative Assembly

ANNEXURE

Extract from the Karnataka Municipal Corporations Act, 1976 (Karnataka Act No. 14 of 1977)

XX XX XX

7. Constitution of the Corporation .- (1) The Corporation shall consist of,-

(a) such number of elected councillors not being less than thirty and more than one hundred fifty as the Government may by notification determine;

(b) not more than ten persons in the case of Bangalore City Corporation and not more than five persons in the case of other City Corporations nominated by the Government from amongst the residents of the city,-

XX XX XX

ಅನುಬಂಧ – 2

ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನಸಭೆ
ಮೂರನೇ ಅಧಿವೇಶನ

ಕರ್ನಾಟಕ ಸ್ಟಾಂಪು (ಎರಡನೇ ತಿದ್ದುಪಡಿ) ವಿಧೇಯಕ, 2009
(2009ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 37)

ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 34) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯದ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತ ವಾಗತಕ್ಕದ್ದು:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ***ಕರ್ನಾಟಕ ಸ್ಟಾಂಪು (ಎರಡನೇ ತಿದ್ದುಪಡಿ) ಅಧಿನಿಯಮ, 2009*** ಎಂದು ಕರೆಯತಕ್ಕದ್ದು.

(2) ಇದು 2009ರ ಜೂನ್ 4ನೇ ದಿನಾಂಕದಿಂದ ಜಾರಿಗೆ ಬಂದಿದೆಯೆಂದು ಭಾವಿಸತಕ್ಕದ್ದು.

2. ಅನುಸೂಚಿಯ ತಿದ್ದುಪಡಿ.- ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 34) ಅನುಸೂಚಿಯಲ್ಲಿ,-

(1) 20ನೇ ಅನುಚ್ಛೇದದಲ್ಲಿ,-

(i) (1) ನೇ ಖಂಡದಲ್ಲಿ, (2)ನೇ ಅಂಕಣದಲ್ಲಿ, ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

(ii) (2)ನೇ ಖಂಡದಲ್ಲಿ, (3)ನೇ ಅಂಕಣದಲ್ಲಿ "ಶೇಕಡಾ ಏಳೂವರೆ" ಎಂಬ ಪದಗಳಿಗೆ, "20(1)ನೇ ಅನುಚ್ಛೇದದಡಿಯಲ್ಲಿ ಹಸ್ತಾಂತರಣ

ಪತ್ರಕ್ಕೆ ವಿಧಿಸುವಷ್ಟೇ ಶುಲ್ಕ" ಎಂಬ ಅಂಕಿಗಳು, ಆವರಣ ಚಿಹ್ನೆಗಳು ಹಾಗೂ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(2) 41ನೇ ಅನುಚ್ಛೇದದಲ್ಲಿ, (ಇಬಿ) ಖಂಡದಲ್ಲಿ, 3ನೇ ಅಂಕಣದಲ್ಲಿ, "ಪ್ರತಿ ನೂರು ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಏಳು ರೂಪಾಯಿಗಳು ಮತ್ತು ಐವತ್ತು ಪೈಸೆಗಳು" ಎಂಬ ಪದಗಳಿಗೆ "20(1)ನೇ ಅನುಚ್ಛೇದದಡಿಯಲ್ಲಿ ಹಸ್ತಾಂತರಣ ಪತ್ರಕ್ಕೆ ವಿಧಿಸುವಷ್ಟೇ ಶುಲ್ಕ" ಎಂಬ ಅಂಕಿಗಳು, ಆವರಣ ಚಿಹ್ನೆಗಳು ಹಾಗೂ ಪದಗಳನ್ನು ಪ್ರತಿಯೋಜಿಸತಕ್ಕದ್ದು.

3. ನಿರಸನ ಮತ್ತು ಉಳಿಸುವಿಕೆಗಳು.- (1) ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧ್ಯಾದೇಶ, 2009ನ್ನು (2009ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 5) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಳಿಸಿದ್ದರೂ ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದ ಮೂಲ ಅಧಿನಿಯಮದಡಿಯಲ್ಲಿ ಕೈಗೊಂಡ ಯಾವುದೇ ಕ್ರಮ ಅಥವಾ ಮಾಡಿದ ಯಾವುದೇ ಕಾರ್ಯವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದ ಮೂಲ ಅಧಿನಿಯಮದಡಿಯಲ್ಲಿ ಕೈಗೊಳ್ಳಲಾಗಿದೆ ಅಥವಾ ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2009-10ನೇ ವರ್ಷದ ಆಯವ್ಯಯ ಭಾಷಣದಲ್ಲಿ ಕೃಷಿ ಭೂಮಿಯೂ ಸೇರಿದಂತೆ ಎಲ್ಲಾ ವಿಧವಾದ ಸ್ಥಿರ ಸ್ವತ್ತುಗಳ ಮಾರಾಟ ವ್ಯವಹಾರಗಳಲ್ಲಿ ಸ್ಟಾಂಪು ಶುಲ್ಕವನ್ನು ಶೇಕಡ ಏಳೂವರೆಯಿಂದ ಶೇಕಡ ಆರಕ್ಕೆ ಇಳಿಸುವುದಾಗಿ ಘೋಷಿಸಲಾಗಿದೆ.

ಆದ್ದರಿಂದ ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 34) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾದದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಎರಡೂ ಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ ಕರ್ನಾಟಕ ರಾಜ್ಯಪಾಲರು ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧ್ಯಾದೇಶ, 2009ನ್ನು (2009ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 5) ಪ್ರಖ್ಯಾಪಿಸಿರುತ್ತಾರೆ.

ಈ ವಿಧೇಯಕವನ್ನು ಸದರಿ ಅಧ್ಯಾದೇಶದ ಬದಲಾಗಿ ತರಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಕ್ರಮದಿಂದಾಗಿ ಯಾವುದೇ ಹೆಚ್ಚಿನ ವೆಚ್ಚವುಂಟಾಗುವುದಿಲ್ಲ.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮಗಳ 80ನೇ ನಿಯಮದ (1)ನೇ ಉಪ ನಿಯಮದ ಅಡಿಯಲ್ಲಿ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ

2009–10ನೇ ವರ್ಷದ ಆಯವ್ಯಯ ಭಾಷಣದಲ್ಲಿ ಕೃಷಿ ಭೂಮಿಯೂ ಸೇರದಂತೆ ಎಲ್ಲಾ ವಿಧವಾದ ಸ್ಥಿರ ಸ್ವತ್ತುಗಳ ಮಾರಾಟ ವ್ಯವಹಾರಗಳಲ್ಲಿ ಸ್ಟಾಂಪು ಶುಲ್ಕವನ್ನು ಶೇಕಡ ಏಳೂವರೆಯಿಂದ ಶೇಕಡ ಆರಕ್ಕೆ ಇಳಿಸುವುದಾಗಿ ಘೋಷಿಸಲಾಗಿದೆ.

ಆದ್ದರಿಂದ ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 34) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾದದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಎರಡೂ ಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ ಕರ್ನಾಟಕ ರಾಜ್ಯಪಾಲರು ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧ್ಯಾದೇಶ, 2009ನ್ನು (2009ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 5) ಪ್ರಖ್ಯಾಪಿಸಿರುತ್ತಾರೆ.

ಜಿ. ಕರುಣಾಕರ ರೆಡ್ಡಿ
ಕಂದಾಯ ಸಚಿವರು

ಎಸ್.ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಅನುಬಂಧ

ಕರ್ನಾಟಕ ಸ್ಟಾಂಪು ಅಧಿನಿಯಮ 1957 ರ (1957ರ ಕರ್ನಾಟಕ ಅಧಿನಿಯಮ 32) ಉದ್ಧೃತ ಭಾಗ

XX XX XX

20(1) .– ಪರಂತು, ವಿಮಾ ನಿಯಂತ್ರಕ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ ಮನ್ನಣೆ ಪಡೆದ ಯಾವುದೇ ವಿಮ ಕಂಪನಿಯು ನೀಡಿದ ಕ್ರಮಬದ್ಧವಾದ ಹಕ್ಕುಮೂಲ ವಿಮಾ ಪಾಲಿಸಿಯಿಂದ ಹಸ್ತಾಂತರಣವು ಸಮರ್ಥಿತವಾಗಿದ್ದರೆ, ಸುಂಕವು ಸ್ವತ್ತಿನ ಮಾರುಕಟ್ಟೆ ಬೆಲೆಯ ಶೇಕಡ ಏಳು ಆಗಿರತಕ್ಕದ್ದು.

ಮತ್ತು ಪರಂತು, ಯಾವುದೇ ಬಾಡಿಗೆ – ಮಾರಾಟ ಒಪ್ಪಂದವನ್ನು ಬರೆದುಕೊಟ್ಟಿದ್ದಕ್ಕೆ 5ನೇ ಅನುಚ್ಛೇದದ (ಡಿ) ಬಾಬಿನ ಅಡಿಯಲ್ಲಿ ಅಗತ್ಯಪಡಿಸಲಾದಂತೆ ಕ್ರಯಾನುಸಾರ ಸ್ಟಾಂಪು ಶುಲ್ಕದೊಡನೆ ಸ್ಟಾಂಪು ಮಾಡಿದ್ದು ಮತ್ತು ಅಂಥ ಒಪ್ಪಂದವು ಮುಂದುವರೆದಿದ್ದು ತದನಂತರ ಹಸ್ತಾಂತರವನ್ನು ಬರೆದುಕೊಟ್ಟಿದ್ದರೆ ಅಂಥ ಹಸ್ತಾಂತರಣದ ಮೇಲಿನ ಸುಂಕವು ಹತ್ತು ರೂಪಾಯಿಗಳನ್ನು ಮೀರದ ಅಥವಾ ತದನಂತರ ಬರೆದು ಕೊಟ್ಟ ಹಸ್ತಾಂತರಣದ ಮೇಲಿನ ಸುಂಕವಾಗಿರತಕ್ಕದ್ದು, ಅಂಥ ಹಸ್ತಾಂತರಣದ ಮೇಲೆ ಸಂದಾಯವಾಗುವ ಸುಂಕವು ಅಂಥ ನಿವೇಶನದ ಬಾಡಿಗೆ–ಮಾರಾಟ ಒಪ್ಪಂದ ಜಾರಿಗೆ ಬರುವ ದಿನಾಂಕದಂದು ಇರುವ ಮಾರುಕಟ್ಟೆ ಮೌಲ್ಯದ ಮೇಲೆ ಇರತಕ್ಕದ್ದು

XX XX XX

(2) ಅದು ಪ್ರವರ್ತಕನು ಬರೆದು ಕೊಟ್ಟಿದ್ದ ಮೊದಲ ಹಸ್ತಾಂತರಣ ಲಿಖಿತಕ್ಕೆ ಸಂಬಂಧಪಟ್ಟಿದ್ದರೆ, ಭೂ ಮಾಲೀಕ ಅಥವಾ ಅಭಿವೃದ್ಧಿಗಾರ ಎಂಬ ಯಾವುದೇ ಹೆಸರಿನಿಂದ ಕರೆಯಲ್ಪಟ್ಟಿರಲಿ, ಕರ್ನಾಟಕ ಮಾಲೀಕತ್ವ ಫ್ಲಾಟುಗಳ	ಮೌಲ್ಯದ ಶೇಕಡ ಏಳೂವರೆ

H-252-59

(ನಿರ್ಮಾಣ, ಮಾರಾಟ, ವ್ಯವಸ್ಥಾಪನೆ ಮತ್ತು ವರ್ಗಾವಣೆಗೆ ಉತ್ತೇಜನದ ಸಕ್ರಮ) ಅಧಿನಿಯಮ, 1972ರ (1973ರ ಕರ್ನಾಟಕ ಅಧಿನಿಯಮ 16) 2ನೇ ಪ್ರಕರಣದ (ಎ) ಖಂಡದಲ್ಲಿ ಪರಿಭಾಷಿಸಲಾದಂತೆ 'ಫ್ಲಾಟ್' ನ ಅಥವಾ ಕರ್ನಾಟಕ ಅಪಾರ್ಟ್‌ಮೆಂಟ್‌ಗಳ ಮಾಲೀಕತ್ವ ಅಧಿನಿಯಮ, 1972ರ (1973ರ ಕರ್ನಾಟಕ ಅಧಿನಿಯಮ 17) 3ನೇ ಪ್ರಕರಣದ (ಎ) ಖಂಡದಲ್ಲಿ ಪರಿಬಾಷಿಸಲಾದಂತೆ 'ಅಪಾರ್ಟ್‌ಮೆಂಟ್'ನ ಆವರಣಗಳಿಗೆ ಸಂಬಂಧಿಸಿದಂತೆ ಅಥವಾ ಸಹಕಾರಿ ಸಂಘ ಅಥವಾ ಕಂಪೆನಿಯಂದ ಅಥವಾ ಅದರ ಪರವಾಗಿ ಮಾಡಿದ ಆವರಣಗಳು ಅಥವಾ ಘಟಕದ ಷೇರಿನ ವರ್ಗಾವಣೆ ಮತ್ತು ಯಾವ ಸ್ವತ್ತಿನ ಮಾರುಕಟ್ಟೆ ಮೌಲ್ಯವು ಹಸ್ತಾಂತರಣದ ವಸ್ತುವಿಷಯ ವಾಗಿದೆಯೋ ಆ ಸ್ವತ್ತಿಗೆ ಸಂಬಂಧಿಸಿದ್ದರೆ,-

xx xx xx

41	ಮೋಖ್ತ್ಯಾರನಾಮೆಗಳು.-xx xx	
(ಇಬಿ)	ಕರ್ನಾಟಕ ರಾಜ್ಯದಲ್ಲಿನ ಸ್ಥಿರಾಸ್ತಿಯನ್ನು ತಂದೆ, ತಾಯಿ, ಪತ್ನಿ ಅಥವಾ ಪತಿ, ಮಕ್ಕಳು, ಸಹೋದರ, ಸಹೋದರಿಯರನ್ನು	ಮೊಖ್ತ್ಯಾರನಾಮೆಯ ವಿಷಯ ವಸ್ತುವಿನಲ್ಲಿ ಸ್ವತ್ತಿನ ಮಾರುಕಟ್ಟೆ ಬೆಲೆಗೆ ಪ್ರತಿಯೊಂದು ನೂರು

ಹೊರತು ಪಡಿಸಿ, ಮಾರಾಟ ಮಾಡಿದ್ದಲ್ಲಿ	**ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಶೇಕಡ ಏಳೂವರೆಯಷ್ಟು:** ಪರಂತು ಲಿಖಿತದ ಮೇಲೆ ಈಗಾಗಲೇ ಸುಂಕ ಪಾವತಿಯಾಗಿದ್ದು ತದನಂತರ ಮಾರಾಟ ಅಥವಾ ವರ್ಗಾವಣೆ ಮೂಲಕ ಅಧಿಕಾರ ಪತ್ರ ಪಡೆದವನು ಅಥವಾ ಯಾವುದೇ ವ್ಯಕ್ತಿಯು ಮಾಡಿದಲ್ಲಿ ಸುಂಕವನ್ನು ಸರಿ ಹೊಂದಾಣಿಸಬಹುದು.

xx xx xx

ಅನುಬಂಧ – 3

ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನಸಭೆ
ಮೂರನೇ ಅಧಿವೇಶನ

ಕರ್ನಾಟಕ ಪೌರಸಭೆಗಳ ಕಾನೂನು ಹಾಗೂ ಇನ್ನೊಂದು ಕಾನೂನಿನ (ತಿದ್ದುಪಡಿ) ವಿಧೇಯಕ, 2009
(2009ರ ವಿಧಾನ ಸಭೆಯ ವಿಧೇಯಕ ಸಂಖ್ಯೆ – 30)

ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ನ್ನು ಮತ್ತು ಕರ್ನಾಟಕ ಪೌರನಿಗಮಗಳ ಅಧಿನಿಯಮ, 1976ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22)ನ್ನು ಮತ್ತು ಕರ್ನಾಟಕ ಪೌರನಿಗಮಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14) ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ ;

ಇದು ಭಾರತ ಗಣರಾಜ್ಯದ ಅರವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ ಎಂದರೆ.–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ***ಕರ್ನಾಟಕ ಪೌರಸಭೆಗಳ ಕಾನೂನು ಹಾಗೂ ಇನ್ನೊಂದು ಕಾನೂನಿನ (ತಿದ್ದುಪಡಿ) ಅಧಿನಿಯಮ, 2009*** ಎಂದು ಕರೆಯತಕ್ಕದ್ದು.

(2) ಇದು 2009ರ ಮೇ 28ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 1964ರ ಕರ್ನಾಟಕ ಅಧಿನಿಯಮ 22ರ ತಿದ್ದುಪಡಿ.– ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22)ರಲ್ಲಿ,–

(1) 36ನೇ ಪ್ರಕರಣದಲ್ಲಿ.–

(ಎ) ಶೀರ್ಷಿಕೆಯಲ್ಲಿ "ಮತಪತ್ರಗಳನ್ನು" ಎಂಬ ಪದದ ತರುವಾಯ "ಅಥವಾ ಮತಯಂತ್ರಗಳನ್ನು" ಎಂಬ ಪದಗಳನ್ನು ಸೇರಿಸತಕ್ಕದ್ದು ;

(ಬಿ) (1)ನೇ ಉಪ-ಪ್ರಕರಣದಲ್ಲಿ, "ಮತಪತ್ರವನ್ನು" ಎಂಬ ಪದದ ತರುವಾಯ "ಅಥವಾ ಮತಯಂತ್ರವನ್ನು" ಎಂಬ ಪದಗಳನ್ನು ಸೇರಿಸತಕ್ಕದ್ದು ;

(ಸಿ) (3)ನೇ ಉಪ ಪ್ರಕರಣದಲ್ಲಿ "ಮತಪತ್ರವನ್ನು" ಎಂಬ ಪದದ ತರುವಾಯ "ಅಥವಾ ಮತಯಂತ್ರವನ್ನು" ಎಂಬ ಪದಗಳನ್ನು ಸೇರಿಸತಕ್ಕದ್ದು.

(2) 37ನೇ ಪ್ರಕರಣದಲ್ಲಿ,-

(i) (1)ನೇ ಉಪ ಪ್ರಕರಣದ (ಸಿ), (ಡಿ) ಮತ್ತು (ಎಫ್) ಖಂಡಗಳಲ್ಲಿ, "ಮತಪತ್ರ" ಎಂಬ ಪದಗಳು ಬರುವ ಕಡೆಗಳಲ್ಲೆಲ್ಲಾ ಆ ಪದಗಳ ತರುವಾಯ, "ಅಥವಾ ಮತಯಂತ್ರ" ಎಂಬ ಪದಗಳನ್ನು ಸೇರಿಸತಕ್ಕದ್ದು ; ಮತ್ತು

(ii) (3)ನೇ ಉಪ ಪ್ರಕರಣದಲ್ಲಿ "ಮತಪತ್ರ" ಎಂಬ ಪದಗಳ ತರುವಾಯ, "ಅಥವಾ ಮತಯಂತ್ರ" ಎಂಬ ಪದಗಳನ್ನು ಸೇರಿಸತಕ್ಕದ್ದು ;

(3) 38ನೇ ಪ್ರಕರಣದಲ್ಲಿ, (2)ನೇ ಉಪ-ಪ್ರಕರಣದಲ್ಲಿ, (ಜೆ) ಖಂಡದಲ್ಲಿ, (vi)ನೇ ಉಪ ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

"(vi ಎ) ಮತಯಂತ್ರಗಳ ಮೂಲಕ ಮತಗಳನ್ನು ನೀಡುವ ಮತ್ತು ದಾಖಲಿಸುವ ರೀತಿ ;"

(4) 38ಎ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

"**38ಬಿ. ಚುನಾವಣೆಗಳಲ್ಲಿ ಮತಯಂತ್ರ**.- ಈ ಅಧಿನಿಯಮದಲ್ಲಿ ಅಥವಾ ಅದರ ಅಡಿಯಲ್ಲಿ ರಚಿಸಿರುವ ನಿಯಮಗಳಲ್ಲಿ ಏನೇ ಇದ್ದರೂ ಮತಯಂತ್ರಗಳ ಮೂಲಕ ಮತಗಳನ್ನು ನೀಡುವುದನ್ನು ಅಥವಾ ದಾಖಲಿಸುವುದನ್ನು, ಪ್ರತಿಯೊಂದು ಪ್ರಕರಣದ ಸನ್ನಿವೇಶಗಳನ್ನು

ಗಮನದಲ್ಲಿಟ್ಟುಕೊಂಡು ರಾಜ್ಯ ಚುನಾವಣಾ ಆಯೋಗವು ನಿರ್ದಿಷ್ಟಪಡಿಸ ಬಹುದಾದಂಥ ಚುನಾವಣಾ ಕ್ಷೇತ್ರ ಅಥವಾ ಚುನಾವಣಾ ಕ್ಷೇತ್ರಗಳಲ್ಲಿ ಅಂಗೀಕರಿಸಬಹುದು.

ವಿವರಣೆ.- ಈ ಪ್ರಕರಣದ ಉದ್ದೇಶಕ್ಕಾಗಿ 'ಮತಯಂತ್ರ' ಎಂದರೆ ವಿದ್ಯುನ್ಮಾನದ ಮೂಲಕವಾಗಲಿ ಅಥವಾ ಬೇರೆ ರೀತಿಯಲ್ಲಾಗಲೀ ನಡೆಸುವ, ಮತಗಳನ್ನು ನೀಡುವುದಕ್ಕೆ ಅಥವಾ ದಾಖಲಿಸುವುದಕ್ಕೆ ಬಳಸುವ ಯಾವುದೇ ಯಂತ್ರ ಅಥವಾ ಉಪಕರಣ ಎಂದು ಅರ್ಥ ಮತ್ತು ಈ ಅಧಿನಿಯಮದಲ್ಲಿ ಅಥವಾ ಅದರ ಅಡಿಯಲ್ಲಿ ರಚಿಸಿರುವ ನಿಯಮಗಳಲ್ಲಿ ಮತಪೆಟ್ಟಿಗೆ ಅಥವಾ ಮತಪತ್ರಕ್ಕೆ ಮಾಡಿರುವ ಯಾವುದೇ ಉಲ್ಲೇಖವು, ಅನ್ಯಥಾ ಉಪಬಂಧಿಸಿದುದನ್ನುಳಿದು, ಯಾವುದೇ ಚುನಾವಣೆಯಲ್ಲಿ ಅಂಥ ಮತಯಂತ್ರವನ್ನು ಎಲ್ಲೆಲ್ಲಿ ಬಳಸಲಾಗಿದೆಯೋ ಅಲ್ಲಿ, ಅಂಥ ಮತಯಂತ್ರಕ್ಕೆ ಮಾಡಿರುವ ಉಲ್ಲೇಖವನ್ನು ಒಳಗೊಂಡಿರುವುದಾಗಿ ಅರ್ಥೈಸತಕ್ಕದ್ದು."

3. 1977ರ ಕರ್ನಾಟಕ ಅಧಿನಿಯಮ 14ರ ತಿದ್ದುಪಡಿ.- ಕರ್ನಾಟಕ ಪೌರನಿಗಮಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ರಲ್ಲಿ,-

(1) 52ನೇ ಪ್ರಕರಣದಲ್ಲಿ,-

(ಎ) ಶೀರ್ಷಿಕೆಯಲ್ಲಿ, "ಮತ ಪತ್ರಗಳನ್ನು" ಎಂಬ ಪದಗಳ ತರುವಾಯ, "ಅಥವಾ ಮತಯಂತ್ರವನ್ನು" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) (1)ನೇ ಉಪ-ಪ್ರಕರಣದಲ್ಲಿ, "ಮತ ಪತ್ರವನ್ನು" ಎಂಬ ಪದಗಳ ತರುವಾಯ "ಅಥವಾ ಮತಯಂತ್ರವನ್ನು" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಸಿ) (3)ನೇ ಉಪ ಪ್ರಕರಣದಲ್ಲಿ, "ಯಾವುದೇ ಮತಪತ್ರವನ್ನು" ಎಂಬ ಪದಗಳ ತರುವಾಯ "ಅಥವಾ ಮತಯಂತ್ರವನ್ನು" ಎಂಬ ಪದಗಳನ್ನು ಸೇರಿಸತಕ್ಕದ್ದು.

(2) 53ನೇ ಪ್ರಕರಣದಲ್ಲಿ, (1)ನೇ ಉಪ-ಪ್ರಕರಣದಲ್ಲಿ,-

(ಎ) (ಸಿ) ಖಂಡದಲ್ಲಿ, ಮತ್ತು "ಮತಪತ್ರ" ಮತ್ತು "ಮತಪತ್ರದ" ಎಂಬ ಪದಗಳ ತರುವಾಯ ಅನುಕ್ರಮವಾಗಿ "ಅಥವಾ ಮತಯಂತ್ರ" ಮತ್ತು "ಅಥವಾ ಮತಯಂತ್ರದ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) (ಡಿ) ಖಂಡದಲ್ಲಿ, "ಮತಪತ್ರವನ್ನು" ಎಂಬ ಪದವು ಬರುವ ಕಡೆಗಳಲ್ಲೆಲ್ಲಾ ಅದರ ತರುವಾಯ "ಅಥವಾ ಮತಯಂತ್ರವನ್ನು" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಸಿ) (ಎಫ್) ಖಂಡದಲ್ಲಿ "ಮತಪೆಟ್ಟಿಗೆ ಅಥವಾ ಮತಪತ್ರಗಳನ್ನು" ಎಂಬ ಪದಗಳಿಗೆ "ಮತಪೆಟ್ಟಿಗೆ, ಮತಪತ್ರಗಳನ್ನು ಅಥವಾ ಮತಯಂತ್ರವನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(3) 55ನೇ ಪ್ರಕರಣದಲ್ಲಿ, (2)ನೇ ಉಪಪ್ರಕರಣದ (ಹೆಚ್) ಖಂಡದಲ್ಲಿ (vi)ನೇ ಉಪಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(vi ಎ) ಮತಯಂತ್ರಗಳ ಮೂಲಕ ಮತಗಳನ್ನು ನೀಡುವ ಅಥವಾ ದಾಖಲಿಸುವ ರೀತಿ;"

(4) 55ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"55ಎ. **ಚುನಾವಣೆಗಳಲ್ಲಿ ಮತಯಂತ್ರ.-** ಈ ಅಧಿನಿಯಮದಲ್ಲಿ ಅಥವಾ ಅದರ ಅಡಿಯಲ್ಲಿ ರಚಿಸಿರುವ ನಿಯಮಗಳಲ್ಲಿ ಏನೇ ಇದ್ದರೂ, ಮತಯಂತ್ರಗಳ ಮೂಲಕ ಮತಗಳನ್ನು ನೀಡುವುದನ್ನು ಅಥವಾ ದಾಖಲಿಸುವುದನ್ನು, ಪ್ರತಿಯೊಂದು ಪ್ರಕರಣದ ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಚುನಾವಣಾ ಆಯೋಗವು ನಿರ್ದಿಷ್ಟಪಡಿಸ ಬಹುದಾದಂಥ ಚುನಾವಣಾ ಕ್ಷೇತ್ರ ಅಥವಾ ಚುನಾವಣಾ ಕ್ಷೇತ್ರಗಳಲ್ಲಿ ಅಂಗೀಕರಿಸಬಹುದು.

ವಿವರಣೆ: ಈ ಪ್ರಕರಣದ ಉದ್ದೇಶಕ್ಕಾಗಿ 'ಮತಯಂತ್ರ' ಎಂದರೆ ವಿದ್ಯುನ್ಮಾನದ ಮೂಲಕವಾಗಲಿ ಅಥವಾ ಬೇರೆ ರೀತಿಯಲ್ಲಾಗಲೀ ನಡೆಸುವ, ಮತಗಳನ್ನು ನೀಡುವುದಕ್ಕೆ ಅಥವಾ ದಾಖಲಿಸುವುದಕ್ಕೆ ಬಳಸುವ, ಯಾವುದೇ ಯಂತ್ರ ಅಥವಾ ಉಪಕರಣ ಎಂದು ಅರ್ಥ ಮತ್ತು ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಚಿಸಿರುವ ನಿಯಮಗಳಲ್ಲಿ ಮತಪೆಟ್ಟಿಗೆ ಅಥವಾ ಮತಪತ್ರಕ್ಕೆ ಮಾಡಿರುವ ಯಾವುದೇ ಉಲ್ಲೇಖವು, ಅನ್ಯಥಾ ಉಪಬಂಧಿಸಿದುದನ್ನುಳಿದು, ಯಾವುದೇ ಚುನಾವಣೆಯಲ್ಲಿ ಅಂಥ ಮತಯಂತ್ರವನ್ನು ಎಲ್ಲೆಲ್ಲಿ ಬಳಸಲಾಗಿದೆಯೋ ಅಲ್ಲಿ ಅಂಥ ಮತಯಂತ್ರಕ್ಕೆ ಮಾಡಲಾಗಿರುವ ಉಲ್ಲೇಖವನ್ನು ಒಳಗೊಂಡಿರುವುದಾಗಿ ಅರ್ಥೈಸತಕ್ಕದ್ದು."

4. ನಿರಸನ ಮತ್ತು ಉಳಿಸುವಿಕೆಗಳು.– (1) ಕರ್ನಾಟಕ ಪೌರಸಭೆಗಳ ಕಾನೂನು ಹಾಗೂ ಇನ್ನೊಂದು ಕಾನೂನು (ತಿದ್ದುಪಡಿ) ಅಧ್ಯಾದೇಶ, 2009ನ್ನು (2009ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 1) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಂಡಿದಾಗ್ಯೂ, ಈ ಅಧ್ಯಾದೇಶದ ಮೂಲಕ ತಿದ್ದುಪಡಿಯಾದ ಮೂಲ ಅಧಿನಿಯಮದಡಿಯಲ್ಲಿ ಕೈಗೊಂಡ ಯಾವುದೇ ಕ್ರಮ ಅಥವಾ ಯಾವುದೇ ಕಾರ್ಯಗಳು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದ ಮೂಲ ಅಧಿನಿಯಮದಡಿಯಲ್ಲಿ ಕೈಗೊಳ್ಳಲಾಗಿದೆ ಅಥವಾ ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ರಾಜ್ಯ ಚುನಾವಣಾ ಆಯೋಗವು ನಗರ ಸ್ಥಳೀಯ ಸಂಸ್ಥೆಗಳಿಗೆ ನಡೆಸುವ ಚುನಾವಣೆಗಳಲ್ಲಿ ವಿದ್ಯುನ್ಮಾನ ಮತಯಂತ್ರಗಳನ್ನು ಬಳಸಲು ತೀರ್ಮಾನಿಸಿದೆ. ವಿದ್ಯುನ್ಮಾನ ಮತಯಂತ್ರಗಳನ್ನು ಬಳಸುವುದರಿಂದ ವೆಚ್ಚವು ಕಡಿಮೆಯಾಗುವುದಲ್ಲದೆ ಮತ ಎಣಿಕೆಯೂ ಸುಲಭವಾಗುತ್ತದೆ. ರಾಜ್ಯ ಚುನಾವಣಾ ಆಯೋಗವು ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 ಮತ್ತು ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976 ಇವುಗಳನ್ನು ಆ ಪರಿಣಾಮಕ್ಕೆ ತಿದ್ದುಪಡಿಗಳನ್ನು ಮಾಡುವಂತೆಯೂ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ವಿದ್ಯುನ್ಮಾನ ಯಂತ್ರಗಳನ್ನು ಬಳಸುವುದಕ್ಕೆ ಅನುಕೂಲ ಕಲ್ಪಿಸುವಂತೆ ಸೂಕ್ತ ಉಪಬಂಧಗಳನ್ನು ಸೇರಿಸುವಂತೆಯೂ ರಾಜ್ಯ ಸರ್ಕಾರವನ್ನು ಕೋರಿಕೊಂಡಿದೆ.

ಆದ್ದರಿಂದ, ರಾಜ್ಯ ಚುನಾವಣಾ ಆಯೋಗವು ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ವಿದ್ಯುನ್ಮಾನ ಯಂತ್ರಗಳನ್ನು ಬಳಸಿಕೊಳ್ಳಲು ಅನುಕೂಲವಾಗುವಂತೆ ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 ಮತ್ತು ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976 ಇವುಗಳನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಎರಡೂ ಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ ಕರ್ನಾಟಕ ರಾಜ್ಯಪಾಲರು ಕರ್ನಾಟಕ ಪೌರಸಭೆಗಳ ಕಾನೂನು ಹಾಗೂ ಇನ್ನೊಂದು ಕಾನೂನು (ತಿದ್ದುಪಡಿ) ಅಧ್ಯಾದೇಶ, 2009ನ್ನು (2009ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 1) ಪ್ರಖ್ಯಾಪಿಸಿರುತ್ತಾರೆ.

ಈ ವಿಧೇಯಕವನ್ನು ಸದರಿ ಅಧ್ಯಾದೇಶದ ಬದಲಾಗಿ ತರಲಾಗಿದೆ.

ಆದ್ದರಿಂದ ಈ ವಿಧೇಯಕ.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮಗಳ 80ನೇ ನಿಯಮದ (1)ನೇ ಉಪ ನಿಯಮದ ಅಡಿಯಲ್ಲಿ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ

ರಾಜ್ಯ ಚುನಾವಣಾ ಆಯೋಗವು ನಗರಸ್ಥಳೀಯ ಸಂಸ್ಥೆಗಳಿಗೆ ನಡೆಸುವ ಚುನಾವಣೆಗಳಲ್ಲಿ ವಿದ್ಯುನ್ಮಾನ ಮತಯಂತ್ರಗಳನ್ನು ಬಳಸಲು ತೀರ್ಮಾನಿಸಿದೆ. ವಿದ್ಯುನ್ಮಾನ ಮತಯಂತ್ರಗಳನ್ನು ಬಳಸುವುದರಿಂದ ವೆಚ್ಚವು ಕಡಿಮೆಯಾಗುವುದಲ್ಲದೆ ಮತ ಎಣಿಕೆಯೂ ಸುಲಭವಾಗುತ್ತದೆ. ರಾಜ್ಯ ಚುನಾವಣಾ ಆಯೋಗವು ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 ಮತ್ತು ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976 ಇವುಗಳನ್ನು ಆ ಪರಿಣಾಮಕ್ಕೆ ತಿದ್ದುಪಡಿಗಳನ್ನು ಮಾಡುವಂತೆಯೂ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ವಿದ್ಯುನ್ಮಾನ ಯಂತ್ರಗಳನ್ನು ಬಳಸುವುದಕ್ಕೆ ಅನುಕೂಲ ಕಲ್ಪಿಸುವಂತೆ ಸೂಕ್ತ ಉಪಬಂಧಗಳನ್ನು ಸೇರಿಸುವಂತೆಯೂ ರಾಜ್ಯ ಸರ್ಕಾರವನ್ನು ಕೋರಿಕೊಂಡಿದೆ.

ಆದ್ದರಿಂದ, ರಾಜ್ಯ ಚುನಾವಣಾ ಆಯೋಗವು ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ವಿದ್ಯುನ್ಮಾನ ಯಂತ್ರಗಳನ್ನು ಬಳಸಿಕೊಳ್ಳಲು ಅನುಕೂಲವಾಗುವಂತೆ ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 ಮತ್ತು ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976 ಇವುಗಳನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ವಿಷಯವು ತುರ್ತು ಸ್ವರೂಪದಾದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಎರಡೂ ಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ ಕರ್ನಾಟಕ ರಾಜ್ಯಪಾಲರು ಕರ್ನಾಟಕ ಪೌರಸಭೆಗಳ ಕಾನೂನು ಹಾಗೂ ಇನ್ನೊಂದು ಕಾನೂನು (ತಿದ್ದುಪಡಿ) ಅಧ್ಯಾದೇಶ, 2009ನ್ನು (2009ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 1) ಪ್ರಖ್ಯಾಪಿಸಿರುತ್ತಾರೆ.

ಆರ್ಥಿಕ ಜ್ಞಾಪನ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದಾಗಿ ಅಂದಾಜು ಹನ್ನೊಂದು ಕೋಟಿ ರೂಪಾಯಿಗಳಷ್ಟು ವೆಚ್ಚ ಉಂಟಾಗುತ್ತದೆ.

ಎಸ್. ಸುರೇಶ್ ಕುಮಾರ್
ನಗರಾಭಿವೃದ್ಧಿ, ಕಾನೂನು, ನ್ಯಾಯ,
ಮಾನವ ಹಕ್ಕುಗಳು ಮತ್ತು
ಸಂಸದೀಯ ವ್ಯವಹಾರಗಳ ಸಚಿವರು

ಎಸ್.ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಅನುಬಂಧ

ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ
(1964ರ ಕರ್ನಾಟಕ ಅಧಿನಿಯಮ 22)
ಉದ್ಧೃತ ಭಾಗಗಳು

XX XX XX

36. **ಮತಪತ್ರಗಳನ್ನು ಮತದಾನ ಕೇಂದ್ರದಿಂದ ತೆಗೆದುಕೊಂಡು ಹೋಗುವುದು ಅಪರಾಧವಾಗತಕ್ಕದ್ದು.**– (1) ಯಾವುದೇ ಚುನಾವಣೆಯಲ್ಲಿ ಯಾವನೇ ವ್ಯಕ್ತಿಯು ಮತದಾನ ಕೇಂದ್ರದಿಂದ ಹೊರಕ್ಕೆ ಮತಪತ್ರವನ್ನು ಮೋಸದಿಂದ ತೆಗೆದುಕೊಂಡು ಹೋದರೆ ಅಥವಾ ತೆಗೆದುಕೊಂಡು ಹೋಗಲು ಪ್ರಯತ್ನಿಸಿದರೆ ಅಥವಾ ಅಂಥ ಯಾವುದೇ ಕಾರ್ಯವನ್ನು ಮಾಡುವುದಕ್ಕೆ ಉದ್ದೇಶಪೂರ್ವಕವಾಗಿ ನೆರವು ನೀಡಿದರೆ ಅಥವಾ ದುಷ್ಪ್ರೇರೆಪಿಸಿದರೆ ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದಂಥ ಅವಧಿಯವರೆಗೆ ಕಾರಾವಾಸದಿಂದ ಅಥವಾ ಐದುನೂರು ·ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯವರೆಗೆ ಕಾರಾವಾಸದಿಂದ ಅಥವಾ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

XX XX XX

(3) ದಸ್ತಗಿರಿಯಾದ ವ್ಯಕ್ತಿಯ ಬಳಿ ಶೋಧನೆ ಮಾಡಿದಾಗ ಕಂಡುಬಂದ ಯಾವುದೇ ಮತಪತ್ರವನ್ನು ಅಧ್ಯಕ್ಷಾಧಿಕಾರಿಯು ಪೋಲೀಸ್ ಅಧಿಕಾರಿಗೆ ಸುರಕ್ಷಿತ ಅಭಿರಕ್ಷೆಗಾಗಿ ಒಪ್ಪಿಸತಕ್ಕದ್ದು ಅಥವಾ ಪೋಲೀಸ್ ಅಧಿಕಾರಿಯು ಶೋಧನೆಯನ್ನು ಮಾಡಿದಾಗ ಅದನ್ನು ಅಂಥ ಅಧಿಕಾರಿಯು ಸುರಕ್ಷಿತ ಅಭಿರಕ್ಷೆಯಲ್ಲಿ ಇಟ್ಟುಕೊಳ್ಳತಕ್ಕದ್ದು.

XX XX XX

37. **ಇತರ ಅಪರಾಧಗಳು ಮತ್ತು ಅವುಗಳಿಗಾಗಿ ದಂಡನೆಗಳು.**– (1) ಯಾವನೇ ವ್ಯಕ್ತಿಯು ಯಾವುದೇ ಚುನಾವಣೆಯಲ್ಲಿ–

(ಎ) XX XX XX

(ಸಿ) ಯಾವುದೇ ಮತಪತ್ರ ಅಥವಾ ಯಾವುದೇ ಮತಪತ್ರದ ಮೇಲಿನ ಅಧಿಕೃತ ಗುರುತನ್ನು ಮೋಸದಿಂದ ವಿರೂಪಗೊಳಿಸಿದರೆ ಅಥವಾ ಮೋಸದಿಂದ ನಾಶಪಡಿಸಿದರೆ; ಅಥವಾ

(ಡಿ) ಸೂಕ್ತ ಅಧಿಕಾರವಿಲ್ಲದೆ ಯಾವನೇ ವ್ಯಕ್ತಿಗೆ ಯಾವುದೇ ಮತಪತ್ರವನ್ನು ಒದಗಿಸಿದರೆ ಅಥವಾ ಯಾವನೇ ವ್ಯಕ್ತಿಯಿಂದ ಯಾವುದೇ ಮತಪತ್ರವನ್ನು ಸ್ವೀಕರಿಸಿದರೆ ಅಥವಾ ಯಾವುದೇ ಮತಪತ್ರವನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿದ್ದರೆ; ಅಥವಾ

XX XX XX

(ಎಫ್) ಯುಕ್ತ ಅಧಿಕಾರವಿಲ್ಲದೆ ಚುನಾವಣಾ ಉದ್ದೇಶಗಳಿಗಾಗಿ ಆಗ ಉಪಯೋಗದಲ್ಲಿರುವ ಯಾವುದೇ ಮತಪೆಟ್ಟಿಗೆ ಅಥವಾ ಮತಪತ್ರಗಳನ್ನು ನಾಶಗೊಳಿಸಿದರೆ, ತೆಗೆದುಕೊಂಡು ಹೋದರೆ, ತೆರೆದರೆ ಅಥವಾ ಅನ್ಯಥಾ ಹಸ್ತಕ್ಷೇಪ ಮಾಡಿದರೆ; ಅಥವಾ

XX XX XX

(3) ಈ ಪ್ರಕರಣದ ಉದ್ದೇಶಗಳಿಗಾಗಿ ವ್ಯಕ್ತಿಯು ಮತ ಏಣಿಕೆ ಗಳನ್ನು ಒಳಗೊಂಡಂತೆ ಚುನಾವಣೆ ಅಥವಾ ಚುನಾವಣೆಯ ಭಾಗವನ್ನು ನಡೆಸಲು ಪಾಲ್ಗೊಳ್ಳುವುದು ಅವನ ಕರ್ತವ್ಯವಾಗಿದ್ದರೆ ಅಥವಾ ಅಂಥ ಚುನಾವಣೆಗೆ ಸಂಬಂಧಪಟ್ಟಂತೆ ಉಪಯೋಗಿಸಲಾದ ಮತಪತ್ರಗಳು ಮತ್ತು ಇತರ ದಸ್ತಾವೇಜುಗಳಿಗೆ ಚುನಾವಣೆಯ ತರುವಾಯವೂ ಜವಾಬ್ದಾರನಾ ಗಿದ್ದರೆ ಅವನು ಸರ್ಕಾರಿ ಕರ್ತವ್ಯದ ಮೇಲೆ ಇರುವನೆಂದು ಭಾವಿಸತಕ್ಕದ್ದು. ಆದರೆ "ಸರ್ಕಾರಿ ಕರ್ತವ್ಯ" ಎಂಬ ಪದಾವಳಿಯು ಅಂಥ ಚುನಾವಣೆಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಮೂಲಕ ಅಥವಾ ಅಡಿಯಲ್ಲಿ ಅಲ್ಲದೆ ಅನ್ಯಥಾ ವಿಧಿಸಿದ ಯಾವುದೇ ಕರ್ತವ್ಯವನ್ನು ಒಳಗೊಳ್ಳತಕ್ಕದ್ದಲ್ಲ.

XX XX XX

38. ಚುನಾವಣೆಗಳ ನಿಯಂತ್ರಣ.– (1) ಮುನಿಸಿಪಲ್ ಕೌನ್ಸಿಲ್‌ಗಳ ಚುನಾವಣೆಗಾಗಿ ಮತ್ತು ಮತದಾರರ ಪಟ್ಟಿಯನ್ನು ತಯಾರಿಸಲು ಹಾಗೂ ಎಲ್ಲಾ ಚುನಾವಣೆಗಳನ್ನು ನಡೆಸುವ ಸಂಬಂಧದಲ್ಲಿಯ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣ ಅಧಿಕಾರವು ರಾಜ್ಯ ಚುನಾವಣಾ ಆಯೋಗದಲ್ಲಿ ನಿಹಿತವಾಗಿರತಕ್ಕದ್ದು.

XX XX XX

(2) XX XX XX

(ಜೆ) XX XX XX

(vi) ಮತಗಳನ್ನು ಕೊಡಬೇಕಾದ ಮತ್ತು ವಿಶೇಷವಾಗಿ ಅನಕ್ಷರಸ್ಥ ಮತದಾರರು ಅಥವಾ ದೈಹಿಕ ಅಥವಾ ಇತರ ಅಸಾಮರ್ಥ್ಯವಿರುವ ಮತದಾರರ ಸಂದರ್ಭದಲ್ಲಿ ಮತಕೊಡಬೇಕಾದ ರೀತಿ;

XX XX XX

38 ಎ. ಚುನಾವಣಾ ಅಧಿಕಾರಿ, ಮತದಾನದ ಅಧಿಕಾರಿ ಮುಂತಾದವರನ್ನು ರಾಜ್ಯ ಚುನಾವಣಾ ಆಯೋಗಕ್ಕೆ ನಿಯೋಜನೆಯ ಮೇಲೆ ಎಂದು ಭಾವಿಸತಕ್ಕದ್ದು.– ಈ ಅಧಿನಿಯಮದಲ್ಲಿ ಅಥವಾ ಪ್ರಸ್ತುತ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ ಈ ಅಧಿನಿಯಮದ ಅಡಿಯಲ್ಲಿ ಕೌನ್ಸಿಲರುಗಳ ಯಾವುದೇ ಚುನಾವಣೆಗಳನ್ನು ನಡೆಸುವುದಕ್ಕಾಗಿ ನೇಮಕಗೊಂಡ ಯಾವನೇ ಚುನಾವಣಾ ಅಧಿಕಾರಿ, ಸಹಾಯಕ ಚುನಾವಣಾ ಅಧಿಕಾರಿ, ಮತದಾನದ ಅಧಿಕಾರಿ, ಮತಗಟ್ಟೆ ಅಧಿಕಾರಿ ಮತ್ತು ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ನೇಮಕ ಮಾಡಲಾದ ಯಾವುದೇ ಅಧಿಕಾರಿ ಹಾಗೂ ಸರ್ಕಾರವು ಈ ಕಾರಣಕ್ಕಾಗಿ ಪದನಾಮಗೊಳಿಸಿದ ಯಾವನೇ ಪೊಲೀಸ್ ಅಧಿಕಾರಿಯು ಅಂಥ ಚುನಾವಣೆಯನ್ನು ನಡೆಸುವುದಕ್ಕಾಗಿ ಹೊರಡಿಸಿದ ಅಧಿಸೂಚನೆಯ ದಿನಾಂಕದಿಂದ ಪ್ರಾರಂಭಿಸಿ ಮತ್ತು ಅಂಥ ಚುನಾವಣೆಯ ಫಲಿತಾಂಶಗಳನ್ನು ಪ್ರಕಟಗೊಳಿಸುವ ದಿನಾಂಕದಂದು ಕೊನೆಗೊಳ್ಳುವ ಅವಧಿಯವರೆಗೆ ಅಂಥ ಅಧಿಕಾರಿಗಳು ಆ ಅವಧಿಯಲ್ಲಿ ರಾಜ್ಯ ಚುನಾವಣಾ ಆಯೋಗಕ್ಕೆ

ನಿಯೋಜನೆ ಮೇಲಿದ್ದಾರೆಂದು ಹಾಗೂ ಮೇಲ್ವಿಚಾರಣೆ ಮತ್ತು ಶಿಸ್ತಿನ ನಿಯಂತ್ರಣಕ್ಕೆ ಒಳಪಡುತ್ತಾರೆಂದು ಭಾವಿಸತಕ್ಕದ್ದು.

XX XX XX

ಕರ್ನಾಟಕ ಪೌರನಿಗಮಗಳ ಅಧಿನಿಯಮ, 1976
(1977ರ ಕರ್ನಾಟಕ ಅಧಿನಿಯಮ 14)ರ ಉದ್ಧೃತ ಭಾಗಗಳು

XX XX XX

52. **ಮತಪತ್ರಗಳನ್ನು, ಮತದಾನ ಕೇಂದ್ರದಿಂದ ತೆಗೆದುಕೊಂಡು ಹೋಗುವುದು ಅಪರಾಧವಾಗತಕ್ಕದ್ದು.**- (1) ಯಾವುದೇ ಚುನಾವಣೆಯಲ್ಲಿ ಯಾವನೇ ವ್ಯಕ್ತಿಯು ಮತದಾನ ಕೇಂದ್ರದಿಂದ ಹೊರಕ್ಕೆ ಮತಪತ್ರವನ್ನು ಮೋಸದಿಂದ ತೆಗೆದುಕೊಂಡು ಹೋದರೆ ಅಥವಾ ತೆಗೆದುಕೊಂಡು ಹೋಗಲು ಪ್ರಯತ್ನಿಸಿದರೆ ಅಥವಾ ಅಂಥ ಯಾವುದೇ ಕಾರ್ಯವನ್ನು ಮಾಡುವುದಕ್ಕೆ ಉದ್ದೇಶಪೂರ್ವಕವಾಗಿ ನೆರವಾದರೆ ಅಥವಾ ದುಷ್ಪ್ರೇರೆಪಿಸಿದರೆ, ಅವನು ಅಪರಾಧಿ ಎಂದು ನಿರ್ಣಿತನಾದ ಮೇಲೆ ಒಂದು ವರ್ಷದವರೆಗೆ ವಿಸ್ತರಿಸ ಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

XX XX XX

(3) ದಸ್ತಗಿರಿಯಾದ ವ್ಯಕ್ತಿಯ ಬಳಿ ಶೋಧನೆ ಮಾಡಿದಾಗ ಕಂಡುಬಂದ ಯಾವುದೇ ಮತಪತ್ರವನ್ನು ಅಧ್ಯಕ್ಷಾಧಿಕಾರಿಯು ಪೊಲೀಸ್ ಅಧಿಕಾರಿಗೆ ಸುರಕ್ಷಿತ ಅಭಿರಕ್ಷೆಗಾಗಿ ಒಪ್ಪಿಸತಕ್ಕದ್ದು ಅಥವಾ ಪೊಲೀಸ್ ಅಧಿಕಾರಿಯು ಶೋಧನೆಯನ್ನು ಮಾಡಿದಾಗ ಅದನ್ನು ಅಂಥ ಅಧಿಕಾರಿಯು ಸುರಕ್ಷಿತ ಅಭಿರಕ್ಷೆಯಲ್ಲಿ ಇಟ್ಟುಕೊಳ್ಳತಕ್ಕದ್ದು.

XX XX XX

53. **ಇತರ ಅಪರಾಧಗಳು ಮತ್ತು ಅವುಗಳಿಗಾಗಿ ದಂಡನೆಗಳು.**– (1) ಯಾವನೇ ವ್ಯಕ್ತಿಯು ಯಾವುದೇ ಚುನಾವಣೆಯಲ್ಲಿ–

XX XX XX

(ಸಿ) ಯಾವುದೇ ಮತಪತ್ರ ಅಥವಾ ಮತಪತ್ರದ ಮೇಲಿನ ಅಧಿಕೃತ ಗುರುತನ್ನು ಮೋಸದಿಂದ ವಿರೂಪಗೊಳಿಸಿದರೆ ಅಥವಾ ಮೋಸದಿಂದ ನಾಶಪಡಿಸಿದರೆ, ಅಥವಾ

(ಡಿ) ಸೂಕ್ತ ಅಧಿಕಾರವಿಲ್ಲದೆ ಯಾವನೇ ವ್ಯಕ್ತಿಗೆ ಯಾವುದೇ ಮತಪತ್ರವನ್ನು ಒದಗಿಸಿದರೆ ಅಥವಾ ಯಾವನೇ ವ್ಯಕ್ತಿಯಿಂದ ಯಾವುದೇ ಮತಪತ್ರವನ್ನು ಸ್ವೀಕರಿಸಿದರೆ ಅಥವಾ ಯಾವುದೇ ಮತಪತ್ರವನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿದ್ದರೆ ; ಅಥವಾ

XX XX XX

(ಎಫ್) ಯುಕ್ತ ಅಧಿಕಾರವಿಲ್ಲದೆ ಚುನಾವಣಾ ಉದ್ದೇಶಗಳಿಗಾಗಿ ಆಗ ಉಪಯೋಗದಲ್ಲಿರುವ ಯಾವುದೇ ಮತಪೆಟ್ಟಿಗೆ ಅಥವಾ ಮತಪತ್ರಗಳನ್ನು ನಾಶಗೊಳಿಸಿದರೆ, ತೆಗೆದುಕೊಂಡು ಹೋದರೆ, ತೆರೆದರೆ ಅಥವಾ ಅನ್ಯಥಾ ಹಸ್ತಕ್ಷೇಪ ಮಾಡಿದರೆ ; ಅಥವಾ

XX XX XX

– ಅವನು ಚುನಾವಣಾ ಅಪರಾಧದ ತಪ್ಪಿತಸ್ಥನಾಗತಕ್ಕದ್ದು.

55. **ಚುನಾವಣೆಗಳ ನಿಯಂತ್ರಣ ಮತ್ತು ಕೌನ್ಸಿಲರುಗಳ ಚುನಾವಣೆಗಳನ್ನು ನಿಯಂತ್ರಿಸುವ ನಿಯಮಗಳ ರಚನಾಧಿಕಾರ.**– (1) ಪೌರ ನಿಯಮಗಳ ಚುನಾವಣೆಗಾಗಿ ಮತ್ತು ಮತದಾರರ ಪಟ್ಟಿಯನ್ನು ತಯಾರಿಸಲು ಹಾಗೂ ಎಲ್ಲಾ ಚುನಾವಣೆಗಳನ್ನು ನಡೆಸುವ ಸಂಬಂಧದಲ್ಲಿಯ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣ ಅಧಿಕಾರವು ರಾಜ್ಯ ಚುನಾವಣಾ ಆಯೋಗದಲ್ಲಿ ನಿಹಿತವಾಗಿರತಕ್ಕದ್ದು.

XX XX XX

(2) (ಎ) XX XX XX

(ಹೆಚ್) (i) XX XX XX

(vi) ಮತಗಳನ್ನು ಕೊಡಬೇಕಾದ ಮತ್ತು ವಿಶೇಷವಾಗಿ ಅನಕ್ಷರಸ್ಥ ಮತದಾರರು ಅಥವಾ ದೈಹಿಕ ಅಥವಾ ಇತರ ಅಸಾಮರ್ಥ್ಯವಿರುವ ಮತದಾರರ ಸಂದರ್ಭದಲ್ಲಿ ಮತಕೊಡಬೇಕಾದ ರೀತಿ;

XX XX XX

ಅನುಬಂಧ – 4

ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನ ಸಭೆ
ಎರಡನೇ ಅಧಿವೇಶನ

ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕ, 2009
(2009ರ ವಿಧಾನಸಭೆಯ ವಿಧೇಯಕ ಸಂಖ್ಯೆ 9)

ಕೆಲವು ಅತ್ಯಾವಶ್ಯಕ ಸೇವೆಗಳ ನಿರ್ವಹಣೆಗಾಗಿ ಉಪಬಂಧ ಕಲ್ಪಿಸುವ ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ, ಕೆಲವು ಅತ್ಯಾವಶ್ಯಕ ಸೇವೆಗಳ ನಿರ್ವಹಣೆ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ ;

ಭಾರತ ಗಣರಾಜ್ಯದ ಐವತ್ತೊಂಬತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು :-

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ :- (1) ಈ ಅಧಿನಿಯಮವನ್ನು ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ಅಧಿನಿಯಮ, 2009 ಎಂದು ಕರೆಯತಕ್ಕದ್ದು.

(2) ಇದು, ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯಿಸತಕ್ಕದ್ದು.

(3) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು ಮತ್ತು ಹತ್ತು ವರ್ಷಗಳ ಅವಧಿಯವರೆಗೆ ಜಾರಿಯಲ್ಲಿ ಇರತಕ್ಕದ್ದು.

2. ಪರಿಭಾಷೆಗಳು .- (1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಅತ್ಯಾವಶ್ಯಕ ಸೇವೆ" ಎಂದರೆ,-

(i) ಜಲ ಅಥವಾ ಸಂದರ್ಭಾನುಸಾರವಾಗಿ ವಿದ್ಯುಚ್ಛಕ್ತಿಯ ಉತ್ಪಾದನೆ, ಶೇಖರಣೆ, ಸಾಗಣೆ, ಸರಬರಾಜು ಅಥವಾ ವಿತರಣೆಗೆ ಸಂಬಂಧಪಟ್ಟ ಯಾವುದೇ ಸೇವೆ ;

(ii) ಮೋಟಾರು ವಾಹನಗಳಲ್ಲಿ ಪ್ರಯಾಣಿಕರನ್ನು ಅಥವಾ ಸರಕುಗಳನ್ನು ಸಾಗಿಸುವುದಕ್ಕಾಗಿ ಇರುವ ಯಾವುದೇ ಸಾರಿಗೆ ಸೇವೆ.

ವಿವರಣೆ :– ಈ ಖಂಡದ ಉದ್ದೇಶಗಳಿಗಾಗಿ, 'ಮೋಟಾರು ವಾಹನ" ಎಂಬ ಪದಾವಳಿಯು, 1988ರ ಮೋಟಾರು ವಾಹನಗಳ ಅಧಿನಿಯಮದ (1988ರ ಕೇಂದ್ರ ಅಧಿನಿಯಮ 59) 2ನೇ ಪ್ರಕರಣದ (28)ನೇ ಖಂಡದಲ್ಲಿ ಅದಕ್ಕೆ ಕೊಟ್ಟ ಅರ್ಥವನ್ನೇ ಹೊಂದಿರತಕ್ಕದ್ದು.

(iii) ರಾಜ್ಯ ವಿಧಾನಮಂಡಲವು ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯಡಿಯಲ್ಲಿ ಯಾವುದರ ಸಂಬಂಧದಲ್ಲಿ ಕಾನೂನುಗಳನ್ನು ರಚಿಸಲು ಅಧಿಕಾರ ಹೊಂದಿದೆಯೋ ಆ ವಿಷಯಕ್ಕೆ ಸಂಬಂಧಿಸಿದಂತಹ ಮತ್ತು ಯಾವುದರಲ್ಲಿ ಕೆಲಸ ಮಾಡಲು ನಿರಾಕರಿಸಿದರೆ, ಯಾವುದೇ ಸಾರ್ವಜನಿಕ ಬಳಕೆ ಸೇವೆಗಳನ್ನು ಅಥವಾ ಸಾರ್ವಜನಿಕರ ಭದ್ರತೆಯನ್ನು ನಿರ್ವಹಿಸಿಕೊಂಡು ಬರುವುದಕ್ಕೆ ಅಥವಾ ಸಮುದಾಯದ ಜೀವನಕ್ಕೆ ಅವಶ್ಯವಾದ ಸರಬರಾಜುಗಳನ್ನು ಹಾಗೂ ಸೇವೆಯನ್ನು ನಿರ್ವಹಿಸಿಕೊಂಡು ಬರುವುದಕ್ಕೆ ತೊಂದರೆ ಉಂಟಾಗುತ್ತದೆ ಅಥವಾ ಸಮುದಾಯವನ್ನು ಬಹಳ ಕಷ್ಟಕ್ಕೆ ಈಡು ಮಾಡುತ್ತದೆ ಎಂದು ಸರ್ಕಾರವು ಅಭಿಪ್ರಾಯಪಡುತ್ತದೋ ಅಂಥ ಯಾವುದೇ ಇತರ ಸೇವೆ ಅಥವಾ ಉದ್ಯೋಗ ಅಥವಾ ಅವುಗಳ ಯಾವುದೇ ಒಂದು ವರ್ಗವನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ಅತ್ಯಾವಶ್ಯಕ ಸೇವೆ ಎಂದು ಅಧಿಸೂಚನೆಯ ಮೂಲಕ ಘೋಷಿಸಬಹುದು.

(ಬಿ) "ಸರ್ಕಾರ" ಎಂದರೆ ರಾಜ್ಯ ಸರ್ಕಾರ ;

(ಸಿ) ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಸಂಬಂಧಪಟ್ಟಂತೆ "ಕೆಲಸ ಮಾಡಲು ನಿರಾಕರಿಸುವುದು" ಎಂದರೆ, ಸಂಬಂಧಪಡುವ ಸೇವಾ ನಿಬಂಧನೆಗಳು ಮತ್ತು ಷರತ್ತುಗಳ ಅಡಿಯಲ್ಲಿ ಅನುಮತಿಯನ್ನು ನೀಡಲು

ಸಕ್ಷಮವಾದ ಪ್ರಾಧಿಕಾರಿಯಿಂದ ಅನುಮತಿಯನ್ನು ಪಡೆದುಕೊಳ್ಳದೇ, ಯಾವುದೇ ಕೆಲಸದ ದಿನದಂದು ಅಥವಾ ಯಾವುದೇ ಕೆಲಸದ ವೇಳೆಯಲ್ಲಿ ಕೆಲಸದ ಸ್ಥಳಕ್ಕೆ ಅವನು ಅಥವಾ ಅವರು ಹಾಜರಾಗಲು ತಪ್ಪುವುದು ಅಥವಾ ಗೈರು ಹಾಜರಾಗಿರುವುದು ಅಥವಾ ಯಾವುದೇ ಅತ್ಯಾವಶ್ಯಕ ಸೇವೆಯಲ್ಲಿ, ಯಾವುದೇ ಕೆಲಸದ ದಿನದಲ್ಲಿ ಅಥವಾ ಕೆಲಸದ ವೇಳೆಯಲ್ಲಿ ಕೆಲಸ ಮಾಡಲು ನಿರಾಕರಿಸುವುದು ಅಥವಾ ಕೆಲಸ ಮಾಡಲು ಒಪ್ಪದಿರುವುದು ಅಥವಾ ಕೆಲಸದ ನಿಲುಗಡೆಗೆ ಅಥವಾ ಕೆಲಸವು ಸಾಕಷ್ಟು ವಿಳಂಬಗತಿಯಲ್ಲಿ ನಡೆಯುವಂತೆ ಪರಿಣಾಮ ಬೀರುವ ಅಥವಾ ಪರಿಣಾಮ ಬೀರುವ ಸಂಭವವಿರುವಂಥ ಅವನ ಅಥವಾ ಅವರ ಯಾವುದೇ ಇತರ ವರ್ತನೆ ಮತ್ತು "ಕೆಲಸ ಮಾಡಲು ನಿರಾಕರಿಸುವುದು" ಎಂಬ ಪದಗಳನ್ನು ವ್ಯಾಕರಣ ವ್ಯತ್ಯಾಸಗಳು ಮತ್ತು ಸಂವಾದಿ ಪದಾವಳಿಗಳೊಂದಿಗೆ ತದನುಸಾರವಾಗಿ ಅರ್ಥೈಸತಕ್ಕದ್ದು.

(2) (ಎ) (1)ನೇ ಉಪ-ಪ್ರಕರಣದ (ಎ) ಖಂಡದ (ಋ)ನೇ ಉಪ-ಖಂಡದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಅಧಿಸೂಚನೆಯನ್ನು ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿದ್ದರೆ ಅದನ್ನು ಹೊರಡಿಸಿದ ತರುವಾಯದ ಒಂದು ವಾರದೊಳಗಾಗಿ ಮತ್ತು ಅದು ಅಧಿವೇಶನದಲ್ಲಿಲ್ಲದಿದ್ದರೆ ಸದನಗಳ ಮುಂದಿನ ಅಧಿವೇಶನ ಪ್ರಾರಂಭವಾದ ತರುವಾಯದ ಒಂದು ವಾರದೊಳಗಾಗಿ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಲಾದ ದಿನಾಂಕದಿಂದ ಅಥವಾ ಸಂದರ್ಭಾನುಸಾರ ರಾಜ್ಯ ವಿಧಾನಮಂಡಲದ ಮರು ಅಧಿವೇಶನದಿಂದ ಅರವತ್ತು ದಿನಗಳು ಮುಕ್ತಾಯವಾದ ತರುವಾಯ, ಆ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚಿತವಾಗಿ ಅಧಿಸೂಚನೆಯನ್ನು ಹೊರಡಿಸಿದುದನ್ನು ಅನುಮೋದಿಸಿ ಒಂದು ನಿರ್ಣಯವನ್ನು ರಾಜ್ಯ ವಿಧಾನ ಮಂಡಲದ ಉಭಯ ಸದನಗಳು ಅಂಗೀಕರಿಸಿದ ಹೊರತು, ಅದು ಕಾರ್ಯಾಚರಣೆಯಲ್ಲಿರುವುದು ನಿಂತುಹೋಗತಕ್ಕದ್ದು.

(ಬಿ) ಯಾವುದೇ ಅಧಿಸೂಚನೆಯು ಕಾರ್ಯಾಚರಣೆಯಲ್ಲಿರುವುದು ಈ ಉಪಪ್ರಕರಣದ ಮೂಲಕ ಅಥವಾ ಅದರಡಿಯಲ್ಲಿ ನಿಂತು ಹೋದರೆ, ಹಾಗೆ ನಿಂತು ಹೋಗುವುದಕ್ಕೆ ಮುಂಚೆ ಮಾಡಿದ ಅಥವಾ ಮಾಡುವುದನ್ನು ಬಿಟ್ಟುಬಿಡಲಾದ ಯಾವುದೇ ಕೃತ್ಯಕ್ಕೆ ಪ್ರತಿಕೂಲವಾಗಿರತಕ್ಕದ್ದಲ್ಲ.

ವಿವರಣೆ :- ರಾಜ್ಯ ವಿಧಾನಮಂಡಲದ ಉಭಯ ಸದನಗಳನ್ನು ಬೇರೆ ಬೇರೆ ದಿನಾಂಕಗಳಂದು ಮತ್ತೆ ಸಭೆ ಸೇರುವಂತೆ ಕರೆಯಲಾಗಿದ್ದರೆ ಆ ಅರವತ್ತು ದಿನಗಳ ಅವಧಿಯನ್ನು ಈ ದಿನಾಂಕಗಳಲ್ಲಿ ನಂತರದ ದಿನಾಂಕದಿಂದ ಲೆಕ್ಕ ಹಾಕತಕ್ಕದ್ದು.

3. ಕೆಲವು ಅತ್ಯಾವಶ್ಯಕ ಸೇವೆಗಳಲ್ಲಿ ಕೆಲಸ ಮಾಡಲು ನಿರಾಕರಿಸುವುದನ್ನು ನಿಷೇಧಿಸಲು ಅಧಿಕಾರ.- (1) ಸಾರ್ವಜನಿಕ ಹಿತಾಸಕ್ತಿಯ ಅಥವಾ ಸಾರ್ವಜನಿಕ ಸುವ್ಯವಸ್ಥೆಯ ದೃಷ್ಟಿಯಿಂದ ನಿರ್ದಿಷ್ಟಪಡಿಸ ಬಹುದಾದಂಥ ಅತ್ಯಾವಶ್ಯಕ ಸೇವೆಗಳಲ್ಲಿ ಕೆಲಸ ಮಾಡಲು ನಿರಾಕರಿಸುವುದನ್ನು ನಿಷೇಧಿಸುವುದು ಅವಶ್ಯವೆಂದು ಅಥವಾ ಯುಕ್ತವೆಂದು ಸರ್ಕಾರಕ್ಕೆ ಮನದಟ್ಟಾದರೆ, ಅದು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಮತ್ತು ಆದೇಶದಲ್ಲಿ ನಿರ್ದಿಷ್ಟ ಪಡಿಸಬಹುದಾದಂಥ ದಿನಾಂಕದಿಂದ ಹಾಗೆ ನಿಷೇಧಿಸಬಹುದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ಮಾಡಲಾದ ಆದೇಶವನ್ನು, ಆದೇಶದಿಂದ ಬಾಧಿತ ವ್ಯಕ್ತಿಗಳ ಗಮನಕ್ಕೆ ತರಲು ಸರ್ಕಾರವು, ತಾನು ಅತ್ಯಂತ ಅತಿ ಸೂಕ್ತವೆಂದು ಪರಿಗಣಿಸುವ ರೀತಿಯಲ್ಲಿ ಪ್ರಕಟಿಸತಕ್ಕದ್ದು.

(3) (1)ನೇ ಉಪ-ಪ್ರಕರಣದ ಅಡಿಯಲ್ಲಿ ಮಾಡಲಾದ ಆದೇಶವು ಅದು ಕಾರ್ಯಾಚರಣೆಯಲ್ಲಿ ಬರುವ ದಿನಾಂಕದಿಂದ ಒಂದು ವರ್ಷ ಮಾತ್ರ ಜಾರಿಯಲ್ಲಿರತಕ್ಕದ್ದು, ಆದರೆ ಸರ್ಕಾರವು, ಸಾರ್ವಜನಿಕ ಹಿತಾಸಕ್ತಿಯ ಅಥವಾ ಸಾರ್ವಜನಿಕ ಸುವ್ಯವಸ್ಥೆಯ ದೃಷ್ಟಿಯಿಂದ ಆರು ತಿಂಗಳಿಗೆ ಮೀರದ ಯಾವುದೇ ಅವಧಿಗೆ ಅದನ್ನು ವಿಸ್ತರಿಸುವುದು ಅಗತ್ಯ ಅಥವಾ ಯುಕ್ತವೆಂದು ಭಾವಿಸಿದರೆ ಅದೇ ಬಗೆಯ ಆದೇಶದ ಮೂಲಕ ಅದೇ ರೀತಿಯಲ್ಲಿ ಪ್ರಕಟಿಸಿ ಹಾಗೆ ಮಾಡಬಹುದು.

(4) (1)ನೇ ಉಪ-ಪ್ರಕರಣದಡಿಯಲ್ಲಿ ಒಂದು ಆದೇಶವನ್ನು ಹೊರಡಿಸಿದ ನಂತರ,-

(ಎ) ಆದೇಶವು ಸಂಬಂಧಪಡುವ ಯಾವುದೇ ಅತ್ಯಾವಶ್ಯಕ ಸೇವೆಯಲ್ಲಿ ನಿಯೋಜಿತನಾದ ಯಾವೊಬ್ಬ ವ್ಯಕ್ತಿಯು ಕೆಲಸ ಮಾಡಲು ನಿರಾಕರಿಸತಕ್ಕದ್ದಲ್ಲ ಅಥವಾ ಕೆಲಸ ಮಾಡಲು ನಿರಾಕರಿಸುವುದನ್ನು ಮುಂದುವರಿಸತಕ್ಕದ್ದಲ್ಲ.

(ಬಿ) ಯಾವುದೇ ಅಂಥ ಸೇವೆಯಲ್ಲಿ ನಿಯೋಜಿತನಾಗಿರುವ ಯಾವೊಬ್ಬ ವ್ಯಕ್ತಿಯು, ಆದೇಶವನ್ನು ಹೊರಡಿಸಲಾದ ದಿನಾಂಕಕ್ಕೆ ಮೊದಲು ಅಥವಾ ತರುವಾಯ ಕೆಲಸ ಮಾಡಲು ನಿರಾಕರಿಸಿರುವುದಾಗಿ ಘೋಷಿಸುವುದು ಅಥವಾ ನಿರಾಕರಣೆಯನ್ನು ಆರಂಭಿಸುವುದು ಅಥವಾ ಮುಂದುವರಿಸುವುದು ಕಾನೂನು ಬಾಹಿರವಾಗಿರತಕ್ಕದ್ದು.

(5) (1)ನೇ ಉಪ–ಪ್ರಕರಣ ಅಥವಾ (3) ನೇ ಉಪ–ಪ್ರಕರಣದ ಅಡಿಯಲ್ಲಿ ಮಾಡಲಾದ ಯಾವುದೇ ಆದೇಶವನ್ನು, ಯಾವುದೇ ಸಮಯದಲ್ಲಿ, ಸರ್ಕಾರವು ಅದೇ ಬಗೆಯ ಆದೇಶದ ಮೂಲಕ ಹಿಂತೆಗೆದುಕೊಳ್ಳಬಹುದು. ಆದರೆ, ಹಾಗೆ ಹಿಂತೆಗೆದುಕೊಂಡದ್ದರಿಂದ, ಅಂಥ ಆದೇಶದ ಹಿಂದಿನ ಕಾರ್ಯಾಚರಣೆಗೆ ಅಥವಾ ಅದರಡಿಯಲ್ಲಿ ಕ್ರಮಬದ್ಧವಾಗಿ ಮಾಡಲಾದ ಅಥವಾ ಮಾಡಲು ಎಡೆಗೊಟ್ಟ ಯಾವುದೇ ಕೃತ್ಯಕ್ಕೆ ಮತ್ತು ಪ್ರಾಪ್ತವಾದ ಅಥವಾ ಗುರಿಯಾದ ಯಾವುದೇ, ಬಾಧ್ಯ ಅಥವಾ ಹೊಣೆಗಾರಿಕೆಗೆ ಪರಿಣಾಮ ಬೀರತಕ್ಕದ್ದಲ್ಲ ಅಥವಾ ಹಾಗೆ ಹಿಂತೆಗೆದುಕೊಂಡುದುದಕ್ಕೆ ಮುಂಚೆ ಈ ಅಧಿನಿಯಮಕ್ಕೆ ವಿರುದ್ಧವಾಗಿ ಮಾಡಲಾಗಿದ್ದ ಯಾವುದೇ ಅಪರಾಧಕ್ಕೆ ಸಂಬಂಧಪಟ್ಟಂತೆ ಗುರಿಯಾದ ಯಾವುದೇ ದಂಡ ಅಥವಾ ಶಿಕ್ಷೆಗೆ ಭಾದಕವಾಗತಕ್ಕದ್ದಲ್ಲ.

4. **ಕೆಲಸ ಮಾಡಲು ಮಾಡುವ ಕಾನೂನುಬಾಹಿರ ನಿರಾಕರಣೆಗೆ ದಂಡ.**– ಯಾವೊಬ್ಬ ವ್ಯಕ್ತಿಯು, ಯಥೋಚಿತ ಕಾರಣವಿಲ್ಲದೆ, ಯಾವುದೇ ಅತ್ಯಾವಶ್ಯಕ ಸೇವೆಯಲ್ಲಿ ಕೆಲಸ ಮಾಡಲು ನಿರಾಕರಿಸಿದರೆ ಅಥವಾ ನಿರಾಕರಿಸುವುದನ್ನು ಮುಂದುವರಿಸಿದರೆ, ಅಂಥ ನಿರಾಕರಣೆಯು ಈ ಅಧಿನಿಯಮದ ಅಡಿಯಲ್ಲಿ ಕಾನೂನು ಬಾಹಿರವಾಗುವುದರಿಂದ ಅವನು, ಅಪರಾಧ ನಿರ್ಣಯವಾದ ಮೇಲೆ, ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

5. **ಪ್ರಚೋದನೆ ಇತ್ಯಾದಿಗೆ ದಂಡ.**– ಯಾವೊಬ್ಬ ವ್ಯಕ್ತಿಯು, ಯಾವುದೇ ಅತ್ಯಾವಶ್ಯಕ ಸೇವೆಯಲ್ಲಿ ಕೆಲಸ ಮಾಡಲು ನಿರಾಕರಿಸೆಂದು ಯಾವೊಬ್ಬ ಇತರ ವ್ಯಕ್ತಿಯನ್ನು ಪ್ರಚೋದಿಸಿದರೆ ಅಥವಾ ಪ್ರೇರೇಪಿಸಿದರೆ ಅಥವಾ ಇತರ ರೀತಿಯಿಂದ ನಿರಾಕರಿಸುವುದನ್ನು ಮುಂದುವರಿಸುವುದಕ್ಕೆ

ಪ್ರೋತ್ಸಾಹಕರವಾಗಿ ವರ್ತಿಸಿದರೆ, ಹಾಗೆ ನಿರಾಕರಿಸುವುದು ಈ ಅಧಿನಿಯಮದ ಅಡಿಯಲ್ಲಿ ಕಾನೂನು ಬಾಹಿರವಾಗುವುದರಿಂದ ಅವನು, ಅಪರಾಧ ನಿರ್ಣಯವಾದ ಮೇಲೆ ಒಂದು ವರ್ಷದ ಅವಧಿಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

6. **ಕೆಲಸ ಮಾಡಲು ಕಾನೂನು ಬಾಹಿರ ನಿರಾಕರಣೆಗೆ ಹಣಕಾಸು ನೆರವು ನೀಡಿದ್ದಕ್ಕಾಗಿ ದಂಡ.**– ಯಾವುದೇ ಅತ್ಯಾವಶ್ಯಕ ಸೇವೆಗಳಲ್ಲಿ ಕೆಲಸ ಮಾಡಲು ನಿರಾಕರಿಸುವುದಕ್ಕೆ ಪ್ರೋತ್ಸಾಹಕರವಾಗಿ ಅಥವಾ ಅದಕ್ಕೆ ಬೆಂಬಲ ನೀಡಲು ಯಾವೊಬ್ಬ ವ್ಯಕ್ತಿಯು, ತಿಳಿದೂ ತಿಳಿದೂ ಯಾವುದೇ ಹಣ ವೆಚ್ಚ ಮಾಡಿದಲ್ಲಿ ಅಥವಾ ಸರಬರಾಜು ಮಾಡಿದಲ್ಲಿ ಅಂಥ ನಿರಾಕರಣೆಯು ಈ ಅಧಿನಿಯಮದ ಅಡಿಯಲ್ಲಿ ಕಾನೂನು ಬಾಹಿರವಾಗಿರುವ ಕಾರಣ ಅಪರಾಧ ನಿರ್ಣಯವಾದ ಮೇಲೆ ಅಂಥ ಕೃತ್ಯಕ್ಕಾಗಿ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆ ಅಥವಾ ಐದು ಸಾವಿರ ರೂಪಾಯಿ ಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

7. **ಇತರ ಶಿಸ್ತು ಕ್ರಮಗಳ ಜೊತೆಗೆ 4,5 ಅಥವಾ 6ನೇ ಪ್ರಕರಣದ ಅಡಿಯಲ್ಲಿ ಕ್ರಮ ಕೈಗೊಳ್ಳುವುದು.**– 4,5 ಅಥವಾ 6ನೇ ಪ್ರಕರಣದ ಅಡಿಯಲ್ಲಿ ಯಾವೊಬ್ಬ ವ್ಯಕ್ತಿಯ ವಿರುದ್ಧ ಕೈಗೊಳ್ಳಲಾದ ಯಾವುದೇ ಕ್ರಮವು ಅವನ ಸೇವಾ ಅಥವಾ ಉದ್ಯೋಗದ ನಿಬಂಧನೆಗಳು ಮತ್ತು ಷರತ್ತುಗಳ ಮೂಲಕ ಅಥವಾ ಅದರ ಅಡಿಯಲ್ಲಿನ ಮತ್ತು ಅವನು ಯಾವುದಕ್ಕೆ ಬದ್ಧನಾಗಬಹುದೋ ಅಂಥ ಶಿಸ್ತು ಸ್ವರೂಪದ ಯಾವುದೇ ಇತರ ಕ್ರಮವನ್ನು ಅಥವಾ ಮುಂದೆ ಉಂಟಾಗಬಹುದಾದ ಯಾವುದೇ ಪರಿಣಾಮವನ್ನು ಬಾಧಿಸತಕ್ಕದ್ದಲ್ಲ ಮತ್ತು ಅದು ಅದಕ್ಕೆ ಹೆಚ್ಚುವರಿಯಾಗತಕ್ಕದ್ದು.

8. **ವಾರಂಟಿಲ್ಲದೆ ದಸ್ತಗಿರಿ ಮಾಡಲು ಅಧಿಕಾರ.**– 1973 ರ ದಂಡ ಪ್ರಕ್ರಿಯಾ ಸಂಹಿತೆಯಲ್ಲಿ (1947ರ ಕೇಂದ್ರ ಅಧಿನಿಯಮ ಸಂಖ್ಯೆ 2) ಏನೇ ಇದ್ದರೂ, ಯಾವೊಬ್ಬ ಪೋಲೀಸ್ ಅಧಿಕಾರಿಯು ಯಾವೊಬ್ಬ ವ್ಯಕ್ತಿಯು ಈ ಅಧಿನಿಯಮದ ವಿರುದ್ಧ ಯಾವುದೇ ಅಪರಾಧ ಮಾಡಿರುವನೆಂದು

ಸಕಾರಣವಾಗಿ ಸಂಶಯಪಟ್ಟಲ್ಲಿ ಅವನನ್ನು ವಾರಂಟಿಲ್ಲದೆ ದಸ್ತಗಿರಿ ಮಾಡಬಹುದು.

9. ಅಧಿನಿಯಮವು ಇತರ ಕಾನೂನುಗಳ ಮೇಲೆ ಹೆಚ್ಚಿನ ಪರಿಣಾಮ ಹೊಂದಿರುವುದು.– ಈ ಅಧಿನಿಯಮದ ಉಪಬಂಧಗಳು ಮತ್ತು ಅದರ ಅಡಿಯಲ್ಲಿ ಹೊರಡಿಸಿದ ಯಾವುದೇ ಆದೇಶವು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅದಕ್ಕೆ ಅಸಂಗತ ವಾಗಿರುವ ಯಾವುದೇ ವಿಷಯವನ್ನು ಒಳಗೊಂಡಿದ್ದರೂ ಪರಿಣಾಮಕಾರಿ ಯಾಗಿರತಕ್ಕದ್ದು."

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಜಲ ಅಥವಾ ವಿದ್ಯುಚ್ಛಕ್ತಿಗೆ ಸಂಬಂಧಪಟ್ಟಂತೆ ಉತ್ಪಾದನೆ, ಶೇಖರಣೆ, ಸಾಗಣಿಕೆ, ಪೂರೈಕೆ ಅಥವಾ ವಿತರಣೆಗೆ ಸಂಬಂಧಿಸಿದಂತೆ ಹಾಗೂ ಮೋಟಾರು ವಾಹನಗಳಲ್ಲಿ ಪ್ರಯಾಣಿಕರನ್ನು ಅಥವಾ ಸರಕುಗಳನ್ನು ಸಾಗಿಸುವುದಕ್ಕಾಗಿ ಇರುವ ಸಾರಿಗೆ ಸೇವೆಗೆ ಸಂಬಂಧಿಸಿದಂತೆ ಮತ್ತು ರಾಜ್ಯ ವಿಧಾನ ಮಂಡಲವು ಕಾನೂನುಗಳನ್ನು ರಚಿಸಲು ಅಧಿಕಾರ ಹೊಂದಿರುವಂಥ ಯಾವುದೇ ಇತರ ಸೇವೆ ಅಥವಾ ಉದ್ಯೋಗ ಅಥವಾ ಅದರ ವರ್ಗಕ್ಕೆ ಸಂಬಂಧಿಸಿದಂತೆ ಕೆಲವು ಅತ್ಯಾವಶ್ಯಕ ಸೇವೆಗಳಲ್ಲಿ ಕೆಲಸ ಮಾಡುವುದನ್ನು ನಿರಾಕರಿಸುವುದನ್ನು ನಿಷೇಧಿಸುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ತಿದ್ದುಪಡಿಯಿಂದಾಗಿ ಯಾವುದೇ ಆರ್ಥಿಕ ಪರಿಣಾಮ ಉಂಟಾಗುವುದಿಲ್ಲ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರಕ್ಕೆ ಸಂಬಂಧಿಸಿದ ಜ್ಞಾಪನಪತ್ರ

ಖಂಡ 2: 2ನೇ ಖಂಡದ (1)ನೇ ಉಪಕಂಡದ (ಎ) ಬಾಬಿನ (iii)ನೇ ಉಪಬಾಬು, ಈ ಅಧಿನಿಯಮದ ಉದ್ದೇಶಕ್ಕಾಗಿ ಯಾವ ಯಾವ ಸೇವೆಗಳು ಅತ್ಯಾವಶ್ಯಕ ಸೇವೆಗಳೆಂದು ಅಧಿಸೂಚನೆಯ ಮೂಲಕ ಘೋಷಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಖಂಡ 3: 3ನೇ ಖಂಡದ (1)ನೇ ಉಪಖಂಡವು, ಸೇವೆಗಳನ್ನು ಅತ್ಯಾವಶ್ಯಕವೆಂದು ನಿರ್ದಿಷ್ಟಪಡಿಸಲು ಮತ್ತು ಅವುಗಳಲ್ಲಿ ಕೆಲಸ ಮಾಡಲು ಯಾವ ದಿನಾಂಕದಿಂದ ನಿರಾಕರಿಸ ಕೂಡದೆಂದು ನಿರ್ದಿಷ್ಟಪಡಿಸಿ ಆದೇಶದಲ್ಲಿ ನಿಷೇಧಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರವು ವಾಡಿಕೆಯ ಸ್ವರೂಪದ್ದಾಗಿದೆ.

ವಿ.ಎಸ್.ಆಚಾರ್ಯ
ಗೃಹ ಸಚಿವರು

ಎಸ್.ಬಿ.ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ.

ಅನುಬಂಧ – 5

ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನಸಭೆ
ಎರಡನೇ ಅಧಿವೇಶನ

ಭಾರತ ದಂಡ ಸಂಹಿತೆ ಮತ್ತು ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ, 2009
(2009ರ ವಿಧಾನಸಭೆಯ ವಿಧೇಯಕ ಸಂಖ್ಯೆ 6)

ಭಾರತ ದಂಡ ಸಂಹಿತೆ ಮತ್ತು ದಂಡ ಪ್ರಕ್ರಿಯಾ ಸಂಹಿತೆ, 1973 ನ್ನು ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಲ್ಲಿ ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಭಾರತ ದಂಡ ಸಂಹಿತೆ (1860ರ ಕೇಂದ್ರ ಅಧಿನಿಯಮ 45) ಮತ್ತು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ ಕೇಂದ್ರ ಅಧಿನಿಯಮ 2) ಇವುಗಳನ್ನು ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಲ್ಲಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಐವತ್ತೊಂಬತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಭಾರತ ದಂಡ ಸಂಹಿತೆ ಮತ್ತು ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ಅಧಿನಿಯಮ, 2009 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 1860ರ ಕೇಂದ್ರ ಅಧಿನಿಯಮ 45ರ ತಿದ್ದುಪಡಿ.– ಭಾರತ ದಂಡ ಸಂಹಿತೆಯ (1860ರ ಕೇಂದ್ರ ಅಧಿನಿಯಮ 45), 441ನೇ ಪ್ರಕರಣಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"**441. ಅಪರಾಧಿಕ ಅತಿಕ್ರಮಣ.–** ಯಾವೊಬ್ಬ ವ್ಯಕ್ತಿಯು ಮತ್ತೊಬ್ಬನ ಸ್ವಾಧೀನದಲ್ಲಿರುವ ಸ್ವತ್ತಿನೊಳಕ್ಕೆ ಅಥವಾ ಅದರ ಮೇಲೆ, ಅಪರಾಧ ಮಾಡುವ ಉದ್ದೇಶದಿಂದ ಅಥವಾ ಅಂಥ ಸ್ವತ್ತಿನ ಸ್ವಾಧೀನವನ್ನು ಹೊಂದಿರುವ ಯಾವೊಬ್ಬ ವ್ಯಕ್ತಿಯನ್ನು ಹೆದರಿಸುವ, ಅವಮಾನಗೊಳಿಸುವ ಅಥವಾ ಅವನಿಗೆ ಕಿರುಕುಳ ಕೊಡುವ ಉದ್ದೇಶದಿಂದ ಪ್ರವೇಶಿಸಿದರೆ ಅಥವಾ ಅಂಥ ಸ್ವತ್ತಿನೊಳಗೆ ಅಥವಾ ಅದರ ಮೇಲೆ ಕಾನೂನುಬದ್ಧವಾಗಿ ಪ್ರವೇಶಿಸಿ, ಕಾನೂನುಬಾಹಿರವಾಗಿ ಅಂಥ ಯಾವೊಬ್ಬ ವ್ಯಕ್ತಿಗೆ ಹೆದರಿಸುವ, ಅವಮಾನಗೊಳಿಸುವ ಅಥವಾ ಕಿರುಕುಳ ಕೊಡುವ ಉದ್ದೇಶದಿಂದ ಅಥವಾ ಒಂದು ಅಪರಾಧವನ್ನು ಮಾಡುವ ಉದ್ದೇಶದಿಂದ ಅದರಲ್ಲಿಯೇ ಉಳಿದರೆ;

ಅಥವಾ ಭಾರತ ದಂಡ ಸಂಹಿತೆ ಮತ್ತು ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ಅಧಿನಿಯಮ, 2009 ಜಾರಿಗೆ ಬರುವ ಪೂರ್ವದಲ್ಲಿ ಅಥವಾ ತರುವಾಯದಲ್ಲಿ, ಅಂಥ ಸ್ವತ್ತಿನೊಳಗೆ ಅಥವಾ ಅದರ ಮೇಲೆ, ಅಂಥ ಸ್ವತ್ತಿನ ಸ್ವಾಧೀನವನ್ನು ಅನಧಿಕೃತವಾಗಿ ತೆಗೆದುಕೊಳ್ಳುವ ಅಥವಾ ಅಂಥ ಸ್ವತ್ತಿನಿಂದ ಅನಧಿಕೃತ ಪ್ರಯೋಜನ ಪಡೆಯುವ ಉದ್ದೇಶದಿಂದ ಪ್ರವೇಶಿಸಿ, ಆ ಇನ್ನೊಬ್ಬ ವ್ಯಕ್ತಿಯು ಆತನಿಗೆ ಯುಕ್ತವಾದ ಲಿಖಿತ ನೋಟೀಸನ್ನು ನೀಡಿ ಅದರಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದೊಳಗೆ ಅಂಥ ಸ್ವತ್ತಿನಿಂದ ಹೊರಗೆಹೋಗುವಂತೆ ಅಥವಾ ಅದರ ಸ್ವಾಧೀನವನ್ನು ಅಥವಾ ಬಳಕೆಯನ್ನು ಬಿಟ್ಟುಕೊಡುವಂತೆ ಕೇಳಿದಾಗ ಹಾಗೆ ಮಾಡಲು ತಪ್ಪಿದರೆ, ಅವನು ಆಪರಾಧಿಕ ಅತಿಕ್ರಮಣ ಮಾಡಿದ್ದಾನೆ ಎಂದು ಹೇಳಲಾಗುತ್ತದೆ."

3. 1974ರ ಕೇಂದ್ರ ಅಧಿನಿಯಮ 2ರ ತಿದ್ದುಪಡಿ.– ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ ಕೇಂದ್ರ ಅಧಿನಿಯಮ 2), ಮೊದಲನೇ ಅನುಸೂಚಿಯಲ್ಲಿ, 447ನೇ ಪ್ರಕರಣದಲ್ಲಿ, (5)ನೇ ಅಂಕಣದಲ್ಲಿ " ಜಾಮೀನೀಯ " ಎಂಬ ಪದಕ್ಕೆ " ಜಾಮೀನೀಯವಲ್ಲದ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ: 2004ರ 4064ರ ಶ್ರೀ ಎಸ್. ಡಿ. ಬಂಡಿ ವಿರುದ್ಧ ವಿಭಾಗೀಯ ಸಾರಿಗೆ ಅಧಿಕಾರಿ, ಕ.ರಾ.ರ.ಸಾ.ನಿ ಮತ್ತು ಇತರರು ಪ್ರಕರಣದಲ್ಲಿ ಈ ಮುಂದಿನ ನಿರ್ದೇಶನಗಳನ್ನು ನೀಡಿದೆ, ಎಂದರೆ:-

"11. ಸರ್ಕಾರಿ ಮನೆಗಳು ಮತ್ತು ಆವರಣಗಳ ಹಂಚಿಕೆಗಾಗಿ ವರ್ಷಾನುಗಟ್ಟಲೆ ಕಾಯುತ್ತಿರುವ ಬಹಳಷ್ಟು ಸರ್ಕಾರಿ ನೌಕರರ ಹಿತಾಸಕ್ತಿಗೆ ಬಾಧಕವಾಗುವ ಹಾಗೆ ಮತ್ತು ನಾಗರಿಕ ಸಮಾಜದಲ್ಲಿ ಜಾರಿಯಲ್ಲಿರುವ ಎಲ್ಲಾ ನಿಯಮಗಳನ್ನು ರಾಜಾರೋಷವಾಗಿ ಉಲ್ಲಂಘಿಸಿ ರಾಷ್ಟ್ರದ ಬಹುಪಾಲು ಎಲ್ಲಾ ಭಾಗಗಳಲ್ಲೂ ಸರ್ಕಾರಿ ಮನೆಗಳಲ್ಲಿ, ಆವರಣಗಳಲ್ಲಿ, ಅನಧಿಕೃತವಾಗಿ ವಾಸಿಸುತ್ತಿರುವ ಪ್ರಕರಣಗಳು ನಾಯಿಕೊಡೆಯಂತೆ ಬೆಳೆಯುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು, ಉತ್ತರ ಪ್ರದೇಶ ಅಥವಾ ಒರಿಸ್ಸಾ ರಾಜ್ಯಗಳಲ್ಲಿ ಮಾಡಿರುವಂತೆಯೇ ಭಾರತ ದಂಡ ಸಂಹಿತೆ 441ನೇ ಪ್ರಕರಣಕ್ಕೆ ತಿದ್ದುಪಡಿಯನ್ನು ಮಾಡುವುದರ ಅಪೇಕ್ಷಣೀಯತೆಯನ್ನು ಭಾರತದ ಎಲ್ಲಾ ಇತರ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳು ಪರಿಗಣಿಸುವುದಕ್ಕೆ ಇದು ಸೂಕ್ತ ಸಮಯ ಎಂದು ನಾವು ಭಾವಿಸುತ್ತೇವೆ. ಸರ್ಕಾರಿ ನೌಕರರು ಸರ್ಕಾರಿ ಮನೆ ಮತ್ತು ಆವರಣಗಳನ್ನು ಖಾಲಿ ಮಾಡಬೇಕೆಂದು ಅವರಿಗೆ ನೋಟೀಸನ್ನು ಜಾರಿ ಮಾಡಿದ ಮೇಲೂ ಅವರು ಖಾಲಿ ಮಾಡದೇ ಮುಂದುವರೆದ ಸಂದರ್ಭಕ್ಕೆ ಸಂಬಂಧಪಡುವಷ್ಟು 441 ಐಪಿಸಿ ಪ್ರಕರಣದ ಅಡಿಯಲ್ಲಿನ ಅಪರಾಧವನ್ನು ಜಾಮೀನೀಯವಲ್ಲವೆಂದು ಮಾಡುವುದಕ್ಕೆ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ ಮೊದಲನೆಯ ಅನುಸೂಚಿಗೆ ತಿದ್ದುಪಡಿ ತರುವುದರ ಅಪೇಕ್ಷಣೀಯತೆಯನ್ನು ಸಹಾ ಅವರು ಪರಿಗಣಿಸಬೇಕು. ನಿಗದಿಪಡಿಸಿದ ಮುಂದಿನ ದಿನಾಂಕಕ್ಕಿಂತ ಮುಂಚೆ ಈ ಬಗ್ಗೆ ಇತರ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳು ಸ್ಪಂದಿಸಬೇಕೆಂದು ನಾವು ನಿರ್ದೇಶನ ನೀಡುತ್ತೇವೆ."

ಈ ಮೇಲಿನ ನಿರ್ದೇಶನಗಳ ಪಾಲನೆಯ ಕ್ರಮವಾಗಿ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಲ್ಲಿ ಭಾರತ ದಂಡ ಸಂಹಿತೆಯ 441ನೇ ಪ್ರಕರಣಕ್ಕೆ ಹೊಸ ಪ್ರಕರಣವನ್ನು ಪ್ರತಿಯೋಜಿಸುವುದು ಮತ್ತು ದಂಡ ಪ್ರಕ್ರಿಯಾ ಸಂಹಿತೆ, 1973 ರ (1974ರ ಕೇಂದ್ರ ಅಧಿನಿಯಮ 2) ಮೊದಲನೇ

ಅನುಸೂಚಿಯಲ್ಲಿ ಭಾರತ ದಂಡ ಸಂಹಿತೆಯ 447ನೇ ಪ್ರಕರಣಕ್ಕೆ ಸಂಬಂಧಿಸಿದ ನಮೂದುಗಳಲ್ಲಿ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ಹೊಸ ನಮೂದನ್ನು ಪ್ರತಿಯೋಜಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಸರ್ಕಾರಿ ವಸತಿಗೃಹಗಳಲ್ಲಿ ಅನಧಿಕೃತವಾಗಿ ವಾಸ ಮಾಡುತ್ತಿರುವ ಅಧಿಕಾರಿಗಳ/ನೌಕರರ ವಿರುದ್ಧ ಕ್ರಮ ತೆಗೆದುಕೊಳ್ಳುವುದನ್ನು ಉಪಬಂಧಿಸ ಬೇಕೆಂದು ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ: 4064/2004ರಲ್ಲಿ ನೀಡಿದ ತೀರ್ಪಿನ ಪಾಲನೆ ಮಾಡಿರುವ ಭಾರತ ದಂಡ ಸಂಹಿತೆಯ 441 ನೇ ಪ್ರಕರಣದ ಈ ಪ್ರಸ್ತಾವಿತ ತಿದ್ದುಪಡಿಯಿಂದ ಯಾವ ವೆಚ್ಚವೂ ಆಗುವುದಿಲ್ಲ.

ಡಾ ವಿ.ಎಸ್. ಆಚಾರ್ಯ
ಗೃಹ ಸಚಿವರು

ಎಸ್. ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಅನುಬಂಧ

ಭಾರತ ದಂಡ ಸಂಹಿತೆಯ (1860ರ ಕೇಂದ್ರ ಅಧಿನಿಯಮ 45) ಉದ್ಧೃತ ಭಾಗ

xx xx xx

441. ಅಪರಾಧಿಕ ಅತಿಕ್ರಮಣ.- ಯಾವೊಬ್ಬನು ಅಪರಾಧ ಮಾಡುವ ಉದ್ದೇಶದಿಂದ ಇನ್ನೊಬ್ಬನ ಸ್ವಾಧೀನದಲ್ಲಿರುವ ಸ್ವತ್ತಿನೊಳಕ್ಕೆ ಅಥವಾ ಅದರ ಮೇಲೆ, ಅಂಥ ಸ್ವತ್ತನ್ನು ಸ್ವಾಧೀನದಲ್ಲಿಟ್ಟುಕೊಂಡಿರುವ ಯಾವೊಬ್ಬ ವ್ಯಕ್ತಿಯನ್ನು ಹೆದರಿಸುವ, ಅವಮಾನಗೊಳಿಸುವ ಅಥವಾ ಕಿರುಕುಳ ಕೊಡುವ ಉದ್ದೇಶಕ್ಕಾಗಿ ಪ್ರವೇಶಿಸಿದರೆ, ಅಥವಾ ಕಾನೂನು ಬದ್ಧವಾಗಿ ಅಂಥ ಸ್ವತ್ತಿನೊಳಕ್ಕೆ ಅಥವಾ ಅದರ ಮೇಲೆ ಪ್ರವೇಶಿಸಿ ಕಾನೂನಿಗೆ ವಿರುದ್ಧವಾಗಿ ಅಂಥ ಯಾವೊಬ್ಬ ವ್ಯಕ್ತಿಯನ್ನು ಹೆದರಿಸುವ, ಅವಮಾನಗೊಳಿಸುವ ಅಥವಾ ಕಿರುಕುಳ ಕೊಡುವ ಉದ್ದೇಶದಿಂದ ಅಥವಾ ಅಪರಾಧ ಮಾಡುವ ಉದ್ದೇಶದಿಂದ ಅಲ್ಲೇ ಉಳಿದರೆ, ಅವನು ಅಪರಾಧಿಕ ಅತಿಕ್ರಮಣ ಮಾಡಿದ್ದಾನೆಂದು ಹೇಳಲಾಗುತ್ತದೆ.

xx xx xx

ದಂಡ ಪ್ರಕ್ರಿಯಾ ಸಂಹಿತೆ 1973ರ (1974ರ ಕೇಂದ್ರ ಅಧಿನಿಯಮ 2) ಉದ್ಧೃತ ಭಾಗ

xx xx xx

ಮೊದಲನೇ ಅನುಸೂಚಿ

xx xx xx

ಪ್ರಕರಣ 447.- xx xx

ಅಂಕಣ 5: ಜಾಮೀನೀಯ

ಅನುಬಂಧ – 6

ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನ ಸಭೆ
ಎರಡನೇ ಅಧಿವೇಶನ

ಕರ್ನಾಟಕ ವ್ಯವಸ್ಥಿತ ಅಪರಾಧಗಳು (ತಿದ್ದು ಪಡಿ) ನಿಯಂತ್ರಣ ವಿಧೇಯಕ, 2009

(2009ರ ವಿಧಾನಸಭೆಯ ವಿಧೇಯಕ ಸಂಖ್ಯೆ 13)

ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ ಅಧಿನಿಯಮ, 2000ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ ಅಧಿನಿಯಮ, 2000ನ್ನು (ಕರ್ನಾಟಕ ಅಧಿನಿಯಮ 2002ರ 1) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ,

ಭಾರತ ಗಣರಾಜ್ಯದ ಐವತ್ತೊಂಭತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಇದು ಈ ಮುಂದಿನಂತೆ ಅಧಿನಿಯಮಿತವಾಗಲಿ,–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ (ತಿದ್ದುಪಡಿ) ಅಧಿನಿಯಮ, 2009 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 2ನೇ ಪ್ರಕರಣದ ತಿದ್ದುಪಡಿ.– ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ ಅಧಿನಿಯಮ, 2000 ರಲ್ಲಿ (ಕರ್ನಾಟಕ ಅಧಿನಿಯಮ 2002ರ 1). (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ (ಸಿ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

" (ಇ) " ವ್ಯವಸ್ಥಿತ ಅಪರಾಧ" ಎಂದರೆ,–

(i) ವ್ಯವಸ್ಥಿತ ಅಪರಾಧಿಗಳ ಕೂಟದ ಸದಸ್ಯನಾಗಿಯಾಗಲಿ ಅಥವಾ ಅಂಥ ಕೂಟದ ಪರವಾಗಿಯಾಗಲಿ ಒಬ್ಬನೇ ಅಥವಾ ಜಂಟಿಯಾಗಿ ತನಗಾಗಿ ಅಥವಾ ಯಾರೇ ಇತರೆ ವ್ಯಕ್ತಿಗಾಗಿ ಅಥವಾ ದಂಗೆಯನ್ನು ಉತ್ತೇಜಿಸುವುದಕ್ಕಾಗಿ ಆರ್ಥಿಕ ಪ್ರಯೋಜನವನ್ನು ಪಡೆಯುವ ಅಥವಾ ಅನುಚಿತ ಹಣಕಾಸಿನ ಅಥವಾ ಇತರ ಅನುಕೂಲಗಳನ್ನು ಪಡೆಯುವ ಉದ್ದೇಶದಿಂದ ಹಿಂಸೆಯ ಬಳಕೆಯ ಮೂಲಕ ಅಥವಾ ಹಿಂಸೆಯ ಬೆದರಿಕೆಯ ಮೂಲಕ ಅಥವಾ ಭಯೋತ್ಪಾದನೆ ಅಥವಾ ಬಲಾತ್ಕಾರ ಅಥವಾ ಇತರೆ ಕಾನೂನು ಬಾಹಿರ ವಿಧಾನಗಳ ಮೂಲಕ ಒಬ್ಬ ವ್ಯಕ್ತಿಯು ಕೈಗೊಳ್ಳುವ ಮುಂದುವರೆಯುತ್ತಿರುವ ಯಾವುದೇ ಕಾನೂನು ಬಾಹಿರ ಚಟುವಟಿಕೆ.

(ii) ಯಾವೊಬ್ಬ ವ್ಯಕ್ತಿಯ ಅಥವಾ ವ್ಯಕ್ತಿಗಳ ಸಾವಿಗೆ ಅಥವಾ ಹಾನಿಗೆ ಕಾರಣವಾಗುವ ಅಥವಾ ಕಾರಣವಾಗಬಹುದಾದ ಅಥವಾ ಸ್ವತ್ತಿನ ನಷ್ಟ, ಹಾನಿ ಅಥವಾ ನಾಶ ಉಂಟಾಗುವಂಥ ರೀತಿಯಲ್ಲಿ ಮಾಡಿದ ಯಾವುದೇ ಕೃತ್ಯದಿಂದಾಗಿ ಅಥವಾ ಬಾಂಬುಗಳು, ಡೈನಾಮೆಟ್‌ಗಳು ಅಥವಾ ಇತರೆ ಸ್ಫೋಟಕ ವಸ್ತುಗಳು ಅಥವಾ ಸುಲಭ ದಾಹ್ಯ ವಸ್ತುಗಳು ಅಥವಾ ತುಪಾಕಿ ಬಂದೂಕುಗಳು ಅಥವಾ ಇತರೆ ಮಾರಕ ಆಯುಧಗಳು ಅಥವಾ ವಿಷಪೂರಿತಗಳು ಅಥವಾ ಹಾನಿಕರ ಅನಿಲಗಳ ಅಥವಾ ಇತರೆ ರಾಸಾಯನಿಕಗಳ ಅಥವಾ ಅಪಾಯಕಾರಿ ಸ್ವರೂಪದ ಇತರೆ ವಸ್ತುಗಳನ್ನು ಬಳಸುವ ಮೂಲಕ ಕಾನೂನು ಮತ್ತು ಸುವ್ಯವಸ್ಥೆಗೆ ಅಥವಾ ಸಾರ್ವಜನಿಕ ವ್ಯವಸ್ಥೆಗೆ ಅಥವಾ ಜನಸಾಮಾನ್ಯರ ಅಥವಾ ಜನಸಾಮಾನ್ಯರ ಯಾವುದೇ ವರ್ಗದವರ ಮನಸ್ಸಿನಲ್ಲಿ ಭಯವನ್ನುಂಟು ಮಾಡುವ ಯಾವುದೇ ಭಯೋತ್ಪಾದನೆ ಕೃತ್ಯ- ಇವುಗಳನ್ನು ಒಳಗೊಳ್ಳುತ್ತದೆ."

3. 3ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 3ನೇ ಪ್ರಕರಣದಲ್ಲಿ (1)ನೇ ಉಪ-ಪ್ರಕರಣದಲ್ಲಿ, (೧)ನೇ ಖಂಡದಲ್ಲಿ,-

(ಎ) "ಯಾವೊಬ್ಬ ವ್ಯಕ್ತಿಯ ಮರಣದಲ್ಲಿ ಪರಿಣಮಿಸಿದರೆ" ಎಂಬ ಪದಗಳಿಗೆ "ಯಾವೊಬ್ಬ ವ್ಯಕ್ತಿಯ ಮರಣದಲ್ಲಿ ಅಥವಾ ಸ್ವತ್ತಿಗೆ ಯಾವುದೇ ನಷ್ಟ, ಹಾನಿ ಅಥವಾ ನಾಶ ಉಂಟಾದಲ್ಲಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) "ಒಂದು ಲಕ್ಷ ರೂಪಾಯಿಗಳು" ಎಂಬ ಪದಗಳಿಗೆ "ಐದು ಲಕ್ಷ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಸಿ) (ii)ನೇ ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(iii) 2ನೇ ಪ್ರಕರಣದ (1)ನೇ ಉಪ-ಪ್ರಕರಣದ (ಇ) ಖಂಡದ (i) ಬಾಬಿನ ಅಡಿಯಲ್ಲಿನ ಅಪರಾಧಕ್ಕಾಗಿ, ಅಂಥ ಕೃತ್ಯವು ಯಾವೊಬ್ಬ ವ್ಯಕ್ತಿಯ ಮರಣದಲ್ಲಿ ಪರಿಣಮಿಸಿದರೆ ಮತ್ತು ಸ್ವತ್ತಿನ ನಷ್ಟ ಅಥವಾ ಹಾನಿ ಉಂಟಾದಲ್ಲಿ ಅಂಥ ವ್ಯಕ್ತಿ ಮರಣ ದಂಡನೆ ಅಥವಾ ಜೀವಾವಧಿ ಶಿಕ್ಷೆಯಿಂದ ದಂಡಿತನಾಗತಕ್ಕದ್ದು ಮತ್ತು ಐದು ಲಕ್ಷ ರೂಪಾಯಿಗಳಿಗೆ ಕಡಿಮೆಯಾಗಿರತಕ್ಕದ್ದಲ್ಲದ ಜುಲ್ಮಾನೆಗೆ ಗುರಿಯಾಗತಕ್ಕದ್ದು."

4. 21ಎ ಹೊಸ ಪ್ರಕರಣದ ಸೇರ್ಪಡೆ.- ಮೂಲ ಅಧಿನಿಯಮದ 21ನೇ ಪ್ರಕರಣದ ತರುವಾಯ ಈ ಮುಂದಿನ ಹೊಸ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:-

"21.ಎ ಇತ್ಯರ್ಥದಲ್ಲಿರುವ ತನಿಖೆ ಸ್ವತ್ತಿನ ಜಪ್ತಿ.- (1) ಒಬ್ಬ ವ್ಯಕ್ತಿಯು ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧವನ್ನು ಎಸಗಿದಲ್ಲಿ ಮತ್ತು ಪೊಲೀಸ್ ಉಪ-ಅಧೀಕ್ಷಕ ಅಥವಾ ಪೊಲೀಸ್ ಸಹಾಯಕ ಅಧೀಕ್ಷಕರಿಂದ ಪರಿಪ್ರಶ್ನೆಗೆ ಅಥವಾ ತನಿಖೆಗೆ ಒಳಪಟ್ಟಿದ್ದಲ್ಲಿ, ತನಿಖೆಯನ್ನು ನಡೆಸಲಾಗುವ ಯಾವುದೇ ಸ್ವತ್ತಿನ ಸಂಬಂಧದಲ್ಲಿ ವ್ಯವಸ್ಥಿತ ಅಪರಾಧ ಅಥವಾ ಭಯೋತ್ಪಾದನೆಯ ಮುಂದುವರಿಕೆಯಲ್ಲಿ ಭಾಗಿಯಾಗಿರುವನೆಂದು ನಂಬಲು ಕಾರಣವಾದಲ್ಲಿ, ಅವನು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರ ಪೂರ್ವಾನುಮೋದನೆ ಪಡೆದು ಅಂಥ ಸ್ವತ್ತನ್ನು ಮುಟ್ಟುಗೋಲು ಹಾಕಿಕೊಳ್ಳುವ ಆದೇಶ ಮಾಡತಕ್ಕದ್ದು ಮತ್ತು ಅಂಥ ಸ್ವತ್ತನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಕಾರ್ಯಸಾಧ್ಯವಾಗದಿದ್ದಲ್ಲಿ ಅಂಥ ಸ್ವತ್ತನ್ನು ವರ್ಗಾಯಿಸತಕ್ಕದ್ದಲ್ಲ ಅಥವಾ ಅನ್ಯಥಾ ಅಂಥ ಆದೇಶ ಮಾಡುವ ಸದರಿ ಅಧಿಕಾರಿಯ ಅಥವಾ ಸ್ವತ್ತಿನ ಮುಟ್ಟುಗೋಲು ಅಥವಾ ಜಪ್ತಿಯನ್ನು ಯಾರ ಸಮಕ್ಷಮ ಹಾಜರುಪಡಿಸಲಾಗುವುದೋ ಆ ಸಕ್ಷಮ ಪ್ರಾಧಿಕಾರಿಯ ಪೂರ್ವಾನುಮತಿ ಪಡೆದ ಹೊರತು, ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

ಮತ್ತು ಸದರಿ ಆದೇಶದ ಒಂದು ಪ್ರತಿಯನ್ನು ಸಂಬಂಧಪಟ್ಟ ವ್ಯಕ್ತಿಗೆ ಜಾರಿ ಮಾಡತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಸ್ವತ್ತನ್ನು ಮುಟ್ಟುಗೋಲು ಹಾಕಿಕೊಂಡ ಅಥವಾ ಜಪ್ತಿ ಮಾಡಿದ ತನಿಖಾಧಿಕಾರಿಯು ಅಂಥ ಮುಟ್ಟುಗೋಲು ಹಾಕಿಕೊಂಡ ಅಥವಾ ಜಪ್ತಿ ಮಾಡಿದ 48 ಗಂಟೆಗಳೊಳಗೆ ಸಕ್ಷಮ ಪ್ರಾಧಿಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

(3) ಸಕ್ಷಮ ಪ್ರಾಧಿಕಾರಿಯು, (2)ನೇ ಉಪ–ಪ್ರಕರಣದ ಅಡಿಯಲ್ಲಿ ವರದಿಯನ್ನು ಸ್ವೀಕರಿಸಿದ್ದರ ಮೇಲೆ ಅಹವಾಲನ್ನು ಕೇಳಿದ ತರುವಾಯ ಜಪ್ತಿಯ ಆದೇಶವನ್ನು ಸ್ಥಿರೀಕರಿಸಿದ ಇಲ್ಲವೇ ತಳ್ಳಿ ಹಾಕಿದ ಬಗ್ಗೆ ಆದೇಶವನ್ನು ಹೊರಡಿಸತಕ್ಕದ್ದು.

(4) ಸಕ್ಷಮ ಪ್ರಾಧಿಕಾರದ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ವಿಶೇಷ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು. ವಿಶೇಷ ನ್ಯಾಯಾಲಯವು ಎರಡೂ ಪಕ್ಷಕಾರರ ಚುನಾವಣೆಯ ತರುವಾಯ (3)ನೇ ಉಪ–ಪ್ರಕರಣದ ಅಡಿಯಲ್ಲಿ ಜಾರಿಗೊಳಿಸಿದ ಆದೇಶವನ್ನು ಸ್ಥಿರೀಕರಿಸಬಹುದು ಇಲ್ಲವೇ ತಳ್ಳಿಹಾಕಬಹುದು.

(5)(4)ನೇ ಉಪ–ಪ್ರಕರಣದ ಅಡಿಯಲ್ಲಿನ ಪ್ರತಿಯೊಂದು ಅಪೀಲನ್ನು (3)ನೇ ಉಪ–ಪ್ರಕರಣದ ಅಡಿಯಲ್ಲಿ ಹೊರಡಿಸಿದ ಆದೇಶದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಹೂಡತಕ್ಕದ್ದು.

5. 22ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 22ನೇ ಪ್ರಕರಣದಲ್ಲಿ, (2)ನೇ ಉಪ–ಪ್ರಕರಣಕ್ಕೆ (3) ಖಂಡದಲ್ಲಿ,–

(i) "ಮೂವತ್ತು ದಿನಗಳು ಮತ್ತು ತೊಂಬತ್ತು ದಿನಗಳು" ಎಂಬ ಪದಗಳಿಗೆ "ಅರವತ್ತು ದಿನಗಳು" ಮತ್ತು "ಒಂದು ನೂರ ಎಂಭತ್ತು ದಿನಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) ಪರಂತುಕದಲ್ಲಿ,–

(ಎ) "ತೊಂಬತ್ತು ದಿನಗಳ ಅವಧಿಯೊಳಗೆ" ಎಂಬ ಪದಗಳಿಗೆ, ಅವುಗಳು ಕಂಡುಬರುವ ಎರಡು ಸ್ಥಳಗಳಲ್ಲಿ

"ಒಂದು ನೂರ ಎಂಬತ್ತು ದಿನಗಳ ಅವಧಿಯೊಳಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) "ಒಂದು ನೂರ ಎಂಬತ್ತು ದಿನಗಳಿಗೆ ವಿಸ್ತರಿಸತಕ್ಕದ್ದು" ಎಂಬ ಪದಗಳಿಗೆ "ಮುನ್ನೂರ ಅರವತ್ತೈದು ದಿನಗಳಿಗೆ ವಿಸ್ತರಿಸತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಭಯೋತ್ಪಾದನೆ ಕೃತ್ಯವನ್ನು ಒಂದು ವ್ಯವಸ್ಥಿತ ಅಪರಾಧ ಎಂಬುದಾಗಿ ಸೇರಿಸಲು ಮತ್ತು ಈ ಮುಂದಿನವುಗಳಿಗಾಗಿ ಉಪಬಂಧ ಕಲ್ಪಿಸಲು ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ ಅಧಿನಿಯಮ 2000ಕ್ಕೆ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಭಾವಿಸಲಾಗಿದೆ, ಎಂದರೆ:-

(i) ಭಯೋತ್ಪಾದನೆ ಕೃತ್ಯ ಮಾಡಿದ್ದಕ್ಕಾಗಿ ಅಪರಾಧ ಮಾಡುವುದಕ್ಕೆ ಭಯಹುಟ್ಟಿಸುವಂಥ ಮರಣದಂಡನೆ ಅಥವಾ ಅಜೀವ ಕಾರಾವಾಸದ ಮತ್ತು 10 ಲಕ್ಷ ರೂಪಾಯಿಗಳ ಜುಲ್ಮಾನೆಯ ಶಿಕ್ಷೆಯನ್ನು ವಿಧಿಸುವುದು:

(ii) ತನಿಖೆ ನಡೆಯುತ್ತಿರುವಾಗ ಆಪಾದಿತನ ಸ್ವತ್ತನ್ನು ಜಪ್ತಿ ಮಾಡುವುದು:

(iii) ದೋಷಾರೋಪಣ ಪಟ್ಟಿಯನ್ನು ದಾಖಲುಮಾಡುವುದಕ್ಕಾಗಿನ ಅವಧಿಯನ್ನು ಒಂದು ನೂರ ಎಂಭತ್ತು ದಿನಗಳಿಂದ ಮುನ್ನೂರ ಅರವತ್ತೈದು ದಿನಗಳವರೆಗೆ ವಿಸ್ತರಿಸುವುದು.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಡಾ: ವಿ.ಎಸ್. ಆಚಾರ್ಯ
ಗೃಹ ಸಚಿವರು

ಎಸ್. ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

ಅನುಬಂಧ

ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ ಅಧಿನಿಯಮ 2000ರ (2002ರ ಕರ್ನಾಟಕ ಅಧಿನಿಯಮ 1)

ಉದ್ಧೃತ ಭಾಗ

XX XX XX

2. ಪರಿಭಾಷೆಗಳು.- (1) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸದ ಹೊರತು,-

XX XX XX

(ಇ)"ವ್ಯವಸ್ಥಿತ ಅಪರಾಧ" ಎಂದರೆ, ವ್ಯವಸ್ಥಿತ ಅಪರಾಧಿಗಳ ಕೂಟದ ಸದಸ್ಯನಾಗಿಯಾಗಲಿ ಅಥವಾ ಅಂಥ ಕೂಟದ ಪರವಾಗಿಯಾಗಲಿ ಒಬ್ಬನೇ ಅಥವಾ ಜಂಟಿಯಾಗಿ ತನಗಾಗಿ ಅಥವಾ ಯಾವನೇ ಇತರ ವ್ಯಕ್ತಿಗಾಗಿ ಅಥವಾ ದಂಗೆಯನ್ನು ಉತ್ತೇಜಿಸುವುದಕ್ಕಾಗಿ ಆರ್ಥಿಕ ಪ್ರಯೋಜನವನ್ನು ಪಡೆಯುವ ಅಥವಾ ಅನುಚಿತ ಹಣಕಾಸಿನ ಅಥವಾ ಇತರ ಅನುಕೂಲ ಗಳನ್ನು ಪಡೆಯುವ ಉದ್ದೇಶದಿಂದ ಹಿಂಸೆಯ ಬಳಕೆಯ ಮೂಲಕ ಅಥವಾ ಹಿಂಸೆಯ ಬೆದರಿಕೆಯ ಮೂಲಕ ಅಥವಾ ಭಯೋತ್ಪಾದನೆ ಅಥವಾ ಬಲಾತ್ಕಾರ ಅಥವಾ ಇತರ ಕಾನೂನು ಬಾಹಿರ ವಿಧಾನಗಳ ಮೂಲಕ ಒಬ್ಬ ವ್ಯಕ್ತಿಯು ಕೈಗೊಳ್ಳುವ ಮುಂದುವರೆಯುತ್ತಿರುವ ಯಾವುದೇ ಕಾನೂನು ಬಾಹಿರ ಚಟುವಟಿಕೆ;

XX XX XX

3. ವ್ಯವಸ್ಥಿತ ಅಪರಾಧಕ್ಕಾಗಿ ದಂಡನೆ.- (1) ಯಾವಬ್ಬನು ವ್ಯವಸ್ಥಿತ ಅಪರಾಧವನ್ನು ಮಾಡಿದಾಗ,-

(i) ಅಂಥ ಕೃತ್ಯವು, ಯಾವಬ್ಬ ವ್ಯಕ್ತಿಯ ಮರಣದಲ್ಲಿ ಪರಿಣ ಮಿಸಿದರೆ, ಆಗ ಮರಣದಂಡನೆಯಿಂದ ಅಥವಾ ಆಜೀವ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಒಂದು ಲಕ್ಷ ರೂಪಾಯಿಗಳಿಗೆ ಕಡಿಮೆಯಾಗಿ ರತಕ್ಕದ್ದಲ್ಲದ ಜುಲ್ಮಾನೆಗೆ ಕೂಡಾ ಗುರಿಯಾಗತಕ್ಕದ್ದು.

XX XX XX

22. ಸಂಹಿತೆಯ ಕೆಲವು ಉಪಬಂಧಗಳನ್ನು ಮಾರ್ಪಾಡು ಮಾಡಿ ಅನ್ವಯಿಸುವುದು.– (1)

XX XX XX

(2) ಈ ಅಧಿನಿಯಮದ ಅಡಿಯಲ್ಲಿ ದಂಡನೀಯ ಅಪರಾಧವನ್ನು ಒಳಗೊಂಡ ಒಂದು ಮೊಕದ್ದಮೆಯ ಸಂಬಂಧದಲ್ಲಿ, ಸಂಹಿತೆಯ 167ನೇ ಪ್ರಕರಣವನ್ನು (2)ನೇ ಉಪ ಪ್ರಕರಣದ ಮಾರ್ಪಾಡುಗಳ ಷರತ್ತುಗಳಿಗೊಳಪಟ್ಟು, ಅನ್ವಯಿಸಲಕ್ಕದ್ದು;

(ಎ) "ಹದಿನೈದು ದಿನಗಳು" ಮತ್ತು "ಅರವತ್ತು ದಿನಗಳು" ಎಂಬ ಉದ್ದೇಶಗಳು ಬರುವ ಕಡೆಗಳಲೆಲ್ಲ ಕ್ರಮವಾಗಿ "ಮೂವತ್ತು ದಿನಗಳು" ಮತ್ತು "ತೊಂಭತ್ತು ದಿನಗಳು" ಎಂದು ಅರ್ಥೈಯಿಸತಕ್ಕದ್ದು;

(ಬಿ) ಪರಂತುಕದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಮತ್ತು ಪರಂತು, ನಿರ್ದಿಷ್ಟಪಡಿಸಿದ ತೊಂಭತ್ತು ದಿನಗಳ ಅವಧಿಯೊಳಗೆ ತನಿಖೆಯನ್ನು ಪೂರ್ಣಗೊಳಿಸಲು ಸಾಧ್ಯವಾಗದಿದ್ದರೆ, ಪಬ್ಲಿಕ್ ಪ್ರಾಸಿಕ್ಯೂಟರನ ವರದಿಯ ಮೇಲೆ, ತನಿಖೆಯ ಪ್ರಗತಿಯನ್ನು, ಮತ್ತು ತೊಂಭತ್ತು ದಿನಗಳ ಸದರಿ ಅವಧಿಯ ನಂತರವೂ ಅಪರಾಧಿಯನ್ನು ಬಂಧಿಸಿಟ್ಟಿರಲು ನಿರ್ದಿಷ್ಟ ಕಾರಣಗಳನ್ನು ತಿಳಿಸುತ್ತಾ, ವಿಶೇಷ ನ್ಯಾಯಾಲಯವು ಅಂಥ ಅವಧಿಯನ್ನು ಒಂದನೂರಾ ಎಂಭತ್ತು ದಿನಗಳಿಗೆ ವಿಸ್ತರಿಸತಕ್ಕದ್ದು."

ಅನುಬಂಧ – 7

ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನಸಭೆ
ಮೂರನೇ ಅಧಿವೇಶನ

ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳನ್ನು ತಡೆಗಟ್ಟುವ (ತಿದ್ದುಪಡಿ) ವಿಧೇಯಕ, 2009
(2009ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 34)

ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳನ್ನು ತಡೆಗಟ್ಟುವ ಅಧಿನಿಯಮ, 1985ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇದರಲ್ಲಿ, ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳನ್ನು ತಡೆಗಟ್ಟುವ ಅಧಿನಿಯಮ, 1985ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ ;

ಇದು, ಭಾರತ ಗಣರಾಜ್ಯದ ಅರವತ್ತನೇ ವರ್ಷದಲ್ಲಿ ಕರ್ನಾಟಕ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ***ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳನ್ನು ತಡೆಗಟ್ಟುವ (ತಿದ್ದುಪಡಿ) ಅಧಿನಿಯಮ, 2009*** ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. ದೀರ್ಘ ಹೆಸರು ಮತ್ತು ಪ್ರಸ್ತಾವನೆಯ ತಿದ್ದುಪಡಿ.- ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳನ್ನು ತಡೆಗಟ್ಟುವ ಅಧಿನಿಯಮ, 1985ರ (1985ರ ಕರ್ನಾಟಕ ಅಧಿನಿಯಮ 12) (ಇದರಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಕರೆಯಲಾಗಿದೆ) ದೀರ್ಘ ಹೆಸರು ಮತ್ತು ಪ್ರಸ್ತಾವನೆಯಲ್ಲಿ "ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ" ಎಂಬ ಪದಗಳಿಗೆ "ಅನೈತಿಕ ವ್ಯವಹಾರ ಅಪರಾಧಿಗಳ, ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಹಾಗೂ ದೃಶ್ಯ ಅಥವಾ ಧ್ವನಿ (ವಿಡಿಯೋ ಅಥವಾ ಆಡಿಯೋ) ಕಳ್ಳಮುದ್ರಕರ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

3. 1ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 1ನೇ ಪ್ರಕರಣದಲ್ಲಿ, (1)ನೇ ಉಪ ಪ್ರಕರಣದಲ್ಲಿ "ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ" ಎಂಬ ಪದಗಳಿಗೆ "ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಹಾಗೂ ದೃಶ್ಯ ಅಥವಾ ಧ್ವನಿ (ವಿಡಿಯೋ ಅಥವಾ ಆಡಿಯೋ) ಕಳ್ಳಮುದ್ರಕರ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

4. 2ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 2ನೇ ಪ್ರಕರಣದಲ್ಲಿ.-

(1) (ಎ) ಖಂಡದಲ್ಲಿ (ತು)ನೇ ಉಪಖಂಡದ ತರುವಾಯ, ವಿವರಣೆಗೆ ಮುಂಚೆ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

"(vii) ದೃಶ್ಯ ಅಥವಾ ಧ್ವನಿ (ವಿಡಿಯೋ ಅಥವಾ ಆಡಿಯೋ) ಕಳ್ಳಮುದ್ರಕನ ಸಂಬಂಧದಲ್ಲಿ ಅವನು ವಾಣಿಜ್ಯ ಲಾಭಕ್ಕಾಗಿ ರೂಢಿಗತವಾಗಿ ಒಬ್ಬ ದೃಶ್ಯ ಅಥವಾ ಧ್ವನಿ ವಿಡಿಯೋ ಅಥವಾ ಆಡಿಯೋ ಕಳ್ಳಮುದ್ರಕನಾಗಿ, ಸಾರ್ವಜನಿಕ ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬರುವಲ್ಲಿ ಪ್ರತಿಕೂಲ ಪರಿಣಾಮ ಬೀರುವ ಅಥವಾ ಪ್ರತಿಕೂಲ ಪರಿಣಾಮ ಬೀರುವ ಸಂಭವವಿರುವ ತನ್ನ ಯಾವುದೇ ಚಟುವಟಿಕೆಗಳಲ್ಲಿ ತೊಡಗಿರುವುದು ಅಥವಾ ತೊಡಗುವುದಕ್ಕೆ ಸಿದ್ಧತೆ ಮಾಡುತ್ತಿರುವುದು".

(2) (ಜೆ) ಖಂಡದ ತರುವಾಯ, ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ :-

"(ಕೆ) ದೃಶ್ಯ ಅಥವಾ ಧ್ವನಿ (ವಿಡಿಯೋ ಅಥವಾ ಆಡಿಯೋ) ಕಳ್ಳ ಮುದ್ರಕ" ಎಂದರೆ, ಕೃತಿಸ್ವಾಮ್ಯ ಅಧಿನಿಯಮ, 1957 (1957ರ ಕೇಂದ್ರ ಅಧಿನಿಯಮ XIV)ರ ಅಡಿಯಲ್ಲಿ ದಂಡನೀಯವಾದ, ಸಿನಿಮ್ಯಾಟೋಗ್ರಾಫ್ ಫಿಲ್ಮಿನ ಅಥವಾ ಆ ಫಿಲ್ಮಿಗೆ ಸಂಬಂಧಪಟ್ಟ ಸೌಂಡ್ ಟ್ರ್ಯಾಕಿನ ಯಾವುದೇ ಭಾಗವನ್ನು ಒಳಗೊಂಡ ರೆಕಾರ್ಡ್‌ನ ಸಂಬಂಧದಲ್ಲಿ ವಾಣಿಜ್ಯ ಲಾಭಕ್ಕಾಗಿ ರೂಢಿಗತವಾಗಿ ಕೃತಿಸ್ವಾಮ್ಯದ ಹಕ್ಕನ್ನು ಉಲ್ಲಂಘಿಸುವ ಅಪರಾಧಗಳನ್ನು ಮಾಡುವ ಅಥವಾ ಅಪರಾಧ ಮಾಡಲು ಪ್ರಯತ್ನಿಸುವ ಅಥವಾ ಅಪರಾಧಗಳನ್ನು ಮಾಡಲು ಪ್ರೇರೇಪಿಸುವ ಒಬ್ಬ ವ್ಯಕ್ತಿ."

5. 3ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 3ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ, "ಅನೈತಿಕ ವ್ಯವಹಾರ ಅಪರಾಧಿ ಅಥವಾ ಕೊಳಚೆ ಪ್ರದೇಶಗಳನ್ನು ಕಬಳಿಸುವವನ" ಎಂಬ ಪದಗಳಿಗೆ "ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಥವಾ ದೃಶ್ಯ ಅಥವಾ ಧ್ವನಿ (ವಿಡಿಯೋ ಅಥವಾ ಆಡಿಯೋ) ಕಳ್ಳಮುದ್ರಕರ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

6. 17ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 17ನೇ ಪ್ರಕರಣದಲ್ಲಿ ಶೀರ್ಷಿಕೆಯನ್ನೂ ಒಳಗೊಂಡಂತೆ ಎರಡು ಕಡೆಗಳಲ್ಲಿ ಬರುವ "ಅನೈತಿಕ ವ್ಯವಹಾರ ಅಪರಾಧಿ ಅಥವಾ ಕೊಳಚೆ ಪ್ರದೇಶಗಳನ್ನು ಕಬಳಿಸುವವನ" ಎಂಬ ಪದಗಳಿಗೆ "ಅನೈತಿಕ ವ್ಯವಹಾರ ಅಪರಾಧಿಗಳ ಅಥವಾ ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಥವಾ ದೃಶ್ಯ ಅಥವಾ ಧ್ವನಿ (ವಿಡಿಯೋ ಅಥವಾ ಆಡಿಯೋ) ಕಳ್ಳಮುದ್ರಕರ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕೃತಿಸ್ವಾಮ್ಯ ಅಧಿನಿಯಮ, 1957ರ (1957ರ ಕೇಂದ್ರ ಅಧಿನಿಯಮ 14) ಅಡಿಯಲ್ಲಿ ದಂಡನೀಯವಾದ, ಸಾರ್ವಜನಿಕ ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಪ್ರತಿಕೂಲ ಪರಿಣಾಮ ಬೀರುವ ಅಥವಾ ಪ್ರತಿಕೂಲ ಪರಿಣಾಮ ಬೀರಬಹುದಾದ ಸಿನಿಮಾಟೋಗ್ರಾಫ್ ಫಿಲ್ಮ್ ಅಥವಾ ಆ ಫಿಲಂಗೆ ಸಂಬಂಧಿಸಿದ ಸೌಂಡ್ ಟ್ರ್ಯಾಕಿನ ಯಾವುದೇ ಭಾಗವನ್ನು ಒಳಗೊಂಡ ಧ್ವನಿ ಮುದ್ರಣದ ಸಂಬಂಧದಲ್ಲಿ ವಾಣಿಜ್ಯ ಲಾಭಕ್ಕಾಗಿ ದೃಶ್ಯ ಅಥವಾ ಧ್ವನಿ (ವೀಡಿಯೋ ಅಥವಾ ಆಡಿಯೋ) ಕಳ್ಳ ಮುದ್ರಣದಲ್ಲಿ ತೊಡಗಿರುವ ಅಥವಾ ಅಂಥ ಚಟುವಟಿಕೆಯಲ್ಲಿ ತೊಡಗಲು ಸಿದ್ಧತೆ ಮಾಡಿಕೊಳ್ಳುತ್ತಿರುವ ಯಾವೊಬ್ಬ ವ್ಯಕ್ತಿಯನ್ನು ಬಂಧಿಸುವುದಕ್ಕಾಗಿ ಉಪಬಂಧ ವನ್ನು ಕಲ್ಪಿಸುವುದು ಅವಶ್ಯಕವಾಗಿರುವುದರಿಂದ, ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳನ್ನು ತಡೆಗಟ್ಟುವ ಅಧಿನಿಯಮ, 1985ನ್ನು (1985ರ ಕರ್ನಾಟಕ ಅಧಿನಿಯಮ 12) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಕ್ರಮದಿಂದಾಗಿ ಯಾವ ಹೆಚ್ಚಿನ ವೆಚ್ಚವೂ ಉಂಟಾಗುವುದಿಲ್ಲ.

ಡಾ. ವಿ.ಎಸ್. ಆಚಾರ್ಯ
ಗೃಹ ಸಚಿವರು

ಎಸ್.ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಅನುಬಂಧ

ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳನ್ನು ತಡೆಗಟ್ಟುವ ಅಧಿನಿಯಮ, 1985

(1985ರ ಕರ್ನಾಟಕ ಅಧಿನಿಯಮ, 12) ಉದ್ಧೃತ ಭಾಗ

ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳ ತಡೆಗಟ್ಟುವ ಅಧಿನಿಯಮ, 1985

ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರನ್ನು ಸಾರ್ವಜನಿಕ ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಪ್ರತಿಕೂಲ ಪರಿಣಾಮ ಬೀರುವ ಅವರ ಅಪಾಯಕಾರಿ ಚಟುವಟಿಕೆಗಳನ್ನು ತಡೆಗಟ್ಟಲು ಪ್ರತಿಬಂಧಕ ಬಂಧನಕ್ಕಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರೆಂದು ಹೆಸರಾದ ಕೆಲವು ವ್ಯಕ್ತಿಗಳ ಅಪಾಯಕಾರಿ ಚಟುವಟಿಕೆಗಳು ಮೇಲಿಂದ ಮೇಲೆ ಸಾರ್ವಜನಿಕ ಸುವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟುಮಾಡುತ್ತಿರುವುದರಿಂದ;

XX XX XX

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳ ಪ್ರತಿಬಂಧಕ ಅಧಿನಿಯಮ 1985 ಎಂದು ಕರೆಯತಕ್ಕದ್ದು.

XX XX XX

3. ಕೆಲವು ವ್ಯಕ್ತಿಗಳನ್ನು ಬಂಧನದಲ್ಲಿಡುವ ಆದೇಶ ಮಾಡಲು ಅಧಿಕಾರ.– (1) ರಾಜ್ಯ ಸರ್ಕಾರಕ್ಕೆ ಯಾವೊಬ್ಬ ಕಳ್ಳಭಟ್ಟಿ ವ್ಯಾಪಾರಿ, ಮಾದಕವಸ್ತು ಅಪರಾಧಿ, ಜೂಜುಕೋರ, ಗೂಂಡಾ, ಅನೈತಿಕ ವ್ಯವಹಾರ-ಅಪರಾಧಿ ಅಥವಾ ಕೊಳಚೆ ಪ್ರದೇಶಗಳನ್ನು ಕಬಳಿಸುವವನು ಸಾರ್ವಜನಿಕ ನೆಮ್ಮದಿಯನ್ನು ಕಾಪಾಡುವಲ್ಲಿ ಪ್ರತಿಕೂಲ ಪರಿಣಾಮ ಬೀರುವ, ಯಾವುದೇ ರೀತಿಯಲ್ಲಿ ವರ್ತಿಸುತ್ತಿದ್ದಾನೆಂದು ಮನವರಿಕೆಯಾದರೆ, ಅಂಥ ವ್ಯಕ್ತಿಯನ್ನು ಬಂಧನದಲ್ಲಿಡುವುದನ್ನು ನಿರ್ದೇಶಿಸುವ ಆದೇಶ ಮಾಡುವುದು ಅವಶ್ಯಕವಾದರೆ, ಹಾಗೆ ಮಾಡಬಹುದು.

XX XX XX

17. ಯಾವೊಬ್ಬ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕವಸ್ತು ಅಪರಾಧಿ, ಜೂಜುಕೋರ, ಗೂಂಡಾ, ಅನೈತಿಕ ವ್ಯವಹಾರ ಅಪರಾಧಿ ಅಥವಾ ಕೊಳಚೆ ಪ್ರದೇಶಗಳನ್ನು ಕಬಳಿಸುವವನ ವಿರುದ್ಧ ಬಂಧನದ ಆದೇಶವನ್ನು ಈ ಅಧಿನಿಯಮದ ಅಡಿಯಲ್ಲಿ ಮಾಡತಕ್ಕದ್ದು ಮತ್ತು ರಾಷ್ಟ್ರೀಯ ಭದ್ರತಾ ಅಧಿನಿಯಮದ ಅಡಿಯಲ್ಲಿ ಅಲ್ಲ.– ಈ ಅಧಿನಿಯಮದ ಪ್ರಾರಂಭದಂದು ಮತ್ತು ತರುವಾಯ, ಕರ್ನಾಟಕ ರಾಜ್ಯದಲ್ಲಿ ಯಾವೊಬ್ಬ ಕಳ್ಳಭಟ್ಟಿ ವ್ಯಾಪಾರಿ, ಮಾದಕವಸ್ತು ಅಪರಾಧಿ, ಜೂಜುಕೋರ, ಗೂಂಡಾ, ಅನೈತಿಕ ವ್ಯವಹಾರ ಅಪರಾಧಿ ಅಥವಾ ಕೊಳಚೆ ಪ್ರದೇಶಗಳನ್ನು ಕಬಳಿಸುವವನ ಸಂಬಂಧದಲ್ಲಿ, ಸಾರ್ವಜನಿಕ ಸುವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮವಾಗುವಂತೆ ಯಾವುದೇ ರೀತಿಯಲ್ಲಿ ವರ್ತಿಸುವುದರಿಂದ ಅವನನ್ನು ತಡೆಯುವ ಕಾರಣಕ್ಕಾಗಿ ಬಂಧನದ ಯಾವ ಆದೇಶವನ್ನು ಅಂಥ ವ್ಯಕ್ತಿಯ ವಿರುದ್ಧ ಈ ಅಧಿನಿಯಮದ ಅಡಿಯಲ್ಲಿ ಮಾಡಬಹುದೋ ಅಥವಾ ಮಾಡಲು ಸಾಧ್ಯವಿದೆಯೋ ಆ ಬಂಧನದ ಆದೇಶವನ್ನು ರಾಜ್ಯ ಸರ್ಕಾರವು ಅಥವಾ ಅದರ ಯಾವೊಬ್ಬ ಅಧಿಕಾರಿಯು ರಾಷ್ಟ್ರೀಯ ಭದ್ರತಾ ಅಧಿನಿಯಮ, 1980ರ ಅಡಿಯಲ್ಲಿ (1980ರ ಕೇಂದ್ರ ಅಧಿನಿಯಮ 65) ಮಾಡತಕ್ಕದ್ದಲ್ಲ.

XX XX XX

ಅನುಬಂಧ-8

ಮಾನ್ಯರೇ,

1. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಕೃಷಿ ಮತ್ತು ತೋಟಗಾರಿಕೆ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **2100.00** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

2. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಪಶುಸಂಗೋಪನೆ ಮತ್ತು ಮೀನುಗಾರಿಕೆ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **1200.99** ಲಕ್ಷ ರೂ.ಗಳಿಗೆ ಮೀರದ ಮತ್ತು ಬಂಡವಾಳ ಲೆಕ್ಕದಲ್ಲಿ **155.00** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

3. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಆರ್ಥಿಕ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **99.71** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **7150.00** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

4. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಸಿ.ಆ.ಸು.ಇ.'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **12735.08** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

5. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಒಳಾಡಳಿತ ಮತ್ತು ಸಾರಿಗೆ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **2453.98** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **4200.00** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

6. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **30672.00** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **8212.00** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು. ಸರ್ಕಾರಕ್ಕೆ ಮಂಜೂರು ಮಾಡುವುದು.

7. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಅರಣ್ಯ, ಜೀವಿ ಶಾಸ್ತ್ರ ಮತತು ಪರಿಸರ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **2090.09** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

8. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಸಹಕಾರ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **10000.00** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **1585.00** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

9. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಸಮಾಜ ಕಲ್ಯಾಣ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **932.73** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **1571.27** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

10. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **400.00** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

11. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **5997.19** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

12. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಆಹಾರ ಮತ್ತು ನಾಗರೀಕ ಸರಬರಾಜು'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **11700.00** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

13. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಕಂದಾಯ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **3691.75** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

14. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಮಾಹಿತಿ ತಂತ್ರಜ್ಞಾನ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **699.00** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

15. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಶಿಕ್ಷಣ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **576.63** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

16. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ವಾಣಿಜ್ಯ ಮತ್ತು ಕೈಗಾರಿಕೆ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **156.33** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **2765.82** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

17. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ನಗರಾಭಿವೃದ್ಧಿ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **16486.43** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

18. 2010ನೇ ಮಾರ್ಚ್ 31ರ ಅಂತ್ಯದೊಳಗಾಗಿ **'ಲೋಕೋಪ ಯೋಗಿ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **3310.00** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **9000.00** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

19. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಜಲಸಂಪನ್ಮೂಲ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವು-ದರಿಂದ ರಾಜಸ್ವ ಲೆಕ್ಕದಲ್ಲಿ **5671.92** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **1225.00** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

20. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **5942.36** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **350.00** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

21. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಕಾರ್ಮಿಕ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿಬರುವು ದರಿಂದ ರಾಜಸ್ವ ಲೆಕ್ಕದಲ್ಲಿ **6000.00** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **1000.00** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

22. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಇಂಧನ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **17500.00** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

23. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಕನ್ನಡ ಮತ್ತು ಸಂಸ್ಕೃತಿ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **1169.00** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

24. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಯೋಜನೆ ಮತ್ತು ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **15597.43** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

25. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಕಾನೂನು'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **1699.75** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

26. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **763.28** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

ಅನುಬಂಧ – 9

ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನಸಭೆ
ಮೂರನೇ ಅಧಿವೇಶನ

ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕ, 2009
(2009ರ ವಿಧಾನ ಸಭೆಯ ವಿಧೇಯಕ ಸಂಖ್ಯೆ – 32)

2009–2010ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ವಿಧೇಯಕ.

2009–2010ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆ ಪೈಕಿಯಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ ;

ಇದು ಭಾರತ ಗಣರಾಜ್ಯದ ಅರವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮವಾಗಲಿ.

1. ಸಂಕ್ಷಿಪ್ತ ಹೆಸರು :– ಈ ಅಧಿನಿಯಮವನ್ನು ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ಅಧಿನಿಯಮ, 2009 ಎಂದು ಕರೆಯತಕ್ಕದ್ದು.

2. ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ 2009–2010ನೇ ಹಣಕಾಸು ವರ್ಷಕ್ಕಾಗಿ 6442162.78 ಲಕ್ಷ ರೂಪಾಯಿಗಳ ನೀಡಿಕೆ :– ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟ ಪಡಿಸಲಾದ ಸೇವೆಗಳ ಸಂಬಂಧದಲ್ಲಿ 2009–2010ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ (2009ರ ಕರ್ನಾಟಕ ಅಧಿನಿಯಮ ಸಂಖ್ಯೆ 4ರಲ್ಲಿ ಸಂದಾಯ ಮಾಡಲು ಅಧಿಕಾರ ನೀಡಲಾದ 21,25,913.72 ಲಕ್ಷ ರೂಪಾಯಿಗಳನ್ನು ಒಳಗೊಂಡಂತೆ) ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ಅರವತ್ತನಾಲ್ಕು ಸಾವಿರದ ನಾಲ್ಕುನೂರಾ ಇಪ್ಪತ್ತೊಂದು ಕೋಟಿ ಅರವತ್ತೆರಡು

ಲಕ್ಷದ ಎಪ್ಪತ್ತೆಂಟು ಸಾವಿರ ರೂಪಾಯಿಗಳಿಗೆ ಮೀರದಷ್ಟು ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡತಕ್ಕದ್ದು ಮತ್ತು ಉಪಯೋಗಿಸತಕ್ಕದ್ದು.

3. **ಧನವಿನಿಯೋಗ :-** ಈ ಅಧಿನಿಯಮದ ಮೂಲಕ, ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು ಸದರಿ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದ್ದು.

ಅನುಸೂಚಿ

(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

(ರೂ. ಲಕ್ಷಗಳಲ್ಲಿ)

			ಮೀರದ ಮೊಬಲಗು		
ಬೇಡಿಕೆ ಸಂಖ್ಯೆ	ಸೇವೆಗಳು ಮತ್ತು ಉದ್ದೇಶಗಳು		ವಿಧಾನಸಭೆಯಿಂದ ಪುರಸ್ಕೃತವಾದುದನ್ನು	ಸಂಚಿತನಿಧಿಯಿಂದ ಪ್ರಭೃತವಾದುದನ್ನು	ಒಟ್ಟು
1	2		3	4	5
01	ಕೃಷಿ ಮತ್ತು ತೋಟಗಾರಿಕೆ	ರಾಜಸ್ವ	170028.69	23.71	170052.40
		ಬಂಡವಾಳ	2500.00	–	2500.00
02	ಪಶುಸಂಗೋಪನೆ ಮತ್ತು ಮೀನುಗಾರಿಕೆ	ರಾಜಸ್ವ	68739.54	23.75	68763.29
		ಬಂಡವಾಳ	7338.50	–	7338.50
03	ಆರ್ಥಿಕ	ರಾಜಸ್ವ	558141.44	33.25	558174.69
		ಬಂಡವಾಳ	1037.00	–	1037.00
04	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ	ರಾಜಸ್ವ	37361.43	8921.62	46283.05
		ಬಂಡವಾಳ	–	–	–
05	ಒಳಾಡಳಿತ ಮತ್ತು ಸಾರಿಗೆ	ರಾಜಸ್ವ	222349.83	–	222349.83
		ಬಂಡವಾಳ	35235.67	–	35235.67
06	ಮೂಲಭೂತ ಸೌಕರ್ಯ	ರಾಜಸ್ವ	1058.30	–	1058.30
		ಬಂಡವಾಳ	41533.00	–	41533.00
07	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್	ರಾಜಸ್ವ	156720.63	–	156720.63
		ಬಂಡವಾಳ	156490.00	–	156490.00

08	ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ	ರಾಜಸ್ವ	49481.27	1113.50	50594.77
		ಬಂಡವಾಳ	312.60	–	312.60
09	ಸಹಕಾರ	ರಾಜಸ್ವ	32932.45	–	32932.45
		ಬಂಡವಾಳ	1330.50	–	1330.50
1	2		3	4	5
10	ಸಮಾಜ ಕಲ್ಯಾಣ	ರಾಜಸ್ವ	198336.06	–	198336.06
		ಬಂಡವಾಳ	24477.33	–	24477.33
11	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	ರಾಜಸ್ವ	158576.16	–	158576.16
		ಬಂಡವಾಳ	7210.00	–	7210.00
12	ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು	ರಾಜಸ್ವ	20745.86	–	20745.86
		ಬಂಡವಾಳ	11100.00	–	11100.00
13	ಆಹಾರ ಮತ್ತು ನಾಗರೀಕ ಸರಬರಾಜು	ರಾಜಸ್ವ	80896.85	2.70	80899.55
		ಬಂಡವಾಳ	1800.00	–	1800.00
14	ಕಂದಾಯ	ರಾಜಸ್ವ	213623.08	110.32	213733.40
		ಬಂಡವಾಳ	10020.00	–	10020.00
15	ಮಾಹಿತಿ ತಂತ್ರಜ್ಞಾನ	ರಾಜಸ್ವ	3407.70	–	3407.70
		ಬಂಡವಾಳ	1660.00	–	1660.00
16	ವಸತಿ	ರಾಜಸ್ವ	73813.68	–	73813.68
		ಬಂಡವಾಳ	25119.23	–	25119.23

1	2		3	4	5
17	ಶಿಕ್ಷಣ	ರಾಜಸ್ವ	870187.80	–	870187.80
		ಬಂಡವಾಳ	26093.15	–	26093.15
18	ವಾಣಿಜ್ಯ ಮತ್ತು ಕೈಗಾರಿಕೆ	ರಾಜಸ್ವ	134787.21	0.26	134787.47
		ಬಂಡವಾಳ	10642.00	–	10642.00
19	ನಗರಾಭಿವೃದ್ಧಿ	ರಾಜಸ್ವ	436761.41	–	436761.41
		ಬಂಡವಾಳ	128666.00	–	128666.00
20	ಲೋಕೋಪ ಯೋಗಿ	ರಾಜಸ್ವ	130630.14	–	130630.14
		ಬಂಡವಾಳ	239572.00	–	239572.00
21	ಜಲಸಂಪ ನ್ಮೂಲ	ರಾಜಸ್ವ	33890.93	–	33890.93
		ಬಂಡವಾಳ	450478.97	–	450478.97
22	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು	ರಾಜಸ್ವ	194648.60	–	194648.60
		ಬಂಡವಾಳ	35696.00	–	35696.00
23	ಕಾರ್ಮಿಕ	ರಾಜಸ್ವ	36272.81	–	36272.81
		ಬಂಡವಾಳ	300.00	–	300.00
24	ಇಂಧನ	ರಾಜಸ್ವ	243940.67	190.00	244130.67
		ಬಂಡವಾಳ	76200.00	–	76200.00
25	ಕನ್ನಡ ಮತ್ತು ಸಂಸ್ಕೃತಿ	ರಾಜಸ್ವ	19470.35	–	19470.35
		ಬಂಡವಾಳ	1181.64	–	1181.64
26	ಯೋಜನೆ, ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ	ರಾಜಸ್ವ	42477.21	–	42477.21
		ಬಂಡವಾಳ	–	–	–

27	ಕಾನೂನು	ರಾಜಸ್ವ ಬಂಡವಾಳ	25933.80 –	– –	25933.80 –
28	ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ	ರಾಜಸ್ವ ಬಂಡವಾಳ	7165.39 –	139.97 –	7305.36 –
29	ಋಣ ಮೇಲುಸ್ತುವಾರಿ	ರಾಜಸ್ವ	–	557800.00	557800.00
		ಬಂಡವಾಳ	–	355430.82	355430.82
	ಒಟ್ಟು		**5518372.88**	**923789.90**	**6442162.78**

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2009–2010ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ರಾಜ್ಯದ ಸಂಚಿತ ನಿಧಿಯೊಳಗಿನಿಂದ ವಿನಿಯೋಗಿಸಲು ಭಾರತ ಸಂವಿಧಾನದ 204ನೇ ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು ಹಾಗೂ
ಹಣಕಾಸು ಸಚಿವರು

ಎಸ್.ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಅನುಬಂಧ – 10

ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನಸಭೆ
ಮೂರನೇ ಅಧಿವೇಶನ

ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ವಿಧೇಯಕ, 2009
(2009ರ ವಿಧಾನ ಸಭೆಯ ವಿಧೇಯಕ ಸಂಖ್ಯೆ – 36)

2009–10ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಕೆಲವು ಅಧಿಕ ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ವಿಧೇಯಕ.

2009–10ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆ ಪೈಕಿಯಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ ;

ಇದು ಭಾರತ ಗಣರಾಜ್ಯದ ಅರವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಲಿ,

1. **ಸಂಕ್ಷಿಪ್ತ ಹೆಸರು** :– ಈ ಅಧಿನಿಯಮವನ್ನು ಕರ್ನಾಟಕ ಧನವಿನಿಯೋಗ (ಸಂಖ್ಯೆ.3) ಅಧಿನಿಯಮ, 2009 ಎಂದು ಕರೆಯತಕ್ಕದ್ದು.

2. **ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ 2009–10ನೇ ಹಣಕಾಸು ವರ್ಷಕ್ಕಾಗಿ 196906.00 ಲಕ್ಷ ರೂಪಾಯಿಗಳ ನೀಡಿಕೆ** :– ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳ ಸಂಬಂಧದಲ್ಲಿ 2009–10ನೇ ಹಣಕಾಸು ಅವಧಿಯಲ್ಲಿ ಸಂದಾಯ ಮಾಡುವಾಗ ಒದಗಿ ಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿರುವ *ಒಂದು ಸಾವಿರದ ಒಂಬೈನೂರ ಅರವತ್ತೊಂಭತ್ತು ಕೋಟಿ ಆರು ಲಕ್ಷ ರೂಪಾಯಿಗಳು ಮಾತ್ರ* ಮೀರದಷ್ಟು ಕರ್ನಾಟಕ ರಾಜ್ಯ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡತಕ್ಕದ್ದು ಮತ್ತು ಉಪಯೋಗಿಸತಕ್ಕದ್ದು.

3. ಧನವಿನಿಯೋಗ :– ಈ ಅಧಿನಿಯಮದ ಮೂಲಕ, ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು ಸದರಿ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದ್ದು.

ಅನುಸೂಚಿ

(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

(ರೂ. ಲಕ್ಷಗಳಲ್ಲಿ)

			ಮೀರದ ಮೊಬಲಗು		
ಬೇಡಿಕೆ ಸಂಖ್ಯೆ	ಸೇವೆ ಮತ್ತು ಉದ್ದೇಶ		ವಿಧಾನಸಭೆ ಯಿಂದ ಪುರಸ್ಕೃತ ವಾದುದು	ಸಂಚಿತ ನಿಧಿ ಯಿಂದ ಪ್ರಭೃತ ವಾದುದು	ಒಟ್ಟು
1	2		3	4	5
01	ಕೃಷಿ ಮತ್ತು ತೋಟಗಾರಿಕೆ	ರಾಜಸ್ವ	2100.00	---	2100.00
02	ಪಶುಸಂಗೋಪನೆ ಮತ್ತು ಮೀನುಗಾರಿಕೆ	ರಾಜಸ್ವ	1200.99	2.46	1203.45
		ಬಂಡವಾಳ	155.00	---	155.00
03	ಆರ್ಥಿಕ	ರಾಜಸ್ವ	99.71	5.00	104.71
		ಬಂಡವಾಳ	7150.00		7150.00
04	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ	ರಾಜಸ್ವ	12735.08	17.80	12752.88
05	ಒಳಾಡಳಿತ ಮತ್ತು ಸಾರಿಗೆ	ರಾಜಸ್ವ	2453.98	---	2453.98
		ಬಂಡವಾಳ	4200.00	---	4200.00
07	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್	ರಾಜಸ್ವ	30672.00	---	30672.0 0
		ಬಂಡವಾಳ	8212.00		8212.00
08	ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ	ರಾಜಸ್ವ	2090.09	---	2090.09
09	ಸಹಕಾರ	ರಾಜಸ್ವ	10000.00	---	10000.00
		ಬಂಡವಾಳ	1585.00	---	1585.00

1	2		3	4	5
10	ಸಮಾಜ ಕಲ್ಯಾಣ	ರಾಜಸ್ವ	932.73	---	932.73
		ಬಂಡವಾಳ	1571.27	---	1571.27
11	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	ರಾಜಸ್ವ	400.00	---	400.00
12	ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು	ರಾಜಸ್ವ	5997.19	---	5997.19
13	ಆಹಾರ ಮತ್ತು ನಾಗರೀಕ ಸರಬರಾಜು	ರಾಜಸ್ವ	11700.00	---	11700.00
14	ಕಂದಾಯ	ರಾಜಸ್ವ	3691.75	---	3691.75
15	ಮಾಹಿತಿ ತಂತ್ರಜ್ಞಾನ	ರಾಜಸ್ವ	699.00		699.00
17	ಶಿಕ್ಷಣ	ರಾಜಸ್ವ	576.63	---	576.63
18	ವಾಣಿಜ್ಯ ಮತ್ತು ಕೈಗಾರಿಕೆ	ರಾಜಸ್ವ	156.33	---	156.33
		ಬಂಡವಾಳ	2765.82	---	2765.82
19	ನಗರಾಭಿವೃದ್ಧಿ	ರಾಜಸ್ವ	16486.43	---	16486.43
20	ಲೋಕೋಪಯೋಗಿ	ರಾಜಸ್ವ	3310.00	---	3310.00
		ಬಂಡವಾಳ	9000.00	---	9000.00
21	ಜಲಸಂಪನ್ಮೂಲ	ರಾಜಸ್ವ	5671.92	---	5671.92
		ಬಂಡವಾಳ	1225.00	---	1225.00

22	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು	ರಾಜಸ್ವ	5942.36	----	5942.36
		ಬಂಡವಾಳ	350.00	---	350.00
23	ಕಾರ್ಮಿಕ	ರಾಜಸ್ವ	6000.00	---	6000.00
		ಬಂಡವಾಳ	1000.00	---	1000.00
24	ಇಂಧನ	ಬಂಡವಾಳ	17500.00	---	17500.00
25	ಕನ್ನಡ ಮತ್ತು ಸಂಸ್ಕೃತಿ	ರಾಜಸ್ವ	1169.00	---	1169.00
26	ಯೋಜನೆ, ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ	ರಾಜಸ್ವ	15597.43	---	15597.43
27	ಕಾನೂನು	ರಾಜಸ್ವ	1699.75	---	1699.75
28	ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ	ರಾಜಸ್ವ	763.28	---	763.28
29	ಋಣ	ರಾಜಸ್ವ	---	1.00	
	ಮೇಲುಸ್ತುವಾರಿ				1.00
		ಬಂಡವಾಳ		20.00	20.00
	ಒಟ್ಟು :	**ರಾಜಸ್ವ**	**142145.65**	**26.26**	**142171.91**
		ಬಂಡವಾಳ	**54714.09**	**20.00**	**54734.09**
		ಒಟ್ಟು ಮೊತ್ತ :	**196859.74**	**46.26**	**196906.00**

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2009-10ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿ ಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ರಾಜ್ಯದ ಸಂಚಿತ ನಿಧಿಯೊಳಗಿನಿಂದ ವಿನಿಯೋಗಿಸಲು ಭಾರತ ಸಂವಿಧಾನದ 205ನೇ (1)(ಎ) ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು ಹಾಗೂ
ಹಣಕಾಸು ಸಚಿವರು

ಎಸ್.ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಅನುಬಂಧ – 11

ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನಸಭೆ
ಮೂರನೇ ಅಧಿವೇಶನ

ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2009
(2009ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 38)

ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956ಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956ನ್ನು (1957ರ ಕರ್ನಾಟಕ ಅಧಿನಿಯಮ 2) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಅರವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು *ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ಅಧಿನಿಯಮ, 2009* ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. ಪ್ರಸ್ತಾವನೆಯ ತಿದ್ದುಪಡಿ.- ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956ರ (1957ರ ಕರ್ನಾಟಕ ಅಧಿನಿಯಮ 2)(ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) ಪ್ರಸ್ತಾವನೆಯಲ್ಲಿ,-

(ಎ) "ಮತ್ತು ಸರ್ಕಾರದ ಮುಖ್ಯ ಸಚೇತಕ" ಎಂಬ ಪದಗಳಿಗೆ ", ಸರ್ಕಾರದ ಮುಖ್ಯ ಸಚೇತಕರುಗಳು ಮತ್ತು ವಿರೋಧ ಪಕ್ಷದ ಮುಖ್ಯ

ಸಚೇತಕರುಗಳು" ಎಂಬ ಅಲ್ಪವಿರಾಮ ಚಿಹ್ನೆ ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) "ಸರ್ಕಾರದ ಮುಖ್ಯ ಸಚೇತಕ" ಎಂಬ ಪದಗಳಿಗೆ "ಸರ್ಕಾರದ ಮುಖ್ಯ ಸಚೇತಕರುಗಳು, ವಿರೋಧ ಪಕ್ಷದ ಮುಖ್ಯ ಸಚೇತಕರುಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

3. 2ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 2ನೇ ಪ್ರಕರಣದಲ್ಲಿ (ಸಿಸಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(ಸಿಸಿಸಿ) 'ವಿರೋಧ ಪಕ್ಷದ ಮುಖ್ಯ ಸಚೇತಕರು' ಎಂದರೆ ವಿರೋಧಪಕ್ಷದ ನಾಯಕರಿಂದ ಸಂದರ್ಭಾನುಸಾರ ವಿಧಾನಸಭೆ ಅಥವಾ ವಿಧಾನಪರಿಷತ್ತಿನ ವಿರೋಧಪಕ್ಷದ ಮುಖ್ಯ ಸಚೇತಕರು ಎಂದು ಹೆಸರಿಸಲಾದ ಒಬ್ಬ ವಿಧಾನಸಭಾ ಅಥವಾ ವಿಧಾನಪರಿಷತ್ತಿನ ಸದಸ್ಯರು."

4. 3ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 3ನೇ ಪ್ರಕರಣ (2)ನೇ ಉಪ–ಪ್ರಕರಣದಲ್ಲಿ "ಆರು ಸಾವಿರ ರೂಪಾಯಿಗಳ" ಎಂಬ ಪದಗಳಿಗೆ "ಹನ್ನೆರಡು ಸಾವಿರ ರೂಪಾಯಿಗಳ" ಎಂಬ ಪದಗಳನ್ನು 2005ರ ಆಗಸ್ಟ್ 24ನೇ ದಿನಾಂಕದಿಂದ ಜಾರಿಗೆ ತರುವಂತೆ ಪ್ರತಿಯೋಜಿಸಲಾಗಿದೆಯೆಂದು ಭಾವಿಸತಕ್ಕದ್ದು.

5. 4ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 4ನೇ ಪ್ರಕರಣದ (1)ನೇ ಉಪ–ಪ್ರಕರಣದಲ್ಲಿ "ಮತ್ತು ಸರ್ಕಾರದ ಮುಖ್ಯ ಸಚೇತಕರು" ಎಂಬ ಪದಗಳಿಗೆ ",ಸರ್ಕಾರದ ಮುಖ್ಯ ಸಚೇತಕರುಗಳು ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರುಗಳು" ಎಂಬ ಅಲ್ಪವಿರಾಮ ಚಿಹ್ನೆ ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

6. 8ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 8ನೇ ಪ್ರಕರಣದಲ್ಲಿ,–

(i) ಶೀರ್ಷಿಕೆಯಲ್ಲಿ "ಮತ್ತು ಸರ್ಕಾರದ ಮುಖ್ಯ ಸಚೇತಕರು" ಎಂಬ ಪದಗಳಿಗೆ ",ಸರ್ಕಾರದ ಮುಖ್ಯ ಸಚೇತಕರುಗಳು ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರುಗಳು" ಎಂಬ ಅಲ್ಪವಿರಾಮ ಚಿಹ್ನೆ ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) (1)ನೇ ಉಪ-ಪ್ರಕರಣದಲ್ಲಿ "ಮತ್ತು ಸರ್ಕಾರದ ಮುಖ್ಯ ಸಚೇತಕ" ಎಂಬ ಪದಗಳಿಗೆ", ಸರ್ಕಾರದ ಮುಖ್ಯ ಸಚೇತಕರುಗಳು ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರುಗಳು" ಎಂಬ ಅಲ್ಪವಿರಾಮ ಚಿಹ್ನೆ ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು;

(iii) (2)ನೇ ಉಪ-ಪ್ರಕರಣದಲ್ಲಿ,-

(ಎ) "ಮತ್ತು ಸರ್ಕಾರಿ ಮುಖ್ಯ ಸಚೇತಕ" ಎಂಬ ಪದಗಳಿಗೆ", ಸರ್ಕಾರದ ಮುಖ್ಯ ಸಚೇತಕರುಗಳು ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕ ರುಗಳು" ಎಂಬ ಅಲ್ಪವಿರಾಮ ಚಿಹ್ನೆ ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) (ಎ) ಖಂಡದಲ್ಲಿ ಒಂದನೇ ಮತ್ತು ಎರಡನೇ ಪರಂತುಕಗಳಲ್ಲಿ "ಮತ್ತು ಸರ್ಕಾರಿ ಮುಖ್ಯ ಸಚೇತಕ" ಎಂಬ ಪದಗಳಿಗೆ", ಸರ್ಕಾರದ ಮುಖ್ಯ ಸಚೇತಕರುಗಳು ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರುಗಳು" ಎಂಬ ಅಲ್ಪವಿರಾಮ ಚಿಹ್ನೆ ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಸಿ) (ಡಿ) ಖಂಡದ ಪರಂತುಕದಲ್ಲಿ "ಮತ್ತು ಸರ್ಕಾರಿ ಮುಖ್ಯ ಸಚೇತಕ" ಎಂಬ ಪದಗಳಿಗೆ "ಸರ್ಕಾರದ ಮುಖ್ಯ ಸಚೇತಕರುಗಳು ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರುಗಳು" ಎಂಬ ಅಲ್ಪವಿರಾಮ ಚಿಹ್ನೆ ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iv) (2ಎ) ಉಪ-ಪ್ರಕರಣದಲ್ಲಿ,-

(ಎ) "ಮತ್ತು ಸರ್ಕಾರಿ ಮುಖ್ಯ ಸಚೇತಕ" ಎಂಬ ಪದಗಳಿಗೆ", ಸರ್ಕಾರದ ಮುಖ್ಯ ಸಚೇತಕರುಗಳು ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕ ರುಗಳು" ಎಂಬ ಅಲ್ಪವಿರಾಮ ಚಿಹ್ನೆ ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಪರಂತುಕದಲ್ಲಿ "ಮತ್ತು ಸರ್ಕಾರಿ ಮುಖ್ಯ ಸಚೇತಕ" ಎಂಬ ಪದಗಳು ಬರುವ ಎರಡು ಕಡೆಗಳಲ್ಲಿ", ಸರ್ಕಾರದ ಮುಖ್ಯ ಸಚೇತಕರುಗಳು ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರುಗಳು" ಎಂಬ ಅಲ್ಪವಿರಾಮ ಚಿಹ್ನೆ ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

(v) (2ಬಿ) ಉಪ-ಪ್ರಕರಣದಲ್ಲಿ "ಮತ್ತು ಸರ್ಕಾರಿ ಮುಖ್ಯ ಸಚೇತಕ" ಎಂಬ ಪದಗಳಿಗೆ", ಸರ್ಕಾರದ ಮುಖ್ಯ ಸಚೇತ ಕರುಗಳು ಮತ್ತು ವಿರೋಧ ಪಕ್ಷದ ಮುಖ್ಯ ಸಚೇತ ಕರುಗಳು" ಎಂಬ ಅಲ್ಪವಿರಾಮ ಚಿಹ್ನೆ ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು;

(vi) (3)ನೇ ಉಪ-ಪ್ರಕರಣದ (ಎಎ) ಖಂಡದಲ್ಲಿ "ಮತ್ತು ಸರ್ಕಾರಿ ಮುಖ್ಯ ಸಚೇತಕ" ಎಂಬ ಪದಗಳಿಗೆ, "ಸರ್ಕಾರದ ಮುಖ್ಯ ಸಚೇತಕರುಗಳು ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರುಗಳು" ಎಂಬ ಅಲ್ಪವಿರಾಮ ಚಿಹ್ನೆ ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

7. 9ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 9ನೇ ಪ್ರಕರಣದಲ್ಲಿ "ಮತ್ತು ಸರ್ಕಾರಿ ಮುಖ್ಯ ಸಚೇತಕ" ಎಂಬ ಪದಗಳು ಬರುವ ಎರಡು ಕಡೆಗಳಲ್ಲಿ ", ಸರ್ಕಾರದ ಮುಖ್ಯ ಸಚೇತಕರುಗಳು ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರುಗಳು" ಎಂಬ ಅಲ್ಪವಿರಾಮ ಚಿಹ್ನೆ ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

8. 10ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 10ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ "ಎಂಟು ಸಾವಿರ ರೂಪಾಯಿಗಳ" ಎಂಬ ಪದಗಳಿಗೆ "ಹತ್ತು ಸಾವಿರ ರೂಪಾಯಿಗಳ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

9. 10ಜೆ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 10ಜೆ ಪ್ರಕರಣದಲ್ಲಿ "ಎಂಟು ಸಾವಿರ ರೂಪಾಯಿಗಳ" ಎಂಬ ಪದಗಳಿಗೆ "ಹತ್ತು ಸಾವಿರ ರೂಪಾಯಿಗಳ" ಎಂಬ ಪದಗಳನ್ನು 2008ರ ಆಗಸ್ಟ್ ಹದಿನಾಲ್ಕನೇ ದಿನಾಂಕದಿಂದ ಜಾರಿಗೆ ಬರುವಂತೆ ಪ್ರತಿಯೋಜಿಸತಕ್ಕದ್ದು.

10. 10ಕೆ ಹೊಸ ಪ್ರಕರಣದ ಸೇರ್ಪಡೆ.– ಮೂಲ ಅಧಿನಿಯಮದ 10ಜೆ ಪ್ರಕರಣದ ತರುವಾಯ ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

"**10 ಕೆ. ವಿರೋಧ ಪಕ್ಷದ ಮುಖ್ಯ ಸಚೇತಕರ ವೇತನ.**– ಪ್ರತಿಯೊಬ್ಬ ವಿರೋಧ ಪಕ್ಷದ ಮುಖ್ಯ ಸಚೇತಕರಿಗೆ ತಿಂಗಳಿಗೆ ಹತ್ತು ಸಾವಿರ ರೂಪಾಯಿಗಳ ವೇತನವನ್ನು ನೀಡತಕ್ಕದ್ದು."

11. 10ಎಂ ಹೊಸ ಪ್ರಕರಣದ ಸೇರ್ಪಡೆ.– ಮೂಲ ಅಧಿನಿಯಮದ 10ಎಲ್ ಪ್ರಕರಣದ ತರುವಾಯ ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

"**10ಎಂ. ವಿರೋಧ ಪಕ್ಷದ ಮುಖ್ಯ ಸಚೇತಕರಿಗೆ ಸಾರಿಗೆ ವ್ಯವಸ್ಥೆ.**– (1) ರಾಜ್ಯ ಸರ್ಕಾರವು ಪ್ರತಿಯೊಬ್ಬ ವಿರೋಧ ಪಕ್ಷದ ಮುಖ್ಯ ಸಚೇತಕರಿಗೆ ಒಂದು ಸೂಕ್ತ ವಾಹನವನ್ನು ಒದಗಿಸತಕ್ಕದ್ದು;

(2) ಪ್ರತಿಯೊಬ್ಬ ವಿರೋಧ ಪಕ್ಷದ ಮುಖ್ಯ ಸಚೇತಕರಿಗೆ ತಿಂಗಳಿಗೆ ಐದು ನೂರು ಲೀಟರ್‌ಗಳ ಪೆಟ್ರೋಲ್ ದರಕ್ಕೆ ಸಮನಾದ ಸಾರಿಗೆ ಭತ್ಯೆಯನ್ನು ನೀಡತಕ್ಕದ್ದು."

12. 10ಎನ್ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 10ಎನ್ ಪ್ರಕರಣದಲ್ಲಿ,–

(i) ಶೀರ್ಷಿಕೆಯಲ್ಲಿ "ಮತ್ತು ಸರ್ಕಾರವು" ಎಂಬ ಪದಗಳಿಗೆ "ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರು" ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) (1)ನೇ ಉಪ–ಪ್ರಕರಣದಲ್ಲಿ,–

(ಎ) "ಪ್ರತಿಯೊಬ್ಬ ಸರ್ಕಾರಿ ಮುಖ್ಯ ಸಚೇತಕ" ಎಂಬ ಪದಗಳಿಗೆ "ಪ್ರತಿಯೊಬ್ಬ ಸರ್ಕಾರದ ಮುಖ್ಯ ಸಚೇತಕರು ಮತ್ತು ಪ್ರತಿಯೊಬ್ಬ ವಿರೋಧ ಪಕ್ಷ ಮುಖ್ಯ ಸಚೇತಕರು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) "ಮತ್ತು 10ಎಲ್ ಪ್ರಕರಣದ" ಎಂಬ ಪದಗಳು, ಅಂಕಿಗಳು ಮತ್ತು ಅಕ್ಷರಗಳಿಗೆ "ಮತ್ತು 10ಎಲ್ ಪ್ರಕರಣ ಅಥವಾ ಸಂದರ್ಭಾನುಸಾರ 10ಎಂ ಪ್ರಕರಣದ" ಎಂಬ

ಪದಗಳು, ಅಂಕಿಗಳು ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು.

13. 10ಪಿ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 10ಪಿ ಪ್ರಕರಣದಲ್ಲಿ "ಮತ್ತು ಸರ್ಕಾರಿ ಮುಖ್ಯ ಸಚೇತಕ" ಎಂಬ ಪದಗಳಿಗೆ", ಸರ್ಕಾರದ ಮುಖ್ಯ ಸಚೇತಕರುಗಳು ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರುಗಳು" ಎಂಬ ಅಲ್ಪವಿರಾಮ ಚಿಹ್ನೆ ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

14. 10ಕ್ಯೂ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 10ಕ್ಯೂ ಪ್ರಕರಣದಲ್ಲಿ "ಮತ್ತು ಸರ್ಕಾರಿ ಮುಖ್ಯ ಸಚೇತಕನಿಗೆ" ಎಂಬ ಪದಗಳಿಗೆ "ಸರ್ಕಾರದ ಮುಖ್ಯ ಸಚೇತಕರುಗಳು ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರುಗಳು" ಎಂಬ ಅಲ್ಪವಿರಾಮ ಚಿಹ್ನೆ ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

15. 11ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 11ನೇ ಪ್ರಕರಣದ (1)ನೇ ಉಪ–ಪ್ರಕರಣದಲ್ಲಿ "ಎಂಟು ಸಾವಿರ ರೂಪಾಯಿಗಳ" ಎಂಬ ಪದಗಳಿಗೆ "ಹತ್ತು ಸಾವಿರ ರೂಪಾಯಿಗಳ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

16. 11ಎ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 11ನೇ ಪ್ರಕರಣದಲ್ಲಿ,–

(i) (1)ನೇ ಉಪ–ಪ್ರಕರಣದಲ್ಲಿ "ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ಅಧಿನಿಯಮ, 2005" ಎಂಬ ಪದಗಳು, ಆವರಣ ಚಿಹ್ನೆಗಳು ಮತ್ತು ಅಂಕಿಗಳಿಗೆ "ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ಅಧಿನಿಯಮ, 2009" ಎಂಬ ಪದಗಳು, ಆವರಣ ಚಿಹ್ನೆಗಳು ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು;

H-259-61

(ii) (iii)ನೇ ಖಂಡದಲ್ಲಿ,-

(ಎ) "ಐದು ಸಾವಿರ ರೂಪಾಯಿಗಳ" ಎಂಬ ಪದಗಳಿಗೆ "ಹದಿನೈದು ಸಾವಿರ ರೂಪಾಯಿಗಳ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಮೊದಲನೇ ಪರಂತುಕಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಪರಂತು, ಯಾವನೇ ವ್ಯಕ್ತಿಯು ಐದು ವರ್ಷಗಳಿಗಿಂತ ಹೆಚ್ಚು ಸೇವೆ ಸಲ್ಲಿಸಿದ್ದಲ್ಲಿ, ಆತನಿಗೆ ತದನಂತರ ಮುಂದುವರೆದ ಪ್ರತಿಯೊಂದು ವರ್ಷಕ್ಕೆ ಪ್ರತಿ ತಿಂಗಳು ಒಂದು ಸಾವಿರ ರೂಪಾಯಿಗಳ ದರದಲ್ಲಿ ಹೆಚ್ಚುವರಿ ನಿವೃತ್ತಿ ವೇತನವನ್ನು ನೀಡತಕ್ಕದ್ದು, ಆದಾಗ್ಯೂ ಈ ಪ್ರಕರಣದ ಅಡಿಯಲ್ಲಿ ನೀಡುವ ನಿವೃತ್ತಿ ವೇತನದ ಒಟ್ಟು ಮೊತ್ತವು ತಿಂಗಳಿಗೆ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಮೀರತಕ್ಕದ್ದಲ್ಲ."

(iii) (1ಎ) ಉಪ-ಪ್ರಕರಣವನ್ನು 2005ನೇ ಆಗಸ್ಟ್ ಹದಿನಾಲ್ಕನೇ ದಿನಾಂಕದಿಂದ ಬಿಟ್ಟುಬಿಡಲಾಗಿದೆ ಎಂದು ಭಾವಿಸತಕ್ಕದ್ದು;

(iv) (2)ನೇ ಉಪ-ಪ್ರಕರಣದ (ಬಿ)ನೇ ಖಂಡದಲ್ಲಿ "ಅಥವಾ ಸರ್ಕಾರಿ ಮುಖ್ಯ ಸಚೇತಕ" ಎಂಬ ಪದಗಳಿಗೆ", ಸರ್ಕಾರದ ಮುಖ್ಯ ಸಚೇತಕರುಗಳು ಅಥವಾ ವಿರೋಧ ಪಕ್ಷದ ಮುಖ್ಯ ಸಚೇತಕರುಗಳು" ಎಂಬ ಅಲ್ಪವಿರಾಮ ಚಿಹ್ನೆ ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು;

(v) (4)ನೇ ಉಪ-ಪ್ರಕರಣದಲ್ಲಿ "ಸರ್ಕಾರಿ ಮುಖ್ಯ ಸಚೇತಕ" ಎಂಬ ಪದಗಳಿಗೆ ", ಸರ್ಕಾರದ ಮುಖ್ಯ ಸಚೇತಕರುಗಳು ಅಥವಾ ವಿರೋಧ ಪಕ್ಷದ ಮುಖ್ಯ ಸಚೇತಕರುಗಳು" ಎಂಬ ಅಲ್ಪವಿರಾಮ ಚಿಹ್ನೆ ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

(vi) (5)ನೇ ಉಪಪ್ರಕರಣದಲ್ಲಿ, (i)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

``(ii) ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು ಆತನು ಭಾರತದಲ್ಲಿ ರೈಲ್ವೆ ಮೂಲಕ ಮೊದಲನೇ ದರ್ಜೆ/ಎರಡನೇ ದರ್ಜೆ ಎಸಿಯಲ್ಲಿ ಒಂದು ವರ್ಷಕ್ಕೆ ಗರಿಷ್ಠ 35000 ಕಿಮೀ.ಗಳ ದೂರ ಪ್ರಯಾಣಿಸಲು ವಾಸ್ತವಿಕ ಪ್ರಯಾಣದ ವೆಚ್ಚಗಳ ಮರುಪಾವತಿಗೆ ಅರ್ಹನಾಗಿರತಕ್ಕದ್ದು.''

17. 11ಬಿ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 11ಬಿ ಪ್ರಕರಣದಲ್ಲಿ "ಅಂಥ ಸದಸ್ಯನು ಮರಣ ಹೊಂದದೇ ಇದ್ದರೆ, ಎಲ್ಲಿಯವರೆಗೆ ಅವನು ಸದಸ್ಯನಾಗಿ ಮುಂದುವರೆಯುತ್ತಿದ್ದನೋ ಆ ಉಳಿದ ಅವಧಿಗೆ" ಎಂಬ ಪದಗಳಿಗೆ "ಆಜೀವ ಪರ್ಯಂತ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

18. 11ಸಿ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 11ಸಿ ಪ್ರಕರಣದ (2)ನೇ ಉಪ-ಪ್ರಕರಣದಲ್ಲಿ,-

(ಎ) "ಸರ್ಕಾರಿ ಮುಖ್ಯ ಸಚೇತಕ" ಎಂಬ ಪದಗಳಿಗೆ", ಸರ್ಕಾರದ ಮುಖ್ಯ ಸಚೇತಕರುಗಳು ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರುಗಳು" ಎಂಬ ಅಲ್ಪವಿರಾಮ ಚಿಹ್ನೆ ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) "ಐವತ್ತು ಸಾವಿರ ರೂಪಾಯಿಗಳ" ಎಂಬ ಪದಗಳಿಗೆ "ಎಪ್ಪತ್ತೈದು ಸಾವಿರ ರೂಪಾಯಿಗಳ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

19. 12ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 12ನೇ ಪ್ರಕರಣದಲ್ಲಿ,-

(1) (ಸಿಸಿ) ಖಂಡವನ್ನು ಬಿಟ್ಟುಬಿಡತಕ್ಕದ್ದು;

(2) (ಸಿಸಿಸಿ) ಖಂಡದಲ್ಲಿ "ಸರ್ಕಾರಿ ಮುಖ್ಯ ಸಚೇತಕ" ಎಂಬ ಪದಗಳಿಗೆ ", ಸರ್ಕಾರಿ ಮುಖ್ಯ ಸಚೇತಕ ಮತ್ತು ವಿರೋಧ

ಪಕ್ಷದ ಮುಖ್ಯ ಸಚೇತಕರುಗಳು" ಎಂಬ ಅಲ್ಪವಿರಾಮ ಚಿಹ್ನೆ ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು;

(3) (ಜಿ) ಖಂಡದಲ್ಲಿ "ಮತ್ತು ಸರ್ಕಾರಿ ಮುಖ್ಯ ಸಚೇತಕ" ಎಂಬ ಪದಗಳಿಗೆ "ಸರ್ಕಾರದ ಮುಖ್ಯ ಸಚೇತಕರುಗಳು ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರುಗಳು" ಎಂಬ ಅಲ್ಪವಿರಾಮ ಚಿಹ್ನೆ ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು;

(4) (ಎಚ್) ಖಂಡದಲ್ಲಿ,-

(ಎ) (i)ನೇ ಬಾಬಿನಲ್ಲಿ "ಏಳು ಸಾವಿರದ ಐದು ನೂರು ರೂಪಾಯಿ" ಎಂಬ ಪದಗಳಿಗೆ "ಹತ್ತು ಸಾವಿರ ರೂಪಾಯಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) (ii)ನೇ ಬಾಬಿನಲ್ಲಿ "ಮೂರು ಸಾವಿರದ ಐದು ನೂರು ರೂಪಾಯಿ" ಎಂಬ ಪದಗಳಿಗೆ "ಹದಿನೈದು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಸಿ) (iii)ನೇ ಬಾಬಿನಲ್ಲಿ "ಒಂದು ಸಾವಿರ ರೂಪಾಯಿ" ಎಂಬ ಪದಗಳಿಗೆ "ನಾಲ್ಕು ಸಾವಿರ ರೂಪಾಯಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಡಿ) (iv)ನೇ ಬಾಬಿನಲ್ಲಿ "ಎರಡು ಸಾವಿರ ರೂಪಾಯಿ" ಎಂಬ ಪದಗಳಿಗೆ "ಐದು ಸಾವಿರ ರೂಪಾಯಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

20. 13ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 13ನೇ ಪ್ರಕರಣದಲ್ಲಿ,-

(i) ಶೀರ್ಷಿಕೆಯಲ್ಲಿ "ಮತ್ತು ಸರ್ಕಾರಿ ಮುಖ್ಯ ಸಚೇತಕ" ಎಂಬ ಪದಗಳಿಗೆ "ಸರ್ಕಾರದ ಮುಖ್ಯ ಸಚೇತಕರುಗಳು ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರುಗಳು" ಎಂಬ ಅಲ್ಪವಿರಾಮ ಚಿಹ್ನೆ ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) (1), (1ಎ) ಮತ್ತು (2)ನೇ ಉಪ-ಪ್ರಕರಣಗಳಲ್ಲಿ "ಅಥವಾ ಸರ್ಕಾರಿ ಮುಖ್ಯ ಸಚೇತಕ" ಎಂಬ ಪದಗಳಿಗೆ ", ಸರ್ಕಾರದ ಮುಖ್ಯ ಸಚೇತಕರುಗಳು ಅಥವಾ ವಿರೋಧ ಪಕ್ಷದ ಮುಖ್ಯ ಸಚೇತಕರುಗಳು" ಎಂಬ ಅಲ್ಪವಿರಾಮ ಚಿಹ್ನೆ ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು;

21. 13ಬಿ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 13ಬಿ ಪ್ರಕರಣದ ವಿವರಣೆಯಲ್ಲಿ "ಮತ್ತು ಸರ್ಕಾರಿ ಮುಖ್ಯ ಸಚೇತಕ" ಎಂಬ ಪದಗಳಿಗೆ ", ಸರ್ಕಾರದ ಮುಖ್ಯ ಸಚೇತಕರುಗಳು ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರುಗಳು" ಎಂಬ ಅಲ್ಪವಿರಾಮ ಚಿಹ್ನೆ ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

22. 15ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 15ನೇ ಪ್ರಕರಣದ (3)ನೇ ಉಪ-ಪ್ರಕರಣದಲ್ಲಿ "ಮತ್ತು ಸರ್ಕಾರಿ ಮುಖ್ಯ ಸಚೇತಕ" ಎಂಬ ಪದಗಳಿಗೆ ", ಸರ್ಕಾರದ ಮುಖ್ಯ ಸಚೇತಕರುಗಳು ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರುಗಳು" ಎಂಬ ಅಲ್ಪವಿರಾಮ ಚಿಹ್ನೆ ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956ರಲ್ಲಿ (1957ರ ಕರ್ನಾಟಕ ಅಧಿನಿಯಮ 2) ಈ ಮುಂದಿನವುಗಳಿಗೆ ಉಪಬಂಧ ಕಲ್ಪಿಸಲು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ, ಎಂದರೆ:-

(i) ಸರ್ಕಾರಿ ಮುಖ್ಯ ಸಚೇತಕರ ಸ್ಥಾನಮಾನಗಳನ್ನು ವಿರೋಧ ಪಕ್ಷದ ಮುಖ್ಯ ಸಚೇತರಿಗೆ ಒದಗಿಸುವುದು;

(ii) (ಎ) ಶಾಸಕರ ವೇತನವನ್ನು ತಿಂಗಳಿಗೆ ರೂ. 8000/-ಗಳಿಂದ ತಿಂಗಳಿಗೆ ರೂ. 10000/-ಕ್ಕೆ ಹೆಚ್ಚಿಸುವುದು;

(ಬಿ) ದೂರವಾಣಿ ಭತ್ಯೆಯನ್ನು ತಿಂಗಳಿಗೆ ರೂ. 7500/-ರಿಂದ ತಿಂಗಳಿಗೆ ರೂ. 10000/- ಕ್ಕೆ ಹೆಚ್ಚಿಸುವುದು;

(ಸಿ) ಮತಕ್ಷೇತ್ರ ಭತ್ಯೆಯನ್ನು ತಿಂಗಳಿಗೆ ರೂ. 3500/-ಗಳಿಂದ ತಿಂಗಳಿಗೆ ರೂ. 15000/-ಕ್ಕೆ ಹೆಚ್ಚಿಸುವುದು;

(ಡಿ) ಅಂಚೆ ವೆಚ್ಚವನ್ನು ತಿಂಗಳಿಗೆ ರೂ. 1000/-ಗಳಿಂದ ತಿಂಗಳಿಗೆ ರೂ. 4000/-ಕ್ಕೆ ಹೆಚ್ಚಿಸುವುದು;

(ಇ) ರೂಮ್ ಬಾಯ್‌ಗಳ ವೇತನವನ್ನು ತಿಂಗಳಿಗೆ ರೂ. 2000/-ಗಳಿಂದ ತಿಂಗಳಿಗೆ ರೂ. 5000/- ಗಳಿಗೆ ಹೆಚ್ಚಿಸುವುದು;

(iii) ನಿವೃತ್ತಿ ವೇತನವನ್ನು ತಿಂಗಳಿಗೆ ರೂ. 5000/- ದಿಂದ ತಿಂಗಳಿಗೆ ರೂ. 15000/- ಕ್ಕೆ ಹೆಚ್ಚಿಸುವುದು ಮತ್ತು ಗರಿಷ್ಠ ನಿವೃತ್ತಿ ವೇತನವನ್ನು ತಿಂಗಳಿಗೆ ರೂ. 10000/-ದಿಂದ ತಿಂಗಳಿಗೆ ರೂ. 25000/-ಕ್ಕೆ ಹೆಚ್ಚಿಸುವುದು;

(iv) ಕುಟುಂಬವೇತನವನ್ನು ಸದಸ್ಯನ ಅವಲಂಬಿತರಿಗೆ ಆಜೀವಪರ್ಯಂತ ನೀಡುವುದು;

(v) ಮಾಜಿ ಸದಸ್ಯರಿಗೆ ಭಾರತದಲ್ಲಿ ರೈಲಿನ ಮೂಲಕ ಮೊದಲನೇ ದರ್ಜೆ/ಎರಡನೇ ದರ್ಜೆ ಎಸಿಯಲ್ಲಿ ಗರಿಷ್ಠ 35000 ಕಿಮೀಗಳ ಪ್ರಯಾಣದ ವಾಸ್ತವಿಕ ವೆಚ್ಚವನ್ನು ಮರುಪಾವತಿ ಮಾಡುವುದು;

(vi) ಉಪಸಭಾಪತಿ, ಉಪಸಭಾಧ್ಯಕ್ಷ ಹಾಗೂ ಸರ್ಕಾರದ ಮುಖ್ಯ ಸಚೇತಕರ ವೇತನವನ್ನು ತಿಂಗಳಿಗೆ ರೂ. 8000/- ತಿಂಗಳಿಗೆ ರೂ. 10000/-ಕ್ಕೆ ಹೆಚ್ಚಿಸುವುದು ಮತ್ತು ಆತಿಥ್ಯ ಭತ್ಯೆಯನ್ನು ವರ್ಷಕ್ಕೆ ರೂ. 50000/-ದಿಂದ ವರ್ಷಕ್ಕೆ ರೂ. 75000/- ಕ್ಕೆ ಹೆಚ್ಚಿಸುವುದು;

ಕೆಲವು ಆನುಷಂಗಿಕ ತಿದ್ದುಪಡಿಗಳನ್ನು ಸಹಾ ಪ್ರಸ್ತಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದಾಗಿ ರೂ. 17.34 ಕೋಟಿಗಳ ಆವರ್ತಕ ವೆಚ್ಚವು ಉಂಟಾಗುತ್ತದೆ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತು ಜ್ಞಾಪನ ಪತ್ರ

ಖಂಡ: 16 (iv)ನೇ ಉಪಖಂಡವು ಮಾಜಿ ಶಾಸಕರು ರೈಲಿನ ಮೂಲಕ ಪ್ರಯಾಣಿಸುವುದಕ್ಕಾಗಿ ವಾಸ್ತವಿಕ ಪ್ರಯಾಣ ಭತ್ಯೆಯ ಮರುಪಾವತಿ ಮುಂತಾದುವುಗಳಿಗೆ ವಿಧಾನಗಳನ್ನು ನಿಯಮದ ಮೂಲಕ ನಿಯಮಿಸಲು ವಿಶೇಷ ಮಂಡಳಿಗೆ ಅಧಿಕಾರವನ್ನು ನೀಡುತ್ತದೆ.

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

ಜೆ.ಎಸ್. ಸುರೇಶ್ ಕುಮಾರ್
ನಗರಾಭಿವೃದ್ಧಿ, ಕಾನೂನು ಮತ್ತು
ಸಂಸದೀಯ ವ್ಯವಹಾರಗಳು ಸಚಿವರು

ಎಸ್.ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

H-೯೫೨-[illegible]

ಅನುಬಂಧ

ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956ರ ಉದ್ಧೃತ ಭಾಗ

XX XX XX

ಸಭಾಪತಿ, ಉಪ-ಸಭಾಪತಿ, ಸಭಾಧ್ಯಕ್ಷ, ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕರು ಮತ್ತು ಸರ್ಕಾರದ ಮುಖ್ಯ ಸಚೇತಕ ಮತ್ತು ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನ ಸದಸ್ಯರ ವೇತನಗಳ, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಸಂಬಂಧದಲ್ಲಿ ಉಪಬಂಧ ಕಲ್ಪಿಸಲು ಅಧಿನಿಯಮ.

ಸಭಾಪತಿ, ಉಪ-ಸಭಾಪತಿ, ಸಭಾಧ್ಯಕ್ಷ, ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕ, ಸರ್ಕಾರದ ಮುಖ್ಯ ಸಚೇತಕ ಮತ್ತು ಕರ್ನಾಟಕ ರಾಜ್ಯದ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳು ಹಾಗೂ ಇತರ ಕೆಲವು ವಿಷಯಗಳ ಸಂಬಂಧದಲ್ಲಿ ಉಪಬಂಧ ಕಲ್ಪಿಸುವುದು ವಿಹಿತವಾಗಿರುವುದರಿಂದ ;

XX XX XX

3. ಸಭಾಪತಿ ಮತ್ತು ಸಭಾಧ್ಯಕ್ಷರ ಸಂಬಳಗಳು ಮತ್ತು ಆತಿಥ್ಯ ಭತ್ಯೆಗಳು:– (1) ಸಭಾಪತಿಗೆ ಒಂದು ತಿಂಗಳಿಗೆ ಆರು ಸಾವಿರ ರೂಪಾಯಿಗಳ ಸಂಬಳ ಮತ್ತು ಒಂದು ವರ್ಷಕ್ಕೆ ಎಪ್ಪತ್ತು ಸಾವಿರ ರೂಪಾಯಿಗಳ ಆತಿಥ್ಯ ಭತ್ಯೆಯನ್ನು ಸಂದಾಯ ಮಾಡತಕ್ಕದ್ದು.

(2) ಸಭಾಧ್ಯಕ್ಷರಿಗೆ ಒಂದು ತಿಂಗಳಿಗೆ ಆರು ಸಾವಿರ ರೂಪಾಯಿಗಳ ಸಂಬಳ ಮತ್ತು ಒಂದು ವರ್ಷಕ್ಕೆ ಎಪ್ಪತ್ತು ಸಾವಿರ ರೂಪಾಯಿಗಳ ಆತಿಥ್ಯ ಭತ್ಯೆಯನ್ನು ಸಂದಾಯ ಮಾಡತಕ್ಕದ್ದು.

XX XX XX

4. ಸಭಾಪತಿ ಮತ್ತು ಸಭಾಧ್ಯಕ್ಷರ ವಾಸದ ಮನೆಗಳು:– (1) ಸಭಾಪತಿಯವರು, ಸಭಾಧ್ಯಕ್ಷರು, ಉಪಸಭಾಪತಿಯವರು, ವಿರೋಧ ಪಕ್ಷದ ಮುಖಂಡರು ಮತ್ತು ಸರ್ಕಾರದ ಮುಖ್ಯ ಸಚೇತರು, ಪ್ರತಿಯೊಬ್ಬರು ತಮ್ಮ ಅಧಿಕಾರದ ಅವಧಿ ಪೂರ್ತಿ ಮತ್ತು ಅದರ ನಿಕಟ ತರುವಾಯದ ಅರವತ್ತು

ದಿವಸಗಳ ಅವಧಿಯ ಕಾಲ ಬೆಂಗಳೂರು ನಗರ ಅಥವಾ ಬೆಂಗಳೂರು ನಗರದ ಪರಿಮಿತಿಗಳಿಂದ ಮೂವತ್ತು ಕಿಲೋಮೀಟರ್ ಒಳಗೆ ಒಂದು ಸುಸಜ್ಜಿತ ಮನೆಗೆ ಬದಲಾಗಿ ತಿಂಗಳಿಗೆ ಹತ್ತು ಸಾವಿರ ರೂಪಾಯಿಗಳ ದರದಲ್ಲಿ ಮನೆ ಬಾಡಿಗೆ ಭತ್ಯಕ್ಕೆ ಹಕ್ಕುಳ್ಳವರಾಗಿರತಕ್ಕದ್ದು. ಈ ಉಪ-ಪ್ರಕರಣದ ಮೇರೆಗೆ ಒದಗಿಸಿದ ವಾಸದ ಮನೆಯನ್ನು ನಿಯಮಿಸಲಾದಂಥ ಶ್ರೇಣಿಗಳಲ್ಲು ಸುಸಜ್ಜಿತ ಗೊಳಿಸತಕ್ಕದ್ದು ಮತ್ತು ಅದರ ಪ್ಲಿಂತ್ ವಿಸ್ತೀರ್ಣವು ನಿಯಮಿಸಲಾದಂಥ ಮಿತಿಗಳನ್ನು ಮೀರತಕ್ಕದ್ದಲ್ಲ.

XX XX XX

8. ಪ್ರವಾಸದ ಮೇಲಿರುವಾಗ ಸಭಾಪತಿ, ಉಪ-ಸಭಾಪತಿ, ಸಭಾಧ್ಯಕ್ಷ, ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕರು ಮತ್ತು ಸರ್ಕಾರದ ಮುಖ್ಯ ಸಚೇತರು. - ಇವರುಗಳ ಪ್ರಯಾಣ ಭತ್ಯೆ ಮತ್ತು ಇತರ ಭತ್ಯೆಗಳು:- (1) ಸಭಾಧ್ಯಕ್ಷ, ಉಪ-ಸಭಾಧ್ಯಕ್ಷ, ಸಭಾಪತಿ ಮತ್ತು ಉಪ-ಸಭಾಪತಿ, ವಿರೋಧ ಪಕ್ಷದ ನಾಯಕರು ಮತ್ತು ಸರ್ಕಾರದ ಮುಖ್ಯ ಸಚೇತಕ - ಇವರುಗಳು ತಮ್ಮ ಅಧಿಕಾರ ಸ್ಥಾನಗಳಿಗೆ ಸಂಬಂಧಿಸಿದ ಕರ್ತವ್ಯಗಳ ಮೇಲೆ ಪ್ರವಾಸ ಮಾಡುವಾಗ, ಈ ಪ್ರಕಣದಲ್ಲಿ ನಿರ್ದಿಷ್ಟಪಡಿಸಿದ ದರಗಳು ಮತ್ತು ಷರತ್ತುಗಳ ಅನುಸಾರ ಪ್ರಯಾಣ ಮತ್ತು ದೈನಂದಿನ ಭತ್ಯೆ ಅಥವಾ ಇತರ ಭತ್ಯೆಗಳಿಗೆ ಹಕ್ಕುಳ್ಳವರಾಗಿರತಕ್ಕದ್ದು.

(2) ಭಾರತದ ಒಳಗೆ ಪ್ರವಾಸ ಮಾಡುವಾಗ, ಸಭಾಪತಿ, ಉಪ-ಸಭಾಪತಿ, ಸಭಾಧ್ಯಕ್ಷ ಮತ್ತು ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕರು ಮತ್ತು ಸರ್ಕಾರಿ ಮುಖ್ಯ ಸಚೇತಕ - ಇವರು,-

(ಎ) ರೈಲಿನ ಮೂಲಕ ಮಾಡಲಾದ ಪ್ರಯಾಣಗಳಿಗಾಗಿ ಆ ರೈಲಿನಲ್ಲಿ ಲಭ್ಯವಿರುವ ಉತ್ತಮ ದರ್ಜೆಯ ಒಂದು ಪ್ರಯಾಣ ದರದ ಎರಡರಷ್ಟಕ್ಕೆ ಹಕ್ಕುಳ್ಳವರಾಗಿರತಕ್ಕದ್ದು :

ಪರಂತು, ಸಭಾಪತಿ, ಉಪ-ಸಭಾಪತಿ, ಸಭಾಧ್ಯಕ್ಷ ಅಥವಾ ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕರು ಮತ್ತು ಸರ್ಕಾರಿ ಮುಖ್ಯ ಸಚೇತಕ - ಇವರು ತಮ್ಮ ಪ್ರಯಾಣಕ್ಕೆ ಒಂದು ಬೋಗಿಯನ್ನು ಮೀಸಲಿಸಿಕೊಂಡಿದ್ದರೆ ಅಂಥ ಬೋಗಿಯ ವೆಚ್ಚಗಳನ್ನು ರಾಜ್ಯ ಸರ್ಕಾರವು ಭರಿಸತಕ್ಕದ್ದು.

ಮತ್ತೂ ಪರಂತು, ಸಭಾಪತಿ, ಉಪ-ಸಭಾಪತಿ, ಸಭಾಧ್ಯಕ್ಷ ಅಥವಾ ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕರು ಮತ್ತು ಸರ್ಕಾರಿ ಮುಖ್ಯ ಸಚೇತಕ ಇವರ ಜೊತೆಯಲ್ಲಿ ಯಾರೇ ವಯಕ್ತಿ ಮೀಸಲಿರಿಸಿದ ಬೋಗಿಯಲ್ಲಿ ಪ್ರಯಾಣ ಮಾಡಿದರೆ ಅಂಥ ವ್ಯಕ್ತಿಯ ಸಂಬಂಧದ ವೆಚ್ಚಗಳನ್ನು ವಸೂಲು ಮಾಡತಕ್ಕದ್ದು ಮತ್ತು ಸರ್ಕಾರಕ್ಕೆ ಜಮೆ ಮಾಡತಕ್ಕದ್ದು;

(ಬಿ) ರಸ್ತೆಯ ಮೂಲಕ ಪ್ರಯಾಣ ಮಾಡಿದಾಗ ಪ್ರತಿ ಕಿಲೋಮೀಟರಿಗೆ ಎಂಟು ರೂಪಾಯಿ ರಸ್ತೆ ಮೈಲು ದರಕ್ಕೆ ಹಕ್ಕುಳ್ಳವ ರಾಗಿರತಕ್ಕದ್ದು ;

(ಸಿ) ವಿಮಾನದ ಮೂಲಕ ಮಾಡುವ ಪ್ರಯಾಣಕ್ಕಾಗಿ, ಅಂಥ ಪ್ರಯಾಣಕ್ಕೆ ಸಂದಾಯ ಮಾಡಿದ ಒಂದು ದರದ ಮತ್ತು ಒಂದು ಐದನೇ ಒಂದು ಭಾಗದಷ್ಟು ಮತ್ತು ಅಂಥ ಪ್ರಯಾಣಗಳ ಸಂದರ್ಭದಲ್ಲಿ ಅಪಘಾತ ಗಳು ಉಂಟಾದಲ್ಲಿ ವಿಮೆಗಾಗಿ ನಿಗದಿಪಡಿಸಿದ ವಿಮಾ ಕಂತು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು;

(ಡಿ) ಪ್ರಯಾಣದ ದಿನಗಳಿಗಾಗಿ ಮತ್ತು ಯಾವುದೇ ಸ್ಥಳದಲ್ಲಿ ಉಳಿದು ಕೊಳ್ಳುವ ಪ್ರತಿ ದಿನಕ್ಕೆ ಎಂಟುನೂರು ರೂಪಾಯಿಗಳ ದಿನಭತ್ಯೆಗಳಿಗೆ ಹಕ್ಕುಳ್ಳವರಾಗಿರತಕ್ಕದ್ದು ;

ಪರಂತು, ರಾಜ್ಯದ ಹೊರಗೆ ಮಾಡುವ ಪ್ರವಾಸಗಳ ಸಂದರ್ಭಗಳಲ್ಲಿ ಪ್ರಯಾಣದ ದಿನಗಳಿಗೆ ಮತ್ತು ಯಾವದೇ ಸ್ಥಳದಲ್ಲಿ ಉಳಿದುಕೊಳ್ಳುವ ಪ್ರತಿ ದಿನಕ್ಕೆ ಒಂದು ಸಾವಿರ ರೂಪಾಯಿಗಳು ದಿನಭತ್ಯವಾಗಿರತಕ್ಕದ್ದು ;

ಮತ್ತೂ ಪರಂತು, ಸಭಾಪತಿ, ಉಪ-ಸಭಾಪತಿ, ಸಭಾಧ್ಯಕ್ಷ ಮತ್ತು ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕರು ಮತ್ತು ಸರ್ಕಾರಿ ಮುಖ್ಯ ಸಚೇತಕ- ಇವರನ್ನು ರಾಜ್ಯದ ಅತಿಥಿಗಳೆಂದು ಪರಿಗಣಿಸಿದ ಸಂದರ್ಭಗಳಲ್ಲಿ, ಅವರನ್ನು ರಾಜ್ಯದ ಅತಿಥಿ ಎಂದು ಪರಿಗಣಿಸಿದಂಥ ಅವಧಿಗಾಗಿ ದಿನಭತ್ಯದ ಕಾಲುಭಾಗದಷ್ಟು ಹಣವನ್ನು ಮಾತ್ರ ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು.

XX XX XX

(2ಎ) ಸಭಾಪತಿ, ಉಪ-ಸಭಾಪತಿ, ಸಭಾಧ್ಯಕ್ಷ ಅಥವಾ ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕರು ಮತ್ತು ಸರ್ಕಾರಿ ಮುಖ್ಯ ಸಚೇತಕ

ಇವರು ಸಾರ್ವಜನಿಕ ಹಿತಾಸಕ್ತಿಗಾಗಿ ರಾಜ್ಯ ಸರ್ಕಾರವು ಒದಗಿಸಿದ ಮೋಟಾರು ಕಾರಿನಲ್ಲಿ ರಸ್ತೆಯ ಮೂಲಕ ಪ್ರಯಾಣ ಮಾಡುತ್ತಿರುವಾಗ ಮುಂದಿನ ಪ್ರಯಾಣವನ್ನು ರೈಲು ಅಥವಾ ವಿಮಾನದ ಮೂಲಕ ಕೈಗೊಳ್ಳಬೇಕಾದರೆ ಅವರು ಮೋಟಾರು ಕಾರಿನ ಬಳಕೆಯನ್ನು ನಿಲ್ಲಿಸಿದ ಸ್ಥಳದಿಂದ ಬೆಂಗಳೂರು ನಗರಕ್ಕೆ ಮೋಟಾರು ಕಾರು ವಾಪಸ್ಸು ಬರಲು ಬಳಸಿದ ಪೆಟ್ರೋಲ್ ವೆಚ್ಚವನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು ;

ಪರಂತು, (2ಬಿ) ಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು, ಭಾರತದಲ್ಲಿ ರಾಜ್ಯದ ಹೊರಗಡೆ ಪ್ರವಾಸದ ಮೇಲಿರುವಾಗ ಹಾಗೂ ಅವರು ತಮ್ಮೊಡನೆ ಮೋಟಾರು ಕಾರನ್ನು ತೆಗೆದುಕೊಂಡು ಹೋಗಿಲ್ಲದೇ ಇರುವಾಗ ಸಭಾಪತಿ, ಉಪ-ಸಭಾಪತಿ, ಸಭಾಧ್ಯಕ್ಷ, ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕರು ಮತ್ತು ಸರ್ಕಾರಿ ಮುಖ್ಯ ಸಚೇತಕ – ಇವರು ತಮ್ಮ ಇಚ್ಛಾನುಸಾರ ಪ್ರಯಾಣ ಭತ್ಯದ ಬದಲಾಗಿ ಅಥವಾ ತಾವು ಹಕ್ಕುಳ್ಳವರಾದ ರಸ್ತೆ ಮೇಲು ದರದ ಬದಲಾಗಿ, ತಾವು ವಾಸ್ತವವಾಗಿ ಸಾರ್ವಜನಿಕ ಹಿತಾಸಕ್ತಿಗಾಗಿ ಬಾಡಿಗೆಗೆ ತೆಗೆದುಕೊಂಡ ಮೋಟಾರು ಕಾರಿನ ವಾಸ್ತವಿಕ ಬಾಡಿಗೆ ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು. ಸಂದರ್ಭಾನುಸಾರ, ಸಭಾಪತಿ, ಉಪ-ಸಭಾಪತಿ, ಸಭಾಧ್ಯಕ್ಷ, ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕರು ಮತ್ತು ಸರ್ಕಾರಿ ಮುಖ್ಯ ಸಚೇತಕ – ಇವರು ಸಾರ್ವಜನಿಕ ಹಿತಾಸಕ್ತಿಯಲ್ಲಿ ಹಾಗೆ ಮೋಟಾರು ಕಾರನ್ನು ಬಾಡಿಗೆಗೆ ತೆಗೆದುಕೊಳ್ಳುವುದು ಅವಶ್ಯವಾಗಿತ್ತೆಂಬ ಪ್ರಮಾಣಪತ್ರವನ್ನು ಬಿಲ್‌ನೊಂದಿಗೆ ನೀಡತಕ್ಕದ್ದು.

(2ಬಿ) ಸಭಾಪತಿ, ಉಪ-ಸಭಾಪತಿ, ಸಭಾಧ್ಯಕ್ಷ, ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕರು ಮತ್ತು ಸರ್ಕಾರಿ ಮುಖ್ಯ ಸಚೇತಕ – ಇವರು (2)ನೇ ಉಪ-ಪ್ರಕರಣದ ಮೇರೆಗೆ ಪಡೆಯುವ ಭತ್ಯೆಗಳ ಜೊತೆಗೆ ನವದೆಹಲಿಯ ಕರ್ನಾಟಕ ಭವನದಲ್ಲಿ ರಾಜ್ಯ ಸರ್ಕಾರವು ನಿರ್ವಹಿಸಿಕೊಂಡು ಬರುತ್ತಿರುವ ಮೋಟಾರು ಕಾರುಗಳನ್ನು ವೆಚ್ಚ ಸಂದಾಯ ಮಾಡದೇ ಬಳಸಲು ಹಕ್ಕುಳ್ಳವರಾಗಿರತಕ್ಕದ್ದು.

(3) (ಎ) ಸಭಾಪತಿ ಮತ್ತು ಸಭಾಧ್ಯಕ್ಷರು ಕರ್ತವ್ಯದ ಮೇಲೆ ಭಾರತದ ಹೊರಗೆ ಪ್ರವಾಸ ಮಾಡುವಾಗ, ರಾಜ್ಯ ಸರ್ಕಾರದ ಸಚಿವರಿಗೆ ಅನ್ವಯಿಸುವ ಪ್ರಯಾಣ ಮತ್ತು ಇತರ ವೆಚ್ಚಗಳ ಸಂಬಂಧದಲ್ಲಿನ ನಿಬಂಧನೆಗಳಿಗೆ ಹಕ್ಕುಳ್ಳವರಾಗಿರತಕ್ಕದ್ದು.

(ಎಎ) ಸಭಾಪತಿ, ಉಪ-ಸಭಾಪತಿ, ಸಭಾಧ್ಯಕ್ಷ, ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕರು ಮತ್ತು ಸರ್ಕಾರಿ ಮುಖ್ಯ ಸಚೇತಕ – ಇವರು ವೈದ್ಯಕೀಯ ಚಿಕಿತ್ಸೆಗಾಗಿ ಭಾರತದ ಹೊರಗೆ ಪ್ರವಾಸ ಮಾಡುವಾಗ ರಾಜ್ಯ ಸರ್ಕಾರದ ಸಚಿವರಿಗೆ ಅನ್ವಯಿಸುವ ಪ್ರಯಾಣ ಮತ್ತು ಇತರ ವೆಚ್ಚಗಳ ಸಂಬಂಧಧಲ್ಲಿನ ನಿಬಂಧನೆಗಳಿಗೆ ಹಕ್ಕುಳ್ಳವರಾಗಿರತಕ್ಕದ್ದು.

(ಬಿ) XXX

9. ವೈದ್ಯಕೀಯ ಶುಶ್ರೂಷೆ :– ರಾಜ್ಯ ಸರ್ಕಾರವು ರಚಿಸಿದ ನಿಯಮಗಳಿಗೆ ಒಳಪಟ್ಟು, ಸಭಾಪತಿ, ಉಪ-ಸಭಾಪತಿ, ಸಭಾಧ್ಯಕ್ಷ ಮತ್ತು ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕರು ಮತ್ತು ಸರ್ಕಾರಿ ಮುಖ್ಯ ಸಚೇತಕ ಮತ್ತು ಸಂದರ್ಭಾನುಸಾರ ಸಭಾಪತಿ, ಉಪ-ಸಭಾಪತಿ. ಸಭಾಧ್ಯಕ್ಷ ಅಥವಾ ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕ ಮತ್ತು ಸರ್ಕಾರಿ ಮುಖ್ಯ ಸಚೇತಕ – ಇವರೊಂದಿಗೆ ವಾಸಿಸುವ ಮತ್ತು ಅವರನ್ನು ಅವಲಂಬಿಸಿದ ಕುಟುಂಬದ ಸದಸ್ಯರು, ರಾಜ್ಯ ಸರ್ಕಾರವು ನಿರ್ವಹಿಸುವ ಅಸ್ಪತ್ರೆಯಲ್ಲಿ ಕೊಠಡಿ ಮತ್ತು ವೈದ್ಯಕೀಯ ಶುಶ್ರೂಷೆ ಮತ್ತು ಚಿಕಿತ್ಸೆಗಳನ್ನು ಉಚಿತವಾಗಿ ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು. ರಾಜ್ಯ ಸರ್ಕಾರವು ರಚಿಸಿದ ನಿಯಮಗಳಿಗೆ ಒಳಪಟ್ಟು ಭಾರತದಲ್ಲಾಗಲಿ ಅಥವಾ ಹೊರಗಡೆಯಾಗಲಿ ಇತರ ಯಾವುದೇ ಸ್ಥಳದಲ್ಲಿ ಪಡೆದುಕೊಂಡ ವೈದ್ಯಕೀಯ ಶುಶ್ರೂಷೆ ಮತ್ತು ಚಿಕಿತ್ಸೆಗಾಗಿ ಅವರು ಖರ್ಚು ಮಾಡಿದ ವೆಚ್ಚಗಳಿಗೆ ಸರ್ಕಾರದಿಂದ ಹಣದ ಮರು ಭರ್ತಿ ಹೊಂದಲು ಸಹ ಅವರು ಹಕ್ಕುಳ್ಳವರಾಗಿರತಕ್ಕದ್ದು.

ವಿವರಣೆ:– ಈ ಪ್ರಕರಣ ಮತ್ತು (12)ನೇ ಪ್ರಕರಣದ ಉದ್ದೇಶ ಕುಟುಂಬದ ಸದಸ್ಯರು ಎಂದರೆ ಗಂಡ, ಹೆಂಡತಿ, ಮಗ, ಮಗಳು, ತಂದೆ-ತಾಯಿ, ಸಹೋದರ ಅಥವಾ ಸಹೋದರಿ.

XX XX XX

10. ಉಪ-ಸಭಾಪತಿ ಮತ್ತು ಉಪ-ಸಭಾಧ್ಯಕ್ಷರ ಸಂಬಳಗಳು:– (1) ಉಪ-ಸಭಾಪತಿ ಮತ್ತು ಉಪ-ಸಭಾಧ್ಯಕ್ಷ ಈ ಪ್ರತಿಯೊಬ್ಬರಿಗೂ ತಿಂಗಳಿಗೆ ಎಂಟು ಸಾವಿರ ರೂಪಾಯಿಗಳ ಸಂಬಳವನ್ನು ಸಂದಾಯ ಮಾಡತಕ್ಕದ್ದು.

XX XX XX

10ಜೆ. ಸರ್ಕಾರಿ ಮುಖ್ಯ ಸಚೇತಕರಿಗೆ ಸಂಬಳ.– ಪ್ರತಿಯೊಬ್ಬ ಸರ್ಕಾರಿ ಮುಖ್ಯ ಸಚೇತಕರಿಗೆ ತಿಂಗಳಿಗೆ ಎಂಟು ಸಾವಿರ ರೂಪಾಯಿಗಳ ಸಂಬಳವನ್ನು ಸಂದಾಯ ಮಾಡತಕ್ಕದ್ದು.

XX XX XX

10ಎನ್. ಸರ್ಕಾರಿ ಮುಖ್ಯ ಸಚೇತಕ ಮತ್ತು ಸರ್ಕಾರವು ಸಂದಾಯ ಮಾಡಬೇಕಾದ ವೆಚ್ಚಗಳು:– (1) ಪ್ರತಿಯೊಬ್ಬ ಸರ್ಕಾರಿ ಮುಖ್ಯ ಸಚೇತಕ ಪ್ರಕರಣದ (1)ನೇ ಉಪ-ಪ್ರಕರಣ ಮತ್ತು 10ಎಲ್ ಪ್ರಕರಣದ ಮೇರೆಗೆ, ಅವರಿಗೆ ಹಂಚಿಕೆ ಮಾಡಲಾದ ವಾಸದ ಮನೆ ಮತ್ತು ಮೋಟಾರು ಕಾರಿನ ಸಂಬಂಧದಲ್ಲಿ ಈ ಕೆಳಗೆ ತಿಳಿಸಿದ ವೆಚ್ಚಗಳನ್ನು ಸಂದಾಯಮಾಡಲು ಬದ್ಧರಾಗಿರತಕ್ಕದ್ದು, ಎಂದರೆ :-

(ಎ) ಸರ್ಕಾರವು ಸಂದಾಯ ಮಾಡಿದ ಐದು ನೂರು ಲೀಟರ್ ಪೆಟ್ರೋಲ್ ಬೆಳೆಗಿಂತ ಹೆಚ್ಚಾಗಿ ತಮ್ಮ ಮೋಟಾರು ಕಾರುಗಳಿಗೆ ಬಳಸಿದ ಪೆಟ್ರೋಲ್ ವೆಚ್ಚ ; ಮತ್ತು

(ಬಿ) ವಾಸದ ಮನೆಯಲ್ಲಿನ ವಿದ್ಯುಚ್ಛಕ್ತಿ ಮತ್ತು ನೀರಿನ ಬಳಕೆ ಸಂಬಂಧದಲ್ಲಿ ಒಟ್ಟು ಮಾಸಿಕ ದರದ ಮೊದಲ ಎರಡು ನೂರು ರೂಪಾಯಿಗಳು.

XX XX XX

10ಪಿ. ಕೆಲವು ಇತರ ಸಂದರ್ಭಗಳಲ್ಲಿ ವಿದ್ಯುಚ್ಛಕ್ತಿ ಮತ್ತು ನೀರಿನ ಶುಲ್ಕವನ್ನು ಸರ್ಕಾರವು ಭರಿಸುವುದು:– ವಾಸದ ಮನೆಯ ಸಂಬಂಧದಲ್ಲಿ ಸುಸಜ್ಜಿತ ವಾಸದ ಮನೆ ಸೌಲಭ್ಯ ಪಡೆದುಕೊಳ್ಳುವ ಸಭಾಪತಿ, ಸಭಾಧ್ಯಕ್ಷ, ಉಪ-ಸಭಾಪತಿ, ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕ ಮತ್ತು ಸರ್ಕಾರಿ ಮುಖ್ಯ ಸಚೇತಕ – ಇವರು ತಮ್ಮ ವಾಸದ ಮನೆಯಲ್ಲಿ ಬಳಸುವ ವಿದ್ಯುಚ್ಛಕ್ತಿ ಮತ್ತು ನೀರು ಇವೆರಡೂ ಸೇರಿ, ಎರಡು ನೂರು ರೂಪಾಯಿಗಳನ್ನು ಮೀರಿ ಆದ ಮಾಸಿಕ ವೆಚ್ಚವನ್ನು ರಾಜ್ಯ ಸರ್ಕಾರವು ಭರಿಸತಕ್ಕದ್ದು.

XX XX XX

10ಕ್ಯೂ. ಮನೆ ಬಾಡಿಗೆ ಸಂಬಂಧದಲ್ಲಿ ಕಡಿತಗಳು ಇತ್ಯಾದಿ:- ಸಭಾಪತಿ, ಸಭಾಧ್ಯಕ್ಷ, ಉಪ-ಸಭಾಪತಿ, ಉಪ-ಸಭಾಧ್ಯಕ್ಷ ವಿರೋಧ ಪಕ್ಷದ ನಾಯಕ ಮತ್ತು ಸರ್ಕಾರಿ ಮುಖ್ಯ ಸಚೇತಕನಿಗೆ ಸಂದಾಯಮಾಡುವ ಸಂಬಳದಿಂದ ಪ್ರತಿ ತಿಂಗಳು ಈ ಕೆಳಕಂಡ ಮೊಬಲಗನ್ನು ಕಡಿತಗೊಳಿಸತಕ್ಕದ್ದು, ಎಂದರೆ,-

(ಎ) ಅವರು ರಾಜ್ಯ ಸರ್ಕಾರವು ಒದಗಿಸಿದ ವಾಸದ ಮನೆಯಲ್ಲಿ ವಾಸಿಸುತ್ತಿದ್ದರೆ ಮನೆ ಬಾಡಿಗೆಯಾಗಿ ಅವರ ಸಂಬಳದ ಶೇಕಡಾ 10 ರಷ್ಟಕ್ಕೆ ಸಮನಾದ ಮೊಬಲಗು ;

(ಬಿ) ಅವರ ವಾಸದ ಮನೆಯನ್ನು ರಾಜ್ಯ ಸರ್ಕಾರವು ಸುಸಜ್ಜಿತಗೊಳಿಸಿದ್ದರೆ, ಆ ಸಂಬಂಧ ಬಾಡಿಗೆಯಾಗಿ ಅವರ ಸಂಬಳದ ಶೇಕಡಾ ಎರಡೂವರೆಯಷ್ಟಕ್ಕೆ ಸಮನಾದ ಮೊಬಲಗು.

XX XX XX

11. ವಿಧಾನಸಭೆ ಮತ್ತು ವಿಧಾನಪರಿಷತ್ತಿನ ವೇತನ.- ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಪ್ರತಿಯೊಬ್ಬ ಸದಸ್ಯನಿಗೆ ತಿಂಗಳಿಗೆ ಎಂಟು ಸಾವಿರ ರೂಪಾಯಿಗಳ ಸಂಬಳವನ್ನು ಸಂದಾಯಮಾಡತಕ್ಕದ್ದು. ಆ ಸಂಬಳವು ಅವರನ್ನು ಕ್ರಮಬದ್ಧವಾಗಿ ಚುನಾಯಿಸಲಾಗಿದೆ ಎಂದು ಘೋಷಿಸಿದ ದಿನಾಂಕದಿಂದ ಅವರಿಗೆ ಪ್ರಾಪ್ತವಾಗತಕ್ಕದ್ದು ಅಥವಾ ವಿಧಾನಸಭೆ ಅಥವಾ ವಿಧಾನಪರಿಷತ್ತಿನಲ್ಲಿ ಖಾಲಿ ಸ್ಥಾನವನ್ನು ತುಂಬಲು ರಾಜ್ಯಪಾಲರಿಂದ ನಾಮನಿರ್ದೇಶನ ಮಾಡಿದ ಸದಸ್ಯರ ಸಂದರ್ಭದಲ್ಲಿ ಅವರನ್ನು ಹಾಗೆ ನಾಮನಿರ್ದೇಶನ ಮಾಡಿದ ದಿನಾಂಕದಿಂದ ಅಥವಾ ಖಾಲಿ ಸ್ಥಾನವು ಉಂಟಾಗುವ ಮೊದಲೇ ಅಂಥ ಘೋಷಣೆ ಅಥವಾ ನಾಮನಿರ್ದೇಶನ ಮಾಡಿದ್ದರೆ ಆ ಖಾಲಿ ಸ್ಥಾನವು ಉಂಟಾದ ದಿನಾಂಕದಿಂದ ಅಂಥ ಸಂಬಳವು ಪ್ರಾಪ್ತವಾಗತಕ್ಕದ್ದು.

XX XX XX

11ಎ. ಸದಸ್ಯರಿಗೆ ನಿವೃತ್ತಿ ವೇತನ ಇತ್ಯಾದಿ.- ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2005ರ ಪ್ರಾರಂಭದ ದಿನಾಂಕದಿಂದ ಜಾರಿಗೆ ಬರುವಂತೆ,-

(i) ವಿಧಾನ ಪರಿಷತ್ತಿನ ಒಬ್ಬ ಸದಸ್ಯರಾಗಿ ; ಅಥವಾ

(ii) ವಿಧಾನಸಭೆಯ ಒಬ್ಬ ಸದಸ್ಯರಾಗಿ ; ಅಥವಾ

(iii) ಭಾಗಶಃ ವಿಧಾನ ಸಭೆಯ ಸದಸ್ಯರಾಗಿ ಮತ್ತು ಭಾಗಶಃ ವಿಧಾನ ಪರಿಷತ್ತಿನ ಸದಸ್ಯರಾಗಿ

– ಐದು ವರ್ಷಗಳ ವರೆಗೆ ಸೇವೆ ಸಲ್ಲಿಸಿದ ಪ್ರತಿಯೊಬ್ಬ ವ್ಯಕ್ತಿಗೆ, ಅವರ ಉಳಿದ ಜೀವಿತಾವಧಿಯಲ್ಲಿ ಪ್ರತಿ ತಿಂಗಳಿಗೆ ಐದು ಸಾವಿರ ರೂಪಾಯಿಗಳ ದರದಲ್ಲಿ ನಿವೃತ್ತಿ ವೇತನವನ್ನು ಸಂದಾಯ ಮಾಡತಕ್ಕದ್ದು ;

ಪರಂತು, ಮೇಲ್ಕಂಡಂತೆ ಐದು ವರ್ಷಗಳಿಗಿಂತಲೂ ಹೆಚ್ಚುಕಾಲ ಯಾವೊಬ್ಬ ವ್ಯಕ್ತಿಯು ಸೇವೆ ಸಲ್ಲಿಸಿದ್ದರೆ, ಆ ತರುವಾಯ ಪೂರ್ಣಗೊಂಡ ಪ್ರತಿಯೊಂದು ವರ್ಷಕ್ಕೆ ಪ್ರತಿ ತಿಂಗಳಿಗೆ ಐದು ನೂರು ರೂಪಾಯಿಗಳ ದರದಲ್ಲಿ ಹೆಚ್ಚುವರಿ ನಿವೃತ್ತಿ ವೇತನವನ್ನು ಸಂದಾಯ ಮಾಡತಕ್ಕದ್ದು. ಆದರೆ ಈ ಪ್ರಕರಣದ ಅಡಿಯಲ್ಲಿ ಸಂದಾಯ ಮಾಡತಕ್ಕ ನಿವೃತ್ತಿ ಜೀವನವು ಪ್ರತಿ ತಿಂಗಳಿಗೆ ಹತ್ತು ಸಾವಿರ ರೂಪಾಯಿಗಳನ್ನು ಮೀರತಕ್ಕದ್ದಲ್ಲ :

ಮತ್ತು ಪರಂತು, ಆರು ತಿಂಗಳನ್ನು ಮೀರಿದ ವರ್ಷದ ಒಂದು ಭಾಗದ ಅವಧಿಯವರೆಗೆ ಅಂಥ ಸದಸ್ಯರಾಗಿ ಸಲ್ಲಿಸಿದ ಸೇವೆಯನ್ನು ಹೆಚ್ಚುವರಿ ನಿವೃತ್ತಿ ವೇತನವನ್ನು ಲೆಕ್ಕಹಾಕುವ ಉದ್ದೇಶಕ್ಕಾಗಿ ಒಂದು ಪೂರ್ಣವರ್ಷ ವೆಂಬುದಾಗಿ ಪರಿಗಣಿಸತಕ್ಕದ್ದು.

ಅಲ್ಲದೇ ಪರಂತು, ಒಬ್ಬ ಸದಸ್ಯರು, ವಿಧಾನಸಭೆಯ ವಿಸರ್ಜನೆಯ ಕಾರಣದಿಂದಾಗಿ ಐದು ವರ್ಷಗಳ ಸೇವೆ ಸಲ್ಲಿಸುವುದಕ್ಕೆ ತಡೆಯುಂಟಾದಲ್ಲಿ, ಅವರು, ಐದು ವರ್ಷಗಳ ಪೂರ್ಣಾವಧಿಗೆ ಸೇವೆ ಸಲ್ಲಿಸಿರುವ ನೆಂಬುದಾಗಿ ಭಾವಿಸತಕ್ಕದ್ದು ;

ಅಲ್ಲದೆ ಪರಂತು, ಒಬ್ಬ ಸದಸ್ಯರು ಮೊದಲನೇ ಬಾರಿಗೆ ವಇಧಾನ ಪರಿಷತ್ತಿನ ಸದಸ್ಯರಾಗಿದ್ದು ಮತ್ತು ಅವರು ಆರು ವರ್ಷಗಳ ಪೂರ್ಣಾವಧಿ ಸೇವೆ ಸಲ್ಲಿಸುವುದಕ್ಕೆ ಮೊದಲು ಚೀಟಿ ಎತ್ತುವ ಮೂಲಕ ಅವರ ಅವಧಿಯು ಕೊನೆಗೊಂಡಿರುವಲ್ಲಿ, ಅವರು ಅಧಿಕಾರ ಸ್ಥಾನದಲ್ಲಿದ್ದ ಅವಧಿಯನ್ನು ಗಣನೆಗೆ ತೆಗೆದುಕೊಳ್ಳದೆ ಐದು ವರ್ಷಗಳ ಅವಧಿಯ ಸೇವೆ ಸಲ್ಲಿಸಿರುವರೆಂಬುದಾಗಿ ಭಾವಿಸತಕ್ಕದ್ದು ;

ಅಲ್ಲದೇ ಪರಂತು, ಒಬ್ಬ ವ್ಯಕ್ತಿಯು, ಒಂದು ಚುನಾವಣಾ ಅರ್ಜಿಯ ವಿಚಾರಣೆಯಲ್ಲಿ ನ್ಯಾಯಾಲಯದಿಂದ, ಚುನಾಯಿತರಾಗಿರುವನೆಂದು

ಘೋಷಿಸಲ್ಪಟ್ಟಿದ್ದರೆ ಮತ್ತು ಚುನಾವಣಾ ತಕರಾರು ಅರ್ಜಿಯು ಇತ್ಯರ್ಥ ದಲ್ಲಿರುವ ಸಮಯದಲ್ಲಿ ಅವರು ಸದಸ್ಯರೆಂಬುದಾಗಿ ಸೇವೆ ಸಲ್ಲಿಸಲು ಅಸಮರ್ಥರಾಗಿದ್ದಾಗ, ಅವರು ವಾಸ್ತವವಾಗಿ ಸಲ್ಲಿಸದ ಸೇವೆಯ ಅವಧಿಯನ್ನು ಗಣನೆಗೆ ತೆಗೆದುಕೊಳ್ಳದೇ ಐದು ವರ್ಷಗಳ ಅವಧಿಯ ಸೇವೆ ಸಲ್ಲಿಸಿರುವನೆಂಬುದಾಗಿ ಭಾವಿಸತಕ್ಕದ್ದು ;

ಅಲ್ಲದೇ ಪರಂತು, ಒಬ್ಬ ವ್ಯಕ್ತಿಯು, ಉಪ-ಚುನಾವಣೆಯಲ್ಲಿ ಚುನಾಯಿತರಾಗಿರುವನೆಂದು ಘೋಷಿಸಲ್ಪಟ್ಟಿದ್ದರೆ ಅಥವಾ ಅವಧಿಯ ಮಧ್ಯದಲ್ಲಿ ಸದಸ್ಯರೆಂಬುದಾಗಿ ನಾಮನಿರ್ದೇಶಿಸಲ್ಪಟ್ಟಿದ್ದರೆ ಮತ್ತು ಪೂರ್ಣಾವ ಧಿಯವರೆಗೆ ಸೇವೆ ಸಲ್ಲಿಸಲು ಅಸಮರ್ಥರಾದಲ್ಲಿ, ಅವರು ವಾಸ್ತವವಾಗಿ ಸಲ್ಲಿಸಿದ ಸೇವೆಯ ಅವಧಿಯನ್ನು ಗಣನೆಗೆ ತೆಗೆದುಕೊಳ್ಳದೆ ಐದು ವರ್ಷಗಳ ಅವಧಿಯ ಸೇವೆಯನ್ನು ಸಲ್ಲಿಸಿರುವನೆಂಬುದಾಗಿ ಭಾವಿಸತಕ್ಕದ್ದು.

ಅಲ್ಲದೇ ಪರಂತು, ಒಬ್ಬ ಸದಸ್ಯರು, ಮೂರ ವರ್ಷಗಳಿಗಿಂತ ಹೆಚ್ಚಿನ ಅವಧಿಯವರೆಗೆ ಸೇವೆ ಸಲ್ಲಿಸಿದ ನಂತರ ರಾಜೀನಾಮೆ ನೀಡಿದಲ್ಲಿ, ಅವರು, ಐದು ವರ್ಷಗಳ ಅವಧಿಯ ಸೇವೆ ಸಲ್ಲಿಸಿರುವರೆಂಬುದಾಗಿ ಭಾವಿಸತಕ್ಕದ್ದು.

ವಿವರಣೆ : ಈ ಉಪ-ಪ್ರಕರಣದ ಉದ್ದೇಶಕ್ಕಾಗಿ, ವಿಧಾನಸಭೆಯ ಅಥವಾ ವಿಧಾನ ಪರಿಷತ್ತಿನ ಒಬ್ಬ ಸದಸ್ಯನು ಎಂಬುದು, ಒಬ್ಬ ವ್ಯಕ್ತಿಯು, 1956ರ ನವೆಂಬರ್ 1ನೇ ದಿನಾಂಕಕ್ಕೆ ಮೊದಲು, ಆತ ಪ್ರತಿನಿಧಿಸಿದ ಪ್ರದೇಶವು ಸದರಿ ದಿನಾಂಕದಂದು ಅಥವಾ ದಿನಾಂಕದಿಂದ ಜಾರಿಗೆ ಬಂದಿರುವ ಹೊಸ ಕರ್ನಾಟಕ ರಾಜ್ಯ ಭಾಗವಾಗಿ ಸೇರಿಕೊಂಡಿದ್ದು, ಅದು ಮೊದಲು ಯಾವ ರಾಜ್ಯಕ್ಕೆ ಸೇರಿತ್ತೋ ಆ ರಾಜ್ಯದ ವಿಧಾನಸಭಾ ಸದಸ್ಯ ಅಥವಾ ವಿಧಾನ ಪರಿಷತ್ತಿನ ಸದಸ್ಯರಾಗಿ ಆ ಪ್ರದೇಶವನ್ನು ಪ್ರತಿನಿಧಿಸಿದ್ದರೆ ಆತನನ್ನೂ ಒಳಗೊಳ್ಳತಕ್ಕದ್ದು.

ಪರಂತು, ವಿಧಾನ ಸಭೆಯ ಅಥವಾ ವಿಧಾನ ಪರಿಷತ್ತಿನ ನಾಮನಿರ್ದೇಶಿತ ಸದಸ್ಯರ ಸಂಬಂಧದಲ್ಲಿ, ತಾವು ವಿಧನಸಭೆಯ ಅಥವಾ ವಿಧನ ಪರಿಷತ್ತಿನ ಸದಸ್ಯರಾಗಿದ್ದ ಅವಧಿಯಲ್ಲಿ, ಕರ್ನಾಟಕ ರಾಜ್ಯದ ಭಾಗವಾಗಿರುವ ಯಾವುದೇ ಪ್ರದೇಶದಲ್ಲಿ ಅವನು ಖಾಯಂ ಆಗಿ ವಾಸವಾಗಿದ್ದಲ್ಲಿ ಅವನು ನಿವೃತ್ತಿ ವೇತನ ಪಡೆಯಲು ಅರ್ಹರಾಗಿರತಕ್ಕದ್ದು."

(1ಎ) (1)ನೇ ಉಪ–ಪ್ರಕರಣದ (ಎ) ಮತ್ತು (ಬಿ) ಖಂಡಗಳ ಮೇರೆಗೆ ಒಬ್ಬ ಸದಸ್ಯನಿಗೆ ಸಂದಾಯ ಮಾಡಬಹುದಾದ ನಿವೃತ್ತಿ ವೇತನದ ಒಟ್ಟು ಮೊತ್ತವು ಒಂದು ತಿಂಗಳಿಗೆ ಐದು ಸಾವಿರ ರೂಪಾಯಿಗಳನ್ನು ಮೀರತಕ್ಕದ್ದಲ್ಲ.

(2) (1)ನೇ ಉಪ–ಪ್ರಕರಣದ ಮೇರೆಗೆ ನಿವೃತ್ತಿ ವೇತನಕ್ಕೆ ಹಕ್ಕುದಾರನಾಗಿರುವ ಯಾರೇ ವ್ಯಕ್ತಿಯು,–

(i) ಭಾರತದ ರಾಷ್ಟ್ರಪತಿ ಅಥವಾ ಉಪ–ರಾಷ್ಟ್ರಪತಿಯ ಪದವಿಗೆ ಚುನಾಯಿತನಾದರೆ ಅಥವಾ ಯಾವುದೇ ರಾಜ್ಯದ ರಾಜ್ಯಪಾಲರ ಅಥವಾ ಯಾವುದೇ ಕೇಂದ್ರಾಡಳಿತ ಪ್ರದೇಶದ ಆಡಳಿತಗಾರರ ಹುದ್ದೆಗೆ ನೇಮಕ ಗೊಂಡರೆ ; ಅಥವಾ

(ii) ಸಚಿವ, ರಾಜ್ಯ ಸಚಿವ, ಉಪ ಸಚಿವ, ಸಭಾಪತಿ, ಸಭಾಧ್ಯಕ್ಷ, ಉಪ–ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕ ಅಥವಾ ಸರ್ಕಾರಿ ಮುಖ್ಯ ಸಚೇತಕ – ಈ ಹುದ್ದೆಗೆ ನೇಮಕಗೊಂಡರೆ ಅಥವಾ ಚುನಾಯಿತನಾರೆ; ಅಥವಾ

(4) (1)ನೇ ಉಪ–ಪ್ರಕರಣದ ಉದ್ದೇಶಕ್ಕಾಗಿ ವರ್ಷಗಳ ಸಂಖ್ಯೆಯನ್ನು ಲೆಕ್ಕ ಹಾಕುವಾಗ, ವ್ಯಕ್ತಿಯು ಈ ಮುಂದಿನ ಸ್ಥಾನಗಳಲ್ಲಿ, ಎಂದರೆ (1) ಸಚಿವ, ರಾಜ್ಯ ಸಚಿವ, ಉಪ ಸಚಿವ, ಸಂಸದೀಯ ಕಾರ್ಯದರ್ಶಿ, ಸಭಾಪತಿ, ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕ, ವಿಧಾನ ಸಭೆಯ ಅಥವಾ ವಿಧಾನ ಪರಿಷತ್ತಿನ ಸದಸ್ಯತ್ವದ ಆಧಾರದ ಮೇಲೆ ಸರ್ಕಾರಿ ಮುಖ್ಯ ಸಚೇತಕ ಇವುಗಳಲ್ಲಿ ಯಾವುದಾದರೂ ಒಂದು ಅಥವಾ ಹೆಚ್ಚು ಸ್ಥಾನಗಳಲ್ಲಿ ಅವನು ಸಲ್ಲಿಸಿದ ಸೇವೆಯ ಅವಧಿಯನ್ನು ಸಹ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು.

XX XX XX

11ಬಿ. ಕುಟುಂಬ ನಿವೃತ್ತಿ ವೇತನ :– (1) ಒಬ್ಬ ಸದಸ್ಯ ತನ್ನ ಅಧಿಕಾರದ ಅವಧಿ ಮುಗಿಯುವ ಮೊದಲೇ ಮರಣ ಹೊಂದಿರೆ ಅವನ ಕುಟುಂಬಕ್ಕೆ ಅಂಥ ಸದಸ್ಯನು ಮರಣಹೊಂದನೇ ಇದ್ದರೆ, ಎಲ್ಲಿಯವರೆಗೆ ಅವನು ಸದಸ್ಯನಾಗಿ ಮುಂದುವರಿಯುತ್ತಿದ್ದನೋ ಆ ಉಳಿದ ಅವಧಿಗೆ ತಿಂಗಳಿಗೆ ಐದು ನೂರು ರೂಪಾಯಿ ದರದಲ್ಲಿ ಕುಟುಂಬ ನಿವೃತ್ತಿ ವೇತನವು ಸಂದಾಯವಾಗತಕ್ಕದ್ದು.

11ಸಿ. ಆತಿಥ್ಯ ಭತ್ಯ :- (1) ವಿರೋಧಪಕ್ಷದ ನಾಯಕನಿಗೆ ವರ್ಷಕ್ಕೆ "ಎಪ್ಪತ್ತೈದು ಸಾವಿರ ರೂಪಾಯಿಗಳ ಆತಿಥ್ಯ ಭತ್ಯ ಸಂದಾಯವಾಗತಕ್ಕದ್ದು.

(2) ಉಪ-ಸಭಾಪತಿ, ಉಪ-ಸಭಾಧ್ಯಕ್ಷ ಮತ್ತು ಸರ್ಕಾರಿ ಮುಖ್ಯ ಸಚೇತಕ – ಇವರಿಗೆ ವರ್ಷಕ್ಕೆ ಐವತ್ತು ಸಾವಿರ ರೂಪಾಯಿಗಳ ಆತಿಥ್ಯ ಭತ್ಯ ಸಂದಾಯವಾಗತಕ್ಕದ್ದು.

XX XX XX

12. ವಿಧಾನಸಭಾ ಸದಸ್ಯರು ಮತ್ತು ವಿಧಾನ ಪರಿಷತ್ತಿನ ಸದಸ್ಯರು.-

XX XX XX

(ಸಿಸಿ) ವಿಧಾನ ಸಭೆಯ ಮತ್ತು ವಿಧಾನ ಪರಿಷತ್ತಿನ ಪ್ರತಿಯೊಬ್ಬ ಸದಸ್ಯನು, ಚುನಾವಣಾ ಕ್ಷೇತ್ರ ಪ್ರಯಾಣ ಭತ್ಯೆಯಾಗಿ ವಾರ್ಷಿಕ ಹದಿನೈದು ಸಾವಿರ ರೂಪಾಯಿಗಳ ಮೊಬಲಗನ್ನು ಎರಡು ಸಮಾನ ಕಂತುಗಳಲ್ಲಿ, ಏಪ್ರಿಲ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ, ನಿಯಮಿಸಬಹುದಾದ ರೀತಿಯಲ್ಲಿ ಸ್ವೀಕರಿಸಲು ಹಕ್ಕುಳ್ಳವನಾಗಿರತಕ್ಕದ್ದು.

(ಸಿಸಿಸಿ) ಸಚಿವ, ರಾಜ್ಯ ಸಚಿವ, ಉಪ-ಸಚಿವ, ಸಭಾಪತಿ, ಸಭಾಧ್ಯಕ್ಷ, ಉಪ-ಸಭಾಪತಿ, ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕ ಮತ್ತು ಸರ್ಕಾರಿ ಮುಖ್ಯ ಸಚೇತಕ – ಇವರೂ ಸೇರಿಂದತೆ ಪ್ರತಿಯೊಬ್ಬ ಸದಸ್ಯನು, ಪ್ರತಿ ಹಣಕಾಸು ವರ್ಷದಲ್ಲಿ, ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಒಂದು ಅಥವಾ ಹೆಚ್ಚಿನ ಪ್ರಯಾಣಗಳನ್ನು ಒಬ್ಬನೇ ಆಗಲಿ ಅಥವಾ ಜೊತೆಗಾರನೊಂದಿಗೆ ಆಗಲಿ ಭಾರತದಲ್ಲಿ ವಿಮಾನದಲ್ಲಾಗಲಿ ಅಥವಾ ರೈಲ್ವೆಯ ಮೂಲಕ ಯಾವುದೇ ದರ್ಜೆಯಲ್ಲಿ ಪ್ರಯಾಣ ಮಾಡಲು ಪ್ರವಾಸದ ಉದ್ದೇಶಕ್ಕಾಗಿ ಏಪ್ರಿಲ್ ಮತ್ತು ಅಕ್ಟೋಬರ್ ತಿಂಗಳಿನಲ್ಲಿ ಐವತ್ತು ಸಾವಿರ ರೂಪಾಯಿಗಳನ್ನು ಎರಡು ಸಮಾನ ಕಂತುಗಳಲ್ಲಿ ಪಡೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು. ಅಂಥ ಪ್ರಯಾಣಗಳನ್ನು ಮಾಡಿದಾಗ ಸದಸ್ಯರು ಪ್ರಯಾಣ ಅಥವಾ ದಿನಭತ್ಯೆ ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದಲ್ಲ.

XX XX XX

(ಜಿ) ಸಚಿವ, ರಾಜ್ಯ ಸಚಿವ, ಉಪ–ಸಚಿವ, ಸಭಾಪತಿ, ಸಭಾಧ್ಯಕ್ಷ, ಉಪ–ಸಭಾಪತಿ, ಉಪ–ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕ ಮತ್ತು ಸರ್ಕಾರಿ ಮುಖ್ಯ ಸಚೇತಕ – ಇವರೂ ಸೇರಿದಂತೆ ಸದಸ್ಯರು ತಾವು ಆಯ್ಕೆಮಾಡಿದ ಸ್ಥಳದಲ್ಲಿ ಸರ್ಕಾರದ ವೆಚ್ಚದಲ್ಲಿ ದೂರವಾಣಿ ಹಾಕಿಸಿಕೊಳ್ಳಲು ಹಕ್ಕುಳ್ಳವರಾಗಿರತಕ್ಕದ್ದು.

(ಹೆಚ್) ಪ್ರತಿಯೊಬ್ಬ ಸದಸ್ಯನಿಗೂ ಈ ಮುಂದಿನ ಭತ್ಯೆಗಳು ಸಂದಾಯವಾಗತಕ್ಕದ್ದು–

(i) ದೂರವಾಣಿ ಕರೆಗಳಿಗಾಗಿ ಅವನು ಭರಿಸಿದ ವೆಚ್ಚಗಳಿಗಾಗಿ ತಿಂಗಳಿಗೆ ಏಳು ಸಾವಿರದ ಐದುನೂರು ರೂಪಾಯಿ ;

(ii) ಸಂಚಿತ ಭತ್ಯೆಗಳಾಗಿ ಮೂರು ಸಾವಿರದ ಐದುರೂರು ರೂಪಾಯಿ

(iii) ಅಂಚೆ ವೆಚ್ಚಗಳ ಸಂಬಂಧ ಒಂದು ಸಾವಿರ ರೂಪಾಯಿ ;

(iv) ಸದಸ್ಯನು, ಸದಸ್ಯನಾಗಿ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಆಪ್ತ ಸಹಾಯಕನಿಗೆ ಮತ್ತು ರೂಂಬಾಯ್‌ಗಳ ಸಂಬಳ ಎಂದು ಎರಡು ಸಾವಿರ ರೂಪಾಯಿ.

XX XX XX

13. ಸಚಿವ, ರಾಜ್ಯ ಸಚಿವ, ಉಪ–ಸಚಿವ, ಸಭಾಪತಿ, ಸಭಾಧ್ಯಕ್ಷ, ಉಪ–ಸಭಾಪತಿ, ಉಪ–ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕಡಿಣ ಮತ್ತು ಸರ್ಕಾರಿ ಮುಖ್ಯ ಸಚೇತಕ – ಇವರು ಸದಸ್ಯರಾಗಿ ಸಂಬಳ ಪಡೆಯದಿರುವುದು :– (1) ಸಚಿವ, ರಾಜ್ಯ ಸಚಿವ, ಉಪ–ಸಚಿವ, ಸಭಾಪತಿ, ಉಪ–ಸಭಾಪತಿ, ಸಭಾಧ್ಯಕ್ಷ, ಉಪ–ಸಭಾಧ್ಯಕ್ಷ ಅಥವಾ ವಿರೋಧ ಪಕ್ಷದ ನಾಯಕರು ಅಥವಾ ಸರ್ಕಾರಿ ಮುಖ್ಯ ಸಚೇತಕರು ತಮ್ಮ ಅಧಿಕಾರದ ಸ್ಥಾನದ ಸಂಬಳ ಮತ್ತು ಭತ್ಯಗಳನ್ನು ಪಡೆಯುತ್ತಿರುವಾಗ ಸಂದರ್ಭಾನುಸಾರ ವಿಧಾನಸಭೆ ಅಥವಾ ವಿಧಾನ ಪರಿಷತ್ತಿನ ಸದಸ್ಯನಾಗಿ ಯಾವುದೇ ಸಂಬಳ ಅಥವಾ ಭತ್ಯವನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದಲ್ಲ ;

ಪರಂತು, 10ಬಿ ಪ್ರಕರಣದ ಮೇರೆಗೆ ಒದಗಿಸಲಾದ ಸೌಲಭ್ಯವನ್ನು ಪಡೆದುಕೊಳ್ಳದ ಉಪ–ಸಭಾಪತಿ ಅಥವಾ ಉಪ–ಸಭಾಧ್ಯಕ್ಷನು 12ನೇ ಪ್ರಕರಣದ (ಎ) ಮತ್ತು (ಬಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಭತ್ಯಗಳನ್ನು

ಸಂದರ್ಭಾನುಸಾರ, ವಿಧಾನಸಭೆ ಅಥವಾ ವಿಧಾನ ಪರಿಷತ್ತಿನ ಸದಸ್ಯನಾಗಿ ಪಡೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು;

ಮತ್ತೂ ಪರಂತು, ಅವನು ಸಂದರ್ಭಾನುಸಾರ 8ನೇ ಪ್ರಕರಣದ ಮೇರೆಗೆ ಅಥವಾ 12ನೇ ಪ್ರಕರಣದ (ಎಫ್) ಖಂಡದ ಮೇರೆಗೆ ಅನ್ವಯಿಸುವ ಭತ್ಯಗಳಿಗೆ ಸಹ ಹಕ್ಕುಳ್ಳವರಾಗಿರತಕ್ಕದ್ದು.

(1ಎ) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಸಂದರ್ಭಾನುಸಾರ 10ಎಫ್ ಪ್ರಕರಣದಲ್ಲಿ ಅಥವಾ 10ನೇ ಪ್ರಕರಣದಲ್ಲಿ ಒದಗಿಸಲಾದ ಸೌಲಭ್ಯವನ್ನು ಪಡೆದುಕೊಳ್ಳದಿರುವ ವಿರೋಧ ಪಕ್ಷದ ನಾಯಕ ಅಥವಾ ಸರ್ಕಾರಿ ಮುಖ್ಯ ಸಚೇತಕನು ವಿಧಾನ ಸಭೆ ಅಥವಾ ವಿಧಾನ ಪರಿಷತ್ತಿನ ಸದಸ್ಯನಾಗಿ ಅಥಾವ ವಿಧಾನ ಸಭೆ ಅಥವಾ ವಿಧಾನ ಪರಿಷತ್ತು ಅಥವಾ ಅವೆರಡರ ಯಾವುದೇ ಸಮಿತಿಯ ಅಧ್ಯಕ್ಷರಾಗಿ 12ನೇ ಪ್ರಕರಣದ (ಎ), (ಬಿ), (ಸಿ) ಮತ್ತು (ಎಫ್) ಖಂಡಗಳಲ್ಲಿ ನಿರ್ದಿಷ್ಟಪಡಿಸಲಾದ ಭತ್ಯಗಳಿಗೆ ಹಕ್ಕುಳ್ಳವರಾಗಿರತಕ್ಕದ್ದು.

(2) ಸಭಾಪತಿ, ಉಪ-ಸಭಾಪತಿ, ಸಭಾಧ್ಯಕ್ಷ, ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕ ಅಥವಾ ಸರ್ಕಾರಿ ಮುಖ್ಯ ಸಚೇತಕ ಇವರು ತಮ್ಮ ಅಧಿಕಾರದ ಅವಧಿಯಲ್ಲಿ, ಸಂದರ್ಭಾನುಸಾರ ಸಭಾಪತಿ, ಉಪ-ಸಭಾಪತಿ, ಸಭಾಧ್ಯಕ್ಷ, ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕ ಅಥವಾ ಸರ್ಕಾರಿ ಮುಖ್ಯ ಸಚೇತಕನಾಗಿ ತನ್ನ ಕರ್ತವ್ಯದ ಹೊರತಾದ ಯಾವುದೇ ವೃತ್ತಿ ನಡೆಸತಕ್ಕದ್ದಲ್ಲ ಅಥವಾ ಯಾವುದೇ ವ್ಯಾಪಾರದಲ್ಲಿ ನಿರತರನಾಗತಕ್ಕದ್ದಲ್ಲ ಅಥವಾ ಪರಿಶ್ರಮಧನ ಪಡೆಯಲು ಇತರ ಯಾವುದೇ ಉದ್ಯೋಗವನ್ನು ಮಾಡತಕ್ಕದ್ದಲ್ಲ.

XX XX XX

13ಬಿ. ಬಾಕಿಗಳ ವಸೂಲಿ.– ವಿಧಾನ ಮಂಡಲದ ಸದಸ್ಯನಾಗಿರುವ ಅಥವಾ ಸದಸ್ಯನಾಗಿದ್ದ ವ್ಯಕ್ತಿಯಿಂದ ಸರ್ಕಾರ ಅಥವಾ ವಿಧಾನ ಮಂಡಲದ ಸಚಿವಾಲಯಕ್ಕೆ ಬಾಕಿ ಇರುವ ಯಾವುದೇ ಮೊತ್ತದ ವಸೂಲಿಯ ಯಾವುದೇ ಇತರೆ ವಿಧಾನಕ್ಕೆ ಬಾಧಕವಿಲ್ಲದಂತೆ,–

(ಎ) 11ನೇ ಪ್ರಕರಣದ ಮೇರೆಗೆ ಸಂದಾಯವಾಗತಕ್ಕ ಆತನ ಸಂಬಳದಿಂದ

(ಬಿ) 11ಎ ಪ್ರಕರಣದ ಮೇರೆಗೆ ಸಂದಾಯವಾಗತಕ್ಕ ಆತನ ನಿವೃತ್ತಿ ವೇತನದಿಂದ ;

(ಸಿ) ಅದು ಭೂಕಂದಾಯಕ ಬಆಕಿ ಆಗಿದ್ದರೆ ಹೇಗೋ ಹಾಗೆ

– ವಸೂಲಿ ಮಾಡಬಹುದು.

ವಿವರಣೆ.– ಈ ಪ್ರಕರಣದ ಉದ್ದೇಶಕ್ಕಾಗಿ ವಿಧಾನ ಮಂಡಲದ ಸದಸ್ಯ ಎಂಬ ಪದವು ಸಚಿವ, ರಾಜ್ಯ, ಸಚಿವ, ಉಪ-ಸಚಿವ, ಸಭಾಪತಿ, ಸಭಾಧ್ಯಕ್ಷ, ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕ ಮತ್ತು ಸರ್ಕಾರಿ ಮುಖ್ಯ ಸಚೇತಕ – ಇವರುಗಳನ್ನು ಒಳಗೊಳ್ಳುತ್ತದೆ.

XX XX XX

15. ನಿಯಮ ರಚನಾಧಿಕಾರ.–

XX XX XX

(3) ಈ ಅಧಿನಿಯಮದಲ್ಲಿ ಏನೇ ಇದ್ದರೂ, ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರು, ಸಭಾಪತಿ ಉಪ-ಸಭಾಪತಿ, ಸಭಾಧ್ಯಕ್ಷ, ಉಪ-ಸಭಾಧ್ಯಕ್ಷಯ, ವಿರೋಧ ಪಕ್ಷದ ನಾಯಕ ಮತ್ತು ಸರ್ಕಾರಿ ಮುಖ್ಯ ಸಚೇತಕ – ಇವರಿಗೆ ಸಂಬಂಧಿಸಿದಂತೆ ಮತ್ತು ಅವರ ಸಂಬಳ, ಭತ್ಯಗಳು, ನಿವೃತ್ತಿ ವೇತನಗಳು, ವೈದ್ಯಕೀಯ ಬಿಲ್ಲುಗಳು, ವಸತಿ ವ್ಯವಸ್ಥೆ, ಆಪ್ತ ಸಿಬ್ಬಂದಿ ಪ್ರಯಾಣಗಳು, ಮತ್ತು ಎಲ್ಲ ಬಗೆಯ ಸೌಲಭ್ಯಗಳಿಗೆ ಸಂಬಂಧಿಸಿದಂತೆ, ಈ ಅಧಿನಿಯಮದ ಮೇರೆಗೆ ರಚಿಸಬಹುದಾದ ಅಥವಾ ಹೊರಡಿಸಬಹುದಾದ ಇಲ್ಲವೇ ರಚಿಸಲು ಅಥವಾ ಹೊರಡಿಸಲು ಅಗತ್ಯಪಡಿಸಬಹುದಾದ ಯಾವುದೇ ಇತರ ಕಾನೂನು, ನಿಯಮ ಅಥವಾ ಆದೇಶ, ಎಲ್ಲಾ ನಿಯಮಗಳು, ಅಧಿಸೂಚನೆಗಳು ಮತ್ತು ಆದೇಶಗಳ ಪ್ರಭಾರಹೊಂದಿರುವ ಸಚಿವ, ಇವರನ್ನೊಳಗೊಂಡ ವಿಶೇಷ ಮಂಡಳಿಯು ಹಣಕಾಸು ಇಲಾಖೆ ಮತ್ತು ನಿಯಮಿಸಬಹುದಾದಂಥ ರಾಜ್ಯ ಸರ್ಕಾರದ ವ್ಯಕ್ತಿ, ಮಂಡಳಿ, ಪ್ರಾಧಿಕಾರ ಅಥವಾ ಇಲಾಖೆಯೊಂದಿಗೆ ಸಮಾಲೋಚಿಸಿ ಅನುಮೋದಿಸಿದ ನಂತರ ರಚಿಸತಕ್ಕದ್ದು ಅಥವಾ ಹೊರಡಿಸತಕ್ಕದ್ದು.

ಅನುಬಂಧ – 12

ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನಸಭೆ
ಎರಡನೇ ಅಧಿವೇಶನ

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕ, 2009
(2009ರ ವಿಧಾನಸಭೆಯ ವಿಧೇಯಕ ಸಂಖ್ಯೆ 10)

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳಿಗೆ ಸಂಬಂಧಿಸಿದಂತೆ ಈಗ ಜಾರಿಯಲ್ಲಿರುವ ಅಧಿನಿಯಮಕ್ಕೆ ಬದಲಾಗಿ ಒಂದು ವ್ಯಾಪಕ ಅಧಿನಿಯಮವನ್ನು ಜಾರಿಗೆ ತರುವುದಕ್ಕಾಗಿ ಒಂದು ವಿಧೇಯಕ.

ಕರ್ನಾಟಕ ರಾಜ್ಯದಲ್ಲಿ ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ವಿಜ್ಞಾನಗಳ ಅಭಿವೃದ್ಧಿಗೆ ಉಪಬಂಧಕಲ್ಪಿಸುವುದಕ್ಕಾಗಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳಿಗೆ ಸಂಬಂಧಿಸಿದ ಕಾನೂನುಗಳನ್ನು ಕ್ರೋಢೀಕರಿಸಲು ಮತ್ತು ತಿದ್ದುಪಡಿ ಮಾಡಲು ಈಗ ಜಾರಿಯಲ್ಲಿರುವ ಅಧಿನಿಯಮಕ್ಕೆ ಬದಲಾಗಿ ಒಂದು ವ್ಯಾಪಕ ಅಧಿನಿಯಮವನ್ನು ಜಾರಿಗೆ ತರುವುದು ಯುಕ್ತವಾಗಿರುವುದರಿಂದ ;

ಇದು ಭಾರತ ಗಣರಾಜ್ಯದ ಐವತ್ತೊಂಭತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

ಅಧ್ಯಾಯ – I
ಆರಂಭಿಕ

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ, 2009 ಎಂದು ಕರೆಯತಕ್ಕದ್ದು.

(2) ಇದು 2008ರ ನವೆಂಬರ್ 22ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. ಪರಿಭಾಷೆಗಳು.– ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(1) "ವಿದ್ಯಾವಿಷಯಕ ಪರಿಷತ್ತು (ಅಕಾಡೆಮಿಕ್ ಕೌನ್ಸಿಲ್)" ಎಂದರೆ, ವಿಶ್ವವಿದ್ಯಾಲಯದ ವಿದ್ಯಾವಿಷಯಕ ಪರಿಷತ್ತು.

(2) "ಸಂಯೋಜಿತ ಕಾಲೇಜು" ಎಂದರೆ, ವಿಶ್ವವಿದ್ಯಾಲಯದ ಅಧಿಕಾರ ಕ್ಷೇತ್ರದಲ್ಲಿ ಬರುವ ಮತ್ತು ನಿಯಮಿಸಲಾದ ಶಾಸನಗಳಿಗೆ ಅನುಸಾರವಾಗಿ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡ ಹಾಗೂ ವಿಶ್ವವಿದ್ಯಾಲಯದ ಪದವಿಗಳು, ಡಿಪ್ಲೋಮಾಗಳು ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಗಳಿಗಾಗಿ ನಡೆಸುವ ಪರೀಕ್ಷೆಗಳಿಗೆ ಪ್ರವೇಶ ಪಡೆಯಲು ಅವಶ್ಯವಾದ ವ್ಯಾಸಂಗ ಕ್ರಮವನ್ನು ಒದಗಿಸುವ ಒಂದು ಕಾಲೇಜು ಅಥವಾ ಒಂದು ಸಂಸ್ಥೆ.

(3) "ಕೃಷಿ" ಎಂಬುದು,

(ಎ) ಪ್ರಾಕೃತಿಕ ಸಂಪನ್ಮೂಲ ನಿರ್ವಹಣೆ.

(ಬಿ) ಭೂಸಾರ ಮತ್ತು ಜಲನಿಧಿ ನಿರ್ವಹಣೆ.

(ಸಿ) ಬೆಳೆ ಉತ್ಪಾದನೆ ಮತ್ತು ಸಂರಕ್ಷಣೆಯು ಸೇರಿದಂತೆ ಬೆಳೆ ಸುಧಾರಣೆ.

(ಡಿ) ತೋಟಗಾರಿಕೆ ಹಣ್ಣುಗಳು, ತರಕಾರಿಗಳು, ಪುಷ್ಪಕೃಷಿ, ಸಾಂಬಾರ ಪದಾರ್ಥಗಳು, ಔಷಧೀಯ ಸಸ್ಯಗಳು, ಸುಗಂಧ ಸಸ್ಯಗಳು ಮತ್ತು ನೆಡುತೋಪು ಬೆಳೆಗಳನ್ನು ಬೆಳೆಯುವುದು.

(ಇ) ಕೋಳಿ ಸಾಕಾಣಿಕೆ ಸೇರಿದಂತೆ ಪಶುವೈದ್ಯ ಮತ್ತು ಪ್ರಾಣಿ ವಿಜ್ಞಾನಗಳು.

(ಎಫ್) ಹೈನುಗಾರಿಕೆ ವಿಜ್ಞಾನ ಮತ್ತು ತಂತ್ರಜ್ಞಾನ.

(ಜಿ) ಮೀನು ಕೃಷಿ ಮತ್ತು ಮೀನುಗಾರಿಕೆ ನಿರ್ವಹಣೆ.

(ಎಚ್) ವನ ವಿಜ್ಞಾನ, ಫಾರಂ ವನ ವಿಜ್ಞಾನ, ಅರಣ್ಯ ಮತ್ತು ವನ್ಯಜೀವಿ ನಿರ್ವಹಣೆ ಹಾಗೂ ವೃಕ್ಷ ಕೃಷಿ.

(ಐ) ಕೃಷಿ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ.

(ಜೆ) ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ.

(ಕೆ) ವ್ಯವಸಾಯೋತ್ಪನ್ನ ಮಾರಾಟ ಹಾಗೂ ಸಹಕಾರ ಮತ್ತು ಕೃಷಿ ವ್ಯವಹಾರ ನಿರ್ವಹಣೆ.

(ಎಲ್) ಕೃಷಿಗೆ ಸಂಬಂಧಿಸಿದ ಮೂಲಭೂತ ವಿಜ್ಞಾನಗಳು ಮತ್ತು ಮಾನವಿಕ ಶಾಸ್ತ್ರಗಳು.

(ಎಂ) ಕೃಷಿ ಜೈವಿಕ ತಂತ್ರಜ್ಞಾನ.

(ಎನ್) ವ್ಯವಸಾಯೋತ್ಪನ್ನದ ಸಂಸ್ಕರಣೆಯು ಸೇರಿದಂತೆ ಸುಗ್ಗಿ ತರುವಾಯದ ತಂತ್ರಜ್ಞಾನಗಳು.

(ಓ) ಭೂಬಳಕೆ ಯೋಜನೆ ಮತ್ತು ನಿರ್ವಹಣೆ.

(ಪಿ) ಉಪ್ಪುನೇರಳೆ ಕೃಷಿಯೂ ಸೇರಿದಂತೆ ರೇಷ್ಮೆ ವ್ಯವಸಾಯ.

(ಕ್ಯೂ) ಜೇನು ಸಾಕಾಣಿಕೆ.

(ಆರ್) ಗೃಹ ವಿಜ್ಞಾನ.

(ಎಸ್) ಕೃಷಿ ತಂತ್ರಜ್ಞಾನ ಮತ್ತು ಗ್ರಾಮೀಣಾಭಿವೃದ್ಧಿ.

(ಟಿ) ಕೃಷಿ ಅರ್ಥಶಾಸ್ತ್ರ; ಹಾಗೂ

(ಯು) ಬೇಸಾಯ ಜಮೀನುಗಳ ಬಳಕೆ ಯೋಜನೆ ಮತ್ತು ನಿರ್ವಹಣೆಗೆ ಸಂಬಂಧಿಸಿದ ಯಾವುದೇ ಇತರ ವಿಷಯ.

– ಇವುಗಳ ಮೂಲಭೂತ ಹಾಗೂ ಆನ್ವಯಿಕ ವಿಜ್ಞಾನಗಳನ್ನು ಒಳಗೊಳ್ಳುತ್ತದೆ.

(4) "ಕೃಷಿ ಸಂಶೋಧನಾ ಕೇಂದ್ರ" ಎಂದರೆ, ವಲಯ ಕೃಷಿ ಸಂಶೋಧನಾ ಕೇಂದ್ರ, ಪ್ರಮುಖ ಕೃಷಿ ಸಂಶೋಧನಾ ಕೇಂದ್ರ, ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರ, ವಿಶ್ವವಿದ್ಯಾಲಯದ ಕೃಷಿ ಸಂಶೋಧನಾ ಕೇಂದ್ರ ಅಥವಾ ಇನ್ಯಾವುದೇ ಸಂಶೋಧನಾ ಕೇಂದ್ರ.

(5) "ಪ್ರಾಧಿಕಾರ" ಎಂದರೆ, 11ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂಥ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ.

(6) "ಮಂಡಳಿ" ಎಂದರೆ, ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿ.

(7) "ಅಧ್ಯಯನ ಮಂಡಳಿ" ಎಂದರೆ, ಫ್ಯಾಕಲ್ಟಿ ಹಂತದಲ್ಲಿ ವಿದ್ಯಾ ವ್ಯವಹಾರಗಳ ಸಮಿತಿ.

(8) "ಕಾಲೇಜು" ಎಂದರೆ, ವಿಶ್ವವಿದ್ಯಾಲಯದ ನೇರ ನಿಯಂತ್ರಣದಲ್ಲಿರುವ ಮತ್ತು ವ್ಯವಸ್ಥಾಪನೆಯ ಅಡಿಯಲ್ಲಿ ಬರುವ ಕೇಂದ್ರ ಕಾರ್ಯಸ್ಥಾನದಲ್ಲಿರುವ, ಕ್ಯಾಂಪಸ್‌ನಲ್ಲಿರುವ ಅಥವಾ ಇತರೆಡೆ ಇರುವ ಘಟಕ ಕಾಲೇಜು;

(9) "ಕುಲಾಧಿಪತಿ" ಎಂದರೆ, ವಿಶ್ವವಿದ್ಯಾಲಯದ ಕುಲಾಧಿಪತಿ;

(10) "ಲೆಕ್ಕ ನಿಯಂತ್ರಕ" ಎಂದರೆ, ವಿಶ್ವವಿದ್ಯಾಲಯದ ಲೆಕ್ಕ ನಿಯಂತ್ರಕರು;

(11) "ಡೀನ್" ಎಂದರೆ, ವಿಶ್ವವಿದ್ಯಾಲಯದ ಘಟಕ ಕಾಲೇಜಿನ ಅಥವಾ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಮುಖ್ಯಸ್ಥರು;

(12) "ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಡೀನ್" ಎಂದರೆ, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ, ಸಲಹೆ ನೀಡಿಕೆ ಮತ್ತು ವಿದ್ಯಾರ್ಥಿಗಳ ಉದ್ಯೋಗ ನಿಯೋಜನೆಯ ಡೀನ್;

(13) "ನಿರ್ದೇಶಕ" ಎಂದರೆ, ವಿದ್ಯಾ ನಿರ್ದೇಶಕರು, ಸಂಶೋಧನಾ ನಿರ್ದೇಶಕರು ಮತ್ತು ವಿಸ್ತರಣಾ ನಿರ್ದೇಶಕರು;

(14) "ವಿಸ್ತರಣಾ ಪರಿಷತ್ತು" ಎಂದರೆ, ವಿಶ್ವವಿದ್ಯಾಲಯದ ವಿಸ್ತರಣಾ ಶಿಕ್ಷಣ ಪರಿಷತ್ತು;

(15) "ಫ್ಯಾಕಲ್ಟಿ" ಎಂದರೆ, ಈ ಅಧಿನಿಯಮದಲ್ಲಿ ಮತ್ತು ಶಾಸನಗಳಲ್ಲಿ ನಿರ್ದಿಷ್ಟಪಡಿಸಿದ ವಿಶ್ವವಿದ್ಯಾಲಯದ ಫ್ಯಾಕಲ್ಟಿ.

(16) "ವಿಭಾಗದ ಮುಖ್ಯಸ್ಥರು" ಎಂದರೆ, ವಿಶ್ವವಿದ್ಯಾಲಯದ ಮತ್ತು ಘಟಕ ಕಾಲೇಜುಗಳ ವಿಭಾಗ ಮುಖ್ಯಸ್ಥರು'

(17) "ವಿದ್ಯಾರ್ಥಿನಿಲಯ" ಎಂದರೆ, ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ ಅಥವಾ ವಿಶ್ವವಿದ್ಯಾಲಯದ ಒಂದು ಭಾಗವಾಗಿ ಅಥವಾ ಪ್ರತ್ಯೇಕವಾಗಿ ನಿರ್ವಹಿಸಿಕೊಂಡು ಬಂದ ಮತ್ತು ವಿಶ್ವವಿದ್ಯಾಲಯವು ಮನ್ನಣೆ ನೀಡಿದ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ಇರುವ ವಾಸಸ್ಥಳ;

(18) "ಅಧಿಕಾರಿ" ಎಂದರೆ, ಪರಿನಿಯಮಗಳಲ್ಲಿ ಅಥವಾ ಶಾಸನಗಳಲ್ಲಿ ನಿರ್ದಿಷ್ಟವಾಗಿ ಹೇಳಿರುವ ವಿಶ್ವವಿದ್ಯಾಲಯದ ಅಧಿಕಾರಿ;

(19) "ನಿಯಮಿಸಲಾದುದು" ಎಂದರೆ, ವಿಶ್ವವಿದ್ಯಾಲಯದ ಶಾಸನಗಳಿಂದ ನಿಯಮಿಸಲಾದುದು;

(20) "ಕುಲಸಚಿವ" ಎಂದರೆ, ವಿಶ್ವವಿದ್ಯಾಲಯದ ಕುಲಸಚಿವ;

(21) "ವಿನಿಯಮಗಳು" ಎಂದರೆ, 54ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ವಿನಿಯಮಗಳು;

(22) "ಸಂಶೋಧನಾ ಪರಿಷತ್ತು" ಎಂದರೆ, ವಿಶ್ವವಿದ್ಯಾನಿಲಯದ ಸಂಶೋಧನಾ ಪರಿಷತ್ತು;

(23) "ಶಾಸನಗಳು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನೀತಿಗಳು, ಕಾರ್ಯವಿಧಾನಗಳು ಮುಂತಾದ ಅಂಶಗಳನ್ನು ಕುರಿತು ರಚಿಸಲಾದ ವಿಶ್ವವಿದ್ಯಾಲಯದ ಶಾಸನಗಳು;

(24) "ವಿದ್ಯಾರ್ಥಿ" ಎಂದರೆ, ವಿಶ್ವವಿದ್ಯಾಲಯದಲ್ಲಿ ಕ್ರಮಬದ್ಧವಾಗಿ ಸ್ಥಾಪಿಸಲಾದ ಪದವಿ, ಡಿಪ್ಲೋಮಾ ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಪಡೆಯಲು ವ್ಯಾಸಂಗ ಕ್ರಮದಲ್ಲಿ ಅಧ್ಯಯನ ಮಾಡುವುದಕ್ಕಾಗಿ ವಿಶ್ವವಿದ್ಯಾಲಯದ ಘಟಕ ಕಾಲೇಜು ಮತ್ತು ಒಂದು ಸಂಯೋಜಿತ ಕಾಲೇಜಿನಲ್ಲಿ ಪ್ರವೇಶ ನೀಡಲಾಗಿರುವ ವಿದ್ಯಾರ್ಥಿಪಟ್ಟಿಯಲ್ಲಿ ಹೆಸರು ಸೇರಿಸಲಾಗಿರುವಂಥ ಒಬ್ಬ ವ್ಯಕ್ತಿ.

(25) "ಅಧ್ಯಾಪಕರು" ಎಂದರೆ, ಸಹಾಯಕ ಪ್ರಾಧ್ಯಾಪಕರ ದರ್ಜೆಗೆ ಕಡಿಮೆಯಿಲ್ಲದ ಬೋಧನೆ ನೀಡುವ ಅಥವಾ ಸಂಶೋಧನೆ ಮತ್ತು /ಅಥವಾ ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳನ್ನು ನಡೆಸುವ ಮತ್ತು ಅದಕ್ಕೆ ಮಾರ್ಗದರ್ಶನ ನೀಡುವ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯದಿಂದ ನೇಮಕಗೊಂಡ ಅಥವಾ ಮಾನ್ಯತೆ ಪಡೆದ ಒಬ್ಬ ವ್ಯಕ್ತಿ ಮತ್ತು ಇದು ಅಧ್ಯಾಪಕನೆಂದು ಶಾಸನಗಳ ಮೂಲಕ ಘೋಷಿಸಲ್ಪಡಬಹುದಾದ ಇತರೆ ಯಾವುದೇ ವ್ಯಕ್ತಿಯನ್ನು ಒಳಗೊಳ್ಳಬಹುದು.

(26) "ತಂತ್ರಜ್ಞಾನ ವರ್ಗಾವಣೆ ಘಟಕಗಳು" (ಟಿಓಟಿ) ಎಂದರೆ, ಕೃಷಿ ವಿಜ್ಞಾನ ಕೇಂದ್ರ (ಕೆವಿಕೆ), ವಿಸ್ತರಣಾ ಶಿಕ್ಷಣ ಘಟಕಗಳು (ಇಇಯು), ಸಿಬ್ಬಂದಿ ತರಬೇತಿ ಘಟಕಗಳು (ಎಸ್‌ಟಿಯು), ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ (ಎಚ್‌ಟಿಐಸಿ). ಬೇಕರಿ ತರಬೇತಿ ಘಟಕ (ಬಿಟಿಯು) ಮತ್ತು ವಿಶ್ವವಿದ್ಯಾಲಯವು ಸ್ಥಾಪಿಸಿದಂಥ ಇತರ ಕೇಂದ್ರಗಳು.

(27) "ವಿಶ್ವವಿದ್ಯಾಲಯ" ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ;

(28) "ಕುಲಪತಿ" ಎಂದರೆ, ವಿಶ್ವವಿದ್ಯಾಲಯದ ಕುಲಪತಿ.

ಅಧ್ಯಾಯ – II

ವಿಶ್ವವಿದ್ಯಾಲಯಗಳು

3. ವಿಶ್ವವಿದ್ಯಾಲಯಗಳ ಸ್ಥಾಪನೆ ಮತ್ತು ನಿಗಮನ.– (1) ಕರ್ನಾಟಕ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಅಧಿನಿಯಮ, 1963ರ (1963ರ ಕರ್ನಾಟಕ ಅಧಿನಿಯಮ 22) 3ನೇ ಪ್ರಕರಣದಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾಲಯಗಳು ಈ ಮುಂದಿನಂತೆ ಉಪಬಂಧ ಕಲ್ಪಿಸಿರುವಂತೆ ತಮ್ಮ ಪ್ರಾದೇಶಿಕ ಅಧಿಕಾರ ಕ್ಷೇತ್ರ ವ್ಯಾಪ್ತಿಯೊಡನೆ ಈ ಅಧಿನಿಯಮದಡಿಯಲ್ಲಿ ಸ್ಥಾಪನೆಯಾಗಿವೆ ಎಂದು ಭಾವಿಸತಕ್ಕದ್ದು ಎಂದರೆ:–

(ಎ)ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು (ಗ್ರಾಮಾಂತರ), ಬೆಂಗಳೂರು (ನಗರ), ರಾಮನಗರಂ, ಮಂಡ್ಯ, ತುಮಕೂರು, ಮೈಸೂರು, ಚಾಮರಾಜನಗರ, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಉಡುಪಿ, ದಕ್ಷಿಣ ಕನ್ನಡ, ಕೊಡಗು, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳಿಗೆ ವಿಸ್ತರಿಸಿದ ಅಧಿಕಾರ ಕ್ಷೇತ್ರ ವ್ಯಾಪ್ತಿಯೊಂದಿಗೆ ಬೆಂಗಳೂರಿನಲ್ಲಿ ಕೇಂದ್ರ ಕಾರ್ಯಸ್ಥಾನವನ್ನು ಹೊಂದಿರುವ ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ;

(ಬಿ) ಬಾಗಲಕೋಟೆ, ಬೆಳಗಾಂ, ಬಳ್ಳಾರಿ, ಬೀದರ್, ಬಿಜಾಪುರ, ಧಾರವಾಡ, ಗದಗ, ಗುಲ್ಬರ್ಗಾ, ಹಾವೇರಿ, ಕೊಪ್ಪಳ, ರಾಯಚೂರು ಮತ್ತು ಉತ್ತರಕನ್ನಡ ಜಿಲ್ಲೆಗಳಿಗೆ ವಿಸ್ತರಿಸಿದ ಅಧಿಕಾರ ಕ್ಷೇತ್ರ ವ್ಯಾಪ್ತಿಯೊಂದಿಗೆ ಧಾರವಾಡದಲ್ಲಿ ಕೇಂದ್ರ ಕಾರ್ಯಸ್ಥಾನವನ್ನು ಹೊಂದಿರುವ ಧಾರವಾಡದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ;

(2) ಈ ಅಧಿನಿಯಮವು ಪ್ರಾರಂಭವಾದ ದಿನದಂದು, (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಗುಲ್ಬರ್ಗಾ, ಬೀದರ್, ರಾಯಚೂರು, ಬಳ್ಳಾರಿ, ಕೊಪ್ಪಳ ಜಿಲ್ಲೆಗಳಿಗೆ ವಿಸ್ತರಿಸಲಾದ ಅಧಿಕಾರ ಕ್ಷೇತ್ರ ವ್ಯಾಪ್ತಿಯೊಂದಿಗೆ ರಾಯಚೂರಿನಲ್ಲಿ ಕೇಂದ್ರ ಕಾರ್ಯಸ್ಥಾನದೊಂದಿಗೆ ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವು ಸ್ಥಾಪನೆಯಾಗತಕ್ಕದ್ದು ಮತ್ತು (1)ನೇ ಉಪಪ್ರಕರಣದ (ಬಿ) ಖಂಡದಡಿಯಲ್ಲಿ ಸ್ಥಾಪನೆಯಾದ ವಿಶ್ವವಿದ್ಯಾಲಯವು ಹೊಂದಿದ್ದ ಆ ಪ್ರದೇಶದ ಮೇಲಿನ ಅಧಿಕಾರ ಕ್ಷೇತ್ರ ವ್ಯಾಪ್ತಿಯು ರದ್ದಾಗತಕ್ಕದ್ದು.

(3) ಕುಲಾಧಿಪತಿ, ಸಹ ಕುಲಾಧಿಪತಿ, ಪ್ರತಿಯೊಂದು ವಿಶ್ವವಿದ್ಯಾಲಯದ ಕುಲಪತಿ, ವ್ಯವಸ್ಥಾಪನಾ ಮಂಡಳಿ, ವಿದ್ಯಾವಿಷಯಕ ಪರಿಷತ್ತು ಮತ್ತು ಇತರ ಪ್ರಾಧಿಕಾರಗಳು ಹಾಗೂ ಅಧಿಕಾರಿಗಳು ಸೇರಿ (1)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ, ವಿಶ್ವವಿದ್ಯಾಲಯದ ಹೆಸರಿನ ಒಂದು ನಿಗಮಿತ ನಿಕಾಯವು ರಚನೆಯಾಗತಕ್ಕದ್ದು.

(4) ಅಂಥ ಪ್ರತಿಯೊಂದು ವಿಶ್ವವಿದ್ಯಾಲಯವು ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮುದ್ರೆಯನ್ನು ಹೊಂದಿರತಕ್ಕದ್ದು ಹಾಗೂ ತನ್ನ ಹೆಸರಿನಿಂದ ದಾವೆ ಹೂಡಬಹುದು ಅಥವಾ ದಾವೆಗೆ ಗುರಿಯಾಗಬಹುದು.

(5) ವಿಶ್ವವಿದ್ಯಾಲಯವು ಚರ ಮತ್ತು ಸ್ಥಿರ ಸ್ವತ್ತುಗಳೆರಡೂ ಆರ್ಜಿಸಲು ಮತ್ತು ಧಾರಣ ಮಾಡಲು ಮತ್ತು ಕೇಂದ್ರ ಸರ್ಕಾರದಿಂದ, ರಾಜ್ಯ ಸರ್ಕಾರದಿಂದ ಅಥವಾ ಯಾವುದೇ ಇತರ ಅಂಗೀಕೃತ ಮೂಲಗಳಿಂದ ಸಾಲ ಪಡೆಯಲು ಮತ್ತು ಯಾವುದೇ ಕರಾರನ್ನು ಮಾಡಿಕೊಳ್ಳಲು ಮತ್ತು ಈ ಅಧಿನಿಯಮದ ಉದ್ದೇಶಕ್ಕಾಗಿ ಅವಶ್ಯವಾದ ಎಲ್ಲಾ ಇತರ ಕಾರ್ಯಗಳನ್ನು ಮಾಡಲು ಸಕ್ಷಮವಾಗಿರತಕ್ಕದ್ದು.

(6) ವಿಶ್ವವಿದ್ಯಾಲಯವು, ತನ್ನಲ್ಲಿ ನಿಹಿತವಾಗಿದ್ದಿರಬಹುದಾದ ಅಥವಾ ತಾವು ಆರ್ಜಿಸಿರಬಹುದಾದ ಯಾವುದೇ ಸ್ಥಿರ ಸ್ವತ್ತನ್ನು ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದುಕೊಳ್ಳದೇ ಗುತ್ತಿಗೆ ನೀಡತಕ್ಕದ್ದಲ್ಲ, ಮಾರಾಟ ಮಾಡತಕ್ಕದ್ದಲ್ಲ ಅಥವಾ ಅನ್ಯಥಾ ವರ್ಗಾವಣೆ ಮಾಡತಕ್ಕದ್ದಲ್ಲ.

(7) ವಿಶ್ವವಿದ್ಯಾಲಯವು ಹೂಡಿದ ಅಥವಾ ಅದರ ವಿರುದ್ಧ ಹೂಡಲಾದ ಎಲ್ಲಾ ದಾವೆಗಳಲ್ಲಿ ಮತ್ತು ಇತರ ಕಾನೂನು ವ್ಯವಹರಣೆಗಳಲ್ಲಿ, ವಾದ ಪ್ರತಿವಾದ ಪತ್ರಗಳಿಗೆ ಕುಲಸಚಿವರು ಸಹಿ ಮಾಡತಕ್ಕದ್ದು ಮತ್ತು ಸತ್ಯಾಪನೆ ಮಾಡತಕ್ಕದ್ದು ಮತ್ತು ಅಂಥ ದಾವೆಗಳು ಮತ್ತು ವ್ಯವಹರಣೆಗಳಲ್ಲಿನ ಎಲ್ಲಾ ಆದೇಶಿಕೆಗಳನ್ನು ವಿಶ್ವವಿದ್ಯಾಲಯದ ಕುಲಸಚಿವರು ಹೊರಡಿಸತಕ್ಕದ್ದು ಮತ್ತು ಅವರ ಮೇಲೆ ಜಾರಿ ಮಾಡತಕ್ಕದ್ದು.

4. ಅಧಿಕಾರ ವ್ಯಾಪ್ತಿ.- (1) ಕೃಷಿ, ಪಶುಸಂಗೋಪನೆ, ಮೀನುಗಾರಿಕೆ, ರೇಷ್ಮೆ ವ್ಯವಸಾಯ ಮತ್ತು ಅರಣ್ಯ ವಿಜ್ಞಾನ ತರಬೇತಿ ಅಥವಾ ಶಿಕ್ಷಣ ಕೇಂದ್ರಗಳು ಮತ್ತು ಸಂಶೋಧನಾ ಹಾಗೂ ಪ್ರಯೋಗ ಕೇಂದ್ರಗಳ ನಿರ್ವಹಣೆಗೆ ಮತ್ತು ಕ್ಷೇತ್ರ ವಿಸ್ತರಣಾ ಕೆಲಸಗಾರರ ತರಬೇತಿ ಕಾರ್ಯಕ್ರಮಗಳಿಗೆ ಮತ್ತು ತನ್ನ ಅಧಿಕಾರ ಕ್ಷೇತ್ರ ವ್ಯಾಪ್ತಿಯೊಳಗೆ ವಿವಿಧ ಭಾಗಗಳಲ್ಲಿ

ಅಗತ್ಯವಾಗಬಹುದಾದಂಥ ಇತರ ಕೇಂದ್ರಗಳ ಸ್ಥಾಪನೆ, ಅಭಿವೃದ್ಧಿ ಮತ್ತು ಕಾರ್ಯಾಚರಣೆ ನಡೆಸುವ ಜವಾಬ್ದಾರಿ ಪ್ರತಿಯೊಂದು ವಿಶ್ವವಿದ್ಯಾಲಯದ ಮೇಲಿರತಕ್ಕದ್ದು.

(2) ವಿಶ್ವವಿದ್ಯಾಲಯದ ಆಡಳಿತದ ಅಡಿಯಲ್ಲಿ ಬರುವ ಎಲ್ಲಾ ಕಾಲೇಜುಗಳು, ಸಂಶೋಧನೆ ಮತ್ತು ಪ್ರಯೋಗ ಕೇಂದ್ರಗಳು, ಕೃಷಿ ವಿಜ್ಞಾನ ಕೇಂದ್ರಗಳು ಹಾಗೂ ವಿಸ್ತರಣಾ ಶಿಕ್ಷಣ ಮತ್ತು ಇತರ ತರಬೇತಿ ಕೇಂದ್ರಗಳು ಅಥವಾ ಪ್ರತಿಯೊಂದು ವಿಶ್ವವಿದ್ಯಾಲಯದ ಅಧಿಕಾರ ಕ್ಷೇತ್ರ ವ್ಯಾಪ್ತಿಯ ಮತ್ತು ಪ್ರಾಧಿಕಾರದ ಅಡಿಯಲ್ಲಿ ಬರುವ ಇತರ ಸಂಸ್ಥೆಗಳು ಆ ವಿಶ್ವವಿದ್ಯಾಲಯದ ಘಟಕ ಭಾಗವಾಗಿರತಕ್ಕದ್ದು ಮತ್ತು ಆ ವಿಶ್ವವಿದ್ಯಾಲಯದ ಆಡಳಿತ ಮತ್ತು ನಿಯಂತ್ರಣದಡಿಯಲ್ಲಿ ಕೆಲಸ ಮಾಡತಕ್ಕದ್ದು. ವಿಶ್ವವಿದ್ಯಾಲಯದಿಂದ ಸಂಯೋಜಿತ ಕಾಲೇಜು ಎಂದು ಅನ್ಯಥಾ ಮನ್ನಣೆ ಪಡೆದ ಹೊರತು ಯಾವ ಘಟಕವನ್ನು ಒಂದು ಸಂಯೋಜಿತ ಘಟಕ ಎಂದು ಮಾನ್ಯ ಮಾಡತಕ್ಕದ್ದಲ್ಲ.

(3) ಪ್ರತಿಯೊಂದು ವಿಶ್ವವಿದ್ಯಾಲಯವು ಅನೇಕ ವಿಭಿನ್ನ ಶಾಸ್ತ್ರಗಳ ದೃಷ್ಟಿಯಿಂದ ಅಧ್ಯಯನ ಮಾಡುವ ವಿದ್ಯಾವಿಷಯಕ ಕಾರ್ಯಕ್ರಮಗಳ ಮತ್ತು ಸಂಶೋಧನಾ ಯೋಜನೆಗಳ ಸಂಬಂಧದಲ್ಲಿ ಇತರ ವಿಶ್ವವಿದ್ಯಾಲಯಗಳು ಅಥವಾ ಭಾರತದ ಮತ್ತು ವಿದೇಶದ ಖ್ಯಾತ ಸಂಸ್ಥೆಗಳೊಂದಿಗೆ ವಿದ್ಯಾವಿಷಯಕ ಕಾರ್ಯಕ್ರಮಗಳ ಸಹಯೋಗ ಮಾಡಿಕೊಳ್ಳಬಹುದು.

(4) ವಿಶ್ವವಿದ್ಯಾಲಯವು ಅಗತ್ಯಕ್ಕೆ ತಕ್ಕಂತೆ ತನ್ನ ಅಧಿಕಾರ ಕ್ಷೇತ್ರವ್ಯಾಪ್ತಿಯೊಳಗೆ ಮತ್ತು ವಿದೇಶದಲ್ಲಿ ತನ್ನ ಘಟಕ ಸಂಸ್ಥೆಗಳನ್ನು ಸ್ಥಾಪಿಸುವ, ಅಭಿವೃದ್ಧಿ ಪಡಿಸುವ ಮತ್ತು ಕಾರ್ಯಾಚರಣೆ ಮಾಡುವ ಹೊಣೆಗಾರಿಕೆಯನ್ನು ವಹಿಸಿಕೊಳ್ಳಬಹುದು.

5. ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳು.- ಪ್ರತಿಯೊಂದು ವಿಶ್ವವಿದ್ಯಾಲಯವನ್ನು ಈ ಮುಂದಿನ ಧ್ಯೇಯೋದ್ದೇಶಗಳಿಗಾಗಿ ಸ್ಥಾಪಿಸಲಾಗಿದೆ ಮತ್ತು ನಿಗಮಿತಗೊಳಿಸಲಾಗಿದೆ ಎಂದು ಭಾವಿಸತಕ್ಕದ್ದು, ಎಂದರೆ:-

(ಎ) 2ನೇ ಪ್ರಕರಣದ (3)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅಧ್ಯಯನದ ವಿವಿಧ ಶಾಖೆಗಳಲ್ಲಿ ಉತ್ತಮ ಗುಣಮಟ್ಟದ ಮಾನವ ಸಂಪನ್ಮೂಲವನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ಶಿಕ್ಷಣ ನೀಡುವುದಕ್ಕೆ ಏರ್ಪಾಡು ಮಾಡುವುದು;

(ಬಿ) ಕಲಿಕೆ ಮತ್ತು ಸಂಶೋಧನೆಗೆ ಅದರಲ್ಲೂ ಕೃಷಿ ಮತ್ತು ಇತರೆ ಸಂಬಂಧಿತ ವಿಜ್ಞಾನದಲ್ಲಿ ಕಲಿಕೆ ಮತ್ತು ಸಂಶೋಧನೆಯ ಮುನ್ನಡೆಗೆ ಉತ್ತೇಜನ ನೀಡುವುದು;

(ಸಿ) ಜನತೆಗೆ ವಿಶೇಷವಾಗಿ ರಾಜ್ಯದ ಗ್ರಾಮಾಂತರ ಜನರಿಗೆ, ವಿಜ್ಞಾನ ಮತ್ತು ತಂತ್ರಜ್ಞಾನಗಳ ವಿಸ್ತರಣಾ ಶಿಕ್ಷಣವನ್ನು ಕೈಕೊಳ್ಳುವುದು;

(ಡಿ) ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಕಾಲದಿಂದ ಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ಇತರ ಉದ್ದೇಶಗಳು; ಮತ್ತು

(ಇ) ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಶೈಕ್ಷಣಿಕ, ಕೈಗಾರಿಕಾ, ಸಂಶೋಧನೆ ಮತ್ತು ಇತರ ಸಂಸ್ಥೆಗಳೊಂದಿಗೆ ಪಾಲುಗಾರಿಕೆ ಮತ್ತು ಜೋಡಣೆಗಳನ್ನು ಉತ್ತೇಜಿಸುವುದು.

6. **ವಿಶ್ವವಿದ್ಯಾಲಯಕ್ಕೆ ಪ್ರವೇಶ.**- (1) ವಿಶ್ವವಿದ್ಯಾಲಯವು ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳಿಗೊಳಪಟ್ಟು ಎಲ್ಲ ವ್ಯಕ್ತಿಗಳಿಗೂ ಮುಕ್ತವಾಗಿರತಕ್ಕದ್ದು:

ಪರಂತು, ಈ ಪ್ರಕರಣದಲ್ಲಿರುವುದಾವುದೂ, ಪ್ರವೇಶಕ್ಕಾಗಿ ಅಥವಾ ವಿಶ್ವವಿದ್ಯಾಲಯದ ಪಟ್ಟಿಗಳಲ್ಲಿ ಉಳಿದುಕೊಳ್ಳುವುದಕ್ಕಾಗಿ ನಿಯಮಿಸಲಾದ ಶೈಕ್ಷಣಿಕ ಗುಣಮಟ್ಟಗಳನ್ನು ಪೂರೈಸದಿರುವ ಯಾವೊಬ್ಬ ವ್ಯಕ್ತಿಗೆ ಅಥವಾ ಯಾವ ವ್ಯಕ್ತಿಗಳ ಶೈಕ್ಷಣಿಕ ದಾಖಲೆಗಳು, ಪದವಿಯನ್ನು ನೀಡುವುದಕ್ಕಾಗಿ ಅಗತ್ಯಪಡಿಸಲಾದ ಕನಿಷ್ಠ ಗುಣಮಟ್ಟಕ್ಕಿಂತ ಕಡಿಮೆ ಇವೆಯೋ ಆ ವ್ಯಕ್ತಿಗಳಿಗೆ ಅಥವಾ ಯಾರ ವೈಯಕ್ತಿಕ ನಡತೆಯು ವಿಶ್ವವಿದ್ಯಾನಿಲಯದ ಹಿತದೃಷ್ಟಿಗೆ ಅಥವಾ ಇತರ ವಿದ್ಯಾರ್ಥಿಗಳ ಮತ್ತು ಸಿಬ್ಬಂದಿಯ ಸೂಕ್ತ ಹಕ್ಕುಗಳಿಗೆ ಮತ್ತು ವಿಶೇಷಾಧಿಕಾರಗಳಿಗೆ ಹಾನಿಕಾರಕವಾಗಿರುವಂಥದ್ದಾಗಿದೆಯೋ ಆ ವ್ಯಕ್ತಿಗಳಿಗೆ ಅಧ್ಯಯನದ ಯಾವುದೇ ವ್ಯಾಸಂಗ ಕ್ರಮಕ್ಕೆ ಪ್ರವೇಶ ನೀಡಲು ವಿಶ್ವವಿದ್ಯಾಲಯವನ್ನು ಅಗತ್ಯಪಡಿಸತಕ್ಕದ್ದಲ್ಲ:

ಮತ್ತು ಪರಂತು, ಈ ಪ್ರಕರಣದಲ್ಲಿರುವುದಾವುದೂ, ವಿದ್ಯಾವಿಷಯಕ ಪರಿಷತ್ತು ನಿರ್ಧರಿಸಿದಂತೆ ವಿಶ್ವವಿದ್ಯಾಲಯದ ಅಥವಾ ಯಾವುದೇ ನಿರ್ದಿಷ್ಟ ಕಾಲೇಜಿನ ಅಥವಾ ವಿಭಾಗದ ಲಭ್ಯವಿರುವ ಫ್ಯಾಕಲ್ಟಿಗಳಲ್ಲಿ ಸ್ಥಳಾವಕಾಶ ನೀಡಬಹುದಾದಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿಗೆ ಯಾವುದೇ ವ್ಯಾಸಂಗ ಕ್ರಮಗಳಿಗೆ ಪ್ರವೇಶ ನೀಡಲು ವಿಶ್ವವಿದ್ಯಾಲಯವನ್ನು ಅಗತ್ಯಪಡಿಸುತ್ತದೆಂದು ಭಾವಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಸರ್ಕಾರವು ಈ ಸಂಬಂಧದಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ವಿದ್ಯಾರ್ಹತೆಗಳನ್ನು ಹೊಂದಿದ ಮಹಿಳೆಯರಿಗೆ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗೆ, ಕೃಷಿಕರ ಮಕ್ಕಳಿಗೆ ಮತ್ತು ಇತರ ರಾಜ್ಯಗಳ ವಿದ್ಯಾರ್ಥಿಗಳಿಗೆ ಮತ್ತು ವಿದೇಶಿ ವಿದ್ಯಾರ್ಥಿಗಳಿಗೆ ಮತ್ತು ಸರ್ಕಾರವು ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಕೃಷಿ ಕುರಿತ ಪ್ರಾಯೋಗಿಕ ಪರೀಕ್ಷೆಯಲ್ಲಿ ಉತ್ತೀರ್ಣರಾದ ಸ್ವಾತಂತ್ರ ಹೋರಾಟಗಾರರ, ಸೈನಿಕರ ಮತ್ತು ಮಾಜಿ ಸೈನಿಕರ ಮಕ್ಕಳಿಗೆ ಹಾಗೂ ಪ್ರತಿಪಾಲಿತರಿಗೆ ಮತ್ತು ಸರ್ಕಾರವು ಈ ಸಂಬಂಧದಲ್ಲಿ ಘೋಷಿಸಬಹುದಾದಂಥ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ನಾಗರಿಕರಿಗೆ ವಿಶ್ವವಿದ್ಯಾಲಯದ ಕಾಲೇಜುಗಳಲ್ಲಿ ಸ್ಥಾನಗಳನ್ನು ಮೀಸಲಿರಿಸತಕ್ಕದ್ದು ಎಂದು ನಿರ್ದೇಶಿಸತಕ್ಕದ್ದು ಮತ್ತು ಅಂಥ ನಿರ್ದೇಶನಗಳನ್ನು ನೀಡಿದಲ್ಲಿ ವಿಶ್ವವಿದ್ಯಾಲಯವು ಅದರಂತೆ ಮೀಸಲಾತಿಗಳನ್ನು ಮಾಡತಕ್ಕದ್ದು.

ವಿವರಣೆ:– ಈ ಉಪಪ್ರಕರಣದ ಉದ್ದೇಶಕ್ಕಾಗಿ.–

(1) "ಕೃಷಿಕ" ಎಂದರೆ, ಮಾಲೀಕನಾಗಿ ಭೂಮಿಯನ್ನು ಹೊಂದಿರುವ ಹಾಗೂ ಯಾರ ಮುಖ್ಯ ಆದಾಯವು ಸ್ವಂತ ಸಾಗುವಳಿ ಮಾಡುವುದರಿಂದ ಬರುತ್ತದೋ ಆ ವ್ಯಕ್ತಿ ಮತ್ತು ಇದು ಮುಖ್ಯವಾಗಿ ಕೃಷಿ ಭೂಮಿಗಳಲ್ಲಿ ದೈಹಿಕ ದುಡಿಮೆಯಿಂದ ತನ್ನ ಜೀವನ ನಿರ್ವಹಣೆ ಮಾಡುತ್ತಿರುವ ವ್ಯಕ್ತಿಗಳನ್ನು ಒಳಗೊಳ್ಳುತ್ತದೆ.

(2) "ಸ್ವಾತಂತ್ರ ಹೋರಾಟಗಾರ" ಎಂದರೆ, ಸರ್ಕಾರವು ಕಾಲ ಕಾಲಕ್ಕೆ ಹಾಗೆಂದು ಘೋಷಿಸುವ ಪ್ರವರ್ಗದ ವ್ಯಕ್ತಿ.

7. ವಿಶ್ವವಿದ್ಯಾಲಯದ ಅಧಿಕಾರ ಮತ್ತು ಪ್ರಕಾರ್ಯಗಳು.– ವಿಶ್ವವಿದ್ಯಾಲಯವು ಈ ಮುಂದಿನ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಹೊಂದಿರತಕ್ಕದ್ದು, ಎಂದರೆ:–

(1) ಕೃಷಿ ಮತ್ತು ಸಂಬಂಧಿತ ಇತರ ಕಲಿಕೆಯ ವಿಭಾಗಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯವು ಸೂಕ್ತ ಎಂದು ಭಾವಿಸಬಹುದಾದ ಶಿಕ್ಷಣವನ್ನು ಒದಗಿಸುವುದು;

(2) ಕೃಷಿ ಮತ್ತು ಸಂಬಂಧಿತ ಕಲಿಕೆಯ ವಿಭಾಗಗಳಲ್ಲಿ ಸಂಶೋಧನೆಯನ್ನು ನಡೆಸುವುದಕ್ಕೆ ಅವಕಾಶವನ್ನು ನೀಡುವುದು.

H-253-65

(3) ಸಂಶೋಧನೆಯಿಂದ ತಿಳಿದುಬಂದ ವಿಷಯಗಳನ್ನು ಮತ್ತು ತಾಂತ್ರಿಕ ಮಾಹಿತಿಗಳನ್ನು ವಿಸ್ತರಣಾ ಶೈಕ್ಷಣಿಕ ಕಾರ್ಯಕ್ರಮಗಳ ಮೂಲಕ ಪ್ರಸಾರ ಮಾಡಲು ಅವಕಾಶ ಕಲ್ಪಿಸುವುದು;

(4) ಯಾವುದೇ ಇತರ ವಿಶ್ವವಿದ್ಯಾಲಯದಲ್ಲಿ ಅಥವಾ ಈ ಉದ್ದೇಶಕ್ಕಾಗಿ ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಅರೆಕಾಲಿಕ ವ್ಯಾಸಂಗ ಕ್ರಮ ಮತ್ತು / ಅಥವಾ ಸಂಶೋಧನೆಯು ಸೇರಿದಂತೆ ವಿಶ್ವವಿದ್ಯಾಲಯದಲ್ಲಿ ನಿಯಮಿಸಿದ ವ್ಯಾಸಂಗ ಕ್ರಮ ಅಥವಾ ಸಂಶೋಧನೆ ಅಥವಾ ಅವರೆಡನ್ನೂ ಮಾಡಿರುವ ವ್ಯಕ್ತಿಗಳಿಗೆ ಪದವಿಗಳು, ಡಿಪ್ಲೋಮಗಳು ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳಿಗಾಗಿ ವ್ಯಾಸಂಗ ಕ್ರಮಗಳನ್ನು ಪ್ರಾರಂಭಿಸುವುದು ಮತ್ತು ಪರೀಕ್ಷೆಗಳನ್ನು ನಡೆಸುವುದು ಮತ್ತು ಪದವಿ, ಡಿಪ್ಲೋಮಾ ಮತ್ತಿತರ ಶೈಕ್ಷಣಿಕ ಪ್ರಶಸ್ತಿ ನೀಡುವುದು;

(5) ನಿಯಮಿಸಬಹುದಾದಂಥ ಗೌರವ ಪದವಿಗಳು ಮತ್ತು ಇತರ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು;

(6) ರೈತರಿಗೆ, ಕ್ಷೇತ್ರ ಕೆಲಸಗಾರರಿಗೆ, ಗ್ರಾಮೀಣ ಯುವಕರಿಗೆ ಮತ್ತು ವಿಶ್ವವಿದ್ಯಾಲಯದಲ್ಲಿ ಕ್ರಮಬದ್ಧ ವಿದ್ಯಾರ್ಥಿಗಳಾಗಿ ಭರ್ತಿಯಾಗಿರದ ಇತರ ವ್ಯಕ್ತಿಗಳಿಗೆ ತರಬೇತಿಯನ್ನು ನೀಡುವುದು;

(7) 4ನೇ ಪ್ರಕರಣದಲ್ಲಿ ನಮೂದಿಸಿರುವ ಮಿತಿಗಳಿಗೊಳಪಟ್ಟು, ವಿಶ್ವವಿದ್ಯಾಲಯವು ನಿರ್ಧರಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಉದ್ದೇಶಗಳಿಗಾಗಿ ಇತರ ವಿಶ್ವವಿದ್ಯಾಲಯಗಳು ಮತ್ತು ಸಂಸ್ಥೆಗಳೊಡನೆ ಜೊತೆಗೂಡಿ ಕೆಲಸಮಾಡುವುದು;

(8) ಕೃಷಿ, ಗೃಹವಿಜ್ಞಾನ, ಕೃಷಿ ಇಂಜಿನಿಯರಿಂಗ್, ಅರಣ್ಯ ವಿಜ್ಞಾನ ಮತ್ತು ಸಂಬಂಧಿತ ವಿಜ್ಞಾನಗಳಿಗೆ ಸಂಬಂಧಿಸಿದ ಕಾಲೇಜುಗಳು ಮತ್ತು ಇತರ ಸಂಸ್ಥೆಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(9) ಬೋಧನೆ, ಸಂಶೋಧನೆ ನಡೆಸಲು ಮತ್ತು ವಿಸ್ತರಣಾ ಶಿಕ್ಷಣಕ್ಕಾಗಿ ಪ್ರಯೋಗಾಲಯಗಳು, ಗ್ರಂಥಾಲಯಗಳು, ಸಂಶೋಧನಾ ಕೇಂದ್ರಗಳು ಮತ್ತು ಸಂಸ್ಥೆಗಳು ಮತ್ತು ವಸ್ತುಸಂಗ್ರಹಾಲಯಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(10) ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣಕ್ಕಾಗಿ ಹುದ್ದೆಗಳನ್ನು ಸೃಜಿಸುವುದು ಮತ್ತು ಅಂಥ ಹುದ್ದೆಗಳಿಗೆ ವ್ಯಕ್ತಿಗಳನ್ನು ನೇಮಿಸುವುದು;

(11) ಆಡಳಿತಾತ್ಮಕವಾದ ಮತ್ತು ಇತರ ಹುದ್ದೆಗಳನ್ನು ಸೃಜಿಸುವುದು ಮತ್ತು ಅಂಥ ಹುದ್ದೆಗಳಿಗೆ ವ್ಯಕ್ತಿಗಳನ್ನು ನೇಮಕ ಮಾಡುವುದು;

(12) ಶಾಸನಗಳನ್ವಯ ಫೆಲೋಶಿಪ್, ವಿದ್ಯಾರ್ಥಿವೇತನಗಳು, ಸ್ಟೈಪೆಂಡುಗಳು ಮತ್ತು ಬಹುಮಾನಗಳನ್ನು ಸ್ಥಾಪಿಸುವುದು ಮತ್ತು ನೀಡುವುದು;

(13) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳಿಗೆ ನಿವಾಸ ಗೃಹಗಳನ್ನು ನಿರ್ಮಿಸುವುದು ಮತ್ತು ನಿರ್ವಹಿಸಿಕೊಂಡು ಬರುವುದು;

(14) ನಿಯಮಿಸಲಾದಂಥ ಫೀಜು ಮತ್ತು ಇತರೆ ಚಾರ್ಜುಗಳನ್ನು ನಿಗದಿಪಡಿಸುವುದು, ಕೋರುವುದು ಮತ್ತು ಸ್ವೀಕರಿಸುವುದು;

(15) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ನಿವಾಸ ನಡತೆ ಮತ್ತು ಶಿಸ್ತನ್ನು ಮೇಲ್ವಿಚಾರಣೆ ಮಾಡುವುದು ಮತ್ತು ನಿಯಂತ್ರಿಸುವುದು ಹಾಗೂ ಅವರ ಆರೋಗ್ಯ ಮತ್ತು ಕ್ಷೇಮಾಭಿವೃದ್ಧಿಯನ್ನು ವರ್ಧಿಸುವುದಕ್ಕಾಗಿ ಏರ್ಪಾಡು ಗಳನ್ನು ಮಾಡುವುದು;

(16) ವಿದೇಶಗಳಿಂದ ಮತ್ತು ದೇಶದ ಒಳಗಿನಿಂದ ವಂತಿಗೆಗಳನ್ನು ಸ್ವೀಕರಿಸುವುದು:

ಪರಂತು, ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದ ಹೊರತು ವಿಶ್ವವಿದ್ಯಾಲಯವು ವಿದೇಶದಿಂದ, ವಿದೇಶಿ ಪ್ರತಿಷ್ಠಾನಗಳು ಮತ್ತು ಅಂಥ ದೇಶದ ಯಾವುದೇ ವ್ಯಕ್ತಿಯಿಂದ ವಂತಿಗೆಗಳನ್ನು ಸ್ವೀಕರಿಸತಕ್ಕದ್ದಲ್ಲ.

(17) ಭಾರತದ ಹೊರಗೆ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಗಳಿಗೆ ತನ್ನ ವಿಶೇಷಾಧಿಕಾರಕ್ಕೆ ಪ್ರವೇಶಾವಕಾಶವನ್ನು ನೀಡಲು ವಿಶ್ವವಿದ್ಯಾಲಯಕ್ಕೆ ಅನುಮತಿಸುವುದು;

(18) ವಿವಿಧ ಶಾಸನಗಳಡಿಯಲ್ಲಿ ನಿರ್ಧರಿಸಿದಂತೆ ಕೃಷಿ ಮತ್ತು ಸಂಬಂಧಿತ ವಿಜ್ಞಾನಗಳಲ್ಲಿ ಕಲಿಕೆಯನ್ನು ನಡೆಸಲು ಖಾಸಗಿ ಕೃಷಿ ಸಂಸ್ಥೆಗಳಿಗೆ ಸಂಯೋಜನೆ ನೀಡುವುದು.

(19) ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳ ಪುರೋಭಿವೃದ್ಧಿಗೆ ಅಗತ್ಯವಾಗಬಹುದಾದ ಎಲ್ಲಾ ಚಟುವಟಿಕೆಗಳ ಮತ್ತು ಕಾರ್ಯಗಳನ್ನು ಅವು ಮೇಲೆ ಹೇಳಿದ ಅಧಿಕಾರಗಳಿಗೆ ಪ್ರಾಸಂಗಿಕವಾಗಿರಲಿ ಇಲ್ಲದಿರಲಿ ಮಾಡುವುದು:

8. ತಪಾಸಣೆ ಮತ್ತು ನಿಯಂತ್ರಣ.– (1) ಕುಲಾಧಿಪತಿಯವರು, ಸರ್ಕಾರವು ತಪಾಸಣೆ ಕೋರಿದ್ದರೆ ಅಥವಾ ಸ್ವಪ್ರೇರಣೆಯಿಂದ ತಾನು

ನಿರ್ದೇಶಿಸಬಹುದಾದಂಥ ವ್ಯಕ್ತಿ ಅಥವಾ ವ್ಯಕ್ತಿಗಳು ವಿಶ್ವವಿದ್ಯಾಲಯದ ಕಟ್ಟಡಗಳ, ಪ್ರಯೋಗ ಶಾಲೆಗಳ, ಗ್ರಂಥಾಲಯಗಳ, ವಸ್ತು ಸಂಗ್ರಹಾಲಯಗಳ, ವಿದ್ಯಾರ್ಥಿನಿಲಯಗಳ, ಕಾರ್ಯಾಗಾರಗಳ ಮತ್ತು ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ, ಆಡಳಿತ ನಡೆಸುತ್ತಿರುವ ಮಾನ್ಯತೆ ನೀಡಿದ ಅಥವಾ ಅನುಮೋದಿಸಿದ ಸಂಸ್ಥೆಯ ಸಲಕರಣೆಗಳ ಮತ್ತು ವಿಶ್ವವಿದ್ಯಾಲಯವು ನಡೆಸಿದ ಮತ್ತು ಕೈಗೊಂಡ ಪರೀಕ್ಷೆಗಳ, ಅಧ್ಯಾಪನದ ಮತ್ತು ಇತರ ಕಾರ್ಯದ ಬಗ್ಗೆ ತಪಾಸಣೆ ಮಾಡುವಂತೆ ಮಾಡತಕ್ಕದ್ದು ಮತ್ತು ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಇತರ ಯಾವುದೇ ವಿಷಯದ ಬಗ್ಗೆ ಅದೇ ರೀತಿಯಲ್ಲಿ ತಪಾಸಣೆ ಮಾಡುವಂತೆ ಅಥವಾ ವಿಚಾರಣೆ ನಡೆಸುವಂತೆ ಮಾಡತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ತಪಾಸಣೆ ಅಥವಾ ವಿಚಾರಣೆ ನಡೆಸುವುದಕ್ಕಾಗಿ, ನಿರ್ದೇಶಿತರಾದ ವ್ಯಕ್ತಿ ಅಥವಾ ವ್ಯಕ್ತಿಗಳು, ಆ ಉದ್ದೇಶಕ್ಕಾಗಿ, ಸಂಬಂಧಪಟ್ಟ ಸಂಸ್ಥೆಗಳನ್ನು ಮತ್ತು ಆವರಣಗಳನ್ನು ಪ್ರವೇಶಿಸಲು ಮತ್ತು ಅವಶ್ಯಕವಾಗಬಹುದಾದಂಥ ಲೆಕ್ಕಪತ್ರಗಳನ್ನು ಅಥವಾ ಇತರ ದಾಖಲೆಗಳನ್ನು ಪಡೆದುಕೊಳ್ಳಲು ಅವಕಾಶವಿರತಕ್ಕದ್ದು.

(3) ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳು, ತಪಾಸಣೆ ಅಥವಾ ವಿಚಾರಣೆಯ ಒಂದು ವರದಿಯನ್ನು ಕುಲಾಧಿಪತಿಯವರಿಗೆ ಸಲ್ಲಿಸತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು.

(4) ವರದಿಯನ್ನು ಸ್ವೀಕರಿಸಿದ ಮೇಲೆ ಕುಲಾಧಿಪತಿಯವರು ಅದರ ಮೇಲೆ ತನ್ನ ತೀರ್ಮಾನಗಳನ್ನು ದಾಖಲಿಸತಕ್ಕದ್ದು ಮತ್ತು ಅದನ್ನು ಅವಶ್ಯಕವಾಗಬಹುದಾದ ಅಥವಾ ತಾನು ನೀಡುವ ನಿರ್ದೇಶನಗಳಿಗೆ ಅನುಸಾರವಾಗಿ ಮುಂದಿನ ಕ್ರಮ ಕೈಗೊಳ್ಳುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(5) ರಾಜ್ಯ ಸರ್ಕಾರವು, ವಿಚಾರಣೆಯ ವರದಿಯಲ್ಲಿಯ ತೀರ್ಮಾನಗಳಿಗೆ ಸಂಬಂಧಿಸಿದಂತೆ ಕುಲಾಧಿಪತಿಯವರು ಮತ್ತು ಸರ್ಕಾರವು ನೀಡಿದ ನಿರ್ದೇಶನಗಳಿಗೆ ಅನುಸಾರವಾಗಿ ಕ್ರಮಕೈಗೊಳ್ಳಲು ಕುಲಪತಿಯವರಿಗೆ ನಿರ್ದೇಶನವನ್ನು ನೀಡತಕ್ಕದ್ದು ಮತ್ತು ಅಂಥ ಕ್ರಮ ತೆಗೆದುಕೊಳ್ಳುವುದಕ್ಕೆ ಒಂದು ಕಾಲಮಿತಿಯನ್ನು ನಿಗದಿಗೊಳಿಸತಕ್ಕದ್ದು.

(6) ಕುಲಪತಿಯು, ಹಾಗೆ ನಿಗದಿಗೊಳಿಸಿದ ಕಾಲಮಿತಿಯಯೊಳಗೆ, ಸರ್ಕಾರದ ನಿರ್ದೇಶನಗಳಿಗೆ ಅನುಸಾರವಾಗಿ ಕೈಗೊಂಡ ಕ್ರಮದ ಬಗ್ಗೆ

ಅಥವಾ ಕೈಗೊಳ್ಳಲು ಉದ್ದೇಶಿಸಿದ ಕ್ರಮದ ಬಗ್ಗೆ ರಾಜ್ಯ ಸರ್ಕಾರಕ್ಕೆ ಒಂದು ವರದಿಯನ್ನು ಕಳುಹಿಸತಕ್ಕದ್ದು.

(7) ಸರ್ಕಾರವು, ನಿಗದಿಪಡಿಸಲಾದ ಕಾಲಮಿತಿಯೊಳಗೆ ತನಗೆ ತೃಪ್ತಿಕರವಾಗುವಂತೆ ವಿಶ್ವವಿದ್ಯಾಲಯವು ಕ್ರಮಕೈಗೊಳ್ಳದಿದ್ದಲ್ಲಿ ಮತ್ತು ವಿಶ್ವವಿದ್ಯಾಲಯವು ನೀಡಿದ ಯಾವುದೇ ವಿವರಣೆ ಅಥವಾ ಸಲ್ಲಿಸಿದ ಮನವಿಯನ್ನು ಪರಿಶೀಲಿಸಿದ ತರುವಾಯ, ತಾನು ಸೂಕ್ತವೆಂದು ಭಾವಿಸಬಹುದಾದಂಥ ನಿರ್ದೇಶನಗಳನ್ನು ನೀಡಬಹುದು ಮತ್ತು ವಿಶ್ವವಿದ್ಯಾಲಯವು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

(8) ಹಿಂದೆ ಹೇಳಿದ ಉಪಪ್ರಕರಣಗಳಲ್ಲಿ ಏನೇ ಇದ್ದರೂ, ವಿಶ್ವವಿದ್ಯಾಲಯದ ವ್ಯವಹಾರಗಳನ್ನು ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳ ಈಡೇರಿಕೆಗೆ ಅಥವಾ ಈ ಅಧಿನಿಯಮದ ಅಥವಾ ಶಾಸನಗಳ ಅಥವಾ ವಿನಿಯಮಗಳ ಉಪಬಂಧಗಳಿಗೆ ಅಥವಾ ಬೋಧನೆ, ಪರೀಕ್ಷೆಗಳು, ಸಂಶೋಧನೆ ಅಥವಾ ವಿಸ್ತರಣಾ ಶಿಕ್ಷಣದ ಗುಣಮಟ್ಟಗಳನ್ನು ಕಾಯ್ದುಕೊಂಡು ಬರುವಲ್ಲಿ ಅಪೇಕ್ಷಣೀಯವಾದ ವಿಶೇಷ ಕ್ರಮಗಳಿಗೆ ಅನುಸಾರವಾಗಿ ನಿರ್ವಹಿಸುತ್ತಿಲ್ಲವೆಂದು ಯಾವುದೇ ಸಮಯದಲ್ಲಿ ಕುಲಾಧಿಪತಿಯವರು ಅಭಿಪ್ರಾಯಪಟ್ಟರೆ, ತಾವು ಯಾವ ವಿಷಯದ ಬಗ್ಗೆ ವಿವರಣೆಯನ್ನು ಅಪೇಕ್ಷಿಸುವರೋ, ಆ ವಿಷಯವನ್ನು ವಿಶ್ವವಿದ್ಯಾಲಯದ ಗಮನಕ್ಕೆ ತರತಕ್ಕದ್ದು ಮತ್ತು ಕುಲಾಧಿಪತಿಯವರು ನಿರ್ದಿಷ್ಟಪಡಿಸಬಹುದಾದ ಕಾಲಮಿತಿಯ ಒಳಗೆ ಅಂಥ ವಿವರಣೆಯನ್ನು ಕೊಡುವಂತೆ ವಿಶ್ವವಿದ್ಯಾಲಯವನ್ನು ಕೇಳಬಹುದು. ಕುಲಾಧಿಪತಿಯವರು ನಿರ್ದಿಷ್ಟಪಡಿಸ ಬಹುದಾದ ಅವಧಿಯೊಳಗೆ ಯಾವುದೇ ವಿವರಣೆಯನ್ನು ನೀಡಲು ತಪ್ಪಿದರೆ ಅಥವಾ ನೀಡಿದ ವಿವರಣೆಯು ತೃಪ್ತಿಕರವಾಗಿಲ್ಲವೆಂದು ಕುಲಾಧಿಪತಿಯವರು ಅಭಿಪ್ರಾಯಪಟ್ಟರೆ, ಕುಲಾಧಿಪತಿಯವರು ತಾವು ಅವಶ್ಯಕವೆಂದು ಮತ್ತು ಆ ಪ್ರಕರಣದ ಸನ್ನಿವೇಶಗಳಲ್ಲಿ ಅಪೇಕ್ಷಣೀಯವೆಂದು ಅಭಿಪ್ರಾಯ ಪಡುವಂಥ ಸೂಚನೆಗಳನ್ನು ನೀಡಬಹುದು ಮತ್ತು ಆ ಸೂಚನೆಗಳನ್ನು ಜಾರಿಗೊಳಿಸು ವುದಕ್ಕಾಗಿ ಅವಶ್ಯಕವಾದಂಥ ಅಧಿಕಾರಗಳನ್ನು ಚಲಾಯಿಸಬಹುದು.

(9) ಕುಲಾಧಿಪತಿಯವರು ಅಗತ್ಯವೆಂದು ನಿರ್ದೇಶಿಸಬಹುದಾದಂಥ ವಿಶ್ವವಿದ್ಯಾಲಯದ ಆಡಳಿತಕ್ಕೆ ಸಂಬಂಧಪಡುವ ಮಾಹಿತಿಯನ್ನು ವಿಶ್ವವಿದ್ಯಾಲಯವು ಒದಗಿಸತಕ್ಕದ್ದು.

(10) ರಾಜ್ಯ ಸರ್ಕಾರವು, ರಾಜ್ಯ ಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ ವಿಶ್ವವಿದ್ಯಾಲಯದ ಯಾವುದೇ ಆದೇಶ, ಅಧಿಸೂಚನೆ, ನಿರ್ಣಯ ಅಥವಾ ಯಾವುದೇ ನಡವಳಿಗಳು ಈ ಅಧಿನಿಯಮದ ಅಥವಾ ಶಾಸನಗಳು, ವಿನಿಯಮಗಳು ಅಥವಾ ಪರಿನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ಇಲ್ಲವೆಂದು ಅಥವಾ ಅನ್ಯಥಾ ರಾಜ್ಯ ಸರ್ಕಾರದ ನೀತಿಗಳಿಗೆ ಅಸಂಗತವಾಗಿವೆ ಎಂದು ಅಭಿಪ್ರಾಯಪಟ್ಟಲ್ಲಿ ಅವುಗಳನ್ನು ರದ್ದುಗೊಳಿಸಬಹುದು:

ಪರಂತು, ಅಂಥ ಆದೇಶವನ್ನು ಮಾಡುವ ಮೊದಲು ರಾಜ್ಯ ಸರ್ಕಾರವು, ಅಂಥ ಆದೇಶವನ್ನು ಏಕೆ ಮಾಡಕೂಡದೆಂಬ ಬಗ್ಗೆ ಕಾರಣ ತೋರಿಸುವಂತೆ ವಿಶ್ವವಿದ್ಯಾಲಯವನ್ನು ಕೇಳತಕ್ಕದ್ದು ಮತ್ತು ಸಮಂಜಸ ಕಾಲವಧಿಯೊಳಗೆ ಕಾರಣವನ್ನು ತೋರಿಸಿದರೆ ಅದನ್ನು ಪರಿಶೀಲಿಸತಕ್ಕದ್ದು.

9. ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಕೆಲವು ಕಾಲೇಜುಗಳು ಮತ್ತು ಸಂಸ್ಥೆಗಳ ವರ್ಗಾವಣೆ.- ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ಮತ್ತು ಅಂದಿನಿಂದ ಪ್ರಾರಂಭಿಸಿ,-

(ಎ) ಈ ಅಧಿನಿಯಮವು ಪ್ರಾರಂಭವಾಗುವ ಪೂರ್ವದಲ್ಲಿ ಹಾಗೂ 3ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿಸಿರುವ ವಿಶ್ವವಿದ್ಯಾಲಯದ ಒಡೆತನದಲ್ಲಿರುವ ಮತ್ತು ನಿರ್ವಹಣೆಯಲ್ಲಿರುವ ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯೊಳಗೆ ಇರುವ, ಎಲ್ಲಾ ಕಾಲೇಜುಗಳು, ಲಗತ್ತಾದ ಹಾಸ್ಟೆಲುಗಳು, ಪೀಠೋಪಕರಣಗಳ ವಸ್ತುಗಳೊಡನೆ ಇತರ ಕಟ್ಟಡಗಳು, ಗ್ರಂಥಾಲಯಗಳು, ಪುಸ್ತಕಗಳು, ಪ್ರಯೋಗಾಲಯಗಳು, ಉಗ್ರಾಣಗಳು, ಉಪಕರಣಗಳು, ಸಲಕರಣೆಗಳು, ಪರಿಕರಗಳು ಮತ್ತು ಸಾಧನ ಸಾಮಗ್ರಿ ಹಾಗೂ ಎಲ್ಲಾ ಇತರ ಚರ ಮತ್ತು ಸ್ಥಿರ ಎರಡೂ ಸ್ವತ್ತುಗಳು, ಸಂಶೋಧನೆಯ ಮತ್ತು ಇತರ ಸಂಸ್ಥೆಗಳು, ಎಲ್ಲಾ ಸ್ವತ್ತು ಹಕ್ಕುಗಳು, ಆಸ್ತಿ ಹಕ್ಕುಗಳು, ಹೊಣೆಗಾರಿಕೆಗಳು ಮತ್ತು ಬಾಧ್ಯತೆಗಳೊಂದಿಗೆ ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ವರ್ಗಾವಣೆಗೊಳ್ಳತಕ್ಕದ್ದು ಮತ್ತು ಅದರಲ್ಲಿ ನಿಹಿತಗೊಳ್ಳತಕ್ಕದ್ದು:

ಪರಂತು, ರಾಜ್ಯ ಸರ್ಕಾರವು ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ರಾಯಚೂರಿನಲ್ಲಿ ಕ್ಯಾಂಪಸನ್ನು ಅಭಿವೃದ್ಧಿಪಡಿಸುವುದಕ್ಕಾಗಿ ತಾನು ಸರಿಯೆಂದು ಭಾವಿಸಬಹುದಾದಂಥ ಹೆಚ್ಚುವರಿ ಅಭಿವೃದ್ಧಿ ಅನುದಾನವನ್ನು ನೀಡಬಹುದು.

(ಬಿ) (i) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ, ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ವರ್ಗಾವಣೆಗೊಂಡ ಕಾಲೇಜುಗಳಲ್ಲಿ 3ನೇ ಪ್ರಕರಣದ (1) ನೇ ಉಪಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿಸಿದ ವಿಶ್ವವಿದ್ಯಾಲಯದಲ್ಲಿ ಯಾವುದೇ ಪರೀಕ್ಷೆಗೆ ವ್ಯಾಸಂಗ ಮಾಡುತ್ತಿರುವ ಯಾವೊಬ್ಬ ವಿದ್ಯಾರ್ಥಿಗೆ ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳಲ್ಲಿ ತನ್ನ ವ್ಯಾಸಂಗ ಕ್ರಮವನ್ನು ಪೂರ್ಣಗೊಳಿಸಲು ಅನುಮತಿ ನೀಡತಕ್ಕದ್ದು ಮತ್ತು ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವು ಆ ವಿಶ್ವವಿದ್ಯಾಲಯದ ಪಠ್ಯಕ್ರಮಗಳ ಅನುಸಾರವಾಗಿ ನಿಯಮಿಸಬಹುದಾದಂಥ ಅವಧಿಯವರೆಗೆ ಅಂಥ ವಿದ್ಯಾರ್ಥಿಗಳಿಗಾಗಿ ಪರೀಕ್ಷೆಗಳನ್ನು ನಡೆಸಲು ಏರ್ಪಾಡುಗಳನ್ನು ಮಾಡತಕ್ಕದ್ದು.

(ii) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ, 3ನೇ ಪ್ರಕರಣದ (1)ನೇ ಉಪ-ಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿಸಲಾದ ವಿಶ್ವವಿದ್ಯಾಲಯವು, ಯಾವುದೇ ಪರೀಕ್ಷೆಯನ್ನು ನಡೆಸಿದ್ದು, ಕೋರ್ಸಿನ ಅಗತ್ಯತೆಗಳನ್ನು ಪೂರೈಸಿದ್ದು ಅಂಥ ಪರೀಕ್ಷೆಯ ಫಲಿತಾಂಶಗಳನ್ನು ಘೋಷಿಸಿರದಿದ್ದರೆ, ಆಗ ಧಾರವಾಡದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವು ಫಲಿತಾಂಶವನ್ನು ಘೋಷಿಸಬಹುದು ಮತ್ತು ಪದವಿಯನ್ನು ಪ್ರದಾನ ಮಾಡಬಹುದು.

(ಸಿ) ಈ ಅಧಿನಿಯಮವು ಪ್ರಾರಂಭವಾಗುವ ದಿನಾಂಕಕ್ಕಿಂತ ಮುಂಚೆ ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿಕಾರ ಕ್ಷೇತ್ರ ವ್ಯಾಪ್ತಿಯೊಳಗೆ ಇರುವ 3ನೇ ಪ್ರಕರಣದ (1) ನೇ ಉಪಪ್ರಕರಣದಲ್ಲಿ (ಬಿ) ಖಂಡದಲ್ಲಿ ಉಲ್ಲೇಖಿಸಲಾದ ವಿಶ್ವವಿದ್ಯಾಲಯದ ಯಾವುದೇ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಅಥವಾ ಅದಕ್ಕೆ ಲಗತ್ತಾದ ಯಾವೊಬ್ಬ ಅಧ್ಯಾಪಕ ಮತ್ತು ಇತರ ಸಿಬ್ಬಂದಿಯು ಆ ದಿನಾಂಕದಿಂದಲೇ ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿನ ಸಮುಚಿತ ಕೇಡರ್ ಅಥವಾ ಹುದ್ದೆಗಳ ಶ್ರೇಣಿಗಳಿಗೆ ವರ್ಗಾವಣೆಗೊಳ್ಳತಕ್ಕದ್ದು:

ಪರಂತು, ಹಾಗೆ ವರ್ಗಾವಣೆಗೊಂಡ ಯಾವೊಬ್ಬ ಅಧ್ಯಾಪಕರು ಅಥವಾ ಇತರ ಸಿಬ್ಬಂದಿಯು ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ತೊಂಬತ್ತು ದಿನಗಳೊಳಗಾಗಿ ಅಥವಾ ರಾಜ್ಯ ಸರ್ಕಾರವು ಆದೇಶದ ಮೂಲಕ ನಿರ್ದೇಶಿಸಬಹುದಾದ ಆರು ತಿಂಗಳಿಗೆ ಮೀರದ ಮುಂದಿನ ಅವಧಿಯ ಒಳಗೆ ರಾಜ್ಯ ಸರ್ಕಾರಕ್ಕೆ ಧಾರವಾಡದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ವರ್ಗಾವಣೆಯನ್ನು ಕೋರಿ ಅರ್ಜಿ ಸಲ್ಲಿಸಬಹುದು ಮತ್ತು ಇದರ ಬಗ್ಗೆ ರಾಜ್ಯ ಸರ್ಕಾರದ ನಿರ್ಣಯವು ಅಂತಿಮವಾಗಿರತಕ್ಕದ್ದು;

(ಡಿ) ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ವರ್ಗಾವಣೆ ಬಯಸಿದ ಧಾರವಾಡದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಯಾವೊಬ್ಬ ಅಧ್ಯಾಪಕ ಅಥವಾ ಇತರ ಸಿಬ್ಬಂದಿಯು ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ತೊಂಬತ್ತು ದಿನಗಳೊಳಗೆ ಅಥವಾ ರಾಜ್ಯ ಸರ್ಕಾರವು ಆದೇಶದ ಮೂಲಕ ನಿರ್ದೇಶಿಸಬಹುದಾದ ಆರು ತಿಂಗಳು ಮೀರದ ಮುಂದಿನ ಅವಧಿಯ ಒಳಗೆ ರಾಜ್ಯ ಸರ್ಕಾರಕ್ಕೆ ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ವರ್ಗಾವಣೆಯನ್ನು ಕೋರಿ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಇದರ ಬಗ್ಗೆ ರಾಜ್ಯ ಸರ್ಕಾರದ ನಿರ್ಣಯವು ಅಂತಿಮವಾಗಿರತಕ್ಕದ್ದು;

(ಇ) ರಾಜ್ಯ ಸರ್ಕಾರವು ಧಾರವಾಡದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮತ್ತು ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಯವರೊಡನೆ ಸಮಾಲೋಚಿಸಿ, ಈ ವಿಶ್ವವಿದ್ಯಾಲಯಗಳಲ್ಲಿ ಹೆಚ್ಚುವರಿಯಾಗಿ ಇರುವ ಬೋಧಿಸುವ ಮತ್ತು ಇತರ ಸಿಬ್ಬಂದಿಯು ಯಾರಾದರೂ ಇದ್ದರೆ, ಅದನ್ನು ನಿರ್ಧರಿಸಿ, ಹಾಗೆ ಹೆಚ್ಚುವರಿಯಾಗಿ ಇರುವ ಸಿಬ್ಬಂದಿಯನ್ನು ಸಂದರ್ಭಾನುಸಾರ ಧಾರವಾಡದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಅಥವಾ ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ತಾನು ಯುಕ್ತವೆಂದು ಪರಿಗಣಿಸಬಹುದಾದರಿಂದ ತತ್ವಗಳು ಮತ್ತು ಕಾರ್ಯವಿಧಾನಗಳನ್ನು ಅನುಸರಿಸಿದ ತರುವಾಯ ವರ್ಗಾಯಿಸಬಹುದು.

10. ನಿರ್ದೇಶನಗಳನ್ನು ನೀಡಲು ಅಧಿಕಾರ.– ಕುಲಾಧಿಪತಿಯು, ತಾನಾಗಿಯೇ ಅಥವಾ ರಾಜ್ಯ ಸರ್ಕಾರದ ಶಿಫಾರಸ್ಸಿನ ಮೇಲೆ, ವಿಶ್ವವಿದ್ಯಾಲಯದ ಆಡಳಿತ ಮತ್ತು ವಿದ್ಯಾ ವಿಷಯಕ ಕಾರ್ಯ ನಿರ್ವಹಣೆಯ

ಹಿತದೃಷ್ಟಿಯಿಂದ ಅದರಲ್ಲೂ ಶಾಂತಿ ಮತ್ತು ನೆಮ್ಮದಿಯನ್ನು ಕಾಯ್ದುಕೊಂಡು ಬರುವ ದೃಷ್ಟಿಯಿಂದ ಮತ್ತು ಸ್ವತ್ತು ಹಾಗೂ ಹಣಕಾಸುಗಳನ್ನು ಸಂರಕ್ಷಿಸುವುದಕ್ಕಾಗಿ ಅವಶ್ಯಕ ಅಥವಾ ಯುಕ್ತವಾಗಬಹುದಾದಂಥ ನಿರ್ದೇಶನಗಳನ್ನು ನೀಡಬಹುದು.

ಅಧ್ಯಾಯ – III

ವಿಶ್ವವಿದ್ಯಾಲಯದ ಪ್ರಾಧಿಕಾರಗಳು

11. ವಿಶ್ವವಿದ್ಯಾಲಯದ ಪ್ರಾಧಿಕಾರಗಳು.– ಈ ಮುಂದಿನವು ವಿಶ್ವವಿದ್ಯಾಲಯದ ಪ್ರಾಧಿಕಾರಗಳಾಗಿರತಕ್ಕದ್ದು ಎಂದರೆ:–

(1) ವ್ಯವಸ್ಥಾಪನಾ ಮಂಡಳಿ

(2) ವಿದ್ಯಾವಿಷಯಕ ಪರಿಷತ್ತು

(3) ಸಂಶೋಧನಾ ಪರಿಷತ್ತು

(4) ವಿಸ್ತರಣಾ ಶಿಕ್ಷಣ ಪರಿಷತ್ತು

(5) ಸ್ನಾತಕೋತ್ತರ ವ್ಯಾಸಂಗಗಳು ಮತ್ತು ಅವ್ವುಗಳ ವ್ಯಾಸಂಗ ಮಂಡಳಿಗಳೂ ಸೇರಿದಂತೆ ಫ್ಯಾಕಲ್ಟಿ.

(6) ಶಾಸನಗಳ ಮೂಲಕ ವಿಶ್ವವಿದ್ಯಾಲಯದ ಪ್ರಾಧಿಕಾರಗಳು ಎಂಬುದಾಗಿ ಘೋಷಿಸಿರಬಹುದಾದಂಥ ವಿಶ್ವವಿದ್ಯಾಲಯದ ಇತರ ನಿಕಾಯಗಳು

12. ವ್ಯವಸ್ಥಾಪನಾ ಮಂಡಳಿ ಮತ್ತು ಅದರ ರಚನೆ.– (1) ಕುಲಾಧಿಪತಿಯವರು ಅದಷ್ಟು ಬೇಗನೆ ವ್ಯವಸ್ಥಾಪನಾ ಮಂಡಳಿಯನ್ನು ರಚಿಸತಕ್ಕದ್ದು.

(2) ವ್ಯವಸ್ಥಾಪನಾ ಮಂಡಳಿಯು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು:–

(i) ಕುಲಪತಿ – ಇವರು ಅಧ್ಯಕ್ಷರಾಗಿರತಕ್ಕದ್ದು.

(ii) ಕೃಷಿ ಇಲಾಖೆಯ ಪ್ರಭಾರವುಳ್ಳ ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಅಥವಾ ಕಾರ್ಯದರ್ಶಿಗಳು.

(iii) ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಅಥವಾ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ ಅಥವಾ ಉಪಕಾರ್ಯದರ್ಶಿ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಅವರ ನಾಮನಿರ್ದೇಶಿತರು.

(iv) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಅಥವಾ ಕಾರ್ಯದರ್ಶಿಗಳು ಅರಣ್ಯ, ಪರಿಸರ ಮತ್ತು ಜೀವಿಪರಿಸರಶಾಸ್ತ್ರ ಇಲಾಖೆ ಅಥವಾ ಉಪಕಾರ್ಯದರ್ಶಿ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಅವರ ನಾಮ ನಿರ್ದೇಶಿತರು.

(v) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಅಥವಾ ಕಾರ್ಯದರ್ಶಿಗಳು ತೋಟಗಾರಿಕೆ ಇಲಾಖೆ ಅಥವಾ ಉಪಕಾರ್ಯದರ್ಶಿ ದರ್ಜೆಗಿಂತ ಕಡಿಮೆ ದರ್ಜೆಯ ವರಲ್ಲದ ಅವರ ನಾಮನಿರ್ದೇಶಿತರು.

(vi) ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ವಿಶ್ವವಿದ್ಯಾಲಯದ ಪದವೀಧರರಾಗಿ ಐದು ವರ್ಷಗಳಿಂತ ಕಡಿಮೆ ಅವಧಿ ಆಗಿರದ ಪೈಕಿಯಿಂದ ಸರ್ಕಾರದ ನೌಕರರಲ್ಲದ ಅಥವಾ ವಿಶ್ವವಿದ್ಯಾಲಯದ ನೌಕರರಲ್ಲದ ಒಬ್ಬ ವ್ಯಕ್ತಿ.

(vii) ಸರ್ಕಾರದಿಂದ ನಾಮನಿರ್ದೇಶಿತರಾದ ವಿಶ್ವವಿದ್ಯಾಲಯದ ಅಧಿಕಾರ ಕ್ಷೇತ್ರ ವ್ಯಾಪ್ತಿಯಲ್ಲಿರುವ ಇಬ್ಬರು ಪ್ರಗತಿಪರ ಕೃಷಿಕರು ಇವರ ಪೈಕಿ ಒಬ್ಬರು ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಕ್ಕೆ ಸೇರಿದವರಾಗಿರತಕ್ಕದ್ದು;

(viii) ಕುಲಾಧಿಪತಿಯವರು ನಾಮನಿರ್ದೇಶನ ಮಾಡಿದ ಕೃಷಿ ಮತ್ತು ಸಂಬಂಧಿಸಿದ ವಿಜ್ಞಾನಗಳ ಕ್ಷೇತ್ರದಿಂದ ವಿಶ್ವವಿದ್ಯಾಲಯದ ಅಧಿಕಾರ ಕ್ಷೇತ್ರ ವ್ಯಾಪ್ತಿಯ ಹೊರಗಿನವರಾದ ಪ್ರೊಫೆಸರ್ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಒಬ್ಬ ಪ್ರಖ್ಯಾತ ಶಿಕ್ಷಣ ತಜ್ಞರು;

(ix) ಕುಲಾಧಿಪತಿಯವರು ನಾಮನಿರ್ದೇಶನ ಮಾಡಿದ ಒಬ್ಬ ಕೃಷಿ ಉದ್ಯಮಿ;

(x) ಕುಲಾಧಿಪತಿಯವರು ನಾಮನಿರ್ದೇಶನ ಮಾಡಿದ ಗ್ರಾಮೀಣಾಭಿವೃದ್ಧಿ ಕಾರ್ಯಕರ್ತರಾಗಿ ಹಿನ್ನೆಲೆಯುಳ್ಳ ಒಬ್ಬ ಮಹಿಳಾ ಸಮಾಜಸೇವಕರು;

(xi) ಭಾರತೀಯ ಕೃಷಿ ಸಂಶೋಧನಾ ಪರಿಷತ್ತಿನ ಮಹಾ ನಿರ್ದೇಶಕರು ನಾಮನಿರ್ದೇಶನ ಮಾಡಿದ ಆ ಸಂಸ್ಥೆಯ

ಒಬ್ಬ ಪ್ರತಿನಿಧಿ;

(xii) ವಿಶ್ವವಿದ್ಯಾಲಯದ ಶಿಕ್ಷಣ ನಿರ್ದೇಶಕರು;

(xiii) ಕೃಷಿ ಆಯುಕ್ತರು, ಕರ್ನಾಟಕ;

(xiv) ಕುಲಪತಿಯವರು-ಸುತ್ತು ಸರದಿಯ ಮೇಲೆ ಎರಡು ವರ್ಷಗಳ ಅವಧಿಯವರೆಗೆ ನಾಮನಿರ್ದೇಶನ ಮಾಡಿದ ಒಬ್ಬ ಡೀನ್;

(xv) ಕುಲಸಚಿವರು, ಇವರು ಸದಸ್ಯ ಕಾರ್ಯದರ್ಶಿ ಯಾಗಿರತಕ್ಕದ್ದು;

(3) ಪದನಿಮಿತ್ತ ಸದಸ್ಯರುಗಳನ್ನು ಹೊರತುಪಡಿಸಿ ಮಂಡಳಿಯ ಸದಸ್ಯರ ಪದಾವಧಿಯು ಸಂದರ್ಭಾನುಸಾರ ಸರ್ಕಾರ ಅಥವಾ ಕುಲಾಧಿಪತಿ ಯವರ ಇಚ್ಛೆಗೊಳಪಟ್ಟು ಮೂರು ವರ್ಷಗಳಾಗಿರತಕ್ಕದ್ದು ಮತ್ತು ಅವರು ಗಳು ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರಕ್ಕೂ ಯಾವುದೇ ಪ್ರವರ್ಗದಲ್ಲೂ ಪುನರ್ ನಾಮನಿರ್ದೇಶನಗೊಳ್ಳಲು ಅರ್ಹರಾಗಿರತಕ್ಕದ್ದಲ್ಲ;

(4) ಪದಾವಧಿ ಮುಕ್ತಾಯವಾದ ಸಂದರ್ಭವನ್ನು ಹೊರತುಪಡಿಸಿ ಮರಣ, ರಾಜಿನಾಮೆ, ತೆಗೆದು ಹಾಕುವಿಕೆ ಅಥವಾ ಯಾವುದೇ ಇತರ ಕಾರಣಗಳಿಂದಾಗಿ ಯಾವೊಬ್ಬ ಸದಸ್ಯರ ಸ್ಥಾನವು ಖಾಲಿಯಾದಾಗ ಆ ಖಾಲಿ ಸ್ಥಾನವನ್ನು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಭರ್ತಿ ಮಾಡತಕ್ಕದ್ದು ಮತ್ತು ಅಂತಹ ಖಾಲಿ ಸ್ಥಾನವನ್ನು ತುಂಬುವ ವ್ಯಕ್ತಿಯು ಯಾವ ಖಾಲಿ ಸ್ಥಾನಕ್ಕೆ ಆತನು ನಾಮನಿರ್ದೇಶಿತನಾಗಿದ್ದಾನೆಯೋ ಆ ವ್ಯಾಪ್ತಿಯ ಉಳಿದ ಪದಾವಧಿವರೆಗೆ ಆ ಸ್ಥಾನವನ್ನು ಹೊಂದಿರತಕ್ಕದ್ದು.

(5) ಮಂಡಳಿಯ ಸಭೆಗಾಗಿ ಮಂಡಳಿಯ ಸದಸ್ಯರ ಮೂರನೇ ಒಂದು ಭಾಗದಷ್ಟು ಸದಸ್ಯರು ಸಭೆಯ ಕೋರಂ ಆಗಿರತಕ್ಕದ್ದು:

ಪರಂತು ಕೋರಂ ಇಲ್ಲದಿದುದರಿಂದಾಗಿ ಮಂಡಳಿಯ ಒಂದು ಸಭೆಯನ್ನು ಮುಂದೂಡಿದ್ದರೆ, ಅದೇ ವ್ಯವಹಾರಗಳನ್ನು ನಡೆಸುವುದಕ್ಕಾಗಿ ಕರೆದ ಮುಂದಿನ ಸಭೆಯಲ್ಲಿ ಕೋರಂನ ಅವಶ್ಯಕತೆ ಇರುವುದಿಲ್ಲ.

(6) ವಿಶ್ವವಿದ್ಯಾಲಯದ ಅಧಿಕಾರಿಗಳನ್ನು ಹೊರತುಪಡಿಸಿ ಮಂಡಳಿಯ ಸದಸ್ಯರು ಈ ಅಧಿನಿಯಮದ ಅಡಿಯಲ್ಲಿ ತಾವು ನೆರವೇರಿಸಿದ ಪ್ರಕಾರ್ಯಗಳಿಗೆ, ನಿಯಮಿಸಬಹುದಾದಂಥ ದಿನ ಭತ್ಯೆ, ಪ್ರಯಾಣ

ಭತ್ಯೆಯನ್ನು ಹೊರತುಪಡಿಸಿ ಯಾವುದೇ ಸಂಭಾವನೆಯನ್ನು ಪಡೆಯಲು ಅರ್ಹರಾಗಿರತಕ್ಕದ್ದಲ್ಲ.

(7) ಮಂಡಳಿಯು ತನ್ನ ಸಭೆಯಲ್ಲಿ ಪರಿಶೀಲಿಸುತ್ತಿರುವ ಯಾವುದೇ ವಿಷಯಗಳ ಬಗ್ಗೆ ತಜ್ಞ ಸಲಹೆ ಪಡೆಯಲು ಆ ವಿಷಯಗಳಲ್ಲಿ ಪರಿಣತಿ ಅಥವಾ ವಿಶೇಷ ಜ್ಞಾನವನ್ನು ಉಳ್ಳ ಯಾವೊಬ್ಬ ವ್ಯಕ್ತಿಯನ್ನು ತನ್ನ ಸಭೆಗೆ ಹಾಜರಾಗಲು ಆಹ್ವಾನಿಸಬಹುದು. ಅಂತಹ ವ್ಯಕ್ತಿಯು ಅಂತಹ ಸಭೆಯ ವ್ಯವಹರಣೆಗಳಲ್ಲಿ ಮಾತನಾಡಬಹುದು ಅಥವಾ ಅನ್ಯಥಾ ಭಾಗವಹಿಸಬಹುದು. ಆದರೆ, ಆತನು ಮತದಾನದ ಹಕ್ಕನ್ನು ಹೊಂದಿರುವುದಿಲ್ಲ. ಹಾಗೆ ಆಹ್ವಾನಿತರಾದ ಯಾವೊಬ್ಬ ವ್ಯಕ್ತಿಯು ಸಭೆಗೆ ಹಾಜರಾಗಿದ್ದಕ್ಕಾಗಿ ನಿಯಮಿಸಬಹುದಾದಂತಹ ಭತ್ಯೆ ಪಡೆಯಲು ಅರ್ಹನಾಗಿರತಕ್ಕದ್ದು.

(8) ಸಾಮಾನ್ಯವಾಗಿ ಮಂಡಳಿಯು ಪ್ರತಿ ಮೂರು ತಿಂಗಳಿಗೊಮ್ಮೆ ಕನಿಷ್ಠ ಒಂದು ಬಾರಿಯಾದರೂ ಕುಲಪತಿಯವರು ನಿಗದಿಪಡಿಸುವಂಥ ದಿನಾಂಕ ಮತ್ತು ಸ್ಥಳದಲ್ಲಿ ಸೇರತಕ್ಕದ್ದು. ಆದಾಗ್ಯೂ ಕುಲಪತಿಯವರು ತಾನು ಸೂಕ್ತವೆಂದು ಭಾವಿಸದಾಗಲೆಲ್ಲ, ಮಂಡಳಿಯ ಅರ್ಧಕ್ಕಿಂತ ಕಡಿಮೆಯಲ್ಲದ ಸದಸ್ಯರು ಬರೆದು ಸಹಿ ಮಾಡಿ ಕೋರಿಕೊಂಡಾಗ ಮಂಡಳಿಯ ವಿಶೇಷ ಸಭೆಯನ್ನು ಕರೆಯಬಹುದು.

13. ಮಂಡಳಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು.–(1) ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳಿಗೆ ಒಳಪಟ್ಟು, ಮಂಡಳಿಯು ವಿಶ್ವವಿದ್ಯಾಲಯದ ಮುಖ್ಯ ಕಾರ್ಯಕಾರಿ ನಿಕಾಯ ಆಗಿರತಕ್ಕದ್ದು ಮತ್ತು ವಿಶ್ವವಿದ್ಯಾಲಯದ ಸ್ವತ್ತುಗಳು ಮತ್ತು ಚಟುವಟಿಕೆಗಳನ್ನು ನಿರ್ವಹಿಸತಕ್ಕದ್ದು ಹಾಗೂ ಮೇಲ್ವಿಚಾರಣೆ ನಡೆಸತಕ್ಕದ್ದು ಮತ್ತು ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರದ ಹೊರತು ವಿಶ್ವವಿದ್ಯಾಲಯದ ಎಲ್ಲಾ ಆಡಳಿತಾತ್ಮಕ ವ್ಯವಹಾರಗಳನ್ನು ನಡೆಸಲು ಜವಾಬ್ದಾರಿಯಾಗಿರತಕ್ಕದ್ದು.

(2) (1)ನೇ ಉಪಪ್ರಕರಣದ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಮಂಡಳಿಯು ಈ ಮುಂದಿನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:–

(i) ವಿಶ್ವವಿದ್ಯಾಲಯದ ಹಣಕಾಸು ಅಂದಾಜುಗಳು ಮತ್ತು ಆಯವ್ಯಯವನ್ನು ಪರಿಗಣಿಸುವುದು ಮತ್ತು ಅನುಮೋದಿಸುವುದು;

(ii) ವಿಶ್ವವಿದ್ಯಾಲಯದ ಸ್ವತ್ತನ್ನು ಮತ್ತು ನಿಧಿಗಳನ್ನು ಹೊಂದಿರುವುದು ಮತ್ತು ನಿಯಂತ್ರಿಸುವುದು ಹಾಗೂ ವಿಶ್ವವಿದ್ಯಾಲಯದ ಪರವಾಗಿ ಯಾವುದೇ ಸಾಮಾನ್ಯ ನಿರ್ದೇಶನಗಳನ್ನು ಹೊರಡಿಸುವುದು;

(iii) ಸರ್ಕಾರದ ಪೂರ್ವ ಅನುಮೋದನೆಯೊಡನೆ, ವಿಶ್ವವಿದ್ಯಾಲಯದ ಪರವಾಗಿ ಯಾವುದೇ ಸ್ಥಿರ ಅಥವಾ ಚರ ಸ್ವತ್ತನ್ನು ಸ್ವೀಕರಿಸುವುದು ಅಥವಾ ವರ್ಗಾವಣೆ ಮಾಡುವುದು;

(iv) ವಿಶ್ವವಿದ್ಯಾಲಯದ ವಶದಲ್ಲಿ ಇರುವ ನಿಧಿಗಳನ್ನು ಅವನ್ನು ಇಟ್ಟಿರುವ ಉದ್ದೇಶಕ್ಕಾಗಿ ವಿನಿಯೋಗಿಸುವುದು;

(v) ವಿಶ್ವವಿದ್ಯಾಲಯದ ನಿಧಿಗಳನ್ನು ಹೂಡುವುದಕ್ಕಾಗಿ ಮತ್ತು ಹಿಂಪಡೆಯುವುದಕ್ಕಾಗಿ ವ್ಯವಸ್ಥೆ ಮಾಡುವುದು;

(vi) ಸರ್ಕಾರದ ಪೂರ್ವಾನುಮೋದನೆಯೊಡನೆ ಬಂಡ ವಾಳನ್ನು ಹೂಡುವುದಕ್ಕಾಗಿ ಹಣವನ್ನು ತರುವುದು ಮತ್ತು ಅದರ ವಾಪಾಸಾತಿಗೆ ಸೂಕ್ತ ವ್ಯವಸ್ಥೆಯನ್ನು ಮಾಡುವುದು;

(vii) ವಿಶ್ವವಿದ್ಯಾಲಯದ ಪರವಾಗಿ ದತ್ತಿ, ಮರಣ ಶಾಸನದಾನ ಮತ್ತು ವಂತಿಕೆಗಳನ್ನು ಒಪ್ಪಿಕೊಳ್ಳುವುದು;

(viii) ಅಗತ್ಯವಿದ್ದಲ್ಲೆಲ್ಲಾ ವಿದ್ಯಾವಿಷಯಕ ಪರಿಷತ್ತು, ಸಂಶೋಧನಾ ಪರಿಷತ್ತು ಮತ್ತು ವಿಸ್ತಾರಣಾ ಶಿಕ್ಷಣ ಪರಿಷತ್ತಿನ ಶಿಫಾರಸ್ಸುಗಳನ್ನು ಪರಿಗಣಿಸುವುದು ಮತ್ತು ಅನುಮೋದಿಸುವುದು.

(ix) ವಿಶ್ವವಿದ್ಯಾಲಯದ ಸಾಮಾನ್ಯ ಮೊಹರಿನ ನಮೂನೆ ಮತ್ತು ಉಪಯೋಗದ ಬಗ್ಗೆ ನಿರ್ದೇಶಿಸುವುದು;

(x) ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳಿಗೆ ಅನುಸಾರವಾಗಿ ತಾನು ಅವಶ್ಯವೆಂದು ಭಾವಿಸಬಹು ದಾದಂಥ ಸಮಿತಿಗಳನ್ನು ಮತ್ತು ನಿಕಾಯಗಳನ್ನು ನೇಮಿಸುವುದು ಮತ್ತು ಅವುಗಳ ಪರಿಶೀಲನಾಂಶಗಳನ್ನು ನಿರ್ಧರಿಸುವುದು;

(xi) ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸಿನ ಮೇಲೆ ಹೊಸ ವಿಭಾಗ, ಕೇಂದ್ರ, ಸಂಶೋಧನಾ ಕೇಂದ್ರ ಅಥವಾ ಉಪ ಕೇಂದ್ರವನ್ನು ಸ್ಥಾಪಿಸುವುದು ಅಥವಾ ಅವುಗಳ ಪೈಕಿ ಯಾವುದಾದರೊಂದನ್ನು ರದ್ದುಗೊಳಿಸುವುದು ಅಥವಾ ವಿಭಾಗ, ಸಂಶೋಧನಾ ಕೇಂದ್ರ, ಉಪ ಕೇಂದ್ರ ಅಥವಾ ಕೇಂದ್ರವನ್ನು ಪುನರ್ ರಚಿಸುವ ಬಗ್ಗೆ ಪರಿಗಣಿಸುವುದು ಮತ್ತು ಅನುಮೋದಿಸುವುದು;

(xii) ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸಿನ ಮೇಲೆ ಹೊಸ ಕಾಲೇಜು ಅಥವಾ ಫ್ಯಾಕಲ್ಟಿಯನ್ನು ಸ್ಥಾಪಿಸುವುದು ಅಥವಾ ಎರಡು ಅಥವಾ ಹೆಚ್ಚು ಕಾಲೇಜುಗಳನ್ನು ಅಥವಾ ಫ್ಯಾಕಲ್ಟಿಗಳನ್ನು ಒಂದೇ ಕಾಲೇಜಿನಲ್ಲಿ ಅಥವಾ ಫ್ಯಾಕಲ್ಟಿಯಲ್ಲಿ ಸೇರಿಸುವುದು ಅಥವಾ ಕಾಲೇಜನ್ನು ಅಥವಾ ಫ್ಯಾಕಲ್ಟಿಯನ್ನು ಮುಚ್ಚುವುದು ಅಥವಾ ಪ್ರಸ್ತುತ ಇರುವ ಯಾವುದೇ ಫ್ಯಾಕಲ್ಟಿಯನ್ನು ಪುನರ್ ರಚಿಸುವ ಬಗ್ಗೆ ಪರಿಗಣಿಸುವುದು ಮತ್ತು ಅನುಮೋದಿಸುವುದು;

(xiii) ರಾಜ್ಯ ಸರ್ಕಾರದ ಅನುಮೋದನೆಯೊಡನೆ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಸೃಜಿಸುವುದು.

(xiv) ವಿಶ್ವವಿದ್ಯಾಲಯದ ಅಧಿಕಾರಿಗಳು, ಅಧ್ಯಾಪಕರು ಮತ್ತು ಸಹಾಯಕ ಪ್ರಾಧ್ಯಾಪಕ (ಪ್ರೊಫೆಸರ್) ಮತ್ತು ಹೆಚ್ಚಿನ ಶ್ರೇಣಿಯ ನೌಕರರ ನೇಮಕಾತಿಗಾಗಿ ಶಿಫಾರಸ್ಸುಗಳನ್ನು ನಿಯಮಿಸಬಹುದಾದಂತೆ ಅನುಮೋದಿಸಬಹುದು.

14. ವಿದ್ಯಾವಿಷಯಕ ಪರಿಷತ್ತು.- (1) ವಿದ್ಯಾವಿಷಯಕ ಪರಿಷತ್ತು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ :-

(i) ಕುಲಪತಿಯವರು, ಇದರ ಅಧ್ಯಕ್ಷರಾಗಿರುತ್ತಾರೆ;

(ii) ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣದ ನಿರ್ದೇಶಕರು;

(iii) ಘಟಕ ಕಾಲೇಜುಗಳ ಡೀನುಗಳು;

(iv) ಕುಲಪತಿಯವರು ನಾಮನಿರ್ದೇಶನ ಮಾಡಿದ ವಿಶ್ವವಿದ್ಯಾಲಯದ ಇಬ್ಬರು ವಿಭಾಗ ಮುಖ್ಯಸ್ಥರು ಸುತ್ತು

ಸರದಿಯ ಮೇಲೆ;

(v) ಕುಲಪತಿಯವರು ನಾಮನಿರ್ದೇಶನ ಮಾಡಿದ ಪ್ರತಿಯೊಂದು ಫ್ಯಾಕಲ್ಟಿಯಿಂದ ಪ್ರೊಫೆಸರ್ ದರ್ಜೆಗಿಂತ ಕಡಿಮೆಯಲ್ಲದ ಒಬ್ಬ ಅಧ್ಯಾಪಕರು ಸುತ್ತು ಸರದಿಯ ಮೇಲೆ;

(vi) ಕುಲಪತಿಯವರು ನಾಮನಿರ್ದೇಶನ ಮಾಡಿದ ವಿಶ್ವವಿದ್ಯಾಲಯದ ಹೊರಗಿನಿಂದ ಒಬ್ಬ ಪ್ರಖ್ಯಾತ ಕೃಷಿ ಶಿಕ್ಷಣ ತಜ್ಞರು;

(vii) ಕುಲಸಚಿವರು;

(viii) ಕೃಷಿ ನಿರ್ದೇಶಕರು ಕರ್ನಾಟಕ ಸರ್ಕಾರ;

(ix) ಕುಲಪತಿಯವರು ನಾಮನಿರ್ದೇಶನ ಮಾಡಿದ ಪ್ರೊಫೆಸರ್ ದರ್ಜೆಗಿಂತ ಕಡಿಮೆಯಲ್ಲದ ಸಂಯೋಜಿತ ಕಾಲೇಜಿನ ಒಬ್ಬ ಪ್ರತಿನಿದಿ;

(x) ಶಿಕ್ಷಣ ನಿರ್ದೇಶಕರು, ಇವರು ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು.

(2) ಕೃಷಿ ಮತ್ತು ಸಂಬಂಧಿತ ಕ್ಷೇತ್ರದ ವಿವಿಧ ವಲಯಗಳ ಸಾಕಷ್ಟು ಪ್ರಾತಿನಿಧ್ಯ ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುವಂತೆ ನಿಯಮಿಸಬಹುದಾದಂತಹ ಅವಧಿಗಾಗಿ ಮತ್ತು ಅಂತಹ ರೀತಿಯಲ್ಲಿ ಇಬ್ಬರು ವ್ಯಕ್ತಿಗಳನ್ನು ಮೀರದಂತೆ ಸದಸ್ಯರನ್ನು ವಿದ್ಯಾವಿಷಯಕ ಪರಿಷತ್ತು ಸಹ-ಆಯ್ಕೆ (ಕೋ-ಆಪ್ಟ್) ಮಾಡಿಕೊಳ್ಳತಕ್ಕದ್ದು.

(3) ಪದನಿಮಿತ್ತ ಸದಸ್ಯರ ಹೊರತಾಗಿ ಇತರ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು, ಎರಡು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು ಮತ್ತು ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರಕ್ಕೆ ಮರುನಾಮನಿರ್ದೇಶನಗೊಳ್ಳಲು ಅರ್ಹರಾಗಿರತಕ್ಕದ್ದಲ್ಲ.

(4) ವಿದ್ಯಾವಿಷಯಕ ಪರಿಷತ್ತಿನ ಮೂರನೇ ಒಂದರಷ್ಟು ಸದಸ್ಯರ ಹಾಜರಾತಿ ವಿದ್ಯಾವಿಷಯಕ ಪರಿಷತ್ತಿನ ಸಭೆಗೆ ಕೋರಂ ಆಗಿರತಕ್ಕದ್ದು :

ಪರಂತು ಕೋರಂ ಇಲ್ಲದಿದ್ದುದರಿಂದಾಗಿ ವಿದ್ಯಾವಿಷಯಕ ಪರಿಷತ್ತಿನ ಒಂದು ಸಭೆಯನ್ನು ಮುಂದೂಡಿದ್ದರೆ, ಅದೇ ವ್ಯವಹಾರಗಳನ್ನು ನಡೆಸುವುದಕ್ಕಾಗಿ ಕರೆದ ಮುಂದಿನ ಸಭೆಯಲ್ಲಿ ಕೋರಂನ ಅವಶ್ಯಕತೆ ಇರುವುದಿಲ್ಲ.

(5) ಸಾಮಾನ್ಯವಾಗಿ ವಿದ್ಯಾವಿಷಯಕ ಪರಿಷತ್ತು ಕುಲಪತಿಯವರು ನಿಗದಿಪಡಿಸಬಹುದಾದಂತಹ ದಿನಾಂಕದಂದು, ಕೊನೆ ಪಕ್ಷ ಮೂರು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು. ಆದಾಗ್ಯೂ ಕುಲಪತಿಯವರು ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಯನ್ನು ಕರೆಯಬಹುದು.

15. ವಿದ್ಯಾವಿಷಯಕ ಪರಿಷತ್ತಿನ ಅಧಿಕಾರಗಳು ಮತ್ತು ಪ್ರಕಾರ್ಯಗಳು.– (1) ವಿದ್ಯಾವಿಷಯಕ ಪರಿಷತ್ತು ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳಿಗೆ ಒಳಪಟ್ಟು ಎಲ್ಲಾ ವ್ಯಾಸಂಗ ಕ್ರಮಗಳನ್ನು ಮತ್ತು ಪಠ್ಯ ವಿಷಯಗಳನ್ನು ನಿರ್ಧರಿಸುವುದಕ್ಕಾಗಿ ಈ ನಿಯಮಗಳನ್ನು ರಚಿಸುವ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ವಿಶ್ವವಿದ್ಯಾಲಯದೊಳಗೆ ಬೋಧನೆ ಮತ್ತು ಇತರ ಶೈಕ್ಷಣಿಕ ಕಾರ್ಯಕ್ರಮಗಳ ಮೇಲೆ ಸಾಮಾನ್ಯ ನಿಯಂತ್ರಣವನ್ನು ಹೊಂದಿರತಕ್ಕದ್ದು ಮತ್ತು ಅವುಗಳ ಗುಣಮಟ್ಟವನ್ನು ಕಾಯ್ದುಕೊಂಡು ಬರುವುದಕ್ಕೆ ಹೊಣೆಯಾಗಿರತಕ್ಕದ್ದು.

(2) ವಿದ್ಯಾವಿಷಯಕ ಪರಿಷತ್ತು ತನ್ನ ನಿಯಂತ್ರಣಕ್ಕೊಳಪಡುವ ಎಲ್ಲಾ ವಿದ್ಯಾ ವಿಷಯಗಳಿಗೆ ಸಂಬಂಧಪಟ್ಟಂತೆ ಈ ಅಧಿನಿಯಮಕ್ಕೆ ಮತ್ತು ಪರಿನಿಯಮಗಳಿಗೆ ಸುಸಂಗತವಾದ ವಿನಿಯಮಗಳನ್ನು ರಚಿಸಲು ಮತ್ತು ಅಂತಹ ವಿನಿಯಮಗಳನ್ನು ನಿರಸನಗೊಳಿಸಲು ಅಧಿಕಾರ ಹೊಂದಿರತಕ್ಕದ್ದು.

(3) (1)ನೇ ಉಪ ಪ್ರಕರಣದ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಪ್ರತಿಕೂಲವಾಗದಂತೆ ವಿದ್ಯಾವಿಷಯಕ ಪರಿಷತ್ತು ಈ ಮುಂದಿನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:–

(i) ಗ್ರಂಥಾಲಯಗಳ ನಿಯಂತ್ರಣ ಮತ್ತು ನಿರ್ವಹಣೆಯೂ ಸೇರಿದಂತೆ, ಎಲ್ಲಾ ವಿದ್ಯಾ ವಿಷಯಗಳ ಬಗ್ಗೆ ಮಂಡಳಿಗೆ ಮತ್ತು ಕುಲಪತಿಯವರಿಗೆ ಸಲಹೆ ನೀಡುವುದು;

(ii) ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣದಲ್ಲಿನ ಹುದ್ದೆಗಳೂ ಸೇರಿದಂತೆ ಪ್ರಾಧ್ಯಾಪಕರ (ಪ್ರೊಫೆಸರ್), ಅಸೋಸಿಯೆಟ್ ಪ್ರಾಧ್ಯಾಪಕರ, ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಪ್ರಾರಂಭಿಸುವುದು ಮತ್ತು ಅವುಗಳ ಕರ್ತವ್ಯಗಳಿಗೆ ಸಂಬಂಧಪಟ್ಟಂತೆ ಶಿಫಾರಸ್ಸುಗಳನ್ನು ಮಾಡುವುದು;

(iii) ಫ್ಯಾಕಲ್ಟಿ, ಕಾಲೇಜು, ಬೋಧನ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣ ವಿಭಾಗಗಳನ್ನು ಸ್ಥಾಪಿಸಲು/ ಸಮ್ಮಿಲನ/ ರದ್ದುಗೊಳಿಸಲು ಶಿಫಾರಸ್ಸುಗಳನ್ನು ಮಾಡುವುದು;

(iv) ವಿಶ್ವವಿದ್ಯಾಲಯಕ್ಕೆ, ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು ವಿನಿಯಮಗಳನ್ನು ರಚಿಸುವುದು ಮತ್ತು ಪ್ರವೇಶ ನೀಡಬೇಕಾದ ವಿದ್ಯಾರ್ಥಿಗಳ ಸಂಖ್ಯೆಯನ್ನು ನಿರ್ಧರಿಸುವುದು;

(v) ಪದವಿಗಳು, ಡಿಪ್ಲೋಮಾಗಳು ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಬೇಕಾದ ವ್ಯಾಸಂಗ ಕ್ರಮಗಳಿಗೆ ಸಂಬಂಧಿಸಿದ ವಿನಿಯಮಗಳನ್ನು ರಚಿಸುವುದು;

(vi) ಪರೀಕ್ಷೆಗಳನ್ನು ನಡೆಸುವುದಕ್ಕೆ ಸಂಬಂಧಪಡುವ ವಿನಿಯಮಗಳನ್ನು ರಚಿಸುವುದು ಮತ್ತು ಶಿಕ್ಷಣದ ಗುಣಮಟ್ಟವನ್ನು ಕಾಯ್ದುಕೊಂಡು ಬರುವುದು ಮತ್ತು ಸುಧಾರಿಸುವುದು;

(vii) ಗೌರವ ಪದವಿಗಳನ್ನು ಪ್ರದಾನ ಮಾಡುವುದಕ್ಕೆ ಸಂಬಂಧಿಸಿದಂತೆ ಮಂಡಳಿಗೆ ಶಿಫಾರಸ್ಸುಗಳನ್ನು ಮಾಡುವುದು;

(viii) ವಿಶ್ವವಿದ್ಯಾಲಯದ ಅಧ್ಯಾಪಕರಿಗೆ ಮತ್ತು ಸೇವಾ ಸಿಬ್ಬಂದಿಗೆ ನಿಯಮಿಸತಕ್ಕ ವಿದ್ಯಾರ್ಹತೆಗಳಿಗೆ ಸಂಬಂಧಿ ಸಿದಂತೆ ಶಿಫಾರಸ್ಸು ಮಾಡುವುದು;

(ix) ಶೈಕ್ಷಣಿಕ, ಸಂಶೋಧನಾ ಸಂಸ್ಥೆಗಳು, ನಿಗಮಗಳು ಮತ್ತು ಇತರ ಸಂಸ್ಥೆಗಳೊಡನೆ ವಾಗ್ದಾನ ಪತ್ರ ಮತ್ತು

H-352-67

ಒಪ್ಪಂದ ಪತ್ರಗಳನ್ನು ಪರಿಶೀಲಿಸುವುದು ಹಾಗೂ ಅನುಮೋದಿಸುವುದು;

(x) ಈ ಅಧಿನಿಯಮದ ಮೂಲಕ ಅಥವಾ ಅದರಡಿಯಲ್ಲಿ ಮಂಡಳಿಯು ಅಥವಾ ಕುಲಪತಿಯವರು ತನಗೆ ವಹಿಸಬಹುದಾದಂತಹ ಅಥವಾ ವಿಧಿಸಬಹುದಾದಂತಹ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅಂತಹ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು.

16. **ಸಂಶೋಧನಾ ಪರಿಷತ್ತು.**– ಈ ಮುಂದಿನ ಸದಸ್ಯರನ್ನು ಒಳಗೊಂಡ ಒಂದು ಸಂಶೋಧನಾ ಪರಿಷತ್ತು ಇರತಕ್ಕದ್ದು, ಎಂದರೆ:–

(i) ಕುಲಪತಿಯವರು – ಇವರು ಅಧ್ಯಕ್ಷರಾಗಿರತಕ್ಕದ್ದು;

(ii) ಕೃಷಿ ಇಲಾಖೆ ನಿರ್ದೇಶಕರು;

(iii) ವ್ಯವಸಾಯೋತ್ಪನ್ನಗಳ ಮಾರಾಟ ಇಲಾಖೆ ನಿರ್ದೇಶಕರು;

(iv) ತೋಟಗಾರಿಕೆ ಇಲಾಖೆ ನಿರ್ದೇಶಕರು;

(v) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ನಿರ್ದೇಶಕರು;

(vi) ರೇಷ್ಮೆ ಇಲಾಖೆ ನಿರ್ದೇಶಕರು;

(vii) ಜಲವಿಭಾಜಕ ಪ್ರದೇಶ ನಿರ್ವಹಣೆ ಇಲಾಖೆ ನಿರ್ದೇಶಕರು;

(viii) ಅರಣ್ಯ, ಸಂಶೋಧನೆ ಮತ್ತು ತರಬೇತಿಯ ಮುಖ್ಯ ಸಂರಕ್ಷಣಾಧಿಕಾರಿ;

(ix) ವಿಶ್ವವಿದ್ಯಾಲಯದ ಎಲ್ಲಾ ನಿರ್ದೇಶಕರು;

(x) ಘಟಕ ಕಾಲೇಜುಗಳ ಎಲ್ಲಾ ಡೀನುಗಳು;

(xi) ಸಂಶೋಧನೆಯ ಮತ್ತು ವಿಸ್ತರಣಾ ಶಿಕ್ಷಣದ ಎಲ್ಲಾ ಸಹವರ್ತಿ ನಿರ್ದೇಶಕರುಗಳು;

(xii) ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಳ ಮುಖ್ಯಸ್ಥರು;

(xiii) ಕೃಷಿ ಮತ್ತು ಸಂಬಂಧಿಸಿದ ವಿಭಾಗಗಳಲ್ಲಿ ವಿಶೇಷ ಪರಿಣತಿಯನ್ನು ಹೊಂದಿರುವ ರೈತರ ವಿಶೇಷ ಜ್ಞಾನ ಮತ್ತು ಅನುಭವದ ಪ್ರಯೋಜನವನ್ನು ಪಡೆದು ಕೊಳ್ಳಲು ಕುಲಪತಿಯವರು ನಾಮನಿರ್ದೇಶನ ಮಾಡಿದಂತಹ ಇಬ್ಬರು ಪ್ರಗತಿಪರ ರೈತರು;

(xiv) ಯಾವುದೇ ಸಭೆಯ ಸಂಬಂಧದಲ್ಲಿ ಅಂತಹ ಸಭೆಯ ಕಾರ್ಯಸೂಚಿಯಲ್ಲಿರುವ ವಿಷಯಗಳ ಬಗ್ಗೆ ಪ್ರಸಿದ್ಧ ವಿಜ್ಞಾನಿಗಳ ವಿಶೇಷ ಜ್ಞಾನದ ಪ್ರಯೋಜನವನ್ನು ಪಡೆಯುವುದಕ್ಕಾಗಿ ಕುಲಪತಿಯವರು ನಾಮ ನಿರ್ದೇಶನ ಮಾಡಿದ, ವಿಶ್ವವಿದ್ಯಾಲಯಕ್ಕೆ ಹೊರಗಿನವರಾದ ಒಬ್ಬ ವಿಜ್ಞಾನಿ;

(xv) ಯಾವುದೇ ಸಭೆಯ ಸಂಬಂಧದಲ್ಲಿ ಅಂತಹ ಸಭೆಯ ಕಾರ್ಯಸೂಚಿಯಲ್ಲಿರುವ ವಿಷಯಗಳ ಬಗ್ಗೆ ಕೃಷಿಕೈಗಾರಿಕೋದ್ಯಮಿಯ ವಿಶೇಷ ಜ್ಞಾನದ ಪ್ರಯೋಜ ನವನ್ನು ಪಡೆಯುವುದಕ್ಕಾಗಿ ಕುಲಪತಿಯವರು ನಾಮನಿರ್ದೇಶನ ಮಾಡಿದ, ಒಬ್ಬ ಕೃಷಿ ಕೈಗಾರಿಕೋದ್ಯಮಿ;

(xvi) ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯ ಮುಖ್ಯ ಇಂಜಿನಿಯರ್;

(xvii) ಕುಲಸಚಿವರು;

(xviii) ಸಂಶೋಧನಾ ನಿರ್ದೇಶಕರು – ಇವರು ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು;

ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ ಸಂಶೋಧನಾ ಪರಿಷತ್ತಿನ ಎಲ್ಲಾ ಸದಸ್ಯರ ಪದಾವಧಿಯು ಎರಡು ವರ್ಷಗಳಾಗಿರತಕ್ಕದ್ದು ಮತ್ತು ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರಕ್ಕೆ ಮರುನಾಮ ನಿರ್ದೇಶನಗೊಳ್ಳಲು ಅರ್ಹರಾಗಿರತಕ್ಕದ್ದಲ್ಲ.

17. ಸಂಶೋಧನಾ ಪರಿಷತ್ತಿನ ಪ್ರಕಾರ್ಯಗಳು.– ಸಂಶೋಧನಾ ಪರಿಷತ್ತು ಈ ಮುಂದಿನವುಗಳಿಗೆ ಸಂಬಂಧಿಸಿದುವುಗಳನ್ನು ಪರಿಗಣಿಸತಕ್ಕದ್ದು ಮತ್ತು ಶಿಫಾರಸ್ಸುಗಳನ್ನು ಮಾಡತಕ್ಕದ್ದು.

(i) ಪರಿಣಾಮಕಾರಿಯಾಗಿ ಸಮನ್ವಯವನ್ನು ಸಾಧಿಸುವ ದೃಷ್ಟಿಯಿಂದ ಕೃಷಿ ಮತ್ತು ಇತರ ಸಂಬಂಧಿತ ವಿಜ್ಞಾನಗಳ ಕ್ಷೇತ್ರದಲ್ಲಿ ವಿಶ್ವವಿದ್ಯಾಲಯದ ವಿವಿಧ ಘಟಕಗಳು ಕೈಗೊಂಡ ಅಥವಾ ಕೈಗೊಳ್ಳಬೇಕಾದ ಸಂಶೋಧನಾ ಕಾರ್ಯಕ್ರಮಗಳು ಮತ್ತು ಯೋಜನೆಗಳು;

(ii) ಸಂಶೋಧನಾ ಯೋಜನೆಗಳನ್ನು ಅನುಷ್ಠಾನಗೊಳಿಸುವುದಕ್ಕೆ ಅಗತ್ಯವಾದ ಭೌತಿಕ, ಆರ್ಥಿಕ ಮತ್ತು ಆಡಳಿತಾತ್ಮಕ ಸೌಲಭ್ಯಗಳು;

(iii) ರೈತರ ಮತ್ತು ಇತರ ಹಿತಾಸಕ್ತಿದಾರರ ಅಗತ್ಯತೆಗಳನ್ನು ಪೂರೈಸುವ ಕಡೆಗೆ ಸಂಶೋಧನೆಯ ಅಭಿಮುಖವಾಗಿರುವಂತೆ ಮಾಡುವುದು.

(iv) ಸಂಶೋಧನೆಯಲ್ಲಿ ಸಾರ್ವಜನಿಕ ಮತ್ತು ಖಾಸಗಿ ಪಾಲುದಾರಿಕೆಯನ್ನು ಪೋಷಿಸುವುದು ಮತ್ತು ಸಮನ್ವಯಗೊಳಿಸುವುದು;

(v) ಕುಲಪತಿಯವರು ಅಥವಾ ಮಂಡಲಿ ಅಥವಾ ವಿಶ್ವವಿದ್ಯಾಲಯದ ಯಾವುದೇ ಇತರ ಪ್ರಾಧಿಕಾರವು ತನಗೆ ಪರಿಶೀಲಿಸಲು ಕಳುಹಿಸಬಹುದಾದ ಸಂಶೋಧನಾ ಕಾರ್ಯಕ್ರಮಗಳಿಗೆ ಸಂಬಂಧಪಟ್ಟ ಯಾವುದೇ ಇತರೆ ವಿಷಯ.

18. ವಿಸ್ತರಣಾ ಶಿಕ್ಷಣ ಪರಿಷತ್ತು.– (1) ಈ ಮುಂದಿನ ಸದಸ್ಯರನ್ನೊಳಗೊಂಡ ಒಂದು ವಿಸ್ತರಣಾ ಶಿಕ್ಷಣ ಪರಿಷತ್ತು ಇರತಕ್ಕದ್ದು ಎಂದರೆ.–

(i) ಕುಲಪತಿಯವರು – ಅಧ್ಯಕ್ಷರು

(ii) ಕೃಷಿ ಇಲಾಖೆ ನಿರ್ದೇಶಕರು, ಕರ್ನಾಟಕ ಸರ್ಕಾರ.

(iii) ಕರ್ನಾಟಕ ಸರ್ಕಾರದ ವ್ಯವಸಾಯೋತ್ಪನ್ನಗಳ ಮಾರಾಟ ಇಲಾಖೆ ನಿರ್ದೇಶಕರು.

(iv) ತೋಟಗಾರಿಕೆ ಇಲಾಖೆ ನಿರ್ದೇಶಕರು, ಕರ್ನಾಟಕ ಸರ್ಕಾರ.

(v) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ನಿರ್ದೇಶಕರು, ಕರ್ನಾಟಕ ಸರ್ಕಾರ.

(vi) ರೇಷ್ಮೆ ಇಲಾಖೆಯ ನಿರ್ದೇಶಕರು, ಕರ್ನಾಟಕ ಸರ್ಕಾರ.

(vii) ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಸಮಾಜ ಅರಣ್ಯ ವಿಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ.

(viii) ಜಲಾನಯನ ಅಭಿವೃದ್ಧಿ ಇಲಾಖೆ ನಿರ್ದೇಶಕರು, ಕರ್ನಾಟಕ ಸರ್ಕಾರ.

(ix) ವಿಶ್ವವಿದ್ಯಾಲಯದ ಎಲ್ಲಾ ನಿರ್ದೇಶಕರು ಮತ್ತು ಡೀನ್‌ಗಳು.

(x) ಕುಲಸಚಿವರು.

(xi) ಸಂಶೋಧನೆಯ ಎಲ್ಲಾ ಸಹವರ್ತಿ ನಿರ್ದೇಶಕರು ಮತ್ತು ವಿಸ್ತರಣೆ ಶಿಕ್ಷಣದ ಸಹವರ್ತಿ ನಿರ್ದೇಶಕರುಗಳು.

(xii) ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಳ ಮುಖ್ಯಸ್ಥರು;

(xii) ಕೃಷಿ ಮತ್ತು ಇತರ ಸಂಬಂಧಿತ ಶಾಖೆಗಳಲ್ಲಿ ವಿಶೇಷ ಪರಿಣಿತಿಯುಳ್ಳ, ಪ್ರಗತಿಪರ ರೈತರ ವಿಶೇಷ ಜ್ಞಾನ ಹಾಗೂ ಅನುಭವದ ಪ್ರಯೋಜನವನ್ನು ಪಡೆದುಕೊಳ್ಳಲು ಕುಲಪತಿಯವರು ನಾಮನಿರ್ದೇಶನ ಮಾಡಿದಂಥ ಇಬ್ಬರು ಪ್ರಗತಿಪರ ರೈತರು;

(xiv) ಯಾವುದೇ ಸಭೆಯ ಸಂಬಂಧದಲ್ಲಿ ಅಂಥ ಸಭೆಯ ಕಾರ್ಯಸೂಚಿಯಲ್ಲಿನ ವಿಷಯಗಳ ಬಗ್ಗೆ ಅವರ ವಿಶೇಷ ಜ್ಞಾನದ ಪ್ರಯೋಜನವನ್ನು ಪಡೆದುಕೊಳ್ಳುವುದಕ್ಕಾಗಿ ಕುಲಪತಿಯವರು ನಾಮನಿರ್ದೇಶನ ಮಾಡಿದ ವಿಶ್ವವಿದ್ಯಾಲಯಕ್ಕೆ ಹೊರಗಿನವರಾದ ಒಬ್ಬ ಖ್ಯಾತ ವಿಸ್ತರಣಾ ಶಿಕ್ಷಣ ತಜ್ಞರು;

(xv) ಯಾವುದೇ ಸಭೆಯ ಸಂದರ್ಭದಲ್ಲಿ ಅಂಥ ಸಭೆಯ ಕಾರ್ಯಸೂಚಿಯಲ್ಲಿನ ವಿಷಯಗಳ ಬಗ್ಗೆ ಅವರ ವಿಶೇಷ ಜ್ಞಾನದ ಪ್ರಯೋಜನವನ್ನು ಪಡೆದುಕೊಳ್ಳು

ವುದಕ್ಕಾಗಿ ಕುಲಪತಿಯವರು ನಾಮ ನಿರ್ದೇಶನ ಮಾಡಿದ ಒಬ್ಬ ವ್ಯವಸಾಯೋದ್ಯಮಿಗಳು;

(xvi) ಕುಲಪತಿಯವರ ಕೋರಿಕೆಗನುಸಾರ ಐವರಿಗೆ ಮಿತಿಗೊಳಿಸಿದ ಈ ಮುಂದಿನ ಸಂಸ್ಥೆಗಳ ಒಬ್ಬೊಬ್ಬ ಪ್ರತಿನಿಧಿ,–

(ಎ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ.

(ಬಿ) ಸಹಕಾರ ಇಲಾಖೆ, ಕರ್ನಾಟಕ ಸರ್ಕಾರ.

(ಸಿ) ಕರ್ನಾಟಕ ವ್ಯವಸಾಯೋದ್ಯಮಗಳ ಅಭಿವೃದ್ಧಿ ನಿಗಮ.

(ಡಿ) ಜಲಸಂಪನ್ಮೂಲ ಇಲಾಖೆ, ಕರ್ನಾಟಕ ಸರ್ಕಾರ.

(ಇ) ಭಾರತದ ರಸಗೊಬ್ಬರ ನಿಗಮ.

(ಎಫ್) ರಾಷ್ಟ್ರೀಯ ಬೀಜಗಳ ನಿಗಮ

(ಜಿ) ಯಾವುದೇ ಇತರ ವ್ಯವಸಾಯೋದ್ಯಮ ಅಥವಾ ವ್ಯವಸಾಯ ಸೇವಾಸಂಸ್ಥೆ/ಬೀಜ ಕಂಪೆನಿಗಳು.

(ಎಚ್) ಕರ್ನಾಟಕ ರಾಜ್ಯ ಬೀಜಗಳ ನಿಗಮ.

(ಐ) ಕರ್ನಾಟಕ ರಾಜ್ಯ ಬೀಜ ಪ್ರಮಾಣಪತ್ರ ನೀಡಿಕೆ ಏಜೆನ್ಸಿ.

(ಜೆ) ಸಂಬಂಧಿತ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ ಸರ್ಕಾರೇತರ ಸಂಸ್ಥೆ.

(ಕೆ) ವಿಸ್ತರಣಾ ನಿರ್ದೇಶಕರು – ಸದಸ್ಯ ಕಾರ್ಯದರ್ಶಿ.

(2) ಪದನಿಮಿತ್ತ ಸದಸ್ಯರುಗಳನ್ನು ಹೊರತುಪಡಿಸಿ ವಿಸ್ತರಣಾ ಶಿಕ್ಷಣ ಪರಿಷತ್ತಿನ ಎಲ್ಲಾ ಸದಸ್ಯರುಗಳ ಪದಾವಧಿಯು ಎರಡು ವರ್ಷಗಳಾಗಿ ರತಕ್ಕದ್ದು ಮತ್ತು ಅವರು ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರಕ್ಕೆ ಮರುನಾಮನಿರ್ದೇಶನಗೊಳ್ಳಲು ಅರ್ಹರಾಗಿರತಕ್ಕದ್ದಲ್ಲ.

19. ವಿಸ್ತರಣಾ ಶಿಕ್ಷಣ ಪರಿಷತ್ತಿನ ಪ್ರಕಾರ್ಯಗಳು.– ವಿಸ್ತರಣಾ ಶಿಕ್ಷಣ ಪರಿಷತ್ತು ಈ ಮುಂದಿನವುಗಳನ್ನು ಪರಿಶೀಲಿಸತಕ್ಕದ್ದು ಮತ್ತು ಆ ಬಗ್ಗೆ ಶಿಫಾರಸ್ಸು ಮಾಡತಕ್ಕದ್ದು ಎಂದರೆ:–

(i) ವಿಶ್ವವಿದ್ಯಾಲಯದ ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳು ಮತ್ತು ಯೋಜನೆಗಳು.

(ii) ಕೃಷಿ ಮತ್ತು ಸಂಬಂಧಿತ ಶಾಖೆಗಳ ಸುಧಾರಣೆಗಾಗಿ ಮತ್ತು ಗ್ರಾಮೀಣ ಸಮುದಾಯಗಳ ಅಭಿವೃದ್ಧಿಗಾಗಿ, ವಿಸ್ತರಣಾ ಶಿಕ್ಷಣವನ್ನು ಸಮನ್ವಯಗೊಳಿಸುವುದು.

(iii) ರೈತರ ಶಿಕ್ಷಣ ಮತ್ತು ತರಬೇತಿಯನ್ನು ಮತ್ತು ಸಲಹಾ ಸೇವೆಗಳನ್ನು ಅಭಿವೃದ್ಧಿಗೊಳಿಸುವುದು.

(iv) ಕ್ಷೇತ್ರ ಸಮಸ್ಯೆಗಳನ್ನು ಗುರುತಿಸಿ ಪರಿಹರಿಸುವುದು ಮತ್ತು ಮಾಹಿತಿಯ ಪ್ರಸಾರ ಮಾಡುವುದು.

(v) ವಿಸ್ತರಣಾ ಶಿಕ್ಷಣದ ವಿಧಾನ:

(vi) ಕೃಷಿ ವಿಜ್ಞಾನ ಕೇಂದ್ರದ ಕೆಲಸಕಾರ್ಯಗಳ ಮೌಲ್ಯ ಮಾಪನ ಮಾಡುವುದು;

(vii) ಕುಲಪತಿಯವರು ಮಂಡಳಿ ಅಥವಾ ವಿಶ್ವವಿದ್ಯಾಲಯದ ಯಾವುದೇ ಇತರ ಪ್ರಾಧಿಕಾರವು ತನಗೆ ಪರಿಶೀಲನೆಗಾಗಿ ಕಳುಹಿಸಿಕೊಟ್ಟ ಯಾವುದೇ ಇತರ ವಿಷಯ.

20. ಅಧ್ಯಯನ ಮಂಡಳಿ.– (1) ಪದವಿ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳಿಗೆ ಬೇರೆ ಬೇರೆ ಅಧ್ಯಯನ ಮಂಡಳಿಯಿರತಕ್ಕದ್ದು. ಅಧ್ಯಯನ ಮಂಡಳಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು ಶಾಸನಗಳ ಮೂಲಕ ನಿಯಮಿಸಲಾದಂತೆ ಇರತಕ್ಕದ್ದು.

(2) ಪದವಿ ಕಾರ್ಯಕ್ರಮಗಳಿಗೆ ಅಧ್ಯಯನ ಮಂಡಳಿಯ ರಚನೆಯು ಈ ಮುಂದಿನಂತೆ ಇರತಕ್ಕದ್ದು, ಎಂದರೆ:–

(i) ಶಿಕ್ಷಣ ಇಲಾಖೆ ನಿರ್ದೇಶಕರು – ಅಧ್ಯಕ್ಷರು.

(ii) ಎಲ್ಲಾ ಘಟಕ ಕಾಲೇಜುಗಳ ಡೀನ್‌ಗಳು.

(iii) ಕುಲಪತಿಯವರು ನಾಮನಿರ್ದೇಶಿಸಿದ ಪ್ರೊಫೆಸರ್ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಸಂಯೋಜಿತ ಕಾಲೇಜಿನ ಒಬ್ಬರು ಪ್ರತಿನಿಧಿ.

(iv) ಸಂಶೋಧನಾ ನಿರ್ದೇಶಕರು ಮತ್ತು ವಿಸ್ತರಣಾ ಶಿಕ್ಷಣ ನಿರ್ದೇಶಕರು.

(v) ಕುಲಸಚಿವರು.

(vi) ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಡೀನ್.

(vii) ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಳ ಮುಖ್ಯಸ್ಥರು.

(viii) ಸುತ್ತು ಸರದಿಯ ಆಧಾರದ ಮೇಲೆ ಎರಡು ವರ್ಷಗಳ ಅವಧಿಗೆ, ಅಧ್ಯಕ್ಷರು ನಾಮನಿರ್ದೇಶನದ ಇಲಾಖಾ ಮುಖ್ಯಸ್ಥರಲ್ಲದ ವಿಶ್ವವಿದ್ಯಾಲಯದ ಪ್ರತಿಯೊಂದು ಇಲಾಖೆಯ ಒಬ್ಬ ಪ್ರೊಫೆಸರ್.

(ix) ಸುತ್ತು ಸರದಿಯ ಆಧಾರದ ಮೇಲೆ ಎರಡು ವರ್ಷಗಳ ಅವಧಿಗೆ ಅಧ್ಯಕ್ಷರು ನಾಮನಿರ್ದೇಶನ ಮಾಡಿದ ಸಹವರ್ತಿ ಪ್ರೊಫೆಸರರ ಕೇಡರ್‌ನಲ್ಲಿನ ಐವರು ಅಧ್ಯಾಪಕರು.

(x) ಸುತ್ತು ಸರದಿಯ ಆಧಾರದ ಮೇಲೆ ಎರಡು ವರ್ಷಗಳ ಅವಧಿಗೆ ಅಧ್ಯಕ್ಷರು ನಾಮನಿರ್ದೇಶನ ಮಾಡಿದ ಸಹಾಯಕ ಪ್ರೊಫೆಸರರ ಕೇಡರ್‌ನಲ್ಲಿನ ಐವರು ಅಧ್ಯಾಪಕರು.

(xi) ಎರಡು ವರ್ಷಗಳ ಅವಧಿಗೆ ಅಧ್ಯಕ್ಷರು ನಾಮನಿರ್ದೇಶನ ಮಾಡಿರುವ ವಿಶ್ವವಿದ್ಯಾಲಯಕ್ಕೆ ಹೊರಗಿನವರಾದ ಇಬ್ಬರು ಪ್ರಖ್ಯಾತ ಪ್ರೊಫೆಸರುಗಳು.

(xii) ವಿಶ್ವವಿದ್ಯಾಲಯ ಕುಲಪತಿಯವರು ನಾಮನಿರ್ದೇಶನ ಮಾಡಿದ ಕಾಲೇಜಿನ ಒಬ್ಬರು ಡೀನ್ ಸದಸ್ಯ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸತಕ್ಕದ್ದು.

(3) ಪದವಿ ಕಾರ್ಯಕ್ರಮಗಳಿಗೆ ಅಧ್ಯಯನ ಮಂಡಳಿಗಳ ಪ್ರಕಾರ್ಯಗಳು ಈ ಮುಂದಿನಂತೆ ಇರತಕ್ಕದ್ದು. ಎಂದರೆ:-

(i) ಪದವಿ ಬೋಧನಾ ಕಾರ್ಯಕ್ರಮದ ಅಡಿಯಲ್ಲಿ ಪುನರಾವಲೋಕನ ಮಾಡುವುದು ಮತ್ತು ಅದರ ಸುಧಾರಣೆಗಳಿಗೆ ಸಲಹೆ ನೀಡುವುದು;

(ii) ಅಧ್ಯಯನಗಳ ಮಂಡಳಿಯು ರಚಿಸಿದಂಥ ಕೋರ್ಸುಗಳು, ಪಠ್ಯವಿಷಯಗಳು, ಸಮಿತಿ ಅಥವಾ ಅದೇ ತರಹದ ಸಮಿತಿಯ ಶಿಫಾರಸ್ಸುಗಳನ್ನು ಪರಿಗಣಿಸುವುದು ಮತ್ತು ಅವನ್ನು ಪರ್ಯಾಲೋಚನೆ ಮತ್ತು ಅಂಗೀಕಾರಕ್ಕಾಗಿ ವಿದ್ಯಾವಿಷಯಕ ಪರಿಷತ್ತಿನ ಮುಂದೆ ಮಂಡಿಸುವುದು;

(iii) ವಿದ್ಯಾವಿಷಯಕ ಪರಿಷತ್ತು ಅಥವಾ ಕುಲಪತಿಯವರು ಗೊತ್ತುಪಡಿಸಬಹುದಾಂಥ ಇತರ ಕರ್ತವ್ಯಗಳನ್ನು ನಿರ್ವಹಿಸುವುದು;

(4) ಸ್ನಾತಕೋತ್ತರ ಕಾರ್ಯಕ್ರಮಗಳಿಗಾಗಿ ಅಧ್ಯಯನಗಳ ಮಂಡಳಿಯ ರಚನೆಯು ಈ ಮುಂದಿನಂತೆ ಇರತಕ್ಕದ್ದು, ಎಂದರೆ:-

(i) ಶಿಕ್ಷಣ ಇಲಾಖೆಯ ನಿರ್ದೇಶಕರು – ಅಧ್ಯಕ್ಷರು.

(ii) ಸಂಯೋಜಿತ ಕಾಲೇಜುಗಳ ಡೀನ್‌ಗಳು.

(iii) ಸಂಶೋಧನಾ ನಿರ್ದೇಶಕರು ಮತ್ತು ವಿಸ್ತರಣಾ ಶಿಕ್ಷಣದ ನಿರ್ದೇಶಕರು.

(iv) ಕುಲಸಚಿವರು.

(v) ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಡೀನ್.

(vi) ವಿಶ್ವವಿದ್ಯಾಲಯದ ಎಲ್ಲಾ ವಿಭಾಗದ ಮುಖ್ಯಸ್ಥರು.

(vii) ಸುತ್ತು ಸರದಿಯ ಆಧಾರದ ಮೇಲೆ ಎರಡು ವರ್ಷಗಳ ಅವಧಿಗಾಗಿ ಅಧ್ಯಕ್ಷರು ನಾಮನಿರ್ದೇಶಿಸಿದ ಸಹವರ್ತಿ ಪ್ರೊಫೆಸರ್ ದರ್ಜೆಯ ಹತ್ತು ಜನ ಸ್ನಾತಕೋತ್ತರ ಅಧ್ಯಾಪಕರು.

H-252-68

(viii) ಸುತ್ತು ಸರದಿಯ ಆಧಾರದ ಮೇಲೆ ಎರಡು ವರ್ಷಗಳ ಅವಧಿಗಾಗಿ ಅಧ್ಯಕ್ಷರು ನಾಮನಿರ್ದೇಶಿಸಿದ ಸಹಾಯಕ ಪ್ರೊಫೆಸರ್ ದರ್ಜೆಯ ಹತ್ತು ಜನ ಸ್ನಾತಕೋತ್ತರ ಅಧ್ಯಾಪಕರು.

(ix) ಎರಡು ವರ್ಷಗಳ ಅವಧಿಗಾಗಿ ಅಧ್ಯಕ್ಷರು ನಾಮನಿರ್ದೇಶಿಸಿದ ವಿಶ್ವವಿದ್ಯಾಲಯಕ್ಕೆ ಹೊರಗಿನವರಾದ ಇಬ್ಬರು ಖ್ಯಾತ ಪ್ರೊಫೆಸರ್‌ಗಳು.

(x) ಸ್ನಾತಕೋತ್ತರ ವ್ಯಾಸಂಗದ ಡೀನ್ ಅವರು ಅದಸ್ಯ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸತಕ್ಕದ್ದು.

(5) ಸ್ನಾತಕೋತ್ತರ ವ್ಯಾಸಂಗ ಕ್ರಮದ ಮಂಡಳಿಯು ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:–

(i) ಸ್ನಾತಕೋತ್ತರ ಮತ್ತು ಡಿಪ್ಲೊಮಾ ಬೋಧನ ಕಾರ್ಯಕ್ರಮಗಳ ಪುನರಾವಲೋಕನ ಮಾಡುವುದು ಮತ್ತು ಅವುಗಳ ಸುಧಾರಣೆಗೆ ಸಲಹೆಗಳನ್ನು ನೀಡುವುದು;

(ii) ಅಧ್ಯಯನ ಮಂಡಳಿಯು ರಚಿಸಿದ ವ್ಯಾಸಂಗ ಕ್ರಮಗಳು, ಪಠ್ಯಕ್ರಮಗಳ, ಸಮಿತಿಗಳು ಅಥವಾ ಅಂತಹುದೇ ಸಮಿತಿಗಳ ಶಿಫಾರಸ್ಸುಗಳನ್ನು ಪರಿಗಣಿಸುವುದು ಮತ್ತು ವಿದ್ಯಾವಿಷಯಕ ಪರಿಷತ್ತಿನ ಮುಂದೆ ಅವುಗಳನ್ನು ಪರ್ಯಾಲೋಚನೆ ಮತ್ತು ಅನುಮೋದನೆಗಾಗಿ ಮಂಡಿಸುವುದು;

(iii) ವಿದ್ಯಾವಿಷಯಕ ಪರಿಷತ್ತು ಅಥವಾ ಕುಲಪತಿಯವರು ವಹಿಸಬಹುದಾದಂತಹ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು.

21. ಸಮಿತಿಗಳ ರಚನೆ.– ಪ್ರತಿಯೊಂದು ಪ್ರಾಧಿಕಾರವು ಸಮಿತಿಗಳನ್ನು ನೇಮಿಸಲು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಅಂಥ ಸಮಿತಿಯು ಈ ಅಧಿನಿಯಮ ಅಥವಾ ಶಾಸನಗಳಲ್ಲಿ ಅನ್ಯಥಾ ಉಪಬಂಧಿಸಿದ್ದ ಹೊರತು,

ಪ್ರಾಧಿಕಾರದ ಸದಸ್ಯರುಗಳ ಅಥವಾ ತಾನು ಸರಿಯೆಂದು ಭಾವಿಸಬಹುದಾದ ಇತರ ವ್ಯಕ್ತಿಗಳನ್ನೊಳಗೊಂಡಿರತಕ್ಕದ್ದು.

22. ಪ್ರಾಧಿಕಾರಗಳ ಸದಸ್ಯತ್ವದ ಸಂಬಂಧದಲ್ಲಿ ಉಪಬಂಧ.– (1) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು, ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಥವಾ ನಿಕಾಯದ ಪದನಿಮಿತ್ತ ಸದಸ್ಯನನ್ನು ಹೊರತುಪಡಿಸಿ ಇತರ ಯಾವುದೇ ಸದಸ್ಯರು ಮರಣ, ರಾಜೀನಾಮೆ, ತೆಗೆದುಹಾಕುವಿಕೆ ಅಥವಾ ಅನ್ಯಥಾ ಹಾಜರಾಗಲು ಅಥವಾ ತನ್ನ ಪೂರ್ಣ ಪದಾವಧಿಯನ್ನು ಪೂರ್ತಿಗೊಳಿಸಲು ಸಾಧ್ಯವಾಗದಿದ್ದಲ್ಲಿ, ಹಾಗೆ ಉಂಟಾದ ಖಾಲಿ ಸ್ಥಾನವನ್ನು ಅನುಕೂಲವಾದಷ್ಟು ಬೇಗನೆ, ಸಂದರ್ಭಾನುಸಾರ, ನೇಮಕಾತಿ, ನಾಮ ನಿರ್ದೇಶನ ಅಥವಾ ಸಹ ಸದಸ್ಯನನ್ನಾಗಿ ಸೇರಿಸುವಿಕೆಯಿಂದ ಭರ್ತಿಗೊಳಿಸತಕ್ಕದ್ದು ಮತ್ತು ಹಾಗೆ ನೇಮಕಗೊಂಡ, ನಾಮನಿರ್ದೇಶಿತನಾದ ಅಥವಾ ಸಹ ಸದಸ್ಯನಾಗಿ ಸೇರಿಕೊಂಡ ವ್ಯಕ್ತಿಯು, ಅಂಥ ಖಾಲಿ ಸ್ಥಾನವನ್ನು ತಾನು ಯಾರ ಸ್ಥಾನದಲ್ಲಿ ನೇಮಕಗೊಂಡಿರುವನೋ, ನಾಮ ನಿರ್ದೇಶಿತನಾಗಿರುವನೋ ಅಥವಾ ಸಹ ಸದಸ್ಯನಾಗಿ ಸೇರಿಕೊಂಡಿರುವನೋ ಆ ವ್ಯಕ್ತಿಯು ಸದಸ್ಯನ ಸ್ಥಾನದಲ್ಲಿ ಮುಂದುವರೆಯುತ್ತಿದ್ದ ಉಳಿದ ಭಾಗದ ಅವಧಿಗೆ ಅಂಥ ಖಾಲಿ ಸ್ಥಾನವನ್ನು ಭರ್ತಿಗೊಳಿಸತಕ್ಕದ್ದು.

(2) ಮಂಡಳಿಯು ಯಾವುದೇ ಪ್ರಾಧಿಕಾರದ ಅಥವಾ ವಿಶ್ವವಿದ್ಯಾಲಯದ ನಿಕಾಯದ ಸದಸ್ಯನಾದ ಯಾವುದೇ ವ್ಯಕ್ತಿಯನ್ನು ಅಂಥ ವ್ಯಕ್ತಿಯು ನೈತಿಕ ಪತನವನ್ನೊಳಗೊಂಡ ಯಾವುದೇ ಅಪರಾಧಕ್ಕಾಗಿ ನಿರ್ಣೀತ ಅಪರಾಧಿಯೆಂದು ಅಥವಾ ಸಂಬಂಧಪಟ್ಟ ಸದಸ್ಯನು ನಿರ್ವಹಿಸುತ್ತಿರುವ ಹುದ್ದೆಯ ಘನತೆಗೆ ಆತನ ನಡತೆಯು ಸರಿಹೊಂದುತ್ತಿಲ್ಲವೆಂಬ ಕಾರಣದ ಮೇಲೆ ಕುಲಾಧಿಪತಿಯವರ ಅನುಮೋದನೆ ಪಡೆದು ಸದಸ್ಯತ್ವದಿಂದ ತೆಗೆದುಹಾಕಬಹುದು. ಅಂಥ ವ್ಯಕ್ತಿಯು ಸಕ್ಷಮ ನ್ಯಾಯಾಲಯದಿಂದ ಹಾಗೆ ಅಪರಾಧಿಯಾಗಿ ನಿರ್ಣೀತನಾಗಿದ್ದರೆ ಕುಲಾಧಿಪತಿಯವರ ಪೂರ್ವಾನುಮೋದನೆಯು ಅವಶ್ಯಕವಾಗುವುದಿಲ್ಲ.

ಪರಂತು, ಯಾವುದೇ ವ್ಯಕ್ತಿಗೆ ತನ್ನ ಅಹವಾಲು ಹೇಳಿಕೊಳ್ಳಲು ಸಮಂಜಸ ಅವಕಾಶವನ್ನು ನೀಡಿದ ಹೊರತು ಅವರ ವಿರುದ್ಧ ಅಂಥ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(3) ಬೇರೊಂದು ನಿಕಾಯದ ಸದಸ್ಯನಾದ ಯಾವನೇ ವ್ಯಕ್ತಿಯು ಆ ಸಂಸ್ಥೆಯು ವಿಶ್ವವಿದ್ಯಾಲಯದ ಒಂದು ನಿಕಾಯವಾಗಿರಲಿ ಇಲ್ಲದಿರಲಿ, ಅದರ ಪ್ರತಿನಿಧಿಯಾಗಿ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯನಾಗಿರುವ ಸಂದರ್ಭದಲ್ಲಿ, ಆತನು ತನ್ನ ಸದಸ್ಯತ್ವದ ಅವಧಿ ಮುಕ್ತಾಯವಾಗುವುದಕ್ಕಿಂತ ಮುಂಚೆ, ತನ್ನನ್ನು ನೇಮಿಸಿದ ಅಥವಾ ನಾಮನಿರ್ದೇಶನ ಮಾಡಿದ ನಿಕಾಯದ ಸದಸ್ಯನಾಗಿರುವುದು ಮುಕ್ತಾಯ ವಾಗಿದ್ದರೆ, ವಿಶ್ವವಿದ್ಯಾಲಯದ ಆ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯತ್ವವೂ ನಿಂತುಹೋಗತಕ್ಕದ್ದು.

(4) ಯಾವುದೇ ವ್ಯಕ್ತಿಯು ತಾನು ಹೊಂದಿರುವ ಹುದ್ದೆಯ ಬಲದಿಂದಾಗಿ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಥವಾ ನಿಕಾಯದ ಸದಸ್ಯನಾಗಿರುವಲ್ಲೆಲ್ಲಾ, ತನ್ನ ಸದಸ್ಯತ್ವದ ಅವಧಿಯು ಮುಕ್ತಾಯ ವಾಗುವ ಮುನ್ನವೆ ಆತ ಆ ಹುದ್ದೆಯಲ್ಲಿರುವುದು ನಿಂತುಹೋದರೆ, ಆತ/ ಆಕೆಯು ಹೊಂದಿರುವ ಅಂಥ ಪ್ರಾಧಿಕಾರದ ಅಥವಾ ನಿಕಾಯದ ಸದಸ್ಯತ್ವವೂ ನಿಂತುಹೋಗತಕ್ಕದ್ದು:

ಪರಂತು, ನಾಲ್ಕು ತಿಂಗಳಿಗೆ ಮೀರದ ಅವಧಿಗೆ ಆತನು ರಜೆಯ ಮೇಲೆ ಹೋಗಿದ್ದರೆ ಅದನ್ನು ಆತನು ಹುದ್ದೆಯಲ್ಲಿರುವುದು ನಿಂತುಹೋಗಿದೆ ಯೆಂದು ಭಾವಿಸತಕ್ಕದ್ದಲ್ಲ.

(5) ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ನಿಕಾಯದ ಪದನಿಮಿತ್ತ ಸದಸ್ಯನಲ್ಲದ ಇತರ ಯಾವುದೇ ಸದಸ್ಯನು ಕುಲಪತಿಯವರ ವಿಳಾಸಕ್ಕೆ ಒಂದು ಪತ್ರವನ್ನು ಬರೆದು ರಾಜೀನಾಮೆ ನೀಡಬಹುದು ಮತ್ತು ಅಂಥ ರಾಜೀನಾಮೆಯು ಅದನ್ನು ಸ್ವೀಕರಿಸಿದ ದಿನಾಂಕದಿಂದ ಜಾರಿಗೆಬರತಕ್ಕದ್ದು.

23. ಕ್ರಮಗಳ ಸಿಂಧುತ್ವ ಮತ್ತು ಅದಕ್ಕೆ ರಕ್ಷಣೆ.– (1) ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ನಿಕಾಯದ ಯಾವುದೇ ಕ್ರಮ ಅಥವಾ ವ್ಯವಹರಣೆಯು ಅದರ ಸದಸ್ಯರುಗಳ ಸ್ಥಾನಗಳಲ್ಲಿ ಯಾವುದೇ ಸ್ಥಾನವು ಖಾಲಿ ಇರುವ ಕಾರಣದಿಂದಾಗಿ ಅಥವಾ ಯಾವೊಬ್ಬ ವ್ಯಕ್ತಿಯು ಮೊದಲು ವ್ಯವಹರಣೆಗಳಲ್ಲಿ ಭಾಗವಹಿಸಿದ್ದು ನಂತರ ಹಾಗೆ ಮಾಡಲು ಹಕ್ಕುಳ್ಳವನಲ್ಲವೆಂದು ಕಂಡುಬಂದ ಕಾರಣದಿಂದಾಗಿ ಅಸಿಂಧುವಾಗತಕ್ಕದ್ದಲ್ಲ.

(2) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು, ವಿಶ್ವವಿದ್ಯಾಲಯದಿಂದ ಅಥವಾ ಅದರ ಪ್ರಾಧಿಕಾರಗಳಿಂದ ಸದ್ಭಾವನೆಯಿಂದ ಕೈಗೊಂಡ ಎಲ್ಲಾ ಕ್ರಮಗಳು ಅಥವಾ ಹೊರಡಿಸಿದ ಎಲ್ಲಾ ಆದೇಶಗಳು ಅಂತಿಮವಾಗಿರತಕ್ಕದ್ದು ಮತ್ತು ಈ ಅಧಿನಿಯಮ ಅಥವಾ ಶಾಸನಗಳು ಅಥವಾ ವಿನಿಯಮಗಳನ್ನು ಅನುಸರಿಸಿ ಮಾಡಿದೆ ಅಥವಾ ಮಾಡಲಾಗಿದೆ ಎಂದು ತಾತ್ಪರ್ಯವಾಗಿರುವ ಯಾವುದೇ ಕಾರ್ಯದ ಸಂಬಂಧದಲ್ಲಿ ವಿಶ್ವವಿದ್ಯಾಲಯ ಅಥವಾ ಅದರ ಪ್ರಾಧಿಕಾರದ ವಿರುದ್ಧವಾಗಿ ಯಾವುದೇ ದಾವೆಯನ್ನು ಹೂಡತಕ್ಕದ್ದಲ್ಲ ಅಥವಾ ಹಾನಿ ಪರಿಹಾರವನ್ನು ಕ್ಲೈಮು ಮಾಡತಕ್ಕದ್ದಲ್ಲ.

(3) ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಿರುವ ಯಾವುದೇ ಶಾಸನಗಳ ಪಾಲನೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಬೇಕೆಂದು ಉದ್ದೇಶಿಸಿದ ಯಾವುಧೇ ಕಾರ್ಯದ ಸಂಬಂಧದಲ್ಲಿ ವಿಶ್ವವಿದ್ಯಾಲಯ ಯಾವೊಬ್ಬ ಅಧಿಕಾರಿಯ ಅಥವಾ ಇತರ ನೌಕರನ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

ಅಧ್ಯಾಯ – IV

ವಿಶ್ವವಿದ್ಯಾಲಯದ ಅಧಿಕಾರಿಗಳು

24. ವಿಶ್ವವಿದ್ಯಾಲಯದ ಅಧಿಕಾರಿಗಳು.– ಈ ಮುಂದಿನವರುಗಳು ವಿಶ್ವವಿದ್ಯಾಲಯದ ಅಧಿಕಾರಿಗಳಾಗಿರತಕ್ಕದ್ದು, ಎಂದರೆ:–

(i) ಕುಲಾಧಿಪತಿಯವರು;

(ii) ಸಹ ಕುಲಾಧಿಪತಿಯವರು;

(iii) ಕುಲಪತಿಯವರು;

(iv) ನಿರ್ದೇಶಕರುಗಳು;

(v) ಡೀನ್‌ಗಳು;

(vi) ಕುಲಸಚಿವರು;

(vii) ವಿಶ್ವವಿದ್ಯಾಲಯ ಗ್ರಂಥಪಾಲಕರು;

(viii) ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಡೀನ್;

(ix) ಶಾಸನಗಳ ಮೂಲಕ ವಿಶ್ವವಿದ್ಯಾಲಯದ ಅಧಿಕಾರಿಗಳೆಂದು ಘೋಷಿಸ ಬಹುದಾದಂತಹ ವಿಶ್ವವಿದ್ಯಾಲಯದ ಸೇವೆಯಲ್ಲಿರುವ ಇತರ ಅಧಿಕಾರಿಗಳು; ಮತ್ತು

(x) ಲೆಕ್ಕ ನಿಯಂತ್ರಕರು;

25. ಕುಲಾಧಿಪತಿ.– (1) ಕರ್ನಾಟಕ ರಾಜ್ಯದ ರಾಜ್ಯಪಾಲರು ತಮ್ಮ ಹುದ್ದೆಯ ಬಲದಿಂದಾಗಿ ವಿಶ್ವವಿದ್ಯಾಲಯದ ಕುಲಾಧಿಪತಿಯಾಗಿರತಕ್ಕದ್ದು.

(2) ಕುಲಾಧಿಪತಿಯವರು ವಿಶ್ವವಿದ್ಯಾಲಯದ ಮುಖ್ಯಸ್ಥರಾಗಿರತಕ್ಕದ್ದು ಮತ್ತು ಅವರು ಹಾಜರಿದ್ದಾಗ ವಿಶ್ವವಿದ್ಯಾಲಯದ ಘಟಿಕೋತ್ಸವಗಳ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(3) ಗೌರವ ಪದವಿಯನ್ನು ನೀಡುವ ಪ್ರತಿಯೊಂದು ಪ್ರಸ್ತಾವಕ್ಕೂ ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ನೀಡಿ ಕುಲಾಧಿಪತಿಯವರು ಸ್ಥಿರೀಕರಿಸಿರತಕ್ಕದ್ದು.

(4) ಈ ಅಧಿನಿಯಮ ಮತ್ತು ಶಾಸನಗಳಿಗೆ ಅನುಸಾರವಾಗಿರದ ವಿಶ್ವವಿದ್ಯಾಲಯದ ಯಾವುದೇ ಅಧಿಕಾರಿ ಅಥವಾ ಪ್ರಾಧಿಕಾರದ ಯಾವುದೇ ಆದೇಶ ಅಥವಾ ವ್ಯವಹರಣೆಗಳನ್ನು ಕುಲಾಧಿಪತಿಯವರು ಲಿಖಿತದ ಆದೇಶದ ಮೂಲಕ ಶೂನ್ಯಗೊಳಿಸಬಹುದು :

ಪರಂತು ಅಂತಹ ಆದೇಶವನ್ನು ಹೊರಡಿಸುವ ಮೊದಲು ಅವರು ಅಂತಹ ಆದೇಶವನ್ನು ಏಕೆ ಹೊರಡಿಸಬಾರದು ಎಂದು ಕಾರಣ ಕೇಳುವ ನೋಟೀಸನ್ನು ಸಂಬಂಧಪಟ್ಟ ಅಧಿಕಾರಿ ಅಥವಾ ಪ್ರಾಧಿಕಾರಕ್ಕೆ ನೀಡತಕ್ಕದ್ದು ಮತ್ತು ಅಂತಹ ಆದೇಶದಲ್ಲಿ ಈ ಸಂಬಂಧದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಯಾವುದೇ ಕಾರಣವನ್ನು ನೀಡಿದಲ್ಲಿ ಅದನ್ನು ಅವರು ಪರಿಗಣಿಸತಕ್ಕದ್ದು.

(5) ಕುಲಾಧಿಪತಿಯವರು ಈ ಅಧಿನಿಯಮದ ಅಥವಾ ಶಾಸನಗಳ ಮೂಲಕ ತಮಗೆ ಪ್ರದತ್ತವಾದಂತಹ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂತಹ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

26. ಸಹಕುಲಾಧಿಪತಿಯವರು.- (1) ಕರ್ನಾಟಕ ರಾಜ್ಯದ ಕೃಷಿ ಸಚಿವರು ತಮ್ಮ ಹುದ್ದೆಯ ಬಲದಿಂದಾಗಿ ಸಹಕುಲಾಧಿಪತಿಗಳಾಗಿರತಕ್ಕದ್ದು.

(2) ಸಹಕುಲಾಧಿಪತಿಯವರು ಈ ಅಧಿನಿಯಮದ ಮೂಲಕ ಅದರಡಿಯಲ್ಲಿ ಅಥವಾ ಶಾಸನಗಳ ಅಡಿಯಲ್ಲಿ ತಮಗೆ ಪ್ರದತ್ತವಾಗಬಹುದಾದಂತಹ ಕುಲಾಧಿಪತಿಯವರ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಚಲಾಯಿಸತಕ್ಕದ್ದು. ಕುಲಾಧಿಪತಿಯವರು ಸಹಕುಲಾಧಿಪತಿಯವರಿಗೆ ಲಿಖಿತ ಆದೇಶದ ಮೂಲಕ ಪ್ರತ್ಯಾಯೋಜಿಸಬಹುದಾದಂತಹ ಕುಲಾಧಿಪತಿಯವರ ಅಧಿಕಾರಗಳನ್ನು ಸಹ ಅವರು ಚಲಾಯಿಸತಕ್ಕದ್ದು ಮತ್ತು ಅಂತಹ ಇತರ ಕರ್ತವ್ಯಗಳನ್ನು ಸಹ ನಿರ್ವಹಿಸತಕ್ಕದ್ದು: ಹಾಗೂ ಅಂತಹ ಪ್ರತ್ಯಾಯೋಜನೆಯು ಆದೇಶದಲ್ಲಿ ನಿರ್ದಿಷ್ಟಪಡಿಸಿದಂತಹ ನಿರ್ಬಂಧಗಳಿಗೆ ಒಳಪಟ್ಟಿರತಕ್ಕದ್ದು.

(3) ಅವರು ಕುಲಾಧಿಪತಿಯವರ ಅನುಪಸ್ಥಿತಿಯಲ್ಲಿ ವಿಶ್ವವಿದ್ಯಾಲಯದ ಘಟಿಕೋತ್ಸವದ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

27. ಕುಲಪತಿಯವರು .- (1) ಕುಲಪತಿಯವರು ವಿಶ್ವವಿದ್ಯಾಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು.

(2) ರಾಜ್ಯ ಸರ್ಕಾರವು ಈ ಮುಂದಿನ ವ್ಯಕ್ತಿಗಳನ್ನು ಒಳಗೊಂಡ ಒಂದು ಶೋಧನಾ ಸಮಿತಿಯನ್ನು ರಚಿಸತಕ್ಕದ್ದು, ಎಂದರೆ:-

(i) ಮಹಾ ನಿರ್ದೇಶಕರು, ಭಾರತೀಯ ಕೃಷಿ ಸಂಶೋಧನಾ ಪರಿಷತ್ತು;

(ii) ಅಧ್ಯಕ್ಷರು, ವಿಶ್ವವಿದ್ಯಾಲಯ ಅನುದಾನ ಆಯೋಗ ಅಥವಾ ಅವರ ನಾಮನಿರ್ದೇಶಿತರು;

(iii) ಕುಲಾಧಿಪತಿಯವರ ಒಬ್ಬ ನಾಮನಿರ್ದೇಶಿತರು;

(iv) ರಾಜ್ಯ ಸರ್ಕಾರದ ಒಬ್ಬ ನಾಮನಿರ್ದೇಶಿತರು;

ರಾಜ್ಯ ಸರ್ಕಾರವು ಅಂತಹ ಸಮಿತಿಯ ಸದಸ್ಯರಲ್ಲಿ ಒಬ್ಬರನ್ನು ಸಮಿತಿಯ ಅಧ್ಯಕ್ಷರಾಗಿ ನೇಮಕ ಮಾಡತಕ್ಕದ್ದು. ಕೃಷಿ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿಗಳು ಅಥವಾ ಸರ್ಕಾರದ ಉಪ ಕಾರ್ಯದರ್ಶಿಗಳ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅವರ ನಾಮನಿರ್ದೇಶಿತರು ಶೋಧನಾ ಸಮಿತಿಯ ಸಂಚಾಲಕರಾಗಿರತಕ್ಕದ್ದು.

(3) ಶೋಧನಾ ಸಮಿತಿಯು ಖ್ಯಾತ ಕೃಷಿ ತಜ್ಞರಾದ ಮೂರು ವ್ಯಕ್ತಿಗಳ ಹೆಸರಿನ ಪಟ್ಟಿಯನ್ನು ಅಕಾರದಿಯಾಗಿ ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ರಾಜ್ಯ ಸರ್ಕಾರವು ಕುಲಾಧಿಪತಿಯವರಿಗೆ ಆ ಪಟ್ಟಿಯನ್ನು ಕಳುಹಿಸತಕ್ಕದ್ದು. ಕುಲಾಧಿಪತಿಯವರು ಅರ್ಹತೆ, ಸಮದರ್ಶಿತ್ವ ಮತ್ತು ಸಾಮಾಜಿಕ ನ್ಯಾಯ ಇವುಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ರಾಜ್ಯ ಸರ್ಕಾರದ ಸಹಮತಿ ಯೊಡನೆ ಸದರಿ ಪಟ್ಟಿಯಿಂದ ಒಬ್ಬ ವ್ಯಕ್ತಿಯನ್ನು ಕುಲಪತಿಯಾಗಿ ನೇಮಿಸತಕ್ಕದ್ದು:

ಪರಂತು, ಕುಲಾಧಿಪತಿಯವರು, ಅವಶ್ಯವಿದ್ದಲ್ಲಿ ರಾಜ್ಯ ಸರ್ಕಾರದ ಸಹಮತಿಯೊಡನೆ ಎರಡನೇ ಪಟ್ಟಿಯನ್ನು ಕೇಳಬಹುದು ಮತ್ತು ಶೋಧನಾ ಸಮಿತಿಯು ಎರಡನೇ ಪಟ್ಟಿಯನ್ನು ಕಳುಹಿಸತಕ್ಕದ್ದು ಮತ್ತು ಅದು ಅಂತಿಮ ವಾಗಿರತಕ್ಕದ್ದು.

(4) (3)ನೇ ಉಪ ಪ್ರಕರಣದಲ್ಲಿ ಏನೇ ಇದ್ದರೂ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮೊದಲ ಕುಲಪತಿಯವರನ್ನು ರಾಜ್ಯ ಸಕಾರದ ಶಿಫಾರಸ್ಸಿನ ಮೇಲೆ ಕುಲಾಧಿಪತಿಯವರು ನೇಮಕ ಮಾಡತಕ್ಕದ್ದು.

(5) ಕುಲಪತಿಯವರು ನಾಲ್ಕು ವರ್ಷಗಳವರೆಗೆ ಅಥವಾ ಅವರಿಗೆ ಅರವತ್ತೈದು ವರ್ಷಗಳಾಗುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಆ ಅವಧಿಯವರೆಗೆ ಪದಧಾರಣೆಯನ್ನು ಮಾಡಿರತಕ್ಕದ್ದು. ಅವರು ಪುನರ್ ನೇಮಕಾತಿಗೆ ಅರ್ಹರಾಗಿರತಕ್ಕದ್ದಲ್ಲ.

(6) ಕುಲಪತಿಯವರ ಉಪಲಬ್ಧಿಗಳು ಮತ್ತು ಇತರ ಸೇವಾ ಷರತ್ತುಗಳು ಕುಲಾಧಿಪತಿಯವರು ನಿರ್ಧರಿಸಬಹುದಾದಂತೆ ಇರತಕ್ಕದ್ದು ಮತ್ತು ಅವುಗಳನ್ನು ಅವರು ಕುಲಪತಿಯಾಗಿ ನೇಮಕವಾದ ತರುವಾಯ ಅವರಿಗೆ ಅನಾನುಕೂಲವಾಗುವಂತೆ ಬದಲಾಯಿಸತಕ್ಕದಲ್ಲ.

(7) ಕುಲಪತಿಯವರು ಕುಲಾಧಿಪತಿಯವರಿಗೆ ರಾಜಿನಾಮೆ ಪತ್ರವನ್ನು ಬರೆದು ತನ್ನ ಸಹಿ ಹಾಕಿ ತಾನು ಬಿಡುಗಡೆಗೊಳ್ಳಲು ಇಚ್ಛಿಸುವ ದಿನಾಂಕ ದಿಂದ ಅರವತ್ತು ದಿನಗಳಿಗೆ ಮೊದಲು ಅದನ್ನು ಕುಲಾಧಿಪತಿ ಯವರಿಗೆ ಕಳುಹಿಸುವ ಮೂಲಕ ತನ್ನ ಸ್ಥಾನವನ್ನು ತ್ಯಜಿಸಬಹುದು ಆದರೆ ಕುಲಾಧಿಪತಿ ಯವರು ಅವರನ್ನು ಅದಕ್ಕೂ ಮೊದಲೇ ಬಿಡುಗಡೆ ಗೊಳಿಸಬಹುದು.

(8) ಕುಲಪತಿಯವರ ಹುದ್ದೆಯು ತಾತ್ಕಾಲಿಕವಾಗಿ ಖಾಲಿಯಾದರೆ ಅಥವಾ ಅವರ ರಜೆಯ ಕಾರಣದಿಂದಾಗಿ ಗೈರುಹಾಜರಾದಲ್ಲಿ ಅಥವಾ ಇನ್ನಾವುದೇ ಕಾರಣಗಳಿಗಾಗಿ ಖಾಲಿಯಾದರೆ ಶಿಕ್ಷಣ ನಿರ್ದೇಶಕರು ಮತ್ತು ಶಿಕ್ಷಣ ನಿರ್ದೇಶಕರ ಗೈರು ಹಾಜರಿಯಲ್ಲಿ, ಕುಲಸಚಿವರು ಅಥವಾ ಕೇಂದ್ರ ಕಾರ್ಯಸ್ಥಾನದಲ್ಲಿರುವ ವಿಶ್ವವಿದ್ಯಾಲಯದ ಅತ್ಯಂತ ಹಿರಿಯ ನಿರ್ದೇಶಕರು, ಕುಲಾಧಿಪತಿಯವರ ಅನುಮೋದನೆ ಪಡೆದು ಕುಲಪತಿಯವರ ಕರ್ತವ್ಯ ಗಳನ್ನು ನಿರ್ವಹಿಸಬಹುದು. ಆದರೆ ಅವರ ಪದಾವಧಿಯು ಆರು ತಿಂಗಳುಗಳನ್ನು ಮೀರತಕ್ಕದ್ದಲ್ಲ.

(9) ಕುಲಪತಿಯವರನ್ನು, ಅವರ ದುರ್ನಡತೆಯ ಕಾರಣದ ಮೇಲೆ ಅಥವಾ ಅಸಮರ್ಥತೆಯ ಕಾರಣದ ಮೇಲೆ ಅಥವಾ ಕುಲಪತಿಯವರು ತಮ್ಮ ಪದದಲ್ಲಿ ಮುಂದುವರಿಯುವುದರಿಂದ ವಿಶ್ವವಿದ್ಯಾಲಯದ ಹಿತಾಸಕ್ತಿಗೆ ದಕ್ಕೆ ಉಂಟಾಗುತ್ತದೆಂದು ಕುಲಾಧಿಪತಿಯವರು ಮನಗಂಡರೆ ಆಗ ಕುಲಾಧಿ ಪತಿಯವರು ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಯವರನ್ನು ಅಥವಾ ನ್ಯಾಯಮೂರ್ತಿ ಆಗಿದ್ದವರನ್ನು ನಾಮನಿರ್ದೇಶನ ಮಾಡಿ ಅವರಿಂದ ಯುಕ್ತ ವಿಚಾರಣೆಯನ್ನು ನಡೆಸಿದ ತರುವಾಯ ಮತ್ತು ಆ ವಿಚಾರಣೆಯಲ್ಲಿ ಕುಲಪತಿಯವರಿಗೆ ಮನವಿಯನ್ನು ಸಲ್ಲಿಸಲು ಅವಕಾಶವನ್ನು ನೀಡಿ, ಕುಲಾಧಿಪತಿಯವರು ಹೊರಡಿಸಿದ ಆದೇಶದ ಮೂಲಕವಾಗಿ ಹೊರತು ಅನ್ಯಥಾ ಕುಲಪತಿಯವರನ್ನು ಅವರ ಸ್ಥಾನದಿಂದ ತೆಗೆಯತಕ್ಕದ್ದಲ್ಲ.

28. ವಿಶೇಷಾಧಿಕಾರಿ.– (1) ಸರ್ಕಾರವು ಒಬ್ಬ ಅಧಿಕಾರಿಯನ್ನು ವಿಶೇಷಾಧಿಕಾರಿಯಾಗಿ ನೇಮಕ ಮಾಡತಕ್ಕದ್ದು.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ನೇಮಕಗೊಂಡ ವಿಶೇಷಾಧಿಕಾರಿಯು ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಸ್ಥಾಪನೆಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳತಕ್ಕದು ಮತ್ತು ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ವಿಶ್ವವಿದ್ಯಾಲಯದ ಕುಲಪತಿಗಳ ಅಧಿಕಾರ ಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

(3) ವಿಶೇಷಾಧಿಕಾರಿಯು ಮೊದಲನೇ ಕುಲಪತಿಯವರು ನೇಮಕವಾ ಗುವವರೆಗೆ ಪದಧಾರಣೆಯನ್ನು ಮಾಡಿರುತ್ತಾರೆ.

29. ಕುಲಪತಿಯವರ ಅಧಿಕಾರಗಳು ಮತ್ತು ಕರ್ತವ್ಯಗಳು.- (1) ಕುಲಪತಿಯವರು ವಿಶ್ವವಿದ್ಯಾಲಯದ ಪ್ರಧಾನ ಕಾರ್ಯನಿರ್ವಾಹಕ ಶೈಕ್ಷಣಿಕ ಅಧಿಕಾರಿ ಮತ್ತು ಮಂಡಳಿಯ, ವಿದ್ಯಾವಿಷಯಕ ಪರಿಷತ್ತಿನ ಮತ್ತು ಇತರ ಪ್ರಾಧಿಕಾರಗಳ ಪದನಿಮಿತ್ತ ಅಧ್ಯಕ್ಷರಾಗಿರತಕ್ಕದ್ದು ಹಾಗೂ ಕುಲಾಧಿಪತಿಯವರ ಮತ್ತು ಸಹಕುಲಾಧಿಪತಿಯವರ ಅನುಪಸ್ಥಿತಿಯಲ್ಲಿ ವಿಶ್ವವಿದ್ಯಾಲಯದ ಘಟಿಕೋತ್ಸವದ ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಹಾಗೂ ಪದವಿಗಳನ್ನು ಪಡೆಯಲು ಅರ್ಹರಾದವರಿಗೆ ಪದವಿಗಳನ್ನು ಪ್ರದಾನ ಮಾಡತಕ್ಕದ್ದು.

(2) ಕುಲಪತಿಯವರು ವಿಶ್ವವಿದ್ಯಾಲಯದ ವ್ಯವಹಾರಗಳ ಮೇಲೆ ಸಾಮಾನ್ಯ ನಿಯಂತ್ರಣವನ್ನು ಹೊಂದಿರತಕ್ಕದ್ದು ಮತ್ತು ವಿಶ್ವವಿದ್ಯಾಲಯದ ಶಿಸ್ತನ್ನು ಕಾಪಾಡುವುದಕ್ಕೆ ಜವಾಬ್ದಾರರಾಗಿರತಕ್ಕದ್ದು.

(3) ಕುಲಪತಿಯವರು ಮಂಡಳಿಯ, ವಿದ್ಯಾವಿಷಯಕ ಪರಿಷತ್ತಿನ, ಸಂಶೋಧನಾ ಪರಿಷತ್ತಿನ ವಿಸ್ತರಣಾ ಶಿಕ್ಷಣ ಪರಿಷತ್ತಿನ ಸಭೆಗಳನ್ನು ಏರ್ಪಡಿಸತಕ್ಕದ್ದು.

(4) ಕುಲಪತಿಯವರು ಈ ಅಧಿನಿಯಮದ, ಶಾಸನಗಳ ಮತ್ತು ವಿನಿಯಮಗಳ ಉಪಬಂಧಗಳು ಸರಿಯಾಗಿ ಪಾಲನೆಯಾಗುವಂತೆ ನೋಡಿ ಕೊಳ್ಳತಕ್ಕದ್ದು.

(5) ಕುಲಪತಿಯವರು ವಾರ್ಷಿಕ ಹಣಕಾಸು ಅಂದಾಜುಗಳನ್ನು ಮತ್ತು ವಾರ್ಷಿಕ ಲೆಕ್ಕಪತ್ರಗಳನ್ನು ಮಂಡಳಿಗೆ ಮಂಡಿಸುವುದಕ್ಕೆ ಹೊಣೆಗಾರರಾ ಗಿರತಕ್ಕದ್ದು.

(6) ಕುಲಪತಿಯವರು ಯಾವುದೇ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ತಕ್ಷಣ ಕ್ರಮಕೈಗೊಳ್ಳಬೇಕಾಗಿದೆ ಎಂದು ಅಭಿಪ್ರಾಯಪಟ್ಟಲ್ಲಿ ಅವರು ಅಂಥ ಯಾವುದೇ ಕ್ರಮವನ್ನು ಕೈಗೊಳ್ಳಬಹುದು. ಅಂತಹ ಸಂದರ್ಭದಲ್ಲಿ ಅವರು ತದನಂತರ ತಾನು ಕೈಗೊಂಡ ಕ್ರಮಗಳ ಬಗ್ಗೆ, ಆದಷ್ಟು ಬೇಗನೆ ಒಂದು ವರದಿಯನ್ನು ಸಾಮಾನ್ಯವಾಗಿ ಅಂತಹ ವಿಷಯ ಗಳನ್ನು ನಿರ್ವಹಿಸುವ ಪ್ರಾಧಿಕಾರಕ್ಕೆ ಅಥವಾ ನಿಕಾಯಕ್ಕೆ ಸಲ್ಲಿಸತಕ್ಕದ್ದು. ಕುಲಪತಿಯವರ ಕ್ರಮವನ್ನು ಆ ಪ್ರಾಧಿಕಾರ ಅಥವಾ ನಿಕಾಯವು ಒಪ್ಪಿಕೊಳ್ಳ ದಿದ್ದಲ್ಲಿ ಅಂತಹ ವಿಷಯವನ್ನು ಕುಲಾಧಿಪತಿಯವರಿಗೆ ಕಳುಹಿಸತಕ್ಕದ್ದು ಮತ್ತು ಅದರ ಬಗ್ಗೆ ಅವರ ತೀರ್ಮಾನವು ಅಂತಿಮವಾಗಿರತಕ್ಕದ್ದು.

(7) ಕುಲಪತಿಯವರು ಕೈಗೊಂಡ ಕ್ರಮದಿಂದಾಗಿ ವಿಶ್ವವಿದ್ಯಾಲಯದ ಸೇವೆಯಲ್ಲಿರುವ ಯಾವುದೇ ವ್ಯಕ್ತಿಗೆ ತೊಂದರೆ ಉಂಟಾದಲ್ಲಿ, ಅಂತಹ ವ್ಯಕ್ತಿಯು ಕೈಗೊಂಡ ಕ್ರಮದ ಬಗ್ಗೆ ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಮಂಡಳಿಗೆ ಅಪೀಲನ್ನು ಸಲ್ಲಿಸಬಹುದು.

(8) ಮಂಡಳಿಯ ಮೇಲ್ಮನವಿ ಆದೇಶದಿಂದ ಬಂಧಿತನಾದ ಯಾವೊಬ್ಬ ವ್ಯಕ್ತಿಯು ಅಂತಹ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಕುಲಾಧಿಪತಿಯವರಿಗೆ ಎರಡನೇ ಅಪೀಲನ್ನು ಸಲ್ಲಿಸಬಹುದು ಮತ್ತು ಅಂತಹ ಅಪೀಲಿನ ಮೇಲೆ ಕುಲಾಧಿಪತಿಯವರ ತೀರ್ಮಾನವು ಅಂತಿಮವಾಗಿರತಕ್ಕದ್ದು.

(9) ಕುಲಪತಿಯವರು, (8)ನೇ ಉಪಪ್ರಕರಣದಡಿಯಲ್ಲಿಯ ತೀರ್ಮಾನವನ್ನು ಹೊರತುಪಡಿಸಿ ಮಂಡಳಿಯ ತೀರ್ಮಾನವು ಅಧಿನಿಯ ಮಗಳ ಮತ್ತು ಶಾಸನಗಳ ಉಪಬಂಧಗಳಿಗೆ ಸರ್ಕಾರದ ವಿನಿಯಮಗಳಿಗೆ ಅನುಗುಣವಾಗಿಲ್ಲವೆಂದು, ಹಾಗೂ ವಿಶ್ವವಿದ್ಯಾಲಯದ ಹಿತಾಸಕ್ತಿಗೆ ಪೂರಕ ವಾಗಿ ಇಲ್ಲವೆಂದು ಅಭಿಪ್ರಾಯಪಟ್ಟಲ್ಲಿ ಆತನು ಹದಿನೈದು ದಿನಗಳೊಳಗಾಗಿ ಅದನ್ನು ಕುಲಾಧಿಪತಿಯವರಿಗೆ ಅವರ ತೀರ್ಮಾನವನ್ನು ಕೋರಿ ಕಳುಹಿಸಿ ಕೊಡತಕ್ಕದ್ದು. ಅದರ ಮೇಲೆ ಕುಲಾಧಿಪತಿಯವರು ಕೈಗೊಂಡ ತೀರ್ಮಾನವು ಅಂತಿಮವಾಗಿರತಕ್ಕದ್ದು. ಕುಲಾಧಿಪತಿಯವರು ಹಾಗೆ ಕಳುಹಿಸಿಕೊಟ್ಟ ವಿಷಯವನ್ನು ವಿಲೆಮಾಡುವವರೆಗೆ ಮಂಡಳಿಯ ತೀರ್ಮಾನವನ್ನು ಜಾರಿಗೊಳಿಸತಕ್ಕದ್ದಲ್ಲ.

(10) ಮೇಲಿನ ಉಪ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಕುಲಪತಿಯವರು ವಿಶ್ವವಿದ್ಯಾಲಯದ ಅಧಿಕಾರಿಗಳು, ಅಧ್ಯಾಪಕರು ಹಾಗೂ ಇತರ ನೌಕರರ ನೇಮಕಾತಿಗಳು, ಮುಂಬಡ್ತಿಗಳು ಮತ್ತು ವಜಾ ವಿಷಯಗಳಿಗೆ ಸಂಬಂಧಿಸಿದ ಮಂಡಳಿಯ ತೀರ್ಮಾನಗಳನ್ನು ಜಾರಿಗೊಳಿಸತಕ್ಕದು.

(11) ಕುಲಪತಿಯವರು ವಿಶ್ವವಿದ್ಯಾಲಯದ ವ್ಯವಹರಣೆಗಳ ಸೂಕ್ತ ಆಡಳಿತಕ್ಕೆ ಮತ್ತು ಬೋಧನೆ, ಸಂಶೋಧನೆ ಹಾಗೂ ವಿಸ್ತರಣಾ ಶಿಕ್ಷಣ ಇವುಗಳ ನಿಕಟ ಸಹವರ್ತನೆ ಮತ್ತು ಒಗ್ಗೂಡುವಿಕೆಗೆ ಜವಾಬ್ದಾರನಾಗಿರತಕ್ಕದ್ದು.

(12) ಕುಲಪತಿಯವರು ಈ ಅಧಿನಿಯಮ ಮತ್ತು ಶಾಸನಗಳ ಉಪಬಂಧಗಳ ಅಡಿಯಲ್ಲಿ ತಮಗೆ ಪ್ರದಾನ ಮಾಡಿದ ಅಥವಾ ವಹಿಸಿದಂತಹ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂತಹ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

30. ವಿಶ್ವವಿದ್ಯಾಲಯದ ಇತರ ಅಧಿಕಾರಿಗಳ ಸೇವೆಯ ನಿಬಂಧನೆಗಳು ಮತ್ತು ಷರತ್ತುಗಳು.– 24ನೇ ಪ್ರಕರಣದ (ಂತ) ರಿಂದ (ಂಥ)ನೇ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ವಿಶ್ವವಿದ್ಯಾಲಯದ ಅಧಿಕಾರಿಗಳನ್ನು ನಿಯಮಿಸಬಹುದಾದಂತಹ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಮಂಡಳಿಯ ಅನುಮೋದನೆಯೊಂದಿಗೆ ಕುಲಪತಿಯವರು ನೇಮಿಸತಕ್ಕದ್ದು:

ಪರಂತು, ಕುಲಪತಿಯವರು ಅಂಥ ಅಧಿಕಾರಿಗಳ ನೇಮಕಾತಿಗಳನ್ನು ವಿಶ್ವವಿದ್ಯಾಲಯದ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಮಾಹಿತಿ ಒದಗಿಸಿ ಆರು ತಿಂಗಳ ಅವಧಿಗೆ ತಾತ್ಕಾಲಿಕ ಕ್ರಮವಾಗಿ ಮಾಡಬಹುದು.

31. ನಿರ್ದೇಶಕರುಗಳು, ಡೀನ್‌ಗಳು, ಕುಲಸಚಿವರು, ಲೆಕ್ಕ ನಿಯಂತ್ರಕರು ಇತ್ಯಾದಿ.–

(1) **ಶಿಕ್ಷಣ ನಿರ್ದೇಶಕರು**

(ಎ) ವಿಶ್ವವಿದ್ಯಾಲಯದ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳನ್ನು ಸಮನ್ವಯಗೊಳಿಸಲು ಜವಾಬ್ದಾರರಾಗಿರತಕ್ಕದ್ದು. ವಿಶ್ವವಿದ್ಯಾಲಯದಲ್ಲಿನ ಕಾರ್ಯನೀತಿ ವಿಷಯಗಳ ಮತ್ತು ನಿವಾಸಿ ಬೋಧನೆ ಬಗೆಗಿನ ಪದ್ಧತಿಗೆ ಮತ್ತು ಶೈಕ್ಷಣಿಕ ತಂತ್ರಜ್ಞಾನ ಮತ್ತು ಅಧ್ಯಾಪಕರ ತರಬೇತಿ ಕಾರ್ಯಕ್ರಮಗಳ ಬಗ್ಗೆ ಕಾರ್ಯನಿರ್ವಹಿಸುತ್ತಾರೆ. ಅವರು ಪರೀಕ್ಷೆಯ ಮೇಲ್ವಿಚಾರಣೆಯನ್ನು ಮಾಡತಕ್ಕದ್ದು;

(ಬಿ) ವಿದ್ಯಾವಿಷಯಕ ಪರಿಷತ್ತು, ಪದವಿ ಕಾರ್ಯಕ್ರಮಗಳ ಅಧ್ಯಯನಗಳ ಮಂಡಳಿ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳ ಅಧ್ಯಯನ ಮಂಡಳಿಗಳ ಶಾಶ್ವತವಾದ ದಾಖಲೆಗಳನ್ನು ನಿರ್ವಹಿಸಲು ಮತ್ತು ವಿದ್ಯಾರ್ಥಿಗಳ ಶಿಸ್ತನ್ನು ಕಾಪಾಡಿಕೊಂಡು ಬರಲು ಜವಾಬ್ದಾರರಾಗಿರತಕ್ಕದ್ದು;

(ಸಿ) ವಿದ್ಯಾವಿಷಯಕ ಪರಿಷತ್ತಿನ ಸದಸ್ಯ ಕಾರ್ಯದರ್ಶಿಯಾಗಿ ಮತ್ತು ಪದವಿ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳ ಅಧ್ಯಯನ ಮಂಡಳಿಯ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸತಕ್ಕದ್ದು;

(ಡಿ) ವಿಶ್ವವಿದ್ಯಾಲಯದಲ್ಲಿ ಎಲ್ಲಾ ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳ ಸಮನ್ವಯ ನಡೆಸತಕ್ಕದ್ದು ಮತ್ತು ಪುನರಾವಲೋಕಿಸತಕ್ಕದ್ದು;

(ಇ) ಮಾಹಿತಿ ಕೇಂದ್ರ ಮತ್ತು ವಿಶ್ವವಿದ್ಯಾಲಯದ ಪ್ರಕಟಣೆ ವಿಭಾಗದ ಚಟುವಟಿಕೆಗಳ ಮೇಲ್ವಿಚಾರಣೆ ಮಾಡತಕ್ಕದ್ದು.

(2) ಸಂಶೋಧನಾ ನಿರ್ದೇಶಕರು: 33ನೇ ಪ್ರಕರಣದಲ್ಲಿ ಹೇಳಿದಂತೆ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ಕಾರ್ಯಕ್ರಮಗಳ ನಿರ್ದೇಶನ ಮತ್ತು ಸಮನ್ವಯ ಮತ್ತು ಸಂಶೋಧನೆ ಕೇಂದ್ರಗಳ ದಕ್ಷ ಕೆಲಸಗಳಿಗೆ ಜವಾಬ್ದಾರನಾಗಿರತಕ್ಕದ್ದು.

(3) ವಿಸ್ತರಣಾ ನಿರ್ದೇಶಕರು: 34ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ಕೃಷಿ ವಿಸ್ತರಣಾ ಶಿಕ್ಷಣದ ಕಾರ್ಯನಿರ್ವಹಣೆಗೆ ಜವಾಬ್ದಾರರಾಗಿರತಕ್ಕದ್ದು.

(4) ಡೀನ್: ಕಾಲೇಜಿನ ಮುಖ್ಯಸ್ಥನಾಗಿರತಕ್ಕದ್ದು ಮತ್ತು ಕಾಲೇಜಿನಲ್ಲಿ ಕಲಿಸುವ, ಸಂಶೋಧನೆಯ ಮತ್ತು ವಿಸ್ತರಣಾ ಚಟುವಟಿಕೆಗಳ ಆಡಳಿತಕ್ಕೆ ಮತ್ತು ಅನುಷ್ಠಾನಕ್ಕೆ ಜವಾಬ್ದಾರನಾಗಿರತಕ್ಕದ್ದು.

(5) ಸ್ನಾತಕೋತ್ತರ ಅಧ್ಯಯನಗಳ ಡೀನ್: ಸ್ನಾತಕೋತ್ತರ ಅಧ್ಯಯನಗಳು ಮತ್ತು ಡಿಪ್ಲೊಮೊಗಳನ್ನೊಳಗೊಂಡಂತೆ ಇತರ ಶೈಕ್ಷಣಿಕ ಕಾರ್ಯಕ್ರಮಗಳ ಆಡಳಿತ ಮತ್ತು ಅನುಷ್ಠಾನಕ್ಕೆ ಜವಾಬ್ದಾರರಾಗಿರತಕ್ಕದ್ದು.

(6) ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಡೀನ್:

(ಎ) ವಿದ್ಯಾರ್ಥಿಗಳ ಸಲಹೆ ನೀಡಿಕೆ ಮತ್ತು ಕೌನ್ಸಿಲಿಂಗ್ ಕಾರ್ಯಕ್ರಮವನ್ನು ಯೋಜಿಸುವುದು ಮತ್ತು ನಿರ್ದೇಶನ ಮಾಡುವುದು ಮತ್ತು ವಿಶ್ವವಿದ್ಯಾಲಯದ ಪದವೀಧರರಿಗೆ ಉದ್ಯೋಗ ದೊರಕಿಸಿಕೊಡಲು ಸಹಾಯ ಮಾಡುವುದಕ್ಕಾಗಿ ಭಾವೀ ಉದ್ಯೋಗದಾತರು ಮತ್ತು ಉದ್ಯೋಗ ಏಜೆನ್ಸಿಗಳ

ಸಹಕಾರವನ್ನು ಪಡೆದುಕೊಳ್ಳುವುದು ಮತ್ತು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ಪ್ರೋತ್ಸಾಹಿಸತಕ್ಕದ್ದು;

(ಬಿ) ಕ್ರೀಡೆಗಳು, ಸಾಂಸ್ಕೃತಿಕ ಮತ್ತು ಇತರ ಮನರಂಜನಾ ಚಟುವಟಿಕೆಗಳು, ರಾಷ್ಟ್ರೀಯ ಯುವಸೇನಾದಳ (ಎನ್.ಸಿ.ಸಿ.), ಎನ್‌ಎಸ್‌ಎಸ್, ಮಾತುಗಾರಿಕೆ ಕೌಶಲ್ಯ ಸುಧಾರಣೆ ಮುಂತಾದ ವಿದ್ಯಾರ್ಥಿಗಳ ಪಠ್ಯೇತರ ಚಟುವಟಿಕೆಗಳು ಹಾಗೂ ಅದೇ ತರಹದ ಇತರ ಚಟುವಟಿಕೆಗಳನ್ನು ವಿಶ್ವವಿದ್ಯಾಲಯ ಮಟ್ಟದಲ್ಲಿ ಯೋಜಿಸುವುದು ಮತ್ತು ಏರ್ಪಡಿಸುವುದು.

(ಸಿ) ವಿದ್ಯಾರ್ಥಿ ನಿಲಯ, ಕೆಫ್ಟೆರಿಯಾ ಹಾಗೂ ಮೇಲ್ವಿಚಾರಣೆ ಮತ್ತು ನಿರ್ವಹಣೆಯಲ್ಲಿ ಕ್ರೀಡೆಗಳನ್ನು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವಲ್ಲಿ ಡೀನ್‌ಗಳಿಗೆ ಸಹಾಯ ಮಾಡತಕ್ಕದ್ದು;

(ಡಿ) ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ವೈದ್ಯಕೀಯ ಮತ್ತು ಆರೋಗ್ಯ ಸೇವೆಗಳು ಮತ್ತು ಇತರ ಕ್ಷೇಮಾಭಿವೃದ್ಧಿ ಕ್ರಮಗಳ ಮೇಲ್ವಿಚಾರಣೆ ಮಾಡತಕ್ಕದ್ದು ಮತ್ತು ನಿಯಂತ್ರಿಸತಕ್ಕದ್ದು.

(7) **ಕುಲಸಚಿವರು:**

(ಎ) ಇವರು ವಿಶ್ವವಿದ್ಯಾಲಯದ ಪ್ರೊಫೆಸರ್ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಕೃಷಿ ವಿಜ್ಞಾನಗಳ ಕ್ಷೇತ್ರದಲ್ಲಿ ಒಬ್ಬ ವಿದ್ವಾಂಸರಾಗಿರತಕ್ಕದ್ದು ಅಥವಾ ಸರ್ಕಾರದ ಉಪ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ರಾಜ್ಯ ಸರ್ಕಾರದ ಒಬ್ಬ ಅಧಿಕಾರಿಯಾಗಿರತಕ್ಕದ್ದು;

(ಬಿ) ವ್ಯವಸ್ಥಾಪನ ಮಂಡಳಿಯ ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು ಮತ್ತು ಎಲ್ಲಾ ಪರಿಷತ್ತುಗಳ ಖಾಯಂ ಸದಸ್ಯರಾಗಿರತಕ್ಕದ್ದು.

(ಸಿ) ವಿಶ್ವವಿದ್ಯಾಲಯದ ದಾಖಲೆಗಳು ಮತ್ತು ಸಾಮಾನ್ಯ ಮೊಹರಿನ ಕ್ರಮಬದ್ಧ ಅಭಿರಕ್ಷೆಗೆ ಜವಾಬ್ದಾರರಾಗಿರತಕ್ಕದ್ದು;

(ಡಿ) ವಿಶ್ವವಿದ್ಯಾಲಯಕ್ಕೆ ಪ್ರವೇಶದ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು ಮತ್ತು ಎಲ್ಲಾ ವ್ಯಾಸಂಗ ಕ್ರಮಗಳು, ಪಠ್ಯ ವಿಷಯಗಳು ಮತ್ತು

ಅವಶ್ಯವಾಗಬಹುದಾದ ಇತರ ಮಾಹಿತಿಯ ಶಾಶ್ವತ ದಾಖಲೆಯನ್ನು ಇಟ್ಟುಕೊಂಡುಬರತಕ್ಕದ್ದು.

(ಇ) ನಿಯಮಿಸಲಾದಂತೆ ವಿಶ್ವವಿದ್ಯಾಲಯದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಸಾಮಾನ್ಯ ಆಡಳಿತ ನಡೆಸಲು ಜವಾಬ್ದಾರರಾಗಿರತಕ್ಕದ್ದು.

(8) ವಿಶ್ವವಿದ್ಯಾಲಯದ ಗ್ರಂಥಪಾಲಕ.–

ವಿಶ್ವವಿದ್ಯಾಲಯದ ಗ್ರಂಥಾಲಯ ಮಾಹಿತಿ ಪದ್ಧತಿಯ ನಿರ್ವಹಣೆ ಮತ್ತು ವ್ಯವಸ್ಥಾಪನೆಗೆ ಮತ್ತು ವಿಶ್ವವಿದ್ಯಾಲಯದ ಎಲ್ಲಾ ಘಟಕಗಳ ಗ್ರಂಥಾಲಯ ಚಟುವಟಿಕೆಗಳಿಗೆ ಮಾರ್ಗದರ್ಶನ ನೀಡಲು ಮತ್ತು ಸಮನ್ವಯ ನಡೆಸುವುದಕ್ಕೆ ಇವರು ಜವಾಬ್ದಾರರಾಗಿರತಕ್ಕದ್ದು.

ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, 24ನೇ ಪ್ರಕರಣದ (iv) ರಿಂದ (ix)ನೇ ಖಂಡದಲ್ಲಿ ನಿರ್ದಿಷ್ಟಪಡಿಸಲಾದ ವಿಶ್ವವಿದ್ಯಾಲಯದ ಅಧಿಕಾರಿಗಳು, ಕುಲಪತಿಯವರು ಕಾಲಕಾಲಕ್ಕೆ ನಿಯಮಿಸಬಹುದಾದ ಅಥವಾ ಅವರಿಗೆ ವಹಿಸಿಕೊಡಬಹುದಾದಂತಹ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(9) ಲೆಕ್ಕ ನಿಯಂತ್ರಕರು.–

(ಎ) ಲೆಕ್ಕ ನಿಯಂತ್ರಕರು, ವಿಶ್ವವಿದ್ಯಾಲಯದ ಒಬ್ಬ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು. ಇವರು, ಕುಲಪತಿಯವರು ವ್ಯವಸ್ಥಾಪನಾ ಮಂಡಳಿಗೆ ಶಿಫಾರಸು ಮಾಡಿದ ಲೆಕ್ಕ ಪರಿಶೋಧನೆ, ಲೆಕ್ಕಪತ್ರ ನಿರ್ವಹಣೆ ಮತ್ತು ಹಣಕಾಸು ಆಡಳಿತದಲ್ಲಿ ಅನುಭವವುಳ್ಳ ರಾಜ್ಯ ಲೆಕ್ಕಪತ್ರ ಇಲಾಖೆಯ ಜಂಟಿ ನಿಯಂತ್ರಕರ ಕೇಡರ್‌ನ ಅಧಿಕಾರಿಗಳು ಅಥವಾ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಉಪಮಹಾಲೇಖಪಾಲರ ದರ್ಜೆಯ ಒಬ್ಬ ಅಧಿಕಾರಿ ಇವರ ಹೆಸರುಗಳುಳ್ಳ ಮೂವರಿಗೆ ಕಡಿಮೆಯಿಲ್ಲದ ಒಂದು ಹೆಸರುಪಟ್ಟಿಯಿಂದ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿದ ಮತ್ತು ಕುಲಪತಿಯವರು ನೇಮಿಸಿದ ಅಧಿಕಾರಿಯಾಗಿರತಕ್ಕದ್ದು. ಹೆಸರು ಪಟ್ಟಿಯಲ್ಲಿರುವ ಯಾರನ್ನೂ ವ್ಯವಸ್ಥಾಪನಾ ಮಂಡಳಿಯು ಮೂವತ್ತು ದಿನಗಳೊಳಗೆ ಅನುಮೋದಿಸದಿದ್ದಲ್ಲಿ, ಕುಲಾಧಿಪತಿಯವರು ಕುಲಪತಿಯವರೊಡನೆ ಸಮಾಲೋಚಿಸಿ, ಲೆಕ್ಕ ನಿಯಂತ್ರಕರಾಗಲು ಸೂಕ್ತ ವ್ಯಕ್ತಿಯೆಂದು ತಾವು ಭಾವಿಸುವಂಥ ಇತರ ವ್ಯಕ್ತಿಯನ್ನು ಲೆಕ್ಕ ನಿಯಂತ್ರಕರನ್ನಾಗಿ ನೇಮಿಸಬಹುದು.

(ಬಿ) ಲೆಕ್ಕ ನಿಯಂತ್ರಕರ ನೇಮಕಾತಿಯ ಅವಧಿಯು ನಾಲ್ಕು ವರ್ಷಗಳಾಗಿರತಕ್ಕದ್ದು.

(ಸಿ) ಲೆಕ್ಕ ನಿಯಂತ್ರಕರು, ಹಣಕಾಸು ಸಮಿತಿಯ ನಿಯಂತ್ರಣ ಕ್ಕೊಳಪಟ್ಟು, ಶಾಸನಗಳು ಮತ್ತು ವಿನಿಯಮಗಳಲ್ಲಿ ನಿಯಮಿಸಬಹುದಾದ ಅಥವಾ ಕುಲಪತಿಯವರು ಅಥವಾ ಕುಲಸಚಿವರು ಕಾಲದಿಂದ ಕಾಲಕ್ಕೆ ಅಗತ್ಯ ಪಡಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂತಹ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು. ಅವರು ವಿದ್ಯಾವಿಷಯಕ ಪರಿಷತ್ತಿನ ಪದನಿಮಿತ್ತ ಸದಸ್ಯರಾಗಿರತಕ್ಕದ್ದು ಮತ್ತು ಹಣಕಾಸು ಸಮಿತಿಯ ಪದನಿಮಿತ್ತ ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು.

(10) 24ನೇ ಪ್ರಕರಣದ (ಚ) ರಿಂದ (ಥ)ನೇ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ಅವರ ಸಂಬಳ, ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳನ್ನು ನಿಯಂತ್ರಿಸುವ ಶಾಸನಗಳು ಅಥವಾ ಇತರ ಆದೇಶಗಳಲ್ಲಿ ಉಪಬಂಧ ಕಲ್ಪಿಸುವಂತಹವುಗಳನ್ನುಳಿದು ವಿಶ್ವವಿದ್ಯಾಲಯದಲ್ಲಿನ ಯಾವುದೇ ಕೆಲಸಕ್ಕೆ ಬೇರೆ ಯಾವುದೇ ಪರಿಶ್ರಮಧನವನ್ನು ನೀಡತಕ್ಕದ್ದಲ್ಲ ಮತ್ತು ಅವರು ಸ್ವೀಕರಿಸತಕ್ಕದ್ದಲ್ಲ.

ಅಧ್ಯಾಯ – V

ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣ

32. ಶಿಕ್ಷಣ.– (1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ವಿಶ್ವವಿದ್ಯಾಲಯದಲ್ಲಿ ಶಿಕ್ಷಣವು ನಿಯಮಿಸಲಾದಂತೆ ಕೃಷಿ ಹಾಗೂ ಅದಕ್ಕೆ ಸಂಬಂಧಿಸಿದ ವಿಜ್ಞಾನಗಳ ವಿಷಯದಲ್ಲಿ ಪದವಿಯ, ಸ್ನಾತಕೋತ್ತರ ಪದವಿಯ ಮತ್ತು ಡಾಕ್ಟರಲ್ ಡಿಗ್ರಿ ಕಾರ್ಯಕ್ರಮಗಳು ಮತ್ತು ಅಲ್ಪಾವಧಿ ಡಿಪ್ಲೊಮಾ/ ಸರ್ಟಿಫಿಕೇಟ್ ಕೋರ್ಸುಗಳನ್ನು ಒಳಗೊಂಡಿರತಕ್ಕದ್ದು.

(2) ಈ ಶೈಕ್ಷಣಿಕ ಕಾರ್ಯಕ್ರಮಗಳು ರಾಜ್ಯ ಮತ್ತು ರಾಷ್ಟ್ರೀಯ ಕಾರ್ಯನೀತಿಗಳಿಗೆ ಅನುಗುಣವಾಗಿರತಕ್ಕದ್ದು.

(3) ವಿಶ್ವವಿದ್ಯಾಲಯವು ಇ–ಕಲಿಕೆ, ವಿತರಿತ/ದೂರ ಶಿಕ್ಷಣ, ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಆಧಾರಿತ ಜ್ಞಾನವನ್ನು ಹಂಚಿಕೊಳ್ಳುವುದು ಈ ಸಾಧನಗಳನ್ನು ಬಳಸಿಕೊಳ್ಳತಕ್ಕದ್ದು.

(4) ಸಕ್ಷಮ ಮತ್ತು ಕುಶಲ ಪದವೀಧರರನ್ನು ಮತ್ತು ಸ್ನಾತಕೋತ್ತರ ಪದವೀಧರರನ್ನು ತಯಾರಿಸುವ ಗುರಿಯನ್ನು ಕೃಷಿ ಶಿಕ್ಷಣ ಕಾರ್ಯಕ್ರಮಗಳು ಹೊಂದಿರತಕ್ಕದ್ದು.

33. ಸಂಶೋಧನೆ.- (1) ಈ ಅಧಿನಿಯಮ ಮತ್ತು ಶಾಸನಗಳ ಉಪಬಂಧಗಳಿಗೊಳಪಟ್ಟು, ವಿಶ್ವವಿದ್ಯಾಲಯವು ಕೃಷಿ ಮತ್ತು ಸಂಬಂಧಿತ ವಿಜ್ಞಾನಗಳಲ್ಲಿ ಕಾರ್ಯತಂತ್ರದ, ಮೂಲಭೂತ ಮತ್ತು ಆನ್ವಯಿಕ ಸಂಶೋಧನೆಗಳನ್ನು ಮಾಡತಕ್ಕದ್ದು.

(2) ವಿಶ್ವವಿದ್ಯಾಲಯವು ತನ್ನ ಸಂಶೋಧನಾ ಸಂಸ್ಥೆಯ ಮೂಲಕ ತನ್ನ ಅಧಿಕಾರ ಕ್ಷೇತ್ರ ವ್ಯಾಪ್ತಿಯಲ್ಲಿ ನಡೆಯುವ ಕೃಷಿ, ಪಶುಸಂಗೋಪನೆ ಮತ್ತಿತರ ಸಂಬಂಧಪಟ್ಟ ಶಾಖೆಗಳಲ್ಲಿನ ಸಂಶೋಧನಾ ಚಟುವಟಿಕೆಗಳ ಮೇಲೆ ನಿಯಂತ್ರಣವನ್ನು ಹೊಂದಿರುವ ಪ್ರಧಾನ ಏಜೆನ್ಸಿಯಾಗಿರತಕ್ಕದ್ದು.

(3) ವಿಶ್ವವಿದ್ಯಾಲಯವು ತನ್ನ ಅಧಿಕಾರ ಕ್ಷೇತ್ರ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ಸಂಶೋಧನೆಯೂ ಸೇರಿದಂತೆ ಸಂಶೋಧನೆಗಳನ್ನು ನಡೆಸುವುದಕ್ಕೆ ಬೇರೆ ಬೇರೆ ಕೃಷಿ-ವಾತಾವರಣ ವಲಯಗಳಲ್ಲಿ ಸರ್ಕಾರದ ಸಹಮತಿಯೊಂದಿಗೆ ಪ್ರಾದೇಶಿಕ ವಲಯ ಸಂಶೋಧನಾ ಕೇಂದ್ರಗಳು ಮತ್ತು ಉಪಕೇಂದ್ರಗಳನ್ನು ಸ್ಥಾಪಿಸಬಹುದು.

34. ವಿಸ್ತರಣಾ ಶಿಕ್ಷಣ.- (1) ತಾಂತ್ರಿಕ ಮೌಲ್ಯಮಾಪನ ಮತ್ತು ಪರಿಷ್ಕರಣೆಯಾಗುವಂತೆ ನೋಡಿಕೊಳ್ಳಲು ಮತ್ತು ಸಂಶೋಧನೆಗಳಲ್ಲಿ ಕಂಡು ಬಂದ ವಿಚಾರಗಳನ್ನು ಆಧರಿಸಿದ ತಂತ್ರಜ್ಞಾನವನ್ನು ತ್ವರಿತ ಕೃಷಿ ಬೆಳವಣಿಗೆಗಾಗಿ ರೈತರು ಮತ್ತು ಇತರರು ಅಳವಡಿಸಿಕೊಳ್ಳುವುದಕ್ಕೆ ಅವಕಾಶಕಲ್ಪಿಸಲು ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳನ್ನು ವಿಶ್ವ ವಿದ್ಯಾಲಯದಲ್ಲಿ ಈ ಅಧಿನಿಯಮ ಮತ್ತು ಶಾಸನಗಳಿಗೊಳಪಟ್ಟು ಸ್ಥಾಪಿಸತಕ್ಕದ್ದು. ಈ ವಿಭಾಗವು ವಿವಿಧ ಹಿತಾಸಕ್ತಿದಾರರ ಅನುಕೂಲಕ್ಕಾಗಿ ಪ್ರಾತ್ಯಕ್ಷಿಕೆಗಳನ್ನು ಮತ್ತು ತರಬೇತಿಯನ್ನು ನಡೆಸತಕ್ಕದ್ದು. ಈ ವಿಸ್ತರಣಾ ಕಾರ್ಯವನ್ನು ವಿಶ್ವವಿದ್ಯಾಲಯದ ವಿವಿಧ ಘಟಕಗಳು ಮತ್ತು ಕೇಂದ್ರ ಹಾಗೂ ರಾಜ್ಯದ ಇತರ ಸಮುಚಿತ ಏಜೆಂಟ್‌ಗಳೊಂದಿಗೆ ಸಮನ್ವಯದಿಂದ ಮಾಡತಕ್ಕದ್ದು.

(2) ರಾಜ್ಯದಲ್ಲಿ ವಿಸ್ತರಣಾ ಕೃಷಿಯ ಮಾದರಿಗಳನ್ನು ಅಭಿವೃದ್ಧಿಪಡಿಸುವುದಕ್ಕೆ ವಿಶ್ವವಿದ್ಯಾಲಯವು ಜವಾಬ್ದಾರಿಯಾಗಿರತಕ್ಕದ್ದು.

35. ಬೋಧನೆ, ಸಂಶೋಧನೆ ಮತ್ತು ವಿಸ್ತರಣೆಯ ಸಂಯೋಜನೆ.-(1) ವಿಶ್ವವಿದ್ಯಾಲಯದ ಯುಕ್ತ ಅಧಿಕಾರಿಗಳೊಂದಿಗೆ ಸಮಾಲೋಚಿಸಿ, ವಿಶ್ವವಿದ್ಯಾಲಯದ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣದ ಚಟುವಟಿಕೆಗಳು ಸಂಪೂರ್ಣವಾಗಿ ಬೆರೆತು ಕೆಲಸಮಾಡುವುದಕ್ಕೆ ಅವಶ್ಯವಾಗಹುದಾದ ಕ್ರಮಗಳನ್ನು ತೆಗೆದುಕೊಳ್ಳಲು ಕುಲಪತಿಯವರು ಜವಾಬ್ದಾರರಾಗಿರತಕ್ಕದ್ದು.

(2) ಬೋಧಕರ ಕೇಡರ್‌ನಲ್ಲಿರತಕ್ಕ ಪ್ರತಿಯೊಬ್ಬ ಫ್ಯಾಕಲ್ಟಿ ಸದಸ್ಯರು ಬೋಧನೆಯ ಕಾರ್ಯದ ಜೊತೆಗೆ ತಮ್ಮ ಶೇಕಡ ಮೂವತ್ತರಷ್ಟು ಸಮಯವನ್ನು ಸಂಶೋಧನೆ ಮತ್ತು ವಿಸ್ತರಣೆ ಶಿಕ್ಷಣ ಕೈಗೊಳ್ಳಲು ಮೀಸಲಿಡತಕ್ಕದ್ದು. ಹಾಗೆಯೇ ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣದಲ್ಲಿರತಕ್ಕ ಫ್ಯಾಕಲ್ಟಿ ಸದಸ್ಯರು ಸಂದರ್ಭಾನುಸಾರ ಬೋಧನೆ ಅಥವಾ ವಿಸ್ತರಣೆ ಅಥವಾ ಸಂಶೋಧನೆಯ ಕೆಲಸಕ್ಕೆ ತಮ್ಮ ಶೇಕಡಾ ಮೂವತ್ತರಷ್ಟು ಸಮಯವನ್ನು ವಿನಿಯೋಗಿಸತಕ್ಕದ್ದು.

(3) ಕಾಲೇಜಿನಲ್ಲಿರುವ ಎಲ್ಲಾ ಬೋಧನೆ, ಸಂಶೋಧನೆಯ ಮತ್ತು ವಿಸ್ತರಣಾ ಶಿಕ್ಷಣದ ಸಿಬ್ಬಂದಿಯು ಸಂದರ್ಭಾನುಸಾರ ಕಾಲೇಜಿನ ಡೀನ್‌ರವರ ಆಡಳಿತ ನಿಯಂತ್ರಣ ಅಥವಾ ನಿರ್ದೇಶಕರು (ಸಂಶೋಧನೆ) ಮತ್ತು ನಿರ್ದೇಶಕರು (ವಿಸ್ತರಣೆ) ಇವರ ತಾಂತ್ರಿಕ ನಿಯಂತ್ರಣದಲ್ಲಿರತಕ್ಕದ್ದು.

(4) ವಿಶ್ವವಿದ್ಯಾಲಯವು ರಾಜ್ಯದ ಪ್ರಾದೇಶಿಕ ಅವಶ್ಯಕತೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ತನ್ನ ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸತಕ್ಕದ್ದು ಮತ್ತು ರಾಜ್ಯ ಸರ್ಕಾರಕ್ಕೆ ಹಾಗೂ ಇತರ ಹಿತಾಸಕ್ತಿದಾರರಿಗೆ ಸೂಕ್ತವಾದ ತಾಂತ್ರಿಕ ಬ್ಯಾಕ್ ಸ್ಟಾಪಿಂಗ್ ಒದಗಿಸತಕ್ಕದ್ದು.

ಅಧ್ಯಾಯ – VI

ನಿಧಿಗಳು ಮತ್ತು ಲೆಕ್ಕಪತ್ರಗಳು

36. ವಿಶ್ವವಿದ್ಯಾಲಯದ ನಿಧಿಗಳು.- (1) ವಿಶ್ವವಿದ್ಯಾಲಯವು ಒಂದು ಸಾಮಾನ್ಯ ನಿಧಿಯನ್ನು ಹೊಂದಿರತಕ್ಕದ್ದು ಮತ್ತು ಅದಕ್ಕೆ ಈ ಮುಂದಿನವುಗಳು ಜಮೆಯಾಗತಕ್ಕದ್ದು,-

(ಎ) ಶುಲ್ಕಗಳಿಂದ, ದತ್ತಿಗಳಿಂದ ಮತ್ತು ಯಾವುದಾದರೂ ದಾನಗಳು ಇದ್ದರೆ ಅವುಗಳಿಂದ ಬರುವ ಆದಾಯ, ವಿದ್ಯಾರ್ಥಿ ನಿಲಯ, ಪ್ರಯೋಗ ಕೇಂದ್ರಗಳು ಹಾಗೂ ಫಾರ್ಮುಗಳೂ ಸೇರಿದಂತೆ ವಿಶ್ವವಿದ್ಯಾಲಯದ ಸ್ವತ್ತುಗಳಿಂದ ಬರುವ ಆದಾಯ;

(ಬಿ) ಈ ಅಧಿನಿಯಮದ ಉಪಬಂಧಗಳಿಗೆ ಸುಸಂಗತವಾಗಿರುವಂತಹ ಷರತ್ತುಗಳಿಗೆ ಒಳಪಟ್ಟು ಸರ್ಕಾರವು ನೀಡಿದ ವಂತಿಕೆಗಳು ಅಥವಾ ಅನುದಾನಗಳು;

(ಸಿ) ಇತರ ವಂತಿಕೆಗಳು, ಅನುದಾನಗಳು, ದೇಣಿಗೆಗಳು, ಲಾಭಗಳು, ಸಾಲಗಳು ಮತ್ತು ಇತರ ಸ್ವೀಕೃತಿಗಳು.

(2) ವಿಶ್ವವಿದ್ಯಾಲಯವು ಪ್ರತಿಷ್ಠಾನ ನಿಧಿ ಎಂಬ ಹೆಸರಿನ ನಿಧಿಯನ್ನು ಹೊಂದಿರತಕ್ಕದ್ದು. ಇದಕ್ಕೆ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಅಥವಾ ಯಾವುದೇ ಅನುಮೋದಿತ ಏಜೆನ್ಸಿಯು ನೀಡುವ ವಂತಿಕೆಗಳು ಮತ್ತು ಅನುದಾನಗಳು ಹಾಗೂ ಮಂಡಳಿಯು ನಿರ್ದಿಷ್ಟಪಡಿಸಬಹುದಾದಂತಹ ಇತರ ಮೊತ್ತಗಳು ಜಮೆಯಾಗತಕ್ಕದ್ದು. ಮಂಡಳಿಯು ಅವಶ್ಯವಿದ್ದಾಗಲೆಲ್ಲ ಅಂತಹ ಮೊಬಲಗನ್ನು ನಿರ್ದಿಷ್ಟಪಡಿಸಬಹುದಾದಂತೆ ಪ್ರತಿಷ್ಠಾನ ನಿಧಿಯಿಂದ ಸಾಮಾನ್ಯ ನಿಧಿಗೆ ನಿಯಮಿಸಬಹುದಾದ ವಿಧಾನದಲ್ಲಿ ವರ್ಗಾಯಿಸಬಹುದು.

(3) ವಿಶ್ವವಿದ್ಯಾಲಯವು, ಸರ್ಕಾರವು ನೀಡಿದ ಯಾವುದೇ ಅನುದಾನಗಳ ಸಂಬಂಧದಲ್ಲಿ ಲೆಕ್ಕಪತ್ರ ತ:ಖ್ತೆಗಳನ್ನು, ವರದಿಗಳನ್ನು ಮತ್ತು ಇತರ ವಿವರಗಳನ್ನು ಸರ್ಕಾರಕ್ಕೆ ನೀಡತಕ್ಕದ್ದು ಹಾಗೂ ಸರ್ಕಾರವು ನಿರ್ದೇಶಿಸಬಹುದಾದಂತಹ ಅವಧಿಯೊಳಗೆ ಮತ್ತು ವಿಧಾನದಲ್ಲಿ ಯಾವುದೇ ಅನುದಾನದ ಬಳಕೆಗೆ ಸಂಬಂಧಿಸಿದಂತೆ ತ:ಖ್ತೆಗಳು, ಲೆಕ್ಕಪತ್ರಗಳು, ವರದಿಗಳು ಹಾಗೂ ಇತರ ವಿವರಗಳನ್ನು ಸಲ್ಲಿಸತಕ್ಕದ್ದು.

(4) ವಿಶ್ವವಿದ್ಯಾಲಯವು ಸರ್ಕಾರದಿಂದ ಅಥವಾ ಯಾವುದೇ ಇತರ ರಾಜ್ಯ ಸರ್ಕಾರಗಳಿಂದ ಅಥವಾ ಕೇಂದ್ರ ಸರ್ಕಾರದಿಂದ ಅಥವಾ ಶಾಸನಾತ್ಮಕ ನಿಕಾಯಗಳಿಂದ ಅಥವಾ ದತ್ತಿಗಳಿಂದ ಅಥವಾ ದಾನಗಳಿಂದ, ವಿಶ್ವವಿದ್ಯಾಲಯವು ಮತ್ತು ದಾನಿ ಅಥವಾ ಅನುದಾನದಾತರ ನಡುವೆ ಮಾಡಿಕೊಂಡ ಒಪ್ಪಂದಗಳಲ್ಲಿಯ ಷರತ್ತುಗಳಿಗೆ ಒಳಪಟ್ಟು ತನ್ನ ಧ್ಯೇಯೋದ್ದೇಶಗಳ ಸಾಧನೆಗಾಗಿ ಅನುದಾನ ಸ್ವೀಕರಿಸಲು ಸಕ್ಷಮವಾಗಿರತಕ್ಕದ್ದು.

37. ನಿಧಿಯ ಆಡಳಿತ.– ವಿಶ್ವವಿದ್ಯಾಲಯದ ಸಾಮಾನ್ಯ ನಿಧಿ, ಪ್ರತಿಷ್ಠಾನ ನಿಧಿ ಮತ್ತು ಇತರ ನಿಧಿಗಳನ್ನು ಶಾಸನಗಳಲ್ಲಿ ಹೇಳಿದ ಉಪಬಂಧಗಳಿಗೆ ಅನುಗುಣವಾಗಿ ನಿರ್ವಹಿಸತಕ್ಕದ್ದು.

38. ಲೆಕ್ಕಪರಿಶೋಧನೆಗೆ ಆದೇಶಿಸಲು ಸರ್ಕಾರದ ಅಧಿಕಾರ.– ಸರ್ಕಾರವು, ಯಾವುದೇ ಸಮಯದಲ್ಲಿ ವಿಶ್ವವಿದ್ಯಾಲಯದ ಲೆಕ್ಕಪತ್ರಗಳ ಪರಿಶೋಧನೆಯನ್ನು ತಾನು ನಿರ್ದೇಶಿಸಬಹುದಾದಂತಹ ಲೆಕ್ಕಪರಿಶೋಧಕರಿಂದ ಮಾಡಿಸಬೇಕೆಂದು ಆದೇಶಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

39. ಹಣಕಾಸಿನ ಅಂದಾಜುಗಳು.– (1) ಕುಲಪತಿಯು ಮುಂಬರುವ ವರ್ಷಕ್ಕಾಗಿ ವಿಶ್ವವಿದ್ಯಾಲಯದ ಹಣಕಾಸಿನ ಅಂದಾಜುಗಳನ್ನು ತಯಾರಿಸುವಂತೆ ಮಾಡತಕ್ಕದ್ದು ಮತ್ತು ಅನುಮೋದನೆಗಾಗಿ ಅದನ್ನು ಮಂಡಳಿಯ ಮುಂದೆ ಮಂಡಿಸತಕ್ಕದ್ದು.

(2) ಮಂಡಳಿಯು, ತಾನು ಸೂಕ್ತವೆಂದು ಭಾವಿಸಬಹುದಾದಂತಹ ಮಾರ್ಪಾಡುಗಳಿಗೆ ಒಳಪಟ್ಟು ಹಣಕಾಸಿನ ಅಂದಾಜುಗಳನ್ನು ಅನುಮೋದಿಸಬಹುದು ಮತ್ತು ಮಂಡಳಿಯು ಅನುಮೋದಿಸಿದ ಹಣಕಾಸಿನ ಅಂದಾಜಿಗೆ ಅನುಸಾರವಾಗಿ ಅಲ್ಲದೆ ಯಾವ ವೆಚ್ಚವನ್ನು ಮಾಡತಕ್ಕದ್ದಲ್ಲ.

40. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.– (1) ಲೆಕ್ಕಪತ್ರ ನಿರ್ವಹಣೆಯ ಜೋಡಿದಾಖಲಾತಿ ಪದ್ಧತಿಯನ್ನು ಆಧರಿಸಿದ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳನ್ನು ಕುಲಪತಿಯವರ ನಿರ್ದೇಶನದ ಮೇರೆಗೆ ಲೆಕ್ಕ ನಿಯಂತ್ರಕರು ತಯಾರಿಸತಕ್ಕದ್ದು ಮತ್ತು ವಿಶ್ವವಿದ್ಯಾಲಯಕ್ಕೆ ಯಾವುದೇ ಮೂಲಗಳಿಂದ ಪ್ರಾಪ್ತವಾಗುವ ಅಥವಾ ಅದು ಸ್ವೀಕರಿಸುವ ಎಲ್ಲಾ ಮೊಬಲಗುಗಳನ್ನು ಹಾಗೂ ವಿಶ್ವವಿದ್ಯಾಲಯವು ವಿತರಣೆ ಮಾಡುವ ಅಥವಾ ಸಂದಾಯ ಮಾಡುವ ಎಲ್ಲಾ ಮೊಬಲಗುಗಳನ್ನು ಈ ಲೆಕ್ಕಪತ್ರಗಳಲ್ಲಿ ದಾಖಲಿಸತಕ್ಕದ್ದು.

(2) ವಾರ್ಷಿಕ ಲೆಕ್ಕಪತ್ರ ಮತ್ತು ಜಮಾ ಖರ್ಚು ಪಟ್ಟಿಯನ್ನು ಕುಲಪತಿಯವರು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು, ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ತಾನು ನೇಮಿಸಬಹುದಾದಂತಹ ವ್ಯಕ್ತಿಗಳು ಲೆಕ್ಕ ಪರಿಶೋಧನೆಯನ್ನು ನಡೆಸುವಂತೆ ಮಾಡತಕ್ಕದ್ದು. ಲೆಕ್ಕಪತ್ರಗಳನ್ನು ಪರಿಶೋಧಿಸಿದ ಮೇಲೆ ಅವುಗಳನ್ನು ಮುದ್ರಿಸತಕ್ಕದ್ದು ಹಾಗೂ ಕುಲಪತಿಯವರು ಅವುಗಳ ಪ್ರತಿಗಳನ್ನು ಲೆಕ್ಕಪರಿಶೋಧನೆಯ ವರದಿಯೊಡನೆ ಮಂಡಲಿಗೆ ಮತ್ತು ಕುಲಾಧಿಪತಿಯವರಿಗೆ ಮಂಡಿಸತಕ್ಕದ್ದು.

(3) ಮಂಡಳಿಯು, ಲೆಕ್ಕಪತ್ರಗಳ ಪ್ರತಿಯನ್ನು ಹಾಗೂ ವರದಿಯನ್ನು ಲೆಕ್ಕಪರಿಶೋಧನೆಯ ವರದಿಯ ಮೇಲೆ ವಿಶ್ವವಿದ್ಯಾಲಯವು ಕೈಗೊಂಡ ಕ್ರಮದ ಬಗ್ಗೆ ಒಂದು ಹೇಳಿಕೆಯೊಡನೆ ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು, ಹಾಗೂ ರಾಜ್ಯ ಸರ್ಕಾರವು ಅವನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

(4) ವಿಶ್ವವಿದ್ಯಾಲಯವು ಯೋಜನೆಗಳ ಸಂಬಂಧದಲ್ಲಿ ಮತ್ತು ಭಾರತದ ಕೃಷಿ ಸಂಶೋಧನಾ ಪರಿಷತ್ತು, ಭಾರತ ಸರ್ಕಾರ ಮತ್ತು ಇತರ ಯೋಜನೆಗಳು/ಚಾರ್ಟೆಡ್ ಆಕೌಂಟೆಟ್ ಪ್ರಮಾಣ ಪತ್ರ ನೀಡಿದ ಸಂಸ್ಥೆಗಳು ಪ್ರಾಯೋಜಿಸಿದ ಕೃಷಿ ವಿಜ್ಞಾನ ಕೇಂದ್ರಗಳ ಸಂಬಂಧದಲ್ಲಿ ಲೆಕ್ಕಪರಿಶೋಧನೆ ಬಳಕೆ ಪ್ರಮಾಣ ಪತ್ರಗಳನ್ನು ನೀಡುವಂತೆ ಮಾಡತಕ್ಕದ್ದು.

41. ಭವಿಷ್ಯ ನಿಧಿ, ನಿವೃತ್ತಿ ವೇತನ ಮತ್ತು ವಿಮೆ.– (1) ಸರ್ಕಾರದ ಪೂರ್ವಾನುಮೋದನೆಯೊಡನೆ ವಿಶ್ವವಿದ್ಯಾಲಯವು ತನ್ನ ಅಧಿಕಾರಿಗಳು, ಪ್ರಾಧ್ಯಾಪಕರು, ಲಿಪಿಕ ಸಿಬ್ಬಂದಿ ಮತ್ತು ಇತರ ನೌಕರರ ಪ್ರಯೋಜನಕ್ಕಾಗಿ ನಿಯಮಿಸಬಹುದಾದಂತಹ ವಿಧಾನಗಳು ಮತ್ತು ಷರತ್ತುಗಳಿಗೆ ಒಳಪಟ್ಟು ತಾನು ಸೂಕ್ತವೆಂದು ಭಾವಿಸಬಹುದಾದಂತಹ ನಿವೃತ್ತಿ ವೇತನ, ಉಪದಾನ, ವಿಮೆ ಅಥವಾ ಭವಿಷ್ಯ ನಿಧಿ, ವಂತಿಗೆ ನಿವೃತ್ತಿ ವೇತನ ನಿಧಿ ಮತ್ತು ಇನ್ನಾವುದೇ ಅಂತಹ ನಿಧಿಗಳನ್ನು ರಚಿಸತಕ್ಕದ್ದು.

(2) ಸರ್ಕಾರವು, ಭವಿಷ್ಯ ನಿಧಿ ಅಧಿನಿಯಮ 1925 (1925ರ ಕೇಂದ್ರ ಅಧಿನಿಯಮ 19) ವಿಶ್ವವಿದ್ಯಾಲಯವು ಹಾಗೆ ರಚಿಸಿದ ಭವಿಷ್ಯ ನಿಧಿ ಅಥವಾ ನಿವೃತ್ತಿ ವೇತನ ನಿಧಿಗಳಿಗೆ ಅವು ಸರ್ಕಾರದ ಭವಿಷ್ಯ ನಿಧಿಗಳು ಆಗಿದ್ದರೆ ಹೇಗೋ ಹಾಗೆ ಅನ್ವಯಿಸತಕ್ಕದ್ದೆಂದು ಘೋಷಿಸಬಹುದು:

ಪರಂತು, ವಿಶ್ವವಿದ್ಯಾಲಯವು ಹಣಕಾಸು ಸಮಿತಿ ಮತ್ತು ಮಂಡಳಿಯೊಡನೆ ಸಮಾಲೋಚಿಸಿ ತಾನು ನಿರ್ಧರಿಸಬಹುದಾದಂತಹ ವಿಧಾನದಲ್ಲಿ ಭವಿಷ್ಯ ನಿಧಿಯ ಮೊಬಲಗನ್ನು ತೊಡಗಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

42. ಸರ್ಕಾರದ ಅನುದಾನಗಳು.– (1) ರಾಜ್ಯ ಸರ್ಕಾರವು, ಪ್ರತಿ ವರ್ಷವೂ ವಿಶ್ವವಿದ್ಯಾಲಯಕ್ಕೆ ಲುಪ್ತವಾಗದಂತಹ ಇಡಿಗಂಟು ಅನುದಾನವನ್ನು ನೀಡತಕ್ಕದ್ದು, ಎಂದರೆ :–

(i) ವಿಶ್ವವಿದ್ಯಾಲಯದ ಸೂಕ್ತ ಕಾರ್ಯನಿರ್ವಹಣೆಗಾಗಿ ವಿಶ್ವವಿದ್ಯಾಲಯದ ಸಿಬ್ಬಂದಿಯ ವೇತನ, ಭತ್ಯೆಗಳು, ಸಾದಿಲ್ವಾರು, ಇತರ ಸರಬರಾಜು ಮತ್ತು ಸೇವೆಗಳ ಮೇಲಿನ ಅಂದಾಜು ವೆಚ್ಚಕ್ಕಿಂತ ಕಡಿಮೆಯಲ್ಲದ ಒಂದು ಅನುದಾನ;

(ii) ರಾಜ್ಯ ಸರ್ಕಾರವು ವಿಶ್ವವಿದ್ಯಾಲಯದ ಸೂಕ್ತ ಕಾರ್ಯನಿರ್ವಹಣೆಗಾಗಿ ಅವಶ್ಯವೆಂದು ಭಾವಿಸಬಹುದಾದಂತಹ ಹೆಚ್ಚುವರಿ ಬಾಬುಗಳ ಆವರ್ತಕ ಮತ್ತು ಅನಾವರ್ತಕ ವೆಚ್ಚಗಳನ್ನು ಭರಿಸುವುದಕ್ಕೆ ಒಂದು ಅನುದಾನ.

(2) ರಾಜ್ಯ ಸರ್ಕಾರವು, ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ ಮತ್ತು ವಿಶ್ವವಿದ್ಯಾಲಯವು ಜಾರಿಗೊಳಿಸಲೆಂದು ವರ್ಗಾಯಿಸಿದ ಯೋಜನೆಗಳ ಸಂಬಂಧದಲ್ಲಿ ವಿಶ್ವವಿದ್ಯಾಲಯಕ್ಕೆ ಕೇಂದ್ರ ಸರ್ಕಾರ ಮತ್ತು ಅಂತಹ ಯೋಜನೆಗಳನ್ನು ಪ್ರಾಯೋಜಿಸಿದ ಇತರ ಏಜೆನ್ಸಿಗಳಿಂದ ನಿರೀಕ್ಷಿತ ಸಹಾಯವನ್ನು ಕಳೆದ ತರುವಾಯ ವಾರ್ಷಿಕ ಯೋಜನೆಯಲ್ಲಿ ತೋರಿಸಿದ ನಿವ್ವಳ ವೆಚ್ಚದ ಏರ್ಪಾಡಿಗೆ ಸಮನಾದ ಮೊತ್ತದ ಲುಪ್ತವಾಗದಂತಹ ಇಡಿಗಂಟು ಅನುದಾನವನ್ನು ಸಹ ನೀಡತಕ್ಕದ್ದು.

(3) ರಾಜ್ಯ ಸರ್ಕಾರವು ಯಾವುದೇ ಅನುದಾನವನ್ನು ನೀಡುವ ಮೊದಲು ಅದು ಅಗತ್ಯಪಡಿಸಬಹುದಾದಂತಹ ಅಂಕಿಅಂಶಗಳು, ಲೆಕ್ಕಪತ್ರಗಳು, ವರದಿಗಳು ಹಾಗೂ ಇತರ ವಿವರಗಳನ್ನು ರಾಜ್ಯ ಸರ್ಕಾರಕ್ಕೆ ವಿಶ್ವವಿದ್ಯಾಲಯವು ಸಲ್ಲಿಸತಕ್ಕದ್ದು ಮತ್ತು ವಿಶ್ವವಿದ್ಯಾಲಯವು ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂತಹ ಅವಧಿಯೊಳಗೆ ಹಾಗೂ ಅಂತಹ ವಿಧಾನದಲ್ಲಿ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಯಾವುದೇ ಅನುದಾನವನ್ನು ಬಳಸಿಕೊಂಡಿರುವುದಕ್ಕೆ ಸಂಬಂಧಪಟ್ಟ ಅಂಕಿಅಂಶಗಳು, ಲೆಕ್ಕಪತ್ರಗಳು, ವರದಿಗಳು ಹಾಗೂ ಇತರ ವಿವರಗಳನ್ನು ಒದಗಿಸತಕ್ಕದ್ದು.

(4) ವಿಶ್ವವಿದ್ಯಾಲಯವು ಸರ್ಕಾರದಿಂದ ಅಥವಾ ಯಾವುದೇ ಇತರ ರಾಜ್ಯ ಸರ್ಕಾರಗಳಿಂದ ಅಥವಾ ಕೇಂದ್ರ ಸರ್ಕಾರದಿಂದ ಅಥವಾ ಶಾಸನಾತ್ಮಕ ನಿಕಾಯಗಳಿಂದ ಅಥವಾ ದತ್ತಿಗ್ರಳಿಂದ ಅಥವಾ ದಾನಗಳಿಂದ, ವಿಶ್ವವಿದ್ಯಾಲಯವು ಮತ್ತು ದಾನಿ ಅಥವಾ ಅನುದಾನದಾತರ ನಡುವೆ ಮಾಡಿಕೊಂಡ ಒಪ್ಪಂದಗಳಲ್ಲಿಯ ಷರತ್ತುಗಳಿಗೆ ಒಳಪಟ್ಟು ತನ್ನ ಧ್ಯೇಯೋದ್ದೇಶಗಳ ಸಾಧನೆಗಾಗಿ ಅನುದಾನ ಸ್ವೀಕರಿಸಲು ಸಕ್ಷಮವಾಗಿರತಕ್ಕದ್ದು.

43. ಹಣಕಾಸು ಸಮಿತಿ.– (1) ಮಂಡಳಿಯು ಈ ಮುಂದಿನ ಸದಸ್ಯರುಗಳನ್ನೊಳಗೊಂಡ ಒಂದು ಹಣಕಾಸು ಸಮಿತಿಯನ್ನು ರಚಿಸತಕ್ಕದ್ದು ಎಂದರೆ :–

(i) ಕುಲಪತಿಯವರು – ಅಧ್ಯಕ್ಷರಾಗಿರತಕ್ಕದ್ದು;

(ii) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಹಣಕಾಸು ಇಲಾಖೆ ಅಥವಾ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಅವರ ನಾಮನಿರ್ದೇಶಿತರು;

(iii) ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಕೃಷಿ ಇಲಾಖೆ ಅಥವಾ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಅವರ ನಾಮನಿರ್ದೇಶಿತರು;

(iv) ಕುಲಪತಿಯವರು ನಾಮನಿರ್ದೇಶಿಸಿದ ವ್ಯವಸ್ಥಾಪನಾ ಮಂಡಳಿಯ ಒಬ್ಬ ಸದಸ್ಯರು;

(v) ಕುಲಸಚಿವರು;

(vi) ಲೆಕ್ಕ ನಿಯಂತ್ರಕರು – ಸದಸ್ಯ ಕಾರ್ಯದರ್ಶಿ.

(2) ಹಣಕಾಸು ಸಮಿತಿಯು ಈ ಮುಂದಿನ ಪ್ರಕಾರ್ಯಗಳನ್ನು ಹೊಂದಿರತಕ್ಕದ್ದು, ಎಂದರೆ:–

(i) ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳು ಮತ್ತು ಆಯವ್ಯಯ ಅಂದಾಜುಗಳನ್ನು ಪರೀಕ್ಷಿಸುವುದು ಮತ್ತು ಅದರ ಮೇಲೆ ಮಂಡಳಿಗೆ ಸಲಹೆಗಳನ್ನು ನೀಡುವುದು;

(ii) ವಿಶ್ವವಿದ್ಯಾಲಯದ ಹಣಕಾಸಿನ ಪರಿಸ್ಥಿತಿಯನ್ನು ಕಾಲಕಾಲಕ್ಕೆ ಪರಿವೀಕ್ಷಿಸುವುದು;

(iii) ವಿಶ್ವವಿದ್ಯಾಲಯದ ಹಣಕಾಸಿಗೆ ಸಂಬಂಧಿಸಿದ ಎಲ್ಲ ವಿಷಯಗಳ ಮೇಲೆ ಮಂಡಳಿಗೆ ಶಿಫಾರಸ್ಸುಗಳನ್ನು ಮಾಡುವುದು;

(iv) ಮಂಡಳಿಗೆ ಕಟ್ಟುನಿಟ್ಟಾದ ಆರ್ಥಿಕ ಮಿತವ್ಯಯವನ್ನು ಅನುಸರಿಸಲು ಕಠಿಣ ಕ್ರಮಗಳನ್ನು ಅಳವಡಿಸಿಕೊಳ್ಳಲು ಶಿಫಾರಸ್ಸುಗಳನ್ನು ಮಾಡುವುದು ಮತ್ತು ಅನಗತ್ಯ ವೆಚ್ಚಗಳನ್ನು ಕಡಿತಗೊಳಿಸಲು ಸಲಹೆಗಳನ್ನು ನೀಡುವುದು;

(v) ವಿಶ್ವವಿದ್ಯಾಲಯದ ಹಣ ಬಲವನ್ನು ಉತ್ತಮಗೊಳಿಸಲು ಸಂಶೋಧನೆ ಮತ್ತು ಬೋಧನೆಗಳೆರಡರಲ್ಲೂ ವೆಚ್ಚ ವಸೂಲಿ ವಿಧಾನಗಳ ಬಗ್ಗೆ ಮಂಡಳಿಗೆ ಸೂಕ್ತ ಶಿಫಾರಸ್ಸುಗಳನ್ನು ಮಾಡುವುದು.

ಅಧ್ಯಾಯ – VII

ಕಾಲೇಜುಗಳ ಸಂಯೋಜನೆ ಮತ್ತು ಸಂಸ್ಥೆಗಳಿಗೆ ಮನ್ನಣೆ

44. ಕಾಲೇಜುಗಳ ಸಂಯೋಜನೆ.– (1) ವಿಶ್ವವಿದ್ಯಾಲಯದ ಪ್ರದೇಶ ದಲ್ಲಿರುವ ಕಾಲೇಜುಗಳನ್ನು ಈ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳನ್ನು ಪೂರೈಸಿದ ತರುವಾಯ ರಾಜ್ಯ ಸರ್ಕಾರವು ಮಾಡಿದ ಶಿಫಾರಸ್ಸುಗಳ ಮೇಲೆ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಾಗಿ ವಿಶ್ವವಿದ್ಯಾಲಯಕ್ಕೆ ಸಂಯೋಜಿಸತಕ್ಕದ್ದು.

(2) ಕುಲಸಚಿವರು, ಹೊಸ ಕಾಲೇಜುಗಳ ಸಂಯೋಜನೆಯ ಬಗ್ಗೆ, ಅಸ್ತಿತ್ವದಲ್ಲಿರುವ ಸಂಯೋಜಿತ ಕಾಲೇಜುಗಳಲ್ಲಿ ಹೊಸ ವ್ಯಾಸಂಗ ಕ್ರಮಗಳ ಬಗ್ಗೆ ಸಂಯೋಜಿತ ಕಾಲೇಜುಗಳಲ್ಲಿ ಹೊಸ ವಿಷಯಗಳು ಮತ್ತು ಮಂಜೂರಾದ ಪ್ರವೇಶ ಅವಕಾಶದಲ್ಲಿನ ಬದಲಾವಣೆಯ ಬಗ್ಗೆ ಅರ್ಜಿಗಳನ್ನು ಆಹ್ವಾನಿಸಿ, ಅರ್ಜಿಗಳ ಸ್ವೀಕೃತಿಗೆ ಕೊನೆಯ ದಿನಾಂಕವನ್ನು ನಿಗದಿಪಡಿಸಿ, ಒಂದು ಇಂಗ್ಲಿಷ್ ವೃತ್ತ ಪತ್ರಿಕೆ ಮತ್ತು ಒಂದು ಕನ್ನಡ ವೃತ್ತ ಪತ್ರಿಕೆ ಹೀಗೆ ಕಡೆಯ ಪಕ್ಷ ಎರಡು ಪ್ರಮುಖ ವೃತ್ತ ಪತ್ರಿಕೆಗಳಲ್ಲಿ ಅಧಿಸೂಚಿಸತಕ್ಕದ್ದು. ಈ ಜಾಹಿರಾತು, ವಿಶ್ವವಿದ್ಯಾಲಯವು ಅಗತ್ಯ ಪಡಿಸಬಹುದಾದಂತಹ ಇತರ

ವಿವರಗಳನ್ನು ಒಳಗೊಂಡಿರತಕ್ಕದ್ದು ಮತ್ತು ಕಾಲೇಜುಗಳು ಭಾರತದ ಕೃಷಿ ಸಂಶೋಧನಾ ಪರಿಷತ್ತು ಅಥವಾ ಅಂತಹ ಇತರ ಪ್ರಾಧಿಕಾರಗಳ ಅನುಮೋದನೆ ಅಥವಾ ಮನ್ನಣೆಯನ್ನು ಪಡೆಯಬೇಕೆಂಬುದನ್ನು ಅಗತ್ಯಪಡಿಸಿದಲ್ಲಿ, ಆ ಬಗ್ಗೆ ನಿರ್ದಿಷ್ಟ ಸೂಚನೆ ನೀಡತಕ್ಕದು ಮತ್ತು ಸಂಯೋಜನೆಗಾಗಿ ಸಲ್ಲಿಸಬೇಕಾದ ಶುಲ್ಕದ ಮೊಬಲಗನ್ನು ಸಹ ನಿರ್ದಿಷ್ಟಪಡಿಸತಕ್ಕದ್ದು.

(3) ವಿಶ್ವವಿದ್ಯಾಲಯಕ್ಕೆ ಸಂಯೋಜನೆಗಾಗಿ ಅರ್ಜಿಸಲ್ಲಿಸುವ ಕಾಲೇಜು, ಈ ಮುಂದಿನವುಗಳಿಗೆ ಸಂಬಂಧಪಟ್ಟಂತೆ ಮಾಹಿತಿಯನ್ನು ಒದಗಿಸಿ ಜಾಹಿರಾತಿನಲ್ಲಿ ನಿಗದಿಪಡಿಸಿದ ಕಾಲಮಿತಿಯೊಳಗೆ ಅರ್ಜಿಯನ್ನು ಕುಲಸಚಿವರಿಗೆ ಕಳುಹಿಸತಕ್ಕದ್ದು, ಎಂದರೆ:-

(i) ಆ ಕಾಲೇಜು ಒದಗಿಸಲು ಉದ್ದೇಶಿಸಿದ ಶಿಕ್ಷಣದ ಮಾದರಿಯನ್ನು ನೆರೆಹೊರೆಯಲ್ಲಿರುವ ಇತರ ಕಾಲೇಜುಗಳು ಅದೇ ಮಾದರಿಯ ಶಿಕ್ಷಣಕ್ಕೆ ಮಾಡಿರುವ ಪ್ರಸ್ತುತ ಏರ್ಪಾಟನ್ನು ಮತ್ತು ಕಾಲೇಜನ್ನು ಯಾವ ಸ್ಥಳದಲ್ಲಿ ಸ್ಥಾಪಿಸಬೇಕಾಗಿದೆಯೋ ಆ ಸ್ಥಳದ ಸೂಕ್ತತೆಯನ್ನೂ ಗಮನದಲ್ಲಿಟ್ಟುಕೊಂಡು, ಆ ಕಾಲೇಜು ಸ್ಥಳೀಯ ಅವಶ್ಯಕತೆಯನ್ನು ಪೂರೈಸುತ್ತದೆ;

(ii) ಅದು ಕ್ರಮಬದ್ಧವಾಗಿ ರಚಿಸಲಾದ ಆಡಳಿತ ಮಂಡಳಿಯ ಆಡಳಿತ ನಿರ್ವಹಣೆಗೆ ಒಳಪಟ್ಟಿದೆ;

(iii) ಬೋಧಕ ಸಿಬ್ಬಂದಿಯ ಸಂಖ್ಯೆ ಮತ್ತು ಅರ್ಹತೆಗಳು ಮತ್ತು ಅವರ ಪದಾವಧಿಯನ್ನು ನಿಯಂತ್ರಿಸುವ ಷರತ್ತುಗಳು ಆ ಕಾಲೇಜಿನಲ್ಲಿ ಕೈಗೊಳ್ಳಬೇಕಾದ ಶಿಕ್ಷಣ, ಬೋಧನೆ ಅಥವಾ ತರಬೇತಿಗಳ ವ್ಯಾಸಂಗ ಕ್ರಮಗಳಿಗೆ ತಕ್ಕ ಏರ್ಪಾಟನ್ನು ಮಾಡುವಂಥದ್ದಾಗಿದೆ;

(iv) ಕಾಲೇಜನ್ನು ನಡೆಸುವಂಥ ಕಟ್ಟಡಗಳು ಸೂಕ್ತವಾಗಿವೆ ಮತ್ತು ತಂದೆ ತಾಯಿಗಳ ಅಥವಾ ಪಾಲಕರ ಜೊತೆಯಲ್ಲಿ ವಾಸವಾಗಿರದೆ ಇರುವ ವಿದ್ಯಾರ್ಥಿಗಳಿಗಾಗಿ ಆ ಕಾಲೇಜಿನಲ್ಲಿ ಅಥವಾ ಆ ಕಾಲೇಜು ಅನುಮೋದಿಸಿದ ವಸತಿಗಳಲ್ಲಿ ನಿವಾಸಕ್ಕಾಗಿ ಹಾಗೂ ಮೇಲ್ವಿಚಾರಣೆ ಮತ್ತು

ಕ್ಷೇಮಾಭಿವೃದ್ಧಿಗಾಗಿ, ಶಾಸನಗಳು ಮತ್ತು ವಿನಿಯಮಗಳಿಗೆ ಅನುಗುಣವಾಗಿ ಏರ್ಪಾಟು ಮಾಡಲಾಗುವುದು;

(v) ಗ್ರಂಥಾಲಯಕ್ಕಾಗಿ ಸೂಕ್ತ ವ್ಯವಸ್ಥೆ ಮಾಡಲಾಗಿದೆ;

(vi) ಪ್ರಾಯೋಗಿಕ ವಿಜ್ಞಾನದ ಯಾವುದೇ ಶಾಖೆಯಲ್ಲಿ ಸಂಯೋಜನೆಯನ್ನು ಕೋರಿರುವಲ್ಲಿ, ಶಾಸನಗಳು ಮತ್ತು ವಿನಿಯಮಗಳಿಗೆ ಅನುಗುಣವಾಗಿ ಆ ವಿಜ್ಞಾನದ ಶಾಖೆಯಲ್ಲಿ ಶಿಕ್ಷಣ ಕೊಡುವುದಕ್ಕಾಗಿ ಸರಿಯಾದ ರೀತಿಯಲ್ಲಿ ಸಜ್ಜುಗೊಳಿಸಿದ ಪ್ರಯೋಗಶಾಲೆ ಅಥವಾ ವಸ್ತು ಸಂಗ್ರಹಾಲಯ ವ್ಯವಸ್ಥೆಗಳನ್ನು ನಿರ್ದಿಷ್ಟಪಡಿಸಿದ ಅವಧಿಯೊಳಗೆ ಮಾಡಲಾಗಿದೆ ಅಥವಾ ಮಾಡಲಾಗುವುದು;

(vii) ಸನ್ನಿವೇಶಗಳಲ್ಲಿ ಅವಕಾಶವಿರುವಷ್ಟರ ಮಟ್ಟಿಗೆ ಕಾಲೇಜಿನ ಪರಿಮಿತಿಯಲ್ಲಿ ಅಥವಾ ಅದರ ಹತ್ತಿರ ಅಥವಾ ವಿದ್ಯಾರ್ಥಿಗಳ ನಿವಾಸಕ್ಕಾಗಿ ಒದಗಿಸಿರುವ ಸ್ಥಳದಲ್ಲಿ ಪ್ರಾಂಶುಪಾಲರ ಮತ್ತು ಬೋಧಕ ಸಿಬ್ಬಂದಿಯ ಸದಸ್ಯರ ವಸತಿಗಾಗಿ ಸೂಕ್ತ ಏರ್ಪಾಟು ಮಾಡಲಾಗುವುದು;

(viii) ಕಾಲೇಜಿನ ನಿರಂತರ ನಿರ್ವಹಣೆ ಮತ್ತು ದಕ್ಷ ಕಾರ್ಯ ನಿರ್ವಹಣೆಗಾಗಿ ತಕ್ಕ ಏರ್ಪಾಟು ಮಾಡುವಷ್ಟು ಕಾಲೇಜಿನ ಹಣಕಾಸು ಸಂಪನ್ಮೂಲಗಳಿವೆ; ಮತ್ತು

(ix) ವಿದ್ಯಾರ್ಥಿಗಳು ಸಂದಾಯ ಮಾಡಬೇಕಾದ ಫೀಜು ಏನಾದರೂ ಇದ್ದರೆ ಅದನ್ನು ನಿಗದಿಮಾಡುವ ನಿಯಮಗಳನ್ನು ರಚಿಸಲಾಗಿದೆ.

(4) ಹೊಸ ಕಾಲೇಜುಗಳಿಗೆ ಸಂಯೋಜನೆಯ ಅರ್ಜಿಗಳನ್ನು ವ್ಯಕ್ತಿಗಳಿಂದ ಅಂಗೀಕರಿಸತಕ್ಕದ್ದಲ್ಲ ರಾಜ್ಯ ಸರ್ಕಾರದ ನೆರವು ಇಲ್ಲದೆಯೇ ಕಾಲೇಜುಗಳನ್ನು ನಡೆಸಲು ಸಾಧ್ಯವಾಗುವ ಹಣಕಾಸು ಚೈತನ್ಯ ಹೊಂದಿರುವ, ನೋಂದಾಯಿತ ಸಂಘ ಅಥವಾ ನೋಂದಾಯಿತ ಸಾರ್ವಜನಿಕ ಟ್ರಸ್ಟ್‌ಗಳಿಂದ ಮಾತ್ರವೇ ಅಂಗೀಕರಿಸತಕ್ಕದ್ದು.

(5) ಅರ್ಜಿಯ ಜೊತೆಗೆ ಕಾಲೇಜನ್ನು ಸಂಯೋಜಿಸಿದ ನಂತರ ರಾಜ್ಯ ಸರ್ಕಾರ ಮತ್ತು ವಿಶ್ವವಿದ್ಯಾಲಯದ ಪೂರ್ವಾನುಮೋದನೆ ಇಲ್ಲದೆ ವ್ಯವಸ್ಥಾಪನೆಯನ್ನು ವರ್ಗಾವಣೆ ಮಾಡುವುದಿಲ್ಲ ಅಥವಾ ಕಾಲೇಜಿನ ಹೆಸರು ಮತ್ತು ಅಭಿನಾಮವನ್ನು ಬದಲಾವಣೆ ಮಾಡುವುದಿಲ್ಲವೆಂಬ ಒಂದು ಮುಚ್ಚಳಿಕೆಯು ಇರತಕ್ಕದ್ದು.

(6) (2)ನೇ ಉಪಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಅದನ್ನು ಪರಿಶೀಲನೆಗಾಗಿ ಮಂಡಳಿಯ ಮುಂದೆ ಇಡತಕ್ಕದ್ದು. ಮಂಡಳಿಯು ಸಂಯೋಜನೆಯ ಪ್ರತಿಯೊಂದು ಅರ್ಜಿಯನ್ನು ಪರಿಶೀಲಿಸಿದ ತರುವಾಯ ಒಂದು ಸ್ಥಳೀಯ ವಿಚಾರಣಾ ಸಮಿತಿಯಿಂದ ಸ್ಥಳೀಯ ವಿಚಾರಣೆ ಮಾಡಬೇಕೆಂದು ನಿರ್ದೇಶನ ನೀಡತಕ್ಕದ್ದು.

(7) ಸ್ಥಳೀಯ ವಿಚಾರಣಾ ಸಮಿತಿಯು, ಅದನ್ನು ರಚಿಸಿದ ದಿನಾಂಕ ದಿಂದ ಮೂವತ್ತು ದಿನಗಳೊಳಗಾಗಿ, ಒಂದು ವರದಿಯನ್ನು ವಿದ್ಯಾ ವಿಷಯಕ ಪರಿಷತ್ತಿಗೆ ಸಲ್ಲಿಸತಕ್ಕದ್ದು.

(8) ವಿದ್ಯಾ ವಿಷಯಕ ಪರಿಷತ್ತು, ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ಸ್ವೀಕರಿಸಿದ ತರುವಾಯ ಕೂಡಲೇ ವರದಿಯಲ್ಲಿ ವಿವರಿಸಿದ ಸಮಿತಿಯ ತೀರ್ಮಾನಗಳನ್ನು ಪರಿಗಣಿಸತಕ್ಕದ್ದು ಮತ್ತು ತನಗೆ ಅವಶ್ಯಕ ವೆಂದು ಕಂಡುಬರಬಹುದಾದಂಥ ಹೆಚ್ಚಿನ ವಿಚಾರಣೆಯನ್ನು ಮಾಡತಕ್ಕದ್ದು ಮತ್ತು ಅಂಥ ಮನವಿಯ ಮೇಲೆ ತನ್ನ ಅಭಿಪ್ರಾಯವನ್ನು ದಾಖಲು ಮಾಡತಕ್ಕದ್ದು ಮತ್ತು ಅದನ್ನು ಮಂಡಳಿಗೆ ಕಳುಹಿಸತಕ್ಕದ್ದು.

(9) ಮಂಡಳಿಯು, ಸಮಿತಿಯ ವರದಿಯನ್ನು ಮತ್ತು ವಿದ್ಯಾ ವಿಷಯಕ ಪರಿಷತ್ತಿನ ಗೊತ್ತುವಳಿಯನ್ನು ಪರಿಗಣಿಸತಕ್ಕದ್ದು ಹಾಗೂ ತಾನು ಅವಶ್ಯವೆಂದು ಭಾವಿಸಬಹುದಾದಂತಹ ಹೆಚ್ಚಿನ ವಿಚಾರಣೆಯನ್ನು ಮಾಡಿದ ತರುವಾಯ ಮನವಿಯನ್ನು ಪೂರ್ಣವಾಗಿ ಅಥವಾ ಭಾಗಶ: ಮಂಜೂರು ಮಾಡಬೇಕೆ ಅಥವಾ ನಿರಾಕರಿಸಬೇಕೆ ಎಂಬ ಪ್ರಶ್ನೆಯ ಬಗ್ಗೆ ತನ್ನ ಅಭಿಪ್ರಾಯವನ್ನು ದಾಖಲಿಸತಕ್ಕದ್ದು.

(10) ಕುಲಸಚಿವರು ಅರ್ಜಿಯನ್ನು ಅದರ ಅಡಕವನ್ನು, ಅನುಬಂಧ ಗಳನ್ನು ಸ್ಥಳೀಯ ವಿಚಾರಣಾ ಸಮಿತಿಯ ವರದಿ ಮತ್ತು ವಿದ್ಯಾ ವಿಷಯಕ ಪರಿಷತ್ತಿನ ಹಾಗೂ ಮಂಡಳಿಯ ಎಲ್ಲಾ ನಡವಳಿಗಳನ್ನು ಮುಂಬರುವ

ವರ್ಷದ ಮಾರ್ಚ್ ಮೂವತ್ತೊಂದಕ್ಕೆ ಮೊದಲು ತೀರ್ಮಾನ ಕೈಗೊಳ್ಳುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(11) ರಾಜ್ಯ ಸರ್ಕಾರವು, ಸ್ಥಳಿಯ ವಿಚಾರಣಾ ಸಮಿತಿಯ, ವಿದ್ಯಾ ವಿಷಯಕ ಪರಿಷತ್ತಿನ ಮತ್ತು ಮಂಡಳಿಯ ಶಿಫಾರಸ್ಸುಗಳ ಹಿನ್ನೆಲೆಯಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸತಕ್ಕದ್ದು ಮತ್ತು ಅವಶ್ಯಕವೆಂದು ಅದಕ್ಕೆ ಕಂಡುಬರುಬಹುದಾದಂತಹ ವಿಚಾರಣೆಯ ತರುವಾಯ ಪ್ರವೇಶಾವಕಾಶದಲ್ಲಿ ವ್ಯತ್ಯಾಸಗಳು ಸೇರಿದಂತೆ, ಸಂಯೋಜಿಸಲು ಅಥವಾ ಸಂಧರ್ಭಾನುಸಾರ ಸಂಯೋಜನೆಯನ್ನು ಅಥವಾ ಅದರ ಯಾವುದೇ ಭಾಗವನ್ನು ನಿರಾಕರಿಸಲು ವಿಶ್ವವಿದ್ಯಾಲಯಕ್ಕೆ ತನ್ನ ಶಿಫಾರಸ್ಸನ್ನು ಮಾಡತಕ್ಕದ್ದು.

(12) ವಿಶ್ವವಿದ್ಯಾಲಯವು ರಾಜ್ಯ ಸರ್ಕಾರದ ನಿರ್ದೇಶನಗಳನ್ನು ಸ್ವೀಕರಿಸಿದ ತರುವಾಯ ಅದರಂತೆ ಔಪಚಾರಿಕ ಆದೇಶಗಳನ್ನು ಹೊರಡಿಸತಕ್ಕದ್ದು.

(13) ಆದಾಗ್ಯೂ ಸಂಯೋಜನೆಯ ಮಂಜೂರಾತಿಯು ಭಾರತೀಯ ಕೃಷಿ ಸಂಶೋಧನಾ ಪರಿಷತ್ತು ಅಥವಾ ಸಂಬಂಧಪಟ್ಟಂತಹ ಇತರ ಪ್ರಾಧಿಕಾರಗಳು ಅಥವಾ ನಿಕಾಯಗಳ ಪೂರ್ವಾನುಮೋದನೆ ಪಡೆಯುವುದಕ್ಕೆ ಒಳಪಟ್ಟಿರತಕ್ಕದ್ದು ಮತ್ತು ನಿರ್ಧರಿಸಲಾದ ಪ್ರವೇಶಾವಕಾಶದ ಸಂಖ್ಯೆಯು, ಅಂತಹ ಪ್ರಾಧಿಕಾರಗಳು ಅಥವಾ ನಿಕಾಯಗಳು ಆ ಸಂಖ್ಯೆಯನ್ನು ನಿರ್ದಿಷ್ಟಪಡಿಸಿದ್ದರೆ ಅದನ್ನು ಮೀರತಕ್ಕದ್ದಲ್ಲ.

(14) ಸಂಯೋಜನೆಗಾಗಿ ಅಥವಾ ಪ್ರವೇಶಾವಕಾಶದ ಸಂಖ್ಯೆಯನ್ನು ನಿಗದಿಪಡಿಸುವುದಕ್ಕಾಗಿ ಅಥವಾ ಅದರ ಯಾವುದೇ ಭಾಗಕ್ಕಾಗಿ, ಅರ್ಜಿಯನ್ನು ರಾಜ್ಯ ಸರ್ಕಾರದ ಶಿಫಾರಸ್ಸಿನ ಮೇಲೆ ವಿಶ್ವವಿದ್ಯಾಲಯವು ಮಂಜೂರು ಮಾಡಿದ್ದರೆ, ವಿಶ್ವವಿದ್ಯಾಲಯವು, ನಿರ್ದಿಷ್ಟ ಷರತ್ತುಗಳೊಡನೆ ಅಥವಾ ಷರತ್ತುಗಳಿಲ್ಲದೆ ನಿರ್ದಿಷ್ಟ ಪ್ರವೇಶಾವಕಾಶದ ಸಂಖ್ಯೆಯೊಡನೆ ಯಾವ ವ್ಯಾಸಂಗಕ್ರಮಗಳ ಸಂಬಂಧದಲ್ಲಿ ಮತ್ತು ಯಾವ ಅವಧಿಗಾಗಿ, ಕಾಲೇಜನ್ನು ಅಥವಾ ವ್ಯಾಸಂಗ ಕ್ರಮವನ್ನು ಸಂಯೋಜಿಸಲಾಗಿದೆಯೋ, ಆ ವ್ಯಾಸಂಗ ಕ್ರಮಗಳನ್ನು ಮತ್ತು ಅವಧಿಯನ್ನು ಆದೇಶದಲ್ಲಿ ನಿರ್ದಿಷ್ಟಪಡಿಸತಕ್ಕದ್ದು.

(15) ಅಂತಹ ಅರ್ಜಿಯನ್ನು ಅಥವಾ ಅದರ ಯಾವುದೇ ಭಾಗವನ್ನು ರಾಜ್ಯ ಸರ್ಕಾರವು ಅಥವಾ ವಿಶ್ವವಿದ್ಯಾಲಯವು ನಿರಾಕರಿಸಿದ್ದರೆ, ಹಾಗೆ ನಿರಾಕರಿಸಲು ಕಾರಣಗಳನ್ನು ತಿಳಿಸತಕ್ಕದ್ದು.

(16) (1)ನೇ ಉಪಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಯಾವುದೇ ಅರ್ಜಿಯನ್ನು (12)ನೇ ಉಪ ಪ್ರಕರಣದ ಅಡಿಯಲ್ಲಿ ಆದೇಶವನ್ನು ಮಾಡುವುದಕ್ಕೆ ಮೊದಲು ಯಾವುದೇ ಸಮಯದಲ್ಲಿ ಅರ್ಜಿದಾರನು ಹಿಂದಕ್ಕೆ ಪಡೆಯಬಹುದು.

(17) ಪ್ರತಿಯೊಂದು ಶೈಕ್ಷಣಿಕ ವರ್ಷಕ್ಕಾಗಿ, ಪ್ರಸಕ್ತ ಇರುವ ವ್ಯಾಸಂಗ ಕ್ರಮಗಳಿಗಾಗಿ ಮತ್ತು ಹೊಸ ವ್ಯಾಸಂಗ ಕ್ರಮಗಳನ್ನು ಹೊರತುಪಡಿಸಿ ಅನುಸರಣಾ ವ್ಯಾಸಂಗ ಕ್ರಮಗಳಿಗೆ ಸಂಯೋಜನೆಯನ್ನು ನವೀಕರಿಸುವುದಕ್ಕಾಗಿ ಅಥವಾ ಮುಂದುವರೆಸುವುದಕ್ಕಾಗಿ ಮಂಜೂರಾತಿಯನ್ನು ಮಂಡಳಿಯು ಹೊಸ ಸಂಯೋಜನೆಯ ಮಂಜೂರಾತಿಗೆ ಅನ್ವಯವಾಗುವ ರೀತಿಯಲ್ಲಿಯೇ, ವಿದ್ಯಾ ವಿಷಯಕ ಪರಿಷತ್ತಿನೊಡನೆ ಸಮಾಲೋಚಿಸಿ ನೀಡಬಹುದು.

(18) ರಾಜ್ಯ ಸರ್ಕಾರವು ಪ್ರತಿಯೊಂದು ವ್ಯಾಸಂಗ ಕ್ರಮದ ಸಂಬಂಧದಲ್ಲಿ ಪ್ರವೇಶಾವಕಾಶವನ್ನು ವಾರ್ಷಿಕ ಆಧಾರದಲ್ಲಿ ನಿರ್ಧರಿಸತಕ್ಕದ್ದು.

45. ಹೊಸ ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನು ಪ್ರವೇಶ ಮಾಡಿಕೊಳ್ಳುವುದಕ್ಕೆ ನಿರ್ಬಂಧ.– (1) ಯಾವುದೇ ವಿಶ್ವವಿದ್ಯಾಲಯಕ್ಕೆ ಸಂಯೋಜನೆಯನ್ನು ಕೋರುತ್ತಿರುವ ಒಂದು ಹೊಸ ಕಾಲೇಜು ಹೊಸ ವ್ಯಾಸಂಗ ಕ್ರಮಕ್ಕೆ ಸಂಯೋಜನೆಯನ್ನು ಕೋರುತ್ತಿರುವ ಅಥವಾ ನಿರ್ದಿಷ್ಟಪಡಿಸಲಾದಂಥ ಪ್ರವೇಶಾವಕಾಶಕ್ಕಿಂತಲೂ ಹೆಚ್ಚು ಪ್ರವೇಶಾವಕಾಶವನ್ನು ಕೋರುತ್ತಿರುವ ಈಗಾಗಲೇ ಇರುವ ಒಂದು ಕಾಲೇಜು ಸಂದರ್ಭಾನುಸಾರ ಆ ಹೊಸ ಕಾಲೇಜಿಗೆ ಸಂಯೋಜನೆಯನ್ನು ಅಥವಾ ಈಗಾಗಲೇ ಇರುವ ಸಂಯೋಜಿತ ಕಾಲೇಜಿನಲ್ಲಿ ಒಂದು ಹೊಸ ವ್ಯಾಸಂಗ ಕ್ರಮವನ್ನು ಅಥವಾ ಅಂಥ ಒಂದು ವ್ಯಾಸಂಗ ಕ್ರಮದ ಸಂಬಂಧದಲ್ಲಿ ನಿರ್ದಿಷ್ಟಪಡಿಸಿದ ಪ್ರವೇಶಾವಕಾಶವನ್ನು ಬದಲಾಯಿಸಲು ವಿಶ್ವ ವಿದ್ಯಾಲಯವು ಮಂಜೂರಾತಿ ನೀಡಿದ್ದ ಹೊರತು ಅವುಗಳು ಆ ಸಂಬಂಧದಲ್ಲಿ ವಿದ್ಯಾರ್ಥಿಗಳನ್ನು ಪ್ರವೇಶ ಮಾಡಿಸಿಕೊಳ್ಳತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣದ ಉಪಬಂಧವನ್ನು ಉಲ್ಲಂಘಿಸುವ ಯಾವುದೇ ಸಂಸ್ಥೆಯು ಕರ್ನಾಟಕ ಮಾನ್ಯತೆ ಪಡೆಯದ ಮತ್ತು ಸಂಯೋಜನೆ ಹೊಂದಿರದ ವಿದ್ಯಾ ಸಂಸ್ಥೆಗಳಿಗೆ ಪ್ರವೇಶ ನಿಷೇಧ

ಅಧಿನಿಯಮ, 1992ರ (1993ರ ಕರ್ನಾಟಕ ಅಧಿನಿಯಮ 7) ಅಡಿಯಲ್ಲಿ ಕೈಗೊಳ್ಳುವ ಕ್ರಮಕ್ಕೆ ಗುರಿಯಾಗತಕ್ಕದ್ದು.

46. ಪರೀಕ್ಷೆಗಳಿಗೆ ಹಾಜರಾಗಲು ನಿರ್ಬಂಧ.– ತನ್ನ ಪ್ರವೇಶವು ಅಮಾನ್ಯವಾಗಿರುವ ಅಥವಾ ವಿಶ್ವವಿದ್ಯಾಲಯದಿಂದ ತನ್ನ ಪ್ರವೇಶವು ಅನುಮೋದಿತವಾಗಿಲ್ಲದ ಅಥವಾ ನಿರ್ದಿಷ್ಟಪಡಿಸಲಾದ ವಿದ್ಯಾರ್ಥಿಗಳ ಸಂಖ್ಯೆಗಿಂತ ಹೆಚ್ಚಿಗೆಯಾಗಿ ಕಾಲೇಜಿಗೆ ಅಥವಾ ವ್ಯಾಸಂಗ ಕ್ರಮಕ್ಕೆ ಪ್ರವೇಶ ಪಡೆದಿರುವ ಯಾವೊಬ್ಬ ವಿದ್ಯಾರ್ಥಿಯು, ಕಾಲೇಜು ಅಥವಾ ವಿಶ್ವವಿದ್ಯಾಲಯವು ನಡೆಸುವ ಪರೀಕ್ಷೆಗೆ ಹಾಜರಾಗಲು ಅರ್ಹನಾಗಿರತಕ್ಕದ್ದಲ್ಲ.

47. ಖಾಯಂ ಸಂಯೋಜನೆ.–(1) ಐದು ವರ್ಷಗಳಿಗೆ ಕಡಿಮೆ ಇಲ್ಲದ ಅವಧಿಗೆ ನಿರಂತರವಾಗಿ ಸಂಯೋಜನೆಗೊಂಡಿರುವ ಮತ್ತು ಕಾಲಕಾಲಕ್ಕೆ ವಿಶ್ವವಿದ್ಯಾಲಯವು ನಿರ್ದಿಷ್ಟಪಡಿಸಿದ ಸಂಯೋಜನೆಯ ಎಲ್ಲಾ ಷರತ್ತುಗಳನ್ನು ಪೂರೈಸಿರುವ ಮತ್ತು ವಿದ್ಯಾ ವಿಷಯದಲ್ಲಿ ಉತ್ಕೃಷ್ಟತೆಯನ್ನು ಸಾಧಿಸಿದ ಹಾಗೂ ಆಡಳಿತಾತ್ಮಕ ಗುಣಮಟ್ಟಗಳನ್ನು ಹೊಂದಿರುವ ಕಾಲೇಜು ಖಾಯಂ ಸಂಯೋಜನೆಯ ಮಂಜೂರಾತಿಗೆ ಅರ್ಹವಾಗಿರತಕ್ಕದ್ದು.

(2) 45ನೇ ಪ್ರಕರಣದ ಉಪಬಂಧಗಳು, ಯಥೋಚಿತ ವ್ಯತ್ಯಾಸಗಳೊಂದಿಗೆ ಖಾಯಂ ಸಂಯೋಜನೆಯ ಮಂಜೂರಾತಿಗೆ ಅನ್ವಯವಾಗತಕ್ಕದ್ದು.

(3) ಖಾಯಂ ಆಗಿ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡ ಕಾಲೇಜಿನ, ಆಡಳಿತಾತ್ಮಕ ಮತ್ತು ಶೈಕ್ಷಣಿಕ ಕಾರ್ಯ ವೈಖರಿಯನ್ನು ಐದು ವರ್ಷಗಳ ಅವಧಿಯಲ್ಲಿ ಕೊನೆಪಕ್ಷ ಒಂದು ಸಲದಂತೆ ಆಗಾಗ್ಗೆ, ವಿಶ್ವವಿದ್ಯಾಲಯ ಮತ್ತು ರಾಜ್ಯ ಸರ್ಕಾರಗಳು ಪರಿಶೀಲನೆ ಮಾಡತಕ್ಕದ್ದು.

(4) ಪೂರ್ವೋಕ್ತ ಉಪ ಪ್ರಕರಣಗಳಲ್ಲಿ ಏನೇ ಇದ್ದರೂ, ಖಾಯಂ ಆಗಿ ಸಂಯೋಜನೆಗೊಂಡ ಕಾಲೇಜು, (1)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಷರತ್ತುಗಳನ್ನು ಪೂರೈಸಲು ವಿಫಲವಾಗಿದ್ದಲ್ಲಿ, ಅದರ ಖಾಯಂ ಸಂಯೋಜನೆಯನ್ನು ರದ್ದುಪಡಿಸತಕ್ಕದ್ದು:

ಪರಂತು, ಸಂಬಂಧಪಟ್ಟ ಕಾಲೇಜಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ವಿಶ್ವವಿದ್ಯಾಲಯವು ಒಂದು ಅವಕಾಶಕೊಟ್ಟ ಹೊರತು ಖಾಯಂ ಸಂಯೋಜನೆಯನ್ನು ರದ್ದುಗೊಳಿಸತಕ್ಕದ್ದಲ್ಲ:

ಮತ್ತು ಪರಂತು, ಖಾಯಂ ಸಂಯೋಜನೆಯನ್ನು ರದ್ದುಗೊಳಿಸಿದ ತರುವಾಯ ಸಂಬಂಧಪಟ್ಟ ಕಾಲೇಜು, ಸಂಯೋಜನೆಯನ್ನು ವಾರ್ಷಿಕ ಆಧಾರದ ಮೇಲೆ ತಾತ್ಕಾಲಿಕವಾಗಿ ಮುಂದುವರೆಸಲು ಕೋರತಕ್ಕದ್ದು.

48. ಸಂಯೋಜನೆಯನ್ನು ಹಿಂತೆಗೆದುಕೊಳ್ಳುವುದು.– (1) ಸಂಯೋಜನೆ ಗೊಂಡ ಕಾಲೇಜು ಈ ಅಧಿನಿಯಮದ ಯಾವುದೇ ಉಪಬಂಧವನ್ನು ಪಾಲಿಸಲು ವಿಫಲವಾದರೆ ಅಥವಾ ಸಂಯೋಜನೆಯ ಯಾವುದೇ ಷರತ್ತುಗಳನ್ನು ಪಾಲಿಸಲು ವಿಫಲವಾದರೆ ಅಥವಾ ಕಾಲೇಜನ್ನು ಶಿಕ್ಷಣದ ಹಿತಾಸಕ್ತಿಗಳಿಗೆ ದಕ್ಕೆ ಉಂಟು ಮಾಡುವ ರೀತಿಯಲ್ಲಿ ನಡೆಸಿಕೊಂಡು ಬರುತ್ತಿದ್ದರೆ, ಸಂಯೋಜನೆಯ ಮೂಲಕ ಕಾಲೇಜಿಗೆ ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ ಪ್ರದತ್ತವಾದ ಹಕ್ಕುಗಳನ್ನು ಪೂರ್ಣವಾಗಿ ಅಥವಾ ಭಾಗಶ: ಹಿಂತೆಗೆದುಕೊಳ್ಳಬಹುದು ಅಥವಾ ಮಾರ್ಪಾಡು ಮಾಡಬಹುದು.

(2) ಅಂತಹ ಹಕ್ಕುಗಳನ್ನು ಹಿಂತೆಗೆದುಕೊಳ್ಳುವುದಕ್ಕೆ ಅಥವಾ ಮಾರ್ಪಾಟುಮಾಡುವುದಕ್ಕೆ ಸೂಚನೆಯನ್ನು ಮಂಡಳಿಯ ಸಭೆಯಲ್ಲಿ ಮಾತ್ರ ಮಂಡಿಸತಕ್ಕದ್ದು. ಮಂಡಳಿಯ ಪದನಿಮಿತ್ತ ಸದಸ್ಯನೂ ಒಳಗೊಂಡಂತೆ ಅಂತಹ ಸೂಚನೆಯನ್ನು ಮಂಡಿಸಲು ಉದ್ದೇಶಿಸುವ ಯಾವೊಬ್ಬ ಸದಸ್ಯನು ಯಾವ ಕಾರಣದ ಮೇಲೆ ಅಂತಹ ಸೂಚನೆಯನ್ನು ಮಂಡಿಸಲಾಗಿದೆಯೋ ಆ ಕಾರಣಗಳನ್ನು ಲಿಖಿತದಲ್ಲಿ ನಿರೂಪಿಸಿ ಅಂಥ ಒಂದು ನೋಟೀಸನ್ನು ನೀಡತಕ್ಕದ್ದು.

(3) ಸದರಿ ಸೂಚನೆಯನ್ನು ಪರಿಗಣನೆಗೆ ತೆಗೆದುಕೊಳ್ಳುವುದಕ್ಕೆ ಮೊದಲು ಮಂಡಳಿಯು, ನೋಟೀಸಿನ ಒಂದು ಪ್ರತಿಯನ್ನು, ತನ್ನ ತಿಳುವಳಿಕೆ ಪತ್ರದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಆ ಕಾಲೇಜು ಸದರಿ ಸೂಚನೆಯ ಬಗ್ಗೆ ತನ್ನ ಯಾವುದೇ ಮನವಿಯನ್ನು ಬರೆದು ಸಲ್ಲಿಸತಕ್ಕದೆಂದು ಮತ್ತು ಅದನ್ನು ಮಂಡಳಿಯು ಪರ್ಯಾಲೋಚಿಸುವುದೆಂದು ನಿರ್ದಿಷ್ಟವಾಗಿ ತಿಳಿಸಿದ ಪತ್ರದೊಂದಿಗೆ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರಿಗೆ ಕಳುಹಿಸತಕ್ಕದ್ದು.

(4) (3)ನೇ ಉಪ ಪ್ರಕರಣದಲ್ಲಿ ಹಾಗೆ ನಿರ್ದಿಷ್ಟಪಡಿಸಿದ ಅವಧಿಯನ್ನು ಅವಶ್ಯವಿದ್ದಲ್ಲಿ, ಮಂಡಳಿಯು ಸಮಂಜಸ ಸಮಯದವರೆಗೆ ವಿಸ್ತರಿಸಬಹುದು.

(5) ಮನವಿಯನ್ನು ಸ್ವೀಕರಿಸಿದ ಮೇಲೆ ಅಥವಾ ಹಿಂದಿನ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಅವಧಿಯು ಮುಗಿದ ಮೇಲೆ, ಮಂಡಳಿಯು

ಸೂಚನೆಯ ನೋಟೀಸನ್ನು, ಅದರಲ್ಲಿ ತಿಳಿಸಿದ ಕಾರಣಗಳನ್ನು ಮತ್ತು ಅದರ ಮೇಲೆ ಸಲ್ಲಿಸಿದ ಮನವಿಯನ್ನು ಪರ್ಯಾಲೋಚಿಸಿದ ತರುವಾಯ ಮತ್ತು ಈ ಸಂಬಂಧದಲ್ಲಿ ತಾನು ರಚಿಸಿದ ಮತ್ತು ಪ್ರಾಧಿಕಾರ ನೀಡಿದ ಒಂದು ಸಮಿತಿಯು ತನಗೆ ಅವಶ್ಯವೆಂದು ಕಂಡು ಬರಬಹುದಾದಂತಹ ಪರಿಶೀಲನೆಯನ್ನು ನಡೆಸಿದ ತರುವಾಯ ಮತ್ತು ಅಂತಹ ಹೆಚ್ಚಿನ ವಿಚಾರಣೆಯನ್ನು ನಡೆಸಿದ ತರುವಾಯ, ಒಂದು ನಿರ್ಣಯವನ್ನು ಅದಕ್ಕೆ ಕಾರಣಗಳನ್ನು ದಾಖಲಿಸಿ ಅಂಗೀಕರಿಸತಕ್ಕದ್ದು ಮತ್ತು ಅದನ್ನು ವಿದ್ಯಾವಿಷಯಕ ಪರಿಷತ್ತಿಗೆ ಕಳುಹಿಸಿಕೊಡತಕ್ಕದ್ದು.

(6) (5)ನೇ ಉಪ ಪ್ರಕರಣದ ಅಡಿಯಲ್ಲಿನ ಒಂದು ವರದಿಯನ್ನು ಸ್ವೀಕರಿಸಿದ ಮೇಲೆ, ವಿದ್ಯಾ ವಿಷಯಕ ಪರಿಷತ್ತು ಅದಕ್ಕೆ ಅವಶ್ಯವೆಂದು ಕಂಡುಬರಬಹುದಾದಂತಹ ಹೆಚ್ಚಿನ ವಿಚಾರಣೆ ಯಾವುದಾದರೂ ಇದ್ದರೆ ಅದನ್ನು ಮಾಡಿದ ತರವಾಯ, ಆ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ದಾಖಲಿಸತಕ್ಕದ್ದು ಮತ್ತು ಅದನ್ನು ಮಂಡಳಿಗೆ ವಾಪಸ್ಸು ಕಳುಹಿಸಿ ಕೊಡತಕ್ಕದ್ದು.

(7) ಮಂಡಳಿಯು, ವಿದ್ಯಾ ವಿಷಯಕ ಪರಿಷತ್ತಿನ ನಿರ್ಣಯವನ್ನು ಪರ್ಯಾಲೋಚಿಸಿದ ತರುವಾಯ ಸಂಯೋಜನೆಯನ್ನು ಹಿಂತೆಗೆದುಕೊಳ್ಳಬೇಕೆಂದು ಶಿಫಾರಸ್ಸು ಮಾಡಿದ ಅಂತಿಮ ನಿರ್ಣಯವನ್ನು ಅಂಗೀಕರಿಸತಕ್ಕದ್ದು. ಅಂತಹ ನಿರ್ಣಯಕ್ಕೆ ಮಂಡಳಿಯ ಸಭೆಯಲ್ಲಿ ಹಾಜರಿದ್ದ ಸದಸ್ಯರ ಮೂರನೇ ಎರಡರಷ್ಟು ಸದಸ್ಯರ ಬೆಂಬಲ ದೊರೆತ ಹೊರತು ನಿರ್ಣಯವು ಮಂಡಳಿಯಿಂದ ಅಂಗೀಕೃತವಾಗಿರುವುದಾಗಿ ಭಾವಿಸತಕ್ಕದ್ದಲ್ಲ.

(8) ಕುಲಸಚಿವರು ಪ್ರಸ್ತಾವವನ್ನು, ಸೂಚನೆಯ ನೋಟೀಸು, ಕಾಲೇಜಿನ ಉತ್ತರ, ಮಂಡಳಿಯ ಮತ್ತು ವಿದ್ಯಾ ವಿಷಯಕ ಪರಿಷತ್ತಿನ ನಿರ್ಣಯವೂ ಒಳಗೊಂಡಂತೆ ಎಲ್ಲಾ ದಸ್ತಾವೇಜುಗಳ ಸಮೇತ ತೀರ್ಮಾನ ಕೈಗೊಳ್ಳುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಒಪ್ಪಿಸತಕ್ಕದ್ದು.

(9) ರಾಜ್ಯ ಸರ್ಕಾರವು ತನಗೆ ಅವಶ್ಯವೆಂದು ಕಂಡುಬರಬಹುದಾದಂತಹ ಹೆಚ್ಚಿನ ವಿಚಾರಣೆಯನ್ನು ನಡೆಸಿದ ತರವಾಯ, ಒಂದು ನಿರ್ದಿಷ್ಟ ಶೈಕ್ಷಣಿಕ ವರ್ಷದಿಂದ ಅನ್ವಯವಾಗುವಂತೆ, ಸಂಯೋಜನೆಯನ್ನು ಪೂರ್ತಿಯಾಗಿ ಅಥವಾ ಭಾಗಶಃ ಹಿಂತೆಗೆದುಕೊಳ್ಳುವಂತೆ ಅಥವಾ ಮಾರ್ಪಾಟು

ಮಾಡುವಂತೆ ಅಥವಾ ಪ್ರಸ್ತಾವವನ್ನು ತಿರಸ್ಕರಿಸುವಂತೆ ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಬಹುದು.

(10) ವಿಶ್ವವಿದ್ಯಾಲಯವು ಅಂತಹ ನಿರ್ದೇಶನವನ್ನು ಸ್ವೀಕರಿಸಿದ ಮೇಲೆ, ಅಂತಹ ನಿರ್ದೇಶನಕ್ಕೆ ಅನುಸಾರವಾಗಿ ಔಪಚಾರಿಕ ಆದೇಶವನ್ನು ಹೊರಡಿಸತಕ್ಕದ್ದು.

(11) ಸಂಯೋಜನೆಯನ್ನು ಪೂರ್ಣವಾಗಿ ಅಥವಾ ಭಾಗಶ: ಹಿಂತೆಗೆದುಕೊಂಡ ಕಾಲೇಜಿನ ವಿದ್ಯಾರ್ಥಿಗಳಿಗೆ, ನಿರ್ದಿಷ್ಟ ವ್ಯಾಸಂಗ ಕ್ರಮದ ಸಂಬಂಧದಲ್ಲಿ ಹಾಗೆ ಸ್ಥಳಾವಕಾಶ ಕಲ್ಪಿಸಬೇಕಾದಂತಹ ವಿದ್ಯಾರ್ಥಿಗಳ ಸಂಖ್ಯೆಯಷ್ಟರ ಮಟ್ಟಿಗೆ ಪ್ರವೇಶ ಸಂಖ್ಯೆಯನ್ನು ಹೆಚ್ಚಿಸುವ ಮೂಲಕ, ವಿಶ್ವವಿದ್ಯಾಲಯವು, ಹತ್ತಿರದಲ್ಲಿರುವ ಕಾಲೇಜಿನಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಸ್ಥಳಾವಕಾಶವನ್ನು ಕಲ್ಪಿಸುವ ವ್ಯವಸ್ಥೆ ಮಾಡತಕ್ಕದ್ದು. ಅಂತಹ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ಸಂಯೋಜನೆಯನ್ನು ಹಿಂತೆಗೆದು ಕೊಂಡ ಕಾಲೇಜಿನಿಂದ ವಿಶ್ವವಿದ್ಯಾಲಯವು ಅವರನ್ನು ವರ್ಗಾಯಿಸಿದ ಕಾಲೇಜಿಗೆ ವರ್ಗಾಯಿಸತಕ್ಕದ್ದು.

49. ಕಾಲೇಜು ಅಥವಾ ವ್ಯಾಸಂಗ ಕ್ರಮವನ್ನು ಸ್ವಯಂ ಮುಚ್ಚುವಿಕೆ.– (1) ತನ್ನ ಅಸಾಮರ್ಥ್ಯದ ಅಥವಾ ಹಣಕಾಸು ದೃಷ್ಟಿಯಿಂದ ಉರ್ಜಿತವಾಗದ ಕಾರಣದಿಂದ ಅಥವಾ ಆಡಳಿತ ವ್ಯವಸ್ಥೆಯ ಕುಸಿತದ ಕಾರಣದಿಂದ ಕಾಲೇಜನ್ನು ಅಥವಾ ವ್ಯಾಸಂಗ ಕ್ರಮವನ್ನು ಮುಚ್ಚಲು ಉದ್ದೇಶಿಸಿರುವಂತಹ ಯಾವುದೇ ಕಾಲೇಜಿನ ಆಡಳಿತ ಮಂಡಳಿಯು ವಿಶ್ವವಿದ್ಯಾಲಯಕ್ಕೆ ಮತ್ತು ರಾಜ್ಯ ಸರ್ಕಾರಕ್ಕೆ, ಕಾಲೇಜನ್ನು ಮುಚ್ಚುವುದಕ್ಕೆ ಮೊದಲು ಮೂರು ತಿಂಗಳುಗಳಿಗಿಂತ ಕಡಿಮೆ ಇಲ್ಲದಂತೆ, ಆ ಬಗ್ಗೆ ಕಾರಣಗಳನ್ನು ತಿಳಿಸಿ, ನೋಟೀಸನ್ನು ನೀಡತಕ್ಕದ್ದು.

(2) ಕಾಲೇಜಿನ ಅಥವಾ ವ್ಯಾಸಂಗ ಕ್ರಮದ ಮುಚ್ಚುವಿಕೆಯ ಅರ್ಜಿಯನ್ನು ವಿದ್ಯಾವಿಷಯಕ ಪರಿಷತ್ತು ಮತ್ತು ಮಂಡಳಿಗಳು ಪರಿಗಣಿ ಸತಕ್ಕದ್ದು ಮತ್ತು ಅವು ಅದರ ಮೇಲೆ ಸೂಕ್ತ ಗೊತ್ತುವಳಿಗಳನ್ನು ಅಂಗೀಕರಿಸತಕ್ಕದ್ದು.

(3) ಕುಲಸಚಿವರು, ಅರ್ಜಿಯನ್ನು ಮತ್ತು ವಿದ್ಯಾವಿಷಯಕ ಪರಿಷತ್ತಿನ ಮತ್ತು ಮಂಡಳಿಯ ಗೊತ್ತುವಳಿಗಳನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು, ಅದು ಅವುಗಳನ್ನು ಪರಿಗಣಿಸಿದ ತರುವಾಯ ಮುಚ್ಚುವ ಬಗ್ಗೆ ಅನುಮತಿ

ನೀಡಬೇಕೆಂದು ಅಥವಾ ಮುಚ್ಚುವಿಕೆಗೆ ಅನುಮತಿ ನಿರಾಕರಿಸಬೇಕೆಂದು ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡತಕ್ಕದ್ದು ಮತ್ತು ವಿಶ್ವವಿದ್ಯಾಲಯವು ಅಂಥ ನಿರ್ದೇಶನಗಳನ್ನು ಸ್ವೀಕರಿಸಿದ ತರುವಾಯ ಅದಕ್ಕನುಸಾರ ಆದೇಶಗಳನ್ನು ಹೊರಡಿಸತಕ್ಕದ್ದು.

(4) ಆಡಳಿತ ಮಂಡಳಿಯು, ಶೈಕ್ಷಣಿಕ ವರ್ಷದ ಚಾಲ್ತಿ ಅವಧಿಯಲ್ಲಿ ಮತ್ತು ವಿಶ್ವವಿದ್ಯಾಲಯವು ಸಂಬಂಧಪಟ್ಟ ವ್ಯಾಸಂಗಕ್ರಮದ ವಾರ್ಷಿಕ ಪರೀಕ್ಷೆಗಳನ್ನು ನಡೆಸುವವರೆಗೆ ಮತ್ತು ವಿಶ್ವವಿದ್ಯಾಲಯವು ಮುಚ್ಚಬಹುದೆಂದು ಒಂದು ಔಪಚಾರಿಕ ಆದೇಶವನ್ನು ಹೊರಡಿಸುವವರೆಗೆ ಕಾಲೇಜನ್ನು ಅಥವಾ ವ್ಯಾಸಂಗ ಕ್ರಮವನ್ನು ಮುಚ್ಚತಕ್ಕದ್ದಲ್ಲ.

(5) ಹಾಗೆ ಮುಚ್ಚಲಾದ ಕಾಲೇಜುಗಳ ವಿದ್ಯಾರ್ಥಿಗಳಿಗೆ ಅವರ ವರ್ಗಾವಣೆಯ ನಂತರ, ವಿಶ್ವವಿದ್ಯಾಲಯವು, ಹತ್ತಿರವಿರುವ ಕಾಲೇಜಿನಲ್ಲಿ ಸಂಬಂಧಪಟ್ಟ ವ್ಯಾಸಂಗಕ್ರಮದಲ್ಲಿ ಪ್ರವೇಶ ಸಂಖ್ಯೆಯನ್ನು ಅಂಥ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ನೀಡುವಷ್ಟರಮಟ್ಟಿಗೆ ಹೆಚ್ಚಿಸಿ ಪ್ರವೇಶವನ್ನು ನೀಡತಕ್ಕದ್ದು ಮತ್ತು ಅಂಥ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ಹಾಗೆ ಮುಚ್ಚಲ್ಪಟ್ಟ ಕಾಲೇಜಿನಿಂದ, ಯಾವ ಕಾಲೇಜಿನಲ್ಲಿ ಅಂಥ ವಿದ್ಯಾರ್ಥಿಗಳು ಪ್ರವೇಶವನ್ನು ಪಡೆದಿರುವರೋ ಅಲ್ಲಿಗೆ ವರ್ಗಾಯಿಸತಕ್ಕದ್ದು.

(6) (1)ನೇ ಉಪಪ್ರಕರಣದ ಅಡಿಯಲ್ಲಿ ನೋಟೀಸಿನ ಅವಧಿಯು ಮುಕ್ತಾಯವಾದ ತರುವಾಯ ತೊಂಬತ್ತು ದಿನಗಳೊಳಗೆ, ಹಾಗೆ ಮುಚ್ಚುವ ಬಗ್ಗೆ ಅನುಮತಿ ನೀಡುವ ಅಥವಾ ನಿರಾಕರಿಸುವ ಯಾವುದೇ ನಿರ್ದೇಶನವನ್ನು ರಾಜ್ಯ ಸರ್ಕಾರವು ನೀಡದಿದ್ದರೆ, (4)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಕಾಲೇಜನ್ನು ಅಥವಾ ಸಂದರ್ಭಾನುಸಾರ ವ್ಯಾಸಂಗಕ್ರಮವನ್ನು ಮುಚ್ಚಲು ಆಡಳಿತ ಮಂಡಳಿಗೆ ಅನುಮತಿ ನೀಡಲಾಗಿದೆ ಎಂದು ಭಾವಿಸತಕ್ಕದ್ದು.

50. ಕೆಲವು ಸಂಸ್ಥೆಗಳಿಗೆ ಮಾನ್ಯತೆ.- (1) ಸಂಶೋಧನೆ ಅಥವಾ ನಿರ್ದಿಷ್ಟಪಡಿಸಿದ ಅಧ್ಯಯನಗಳನ್ನು ಅಥವಾ ವಿಶೇಷ ಅಧ್ಯಯನಗಳನ್ನು ನಡೆಸುವ ಕಾಲೇಜುಗಳನ್ನು ಹೊರತುಪಡಿಸಿ, ವಿಶ್ವವಿದ್ಯಾಲಯ ಪ್ರದೇಶದ ಒಳಗೆ ಅಥವಾ ಹೊರಗೆ ಇರುವ ಯಾವುದೇ ಸಂಸ್ಥೆಯನ್ನು, ಶಾಸನಗಳ ಮೂಲಕ ನಿಯಮಿಸಬಹುದಾದಂಥ ಉದ್ದೇಶಕ್ಕಾಗಿ ಮತ್ತು ಅಂಥ

ವಿಧಾನದಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು, ಮಾನ್ಯತೆ ಪಡೆದ ಸಂಸ್ಥೆಯೆಂದು ಮಂಡಳಿಯು ಮಾನ್ಯತೆ ನೀಡಬಹುದು.

(2) ಯಾವುದೇ ಅಂಥ ಮಾನ್ಯತೆಯನ್ನು ಶಾಸನಗಳ ಮೂಲಕ ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಕಾರಣಗಳಿಗಾಗಿ ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾಗಲಿ ಹಿಂತೆಗೆದುಕೊಳ್ಳ ಬಹುದು ಅಥವಾ ಮಾರ್ಪಾಟು ಮಾಡಬಹುದು.

51. ಕಾಲೇಜುಗಳ ಪರಿವೀಕ್ಷಣೆ .- (1) ಖಾಯಂ ಆಗಿ ಸಂಯೋಜನೆಗೊಂಡ ಕಾಲೇಜುಗಳೂ ಒಳಗೊಂಡಂತೆ ಸಂಯೋಜನೆಗೊಂಡ ಪ್ರತಿಯೊಂದು ಕಾಲೇಜು, ಮಂಡಳಿಯು ವಿದ್ಯಾವಿಷಯಕ ಪರಿಷತ್ತಿನೊಡನೆ ಸಮಾಲೋಚನೆ ನಡೆಸಿದ ತರುವಾಯ, ಆ ಕಾಲೇಜಿನ ಅಥವಾ ಸಂಸ್ಥೆಯ ದಕ್ಷತೆಯನ್ನು ಮತ್ತು ಅದು ಸಾಧಿಸಿದ ಶೈಕ್ಷಣಿಕ ಗುಣಮಟ್ಟವನ್ನು ನಿರ್ಣಯಿಸುವುದಕ್ಕೆ ಸಾಧ್ಯವಾಗುವಂತೆ ಅಗತ್ಯಪಡಿಸಬಹುದಾದಂಥ ವರದಿಗಳನ್ನು, ವಿವರಣ ಪಟ್ಟಿಕೆಗಳನ್ನು ಮತ್ತು ಇತರ ಮಾಹಿತಿಯನ್ನು ಕುಲಸಚಿವರಿಗೆ ಒದಗಿಸತಕ್ಕದ್ದು.

(2) ಮಂಡಳಿಯು, ಅಂಥ ಪ್ರತಿಯೊಂದು ಕಾಲೇಜನ್ನು ಈ ಉದ್ದೇಶಕ್ಕಾಗಿ ರಚಿಸಿದ ಒಂದು ಸಮಿತಿಯು ಕಾಲಕಾಲಕ್ಕೆ ಪರಿವೀಕ್ಷಣೆ ನಡೆಸುವಂತೆ ಮಾಡತಕ್ಕದ್ದು.

(3) ಮಂಡಳಿಯು, ಹಾಗೆ ಪರಿವೀಕ್ಷಣೆ ನಡೆಸಿದ ಮೇಲೆ ಯಾವುದೇ ಕಾಲೇಜನ್ನು, ನಿರ್ದಿಷ್ಟಪಡಿಸಿದ ಅವಧಿಯೊಳಗೆ, ಯಾವುವೇ ವಿಷಯಗಳ ಸಂಬಂಧದಲ್ಲಿ ತನಗೆ ಅವಶ್ಯವೆಂದು ಕಂಡುಬರಬಹುದಾದಂಥ ಕ್ರಮವನ್ನು ಕೈಗೊಳ್ಳಲು ಕೋರಬಹುದು.

(4) ಪ್ರತಿಯೊಂದು ಕಾಲೇಜು, ವಿಶ್ವವಿದ್ಯಾಲಯವು ವಿದ್ಯಾವಿಷಯಕ್ಕೆ ಮತ್ತು ಆಡಳಿತಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳ ಬಗ್ಗೆ ಮತ್ತು ಅದಕ್ಕೆ ಪೂರಕವಾದ ವಿಷಯಗಳ ಬಗ್ಗೆ ಕಾಲಕಾಲಕ್ಕೆ ಹೊರಡಿಸುವ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

ಅಧ್ಯಾಯ – VIII

ಶಾಸನಗಳು ಮತ್ತು ವಿನಿಯಮಗಳು

52. ಶಾಸನಗಳು.– ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ವಿಶ್ವವಿದ್ಯಾಲಯದ ಶಾಸನಗಳು, ವಿಶ್ವವಿದ್ಯಾಲಯದ ವ್ಯವಹಾರಗಳಿಗೆ ಸಂಬಂಧಪಟ್ಟ ಯಾವುದೇ ವಿಷಯಕ್ಕೆ ಉಪಬಂಧ ಕಲ್ಪಿಸಬಹುದು ಮತ್ತು ವಿಶೇಷವಾಗಿ, ಈ ಮುಂದಿನವುಗಳಿಗೆ ಉಪಬಂಧ ಕಲ್ಪಿಸತಕ್ಕದ್ದು, ಎಂದರೆ:–

1) ಪ್ರಾಧಿಕಾರಗಳ ರಚನೆ, ಅಧಿಕಾರಗಳು ಮತ್ತು ಕರ್ತವ್ಯಗಳು;
2) ವಿಶ್ವವಿದ್ಯಾಲಯದ ವಿದ್ಯಾವಿಷಯಕ ಜೀವನವನ್ನು ಉತ್ತಮಗೊಳಿಸಲು ಅವಶ್ಯವಾದ ಅಥವಾ ಅಪೇಕ್ಷಣೀಯವಾದ ಇತರ ನಿಕಾಯಗಳ ಅಥವಾ ಸಮಿತಿಗಳ ರಚನೆ, ಸಂಯೋಜನೆ ಮತ್ತು ಪ್ರಕಾರ್ಯಗಳು;
3) ಕುಲಪತಿಯವರನ್ನು ಹೊರತುಪಡಿಸಿ ವಿಶ್ವವಿದ್ಯಾಲಯದ ಅಧಿಕಾರಿಗಳ ಪದನಾಮಗಳು, ಅಧಿಕಾರಗಳು, ಪ್ರಕಾರ್ಯಗಳು, ಕರ್ತವ್ಯಗಳು ಮತ್ತು ನೇಮಕಾತಿಯ ರೀತಿ ಮತ್ತು ಆಯ್ಕೆಗಳು ಮತ್ತು ಸೇವೆಯ ನಿಬಂಧನೆಗಳು ಮತ್ತು ಷರತ್ತುಗಳು;
4) ವಿಶ್ವವಿದ್ಯಾಲಯದ ಬೋಧಕರ ಮತ್ತು ಇತರ ಸಿಬ್ಬಂದಿಗಳ ವರ್ಗೀಕರಣ, ವಿದ್ಯಾರ್ಹತೆ ಮತ್ತು ನೇಮಕಾತಿಯ ರೀತಿ, ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಹಾಗೂ ಕರ್ತವ್ಯಗಳು;
5) ವಿಶ್ವವಿದ್ಯಾಲಯಗಳ ಫ್ಯಾಕಲ್ಟಿಗಳು, ಇಲಾಖೆಗಳು, ಸಂಶೋಧನಾ ಸಂಸ್ಥೆಗಳು, ಕೇಂದ್ರಗಳು ಮತ್ತು ಇತರ ಘಟಕಗಳ ಸ್ಥಾಪನೆ, ಸಮ್ಮಿಲನ, ಉಪವಿಭಜನೆ ಅಥವಾ ರದ್ದತಿ;
6) ವಿಶ್ವವಿದ್ಯಾಲಯದ ಅಧಿಕಾರಿಗಳು, ಬೋಧಕರು ಮತ್ತು ಇತರ ಸಿಬ್ಬಂದಿಗಳ ಪ್ರಯೋಜನಕ್ಕಾಗಿ ವಿಶ್ರಾಂತಿ ವೇತನ ಮತ್ತು ವಿಮಾ ಯೋಜನೆಗಳ ರಚನೆ ಮತ್ತು ಅಂಥ ಯೋಜನೆಗಳ ನಿಯಮಗಳು, ನಿಬಂಧನೆಗಳು ಮತ್ತು ಷರತ್ತುಗಳು;
7) ಪದವಿ ಮತ್ತು ಡಿಪ್ಲೋಮಾಗಳನ್ನು ಪ್ರದಾನ ಮಾಡಲು ಘಟಕೋತ್ಸವಗಳನ್ನು ನಡೆಸುವುದು;

8) ಗೌರವ ಪದವಿಗಳು ಮತ್ತು ವಿದ್ಯಾವಿಷಯಕ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು ಮತ್ತು ಹಿಂಪಡೆಯುವುದು;
9) ವಿಶ್ವವಿದ್ಯಾಲಯದಡಿಯಲ್ಲಿ, ನೇಮಕವಾದ ಅಧಿಕಾರಿಗಳು, ಬೋಧಕರು ಮತ್ತು ಇತರ ವ್ಯಕ್ತಿಗಳ ಸೇವಾಷರತ್ತುಗಳು ಸಂದಾಯಮಾಡಬೇಕಾದ ಪರಿಶ್ರಮಧನ ಮತ್ತು ಪ್ರಯಾಣ ಮತ್ತು ದಿನ ಭತ್ಯೆಗಳೂ ಸೇರಿದಂತೆ ಭತ್ಯೆಗಳು;
10) ಪರೀಕ್ಷಾ ನಿಕಾಯಗಳು ಮತ್ತು ಪರೀಕ್ಷಕರ ನೇಮಕಾತಿಯ ಷರತ್ತುಗಳು ಮತ್ತು ವಿಧಾನ;
11) ವಿಶ್ವವಿದ್ಯಾಲಯವು ಸ್ಥಾಪಿಸಿದ ಅಥವಾ ನಿರ್ವಹಿಸುವ ಕಾಲೇಜುಗಳು, ಕೇಂದ್ರಗಳು, ವಿಭಾಗಗಳು, ಇಲಾಖೆಗಳು, ವಲಯ ಮತ್ತು ಪ್ರಾದೇಶಿಕ ಸಂಸ್ಥೆಗಳು, ಕೃಷಿ ವಿಜ್ಞಾನ ಕೇಂದ್ರಗಳು ಮತ್ತು ಇತರ ಸಂಸ್ಥೆಗಳ ನಿರ್ವಹಣೆ;
12) ವಿಶ್ವವಿದ್ಯಾಲಯದ ಅಧಿಕಾರಿಗಳು, ಬೋಧಕರು ಮತ್ತು ಇತರ ಸಿಬ್ಬಂದಿಗಳ ನೇಮಕಾತಿಗಾಗಿ ಆಯ್ಕೆ ಸಮಿತಿಗಳ ರಚನೆ;
13) ಈ ಅಧಿನಿಯಮದ ಮೂಲಕ ಶಾಸನಗಳ ಉಪಬಂಧ ಕಲ್ಪಿಸಬೇಕಾದ ಇತರ ಎಲ್ಲಾ ವಿಷಯಗಳು.

53. ಶಾಸನಗಳ ರಚನೆ.– (1) ಇನ್ನು ಮುಂದೆ ಉಪಬಂಧಿಸಿದ ರೀತಿಯಲ್ಲಿ ಮಂಡಳಿಯು ಯಾವುದೇ ಶಾಸನವನ್ನು ರಚಿಸಬಹುದು, ತಿದ್ದುಪಡಿ ಮಾಡಬಹುದು ಅಥವಾ ನಿರಸನಗೊಳಿಸಬಹುದು.

(2) ಈ ಅಧಿನಿಯಮದಡಿಯಲ್ಲಿ ರಚಿಸಿದ ಶಾಸನಗಳನ್ನು ಮಂಡಳಿಯು ಪ್ರಸ್ತಾಪಿಸತಕ್ಕದ್ದು ಮತ್ತು ಸರ್ಕಾರದ ಮೂಲಕ ಕುಲಾಧಿಪತಿಯವರಿಗೆ ಅವರ ಅನುಮತಿ ಕೋರಿ ಸಲ್ಲಿಸತಕ್ಕದ್ದು ಮತ್ತು ಕುಲಾಧಿಪತಿಯವರ ಅನುಮತಿ ಪಡೆದ ಮತ್ತು ಸರ್ಕಾರಿ ರಾಜ್ಯಪತ್ರದಲ್ಲಿ ಅದು ಪ್ರಕಟಣೆಯಾದ ತರುವಾಯ ಮಾತ್ರವೇ ಇದು ಜಾರಿಗೆ ಬರತಕ್ಕದ್ದು.

(3) ಈ ಅಧಿನಿಯಮದಡಿಯಲ್ಲಿ ರಚಿಸಲಾದ ಎಲ್ಲಾ ಶಾಸನಗಳು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಗೊಳ್ಳತಕ್ಕದ್ದು.

54. ವಿನಿಯಮಗಳು.– (1) ವಿಶ್ವವಿದ್ಯಾಲಯದ ಪ್ರಾಧಿಕಾರಗಳು ಈ ಅಧಿನಿಯಮಕ್ಕೆ ಮತ್ತು ಶಾಸನಗಳಿಗೆ ಸುಸಂಗತವಾದ ವಿನಿಯಮಗಳನ್ನು,–

(ಎ) ತಮ್ಮ ಸಭೆಗಳ ಕಾರ್ಯ ವಿಧಾನ ಮತ್ತು ಕೋರಂಗಾಗಿ ಅಗತ್ಯವಿರುವ ಸದಸ್ಯರ ಸಂಖ್ಯೆ ನಿಗದಿಪಡಿಸುವುದಕ್ಕಾಗಿ:

(ಬಿ) ಈ ಅಧಿನಿಯಮ ಅಥವಾ ಶಾಸನಗಳ ಪ್ರಕಾರ ವಿನಿಯಮಗಳ ಮೂಲಕ ನಿಯಂತ್ರಿಸಬೇಕಾದ ವಿಷಯಗಳನ್ನು ಉಪಬಂಧಿಸುವುದಕ್ಕಾಗಿ:

(ಸಿ) ಈ ಅಧಿನಿಯಮ ಮತ್ತು ಶಾಸನಗಳಿಂದ ಉಪಬಂಧಿಸಿರದ ಮತ್ತು ಪ್ರಾಧಿಕಾರಗಳಿಗೇ ಪೂರ್ಣವಾಗಿ ಸಂಬಂಧಪಟ್ಟ ಯಾವುದೇ ಇತರ ವಿಷಯಗಳಿಗೆ ಉಪಬಂಧ ಕಲ್ಪಿಸುವುದಕ್ಕಾಗಿ:

– ರಚಿಸಬಹುದು.

(2) ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರವು ರಚಿಸಿದ ವಿನಿಯಮಗಳು, ಈ ಬಗ್ಗೆ ಮಂಡಳಿಯು ಕಾಲದಿಂದ ಕಾಲಕ್ಕೆ ನೀಡುವ ನಿರ್ದೇಶನಗಳಿಗೆ ಒಳಪಟ್ಟಿರತಕ್ಕದ್ದು.

(3) ವಿದ್ಯಾವಿಷಯಕ ಪರಿಷತ್ತು, ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳಿಗೊಳಪಟ್ಟು, ವ್ಯಾಸಂಗ ಕ್ರಮಗಳು, ಪರೀಕ್ಷಾ ಪದ್ಧತಿ, ಶೈಕ್ಷಣಿಕ ಕರ್ತವ್ಯಗಳ ಕಾಲಾನುಕ್ರಮ, ವಿಶ್ವವಿದ್ಯಾಲಯದ ಪದವಿಗಳು ಮತ್ತು ಡಿಪ್ಲೊಮಾಗಳನ್ನು ನೀಡುವುದು ಮತ್ತು ಶಿಕ್ಷಣ ನಿರ್ದೇಶಕರಿಗೆ ಸಂಬಂಧಿಸಿದ ಇತರ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸುವುದಕ್ಕಾಗಿ ವಿನಿಯಮಗಳನ್ನು ರಚಿಸತಕ್ಕದ್ದು.

(4) ವಿದ್ಯಾವಿಷಯಕ ಪರಿಷತ್ತು, ಹಿಂದಿನ ಉಪಪ್ರಕರಣಗಳ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಧಕ್ಕೆಯಾಗದಂತೆ, ವಿನಿಯಮಗಳನ್ನು,–

(ಎ) ಪದವಿಗಳು ಮತ್ತು ಡಿಪ್ಲೊಮಾಗಳನ್ನು ಪ್ರದಾನಮಾಡಲು ಘಟಕೋತ್ಸವಗಳನ್ನು ನಡೆಸುವುದಕ್ಕಾಗಿ;

(ಬಿ) ಗೌರವ ಪದವಿಗಳು, ವಿದ್ಯಾ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು, ಪದವಿ ಹಿಂಪಡೆಯುವುದಕ್ಕಾಗಿ ;

(ಸಿ) ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳ ಸ್ಥಾಪನೆ ಮತ್ತು ರದ್ಧತಿಗಾಗಿ;

(ಡಿ) ಫೆಲೋಶಿಪ್‌ಗಳು, ಸ್ಕಾಲರ್‌ಶಿಪ್‌ಗಳು, ಸ್ಟೈಪೆಂಡುಗಳು, ಶಿಷ್ಯವೇತನಗಳು, ಪದಕಗಳು ಮತ್ತು ಪ್ರಶಸ್ತಿಗಳನ್ನು ಸ್ಥಾಪಿಸುವುದು ಮತ್ತು ಅವುಗಳನ್ನು ನೀಡುವ ಬಗ್ಗೆ ಷರತ್ತುಗಳಿಗಾಗಿ;

(ಇ) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಪ್ರವೇಶ ಮತ್ತು ಅದರ ಪಟ್ಟಿಯಲ್ಲಿ ಹೆಸರು ಸೇರಿಸುವ ಮತ್ತು ವಿದ್ಯಾರ್ಥಿಗಳಾಗಿ ಮುಂದುವರಿಸುವ ಮತ್ತು ಪಟ್ಟಿಯಿಂದ ವಿದ್ಯಾರ್ಥಿಗಳನ್ನು ಬಿಟ್ಟುಬಿಡುವ ಬಗ್ಗೆ ಷರತ್ತುಗಳು ಮತ್ತು ಪ್ರಕ್ರಿಯೆಗಾಗಿ;

(ಎಫ್) ವಿಶ್ವವಿದ್ಯಾಲಯವು ಚಾರ್ಜು ಮಾಡಬಹುದಾದ ಶುಲ್ಕಕ್ಕಾಗಿ;

(ಜಿ) ವಿಶ್ವವಿದ್ಯಾಲಯದ ಎಲ್ಲಾ ಪದವಿಗಳು, ಡಿಪ್ಲೊಮಾಗಳು ಮತ್ತು ಪ್ರಮಾಣ ಪತ್ರಗಳಿಗಾಗಿ ರಚಿಸಲಾಗುವ ವ್ಯಾಸಂಗಕ್ರಮಗಳಿಗಾಗಿ;

(ಎಚ್) ವಿಶ್ವವಿದ್ಯಾಲಯದ ಪದವಿಗಳು, ಡಿಪ್ಲೊಮಾಗಳು ಅಥವಾ ಇತರ ವ್ಯಾಸಂಗಕ್ರಮಗಳು ಮತ್ತು ಪರೀಕ್ಷೆಗಳಿಗೆ ವಿದ್ಯಾರ್ಥಿಗಳು ಪ್ರವೇಶಿಸಲು ಷರತ್ತುಗಳು ಹಾಗೂ ಪದವಿಗಳು ಮತ್ತು ಡಿಪ್ಲೊಮಾಗಳನ್ನು ಪಡೆಯುವುದಕ್ಕಾಗಿ ಅಗತ್ಯವಾದ ಅರ್ಹತೆಗಾಗಿ;

(ಐ) ಪದವಿಗಳು ಮತ್ತು ಇತರ ವಿದ್ಯಾ ಪ್ರಶಸ್ತಿಗಳನ್ನು ಪ್ರದಾನ ಮಾಡುವ ಷರತ್ತುಗಳಿಗಾಗಿ;

(ಜೆ) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ಕಾಪಾಡುವುದಕ್ಕಾಗಿ;

(ಕೆ) ವಿದ್ಯಾರ್ಥಿನಿಯರ ವಸತಿ, ಶಿಸ್ತು ಮತ್ತು ಅವರಿಗೆ ಬೋಧನೆಗೆ ಯಾವುದಾದರೂ ವಿಶೇಷ ಏರ್ಪಾಡುಗಳನ್ನು ಮಾಡುವುದಕ್ಕಾಗಿ ಮತ್ತು ವಿದ್ಯಾರ್ಥಿನಿಯರಿಗಾಗಿಯೇ ವಿಶೇಷ ವ್ಯಾಸಂಗಕ್ರಮಗಳಿಗೆ ಉಪಬಂಧಕಲ್ಪಿಸುವುದಕ್ಕಾಗಿ;

(ಎಲ್) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ನಿವಾಸದ ಷರತ್ತುಗಳು ಮತ್ತು ವಿದ್ಯಾರ್ಥಿನಿಲಯಗಳ ನಿವಾಸಿಸುವುದಕ್ಕಾಗಿ ಶುಲ್ಕವನ್ನು ವಿಧಿಸುವುದಕ್ಕಾಗಿ;

(ಎಂ) ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳ ಮಾನ್ಯತೆ ಮತ್ತು ನಿರ್ವಹಣೆಗಾಗಿ;

- ರಚಿಸತಕ್ಕದ್ದು.

ಅಧ್ಯಾಯ – IX

ಸಂಕೀರ್ಣ

55. ಕಾರ್ಯಗಳ ಹಾಗೂ ವ್ಯವಹರಣೆಗಳ ಸಿಂಧುತ್ವದ ಉಳಿಸುವಿಕೆಗಳು.– ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ವ್ಯವಹರಣೆಗಳನ್ನು ಕೇವಲ ಈ ಮುಂದಿನ ಕಾರಣಗಳಿಗಾಗಿ ಪ್ರಶ್ನಿಸತಕ್ಕದ್ದಲ್ಲ, ಎಂದರೆ:–

(i) ಯಾವುದೇ ಪ್ರಾಧಿಕಾರದ ರಚನೆಯಲ್ಲಿ ಯಾವುದೇ ಖಾಲಿಸ್ಥಾನ ಅಥವಾ ದೋಷ ಇರುವುದು, ಅಥವಾ

(ii) ಪ್ರಕರಣದ ಗುಣಾಂಶಗಳಿಗೆ ಬಾಧೆ ಉಂಟುಮಾಡದ ಆ ಕಾರ್ಯ ಅಥವಾ ವ್ಯವಹರಣೆಗಳಲ್ಲಿರುವ ಯಾವುದೇ ದೋಷ ಅಥವಾ ಕ್ರಮಬಾಹಿರತೆ.

56. ವಿದ್ಯಾರ್ಥಿಗಳ ವಾಸಸ್ಥಳ.– ವಿಶ್ವವಿದ್ಯಾಲಯವು ನಿರ್ವಹಿಸುವ ಅಥವಾ ಕುಲಪತಿಯವರು ಅನುಮೋದಿಸಿದ ವಾಸಸ್ಥಳದಲ್ಲಿ ವಿದ್ಯಾರ್ಥಿಗಳು ನಿಯಮಿಸಲಾದಂಥ ಷರತ್ತುಗಳಿಗೊಳಪಟ್ಟು ವಾಸಿಸತಕ್ಕದ್ದು. ಆದಾಗ್ಯೂ, ವಿಶ್ವವಿದ್ಯಾಲಯದಲ್ಲಿ ಅಂಥ ವಾಸಸ್ಥಳವು ದೊರಕದಿದ್ದಲ್ಲಿ ವಿಶ್ವವಿದ್ಯಾಲಯದ ಕುಲಪತಿಯವರು ಅಥವಾ ಅಧಿಕೃತರಾದ ಒಬ್ಬ ಅಧಿಕಾರಿಯು ವಿದ್ಯಾರ್ಥಿಗಳು ತಮ್ಮ ತಂದೆ ತಾಯಿಯವರೊಂದಿಗೆ ಅಥವಾ ಖಾಸಗಿ ವಾಸಸ್ಥಳಗಳಲ್ಲಿ ವಾಸಿಸಲು ಅನುಮತಿಸಬಹುದು.

57. ವಾರ್ಷಿಕ ವರದಿ.– ವಿಶ್ವವಿದ್ಯಾಲಯದ ವಾರ್ಷಿಕ ವರದಿಯನ್ನು ಕುಲಸಚಿವರು ಅಥವಾ ಕುಲಪತಿಯವರ ನಿರ್ದೇಶನಗಳಡಿಯಲ್ಲಿ ಇತರ ಯಾವೊಬ್ಬ ಅಧಿಕಾರಿಯು ಹಣಕಾಸು ವರ್ಷದ ಮುಕ್ತಾಯದಿಂದ ಆರು

ತಿಂಗಳೊಳಗೆ ತಯಾರಿಸತಕ್ಕದ್ದು ಮತ್ತು ಇದನ್ನು ಪರಿಗಣನೆಗೆ ತೆಗೆದುಕೊಳ್ಳುವ ಸಭೆಯು ನಡೆಯುವುದಕ್ಕೆ ಒಂದು ತಿಂಗಳ ಮೊದಲು ಮಂಡಳಿಯ ಸದಸ್ಯರುಗಳಿಗೆ ಪರಿಚಲನೆ ಮಾಡತಕ್ಕದ್ದು. ಮಂಡಳಿಯು ವಾರ್ಷಿಕ ವರದಿಯ ಪರಿಗಣನೆಯ ತರುವಾಯ ಅದರ ಪ್ರತಿಯನ್ನು ಸರ್ಕಾರದ ಮುಂದಿಡತಕ್ಕದ್ದು, ಅದನ್ನು ವಿಧಾನಮಂಡಲದ ಎರಡೂ ಸದನಗಳ ಮುಂದೆ ಮಂಡಿಸತಕ್ಕದ್ದು.

58. ಅಧಿಕಾರಗಳ ಪ್ರತ್ಯಾಯೋಜನೆ.- ಕುಲಪತಿಯವರು, ಆದೇಶದ ಮೂಲಕ, ಈ ಅಧಿನಿಯಮ ಅಥವಾ ಅದರಡಿಯಲ್ಲಿ ರಚಿಸಲಾಗಿರುವ ಶಾಸನಗಳಡಿಯಲ್ಲಿ ತಾನು ಚಲಾಯಿಸಬಹುದಾದ ಅಧಿಕಾರಗಳನ್ನು ಕುಲಪತಿ ಯವರು ಸರಿಯಾಗಿದೆಯೆಂದು ಭಾವಿಸಬಹುದಾದಂಥ ಷರತ್ತುಗಳು ಮತ್ತು ಮಿತಿಗಳಿಗೊಳಪಟ್ಟು ಯಾವುದೇ ಪ್ರಾಧಿಕಾರ, ಅಧಿಕಾರಿ, ಕಾಲೇಜುಗಳ ಮುಖ್ಯಸ್ಥರು, ಇಲಾಖೆಗಳು, ಸಂಸ್ಥೆಗಳು ಅಥವಾ ಘಟಕಗಳು ಅಥವಾ ಕಚೇರಿಗೆ ಪ್ರತ್ಯಾಯೋಜಿಸಬಹುದು.

59. ಅಡ್-ಹಾಕ್ ಸಮಿತಿಗಳ ರಚನೆ.- ಈ ಅಧಿನಿಯಮದಲ್ಲಿ ಏನೇ ಇದ್ದರೂ ಮತ್ತು ಈ ಅಧಿನಿಯಮ ಅಥವಾ ಶಾಸನಗಳು ಅಥವಾ ವಿನಿಯ ಮಗಳ ಉಪಬಂಧಗಳನ್ವಯ ವಿಶ್ವವಿದ್ಯಾಲಯಗಳ ಪ್ರಾಧಿಕಾರಗಳು ಅಥವಾ ನಿಕಾಯಗಳು ರಚನೆಯಾಗುವವರೆಗೆ ಕುಲಾಧಿಪತಿಯವರ ಪೂರ್ವಾನುಮೋ ದನೆಗೊಳಪಟ್ಟು ಕುಲಪತಿಯವರು, ಈ ಅಧಿನಿಯಮ ಅಥವಾ ಶಾಸನಗಳು ಅಥವಾ ವಿನಿಯಮಗಳಡಿಯಲ್ಲಿನ ಅಂಥ ಪ್ರಾಧಿಕಾರಗಳ ಅಥವಾ ನಿಕಾಯ ಗಳ ಯಾವುದೇ ಅಧಿಕಾರಗಳನ್ನು ಚಲಾಯಿಸಲು, ಪ್ರಕಾರ್ಯಗಳನ್ನು ನಿರ್ವಹಿಸಲು ಮತ್ತು ಕರ್ತವ್ಯಗಳನ್ನು ಮಾಡಲು ತಾತ್ಕಾಲಿಕವಾಗಿ ಅಡ್-ಹಾಕ್ ಸಮಿತಿಗಳನ್ನು ನೇಮಿಸಬಹುದು.

60. ಪ್ರಾಧಿಕಾರಗಳು ಅಥವಾ ನಿಕಾಯಗಳ ಸ್ಥಾಪನೆಯಲ್ಲಿ ವಿವಾದಗಳು.- ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ಇತರ ನಿಕಾಯದ ಸದಸ್ಯನಾಗಿ ನೇಮಕಾತಿ ಹೊಂದಲು ಅಥವಾ ಸದಸ್ಯನಾಗಲು ಯಾವುದೇ ವ್ಯಕ್ತಿಯ ಅರ್ಹತೆಯ ಬಗ್ಗೆ ಯಾವುದೇ ಪ್ರಶ್ನೆಯು ಉದ್ಭವಿಸಿದಲ್ಲಿ, ಆ ವಿಷಯವನ್ನು ಕುಲಾಧಿಪತಿಯವರಿಗೆ ತೀರ್ಮಾನಕ್ಕಾಗಿ ಕಳುಹಿಸತಕ್ಕದ್ದು ಮತ್ತು ಅದರ ಬಗ್ಗೆ ಅವರ ತೀರ್ಮಾನವೇ ಅಂತಿಮವಾಗಿರತಕ್ಕದ್ದು:

H-252-73

ಪರಂತು, ಯಾವುದೇ ಅಂಥ ತೀರ್ಮಾನವನ್ನು ತೆಗೆದುಕೊಳ್ಳುವ ಮುಂಚೆ, ಕುಲಾಧಿಪತಿಯವರು ಅದರಿಂದ ಬಾಧಿತನಾಗುವ ವ್ಯಕ್ತಿಗೆ ತನ್ನ ಅಹವಾಲು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡತಕ್ಕದ್ದು.

61. ವಿಶ್ವವಿದ್ಯಾಲಯದ ಪುನರಾವಲೋಕನ ಆಯೋಗದ ನೇಮಕ.- (1) ಕುಲಾಧಿಪತಿಯು, ಪ್ರತಿ ಐದು ವರ್ಷಗಳಿಗೊಮ್ಮೆ ವಿಶ್ವವಿದ್ಯಾಲಯದ ಕಾರ್ಯ ನಿರ್ವಹಣೆಯನ್ನು ಪುನರವಲೋಕಿಸುವುದಕ್ಕಾಗಿ ಮತ್ತು ಶಿಫಾರಸುಗಳನ್ನು ಮಾಡುವುದಕ್ಕಾಗಿ ಒಂದು ಆಯೋಗವನ್ನು ರಚಿಸತಕ್ಕದ್ದು.

(2) ಆಯೋಗವು, ಮೂವರಿಗೆ ಕಡಿಮೆಯಿಲ್ಲದಂತೆ, ಕುಲಾಧಿಪತಿಯವರು ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ನೇಮಿಸಿದ ಕೃಷಿ ಕ್ಷೇತ್ರದಲ್ಲಿ ಪ್ರಸಿದ್ಧ ಶಿಕ್ಷಣ ತಜ್ಞರನ್ನು ಒಳಗೊಂಡಿರತಕ್ಕದ್ದು. ಅವರಲ್ಲಿ ಒಬ್ಬರು ಅಧ್ಯಕ್ಷರಾಗತಕ್ಕದ್ದು.

(3) ಸದಸ್ಯರ ನೇಮಕಾತಿಯ ನಿಬಂಧನೆಗಳು ಮತ್ತು ಷರತ್ತುಗಳು, ಕುಲಾಧಿಪತಿಯವರು ನಿರ್ಧರಿಸಬಹುದಾದಂಥವುಗಳು ಆಗಿರತಕ್ಕದ್ದು.

(4) ಆಯೋಗವು ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ ಕುಲಾಧಿಪತಿಯವರಿಗೆ ಮತ್ತು ರಾಜ್ಯ ಸರ್ಕಾರಕ್ಕೆ ಶಿಫಾರಸುಗಳನ್ನು ಮಾಡತಕ್ಕದ್ದು.

(5) ಕುಲಾಧಿಪತಿಯವರು, ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ, ಶಿಫಾರಸ್ಸಿನ ಮೇಲೆ ತಾನು ಸೂಕ್ತವೆಂದು ಭಾವಿಸುವಂಥ ಕ್ರಮವನ್ನು ಕೈಗೊಳ್ಳಬಹುದು.

(6) ರಾಜ್ಯ ಸರ್ಕಾರವು, ಕೈಗೊಂಡ ಕ್ರಮವನ್ನು ವಿವರಿಸುವ ಜ್ಞಾಪನ ಪತ್ರದೊಡನೆ ಶಿಫಾರಸುಗಳ ಒಂದು ಪ್ರತಿಯನ್ನು ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

62. ವಿಶ್ವವಿದ್ಯಾಲಯದ ವ್ಯವಹರಣೆಗಳ ಸಂಬಂಧದಲ್ಲಿ ಹುದ್ದೆಗಳಿಗೆ ನೇಮಕಾತಿ.- (1) ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳಿಗೊಳಪಟ್ಟು ವಿಶ್ವವಿದ್ಯಾಲಯದ ವ್ಯವಹರಣೆಗಳಿಗೆ ಸಂಬಂಧಿಸಿದ ಹುದ್ದೆಗಳಿಗೆ ನೇಮಕಾತಿ ಮತ್ತು ಸೇವೆಗಳನ್ನು ನಿಯಮಿಸಲಾದಂತೆ, ಮಂಡಳಿಯ ಪೂರ್ವಾನುಮತಿಯೊಡನೆ ಕುಲಪತಿಯವರು ಮಾಡಬಹುದು:

ಪರಂತು, ಸಹಾಯಕ ಪ್ರಾಧ್ಯಾಪಕರ ವೇತನ ಶ್ರೇಣಿಯದ್ದಕ್ಕಿಂತ ಕಡಿಮೆ ವೇತನಶ್ರೇಣಿಯಿರುವ ಹುದ್ದೆಗಳ ನೇಮಕಾತಿಯ ಸಂಬಂಧದಲ್ಲಿ ಅಂಥ ಅನುಮೋದನೆಯ ಅವಶ್ಯಕತೆ ಇರತಕ್ಕದ್ದಲ್ಲ.

(2) ಈ ಅಧಿನಿಯಮದಲ್ಲಿ ಏನೇ ಇದ್ದರೂ ಮತ್ತು ಶಾಸನಗಳು ರಚನೆಯಾಗುವ ಅಥವಾ ವಿಶ್ವವಿದ್ಯಾಲಯದ ಪ್ರಾಧಿಕಾರಗಳು ಸ್ಥಾಪನೆಯಾಗು ವವರೆಗಿನ ಅವಧಿಗೆ, ವಿಶ್ವವಿದ್ಯಾಲಯದ ವ್ಯವಹರಣೆಗಳ ಸಂಬಂಧದಲ್ಲಿ ಹುದ್ದೆಗಳು ಮತ್ತು ಸೇವೆಗಳಿಗೆ ನೇಮಕಾತಿಗಳನ್ನು, ಕುಲಾಧಿಪತಿಯವರು ಅನುಮೋದಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಕುಲಪತಿಯವರು ಮಾಡಬಹುದು.

63. ತಾತ್ಕಾಲಿಕ ಉಪಬಂಧಗಳು.– ಈ ಅಧಿನಿಯಮದಲ್ಲಿ ಏನೇ ಇದ್ದರೂ, ಕುಲಪತಿಯು ಕುಲಾಧಿಪತಿಯವರ ಪೂರ್ವಾನುಮೋದನೆ ಯೊಂದಿಗೆ ಈ ಅಧಿನಿಯಮದ ಪ್ರಾರಂಭದಿಂದ ಒಂದು ವರ್ಷದ ಅವಧಿಗಾಗಿ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯದ ಎಲ್ಲಾ ಅಥವಾ ಯಾವುದೇ ಪ್ರಕಾರ್ಯ ಗಳನ್ನು ನಿರ್ವಹಿಸಬಹುದು ಮತ್ತು ಆ ಉದ್ದೇಶಕ್ಕಾಗಿ ಈ ಅಧಿನಿಯಮದ ಮೂಲಕ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರವು ಅಥವಾ ನಿಕಾಯವು ಚಲಾಯಿಸಬೇಕಾದ ಯಾವುವೇ ಅಧಿಕಾರಗಳನ್ನು ಅಥವಾ ನಿರ್ವಹಿಸಬೇಕಾದ ಯಾವುವೇ ಕರ್ತವ್ಯಗಳನ್ನು ಈ ಅಧಿನಿಯಮದಲ್ಲಿ ಅಥವಾ ಶಾಸನಗಳಲ್ಲಿ ಅಥವಾ ವಿನಿಯಮಗಳಲ್ಲಿ ಉಪಬಂಧಿಸಿದಂತೆ ಅಂಥ ಪ್ರಾಧಿಕಾರವು ಅಥವಾ ನಿಕಾಯವು ಅಸ್ತಿತ್ವಕ್ಕೆ ಬರುವವರೆಗೆ ಚಲಾಯಿಸಬಹುದು ಅಥವಾ ನೆರವೇರಿಸಬಹುದು.

64. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.– ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಿದ ಶಾಸನಗಳು ಅಥವಾ ವಿನಿಯಮಗಳಿಗೆ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ವಿಶ್ವವಿದ್ಯಾಲಯದ ಅಥವಾ ಅದರ ಪ್ರಾಧಿಕಾರಗಳ, ನಿಕಾಯಗಳ ಅಥವಾ ಅಧಿಕಾರಿಗಳ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆ ನಡೆಸಲು ಅವಕಾಶ ಇರತಕ್ಕದ್ದಲ್ಲ ಮತ್ತು ಅವರಿಂದ ಯಾವುದೇ ನಷ್ಟ ಪರಿಹಾರಗಳನ್ನು ಕ್ಲೈಮ್ ಮಾಡತಕ್ಕದ್ದಲ್ಲ.

65. ತೊಂದರೆಗಳ ನಿವಾರಣೆಗೆ ಅಧಿಕಾರ.– (1) ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಥವಾ ನಿಕಾಯದ ಮೊದಲ ರಚನೆಯ ಅಥವಾ ಪುನಾರಚನೆಯ ಸಂಬಂಧದಲ್ಲಿ ಅಥವಾ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಸಂಬಂಧದಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ತೊಂದರೆಯ ನಿವಾರಣೆಗಾಗಿ ಅವಶ್ಯಕ ಹಾಗೂ ಸಮಂಜಸವೆಂದು ತನಗೆ ಕಂಡುಬರುವಂಥ ಹಾಗೂ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದ ಉಪಬಂಧ ಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಐದು ವರ್ಷಗಳು ಮುಕ್ತಾಯವಾದ ತರುವಾಯ ಅಂಥ ಯಾವುದೇ ಅಧಿಸೂಚನೆ ಯನ್ನು ಹೊರಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಅಧಿಸೂಚನೆಯನ್ನು ಮತ್ತು 8ನೇ ಪ್ರಕರಣದ (8)ನೇ ಉಪ-ಪ್ರಕರಣದಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಆದೇಶವನ್ನು ಅದನ್ನು ಹೊರಡಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶ ನಗಳಲ್ಲಿ ಅಡಕವಾಗಿರಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಸದರಿ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ರಾಜ್ಯ ವಿಧಾನಮಂಡಲದ ಯಾವೊಂದು ಸದನವು ಅಧಿಸೂಚ ನೆಯಲ್ಲಿ ಯಾವುದೇ ಮಾರ್ಪಾಡು ಮಾಡಿದರೆ, ಅಥವಾ ಆ ಅಧಿಸೂಚ ನೆಯು ಪರಿಣಾಮಕ್ಕೆ ಬರತಕ್ಕದ್ದಲ್ಲವೆಂದು ನಿರ್ದೇಶಿಸಿದರೆ ಹಾಗೂ ಆ ಮಾರ್ಪಾಡು ಅಥವಾ ನಿರ್ದೇಶನವನ್ನು ಇನ್ನೊಂದು ಸದನವು ಒಪ್ಪಿದರೆ ತದನಂತರ ಅಂಥ ಅಧಿಸೂಚನೆಯು ಸಂದರ್ಭಾನುಸಾರ ಹಾಗೆ ಮಾರ್ಪಾ ಟಾದ ರೀತಿಯಲ್ಲಿ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾ ರಿಯಾಗತಕ್ಕದ್ದಲ್ಲ. ಆದಾಗ್ಯೂ, ಯಾವುದೇ ಅಂಥ ಮಾರ್ಪಾಡು ಅಥವಾ ರದ್ಧತಿಯು ಈ ಅಧಿಸೂಚನೆಯ ಅಡಿಯಲ್ಲಿ ಈ ಮುಂಚೆ ಮಾಡಲಾದ ಯಾವುದೇ ಕಾರ್ಯದ ಮಾನ್ಯತೆಗೆ ಬಾಧೆ ಉಂಟುಮಾಡತಕ್ಕದ್ದಲ್ಲ.

66. ಕಾನೂನು ವ್ಯವಹರಣೆ.– ವಿಶ್ವವಿದ್ಯಾಲಯವು ಹೂಡಿದ ಅಥವಾ ಅದರ ವಿರುದ್ಧವಾದ ಎಲ್ಲಾ ದಾವೆಗಳು ಮತ್ತು ಇತರ ಕಾನೂನು ವ್ಯವಹರಣೆಗಳನ್ನು ವಿಶ್ವವಿದ್ಯಾಲಯದ ಪರವಾಗಿ ಕುಲಸಚಿವರು ಅಥವಾ ಕುಲಪತಿಯವರು ಇದರ ಬಗ್ಗೆ ಅಧಿಕಾರ ನೀಡಿದ ಯಾವೊಬ್ಬ ಇತರ ಅಧಿಕಾರಿಯು ಪ್ರಾರಂಭಿಸತಕ್ಕದ್ದು, ಪ್ರಾಸಿಕ್ಯೂಟ್ ಮಾಡತಕ್ಕದ್ದು ಅಥವಾ ಪ್ರತಿರಕ್ಷಿಸತಕ್ಕದ್ದು.

67. ಕೃಷಿ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣೆಗೆ ರಾಜ್ಯ ಸಮನ್ವಯ ಸಮಿತಿ.– (1) ರಾಜ್ಯದಲ್ಲಿನ ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳ, ವಿಶೇಷವಾಗಿ, ಬೋಧನೆ, ಸಂಶೋಧನೆ, ವಿಸ್ತರಣಾ ಶಿಕ್ಷಣ ಮತ್ತು ಸಾಮಾನ್ಯ ಆಸಕ್ತಿಗಳ ಇತರ ವಿಷಯಗಳ ಸಂಬಂಧದಲ್ಲಿ ಪರಿಣಾಮಕಾರಿ ಸಮನ್ವಯದ ಉದ್ದೇಶಕ್ಕಾಗಿ ಕೃಷಿ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣೆಗಾಗಿ ಒಂದು ರಾಜ್ಯ ಸಮನ್ವಯ ಸಮಿತಿಯು ಇರತಕ್ಕದ್ದು.

(2) ರಾಜ್ಯ ಸಮನ್ವಯ ಸಮಿತಿಯು ಈ ಮುಂದಿನ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಕೃಷಿ ಪ್ರಭಾರದಲ್ಲಿರುವ ಸಚಿವರು, ಕರ್ನಾಟಕ ಸರ್ಕಾರ ಇವರು ಅಧ್ಯಕ್ಷರಾಗಿರತಕ್ಕದ್ದು;

(ಬಿ) ರಾಜ್ಯದಲ್ಲಿನ ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳ ಕುಲಪತಿಯವರು;

(ಸಿ) ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳ ಶಿಕ್ಷಣ, ಸಂಶೋಧನೆ ಮತ್ತು ವಿಸ್ತಾರಣೆ ನಿರ್ದೇಶಕರುಗಳು;

(ಡಿ) ರಾಜ್ಯದಲ್ಲಿಯ ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳ ಕುಲಸಚಿವರು;

(ಇ) ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ – ಇವರು ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು.

(3) ಸಮನ್ವಯ ಸಮಿತಿಯ ಪ್ರಕಾರ್ಯಗಳು ಈ ಮುಂದಿನಂತೆ ಇರತಕ್ಕದ್ದು, ಎಂದರೆ:–

(ಎ) ರಾಜ್ಯದಲ್ಲಿಯ ಕೃಷಿ ವಿಶ್ವವಿದ್ಯಾಲಯಗಳ ಸ್ವಾಯತ್ತತೆ ಭಂಗವಾಗದಂತೆ ನೋಡಿಕೊಳ್ಳುವುದು;

(ಬಿ) ಶೈಕ್ಷಣಿಕ ಕಾರ್ಯಕ್ರಮಗಳನ್ನು ವಿನಿಯಮಗಳನ್ನು ಸಮನ್ವಯಗೊಳಿಸುವುದು;

(ಸಿ) ರಾಜ್ಯದಲ್ಲಿಯ ವಿವಿಧ ಕೃಷಿ ವಿಶ್ವವಿದ್ಯಾಲಯಗಳ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣಾ ಕ್ಷೇತ್ರಗಳಲ್ಲಿ ಸಹಕಾರದ ಪ್ರದೇಶಗಳನ್ನು ಗುರುತಿಸುವ ಮೂಲಕ ಪರಸ್ಪರ ಪೂರಕ ಮತ್ತು ಕೂಡುಬಲದಿಂದ ಕೆಲಸ ಮಾಡುವಂತೆ ನೋಡಿಕೊಳ್ಳುವುದು;

(ಡಿ) ರಾಜ್ಯದಲ್ಲಿಯ ಮತ್ತು ಸಂಬಂಧಿಸಿದ ಅಭಿವೃದ್ಧಿ ಇಲಾಖೆಗಳ ಸಮನ್ವಯದೊಡನೆ ಕೃಷಿ ಅಭಿವೃದ್ಧಿಗಾಗಿ ಹೊಸ ಕಾರ್ಯಕ್ರಮಗಳು ಮತ್ತು ಕ್ರಿಯಾ ಯೋಜನೆಗಳನ್ನು ಸಲಹೆ ಮಾಡುವುದು;

(ಇ) ಅಂತರ ವಿಶ್ವವಿದ್ಯಾಲಯ ಮತ್ತು ವಿಶ್ವವಿದ್ಯಾಲಯ – ರಾಜ್ಯ ಇವುಗಳ ನಡುವಿನ ವಿವಾದಗಳನ್ನು ಪರಿಹರಿಸುವುದು.

(4) ಸಮಿತಿಯು ವರ್ಷದಲ್ಲಿ ಕನಿಷ್ಠ ಎರಡು ಬಾರಿಯಾದರೂ ಸಭೆ ಸೇರತಕ್ಕದ್ದು.

68. ಶಾಸನಗಳ ಮತ್ತು ವಿನಿಯಮಗಳು ಮುಂತಾದವುಗಳ ಮುಂದುವರಿಕೆ.– (1) ಈ ಅಧಿನಿಯಮದ ಸೂಕ್ತ ಉಪಬಂಧಗಳಡಿಯಲ್ಲಿ ಶಾಸನಗಳು ಅಥವಾ ವಿನಿಯಮಗಳನ್ನು ರಚಿಸುವವರೆಗೆ, ಕರ್ನಾಟಕ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ 1963ರ ಉಪಬಂಧಗಳ ಅಡಿಯಲ್ಲಿ ರಚಿಸಿದ ಹಾಗೂ ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ ಜಾರಿಯಲ್ಲಿರುವ ಶಾಸನಗಳು ಮತ್ತು ವಿನಿಯಮಗಳನ್ನು, ಅವು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಿರುವಷ್ಟರ ಮಟ್ಟಿಗೆ ಮತ್ತು ಕುಲಾಧಿಪತಿಯವರ ಅನುಮೋದನೆ ಪಡೆದುಕೊಂಡು ಕುಲಪತಿಯು ಅದರಲ್ಲಿ ಮಾಡಬಹುದಾದಂತಹ ಅಳವಡಿಕೆಗಳು ಅಥವಾ ಮಾರ್ಪಾಡುಗಳಿಗೆ ಒಳಪಟ್ಟು, ಈ ಅಧಿನಿಯಮದ ಸೂಕ್ತ ಉಪಬಂಧಗಳಡಿಯಲ್ಲಿ ವಿಶ್ವವಿದ್ಯಾಲಯವು ರಚಿಸಿದ ಶಾಸನಗಳು ಮತ್ತು ವಿನಿಯಮಗಳೆಂದು ಭಾವಿಸತಕ್ಕದ್ದು.

(2) ಈ ಅಧಿನಿಯಮದ ಪ್ರಾರಂಭದ ದಿನದಂದು, ಕರ್ನಾಟಕ ಕೃಷಿ ವಿಜ್ಞಾನಗಳ ಅಧಿನಿಯಮ, 1963ರ ಅಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾಲಯದ ಕುಲಪತಿಗಳ ಪದವನ್ನು ಧಾರಣ ಮಾಡಿದ ವ್ಯಕ್ತಿಯು ಈ ಅಧಿನಿಯಮವನ್ನು ಪ್ರಖ್ಯಾಪಿಸದಿದ್ದರೆ ಎಲ್ಲಿಯವರೆಗೆ ಆತನು ತನ್ನ ಹುದ್ದೆಯನ್ನು ಧಾರಣ ಮಾಡಿರುತ್ತಿದ್ದನೋ ಅಲ್ಲಿಯವರೆಗೆ ಆ ಪದದಲ್ಲಿ ಮುಂದುವರೆಯತಕ್ಕದ್ದು.

69. ನಿರಸನ ಮತ್ತು ಉಳಿಸುವಿಕೆಗಳು.– (1) ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಅಧ್ಯಾದೇಶ, 2008ನ್ನು (2008ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 3) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಳಿಸಿದ್ದಾಗ್ಯೂ, ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿ ಮಾಡಲಾದ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿ ಮಾಡಲಾದ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಭಾರತೀಯ ಕೃಷಿ ಸಂಶೋಧನಾ ಪರಿಷತ್ತಿನವರು 09.02.1995 ರಂದು ಒಂದು ಮಾದರಿ ರಾಜ್ಯ ಕೃಷಿ ವಿಶ್ವವಿದ್ಯಾಲಯಗಳ ವಿಧೇಯಕವನ್ನು ಕಳುಹಿಸಿಕೊಟ್ಟಿದೆ. ಮತ್ತು 2008ರಲ್ಲಿ ಒಂದು ಪರಿಷ್ಕೃತ ಮಾದರಿ ವಿಧೇಯಕವನ್ನು ಕಳುಹಿಸಿಕೊಟ್ಟಿದೆ. ಸದರಿ ಮಾದರಿ ವಿಧೇಯಕವನ್ನು ರಾಜ್ಯ ಸರ್ಕಾರಗಳು ಪರಿಗಣಿಸಬೇಕೆಂದು, ಅವಶ್ಯವಾಗಬಹುದಾದಂಥ ಮಾರ್ಪಾಟುಗಳೊಡನೆ ಅವನ್ನು ಅಳವಡಿಸಿಕೊಳ್ಳಬೇಕೆಂದು ಅಪೇಕ್ಷಿಸಲಾಗಿದೆ. ಪ್ರತಿಯೊಂದು ರಾಜ್ಯವು ವಿವಿಧ ವಿದ್ಯಾವಿಷಯಗಳನ್ನು ಒಳಗೊಂಡ ಒಂದು ಸಮಗ್ರ ರೀತಿಯಲ್ಲಿ ತರಬೇತಿ ಹಾಗೂ ವಿದ್ಯಾಭ್ಯಾಸವನ್ನು ನೀಡಬೇಕೆಂದು ಸದರಿ ವಿಧೇಯಕವು ಉಪಬಂಧ ಕಲ್ಪಿಸಲಾಗಿದೆ.

ಅದಕ್ಕನುಗುಣವಾಗಿ ಒಂದು ಸಮಗ್ರ ಶಾಸನವನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆ. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕ 2009ರ ಕೆಲವಾರು ಪ್ರಮುಖ ಅಂಶಗಳು ಈ ಮುಂದಿನಂತಿವೆ:-

(1) ರಿಜೆಂಟ್‌ಗಳ ಮಂಡಳಿ ಎಂಬುದನ್ನು ವ್ಯವಸ್ಥಾಪನಾ ಮಂಡಳಿ ಎಂದು ಬದಲಾಯಿಸಿದೆ.

(2) ದೇಣಿಗೆಗಳನ್ನು ಸ್ವೀಕರಿಸಲು ಮತ್ತು ಭಾರತದ ಹೊರಗೆ ಕೆಲಸ ಮಾಡುತ್ತಿರುವ ವಿದ್ಯಾಸಂಸ್ಥೆಗಳನ್ನು ವಿಶ್ವವಿದ್ಯಾಲಯದ ವಿಶೇಷಾಧಿಕಾರಗಳಿಗೆ ಸೇರಿಸಿಕೊಳ್ಳಲು, ಮತ್ತು ಅವುಗಳಿಗೆ ಕೃಷಿ ಹಾಗೂ ಸಂಬಂಧಪಟ್ಟ ವಿಜ್ಞಾನಗಳಲ್ಲಿ ಬೋಧನೆಯನ್ನು ನಡೆಸಲು ಸಂಶೋಜನೆಯನ್ನು ನೀಡಲು ಉಪಬಂಧ ಕಲ್ಪಿಸಲಾಗಿದೆ.

(3) ಕುಲಾಧಿಪತಿಯವರು ಕೃಷಿ ಮತ್ತು ಸಂಬಂಧಪಟ್ಟ ವಿಜ್ಞಾನ ರಂಗಗಳಲ್ಲಿ ಖ್ಯಾತ ಶಿಕ್ಷಣ ತಜ್ಞರನ್ನು ಅಥವಾ ವಿಜ್ಞಾನಿಯನ್ನು ನಾಮ ನಿರ್ದೇಶನ ಮಾಡಲು ಒಂದು ಉಪಬಂಧವನ್ನು ಸೇರಿಸಲಾಗಿದೆ.

(4) ಒಬ್ಬ ಕೃಷಿ ಉದ್ಯಮ ರಂಗದ ಒಬ್ಬ ವ್ಯಕ್ತಿಯನ್ನು ವ್ಯವಸ್ಥಾಪನಾ ಮಂಡಳಿಗೆ ಸೇರಿಸಿಕೊಳ್ಳಲು ಉದ್ದೇಶಿತ ವಿಧೇಯಕದಲ್ಲಿ ಉಪಬಂಧ ಕಲ್ಪಿಸಲಾಗಿದೆ.

(5) ನಾಮನಿರ್ದೇಶಿತ ಸದಸ್ಯರ ಗರಿಷ್ಠ ಪದಾವಧಿಯು ಕೇವಲ ಮೂರು ವರ್ಷಗಳು ಹಾಗೂ ಅವರು ಒಂದು ಬಾರಿಗಿಂತ ಹೆಚ್ಚುಸಲ

ನಾಮನಿರ್ದೇಶಿತರಾಗಲು ಅವಕಾಶ ಇಲ್ಲ ಎಂಬುದನ್ನು ಸಹ ಉದ್ದೇಶಿತ ವಿಧೇಯಕದಲ್ಲಿ ಸೇರಿಸಲಾಗಿದೆ.

(6) ಪದವಿ ಅಧ್ಯಯನ ಮತ್ತು ಸ್ನಾತಕೋತ್ತರ ಪದವಿ ಅಧ್ಯಯನಗಳಿಗೆ ಪ್ರತ್ಯೇಕ ಅಧ್ಯಯನ ಮಂಡಳಿಗಳನ್ನು ಉಪಬಂಧಿಸಲಾಗಿದೆ.

(7) ಸಂಶೋಧನಾ ಪರಿಷತ್ತು ಮತ್ತು ವಿಸ್ತರಣಾ ಶಿಕ್ಷಣಾ ಪರಿಷತ್ತುಗಳಿಗೆ ಹೆಚ್ಚಿನ ಪ್ರತಿನಿಧ್ಯಗಳನ್ನು ಸೇರಿಸಿ ಪುನರ್ ಸಂಘಟಿಸಲಾಗಿದೆ.

(8) ಕುಲಪತಿಗಳ ಪದಾವಧಿ ನಾಲ್ಕು ವರ್ಷಗಳಾಗಿದ್ದು ಅವರು ಒಂದು ಅವಧಿಗೆ ಮಾತ್ರ ಅಧಿಕಾರದಲ್ಲಿರಬಹುದಾಗಿದೆ.

(9) ಕೃಷಿ ಶಿಕ್ಷಣ ಮತ್ತು ಸಂಶೋಧನೆಗಳಿಗೆ ರಾಜ್ಯ ಸಮನ್ವಯ ಸಮಿತಿ ಸ್ಥಾಪಿಸಲು ಉಪಬಂಧ ಕಲ್ಪಿಸಲಾಗಿದೆ.

(10) ಖಾಸಗಿ ಕಾಲೇಜುಗಳ ಸ್ಥಾಪನೆಗೆ ಮತ್ತು ಅದಕ್ಕೆ ಸಂಯೋಜನೆ ನೀಡುವುದಕ್ಕೆ ಒಂದು ಉಪಬಂಧ ಕಲ್ಪಿಸಲಾಗಿದೆ.

(11) ರಾಯಚೂರಿನಲ್ಲಿ ಕೃಷಿ ವಿಶ್ವವಿದ್ಯಾಲಯದ ಸ್ಥಾಪನೆ.

(12) ಮೇಲ್ಕಂಡ ಧ್ಯೇಯೋದ್ದೇಶಗಳ ಸಾಧನೆಗಾಗಿ ಒಂದು ಸಮಗ್ರ ಶಾಸನವನ್ನು ತರಲು ಉದ್ದೇಶಿಸಲಾಗಿದೆ. ವಿಷಯವು ತುರ್ತು ಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಉಭಯಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ ಕರ್ನಾಟಕ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಅಧ್ಯಾದೇಶ, 2008ನ್ನು (2008ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 3) ಪ್ರಖ್ಯಾಪಿಸಲಾಯಿತು.

ಈ ವಿಧೇಯಕವು ಸದರಿ ಅಧ್ಯಾದೇಶದ ಬದಲಿಗೆ ತರಲಾಗಿದೆ.

ಆದ್ದರಿಂದ ಈ ವಿಧೇಯಕ.

H-252-74

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾಪಿತ ಶಾಸನಾತ್ಮಕ ಕ್ರಮದಿಂದಾಗಿ ರಾಜ್ಯ ಬೊಕ್ಕಸಕ್ಕೆ ಸುಮಾರು 5.00 ಲಕ್ಷ ರೂಪಾಯಿಗಳ ವೆಚ್ಚ ಉಂಟಾಗುತ್ತದೆ.

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮಗಳ 80ನೇ ನಿಯಮದ (1)ನೇ ಉಪನಿಯಮದ ಮೂಲಕ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ

ಭಾರತೀಯ ಕೃಷಿ ಸಂಶೋಧನಾ ಪರಿಷತ್ತಿನವರು 09.02.1995 ರಂದು ಒಂದು ಮಾದರಿ ರಾಜ್ಯ ಕೃಷಿ ವಿಶ್ವವಿದ್ಯಾಲಯಗಳ ವಿಧೇಯಕವನ್ನು ಕಳುಹಿಸಿಕೊಟ್ಟಿದೆ. ಮತ್ತು 2008ರಲ್ಲಿ ಒಂದು ಪರಿಷ್ಕೃತ ಮಾದರಿ ವಿಧೇಯಕವನ್ನು ಕಳುಹಿಸಿಕೊಟ್ಟಿದೆ. ಸದರಿ ಮಾದರಿ ವಿಧೇಯಕವನ್ನು ರಾಜ್ಯ ಸರ್ಕಾರಗಳು ಪರಿಗಣಿಸಬೇಕೆಂದು, ಅವಶ್ಯವಾಗಬಹುದಾದಂಥ ಮಾರ್ಪಾಟುಗಳೊಡನೆ ಅವನ್ನು ಅಳವಡಿಸಿಕೊಳ್ಳಬೇಕೆಂದು ಅಪೇಕ್ಷಿಸಲಾಗಿದೆ. ಪ್ರತಿಯೊಂದು ರಾಜ್ಯವು ವಿವಿಧ ವಿದ್ಯಾವಿಷಗಳನ್ನು ಒಳಗೊಂಡ ಒಂದು ಸಮಗ್ರ ರೀತಿಯಲ್ಲಿ ತರಬೇತಿ ಹಾಗೂ ವಿದ್ಯಾಭ್ಯಾಸವನ್ನು ನೀಡಬೇಕೆಂದು ಸದರಿ ವಿಧೇಯಕವು ಉಪಬಂಧ ಕಲ್ಪಿಸಲಾಗಿದೆ.

ಅದಕ್ಕನುಗುಣವಾಗಿ ಒಂದು ಸಮಗ್ರ ಶಾಸನವನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆ. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕ 2009ರ ಕೆಲವಾರು ಪ್ರಮುಖ ಅಂಶಗಳು ಈ ಮುಂದಿನಂತಿವೆ:-

(1) ರಿಜೆಂಟ್‌ಗಳ ಮಂಡಳಿ ಎಂಬುದನ್ನು ವ್ಯವಸ್ಥಾಪನಾ ಮಂಡಳಿ ಎಂದು ಬದಲಾಯಿಸಿದೆ.

(2) ದೇಣಿಗಳನ್ನು ಸ್ವೀಕರಿಸಲು ಮತ್ತು ಭಾರತದ ಹೊರಗೆ ಕೆಲಸ ಮಾಡುತ್ತಿರುವ ವಿದ್ಯಾಸಂಸ್ಥೆಗಳನ್ನು ವಿಶ್ವವಿದ್ಯಾಲಯದ ವಿಶೇಷಾಧಿಕಾರಗಳಿಗೆ ಸೇರಿಸಿಕೊಳ್ಳಲು, ಮತ್ತು ಅವುಗಳಿಗೆ ಕೃಷಿ ಹಾಗೂ ಸಂಬಂಧಪಟ್ಟ ವಿಜ್ಞಾನಗಳಲ್ಲಿ ಬೋಧನೆಯನ್ನು ನಡೆಸಲು ಸಂಶೋಜನೆಯನ್ನು ನೀಡಲು ಉಪಬಂಧ ಕಲ್ಪಿಸಲಾಗಿದೆ.

(3) ಕುಲಾಧಿಪತಿಯವರು ಕೃಷಿ ಮತ್ತು ಸಂಬಂಧಪಟ್ಟ ವಿಜ್ಞಾನ ರಂಗಗಳಲ್ಲಿ ಖ್ಯಾತ ಶಿಕ್ಷಣ ತಜ್ಞರನ್ನು ಅಥವಾ ವಿಜ್ಞಾನಿಯನ್ನು ನಾಮ ನಿರ್ದೇಶನ ಮಾಡಲು ಒಂದು ಉಪಬಂಧವನ್ನು ಸೇರಿಸಲಾಗಿದೆ.

(4) ಒಬ್ಬ ಕೃಷಿ ಉದ್ಯಮ ರಂಗದ ಒಬ್ಬ ವ್ಯಕ್ತಿಯನ್ನು ವ್ಯವಸ್ಥಾಪನಾ ಮಂಡಳಿಗೆ ಸೇರಿಸಿಕೊಳ್ಳಲು ಉದ್ದೇಶಿತ ವಿಧೇಯಕದಲ್ಲಿ ಉಪಬಂಧ ಕಲ್ಪಿಸಲಾಗಿದೆ.

(5) ನಾಮನಿರ್ದೇಶಿತ ಸದಸ್ಯರ ಗರಿಷ್ಠ ಪದಾವಧಿಯು ಕೇವಲ ಮೂರು ವರ್ಷಗಳು ಹಾಗೂ ಅವರು ಒಂದು ಬಾರಿಗಿಂತ ಹೆಚ್ಚು ಸಲ ನಾಮನಿರ್ದೇಶಿತರಾಗಲು ಅವಕಾಶ ಇಲ್ಲ ಎಂಬುದನ್ನು ಸಹ ಉದ್ದೇಶಿತ ವಿಧೇಯಕದಲ್ಲಿ ಸೇರಿಸಲಾಗಿದೆ.

(6) ಪದವಿ ಅಧ್ಯಯನ ಮತ್ತು ಸ್ನಾತಕೋತ್ತರ ಪದವಿ ಅಧ್ಯಯನಗಳಿಗೆ ಪ್ರತ್ಯೇಕ ಅಧ್ಯಯನ ಮಂಡಳಿಗಳನ್ನು ಉಪಬಂಧಿಸಲಾಗಿದೆ.

(7) ಸಂಶೋಧನಾ ಪರಿಷತ್ತು ಮತ್ತು ವಿಸ್ತರಣಾ ಶಿಕ್ಷಣಾ ಪರಿಷತ್ತುಗಳಿಗೆ ಹೆಚ್ಚಿನ ಪ್ರತಿನಿದ್ಯಗಳನ್ನು ಸೇರಿಸಿ ಪುನರ್ ಸಂಘಟಿಸಲಾಗಿದೆ.

(8) ಕುಲಪತಿಗಳ ಪದಾವಧಿ ನಾಲ್ಕು ವರ್ಷಗಳಾಗಿದ್ದು ಅವರು ಒಂದು ಅವಧಿಗೆ ಮಾತ್ರ ಅಧಿಕಾರದಲ್ಲಿರಬಹುದಾಗಿದೆ.

(9) ಕೃಷಿ ಶಿಕ್ಷಣ ಮತ್ತು ಸಂಶೋಧನೆಗಳಿಗೆ ರಾಜ್ಯ ಸಮನ್ವಯ ಸಮಿತಿ ಸ್ಥಾಪಿಸಲು ಉಪಬಂಧ ಕಲ್ಪಿಸಲಾಗಿದೆ.

(10) ಖಾಸಗಿ ಕಾಲೇಜುಗಳ ಸ್ಥಾಪನೆಗೆ ಮತ್ತು ಅದಕ್ಕೆ ಸಂಯೋಜನೆ ನೀಡುವುದಕ್ಕೆ ಒಂದು ಉಪಬಂಧ ಕಲ್ಪಿಸಲಾಗಿದೆ.

(11) ರಾಯಚೂರಿನಲ್ಲಿ ಕೃಷಿ ವಿಶ್ವವಿದ್ಯಾಲಯದ ಸ್ಥಾಪನೆ.

(12) ಮೇಲ್ಕಂಡ ಧ್ಯೇಯೋದ್ದೇಶಗಳ ಸಾಧನೆಗಾಗಿ ಒಂದು ಸಮಗ್ರ ಶಾಸನವನ್ನು ತರಲು ಉದ್ದೇಶಿಸಲಾಗಿದೆ. ವಿಷಯವು ತುರ್ತು ಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಉಭಯಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ ಕರ್ನಾಟಕ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಅಧ್ಯಾದೇಶ, 2008ನ್ನು (2008ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 3) ಪ್ರಖ್ಯಾಪಿಸಲಾಯಿತು.

ಈ ವಿಧೇಯಕವು ಸದರಿ ಅಧ್ಯಾದೇಶದ ಬದಲಿಗೆ ತರಲಾಗಿದೆ.

ಎಸ್.ಎ. ರವೀಂದ್ರನಾಥ
ಕೃಷಿ ಸಚಿವರು

ಎಸ್.ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

ಅನುಬಂಧ – 13

ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನಸಭೆ
ಎರಡನೇ ಅಧಿವೇಶನ

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕ 2009
(2009ರ ವಿಧಾನಸಭೆಯ ವಿಧೇಯಕ ಸಂಖ್ಯೆ 12)

ಕರ್ನಾಟಕ ರಾಜ್ಯದಲ್ಲಿ ಒಂದು ಪ್ರತ್ಯೇಕ ತೋಟಗಾರಿಕೆ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದಕ್ಕಾಗಿ ಮತ್ತು ನಿಗಮಿತಗೊಳಿಸುವುದಕ್ಕಾಗಿ ಹಾಗೂ ಅದಕ್ಕೆ ಸಂಬಂಧಪಟ್ಟ ವಿಷಯಗಳಿಗಾಗಿ ಉಪಬಂಧಕಲ್ಪಿಸಲು ಒಂದು ವಿಧೇಯಕ;

ಕರ್ನಾಟಕ ರಾಜ್ಯದಲ್ಲಿ ಒಂದು ಪ್ರತ್ಯೇಕ ತೋಟಗಾರಿಕೆ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೊಂಭತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

ಅಧ್ಯಾಯ – I
ಪ್ರಾರಂಭಿಕ

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:- (1) ಈ ಅಧಿನಿಯಮವನ್ನು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಅಧಿನಿಯಮ, 2009 ಎಂದು ಕರೆಯತಕ್ಕದ್ದು.

(2) ಇದು, 2008ರ ನವೆಂಬರ್ 22ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. ಪರಿಭಾಷೆಗಳು.- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(1) “ವಿದ್ಯಾವಿಷಯಕ ಪರಿಷತ್ತು (ಅಕಾಡೆಮಿಕ್ ಕೌನ್ಸಿಲ್)” ಎಂದರೆ, ವಿಶ್ವವಿದ್ಯಾಲಯದ ವಿದ್ಯಾವಿಷಯಕ ಪರಿಷತ್ತು;

(2) “ಸಂಯೋಜಿತ ಕಾಲೇಜು” ಎಂದರೆ, ವಿಶ್ವವಿದ್ಯಾಲಯದ ಅಧಿಕಾರ ಕ್ಷೇತ್ರದಲ್ಲಿ ಇರುವ ಮತ್ತು ನಿಯಮಿಸಲಾದ ಶಾಸನಗಳಿಗೆ ಅನುಸಾರವಾಗಿ ವಿಶ್ವವಿದ್ಯಾಲಯಕ್ಕೆ ಸಂಯೋಜಿತವಾದ ಮತ್ತು ವಿಶ್ವವಿದ್ಯಾಲಯದ ಪದವಿಗಳು, ಡಿಪ್ಲೋಮಾಗಳು ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಗಳಿಗಾಗಿ ನಡೆಸುವ ಪರೀಕ್ಷೆಗಳಿಗೆ ಪ್ರವೇಶ ಪಡೆಯಲು ಅವಶ್ಯವಾದ ವ್ಯಾಸಂಗ ಕ್ರಮಗಳನ್ನು ಒದಗಿಸುವ ಕಾಲೇಜು ಅಥವಾ ಸಂಸ್ಥೆ;

(3) “ಪ್ರಾಧಿಕಾರ” ಎಂದರೆ, 12ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ;

(4) “ಮಂಡಳಿ” ಎಂದರೆ, ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿ;

(5) "ಅಧ್ಯಯನ ಮಂಡಳಿ" ಎಂದರೆ ಫ್ಯಾಕಲ್ಟಿ ಹಂತದಲ್ಲಿ ವಿದ್ಯಾ ವ್ಯವಹಾರಗಳ ಸಮಿತಿ;

(6) "ಕ್ಯಾಂಪಸ್" ಎಂದರೆ ತೋಟಗಾರಿಕೆಗೆ ಸಂಬಂಧಿಸಿದಂತೆ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗೆ ಸಂಬಂಧಿಸಿದ ಕಾಲೇಜು, ವಿದ್ಯಾರ್ಥಿನಿಲಯಗಳು, ಸಿಬ್ಬಂದಿ ನಿವಾಸಗಳು, ಹೊಲಭೂಮಿಗಳು, ಮತ್ತಿತರ ಸೊತ್ತುಗಳನ್ನು ಒಳಗೊಳ್ಳುವ ಒಂದು ಆವರಣ;

(7) “ಕಾಲೇಜು” ಎಂದರೆ, ವಿಶ್ವವಿದ್ಯಾಲಯದ ನೇರ ಆಡಳಿತದ ಅಡಿಯಲ್ಲಿ ಬರುವ ಮತ್ತು ಅದರ ವ್ಯವಸ್ಥಾಪನೆ ಅಡಿಯಲ್ಲಿ ಬರುವ ಕೇಂದ್ರ ಕಾರ್ಯಸ್ಥಾನದಲ್ಲಿ, ಕ್ಯಾಂಪಸ್‌ನಲ್ಲಿ ಅಥವಾ ಯಾವುದೇ ಇತರ ಸ್ಥಳದಲ್ಲಿ ಇರುವಂಥ ಘಟಕ ಕಾಲೇಜು;

(8) "ಕುಲಾಧಿಪತಿ"ಎಂದರೆ ವಿಶ್ವವಿದ್ಯಾಲಯದ ಕುಲಾಧಿಪತಿ;

(9) "ಲೆಕ್ಕ ನಿಯಂತ್ರಕರು " ಎಂದರೆ ವಿಶ್ವವಿದ್ಯಾಲಯದ ಲೆಕ್ಕ ನಿಯಂತ್ರಕರು;

(10) “ಡೀನ್” ಎಂದರೆ, ವಿಶ್ವವಿದ್ಯಾಲಯದ ಘಟಕ ಕಾಲೇಜಿನ ಅಥವಾ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಮುಖ್ಯಸ್ಥ;

(11) "ಡೀನ್ – ವಿದ್ಯಾರ್ಥಿ ಕ್ಷೇಮಾಭಿವೃದ್ಧಿ" ಎಂದರೆ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ, ಸಲಹೆ ನೀಡಿಕೆ ಮತ್ತು ವಿದ್ಯಾರ್ಥಿಗಳ ಉದ್ಯೋಗ ನಿಯೋಜನೆಯ ಡೀನ್;

(12) "ನಿರ್ದೇಶಕ" ಎಂಬುದು ವಿದ್ಯಾ ನಿರ್ದೇಶಕರು, ಸಂಶೋಧನಾ ನಿರ್ದೇಶಕರು ಮತ್ತು ವಿಸ್ತರಣಾ ನಿರ್ದೇಶಕರನ್ನು ಒಳಗೊಂಡಿರುತ್ತದೆ;

(13) "ದೂರ ಶಿಕ್ಷಣ" ಎಂದರೆ ವ್ಯಾಸಂಗ ಕ್ರಮಗಳನ್ನು ಖುದ್ದು ಹಾಜರಾಗಿ ಕಲಿಯಲಾಗದ ಭೌತಿಕವಾಗಿ ಬೋಧನಾ ಸ್ಥಳದಿಂದ ದೂರ ಇರುವಂಥ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ತಲುಪಿಸುವ ಉದ್ದೇಶವುಳ್ಳ ಶಿಕ್ಷಣ ಕ್ಷೇತ್ರ, ಇಲ್ಲಿ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ತಮಗೆ ಅನುಕೂಲವಾದಂಥ ಸಮಯದಲ್ಲಿ ಮುದ್ರಿತ/ವಿದ್ಯುನ್ಮಾನ/ಅಥವಾ ಇತರ ತಾಂತ್ರಿಕ ಮಾಧ್ಯಮಗಳ ಮೂಲಕ ವಿಚಾರ ವಿನಿಮಯ ಮಾಡಿ ಪರಸ್ಪರ ಸಂವಾದ ನಡೆಸಬಹುದು;

(14) "ವಿಸ್ತರಣಾ ಶಿಕ್ಷಣ ಪರಿಷತ್ತು" ಎಂದರೆ, ವಿಶ್ವವಿದ್ಯಾನಿಲಯದ ವಿಸ್ತರಣಾ ಶಿಕ್ಷಣ ಪರಿಷತ್ತು;

(15) "ವಿಸ್ತರಣಾ ಶಿಕ್ಷಣ" ಎಂದರೆ, ತೋಟಗಾರಿಕೆ ಮತ್ತು ಸಂಬಂಧಪಟ್ಟ ವಿಜ್ಞಾನಗಳು ಹಾಗೂ ತೋಟಗಾರಿಕೆ ಉತ್ಪಾದನೆಗಳು ಮತ್ತು ಉತ್ಪನ್ನಗಳ ಮಾರಾಟಕ್ಕೆ ಸಂಬಂಧಿಸಿದ ವೈಜ್ಞಾನಿಕ ತಂತ್ರಜ್ಞಾನದ ವಿವಿಧ ಹಂತಗಳಿಗೆ ಸಂಬಂಧಪಟ್ಟ ರೈತರು, ಗೃಹಿಣಿಯರು, ಉದ್ಯಮಿಗಳು ಮತ್ತಿತರ ಸಮೂಹಗಳಿಗೆ ತರಬೇತಿಯನ್ನು ನೀಡುವುದಕ್ಕಾಗಿ ಸಂಬಂಧಪಟ್ಟ ಶೈಕ್ಷಣಿಕ ಚಟುವಟಿಕೆಗಳು ಮತ್ತು ಇದು ವಿಶ್ವವಿದ್ಯಾಲಯದ ವಿಭಾಗಗಳು, ವಿಜ್ಞಾನ ಕೇಂದ್ರಗಳು ಮತ್ತು ಅದಕ್ಕೆ ಸಂಯೋಜಿತವಾದ ಕಾಲೇಜುಗಳ ಮೂಲಕ ಹೊಸ ಹೊಸ ತಂತ್ರಜ್ಞಾನಗಳು ಮತ್ತು ಸಂಶೋಧನೆಗಳನ್ನು ಹೊಲಗಳು ಮತ್ತು ಹೊಲಮನೆಗಳ ಬಾಗಿಲುಗಳಿಗೆ ಕೊಂಡೊಯ್ಯುವಂಥ ಪ್ರಾತ್ಯಕ್ಷಿಕೆಗಳನ್ನೂ ಒಳಗೊಳ್ಳುತ್ತದೆ;

(16) "ಫ್ಯಾಕಲ್ಟಿ" ಎಂದರೆ, ಅಧ್ಯಾದೇಶ ಮತ್ತು ಶಾಸನಗಳಲ್ಲಿ ನಿರ್ದಿಷ್ಟವಾಗಿ ಹೇಳಿರುವ ವಿಶ್ವವಿದ್ಯಾಲಯದ ಫ್ಯಾಕಲ್ಟಿ;

(17) "ಸರ್ಕಾರ" ಎಂದರೆ ಕರ್ನಾಟಕ ಸರ್ಕಾರ;

(18) "ವಿಭಾಗ ಮುಖ್ಯಸ್ಥ" ಎಂದರೆ ವಿಶ್ವವಿದ್ಯಾಲಯ ಮತ್ತು ಘಟಕ ಕಾಲೇಜುಗಳ ಒಂದು ವಿಭಾಗದ ಮುಖ್ಯಸ್ಥ;

(19) "ತೋಟಗಾರಿಕೆ" ಎಂಬುದು,

(ಎ) ತರಕಾರಿಗಳು, ಹಣ್ಣುಗಳು, ಹೂ, ಸಾಂಬಾರ ಪದಾರ್ಥಗಳು ನೆಡುತೋಪು ಬೆಳೆಗಳು, ಔಷಧೀಯ ಮತ್ತು ಸುಗಂಧ ಸಸ್ಯಗಳು ಮುಂತಾದ ತೋಟಗಾರಿಕೆ ಬೆಳೆಗಳ ಎಲ್ಲಾ ಅಂಶಗಳು;

(ಬಿ) ಕೃಷಿ ಬೆಳೆಗಳು;

(ಸಿ) ಪ್ರಾಕೃತಿಕ ಸಂಪನ್ಮೂಲ ನಿರ್ವಹಣೆ;

(ಡಿ) ಭೂಸಾರ ಮತ್ತು ಜಲನಿಧಿ ನಿರ್ವಹಣೆ;

(ಇ) ಉತ್ಪಾದನೆ ಮತ್ತು ಸಂರಕ್ಷಣೆಯೂ ಸೇರಿದಂತೆ ಬೆಳೆ ಸುಧಾರಣೆ;

(ಎಫ್) ನೀರಾವರಿ ಮತ್ತು ಕಳೆ ನಿರ್ವಹಣೆ;

(ಜಿ) ಬೀಜ ಮತ್ತು ಸಸಿ ಸಾಮಾಗ್ರಿಗಳ ಉತ್ಪಾದನೆ;

(ಎಚ್) ಭೂಬಳಕೆ ಯೋಜನೆ ಮತ್ತು ನಿರ್ವಹಣೆ;

(ಐ) ಭೂ–ಪ್ರಸಾಧನ ಕಲೆ;

(ಜೆ) ತೋಟದ ಮರಗಳ ಕೃಷಿ, ಫಾರಂ ವನ ವಿಜ್ಞಾನ ಮತ್ತು ಅರಣ್ಯ ಹಾಗೂ ವನ್ಯಜೀವಿ ನಿರ್ವಹಣೆ;

(ಕೆ) ತೋಟಗಾರಿಕೆ ಅರ್ಥಶಾಸ್ತ್ರ;

(ಎಲ್) ಮಾರಾಟಗಾರಿಕೆ, ಸಹಕಾರ ಮತ್ತು ವ್ಯವಹಾರ ನಿರ್ವಹಣೆ;

(ಎಂ) ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ;

(ಎನ್) ಸಂಸ್ಕರಣೆಯೂ ಸೇರಿದಂತೆ ಸುಗ್ಗಿ ತರುವಾಯದ ನಿರ್ವಹಣೆ;

(ಒ) ಜೈವಿಕ ತಂತ್ರಜ್ಞಾನ;

(ಪಿ) ಅಣಬೆ ಕೃಷಿ;

(ಕ್ಯೂ) ತೋಟಗಾರಿಕೆ ಇಂಜಿನಿಯರಿಂಗ್;

(ಆರ್) ಕೋಳಿ ಸಾಗಾಣಿಕೆಯೂ ಸೇರಿದಂತೆ ಪಶು ವೈದ್ಯಕೀಯ ಮತ್ತು ಪ್ರಾಣಿ ವಿಜ್ಞಾನಗಳು;

(ಎಸ್) ಹೈನುಗಾರಿಕೆ ವಿಜ್ಞಾನ ಮತ್ತು ತಂತ್ರಜ್ಞಾನ;

(ಟಿ) ಮೀನು ಕೃಷಿ ಮತ್ತು ಮೀನುಗಾರಿಕೆ ನಿರ್ವಹಣೆ;

(ಯು) ಗ್ರಾಮೀಣಾಭಿವೃದ್ಧಿ;

(ವಿ) ಆಕರ ವಿಜ್ಞಾನಗಳು ಮತ್ತು ಮಾನವಿಕ ಶಾಸ್ತ್ರಗಳು;

(ಡಬ್ಲ್ಯೂ) ಜೇನು ಸಾಕಾಣಿಕೆ ಮತ್ತು ರೇಷ್ಮೆ ವ್ಯವಸಾಯ;

(ಎಕ್ಸ್) ಸರ್ಕಾರ/ ಭಾರತೀಯ ಕೃಷಿ ಸಂಶೋಧನೆ ಪರಿಷತ್ತು ಸಲಹೆ ನೀಡುವ ತೋಟಗಾರಿಕೆಗೆ ಸಂಬಂಧಿಸಿದ ಯಾವುದೇ ಇತರ ವಿಷಯ.

–ಇವುಗಳ ಮೂಲಭೂತ ಮತ್ತು ಆನ್ವಯಿಕ ವಿಜ್ಞಾನಗಳು ಒಳಗೊಳ್ಳುತ್ತವೆ.

(20) "ತೋಟಗಾರಿಕೆ ಸಂಶೋಧನಾ ಕೇಂದ್ರ" ಎಂದರೆ ವಲಯ ತೋಟಗಾರಿಕೆ ಸಂಶೋಧನಾ ಕೇಂದ್ರ, ಪ್ರಮುಖ ತೋಟ ಗಾರಿಕೆ ಸಂಶೋಧನಾ ಕೇಂದ್ರ, ಪ್ರಾದೇಶಿಕ ತೋಟಗಾರಿಕೆ ಸಂಶೋಧನಾ ಕೇಂದ್ರ, ವಿಶ್ವವಿದ್ಯಾಲಯದ ತೋಟಗಾರಿಕೆ ಸಂಶೋಧನಾ ಕೇಂದ್ರ ಅಥವಾ ಇನ್ಯಾವುದೇ ಸಂಶೋಧನಾ ಕೇಂದ್ರ .

(21) "ವಿದ್ಯಾರ್ಥಿನಿಲಯ" ಎಂದರೆ, ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ವಿಶ್ವವಿದ್ಯಾಲಯದ ವಿದ್ಯಾರ್ಥಿ ಗಳಿಗಾಗಿ ವಿಶ್ವವಿದ್ಯಾಲಯದ ಭಾಗವಾಗಿ ಅಥವಾ ಪ್ರತ್ಯೇಕ ವಾಗಿ ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ ಅಥವಾ ಮನ್ನಣೆ ನೀಡಿರುವ ಒಂದು ನಿವಾಸ ಘಟಕ;

(22) "ಅಧಿಕಾರಿ" ಎಂದರೆ, ಅಧಿನಿಯಮ ಅಥವಾ ಶಾಸನಗಳಲ್ಲಿ ನಿರ್ದಿಷ್ಟಪಡಿಸಿರುವಂತೆ ವಿಶ್ವವಿದ್ಯಾಲಯದ ಅಧಿಕಾರಿ.

(23) "ಸಾರ್ವಜನಿಕ – ಖಾಸಗಿ ಪಾಲುಗಾರಿಕೆ" ಎಂದರೆ, ತೋಟಗಾರಿಕೆ ಅಭಿವೃದ್ಧಿ ಮತ್ತು ಉತ್ತೇಜನಕ್ಕಾಗಿ ವಿಶ್ವವಿದ್ಯಾನಿಲಯ ಮತ್ತು ಸಾರ್ವಜನಿಕ/ಖಾಸಗಿ ಸಂಘಗಳ ನಡುವೆ ಮಾಡಿಕೊಂಡ ಜಂಟಿ ಉದ್ಯಮ.

H-252-75

(24) "ಸಂಶೋಧನೆ" ಎಂದರೆ, ತಂತ್ರಜ್ಞಾನಗಳ ಅಭಿವೃದ್ಧಿ.

(25) "ಆವರ್ತಕ ನಿಧಿ" ಎಂದರೆ, ತಂತ್ರಜ್ಞಾನಗಳನ್ನು, ಬೀಜ ಮತ್ತು ಸಸಿ ಸಾಮಾಗ್ರಿಗಳನ್ನು ಅಭಿವೃದ್ಧಿಪಡಿಸಲು ಮತ್ತು ಮುಂದಿನ ಅಭಿವೃದ್ಧಿಗಾಗಿ ಅದೇ ಹಣವನ್ನೇ ಪುನರಾವರ್ತಿಸಿ ತೊಡಗಿಸುವುದಕ್ಕಾಗಿ ವ್ಯಕ್ತಿಗಳಿಗೆ/ಸಂಸ್ಥೆಗಳಿಗೆ ಹಂಚಲಾದ ಬಜೆಟ್.

(26) "ನಿಯಮಿಸಲಾದುದು" ಎಂದರೆ, ವಿಶ್ವವಿದ್ಯಾಲಯದ ಶಾಸನಗಳಿಂದ ನಿಯಮಿಸಲಾದುದು;

(27) "ಕುಲಸಚಿವ" ಎಂದರೆ ವಿಶ್ವವಿದ್ಯಾಲಯದ ಕುಲಸಚಿವ.

(28) "ವಿನಿಯಮಗಳು" ಎಂದರೆ, 54ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ವಿನಿಯಮಗಳು;

(29) "ಸಂಶೋಧನಾ ಪರಿಷತ್ತು" ಎಂದರೆ ವಿಶ್ವವಿದ್ಯಾಲಯದ ಸಂಶೋಧನಾ ಪರಿಷತ್ತು.

(30) "ಅನುಸೂಚಿ" ಎಂದರೆ, ಈ ಅಧಿನಿಯಮಕ್ಕೆ ಅನುಬಂಧಿಸಲಾದ ಅನುಸೂಚಿ;

(31) "ಶಾಸನಗಳು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನೀತಿಗಳು, ಕಾರ್ಯವಿಧಾನಗಳು ಮುಂತಾದ ಅಂಶಗಳಿಗೆ ವ್ಯಾಪಿಸುವ ವಿಶ್ವವಿದ್ಯಾಲಯದ ಶಾಸನಗಳು;

(32) "ವಿದ್ಯಾರ್ಥಿ" ಎಂದರೆ, ವಿಶ್ವವಿದ್ಯಾಲಯದಲ್ಲಿ ಕ್ರಮಬದ್ಧವಾಗಿ ಸ್ಥಾಪಿಸಲಾದ ಪದವಿ, ಡಿಪ್ಲೊಮಾ ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಪಡೆಯಲು ವ್ಯಾಸಂಗ ಕ್ರಮದಲ್ಲಿ ಅಧ್ಯಯನ ಮಾಡುವುದಕ್ಕಾಗಿ ವಿಶ್ವವಿದ್ಯಾಲಯದ ಘಟಕ ಕಾಲೇಜಿನಲ್ಲಿ ಅಥವಾ ಒಂದು ಸಂಯೋಜಿತ ಕಾಲೇಜಿನಲ್ಲಿ ಪ್ರವೇಶ ನೀಡಿ ಹೆಸರುಪಟ್ಟಿಯಲ್ಲಿ ಸೇರಿಸಲಾಗಿರುವಂಥ ಒಬ್ಬ ವ್ಯಕ್ತಿ;

(33) "ಅಧ್ಯಾಪಕರು" ಎಂದರೆ, ಸಹಾಯಕ ಪ್ರಾಧ್ಯಾಪಕರ ದರ್ಜೆಗೆ ಕಡಿಮೆಯಿಲ್ಲದ ಬೋಧನೆ ನೀಡುವ ಅಥವಾ ಸಂಶೋಧನೆ ಮತ್ತು /ಅಥವಾ ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳನ್ನು ನಡೆಸುವ ಮತ್ತು ಅದಕ್ಕೆ ಮಾರ್ಗದರ್ಶನ ನೀಡುವ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯದಿಂದ ನೇಮಕಗೊಂಡ ಅಥವಾ ಮಾನ್ಯತೆ ಪಡೆದ ಒಬ್ಬ ವ್ಯಕ್ತಿ ಮತ್ತು ಇದು ಅಧ್ಯಾಪಕರೆಂದು

ಶಾಸನಗಳ ಮೂಲಕ ಘೋಷಿಸಲ್ಪಡ ಬಹುದಾದ ಇತರೆ ಯಾವುದೇ ವ್ಯಕ್ತಿಯನ್ನೂ ಒಳಗೊಳ್ಳಬಹುದು.

(34) "ತಂತ್ರಜ್ಞಾನ ವರ್ಗಾವಣೆ (ಟಿಓಟಿ) ಘಟಕಗಳು" ಎಂದರೆ, ವಿಜ್ಞಾನ ಕೇಂದ್ರ, ವಿಸ್ತರಣಾ ಶಿಕ್ಷಣ ಘಟಕಗಳು (ಇಇಯುಎಸ್), ಸಿಬ್ಬಂದಿ ತರಬೇತಿ ಘಟಕಗಳು (ಎಸ್‌ಟಿಯು), ತೋಟಗಾರಿಕೆ ತಂತ್ರಜ್ಞಾನ ಮಾಹಿತಿ ಕೇಂದ್ರ (ಹೆಚ್‌ಟಿಐಸಿ). ಬೇಕರಿ ತರಬೇತಿ ಘಟಕ(ಬಿಟಿಯು), ಸುಗ್ಗಿ ತರುವಾಯದ ತಂತ್ರಜ್ಞಾನದ ಸಂಸ್ಥೆ (ಪಿಹೆಚ್‌ಟಿಐ) ಮತ್ತು ವಿಶ್ವವಿದ್ಯಾಲಯವು ಸ್ಥಾಪಿಸಿದಂಥ ಇತರ ಕೇಂದ್ರಗಳು.

(35) "ಘಟಕ" ಎಂದರೆ, ಕಾಲೇಜು /ಸಂಶೋಧನಾ ಕೇಂದ/ ವಿಸ್ತರಣಾ ಶಿಕ್ಷಣ ಘಟಕಗಳು/ ತೋಟಗಾರಿಕೆ ವಿಜ್ಞಾನ ಕೇಂದ್ರಗಳು ಮತ್ತು ತೋಟಗಾರಿಕೆಗೆ ಸಂಬಂಧಪಟ್ಟ ಇತರ ಸಂಸ್ಥೆಗಳು.

(36) "ವಿಶ್ವವಿದ್ಯಾಲಯ" ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ;

(37) "ವಿಶ್ವವಿದ್ಯಾಲಯ ಪ್ರದೇಶ" ಎಂದರೆ, ವಿಶ್ವವಿದ್ಯಾಲಯದ ಅಧಿಕಾರ ಕ್ಷೇತ್ರ ವ್ಯಾಪ್ತಿಯಲ್ಲಿನ ಪ್ರದೇಶ;

(38) "ಕುಲಪತಿ" ಎಂದರೆ, ವಿಶ್ವವಿದ್ಯಾಲಯದ ಕುಲಪತಿ.

(39) "ವಿಜ್ಞಾನ ಕೇಂದ್ರ " ಎಂದರೆ, ತೋಟಗಾರಿಕೆ ವಿಜ್ಞಾನ ಕೇಂದ್ರ (ಟಿವಿಕೆ), ಕೃಷಿ ವಿಜ್ಞಾನ ಕೇಂದ್ರ (ಕೆವಿಕೆ).

ಅಧ್ಯಾಯ – II

ವಿಶ್ವವಿದ್ಯಾಲಯ

3. ವಿಶ್ವವಿದ್ಯಾಲಯದ ಸ್ಥಾಪನೆ ಮತ್ತು ನಿಗಮನ.– (1) ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಕೂಡಲೇ ರಾಜ್ಯದಲ್ಲಿ "ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ" ಎಂಬ ಹೆಸರಿನ ಒಂದು ವಿಶ್ವವಿದ್ಯಾಲಯವು ಸ್ಥಾಪನೆಯಾಗತಕ್ಕದ್ದು.

(2) ವಿಶ್ವವಿದ್ಯಾಲಯವು ಒಂದು ನಿಗಮಿತ ನಿಕಾಯವಾಗಿರತಕ್ಕದ್ದು, ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿ

ರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(3) ಈ ಅಧಿನಿಯಮದಲ್ಲಿ ನಮೂದಿಸಲಾದಂತೆ ಅಥವಾ ಶಾಸನಗಳಲ್ಲಿ ಉಪಬಂಧ ಕಲ್ಪಿಸಲಾದಂತೆ, ವಿಶ್ವವಿದ್ಯಾಲಯವು ಕುಲಾಧಿಪತಿಯವರು, ಒಬ್ಬರು ಕುಲಪತಿಯವರು, ವ್ಯವಸ್ಥಾಪನಾ ಮಂಡಳಿ, ವಿದ್ಯಾವಿಷಯಕ ಪರಿಷತ್ತು, ಸಂಶೋಧನಾ ಪರಿಷತ್ತು, ವಿಸ್ತರಣಾ ಶಿಕ್ಷಣ ಪರಿಷತ್ತು ಮತ್ತು ಇತರ ಪ್ರಾಧಿಕಾರಗಳು ಹಾಗೂ ಅಧಿಕಾರಿಗಳು ಮತ್ತು ಘಟಕ ನಿಕಾಯಗಳನ್ನು ಹೊಂದಿರತಕ್ಕದ್ದು.

(4) ವಿಶ್ವವಿದ್ಯಾಲಯವು, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಆರ್ಜಿಸಲು ಮತ್ತು ಧಾರಣ ಮಾಡಲು, ವಿಶ್ವವಿದ್ಯಾಲಯದ ಉದ್ದೇಶಗಳಿಗಾಗಿ ಅದರಲ್ಲಿ ನಿಹಿತವಾಗಿರಬಹುದಾದ ಅಥವಾ ಅದರಿಂದ ಆರ್ಜಿತವಾಗಿರಬಹುದಾದ ಯಾವುದೇ ಚರ ಮತ್ತು ಸ್ಥಿರ ಸ್ವತ್ತನ್ನು ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಡನೆ ಗುತ್ತಿಗೆಗೆ ನೀಡಲು, ಮಾರಾಟ ಮಾಡಲು ಅಥವಾ ಅನ್ಯಥಾ ವರ್ಗಾವಣೆ ಮಾಡಲು ಮತ್ತು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಅಥವಾ ಇತರ ಯಾವುದೇ ಅನುಮೋದಿತ ಮೂಲಗಳಿಂದ ಹಣವನ್ನು ಸಾಲ ಪಡೆದು ಮತ್ತು ಈ ಅಧಿನಿಯಮದ ಉದ್ದೇಶಕ್ಕಾಗಿ ಅವಶ್ಯವಾದ ಇತರ ಎಲ್ಲಾ ಕಾರ್ಯಗಳನ್ನು ನಿರ್ವಹಿಸಲು ಸಕ್ಷಮವಾ ಗಿರತಕ್ಕದ್ದು.

(5) ವಿಶ್ವವಿದ್ಯಾಲಯವು ಹೂಡಿದ ಅಥವಾ ಅದರ ವಿರುದ್ಧ ಹೂಡಲಾದ ಎಲ್ಲಾ ದಾವೆಗಳಲ್ಲಿ ಮತ್ತು ಇತರ ಕಾನೂನು ವ್ಯವಹರಣೆಗಳಲ್ಲಿ ವಾದ ಪ್ರತಿವಾದ ಪತ್ರಗಳಿಗೆ ಕುಲಸಚಿವರು ಸಹಿ ಮಾಡಿ ಸತ್ಯಾಪನೆ ಮಾಡತಕ್ಕದ್ದು ಮತ್ತು ಅಂತಹ ದಾವೆಗಳಲ್ಲಿನ ಹಾಗೂ ವ್ಯವಹರಣೆಗಳಲ್ಲಿನ ಎಲ್ಲಾ ಆದೇಶಿಕೆಗಳನ್ನು ಕುಲಸಚಿವರಿಗೆ ನೀಡತಕ್ಕದ್ದು ಮತ್ತು ಅವರಿಗೆ ಜಾರಿ ಮಾಡತಕ್ಕದ್ದು.

(6) ವಿಶ್ವವಿದ್ಯಾಲಯದ ಕೇಂದ್ರ ಕಛೇರಿಯು ಬಾಗಲಕೋಟೆಯಲ್ಲಿ ಇರತಕ್ಕದ್ದು.

4. ಅಧಿಕಾರ ಕ್ಷೇತ್ರ ವ್ಯಾಪ್ತಿ ಮತ್ತು ಘಟಕ ನಿಕಾಯಗಳು.– (1) ಈ ಅಧಿನಿಯಮದಲ್ಲಿ ಪರಿಭಾಷಿಸಲಾದಂತೆ, ವಿಶ್ವವಿದ್ಯಾಲಯದ ಅಥವಾ ಕಾಲೇಜು ಮಟ್ಟದಲ್ಲಿ ತೋಟಗಾರಿಕೆ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳ ಭೋಧನೆಗೆ ಸಂಬಂಧಪಟ್ಟಂತೆ ಈ

ವಿಶ್ವವಿದ್ಯಾಲಯದ ಅಧಿಕಾರ ವ್ಯಾಪ್ತಿ ಮತ್ತು ಜವಾಬ್ದಾರಿಯು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗಿರತಕ್ಕದ್ದು.

(2) ವಿಶ್ವವಿದ್ಯಾಲಯವು ಸ್ಥಾಪನೆಯಾದ ದಿನಾಂಕದಂದು ಮತ್ತು ದಿನಾಂಕದಿಂದ ವಿಶ್ವವಿದ್ಯಾಲಯದ ಘಟಕ ಅಥವಾ ಸಂಯೋಜಿತ ಕಾಲೇಜು ಆಗಿ ಅಲ್ಲದೆ ಅನ್ಯಥಾ ತೋಟಗಾರಿಕೆಯಲ್ಲಿ ಶಿಕ್ಷಣವನ್ನು ನೀಡುವ ಯಾವುದೇ ಹೊಸ ಕಾಲೇಜನ್ನು ಸ್ಥಾಪಿಸತಕ್ಕದ್ದಲ್ಲ.

(3) ವಿಶ್ವವಿದ್ಯಾಲಯದ ಅಧಿಕಾರ ಕ್ಷೇತ್ರ ವ್ಯಾಪ್ತಿ ಮತ್ತು ಪ್ರಾಧಿಕಾರ ದಡಿಯಲ್ಲಿ ಬರುವ ಎಲ್ಲಾ ತೋಟಗಾರಿಕೆ ಕಾಲೇಜುಗಳು, ತೋಟಗಾರಿಕೆ ಸಂಶೋಧನಾ ಕೇಂದ್ರಗಳು, ತೋಟಗಾರಿಕೆ ವಿಜ್ಞಾನ ಕೇಂದ್ರಗಳು ಮತ್ತು ಇತರ ಸಂಸ್ಥೆಗಳು ವಿಶ್ವವಿದ್ಯಾಲಯದ ಘಟಕ ಭಾಗಗಳಾಗಿ ವಿಶ್ವವಿದ್ಯಾಲಯದ ಅಧಿಕಾರಿಗಳು ಮತ್ತು ಪ್ರಾಧಿಕಾರಗಳ ಪೂರ್ಣ ಆಡಳಿತ ನಿರ್ವಹಣೆ ಮತ್ತು ನಿಯಂತ್ರಣದಡಿಯಲ್ಲಿ ಬರತಕ್ಕದ್ದು. ವಿಶ್ವವಿದ್ಯಾಲಯದಿಂದ ಸಂಯೋಜಿತ ಕಾಲೇಜು ಎಂದು ಮಾನ್ಯತೆ ಪಡೆದ ಹೊರತು ಯಾವ ಘಟಕವನ್ನು ಸಂಯೋಜಿತ ಕಾಲೇಜು ಎಂದು ಮಾನ್ಯ ಮಾಡತಕ್ಕದ್ದಲ್ಲ.

(4) ವಿಶ್ವವಿದ್ಯಾಲಯವು ಪ್ರಾದೇಶಿಕ ಅಧಿಕಾರ ಕ್ಷೇತ್ರ ವ್ಯಾಪ್ತಿಯಲ್ಲಿ ಹಾಗೂ ಅಧಿಕಾರ ವ್ಯಾಪ್ತಿಯಿಂದ ಹೊರಗೆ ಸಂಶೋಧನೆ ವಿಸ್ತರಣೆ ಮತ್ತು ನಿರ್ವಹಣೆಗಳನ್ನೊಳಗೊಂಡ ತನ್ನ ಘಟಕ ನಿಕಾಯಗಳ ಸ್ಥಾಪನೆ ಮತ್ತು ಅಭಿವೃದ್ಧಿಗೆ ಜವಾಬ್ದಾರಿಯನ್ನು ವಹಿಸಿಕೊಳ್ಳಬಹುದು.

(5) ಪ್ರತಿಯೊಂದು ವಿಶ್ವವಿದ್ಯಾಲಯವು ಅನೇಕ ವಿಭಿನ್ನ ಶಾಸ್ತ್ರಗಳ ದೃಷ್ಟಿಯಿಂದ ಅಧ್ಯಯನ ಮಾಡುವ ವಿದ್ಯಾ ವಿಷಯಕ ಕಾರ್ಯಕ್ರಮಗಳ ಮತ್ತು ಸಂಶೋಧನಾ ಯೋಜನೆಗಳ ಸಂಬಂಧದಲ್ಲಿ ಇತರ ವಿಶ್ವವಿದ್ಯಾಲಯಗಳು ಅಥವಾ ಭಾರತದ ಮತ್ತು ವಿದೇಶದ ಖ್ಯಾತ ಸಂಸ್ಥೆಗಳೊಂದಿಗೆ ವಿದ್ಯಾವಿಷಯಕ ಕಾರ್ಯಕ್ರಮಗಳ ಸಹಯೋಗ ಮಾಡಿಕೊಳ್ಳಬಹುದು.

5. **ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳು.–** ಈ ವಿಶ್ವವಿದ್ಯಾಲಯವನ್ನು ಈ ಮುಂದಿನ ಧ್ಯೇಯೋದ್ದೇಶಗಳಿಗಾಗಿ ಸ್ಥಾಪಿಸಲಾಗಿದೆ ಮತ್ತು ನಿಗಮಿತಗೊಳಿಸಲಾಗಿದೆ ಎಂದು ಭಾವಿಸತಕ್ಕದ್ದು, ಎಂದರೆ:–

(ಎ) 2ನೇ ಪ್ರಕರಣದ (19)ನೇ ಖಂಡದಲ್ಲಿ ನಿರ್ದಿಷ್ಟಪಡಿಸಿದಂತೆ ಅಧ್ಯಯನದ ವಿವಿಧ ಶಾಖೆಗಳಲ್ಲಿ ಉತ್ತಮ ಗುಣಮಟ್ಟದ ಮಾನವ ಸಂಪನ್ಮೂಲವನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ಶಿಕ್ಷಣ ನೀಡುವುದಕ್ಕೆ ಏರ್ಪಾಡು ಮಾಡುವುದು;

(ಬಿ) ದೂರ ಶಿಕ್ಷಣವೂ ಸೇರಿದಂತೆ ಕಲಿಕೆ ಮತ್ತು ಸಂಶೋಧನೆಗೆ ಅದರಲ್ಲೂ ತೋಟಗಾರಿಕೆ ಮತ್ತು ಇತರೆ ಸಂಬಂಧಿತ ವಿಜ್ಞಾನದ ಕಲಿಕೆ ಮತ್ತು ಸಂಶೋಧನೆಯ ಮುನ್ನಡೆಗೆ ಉತ್ತೇಜನ ನೀಡುವುದು;

(ಸಿ) ಜನತೆಗೆ ವಿಶೇಷವಾಗಿ ರಾಜ್ಯದ ಗ್ರಾಮಾಂತರ ಜನರಿಗೆ, ಅಂಥ ವಿಜ್ಞಾನ ಮತ್ತು ತಂತ್ರಜ್ಞಾನಗಳ ವಿಸ್ತರಣಾ ಶಿಕ್ಷಣವನ್ನು ಕೈಗೊಳ್ಳುವುದು;

(ಡಿ) ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಹಾಗೂ ಅರೆಸರ್ಕಾರಿ/ ಸರ್ಕಾರಿ/ಖಾಸಗಿ ಮತ್ತಿತರ ಶೈಕ್ಷಣಿಕ, ಕೈಗಾರಿಕಾ, ಸಂಶೋಧನೆ ಸಂಸ್ಥೆಗಳೊಂದಿಗೆ ಪಾಲುಗಾರಿಕೆ ಮತ್ತು ಜೋಡಣೆಗಳನ್ನು ಉತ್ತೇಜಿಸುವುದು.

(ಇ) ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ ಕಾಲದಿಂದ ಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ಇತರ ಉದ್ದೇಶಗಳು;

6. ವಿಶ್ವವಿದ್ಯಾಲಯಕ್ಕೆ ಪ್ರವೇಶ.– (1) ವಿಶ್ವವಿದ್ಯಾಲಯವು ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳಿಗೊಳಪಟ್ಟು ಎಲ್ಲ ವ್ಯಕ್ತಿಗಳಿಗೂ ಮುಕ್ತವಾಗಿರತಕ್ಕದ್ದು:

ಪರಂತು, ಈ ಪ್ರಕರಣದಲ್ಲಿರುವುದಾವುದೂ, ಪ್ರವೇಶಕ್ಕಾಗಿ ಅಥವಾ ವಿಶ್ವವಿದ್ಯಾಲಯದ ಪಟ್ಟಿಗಳಲ್ಲಿ ಉಳಿದುಕೊಳ್ಳುವುದಕ್ಕಾಗಿ ನಿಯಮಿಸಲಾದ ಶೈಕ್ಷಣಿಕ ಗುಣಮಟ್ಟಗಳನ್ನು ಪೂರೈಸದಿರುವ ಯಾವೊಬ್ಬ ವ್ಯಕ್ತಿಗೆ ಅಥವಾ ಯಾವ ವ್ಯಕ್ತಿಗಳ ಶೈಕ್ಷಣಿಕ ದಾಖಲೆಗಳು, ಪದವಿಯನ್ನು ನೀಡುವುದಕ್ಕಾಗಿ ಅಗತ್ಯಪಡಿಸಲಾದ ಕನಿಷ್ಠ ಗುಣಮಟ್ಟಕ್ಕಿಂತ ಕಡಿಮೆ ಇವೆಯೋ ಆ ವ್ಯಕ್ತಿಗಳಿಗೆ ಅಥವಾ ಯಾರ ವೈಯಕ್ತಿಕ ನಡತೆಯು ವಿಶ್ವವಿದ್ಯಾಲಯದ ಹಿತದೃಷ್ಟಿಗೆ ಅಥವಾ ಇತರ ವಿದ್ಯಾರ್ಥಿಗಳ ಮತ್ತು ಸಿಬ್ಬಂದಿಯ ಸೂಕ್ತ ಹಕ್ಕುಗಳಿಗೆ ಮತ್ತು ವಿಶೇಷಾಧಿಕಾರಗಳಿಗೆ ಹಾನಿಕಾರಕವಾಗಿರುವಂಥದ್ದಾಗಿದೆಯೋ ಆ ವ್ಯಕ್ತಿಗಳಿಗೆ ಯಾವುದೇ ವ್ಯಾಸಂಗ ಕ್ರಮಕ್ಕೆ ಪ್ರವೇಶ ನೀಡಲು ವಿಶ್ವವಿದ್ಯಾಲಯವನ್ನು ಅಗತ್ಯಪಡಿಸತಕ್ಕದ್ದಲ್ಲ:

ಮತ್ತು ಪರಂತು, ಈ ಪ್ರಕರಣದಲ್ಲಿರುವುದಾವುದೂ, ವಿದ್ಯಾವಿಷಯಕ ಪರಿಷತ್ತು ನಿರ್ಧರಿಸಿದಂತೆ ವಿಶ್ವವಿದ್ಯಾಲಯದ ಅಥವಾ ಯಾವುದೇ ನಿರ್ದಿಷ್ಟ ಕಾಲೇಜಿನ ಅಥವಾ ವಿಭಾಗದ ಲಭ್ಯವಿರುವ ಫ್ಯಾಕಲ್ಟಿಗಳಲ್ಲಿ ಸ್ಥಳಾವಕಾಶ ನೀಡಬಹುದಾದದ್ದಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿಗೆ ಯಾವುದೇ ವ್ಯಾಸಂಗ ಕ್ರಮಗಳಿಗೆ ಪ್ರವೇಶ ನೀಡಲು ವಿಶ್ವವಿದ್ಯಾಲಯವನ್ನು ಅಗತ್ಯಪಡಿಸುತ್ತದೆಂದು ಭಾವಿಸತಕ್ಕದ್ದಲ್ಲ.

(2) (1) ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಸರ್ಕಾರವು ಈ ಸಂಬಂಧದಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ವಿದ್ಯಾರ್ಹತೆಗಳನ್ನು ಹೊಂದಿದ ಮಹಿಳೆಯರಿಗೆ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗೆ, ಕೃಷಿಕರ ಮಕ್ಕಳಿಗೆ ಇತರೆ ರಾಜ್ಯಗಳ ವಿದ್ಯಾರ್ಥಿಗಳಿಗೆ, ವಿದೇಶಿ ವಿದ್ಯಾರ್ಥಿಗಳಿಗೆ ಮತ್ತು ಸರ್ಕಾರವು ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಕೃಷಿ ಕುರಿತ ಪ್ರಾಯೋಗಿಕ ಪರೀಕ್ಷೆಯಲ್ಲಿ ಉತ್ತೀರ್ಣರಾದ ಸ್ವಾತಂತ್ರ ಹೋರಾಟಗಾರರ, ಸೈನಿಕರ ಮತ್ತು ಮಾಜಿ ಸೈನಿಕರ ಮಕ್ಕಳಿಗೆ ಹಾಗೂ ಪ್ರತಿಪಾಲಿತರಿಗೆ ಮತ್ತು ಸರ್ಕಾರವು ಈ ಸಂಬಂಧದಲ್ಲಿ ಘೋಷಿಸಬಹುದಾದಂಥ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ನಾಗರಿಕರಿಗೆ ವಿಶ್ವವಿದ್ಯಾಲಯದ ಕಾಲೇಜುಗಳಲ್ಲಿ ಸ್ಥಾನಗಳನ್ನು ಮೀಸಲಿರಿಸತಕ್ಕದ್ದು ಎಂದು ನಿರ್ದೇಶಿಸತಕ್ಕದ್ದು ಮತ್ತು ಹಾಗೆ ನಿರ್ದೇಶನಗಳನ್ನು ನೀಡಿದಾಗ ವಿಶ್ವವಿದ್ಯಾಲಯವು ಅದರಂತೆ ಮೀಸಲಾತಿಗಳನ್ನು ಮಾಡತಕ್ಕದ್ದು.

ವಿವರಣೆ:- ಈ ಉಪಪ್ರಕರಣದ ಉದ್ದೇಶಕ್ಕಾಗಿ,-

(i) "ಕೃಷಿಕ" ಎಂದರೆ, ಮಾಲೀಕನಾಗಿ ಭೂಮಿಯನ್ನು ಹೊಂದಿರುವ ವ್ಯಕ್ತಿ ಹಾಗೂ ಯಾರ ಮುಖ್ಯ ಆದಾಯವು ಸ್ವಂತ ಸಾಗುವಳಿ ಮಾಡುವುದರಿಂದ ಬರುತ್ತದೋ ಆ ವ್ಯಕ್ತಿ ಮತ್ತು ಇದು ಮುಖ್ಯವಾಗಿ ಕೃಷಿ ಭೂಮಿಗಳಲ್ಲಿ ದೈಹಿಕ ದುಡಿಮೆಯಿಂದ ತನ್ನ ಜೀವನ ನಿರ್ವಹಣೆ ಮಾಡುತ್ತಿರುವ ವ್ಯಕ್ತಿಗಳನ್ನು ಒಳಗೊಳ್ಳುತ್ತದೆ.

(ii) "ಸ್ವಾತಂತ್ರ ಹೋರಾಟಗಾರ" ಎಂದರೆ, ಸರ್ಕಾರವು ಕಾಲ ಕಾಲಕ್ಕೆ ಹಾಗೆಂದು ಘೋಷಿಸುವ ಪ್ರವರ್ಗದ ವ್ಯಕ್ತಿ.

7. ವಿಶ್ವವಿದ್ಯಾಲಯದ ಅಧಿಕಾರ ಮತ್ತು ಪ್ರಕಾರ್ಯಗಳು.– ವಿಶ್ವವಿದ್ಯಾಲಯವು ಈ ಮುಂದಿನ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಹೊಂದಿರತಕ್ಕದ್ದು, ಎಂದರೆ:–

(1) ತೋಟಗಾರಿಕೆ ಮತ್ತು ಸಂಬಂಧಿತ ಇತರ ಕಲಿಕೆಯ ವಿಭಾಗಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯವು ಸೂಕ್ತ ಎಂದು ಭಾವಿಸಬಹುದಾದ ಶಿಕ್ಷಣವನ್ನು ಒದಗಿಸುವುದು;

(2) ತೋಟಗಾರಿಕೆ ಮತ್ತು ಸಂಬಂಧಿತ ಕಲಿಕೆಯ ವಿಭಾಗಗಳಲ್ಲಿ ಸಂಶೋಧನೆಯನ್ನು ನಡೆಸುವುದಕ್ಕೆ ಅವಕಾಶವನ್ನು ನೀಡುವುದು.

(3) ಸಂಶೋಧನೆಯಿಂದ ತಿಳಿದುಬಂದ ವಿಷಯಗಳನ್ನು ಮತ್ತು ತಾಂತ್ರಿಕ ಮಾಹಿತಿಗಳನ್ನು ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳ ಮೂಲಕ ಪ್ರಸಾರ ಮಾಡಲು ಅವಕಾಶ ಕಲ್ಪಿಸುವುದು;

(4) ಯಾವುದೇ ಇತರ ವಿಶ್ವವಿದ್ಯಾಲಯದಲ್ಲಿ ಅಥವಾ ಈ ಉದ್ದೇಶಕ್ಕಾಗಿ ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಅರೆಕಾಲಿಕ ವ್ಯಾಸಂಗ ಕ್ರಮ ಮತ್ತು / ಅಥವಾ ಸಂಶೋಧನೆಯು ಸೇರಿದಂತೆ ವಿಶ್ವವಿದ್ಯಾಲಯದಲ್ಲಿ ನಿಯಮಿಸಿದ ವ್ಯಾಸಂಗ ಕ್ರಮದಲ್ಲಿ ಅಧ್ಯಯನ ಮಾಡುವ ಅಥವಾ ಸಂಶೋಧನೆ ನಡೆಸುವ ಅಥವಾ ಅವರೆಡನ್ನೂ ಮಾಡುವ ವ್ಯಕ್ತಿಗಳಿಗೆ ಪದವಿಗಳು, ಡಿಪ್ಲೊಮಗಳು ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಾಗಿ ವ್ಯಾಸಂಗ ಕ್ರಮಗಳನ್ನು ಪ್ರಾರಂಭಿಸುವುದು ಹಾಗೂ ಪರೀಕ್ಷೆಗಳನ್ನು ನಡೆಸುವುದು ಮತ್ತು ಪದವಿ, ಡಿಪ್ಲೋಮಾ ಮತ್ತಿತರ ಶೈಕ್ಷಣಿಕ ಪ್ರಶಸ್ತಿ ನೀಡುವುದು;

(5) ನಿಯಮಿಸಬಹುದಾದಂಥ ಗೌರವ ಪದವಿಗಳು ಮತ್ತು ಇತರ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು;

(6) ರೈತರಿಗೆ, ಕ್ಷೇತ್ರ ಕೆಲಸಗಾರರಿಗೆ, ಗ್ರಾಮೀಣ ಮುಖಂಡರಿಗೆ ಮತ್ತು ವಿಶ್ವವಿದ್ಯಾಲಯದಲ್ಲಿ ಕ್ರಮಬದ್ಧ ವಿದ್ಯಾರ್ಥಿಗಳಾಗಿ ಭರ್ತಿಯಾಗಿರದ ಇತರ ವ್ಯಕ್ತಿಗಳಿಗೆ ತರಬೇತಿಯನ್ನು ನೀಡುವುದು;

(7) 4ನೇ ಪ್ರಕರಣದಲ್ಲಿ ನಮೂದಿಸಿರುವ ಮಿತಿಗಳಿಗೊಳಪಟ್ಟು, ವಿಶ್ವವಿದ್ಯಾಲಯವು ನಿರ್ಧರಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಉದ್ದೇಶಗಳಿಗಾಗಿ ಇತರ ವಿಶ್ವವಿದ್ಯಾಲಯಗಳು ಮತ್ತು ಸಂಸ್ಥೆಗಳೊಡನೆ ಜೊತೆಗೂಡಿ ಕೆಲಸಮಾಡುವುದು;

(8) ತೋಟಗಾರಿಕೆ ಮತ್ತು ಸಂಬಂಧಿತ ವಿಜ್ಞಾನಗಳಿಗೆ ಸಂಬಂಧಿಸಿದ ಕಾಲೇಜುಗಳು ಮತ್ತು ಇತರ ಸಂಸ್ಥೆಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(9) ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣಕ್ಕಾಗಿ ಪ್ರಯೋಗಾಲಯಗಳು, ಗ್ರಂಥಾಲಯಗಳು, ಸಂಶೋಧನಾ ಕೇಂದ್ರಗಳು ಮತ್ತು ಸಂಸ್ಥೆಗಳು ಮತ್ತು ವಸ್ತುಸಂಗ್ರಹಾಲಯಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(10) ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣಕ್ಕಾಗಿ ಹುದ್ದೆಗಳನ್ನು ಸೃಜಿಸುವುದು ಮತ್ತು ಅಂಥ ಹುದ್ದೆಗಳಿಗೆ ವ್ಯಕ್ತಿಗಳನ್ನು ನೇಮಿಸುವುದು;

(11) ಆಡಳಿತಾತ್ಮಕವಾದ ಮತ್ತು ಇತರ ಹುದ್ದೆಗಳನ್ನು ಸೃಜಿಸುವುದು ಮತ್ತು ಅಂಥ ಹುದ್ದೆಗಳಿಗೆ ವ್ಯಕ್ತಿಗಳನ್ನು ನೇಮಕ ಮಾಡುವುದು;

(12) ಶಾಸನಗಳನ್ವಯ ಫೆಲೋಶಿಪ್, ವಿದ್ಯಾರ್ಥಿವೇತನಗಳು, ಸ್ಟೈಪೆಂಡುಗಳು ಮತ್ತು ಬಹುಮಾನಗಳನ್ನು ಸ್ಥಾಪಿಸುವುದು ಮತ್ತು ನೀಡುವುದು;

(13) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳಿಗೆ ನಿವಾಸ ಗೃಹಗಳನ್ನು ನಿರ್ಮಿಸುವುದು ಮತ್ತು ನಿರ್ವಹಿಸಿಕೊಂಡು ಬರುವುದು;

(14) ನಿಯಮಿಸಲಾದಂಥ ಫೀಜು ಮತ್ತು ಇತರೆ ಚಾರ್ಜುಗಳನ್ನು ನಿಗದಿಪಡಿಸುವುದು, ಕೋರುವುದು ಮತ್ತು ಸ್ವೀಕರಿಸುವುದು;

(15) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ನಿವಾಸ, ನಡತೆ ಮತ್ತು ಶಿಸ್ತನ್ನು ಮೇಲ್ವಿಚಾರಣೆ ಮಾಡುವುದು ಮತ್ತು ನಿಯಂತ್ರಿಸುವುದು ಹಾಗೂ ಅವರ ಆರೋಗ್ಯ ಮತ್ತು ಕ್ಷೇಮಾಭಿವೃದ್ಧಿಯನ್ನು ವರ್ಧಿಸುವುದಕ್ಕಾಗಿ ಏರ್ಪಾಡುಗಳನ್ನು ಮಾಡುವುದು;

(16) ವಿದೇಶಗಳಿಂದ ಮತ್ತು ದೇಶದ ಒಳಗಿನಿಂದ ವಂತಿಗೆಗಳನ್ನು ಸ್ವೀಕರಿಸುವುದು:

ಪರಂತು, ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದ ಹೊರತು ವಿಶ್ವವಿದ್ಯಾಲಯವು ವಿದೇಶದಿಂದ, ವಿದೇಶಿ ಪ್ರತಿಷ್ಠಾನಗಳು ಮತ್ತು ಅಂಥ ದೇಶದ ಯಾವುದೇ ವ್ಯಕ್ತಿಯಿಂದ ವಂತಿಗೆಗಳನ್ನು ಸ್ವೀಕರಿಸತಕ್ಕದ್ದಲ್ಲ.

(17) ಭಾರತದ ಹೊರಗೆ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಗಳಿಗೆ ತನ್ನ ವಿಶೇಷಾಧಿಕಾರಕ್ಕೆ ಪ್ರವೇಶಾವಕಾಶವನ್ನು ನೀಡಲು ವಿಶ್ವವಿದ್ಯಾಲಯಕ್ಕೆ ಅನುಮತಿಸುವುದು;

(18) ವಿವಿಧ ಶಾಸನಗಳಡಿಯಲ್ಲಿ ನಿರ್ಧರಿಸಿದಂತೆ ತೋಟಗಾರಿಕೆ ಮತ್ತು ಸಂಬಂಧಿತ ವಿಜ್ಞಾನಗಳಲ್ಲಿ ಕಲಿಕೆಯನ್ನು ನಡೆಸಲು ಖಾಸಗಿ ತೋಟಗಾರಿಕೆ ಸಂಸ್ಥೆಗಳಿಗೆ ಸಂಯೋಜನೆ ನೀಡುವುದು.

(19) ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳ ಪುರೋಭಿವೃದ್ಧಿಗೆ ಅಗತ್ಯವಾಗಬಹುದಾದ ಎಲ್ಲಾ ಚಟುವಟಿಕೆಗಳು ಮತ್ತು ಕಾರ್ಯಗಳನ್ನು ಅವು ಮೇಲೆ ಹೇಳಿದ ಅಧಿಕಾರಗಳಿಗೆ ಪ್ರಾಸಂಗಿಕವಾಗಿರಲಿ ಇಲ್ಲದಿರಲಿ ಮಾಡುವುದು:

8. ವಿಶ್ವವಿದ್ಯಾಲಯದ ಕೆಲವು ಕಾಲೇಜುಗಳ, ಸಂಸ್ಥೆಗಳ ಮತ್ತು ನೌಕರರ ವರ್ಗಾವಣೆ.– (1) ಕರ್ನಾಟಕ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ 1963ರಲ್ಲಿ (1963ರ ಕರ್ನಾಟಕ ಅಧಿನಿಯಮ 22) ಏನೇ ಇದ್ದರೂ ಅನುಸೂಚಿ – I ರಲ್ಲಿ ನಿರ್ದಿಷ್ಟಪಡಿಸಿದ ಕಾಲೇಜುಗಳು, ಸಂಶೋಧನಾ ಕೇಂದ್ರಗಳು, ತೋಟಗಾರಿಕೆ ಬೆಳೆಗಳ ಬಗ್ಗೆ ಅಖಿಲ ಭಾರತ ಸಮನ್ವಯ ಸಂಶೋಧನಾ ಯೋಜನೆಗಳು ಮತ್ತಿತರ ಸಂಸ್ಥೆಗಳು ಹಾಗೂ ಕೃಷಿ ಮತ್ತು ತೋಟಗಾರಿಕೆಯ ರಾಜ್ಯ ಸರ್ಕಾರದ ಇಲಾಖೆಗಳ ಫಾರಂಗಳು ಮತ್ತು ಅವಕ್ಕೆ ಲಗತ್ತಾದ ವಿದ್ಯಾರ್ಥಿ ನಿಲಯಗಳು ಹಾಗೂ ಇತರ ಕಟ್ಟಡಗಳು, ತಮ್ಮ ಪೀಠೋಪಕರಣ ಸಾಮಾಗ್ರಿಗಳು, ಗ್ರಂಥಾಲಯಗಳು, ಪುಸ್ತಕಗಳು, ಪ್ರಯೋಗಾಲಯಗಳು, ದಾಸ್ತಾನು ಮಳಿಗೆಗಳು, ಉಪಕರಣಗಳು, ಸಾಧನಗಳು, ಪರಿಕರಗಳು ಮತ್ತು ಸಲಕರಣೆಗಳ ಸಮೇತವಾಗಿ ಹಾಗೂ ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಮೊದಲು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಧಾರವಾಡ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಹಾಗೂ ರಾಜ್ಯ ಸರ್ಕಾರವು ಮಾಲೀಕತ್ವ ಹೊಂದಿದ್ದ ಮತ್ತು ನಿರ್ವಹಿಸುತ್ತಿದ್ದ ಚರ ಮತ್ತು ಸ್ಥಿರ ಸ್ವತ್ತುಗಳೆರಡು ಸೇರಿದಂತೆ ಇತರ ಎಲ್ಲಾ ಸ್ವತ್ತುಗಳು, ಆಸ್ತಿಗಳು, ಹೊಣೆಗಾರಿಕೆಗಳು ಮತ್ತು ದಾಯಿತ್ವಗಳ ಸಹಿತವಾಗಿ ಅದರ ಎಲ್ಲಾ ಸ್ವತ್ತುಗಳು ಈ ವಿಶ್ವವಿದ್ಯಾಲಯಕ್ಕೆ ವರ್ಗಾಯಿತವಾಗತಕ್ಕದ್ದು ಮತ್ತು ಅದರಲ್ಲಿ ನಿಹಿತವಾಗತಕ್ಕದ್ದು.

(2) ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಮೊದಲು ಸಂದರ್ಭಾನುಸಾರ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಅಥವಾ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಧಾರವಾಡದಲ್ಲಿ ಯಾವುದೇ ಪರೀಕ್ಷೆಗಾಗಿ ವ್ಯಾಸಂಗ ಮಾಡುತ್ತಿರುವ, (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಒಂದು ಕಾಲೇಜಿನ ಅಥವಾ ಸಂಸ್ಥೆಯ ಯಾವೊಬ್ಬ ವಿದ್ಯಾರ್ಥಿಯು ಅದಕ್ಕಾಗಿ ಸಿದ್ದತೆ ನಡೆಸಿದ ತನ್ನ ವ್ಯಾಸಂಗ ಕ್ರಮವನ್ನು ಪೂರ್ಣಗೊಳಿಸಲು ಅನುಮತಿ ನೀಡತಕ್ಕದ್ದು ಮತ್ತು ವಿಶ್ವವಿದ್ಯಾಲಯವು ಅಂತಹ ವಿದ್ಯಾರ್ಥಿಗಳಿಗಾಗಿ ಪರೀಕ್ಷೆಗಳನ್ನು ನಡೆಸಲು ವ್ಯವಸ್ಥೆ ಮಾಡತಕ್ಕದ್ದು.

(3) ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಮೊದಲು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಧಾರವಾಡ ಇವು ಪರೀಕ್ಷೆಗಳನ್ನು ನಡೆಸಿ ಫಲಿತಾಂಶಗಳನ್ನು ಘೋಷಿಸಿದ್ದರೆ ಮತ್ತು ಸಂಬಂಧಪಟ್ಟ ಪದವಿಯನ್ನು ಪ್ರದಾನ ಮಾಡಿರದಿದ್ದರೆ ಅಥವಾ ನೀಡಿರದಿದ್ದರೆ ಅಥವಾ ವ್ಯಾಸಂಗ ಕ್ರಮದ ಅಗತ್ಯತೆಗಳನ್ನು ಪೂರೈಸಿದ್ದರೂ ಅಂತಹ ಪರೀಕ್ಷೆಯ ಫಲಿತಾಂಶಗಳನ್ನು ಘೋಷಿಸಿರದಿದ್ದರೆ, ಆಗ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ಸಂದರ್ಭಾನುಸಾರ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಧಾರವಾಡ ಇವುಗಳು ಫಲಿತಾಂಶವನ್ನು ಘೋಷಿಸತಕ್ಕದ್ದು ಮತ್ತು ಪದವಿಯನ್ನು ಪ್ರದಾನ ಮಾಡತಕ್ಕದ್ದು.

(4) ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಧಾರವಾಡ ಇವುಗಳಿಂದ ನಿಯೋಜಿತರಾಗಿದ್ದ, ಯಾವುದೇ ಕಾಲೇಜಿನಲ್ಲಿ, ಸಂಶೋಧನಾ ಕೇಂದ್ರದಲ್ಲಿ ಅಥವಾ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಸಂಸ್ಥೆಗಳಲ್ಲಿ ಸೇವೆಸಲ್ಲಿಸುತ್ತಿರುವ ಪ್ರತಿಯೊಬ್ಬ ವ್ಯಕ್ತಿಯು ನಿರ್ದಿಷ್ಟಪಡಿಸಿದ ದಿನಾಂಕದಿಂದ ಈ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸತಕ್ಕದ್ದು ಹಾಗೂ ಷರತ್ತುಗಳನ್ನು ಮಾರ್ಪಾಡಿಸಿದ ಹೊರತು ಮತ್ತು ಮಾರ್ಪಾಡಿಸುವ ವರೆಗೆ ಹಾಗೇ ವರ್ಗಾವಣೆ ಮಾಡುವ ಬದಲು ಅನ್ವಯವಾಗುತ್ತಿದ್ದ ಸೇವಾ ಷರತ್ತುಗಳ ಮೇಲೆ ಆತನು ವರ್ಗಾಯಿತನಾಗತಕ್ಕದ್ದು ಮತ್ತು ಅವೇ ಸೇವಾ ಷರತ್ತುಗಳು ಅನ್ವಯಿಸುವುದು ಮುಂದುವರೆಯತಕ್ಕದ್ದು.

(5) ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಅಥವಾ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಧಾರವಾಡ ಇವುಗಳಿಂದ ನಿಯೋಜಿತರಾಗಿದ್ದ ಯಾವುದೇ ಕಾಲೇಜಿನಲ್ಲಿ ಸಂಶೋಧನಾ ಕೇಂದ್ರದಲ್ಲಿ ಅಥವಾ (1)ನೇ ಉಪ

ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರದ ಸಂಸ್ಥೆಗಳಲ್ಲಿ ಸೇವೆಸಲ್ಲಿಸುತ್ತಿರುವ ಪ್ರತಿಯೊಬ್ಬ ವ್ಯಕ್ತಿಯು ನಿರ್ದಿಷ್ಟಪಡಿಸಿದ ದಿನಾಂಕದಿಂದ ಆತನ ಆಯ್ಕೆಯ ಮೇಲೆ ತೋಟಗಾರಿಕೆ ವಿಶ್ವವಿದ್ಯಾಲಯಕ್ಕೆ ಹುದ್ದೆಗಳ ಲಭ್ಯತೆಯ ಆಧಾರದ ಮೇಲೆ ವರ್ಗಾಯಿತನಾಗತಕ್ಕದ್ದು. ಅಂತಹ ವ್ಯಕ್ತಿಯ ಒಪ್ಪಿಗೆಯೊಡನೆ ಷರತ್ತುಗಳನ್ನು ಮಾರ್ಪಾಡಿಸಿದ ಹೊರತು ಮತ್ತು ಮಾರ್ಪಾಡಿಸುವವರೆಗೆ, ಹಾಗೆ ವರ್ಗಾವಣೆ ಮಾಡುವುದಕ್ಕೆ ಮೊದಲು ಅನ್ವಯವಾಗುತ್ತಿದ್ದ ಸೇವಾ ಷರತ್ತುಗಳ ಮೇಲೆ ಆತನು ವರ್ಗಾಯಿತನಾಗತಕ್ಕದ್ದು ಹಾಗೂ ಅವೇ ಸೇವಾ ಷರತ್ತುಗಳು ಅನ್ವಯಿಸುವುದು ಮುಂದುವರೆಯತಕ್ಕದ್ದು.

(6) (1)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಧಾರವಾಡ ಇವುಗಳ ಯಾವುದೇ ಕಾಲೇಜುಗಳಲ್ಲಿ ಸಂಶೋಧನಾ ಕೇಂದ್ರಗಳು/ಸಂಸ್ಥೆಗಳಲ್ಲಿ ಬೋಧಕೇತರ ಸಿಬ್ಬಂದಿಯನ್ನು ಹೊರತುಪಡಿಸಿ ಪ್ರತಿಯೊಬ್ಬ ವ್ಯಕ್ತಿಯು ನಿರ್ದಿಷ್ಟಪಡಿಸಿದ ದಿನಾಂಕದಿಂದ ಆತನ ಆಯ್ಕೆಯ ಮೇಲೆ ತೋಟಗಾರಿಕೆ ವಿಶ್ವವಿದ್ಯಾಲಯಕ್ಕೆ ಹುದ್ದೆಗಳ ಲಭ್ಯತೆಯ ಆಧಾರದ ಮೇಲೆ ವರ್ಗಾಯಿತನಾಗತಕ್ಕದ್ದು. ಅಂತಹ ವ್ಯಕ್ತಿಯ ಒಪ್ಪಿಗೆಯೊಡನೆ ಷರತ್ತುಗಳನ್ನು ಮಾರ್ಪಾಡಿಸಿದ ಹೊರತು ಮತ್ತು ಮಾರ್ಪಾಡಿಸುವವರೆಗೆ, ಹಾಗೆ ವರ್ಗಾವಣೆ ಮಾಡುವುದಕ್ಕೆ ಮೊದಲು ಅನ್ವಯವಾಗುತ್ತಿದ್ದ ಸೇವಾ ಷರತ್ತುಗಳ ಮೇಲೆ ಆತನು ವರ್ಗಾಯಿತನಾಗತಕ್ಕದ್ದು ಹಾಗೂ ಅವೇ ಸೇವಾ ಷರತ್ತುಗಳು ಅನ್ವಯಿಸುವುದು ಮುಂದುವರೆಯತಕ್ಕದ್ದು.

(7) ಕೃಷಿ ಮತ್ತು ಸಂಬಂಧಿಸಿದ ವಿಜ್ಞಾನಗಳ ಯಾವೊಬ್ಬ ಅಧ್ಯಾಪಕ ಮತ್ತು ಬೋಧಕೇತರ ವ್ಯಕ್ತಿಯು ತನ್ನ ಮಾತೃ ವಿಶ್ವವಿದ್ಯಾಲಯದಲ್ಲೇ ಉಳಿದುಕೊಳ್ಳುವ ಇಚ್ಛೆಯನ್ನು ವ್ಯಕ್ತಪಡಿಸಿದರೆ ಮೂರು ವರ್ಷಗಳ ತರುವಾಯ ಮಾತ್ರವೇ ಅವರನ್ನು ತೋಟಗಾರಿಕೆ ವಿಶ್ವವಿದ್ಯಾಲಯ ಮತ್ತು ಮಾತೃ ವಿಶ್ವವಿದ್ಯಾಲಯ ಈ ಎರಡೂ ವಿಶ್ವವಿದ್ಯಾಲಯಗಳ ಕುಲಪತಿಗಳ ಪರಸ್ಪರ ಒಪ್ಪಿಗೆಯ ಮೇಲೆ ಹೊಸ ವಿಶ್ವವಿದ್ಯಾಲಯದಿಂದ ವರ್ಗಾವಣೆ ಮಾಡತಕ್ಕದ್ದು:

ಪರಂತು, ರಾಜ್ಯ ಸರ್ಕಾರದಿಂದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಧಾರವಾಡಕ್ಕೆ ಪ್ರತಿನಿಯೋಜಿಸಲಾದ ಯಾವ ವ್ಯಕ್ತಿಯನ್ನೂ ರಾಜ್ಯ ಸರ್ಕಾರದ ಪೂರ್ವಾನುಮೋದನೆ ಇಲ್ಲದೆ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸತಕ್ಕದ್ದಲ್ಲ:

ಮತ್ತು ಪರಂತು, ರಾಜ್ಯ ಸರ್ಕಾರವು ನಿಯೋಜಿಸಿದ ಆದರೆ ಅನುಸೂಚಿಯಲ್ಲಿ ಹೇಳಿದ ಕಾಲೇಜುಗಳಲ್ಲಿ, ಸಂಶೋಧನಾ ಕೇಂದ್ರಗಳಲ್ಲಿ ಅಥವಾ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಯಾವೊಬ್ಬ ವ್ಯಕ್ತಿಯನ್ನು ವಿಶ್ವವಿದ್ಯಾಲಯಕ್ಕೆ ವರ್ಗಾಯಿಸತಕ್ಕದ್ದು. ಆತನ ನಿಯೋಜನೆಯ ದರ್ಜೆ ಬಗ್ಗೆ ರಾಜ್ಯ ಸರ್ಕಾರವು ತೀರ್ಮಾನವನ್ನು ಕೈಗೊಂಡ ಹೊರತು ಮತ್ತು ಅಲ್ಲಿಯವರೆಗೆ ಅವನು ಯಾವ ವೃಂದ ಮತ್ತು ನೇಮಕಾತಿ ನಿಯಮಗಳಡಿಯಲ್ಲಿ ನೇಮಕವಾಗಿರುವನೋ ಅವೇ ನಿಯಮಗಳಿಗೆ ಒಳಪಟ್ಟಿರುವುದು ಮುಂದುವರಿಯತಕ್ಕದ್ದು.

(8) ತೋಟಗಾರಿಕೆಯ ಸ್ನಾತಕೋತ್ತರ ಶಿಕ್ಷಣ ವಿಭಾಗವು ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ಅಧಿಸೂಚನೆಯನ್ನು ಹೊರಡಿಸುವವರೆಗೆ ಬೆಂಗಳೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಅಡಿಯಲ್ಲಿ ಜಿಕೆವಿಕೆ ಕ್ಯಾಂಪಸ್‌ನಲ್ಲಿಯೇ ಮುಂದುವರೆಯತಕ್ಕದ್ದು.

(9) ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವ ಫ್ಯಾಕಲ್ಟಿಯನ್ನು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಜಿಕೆವಿಕೆ ಕ್ಯಾಂಪಸ್ ಇಲ್ಲಿಯ ತೋಟಗಾರಿಕೆ ವಿಭಾಗದಿಂದ ರಾಜ್ಯ ಸರ್ಕಾರವು ಪಡೆದುಕೊಳ್ಳತಕ್ಕದ್ದು.

(10) ಜಿಕೆವಿಕೆ ಕ್ಯಾಂಪಸ್‌ನ ಅರವತ್ತು ಹೆಕ್ಟೇರುಗಳನ್ನು ಒಳಗೊಂಡ ತೋಟಗಾರಿಕೆ ವಿಭಾಗದ ಮೂಲಭೂತ ಸೌಲಭ್ಯವನ್ನು ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ಅಧಿಸೂಚನೆಯನ್ನು ಹೊರಡಿಸುವ ಮೂಲಕ ತೋಟಗಾರಿಕೆ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸತಕ್ಕದ್ದು.

9. ತಪಾಸಣೆ ಮತ್ತು ನಿಯಂತ್ರಣ.- (1) ಕುಲಾಧಿಪತಿಯವರು, ಸರ್ಕಾರವು ತಪಾಸಣೆ ಕೋರಿದ್ದರೆ ಅಥವಾ ಸ್ವಪ್ರೇರಣೆಯಿಂದ ತಾನು ನಿರ್ದೇಶಿಸಬಹುದಾದಂಥ ವ್ಯಕ್ತಿ ಅಥವಾ ವ್ಯಕ್ತಿಗಳು ವಿಶ್ವವಿದ್ಯಾಲಯದ ಕಟ್ಟಡಗಳ, ಪ್ರಯೋಗ ಶಾಲೆಗಳ, ಗ್ರಂಥಾಲಯಗಳ, ವಸ್ತು ಸಂಗ್ರಹಾಲಯಗಳ, ವಿದ್ಯಾರ್ಥಿನಿಲಯಗಳ, ಕಾರ್ಯಾಗಾರಗಳ ಮತ್ತು ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ, ಆಡಳಿತ ನಡೆಸುತ್ತಿರುವ ಮಾನ್ಯತೆ ನೀಡಿದ ಅಥವಾ ಅನುಮೋದಿಸಿದ ಸಂಸ್ಥೆಯ ಸಲಕರಣೆಗಳ ಮತ್ತು ವಿಶ್ವವಿದ್ಯಾಲಯವು ನಡೆಸಿದ ಮತ್ತು ಕೈಗೊಂಡ ಪರೀಕ್ಷೆಗಳ, ಅಧ್ಯಾಪನದ ಮತ್ತು ಇತರ ಕಾರ್ಯದ ಬಗ್ಗೆ ತಪಾಸಣೆ ಮಾಡುವಂತೆ ಮಾಡತಕ್ಕದ್ದು ಮತ್ತು ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಇತರ ಯಾವುದೇ ವಿಷಯದ ಬಗ್ಗೆ ಅದೇ

ರೀತಿಯಲ್ಲಿ ತಪಾಸಣೆ ಮಾಡುವಂತೆ ಅಥವಾ ವಿಚಾರಣೆ ನಡೆಸುವಂತೆ ಮಾಡತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ತಪಾಸಣೆ ಅಥವಾ ವಿಚಾರಣೆ ನಡೆಸುವುದಕ್ಕಾಗಿ, ನಿರ್ದೇಶಿತರಾದ ವ್ಯಕ್ತಿ ಅಥವಾ ವ್ಯಕ್ತಿಗಳು, ಆ ಉದ್ದೇಶಕ್ಕಾಗಿ, ಸಂಬಂಧಪಟ್ಟ ಸಂಸ್ಥೆಗಳನ್ನು ಮತ್ತು ಆವರಣಗಳನ್ನು ಪ್ರವೇಶಿಸಲು ಮತ್ತು ಅವಶ್ಯಕವಾಗಬಹುದಾದಂಥ ಲೆಕ್ಕಪತ್ರಗಳನ್ನು ಅಥವಾ ಇತರ ದಾಖಲೆಗಳನ್ನು ಪಡೆದುಕೊಳ್ಳಲು ಅವಕಾಶವಿರತಕ್ಕದ್ದು.

(3) ಅಂಥ ವ್ಯಕ್ತಿ ಅಥವ ವ್ಯಕ್ತಿಗಳು, ತಪಾಸಣೆ ಅಥವಾ ವಿಚಾರಣೆಯ ಒಂದು ವರದಿಯನ್ನು ಕುಲಾಧಿಪತಿಯವರಿಗೆ ಸಲ್ಲಿಸತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು.

(4) ವರದಿಯನ್ನು ಸ್ವೀಕರಿಸಿದ ಮೇಲೆ ಕುಲಾಧಿಪತಿಯವರು ಅದರ ಮೇಲೆ ತನ್ನ ತೀರ್ಮಾನಗಳನ್ನು ದಾಖಲಿಸತಕ್ಕದ್ದು ಮತ್ತು ಅದನ್ನು ಅವಶ್ಯಕವಾಗಬಹುದಾದ ಅಥವಾ ತಾನು ನೀಡುವ ನಿರ್ದೇಶನಗಳಿಗೆ ಅನುಸಾರವಾಗಿ ಮುಂದಿನ ಕ್ರಮ ಕೈಗೊಳ್ಳುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(5) ರಾಜ್ಯ ಸರ್ಕಾರವು, ವಿಚಾರಣೆಯ ವರದಿಯಲ್ಲಿಯ ತೀರ್ಮಾನಗಳಿಗೆ ಸಂಬಂಧಿಸಿದಂತೆ ಕುಲಾಧಿಪತಿಯವರು ಮತ್ತು ಸರ್ಕಾರವು ನೀಡಿದ ನಿರ್ದೇಶನಗಳಿಗೆ ಅನುಸಾರವಾಗಿ ಕ್ರಮ ಕೈಗೊಳ್ಳಲು ಕುಲಪತಿ ಯವರಿಗೆ ನಿರ್ದೇಶನವನ್ನು ನೀಡತಕ್ಕದ್ದು ಮತ್ತು ಅಂಥ ಕ್ರಮ ತೆಗೆದುಕೊಳ್ಳುವುದಕ್ಕೆ ಒಂದು ಕಾಲಮಿತಿಯನ್ನು ನಿಗದಿಗೊಳಿಸತಕ್ಕದ್ದು.

(6) ಕುಲಪತಿಯು, ಹಾಗೆ ನಿಗದಿಗೊಳಿಸಿದ ಕಾಲಮಿತಿಯೊಳಗೆ, ಸರ್ಕಾರದ ನಿರ್ದೇಶನಗಳಿಗೆ ಅನುಸಾರವಾಗಿ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಲು ಉದ್ದೇಶಿಸಿದ ಕ್ರಮದ ಬಗ್ಗೆ ರಾಜ್ಯ ಸರ್ಕಾರಕ್ಕೆ ಒಂದು ವರದಿಯನ್ನು ಕಳುಹಿಸತಕ್ಕದ್ದು.

(7) ಸರ್ಕಾರವು, ನಿಗದಿಪಡಿಸಲಾದ ಕಾಲಮಿತಿಯೊಳಗೆ ತನಗೆ ತೃಪ್ತಿಕರವಾಗುವಂತೆ ವಿಶ್ವವಿದ್ಯಾಲಯವು ಕ್ರಮಕೈಗೊಳ್ಳದಿದ್ದಲ್ಲಿ ಮತ್ತು ವಿಶ್ವವಿದ್ಯಾಲಯವು ನೀಡಿದ ಯಾವುದೇ ವಿವರಣೆ ಅಥವಾ ಸಲ್ಲಿಸಿದ

ಮನವಿಯನ್ನು ಪರಿಶೀಲಿಸಿದ ತರುವಾಯ, ತಾನು ಸೂಕ್ತವೆಂದು ಭಾವಿಸಬಹುದಾದಂಥ ನಿರ್ದೇಶನಗಳನ್ನು ನೀಡಬಹುದು ಮತ್ತು ವಿಶ್ವವಿದ್ಯಾಲಯವು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

(8) ಹಿಂದೆ ಹೇಳಿದ ಉಪಪ್ರಕರಣಗಳಲ್ಲಿ ಏನೇ ಇದ್ದರೂ, ವಿಶ್ವವಿದ್ಯಾಲಯದ ವ್ಯವಹಾರಗಳನ್ನು ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳ ಈಡೇರಿಕೆಗೆ ಅಥವಾ ಈ ಅಧಿನಿಯಮದ ಅಥವಾ ಶಾಸನಗಳ ಅಥವಾ ವಿನಿಯಮಗಳ ಉಪಬಂಧಗಳಿಗೆ ಅಥವಾ ಬೋಧನೆ, ಪರೀಕ್ಷೆಗಳು, ಸಂಶೋಧನೆ ಅಥವಾ ವಿಸ್ತರಣಾ ಶಿಕ್ಷಣದ ಗುಣಮಟ್ಟಗಳನ್ನು ಕಾಯ್ದು ಕೊಂಡು ಬರುವಲ್ಲಿ ಅಪೇಕ್ಷಣೀಯವಾದ ವಿಶೇಷ ಕ್ರಮಗಳಿಗೆ ಅನುಸಾರವಾಗಿ ನಿರ್ವಹಿಸುತ್ತಿಲ್ಲವೆಂದು ಯಾವುದೇ ಸಮಯದಲ್ಲಿ ಕುಲಾಧಿಪತಿಯವರು ಅಭಿಪ್ರಾಯಪಟ್ಟರೆ, ತಾವು ಯಾವ ವಿಷಯದ ಬಗ್ಗೆ ವಿವರಣೆಯನ್ನು ಅಪೇಕ್ಷಿಸುವರೋ, ಆ ವಿಷಯವನ್ನು ವಿಶ್ವವಿದ್ಯಾಲಯದ ಗಮನಕ್ಕೆ ತರತಕ್ಕದ್ದು ಮತ್ತು ಕುಲಾಧಿಪತಿಯವರು ನಿರ್ದಿಷ್ಟಪಡಿಸಬಹುದಾದ ಕಾಲಮಿತಿಯ ಒಳಗೆ ಅಂಥ ವಿವರಣೆಯನ್ನು ಕೊಡುವಂತೆ ವಿಶ್ವವಿದ್ಯಾಲಯವನ್ನು ಕೇಳಬಹುದು. ಕುಲಾಧಿಪತಿಯವರು ನಿರ್ದಿಷ್ಟಪಡಿಸಬ ಹುದಾದ ಅವಧಿಯೊಳಗೆ ಯಾವುದೇ ವಿವರಣೆಯನ್ನು ನೀಡಲು ತಪ್ಪಿದರೆ ಅಥವಾ ನೀಡಿದ ವಿವರಣೆಯು ತೃಪ್ತಿಕರವಾಗಿಲ್ಲವೆಂದು ಕುಲಾಧಿಪತಿಯವರು ಅಭಿಪ್ರಾಯಪಟ್ಟರೆ, ಕುಲಾಧಿಪತಿ ಯವರು ತಾವು ಅವಶ್ಯಕವೆಂದು ಮತ್ತು ಆ ಪ್ರಕರಣದ ಸನ್ನಿವೇಶಗಳಲ್ಲಿ ಅಪೇಕ್ಷಣೀಯವೆಂದು ಅಭಿಪ್ರಾಯ ಪಡುವಂಥ ಸೂಚನೆಗಳನ್ನು ನೀಡಬಹುದು ಮತ್ತು ಆ ಸೂಚನೆಗಳನ್ನು ಜಾರಿಗೊಳಿಸು ವುದಕ್ಕಾಗಿ ಅವಶ್ಯಕವಾದಂಥ ಅಧಿಕಾರಗಳನ್ನು ಚಲಾಯಿಸಬಹುದು.

(9) ಕುಲಾಧಿಪತಿಯವರು ಅಗತ್ಯವೆಂದು ನಿರ್ದೇಶಿಸಬಹುದಾದಂಥ ವಿಶ್ವವಿದ್ಯಾಲಯದ ಆಡಳಿತಕ್ಕೆ ಸಂಬಂಧಪಡುವ ಮಾಹಿತಿಯನ್ನು ವಿಶ್ವವಿದ್ಯಾಲಯವು ಒದಗಿಸತಕ್ಕದ್ದು.

(10) ರಾಜ್ಯ ಸರ್ಕಾರವು, ರಾಜ್ಯ ಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ ವಿಶ್ವವಿದ್ಯಾಲಯದ ಯಾವುದೇ ಆದೇಶ, ಅಧಿಸೂಚನೆ, ನಿರ್ಣಯ ಅಥವಾ ಯಾವುದೇ ವ್ಯವಹರಣೆಗಳು ಈ ಅಧಿನಿಯಮದ ಅಥವಾ ಶಾಸನಗಳು, ವಿನಿಯಮಗಳು ಅಥವಾ ಪರಿನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ಇಲ್ಲವೆಂದು ಅಥವಾ ಅನ್ಯಥಾ ರಾಜ್ಯ ಸರ್ಕಾರದ ನೀತಿಗಳಿಗೆ

ಅಸಂಗತವಾಗಿವೆ ಎಂದು ಅಭಿಪ್ರಾಯಪಟ್ಟಲ್ಲಿ ಅವುಗಳನ್ನು ರದ್ದುಗೊಳಿಸಬಹುದು:

ಪರಂತು, ಅಂಥ ಆದೇಶವನ್ನು ಮಾಡುವ ಮೊದಲು ರಾಜ್ಯ ಸರ್ಕಾರವು, ಅಂಥ ಆದೇಶವನ್ನು ಏಕೆ ಮಾಡಕೂಡದೆಂಬ ಬಗ್ಗೆ ಕಾರಣ ತೋರಿಸುವಂತೆ ವಿಶ್ವವಿದ್ಯಾಲಯವನ್ನು ಕೇಳತಕ್ಕದ್ದು ಮತ್ತು ಸಮಂಜಸ ಕಾಲವಧಿಯೊಳಗೆ ಕಾರಣವನ್ನು ತೋರಿಸಿದರೆ ಅದನ್ನು ಪರಿಶೀಲಿಸತಕ್ಕದ್ದು.

10. ನಿರ್ದೇಶನಗಳನ್ನು ನೀಡಲು ಅಧಿಕಾರ.– ಕುಲಾಧಿಪತಿಯು, ತಾನಾಗಿಯೇ ಅಥವಾ ರಾಜ್ಯ ಸರ್ಕಾರದ ಶಿಫಾರಸ್ಸಿನ ಮೇಲೆ, ವಿಶ್ವವಿದ್ಯಾಲಯದ ಆಡಳಿತ ಮತ್ತು ವಿದ್ಯಾ ವಿಷಯಕ ಕಾರ್ಯ ನಿರ್ವಹಣೆಯ ಹಿತದೃಷ್ಟಿಯಿಂದ ಅದರಲ್ಲೂ ಶಾಂತಿ ಮತ್ತು ನೆಮ್ಮದಿಯನ್ನು ಕಾಯ್ದುಕೊಂಡು ಬರುವ ದೃಷ್ಟಿಯಿಂದ ಮತ್ತು ಸ್ವತ್ತು ಹಾಗೂ ಹಣಕಾಸುಗಳನ್ನು ಸಂರಕ್ಷಿಸುವುದಕ್ಕಾಗಿ ಅವಶ್ಯಕ ಅಥವ ಯುಕ್ತವಾಗಬಹುದಾದಂಥ ನಿರ್ದೇಶನಗಳನ್ನು ನೀಡಬಹುದು.

ಅಧ್ಯಾಯ– III

ವಿಶ್ವವಿದ್ಯಾಲಯದ ಪ್ರಾಧಿಕಾರಗಳು

11. ವಿಶ್ವವಿದ್ಯಾಲಯದ ಪ್ರಾಧಿಕಾರಗಳು:– ಈ ಮುಂದಿನವು ವಿಶ್ವವಿದ್ಯಾಲಯದ ಪ್ರಾಧಿಕಾರಗಳಾಗಿರತಕ್ಕದ್ದು ಎಂದರೆ:–

(1) ವ್ಯವಸ್ಥಾಪನಾ ಮಂಡಳಿ
(2) ವಿದ್ಯಾವಿಷಯಕ ಪರಿಷತ್ತು
(3) ಸಂಶೋಧನಾ ಪರಿಷತ್ತು
(4) ವಿಸ್ತರಣಾ ಶಿಕ್ಷಣ ಪರಿಷತ್ತು
(5) ಸ್ನಾತಕೋತ್ತರ ಅಧ್ಯಯನ ಕೇಂದ್ರಗಳು ಮತ್ತು ಅವುಗಳ ಅಧ್ಯಯನ ಮಂಡಳಿಯನ್ನು ಒಳಗೊಂಡಂತೆ ಫ್ಯಾಕಲ್ಟಿಗಳು
(6) ಶಾಸನಗಳ ಮೂಲಕ ವಿಶ್ವವಿದ್ಯಾಲಯದ ಪ್ರಾಧಿಕಾರಗಳು ಎಂಬುದಾಗಿ ಘೋಷಿಸಿರಬಹುದಾದಂಥ ವಿಶ್ವವಿದ್ಯಾಲಯದ ಇತರ ನಿಕಾಯಗಳು

12. ವ್ಯವಸ್ಥಾಪನಾ ಮಂಡಳಿ ಮತ್ತು ಅದರ ರಚನೆ:- (1) ಕುಲಾಧಿಪತಿ ಯವರು ಆದಷ್ಟು ಬೇಗನೆ ಒಂದು ವ್ಯವಸ್ಥಾಪನಾ ಮಂಡಳಿಯನ್ನು ರಚಿಸತಕ್ಕದ್ದು.

(3) ವ್ಯವಸ್ಥಾಪನಾ ಮಂಡಳಿಯು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು:-

(i) ಕುಲಪತಿ – ಇವರು ಅಧ್ಯಕ್ಷರಾಗಿರತಕ್ಕದು.

(ii) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಅಥವಾ ಕಾರ್ಯದರ್ಶಿಗಳು ತೋಟಗಾರಿಕೆ ಇಲಾಖೆ ಅಥವಾ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಅವರ ನಾಮ ನಿರ್ದೇಶಿತರು.

(iii) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಅಥವಾ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ ಅಥವಾ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಅವರ ನಾಮನಿರ್ದೇಶಿತರು.

(iv) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಅಥವಾ ಕಾರ್ಯದರ್ಶಿಗಳು ಕೃಷಿ ಇಲಾಖೆ ಅಥವಾ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಅವರ ನಾಮನಿರ್ದೇಶಿತರು.

(v) ನಿರ್ದೇಶಕರು, ತೋಟಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.

(vi) ಕುಲಾಧಿಪತಿಯವರು ನಾಮನಿರ್ದೇಶಿಸಿದ ತೋಟಗಾರಿಕೆ ಕ್ಷೇತ್ರದಿಂದ (ಪ್ರೊಫೆಸರ್ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ) ಒಬ್ಬ ಖ್ಯಾತ ಶಿಕ್ಷಣ ತಜ್ಞರು.

(vii) ವಿಶ್ವವಿದ್ಯಾಲಯದ ಅಧಿಕಾರ ವ್ಯಾಪ್ತಿಯಲ್ಲಿರುವ ಇಬ್ಬರು ಪ್ರಗತಿಪರ ತೋಟಗಾರಿಕಾ ರೈತರು ಇವರ ಪೈಕಿ ಒಬ್ಬರು ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಕ್ಕೆ ಸೇರಿದವರಾಗಿದ್ದು ಸರ್ಕಾರದಿಂದ ನಾಮನಿರ್ದೇಶಿತ ರಾಗಿರತಕ್ಕದ್ದು;

(viii) ಕುಲಾಧಿಪತಿಯವರು ನಾಮನಿರ್ದೇಶನ ಮಾಡಿದ ಒಬ್ಬ ತೋಟಗಾರಿಕೆ ಉದ್ಯಮಿ;

(ix) ಗ್ರಾಮೀಣ ಚಟುವಟಿಕೆಯ ಹಿನ್ನೆಲೆಯುಳ್ಳ, ಕುಲಾಧಿಪತಿಯವರು ನಾಮನಿರ್ದೇಶನ ಮಾಡಿದ, ಒಬ್ಬ ಮಹಿಳಾ ಕಾರ್ಯಕರ್ತೆಯವರು;

(x) ಭಾರತೀಯ ಕೃಷಿ ಸಂಶೋಧನಾ ಪರಿಷತ್ತಿನ ಮಹಾ ನಿರ್ದೇಶಕರು ನಾಮನಿರ್ದೇಶನ ಮಾಡಿದ ಒಬ್ಬ ಪ್ರತಿನಿಧಿ;

(xi) ವಿಶ್ವವಿದ್ಯಾಲಯದ ಶಿಕ್ಷಣ ನಿರ್ದೇಶಕರು;

(xii) ಕುಲಪತಿಯವರು ನಾಮನಿರ್ದೇಶನ ಮಾಡಿದ ಒಬ್ಬ ಡೀನ್ –ಸುತ್ತು ಸರದಿಯ ಮೇಲೆ ಎರಡು ವರ್ಷಗಳ ಅವಧಿಯವರೆಗೆ;

(xiii) ಕುಲಸಚಿವರು, ಇವರು ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು;

(3) ಪದನಿಮಿತ್ತ ಸದಸ್ಯರುಗಳನ್ನು ಹೊರತುಪಡಿಸಿ ಮಂಡಳಿಯ ಸದಸ್ಯರ ಪದಾವಧಿಯು ಸಂಧರ್ಭಾನುಸಾರ ಸರ್ಕಾರ ಅಥವಾ ಕುಲಾಧಿಪತಿಯವರ ಇಚ್ಛೆಗೊಳಪಟ್ಟು ಮೂರು ವರ್ಷಗಳಾಗಿರತಕ್ಕದ್ದು ಮತ್ತು ಅವರುಗಳು ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರಕ್ಕೆ ಯಾವುದೇ ಪ್ರವರ್ಗದಲ್ಲಿ ಪುನರ್ ನಾಮನಿರ್ದೇಶನಕ್ಕೆ ಅರ್ಹರಾಗಿರತಕ್ಕದ್ದಲ್ಲ;

(4) ಪದಾವಧಿ ಮುಕ್ತಾಯವಾದ ಸಂದರ್ಭವನ್ನು ಹೊರತುಪಡಿಸಿ ಮರಣ, ರಾಜೀನಾಮೆ, ತೆಗೆದು ಹಾಕುವಿಕೆ ಅಥವಾ ಯಾವುದೇ ಇತರ ಕಾರಣಗಳಿಂದಾಗಿ ಯಾವೊಬ್ಬ ಸದಸ್ಯರ ಸ್ಥಾನವು ಖಾಲಿಯಾದಾಗ ಆ ಖಾಲಿ ಸ್ಥಾನವನ್ನು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಭರ್ತಿ ಮಾಡತಕ್ಕದ್ದು ಮತ್ತು ಅಂತಹ ಖಾಲಿ ಸ್ಥಾನವನ್ನು ತುಂಬುವ ವ್ಯಕ್ತಿಯು ಯಾರ ಖಾಲಿ ಸ್ಥಾನಕ್ಕೆ ಆತನು ನಾಮನಿರ್ದೇಶಿತನಾಗಿದ್ದಾನೆಯೋ ಆ ವ್ಯಕ್ತಿಯ ಉಳಿದ ಪದಾವಧಿವರೆಗೆ ಆ ಸ್ಥಾನವನ್ನು ಹೊಂದಿರತಕ್ಕದ್ದು.

(5) ಮಂಡಳಿಯ ಸಭೆಗಾಗಿ ಮಂಡಳಿಯ ಸದಸ್ಯರ ಮೂರನೇ ಒಂದು ಭಾಗದಷ್ಟು ಸದಸ್ಯರು ಸಭೆಯ ಕೋರಂ ಆಗಿರತಕ್ಕದ್ದು:

ಪರಂತು, ಕೋರಂ ಇಲ್ಲದಿದುದರಿಂದಾಗಿ ಮಂಡಳಿಯ ಒಂದು ಸಭೆಯನ್ನು ಮುಂದೂಡಿದ್ದರೆ, ಅದೇ ವ್ಯವಹಾರಗಳನ್ನು ನಡೆಸುವುದಕ್ಕಾಗಿ ಕರೆದ ಮುಂದಿನ ಸಭೆಯಲ್ಲಿ ಕೋರಂನ ಅವಶ್ಯಕತೆ ಇರುವುದಿಲ್ಲ.

(6) ವಿಶ್ವವಿದ್ಯಾಲಯದ ಅಧಿಕಾರಿಗಳನ್ನು ಹೊರತುಪಡಿಸಿ ಮಂಡಳಿಯ ಸದಸ್ಯರು ಈ ಅಧಿನಿಯಮದ ಅಡಿಯಲ್ಲಿ ತಾವು ನೆರವೇರಿಸಿದ ಪ್ರಕಾರ್ಯಗಳಿಗೆ, ನಿಯಮಿಸಬಹುದಾದಂಥ ದಿನ ಭತ್ಯೆ, ಪ್ರಯಾಣ ಭತ್ಯೆಯನ್ನು ಹೊರತುಪಡಿಸಿ ಯಾವುದೇ ಸಂಭಾವನೆಯನ್ನು ಪಡೆಯಲು ಅರ್ಹರಾಗಿರತಕ್ಕದ್ದಲ್ಲ.

(7) ಮಂಡಳಿಯು ತನ್ನ ಸಭೆಯಲ್ಲಿ ಪರಿಶೀಲಿಸುತ್ತಿರುವ ಯಾವುದೇ ವಿಷಯಗಳ ಬಗ್ಗೆ ತಜ್ಞ ಸಲಹೆ ಪಡೆಯಲು ಆ ವಿಷಯಗಳಲ್ಲಿ ಪರಿಣತಿ ಅಥವಾ ವಿಶೇಷ ಜ್ಞಾನವನ್ನು ಉಳ್ಳ ಯಾವೊಬ್ಬ ವ್ಯಕ್ತಿಯನ್ನು ತನ್ನ ಸಭೆಗೆ ಹಾಜರಾಗಲು ಆಹ್ವಾನಿಸಬಹುದು. ಅಂತಹ ವ್ಯಕ್ತಿಯು ಅಂತಹ ಸಭೆಯ ವ್ಯವಹರಣೆಗಳಲ್ಲಿ ಮಾತನಾಡಬಹುದು ಅಥವಾ ಅನ್ಯಥಾ ಭಾಗವಹಿಸಬಹುದು. ಆದರೆ ಆತನು ಮತದಾನದ ಹಕ್ಕನ್ನು ಹೊಂದಿರುವುದಿಲ್ಲ. ಹಾಗೆ ಆಹ್ವಾನಿತರಾದ ಯಾವೊಬ್ಬ ವ್ಯಕ್ತಿಯು ಸಭೆಗೆ ಹಾಜರಾಗಿದ್ದಕ್ಕಾಗಿ ನಿಯಮಿಸಬಹುದಾದಂತಹ ಭತ್ಯೆ ಪಡೆಯಲು ಅರ್ಹರಾಗಿರತಕ್ಕದ್ದು.

(8) ಸಾಮಾನ್ಯವಾಗಿ ಮಂಡಳಿಯು ಪ್ರತಿ ಮೂರು ತಿಂಗಳಿಗೊಮ್ಮೆ ಕನಿಷ್ಠ ಒಂದು ಬಾರಿಯಾದರೂ ಕುಲಪತಿಯವರು ನಿಗದಿಪಡಿಸುವಂಥ ದಿನಾಂಕ ಮತ್ತು ಸ್ಥಳದಲ್ಲಿ ಸೇರತಕ್ಕದ್ದು. ಆದಾಗ್ಯೂ ಕುಲಪತಿಯವರು ತಾನು ಸೂಕ್ತವೆಂದು ಭಾವಿಸದಾಗಲೆಲ್ಲ, ಮಂಡಳಿಯ ಅರ್ಧಕ್ಕಿಂತ ಕಡಿಮೆಯಲ್ಲದ ಸದಸ್ಯರು ಬರೆದು ಸಹಿ ಮಾಡಿ ಕೋರಿಕೊಂಡಾಗ ಮಂಡಳಿಯ ವಿಶೇಷ ಸಭೆಯನ್ನು ಕರೆಯಬಹುದು.

13. ಮಂಡಳಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು.– (1) ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳಿಗೆ ಒಳಪಟ್ಟು, ಮಂಡಳಿಯು ವಿಶ್ವವಿದ್ಯಾಲಯದ ಮುಖ್ಯ ಕಾರ್ಯಕಾರಿ ನಿಕಾಯ ಆಗಿರತಕ್ಕದ್ದು ಮತ್ತು ವಿಶ್ವವಿದ್ಯಾಲಯದ ಸ್ವತ್ತುಗಳು ಮತ್ತು ಚಟುವಟಿಕೆಗಳನ್ನು ನಿರ್ವಹಿಸತಕ್ಕದ್ದು ಹಾಗೂ ಮೇಲ್ವಿಚಾರಣೆ ನಡೆಸತಕ್ಕದ್ದು ಮತ್ತು ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರದ ಹೊರತು ವಿಶ್ವವಿದ್ಯಾಲಯದ ಎಲ್ಲಾ ಆಡಳಿತಾತ್ಮಕ ವ್ಯವಹಾರಗಳನ್ನು ನಡೆಸಲು ಜವಾಬ್ದಾರಿಯಾಗಿರತಕ್ಕದ್ದು.

(2) (1)ನೇ ಉಪಪ್ರಕರಣದ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಮಂಡಳಿಯು ಈ ಮುಂದಿನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:-

(i) ವಿಶ್ವವಿದ್ಯಾಲಯದ ಹಣಕಾಸು ಅಂದಾಜುಗಳು ಮತ್ತು ಆಯವ್ಯಯವನ್ನು ಪರಿಗಣಿಸುವುದು ಮತ್ತು ಅನುಮೋದಿಸುವುದು;

(ii) ವಿಶ್ವವಿದ್ಯಾಲಯದ ಸ್ವತ್ತನ್ನು ಮತ್ತು ನಿಧಿಗಳನ್ನು ಹೊಂದಿರುವುದು ಮತ್ತು ನಿಯಂತ್ರಿಸುವುದು ಹಾಗೂ ವಿಶ್ವವಿದ್ಯಾಲಯದ ಪರವಾಗಿ ಯಾವುದೇ ಸಾಮಾನ್ಯ ನಿರ್ದೇಶನಗಳನ್ನು ಹೊರಡಿಸುವುದು;

(iii) ಸರ್ಕಾರದ ಪೂರ್ವ ಅನುಮೋದನೆಯೊಡನೆ, ವಿಶ್ವವಿದ್ಯಾಲಯದ ಪರವಾಗಿ ಯಾವುದೇ ಸ್ಥಿರ ಅಥವಾ ಚರ ಸ್ವತ್ತನ್ನು ಸ್ವೀಕರಿಸುವುದು ಅಥವಾ ವರ್ಗಾವಣೆ ಮಾಡುವುದು;

(iv) ವಿಶ್ವವಿದ್ಯಾಲಯದ ವಶದಲ್ಲಿ ಇರುವ ನಿಧಿಗಳನ್ನು ಅವನ್ನು ಇಟ್ಟಿರುವ ಉದ್ದೇಶಕ್ಕಾಗಿ ವಿನಿಯೋಗಿಸುವುದು;

(v) ವಿಶ್ವವಿದ್ಯಾಲಯದ ನಿಧಿಗಳನ್ನು ಹೂಡುವುದಕ್ಕಾಗಿ ಮತ್ತು ಹಿಂಪಡೆಯುವುದಕ್ಕಾಗಿ ವ್ಯವಸ್ಥೆ ಮಾಡುವುದು;

(vi) ಸರ್ಕಾರದ ಪೂರ್ವಾನುಮೋದನೆಯೊಡನೆ ಬಂಡವಾಳವನ್ನು ಹೂಡುವುದಕ್ಕಾಗಿ ಹಣವನ್ನು ತರುವುದು ಮತ್ತು ಅದರ ವಾಪಸಾತಿಗೆ ಸೂಕ್ತ ವ್ಯವಸ್ಥೆಯನ್ನು ಮಾಡುವುದು;

(vii) ವಿಶ್ವವಿದ್ಯಾಲಯದ ಪರವಾಗಿ ದತ್ತಿ, ಮರಣ ಶಾಸನದಾನ ಮತ್ತು ವಂತಿಕೆಗಳನ್ನು ಒಪ್ಪಿಕೊಳ್ಳುವುದು;

(viii) ಅಗತ್ಯವಿದ್ದಲ್ಲೆಲ್ಲಾ ವಿದ್ಯಾವಿಷಯಕ ಪರಿಷತ್ತು, ಸಂಶೋಧನಾ ಪರಿಷತ್ತು ಮತ್ತು ವಿಸ್ತಾರಣಾ

ಶಿಕ್ಷಣ ಪರಿಷತ್ತಿನ ಶಿಫಾರಸ್ಸುಗಳನ್ನು ಪರಿಗಣಿಸುವುದು ಮತ್ತು ಅನುಮೋದಿಸುವುದು.

(ix) ವಿಶ್ವವಿದ್ಯಾಲಯದ ಸಾಮಾನ್ಯ ಮೊಹರಿನ ನಮೂನೆ ಮತ್ತು ಉಪಯೋಗದ ಬಗ್ಗೆ ನಿರ್ದೇಶಿಸುವುದು;

(x) ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳಿಗೆ ಅನುಸಾರವಾಗಿ ತಾನು ಅವಶ್ಯವೆಂದು ಭಾವಿಸಬಹುದಾದಂಥ ಸಮಿತಿಗಳನ್ನು ಮತ್ತು ನಿಕಾಯಗಳನ್ನು ನೇಮಿಸುವುದು ಮತ್ತು ಅವುಗಳ ಪರಿಶೀಲನಾಂಶಗಳನ್ನು ನಿರ್ಧರಿಸುವುದು;

(xi) ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸಿನ ಮೇಲೆ ಹೊಸ ವಿಭಾಗ, ಕೇಂದ್ರ, ಸಂಶೋಧನಾ ಕೇಂದ್ರ ಅಥವಾ ಉಪ ಕೇಂದ್ರವನ್ನು ಸ್ಥಾಪಿಸುವುದು ಅಥವಾ ಅವುಗಳ ಪೈಕಿ ಯಾವುದಾದರೊಂದನ್ನು ರದ್ದುಗೊಳಿಸುವುದು ಅಥವಾ ವಿಭಾಗ, ಸಂಶೋಧನಾ ಕೇಂದ್ರ, ಉಪ ಕೇಂದ್ರ ಅಥವಾ ಕೇಂದ್ರವನ್ನು ಪುನರ್ ರಚಿಸುವ ಬಗ್ಗೆ ಪರಿಗಣಿಸುವುದು ಮತ್ತು ಅನುಮೋದಿಸುವುದು;

(xii) ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸಿನ ಮೇಲೆ ಹೊಸ ಕಾಲೇಜು ಅಥವಾ ಫ್ಯಾಕಲ್ಟಿಯನ್ನು ಸ್ಥಾಪಿಸುವುದು ಅಥವಾ ಎರಡು ಅಥವಾ ಹೆಚ್ಚು ಕಾಲೇಜುಗಳನ್ನು ಅಥವಾ ಫ್ಯಾಕಲ್ಟಿಗಳನ್ನು ಒಂದೇ ಕಾಲೇಜಿನಲ್ಲಿ ಅಥವಾ ಫ್ಯಾಕಲ್ಟಿಯಲ್ಲಿ ಸೇರಿಸುವುದು ಅಥವಾ ಕಾಲೇಜನ್ನು ಅಥವಾ ಫ್ಯಾಕಲ್ಟಿಯನ್ನು ಮುಚ್ಚುವುದು ಅಥವಾ ಪ್ರಸ್ತುತ ಇರುವ ಯಾವುದೇ ಫ್ಯಾಕಲ್ಟಿಯನ್ನು ಪುನರ್ ರಚಿಸುವ ಬಗ್ಗೆ ಪರಿಗಣಿಸುವುದು ಮತ್ತು ಅನುಮೋದಿಸುವುದು;

(xiii) ರಾಜ್ಯ ಸರ್ಕಾರದ ಅನುಮೋದನೆಯೊಡನೆ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಸೃಜಿಸುವುದು.

(xiv) ವಿಶ್ವವಿದ್ಯಾಲಯದ ಅಧಿಕಾರಿಗಳು, ಅಧ್ಯಾಪಕರು ಮತ್ತು ಸಹಾಯಕ ಪ್ರಾಧ್ಯಾಪಕ ಮತ್ತು ಹೆಚ್ಚಿನ ಶ್ರೇಣಿಯ ನೌಕರರ ನೇಮಕಾತಿಗಾಗಿ ಶಿಫಾರಸ್ಸುಗಳನ್ನು ನಿಯಮಿಸಬಹುದಾದಂತೆ ಅನುಮೋದಿಸಬಹುದು.

(xv) ತುರ್ತು ಸನ್ನಿವೇಶದ ಸಂದರ್ಭದಲ್ಲಿ ಯಾವುದೇ ಮಂಡಳಿಯ ಬಾಬನ್ನು ಕಡತ ಪರಿಚಲಿಸುವ ಮೂಲಕ ಪರಿಗಣಿಸುವುದು ಮತ್ತು ಅನುಮೋದಿಸುವುದು.

14. ವಿದ್ಯಾವಿಷಯಕ ಪರಿಷತ್ತು.– (1) ವಿದ್ಯಾವಿಷಯಕ ಪರಿಷತ್ತು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು ಅಂದರೆ :–

(i) ಕುಲಪತಿಯವರು, ಇವರು ಅಧ್ಯಕ್ಷರಾಗಿರುತ್ತಾರೆ;

(ii) ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣದ ನಿರ್ದೇಶಕರು;

(iii) ಘಟಕ ಕಾಲೇಜುಗಳ ಡೀನುಗಳು;

(iv) ಕುಲಪತಿಯವರು ನಾಮನಿರ್ದೇಶನ ಮಾಡಿದ ವಿಶ್ವವಿದ್ಯಾಲಯದ ಇಬ್ಬರು ವಿಭಾಗ ಮುಖ್ಯಸ್ಥರು ಸುತ್ತು ಸರದಿಯ ಮೇಲೆ;

(v) ಕುಲಪತಿಯವರು ನಾಮನಿರ್ದೇಶನ ಮಾಡಿದ ಪ್ರತಿಯೊಂದು ಫ್ಯಾಕಲ್ಟಿಯಿಂದ ಪ್ರೊಫೆಸರ್ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಒಬ್ಬ ಅಧ್ಯಾಪಕರು ಸುತ್ತು ಸರದಿಯ ಮೇಲೆ;

(vi) ಕುಲಪತಿಯವರು ನಾಮನಿರ್ದೇಶನ ಮಾಡಿದ ವಿಶ್ವವಿದ್ಯಾಲಯದ ಹೊರಗಿನಿಂದ ಒಬ್ಬ ಪ್ರಖ್ಯಾತ ತೋಟಗಾರಿಕೆ ಶಿಕ್ಷಣ ತಜ್ಞರು;

(vii) ಕುಲಸಚಿವರು;

(viii) ತೋಟಗಾರಿಕೆ ನಿರ್ದೇಶಕರು, ಕರ್ನಾಟಕ ಸರ್ಕಾರ ಅಥವಾ ಜಂಟಿ ನಿರ್ದೇಶಕರ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಅವರ ನಾಮನಿರ್ದೇಶಿತರು;

(ix) ಕುಲಪತಿಯವರು ನಾಮನಿರ್ದೇಶನ ಮಾಡಿದ ಪ್ರೊಫೆಸರ್ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಸಂಯೋಜಿತ ಕಾಲೇಜಿನ ಒಬ್ಬ ಪ್ರತಿನಿದಿ;

(X) ಶಿಕ್ಷಣ ನಿರ್ದೇಶಕರು – ಇವರು ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು.

(2) ತೋಟಗಾರಿಕೆ ಮತ್ತು ಸಂಬಂಧಿತ ಕ್ಷೇತ್ರದ ವಿವಿಧ ವಲಯಗಳ ಸಾಕಷ್ಟು ಪ್ರಾತಿನಿಧ್ಯ ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುವಂತೆ ನಿಯಮಿಸಬಹುದಾದಂತಹ ಅವಧಿಗಾಗಿ ಮತ್ತು ಅಂತಹ ರೀತಿಯಲ್ಲಿ ಇಬ್ಬರು ವ್ಯಕ್ತಿಗಳನ್ನು ಮೀರದಂತೆ ಸದಸ್ಯರನ್ನು ವಿದ್ಯಾವಿಷಯಕ ಪರಿಷತ್ತು ಸಹ–ಆಯ್ಕೆ (ಕೋ–ಆಪ್ಟ್) ಮಾಡಿಕೊಳ್ಳತಕ್ಕದ್ದು.

(3) ಪದನಿಮಿತ್ತ ಸದಸ್ಯರ ಹೊರತಾಗಿ ಇತರ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು, ಎರಡು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು.

(4) ವಿದ್ಯಾವಿಷಯಕ ಪರಿಷತ್ತಿನ ಮೂರನೇ ಒಂದರಷ್ಟು ಸದಸ್ಯರ ಹಾಜರಾತಿ ವಿದ್ಯಾವಿಷಯಕ ಪರಿಷತ್ತಿನ ಸಭೆಗೆ ಕೋರಂ ಆಗಿರತಕ್ಕದ್ದು :

ಪರಂತು ಕೋರಂ ಇಲ್ಲದಿದ್ದುದರಿಂದಾಗಿ ವಿದ್ಯಾವಿಷಯಕ ಪರಿಷತ್ತಿನ ಒಂದು ಸಭೆಯನ್ನು ಮುಂದೂಡಿದ್ದರೆ, ಅದೇ ವ್ಯವಹಾರಗಳನ್ನು ನಡೆಸುವುದಕ್ಕಾಗಿ ಕರೆದ ಮುಂದಿನ ಸಭೆಯಲ್ಲಿ ಕೋರಂನ ಅವಶ್ಯಕತೆ ಇರುವುದಿಲ್ಲ.

(5) ವಿದ್ಯಾವಿಷಯಕ ಪರಿಷತ್ತಿಗೆ ನಾಮನಿರ್ದೇಶನಗೊಂಡ ಯಾವೊಬ್ಬ ಸದಸ್ಯನನ್ನು ಕುಲಪತಿಯವರು ಯಾವುದೇ ಸಮಯದಲ್ಲಿ ದುರ್ವರ್ತನೆ, ದುರ್ನಡತೆ ಅಥವಾ ಅನ್ಯಥಾ ಕಾರಣದ ಮೇಲೆ ವಿಚಾರಣೆ ನಡೆಸಿದ ತರುವಾಯ ಅಂತಹ ಸದಸ್ಯತ್ವದಿಂದ ತೆಗೆದು ಹಾಕಬಹುದು.

(6) ಸಾಮಾನ್ಯವಾಗಿ ವಿದ್ಯಾವಿಷಯಕ ಪರಿಷತ್ತು ಕುಲಪತಿಯವರು ನಿಗದಿಪಡಿಸಬಹುದಾದಂತಹ ದಿನಾಂಕದಂದು, ಕೊನೆಪಕ್ಷ ಮೂರು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು. ಆದಾಗ್ಯೂ ಕುಲಪತಿಯವರು ವಿದ್ಯಾ ವಿಷಯಕ ಪರಿಷತ್ತಿನ ವಿಶೇಷ ಸಭೆಯನ್ನು ಕರೆಯಬಹುದು.

15. ವಿದ್ಯಾವಿಷಯಕ ಪರಿಷತ್ತಿನ ಅಧಿಕಾರಗಳು ಮತ್ತು ಪ್ರಕಾರ್ಯಗಳು.- (1) ವಿದ್ಯಾವಿಷಯಕ ಪರಿಷತ್ತು ಈ ಅಧ್ಯಾದೇಶದ ಮತ್ತು ಶಾಸನಗಳ ಉಪಬಂಧಗಳಿಗೆ ಒಳಪಟ್ಟು ಎಲ್ಲಾ ವ್ಯಾಸಂಗ ಕ್ರಮಗಳನ್ನು ಮತ್ತು ಪಠ್ಯ ವಿಷಯಗಳನ್ನು ನಿರ್ಧರಿಸುವುದಕ್ಕಾಗಿ ಈ ನಿಯಮಗಳನ್ನು ರಚಿಸುವ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ವಿಶ್ವವಿದ್ಯಾಲಯದೊಳಗೆ ಬೋಧನೆ ಮತ್ತು ಇತರ ಶೈಕ್ಷಣಿಕ ಕಾರ್ಯಕ್ರಮಗಳ ಮೇಲೆ ಸಾಮಾನ್ಯ ನಿಯಂತ್ರಣವನ್ನು ಹೊಂದಿರತಕ್ಕದ್ದು ಮತ್ತು ಅವುಗಳ ಗುಣಮಟ್ಟವನ್ನು ಕಾಯ್ದುಕೊಂಡು ಬರುವುದಕ್ಕೆ ಹೊಣೆಯಾಗಿರತಕ್ಕದ್ದು.

(2) ವಿದ್ಯಾವಿಷಯಕ ಪರಿಷತ್ತು ತನ್ನ ನಿಯಂತ್ರಣಕ್ಕೊಳಪಡುವ ಎಲ್ಲಾ ವಿದ್ಯಾ ವಿಷಯಗಳಿಗೆ ಸಂಬಂಧಪಟ್ಟಂತೆ ಈ ಅಧಿನಿಯಮಕ್ಕೆ ಮತ್ತು ಪರಿನಿಯಮಗಳಿಗೆ ಸುಸಂಗತವಾದ ವಿನಿಯಮಗಳನ್ನು ರಚಿಸಲು ಮತ್ತು ಅಂತಹ ವಿನಿಯಮಗಳನ್ನು ನಿರಸನಗೊಳಿಸಲು ಅಧಿಕಾರ ಹೊಂದಿರತಕ್ಕದ್ದು. (1)ನೇ ಉಪ ಪ್ರಕರಣದ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಪ್ರತಿಕೂಲವಾಗದಂತೆ ವಿದ್ಯಾವಿಷಯಕ ಪರಿಷತ್ತು ಈ ಮುಂದಿನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ :-

(i) ಗ್ರಂಥಾಲಯಗಳ ನಿಯಂತ್ರಣ ಮತ್ತು ನಿರ್ವಹಣೆಯೂ ಸೇರಿದಂತೆ, ಎಲ್ಲಾ ವಿದ್ಯಾ ವಿಷಯಗಳ ಬಗ್ಗೆ ಮಂಡಳಿಗೆ ಮತ್ತು ಕುಲಪತಿಯವರಿಗೆ ಸಲಹೆ ನೀಡುವುದು;

(ii) ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣದಲ್ಲಿನ ಹುದ್ದೆಗಳೂ ಸೇರಿದಂತೆ ಪ್ರಾಧ್ಯಾಪಕರ, ಸಹವರ್ತಿ ಪ್ರಾಧ್ಯಾಪಕರ, ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಪ್ರಾರಂಭಿಸುವುದು ಮತ್ತು ಅವುಗಳ ಕರ್ತವ್ಯಗಳಿಗೆ ಸಂಬಂಧಪಟ್ಟಂತೆ ಶಿಫಾರಸ್ಸುಗಳನ್ನು ಮಾಡುವುದು;

(iii) ಫ್ಯಾಕಲ್ಟಿ, ಕಾಲೇಜು, ಬೋಧನ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣ ವಿಭಾಗಗಳನ್ನು ಸ್ಥಾಪಿಸಲು/ಸಮ್ಮಿಲನ/

ರದ್ದುಗೊಳಿಸಲು ಶಿಫಾರಸ್ಸುಗಳನ್ನು ಮಾಡುವುದು;

(iv) ವಿಶ್ವವಿದ್ಯಾಲಯಕ್ಕೆ, ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು ವಿನಿಯಮಗಳನ್ನು ರಚಿಸುವುದು ಮತ್ತು ಪ್ರವೇಶ ನೀಡಬೇಕಾದ ವಿದ್ಯಾರ್ಥಿಗಳ ಸಂಖ್ಯೆಯನ್ನು ನಿರ್ಧರಿಸುವುದು;

(v) ಪದವಿಗಳು, ಡಿಪ್ಲೋಮಾಗಳು ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಬೇಕಾದ ವ್ಯಾಸಂಗ ಕ್ರಮಗಳಿಗೆ ಸಂಬಂಧಿಸಿದ ವಿನಿಯಮಗಳನ್ನು ರಚಿಸುವುದು;

(vi) ಪರೀಕ್ಷೆಗಳನ್ನು ನಡೆಸುವುದಕ್ಕೆ ಸಂಬಂಧಪಡುವ ವಿನಿಯಮಗಳನ್ನು ರಚಿಸುವುದು ಮತ್ತು ಶಿಕ್ಷಣದ ಗುಣಮಟ್ಟವನ್ನು ಕಾಯ್ದುಕೊಂಡು ಬರುವುದು ಮತ್ತು ಸುಧಾರಿಸುವುದು;

(vii) ಗೌರವ ಪದವಿಗಳನ್ನು ಪ್ರದಾನ ಮಾಡುವುದಕ್ಕೆ ಸಂಬಂಧಿಸಿದಂತೆ ಮಂಡಳಿಗೆ ಶಿಫಾರಸ್ಸುಗಳನ್ನು ಮಾಡುವುದು;

(viii) ವಿಶ್ವವಿದ್ಯಾಲಯದ ಅಧ್ಯಾಪಕರಿಗೆ ಮತ್ತು ಸೇವಾ ಸಿಬ್ಬಂದಿಗೆ ನಿಯಮಿಸತಕ್ಕ ವಿದ್ಯಾರ್ಹತೆಗಳಿಗೆ ಸಂಬಂಧಿಸಿದಂತೆ ಶಿಫಾರಸ್ಸು ಮಾಡುವುದು;

(ix) ಶೈಕ್ಷಣಿಕ, ಸಂಶೋಧನಾ ಸಂಸ್ಥೆಗಳು, ನಿಗಮಗಳು ಮತ್ತು ಇತರ ಸಂಸ್ಥೆಗಳೊಡನೆ ವಾಗ್ದಾನ ಪತ್ರ ಮತ್ತು ಒಪ್ಪಂದ ಪತ್ರಗಳನ್ನು ಪರಿಶೀಲಿಸುವುದು ಹಾಗೂ ಅನುಮೋದಿಸುವುದು;

(x) ಈ ಅಧಿನಿಯಮದ ಮೂಲಕ ಅಥವಾ ಅದರಡಿಯಲ್ಲಿ ಮಂಡಳಿಯು ಅಥವಾ ಕುಲಪತಿಯವರು ತನಗೆ ವಹಿಸಬಹುದಾದಂತಹ ಅಥವಾ ವಿಧಿಸಬಹುದಾದಂತಹ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅಂತಹ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು.

16. ಸಂಶೋಧನಾ ಪರಿಷತ್ತು.- ಈ ಮುಂದಿನ ಸದಸ್ಯರನ್ನು ಒಳಗೊಂಡ ಒಂದು ಸಂಶೋಧನಾ ಪರಿಷತ್ತು ಇರತಕ್ಕದ್ದು, ಎಂದರೆ:-

(i) ಕುಲಪತಿಯವರು-- ಇವರು ಅಧ್ಯಕ್ಷರಾಗಿರತಕ್ಕದ್ದು;

(ii) ತೋಟಗಾರಿಕೆ ನಿರ್ದೇಶಕರು;

(iii) ಕೃಷಿ ಮಾರಾಟ ಇಲಾಖೆ ನಿರ್ದೇಶಕರು ಅಥವಾ ಜಂಟಿ ನಿರ್ದೇಶಕರ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಅವರ ನಾಮನಿರ್ದೇಶಿತರು;

(iv) ಕೃಷಿ ನಿರ್ದೇಶಕರು ಅಥವಾ ಜಂಟಿ ನಿರ್ದೇಶಕರ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಅವರ ನಾಮನಿರ್ದೇಶಿತರು;

(v) ಜಲವಿಭಾಜಕ ಕ್ಷೇತ್ರ ನಿರ್ವಹಣೆ ಇಲಾಖೆಯ ನಿರ್ದೇಶಕರು ಅಥವಾ ಜಂಟಿ ನಿರ್ದೇಶಕರ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಅವರ ನಾಮನಿರ್ದೇಶಿತರು;

(vi) ಅರಣ್ಯ, ಸಂಶೋಧನೆ ಮತ್ತು ತರಬೇತಿಯ ಮುಖ್ಯ ಸಂರಕ್ಷಣಾಧಿಕಾರಿ;

(vii) ವಿಶ್ವವಿದ್ಯಾಲಯದ ಎಲ್ಲಾ ನಿರ್ದೇಶಕರು;

(viii) ಎಲ್ಲಾ ಡೀನುಗಳು;

(ix) ಸಂಶೋಧನೆಯ ಮತ್ತು ವಿಸ್ತರಣಾ ಶಿಕ್ಷಣದ ಎಲ್ಲಾ ಸಹವರ್ತಿ ನಿರ್ದೇಶಕರುಗಳು;

(x) ತೋಟಗಾರಿಕೆ ಮತ್ತು ಸಂಬಂಧಿಸಿದ ವಿಭಾಗಗಳಲ್ಲಿ ವಿಶೇಷ ಪರಿಣತಿಯನ್ನು ಹೊಂದಿರುವ ರೈತರ ವಿಶೇಷ ಜ್ಞಾನ ಮತ್ತು ಅನುಭವದ ಪ್ರಯೋಜನವನ್ನು ಪಡೆದುಕೊಳ್ಳಲು ಕುಲಪತಿಯವರು ನಾಮನಿರ್ದೇಶನ ಮಾಡಿದಂಥ ತೋಟಗಾರಿಕೆ ಕ್ಷೇತ್ರದ ಪರಿಣಿತರಾದ ಇಬ್ಬರು ಪ್ರಗತಿಪರ ರೈತರು;

(xi) ಯಾವುದೇ ಸಭೆಯ ಸಂಬಂಧದಲ್ಲಿ ಪ್ರಸಿದ್ಧ ವಿಜ್ಞಾನಿಗಳ ವಿಶೇಷ ಜ್ಞಾನದ ಪ್ರಯೋಜನವನ್ನು

ಪಡೆಯುವುದಕ್ಕಾಗಿ ಕುಲಪತಿಯವರು ನಾಮನಿರ್ದೇಶನ ಮಾಡಿದ, ರಾಜ್ಯ ತೋಟಗಾರಿಕೆ ವಿಶ್ವವಿದ್ಯಾಲಯಗಳ ಹೊರಗಿನಿಂದ ಅಥವಾ ಭಾರತೀಯ ವಿಜ್ಞಾನ ಸಂಸ್ಥೆಯಿಂದ ಅಥವಾ ಭಾರತದ ಕೃಷಿ ಸಂಶೋಧನಾ ಪರಿಷತ್ತು ಸಂಸ್ಥೆಗಳಿಂದ ಒಬ್ಬ ಪ್ರಸಿದ್ಧ ತೋಟಗಾರಿಕಾ ವಿಜ್ಞಾನಿ;

(xii) ಯಾವುದೇ ಸಭೆಯ ಸಂಬಂಧದಲ್ಲಿ ಅಂತಹ ಸಭೆಯ ಕಾರ್ಯಸೂಚಿಯಲ್ಲಿರುವ ವಿಷಯಗಳ ಬಗ್ಗೆ ಕೃಷಿ ಕೈಗಾರಿಕೋದ್ಯಮಿಯ ವಿಶೇಷ ಜ್ಞಾನದ ಪ್ರಯೋಜನವನ್ನು ಪಡೆಯುವುದಕ್ಕಾಗಿ ಕುಲಪತಿಯವರು ನಾಮನಿರ್ದೇಶನ ಮಾಡಿದ, ಒಬ್ಬ ಕೃಷಿ ಕೈಗಾರಿಕೋದ್ಯಮಿ;

(xiii) ಸಫಲ್ ಮಾರುಕಟ್ಟೆ ಘಟಕ, ಬೆಂಗಳೂರು (ಮದರ್ ಡೈರಿ ಆಹಾರ ಸಂಸ್ಕರಣಾ ನಿಯಮಿತ) ಇದರ ಮಹಾ ವ್ಯವಸ್ಥಾಪಕರು ಅಥವಾ ಮುಖ್ಯಸ್ಥರು;

(xiv) ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ, ಬೆಂಗಳೂರು ಇದರ ನಿರ್ದೇಶಕರು ಅಥವಾ ಅವರ ನಾಮನಿರ್ದೇಶಿತರು;

(xv) ಕೇಂದ್ರ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆ, ಮೈಸೂರು ಇದರ ನಿರ್ದೇಶಕರು ಅಥವಾ ಅವರ ನಾಮನಿರ್ದೇಶಿತರು;

(xvi) ಕರ್ನಾಟಕ ರಾಜ್ಯ ವ್ಯವಸಾಯೋತ್ಪನ್ನ ಸಂಸ್ಕರಣಾ ಮತ್ತು ರಫ್ತು ನಿಗಮ ನಿಯಮಿತ (ಕೆಎಪಿಪಿಇಸಿ), ಬೆಂಗಳೂರು ಇದರ ವ್ಯವಸ್ಥಾಪಕ ನಿರ್ದೇಶಕರು ಅಥವಾ ಅವರ ನಾಮನಿರ್ದೇಶಿತರು;

(xvii) ತೋಟಗಾರಿಕೆ ಉತ್ಪನ್ನ ಬೆಳೆಗಾರರ ಸಹಕಾರಿ ಮಾರಾಟ ಸಂಘ ಇದರ ವ್ಯವಸ್ಥಾಪಕ ನಿರ್ದೇಶಕರು;

(xviii) ಕುಲಸಚಿವರು;

(xix) ಕುಲಪತಿಗಳು ನಾಮನಿರ್ದೇಶಿಸಿದ ಸಂಯೋಜಿತ ಕಾಲೇಜಿನ ಒಬ್ಬ ಡೀನ್/ಪ್ರಾಂಶುಪಾಲರು;

(xx) ಸಂಶೋಧನಾ ನಿರ್ದೇಶಕರು – ಇವರು ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು;

ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ ಸಂಶೋಧನಾ ಪರಿಷತ್ತಿನ ಎಲ್ಲಾ ಸದಸ್ಯರ ಪದಾವಧಿಯು ಎರಡು ವರ್ಷಗಳಾಗಿರತಕ್ಕದ್ದು ಮತ್ತು ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರಕ್ಕೆ ಮರುನಾಮನಿರ್ದೇಶನಕ್ಕೆ ಅರ್ಹರಾಗಿರತಕ್ಕದ್ದಲ್ಲ.

17. ಸಂಶೋಧನಾ ಪರಿಷತ್ತಿನ ಪ್ರಕಾರ್ಯಗಳು.– ಸಂಶೋಧನಾ ಪರಿಷತ್ತು ಈ ಮುಂದಿನವುಗಳಿಗೆ ಸಂಬಂಧಿಸಿದುವುಗಳನ್ನು ಪರ್ಯಾಲೋಚಿಸತಕ್ಕದ್ದು ಮತ್ತು ಶಿಫಾರಸ್ಸುಗಳನ್ನು ಮಾಡತಕ್ಕದ್ದು.

(i) ಪರಿಣಾಮಕಾರಿ ಸಮನ್ವಯವನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ತೋಟಗಾರಿಕೆ ಮತ್ತು ಇತರ ಸಂಬಂಧಿತ ವಿಜ್ಞಾನಗಳ ಕ್ಷೇತ್ರದಲ್ಲಿ ವಿಶ್ವವಿದ್ಯಾಲಯದ ವಿವಿಧ ಘಟಕಗಳು ಕೈಗೊಂಡ ಅಥವಾ ಕೈಗೊಳ್ಳಬೇಕಾದ ಸಂಶೋಧನಾ ಕಾರ್ಯಕ್ರಮಗಳು ಮತ್ತು ಯೋಜನೆಗಳು;

(ii) ಸಂಶೋಧನಾ ಯೋಜನೆಗಳನ್ನು ಅನುಷ್ಠಾನಗೊಳಿಸುವುದಕ್ಕೆ ಅಗತ್ಯವಾದ ಭೌತಿಕ, ಆರ್ಥಿಕ ಮತ್ತು ಆಡಳಿತಾತ್ಮಕ ಸೌಲಭ್ಯಗಳು;

(iii) ರೈತರ ಮತ್ತು ಇತರ ಹಿತಾಸಕ್ತಿದಾರರ ಅಗತ್ಯತೆಗಳನ್ನು ಪೂರೈಸುವ ಕಡೆಗೆ ಸಂಶೋಧನೆಯು ಅಭಿಮುಖವಾಗಿರುವಂತೆ ಮಾಡುವುದು.

(iv) ಸಂಶೋಧನೆ, ವಿಸ್ತರಣಾ ಶಿಕ್ಷಣ ಮತ್ತು ಬೋಧನೆಗಳನ್ನು ಸಮ್ಮಿಲನಗೊಳಿಸುವುದು ಮತ್ತು ಸಂಶೋಧಕರು ಬೋಧನೆ ಮತ್ತು ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಮಾಡುವುದು.

(v) ಸಂಶೋಧನೆಯಲ್ಲಿ ಸಾರ್ವಜನಿಕ ಮತ್ತು ಖಾಸಗಿ ಪಾಲುದಾರಿಕೆಯನ್ನು ಪೋಷಿಸುವುದು ಮತ್ತು ಸಮನ್ವಯಗೊಳಿಸುವುದು;

(vi) ಕುಲಪತಿಯವರು ಅಥವಾ ಮಂಡಲಿ ಅಥವಾ ವಿಶ್ವವಿದ್ಯಾಲಯದ ಯಾವುದೇ ಇತರ ಪ್ರಾಧಿಕಾರವು ತನಗೆ ಪರಿಶೀಲಿಸಲು ಕಳುಹಿಸಬಹುದಾದ ಸಂಶೋಧನಾ ಕಾರ್ಯಕ್ರಮಗಳಿಗೆ ಸಂಬಂಧಪಟ್ಟ ಯಾವುದೇ ಇತರೆ ವಿಷಯ.

18. ವಿಸ್ತರಣಾ ಶಿಕ್ಷಣ ಪರಿಷತ್ತು.- (1) ಈ ಮುಂದಿನ ಸದಸ್ಯರನ್ನೊಳಗೊಂಡ ಒಂದು ವಿಸ್ತರಣಾ ಶಿಕ್ಷಣ ಪರಿಷತ್ತು ಇರತಕ್ಕದ್ದು, ಎಂದರೆ:-

(i) ಕುಲಪತಿಯವರು – ಅಧ್ಯಕ್ಷರು;

(ii) ತೋಟಗಾರಿಕೆ ಇಲಾಖೆಯ ನಿರ್ದೇಶಕರು, ಕರ್ನಾಟಕ ಸರ್ಕಾರ ಅಥವಾ ಜಂಟಿ ನಿರ್ದೇಶಕರ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಅವರ ನಾಮನಿರ್ದೇಶಿತರು;

(iii) ಕೃಷಿ ಇಲಾಖೆಯ ನಿರ್ದೇಶಕರು, ಕರ್ನಾಟಕ ಸರ್ಕಾರ ಅಥವಾ ಜಂಟಿ ನಿರ್ದೇಶಕರ ದರ್ಜೆಗಿಂತ ಕಡಿಮೆ ಯಿಲ್ಲದ ದರ್ಜೆಯ ಅವರ ನಾಮನಿರ್ದೇಶಿತರು;

(iv) ಕೃಷಿ ಮಾರುಕಟ್ಟೆ ಇಲಾಖೆಯ ನಿರ್ದೇಶಕರು, ಕರ್ನಾಟಕ ಸರ್ಕಾರ ಅಥವಾ ಜಂಟಿ ನಿರ್ದೇಶಕರ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಅವರ ನಾಮನಿರ್ದೇಶಿತರು;

(v) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ನಿರ್ದೇಶಕರು, ಕರ್ನಾಟಕ ಸರ್ಕಾರ;

(vi) ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ;

(vii) ಭಾರತೀಯ ತೋಟಗಾರಿಕೆ ಸಂಸ್ಥೆಯ ನಿರ್ದೇಶಕರು, ಬೆಂಗಳೂರು ಅಥವಾ ಅವರ ನಾಮನಿರ್ದೇಶಿತರು;

(viii) ಕೇಂದ್ರ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆ, ಮೈಸೂರು ಇದರ ನಿರ್ದೇಶಕರು ಅಥವಾ ಅವರ ನಾಮನಿರ್ದೇಶಿತರು;

(ix) ಕರ್ನಾಟಕ ರಾಜ್ಯ ವ್ಯವಸಾಯೋತ್ಪನ್ನ ಸಂಸ್ಕರಣಾ ಮತ್ತು ರಫ್ತು ನಿಗಮ ನಿಯಮಿತ (ಕೆಎಪಿಪಿಇಸಿ), ಬೆಂಗಳೂರು ಇದರ ನಿರ್ದೇಶಕರು ಅಥವಾ ಅವರ ನಾಮನಿರ್ದೇಶಿತರು;

(x) ಸಫಲ್ ಮಾರುಕಟ್ಟೆ ಘಟಕ, ಬೆಂಗಳೂರು (ಮದರ್ ಡೈರಿ ಆಹಾರ ಸಂಸ್ಕರಣಾ ನಿಯಮಿತ) ಇದರ ಮಹಾ ವ್ಯವಸ್ಥಾಪಕರು ಅಥವಾ ಮುಖ್ಯಸ್ಥರು;

(xi) ಜಲವಿಭಾಜಕ ಕ್ಷೇತ್ರ ಅಭಿವೃದ್ಧಿ ಇಲಾಖೆ ನಿರ್ದೇಶಕರು, ಕರ್ನಾಟಕ ಸರ್ಕಾರ;

(xii) ವಿಶ್ವವಿದ್ಯಾಲಯದ ಎಲ್ಲಾ ನಿರ್ದೇಶಕರು ಮತ್ತು ಡೀನ್‌ಗಳು;

(xiii) ಕುಲಸಚಿವರು;

(xiv) ಸಂಶೋಧನೆಯ ಎಲ್ಲಾ ಸಹವರ್ತಿ ನಿರ್ದೇಶಕರು ಮತ್ತು ವಿಸ್ತರಣಾ ಶಿಕ್ಷಣದ ಸಹವರ್ತಿ ನಿರ್ದೇಶಕರುಗಳು;

(xv) ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಳ ಮುಖ್ಯಸ್ಥರು;

(xvi) ತೋಟಗಾರಿಕೆ ಮತ್ತು ಇತರ ಸಂಬಂಧಿತ ಶಾಖೆಗಳಲ್ಲಿ ವಿಶೇಷ ಪರಿಣಿತಿಯುಳ್ಳ, ಪ್ರಗತಿಪರ ರೈತರ ವಿಶೇಷ ಜ್ಞಾನ ಹಾಗೂ ಅನುಭವದ ಪ್ರಯೋಜನವನ್ನು ಪಡೆದುಕೊಳ್ಳಲು ಕುಲಪತಿಯವರು ನಾಮನಿರ್ದೇಶನ ಮಾಡಿದಂಥ ಇಬ್ಬರು ಪ್ರಗತಿಪರ ರೈತರು;

(xvii) ಯಾವುದೇ ಸಭೆಯ ಸಂಬಂಧದಲ್ಲಿ ಅಂಥ ಸಭೆಯ ಕಾರ್ಯಸೂಚಿಯಲ್ಲಿನ ವಿಷಯಗಳ ಬಗ್ಗೆ ಅವರ ವಿಶೇಷ ಜ್ಞಾನದ ಪ್ರಯೋಜನವನ್ನು ಪಡೆದುಕೊಳ್ಳುವುದಕ್ಕಾಗಿ ಕುಲಪತಿಯವರು ನಾಮನಿರ್ದೇಶನ ಮಾಡಿದ ವಿಶ್ವವಿದ್ಯಾಲಯಕ್ಕೆ ಹೊರಗಿನವರಾದ ಒಬ್ಬ ಖ್ಯಾತ ವಿಸ್ತರಣಾ ಶಿಕ್ಷಣ ತಜ್ಞರು;

(xviii) ಯಾವುದೇ ಸಭೆಯ ಸಂದರ್ಭದಲ್ಲಿ ಅಂಥ ಸಭೆಯ ಕಾರ್ಯಸೂಚಿಯಲ್ಲಿನ ವಿಷಯಗಳ ಬಗ್ಗೆ ಅವರ

ವಿಶೇಷ ಜ್ಞಾನದ ಪ್ರಯೋಜನವನ್ನು ಪಡೆದುಕೊಳ್ಳು ವುದಕ್ಕಾಗಿ ಕುಲಪತಿಯವರು ನಾಮ ನಿರ್ದೇಶನ ಮಾಡಿದ ಒಬ್ಬ ವ್ಯವಸಾಯೋದ್ಯಮಿಗಳು;

(xix) ವ್ಯವಸ್ಥಾಪಕ ನಿರ್ದೇಶಕರು, ತೋಟಗಾರಿಕೆ ಉತ್ಪನ್ನ ಬೆಳೆಗಾರರ ಸಹಕಾರಿ ಮಾರುಕಟ್ಟೆ ಸಂಸ್ಥೆ;

(xx) ಕುಲಪತಿಗಳು ನಾಮನಿರ್ದೇಶಿಸಿದ ತೋಟಗಾರಿಕೆಗೆ ಸಂಬಂಧಿಸಿದ ಸರ್ಕಾರೇತರ ಸಂಸ್ಥೆಗಳಿಂದ ಒಬ್ಬ ಪ್ರತಿನಿಧಿ;

(xxi) ಕುಲಪತಿಯವರ ಕೋರಿಕೆಗನುಸಾರ ಐವರಿಗೆ ಮಿತಿಗೊಳಿಸಿದ ಈ ಮುಂದಿನ ಸಂಸ್ಥೆಗಳ ಒಬ್ಬೊಬ್ಬ ಪ್ರತಿನಿಧಿ.-

(ಎ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ.

(ಬಿ) ಸಹಕಾರ ಇಲಾಖೆ, ಕರ್ನಾಟಕ ಸರ್ಕಾರ.

(ಸಿ) ಜಲಸಂಪನ್ಮೂಲ ಇಲಾಖೆ, ಕರ್ನಾಟಕ ಸರ್ಕಾರ.

(ಡಿ) ಭಾರತದ ರಸಗೊಬ್ಬರ ನಿಗಮ.

(ಇ) ರಾಷ್ಟ್ರೀಯ ಬೀಜಗಳ ನಿಗಮ

(ಎಫ್) ಯಾವುದೇ ಇತರ ವ್ಯವಸಾಯೋದ್ಯಮ ಅಥವಾ ವ್ಯವಸಾಯ ಸೇವಾಸಂಸ್ಥೆ/ಬೀಜ ಕಂಪೆನಿಗಳು.

(ಜಿ) ಕರ್ನಾಟಕ ರಾಜ್ಯ ಬೀಜಗಳ ನಿಗಮ.

(ಎಚ್) ಕರ್ನಾಟಕ ರಾಜ್ಯ ಬೀಜ ಪ್ರಮಾಣಪತ್ರ ನೀಡಿಕೆ ಏಜೆನ್ಸಿ.

(xxii) ವಿಸ್ತರಣಾ ಶಿಕ್ಷಣ ನಿರ್ದೇಶಕರು - ಸದಸ್ಯ ಕಾರ್ಯದರ್ಶಿ.

(2) ಪದನಿಮಿತ್ತ ಸದಸ್ಯರುಗಳನ್ನು ಹೊರತುಪಡಿಸಿ ವಿಸ್ತರಣಾ ಶಿಕ್ಷಣ ಪರಿಷತ್ತಿನ ಎಲ್ಲಾ ಸದಸ್ಯರುಗಳ ಪದಾವಧಿಯು ಎರಡು ವರ್ಷಗಳಾಗಿರತಕ್ಕದ್ದು ಮತ್ತು ಅವರು ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರಕ್ಕೆ ಮರುನಾಮನಿರ್ದೇಶನ ಹೊಂದಲು ಅರ್ಹರಾಗಿರತಕ್ಕದ್ದಲ್ಲ.

19. ವಿಸ್ತರಣಾ ಶಿಕ್ಷಣ ಪರಿಷತ್ತಿನ ಪ್ರಕಾರ್ಯಗಳು.– ವಿಸ್ತರಣಾ ಶಿಕ್ಷಣ ಪರಿಷತ್ತು ಈ ಮುಂದಿನವುಗಳನ್ನು ಪರಿಶೀಲಿಸತಕ್ಕದ್ದು ಮತ್ತು ಆ ಬಗ್ಗೆ ಶಿಫಾರಸ್ಸು ಮಾಡತಕ್ಕದ್ದು ಎಂದರೆ:–

(i) ವಿಶ್ವವಿದ್ಯಾಲಯದ ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳು ಮತ್ತು ಯೋಜನೆಗಳು.

(ii) ತೋಟಗಾರಿಕೆ ಮತ್ತು ಸಂಬಂಧಿತ ಶಾಖೆಗಳ ಸುಧಾರಣೆಗಾಗಿ ಮತ್ತು ಗ್ರಾಮೀಣ ಸಮುದಾಯಗಳ ಅಭಿವೃದ್ಧಿಗಾಗಿ, ವಿಸ್ತರಣಾ ಶಿಕ್ಷಣವನ್ನು ಸಮನ್ವಯಗೊಳಿಸುವುದು.

(iii) ರೈತರ ಶಿಕ್ಷಣ ಮತ್ತು ತರಬೇತಿಯನ್ನು ಮತ್ತು ಸಲಹಾ ಸೇವೆಗಳನ್ನು ಅಭಿವೃದ್ಧಿಗೊಳಿಸುವುದು.

(iv) ಕ್ಷೇತ್ರ ಸಮಸ್ಯೆಗಳನ್ನು ಗುರುತಿಸಿ ಪರಿಹರಿಸುವುದು ಮತ್ತು ಮಾಹಿತಿಯ ಪ್ರಸಾರ ಮಾಡುವುದು.

(v) ವಿಸ್ತರಣಾ ಶಿಕ್ಷಣದ ವಿಧಾನ:

(vi) ತೋಟಗಾರಿಕೆ/ತೋಟಗಾರಿಕೆ ವಿಜ್ಞಾನ ಕೇಂದ್ರ/ವಿಸ್ತರಣಾ ಶಿಕ್ಷಣ ಘಟಕಗಳ ಕೆಲಸಕಾರ್ಯಗಳನ್ನು ಮೌಲ್ಯಮಾಪನ ಮಾಡುವುದು;

(vii) ಕುಲಪತಿಯವರು ಅಥವಾ ಮಂಡಳಿ ಅಥವಾ ವಿಶ್ವವಿದ್ಯಾಲಯದ ಯಾವುದೇ ಇತರ ಪ್ರಾಧಿಕಾರವು ತನಗೆ ಪರಿಶೀಲನೆಗಾಗಿ ಕಳುಹಿಸಿಕೊಟ್ಟ ಯಾವುದೇ ಇತರ ವಿಷಯ.

20. ಅಧ್ಯಯನ ಮಂಡಳಿಗಳು, ಅವುಗಳ ರಚನೆ ಮತ್ತು ಪ್ರಕಾರ್ಯಗಳು.– (1) ಪದವಿ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳಿಗೆ ಬೇರೆ ಬೇರೆ ಅಧ್ಯಯನ ಮಂಡಳಿಯಿರತಕ್ಕದ್ದು. ಅಧ್ಯಯನ ಮಂಡಳಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು ಶಾಸನಗಳ ಮೂಲಕ ನಿಯಮಿಸಲಾದಂತೆ ಇರತಕ್ಕದ್ದು.

(2) ಪದವಿ ಕಾರ್ಯಕ್ರಮಗಳಿಗೆ ಅಧ್ಯಯನ ಮಂಡಳಿಯ ರಚನೆಯು ಈ ಮುಂದಿನಂತೆ ಇರತಕ್ಕದ್ದು, ಎಂದರೆ:-

(i) ಶಿಕ್ಷಣ ಇಲಾಖೆ ನಿರ್ದೇಶಕರು – ಅಧ್ಯಕ್ಷರು.

(ii) ಎಲ್ಲಾ ಘಟಕ ಕಾಲೇಜುಗಳ ಡೀನ್‌ಗಳು.

(iii) ಕುಲಪತಿಯವರು ನಾಮನಿರ್ದೇಶಿಸಿದ ಪ್ರೊಫೆಸರ್ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಸಂಯೋಜಿತ ಕಾಲೇಜಿನ ಒಬ್ಬರು ಪ್ರತಿನಿಧಿ.

(iv) ಸಂಶೋಧನಾ ನಿರ್ದೇಶಕರು ಮತ್ತು ವಿಸ್ತರಣಾ ಶಿಕ್ಷಣ ನಿರ್ದೇಶಕರು.

(v) ಕುಲಸಚಿವರು.

(vi) ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಡೀನ್.

(vii) ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಳ ಮುಖ್ಯಸ್ಥರು.

(viii) ಸುತ್ತು ಸರದಿಯ ಆಧಾರದ ಮೇಲೆ ಎರಡು ವರ್ಷಗಳ ಅವಧಿಗೆ, ಅಧ್ಯಕ್ಷರು ನಾಮನಿರ್ದೇಶನದ ಇಲಾಖಾ ಮುಖ್ಯಸ್ಥರಲ್ಲದ ವಿಶ್ವವಿದ್ಯಾಲಯದ ಪ್ರತಿಯೊಂದು ಇಲಾಖೆಯ ಒಬ್ಬ ಪ್ರೊಫೆಸರ್.

(ix) ಸುತ್ತು ಸರದಿಯ ಆಧಾರದ ಮೇಲೆ ಎರಡು ವರ್ಷಗಳ ಅವಧಿಗೆ ಅಧ್ಯಕ್ಷರು ನಾಮನಿರ್ದೇಶನ ಮಾಡಿದ ಸಹವರ್ತಿ ಪ್ರೊಫೆಸರರ ಕೇಡರ್‌ನಲ್ಲಿನ ಐವರು ಅಧ್ಯಾಪಕರು.

(x) ಸುತ್ತು ಸರದಿಯ ಆಧಾರದ ಮೇಲೆ ಎರಡು ವರ್ಷಗಳ ಅವಧಿಗೆ ಅಧ್ಯಕ್ಷರು ನಾಮನಿರ್ದೇಶನ ಮಾಡಿದ ಸಹಾಯಕ ಪ್ರೊಫೆಸರರ ಕೇಡರ್‌ನಲ್ಲಿನ ಐವರು ಅಧ್ಯಾಪಕರು.

(xi) ಎರಡು ವರ್ಷಗಳ ಅವಧಿಗೆ ಅಧ್ಯಕ್ಷರು ನಾಮನಿರ್ದೇಶನ ಮಾಡಿರುವ ವಿಶ್ವವಿದ್ಯಾಲಯಕ್ಕೆ ಹೊರಗಿನವರಾದ ಇಬ್ಬರು ತೋಟಗಾರಿಕೆಯ ಪ್ರಖ್ಯಾತ ಪ್ರೊಫೆಸರುಗಳು.

(xii) ವಿಶ್ವವಿದ್ಯಾಲಯ ಕುಲಪತಿಯವರು ನಾಮನಿರ್ದೇಶನ ಮಾಡಿದ ಕಾಲೇಜಿನ ಒಬ್ಬರು ಡೀನ್ ಸದಸ್ಯ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸತಕ್ಕದ್ದು.

(3) ಪದವಿ ಕಾರ್ಯಕ್ರಮಗಳಿಗೆ ಅಧ್ಯಯನ ಮಂಡಳಿಗಳ ಪ್ರಕಾರ್ಯಗಳು ಈ ಮುಂದಿನಂತೆ ಇರತಕ್ಕದ್ದು, ಎಂದರೆ:-

(i) ಪದವಿ ಬೋಧನಾ ಕಾರ್ಯಕ್ರಮದ ಅಡಿಯಲ್ಲಿ ಪುನರಾವಲೋಕನ ಮಾಡುವುದು ಮತ್ತು ಅದರ ಸುಧಾರಣೆಗಳಿಗೆ ಸಲಹೆ ನೀಡುವುದು;

(ii) ಅಧ್ಯಯನಗಳ ಮಂಡಳಿಯು ರಚಿಸಿದಂಥ ವ್ಯಾಸಂಗ ಕ್ರಮಗಳ, ಪಠ್ಯವಿಷಯಗಳ, ಸಮಿತಿಯ ಅಥವಾ ಅದೇ ತರಹದ ಸಮಿತಿಯ ಶಿಫಾರಸ್ಸುಗಳನ್ನು ಪರಿಗಣಿಸುವುದು ಮತ್ತು ಅವನ್ನು ಪರ್ಯಾಲೋಚನೆ ಮತ್ತು ಅಂಗೀಕಾರಕ್ಕಾಗಿ ವಿದ್ಯಾವಿಷಯಕ ಪರಿಷತ್ತಿನ ಮುಂದೆ ಮಂಡಿಸುವುದು;

(iii) ವಿದ್ಯಾವಿಷಯಕ ಪರಿಷತ್ತು ಅಥವಾ ಕುಲಪತಿಯವರು ಗೊತ್ತುಪಡಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸುವುದು;

(4) ಸ್ನಾತಕೋತ್ತರ ಕಾರ್ಯಕ್ರಮಗಳಿಗಾಗಿ ಅಧ್ಯಯನಗಳ ಮಂಡಳಿಯ ರಚನೆಯು ಈ ಮುಂದಿನಂತೆ ಇರತಕ್ಕದ್ದು, ಎಂದರೆ:-

(i) ಶಿಕ್ಷಣ ಇಲಾಖೆಯ ನಿರ್ದೇಶಕರು - ಅಧ್ಯಕ್ಷರು.

(ii) ಘಟಕ ಕಾಲೇಜುಗಳ ಡೀನ್‌ಗಳು.

(iii) ಸಂಶೋಧನಾ ನಿರ್ದೇಶಕರು ಮತ್ತು ವಿಸ್ತರಣಾ ಶಿಕ್ಷಣದ ನಿರ್ದೇಶಕರು.

(iv) ಕುಲಸಚಿವರು.

(v) ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಡೀನ್.

(vi) ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಳ ಮುಖ್ಯಸ್ಥರು.

(vii) ಸುತ್ತು ಸರದಿಯ ಆಧಾರದ ಮೇಲೆ ಎರಡು ವರ್ಷಗಳ ಅವಧಿಗಾಗಿ ಅಧ್ಯಕ್ಷರು ನಾಮನಿರ್ದೇಶಿಸಿದ ಪ್ರೊಫೆಸರ್ ದರ್ಜೆಯ ಹತ್ತು ಜನ ಸ್ನಾತಕೋತ್ತರ ಅಧ್ಯಾಪಕರು.

(viii) ಸುತ್ತು ಸರದಿಯ ಆಧಾರದ ಮೇಲೆ ಎರಡು ವರ್ಷಗಳ ಅವಧಿಗಾಗಿ ಅಧ್ಯಕ್ಷರು ನಾಮನಿರ್ದೇಶಿಸಿದ ಸಹವರ್ತಿ ಪ್ರೊಫೆಸರ್ ದರ್ಜೆಯ ಹತ್ತು ಜನ ಸ್ನಾತಕೋತ್ತರ ಅಧ್ಯಾಪಕರು.

(ix) ಸುತ್ತು ಸರದಿಯ ಆಧಾರದ ಮೇಲೆ ಎರಡು ವರ್ಷಗಳ ಅವಧಿಗಾಗಿ ಅಧ್ಯಕ್ಷರು ನಾಮನಿರ್ದೇಶಿಸಿದ ಸಹಾಯಕ ಪ್ರೊಫೆಸರ್ ದರ್ಜೆಯ ಹತ್ತು ಜನ ಸ್ನಾತಕೋತ್ತರ ಅಧ್ಯಾಪಕರು.

(x) ಎರಡು ವರ್ಷಗಳ ಅವಧಿಗಾಗಿ ಅಧ್ಯಕ್ಷರು ನಾಮನಿರ್ದೇಶಿಸಿದ ವಿಶ್ವವಿದ್ಯಾಲಯಕ್ಕೆ ಹೊರಗಿನ ವರಾದ ಇಬ್ಬರು ಖ್ಯಾತ ಪ್ರೊಫೆಸರ್‌ಗಳು.

(xi) ಸ್ನಾತಕೋತ್ತರ ವ್ಯಾಸಂಗದ ಡೀನ್ ಅವರು ಸದಸ್ಯ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸತಕ್ಕದ್ದು.

(5) ಸ್ನಾತಕೋತ್ತರ ವ್ಯಾಸಂಗ ಕ್ರಮದ ಅಧ್ಯಯನ ಮಂಡಳಿಯು ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:-

(i) ಸ್ನಾತಕೋತ್ತರ ಮತ್ತು ಡಿಪ್ಲೊಮಾ ಬೋಧನಾ ಕಾರ್ಯಕ್ರಮಗಳ ಪುನರಾವಲೋಕನ ಮಾಡುವುದು ಮತ್ತು ಅವುಗಳ ಸುಧಾರಣೆಗೆ ಸಲಹೆಗಳನ್ನು ನೀಡುವುದು;

(ii) ಅಧ್ಯಯನ ಮಂಡಳಿಯು ರಚಿಸಿದ ವ್ಯಾಸಂಗ ಕ್ರಮಗಳು, ಪಠ್ಯಕ್ರಮಗಳ, ಸಮಿತಿಗಳ ಅಥವಾ ಅಂತಹುದೇ ಸಮಿತಿಗಳ ಶಿಫಾರಸ್ಸುಗಳನ್ನು ಪರಿಗಣಿ ಸುವುದು ಮತ್ತು ವಿದ್ಯಾವಿಷಯಕ ಪರಿಷತ್ತಿನ ಮುಂದೆ ಅವುಗಳನ್ನು ಪರ್ಯಾಲೋಚನೆ ಮತ್ತು ಅನುಮೋದ ನೆಗಾಗಿ ಮಂಡಿಸುವುದು;

(iii) ವಿದ್ಯಾವಿಷಯಕ ಪರಿಷತ್ತು ಅಥವಾ ಕುಲಪತಿಯವರು ವಹಿಸಬಹುದಾದಂತಹ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು.

21. ಸಮಿತಿಗಳ ರಚನೆ.– ಪ್ರತಿಯೊಂದು ಪ್ರಾಧಿಕಾರವು ಸಮಿತಿಗಳನ್ನು ನೇಮಿಸಲು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಅಂಥ ಸಮಿತಿಯು ಈ ಅಧಿನಿಯಮ ಅಥವಾ ಶಾಸನಗಳಲ್ಲಿ ಅನ್ಯಥಾ ಉಪಬಂಧಿಸಿದ್ದ ಹೊರತು, ಪ್ರಾಧಿಕಾರದ ಸದಸ್ಯರುಗಳನ್ನು ಅಥವಾ ತಾನು ಸರಿಯೆಂದು ಭಾವಿಸಬಹುದಾದ ಇತರ ವ್ಯಕ್ತಿಗಳನ್ನೊಳಗೊಂಡಿರತಕ್ಕದ್ದು

22. ಪ್ರಾಧಿಕಾರಗಳ ಸದಸ್ಯರ ಸ್ಥಾನವು ಖಾಲಿಯಾದ ಸಂದರ್ಭದಲ್ಲಿ ಉಪಬಂಧ.– (1) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು, ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಥವಾ ನಿಕಾಯದ ಪದನಿಮಿತ್ತ ಸದಸ್ಯನನ್ನು ಹೊರತುಪಡಿಸಿ ಇತರ ಯಾವುದೇ ಸದಸ್ಯರು ಮರಣ, ರಾಜೀನಾಮೆ, ತೆಗೆದುಹಾಕುವಿಕೆ ಅಥವಾ ಅನ್ಯಥಾ ಹಾಜರಾಗಲು ಅಥವಾ ತನ್ನ ಪೂರ್ಣ ಪದಾವಧಿಯನ್ನು ಪೂರ್ತಿಗೊಳಿಸಲು ಸಾಧ್ಯವಾಗದಿದ್ದಲ್ಲಿ, ಹಾಗೆ ಉಂಟಾದ ಖಾಲಿ ಸ್ಥಾನವನ್ನು ಅನುಕೂಲವಾದಷ್ಟು ಬೇಗನೆ, ಸಂದರ್ಭಾನುಸಾರ, ನೇಮಕಾತಿ, ನಾಮ ನಿರ್ದೇಶನ ಅಥವಾ ಸಹ ಸದಸ್ಯನನ್ನಾಗಿ ಸೇರಿಸುವಿಕೆಯಿಂದ ಭರ್ತಿಗೊಳಿಸತಕ್ಕದ್ದು ಮತ್ತು ಹಾಗೆ ನೇಮಕಗೊಂಡ, ನಾಮನಿರ್ದೇಶಿತನಾದ ಅಥವಾ ಸಹ ಸದಸ್ಯನಾಗಿ ಸೇರಿಕೊಂಡ ವ್ಯಕ್ತಿಯು, ಅಂಥ ಖಾಲಿ ಸ್ಥಾನವನ್ನು ತಾನು ಯಾರ ಸ್ಥಾನದಲ್ಲಿ ನೇಮಕಗೊಂಡಿರುವನೋ, ನಾಮ ನಿರ್ದೇಶಿತನಾಗಿರುವನೋ ಅಥವಾ ಸಹ ಸದಸ್ಯನಾಗಿ ಸೇರಿಕೊಂಡಿರುವನೋ ಆ ವ್ಯಕ್ತಿಯು ಸದಸ್ಯನ ಸ್ಥಾನದಲ್ಲಿ ಮುಂದುವರೆಯುತ್ತಿದ್ದ ಉಳಿದ ಭಾಗದ ಅವಧಿಯವರೆಗೆ ಅಂಥ ಖಾಲಿ ಸ್ಥಾನವನ್ನು ಭರ್ತಿಗೊಳಿಸತಕ್ಕದ್ದು.

(2) ಮಂಡಳಿಯು ಯಾವುದೇ ಪ್ರಾಧಿಕಾರದ ಅಥವಾ ವಿಶ್ವವಿದ್ಯಾಲಯದ ನಿಕಾಯದ ಸದಸ್ಯನಾದ ಯಾವುದೇ ವ್ಯಕ್ತಿಯನ್ನು ಅಂಥ ವ್ಯಕ್ತಿಯು ನೈತಿಕ ಪತನವನ್ನೊಳಗೊಂಡ ಯಾವುದೇ ಅಪರಾಧಕ್ಕಾಗಿ ನಿರ್ಣೀತ ಅಪರಾಧಿಯೆಂಬ ಅಥವಾ ಸಂಬಂಧಪಟ್ಟ ಸದಸ್ಯನು ನಿರ್ವಹಿಸುತ್ತಿರುವ ಹುದ್ದೆಯ ಘನತೆಗೆ ಆತನ ನಡತೆಯು ಸರಿಹೊಂದುತ್ತಿಲ್ಲವೆಂಬ ಕಾರಣದ ಮೇಲೆ ಕುಲಾಧಿಪತಿಯವರ ಅನುಮೋದನೆ ಪಡೆದು ಸದಸ್ಯತ್ವದಿಂದ ತೆಗೆದುಹಾಕಬಹುದು. ಅಂಥ ವ್ಯಕ್ತಿಯು ಸಕ್ಷಮ ನ್ಯಾಯಾಲಯದಿಂದ ಹಾಗೆ ಅಪರಾಧಿಯಾಗಿ ನಿರ್ಣೀತನಾಗಿದ್ದರೆ ಕುಲಾಧಿಪತಿಯವರ ಪೂರ್ವಾನುಮೋದನೆಯು ಅವಶ್ಯಕವಾಗುವುದಿಲ್ಲ:

ಪರಂತು, ಯಾವುದೇ ವ್ಯಕ್ತಿಗೆ ತನ್ನ ಅಹವಾಲು ಹೇಳಿಕೊಳ್ಳಲು ಸಮಂಜಸ ಅವಕಾಶವನ್ನು ನೀಡಿದ ಹೊರತು ಅವರ ವಿರುದ್ಧ ಅಂಥ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(3) ಬೇರೊಂದು ನಿಕಾಯದ ಸದಸ್ಯನಾದ ಯಾವನೇ ವ್ಯಕ್ತಿಯು ಆ ಸಂಸ್ಥೆಯು ವಿಶ್ವವಿದ್ಯಾಲಯದ ಒಂದು ನಿಕಾಯವಾಗಿರಲಿ ಇಲ್ಲದಿರಲಿ, ಅದರ ಪ್ರತಿನಿಧಿಯಾಗಿ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯನಾಗಿರುವ ಸಂದರ್ಭದಲ್ಲಿ, ಆತನು ತನ್ನ ಸದಸ್ಯತ್ವದ ಅವಧಿ ಮುಕ್ತಾಯವಾಗುವುದಕ್ಕಿಂತ ಮುಂಚೆ, ತನ್ನನ್ನು ನೇಮಿಸಿದ ಅಥವಾ ನಾಮನಿರ್ದೇಶನ ಮಾಡಿದ ನಿಕಾಯದ ಸದಸ್ಯನಾಗಿರುವುದು ಮುಕ್ತಾಯವಾಗಿದ್ದರೆ, ವಿಶ್ವವಿದ್ಯಾಲಯದ ಆ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯತ್ವವೂ ನಿಂತುಹೋಗತಕ್ಕದ್ದು.

(4) ಯಾವುದೇ ವ್ಯಕ್ತಿಯು ತಾನು ಹೊಂದಿರುವ ಹುದ್ದೆಯ ಬಲದಿಂದಾಗಿ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಥವಾ ನಿಕಾಯದ ಸದಸ್ಯನಾಗಿರುವಲ್ಲೆಲ್ಲಾ, ತನ್ನ ಸದಸ್ಯತ್ವದ ಅವಧಿಯು ಮುಕ್ತಾಯವಾಗುವ ಮುನ್ನವೆ ಆತ ಆ ಹುದ್ದೆಯಲ್ಲಿರುವುದು ನಿಂತುಹೋದರೆ, ಆತ/ಆಕೆಯು ಹೊಂದಿರುವ ಅಂಥ ಪ್ರಾಧಿಕಾರದ ಅಥವಾ ನಿಕಾಯದ ಸದಸ್ಯತ್ವವೂ ನಿಂತುಹೋಗತಕ್ಕದ್ದು:

ಪರಂತು, ನಾಲ್ಕು ತಿಂಗಳಿಗೆ ಮೀರದ ಅವಧಿಗೆ ಆತನು ರಜೆಯ ಮೇಲೆ ಹೋಗಿದ್ದರೆ ಅದನ್ನು ಆತನು ಹುದ್ದೆಯಲ್ಲಿರುವುದು ನಿಂತುಹೋಗಿದೆಯೆಂದು ಭಾವಿಸತಕ್ಕದ್ದಲ್ಲ.

(5) ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ನಿಕಾಯದ ಪದನಿಮಿತ್ತ ಸದಸ್ಯನಲ್ಲದ ಇತರ ಯಾವುದೇ ಸದಸ್ಯನು ಕುಲಪತಿಯವರ ವಿಳಾಸಕ್ಕೆ ಒಂದು ಪತ್ರವನ್ನು ಬರೆದು ರಾಜೀನಾಮೆ ನೀಡಬಹುದು ಮತ್ತು ಅಂಥ ರಾಜೀನಾಮೆಯು ಅದನ್ನು ಸ್ವೀಕರಿಸಿದ ದಿನಾಂಕದಿಂದ ಜಾರಿಗೆಬರತಕ್ಕದ್ದು.

23. ಕ್ರಮಗಳ ಸಿಂಧುತ್ವ ಮತ್ತು ಅದಕ್ಕೆ ರಕ್ಷಣೆ.– (1) ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ನಿಕಾಯದ ಯಾವುದೇ ಕ್ರಮ ಅಥವಾ ವ್ಯವಹರಣೆಯು ಅದರ ಸದಸ್ಯರುಗಳ ಸ್ಥಾನಗಳಲ್ಲಿ ಯಾವುದೇ ಸ್ಥಾನವು ಖಾಲಿ ಇರುವ ಕಾರಣದಿಂದಾಗಿ ಅಥವಾ ಯಾವೊಬ್ಬ ವ್ಯಕ್ತಿಯು

ಮೊದಲು ವ್ಯವಹರಣೆಗಳಲ್ಲಿ ಭಾಗವಹಿಸಿದ್ದು ನಂತರ ಹಾಗೆ ಮಾಡಲು ಹಕ್ಕುಳ್ಳವನಲ್ಲವೆಂದು ಕಂಡುಬಂದ ಕಾರಣದಿಂದಾಗಿ ಅಸಿಂಧುವಾಗತಕ್ಕದ್ದಲ್ಲ

(2) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು, ವಿಶ್ವವಿದ್ಯಾಲಯದಿಂದ ಅಥವಾ ಅದರ ಪ್ರಾಧಿಕಾರಗಳಿಂದ ಸದ್ಭಾವನೆಯಿಂದ ಕೈಗೊಂಡ ಎಲ್ಲಾ ಕ್ರಮಗಳು ಅಥವಾ ಹೊರಡಿಸಿದ ಎಲ್ಲಾ ಆದೇಶಗಳು ಅಂತಿಮವಾಗಿರತಕ್ಕದ್ದು ಮತ್ತು ಈ ಅಧ್ಯಾದೇಶ ಅಥವಾ ಶಾಸನಗಳು ಅಥವಾ ವಿನಿಯಮಗಳನ್ನು ಅನುಸರಿಸಿ ಮಾಡಿದೆ ಅಥವಾ ಮಾಡಲಾಗಿದೆ ಎಂದು ತಾತ್ಪರ್ಯವಾಗಿರುವ ಯಾವುದೇ ಕಾರ್ಯದ ಸಂಬಂಧದಲ್ಲಿ ವಿಶ್ವವಿದ್ಯಾಲಯ ಅಥವಾ ಅದರ ಪ್ರಾಧಿಕಾರದ ವಿರುದ್ಧವಾಗಿ ಯಾವುದೇ ದಾವೆಯನ್ನು ಹೂಡತಕ್ಕದ್ದಲ್ಲ ಅಥವಾ ಹಾನಿ ಪರಿಹಾರವನ್ನು ಕ್ಲೈಮು ಮಾಡತಕ್ಕದ್ದಲ್ಲ.

(3) ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಿರುವ ಯಾವುದೇ ಶಾಸನಗಳ ಪಾಲನೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಬೇಕೆಂದು ಉದ್ದೇಶಿಸಿದ ಯಾವುದೇ ಕಾರ್ಯದ ಸಂಬಂಧದಲ್ಲಿ ವಿಶ್ವವಿದ್ಯಾಲಯದ ಯಾವೊಬ್ಬ ಅಧಿಕಾರಿಯ ಅಥವಾ ಇತರ ನೌಕರನ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

ಅಧ್ಯಾಯ – IV

ವಿಶ್ವವಿದ್ಯಾಲಯದ ಅಧಿಕಾರಿಗಳು

24. ವಿಶ್ವವಿದ್ಯಾಲಯದ ಅಧಿಕಾರಿಗಳು.– ಈ ಮುಂದಿನವರುಗಳು ವಿಶ್ವವಿದ್ಯಾಲಯದ ಅಧಿಕಾರಿಗಳಾ ಗಿರತಕ್ಕದ್ದು, ಎಂದರೆ:–

(1) ಕುಲಾಧಿಪತಿಯವರು;
(2) ಸಹಕುಲಾಧಿಪತಿಯವರು;
(3) ಕುಲಪತಿಯವರು;
(4) ನಿರ್ದೇಶಕರುಗಳು;
(5) ಡೀನ್‌ಗಳು;
(6) ಕುಲಸಚಿವರು;
(7) ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಡೀನ್;
(8) ವಿಶ್ವವಿದ್ಯಾಲಯ ಗ್ರಂಥಪಾಲಕರು;

(9) ಶಾಸನಗಳ ಮೂಲಕ ವಿಶ್ವವಿದ್ಯಾಲಯದ ಅಧಿಕಾರಿಗಳೆಂದು ಘೋಷಿಸಬಹುದಾದಂತಹ ವಿಶ್ವವಿದ್ಯಾಲಯದ ಸೇವೆಯಲ್ಲಿರುವ ಇತರ ವ್ಯಕ್ತಿಗಳು; ಮತ್ತು

(10) ಲೆಕ್ಕ ನಿಯಂತ್ರಕರು;

25. ಕುಲಾಧಿಪತಿ.– (1) ಕರ್ನಾಟಕ ರಾಜ್ಯದ ರಾಜ್ಯಪಾಲರು ತಮ್ಮ ಹುದ್ದೆಯ ಬಲದಿಂದಾಗಿ ವಿಶ್ವವಿದ್ಯಾಲಯದ ಕುಲಾಧಿಪತಿಯಾಗಿರತಕ್ಕದ್ದು.

(2) ಕುಲಾಧಿಪತಿಯವರು ವಿಶ್ವವಿದ್ಯಾಲಯದ ಮುಖ್ಯಸ್ಥರಾಗಿರತಕ್ಕದ್ದು ಮತ್ತು ಅವರು ಹಾಜರಿದ್ದಾಗ ವಿಶ್ವವಿದ್ಯಾಲಯದ ಘಟಿಕೋತ್ಸವಗಳ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(3) ಗೌರವ ಪದವಿಯನ್ನು ನೀಡುವ ಪ್ರತಿಯೊಂದು ಪ್ರಸ್ತಾವಕ್ಕೂ ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ನೀಡಿ ಕುಲಾಧಿಪತಿಯವರು ಸ್ಥಿರೀಕರಿಸಿರತಕ್ಕದ್ದು.

(4) ಈ ಅಧಿನಿಯಮ ಮತ್ತು ಶಾಸನಗಳಿಗೆ ಅನುಸಾರವಾಗಿರದ ವಿಶ್ವವಿದ್ಯಾಲಯದ ಯಾವುದೇ ಅಧಿಕಾರಿಯ ಅಥವಾ ಪ್ರಾಧಿಕಾರದ ಯಾವುದೇ ಆದೇಶ ಅಥವಾ ವ್ಯವಹರಣೆಗಳನ್ನು ಕುಲಾಧಿಪತಿಯವರು ಲಿಖಿತದ ಆದೇಶದ ಮೂಲಕ ಶೂನ್ಯಗೊಳಿಸಬಹುದು :

ಪರಂತು ಅಂತಹ ಆದೇಶವನ್ನು ಹೊರಡಿಸುವ ಮೊದಲು ಅವರು ಅಂತಹ ಆದೇಶವನ್ನು ಏಕೆ ಹೊರಡಿಸಬಾರದು ಎಂದು ಕಾರಣ ಕೇಳುವ ನೋಟೀಸನ್ನು ಸಂಬಂಧಪಟ್ಟ ಅಧಿಕಾರಿ ಅಥವಾ ಪ್ರಾಧಿಕಾರಕ್ಕೆ ನೀಡತಕ್ಕದ್ದು ಮತ್ತು ಅಂತಹ ಆದೇಶದಲ್ಲಿ ಈ ಸಂಬಂಧದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಯಾವುದೇ ಕಾರಣವನ್ನು ನೀಡಿದಲ್ಲಿ ಅದನ್ನು ಅವರು ಪರಿಗಣಿಸತಕ್ಕದ್ದು.

(5) ಕುಲಾಧಿಪತಿಯವರು ಈ ಅಧಿನಿಯಮದ ಅಥವಾ ಶಾಸನಗಳ ಮೂಲಕ ತಮಗೆ ಪ್ರದತ್ತವಾದಂತಹ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂತಹ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

26. ಸಹಕುಲಾಧಿಪತಿಯವರು.– (1) ಕರ್ನಾಟಕ ರಾಜ್ಯದ ತೋಟಗಾರಿಕೆ ಸಚಿವರು ತಮ್ಮ ಹುದ್ದೆಯ ಬಲದಿಂದಾಗಿ ಸಹಕುಲಾಧಿಪತಿಗಳಾಗಿರತಕ್ಕದ್ದು.

(2) ಸಹಕುಲಾಧಿಪತಿಯವರು ಈ ಅಧಿನಿಯಮದ ಮೂಲಕ ಅದರಡಿಯಲ್ಲಿ ಅಥವಾ ಶಾಸನಗಳ ಅಡಿಯಲ್ಲಿ ತಮಗೆ ಪ್ರದತ್ತವಾಗಬಹುದಾದಂತಹ ಕುಲಾಧಿಪತಿಯವರ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಚಲಾಯಿಸತಕ್ಕದ್ದು. ಕುಲಾಧಿಪತಿಯವರು ಸಹಕುಲಾಧಿಪತಿಯವರಿಗೆ ಲಿಖಿತ ಆದೇಶದ ಮೂಲಕ ಪ್ರತ್ಯಾಯೋಜಿಸಬಹುದಾದಂತಹ ಕುಲಾಧಿಪತಿಯವರ ಅಧಿಕಾರಗಳನ್ನು ಸಹ ಅವರು ಚಲಾಯಿಸತಕ್ಕದ್ದು ಮತ್ತು ಅಂತಹ ಇತರ ಕರ್ತವ್ಯಗಳನ್ನು ಸಹ ನಿರ್ವಹಿಸತಕ್ಕದ್ದು ಹಾಗೂ ಅಂತಹ ಪ್ರತ್ಯಾಯೋಜನೆಯು ಆದೇಶದಲ್ಲಿ ನಿರ್ದಿಷ್ಟಪಡಿಸಿದಂತಹ ನಿರ್ಬಂಧಗಳಿಗೆ ಒಳಪಟ್ಟಿರತಕ್ಕದ್ದು.

(3) ಅವರು ಕುಲಾಧಿಪತಿಯವರ ಅನುಪಸ್ಥಿತಿಯಲ್ಲಿ ವಿಶ್ವವಿದ್ಯಾಲಯದ ಘಟಿಕೋತ್ಸವದ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

27. ಕುಲಪತಿಯವರು.– (1) ಕುಲಪತಿಯವರು ವಿಶ್ವವಿದ್ಯಾಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು.

(2) ರಾಜ್ಯ ಸರ್ಕಾರವು ಈ ಮುಂದಿನ ವ್ಯಕ್ತಿಗಳನ್ನು ಒಳಗೊಂಡ ಒಂದು ಶೋಧನಾ ಸಮಿತಿಯನ್ನು ರಚಿಸತಕ್ಕದ್ದು, ಎಂದರೆ:–

(i) ಮಹಾ ನಿರ್ದೇಶಕರು, ಭಾರತದ ಕೃಷಿ ಸಂಶೋಧನಾ ಪರಿಷತ್ತು

(ii) ಅಧ್ಯಕ್ಷರು, ವಿಶ್ವವಿದ್ಯಾಲಯ ಅನುದಾನ ಆಯೋಗ ಅಥವಾ ಅವರ ನಾಮನಿರ್ದೇಶಿತರು

(iii) ಕುಲಾಧಿಪತಿಯವರ ಒಬ್ಬ ನಾಮನಿರ್ದೇಶಿತರು;

(iv) ರಾಜ್ಯ ಸರ್ಕಾರದ ಒಬ್ಬ ನಾಮನಿರ್ದೇಶಿತರು;

ರಾಜ್ಯ ಸರ್ಕಾರವು ಅಂಥ ಸಮಿತಿಯ ಸದಸ್ಯರಲ್ಲಿ ಒಬ್ಬರನ್ನು ಸಮಿತಿಯ ಅಧ್ಯಕ್ಷರಾಗಿ ನೇಮಕಮಾಡತಕ್ಕದ್ದು. ತೋಟಗಾರಿಕೆ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿಗಳು ಅಥವಾ ಸರ್ಕಾರದ ಕಾರ್ಯದರ್ಶಿಗಳ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಅವರ ನಾಮ ನಿರ್ದೇಶಿತರು ಶೋಧನಾ ಸಮಿತಿಯ ಸಂಚಾಲಕರಾಗಿರತಕ್ಕದು.

(3) ಶೋಧನಾ ಸಮಿತಿಯು ಖ್ಯಾತ ತೋಟಗಾರಿಕೆ ತಜ್ಞರಾದ ಮೂರು ವ್ಯಕ್ತಿಗಳ ಹೆಸರಿನ ಪಟ್ಟಿಯನ್ನು ಅಕಾರದಿಯಾಗಿ ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ರಾಜ್ಯ ಸರ್ಕಾರವು ಕುಲಾಧಿಪತಿಯವರಿಗೆ ಆ ಪಟ್ಟಿಯನ್ನು ಕಳುಹಿಸತಕ್ಕದ್ದು. ಕುಲಾಧಿಪತಿಯವರು ಅರ್ಹತೆ, ಸಮದರ್ಶಿತ್ವ ಮತ್ತು ಸಾಮಾಜಿಕ ನ್ಯಾಯ ಇವುಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ರಾಜ್ಯ ಸರ್ಕಾರದ ಸಹಮತಿಯೊಡನೆ ಸದರಿ ಪಟ್ಟಿಯಿಂದ ಒಬ್ಬ ವ್ಯಕ್ತಿಯನ್ನು ಕುಲಪತಿಯಾಗಿ ನೇಮಿಸತಕ್ಕದ್ದು:

ಪರಂತು, ಕುಲಾಧಿಪತಿಯವರು, ಅವಶ್ಯವಿದ್ದಲ್ಲಿ ರಾಜ್ಯ ಸರ್ಕಾರದ ಸಹಮತಿಯೊಡನೆ ಎರಡನೇ ಪಟ್ಟಿಯನ್ನು ಕೇಳಬಹುದು ಮತ್ತು ಶೋಧನಾ ಸಮಿತಿಯು ಎರಡನೇ ಪಟ್ಟಿಯನ್ನು ಕಳುಹಿಸತಕ್ಕದ್ದು ಮತ್ತು ಅದು ಅಂತಿಮ ವಾಗಿರತಕ್ಕದ್ದು.

(4) (3)ನೇ ಉಪ ಪ್ರಕರಣದಲ್ಲಿ ಏನೇ ಇದ್ದರೂ, ವಿಶ್ವವಿದ್ಯಾಲಯದ ಮೊದಲ ಕುಲಪತಿಯವರನ್ನು ರಾಜ್ಯ ಸರ್ಕಾರದ ಶಿಫಾರಸ್ಸಿನ ಮೇಲೆ ಕುಲಾಧಿಪತಿಯವರು ನೇಮಕ ಮಾಡತಕ್ಕದ್ದು.

(5) ಕುಲಪತಿಯವರು ನಾಲ್ಕು ವರ್ಷಗಳವರೆಗೆ ಅಥವಾ ಅವರಿಗೆ ಅರವತ್ತೈದು ವರ್ಷಗಳಾಗುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಆ ಅವಧಿಯವರೆಗೆ ಪದಧಾರಣೆಯನ್ನು ಮಾಡಿರತಕ್ಕದ್ದು. ಅವರು ಪುನರ್ ನೇಮಕಾತಿಗೆ ಅರ್ಹರಾಗಿರತಕ್ಕದ್ದಲ್ಲ.

(6) ಕುಲಪತಿಯವರ ಉಪಲಬ್ಧಿಗಳು ಮತ್ತು ಇತರ ಸೇವಾ ಷರತ್ತುಗಳು ಕುಲಾಧಿಪತಿಯವರು ನಿರ್ಧರಿಸಬಹುದಾದಂತೆ ಇರತಕ್ಕದ್ದು ಮತ್ತು ಅವುಗಳನ್ನು ಅವರು ಕುಲಪತಿಯಾಗಿ ನೇಮಕವಾದ ತರುವಾಯ ಅವರಿಗೆ ಅನಾನುಕೂಲವಾಗುವಂತೆ ಬದಲಾಯಿಸತಕ್ಕದಲ್ಲ.

(7) ಕುಲಪತಿಯವರು ಕುಲಾಧಿಪತಿಯವರಿಗೆ ತನ್ನ ಕೈ ಬರಹದಲ್ಲಿ ರಾಜಿನಾಮೆ ಪತ್ರವನ್ನು ಬರೆದು ತಾನು ಬಿಡುಗಡೆಗೊಳ್ಳಲು ಇಚ್ಛಿಸುವ ದಿನಾಂಕದಿಂದ ಅರವತ್ತು ದಿನಗಳಿಗೆ ಮೊದಲು ಅದನ್ನು ಕುಲಾಧಿಪತಿಯವರಿಗೆ ಕಳುಹಿಸುವ ಮೂಲಕ ತನ್ನ ಸ್ಥಾನವನ್ನು ತ್ಯಜಿಸಬಹುದು ಆದರೆ ಕುಲಾಧಿಪತಿಯವರು ಅವರನ್ನು ಅದಕ್ಕೂ ಮೊದಲೇ ಬಿಡುಗಡೆಗೊಳಿಸಬಹುದು.

(8) ಕುಲಪತಿಯವರ ಹುದ್ದೆಯು ತಾತ್ಕಾಲಿಕವಾಗಿ ಖಾಲಿಯಾದರೆ ಅಥವಾ ಅವರ ರಜೆಯ ಕಾರಣದಿಂದಾಗಿ ಗೈರುಹಾಜರಾದಲ್ಲಿ ಅಥವಾ ಇನ್ನಾವುದೇ ಕಾರಣಗಳಿಗಾಗಿ ಖಾಲಿಯಾದರೆ ಶಿಕ್ಷಣ ನಿರ್ದೇಶಕರು ಮತ್ತು ಶಿಕ್ಷಣ ನಿರ್ದೇಶಕರ ಗೈರು ಹಾಜರಿಯಲ್ಲಿ, ಕುಲಸಚಿವರು ಅಥವಾ ಕೇಂದ್ರ ಕಾರ್ಯಸ್ಥಾನದಲ್ಲಿರುವ ವಿಶ್ವವಿದ್ಯಾಲಯದ ಅತ್ಯಂತ ಹಿರಿಯ ನಿರ್ದೇಶಕರು, ಕುಲಾಧಿಪತಿಯವರ ಅನುಮೋದನೆ ಪಡೆದು ಕುಲಪತಿಯವರ ಕರ್ತವ್ಯಗಳನ್ನು ನಿರ್ವಹಿಸಬಹುದು. ಆದರೆ ಅವರ ಪದಾವಧಿಯು ಆರು ತಿಂಗಳುಗಳನ್ನು ಮೀರತಕ್ಕದ್ದಲ್ಲ.

(9) ಕುಲಪತಿಯವರನ್ನು, ಅವರ ದುರ್ನಡತೆಯ ಕಾರಣದ ಮೇಲೆ ಅಥವಾ ಅಸಮರ್ಥತೆಯ ಕಾರಣದ ಮೇಲೆ ಅಥವಾ ಕುಲಪತಿಯವರು ತಮ್ಮ ಪದದಲ್ಲಿ ಮುಂದುವರಿಯುವುದರಿಂದ ವಿಶ್ವವಿದ್ಯಾಲಯದ ಹಿತಾಸಕ್ತಿಗೆ ದಕ್ಕೆ ಉಂಟಾಗುತ್ತದೆಂದು ಕುಲಾಧಿಪತಿಯವರು ಮನಗಂಡರೆ ಆಗ ಕುಲಾಧಿಪತಿಯವರು ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಯವರನ್ನು ಅಥವಾ ನ್ಯಾಯಮೂರ್ತಿ ಆಗಿದ್ದವರನ್ನು ನಾಮನಿರ್ದೇಶನ ಮಾಡಿ ಅವರಿಂದ ಯುಕ್ತ ವಿಚಾರಣೆಯನ್ನು ನಡೆಸಿದ ತರುವಾಯ ಮತ್ತು ಆ ವಿಚಾರಣೆಯಲ್ಲಿ ಕುಲಪತಿಯವರಿಗೆ ಮನವಿಯನ್ನು ಸಲ್ಲಿಸಲು ಅವಕಾಶವನ್ನು ನೀಡಿ, ಕುಲಾಧಿಪತಿಯವರು ಹೊರಡಿಸಿದ ಆದೇಶದ ಮೂಲಕವಾಗಿ ಹೊರತು ಅನ್ಯಥಾ ಕುಲಪತಿಯವರನ್ನು ಅವರ ಸ್ಥಾನದಿಂದ ತೆಗೆಯತಕ್ಕದ್ದಲ್ಲ.

28. ವಿಶೇಷಾಧಿಕಾರಿ.– (1) ಸರ್ಕಾರವು ಒಬ್ಬ ಅಧಿಕಾರಿಯನ್ನು ವಿಶೇಷಾಧಿಕಾರಿಯಾಗಿ ನೇಮಕ ಮಾಡತಕ್ಕದ್ದು.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ನೇಮಕಗೊಂಡ ವಿಶೇಷಾಧಿಕಾರಿಯು ವಿಶ್ವವಿದ್ಯಾಲಯದ ಸ್ಥಾಪನೆಗೆ ಅವಶ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ವಿಶ್ವವಿದ್ಯಾಲಯದ ಕುಲಪತಿಗಳ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

(3) ವಿಶೇಷಾಧಿಕಾರಿಯು ಮೊದಲನೇ ಕುಲಪತಿಯವರು ನೇಮಕವಾಗುವವರೆಗೆ ಪದಧಾರಣೆಯನ್ನು ಮಾಡಿರುತ್ತಾರೆ.

29. ಕುಲಪತಿಯವರ ಅಧಿಕಾರಗಳು ಮತ್ತು ಕರ್ತವ್ಯಗಳು.- (1) ಕುಲಪತಿಯವರು ವಿಶ್ವವಿದ್ಯಾಲಯದ ಪ್ರಧಾನ ಕಾರ್ಯನಿರ್ವಾಹಕ ಶೈಕ್ಷಣಿಕ ಅಧಿಕಾರಿ ಮತ್ತು ಮಂಡಳಿಯ, ವಿದ್ಯಾವಿಷಯಕ ಪರಿಷತ್ತಿನ ಮತ್ತು ಇತರ ಪ್ರಾಧಿಕಾರಗಳ ಪದನಿಮಿತ್ತ ಅಧ್ಯಕ್ಷರಾಗಿರತಕ್ಕದ್ದು ಹಾಗೂ ಕುಲಾಧಿಪತಿಯವರ ಮತ್ತು ಸಹಕುಲಾಧಿಪತಿಯವರ ಅನುಪಸ್ಥಿತಿಯಲ್ಲಿ ವಿಶ್ವವಿದ್ಯಾಲಯದ ಘಟಿಕೋತ್ಸವದ ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಹಾಗೂ ಪದವಿಗಳನ್ನು ಪಡೆಯಲು ಅರ್ಹರಾದವರಿಗೆ ಪದವಿಗಳನ್ನು ಪ್ರದಾನ ಮಾಡತಕ್ಕದ್ದು.

(2) ಕುಲಪತಿಯವರು ವಿಶ್ವವಿದ್ಯಾಲಯದ ವ್ಯವಹಾರಗಳ ಮೇಲೆ ಸಾಮಾನ್ಯ ನಿಯಂತ್ರಣವನ್ನು ಹೊಂದಿರತಕ್ಕದ್ದು ಮತ್ತು ವಿಶ್ವವಿದ್ಯಾಲಯದ ಶಿಸ್ತನ್ನು ಕಾಪಾಡುವುದಕ್ಕೆ ಜವಾಬ್ದಾರರಾಗಿರತಕ್ಕದ್ದು.

(3) ಕುಲಪತಿಯವರು ಮಂಡಳಿಯ, ವಿದ್ಯಾವಿಷಯಕ ಪರಿಷತ್ತಿನ, ಸಂಶೋಧನಾ ಪರಿಷತ್ತಿನ ವಿಸ್ತರಣಾ ಶಿಕ್ಷಣ ಪರಿಷತ್ತಿನ ಸಭೆಗಳನ್ನು ಏರ್ಪಡಿಸತಕ್ಕದ್ದು.

(4) ಕುಲಪತಿಯವರು ಈ ಅಧಿನಿಯಮದ, ಶಾಸನಗಳ ಮತ್ತು ವಿನಿಯಮಗಳ ಉಪಬಂಧಗಳು ಸರಿಯಾಗಿ ಪಾಲನೆಯಾಗುವಂತೆ ನೋಡಿ ಕೊಳ್ಳತಕ್ಕದ್ದು.

(5) ಕುಲಪತಿಯವರು ವಾರ್ಷಿಕ ಹಣಕಾಸು ಅಂದಾಜುಗಳನ್ನು ಮತ್ತು ವಾರ್ಷಿಕ ಲೆಕ್ಕಪತ್ರಗಳನ್ನು ಮಂಡಳಿಗೆ ಮಂಡಿಸುವುದಕ್ಕೆ ಹೊಣೆಗಾರ ರಾಗಿರತಕ್ಕದ್ದು.

(6) ಕುಲಪತಿಯವರು ಯಾವುದೇ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ತಕ್ಷಣ ಕ್ರಮಕೈಗೊಳ್ಳಬೇಕಾಗಿದೆ ಎಂದು ಅಭಿಪ್ರಾಯಪಟ್ಟಲ್ಲಿ ಅವರು ಅಂಥ ಯಾವುದೇ ಕ್ರಮವನ್ನು ಕೈಗೊಳ್ಳಬಹುದು. ಅಂತಹ ಸಂದರ್ಭದಲ್ಲಿ ಅವರು ತದನಂತರ ತಾನು ಕೈಗೊಂಡ ಕ್ರಮಗಳ ಬಗ್ಗೆ, ಆದಷ್ಟು ಬೇಗನೆ ಒಂದು ವರದಿಯನ್ನು ಸಾಮಾನ್ಯವಾಗಿ ಅಂತಹ ವಿಷಯಗಳನ್ನು ನಿರ್ವಹಿಸುವ ಪ್ರಾಧಿಕಾರಕ್ಕೆ ಅಥವಾ ನಿಕಾಯಕ್ಕೆ ಸಲ್ಲಿಸತಕ್ಕದ್ದು. ಕುಲಪತಿಯವರ ಕ್ರಮವನ್ನು ಆ ಪ್ರಾಧಿಕಾರ ಅಥವಾ ನಿಕಾಯವು ಒಪ್ಪಿಕೊಳ್ಳದಿದ್ದಲ್ಲಿ ಅಂತಹ ವಿಷಯವನ್ನು ಕುಲಾಧಿಪತಿಯವರಿಗೆ ಕಳುಹಿಸತಕ್ಕದ್ದು ಮತ್ತು ಅದರ ಬಗ್ಗೆ ಅವರ ತೀರ್ಮಾನವು ಅಂತಿಮವಾಗಿರತಕ್ಕದ್ದು.

(7) ಕುಲಪತಿಯವರು ಕೈಗೊಂಡ ಕ್ರಮದಿಂದಾಗಿ ವಿಶ್ವವಿದ್ಯಾಲಯದ ಸೇವೆಯಲ್ಲಿರುವ ಯಾವುದೇ ವ್ಯಕ್ತಿಗೆ ತೊಂದರೆ ಉಂಟಾದಲ್ಲಿ, ಅಂತಹ ವ್ಯಕ್ತಿಯು ಕೈಗೊಂಡ ಕ್ರಮದ ಬಗ್ಗೆ ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಮಂಡಳಿಗೆ ಅಪೀಲನ್ನು ಸಲ್ಲಿಸಬಹುದು.

(8) ಮಂಡಳಿಯ ಮೇಲ್ಮನವಿ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು ಅಂತಹ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಕುಲಾಧಿಪತಿಯವರಿಗೆ ಎರಡನೇ ಅಪೀಲನ್ನು ಸಲ್ಲಿಸಬಹುದು ಮತ್ತು ಅಂತಹ ಅಪೀಲಿನ ಮೇಲೆ ಕುಲಾಧಿಪತಿಯವರ ತೀರ್ಮಾನವು ಅಂತಿಮವಾಗಿರತಕ್ಕದ್ದು.

(9) ಕುಲಪತಿಯವರು, (8)ನೇ ಉಪ ಪ್ರಕರಣದಡಿಯಲ್ಲಿಯ ತೀರ್ಮಾನವನ್ನು ಹೊರತುಪಡಿಸಿ ಮಂಡಳಿಯ ತೀರ್ಮಾನವು ಅಧಿನಿಯಮಗಳ ಮತ್ತು ಶಾಸನಗಳ ಉಪಬಂಧಗಳಿಗೆ ಸರ್ಕಾರದ ವಿನಿಯಮಗಳಿಗೆ ಅನುಗುಣವಾಗಿಲ್ಲವೆಂದು, ಹಾಗೂ ವಿಶ್ವವಿದ್ಯಾಲಯದ ಹಿತಾಸಕ್ತಿಗೆ ಪೂರಕವಾಗಿ ಇಲ್ಲವೆಂದು ಅಭಿಪ್ರಾಯಪಟ್ಟಲ್ಲಿ ಆತನು ಹದಿನೈದು ದಿನಗಳೊಳಗಾಗಿ ಅದನ್ನು ಕುಲಾಧಿಪತಿಯವರಿಗೆ ಅವರ ತೀರ್ಮಾನವನ್ನು ಕೋರಿ ಕಳುಹಿಸಿಕೊಡತಕ್ಕದ್ದು. ಅದರ ಮೇಲೆ ಕುಲಾಧಿಪತಿಯವರು ಕೈಗೊಂಡ ತೀರ್ಮಾನವು ಅಂತಿಮವಾಗಿರತಕ್ಕದ್ದು. ಕುಲಾಧಿಪತಿಯವರು ಹಾಗೆ ಕಳುಹಿಸಿಕೊಟ್ಟ ವಿಷಯವನ್ನು ವಿಲೆಮಾಡುವವರೆಗೆ ಮಂಡಳಿಯ ತೀರ್ಮಾನವನ್ನು ಜಾರಿಗೊಳಿಸತಕ್ಕದ್ದಲ್ಲ.

(10) ಮೇಲಿನ ಉಪ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಕುಲಪತಿಯವರು ವಿಶ್ವವಿದ್ಯಾಲಯದ ಅಧಿಕಾರಿಗಳು, ಅಧ್ಯಾಪಕರು ಹಾಗೂ ಇತರ ನೌಕರರ ನೇಮಕಾತಿಗಳು, ಮುಂಬಡ್ತಿಗಳು ಮತ್ತು ವಜಾ ವಿಷಯಗಳಿಗೆ ಸಂಬಂಧಿಸಿದ ಮಂಡಳಿಯ ತೀರ್ಮಾನಗಳನ್ನು ಜಾರಿಗೊಳಿಸತಕ್ಕದು.

(11) ಕುಲಪತಿಯವರು ವಿಶ್ವವಿದ್ಯಾಲಯದ ವ್ಯವಹರಣೆಗಳ ಸೂಕ್ತ ಆಡಳಿತಕ್ಕೆ ಮತ್ತು ಬೋಧನೆ, ಸಂಶೋಧನೆ ಹಾಗೂ ವಿಸ್ತರಣಾ ಶಿಕ್ಷಣ ಇವುಗಳ ನಿಕಟ ಸಹವರ್ತನೆ ಮತ್ತು ಒಗ್ಗೂಡುವಿಕೆಗೆ ಜವಾಬ್ದಾರನಾಗಿರತಕ್ಕದ್ದು.

(12) ಕುಲಪತಿಯವರು ಈ ಅಧಿನಿಯಮ ಮತ್ತು ಶಾಸನಗಳ ಉಪಬಂಧಗಳ ಅಡಿಯಲ್ಲಿ ತಮಗೆ ಪ್ರದಾನ ಮಾಡಿದ ಅಥವಾ ವಹಿಸಿದಂತಹ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂತಹ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

30. ವಿಶ್ವವಿದ್ಯಾಲಯದ ಇತರ ಅಧಿಕಾರಿಗಳ ಸಾಮಾನ್ಯ ನಿಬಂಧನೆಗಳು ಮತ್ತು ಷರತ್ತುಗಳು.– (1) 24ನೇ ಪ್ರಕರಣದ (4) ರಿಂದ (9)ನೇ ಖಂಡ ಗಳಲ್ಲಿ ನಿರ್ದಿಷ್ಟಪಡಿಸಿದ ವಿಶ್ವವಿದ್ಯಾಲಯದ ಅಧಿಕಾರಿಗಳನ್ನು ನಿಯಮಿ ಸಬಹುದಾದಂತಹ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಮಂಡಳಿಯ ಅನುಮೋದನೆಯೊಂದಿಗೆ ಕುಲಪತಿಯವರು ನೇಮಿಸತಕ್ಕದ್ದು:

ಪರಂತು, ಕುಲಪತಿಯವರು ಅಂಥ ಅಧಿಕಾರಿಗಳ ನೇಮಕಾತಿಗಳನ್ನು ವಿಶ್ವವಿದ್ಯಾಲಯದ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಮಾಹಿತಿ ಒದಗಿಸಿ ತಾತ್ಕಾಲಿಕ ಕ್ರಮವಾಗಿ ಮಾಡಬಹುದು.

(2) 24ನೇ ಪ್ರಕರಣದ (4) ರಿಂದ (10)ರ ವರೆಗಿನ ಖಂಡಗಳಲ್ಲಿ ಉಲ್ಲೇಖಿಸಿದ ವಿಶ್ವವಿದ್ಯಾಲಯದ ಅಧಿಕಾರಿಗಳು ತಮ್ಮ ವೇತನ, ಭತ್ಯೆಗಳು, ಇತರ ಸೇವಾ ಷರತ್ತುಗಳನ್ನು ಕುರಿತು ಶಾಸನಗಳು ಅಥವಾ ಇತರ ಆದೇಶಗಳಲ್ಲಿ ವಿನಿಯಮಿಸಲಾದುದನ್ನು ಉಳಿದು ವಿಶ್ವವಿದ್ಯಾಲಯದ ಯಾವುದೇ ಕೆಲಸಕ್ಕಾಗಿ ಅವರಿಗೆ ಯಾವುದೇ ಸಂಭಾವನೆಯನ್ನು ಕೊಡಮಾ ಡತಕ್ಕದ್ದಲ್ಲ ಅಥವಾ ಅವರು ಸ್ವೀಕರಿಸತಕ್ಕದ್ದಲ್ಲ.

31. ನಿರ್ದೇಶಕರುಗಳು, ಡೀನ್‌ಗಳು, ಕುಲಸಚಿವರು, ಲೆಕ್ಕ ನಿಯಂತ್ರಕರು ಇತ್ಯಾದಿ.–

(1) **ಶಿಕ್ಷಣ ನಿರ್ದೇಶಕರು:**

(ಎ) ಇವರು ವಿಶ್ವವಿದ್ಯಾಲಯದ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳನ್ನು ಸಮನ್ವಯಗೊಳಿಸಲು ಜವಾಬ್ದಾರರಾಗಿರತಕ್ಕದ್ದು. ವಿಶ್ವವಿದ್ಯಾಲಯದಲ್ಲಿನ ಕಾರ್ಯನೀತಿ ವಿಷಯಗಳ ಮತ್ತು ನಿವಾಸಿ ಬೋಧನೆ ಬಗೆಗಿನ ಪದ್ಧತಿಗೆ ಮತ್ತು ಶೈಕ್ಷಣಿಕ ತಂತ್ರಜ್ಞಾನ ಮತ್ತು ಅಧ್ಯಾಪಕರ ತರಬೇತಿ ಕಾರ್ಯಕ್ರಮಗಳ ಬಗ್ಗೆ ಕಾರ್ಯನಿರ್ವಹಿಸುತ್ತಾರೆ.

ಇವರು ಪರೀಕ್ಷೆಯ ಮೇಲ್ವಿಚಾರಣೆಯನ್ನೂ ಮಾಡತಕ್ಕದ್ದು;

(ಬಿ) ವಿದ್ಯಾವಿಷಯಕ ಪರಿಷತ್ತು, ಪದವಿ ಕಾರ್ಯಕ್ರಮಗಳ ಅಧ್ಯಯನಗಳ ಮಂಡಳಿ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳ ಅಧ್ಯಯನ ಮಂಡಳಿಗಳ ಶಾಶ್ವತ ವಾದ ದಾಖಲೆಗಳನ್ನು ನಿರ್ವಹಿಸಲು ಮತ್ತು ವಿದ್ಯಾರ್ಥಿಗಳ ಶಿಸ್ತನ್ನು ಕಾಪಾಡಿಕೊಂಡು ಬರಲು ಜವಾಬ್ದಾರರಾಗಿರತಕ್ಕದ್ದು;

(ಸಿ) ವಿದ್ಯಾವಿಷಯಕ ಪರಿಷತ್ತಿನ ಸದಸ್ಯ ಕಾರ್ಯದರ್ಶಿಯಾಗಿ ಮತ್ತು ಪದವಿ ಹಾಗೂ ಸ್ನಾತಕೋತ್ತರ ಕಾರ್ಯಕ್ರಮಗಳ ಅಧ್ಯಯನ ಮಂಡಳಿಯ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸತಕ್ಕದ್ದು;

(ಡಿ) ವಿಶ್ವವಿದ್ಯಾಲಯದಲ್ಲಿ ಎಲ್ಲಾ ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳ ಸಮನ್ವಯ ನಡೆಸತಕ್ಕದ್ದು ಮತ್ತು ಪುನರಾವಲೋಕಿಸತಕ್ಕದ್ದು;

(ಇ) ಮಾಹಿತಿ ಕೇಂದ್ರ ಮತ್ತು ವಿಶ್ವವಿದ್ಯಾಲಯದ ಪ್ರಕಟಣೆ ವಿಭಾಗದ ಚಟುವಟಿಕೆಗಳ ಮೇಲ್ವಿಚಾರಣೆ ಮಾಡತಕ್ಕದ್ದು.

(2) **ಸಂಶೋಧನಾ ನಿರ್ದೇಶಕರು:** ಇವರು 51ನೇ ಪ್ರಕರಣದಲ್ಲಿ ಹೇಳಿದಂತೆ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ಕಾರ್ಯಕ್ರಮಗಳ ನಿರ್ದೇಶನ ಮತ್ತು ಸಮನ್ವಯ ಮತ್ತು ಸಂಶೋಧನೆ ಕೇಂದ್ರಗಳ ದಕ್ಷ ಕಾರ್ಯನಿರ್ವಹಣೆಗೆ ಜವಾಬ್ದಾರರಾಗಿರತಕ್ಕದ್ದು.

(3) **ವಿಸ್ತರಣಾ ನಿರ್ದೇಶಕರು:** ಇವರು 52ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ತೋಟಗಾರಿಕೆ ವಿಸ್ತರಣಾ ಶಿಕ್ಷಣದ ಕಾರ್ಯನಿರ್ವಹಣೆಗೆ ಜವಾಬ್ದಾರರಾಗಿರತಕ್ಕದ್ದು.

(4) **ಡೀನ್:** ಇವರು ಕಾಲೇಜಿನ ಮುಖ್ಯಸ್ಥನಾಗಿರತಕ್ಕದ್ದು ಮತ್ತು ಕಾಲೇಜಿನಲ್ಲಿ ಕಲಿಸುವ, ಸಂಶೋಧನೆಯ ಮತ್ತು ವಿಸ್ತರಣಾ ಶಿಕ್ಷಣದ ಚಟುವಟಿಕೆಗಳ ಆಡಳಿತಕ್ಕೆ ಮತ್ತು ಅನುಷ್ಠಾನಕ್ಕೆ ಜವಾಬ್ದಾರರಾಗಿರತಕ್ಕದ್ದು.

(5) ಸ್ನಾತಕೋತ್ತರ ಅಧ್ಯಯನಗಳ ಡೀನ್: ಇವರು ಸ್ನಾತಕೋತ್ತರ ಅಧ್ಯಯನಗಳು ಮತ್ತು ಡಿಪ್ಲೊಮೊಗಳನ್ನೊಳಗೊಂಡಂತೆ ಇತರ ಶೈಕ್ಷಣಿಕ ಕಾರ್ಯಕ್ರಮಗಳ ಆಡಳಿತ ಮತ್ತು ಅನುಷ್ಠಾನಕ್ಕೆ ಜವಾಬ್ದಾರರಾಗಿರತಕ್ಕದ್ದು.

(6) ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಡೀನ್:

(ಎ) ಇವರು ವಿದ್ಯಾರ್ಥಿಗಳ ಸಲಹೆ ನೀಡಿಕೆ ಮತ್ತು ಕೌನ್ಸಿಲಿಂಗ್ ಕಾರ್ಯಕ್ರಮವನ್ನು ಯೋಜಿಸುವುದು ಮತ್ತು ನಿರ್ದೇಶನ ಮಾಡುವುದು ಮತ್ತು ವಿಶ್ವವಿದ್ಯಾಲಯದ ಪದವೀಧರರಿಗೆ ಉದ್ಯೋಗ ದೊರಕಿಸಿಕೊಡಲು ಸಹಾಯ ಮಾಡುವುದಕ್ಕಾಗಿ ಭಾವೀ ಉದ್ಯೋಗದಾತರು ಮತ್ತು ಉದ್ಯೋಗ ಏಜೆನ್ಸಿಗಳ ಸಹಕಾರವನ್ನು ಪಡೆದುಕೊಳ್ಳುವುದು ಮತ್ತು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ಪ್ರೋತ್ಸಾಹಿಸತಕ್ಕದ್ದು;

(ಬಿ) ಕ್ರೀಡೆಗಳು, ಸಾಂಸ್ಕೃತಿಕ ಮತ್ತು ಇತರ ಮನರಂಜನಾ ಚಟುವಟಿಕೆಗಳು, ರಾಷ್ಟ್ರೀಯ ಯುವಸೇನಾದಳ (ಎನ್.ಸಿ.ಸಿ.), ಎನ್‌ಎಸ್‌ಎಸ್, ಮಾತುಗಾರಿಕೆ ಕೌಶಲ್ಯ ಸುಧಾರಣೆ ಮುಂತಾದ ವಿದ್ಯಾರ್ಥಿಗಳ ಪಠ್ಯೇತರ ಚಟುವಟಿಕೆಗಳು ಹಾಗೂ ಅದೇ ತರಹದ ಇತರ ಚಟುವಟಿಕೆಗಳನ್ನು ವಿಶ್ವವಿದ್ಯಾಲಯ ಮಟ್ಟದಲ್ಲಿ ಯೋಜಿಸುವುದು ಮತ್ತು ಏರ್ಪಡಿಸುವುದು.

(ಸಿ) ವಿದ್ಯಾರ್ಥಿ ನಿಲಯ ಹಾಗೂ ಕೆಫ್ತೇರಿಯಾಗಳ ಮೇಲ್ವಿಚಾರಣೆ ಮತ್ತು ನಿರ್ವಹಣೆಯಲ್ಲಿ ಕ್ರೀಡೆಗಳನ್ನು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವಲ್ಲಿ ಡೀನ್‌ಗಳಿಗೆ ಸಹಾಯ ಮಾಡತಕ್ಕದ್ದು;

(ಡಿ) ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ವೈದ್ಯಕೀಯ ಮತ್ತು ಆರೋಗ್ಯ ಸೇವೆಗಳು ಮತ್ತು ಇತರ ಕ್ಷೇಮಾಭಿವೃದ್ಧಿ ಕ್ರಮಗಳ ಮೇಲ್ವಿಚಾರಣೆ ಮಾಡತಕ್ಕದ್ದು ಮತ್ತು ನಿಯಂತ್ರಿಸತಕ್ಕದ್ದು.

(7) ಕುಲಸಚಿವರು:

(ಎ) ಇವರು ವಿಶ್ವವಿದ್ಯಾಲಯದ ಪ್ರೊಫೆಸರ್ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ತೋಟಗಾರಿಕೆ ವಿಜ್ಞಾನಗಳ ಕ್ಷೇತ್ರದ ಒಬ್ಬ ವಿದ್ವಾಂಸರಾಗಿರತಕ್ಕದ್ದು ಅಥವಾ ಸರ್ಕಾರದ ಉಪ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ರಾಜ್ಯ ಸರ್ಕಾರದ ಒಬ್ಬ ಅಧಿಕಾರಿಯಾಗಿರತಕ್ಕದ್ದು;

(ಬಿ) ವ್ಯವಸ್ಥಾಪನಾ ಮಂಡಳಿಯ, ವಿದ್ಯಾವಿಷಯಕ ಪರಿಷತ್ತಿನ ಪದನಿಮಿತ್ತ ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು ಮತ್ತು ಎಲ್ಲಾ ಪರಿಷತ್ತುಗಳಿಗೆ ಇವರು ಖಾಯಂ ಆಹ್ವಾನಿತರಾಗಿರತಕ್ಕದ್ದು.

(ಸಿ) ವಿಶ್ವವಿದ್ಯಾಲಯದ ದಾಖಲೆಗಳು ಮತ್ತು ಸಾಮಾನ್ಯ ಮೊಹರಿನ ಕ್ರಮಬದ್ಧ ಅಭಿರಕ್ಷೆಗೆ ಜವಾಬ್ದಾರರಾಗಿರತಕ್ಕದ್ದು;

(ಡಿ) ನಿಯಮಿಸಲಾದಂತೆ ವಿಶ್ವವಿದ್ಯಾಲಯದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಸಾಮಾನ್ಯ ಆಡಳಿತ ನಡೆಸಲು ಜವಾಬ್ದಾರರಾಗಿರತಕ್ಕದ್ದು.

(8) ವಿಶ್ವವಿದ್ಯಾಲಯದ ಗ್ರಂಥಪಾಲಕ.–

ವಿಶ್ವವಿದ್ಯಾಲಯದ ಗ್ರಂಥಾಲಯ ಮಾಹಿತಿ ಪದ್ಧತಿಯ ನಿರ್ವಹಣೆ ಮತ್ತು ವ್ಯವಸ್ಥಾಪನೆಗೆ ಮತ್ತು ವಿಶ್ವವಿದ್ಯಾಲಯದ ಎಲ್ಲಾ ಘಟಕಗಳ ಗ್ರಂಥಾಲಯ ಚಟುವಟಿಕೆಗಳಿಗೆ ಮಾರ್ಗದರ್ಶನ ನೀಡಲು ಮತ್ತು ಸಮನ್ವಯ ನಡೆಸುವುದಕ್ಕೆ ಇವರು ಜವಾಬ್ದಾರರಾಗಿರತಕ್ಕದ್ದು.

ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, 24ನೇ ಪ್ರಕರಣದ (4) ರಿಂದ (9)ನೇ ಖಂಡದಲ್ಲಿ ನಿರ್ದಿಷ್ಟಪಡಿಸಲಾದ ವಿಶ್ವವಿದ್ಯಾಲಯದ ಅಧಿಕಾರಿಗಳು, ಕುಲಪತಿಯವರು ಕಾಲಕಾಲಕ್ಕೆ ನಿಯಮಿಸಬಹುದಾದ ಅಥವಾ ಅವರಿಗೆ ವಹಿಸಿಕೊಡಬಹುದಾದಂತಹ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(9) ಲೆಕ್ಕ ನಿಯಂತ್ರಕರು.–

(ಎ) ಲೆಕ್ಕ ನಿಯಂತ್ರಕರು, ವಿಶ್ವವಿದ್ಯಾಲಯದ ಒಬ್ಬ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು. ಇವರು, ಕುಲಪತಿಯವರು ವ್ಯವಸ್ಥಾಪನಾ ಮಂಡಳಿಗೆ ಶಿಫಾರಸು ಮಾಡಿದ ಲೆಕ್ಕ ಪರಿಶೋಧನೆ, ಲೆಕ್ಕಪತ್ರ ನಿರ್ವಹಣೆ

ಮತ್ತು ಹಣಕಾಸು ಆಡಳಿತದಲ್ಲಿ ಅನುಭವವುಳ್ಳ ರಾಜ್ಯ ಲೆಕ್ಕಪತ್ರ ಇಲಾಖೆಯ ಜಂಟಿ ನಿಯಂತ್ರಕರ ಕೇಡರ್‌ನ ಅಧಿಕಾರಿಗಳು ಅಥವಾ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಉಪಮಹಾಲೇಖಾಪಾಲರ ದರ್ಜೆಯ ಒಬ್ಬ ಅಧಿಕಾರಿ – ಇವರುಗಳ ಹೆಸರುಗಳುಳ್ಳ ಮೂವರಿಗೆ ಕಡಿಮೆಯಿಲ್ಲದ ವ್ಯಕ್ತಿಗಳ ಒಂದು ಹೆಸರುಪಟ್ಟಿಯಿಂದ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿದ ಮತ್ತು ಕುಲಪತಿಯವರು ನೇಮಿಸಿದ ಅಧಿಕಾರಿಯಾಗಿರತಕ್ಕದ್ದು. ಹೆಸರು ಪಟ್ಟಿಯಲ್ಲಿರುವ ಯಾರನ್ನೂ ವ್ಯವಸ್ಥಾಪನಾ ಮಂಡಳಿಯು ಮೂವತ್ತು ದಿನಗಳೊಳಗೆ ಅನುಮೋದಿಸದಿದ್ದಲ್ಲಿ, ಕುಲಾಧಿಪತಿಯವರು ಕುಲಪತಿಯ ವರೊಡನೆ ಸಮಾಲೋಚಿಸಿ, ಲೆಕ್ಕ ನಿಯಂತ್ರಕರಾಗಲು ಸೂಕ್ತ ವ್ಯಕ್ತಿಯೆಂದು ತಾವು ಭಾವಿಸುವಂಥ ಇತರ ವ್ಯಕ್ತಿಯನ್ನು ಲೆಕ್ಕ ನಿಯಂತ್ರಕರನ್ನಾಗಿ ನೇಮಿಸಬಹುದು.

(ಬಿ) ಲೆಕ್ಕ ನಿಯಂತ್ರಕರ ನೇಮಕಾತಿಯ ಅವಧಿಯು ನಾಲ್ಕು ವರ್ಷಗಳಾಗಿರತಕ್ಕದ್ದು.

(ಸಿ) ಲೆಕ್ಕ ನಿಯಂತ್ರಕರು, ಹಣಕಾಸು ಸಮಿತಿಯ ನಿಯಂತ್ರಣ ಕ್ಕೊಳಪಟ್ಟು, ಶಾಸನಗಳು ಮತ್ತು ವಿನಿಯಮಗಳಲ್ಲಿ ನಿಯಮಿಸಬಹುದಾದ ಅಥವಾ ಕುಲಪತಿಯವರು ಅಥವಾ ಕುಲಸಚಿವರು ಕಾಲದಿಂದ ಕಾಲಕ್ಕೆ ಅಗತ್ಯ ಪಡಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂತಹ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು. ಅವರು ವಿದ್ಯಾವಿಷಯಕ ಪರಿಷತ್ತಿನ ಪದನಿಮಿತ್ತ ಸದಸ್ಯರಾಗಿರತಕ್ಕದ್ದು ಮತ್ತು ಹಣಕಾಸು ಸಮಿತಿಯ ಪದನಿಮಿತ್ತ ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು.

ಅಧ್ಯಾಯ – V

ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣ

32. ಶಿಕ್ಷಣ.– (1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ವಿಶ್ವವಿದ್ಯಾಲಯದಲ್ಲಿ ಶಿಕ್ಷಣವು ನಿಯಮಿಸಲಾದಂತೆ ತೋಟಗಾರಿಕೆ ಹಾಗೂ ಅದಕ್ಕೆ ಸಂಬಂಧಿಸಿದ ವಿಜ್ಞಾನಗಳ ವಿಷಯದಲ್ಲಿ ಪದವಿಯ, ಸ್ನಾತಕೋತ್ತರ ಪದವಿಯ ಮತ್ತು ಡಾಕ್ಟರಲ್ ಡಿಗ್ರಿ ಕಾರ್ಯಕ್ರಮಗಳು ಮತ್ತು ಅಲ್ಪಾವಧಿ ಡಿಪ್ಲೊಮಾ/ಸರ್ಟಿಫಿಕೇಟ್ ಕೋರ್ಸುಗಳನ್ನು ಒಳಗೊಂಡಿರತಕ್ಕದ್ದು.

H-252-81

(2) ಈ ಶೈಕ್ಷಣಿಕ ಕಾರ್ಯಕ್ರಮಗಳು ರಾಜ್ಯ ಮತ್ತು ರಾಷ್ಟ್ರೀಯ ಕಾರ್ಯನೀತಿಗಳಿಗೆ ಅನುಗುಣವಾಗಿರತಕ್ಕದ್ದು.

(3) ವಿಶ್ವವಿದ್ಯಾಲಯವು ಇ-ಕಲಿಕೆ, ವಿತರಿತ/ದೂರ ಶಿಕ್ಷಣ, ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಆಧಾರಿತ ಜ್ಞಾನವನ್ನು ಹಂಚಿಕೊಳ್ಳುವುದು ಈ ಸಾಧನಗಳನ್ನು ಬಳಸಿಕೊಳ್ಳತಕ್ಕದ್ದು.

(4) ಸಕ್ಷಮ ಮತ್ತು ಕುಶಲ ಪದವೀಧರರನ್ನು ಮತ್ತು ಸ್ನಾತಕೋತ್ತರ ಪದವೀಧರರನ್ನು ತಯಾರಿಸುವ ಗುರಿಯನ್ನು ತೋಟಗಾರಿಕೆ ಶಿಕ್ಷಣ ಕಾರ್ಯಕ್ರಮಗಳು ಹೊಂದಿರತಕ್ಕದ್ದು.

33. **ಸಂಶೋಧನೆ.–** (1) ಈ ಅಧಿನಿಯಮ ಮತ್ತು ಶಾಸನಗಳ ಉಪಬಂಧಗಳಿಗೊಳಪಟ್ಟು, ವಿಶ್ವವಿದ್ಯಾಲಯವು ತೋಟಗಾರಿಕೆ ಮತ್ತು ಸಂಬಂಧಿತ ವಿಜ್ಞಾನಗಳಲ್ಲಿ ಕಾರ್ಯತಂತ್ರದ, ಮೂಲಭೂತ ಮತ್ತು ಆನ್ವಯಿಕ ಸಂಶೋಧನೆಗಳನ್ನು ಮಾಡತಕ್ಕದ್ದು.

(2) ವಿಶ್ವವಿದ್ಯಾಲಯವು ತನ್ನ ಸಂಶೋಧನಾ ಸಂಸ್ಥೆಯ ಮೂಲಕ ತನ್ನ ಅಧಿಕಾರ ಕ್ಷೇತ್ರ ವ್ಯಾಪ್ತಿಯಲ್ಲಿ ನಡೆಯುವ ತೋಟಗಾರಿಕೆ ಮತ್ತಿತರ ಸಂಬಂಧಪಟ್ಟ ಶಾಖೆಗಳಲ್ಲಿನ ಸಂಶೋಧನಾ ಚಟುವಟಿಕೆಗಳ ಮೇಲೆ ನಿಯಂತ್ರಣವನ್ನು ಹೊಂದಿರುವ ಪ್ರಧಾನ ಏಜೆನ್ಸಿಯಾಗಿರತಕ್ಕದ್ದು.

(3) ವಿಶ್ವವಿದ್ಯಾಲಯವು ತನ್ನ ಅಧಿಕಾರ ಕ್ಷೇತ್ರ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ಸಂಶೋಧನೆಯೂ ಸೇರಿದಂತೆ ಸಂಶೋಧನೆಗಳನ್ನು ನಡೆಸುವುದಕ್ಕೆ ಬೇರೆ ಬೇರೆ ಕೃಷಿ-ವಾತಾವರಣ ವಲಯಗಳಲ್ಲಿ ಸರ್ಕಾರದ ಸಹಮತಿಯೊಂದಿಗೆ ಪ್ರಾದೇಶಿಕ ವಲಯ ಸಂಶೋಧನಾ ಕೇಂದ್ರಗಳು ಮತ್ತು ಉಪಕೇಂದ್ರಗಳನ್ನು ಸ್ಥಾಪಿಸಬಹುದು.

34. **ವಿಸ್ತರಣಾ ಶಿಕ್ಷಣ.–** (1) ತಾಂತ್ರಿಕ ಮೌಲ್ಯಮಾಪನ ಮತ್ತು ಪರಿಷ್ಕರಣೆಯಾಗುವಂತೆ ನೋಡಿಕೊಳ್ಳಲು ಮತ್ತು ಸಂಶೋಧನೆಗಳಲ್ಲಿ ಕಂಡುಬಂದ ವಿಚಾರಗಳನ್ನು ಆಧರಿಸಿದ ತಂತ್ರಜ್ಞಾನವನ್ನು ತ್ವರಿತ ತೋಟಗಾರಿಕೆ ಬೆಳವಣಿಗೆಗಾಗಿ ರೈತರು ಮತ್ತು ಇತರರು ಅಳವಡಿಸಿಕೊಳ್ಳುವುದಕ್ಕೆ ಅವಕಾಶಕಲ್ಪಿಸಲು ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳನ್ನು ವಿಶ್ವ ವಿದ್ಯಾಲಯದಲ್ಲಿ ಈ ಅಧಿನಿಯಮ ಮತ್ತು ಶಾಸನಗಳಿಗೊಳಪಟ್ಟು ಸ್ಥಾಪಿಸತಕ್ಕದ್ದು. ಈ ವಿಭಾಗವು ವಿವಿಧ ಹಿತಾಸಕ್ತಿದಾರರ ಅನುಕೂಲಕ್ಕಾಗಿ ಪ್ರಾತ್ಯಕ್ಷಿಕೆಗಳನ್ನು ಮತ್ತು ತರಬೇತಿಯನ್ನು ನಡೆಸತಕ್ಕದ್ದು. ಈ ವಿಸ್ತರಣಾ ಕಾರ್ಯವನ್ನು

ವಿಶ್ವವಿದ್ಯಾಲಯದ ವಿವಿಧ ಘಟಕಗಳು ಮತ್ತು ಕೇಂದ್ರ ಹಾಗೂ ರಾಜ್ಯದ ಇತರ ಸಮುಚಿತ ಏಜೆಂಟ್‌ಗಳೊಂದಿಗೆ ಸಮನ್ವಯದಿಂದ ಮಾಡತಕ್ಕದ್ದು.

(2) ರಾಜ್ಯದಲ್ಲಿ ವಿಸ್ತರಣಾ ತೋಟಗಾರಿಕೆ ಮಾದರಿಗಳನ್ನು ಅಭಿವೃದ್ಧಿಪಡಿಸುವುದಕ್ಕೆ ವಿಶ್ವವಿದ್ಯಾಲಯವು ಜವಾಬ್ದಾರಿಯಾಗಿರತಕ್ಕದ್ದು.

35. ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣಗಳ ಸಮ್ಮಿಲನ.- (1) ವಿಶ್ವವಿದ್ಯಾಲಯದ ಯುಕ್ತ ಅಧಿಕಾರಿಗಳೊಂದಿಗೆ ಸಮಾಲೋಚಿಸಿ, ವಿಶ್ವವಿದ್ಯಾಲಯದ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣದ ಚಟುವಟಿಕೆಗಳು ಸಂಪೂರ್ಣವಾಗಿ ಬೆರೆತು ಕೆಲಸಮಾಡುವುದಕ್ಕೆ ಅವಶ್ಯವಾಗಬಹುದಾದ ಕ್ರಮಗಳನ್ನು ತೆಗೆದುಕೊಳ್ಳಲು ಕುಲಪತಿಯವರು ಜವಾಬ್ದಾರರಾಗಿರತಕ್ಕದ್ದು.

(2) ಬೋಧಕರ ಕೇಡರ್‌ನಲ್ಲಿರತಕ್ಕ ಪ್ರತಿಯೊಬ್ಬ ಫ್ಯಾಕಲ್ಟಿ ಸದಸ್ಯರು ಬೋಧನೆಯ ಕಾರ್ಯದ ಜೊತೆಗೆ ತಮ್ಮ ಶೇಕಡ ಮೂವತ್ತರಷ್ಟು ಸಮಯವನ್ನು ಸಂಶೋಧನೆ ಮತ್ತು ವಿಸ್ತರಣೆ ಶಿಕ್ಷಣ ಕೈಗೊಳ್ಳಲು ಮೀಸಲಿಡತಕ್ಕದ್ದು. ಹಾಗೆಯೇ ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣದಲ್ಲಿರತಕ್ಕ ಫ್ಯಾಕಲ್ಟಿ ಸದಸ್ಯರು ಸಂದರ್ಭಾನುಸಾರ ಬೋಧನೆ ಅಥವಾ ವಿಸ್ತರಣೆ ಅಥವಾ ಸಂಶೋಧನೆಯ ಕೆಲಸಕ್ಕೆ ತಮ್ಮ ಶೇಕಡಾ ಮೂವತ್ತರಷ್ಟು ಸಮಯವನ್ನು ವಿನಿಯೋಗಿಸತಕ್ಕದ್ದು.

(3) ಕಾಲೇಜಿನಲ್ಲಿರುವ ಎಲ್ಲಾ ಬೋಧನೆ, ಸಂಶೋಧನೆಯ ಮತ್ತು ವಿಸ್ತರಣಾ ಶಿಕ್ಷಣದ ಸಿಬ್ಬಂದಿಯು ಸಂದರ್ಭಾನುಸಾರ ಕಾಲೇಜಿನ ಡೀನ್‌ರವರ ಆಡಳಿತ ನಿಯಂತ್ರಣ ಅಥವಾ ನಿರ್ದೇಶಕರು (ಸಂಶೋಧನೆ) ಮತ್ತು ನಿರ್ದೇಶಕರು (ವಿಸ್ತರಣಾ ಶಿಕ್ಷಣ) ಇವರ ತಾಂತ್ರಿಕ ನಿಯಂತ್ರಣದಲ್ಲಿರತಕ್ಕದ್ದು.

(4) ವಿಶ್ವವಿದ್ಯಾಲಯವು ರಾಜ್ಯದ ಪ್ರಾದೇಶಿಕ ಅವಶ್ಯಕತೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ತನ್ನ ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸತಕ್ಕದ್ದು ಮತ್ತು ರಾಜ್ಯ ಸರ್ಕಾರಕ್ಕೆ ಹಾಗೂ ಇತರ ಹಿತಾಸಕ್ತಿದಾರರಿಗೆ ಸೂಕ್ತವಾದ ತಾಂತ್ರಿಕ ಬೆಂಬಲ ಒದಗಿಸತಕ್ಕದ್ದು.

ಅಧ್ಯಾಯ – VI

ನಿಧಿಗಳು ಮತ್ತು ಲೆಕ್ಕಪತ್ರಗಳು

36. ವಿಶ್ವವಿದ್ಯಾಲಯದ ನಿಧಿಗಳು.– (1) ವಿಶ್ವವಿದ್ಯಾಲಯವು ಒಂದು ಸಾಮಾನ್ಯ ನಿಧಿಯನ್ನು ಹೊಂದಿರತಕ್ಕದ್ದು ಮತ್ತು ಅದಕ್ಕೆ ಈ ಮುಂದಿನವುಗಳು ಜಮೆಯಾಗತಕ್ಕದ್ದು,-

(ಎ) ಶುಲ್ಕಗಳಿಂದ, ದತ್ತಿಗಳಿಂದ ಮತ್ತು ಯಾವುದಾದರೂ ದಾನಗಳು ಇದ್ದರೆ ಅವುಗಳಿಂದ ಬರುವ ಆದಾಯ, ವಿದ್ಯಾರ್ಥಿ ನಿಲಯ, ಪ್ರಯೋಗ ಕೇಂದ್ರಗಳು ಹಾಗೂ ಫಾರ್ಮುಗಳೂ ಸೇರಿದಂತೆ ವಿಶ್ವವಿದ್ಯಾಲಯದ ಸ್ವತ್ತುಗಳಿಂದ ಬರುವ ಆದಾಯ;

(ಬಿ) ಈ ಅಧಿನಿಯಮದ ಉಪಬಂಧಗಳಿಗೆ ಸುಸಂಗತವಾಗಿರುವಂತಹ ಷರತ್ತುಗಳಿಗೆ ಒಳಪಟ್ಟು ಸರ್ಕಾರವು ನೀಡಿದ ವಂತಿಕೆಗಳು ಅಥವಾ ಅನುದಾನಗಳು;

(ಸಿ) ಇತರ ವಂತಿಕೆಗಳು, ಅನುದಾನಗಳು, ದೇಣಿಗೆಗಳು, ಲಾಭಗಳು, ಸಾಲಗಳು ಮತ್ತು ಇತರ ಸ್ವೀಕೃತಿಗಳು.

(2) ವಿಶ್ವವಿದ್ಯಾಲಯವು ಪ್ರತಿಷ್ಠಾನ ನಿಧಿ ಎಂಬ ಹೆಸರಿನ ನಿಧಿಯನ್ನು ಹೊಂದಿರತಕ್ಕದ್ದು. ಇದಕ್ಕೆ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಅಥವಾ ಯಾವುದೇ ಅನುಮೋದಿತ ಏಜೆನ್ಸಿಯು ನೀಡುವ ವಂತಿಕೆಗಳು ಮತ್ತು ಅನುದಾನಗಳು ಹಾಗೂ ಮಂಡಳಿಯು ನಿರ್ದಿಷ್ಟಪಡಿಸಬಹುದಾದಂತಹ ಇತರ ಮೊತ್ತಗಳು ಜಮೆಯಾಗತಕ್ಕದ್ದು. ಮಂಡಳಿಯು ಅವಶ್ಯವಿದ್ದಾಗಲೆಲ್ಲ ಅಂತಹ ಮೊಬಲಗನ್ನು ನಿರ್ದಿಷ್ಟಪಡಿಸಬಹುದಾದಂತೆ ಪ್ರತಿಷ್ಠಾನ ನಿಧಿಯಿಂದ ಸಾಮಾನ್ಯ ನಿಧಿಗೆ ನಿಯಮಿಸಬಹುದಾದ ವಿಧಾನದಲ್ಲಿ ವರ್ಗಾಯಿಸಬಹುದು.

(3) ವಿಶ್ವವಿದ್ಯಾಲಯವು, ಸರ್ಕಾರವು ನೀಡಿದ ಯಾವುದೇ ಅನುದಾನಗಳ ಸಂಬಂಧದಲ್ಲಿ ಲೆಕ್ಕಪತ್ರ ತ:ಖ್ತೆಗಳನ್ನು, ವರದಿಗಳನ್ನು ಮತ್ತು ಇತರ ವಿವರಗಳನ್ನು ಸರ್ಕಾರಕ್ಕೆ ನೀಡತಕ್ಕದ್ದು ಹಾಗೂ ಸರ್ಕಾರವು ನಿರ್ದೇಶಿಸಬಹುದಾದಂತಹ ಅವಧಿಯೊಳಗೆ ಮತ್ತು ವಿಧಾನದಲ್ಲಿ ಯಾವುದೇ ಅನುದಾನದ ಬಳಕೆಗೆ ಸಂಬಂಧಿಸಿದಂತೆ ತಃಖ್ತೆಗಳು, ಲೆಕ್ಕಪತ್ರಗಳು, ವರದಿಗಳು ಹಾಗೂ ಇತರ ವಿವರಗಳನ್ನು ಸಲ್ಲಿಸತಕ್ಕದ್ದು.

(4) ವಿಶ್ವವಿದ್ಯಾಲಯವು ಸರ್ಕಾರದಿಂದ ಅಥವಾ ಯಾವುದೇ ಇತರ ರಾಜ್ಯ ಸರ್ಕಾರಗಳಿಂದ ಅಥವಾ ಕೇಂದ್ರ ಸರ್ಕಾರದಿಂದ ಅಥವಾ ಶಾಸನಾತ್ಮಕ ನಿಕಾಯಗಳಿಂದ ಅಥವಾ ದತ್ತಿಗಳಿಂದ ಅಥವಾ ದಾನಗಳಿಂದ, ವಿಶ್ವವಿದ್ಯಾಲಯವು ಮತ್ತು ದಾನಿ ಅಥವಾ ಅನುದಾನದಾತರ ನಡುವೆ ಮಾಡಿಕೊಂಡ ಒಪ್ಪಂದಗಳಲ್ಲಿಯ ಷರತ್ತುಗಳಿಗೆ ಒಳಪಟ್ಟು ತನ್ನ ಧ್ಯೇಯೋದ್ದೇಶಗಳ ಸಾಧನೆಗಾಗಿ ಅನುದಾನ ಸ್ವೀಕರಿಸಲು ಸಕ್ಷಮವಾಗಿರತಕ್ಕದ್ದು.

37. ನಿಧಿಯ ಆಡಳಿತ.– ವಿಶ್ವವಿದ್ಯಾಲಯದ ಸಾಮಾನ್ಯ ನಿಧಿ, ಪ್ರತಿಷ್ಠಾನ ನಿಧಿ ಮತ್ತು ಇತರ ನಿಧಿಗಳನ್ನು ಶಾಸನಗಳಲ್ಲಿ ಹೇಳಿದ ಉಪಬಂಧಗಳಿಗೆ ಅನುಗುಣವಾಗಿ ನಿರ್ವಹಿಸತಕ್ಕದ್ದು.

38. ಲೆಕ್ಕಪರಿಶೋಧನೆಗೆ ಆದೇಶಿಸಲು ಸರ್ಕಾರದ ಅಧಿಕಾರ.– ಸರ್ಕಾರವು, ಯಾವುದೇ ಸಮಯದಲ್ಲಿ ವಿಶ್ವವಿದ್ಯಾಲಯದ ಲೆಕ್ಕಪತ್ರಗಳ ಪರಿಶೋಧನೆಯನ್ನು ತಾನು ನಿರ್ದೇಶಿಸಬಹುದಾದಂತಹ ಲೆಕ್ಕಪರಿಶೋಧಕರಿಂದ ಮಾಡಿಸಬೇಕೆಂದು ಆದೇಶಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

39. ಹಣಕಾಸಿನ ಅಂದಾಜುಗಳು.– (1) ಕುಲಪತಿಯು ಮುಂಬರುವ ವರ್ಷಕ್ಕಾಗಿ ವಿಶ್ವವಿದ್ಯಾಲಯದ ಹಣಕಾಸಿನ ಅಂದಾಜುಗಳನ್ನು ತಯಾರಿಸುವಂತೆ ಮಾಡತಕ್ಕದ್ದು ಮತ್ತು ಅನುಮೋದನೆಗಾಗಿ ಅದನ್ನು ಮಂಡಳಿಯ ಮುಂದೆ ಮಂಡಿಸತಕ್ಕದ್ದು.

(2) ಮಂಡಳಿಯು, ತಾನು ಸೂಕ್ತವೆಂದು ಭಾವಿಸಬಹುದಾದಂತಹ ಮಾರ್ಪಾಡುಗಳಿಗೆ ಒಳಪಟ್ಟು ಹಣಕಾಸಿನ ಅಂದಾಜುಗಳನ್ನು ಅನುಮೋದಿಸಬಹುದು ಮತ್ತು ಮಂಡಳಿಯು ಅನುಮೋದಿಸಿದ ಹಣಕಾಸಿನ ಅಂದಾಜಿಗೆ ಅನುಸಾರವಾಗಿ ಅಲ್ಲದೆ ಯಾವ ವೆಚ್ಚವನ್ನು ಮಾಡತಕ್ಕದ್ದಲ್ಲ.

40. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.– (1) ಲೆಕ್ಕಪತ್ರ ನಿರ್ವಹಣೆಯು ಜೋಡಿ ದಾಖಲಾತಿ ಪದ್ಧತಿಯನ್ನು ಆಧರಿಸಿದ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳನ್ನು ಕುಲಪತಿಯವರ ನಿರ್ದೇಶನದ ಮೇರೆಗೆ ಲೆಕ್ಕ ನಿಯಂತ್ರಕರು ತಯಾರಿಸತಕ್ಕದ್ದು ಮತ್ತು ವಿಶ್ವವಿದ್ಯಾಲಯಕ್ಕೆ ಯಾವುದೇ ಮೂಲಗಳಿಂದ ಪ್ರಾಪ್ತವಾಗುವ ಅಥವಾ ಅದು ಸ್ವೀಕರಿಸುವ ಎಲ್ಲಾ ಮೊಬಲಗುಗಳನ್ನು ಹಾಗೂ ವಿಶ್ವವಿದ್ಯಾಲಯವು ವಿತರಣೆ ಮಾಡುವ ಅಥವಾ

ಸಂದಾಯ ಮಾಡುವ ಎಲ್ಲಾ ಮೊಬಲಗುಗಳನ್ನು ಈ ಲೆಕ್ಕಪತ್ರಗಳಲ್ಲಿ ದಾಖಲಿಸತಕ್ಕದ್ದು.

(2) ವಾರ್ಷಿಕ ಲೆಕ್ಕಪತ್ರ ಮತ್ತು ಜಮಾ ಖರ್ಚು ಪಟ್ಟಿಯನ್ನು ಕುಲಪತಿಯವರು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು, ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ತಾನು ನೇಮಿಸಬಹುದಾದಂತಹ ವ್ಯಕ್ತಿಗಳು ಲೆಕ್ಕ ಪರಿಶೋಧನೆಯನ್ನು ನಡೆಸುವಂತೆ ಮಾಡತಕ್ಕದ್ದು. ಲೆಕ್ಕಪತ್ರಗಳನ್ನು ಪರಿಶೋಧಿಸಿದ ಮೇಲೆ ಅವುಗಳನ್ನು ಮುದ್ರಿಸತಕ್ಕದ್ದು ಹಾಗೂ ಕುಲಪತಿಯವರು ಅವುಗಳ ಪ್ರತಿಗಳನ್ನು ಲೆಕ್ಕಪರಿಶೋಧನೆಯ ವರದಿಯೊಡನೆ ಮಂಡಲಿಗೆ ಮತ್ತು ಕುಲಾಧಿಪತಿಯವರಿಗೆ ಮಂಡಿಸತಕ್ಕದ್ದು.

(3) ಮಂಡಳಿಯು, ಲೆಕ್ಕಪತ್ರಗಳ ಪ್ರತಿಯನ್ನು ಹಾಗೂ ವರದಿಯನ್ನು ಲೆಕ್ಕಪರಿಶೋಧನೆಯ ವರದಿಯ ಮೇಲೆ ವಿಶ್ವವಿದ್ಯಾಲಯವು ಕೈಗೊಂಡ ಕ್ರಮದ ಬಗ್ಗೆ ಒಂದು ಹೇಳಿಕೆಯೊಡನೆ ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು, ಹಾಗೂ ರಾಜ್ಯ ಸರ್ಕಾರವು ಅವನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

(4) ವಿಶ್ವವಿದ್ಯಾಲಯವು ಯೋಜನೆಗಳ ಸಂಬಂಧದಲ್ಲಿ ಮತ್ತು ಭಾರತದ ಕೃಷಿ ಸಂಶೋಧನಾ ಪರಿಷತ್ತು, ಭಾರತ ಸರ್ಕಾರ ಮತ್ತು ಇತರ ಯೋಜನೆಗಳು/ಚಾರ್ಟೆಡ್ ಆಕೌಂಟೆಟ್ ಪ್ರಮಾಣ ಪತ್ರ ನೀಡಿದ ಸಂಸ್ಥೆಗಳು ಪ್ರಾಯೋಜಿಸಿದ ಕೃಷಿ ವಿಜ್ಞಾನ ಕೇಂದ್ರಗಳು/ತೋಟಗಾರಿಕೆ ವಿಜ್ಞಾನ ಕೇಂದ್ರಗಳ ಸಂಬಂಧದಲ್ಲಿ ಲೆಕ್ಕಪರಿಶೋಧನೆ ಬಳಕೆ ಪ್ರಮಾಣ ಪತ್ರಗಳನ್ನು ನೀಡುವಂತೆ ಮಾಡತಕ್ಕದ್ದು.

41. ಭವಿಷ್ಯ ನಿಧಿ, ನಿವೃತ್ತಿ ವೇತನ ಮತ್ತು ವಿಮೆ.– (1) ಸರ್ಕಾರದ ಪೂರ್ವಾನುಮೋದನೆಯೊಡನೆ ವಿಶ್ವವಿದ್ಯಾಲಯವು ತನ್ನ ಅಧಿಕಾರಿಗಳು, ಪ್ರಾಧ್ಯಾಪಕರು, ಲಿಪಿಕ ಸಿಬ್ಬಂದಿ ಮತ್ತು ಇತರ ನೌಕರರ ಪ್ರಯೋಜನಕ್ಕಾಗಿ ನಿಯಮಿಸಬಹುದಾದಂತಹ ವಿಧಾನಗಳು ಮತ್ತು ಷರತ್ತುಗಳಿಗೆ ಒಳಪಟ್ಟು ತಾನು ಸೂಕ್ತವೆಂದು ಭಾವಿಸಬಹುದಾದಂತಹ ನಿವೃತ್ತಿ ವೇತನ, ಉಪದಾನ, ವಿಮೆ ಅಥವಾ ಭವಿಷ್ಯ ನಿಧಿ, ವಂತಿಗೆ, ನಿವೃತ್ತಿ ವೇತನ ನಿಧಿ ಮತ್ತು ಇನ್ನಾವುದೇ ಅಂತಹ ನಿಧಿಗಳನ್ನು ರಚಿಸತಕ್ಕದ್ದು.

(2) ಸರ್ಕಾರವು, ಭವಿಷ್ಯ ನಿಧಿ ಅಧಿನಿಯಮ 1925 (1925ರ ಕೇಂದ್ರ ಅಧಿನಿಯಮ 19) ವಿಶ್ವವಿದ್ಯಾಲಯವು ಹಾಗೆ ರಚಿಸಿದ ಭವಿಷ್ಯ ನಿಧಿ ಅಥವಾ ನಿವೃತ್ತಿ ವೇತನ ನಿಧಿಗಳಿಗೆ ಅವು ಸರ್ಕಾರದ ಭವಿಷ್ಯ ನಿಧಿಗಳು ಆಗಿದ್ದರೆ ಹೇಗೋ ಹಾಗೆ ಅನ್ವಯಿಸತಕ್ಕದ್ದೆಂದು ಘೋಷಿಸಬಹುದು:

ಪರಂತು, ವಿಶ್ವವಿದ್ಯಾಲಯವು ಹಣಕಾಸು ಸಮಿತಿ ಮತ್ತು ಮಂಡಳಿಯೊಡನೆ ಸಮಾಲೋಚಿಸಿ ತಾನು ನಿರ್ಧರಿಸಬಹುದಾದಂತಹ ವಿಧಾನದಲ್ಲಿ ಭವಿಷ್ಯ ನಿಧಿಯ ಮೊಬಲಗನ್ನು ತೊಡಗಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

42. ಸರ್ಕಾರದ ಅನುದಾನಗಳು.– (1) ರಾಜ್ಯ ಸರ್ಕಾರವು, ಪ್ರತಿ ವರ್ಷವೂ ವಿಶ್ವವಿದ್ಯಾಲಯಕ್ಕೆ ಲುಪ್ತವಾಗದಂತಹ ಇಡಿಗಂಟು ಅನುದಾನ ವನ್ನು ನೀಡತಕ್ಕದ್ದು, ಎಂದರೆ :-

(i) ವಿಶ್ವವಿದ್ಯಾಲಯದ ಸೂಕ್ತ ಕಾರ್ಯನಿರ್ವಹಣೆಗಾಗಿ ವಿಶ್ವವಿದ್ಯಾಲಯದ ಸಿಬ್ಬಂದಿಯ ವೇತನ, ಭತ್ಯೆಗಳು, ಸಾದಿಲ್ವಾರು, ಇತರ ಸರಬರಾಜು ಮತ್ತು ಸೇವೆಗಳ ಮೇಲಿನ ಅಂದಾಜು ವೆಚ್ಚಕ್ಕಿಂತ ಕಡಿಮೆಯಲ್ಲದ ಒಂದು ಅನುದಾನ;

(ii) ರಾಜ್ಯ ಸರ್ಕಾರವು ವಿಶ್ವವಿದ್ಯಾಲಯದ ಸೂಕ್ತ ಕಾರ್ಯನಿರ್ವಹಣೆಗಾಗಿ ಅವಶ್ಯವೆಂದು ಭಾವಿಸಬಹುದಾದಂತಹ ಹೆಚ್ಚುವರಿ ಬಾಬುಗಳ ಆವರ್ತಕ ಮತ್ತು ಅನಾವರ್ತಕ ವೆಚ್ಚಗಳನ್ನು ಭರಿಸುವುದಕ್ಕೆ ಒಂದು ಅನುದಾನ.

(2) ರಾಜ್ಯ ಸರ್ಕಾರವು, ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ ಮತ್ತು ವಿಶ್ವವಿದ್ಯಾಲಯವು ಜಾರಿಗೊಳಿಸಲೆಂದು ವರ್ಗಾಯಿಸಿದ ಯೋಜನೆಗಳ ಸಂಬಂಧದಲ್ಲಿ ವಿಶ್ವವಿದ್ಯಾಲಯಕ್ಕೆ ಕೇಂದ್ರ ಸರ್ಕಾರ ಮತ್ತು ಅಂತಹ ಯೋಜನೆಗಳನ್ನು ಪ್ರಾಯೋಜಿಸಿದ ಇತರ ಏಜೆನ್ಸಿಗಳಿಂದ ನಿರೀಕ್ಷಿತ ಸಹಾಯವನ್ನು ಕಳೆದ ತರುವಾಯ ವಾರ್ಷಿಕ ಯೋಜನೆಯಲ್ಲಿ ತೋರಿಸಿದ ನಿವ್ವಳ ವೆಚ್ಚದ ಏರ್ಪಾಡಿಗೆ ಸಮನಾದ ಮೊತ್ತದ ಲುಪ್ತವಾಗದಂತಹ ಇಡಿಗಂಟು ಅನುದಾನವನ್ನು ಸಹ ನೀಡತಕ್ಕದ್ದು.

(3) ರಾಜ್ಯ ಸರ್ಕಾರವು ಯಾವುದೇ ಅನುದಾನವನ್ನು ನೀಡುವ ಮೊದಲು ಅದು ಅಗತ್ಯಪಡಿಸಬಹುದಾದಂತಹ ಅಂಕಿಅಂಶಗಳು, ಲೆಕ್ಕಪತ್ರಗಳು, ವರದಿಗಳು ಹಾಗೂ ಇತರ ವಿವರಗಳನ್ನು ರಾಜ್ಯ ಸರ್ಕಾರಕ್ಕೆ ವಿಶ್ವವಿದ್ಯಾಲಯವು ಸಲ್ಲಿಸತಕ್ಕದ್ದು ಮತ್ತು ವಿಶ್ವವಿದ್ಯಾಲಯವು ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂತಹ ಅವಧಿಯೊಳಗೆ ಹಾಗೂ ಅಂತಹ ವಿಧಾನದಲ್ಲಿ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಯಾವುದೇ ಅನುದಾನವನ್ನು ಬಳಸಿಕೊಂಡಿರುವುದಕ್ಕೆ ಸಂಬಂಧಪಟ್ಟ ಅಂಕಿಅಂಶಗಳು, ಲೆಕ್ಕಪತ್ರಗಳು, ವರದಿಗಳು ಹಾಗೂ ಇತರ ವಿವರಗಳನ್ನು ಒದಗಿಸತಕ್ಕದ್ದು.

(4) ವಿಶ್ವವಿದ್ಯಾಲಯವು ಸರ್ಕಾರದಿಂದ ಅಥವಾ ಯಾವುದೇ ಇತರ ರಾಜ್ಯ ಸರ್ಕಾರಗಳಿಂದ ಅಥವಾ ಕೇಂದ್ರ ಸರ್ಕಾರದಿಂದ ಅಥವಾ ಶಾಸನಾತ್ಮಕ ನಿಕಾಯಗಳಿಂದ ಅಥವಾ ದತ್ತಿಗಳಿಂದ ಅಥವಾ ದಾನಗಳಿಂದ, ವಿಶ್ವವಿದ್ಯಾಲಯವು ಮತ್ತು ದಾನಿ ಅಥವಾ ಅನುದಾನದಾತರ ನಡುವೆ ಮಾಡಿಕೊಂಡ ಒಪ್ಪಂದಗಳಲ್ಲಿಯ ಷರತ್ತುಗಳಿಗೆ ಒಳಪಟ್ಟು ತನ್ನ ಧ್ಯೇಯೋದ್ದೇಶಗಳ ಸಾಧನೆಗಾಗಿ ಅನುದಾನ ಸ್ವೀಕರಿಸಲು ಸಕ್ಷಮವಾಗಿರತಕ್ಕದ್ದು.

43. ಹಣಕಾಸು ಸಮಿತಿ.– (1) ಮಂಡಳಿಯು ಈ ಮುಂದಿನ ಸದಸ್ಯರುಗಳನ್ನೊಳಗೊಂಡ ಒಂದು ಹಣಕಾಸು ಸಮಿತಿಯನ್ನು ರಚಿಸತಕ್ಕದ್ದು ಎಂದರೆ :–

(i) ಕುಲಪತಿಯವರು – ಅಧ್ಯಕ್ಷರಾಗಿರತಕ್ಕದ್ದು;

(ii) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಹಣಕಾಸು ಇಲಾಖೆ ಅಥವಾ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಅವರ ನಾಮ ನಿರ್ದೇಶಿತರು;

(iii) ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ ಅಥವಾ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಅವರ ನಾಮನಿರ್ದೇಶಿತರು;

(iv) ಕುಲಪತಿಯವರು ನಾಮನಿರ್ದೇಶಿಸಿದ ವ್ಯವಸ್ಥಾಪನಾ ಮಂಡಳಿಯ ಒಬ್ಬ ಸದಸ್ಯರು;

(v) ಕುಲಸಚಿವರು;

(vi) ಲೆಕ್ಕ ನಿಯಂತ್ರಕರು – ಸದಸ್ಯ ಕಾರ್ಯದರ್ಶಿ.

(2) ಹಣಕಾಸು ಸಮಿತಿಯು ಈ ಮುಂದಿನ ಪ್ರಕಾರ್ಯಗಳನ್ನು ಹೊಂದಿರತಕ್ಕದ್ದು, ಎಂದರೆ:–

(i) ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳು ಮತ್ತು ಆಯವ್ಯಯ ಅಂದಾಜುಗಳನ್ನು ಪರೀಕ್ಷಿಸುವುದು ಮತ್ತು ಅದರ ಮೇಲೆ ಮಂಡಳಿಗೆ ಸಲಹೆಗಳನ್ನು ನೀಡುವುದು;

(ii) ವಿಶ್ವವಿದ್ಯಾಲಯದ ಹಣಕಾಸಿನ ಪರಿಸ್ಥಿತಿಯನ್ನು ಕಾಲಕಾಲಕ್ಕೆ ಪರಿವೀಕ್ಷಿಸುವುದು;

(iii) ವಿಶ್ವವಿದ್ಯಾಲಯದ ಹಣಕಾಸಿಗೆ ಸಂಬಂಧಿಸಿದ ಎಲ್ಲ ವಿಷಯಗಳ ಮೇಲೆ ಮಂಡಳಿಗೆ ಶಿಫಾರಸ್ಸುಗಳನ್ನು ಮಾಡುವುದು;

(iv) ಮಂಡಳಿಗೆ ಕಟ್ಟುನಿಟ್ಟಾದ ಆರ್ಥಿಕ ಮಿತವ್ಯಯವನ್ನು ಅನುಸರಿಸಲು ಕಠಿಣ ಕ್ರಮಗಳನ್ನು ಅಳವಡಿಸಿಕೊಳ್ಳಲು ಶಿಫಾರಸ್ಸುಗಳನ್ನು ಮಾಡುವುದು ಮತ್ತು ಅನಗತ್ಯ ವೆಚ್ಚಗಳನ್ನು ಕಡಿತಗೊಳಿಸಲು ಸಲಹೆಗಳನ್ನು ನೀಡುವುದು;

(v) ವಿಶ್ವವಿದ್ಯಾಲಯದ ಹಣ ಬಲವನ್ನು ಉತ್ತಮ ಗೊಳಿಸಲು ಸಂಶೋಧನೆ ಮತ್ತು ಬೋಧನೆಗಳೆರಡರಲ್ಲೂ ವೆಚ್ಚ ವಸೂಲಿ ವಿಧಾನಗಳ ಬಗ್ಗೆ ಮಂಡಳಿಗೆ ಸೂಕ್ತ ಶಿಫಾರಸ್ಸುಗಳನ್ನು ಮಾಡುವುದು.

ಅಧ್ಯಾಯ – VII

ಕಾಲೇಜುಗಳ ಸಂಯೋಜನೆ ಮತ್ತು ಸಂಸ್ಥೆಗಳಿಗೆ ಮನ್ನಣೆ

44. ಕಾಲೇಜುಗಳ ಸಂಯೋಜನೆ.– (1) ವಿಶ್ವವಿದ್ಯಾಲಯದ ಪ್ರದೇಶದಲ್ಲಿರುವ ಕಾಲೇಜುಗಳನ್ನು ಈ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳನ್ನು ಪೂರೈಸಿದ ತರುವಾಯ ರಾಜ್ಯ ಸರ್ಕಾರವು ಮಾಡಿದ

H.252-82

ಶಿಫಾರಸ್ಸುಗಳ ಮೇಲೆ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಾಗಿ ವಿಶ್ವವಿದ್ಯಾಲಯಕ್ಕೆ ಸಂಯೋಜಿಸತಕ್ಕದ್ದು.

(2) ಕುಲಸಚಿವರು, ಹೊಸ ಕಾಲೇಜುಗಳ ಸಂಯೋಜನೆಯ ಬಗ್ಗೆ, ಅಸ್ತಿತ್ವದಲ್ಲಿರುವ ಸಂಯೋಜಿತ ಕಾಲೇಜುಗಳಲ್ಲಿ ಹೊಸ ವ್ಯಾಸಂಗ ಕ್ರಮಗಳ ಬಗ್ಗೆ, ಸಂಯೋಜಿತ ಕಾಲೇಜುಗಳಲ್ಲಿ ಹೊಸ ವಿಷಯಗಳು ಮತ್ತು ಮಂಜೂರಾದ ಪ್ರವೇಶ ಅವಕಾಶದಲ್ಲಿನ ಬದಲಾವಣೆಯ ಬಗ್ಗೆ ಅರ್ಜಿಗಳನ್ನು ಆಹ್ವಾನಿಸಿ, ಅರ್ಜಿಗಳ ಸ್ವೀಕೃತಿಗೆ ಕೊನೆಯ ದಿನಾಂಕವನ್ನು ನಿಗದಿಪಡಿಸಿ, ಒಂದು ಇಂಗ್ಲಿಷ್ ವೃತ್ತ ಪತ್ರಿಕೆ ಮತ್ತು ಒಂದು ಕನ್ನಡ ವೃತ್ತ ಪತ್ರಿಕೆ ಹೀಗೆ ಕಡೆಯ ಪಕ್ಷ ಎರಡು ಪ್ರಮುಖ ವೃತ್ತ ಪತ್ರಿಕೆಗಳಲ್ಲಿ ಅಧಿಸೂಚಿಸತಕ್ಕದ್ದು. ಈ ಜಾಹಿರಾತು, ವಿಶ್ವವಿದ್ಯಾಲಯವು ಅಗತ್ಯ ಪಡಿಸಬಹುದಾದಂತಹ ಇತರ ವಿವರಗಳನ್ನು ಒಳಗೊಂಡಿರತಕ್ಕದ್ದು ಮತ್ತು ಕಾಲೇಜುಗಳು ಭಾರತದ ಕೃಷಿ ಸಂಶೋಧನಾ ಪರಿಷತ್ತು ಅಥವಾ ಅಂತಹ ಇತರ ಪ್ರಾಧಿಕಾರಗಳ ಅನುಮೋದನೆ ಅಥವಾ ಮನ್ನಣೆಯನ್ನು ಪಡೆಯಬೇಕೆಂಬುದನ್ನು ಅಗತ್ಯಪಡಿಸಿದಲ್ಲಿ, ಆ ಬಗ್ಗೆ ನಿರ್ದಿಷ್ಟ ಸೂಚನೆ ನೀಡತಕ್ಕದು ಮತ್ತು ಸಂಯೋಜನೆಗಾಗಿ ಸಲ್ಲಿಸಬೇಕಾದ ಶುಲ್ಕದ ಮೊಬಲಗನ್ನು ಸಹ ನಿರ್ದಿಷ್ಟಪಡಿಸತಕ್ಕದ್ದು.

(3) ವಿಶ್ವವಿದ್ಯಾಲಯಕ್ಕೆ ಸಂಯೋಜನೆಗಾಗಿ ಅರ್ಜಿಸಲ್ಲಿಸುವ ಕಾಲೇಜು, ಈ ಮುಂದಿನವುಗಳಿಗೆ ಸಂಬಂಧಪಟ್ಟಂತೆ ಮಾಹಿತಿಯನ್ನು ಒದಗಿಸಿ ಜಾಹಿರಾತಿನಲ್ಲಿ ನಿಗದಿಪಡಿಸಿದ ಕಾಲಮಿತಿಯೊಳಗೆ ಅರ್ಜಿಯನ್ನು ಕುಲಸಚಿವರಿಗೆ ಕಳುಹಿಸತಕ್ಕದ್ದು, ಎಂದರೆ:-

(i) ಆ ಕಾಲೇಜು ಒದಗಿಸಲು ಉದ್ದೇಶಿಸಿದ ಶಿಕ್ಷಣದ ಮಾದರಿಯನ್ನು ನೆರೆಹೊರೆಯಲ್ಲಿರುವ ಇತರ ಕಾಲೇಜುಗಳು ಅದೇ ಮಾದರಿಯ ಶಿಕ್ಷಣಕ್ಕೆ ಮಾಡಿರುವ ಪ್ರಸ್ತುತ ಏರ್ಪಾಟನ್ನು ಮತ್ತು ಕಾಲೇಜನ್ನು ಯಾವ ಸ್ಥಳದಲ್ಲಿ ಸ್ಥಾಪಿಸಬೇಕಾಗಿದೆಯೋ ಆ ಸ್ಥಳದ ಸೂಕ್ತತೆ ಯನ್ನೂ ಗಮನದಲ್ಲಿಟ್ಟುಕೊಂಡು, ಆ ಕಾಲೇಜು ಸ್ಥಳೀಯ ಅವಶ್ಯಕತೆಯನ್ನು ಪೂರೈಸುತ್ತದೆ;

(ii) ಅದು ಕ್ರಮಬದ್ಧವಾಗಿ ರಚಿಸಲಾದ ಆಡಳಿತ ಮಂಡಳಿಯ ಆಡಳಿತ ನಿರ್ವಹಣೆಗೆ ಒಳಪಟ್ಟಿದೆ;

(iii) ಬೋಧಕ ಸಿಬ್ಬಂದಿಯ ಸಂಖ್ಯೆ ಮತ್ತು ಅರ್ಹತೆಗಳು ಮತ್ತು ಅವರ ಪದಾವಧಿಯನ್ನು ನಿಯಂತ್ರಿಸುವ ಷರತ್ತು

ಗಳು ಆ ಕಾಲೇಜಿನಲ್ಲಿ ಕೈಗೊಳ್ಳಬೇಕಾದ ಶಿಕ್ಷಣ, ಬೋಧನೆ ಅಥವಾ ತರಬೇತಿಗಳ ವ್ಯಾಸಂಗ ಕ್ರಮಗಳಿಗೆ ತಕ್ಕ ಏರ್ಪಾಟನ್ನು ಮಾಡುವಂಥದ್ದಾಗಿದೆ;

(iv) ಕಾಲೇಜನ್ನು ನಡೆಸುವಂಥ ಕಟ್ಟಡಗಳು ಸೂಕ್ತವಾಗಿವೆ ಮತ್ತು ತಂದೆ ತಾಯಿಗಳ ಅಥವಾ ಪಾಲಕರ ಜೊತೆಯಲ್ಲಿ ವಾಸವಾಗಿರದೆ ಇರುವ ವಿದ್ಯಾರ್ಥಿಗಳಿಗಾಗಿ ಆ ಕಾಲೇಜಿನಲ್ಲಿ ಅಥವಾ ಆ ಕಾಲೇಜು ಅನುಮೋದಿಸಿದ ವಸತಿಗಳಲ್ಲಿ ನಿವಾಸಕ್ಕಾಗಿ ಹಾಗೂ ಮೇಲ್ವಿಚಾರಣೆ ಮತ್ತು ಕ್ಷೇಮಾಭಿವೃದ್ಧಿಗಾಗಿ, ಶಾಸನಗಳು ಮತ್ತು ವಿನಿಯಮಗಳಿಗೆ ಅನುಗುಣವಾಗಿ ಏರ್ಪಾಟು ಮಾಡಲಾಗುವುದು;

(v) ಗ್ರಂಥಾಲಯಕ್ಕೆ ಹಾಗೂ ಇತರ ಸೇವಾ ಕೇಂದ್ರಗಳಿಗೆ ಸೂಕ್ತ ವ್ಯವಸ್ಥೆ ಮಾಡಲಾಗಿದೆ;

(vi) ಪ್ರಾಯೋಗಿಕ ವಿಜ್ಞಾನದ ಯಾವುದೇ ಶಾಖೆಯಲ್ಲಿ ಸಂಯೋಜನೆಯನ್ನು ಕೋರಿರುವಲ್ಲಿ, ಶಾಸನಗಳು ಮತ್ತು ವಿನಿಯಮಗಳಿಗೆ ಅನುಗುಣವಾಗಿ ಆ ವಿಜ್ಞಾನದ ಶಾಖೆಯಲ್ಲಿ ಶಿಕ್ಷಣ ಕೊಡುವುದಕ್ಕಾಗಿ ಸರಿಯಾದ ರೀತಿಯಲ್ಲಿ ಸಜ್ಜುಗೊಳಿಸಿದ ಪ್ರಯೋಗಶಾಲೆ ಅಥವಾ ವಸ್ತು ಸಂಗ್ರಹಾಲಯ, ಪ್ರಯೋಗಿಕ ಕ್ಷೇತ್ರಗಳ ವ್ಯವಸ್ಥೆಗಳನ್ನು ನಿರ್ದಿಷ್ಟಪಡಿಸಿದ ಅವಧಿಯೊಳಗೆ ಮಾಡಲಾಗಿದೆ ಅಥವಾ ಮಾಡಲಾಗುವುದು;

(vii) ಸನ್ನಿವೇಶಗಳಲ್ಲಿ ಅವಕಾಶವಿರುವಷ್ಟರ ಮಟ್ಟಿಗೆ ಕಾಲೇಜಿನ ಪರಿಮಿತಿಯಲ್ಲಿ ಅಥವಾ ಅದರ ಹತ್ತಿರ ಅಥವಾ ವಿದ್ಯಾರ್ಥಿಗಳ ನಿವಾಸಕ್ಕಾಗಿ ಒದಗಿಸಿರುವ ಸ್ಥಳದಲ್ಲಿ ಪ್ರಾಂಶುಪಾಲರ ಮತ್ತು ಬೋಧಕ ಸಿಬ್ಬಂದಿಯ ಸದಸ್ಯರ ವಸತಿಗಾಗಿ ಸೂಕ್ತ ಏರ್ಪಾಟು ಮಾಡಲಾಗುವುದು;

(viii) ಕಾಲೇಜಿನ ನಿರಂತರ ನಿರ್ವಹಣೆ ಮತ್ತು ದಕ್ಷ ಕಾರ್ಯ ನಿರ್ವಹಣೆಗಾಗಿ ತಕ್ಕ ಏರ್ಪಾಟು ಮಾಡುವಷ್ಟು ಕಾಲೇಜಿನ ಹಣಕಾಸು ಸಂಪನ್ಮೂಲಗಳಿವೆ; ಮತ್ತು

(ix) ವಿದ್ಯಾರ್ಥಿಗಳು ಸಂದಾಯ ಮಾಡಬೇಕಾದ ಫೀಜು ಏನಾದರೂ ಇದ್ದರೆ ಅದನ್ನು ನಿಗದಿಮಾಡುವ ನಿಯಮಗಳನ್ನು ರಚಿಸಲಾಗಿದೆ.

(4) ಹೊಸ ಕಾಲೇಜುಗಳಿಗೆ ಸಂಯೋಜನೆಯ ಅರ್ಜಿಗಳನ್ನು ವ್ಯಕ್ತಿಗಳಿಂದ ಅಂಗೀಕರಿಸತಕ್ಕದ್ದಲ್ಲ, ರಾಜ್ಯ ಸರ್ಕಾರದ ನೆರವು ಇಲ್ಲದೆಯೇ ಕಾಲೇಜುಗಳನ್ನು ನಡೆಸಲು ಸಾಧ್ಯವಾಗುವ ಹಣಕಾಸು ಚೈತನ್ಯ ಹೊಂದಿರುವ, ನೋಂದಾಯಿತ ಸಂಘ ಅಥವಾ ನೋಂದಾಯಿತ ಸಾರ್ವಜನಿಕ ಟ್ರಸ್ಟ್‌ಗಳಿಂದ ಮಾತ್ರವೇ ಅಂಗೀಕರಿಸತಕ್ಕದ್ದು.

(5) ಅರ್ಜಿಯ ಜೊತೆಗೆ, ಕಾಲೇಜನ್ನು ಸಂಯೋಜಿಸಿದ ನಂತರ ರಾಜ್ಯ ಸರ್ಕಾರ ಮತ್ತು ವಿಶ್ವವಿದ್ಯಾಲಯದ ಪೂರ್ವಾನುಮೋದನೆ ಇಲ್ಲದೆ ವ್ಯವಸ್ಥಾಪನೆಯನ್ನು ವರ್ಗಾವಣೆ ಮಾಡುವುದಿಲ್ಲ ಅಥವಾ ಕಾಲೇಜಿನ ಹೆಸರು ಮತ್ತು ಅಭಿನಾಮವನ್ನು ಬದಲಾವಣೆ ಮಾಡುವುದಿಲ್ಲವೆಂಬ ಒಂದು ಮುಚ್ಚಳಿಕೆಯು ಇರತಕ್ಕದ್ದು.

(6) (2)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಅದನ್ನು ಪರಿಶೀಲನೆಗಾಗಿ ಮಂಡಳಿಯ ಮುಂದೆ ಇಡತಕ್ಕದ್ದು. ಮಂಡಳಿಯು ಸಂಯೋಜನೆಯ ಪ್ರತಿಯೊಂದು ಅರ್ಜಿಯನ್ನು ಪರಿಶೀಲಿಸಿದ ತರುವಾಯ ಒಂದು ಸ್ಥಳೀಯ ವಿಚಾರಣಾ ಸಮಿತಿಯಿಂದ ಸ್ಥಳೀಯ ವಿಚಾರಣೆ ಮಾಡಬೇಕೆಂದು ನಿರ್ದೇಶನ ನೀಡತಕ್ಕದ್ದು.

(7) ಸ್ಥಳೀಯ ವಿಚಾರಣಾ ಸಮಿತಿಯು, ಅದನ್ನು ರಚಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ, ಒಂದು ವರದಿಯನ್ನು ವಿದ್ಯಾ ವಿಷಯಕ ಪರಿಷತ್ತಿಗೆ ಸಲ್ಲಿಸತಕ್ಕದ್ದು.

(8) ವಿದ್ಯಾವಿಷಯಕ ಪರಿಷತ್ತು, ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ಸ್ವೀಕರಿಸಿದ ತರುವಾಯ ಕೂಡಲೇ ವರದಿಯಲ್ಲಿ ವಿವರಿಸಿದ ಸಮಿತಿಯ ತೀರ್ಮಾನಗಳನ್ನು ಪರಿಗಣಿಸತಕ್ಕದ್ದು ಮತ್ತು ತನಗೆ ಅವಶ್ಯಕವೆಂದು ಕಂಡುಬರಬಹುದಾದಂಥ ಹೆಚ್ಚಿನ ವಿಚಾರಣೆಯನ್ನು ಮಾಡತಕ್ಕದ್ದು ಮತ್ತು ಅಂಥ ಮನವಿಯ ಮೇಲೆ ತನ್ನ ಅಭಿಪ್ರಾಯವನ್ನು ದಾಖಲು ಮಾಡತಕ್ಕದ್ದು ಮತ್ತು ಅದನ್ನು ಮಂಡಳಿಗೆ ಕಳುಹಿಸತಕ್ಕದ್ದು.

(9) ಮಂಡಳಿಯು, ಸಮಿತಿಯ ವರದಿಯನ್ನು ಮತ್ತು ವಿದ್ಯಾ ವಿಷಯಕ ಪರಿಷತ್ತಿನ ಗೊತ್ತುವಳಿಯನ್ನು ಪರಿಗಣಿಸತಕ್ಕದ್ದು ಹಾಗೂ ತಾನು ಅವಶ್ಯವೆಂದು ಭಾವಿಸಬಹುದಾದಂತಹ ಹೆಚ್ಚಿನ ವಿಚಾರಣೆಯನ್ನು ಮಾಡಿದ ತರುವಾಯ ಮನವಿಯನ್ನು ಪೂರ್ಣವಾಗಿ ಅಥವಾ ಭಾಗಶ: ಮಂಜೂರು ಮಾಡಬೇಕೆ ಅಥವಾ ನಿರಾಕರಿಸಬೇಕೆ ಎಂಬ ಪ್ರಶ್ನೆಯ ಬಗ್ಗೆ ತನ್ನ ಅಭಿಪ್ರಾಯವನ್ನು ದಾಖಲಿಸತಕ್ಕದ್ದು.

(10) ಕುಲಸಚಿವರು ಅರ್ಜಿಯನ್ನು ಅದರ ಅಡಕವನ್ನು, ಅನುಬಂಧಗಳನ್ನು ಸ್ಥಳೀಯ ವಿಚಾರಣಾ ಸಮಿತಿಯ ವರದಿ ಮತ್ತು ವಿದ್ಯಾ ವಿಷಯಕ ಪರಿಷತ್ತಿನ ಹಾಗೂ ಮಂಡಳಿಯ ಎಲ್ಲಾ ನಡವಳಿಗಳನ್ನು ಮುಂಬರುವ ವರ್ಷದ ಮಾರ್ಚ್ ಮೂವತ್ತೊಂದಕ್ಕೆ ಮೊದಲು ತೀರ್ಮಾನ ಕೈಗೊಳ್ಳುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(11) ರಾಜ್ಯ ಸರ್ಕಾರವು, ಸ್ಥಳಿಯ ವಿಚಾರಣಾ ಸಮಿತಿಯ, ವಿದ್ಯಾ ವಿಷಯಕ ಪರಿಷತ್ತಿನ ಮತ್ತು ಮಂಡಳಿಯ ಶಿಫಾರಸ್ಸುಗಳ ಹಿನ್ನೆಲೆಯಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸತಕ್ಕದ್ದು ಮತ್ತು ಅವಶ್ಯಕವೆಂದು ಅದಕ್ಕೆ ಕಂಡುಬರಬಹುದಾದಂತಹ ವಿಚಾರಣೆಯ ತರುವಾಯ ಪ್ರವೇಶಾವಕಾಶದಲ್ಲಿ ವ್ಯತ್ಯಾಸಗಳು ಸೇರಿದಂತೆ, ಸಂದರ್ಭಾನುಸಾರ ಸಂಯೋಜಿಸಲು ಅಥವಾ ಸಂಯೋಜನೆಯನ್ನು ಅಥವಾ ಅದರ ಯಾವುದೇ ಭಾಗವನ್ನು ನಿರಾಕರಿಸಲು ವಿಶ್ವವಿದ್ಯಾಲಯಕ್ಕೆ ತನ್ನ ಶಿಫಾರಸ್ಸನ್ನು ಮಾಡತಕ್ಕದ್ದು.

(12) ವಿಶ್ವವಿದ್ಯಾಲಯವು ರಾಜ್ಯ ಸರ್ಕಾರದ ನಿರ್ದೇಶನಗಳನ್ನು ಸ್ವೀಕರಿಸಿದ ತರುವಾಯ ಅದರಂತೆ ಔಪಚಾರಿಕ ಆದೇಶಗಳನ್ನು ಹೊರಡಿಸತಕ್ಕದ್ದು.

(13) ಆದಾಗ್ಯೂ ಸಂಯೋಜನೆಯ ಮಂಜೂರಾತಿಯು ಭಾರತೀಯ ಕೃಷಿ ಸಂಶೋಧನಾ ಪರಿಷತ್ತು ಅಥವಾ ಸಂಬಂಧಪಟ್ಟಂತಹ ಇತರ ಪ್ರಾಧಿಕಾರಗಳು ಅಥವಾ ನಿಕಾಯಗಳ ಪೂರ್ವಾನುಮೋದನೆ ಪಡೆಯುವುದಕ್ಕೆ ಒಳಪಟ್ಟಿರತಕ್ಕದ್ದು ಮತ್ತು ನಿರ್ಧರಿಸಲಾದ ಪ್ರವೇಶಾವಕಾಶದ ಸಂಖ್ಯೆಯು, ಅಂತಹ ಪ್ರಾಧಿಕಾರಗಳು ಅಥವಾ ನಿಕಾಯಗಳು ಆ ಸಂಖ್ಯೆಯನ್ನು ನಿರ್ದಿಷ್ಟಪಡಿಸಿದ್ದರೆ ಅದನ್ನು ಮೀರತಕ್ಕದ್ದಲ್ಲ.

(14) ಸಂಯೋಜನೆಗಾಗಿ ಅಥವಾ ಪ್ರವೇಶಾವಕಾಶದ ಸಂಖ್ಯೆಯನ್ನು ನಿಗದಿಪಡಿಸುವುದಕ್ಕಾಗಿ ಅಥವಾ ಅದರ ಯಾವುದೇ ಭಾಗಕ್ಕಾಗಿ, ಅರ್ಜಿ ಯನ್ನು ರಾಜ್ಯ ಸರ್ಕಾರದ ಶಿಫಾರಸ್ಸಿನ ಮೇಲೆ ವಿಶ್ವವಿದ್ಯಾಲಯವು

ಮಂಜೂರು ಮಾಡಿದ್ದರೆ, ವಿಶ್ವವಿದ್ಯಾಲಯವು, ನಿರ್ದಿಷ್ಟ ಷರತ್ತುಗಳೊಡನೆ ಅಥವಾ ಷರತ್ತುಗಳಿಲ್ಲದೆ ನಿರ್ದಿಷ್ಟ ಪ್ರವೇಶಾವಕಾಶದ ಸಂಖ್ಯೆಯೊಡನೆ ಯಾವ ವ್ಯಾಸಂಗಕ್ರಮಗಳ ಸಂಬಂಧದಲ್ಲಿ ಮತ್ತು ಯಾವ ಅವಧಿಗಾಗಿ, ಕಾಲೇಜನ್ನು ಅಥವಾ ವ್ಯಾಸಂಗ ಕ್ರಮವನ್ನು ಸಂಯೋಜಿಸಲಾಗಿದೆಯೋ, ಆ ವ್ಯಾಸಂಗ ಕ್ರಮಗಳನ್ನು ಮತ್ತು ಅವಧಿಯನ್ನು ಆದೇಶದಲ್ಲಿ ನಿರ್ದಿಷ್ಟಪಡಿಸತಕ್ಕದ್ದು.

(15) ಅಂತಹ ಅರ್ಜಿಯನ್ನು ಅಥವಾ ಅದರ ಯಾವುದೇ ಭಾಗವನ್ನು ರಾಜ್ಯ ಸರ್ಕಾರವು ಅಥವಾ ವಿಶ್ವವಿದ್ಯಾಲಯವು ನಿರಾಕರಿಸಿದ್ದರೆ, ಹಾಗೆ ನಿರಾಕರಿಸಲು ಕಾರಣಗಳನ್ನು ತಿಳಿಸತಕ್ಕದ್ದು.

(16) (1)ನೇ ಉಪಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಯಾವುದೇ ಅರ್ಜಿಯನ್ನು (12)ನೇ ಉಪ ಪ್ರಕರಣದ ಅಡಿಯಲ್ಲಿ ಆದೇಶವನ್ನು ಮಾಡುವುದಕ್ಕೆ ಮೊದಲು ಯಾವುದೇ ಸಮಯದಲ್ಲಿ ಅರ್ಜಿದಾರನು ಹಿಂದಕ್ಕೆ ಪಡೆಯಬಹುದು.

(17) ಪ್ರತಿಯೊಂದು ಶೈಕ್ಷಣಿಕ ವರ್ಷಕ್ಕಾಗಿ, ಪ್ರಸಕ್ತ ಇರುವ ವ್ಯಾಸಂಗ ಕ್ರಮಗಳಿಗಾಗಿ ಮತ್ತು ಹೊಸ ವ್ಯಾಸಂಗ ಕ್ರಮಗಳನ್ನು ಹೊರತುಪಡಿಸಿ ಅನುಸರಣಾ ವ್ಯಾಸಂಗ ಕ್ರಮಗಳಿಗೆ ಸಂಯೋಜನೆಯನ್ನು ನವೀಕರಿಸುವುದಕ್ಕಾಗಿ ಅಥವಾ ಮುಂದುವರೆಸುವುದಕ್ಕಾಗಿ ಮಂಜೂರಾತಿಯನ್ನು ಮಂಡಳಿಯು ಹೊಸ ಸಂಯೋಜನೆಯ ಮಂಜೂರಾತಿಗೆ ಅನ್ವಯವಾಗುವ ರೀತಿಯಲ್ಲಿಯೇ, ವಿದ್ಯಾ ವಿಷಯಕ ಪರಿಷತ್ತಿನೊಡನೆ ಸಮಾಲೋಚಿಸಿ ನೀಡಬಹುದು.

(18) ರಾಜ್ಯ ಸರ್ಕಾರವು ಪ್ರತಿಯೊಂದು ವ್ಯಾಸಂಗ ಕ್ರಮದ ಸಂಬಂಧದಲ್ಲಿ ಪ್ರವೇಶಾವಕಾಶವನ್ನು ವಾರ್ಷಿಕ ಆಧಾರದಲ್ಲಿ ನಿರ್ಧರಿಸತಕ್ಕದ್ದು.

45. ಹೊಸ ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನು ಪ್ರವೇಶ ಮಾಡಿಕೊಳ್ಳುವುದಕ್ಕೆ ನಿರ್ಬಂಧ.– (1) ಯಾವುದೇ ವಿಶ್ವವಿದ್ಯಾಲಯಕ್ಕೆ ಸಂಯೋಜನೆಯನ್ನು ಕೋರುತ್ತಿರುವ ಒಂದು ಹೊಸ ಕಾಲೇಜು ಹೊಸ ವ್ಯಾಸಂಗ ಕ್ರಮಕ್ಕೆ ಸಂಯೋಜನೆಯನ್ನು ಕೋರುತ್ತಿರುವ ಅಥವಾ ನಿರ್ದಿಷ್ಟಪಡಿಸಲಾದಂಥ ಪ್ರವೇಶಾವಕಾಶಕ್ಕಿಂತಲೂ ಹೆಚ್ಚು ಪ್ರವೇಶಾವಕಾಶ ವನ್ನು ಕೋರುತ್ತಿರುವ ಈಗಾಗಲೇ ಇರುವ ಒಂದು ಕಾಲೇಜು ಸಂದರ್ಭಾ ನುಸಾರ ಆ ಹೊಸ ಕಾಲೇಜಿಗೆ ಸಂಯೋಜನೆಯನ್ನು ಅಥವಾ ಈಗಾಗಲೇ ಇರುವ

ಸಂಯೋಜಿತ ಕಾಲೇಜಿನಲ್ಲಿ ಒಂದು ಹೊಸ ವ್ಯಾಸಂಗ ಕ್ರಮವನ್ನು ಅಥವಾ ಅಂಥ ಒಂದು ವ್ಯಾಸಂಗ ಕ್ರಮದ ಸಂಬಂಧದಲ್ಲಿ ನಿರ್ದಿಷ್ಟಪಡಿಸಿದ ಪ್ರವೇಶಾವಕಾಶವನ್ನು ಬದಲಾಯಿಸಲು ವಿಶ್ವ ವಿದ್ಯಾಲಯವು ಮಂಜೂರಾತಿ ನೀಡಿದ್ದ ಹೊರತು ಅವುಗಳು ಆ ಸಂಬಂಧದಲ್ಲಿ ವಿದ್ಯಾರ್ಥಿಗಳನ್ನು ಪ್ರವೇಶ ಮಾಡಿಸಿಕೊಳ್ಳತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣದ ಉಪಬಂಧವನ್ನು ಉಲ್ಲಂಘಿಸುವ ಯಾವುದೇ ಸಂಸ್ಥೆಯು ಕರ್ನಾಟಕ ಮಾನ್ಯತೆ ಪಡೆಯದ ಮತ್ತು ಸಂಯೋಜನೆ ಹೊಂದಿರದ ವಿದ್ಯಾ ಸಂಸ್ಥೆಗಳಿಗೆ ಪ್ರವೇಶ ನಿಷೇಧ ಅಧಿನಿಯಮ, 1992ರ (1993ರ ಕರ್ನಾಟಕ ಅಧಿನಿಯಮ 7) ಅಡಿಯಲ್ಲಿ ಕೈಗೊಳ್ಳುವ ಕ್ರಮಕ್ಕೆ ಗುರಿಯಾಗತಕ್ಕದ್ದು.

46. ಪರೀಕ್ಷೆಗಳಿಗೆ ಹಾಜರಾಗಲು ನಿರ್ಬಂಧ.– ತನ್ನ ಪ್ರವೇಶವು ಅಮಾನ್ಯವಾಗಿರುವ ಅಥವಾ ವಿಶ್ವವಿದ್ಯಾಲಯದಿಂದ ತನ್ನ ಪ್ರವೇಶವು ಅನುಮೋದಿತವಾಗಿಲ್ಲದ ಅಥವಾ ನಿರ್ದಿಷ್ಟಪಡಿಸಲಾದ ವಿದ್ಯಾರ್ಥಿಗಳ ಸಂಖ್ಯೆಗಿಂತ ಹೆಚ್ಚಿಗೆಯಾಗಿ ಕಾಲೇಜಿಗೆ ಅಥವಾ ವ್ಯಾಸಂಗ ಕ್ರಮಕ್ಕೆ ಪ್ರವೇಶ ಪಡೆದಿರುವ ಯಾವೊಬ್ಬ ವಿದ್ಯಾರ್ಥಿಯು, ಕಾಲೇಜು ಅಥವಾ ವಿಶ್ವವಿದ್ಯಾಲಯವು ನಡೆಸುವ ಪರೀಕ್ಷೆಗೆ ಹಾಜರಾಗಲು ಅರ್ಹನಾಗಿರತಕ್ಕದ್ದಲ್ಲ.

47. ಖಾಯಂ ಸಂಯೋಜನೆ.– (1) ಐದು ವರ್ಷಗಳಿಗೆ ಕಡಿಮೆ ಇಲ್ಲದ ಅವಧಿಗೆ ನಿರಂತರವಾಗಿ ಸಂಯೋಜನೆಗೊಂಡಿರುವ ಮತ್ತು ಕಾಲಕಾಲಕ್ಕೆ ವಿಶ್ವವಿದ್ಯಾಲಯವು ನಿರ್ದಿಷ್ಟಪಡಿಸಿದ ಸಂಯೋಜನೆಯ ಎಲ್ಲಾ ಷರತ್ತುಗಳನ್ನು ಪೂರೈಸಿರುವ ಮತ್ತು ವಿದ್ಯಾ ವಿಷಯದಲ್ಲಿ ಉತ್ಕೃಷ್ಟತೆಯನ್ನು ಸಾಧಿಸಿದ ಹಾಗೂ ಆಡಳಿತಾತ್ಮಕ ಗುಣಮಟ್ಟಗಳನ್ನು ಹೊಂದಿರುವ ಕಾಲೇಜು ಖಾಯಂ ಸಂಯೋಜನೆಯ ಮಂಜೂರಾತಿಗೆ ಅರ್ಹವಾಗಿರತಕ್ಕದ್ದು.

(2) 45ನೇ ಪ್ರಕರಣದ ಉಪಬಂಧಗಳು, ಯಥೋಚಿತ ವ್ಯತ್ಯಾಸಗಳೊಂದಿಗೆ ಖಾಯಂ ಸಂಯೋಜನೆಯ ಮಂಜೂರಾತಿಗೆ ಅನ್ವಯವಾಗತಕ್ಕದ್ದು.

(3) ಖಾಯಂ ಆಗಿ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡ ಕಾಲೇಜಿನ, ಆಡಳಿತಾತ್ಮಕ ಮತ್ತು ಶೈಕ್ಷಣಿಕ ಕಾರ್ಯ ವೈಖರಿಯನ್ನು ಐದು ವರ್ಷಗಳ ಅವಧಿಯಲ್ಲಿ ಕೊನೆಪಕ್ಷ ಒಂದು ಸಲದಂತೆ ಆಗಾಗ್ಗೆ, ವಿಶ್ವವಿದ್ಯಾಲಯ ಮತ್ತು ರಾಜ್ಯ ಸರ್ಕಾರಗಳು ಪರಿಶೀಲನೆ ಮಾಡತಕ್ಕದ್ದು.

(4) ಪೂರ್ವೋಕ್ತ ಉಪ ಪ್ರಕರಣಗಳಲ್ಲಿ ಏನೇ ಇದ್ದರೂ, ಖಾಯಂ ಆಗಿ ಸಂಯೋಜನೆಗೊಂಡ ಕಾಲೇಜು, (1)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಷರತ್ತುಗಳನ್ನು ಪೂರೈಸಲು ವಿಫಲವಾಗಿದ್ದಲ್ಲಿ, ಅದರ ಖಾಯಂ ಸಂಯೋಜನೆಯನ್ನು ರದ್ದುಪಡಿಸತಕ್ಕದ್ದು:

ಪರಂತು, ಸಂಬಂಧಪಟ್ಟ ಕಾಲೇಜಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ವಿಶ್ವವಿದ್ಯಾಲಯವು ಒಂದು ಅವಕಾಶಕೊಟ್ಟ ಹೊರತು ಖಾಯಂ ಸಂಯೋಜನೆಯನ್ನು ರದ್ದುಗೊಳಿಸತಕ್ಕದ್ದಲ್ಲ:

ಮತ್ತು ಪರಂತು, ಖಾಯಂ ಸಂಯೋಜನೆಯನ್ನು ರದ್ದುಗೊಳಿಸಿದ ತರುವಾಯ ಸಂಬಂಧಪಟ್ಟ ಕಾಲೇಜು, ಸಂಯೋಜನೆಯನ್ನು ವಾರ್ಷಿಕ ಆಧಾರದ ಮೇಲೆ ತಾತ್ಕಾಲಿಕವಾಗಿ ಮುಂದುವರೆಸಲು ಕೋರತಕ್ಕದ್ದು.

48. ಸಂಯೋಜನೆಯನ್ನು ಹಿಂತೆಗೆದುಕೊಳ್ಳುವುದು.– (1) ಸಂಯೋಜನೆಗೊಂಡ ಕಾಲೇಜು ಈ ಅಧಿನಿಯಮದ ಯಾವುದೇ ಉಪಬಂಧವನ್ನು ಪಾಲಿಸಲು ವಿಫಲವಾದರೆ ಅಥವಾ ಸಂಯೋಜನೆಯ ಯಾವುದೇ ಷರತ್ತುಗಳನ್ನು ಪಾಲಿಸಲು ವಿಫಲವಾದರೆ ಅಥವಾ ಕಾಲೇಜನ್ನು ಶಿಕ್ಷಣದ ಹಿತಾಸಕ್ತಿಗಳಿಗೆ ದಕ್ಕೆ ಉಂಟು ಮಾಡುವ ರೀತಿಯಲ್ಲಿ ನಡೆಸಿಕೊಂಡು ಬರುತ್ತಿದ್ದರೆ, ಸಂಯೋಜನೆಯ ಮೂಲಕ ಕಾಲೇಜಿಗೆ ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ ಪ್ರದತ್ತವಾದ ಹಕ್ಕುಗಳನ್ನು ಪೂರ್ಣವಾಗಿ ಅಥವಾ ಭಾಗಶ: ಹಿಂತೆಗೆದುಕೊಳ್ಳಬಹುದು ಅಥವಾ ಮಾರ್ಪಾಡು ಮಾಡಬಹುದು.

(2) ಅಂತಹ ಹಕ್ಕುಗಳನ್ನು ಹಿಂತೆಗೆದುಕೊಳ್ಳುವುದಕ್ಕೆ ಅಥವಾ ಮಾರ್ಪಾಟುಮಾಡುವುದಕ್ಕೆ ಸೂಚನೆಯನ್ನು ಮಂಡಳಿಯ ಸಭೆಯಲ್ಲಿ ಮಾತ್ರ ಮಂಡಿಸತಕ್ಕದ್ದು. ಮಂಡಳಿಯ ಪದನಿಮಿತ್ತ ಸದಸ್ಯನೂ ಒಳಗೊಂಡಂತೆ ಅಂತಹ ಸೂಚನೆಯನ್ನು ಮಂಡಿಸಲು ಉದ್ದೇಶಿಸುವ ಯಾವೊಬ್ಬ ಸದಸ್ಯನು ಯಾವ ಕಾರಣದ ಮೇಲೆ ಅಂತಹ ಸೂಚನೆಯನ್ನು ಮಂಡಿಸಲಾಗಿದೆಯೋ ಆ ಕಾರಣಗಳನ್ನು ಲಿಖಿತದಲ್ಲಿ ನಿರೂಪಿಸಿ ಅಂಥ ಒಂದು ನೋಟೀಸನ್ನು ನೀಡತಕ್ಕದ್ದು.

(3) ಸದರಿ ಸೂಚನೆಯನ್ನು ಪರಿಗಣನೆಗೆ ತೆಗೆದುಕೊಳ್ಳುವುದಕ್ಕೆ ಮೊದಲು ಮಂಡಳಿಯು, ನೋಟೀಸಿನ ಒಂದು ಪ್ರತಿಯನ್ನು, ತನ್ನ ತಿಳುವಳಿಕೆ ಪತ್ರದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಆ ಕಾಲೇಜು ಸದರಿ ಸೂಚನೆಯ ಬಗ್ಗೆ ತನ್ನ ಯಾವುದೇ ಮನವಿಯನ್ನು ಬರೆದು ಸಲ್ಲಿಸತಕ್ಕದೆಂದು ಮತ್ತು

ಅದನ್ನು ಮಂಡಳಿಯು ಪರ್ಯಾಲೋಚಿಸುವುದೆಂದು ನಿರ್ದಿಷ್ಟವಾಗಿ ತಿಳಿಸಿದ ಪತ್ರದೊಂದಿಗೆ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರಿಗೆ ಕಳುಹಿಸತಕ್ಕದ್ದು.

(4) (3)ನೇ ಉಪ ಪ್ರಕರಣದಲ್ಲಿ ಹಾಗೆ ನಿರ್ದಿಷ್ಟಪಡಿಸಿದ ಅವಧಿಯನ್ನು ಅವಶ್ಯವಿದ್ದಲ್ಲಿ, ಮಂಡಳಿಯು ಸಮಂಜಸ ಸಮಯದವರೆಗೆ ವಿಸ್ತರಿಸಬಹುದು.

(5) ಮನವಿಯನ್ನು ಸ್ವೀಕರಿಸಿದ ಮೇಲೆ ಅಥವಾ ಹಿಂದಿನ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಅವಧಿಯು ಮುಗಿದ ಮೇಲೆ, ಮಂಡಳಿಯು ಸೂಚನೆಯ ನೋಟೀಸನ್ನು, ಅದರಲ್ಲಿ ತಿಳಿಸಿದ ಕಾರಣಗಳನ್ನು ಮತ್ತು ಅದರ ಮೇಲೆ ಸಲ್ಲಿಸಿದ ಮನವಿಯನ್ನು ಪರ್ಯಾಲೋಚಿಸಿದ ತರುವಾಯ ಮತ್ತು ಈ ಸಂಬಂಧದಲ್ಲಿ ತಾನು ರಚಿಸಿದ ಮತ್ತು ಪ್ರಾಧಿಕಾರ ನೀಡಿದ ಒಂದು ಸಮಿತಿಯು ತನಗೆ ಅವಶ್ಯವೆಂದು ಕಂಡು ಬರಬಹುದಾದಂತಹ ಪರಿಶೀಲ ನೆಯನ್ನು ನಡೆಸಿದ ತರುವಾಯ ಮತ್ತು ಅಂತಹ ಹೆಚ್ಚಿನ ವಿಚಾರಣೆಯನ್ನು ನಡೆಸಿದ ತರುವಾಯ, ಒಂದು ನಿರ್ಣಯವನ್ನು ಅದಕ್ಕೆ ಕಾರಣಗಳನ್ನು ದಾಖಲಿಸಿ ಅಂಗೀಕರಿಸತಕ್ಕದ್ದು ಮತ್ತು ಅದನ್ನು ವಿದ್ಯಾವಿಷಯಕ್ಕ ಪರಿಷತ್ತಿಗೆ ಕಳುಹಿಸಿಕೊಡತಕ್ಕದ್ದು.

(6) (5)ನೇ ಉಪ ಪ್ರಕರಣದ ಅಡಿಯಲ್ಲಿನ ಒಂದು ವರದಿಯನ್ನು ಸ್ವೀಕರಿಸಿದ ಮೇಲೆ, ವಿದ್ಯಾ ವಿಷಯಕ ಪರಿಷತ್ತು ಅದಕ್ಕೆ ಅವಶ್ಯವೆಂದು ಕಂಡುಬರಬಹುದಾದಂತಹ ಹೆಚ್ಚಿನ ವಿಚಾರಣೆ ಯಾವುದಾದರೂ ಇದ್ದರೆ ಅದನ್ನು ಮಾಡಿದ ತರವಾಯ, ಆ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ದಾಖಲಿಸತಕ್ಕದ್ದು ಮತ್ತು ಅದನ್ನು ಮಂಡಳಿಗೆ ವಾಪಸ್ಸು ಕಳುಹಿಸಿ ಕೊಡತಕ್ಕದ್ದು.

(7) ಮಂಡಳಿಯು, ವಿದ್ಯಾ ವಿಷಯಕ ಪರಿಷತ್ತಿನ ನಿರ್ಣಯವನ್ನು ಪರ್ಯಾಲೋಚಿಸಿದ ತರುವಾಯ ಸಂಯೋಜನೆಯನ್ನು ಹಿಂತೆಗೆದು ಕೊಳ್ಳಬೇಕೆಂದು ಶಿಫಾರಸ್ಸು ಮಾಡಿದ ಅಂತಿಮ ನಿರ್ಣಯವನ್ನು ಅಂಗೀಕ ರಿಸತಕ್ಕದ್ದು. ಅಂತಹ ನಿರ್ಣಯಕ್ಕೆ ಮಂಡಳಿಯ ಸಭೆಯಲ್ಲಿ ಹಾಜರಿದ್ದ ಸದಸ್ಯರ ಮೂರನೇ ಎರಡರಷ್ಟು ಸದಸ್ಯರ ಬೆಂಬಲ ದೊರೆತ ಹೊರತು ನಿರ್ಣಯವು ಮಂಡಳಿಯಿಂದ ಅಂಗೀಕೃತವಾಗಿರುವುದಾಗಿ ಭಾವಿಸತಕ್ಕದ್ದಲ್ಲ.

(8) ಕುಲಸಚಿವರು ಪ್ರಸ್ತಾವವನ್ನು, ಸೂಚನೆಯ ನೋಟೀಸು, ಕಾಲೇಜಿನ ಉತ್ತರ, ಮಂಡಳಿಯ ಮತ್ತು ವಿದ್ಯಾ ವಿಷಯಕ ಪರಿಷತ್ತಿನ

ನಿರ್ಣಯವೂ ಒಳಗೊಂಡಂತೆ ಎಲ್ಲಾ ದಸ್ತಾವೇಜುಗಳ ಸಮೇತ ತೀರ್ಮಾನ ಕೈಗೊಳ್ಳುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಒಪ್ಪಿಸತಕ್ಕದ್ದು.

(9) ರಾಜ್ಯ ಸರ್ಕಾರವು ತನಗೆ ಅವಶ್ಯವೆಂದು ಕಂಡುಬರಬಹುದಾದಂತಹ ಹೆಚ್ಚಿನ ವಿಚಾರಣೆಯನ್ನು ನಡೆಸಿದ ತರವಾಯ, ಒಂದು ನಿರ್ದಿಷ್ಟ ಶೈಕ್ಷಣಿಕ ವರ್ಷದಿಂದ ಅನ್ವಯವಾಗುವಂತೆ, ಸಂಯೋಜನೆ ಯನ್ನು ಪೂರ್ತಿಯಾಗಿ ಅಥವಾ ಭಾಗಶ: ಹಿಂತೆಗೆದುಕೊಳ್ಳುವಂತೆ ಅಥವಾ ಮಾರ್ಪಾಟು ಮಾಡುವಂತೆ ಅಥವಾ ಪ್ರಸ್ತಾವವನ್ನು ತಿರಸ್ಕರಿಸುವಂತೆ ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಬಹುದು.

(10) ವಿಶ್ವವಿದ್ಯಾಲಯವು ಅಂತಹ ನಿರ್ದೇಶನವನ್ನು ಸ್ವೀಕರಿಸಿದ ಮೇಲೆ, ಅಂತಹ ನಿರ್ದೇಶನಕ್ಕೆ ಅನುಸಾರವಾಗಿ ಔಪಚಾರಿಕ ಆದೇಶವನ್ನು ಹೊರಡಿಸತಕ್ಕದ್ದು.

(11) ಸಂಯೋಜನೆಯನ್ನು ಪೂರ್ಣವಾಗಿ ಅಥವಾ ಭಾಗಶ: ಹಿಂತೆಗೆದುಕೊಂಡ ಕಾಲೇಜಿನ ವಿದ್ಯಾರ್ಥಿಗಳಿಗೆ, ನಿರ್ದಿಷ್ಟ ವ್ಯಾಸಂಗ ಕ್ರಮದ ಸಂಬಂಧದಲ್ಲಿ ಹಾಗೆ ಸ್ಥಳಾವಕಾಶ ಕಲ್ಪಿಸಬೇಕಾದಂತಹ ವಿದ್ಯಾರ್ಥಿಗಳ ಸಂಖ್ಯೆಯಷ್ಟರ ಮಟ್ಟಿಗೆ ಪ್ರವೇಶ ಸಂಖ್ಯೆಯನ್ನು ಹೆಚ್ಚಿಸುವ ಮೂಲಕ, ವಿಶ್ವವಿದ್ಯಾಲಯವು, ಹತ್ತಿರದಲ್ಲಿರುವ ಕಾಲೇಜಿನಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಸ್ಥಳಾವಕಾಶವನ್ನು ಕಲ್ಪಿಸುವ ವ್ಯವಸ್ಥೆ ಮಾಡತಕ್ಕದ್ದು. ಅಂತಹ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ಸಂಯೋಜನೆಯನ್ನು ಹಿಂತೆಗೆದುಕೊಂಡ ಕಾಲೇಜಿನಿಂದ ವಿಶ್ವವಿದ್ಯಾಲಯವು ಅವರನ್ನು ವರ್ಗಾಯಿಸಿದ ಕಾಲೇಜಿಗೆ ವರ್ಗಾಯಿಸತಕ್ಕದ್ದು.

49. ಕಾಲೇಜು ಅಥವಾ ವ್ಯಾಸಂಗ ಕ್ರಮವನ್ನು ಸ್ವಯಂ ಮುಚ್ಚುವಿಕೆ.– (1) ತನ್ನ ಅಸಾಮರ್ಥ್ಯದ ಅಥವಾ ಹಣಕಾಸು ದೃಷ್ಟಿಯಿಂದ ಊರ್ಜಿತವಾಗದ ಕಾರಣದಿಂದ ಅಥವಾ ಆಡಳಿತ ವ್ಯವಸ್ಥೆಯ ಕುಸಿತದ ಕಾರಣದಿಂದ ಕಾಲೇಜನ್ನು ಅಥವಾ ವ್ಯಾಸಂಗ ಕ್ರಮವನ್ನು ಮುಚ್ಚಲು ಉದ್ದೇಶಿಸಿರುವಂತಹ ಯಾವುದೇ ಕಾಲೇಜಿನ ಆಡಳಿತ ಮಂಡಳಿಯು ವಿಶ್ವವಿದ್ಯಾಲಯಕ್ಕೆ ಮತ್ತು ರಾಜ್ಯ ಸರ್ಕಾರಕ್ಕೆ, ಕಾಲೇಜನ್ನು ಮುಚ್ಚುವುದಕ್ಕೆ ಮೊದಲು ಮೂರು ತಿಂಗಳುಗಳಿಗಿಂತ ಕಡಿಮೆ ಇಲ್ಲದಂತೆ, ಆ ಬಗ್ಗೆ ಕಾರಣಗಳನ್ನು ತಿಳಿಸಿ, ನೋಟೀಸನ್ನು ನೀಡತಕ್ಕದ್ದು.

(2) ಕಾಲೇಜಿನ ಅಥವಾ ವ್ಯಾಸಂಗ ಕ್ರಮದ ಮುಚ್ಚುವಿಕೆಯ ಅರ್ಜಿಯನ್ನು ವಿದ್ಯಾವಿಷಯಕ ಪರಿಷತ್ತು ಮತ್ತು ಮಂಡಳಿಗಳು ಪರಿಗಣಿಸತಕ್ಕದ್ದು ಮತ್ತು ಅವು ಅದರ ಮೇಲೆ ಸೂಕ್ತ ಗೊತ್ತುವಳಿಗಳನ್ನು ಅಂಗೀಕರಿಸತಕ್ಕದ್ದು.

(3) ಕುಲಸಚಿವರು, ಅರ್ಜಿಯನ್ನು ಮತ್ತು ವಿದ್ಯಾವಿಷಯಕ ಪರಿಷತ್ತಿನ ಮತ್ತು ಮಂಡಳಿಯ ಗೊತ್ತುವಳಿಗಳನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು, ಅದು ಅವುಗಳನ್ನು ಪರಿಗಣಿಸಿದ ತರುವಾಯ ಮುಚ್ಚುವ ಬಗ್ಗೆ ಅನುಮತಿ ನೀಡಬೇಕೆಂದು ಅಥವಾ ಮುಚ್ಚುವಿಕೆಗೆ ಅನುಮತಿ ನಿರಾಕರಿಸಬೇಕೆಂದು ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡತಕ್ಕದ್ದು ಮತ್ತು ವಿಶ್ವವಿದ್ಯಾಲಯವು ಅಂಥ ನಿರ್ದೇಶನಗಳನ್ನು ಸ್ವೀಕರಿಸಿದ ತರುವಾಯ ಅದಕ್ಕನುಸಾರ ಆದೇಶಗಳನ್ನು ಹೊರಡಿಸತಕ್ಕದ್ದು.

(4) ಆಡಳಿತ ಮಂಡಳಿಯು, ಶೈಕ್ಷಣಿಕ ವರ್ಷದ ಚಾಲ್ತಿ ಅವಧಿಯಲ್ಲಿ ಮತ್ತು ವಿಶ್ವವಿದ್ಯಾಲಯವು ಸಂಬಂಧಪಟ್ಟ ವ್ಯಾಸಂಗಕ್ರಮದ ವಾರ್ಷಿಕ ಪರೀಕ್ಷೆಗಳನ್ನು ನಡೆಸುವವರೆಗೆ ಮತ್ತು ವಿಶ್ವವಿದ್ಯಾಲಯವು ಮುಚ್ಚಬಹುದೆಂದು ಒಂದು ಔಪಚಾರಿಕ ಆದೇಶವನ್ನು ಹೊರಡಿಸುವವರೆಗೆ ಕಾಲೇಜನ್ನು ಅಥವಾ ವ್ಯಾಸಂಗ ಕ್ರಮವನ್ನು ಮುಚ್ಚತಕ್ಕದ್ದಲ್ಲ.

(5) ಹಾಗೆ ಮುಚ್ಚಲಾದ ಕಾಲೇಜುಗಳ ವಿದ್ಯಾರ್ಥಿಗಳಿಗೆ ಅವರ ವರ್ಗಾವಣೆಯ ನಂತರ, ವಿಶ್ವವಿದ್ಯಾಲಯವು, ಹತ್ತಿರವಿರುವ ಕಾಲೇಜಿನಲ್ಲಿ ಸಂಬಂಧಪಟ್ಟ ವ್ಯಾಸಂಗಕ್ರಮದಲ್ಲಿ ಪ್ರವೇಶ ಸಂಖ್ಯೆಯನ್ನು ಅಂಥ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ನೀಡುವಷ್ಟರಮಟ್ಟಿಗೆ ಹೆಚ್ಚಿಸಿ ಪ್ರವೇಶವನ್ನು ನೀಡತಕ್ಕದ್ದು ಮತ್ತು ಅಂಥ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ಹಾಗೆ ಮುಚ್ಚಲ್ಪಟ್ಟ ಕಾಲೇಜಿನಿಂದ, ಯಾವ ಕಾಲೇಜಿನಲ್ಲಿ ಅಂಥ ವಿದ್ಯಾರ್ಥಿಗಳು ಪ್ರವೇಶವನ್ನು ಪಡೆದಿರುವರೋ ಅಲ್ಲಿಗೆ ವರ್ಗಾಯಿಸತಕ್ಕದ್ದು.

(6) (1)ನೇ ಉಪಪ್ರಕರಣದ ಅಡಿಯಲ್ಲಿ ನೋಟೀಸಿನ ಅವಧಿಯು ಮುಕ್ತಾಯವಾದ ತರುವಾಯ ತೊಂಬತ್ತು ದಿನಗಳೊಳಗೆ, ಹಾಗೆ ಮುಚ್ಚುವ ಬಗ್ಗೆ ಅನುಮತಿ ನೀಡುವ ಅಥವಾ ನಿರಾಕರಿಸುವ ಯಾವುದೇ ನಿರ್ದೇಶನವನ್ನು ರಾಜ್ಯ ಸರ್ಕಾರವು ನೀಡದಿದ್ದರೆ, (4)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಕಾಲೇಜನ್ನು ಅಥವಾ ಸಂದರ್ಭಾನುಸಾರ ವ್ಯಾಸಂಗಕ್ರಮವನ್ನು ಮುಚ್ಚಲು ಆಡಳಿತ ಮಂಡಳಿಗೆ ಅನುಮತಿ ನೀಡಲಾಗಿದೆ ಎಂದು ಭಾವಿಸತಕ್ಕದ್ದು.

50. ಕೆಲವು ಸಂಸ್ಥೆಗಳಿಗೆ ಮಾನ್ಯತೆ.- (1) ಸಂಶೋಧನೆ ಅಥವಾ ನಿರ್ದಿಷ್ಟಪಡಿಸಿದ ಅಧ್ಯಯನಗಳನ್ನು ಅಥವಾ ವಿಶೇಷ ಅಧ್ಯಯನಗಳನ್ನು ನಡೆಸುವ ಕಾಲೇಜುಗಳನ್ನು ಹೊರತುಪಡಿಸಿ, ವಿಶ್ವವಿದ್ಯಾಲಯ ಪ್ರದೇಶದ ಒಳಗೆ ಅಥವಾ ಹೊರಗೆ ಇರುವ ಯಾವುದೇ ಸಂಸ್ಥೆಯನ್ನು, ಶಾಸನಗಳ ಮೂಲಕ ನಿಯಮಿಸಬಹುದಾದಂಥ ಉದ್ದೇಶಕ್ಕಾಗಿ ಮತ್ತು ಅಂಥ ವಿಧಾನ ದಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು, ಮಾನ್ಯತೆ ಪಡೆದ ಸಂಸ್ಥೆಯೆಂದು ಮಂಡಳಿಯು ಮಾನ್ಯತೆ ನೀಡಬಹುದು.

(2) ಯಾವುದೇ ಅಂಥ ಮಾನ್ಯತೆಯನ್ನು ಶಾಸನಗಳ ಮೂಲಕ ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಕಾರಣಗಳಿಗಾಗಿ ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾಗಲಿ ಹಿಂತೆಗೆದುಕೊಳ್ಳ ಬಹುದು ಅಥವಾ ಮಾರ್ಪಾಟು ಮಾಡಬಹುದು.

51. ಕಾಲೇಜುಗಳ ಪರಿವೀಕ್ಷಣೆ ಮತ್ತು ವರದಿಗಳು.-(1) ಖಾಯಂ ಆಗಿ ಸಂಯೋಜನೆಗೊಂಡ ಕಾಲೇಜುಗಳೂ ಒಳಗೊಂಡಂತೆ ಸಂಯೋಜನೆ ಗೊಂಡ ಪ್ರತಿಯೊಂದು ಕಾಲೇಜು, ಮಂಡಳಿಯು ವಿದ್ಯಾವಿಷಯಕ ಪರಿಷತ್ತಿನೊಡನೆ ಸಮಾಲೋಚನೆ ನಡೆಸಿದ ತರುವಾಯ, ಆ ಕಾಲೇಜಿನ ಅಥವಾ ಸಂಸ್ಥೆಯ ದಕ್ಷತೆಯನ್ನು ಮತ್ತು ಅದು ಸಾಧಿಸಿದ ಶೈಕ್ಷಣಿಕ ಗುಣಮಟ್ಟವನ್ನು ನಿರ್ಣಯಿಸುವುದಕ್ಕೆ ಸಾಧ್ಯವಾಗುವಂತೆ ಅಗತ್ಯಪಡಿಸಬಹು ದಾದಂಥ ವರದಿಗಳನ್ನು, ವಿವರಣ ಪಟ್ಟಿಕೆಗಳನ್ನು ಮತ್ತು ಇತರ ಮಾಹಿತಿಯನ್ನು ಕುಲಸಚಿವರಿಗೆ ಒದಗಿಸತಕ್ಕದ್ದು.

(2) ಮಂಡಳಿಯು, ಅಂಥ ಪ್ರತಿಯೊಂದು ಕಾಲೇಜನ್ನು ಈ ಉದ್ದೇಶಕ್ಕಾಗಿ ರಚಿಸಿದ ಒಂದು ಸಮಿತಿಯು ಕಾಲಕಾಲಕ್ಕೆ ಪರಿವೀಕ್ಷಣೆ ನಡೆಸುವಂತೆ ಮಾಡತಕ್ಕದ್ದು.

(3) ಮಂಡಳಿಯು, ಹಾಗೆ ಪರಿವೀಕ್ಷಣೆ ನಡೆಸಿದ ಮೇಲೆ ಯಾವುದೇ ಕಾಲೇಜನ್ನು, ನಿರ್ದಿಷ್ಟಪಡಿಸಿದ ಅವಧಿಯೊಳಗೆ, ಯಾವುವೇ ವಿಷಯಗಳ ಸಂಬಂಧದಲ್ಲಿ ತನಗೆ ಅವಶ್ಯವೆಂದು ಕಂಡುಬರಬಹುದಾದಂಥ ಕ್ರಮವನ್ನು ಕೈಗೊಳ್ಳಲು ಕೋರಬಹುದು.

(4) ಪ್ರತಿಯೊಂದು ಕಾಲೇಜು, ವಿಶ್ವವಿದ್ಯಾಲಯವು ವಿದ್ಯಾವಿಷಯಕ್ಕೆ ಮತ್ತು ಆಡಳಿತಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳ ಬಗ್ಗೆ ಮತ್ತು ಅದಕ್ಕೆ ಪೂರಕವಾದ ವಿಷಯಗಳ ಬಗ್ಗೆ ಕಾಲಕಾಲಕ್ಕೆ ಹೊರಡಿಸುವ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

ಅಧ್ಯಾಯ – VIII

ಶಾಸನಗಳು ಮತ್ತು ವಿನಿಯಮಗಳು

52. ಶಾಸನಗಳು.– ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ವಿಶ್ವವಿದ್ಯಾಲಯದ ಶಾಸನಗಳು, ವಿಶ್ವವಿದ್ಯಾಲಯದ ವ್ಯವಹಾರಗಳಿಗೆ ಸಂಬಂಧಪಟ್ಟ ಯಾವುದೇ ವಿಷಯಕ್ಕೆ ಉಪಬಂಧ ಕಲ್ಪಿಸಬಹುದು ಮತ್ತು ವಿಶೇಷವಾಗಿ, ಈ ಮುಂದಿನವುಗಳಿಗೆ ಉಪಬಂಧ ಕಲ್ಪಿಸತಕ್ಕದ್ದು, ಎಂದರೆ:–

(1) ಪ್ರಾಧಿಕಾರಗಳ ರಚನೆ, ಅಧಿಕಾರಗಳು ಮತ್ತು ಕರ್ತವ್ಯಗಳು;

(2) ವಿಶ್ವವಿದ್ಯಾಲಯದ ವಿದ್ಯಾವಿಷಯಕ ಜೀವನವನ್ನು ಉತ್ತಮಗೊಳಿಸಲು ಅವಶ್ಯವಾದ ಅಥವಾ ಅಪೇಕ್ಷಣೀಯವಾದ ಇತರ ನಿಕಾಯಗಳ ಅಥವಾ ಸಮಿತಿಗಳ ರಚನೆ, ಸಂಯೋಜನೆ ಮತ್ತು ಪ್ರಕಾರ್ಯಗಳು;

(3) ಕುಲಪತಿಯವರನ್ನು ಹೊರತುಪಡಿಸಿ ವಿಶ್ವವಿದ್ಯಾಲಯದ ಅಧಿಕಾರಿಗಳ ಪದನಾಮಗಳು, ಅಧಿಕಾರಗಳು, ಪ್ರಕಾರ್ಯಗಳು, ಕರ್ತವ್ಯಗಳು ಮತ್ತು ನೇಮಕಾತಿಯ ರೀತಿ ಮತ್ತು ಆಯ್ಕೆಗಳು ಮತ್ತು ಸೇವೆಯ ನಿಬಂಧನೆಗಳು ಮತ್ತು ಷರತ್ತುಗಳು;

(4) ವಿಶ್ವವಿದ್ಯಾಲಯದ ಬೋಧಕರ ಮತ್ತು ಇತರ ಸಿಬ್ಬಂದಿಗಳ ವರ್ಗೀಕರಣ, ವಿದ್ಯಾರ್ಹತೆ ಮತ್ತು ನೇಮಕಾತಿಯ ರೀತಿ, ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಹಾಗೂ ಕರ್ತವ್ಯಗಳು;

(5) ವಿಶ್ವವಿದ್ಯಾಲಯಗಳ ಫ್ಯಾಕಲ್ಟಿಗಳು, ಇಲಾಖೆಗಳು, ಸಂಶೋಧನಾ ಸಂಸ್ಥೆಗಳು, ಕೇಂದ್ರಗಳು ಮತ್ತು ಇತರ ಘಟಕಗಳ ಸ್ಥಾಪನೆ, ಸಮ್ಮಿಲನ, ಉಪವಿಭಜನೆ ಅಥವಾ ರದ್ಧತಿ;

(6) ವಿಶ್ವವಿದ್ಯಾಲಯದ ಅಧಿಕಾರಿಗಳು, ಬೋಧಕರು ಮತ್ತು ಇತರ ಸಿಬ್ಬಂದಿಗಳ ಪ್ರಯೋಜನಕ್ಕಾಗಿ ವಿಶ್ರಾಂತಿ ವೇತನ ಮತ್ತು ವಿಮಾ ಯೋಜನೆಗಳ ರಚನೆ ಮತ್ತು ಅಂಥ ಯೋಜನೆಗಳ ನಿಯಮಗಳು, ನಿಬಂಧನೆಗಳು ಮತ್ತು ಷರತ್ತುಗಳು;

(7) ಪದವಿ ಮತ್ತು ಡಿಪ್ಲೋಮಾಗಳನ್ನು ಪ್ರದಾನ ಮಾಡಲು ಘಟಿಕೋತ್ಸವಗಳನ್ನು ನಡೆಸುವುದು;

(8) ಗೌರವ ಪದವಿಗಳು ಮತ್ತು ವಿದ್ಯಾವಿಷಯಕ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು ಮತ್ತು ಹಿಂಪಡೆಯುವುದು;

(9) ವಿಶ್ವವಿದ್ಯಾಲಯದಡಿಯಲ್ಲಿ, ನೇಮಕವಾದ ಅಧಿಕಾರಿಗಳು, ಬೋಧಕರು ಮತ್ತು ಇತರ ವ್ಯಕ್ತಿಗಳ ಸೇವಾಷರತ್ತುಗಳು ಸಂದಾಯಮಾಡಬೇಕಾದ ಪರಿಶ್ರಮಧನ ಮತ್ತು ಪ್ರಯಾಣ ಮತ್ತು ದಿನ ಭತ್ಯೆಗಳೂ ಸೇರಿದಂತೆ ಭತ್ಯೆಗಳು;

(10) ಪರೀಕ್ಷಾ ನಿಕಾಯಗಳು ಮತ್ತು ಪರೀಕ್ಷಕರ ನೇಮಕಾತಿಯ ಷರತ್ತುಗಳು ಮತ್ತು ವಿಧಾನ;

(11) ವಿಶ್ವವಿದ್ಯಾಲಯವು ಸ್ಥಾಪಿಸಿದ ಅಥವಾ ನಿರ್ವಹಿಸುವ ಕಾಲೇಜುಗಳು, ಕೇಂದ್ರಗಳು, ವಿಭಾಗಗಳು, ಇಲಾಖೆಗಳು, ವಲಯ ಮತ್ತು ಪ್ರಾದೇಶಿಕ ಸಂಸ್ಥೆಗಳು, ಕೃಷಿ ವಿಜ್ಞಾನ ಕೇಂದ್ರಗಳು ಮತ್ತು ಇತರ ಸಂಸ್ಥೆಗಳ ನಿರ್ವಹಣೆ;

(12) ವಿಶ್ವವಿದ್ಯಾಲಯದ ಅಧಿಕಾರಿಗಳು, ಬೋಧಕರು ಮತ್ತು ಇತರ ಸಿಬ್ಬಂದಿಗಳ ನೇಮಕಾತಿಗಾಗಿ ಆಯ್ಕೆ ಸಮಿತಿಗಳ ರಚನೆ;

(13) ಈ ಅಧಿನಿಯಮದ ಮೂಲಕ ಶಾಸನಗಳ ಉಪಬಂಧ ಕಲ್ಪಿಸಬೇಕಾದ ಇತರ ಎಲ್ಲಾ ವಿಷಯಗಳು.

53. ಶಾಸನಗಳ ರಚನೆ.– (1) ಇನ್ನು ಮುಂದೆ ಉಪಬಂಧಿಸಿದ ರೀತಿಯಲ್ಲಿ ಮಂಡಳಿಯು ಯಾವುದೇ ಶಾಸನವನ್ನು ರಚಿಸಬಹುದು, ತಿದ್ದುಪಡಿ ಮಾಡಬಹುದು ಅಥವಾ ನಿರಸನಗೊಳಿಸಬಹುದು.

(2) ಈ ಅಧಿನಿಯಮದಡಿಯಲ್ಲಿ ರಚಿಸಿದ ಶಾಸನಗಳನ್ನು ಮಂಡಳಿಯು ಪ್ರಸ್ತಾಪಿಸತಕ್ಕದ್ದು ಮತ್ತು ಸರ್ಕಾರದ ಮೂಲಕ ಕುಲಾಧಿಪತಿಯವರಿಗೆ ಅವರ ಅನುಮತಿ ಕೋರಿ ಸಲ್ಲಿಸತಕ್ಕದ್ದು ಮತ್ತು ಕುಲಾಧಿಪತಿಯವರ ಅನುಮತಿ ಪಡೆದ ಮತ್ತು ಸರ್ಕಾರಿ ರಾಜ್ಯಪತ್ರದಲ್ಲಿ ಅದು ಪ್ರಕಟಣೆಯಾದ ತರುವಾಯ ಮಾತ್ರವೇ ಇದು ಜಾರಿಗೆ ಬರತಕ್ಕದ್ದು.

(3) ಈ ಅಧಿನಿಯಮದಡಿಯಲ್ಲಿ ರಚಿಸಲಾದ ಎಲ್ಲಾ ಶಾಸನಗಳು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಗೊಳ್ಳತಕ್ಕದ್ದು.

54. ವಿನಿಯಮಗಳು.- (1) ವಿಶ್ವವಿದ್ಯಾಲಯದ ಪ್ರಾಧಿಕಾರಗಳು ಈ ಅಧಿನಿಯಮಕ್ಕೆ ಮತ್ತು ಶಾಸನಗಳಿಗೆ ಸುಸಂಗತವಾದ ವಿನಿಯಮಗಳನ್ನು,-

(ಎ) ತಮ್ಮ ಸಭೆಗಳ ಕಾರ್ಯ ವಿಧಾನ ಮತ್ತು ಕೋರಂಗಾಗಿ ಅಗತ್ಯವಿರುವ ಸದಸ್ಯರ ಸಂಖ್ಯೆ ನಿಗದಿಪಡಿಸುವುದಕ್ಕಾಗಿ:

(ಬಿ) ಈ ಅಧಿನಿಯಮ ಅಥವಾ ಶಾಸನಗಳ ಪ್ರಕಾರ ವಿನಿಯಮಗಳ ಮೂಲಕ ನಿಯಂತ್ರಿಸಬೇಕಾದ ವಿಷಯಗಳನ್ನು ಉಪಬಂಧಿಸುವುದಕ್ಕಾಗಿ:

(ಸಿ) ಈ ಅಧಿನಿಯಮ ಮತ್ತು ಶಾಸನಗಳಿಂದ ಉಪಬಂಧಿಸಿರದ ಮತ್ತು ಪ್ರಾಧಿಕಾರಗಳಿಗೇ ಪೂರ್ಣವಾಗಿ ಸಂಬಂಧಪಟ್ಟ ಯಾವುದೇ ಇತರ ವಿಷಯಗಳಿಗೆ ಉಪಬಂಧ ಕಲ್ಪಿಸುವುದಕ್ಕಾಗಿ:

- ರಚಿಸಬಹುದು.

(2) ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರವು ರಚಿಸಿದ ವಿನಿಯಮಗಳು, ಈ ಬಗ್ಗೆ ಮಂಡಳಿಯು ಕಾಲದಿಂದ ಕಾಲಕ್ಕೆ ನೀಡುವ ನಿರ್ದೇಶನಗಳಿಗೆ ಒಳಪಟ್ಟಿರತಕ್ಕದ್ದು.

(3) ವಿದ್ಯಾವಿಷಯಕ ಪರಿಷತ್ತು, ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳಿಗೊಳಪಟ್ಟು, ವ್ಯಾಸಂಗ ಕ್ರಮಗಳು, ಪರೀಕ್ಷಾ ಪದ್ಧತಿ, ಶೈಕ್ಷಣಿಕ ಕರ್ತವ್ಯಗಳ ಕಾಲಾನುಕ್ರಮ, ವಿಶ್ವವಿದ್ಯಾಲಯದ ಪದವಿಗಳು ಮತ್ತು ಡಿಪ್ಲೊಮಾಗಳನ್ನು ನೀಡುವುದು ಮತ್ತು ಶಿಕ್ಷಣ ನಿರ್ದೇಶಕರಿಗೆ ಸಂಬಂಧಿಸಿದ ಇತರ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸುವುದಕ್ಕಾಗಿ ವಿನಿಯಮಗಳನ್ನು ರಚಿಸತಕ್ಕದ್ದು.

(4) ವಿದ್ಯಾವಿಷಯಕ ಪರಿಷತ್ತು, ಹಿಂದಿನ ಉಪಪ್ರಕರಣಗಳ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಧಕ್ಕೆಯಾಗದಂತೆ, ವಿನಿಯಮಗಳನ್ನು,-

(ಎ) ಪದವಿಗಳು ಮತ್ತು ಡಿಪ್ಲೊಮಾಗಳನ್ನು ಪ್ರದಾನ ಮಾಡಲು ಘಟಕೋತ್ಸವಗಳನ್ನು ನಡೆಸುವುದಕ್ಕಾಗಿ;

(ಬಿ) ಗೌರವ ಪದವಿಗಳು, ವಿದ್ಯಾ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು, ಪದವಿ ಹಿಂಪಡೆಯುವುದಕ್ಕಾಗಿ;

(ಸಿ) ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ ವಿದ್ಯಾರ್ಥಿ ನಿಲಯಗಳ ಸ್ಥಾಪನೆ ಮತ್ತು ರದ್ಧತಿಗಾಗಿ;

(ಡಿ) ಫೆಲೋಶಿಪ್‌ಗಳು, ಸ್ಕಾಲರ್‌ಶಿಪ್‌ಗಳು, ಸ್ಟೈಪೆಂಡುಗಳು, ಶಿಷ್ಯವೇತನಗಳು, ಪದಕಗಳು ಮತ್ತು ಪ್ರಶಸ್ತಿಗಳನ್ನು ಸ್ಥಾಪಿಸುವುದು ಮತ್ತು ಅವುಗಳನ್ನು ನೀಡುವ ಬಗ್ಗೆ ಷರತ್ತುಗಳಿಗಾಗಿ;

(ಇ) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಪ್ರವೇಶ ಮತ್ತು ಅದರ ಪಟ್ಟಿಯಲ್ಲಿ ಹೆಸರು ಸೇರಿಸುವ ಮತ್ತು ವಿದ್ಯಾರ್ಥಿಗಳಾಗಿ ಮುಂದುವರಿಸುವ ಮತ್ತು ಪಟ್ಟಿಯಿಂದ ವಿದ್ಯಾರ್ಥಿಗಳನ್ನು ಬಿಟ್ಟುಬಿಡುವ ಬಗ್ಗೆ ಷರತ್ತುಗಳು ಮತ್ತು ಪ್ರಕ್ರಿಯೆಗಾಗಿ;

(ಎಫ್) ವಿಶ್ವವಿದ್ಯಾಲಯವು ಚಾರ್ಜು ಮಾಡಬಹುದಾದ ಶುಲ್ಕಕ್ಕಾಗಿ;

(ಜಿ) ವಿಶ್ವವಿದ್ಯಾಲಯದ ಎಲ್ಲಾ ಪದವಿಗಳು, ಡಿಪ್ಲೊಮಾಗಳು ಮತ್ತು ಪ್ರಮಾಣ ಪತ್ರಗಳಿಗಾಗಿ ರಚಿಸಲಾಗುವ ವ್ಯಾಸಂಗಕ್ರಮಗಳಿಗೆ ;

(ಎಚ್) ವಿಶ್ವವಿದ್ಯಾಲಯದ ಪದವಿಗಳು, ಡಿಪ್ಲೊಮಾಗಳು ಅಥವಾ ಇತರ ವ್ಯಾಸಂಗ ಕ್ರಮಗಳು ಮತ್ತು ಪರೀಕ್ಷೆಗಳಿಗೆ ವಿದ್ಯಾರ್ಥಿಗಳು ಪ್ರವೇಶಿಸಲು ಷರತ್ತುಗಳು ಹಾಗೂ ಪದವಿಗಳು ಮತ್ತು ಡಿಪ್ಲೊಮಾಗಳನ್ನು ಪಡೆಯುವುದಕ್ಕಾಗಿ ಅಗತ್ಯವಾದ ಅರ್ಹತೆಗಾಗಿ;

(ಐ) ಪದವಿಗಳು ಮತ್ತು ಇತರ ವಿದ್ಯಾ ಪ್ರಶಸ್ತಿಗಳನ್ನು ಪ್ರದಾನ ಮಾಡುವ ಷರತ್ತುಗಳಿಗಾಗಿ;

(ಜೆ) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ಕಾಪಾಡುವುದಕ್ಕಾಗಿ;

(ಕೆ) ವಿದ್ಯಾರ್ಥಿನಿಯರ ವಸತಿ, ಶಿಸ್ತು ಮತ್ತು ಅವರಿಗೆ ಬೋಧನೆಗೆ ಯಾವುದಾದರೂ ವಿಶೇಷ ಏರ್ಪಾಡುಗಳನ್ನು ಮಾಡುವುದಕ್ಕಾಗಿ ಮತ್ತು ವಿದ್ಯಾರ್ಥಿನಿಯರಿಗಾಗಿಯೇ ವಿಶೇಷ ವ್ಯಾಸಂಗ ಕ್ರಮಗಳಿಗೆ ಉಪಬಂಧಕಲ್ಪಿಸುವುದಕ್ಕಾಗಿ;

(ಎಲ್) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ನಿವಾಸದ ಷರತ್ತುಗಳು ಮತ್ತು ವಿದ್ಯಾರ್ಥಿನಿಲಯಗಳ ನಿವಾಸಿಸುವುದಕ್ಕಾಗಿ ಶುಲ್ಕವನ್ನು ವಿಧಿಸುವುದಕ್ಕಾಗಿ;

(ಎಂ) ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳ ಮಾನ್ಯತೆ ಮತ್ತು ನಿರ್ವಹಣೆಗಾಗಿ;

– ರಚಿಸತಕ್ಕದ್ದು.

ಅಧ್ಯಾಯ – IX

ಸಂಕೀರ್ಣ

55. ಕಾರ್ಯಗಳ ಹಾಗೂ ವ್ಯವಹರಣೆಗಳ ಸಿಂಧುತ್ವದ ಉಳಿಸುವಿಕೆಗಳು.– (1) ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ವ್ಯವಹರಣೆಗಳನ್ನು ಕೇವಲ ಈ ಮುಂದಿನ ಕಾರಣಗಳಿಗಾಗಿ ಪ್ರಶ್ನಿಸತಕ್ಕದ್ದಲ್ಲ, ಎಂದರೆ:–

(i) ಯಾವುದೇ ಪ್ರಾಧಿಕಾರದ ರಚನೆಯಲ್ಲಿ ಯಾವುದೇ ಖಾಲಿಸ್ಥಾನ ಅಥವಾ ದೋಷ ಇರುವುದು, ಅಥವಾ

(ii) ಪ್ರಕರಣದ ಗುಣಾಂಶಗಳಿಗೆ ಬಾಧೆ ಉಂಟುಮಾಡದ ಆ ಕಾರ್ಯ ಅಥವಾ ವ್ಯವಹರಣೆಗಳಲ್ಲಿರುವ ಯಾವುದೇ ದೋಷ ಅಥವಾ ಕ್ರಮಬಾಹಿರತೆ.

56. ವಿದ್ಯಾರ್ಥಿಗಳ ವಾಸಸ್ಥಳ.– ವಿಶ್ವವಿದ್ಯಾಲಯವು ನಿರ್ವಹಿಸುವ ಅಥವಾ ಕುಲಪತಿಯವರು ಅನುಮೋದಿಸಿದ ವಾಸಸ್ಥಳದಲ್ಲಿ ವಿದ್ಯಾರ್ಥಿಗಳು ನಿಯಮಿಸಲಾದಂಥ ಷರತ್ತುಗಳಗೊಳಪಟ್ಟು ವಾಸಿಸತಕ್ಕದ್ದು. ಆದಾಗ್ಯೂ, ವಿಶ್ವವಿದ್ಯಾಲಯದಲ್ಲಿ ಅಂಥ ವಾಸಸ್ಥಳವು ದೊರಕದಿದ್ದಲ್ಲಿ ವಿಶ್ವವಿದ್ಯಾಲಯದ ಕುಲಪತಿಯವರು ಅಥವಾ ಅಧಿಕೃತರಾದ ಒಬ್ಬ ಅಧಿಕಾರಿಯು ವಿದ್ಯಾರ್ಥಿಗಳು ತಮ್ಮ ತಂದೆ ತಾಯಿಯವರೊಂದಿಗೆ ಅಥವಾ ಖಾಸಗಿ ವಾಸಸ್ಥಳಗಳಲ್ಲಿ ವಾಸಿಸಲು ಅನುಮತಿಸಬಹುದು.

57. ವಾರ್ಷಿಕ ವರದಿ.– ವಿಶ್ವವಿದ್ಯಾಲಯದ ವಾರ್ಷಿಕ ವರದಿಯನ್ನು ಕುಲಸಚಿವರು ಅಥವಾ ಕುಲಪತಿಯವರ ನಿರ್ದೇಶನಗಳಡಿಯಲ್ಲಿ ಇತರ ಯಾವೊಬ್ಬ ಅಧಿಕಾರಿಯು ಹಣಕಾಸು ವರ್ಷದ ಮುಕ್ತಾಯದಿಂದ ಆರು ತಿಂಗಳೊಳಗೆ ತಯಾರಿಸತಕ್ಕದ್ದು ಮತ್ತು ಇದನ್ನು ಪರಿಗಣನೆಗೆ

ತೆಗೆದುಕೊಳ್ಳುವ ಸಭೆಯು ನಡೆಯುವುದಕ್ಕಿಂತ ಒಂದು ತಿಂಗಳ ಮೊದಲು ಮಂಡಳಿಯ ಸದಸ್ಯರುಗಳಿಗೆ ಪರಿಚಲನೆ ಮಾಡತಕ್ಕದ್ದು. ಮಂಡಳಿಯು ವಾರ್ಷಿಕ ವರದಿಯ ಪರಿಗಣನೆಯ ತರುವಾಯ ಅದರ ಪ್ರತಿಯನ್ನು ಸರ್ಕಾರದ ಮುಂದಿಡತಕ್ಕದ್ದು, ಅದನ್ನು ವಿಧಾನಮಂಡಲದ ಎರಡೂ ಸದನಗಳ ಮುಂದೆ ಮಂಡಿಸತಕ್ಕದ್ದು.

58. ಅಧಿಕಾರಗಳ ಪ್ರತ್ಯಾಯೋಜನೆ.– ಕುಲಪತಿಯವರು, ಆದೇಶದ ಮೂಲಕ, ಈ ಅಧಿನಿಯಮ ಅಥವಾ ಅದರಡಿಯಲ್ಲಿ ರಚಿಸಲಾಗಿರುವ ಶಾಸನಗಳಡಿಯಲ್ಲಿ ತಾನು ಚಲಾಯಿಸಬಹುದಾದ ಅಧಿಕಾರಗಳನ್ನು ಕುಲಪತಿಯವರು ಸರಿಯಾಗಿದೆಯೆಂದು ಭಾವಿಸಬಹುದಾದಂಥ ಷರತ್ತುಗಳು ಮತ್ತು ಮಿತಿಗಳಿಗೊಳಪಟ್ಟು ಯಾವುದೇ ಪ್ರಾಧಿಕಾರ, ಅಧಿಕಾರಿ, ಕಾಲೇಜುಗಳ ಮುಖ್ಯಸ್ಥರು, ಇಲಾಖೆಗಳು, ಸಂಸ್ಥೆಗಳು ಅಥವಾ ಘಟಕಗಳು ಅಥವಾ ಕಚೇರಿಗೆ ಪ್ರತ್ಯಾಯೋಜಿಸಬಹುದು.

59. ಅಡ್–ಹಾಕ್ ಸಮಿತಿಗಳ ರಚನೆ.– ಈ ಅಧಿನಿಯಮದಲ್ಲಿ ಏನೇ ಇದ್ದರೂ ಮತ್ತು ಈ ಅಧಿನಿಯಮ ಅಥವಾ ಶಾಸನಗಳು ಅಥವಾ ವಿನಿಯಮಗಳ ಉಪಬಂಧಗಳನ್ವಯ ವಿಶ್ವವಿದ್ಯಾಲಯಗಳ ಪ್ರಾಧಿಕಾರಗಳು ಅಥವಾ ನಿಕಾಯಗಳು ರಚನೆಯಾಗುವವರೆಗೆ ಕುಲಾಧಿಪತಿಯವರ ಪೂರ್ವಾನುಮೋದನೆಗೊಳಪಟ್ಟು ಕುಲಪತಿಯವರು, ಈ ಅಧಿನಿಯಮ ಅಥವಾ ಶಾಸನಗಳು ಅಥವಾ ವಿನಿಯಮಗಳಡಿಯಲ್ಲಿನ ಅಂಥ ಪ್ರಾಧಿಕಾರಗಳ ಅಥವಾ ನಿಕಾಯಗಳ ಯಾವುದೇ ಅಧಿಕಾರಗಳನ್ನು ಚಲಾಯಿಸಲು, ಪ್ರಕಾರ್ಯಗಳನ್ನು ನಿರ್ವಹಿಸಲು ಮತ್ತು ಕರ್ತವ್ಯಗಳನ್ನು ಮಾಡಲು ತಾತ್ಕಾಲಿಕವಾಗಿ ಅಡ್–ಹಾಕ್ ಸಮಿತಿಗಳನ್ನು ನೇಮಿಸಬಹುದು.

60. ಪ್ರಾಧಿಕಾರಗಳು ಅಥವಾ ನಿಕಾಯಗಳ ಸ್ಥಾಪನೆಯಲ್ಲಿ ವಿವಾದಗಳು.– ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ಇತರ ನಿಕಾಯದ ಸದಸ್ಯನಾಗಿ ನೇಮಕಾತಿ ಹೊಂದಲು ಅಥವಾ ಸದಸ್ಯನಾಗಲು ಯಾವುದೇ ವ್ಯಕ್ತಿಯ ಅರ್ಹತೆಯ ಬಗ್ಗೆ ಯಾವುದೇ ಪ್ರಶ್ನೆಯು ಉದ್ಭವಿಸಿದಲ್ಲಿ, ಆ ವಿಷಯವನ್ನು ಕುಲಾಧಿಪತಿಯವರಿಗೆ ತೀರ್ಮಾನಕ್ಕಾಗಿ ಕಳುಹಿಸತಕ್ಕದ್ದು ಮತ್ತು ಅದರ ಬಗ್ಗೆ ಅವರ ತೀರ್ಮಾನವೇ ಅಂತಿಮವಾಗಿರತಕ್ಕದ್ದು:

ಪರಂತು, ಯಾವುದೇ ಅಂಥ ತೀರ್ಮಾನವನ್ನು ತೆಗೆದುಕೊಳ್ಳುವ ಮುಂಚೆ, ಕುಲಾಧಿಪತಿಯವರು ಅದರಿಂದ ಬಾಧಿತನಾಗುವ ವ್ಯಕ್ತಿಗೆ ತನ್ನ ಅಹವಾಲು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡತಕ್ಕದ್ದು.

61. ವಿಶ್ವವಿದ್ಯಾಲಯದ ಪುನರವಲೋಕನ ಆಯೋಗದ ನೇಮಕ.- (1) ಕುಲಾಧಿಪತಿಯು, ಪ್ರತಿ ಐದು ವರ್ಷಗಳಿಗೊಮ್ಮೆ ವಿಶ್ವವಿದ್ಯಾಲಯದ ಕಾರ್ಯ ನಿರ್ವಹಣೆಯನ್ನು ಪುನರವಲೋಕಿಸುವುದಕ್ಕಾಗಿ ಮತ್ತು ಶಿಫಾರಸುಗಳನ್ನು ಮಾಡುವುದಕ್ಕಾಗಿ ಒಂದು ಆಯೋಗವನ್ನು ರಚಿಸತಕ್ಕದ್ದು.

(2) ಆಯೋಗವು, ಮೂವರಿಗೆ ಕಡಿಮೆಯಿಲ್ಲದಂತೆ, ಕುಲಾಧಿಪತಿಯವರು ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ನೇಮಿಸಿದ ತೋಟಗಾರಿಕೆ ಕ್ಷೇತ್ರದಲ್ಲಿ ಪ್ರಸಿದ್ಧ ಶಿಕ್ಷಣ ತಜ್ಞರನ್ನು ಒಳಗೊಂಡಿರತಕ್ಕದ್ದು. ಅವರಲ್ಲಿ ಒಬ್ಬರು ಅಧ್ಯಕ್ಷರಾಗತಕ್ಕದ್ದು.

(3) ಸದಸ್ಯರ ನೇಮಕಾತಿಯ ನಿಬಂಧನೆಗಳು ಮತ್ತು ಷರತ್ತುಗಳು, ಕುಲಾಧಿಪತಿಯವರು ನಿರ್ಧರಿಸಬಹುದಾದಂಥವುಗಳು ಆಗಿರತಕ್ಕದ್ದು.

(4) ಆಯೋಗವು ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ ಕುಲಾಧಿಪತಿಯವರಿಗೆ ಮತ್ತು ರಾಜ್ಯ ಸರ್ಕಾರಕ್ಕೆ ಶಿಫಾರಸುಗಳನ್ನು ಮಾಡತಕ್ಕದ್ದು.

(5) ಕುಲಾಧಿಪತಿಯವರು, ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ, ಶಿಫಾರಸ್ಸಿನ ಮೇಲೆ ತಾನು ಸೂಕ್ತವೆಂದು ಭಾವಿಸುವಂಥ ಕ್ರಮವನ್ನು ಕೈಗೊಳ್ಳಬಹುದು.

(6) ರಾಜ್ಯ ಸರ್ಕಾರವು, ಕೈಗೊಂಡ ಕ್ರಮವನ್ನು ವಿವರಿಸುವ ಜ್ಞಾಪನ ಪತ್ರದೊಡನೆ ಶಿಫಾರಸುಗಳ ಒಂದು ಪ್ರತಿಯನ್ನು ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

62. ವಿಶ್ವವಿದ್ಯಾಲಯದ ವ್ಯವಹರಣೆಗಳ ಸಂಬಂಧದಲ್ಲಿ ಹುದ್ದೆಗಳಿಗೆ ನೇಮಕಾತಿ.- (1) ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳಿಗೊಳಪಟ್ಟು ವಿಶ್ವವಿದ್ಯಾಲಯದ ವ್ಯವಹರಣೆಗಳಿಗೆ ಸಂಬಂಧಿಸಿದ ಹುದ್ದೆಗಳಿಗೆ ನೇಮಕಾತಿ ಮತ್ತು ಸೇವೆಗಳನ್ನು ನಿಯಮಿಸಲಾದಂತೆ ಮಂಡಳಿಯ ಪೂರ್ವಾನುಮತಿಯೊಡನೆ ಕುಲಪತಿಯವರು ಮಾಡಬಹುದು:

ಪರಂತು, ಬೋಧಕ ಸಿಬ್ಬಂದಿಯ ಸಹಾಯಕ ಪ್ರಾಧ್ಯಾಪಕರ ಮತ್ತು ಬೋಧಕೇತರ ಸಿಬ್ಬಂದಿಯ 'ಎ' ವೃಂದದ ಸಿಬ್ಬಂದಿಗಳ ವೇತನ ಶ್ರೇಣಿಯ

ದ್ದಕ್ಕಿಂತ ಕಡಿಮೆ ವೇತನಶ್ರೇಣಿಯನ್ನು ಹೊಂದಿರುವ ಹುದ್ದೆಗಳ ನೇಮಕಾತಿಯ ಸಂಬಂಧದಲ್ಲಿ ಮಂಡಳಿಯ ಅಂಥ ಅನುಮೋದನೆಯ ಅವಶ್ಯಕತೆ ಇರತಕ್ಕದ್ದಲ್ಲ.

(2) ಈ ಅಧಿನಿಯಮದಲ್ಲಿ ಏನೇ ಇದ್ದರೂ ಮತ್ತು ಶಾಸನಗಳು ರಚನೆಯಾಗುವ ಅಥವಾ ವಿಶ್ವವಿದ್ಯಾಲಯದ ಪ್ರಾಧಿಕಾರಗಳು ಸ್ಥಾಪನೆಯಾಗುವವರೆಗಿನ ಅವಧಿಗೆ, ವಿಶ್ವವಿದ್ಯಾಲಯದ ವ್ಯವಹರಣೆಗಳ ಸಂಬಂಧದಲ್ಲಿ ಹುದ್ದೆಗಳು ಮತ್ತು ಸೇವೆಗಳಿಗೆ ನೇಮಕಾತಿಗಳನ್ನು, ಕುಲಾಧಿಪತಿಯವರು ಅನುಮೋದಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಕುಲಪತಿಯವರು ಮಾಡಬಹುದು.

63. ತಾತ್ಕಾಲಿಕ ಉಪಬಂಧಗಳು.– ಈ ಅಧಿನಿಯಮದಲ್ಲಿ ಏನೇ ಇದ್ದರೂ, ಕುಲಪತಿಯು ಕುಲಾಧಿಪತಿಯವರ ಪೂರ್ವಾನುಮೋದನೆಯೊಂದಿಗೆ ಈ ಅಧಿನಿಯಮದ ಪ್ರಾರಂಭದಿಂದ ಒಂದು ವರ್ಷದ ಅವಧಿಗಾಗಿ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯದ ಎಲ್ಲಾ ಅಥವಾ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸಬಹುದು ಮತ್ತು ಆ ಉದ್ದೇಶಕ್ಕಾಗಿ ಈ ಅಧಿನಿಯಮದ ಮೂಲಕ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರವು ಅಥವಾ ನಿಕಾಯವು ಚಲಾಯಿಸಬೇಕಾದ ಯಾವುವೇ ಅಧಿಕಾರಗಳನ್ನು ಅಥವಾ ನಿರ್ವಹಿಸಬೇಕಾದ ಯಾವುವೇ ಕರ್ತವ್ಯಗಳನ್ನು ಈ ಅಧಿನಿಯಮದಲ್ಲಿ ಅಥವಾ ಶಾಸನಗಳಲ್ಲಿ ಅಥವಾ ವಿನಿಯಮಗಳಲ್ಲಿ ಉಪಬಂಧಿಸಿದಂತೆ ಅಂಥ ಪ್ರಾಧಿಕಾರವು ಅಥವಾ ನಿಕಾಯವು ಅಸ್ತಿತ್ವಕ್ಕೆ ಬರುವವರೆಗೆ ಚಲಾಯಿಸಬಹುದು ಅಥವಾ ನೆರವೇರಿಸಬಹುದು.

64. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.– ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಿದ ಶಾಸನಗಳು ಅಥವಾ ವಿನಿಯಮಗಳಿಗೆ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ವಿಶ್ವವಿದ್ಯಾಲಯದ ಅಥವಾ ಅದರ ಪ್ರಾಧಿಕಾರಗಳ, ನಿಕಾಯಗಳ ಅಥವಾ ಅಧಿಕಾರಿಗಳ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆ ನಡೆಸಲು ಅವಕಾಶ ಇರತಕ್ಕದ್ದಲ್ಲ ಮತ್ತು ಅವರಿಂದ ಯಾವುದೇ ನಷ್ಟ ಪರಿಹಾರಗಳನ್ನು ಕ್ಲೈಮ್ ಮಾಡತಕ್ಕದ್ದಲ್ಲ.

65. ತೊಂದರೆಗಳ ನಿವಾರಣೆಗೆ ಅಧಿಕಾರ.– (1) ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಥವಾ ನಿಕಾಯದ ಮೊದಲ ರಚನೆಯ ಅಥವಾ ಪುನಾರಚನೆಯ ಸಂಬಂಧದಲ್ಲಿ ಅಥವಾ ಈ ಅಧಿನಿಯಮದ ಉಪಬಂಧ. ಗಳನ್ನು ಜಾರಿಗೊಳಿಸುವ ಸಂಬಂಧದಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ತೊಂದರೆಯ ನಿವಾರಣೆಗಾಗಿ ಅವಶ್ಯಕ ಹಾಗೂ ಸಮಂಜಸವೆಂದು ತನಗೆ ಕಂಡುಬರುವಂಥ ಹಾಗೂ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಐದು ವರ್ಷಗಳು ಮುಕ್ತಾಯವಾದ ತರುವಾಯ ಅಂಥ ಯಾವುದೇ ಅಧಿಸೂಚನೆಯನ್ನು ಹೊರಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಅಧಿಸೂಚನೆಯನ್ನು ಮತ್ತು 8ನೇ ಉಪ–ಪ್ರಕರಣದಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಆದೇಶವನ್ನು ಅದನ್ನು ಹೊರಡಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಿರಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಸದರಿ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ರಾಜ್ಯ ವಿಧಾನಮಂಡಲದ ಯಾವೊಂದು ಸದನವು ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಡು ಮಾಡಿದರೆ, ಅಥವಾ ಆ ಅಧಿಸೂಚನೆಯು ಪರಿಣಾಮಕ್ಕೆ ಬರತಕ್ಕದ್ದಲ್ಲವೆಂದು ನಿರ್ದೇಶಿಸಿದರೆ ಹಾಗೂ ಆ ಮಾರ್ಪಾಡು ಅಥವಾ ನಿರ್ದೇಶನವನ್ನು ಇನ್ನೊಂದು ಸದನವು ಒಪ್ಪಿದರೆ ತದನಂತರ ಅಂಥ ಅಧಿಸೂಚನೆಯು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೀತಿಯಲ್ಲಿ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಯಾವುದೇ ಅಂಥ ಮಾರ್ಪಾಡು ಅಥವಾ ರದ್ಧತಿಯು ಈ ಅಧಿಸೂಚನೆಯ ಅಡಿಯಲ್ಲಿ ಈ ಮುಂಚೆ ಮಾಡಲಾದ ಯಾವುದೇ ಕಾರ್ಯದ ಮಾನ್ಯತೆಗೆ ಬಾಧೆ ಉಂಟುಮಾಡತಕ್ಕದ್ದಲ್ಲ.

66. ಕಾನೂನು ವ್ಯವಹರಣೆ.- ವಿಶ್ವವಿದ್ಯಾಲಯವು ಹೂಡಿದ ಅಥವಾ ಅದರ ವಿರುದ್ಧವಾದ ಎಲ್ಲಾ ದಾವೆಗಳು ಮತ್ತು ಇತರ ಕಾನೂನು ವ್ಯವಹರಣೆಗಳನ್ನು ವಿಶ್ವವಿದ್ಯಾಲಯದ ಪರವಾಗಿ ಕುಲಸಚಿವರು ಅಥವಾ ಕುಲಪತಿಯವರು ಇದರ ಬಗ್ಗೆ ಅಧಿಕಾರ ನೀಡಿದ ಯಾವೊಬ್ಬ ಇತರ ಅಧಿಕಾರಿಯು ಪ್ರಾರಂಭಿಸತಕ್ಕದ್ದು, ಪ್ರಾಸಿಕ್ಯೂಟ್ ಮಾಡತಕ್ಕದ್ದು ಅಥವಾ ಪ್ರತಿರಕ್ಷಿಸತಕ್ಕದ್ದು.

67. ನಿರಸನ ಮತ್ತು ಉಳಿಸುವಿಕೆಗಳು.- (1) ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಅಧ್ಯಾದೇಶ, 2008ನ್ನು (2008ರ ಕರ್ನಾಟಕ ಅಧ್ಯಾದೇಶ 2) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಳಿಸಿದ್ದಾಗ್ಯೂ, ಸದರಿ ಅಧ್ಯಾದೇಶದ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು ಈ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

ಅನುಸೂಚಿ

(2(31)ನೇ ಪ್ರಕರಣವನ್ನು ನೋಡಿ)

I. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು.

1. ತೋಟಗಾರಿಕೆ ಕಾಲೇಜು, ಮೂಡಿಗೆರೆ
2. ಭತ್ತ ಸಂಶೋಧನೆಯ ಮತ್ತು ಕೃಷಿ ವಿಜ್ಞಾನ ಕೇಂದ್ರದ ಪ್ರದೇಶಗಳನ್ನು ಹೊರತುಪಡಿಸಿ ವಲಯ ಕೃಷಿ ಸಂಶೋಧನಾ ಕೇಂದ್ರ, ಮೂಡಿಗೆರೆ
3. ತೆಂಗು ಸಂಶೋಧನಾ ಕೇಂದ್ರ,, ಅರಸೀಕೆರೆ
4. ಕೃಷಿ ವಿಜ್ಞಾನ ಕೇಂದ್ರ ಪ್ರದೇಶವನ್ನು ಹೊರತುಪಡಿಸಿ ವಲಯ ಕೃಷಿ ಸಂಶೋಧನಾ ಕೇಂದ್ರ, ಹಿರಿಯೂರು
5. ಗೋಡಂಬಿ ಸಂಶೋಧನಾ ಕೇಂದ್ರ, ಉಲ್ಲಾಳ
6. ಅಡಿಕೆ ಸಂಶೋಧನಾ ಕೇಂದ್ರ, ಸೀಬಿನಕೆರೆ ತೋಟಗಾರಿಕೆ ಇಲಾಖೆಯ ಫಾರಂ, ತೀರ್ಥಹಳ್ಳಿ

II. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಧಾರವಾಡ.

1. ಕಿತ್ತೂರು ರಾಣಿ ಚೆನ್ನಮ್ಮ ತೋಟಗಾರಿಕೆ ಕಾಲೇಜು, ಅರಭಾವಿ
2. ತೋಟಗಾರಿಕೆ ಸಂಶೋಧನಾ ಕೇಂದ್ರ, ಕಣಬರಗಿ
3. ತೋಟಗಾರಿಕೆ ಸಂಶೋಧನಾ ಕೇಂದ್ರ, ಕುಂಬಾಪುರ
4. ತೋಟಗಾರಿಕೆ ಸಂಶೋಧನಾ ಕೇಂದ್ರ, ತಿಡಗುಂಡಿ
5. ಮೆಣಸು ಸಂಶೋಧನಾ ಕೇಂದ್ರ, ಶಿರಸಿ
6. ಮುಸುಕಿನ ಜೋಳ ಬೆಳೆದ ಪ್ರದೇಶವನ್ನು ಹೊರತುಪಡಿಸಿ ಮೆಣಸಿನಕಾಯಿ ಸಂಶೋಧನಾ ಕೇಂದ್ರ, ದೇವಿ ಹೊಸೂರು
7. ಬೀದರ್ ತೋಟಗಾರಿಕೆ ಕಾಲೇಜು, ಹೊಸ ಪ್ರದೇಶವನ್ನು ಸ್ವಾಧೀನ ಪಡಿಸಿಕೊಳ್ಳುವವರೆಗೆ ಮತ್ತು ಮೂಲಭೂತ ಸೌಲಭ್ಯಗಳನ್ನು ಒದಗಿಸಿ ಸ್ಥಾಪಿಸುವವರೆಗೆ ಜನವಾಡ ಸಂಶೋಧನಾ ಕೇಂದ್ರದಲ್ಲಿ ಕಾರ್ಯನಿರ್ವಹಿಸತಕ್ಕದ್ದು.
8. ಬಾಗಲಕೋಟೆ ತೋಟಗಾರಿಕೆ ಕಾಲೇಜು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ತೋಟಗಾರಿಕೆ ವಿಶ್ವವಿದ್ಯಾಲಯವನ್ನು ಬಾಗಲಕೋಟೆಯಲ್ಲಿ ಸ್ಥಾಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಹಾಗೆ ಮಾಡುವುದಕ್ಕಾಗಿ ಈ ಮುಂದಿನವುಗಳಿಗೆ ಉಪಬಂಧ ಕಲ್ಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ, ಎಂದರೆ : –

(i) ತೋಟಗಾರಿಕೆ ಮತ್ತು ಸಂಬಂಧಿಸಿದ ವಿಜ್ಞಾನ ವಿಷಯದಲ್ಲಿ ಬೋಧನೆ, ತರಬೇತಿ ಮತ್ತು ಸಂಶೋಧನೆ ಹಾಗೂ ತೋಟಗಾರಿಕೆ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಪದವಿಗಳು, ಡಿಪ್ಲೋಮಾ ಸರ್ಟಿಫಿಕೇಟ್ ಮತ್ತು ಇತರ ಶೈಕ್ಷಣಿಕ ಪದವಿ ನೀಡುವುದು;

(ii) ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಪ್ರಸ್ತುತ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿಕಾರ ವ್ಯಾಪ್ತಿಯಲ್ಲಿರುವ ಕೆಲವು ಕಾಲೇಜುಗಳು, ಸಂಶೋಧನಾ ಕೇಂದ್ರಗಳು, ಕೃಷಿ ವಿಜ್ಞಾನ ಕೇಂದ್ರಗಳು ಮತ್ತು ಇತರ ಸಂಸ್ಥೆಗಳನ್ನು ಹಾಗೂ ಇದಕ್ಕೆ ಸಂಬಂಧಪಟ್ಟ ವಿಶ್ವವಿದ್ಯಾಲಯದ ಸಿಬ್ಬಂದಿಯನ್ನು ವರ್ಗಾಯಿಸುವುದು;

(iii) ವಿಶ್ವವಿದ್ಯಾಲಯದ ಕುಲಪತಿಗಳು ಮತ್ತು ಇತರ ಅಧಿಕಾರಿಗಳನ್ನು ನೇಮಿಸುವುದು;

(iv) ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿ, ವಿದ್ಯಾವಿಷಯಕ ಪರಿಷತ್ತು, ಸಂಶೋಧನಾ ಪರಿಷತ್ತು, ಹಣಕಾಸು ಸಮಿತಿ, ಅಧ್ಯಯನ ಮಂಡಳಿ ಮತ್ತು ವಿಶ್ವವಿದ್ಯಾಲಯದ ಇತರ ನಿಕಾಯಗಳನ್ನು ರಚಿಸುವುದು ಹಾಗೂ ಅವುಗಳ ಅಧಿಕಾರ ಮತ್ತು ಪ್ರಕಾರ್ಯಗಳನ್ನು ನೇಮಿಸುವುದು;

(v) ವಿಶ್ವವಿದ್ಯಾಲಯ ಅಧಿಕಾರ ವ್ಯಾಪ್ತಿಯಲ್ಲಿ ಅಧ್ಯಯನಕ್ಕಾಗಿ ಕಾಲೇಜುಗಳನ್ನು ಸಂಯೋಜಿಸುವುದು ಮತ್ತು ಸಂಸ್ಥೆಗಳನ್ನು ಮಾನ್ಯ ಮಾಡುವುದು;

(vi) ವಿಶ್ವವಿದ್ಯಾಲಯದ ಪುನರೀಕ್ಷಣಾ ಆಯೋಗವನ್ನು ನೇಮಿಸುವುದು.

ವಿಷಯವು ತುರ್ತು ಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ರಾಜ್ಯ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿ ಇಲ್ಲದಿದ್ದುದರಿಂದ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಅಧ್ಯಾದೇಶ, 2008ನ್ನು (2008ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 2) ಪ್ರಖ್ಯಾಪಿಸಲಾಯಿತು.

ಸದರಿ ಅಧ್ಯಾದೇಶದ ಬದಲಾಗಿ ಈ ವಿಧೇಯಕವನ್ನು ತರಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಕ್ರಮದಿಂದಾಗಿ ವಾರ್ಷಿಕ ಹತ್ತು ಕೋಟಿ ರೂಪಾಯಿಗಳ ಹೆಚ್ಚಿನ ವೆಚ್ಚ ಉಂಟಾಗುತ್ತದೆ.

ಕರ್ನಾಟಕ ವಿಧಾನ ಸಭೆಯ ನಡವಳಿಗಳು ಮತ್ತು ಕಾರ್ಯವಿಧಾನಗಳ ನಿಯಮಗಳ ನಿಯಮ 80 (1)ರ ಅಡಿಯಲ್ಲಿ ಅಗತ್ಯಪಡಿಸಿರುವಂತೆ ವಿವರಣಾತ್ಮಕ ಹೇಳಿಕೆ

ತೋಟಗಾರಿಕೆ ವಿಶ್ವವಿದ್ಯಾಲಯವನ್ನು ಬಾಗಲಕೋಟೆಯಲ್ಲಿ ಸ್ಥಾಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಹಾಗೆ ಮಾಡುವುದಕ್ಕಾಗಿ ಈ ಮುಂದಿನವುಗಳಿಗೆ ಉಪಬಂಧ ಕಲ್ಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ, ಎಂದರೆ : –

i ತೋಟಗಾರಿಕೆ ಮತ್ತು ಸಂಬಂಧಿಸಿದ ವಿಜ್ಞಾನ ವಿಷಯದಲ್ಲಿ ಬೋಧನೆ, ತರಬೇತಿ ಮತ್ತು ಸಂಶೋಧನೆ ಹಾಗೂ ತೋಟಗಾರಿಕೆ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಪದವಿಗಳು, ಡಿಪ್ಲೋಮಾ ಸರ್ಟಿಫಿಕೇಟ್ ಮತ್ತು ಇತರ ಶೈಕ್ಷಣಿಕ ಪದವಿ ನೀಡುವುದು;

ii ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಪ್ರಸ್ತುತ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿಕಾರ ವ್ಯಾಪ್ತಿಯಲ್ಲಿರುವ ಕೆಲವು ಕಾಲೇಜುಗಳು, ಸಂಶೋಧನಾ ಕೇಂದ್ರಗಳು, ಕೃಷಿ ವಿಜ್ಞಾನ ಕೇಂದ್ರಗಳು ಮತ್ತು ಇತರ ಸಂಸ್ಥೆಗಳನ್ನು ಹಾಗೂ ಇದಕ್ಕೆ ಸಂಬಂಧಪಟ್ಟ ವಿಶ್ವವಿದ್ಯಾಲಯದ ಸಿಬ್ಬಂದಿಯನ್ನು ವರ್ಗಾಯಿಸುವುದು;

iii ವಿಶ್ವವಿದ್ಯಾಲಯದ ಕುಲಪತಿಗಳು ಮತ್ತು ಇತರ ಅಧಿಕಾರಿಗಳನ್ನು ನೇಮಿಸುವುದು;

iv ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿ, ವಿದ್ಯಾವಿಷಯಕ ಪರಿಷತ್ತು, ಸಂಶೋಧನಾ ಪರಿಷತ್ತು, ಹಣಕಾಸು ಸಮಿತಿ, ಅಧ್ಯಯನ ಮಂಡಳಿ ಮತ್ತು ವಿಶ್ವವಿದ್ಯಾಲಯದ ಇತರ ನಿಕಾಯಗಳನ್ನು ರಚಿಸುವುದು ಹಾಗೂ ಅವುಗಳ ಅಧಿಕಾರ ಮತ್ತು ಪ್ರಕಾರ್ಯಗಳನ್ನು ನೇಮಿಸುವುದು;

v ವಿಶ್ವವಿದ್ಯಾಲಯ ಅಧಿಕಾರ ವ್ಯಾಪ್ತಿಯಲ್ಲಿ ಅಧ್ಯಯನಕ್ಕಾಗಿ ಕಾಲೇಜುಗಳನ್ನು ಸಂಯೋಜಿಸುವುದು ಮತ್ತು ಸಂಸ್ಥೆಗಳನ್ನು ಮಾನ್ಯ ಮಾಡುವುದು;

vi ವಿಶ್ವವಿದ್ಯಾಲಯದ ಪುನರೀಕ್ಷಣಾ ಆಯೋಗವನ್ನು ನೇಮಿಸುವುದು.

ವಿಷಯವು ತುರ್ತು ಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ರಾಜ್ಯ ವಿಧಾನ ಮಂಡಲದ ಉಭಯ ಸದನಗಳು ಅಧಿವೇಶನದಲ್ಲಿ ಇಲ್ಲದಿದ್ದುದರಿಂದ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಅಧ್ಯಾದೇಶ, 2008ನ್ನು (2008ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 2) ಪ್ರಖ್ಯಾಪಿಸಲಾಯಿತು.

ಉಮೇಶ್ ವಿ. ಕತ್ತಿ
ತೋಟಗಾರಿಕೆ ಸಚಿವರು

ಎಸ್.ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಅನುಬಂಧ – 14

ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನಸಭೆ
ಮೂರನೇ ಅಧಿವೇಶನ

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ, 2009
(2009ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 33)

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ನ್ನು (2001ರ ಕರ್ನಾಟಕ ಅಧಿನಿಯಮ 29) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ***ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ಅಧಿನಿಯಮ, 2009*** ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. 3ನೇ ಪ್ರಕರಣದ ತಿದ್ದುಪಡಿ.- ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000ದ (2001ರ ಕರ್ನಾಟಕ ಅಧಿನಿಯಮ 29) (ಇದರಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 3ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ,-

(1) (ಡಿ) ಖಂಡದಲ್ಲಿ, "ಚಿತ್ರದುರ್ಗ, ದಾವಣಗೆರೆ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(2) (1ಬಿ) ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(1ಸಿ) ದಾವಣಗೆರೆಯಲ್ಲಿ ಕೇಂದ್ರ ಕಾರ್ಯ ಸ್ಥಾನವನ್ನು ಹೊಂದಿದ್ದು ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಗಳ ಅಧಿಕಾರ ಕ್ಷೇತ್ರ ವ್ಯಾಪ್ತಿಯನ್ನು ಹೊಂದಿರುವ ದಾವಣಗೆರೆ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸತಕ್ಕದ್ದು."

3. 5ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 5ನೇ ಪ್ರಕರಣದಲ್ಲಿ (3)ನೇ ಉಪಪ್ರಕರಣದ ತರುವಾಯ ಈ ಮುಂದಿನ ಉಪ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:-

"(4) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ಅಧಿನಿಯಮ, 2009ರ ಪ್ರಾರಂಭದ ದಿನಾಂಕಕ್ಕೆ ಮೊದಲು ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಸ್ಥಾಪನೆಗೊಂಡ ಯಾವುದೇ ಕಾಲೇಜು ಅಥವಾ ಶೈಕ್ಷಣಿಕ ಸಂಸ್ಥೆಯು, ಕುವೆಂಪು ವಿಶ್ವವಿದ್ಯಾನಿಲಯದಿಂದ ಅನುಭವಿ ಸುತ್ತಿರುವ ಯಾವುದೇ ವಿಶೇಷಾಧಿಕಾರವನ್ನು ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಹಿಂತೆಗೆದುಕೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಕುವೆಂಪು ವಿಶ್ವವಿದ್ಯಾನಿಲಯದ ವಿಶೇಷಾಧಿಕಾರಗಳಿಗೆ ಈ ಹಿಂದೆ ಪ್ರವೇಶ ಪಡೆದುಕೊಂಡಿದ್ದ ಅಥವಾ ಸಂಯೋಜಿತವಾಗಿದ್ದ, ಎಲ್ಲ ಅಂಥ ಕಾಲೇಜು ಗಳು ಅಥವಾ ಶೈಕ್ಷಣಿಕ ಸಂಸ್ಥೆಗಳು ದಾವಣಗೆರೆ ವಿಶ್ವವಿದ್ಯಾನಿಲಯದ ವಿಶೇಷಾಧಿಕಾರಗಳಿಗೆ ಪ್ರವೇಶ ಪಡೆದುಕೊಂಡಿವೆ ಎಂದು ಅಥವಾ ಅದಕ್ಕೆ ಸಂಯೋಜಿತವಾಗಿವೆ ಎಂದು ಭಾವಿಸತಕ್ಕದ್ದು."

4. 14ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 14ನೇ ಪ್ರಕರಣದಲ್ಲಿ, (4)ನೇ ಉಪಪ್ರಕರಣದ ನಾಲ್ಕನೇ ಪರಂತುಕದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತೂ ಪರಂತು, ಈ ಪ್ರಕರಣದಲ್ಲಿ ವಿರುದ್ಧವಾದುದು ಏನೇ ಇದ್ದರೂ, ರಾಜ್ಯ ಸರ್ಕಾರವು, ತಾನು ನಿರ್ದಿಷ್ಟಪಡಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು ದಾವಣಗೆರೆ ವಿಶ್ವವಿದ್ಯಾನಿಲ ಯದ ಪ್ರಥಮ ಕುಲಪತಿಯವರನ್ನು ನೇಮಕಮಾಡತಕ್ಕದ್ದು."

5. ವಿಶೇಷಾಧಿಕಾರಿಯ ಅಧಿಕಾರಗಳು.- ದಾವಣಗೆರೆ ವಿಶ್ವವಿದ್ಯಾನಿಲಯದ ಸ್ಥಾಪನೆಗಾಗಿ ಕ್ರಮ ಕೈಗೊಳ್ಳುವ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ನೇಮಕಮಾಡಿದ ವಿಶೇಷಾಧಿಕಾರಿಯು, ಪ್ರಥಮ ಕುಲಪತಿಯವರ ನೇಮಕವಾಗುವವರೆಗೆ, ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ವಿಶ್ವವಿದ್ಯಾನಿಲಯದ ಮತ್ತು ಕುಲಪತಿಯವರ ಅಧಿಕಾರಗಳನ್ನು ಚಲಾಯಿ ಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

6. ಪ್ರಥಮ ಕುಲಪತಿಯವರ ಕರ್ತವ್ಯಗಳು.- (1) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ಅಧಿನಿಯಮ, 2009ರ ಪ್ರಾರಂಭದಿಂದ ಆರು ತಿಂಗಳುಗಳೊಳಗೆ ಅಥವಾ ಕುಲಾಧಿಪತಿಯವರು ನಿರ್ದೇಶಿಸಬಹುದಾದಂತೆ ಒಂದು ವರ್ಷಕ್ಕೆ ಮೀರದಂಥ ದೀರ್ಘ ಅವಧಿಯೊಳಗೆ, ದಾವಣಗೆರೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್, ವಿದ್ಯಾವಿಷಯಕ ಪರಿಷತ್ತು ಮತ್ತು ಇತರ ಪ್ರಾಧಿಕಾರಗಳ ರಚನೆಗಾಗಿ ಏರ್ಪಾಡುಗಳನ್ನು ಮಾಡುವುದು ಪ್ರಥಮ ಕುಲಪತಿಯವರ ಕರ್ತವ್ಯವಾಗಿರತಕ್ಕದ್ದು.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ರಚಿತವಾದ ಪ್ರಾಧಿಕಾರಗಳು, ಈ ಸಂಬಂಧದಲ್ಲಿ ಕುಲಾಧಿಪತಿಯವರು ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಂದು ತಮ್ಮ ಪ್ರಕಾರ್ಯಗಳನ್ನು ಚಲಾಯಿಸಲು ಪ್ರಾರಂಭಿಸತಕ್ಕದ್ದು.

7. ತಾತ್ಕಾಲಿಕ ಉಪಬಂಧಗಳು.- (1) ತಿದ್ದುಪಡಿ ಅಧಿನಿಯಮದ ಮೂಲಕ ತಿದ್ದುಪಡಿಯಾದ ಮೂಲ ಅಧಿನಿಯಮದಲ್ಲಿ ಏನೇ ಇದ್ದರೂ, ಪ್ರಥಮ ಕುಲಪತಿಯವರು, ಕುಲಾಧಿಪತಿಯವರ ಪೂರ್ವಾನುಮೋದನೆಯೊಂದಿಗೆ ಈ ತಿದ್ದುಪಡಿ ಅಧಿನಿಯಮದ ಮೂಲಕ ತಿದ್ದುಪಡಿಯಾದ ಮೂಲ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ, ದಾವಣಗೆರೆ ವಿಶ್ವವಿದ್ಯಾನಿಲಯದ ಎಲ್ಲಾ ಅಥವಾ ಯಾವುವೇ ಪ್ರಕಾರ್ಯಗಳನ್ನು ನಿರ್ವಹಿಸಬಹುದು ಮತ್ತು ಆ ಉದ್ದೇಶಕ್ಕಾಗಿ ತಿದ್ದುಪಡಿ ಅಧಿನಿಯಮದ ಮೂಲಕ ತಿದ್ದುಪಡಿಯಾದ ಮೂಲ ಅಧಿನಿಯಮದಲ್ಲಿ ಉಪಬಂಧಿಸಲಾದಂತೆ ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರವು, ಚಲಾಯಿಸಬೇಕಾಗಿದ್ದ ಅಥವಾ ನಿರ್ವಹಿಸಬೇಕಾಗಿದ್ದ ಯಾವುವೇ ಅಧಿಕಾರವನ್ನು ಅಥವಾ ಕರ್ತವ್ಯವನ್ನು, ತಿದ್ದುಪಡಿ ಅಧಿನಿಯಮದ ಮೂಲಕ

ತಿದ್ದುಪಡಿಯಾದ ಮೂಲ ಅಧಿನಿಯಮದಲ್ಲಿ ಉಪಬಂಧಿಸಿರುವಂತೆ ಅದು ಅಸ್ತಿತ್ವಕ್ಕೆ ಬರುವವರೆಗೆ, ಚಲಾಯಿಸಬಹುದು ಅಥವಾ ನಿರ್ವಹಿಸಬಹುದು.

(2) ಮೂಲ ಅಧಿನಿಯಮದ 5ನೇ ಪ್ರಕರಣದ ಅಡಿಯಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ ಸಂಯೋಜಿಸಲಾದ ಕಾಲೇಜುಗಳಿಗೆ ಅಥವಾ ಇತರ ಶಿಕ್ಷಣ ಸಂಸ್ಥೆಗಳಿಗೆ ಅನ್ವಯವಾಗತಕ್ಕ ಕುವೆಂಪು ವಿಶ್ವವಿದ್ಯಾನಿಲಯವು ರಚಿಸಿದ ಎಲ್ಲ ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಮತ್ತು ನಿಯಮಗಳನ್ನು ದಾವಣಗೆರೆ ವಿಶ್ವವಿದ್ಯಾನಿಲಯವು ರಚಿಸಿದ ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಮತ್ತು ನಿಯಮಗಳೆಂದು ಭಾವಿಸತಕ್ಕದ್ದು ಮತ್ತು ಅವು ದಾವಣಗೆರೆ ವಿಶ್ವವಿದ್ಯಾನಿಲಯವು ತನ್ನದೇ ಆದ ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಅಥವಾ ನಿಯಮಗಳನ್ನು ರಚಿಸುವವರೆಗೆ ಹಾಗೆಯೇ ಮುಂದುವರಿಯತಕ್ಕದ್ದು:

ಪರಂತು, ಕುಲಪತಿಯವರು, ಕುಲಾಧಿಪತಿಯವರ ಅನುಮೋದನೆಯೊಡನೆ ತಾವು ಅವಶ್ಯಕವೆಂದು ಪರಿಗಣಿಸಬಹುದಾದಂಥ ಮಾರ್ಪಾಡುಗಳನ್ನು ಅಥವಾ ಅಳವಡಿಕೆಗಳನ್ನು ಅದರಲ್ಲಿ ಮಾಡಬಹುದು.

8. ಕೆಲವು ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಉಳಿಸುವಿಕೆ.- ತಿದ್ದುಪಡಿ ಅಧಿನಿಯಮದ ಮೂಲಕ ತಿದ್ದುಪಡಿಯಾದ ಮೂಲ ಅಧಿನಿಯಮದಲ್ಲಿ ಅಥವಾ ತಿದ್ದುಪಡಿ ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ ಅದರ ಅಡಿಯಲ್ಲಿ ರಚಿಸಿದ ಪರಿನಿಯಮಗಳಲ್ಲಿ, ಆರ್ಡಿನೆನ್ಸ್‌ಗಳಲ್ಲಿ, ವಿನಿಯಮಗಳಲ್ಲಿ ಅಥವಾ ನಿಯಮಗಳಲ್ಲಿ ಏನೇ ಇದ್ದರೂ,-

(ಎ) ಜಾರಿಯಲ್ಲಿರುವ ಪರಿನಿಯಮಗಳಿಗೆ, ಆರ್ಡಿನೆನ್ಸ್‌ಗಳಿಗೆ, ವಿನಿಯಮಗಳಿಗೆ ಅಥವಾ ನಿಯಮಗಳಿಗೆ ಅನುಸಾರವಾಗಿ, ಕುವೆಂಪು ವಿಶ್ವವಿದ್ಯಾನಿಲಯದ ಪದವಿಗಾಗಿ ವ್ಯಾಸಂಗ ಮಾಡುತ್ತಿರುವ ಯಾವೊಬ್ಬ ವಿದ್ಯಾರ್ಥಿಯು, ದಾವಣಗೆರೆ ವಿಶ್ವವಿದ್ಯಾನಿಲಯವು ಅಂಥ ಪರೀಕ್ಷೆಯನ್ನು ವ್ಯವಸ್ಥೆಗೊಳಿಸುವವರೆಗೆ, ಕುವೆಂಪು ವಿಶ್ವವಿದ್ಯಾನಿಲಯದ ಪರೀಕ್ಷೆಗೆ ಪ್ರವೇಶ ಪಡೆಯತಕ್ಕದ್ದು ಮತ್ತು ಅಂಥ ಪರೀಕ್ಷೆಯ ಫಲಿತಾಂಶದ ಆಧಾರದ ಮೇಲೆ ಅವನು ಅರ್ಹನಾಗುವ ಪದವಿ ಅಥವಾ ಡಿಪ್ಲೋಮಾವನ್ನು ಅವನಿಗೆ ಪ್ರದಾನ ಮಾಡತಕ್ಕದ್ದು.

(ಬಿ) ಕುವೆಂಪು ವಿಶ್ವವಿದ್ಯಾನಿಲಯವು ಯಾವುದೇ ಪರೀಕ್ಷೆಯನ್ನು ನಡೆಸಿದ್ದು, ಅದರ ಫಲಿತಾಂಶವು ಪ್ರಕಟವಾಗಿ ಅದಕ್ಕೆ ಸಂಬಂಧಪಟ್ಟ ಪದವಿ ಅಥವಾ ಡಿಪ್ಲೋಮಾವನ್ನು ಪ್ರದಾನ ಮಾಡಿರದಿದ್ದರೆ ಅಥವಾ ನೀಡಿರದಿದ್ದರೆ ಅಥವಾ ಅಂಥ ಯಾವುದೇ ಪರೀಕ್ಷೆಯ ಫಲಿತಾಂಶವನ್ನು ಕುವೆಂಪು ವಿಶ್ವವಿದ್ಯಾ ನಿಲಯವು ಪ್ರಕಟಿಸಿರದಿದ್ದರೆ, ಆಗ ಅಂಥ ಪರೀಕ್ಷೆಯನ್ನು ಕುವೆಂಪು ವಿಶ್ವವಿದ್ಯಾನಿಲಯವು ನಡೆಸಿದೆ ಎಂದು ಭಾವಿಸತಕ್ಕದ್ದು.

9. **ತೊಂದರೆಗಳ ನಿವಾರಣೆ.-** ತಿದ್ದುಪಡಿ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ತೊಂದರೆಯನ್ನು ನಿವಾರಿಸುವ ಉದ್ದೇಶಕ್ಕಾಗಿ ಅವಶ್ಯ ವೆಂದು ಅಥವಾ ಸೂಕ್ತವೆಂದು ತನಗೆ ಕಂಡುಬರಬಹುದಾದಂಥ ಉಪಬಂಧ ವನ್ನು ಸರ್ಕಾರಿ ರಾಜ್ಯ ಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ ರಚಿಸಬಹುದು:

ಪರಂತು, ಈ ತಿದ್ದುಪಡಿ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳ ಅವಧಿ ಮುಕ್ತಾಯವಾದ ತರುವಾಯ ಅಂಥ ಯಾವ ಆದೇಶವನ್ನೂ ಮಾಡತಕ್ಕದ್ದಲ್ಲ.

ಉದ್ದೇಶ ಮತ್ತು ಕಾರಣಗಳ ಹೇಳಿಕೆ

ಉನ್ನತ ಶಿಕ್ಷಣ ಸೌಲಭ್ಯವನ್ನು ಮತ್ತಷ್ಟು ವಿಸ್ತರಿಸುವುದಕ್ಕಾಗಿ ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ ಅಧಿಕಾರ ಕ್ಷೇತ್ರ ವ್ಯಾಪ್ತಿಯಿರುವಂತೆ ವಿದ್ಯಾರ್ಥಿಗಳಿಗೆ ಅನುಕೂಲವನ್ನು ಕಲ್ಪಿಸುವುದಕ್ಕಾಗಿ ದಾವಣಗೆರೆಯನ್ನು ಕೇಂದ್ರ ಕಾರ್ಯ ಸ್ಥಾನವಾಗಿ ಉಳ್ಳ ಒಂದು ಪ್ರತ್ಯೇಕ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವುದು ಅವಶ್ಯ ಮತ್ತು ಯುಕ್ತವೆಂದು ಪರಿಗಣಿಸಲಾಗಿದೆ. ಬದಲಾದ ಸನ್ನಿವೇಶಗಳ ಹಿನ್ನೆಲೆಯಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯದ ಅಧಿಕಾರ ಕ್ಷೇತ್ರ ವ್ಯಾಪ್ತಿಯನ್ನು ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳಿಗೆ ಸೀಮಿತಗೊಳಿಸಿ, ಪುನರ್ ನಿಗದಿಪಡಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದಾಗಿ 2009-10ನೇ ವರ್ಷದಲ್ಲಿ ಸುಮಾರು ಹತ್ತು ಕೋಟಿ ರೂಪಾಯಿಗಳ ವೆಚ್ಚ ಉಂಟಾಗುತ್ತದೆ.

ಅರವಿಂದ ಲಿಂಬಾವಳಿ
ಉನ್ನತ ಶಿಕ್ಷಣ ಸಚಿವರು

ಎಸ್.ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಅನುಬಂಧ

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000ರ (2001ರ ಕರ್ನಾಟಕ ಅಧಿನಿಯಮ 29) ಉದ್ಧೃತ ಭಾಗಗಳು

XX XX XX

3. ವಿಶ್ವವಿದ್ಯಾನಿಲಯಗಳ ಸ್ಥಾಪನೆ ಮತ್ತು ನಿಗಮನ.- (1) 1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮದ 3ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾನಿಲಯಗಳನ್ನು, ಇದರಲ್ಲಿ ಇನ್ನು ಮುಂದೆ ಉಪಬಂಧಿಸಲಾದಂತೆ, ಅವುಗಳ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯೊಡನೆ, ಈ ಅಧಿನಿಯಮದ ಅಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾನಿಲಯಗಳೆಂದು ಭಾವಿಸತಕ್ಕದ್ದು, ಎಂದರೆ:-

(ಎ) ಬೆಂಗಳೂರಿನಲ್ಲಿ ಕೇಂದ್ರ ಕಾರ್ಯ ಸ್ಥಾನವನ್ನು ಹೊಂದಿದ ಮತ್ತು ಬೆಂಗಳೂರು ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಕೋಲಾರ ಜಿಲ್ಲೆಗಳ ಪ್ರದೇಶದ ಮೇಲೆ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಬೆಂಗಳೂರು ವಿಶ್ವವಿದ್ಯಾನಿಲಯ;

(ಬಿ) ಗುಲಬರ್ಗಾದಲ್ಲಿ ಕೇಂದ್ರ ಕಾರ್ಯ ಸ್ಥಾನವನ್ನು ಹೊಂದಿದ ಮತ್ತು ಬಳ್ಳಾರಿ, ಬೀದರ್, ಗುಲಬರ್ಗಾ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳ ಪ್ರದೇಶದ ಮೇಲೆ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಗುಲಬರ್ಗಾ ವಿಶ್ವವಿದ್ಯಾನಿಲಯ;

(ಸಿ) ಧಾರವಾಡದಲ್ಲಿ ಕೇಂದ್ರ ಕಾರ್ಯ ಸ್ಥಾನವನ್ನು ಹೊಂದಿದ ಮತ್ತು ಬಾಗಲಕೋಟೆ, ಬೆಳಗಾವಿ, ವಿಜಾಪುರ, ಧಾರವಾಡ, ಗದಗ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಪ್ರದೇಶದ ಮೇಲೆ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಕರ್ನಾಟಕ ವಿಶ್ವವಿದ್ಯಾನಿಲಯ;

(ಡಿ) ಶಂಕರಘಟ್ಟದಲ್ಲಿ ಕೇಂದ್ರ ಕಾರ್ಯ ಸ್ಥಾನವನ್ನು ಹೊಂದಿದ ಮತ್ತು ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ ಮತ್ತು

ಶಿವಮೊಗ್ಗ ಜಿಲ್ಲೆಗಳ ಪ್ರದೇಶದ ಮೇಲೆ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಕುವೆಂಪು ವಿಶ್ವವಿದ್ಯಾನಿಲಯ;

(ಇ) ಮಂಗಳೂರು ತಾಲ್ಲೂಕಿನ ಕೊಣಾಜೆಯಲ್ಲಿ ಕೇಂದ್ರ ಕಾರ್ಯ ಸ್ಥಾನವನ್ನು ಹೊಂದಿದ ಮತ್ತು ದಕ್ಷಿಣ ಕನ್ನಡ, ಕೊಡಗು ಮತ್ತು ಉಡುಪಿ ಜಿಲ್ಲೆಗಳ ಪ್ರದೇಶದ ಮೇಲೆ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮಂಗಳೂರು ವಿಶ್ವವಿದ್ಯಾನಿಲಯ;

(ಎಫ್) ಮೈಸೂರಿನಲ್ಲಿ ಕೇಂದ್ರ ಕಾರ್ಯ ಸ್ಥಾನವನ್ನು ಹೊಂದಿದ ಮತ್ತು ಚಾಮರಾಜನಗರ, ಹಾಸನ, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳ ಪ್ರದೇಶದ ಮೇಲೆ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮೈಸೂರು ವಿಶ್ವವಿದ್ಯಾನಿಲಯ.

(1ಎ) ಮಹಿಳೆಯರು ಕಲಿಕೆ ಮುಂದುವರಿಸಿ, ಉನ್ನತ ಶಿಕ್ಷಣ ಹಾಗೂ ಸಂಶೋಧನೆ ನಡೆಸುವುದರ ಪುರೋಭಿವೃದ್ಧಿಗಾಗಿ, ಬಿಜಾಪುರದಲ್ಲಿ ಕೇಂದ್ರ ಕಾರ್ಯ ಸ್ಥಾನವನ್ನು ಹೊಂದಿದ್ದು, ರಾಜ್ಯದಲ್ಲಿರುವ ಮಹಿಳಾ ಕಾಲೇಜುಗಳ ಮತ್ತು ಇತರ ಮಹಿಳಾ ಶೈಕ್ಷಣಿಕ ಸಂಸ್ಥೆಗಳ ಮೇಲೆ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಒಂದು ಮಹಿಳಾ ವಿಶ್ವವಿದ್ಯಾನಿಲಯವನ್ನು ರಾಜ್ಯದಲ್ಲಿ ಸ್ಥಾಪಿಸತಕ್ಕದ್ದು:

ಪರಂತು, ಸಂಯೋಜನೆ ನೀಡುವ ಉದ್ದೇಶಕ್ಕಾಗಿ, ಪ್ರಾದೇಶಿಕ ಅಧಿಕಾರ ವ್ಯಾಪ್ತಿಯು, ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ಬೀದರ್, ಬಿಜಾಪುರ, ಧಾರವಾಡ, ಗದಗ, ಗುಲ್ಬರ್ಗಾ, ಹಾವೇರಿ, ಕೊಪ್ಪಳ, ರಾಯಚೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿರುವ ಮಹಿಳಾ ಕಾಲೇಜುಗಳಿಗೆ ಮತ್ತು ಇತರ ಮಹಿಳಾ ಶೈಕ್ಷಣಿಕ ಸಂಸ್ಥೆಗಳಿಗೆ ವಿಸ್ತರಿಸತಕ್ಕದ್ದು.

(1ಬಿ) ತುಮಕೂರಿನಲ್ಲಿ ಕೇಂದ್ರ ಕಾರ್ಯ ಸ್ಥಾನವನ್ನು ಹೊಂದಿದ್ದು ಮತ್ತು ತುಮಕೂರು ಜಿಲ್ಲೆ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ತುಮಕೂರು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸತಕ್ಕದ್ದು.

(2) (i) ಪ್ರತಿಯೊಂದು ವಿಶ್ವವಿದ್ಯಾನಿಲಯದ ಕುಲಾಧಿಪತಿ, ಸಹ-ಕುಲಾಧಿಪತಿ (ಪ್ರೊಚಾನ್ಸಲರ್), ಕುಲಪತಿ ಮತ್ತು ವಿದ್ಯಾವಿಷಯಕ ಪರಿಷತ್ತು ಮತ್ತು ಸಿಂಡಿಕೇಟಿನ ಸದಸ್ಯರು, (1)ನೇ ಉಪ ಪ್ರಕರಣದಲ್ಲಿ ಅಥವಾ (1ಎ) ಉಪಪ್ರಕರಣದಲ್ಲಿ ಅಥವಾ (1ಬಿ) ಉಪಪ್ರಕರಣದಲ್ಲಿ

ನಿರ್ದಿಷ್ಟಪಡಿಸಿದ ಆ ವಿಶ್ವವಿದ್ಯಾನಿಲಯದ ಹೆಸರಿನಿಂದ ಕರೆಯಲ್ಪಡುವ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು;

(ii) ಅಂಥ ಪ್ರತಿಯೊಂದು ವಿಶ್ವವಿದ್ಯಾನಿಲಯವೂ ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮುದ್ರೆಯನ್ನು ಹೊಂದಿರತಕ್ಕದ್ದು ಮತ್ತು ಅದರ ಹೆಸರಿನಿಂದ ಅದು ದಾವೆ ಹೂಡಬಹುದು ಮತ್ತು ದಾವೆಗೆ ಗುರಿಯಾಗಬಹುದು.

(3) ವಿಶ್ವವಿದ್ಯಾನಿಲಯವು, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಆರ್ಜಿಸಲು ಮತ್ತು ಧಾರಣ ಮಾಡಲು, ವಿಶ್ವವಿದ್ಯಾನಿಲಯದ ಉದ್ದೇಶ ಗಳಿಗಾಗಿ ಅದರಲ್ಲಿ ನಿಹಿತವಾಗಿರಬಹುದಾದ ಅಥವಾ ಅದರಿಂದ ಆರ್ಜಿತವಾ ಗಿರಬಹುದಾದ ಯಾವುದೇ ಚರ ಮತ್ತು ಸ್ಥಿರ ಸ್ವತ್ತನ್ನು ಗುತ್ತಿಗೆಗೆ ಕೊಡಲು, ಮಾರಾಟ ಮಾಡಲು ಅಥವಾ ಅನ್ಯಥಾ ವರ್ಗಾವಣೆ ಮಾಡಲು ಮತ್ತು ಈ ಅಧಿನಿಯಮದ ಉದ್ದೇಶಗಳಿಗಾಗಿ ಕರಾರು ಮಾಡಿಕೊಳ್ಳುವುದಕ್ಕೆ ಮತ್ತು ಅವಶ್ಯವಾದ ಇತರ ಎಲ್ಲ ಕಾರ್ಯಗಳನ್ನೂ ಮಾಡುವುದಕ್ಕೆ ಸಕ್ಷಮವಾ ಗಿರತಕ್ಕದ್ದು.

(4) ವಿಶ್ವವಿದ್ಯಾನಿಲಯದಲ್ಲಿ ನಿಹಿತವಾಗಿರಬಹುದಾದ ಅಥವಾ ಅದು ಆರ್ಜಿಸಿರಬಹುದಾದ ಯಾವುದೇ ಸ್ಥಿರ ಸ್ವತ್ತನ್ನು, ಸರ್ಕಾರದ ಪೂರ್ವಾ ನುಮೋದನೆಯನ್ನು ಪಡೆದುಕೊಳ್ಳದೆ ಗುತ್ತಿಗೆ, ಮಾರಾಟ ಅಥವಾ ಅನ್ಯಥಾ ವರ್ಗಾವಣೆ ಮಾಡತಕ್ಕದ್ದಲ್ಲ.

(5) ವಿಶ್ವವಿದ್ಯಾನಿಲಯದಿಂದ ಅಥವಾ ಅದರ ವಿರುದ್ಧ ಹೂಡಲಾದ ಎಲ್ಲಾ ದಾವೆಗಳಲ್ಲಿ ಮತ್ತು ಇತರ ಕಾನೂನು ವ್ಯವಹರಣೆಗಳಲ್ಲಿ, ವಾದಪತ್ರಗಳಿಗೆ ರಿಜಿಸ್ಟ್ರಾರರು ಸಹಿ ಮಾಡಿ ಸತ್ಯಾಪನೆ ಮಾಡತಕ್ಕದ್ದು ಮತ್ತು ಅಂತಹ ದಾವೆಗಳಲ್ಲಿನ ಮತ್ತು ವ್ಯವಹರಣೆಗಳಲ್ಲಿನ ಎಲ್ಲ ಆದೇಶಿಕೆಗಳನ್ನು ರಿಜಿಸ್ಟ್ರಾರರಿಗೆ ನೀಡತಕ್ಕದ್ದು ಮತ್ತು ಅವರಿಗೆ ಜಾರಿ ಮಾಡತಕ್ಕದ್ದು.

XX XX XX

ಅನುಬಂಧ – 15

ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನಸಭೆ
ಮೂರನೇ ಅಧಿವೇಶನ

ಕರ್ನಾಟಕ ರಾಜ್ಯ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ವಿಧೇಯಕ, 2009

(2009ರ ವಿಧಾನಸಭೆಯ ವಿಧೇಯಕ ಸಂಖ್ಯೆ 18)

ಕರ್ನಾಟಕ ರಾಜ್ಯ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯವನ್ನು ಸ್ಥಾಪಿಸಿ ನಿಗಮಿತಗೊಳಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಒಂದು ವಿಧೇಯಕ.

ಸಂಗೀತ ಮತ್ತು ಪ್ರದರ್ಶಕ ಕಲೆಗಳ ಎಲ್ಲಾ ಶಾಖೆಗಳಲ್ಲಿ ಕಲಿಕೆಯ ಮುನ್ನಡೆಯನ್ನು ಸಾಧಿಸುವುದು ಸಂಶೋಧನೆ ನಡೆಸುವುದು ದಾಖಲೀಕರಣ, ಧ್ವನಿ ಮತ್ತು ದೃಶ್ಯ ರೆಕಾರ್ಡಿಂಗ್‌ಗಳನ್ನು ಪ್ರಕಟಿಸುವ ಮತ್ತು ಜನಪ್ರಿಯಗೊಳಿಸುವ ಉದ್ದೇಶಕ್ಕಾಗಿ ಹಾಗೂ ಇಲ್ಲಿ ಇನ್ನುಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಅದಕ್ಕೆಂದೇ ಅನನ್ಯವಾಗಿ ನಿರತವಾದ ಒಂದು ಏಕ ಘಟಕೀಯ ಮತ್ತು ನಿವಾಸಿ ಸ್ವರೂಪದ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದು ಯುಕ್ತವಾದುದರಿಂದ;

ಇದು ಭಾರತ ಗಣರಾಜ್ಯದ ಐವತ್ತೊಂಭತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ.–

ಅಧ್ಯಾಯ – I

ಪ್ರಾರಂಭಿಕ

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:– (1) ಈ ಅಧಿನಿಯಮವನ್ನು ಕರ್ನಾಟಕ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಅಧಿನಿಯಮ, 2009 ಎಂದು ಕರೆಯತಕ್ಕದ್ದು.

(2) ಇದು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. ಪರಿಭಾಷೆಗಳು.– ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಪಕ್ಕ ವಾದ್ಯಗಾರರು" ಎಂದರೆ ಹಾರ್ಮೋನಿಯಂ, ತಬಲ, ಪಿಟೀಲು, ಮೃದಂಗ, ಘಟ, ಕಂಜೀರ ಇತ್ಯಾದಿ ವಾದ್ಯಗಳನ್ನು ನುಡಿಸುವ ವಾದ್ಯಗಾರರು;

(ಬಿ) "ಗೊತ್ತುಪಡಿಸಿದ ದಿನಾಂಕ" ಎಂದರೆ, ಈ ಅಧಿನಿಯಮವು ಪ್ರಾರಂಭಗೊಳ್ಳಲು ಗೊತ್ತುಪಡಿಸಿದ ದಿನಾಂಕ.

(ಸಿ) "ಸರ್ಕಾರ" ಎಂದರೆ, ರಾಜ್ಯ ಸರ್ಕಾರ

(ಡಿ) "ವಿದ್ಯಾರ್ಥಿನಿಲಯ" ಎಂದರೆ, ಈ ಅಧಿನಿಯಮದ ಉಪಬಂಧ ಗಳಿಗನುಸಾರವಾಗಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ ಅಥವಾ ಅದರಿಂದ ಮನ್ನಣೆ ಪಡೆದ ಒಂದು ನಿವಾಸ ಘಟಕ

(ಇ) "ಪ್ರದರ್ಶಕ ಕಲೆಗಳು" ಎಂದರೆ ನೃತ್ಯ, ನಾಟಕ, ಯಕ್ಷಗಾನ, ಹರಿಕಥೆ ಮತ್ತಿತರ ವಿಶ್ವವಿದ್ಯಾಲಯವು ಪ್ರದರ್ಶಕ ಕಲೆ ಎಂದು ನಿರ್ಧರಿಸಬ ಹುದಾದ ಕಲೆಗಳು ಎಂದರ್ಥ ಹಾಗೂ ಅದು ಅವುಗಳನ್ನು ಒಳಗೊಳ್ಳುತ್ತದೆ.

(ಎಫ್) "ನಿಯಮಿಸಲಾದುದು" ಎಂದರೆ, ಶಾಸನಗಳಿಂದ ನಿಯಮಿ ಸಲಾದುದು.

(ಜಿ) "ಶಾಸನಗಳು" ಎಂದರೆ, ಈ ಅಧಿನಿಯಮದಡಿಯಲ್ಲಿ ವಿಶ್ವವಿ ದ್ಯಾಲಯವು ರಚಿಸಿದ ಶಾಸನಗಳು.

(ಎಚ್) "ಅಧ್ಯಾಪಕರು" ಎಂದರೆ, ಪ್ರಾಧ್ಯಾಪಕರು, ವಿಶ್ರಾಂತ ಪ್ರಾಧ್ಯಾ ಪಕರು, ರೀಡರುಗಳು, ಉಪನ್ಯಾಸಕರು ಮತ್ತು ಶಾಸನಗಳಿಂದ ಅಧ್ಯಾಪಕ ರೆಂದು ಘೋಷಿತರಾಗಬಹುದಾದಂತಹ ಇತರ ವ್ಯಕ್ತಿಗಳು.

(ಐ) "ವಿಶ್ವವಿದ್ಯಾಲಯ" ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಕರ್ನಾಟಕ ರಾಜ್ಯ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ.

(ಜೆ) "ವಿಶ್ವವಿದ್ಯಾಲಯ ಅನುದಾನ ಆಯೋಗ" ಎಂದರೆ, ವಿಶ್ವವಿದ್ಯಾಲಯ ಅನುದಾನ ಆಯೋಗ ಅಧಿನಿಯಮ, 1956 ರ (1956ರ ಕೇಂದ್ರ ಅಧಿನಿಯಮ 3) 4ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಆಯೋಗ.

(ಕೆ) "ವಿಶ್ವವಿದ್ಯಾಲಯ ಗ್ರಂಥಾಲಯ" ಎಂದರೆ, ವಿಶ್ವವಿದ್ಯಾಲಯವು ಪ್ರಾರಂಭಿಸಿರಲಿ ಅಥವಾ ಇಲ್ಲದಿರಲಿ, ಅದರಿಂದ ನಿರ್ವಹಿಸಲಾದ ಗ್ರಂಥಾಲಯ.

ಅಧ್ಯಾಯ – II
ವಿಶ್ವವಿದ್ಯಾಲಯ

3. ವಿಶ್ವವಿದ್ಯಾಲಯದ ಸ್ಥಾಪನೆ.– (1) ಸಂಗೀತ ಮತ್ತು ಪ್ರದರ್ಶಕ ಕಲೆಗಳಲ್ಲಿ ಕಲಿಕೆಯ ಮುನ್ನಡೆಯನ್ನು ಮತ್ತು ಸಂಶೋಧನೆಯನ್ನು ಸಾಧಿಸುವುದಕ್ಕಾಗಿ "ಕರ್ನಾಟಕ ರಾಜ್ಯ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ" ಎಂಬ ಹೆಸರಿನ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸತಕ್ಕದ್ದು.

(2) ವಿಶ್ವವಿದ್ಯಾಲಯವು ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಶಾಶ್ವತ ಉತ್ತರಾಧಿಕಾರವನ್ನು ಹೊಂದಿದ್ದು ಸಾಮಾನ್ಯ ಮೊಹರನ್ನು ಹೊಂದಿರತಕ್ಕದ್ದು ಹಾಗೂ ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೊಳಗಾಗತಕ್ಕದ್ದು.

(3) ವಿಶ್ವವಿದ್ಯಾಲಯವು ಏಕಘಟಕೀಯ ಮತ್ತು ನಿವಾಸಿ ಸ್ವರೂಪದ್ದಾಗಿರತಕ್ಕದ್ದು.

(4) ಸರ್ಕಾರದ ಮತ್ತು ಸಂಬಂಧಪಟ್ಟ ವಿಶ್ವವಿದ್ಯಾಲಯದ ಪೂರ್ವಾನುಮತಿಯ ಹೊರತು, ರಾಜ್ಯದಲ್ಲಿರುವ ಇತರ ಯಾವುದೇ ವಿಶ್ವವಿದ್ಯಾಲಯಕ್ಕೆ ಸಂಯೋಜಿತವಾದ ಅಥವಾ ಸಹವರ್ತಿತವಾದ ಅಥವಾ ಅದರಿಂದ ನಿರ್ವಹಿಸಲಾದ ಯಾವ ಸಂಸ್ಥೆಗೂ ಯಾವುದೇ ಉದ್ದೇಶಕ್ಕೆ ಮಾನ್ಯತೆ ನೀಡತಕ್ಕದ್ದಲ್ಲ.

(5) ವಿಶ್ವವಿದ್ಯಾಲಯದ ಕೇಂದ್ರ ಕಾರ್ಯಸ್ಥಾನವು ಮೈಸೂರು ಜಿಲ್ಲೆಯ ಪರಿಮಿತಿಯೊಳಗೆ ಅಥವಾ ಈ ಪರಿಮಿತಿಯ ಇಪ್ಪತ್ತು ಕಿಲೋಮೀಟರುಗಳ ಫಾಸಲೆಯೊಳಗಿರುವ ಯಾವುದೇ ಸ್ಥಳದಲ್ಲಿ ಇರತಕ್ಕದ್ದು.

(6) ವಿಶ್ವವಿದ್ಯಾಲಯವು, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನೂ ಆರ್ಜಿಸಲು ಮತ್ತು ಧಾರಣ ಮಾಡಲು, ವಿಶ್ವವಿದ್ಯಾಲಯದ ಉದ್ದೇಶಗಳಿಗಾಗಿ ಅದರಲ್ಲಿ ನಿಹಿತವಾಗಿರಬಹುದಾದ ಅಥವಾ ಅದರಿಂದ ಆರ್ಜಿತವಾಗಿರ ಬಹುದಾದ ಯಾವುದೇ ಚರ ಮತ್ತು ಸ್ಥಿರ ಸ್ವತ್ತನ್ನು ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಡನೆ ಗುತ್ತಿಗೆಗೆ ನೀಡಲು, ಮಾರಾಟ ಮಾಡಲು

ಅಥವಾ ಅನ್ಯಥಾ ವರ್ಗಾವಣೆ ಮಾಡಲು ಮತ್ತು ಕರಾರುಗಳನ್ನು ಮಾಡಿಕೊಳ್ಳಲು ಹಾಗೂ ಈ ಅಧಿನಿಯಮದ ಉದ್ದೇಶಕ್ಕಾಗಿ ಅವಶ್ಯವಾದ ಇತರ ಎಲ್ಲಾ ಕಾರ್ಯಗಳನ್ನು ನಿರ್ವಹಿಸಲು ಸಕ್ಷಮವಾಗಿರತಕ್ಕದ್ದು.

(7) ವಿಶ್ವವಿದ್ಯಾಲಯವು, ತನ್ನಲ್ಲಿ ನಿಹಿತವಾಗಿದ್ದಿರಬಹುದಾದ ಅಥವಾ ತಾನು ಆರ್ಜಿಸಬಹುದಾದ ಯಾವುದೇ ಸ್ಥಿರ ಸ್ವತ್ತನ್ನು ಸರ್ಕಾರದ ಪೂರ್ವಾನುಮೋದನೆಯನ್ನು ಪಡೆಯದೇ ಗುತ್ತಿಗೆ ನೀಡತಕ್ಕದ್ದಲ್ಲ, ಮಾರಾಟ ಮಾಡತಕ್ಕದ್ದಲ್ಲ ಅಥವಾ ಅನ್ಯಥಾ ವರ್ಗ ಮಾಡತಕ್ಕದ್ದಲ್ಲ.

(8) ವಿಶ್ವವಿದ್ಯಾಲಯವು ಹೂಡಿದ ಅಥವಾ ಅದರ ವಿರುದ್ಧ ಹೂಡಲಾದ ಎಲ್ಲಾ ದಾವೆಗಳಲ್ಲಿ ಮತ್ತು ಇತರ ಕಾನೂನು ವ್ಯವಹರಣೆಗಳಲ್ಲಿ ವಾದ ಪ್ರತಿವಾದ ಪತ್ರಗಳಿಗೆ ಕುಲಸಚಿವರು ಸಹಿ ಮಾಡಿ ಸತ್ಯಾಪನೆ ಮಾಡತಕ್ಕದ್ದು ಮತ್ತು ಅಂಥ ದಾವೆಗಳಲ್ಲಿನ ಹಾಗೂ ವ್ಯವಹರಣೆಗಳಲ್ಲಿನ ಎಲ್ಲಾ ಆದೇಶಿಕೆಗಳನ್ನು ಕುಲಸಚಿವರಿಗೆ ನೀಡತಕ್ಕದ್ದು ಮತ್ತು ಅವರಿಗೆ ಜಾರಿ ಮಾಡತಕ್ಕದ್ದು.

4. ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳು.– ವಿಶ್ವವಿದ್ಯಾಲಯವು ಈ ಮುಂದಿನ ಧ್ಯೇಯೋದ್ದೇಶಗಳನ್ನು ಹೊಂದಿರತಕ್ಕದ್ದು, ಎಂದರೆ.–

(1) ಸಂಗೀತ ಮತ್ತು ಪ್ರದರ್ಶಕ ಕಲೆಗಳ ಎಲ್ಲಾ ಶಾಖೆಗಳಲ್ಲಿ ಶಿಕ್ಷಣವನ್ನು ಒದಗಿಸುವುದು ಮತ್ತು ಸಂಗೀತ ಮತ್ತು ಪ್ರದರ್ಶಕ ಕಲೆಗಳ ಸಂಶೋಧನೆ ಹಾಗೂ ಕಲಿಕೆಯ ಮುನ್ನಡೆಗೆ ಅನುಕೂಲಗಳನ್ನು ಕಲ್ಪಿಸುವುದು ಹಾಗೂ ಅವುಗಳ ಜ್ಞಾನವನ್ನು ಪ್ರಸಾರ ಮಾಡುವುದು;

(2) ಸಂಗೀತ ಮತ್ತು ಪ್ರದರ್ಶಕ ಕಲೆಗಳ ಎಲ್ಲ ಪ್ರಕಾರಗಳು ಮತ್ತು ಶೈಲಿಗಳಲ್ಲಿ ಹಾಗೂ ಅವುಗಳ ಅಧ್ಯಯನದಲ್ಲಿ ಬೋಧನೆ, ತರಬೇತಿ ಹಾಗೂ ಸಂಶೋಧನೆ ನಡೆಸುವ ಅತ್ಯುನ್ನತ ಸಂಸ್ಥೆಯಾಗಿ ಕೆಲಸ ಮಾಡುವುದು;

(3) ಕರ್ನಾಟಕದಲ್ಲಿ ಪ್ರಚಲಿತವಿರುವ ಸಂಗೀತ ಮತ್ತು ಪ್ರದರ್ಶಕ ಕಲೆಗಳ ಎಲ್ಲ ಪ್ರಕಾರಗಳಿಗೆ ವಿಶೇಷವಾದ ಒತ್ತನ್ನು ನೀಡಿ ಭಾರತೀಯ ಸಂಗೀತ ಮತ್ತು ಪ್ರದರ್ಶಕ ಕಲೆಗಳ ಸಾಂಪ್ರದಾಯಿಕ ಪದ್ಧತಿಯನ್ನು ಸಂರಕ್ಷಿಸುವುದು, ಪೋಷಿಸುವುದು, ಜನಪ್ರಿಯಗೊಳಿಸುವುದು ಮತ್ತು ಉತ್ತೇಜಿಸುವುದು;

(4) ಸಂಗೀತ, ಪ್ರದರ್ಶಕ ಕಲೆಗಳ ಹಾಗೂ ಮೇಲೆ ಹೇಳಿದ ಅಧ್ಯಯನ ವಿಷಯಗಳಲ್ಲಿ ಅಡಗಿರುವ ಜ್ಞಾನ ಭಂಡಾರವನ್ನು ಹಾಗೂ

ಆಧುನಿಕ ಜಗತ್ತಿಗೆ ಅವು ಎಷ್ಟು ಪ್ರಸ್ತುತ ಎಂಬ ಮಹತ್ವವನ್ನು ಸರ್ವರಿಗೂ ತಿಳಿಯಪಡಿಸುವುದು;

(5) ಸಮಾಜದ ಎಲ್ಲ ಜನವರ್ಗಗಳಲ್ಲಿ ಸಂಗೀತ ಮತ್ತು ಪ್ರದರ್ಶಕ ಕಲೆಗಳನ್ನು ಜನಪ್ರಿಯಗೊಳಿಸುವುದು.

(6) ಸಂಗೀತ ಮತ್ತು ಪ್ರದರ್ಶಕ ಕಲೆಗಳ ಎಲ್ಲ ಪ್ರಕಾರಗಳು ಹಾಗೂ ವೈವಿಧ್ಯಗಳನ್ನು ಕುರಿತ ಸಾಹಿತ್ಯವನ್ನು ಮತ್ತು ಕನ್ನಡ ಮತ್ತು ಇತರ ಭಾಷೆಗಳಲ್ಲಿರುವ ಹಸ್ತಪ್ರತಿಗಳನ್ನು ತಯಾರಿಸುವುದು, ಕ್ರೋಢೀಕರಿಸುವುದು, ಪುನರುಜ್ಜೀವನಗೊಳಿಸುವುದು, ಉತ್ತೇ ಜಿಸುವುದು, ಭಾಷಾಂತರಿಸುವುದು ಹಾಗೂ ಪ್ರಕಟಿಸುವುದು;

(7) ಸಂಗೀತ ಪ್ರದರ್ಶಕ ಕಲೆಗಳ ಎಲ್ಲ ಪ್ರಕಾರಗಳ ಅಧ್ಯಯನವನ್ನು ಕ್ರಮಬದ್ಧವಾಗಿಸುವುದು;

(8) ಸಂಗೀತ ಮತ್ತು ಪ್ರದರ್ಶಕ ಕಲೆಗಳ ಕಾರ್ಯಕ್ರಮಗಳನ್ನು ಪೋಷಿಸುವುದು ಮತ್ತು ರೂಪಿಸುವುದು ಹಾಗೂ ಆಧುನಿಕ ವೈಜ್ಞಾನಿಕ ತಂತ್ರಜ್ಞಾನದ ಈ ದಿನಗಳಲ್ಲಿ ಅವುಗಳು ಎಷ್ಟು ಪ್ರಸ್ತುತ ಎಂಬುದನ್ನು ಮತ್ತು ಅವುಗಳ ಮಹತ್ವವನ್ನು ಪ್ರಚಾರಪಡಿಸುವುದು ಮತ್ತು ಸಂಗೀತ ಮತ್ತು ಪ್ರದರ್ಶಕ ಕಲೆಗಳ ಶ್ರೀಮಂತ ಸಂಪ್ರದಾಯ ಮತ್ತು ಪರಂಪರೆಯನ್ನು ಬಲಪಡಿಸುವುದು;

(9) ಸಂಗೀತ ಮತ್ತು ಪ್ರದರ್ಶಕ ಕಲೆಗಳ ಹಾಗೂ ಅವುಗಳ ಸಂಪ್ರದಾಯವನ್ನು ಕುರಿತ ವಸ್ತು ಸಂಗ್ರಹಾಲಯ, ಪತ್ರಾಗಾರ ಹಾಗೂ ಗ್ರಂಥಾಲಯಗಳನ್ನು ಸ್ಥಾಪಿಸುವುದು;

(10) ಸಂಗೀತ ಮತ್ತು ಪ್ರದರ್ಶಕ ಕಲೆಗಳನ್ನು ಕುರಿತು ದೊರಕುವ ಇಡೀ ಹಸ್ತಪ್ರತಿ ಭಂಡಾರ ಹಾಗೂ ಸಂಗೀತ ಗ್ರಂಥಗಳನ್ನು ಕಂಪ್ಯೂಟರ್‌ಗೆ ಅಳವಡಿಸಿ ಡಿಜಿಟಲ್ ರೂಪದಲ್ಲಿ ಸಂಗ್ರಹಿಸುವುದು ಮತ್ತು ಉನ್ನತ ಗುಣಮಟ್ಟದ ಸಂಶೋಧನಾ ಜರ್ನಲ್‌ಗಳನ್ನು ವಿಶ್ವವಿದ್ಯಾಲಯ ಮತ್ತು ಅದರ ವಿವಿಧ ಇಲಾಖೆಗಳ ಮೂಲಕ ಹೊರತರುವುದು;

(11) ಸಂಗೀತ ಮತ್ತು ಪ್ರದರ್ಶಕ ಕಲೆಗಳ ಕಚೇರಿಗಳನ್ನು ಹಾಗೂ ಪ್ರದರ್ಶನವನ್ನು ಚಿತ್ರೀಕರಿಸಿ ರೆಕಾರ್ಡ್ ಮಾಡುವುದಕ್ಕಾಗಿ ಹಾಗೂ ಫೋಟೋಗಳನ್ನು ತೆಗೆಯುವುದಕ್ಕಾಗಿ ಧ್ವನಿ ದೃಶ್ಯ ಮುದ್ರಣ ಹಾಗೂ ಛಾಯಾಚಿತ್ರ ತೆಗೆಯುವ ಅನುಕೂಲ ಗಳನ್ನುಳ್ಳ ಅತ್ಯಾಧುನಿಕ ತಂತ್ರಜ್ಞಾನದ ಸ್ಟುಡಿಯೋ ಒಂದನ್ನು ಸ್ಥಾಪಿಸುವುದು;

(12) ಪ್ರಾಚೀನ ಸಂಗೀತ ಮತ್ತು ಪ್ರದರ್ಶಕ ಕಲೆ ಪರಂಪರೆಗಳಲ್ಲಿ ಇರುವ ಸಂದೇಶವನ್ನು ಕುರಿತು ಜಾಗೃತಿ ಹಾಗೂ ಜ್ಞಾನ ಪ್ರಸಾರವನ್ನು ಉತ್ತೇಜಿಸುವ ದೃಷ್ಟಿಯಿಂದ ಸಂಗೀತ ಕಚೇರಿ ಗಳು, ಪ್ರದರ್ಶಕ ಕಲೆಗಳ ಕಾರ್ಯಕ್ರಮಗಳು, ವಿಚಾರ ಗೋಷ್ಠಿಗಳು, ಕಾರ್ಯಾಗಾರಗಳು, ಸಮ್ಮೇಳನಗಳು ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು.

(13) (ಎ) ಎಲ್ಲಾ ಸಂಗೀತ ಮತ್ತು ಪ್ರದರ್ಶಕ ಕಲೆಗಳ ಪ್ರಕಾರಗಳಿಗೆ ದಾರಿಮಾಡಿಕೊಂಡುವಂಥ ಪೂರಕ ಶಿಕ್ಷಣವನ್ನು ನೀಡುವ ನಿರ್ದೇಶನಾಲ ಯಗಳನ್ನು ಸ್ಥಾಪಿಸುವುದು.

(ಬಿ) ದೂರ ಶಿಕ್ಷಣ ಮತ್ತು ಆನ್‌ಲೈನ್ ಶಿಕ್ಷಣ ವ್ಯವಸ್ಥೆಯನ್ನು ಸ್ಥಾಪಿಸುವುದು

(ಸಿ) ಸಂಗೀತ ಮತ್ತು ಪ್ರದರ್ಶಕ ಕಲೆಗಳಿಗೆ ಸಂಬಂಧಪಟ್ಟ ಪುಸ್ತಕಗಳನ್ನು ಮತ್ತು ಕೃತಿಗಳನ್ನು ಪ್ರಕಟಿಸಲು ಒಂದು ಪ್ರಸಾರಾಂಗವನ್ನು ಸ್ಥಾಪಿಸುವುದು.

(14) ಪ್ರೌಢ ಸಂಶೋಧನೆಗಳನ್ನು ನಡೆಸುವುದಕ್ಕಾಗಿ ಮತ್ತು ಸಮಾಜದ ಎಲ್ಲಾ ವರ್ಗಗಳಿಗಾಗಿ ಹವ್ಯಾಸ ತರಗತಿಗಳನ್ನು ನಡೆಸಲು ವಿವಿಧ ವಿದ್ಯಾ ವಿಷಯಗಳಲ್ಲಿ "ಅಧ್ಯಯನ ಪೀಠ" ಗಳನ್ನು ಸ್ಥಾಪಿಸುವುದು;

(15) ಸಂಗೀತ ಮತ್ತು ಪ್ರದರ್ಶಕ ಕಲೆಗಳ ಬಗ್ಗೆ ಜಾಗೃತಿ ಮೂಡಿಸಲು, ಆಸಕ್ತಿ ಬೆಳೆಸಲು ಮತ್ತು ಅದನ್ನು ಜನಪ್ರಿಯಗೊಳಿಸಲು ಸಂಗೀತ ಮತ್ತು ಪ್ರದರ್ಶಕ ಕಲೆಗಳ ಯಾತ್ರೆ ನಡೆಸುವುದು;

(16) ಆರೋಗ್ಯ ಹಾಗೂ ವೈದ್ಯಕೀಯ ಸಂಬಂಧಿ ಖಾಯಿಲೆಗಳಿಗೆ ಚಿಕಿತ್ಸೆಯಾಗಿ ಸಂಗೀತ ಮತ್ತು ಪ್ರದರ್ಶಕ ಕಲೆಗಳ ಸಾಧ್ಯತೆಯನ್ನು ಕುರಿತು ಪ್ರಯೋಗಗಳನ್ನು ನಡೆಸುವುದು;

(17) ವಿಶ್ವವಿದ್ಯಾಲಯದ ಮೇಲ್ಕಂಡ ಧ್ಯೇಯೋದ್ದೇಶಗಳಿಗೆ ಅಗತ್ಯವಾಗಬಹುದಾದ ಮೇಲ್ಕಂಡ ಅಧಿಕಾರಗಳಿಗೆ ಅವು ಪ್ರಾಸಂಗಿಕವಾಗಿರಲಿ ಇಲ್ಲದಿರಲಿ ಯಾವುದೇ ಕಾರ್ಯಗಳನ್ನು ಮತ್ತಿತರ ಚಟುವಟಿಕೆಗಳನ್ನು ಕೈಗೊಳ್ಳುವುದು;

(18) ಒಂದೇ ಬಗೆಯ ಧ್ಯೇಯೋದ್ದೇಶವುಳ್ಳ ಎಲ್ಲಾ ವಿಶ್ವವಿದ್ಯಾಲ ಯಗಳು ಮತ್ತು ಸಂಸ್ಥೆಗಳು ಮಾಡಿದ ಪ್ರಯತ್ನಗಳ ಕೂಡು ಬಲವನ್ನು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಪರಸ್ಪರ ವ್ಯವಸ್ಥೆಗಳು ಮತ್ತು ಸಂವಾದ ಸಂಪರ್ಕ ಸೌಕರ್ಯಗಳೊಂದಿಗೆ ಅಂಥ ಸಂಗೀತ ಮತ್ತು ಪ್ರದರ್ಶಕ ಕಲೆಗಳ

ವಿದ್ಯಾಸಂಸ್ಥೆಗಳ ಮತ್ತು ಶೈಕ್ಷಣಿಕ ಹಾಗೂ ಸಂಶೋಧನಾ ಅಭಿಮುಖ ಸಂಸ್ಥೆಗಳ ಒಂದು ಜಾಲವನ್ನು ರಚಿಸುವುದು;

(19) ಶಾಸನಗಳ ಮೂಲಕ ವಿಶ್ವವಿದ್ಯಾಲಯದ ಪ್ರಾಧಿಕಾರಗಳೆಂದು ಘೋಷಿಸಲಾದಂಥ ನಿಕಾಯಗಳನ್ನು ನಿರ್ವಹಿಸಿಕೊಂಡು ಬರುವುದು.

(20) ವಿಶ್ವವಿದ್ಯಾಲಯದಲ್ಲಿ ಅಂತರ ವ್ಯಾಸಂಗ ವಿಷಯಗಳ ಅಧ್ಯಯನ ಮತ್ತು ಸಂಶೋಧನೆಯನ್ನು ಉತ್ತೇಜಿಸಲು ಮತ್ತು ಅಂಥವೇ ಇತರ ಸಂಬಂಧಪಟ್ಟ ಚಟುವಟಿಕೆಗಳನ್ನು ವಿಶ್ವವಿದ್ಯಾಲಯದ ಮಟ್ಟದಲ್ಲಿ ಸೌಹಾರ್ದರೀತಿಯಲ್ಲಿ ನಡೆಸು ಕೊಂಡು ಬರಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದು;

(21) ಗುರುಕುಲ ಪದ್ಧತಿಯಲ್ಲಿ ಮತ್ತು ಆಧುನಿಕ (ಸಮಕಾಲೀನ ಶೈಕ್ಷಣಿಕ) ಪದ್ಧತಿಯಲ್ಲಿ ಸಂಗೀತ ಮತ್ತು ಪ್ರದರ್ಶಕ ಕಲೆಗಳನ್ನು ಬೋಧಿಸುವುದು. ಗುರುಕುಲ ಪದ್ಧತಿಯಲ್ಲಿ ಖ್ಯಾತ ಸಂಗೀತ ಪಂಡಿತರು ಹಾಗೂ ಮಹಾನ್ ವಿದ್ವಾಂಸರು ಬೋಧಕ ವೃಂದದಲ್ಲಿರುತ್ತಾರೆ.

5. ವಿಶ್ವವಿದ್ಯಾಲಯದ ಅಧಿಕಾರಗಳು.– ವಿಶ್ವವಿದ್ಯಾಲಯವು ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(1) ಪದವಿಗಳು, ಡಿಪ್ಲೊಮಾ ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರಾರಂಭಿಸುವುದು.

(2) ವಿಶ್ವವಿದ್ಯಾಲಯದಲ್ಲಿ ಅಥವಾ ನಿಯಮಿಸಲಾದ ಷರತ್ತುಗಳ ಮೇರೆಗೆ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಇತರ ಯಾವುದೇ ಸಂಸ್ಥೆ ಅಥವಾ ಕೇಂದ್ರದಲ್ಲಿ ಸಂಶೋಧನೆಯನ್ನು ಪೂರೈಸಿದ ವ್ಯಕ್ತಿಗಳಿಗೆ ಧರ್ಮ, ಪಂಥ, ಜಾತಿ, ಲಿಂಗ, ವರ್ಗ ಅಥವಾ ಇವುಗಳಲ್ಲಿ ಯಾವುದನ್ನೂ ಗಣಿಸದೆ ಪದವಿಗಳು, ಡಿಪ್ಲೋಮಾ ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಯನ್ನು ಪ್ರದಾನ ಮಾಡುವುದು;

ವಿವರಣೆ.– ಈ ಖಂಡ ಮತ್ತು ಈ ಅಧಿನಿಯಮದ ಇತರ ಉಪಬಂಧಗಳ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಸಂಸ್ಥೆ ಅಥವಾ ಕೇಂದ್ರ ಎಂದರೆ, ಸಂಬಂಧಪಟ್ಟ ಪ್ರಾಧಿಕಾರಗಳಿಂದ ಪೂರ್ವಾನುಮೋದನೆ ಪಡೆದ ತರುವಾಯ ವಿಶ್ವವಿದ್ಯಾಲಯದ ಉದ್ದೇಶಗಳನ್ನು ಈಡೇರಿಸುವ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ,

ಭಾರತದಲ್ಲಿರುವ ಅಥವಾ ಇತರ ದೇಶಗಳಲ್ಲಿರುವ ಒಂದು ಸಂಸ್ಥೆ ಅಥವಾ ಒಂದು ಕೇಂದ್ರ;

(3) ನಿಯಮಿಸಲಾದ ರೀತಿಯಲ್ಲಿ ಮತ್ತು ನಿಯಮಿಸಲಾದ ಷರತ್ತುಗಳ ಮೇರೆಗೆ ಗೌರವ ಪದವಿಗಳು ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು;

(4) ವಿದ್ಯಾರ್ಥಿ ನಿಲಯಗಳ ಮೇಲ್ವಿಚಾರಣೆ ನಡೆಸುವುದು ಮತ್ತು ನಿಯಂತ್ರಿಸುವುದು ಮತ್ತು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಲ್ಲಿ ಶಿಸ್ತು ಮೂಡುವಂತೆ ಮಾಡುವುದು ಮತ್ತು ಅವರ ಆರೋಗ್ಯ ಮತ್ತು ಸಾಮಾನ್ಯ ಕ್ಷೇಮಾಭಿವೃದ್ಧಿಗೆ ಉತ್ತೇಜನ ನೀಡಲು ವ್ಯವಸ್ಥೆಗಳನ್ನು ಮಾಡುವುದು;

(5) ವ್ಯಕ್ತಿಗಳಿಗೆ ನೀಡುವ ಯಾವುದೇ ಪದವಿ, ಡಿಪ್ಲೊಮಾ ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ತಡೆಹಿಡಿಯಬಹುದಾದ ಷರತ್ತುಗಳನ್ನು ನಿಯಮಿಸುವುದು.

(6) ಕಾಲಕಾಲಕ್ಕೆ ನಿಯಮಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ, ವಿಶ್ವವಿದ್ಯಾಲಯವು ಹೊಂದಿರುವಂಥವೇ ಉದ್ದೇಶಗಳು ಮತ್ತು ಗುರಿಗಳ ಉತ್ತೇಜನೆಯನ್ನು ದೃಷ್ಟಿಯಲ್ಲಿರಿಸಿಕೊಂಡಿರುವ ಇತರ ಯಾವುದೇ ವಿಶ್ವವಿದ್ಯಾಲಯ, ಪ್ರಾಧಿಕಾರ ಅಥವಾ ಸಂಘ ಅಥವಾ ಸಾರ್ವಜನಿಕ ಅಥವಾ ಖಾಸಗಿ ನಿಕಾಯದೊಂದಿಗೆ ಸಹಕರಿಸುವುದು;

(7) ಸಂಶೋಧನೆ ಮತ್ತು ಪ್ರಸಾರಾಂಗದ ಸಲುವಾಗಿ ವಿಶ್ವವಿದ್ಯಾಲಯದ ಗ್ರಂಥಾಲಯಗಳು, ಸಂಶೋಧನಾ ಕೇಂದ್ರಗಳು, ಸಂಗ್ರಹಾಲಯಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(8) ಸಂಶೋಧನಾ ಹುದ್ದೆಗಳನ್ನು ಸೃಜಿಸುವುದು ಮತ್ತು ಅಂಥ ಹುದ್ದೆಗಳಿಗೆ ವ್ಯಕ್ತಿಗಳನ್ನು ನೇಮಿಸುವುದು;

(9) ನಿಯಮಿಸಲಾದ ರೀತಿಯಲ್ಲಿ ಪ್ರವಾಸೀ ಸಂಶೋಧನಾ ವೇತನಗಳು, ವಿದ್ಯಾರ್ಥಿ ವೇತನಗಳು, ಪದಕಗಳು ಮತ್ತು ಬಹುಮಾನಗಳೂ ಸೇರಿದಂತೆ ಸಂಶೋಧನಾ ವೇತನಗಳನ್ನು ಪ್ರಾರಂಭಿಸುವುದು ಮತ್ತು ಅವುಗಳನ್ನು ನೀಡುವುದು;

(10) ಅನುದಾನ, ಮರಣ ಶಾಸನ, ದಾನ ಅಥವಾ ಅನ್ಯಥಾ ಮೂಲತಃ ವಿಶ್ವವಿದ್ಯಾಲಯದಲ್ಲಿ ನಿಹಿತವಾಗಿರಬಹುದಾದ, ಯಾವುದೇ ದತ್ತಿಗಳು, ದೇಣಿಗೆಗಳು ಅಥವಾ ನಿಧಿಗಳನ್ನು ಒಪ್ಪಿಕೊಳ್ಳುವುದು, ಪಡೆಯುವುದು ಮತ್ತು ನಿರ್ವಹಿಸುವುದು ಮತ್ತು ಅದು ಸೂಕ್ತವೆಂದು ಭಾವಿಸಬಹು

ದಾದಂಥ ರೀತಿಯಲ್ಲಿ ಅಂಥ ದತ್ತಿಗಳು, ದೇಣಿಗೆಗಳು ಅಥವಾ ನಿಧಿಗಳನ್ನು ತೊಡಗಿಸಬಹುದು:

ಪರಂತು, ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದ ಹೊರತು, ವಿಶ್ವವಿದ್ಯಾಲಯವು ವಿದೇಶದಿಂದ, ವಿದೇಶಿ ಪ್ರತಿಷ್ಠಾನಗಳು ಮತ್ತು ಅಂಥ ದೇಶದ ಯಾವುದೇ ವ್ಯಕ್ತಿಯಿಂದ ವಂತಿಗೆಗಳನ್ನು ಸ್ವೀಕರಿಸತಕ್ಕದ್ದಲ್ಲ.

(11) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿನಿಲಯಗಳನ್ನು ಮತ್ತು ವಿಶ್ವವಿದ್ಯಾಲಯದ ಸಿಬ್ಬಂದಿಗಾಗಿ ವಸತಿಗಳನ್ನು ಸ್ಥಾಪಿಸುವುದು, ನಿರ್ವಹಿಸುವುದು ಅಥವಾ ಮಾನ್ಯತೆ ನೀಡುವುದು ಮತ್ತು ಅಂಥ ಯಾವುವೇ ಮಾನ್ಯತೆಗಳನ್ನು ಹಿಂತೆಗೆದುಕೊಳ್ಳುವುದು;

(12) ನಿಯಮಿಸಬಹುದಾದಂತೆ ಶುಲ್ಕವನ್ನು ನಿಗದಿಪಡಿಸುವುದು ಮತ್ತು ಅಂಥ ಶುಲ್ಕವನ್ನು ಕೇಳುವುದು ಹಾಗೂ ಸ್ವೀಕರಿಸುವುದು;

(13) ವಿಶ್ವವಿದ್ಯಾಲಯದ ದತ್ತಿಗಳು ಮತ್ತು ಇತರ ಸ್ವತ್ತುಗಳು ಹಾಗೂ ನಿಧಿಗಳನ್ನು ಧಾರಣ ಮಾಡುವುದು ಮತ್ತು ನಿರ್ವಹಿಸುವುದು;

(14) ಸರ್ಕಾರದ ಅನುಮೋದನೆಯೊಂದಿಗೆ ವಿಶ್ವವಿದ್ಯಾಲಯದ ಉದ್ದೇಶಗಳಿಗಾಗಿ ವಿಶ್ವವಿದ್ಯಾಲಯದ ಸ್ವತ್ತಿನ ಭದ್ರತೆಯ ಮೇಲೆ ಹಣವನ್ನು ಸಾಲ ಪಡೆಯುವುದು; ಮತ್ತು

(15) ವಿಶ್ವವಿದ್ಯಾಲಯದ ಗುರಿಗಳನ್ನು ಉತ್ತೇಜಿಸುವ ಉದ್ದೇಶಕ್ಕಾಗಿ, ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ಯಾವುದೇ ಸಂಸ್ಥೆಯ ವ್ಯವಸ್ಥಾಪನೆಯನ್ನು ವಹಿಸಿಕೊಳ್ಳುವುದು ಮತ್ತು ಅದರ ಎಲ್ಲ ಹಕ್ಕುಗಳು ಮತ್ತು ದಾಯಿತ್ವಗಳನ್ನು ವಶಕ್ಕೆ ತೆಗೆದುಕೊಳ್ಳುವುದೂ ಸೇರಿದಂತೆ ಇತರ ನಿಕಾಯಗಳು ಅಥವಾ ವ್ಯಕ್ತಿಗಳೊಂದಿಗೆ ಕರಾರು ಮಾಡಿಕೊಳ್ಳುವುದು.

6. ವಿಶ್ವವಿದ್ಯಾಲಯಕ್ಕೆ ಪ್ರವೇಶ.- (1) ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳಿಗೆ ಒಳಪಟ್ಟು ವಿಶ್ವವಿದ್ಯಾಲಯಕ್ಕೆ ಎಲ್ಲ ವ್ಯಕ್ತಿಗಳಿಗೂ ಮುಕ್ತ ಪ್ರವೇಶವಿರತಕ್ಕದ್ದು.

(2) (1)ನೇ ಉಪ-ಪ್ರಕರಣದಲ್ಲಿರುವುದಾವುದೂ,-

(ಎ) ನಿಯಮಿಸಲಾದ ಶೈಕ್ಷಣಿಕ ವಿದ್ಯಾರ್ಹತೆಯನ್ನು ಅಥವಾ ಗುಣಮಟ್ಟವನ್ನು ಹೊಂದಿರದ ಯಾವೊಬ್ಬ ವ್ಯಕ್ತಿಗೆ ಯಾವುದೇ ಅಧ್ಯಯನ ಕ್ರಮಕ್ಕೆ ಪ್ರವೇಶ ನೀಡಲು;

(ಬಿ) ಪದವಿ, ಡಿಪ್ಲೊಮಾ ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಯನ್ನು ನೀಡಲು ಅಗತ್ಯವಿರುವ ಕನಿಷ್ಠ ಮಟ್ಟಕ್ಕಿಂತ ಕಡಿಮೆಯ ಶೈಕ್ಷಣಿಕ ಪ್ರಗತಿಯನ್ನು ತೋರಿಸುವ ಯಾವೊಬ್ಬ ವಿದ್ಯಾರ್ಥಿಯನ್ನು ವಿಶ್ವವಿದ್ಯಾಲಯದ ಹಾಜರಿಪಟ್ಟಿಯಲ್ಲಿ ಉಳಿಸಿಕೊಳ್ಳಲು; ಅಥವಾ

(ಸಿ) ವಿಶ್ವವಿದ್ಯಾಲಯದ ಹಿತಾಸಕ್ತಿಗೆ ಅಥವಾ ಇತರ ವಿದ್ಯಾರ್ಥಿಗಳು ಮತ್ತು ಬೋಧಕರ ಹಕ್ಕುಗಳು ಮತ್ತು ವಿಶೇಷಾಧಿಕಾರಗಳಿಗೆ ಪ್ರತಿಕೂಲವಾದ ನಡತೆಯುಳ್ಳ ಯಾವೊಬ್ಬ ವ್ಯಕ್ತಿಗೆ ಪ್ರವೇಶ ನೀಡಲು ಅಥವಾ ಯಾವೊಬ್ಬ ವಿದ್ಯಾರ್ಥಿಯನ್ನು ಉಳಿಸಿ ಕೊಳ್ಳಲು;

–ವಿಶ್ವವಿದ್ಯಾಲಯವನ್ನು ಅಗತ್ಯಪಡಿಸತಕ್ಕದ್ದಲ್ಲ.

7. **ವಿಶ್ವವಿದ್ಯಾಲಯದ ಅಧಿಕಾರ ವ್ಯಾಪ್ತಿ.**– ವಿಶ್ವವಿದ್ಯಾಲಯದ ಅಧಿಕಾರ ವ್ಯಾಪ್ತಿಯು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪಿಸತಕ್ಕದ್ದು.

8. **ಪರಿಶೀಲನೆ.**– (1) ಕುಲಾಧಿಪತಿಯವರು, ತಾವು ನಿರ್ದೇಶಿಸಬಹುದಾದಂಥ ವ್ಯಕ್ತಿ ಅಥವಾ ವ್ಯಕ್ತಿಗಳಿಂದ, ವಿಶ್ವವಿದ್ಯಾಲಯ, ಅದರ ಕಟ್ಟಡಗಳು, ವಿಶ್ವವಿದ್ಯಾಲಯದ ಗ್ರಂಥಾಲಯಗಳು, ಸಂಗ್ರಹಾಲಯಗಳು ಮತ್ತು ಉಪಕರಣಗಳು ಮತ್ತು ವಿಶ್ವವಿದ್ಯಾಲಯದಿಂದ ನಿರ್ವಹಿಸಲಾದ ಅಥವಾ ಮಾನ್ಯತೆ ಪಡೆದ ಯಾವುವೇ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯದಿಂದ ನಡೆಸಲಾದ ಅಥವಾ ಮಾಡಲಾದ ಸಂಶೋಧನೆ, ಬೋಧನೆ ಮತ್ತು ಇತರ ಕೆಲಸದ ಪರಿಶೀಲನೆ ನಡೆಸುವಂತೆ ಮಾಡಲು ಅಥವಾ ವಿಚಾರಣೆ ಮಾಡುವಂತೆ ಮಾಡಲು ಹಕ್ಕು ಹೊಂದಿರತಕ್ಕದ್ದು ಹಾಗೂ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ವಿಚಾರಣೆ ನಡೆಸುವಂತೆ ಮಾಡತಕ್ಕದ್ದು. ಕುಲಾಧಿಪತಿಯವರು, ಪ್ರತಿಯೊಂದು ಸಂದರ್ಭದಲ್ಲೂ ಅಂಥ ಪರಿಶೀಲನೆ ಅಥವಾ ವಿಚಾರಣೆ ನಡೆಸುವ ತಮ್ಮ ಆಶಯದ ಬಗ್ಗೆ ವಿಶ್ವವಿದ್ಯಾಲಯಕ್ಕೆ ನೋಟೀಸು ನೀಡತಕ್ಕದ್ದು ಮತ್ತು ವಿಶ್ವವಿದ್ಯಾಲಯವು ಅಲ್ಲಿ ಪ್ರಾತಿನಿಧ್ಯ ಪಡೆಯಲು ಹಕ್ಕುಳ್ಳದ್ದಾಗಿರತಕ್ಕದ್ದು.

(2) ಕುಲಾಧಿಪತಿಯವರು, ಅಂಥ ಪರಿಶೀಲನೆ ಅಥವಾ ವಿಚಾರಣೆಯ ಪರಿಣಾಮಗಳ ಸಂಬಂಧದಲ್ಲಿ ತಮ್ಮ ಅಭಿಪ್ರಾಯಗಳನ್ನು ಪ್ರಶಾಸನ ಸಭೆಗೆ ತಿಳಿಸತಕ್ಕದ್ದು ಮತ್ತು ಅದರ ಮೇಲಣ ಪ್ರಶಾಸನ ಸಭೆಯ ಅಭಿಪ್ರಾಯವನ್ನು ಖಚಿತಪಡಿಸಿಕೊಂಡ ತರುವಾಯ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ವಿಶ್ವವಿದ್ಯಾಲಯಕ್ಕೆ ಸಲಹೆ ನೀಡತಕ್ಕದ್ದು ಮತ್ತು ಅಂಥ ಕ್ರಮವನ್ನು ಕೈಗೊಳ್ಳುವುದಕ್ಕೆ ಕಾಲಮಿತಿಯನ್ನು ನಿಗದಿಪಡಿಸಬಹುದು.

(3) ಪ್ರಶಾಸನ ಸಭೆಯು ಅಂಥ ಪರಿಶೀಲನೆ ಅಥವಾ ವಿಚಾರಣೆಯ ಫಲಿತಾಂಶಗಳ ಬಗ್ಗೆ ತಾನು ತೆಗೆದುಕೊಳ್ಳಬೇಕೆಂದು ಉದ್ದೇಶಿಸಲಾದ ಅಥವಾ ತೆಗೆದುಕೊಳ್ಳಲಾದ ಕ್ರಮ, ಯಾವುದಾದರೂ ಇದ್ದಲ್ಲಿ, ಆ ಬಗ್ಗೆ ಕುಲಾಧಿಪತಿಯವರಿಗೆ ವರದಿ ಸಲ್ಲಿಸತಕ್ಕದ್ದು. ಅಂಥ ವರದಿಯನ್ನು ಕುಲಾಧಿಪತಿಯವರು ನಿರ್ದೇಶಿಸಬಹುದಾದಂಥ ಕಾಲದೊಳಗೆ ಸಲ್ಲಿಸತಕ್ಕದ್ದು.

(4) ಪ್ರಶಾಸನ ಸಭೆಯು, (2)ನೇ ಉಪ-ಪ್ರಕರಣದ ಅಡಿಯಲ್ಲಿ ನಿಗದಿಪಡಿಸಬಹುದಾದ ಕಾಲಮಿತಿಯೊಳಗೆ ಕುಲಾಧಿಪತಿಯವರಿಗೆ ಸಮಾಧಾನವಾಗುವಂತೆ ಕ್ರಮಕೈಗೊಳ್ಳದಿರುವಲ್ಲಿ, ಕುಲಾಧಿಪತಿಯವರು, ಪ್ರಶಾಸನ ಸಭೆಯು ಸಲ್ಲಿಸಿದ ವಿವರಣೆ ಅಥವಾ ಮಾಡಿಕೊಂಡ ಮನವಿಯನ್ನು ಪರಿಗಣಿಸಿದ ತರುವಾಯ, ತಾವು ಉಚಿತವೆಂದು ಭಾವಿಸಬಹುದಾದಂಥ ನಿರ್ದೇಶನಗಳನ್ನು ಹೊರಡಿಸಬಹುದು ಪ್ರಶಾಸನ ಸಭೆಯು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು. ಪ್ರಶಾಸನ ಸಭೆಯು, ಕುಲಾಧಿಪತಿಯವರು ಆ ಬಗ್ಗೆ ನಿಗದಿಪಡಿಸಿದ ಅಂಥ ಕಾಲದೊಳಗಾಗಿ ಅಂಥ ನಿರ್ದೇಶನಗಳನ್ನು ಪಾಲಿಸದಿದ್ದ ಪಕ್ಷದಲ್ಲಿ, ಕುಲಾಧಿಪತಿಯವರು, ಅಂಥ ನಿರ್ದೇಶನಗಳನ್ನು ಪಾಲಿಸುವುದಕ್ಕಾಗಿ ಯಾವೊಬ್ಬ ವ್ಯಕ್ತಿ ಅಥವಾ ನಿಕಾಯವನ್ನು ನೇಮಿಸಲು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಆ ಬಗೆಗಿನ ವೆಚ್ಚಗಳಿಗಾಗಿ ಅವಶ್ಯಕವಾಗಬಹುದಾದ ಅಂಥ ಆದೇಶಗಳನ್ನು ಹೊರಡಿಸಬಹುದು.

(5) ರಾಜ್ಯ ಸರ್ಕಾರವು, ರಾಜ್ಯಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ ವಿಶ್ವವಿದ್ಯಾಲಯದ ಯಾವುದೇ ಆದೇಶ, ಅಧಿಸೂಚನೆ, ನಿರ್ಣಯ ಅಥವಾ ಯಾವುದೇ ವ್ಯವಹರಣೆಗಳು ಈ ಅಧಿನಿಯಮದ ಅಥವಾ ಶಾಸನಗಳು, ವಿನಿಯಮಗಳು ಅಥವಾ ಅಧ್ಯಾದೇಶಗಳ ಉಪಬಂಧಗಳಿಗೆ ಅನುಸಾರವಾಗಿ ಇಲ್ಲವೆಂದು ಅಥವಾ ಅನ್ಯಥಾ ರಾಜ್ಯ ಸರ್ಕಾರದ ನೀತಿಗಳಿಗೆ ಅಸಂಗತವಾಗಿವೆ ಎಂದು ಅಭಿಪ್ರಾಯ ಪಟ್ಟಲ್ಲಿ ಅವುಗಳನ್ನು ರದ್ದುಗೊಳಿಸಬಹುದು.

H.252-88

ಪರಂತು, ಅಂಥ ಯಾವುದೇ ಆದೇಶವನ್ನು ಮಾಡುವುದಕ್ಕೆ ಮೊದಲು ರಾಜ್ಯ ಸರ್ಕಾರವು ವಿಶ್ವವಿದ್ಯಾಲಯಕ್ಕೆ ತನ್ನ ಅಹವಾಲು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡತಕ್ಕದ್ದು.

(6) (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಆದೇಶವನ್ನು ಅದನ್ನು ಹೊರಡಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದು.

ಅಧ್ಯಾಯ – III

ವಿಶ್ವವಿದ್ಯಾಲಯದ ಅಧಿಕಾರಿಗಳು

9. ವಿಶ್ವವಿದ್ಯಾಲಯದ ಅಧಿಕಾರಿಗಳು.– ವಿಶ್ವವಿದ್ಯಾಲಯವು ಈ ಮುಂದಿನ ಅಧಿಕಾರಿಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(1) ಕುಲಾಧಿಪತಿಯವರು,

(2) ಸಹಕುಲಾಧಿಪತಿಯವರು,

(3) ಕುಲಪತಿಯವರು,

(4) ಫ್ಯಾಕಲ್ಟಿಗಳ ಡೀನ್‌ರವರು,

(5) ಕುಲಸಚಿವರು,

(6) ಹಣಕಾಸು ಅಧಿಕಾರಿ ಮತ್ತು

(7) ವಿಶ್ವವಿದ್ಯಾಲಯದ ಅಧಿಕಾರಿಗಳೆಂದು ಶಾಸನಗಳಿಂದ ಘೋಷಿತರಾಗಬಹುದಾದಂಥ ಇತರ ವ್ಯಕ್ತಿಗಳು.

10. ಕುಲಾಧಿಪತಿಯವರು.– (1) ಕರ್ನಾಟಕದ ರಾಜ್ಯಪಾಲರು ಈ ವಿಶ್ವವಿದ್ಯಾಲಯದ ಕುಲಾಧಿಪತಿಯಾಗಿರತಕ್ಕದ್ದು, ಅವರು ತಮ್ಮ ಪದದ ಆಧಾರದಿಂದ ವಿಶ್ವವಿದ್ಯಾಲಯದ ಮುಖ್ಯಸ್ಥರಾಗಿರತಕ್ಕದ್ದು ಮತ್ತು ಅವರು ಹಾಜರಿದ್ದಾಗ, ವಿಶ್ವವಿದ್ಯಾಲಯದ ಯಾವುದೇ ಘಟಿಕೋತ್ಸವದ ಅಧ್ಯಕ್ಷರಾಗಿರತಕ್ಕದ್ದು ಮತ್ತು ಪದವಿಗಳು, ಡಿಪ್ಲೋಮ ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಅವುಗಳನ್ನು ಸ್ವೀಕರಿಸಲು ಹಕ್ಕುಳ್ಳ ವ್ಯಕ್ತಿಗಳಿಗೆ ಪ್ರದಾನ ಮಾಡತಕ್ಕದ್ದು.

(2) ಪ್ರಾಧಿಕಾರಗಳಿಗೆ ವ್ಯಕ್ತಿಗಳನ್ನು ನಾಮನಿರ್ದೇಶನ ಮಾಡಲು ಕುಲಾಧಿಪತಿಯವರಿಗೆ ಅಧಿಕಾರವನ್ನು ಪ್ರದತ್ತಗೊಳಿಸಿರುವಲ್ಲಿ ಕುಲಾಧಿಪತಿಯವರು ಸಾಕಷ್ಟು ಪ್ರಾತಿನಿಧ್ಯ ಪಡೆಯದ ಹಿತಾಸಕ್ತಿಗಳನ್ನು ಪ್ರತಿನಿಧಿಸಲು ಅವಶ್ಯಕವಿರುವಷ್ಟರಮಟ್ಟಿಗೆ ವ್ಯಕ್ತಿಗಳನ್ನು ನಾಮನಿರ್ದೇಶಿಸತಕ್ಕದ್ದು.

(3) ಕುಲಾಧಿಪತಿಯವರು ಸ್ವತಃ ತಾವೇ ಆಗಲಿ ಅಥವಾ ಅರ್ಜಿಯ ಮೇಲೆ ಆಗಲಿ ಯಾವುವೇ ವ್ಯವಹರಣೆಗಳ ಸಂಬಂಧದಲ್ಲಿ ಅಂಥ ವ್ಯವಹರಣೆಗಳ ಸಕ್ರಮತೆ ಅಥವಾ ಯಥಾರ್ಥತೆ, ಕೈಗೊಳ್ಳಲಾದ ಯಾವುದೇ ತೀರ್ಮಾನ ಅಥವಾ ಅದರಲ್ಲಿ ಜಾರಿ ಮಾಡಲಾದ ಆದೇಶದ ಕಾನೂನು ಸಮ್ಮತತೆ ಅಥವಾ ಔಚಿತ್ಯದ ಬಗ್ಗೆ ತಾವೇ ಮನದಟ್ಟು ಮಾಡಿಕೊಳ್ಳಲು ವಿಶ್ವವಿದ್ಯಾನಿಲಯದ ಯಾವೊಬ್ಬ ಅಧಿಕಾರಿ ಅಥವಾ ಯಾವುದೇ ಪ್ರಾಧಿಕಾರದ ದಾಖಲೆಗಳನ್ನು ತರಿಸಿಕೊಂಡು ಪರೀಕ್ಷಿಸಬಹುದು ಮತ್ತು ಯಾವುದೇ ಸಂದರ್ಭದಲ್ಲಿ, ಕುಲಾಧಿಪತಿಯವರಿಗೆ, ಅಂಥ ಯಾವುದೇ ತೀರ್ಮಾನ ಅಥವಾ ಆದೇಶವನ್ನು ಮಾರ್ಪಾಟುಗೊಳಿಸಬೇಕು, ರದ್ದುಗೊಳಿಸಬೇಕು, ವಿಪರ್ಯಾಯಗೊಳಿಸಬೇಕು ಅಥವಾ ಪುನರ್ ಪರಿಶೀಲನೆಗಾಗಿ ಹಿಂದಕ್ಕೆ ಕಳುಹಿಸಬೇಕೆಂದು ತೋರಿದರೆ, ಅವರು ತದನುಸಾರವಾಗಿ ಆದೇಶಗಳನ್ನು ಜಾರಿ ಮಾಡಬಹುದು:

ಪರಂತು, ಈ ಪ್ರಕರಣದ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸುವುದಕ್ಕಾಗಿ, ಪ್ರತಿಯೊಂದು ಅರ್ಜಿಯನ್ನು, ಅರ್ಜಿಯ ಸಂಬಂಧದಲ್ಲಿನ ವ್ಯವಹರಣೆ, ತೀರ್ಮಾನ ಅಥವಾ ಆದೇಶವನ್ನು ಅರ್ಜಿದಾರನಿಗೆ ತಿಳಿಸಿದ ದಿನಾಂಕದಿಂದ ಮೂರು ತಿಂಗಳೊಳಗೆ ಕುಲಾಧಿಪತಿಯವರಿಗೆ ಸಲ್ಲಿಸತಕ್ಕದ್ದು:

ಮತ್ತು ಪರಂತು, ಯಾವೊಬ್ಬ ವ್ಯಕ್ತಿಗೆ ಪ್ರತಿಕೂಲವಾದ ಯಾವುದೇ ಆದೇಶವನ್ನು ಅಂಥ ವ್ಯಕ್ತಿಗೆ ತನ್ನ ಮನವಿಯನ್ನು ಸಲ್ಲಿಸಲು ಅವಕಾಶವನ್ನು ನೀಡಿದ್ದ ಹೊರತು, ಜಾರಿ ಮಾಡತಕ್ಕದ್ದಲ್ಲ.

(4) ಕುಲಾಧಿಪತಿಯವರು, ಈ ಅಧಿನಿಯಮದಿಂದ ಅಥವಾ ಅದರ ಅಡಿಯಲ್ಲಿ ತಮಗೆ ಪ್ರದತ್ತಗೊಳಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

11. ಸಹಕುಲಾಧಿಪತಿಯವರು.- (1) ಕರ್ನಾಟಕ ರಾಜ್ಯದಲ್ಲಿ, ಉನ್ನತ ಶಿಕ್ಷಣ ಖಾತೆಯ ಪ್ರಭಾರ ಹೊಂದಿರುವ ಸಚಿವರು, ವಿಶ್ವವಿದ್ಯಾಲಯದ ಸಹಕುಲಾಧಿಪತಿಗಳಾಗಿರತಕ್ಕದ್ದು.

(2) ಸಹಕುಲಾಧಿಪತಿಯವರು, ಈ ಅಧಿನಿಯಮದಿಂದ ಅಥವಾ ಅದರ ಅಡಿಯಲ್ಲಿ ತಮಗೆ ಪ್ರದತ್ತವಾಗಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

12. ಕುಲಪತಿಯವರು.- (1) (2)ನೇ ಉಪ ಪ್ರಕರಣದ ಅಡಿಯಲ್ಲಿ ಸರ್ಕಾರದ ಶಿಫಾರಸ್ಸಿನ ಮೇಲೆ ಕುಲಾಧಿಪತಿ ಅವರು ಕುಲಪತಿಯವರ ನೇಮಕಾತಿಯನ್ನು, ಮಾಡತಕ್ಕದ್ದು.

(2) (1)ನೇ ಉಪ ಪ್ರಕರಣದ ಉದ್ದೇಶಕ್ಕಾಗಿ, ಸರ್ಕಾರವು ಮೂವರು ವ್ಯಕ್ತಿಗಳನ್ನೊಳಗೊಂಡ ಒಂದು ಶೋಧನಾ ಸಮಿತಿಯನ್ನು ಸ್ಥಾಪಿಸತಕ್ಕದ್ದು; ಅವರುಗಳ ಪೈಕಿ ಒಬ್ಬರು ಕುಲಾಧಿಪತಿಯವರಿಂದ ನಾಮ ನಿರ್ದೇಶಿತರಾಗಿರತಕ್ಕದ್ದು. ಒಬ್ಬರು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ನಾಮನಿರ್ದೇಶಿತರಾಗಿರತಕ್ಕದ್ದು. ಹಾಗೂ ಒಬ್ಬರು ಸರ್ಕಾರ ದಿಂದ ನಾಮನಿರ್ದೇಶಿತರಾಗಿರತಕ್ಕದ್ದು. ಶೋಧನಾ ಸಮಿತಿಯು ಅಕಾರಾದಿ ಕ್ರಮದಲ್ಲಿ ಮೂವರು ವ್ಯಕ್ತಿಗಳ ಹೆಸರುಗಳನ್ನೊಳಗೊಂಡ ಪಟ್ಟಿಯೊಂದನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ಅಂಥ ಪಟ್ಟಿಯು, ಸದರಿ ಸಮಿತಿಯ ಯಾವೊಬ್ಬ ಸದಸ್ಯನ ಹೆಸರನ್ನು ಒಳಗೊಂಡಿರತಕ್ಕದ್ದಲ್ಲ. ಸದರಿ ಪಟ್ಟಿಯಲ್ಲಿರುವ ಮೂವರು ವ್ಯಕ್ತಿಗಳ ಪೈಕಿ ಒಬ್ಬರ ಹೆಸರನ್ನು ಕುಲಪತಿಯಾಗಿ ನೇಮಕ ಮಾಡಲು ಸರ್ಕಾರವು ಕುಲಾಧಿಪತಿಯವರಿಗೆ ಶಿಫಾರಸ್ಸು ಮಾಡತಕ್ಕದ್ದು, ಅವಶ್ಯಕವಾದರೆ ಒಂದು ಹೊಸ ಪಟ್ಟಿಯನ್ನು ಶೋಧನಾ ಸಮಿತಿಯಿಂದ ಸರ್ಕಾರವು ಪಡೆಯಬಹುದು. ಆದರಂತೆ ಸರ್ಕಾರವು ಅಂಥ ಬೇಡಿಕೆಯನ್ನು ಸಲ್ಲಿಸಿದಾಗ ಶೋಧನಾ ಸಮಿತಿಯು ಹೊಸದಾಗಿ ಮೂವರು ವ್ಯಕ್ತಿಗಳ ಹೆಸರುಗಳ ನ್ನೊಳಗೊಂಡ ಒಂದು ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು:

ಪರಂತು,-

(ಎ) ಹಾಗೆ ನಾಮನಿರ್ದೇಶಿತನಾದ ವ್ಯಕ್ತಿಯು ವಿಶ್ವವಿದ್ಯಾಲಯದ ಯಾವುವೇ ಪ್ರಾಧಿಕಾರಗಳ ಸದಸ್ಯನಾಗಿರತಕ್ಕದ್ದಲ್ಲ;

(ಬಿ) ಕುಲಾಧಿಪತಿಯವರಿಂದ ಹಾಗೆ ನಾಮನಿರ್ದೇಶಿತನಾದ ವ್ಯಕ್ತಿಯು, ಸಮಿತಿಯ ಸಭೆಗಳನ್ನು ಸಮಾವೇಶಗೊಳಿಸತಕ್ಕದ್ದು;

(3) ಕುಲಪತಿಯವರು ನಾಲ್ಕು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು ಮತ್ತು ಮರು ನೇಮಕಗೊಳ್ಳಲು ಅರ್ಹರಾಗಿರತಕ್ಕದ್ದು:

ಪರಂತು,-

(ಎ) ಅರವತ್ತೈದು ವರ್ಷ ವಯಸ್ಸಾದ ಯಾವೊಬ್ಬ ವ್ಯಕ್ತಿಯು ಕುಲಪತಿಯಾಗಿ ನೇಮಕವಾಗತಕ್ಕದ್ದಲ್ಲ ಅಥವಾ ಪದ ಧಾರಣ ಮಾಡತಕ್ಕದ್ದಲ್ಲ.

(ಬಿ) ಕುಲಪತಿಯವರು, ಕುಲಾಧಿಪತಿಯವರಿಗೆ, ಸ್ವತ: ಸಹಿ ಮಾಡಿದ ಪತ್ರ ಬರೆದು ಮತ್ತು ಎರಡು ತಿಂಗಳ ನೋಟಿಸನ್ನು ನೀಡಿದ ತರುವಾಯ ತಮ್ಮ ಪದಕ್ಕೆ ರಾಜೀನಾಮೆ ನೀಡಬಹುದು.

ಮತ್ತೂ ಪರಂತು, ಕುಲಪತಿಯಾಗಿ ನೇಮಕಗೊಂಡ ವ್ಯಕ್ತಿಯು, ತನ್ನ ಸೇವಾವಧಿಯಲ್ಲಿ ಅರವತ್ತೈದು ವರ್ಷಗಳು ಪೂರ್ಣಗೊಳಿಸಿದರೆ ಪದದಿಂದ ನಿವೃತ್ತರಾಗತಕ್ಕದ್ದು.

(4) ಕುಲಪತಿಯವರ ಹುದ್ದೆಯು ತಾತ್ಕಾಲಿಕವಾಗಿ ಖಾಲಿಯಾದಲ್ಲಿ ಅಥವಾ ಅವರ ರಜೆಯ ಕಾರಣದಿಂದಾಗಿ ಅಥವಾ ಇನ್ನಾವುದೇ ಕಾರಣಗಳಿಗಾಗಿ ಗೈರುಹಾಜರಾದಲ್ಲಿ ಅವರು ತಮ್ಮ ಪದದ ಅಧಿಕಾರಗಳನ್ನು ಚಲಾಯಿಸಲು ಅಥವಾ ಕರ್ತವ್ಯಗಳನ್ನು ನೆರವೇರಿಸಲು ಸಾಧ್ಯವಿಲ್ಲದಿದ್ದರೆ ವಿಶ್ವವಿದ್ಯಾಲಯದ ಅತ್ಯಂತ ಹಿರಿಯ ಪ್ರಾಧ್ಯಾಪಕರು, ಕುಲಾಧಿಪತಿಯವರ ಅನುಮೋದನೆ ಪಡೆದು ಕುಲಪತಿಯವರ ಕರ್ತವ್ಯಗಳನ್ನು ನಿರ್ವಹಿಸಬಹುದು.

(5) ಕುಲಪತಿಯವರನ್ನು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದನ್ನು ಉದ್ದೇಶಪೂರ್ವಕವಾಗಿ ಬಿಟ್ಟುಬಿಟ್ಟಿದ್ದಾರೆ ಅಥವಾ ಕಾರ್ಯಗತಗೊಳಿಸಲು ನಿರಾಕರಿಸಿದ್ದಾರೆ ಅಥವಾ ಅವರಲ್ಲಿ ನಿಹಿತವಾದ ಅಧಿಕಾರಗಳನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂಬ ಕಾರಣದ ಮೇಲೆ ಮತ್ತು ರಾಜ್ಯ ಸರ್ಕಾರವು (6)ನೇ ಉಪ ಪ್ರಕರಣದ ಅಡಿಯಲ್ಲಿ

ತಾನು ಆದೇಶಿಸಿದ್ದ ಒಂದು ವಿಚಾರಣೆಯ ವರದಿಯನ್ನು ಪರಿಗಣಿಸಿದ ನಂತರ ನೀಡಿದ ಸಲಹೆಯ ಮೇಲೆ ಕುಲಾಧಿಪತಿಯವರು ಹೊರಡಿಸಿದ ಆದೇಶದ ಮೂಲಕವಾಗಿ ಅಲ್ಲದೆ, ಅವರ ಹುದ್ದೆಯಿಂದ ತೆಗೆದುಹಾಕತಕ್ಕದ್ದಲ್ಲ.

(6) ಈ ಪ್ರಕರಣದ ಅಡಿಯಲ್ಲಿ ಒಂದು ವಿಚಾರಣೆಯನ್ನು ನಡೆಸುವ ಉದ್ದೇಶಕ್ಕಾಗಿ, ರಾಜ್ಯಸರ್ಕಾರವು, ಉಚ್ಚ ನ್ಯಾಯಾಲಯದ ಅಥವಾ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿರುವ ಅಥವಾ ಆಗಿದ್ದ ವ್ಯಕ್ತಿಯನ್ನು ನೇಮಕ ಮಾಡತಕ್ಕದ್ದು. ವಿಚಾರಣಾ ಪ್ರಾಧಿಕಾರವು, ಕುಲಪತಿಯವರಿಗೆ ತಮ್ಮ ಮನವಿಯನ್ನು ಸಲ್ಲಿಸಲು ಅವಕಾಶ ನೀಡಿದ ನಂತರ ವಿಚಾರಣೆ ನಡೆಸತಕ್ಕದ್ದು ಮತ್ತು ವಿಧಿಸಬೇಕಾದ ಯಾವುದೇ ದಂಡನೆ ಇದ್ದರೆ, ಅದೂ ಒಳಗೊಂಡಂತೆ ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ಒಂದು ವರದಿಯನ್ನು ರಾಜ್ಯಸರ್ಕಾರಕ್ಕೆ ಸಲ್ಲಿಸತಕ್ಕದ್ದು. ರಾಜ್ಯ ಸರ್ಕಾರವು, ವರದಿಯನ್ನು ಪರಿಶೀಲಿಸಿದ ನಂತರ, ಕುಲಾಧಿಪತಿಯವರಿಗೆ ಸಲಹೆ ನೀಡತಕ್ಕದ್ದು. ಕುಲಾಧಿಪತಿಯವರು ಸಾಧ್ಯವಾದಷ್ಟುಮಟ್ಟಿಗೆ ಆರು ತಿಂಗಳೊಳಗಾಗಿ ಅಂಥ ಸಲಹೆಗೆ ಅನುಸಾರವಾಗಿ ಕ್ರಮ ಕೈಗೊಳ್ಳತಕ್ಕದ್ದು.

(7) ಕುಲಪತಿಯವರ ಉಪಲಬ್ಧಿಗಳು ಮತ್ತು ಇತರ ಸೇವಾ ಷರತ್ತುಗಳು ಕುಲಾಧಿಪತಿಯವರು ನಿರ್ಧರಿಸಬಹುದಾದಂತೆ ಇರತಕ್ಕದ್ದು ಮತ್ತು ಅವುಗಳನ್ನು ಅವರು ಕುಲಪತಿಯಾಗಿ ನೇಮಕವಾದ ತರುವಾಯ ಅವರಿಗೆ ಅನಾನುಕೂಲವಾಗುವಂತೆ ಬದಲಾಯಿಸತಕ್ಕದ್ದಲ್ಲ. ಕುಲಪತಿಯಾಗಿ ತಮ್ಮ ಅಧಿಕಾರಾವಧಿಯಲ್ಲಿರುವಾಗ ಕುಲಪತಿಯವರು ವಯೋನಿವೃತ್ತಿಯ ಮೇಲೆ ನಿವೃತ್ತರಾಗುವ ಸಂದರ್ಭದಲ್ಲಿ, ಈಗಾಗಲೇ ನಿರ್ಧರಿಸಲಾದ ಅವರ ಸೇವಾ ಷರತ್ತುಗಳು ಮುಂದುವರಿಯತಕ್ಕದ್ದು. ಅವರ ಎಲ್ಲ ನಿವೃತ್ತಿ ಸೌಲಭ್ಯಗಳನ್ನು ತಡೆಹಿಡಿಯತಕ್ಕದ್ದು, ಅವುಗಳನ್ನು ಅವರು ಕುಲಪತಿಯಾಗಿ ತಮ್ಮ ಅಧಿಕಾರ ಸ್ಥಾನವನ್ನು ತ್ಯಜಿಸಿದ ನಂತರ ಬಿಡುಗಡೆ ಮಾಡತಕ್ಕದ್ದು.

(8) ನಿವೃತ್ತರಾದ ಒಬ್ಬ ವ್ಯಕ್ತಿಯು, ಕುಲಪತಿಯಾಗಿ ನೇಮಕಗೊಂಡರೆ, ಅವರು ಕುಲಪತಿಯಾಗಿ ನೇಮಕಗೊಂಡ ಮೇಲೆ, ಅವರ ಉಪಲಬ್ಧಿಗಳೂ ಸೇರಿದಂತೆ ಅವರ ಸೇವಾ ನಿಬಂಧನೆ ಮತ್ತು ಷರತ್ತುಗಳನ್ನು ಕುಲಾಧಿಪತಿಯವರು ನಿರ್ಣಯಿಸತಕ್ಕದ್ದು. ಅವರು ಪಡೆಯುವ ನಿವೃತ್ತಿ ವೇತನದ ಮೊತ್ತವನ್ನು ಮತ್ತು ಭತ್ಯೆಗಳನ್ನು ಅವರ ಉಪಲಬ್ಧಿಗಳಿಂದ ಕಳೆಯತಕ್ಕದ್ದು.

(9) ರಾಜ್ಯದಲ್ಲಿನ ಒಂದು ವಿಶ್ವವಿದ್ಯಾಲಯದ ಸೇವೆಯಲ್ಲಿರುವ ಒಬ್ಬ ಪ್ರಾಧ್ಯಾಪಕರನ್ನು, ಕುಲಪತಿಯಾಗಿ ನೇಮಕ ಮಾಡಿದರೆ, ಅವರು ಕುಲಪತಿಯಾಗಿರುವಾಗಿನ ಪದಾವಧಿಯಲ್ಲಿ ಪ್ರಾಧ್ಯಾಪಕರಾಗಿ ಅವರ ಸೇವಾ ನಿಬಂಧನೆ ಮತ್ತು ಷರತ್ತುಗಳನ್ನು ಅವರಿಗೆ ಅನಾನುಕೂಲವಾಗುವಂತೆ ಪರಿಷ್ಕರಿಸತಕ್ಕದ್ದಲ್ಲ ಮತ್ತು ಅವರು ತಮ್ಮ ಹುದ್ದೆಯ ಧಾರಣಾಧಿಕಾರವನ್ನು ಉಳಿಸಿಕೊಳ್ಳತಕ್ಕದ್ದು.

13. ಕುಲಪತಿಯವರ ಅಧಿಕಾರಗಳು ಮತ್ತು ಕರ್ತವ್ಯಗಳು.- (1) ಕುಲಪತಿಯವರು ಶೈಕ್ಷಣಿಕ ಮುಖ್ಯಸ್ಥರು ಮತ್ತು ವಿಶ್ವವಿದ್ಯಾಲಯದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರತಕ್ಕದ್ದು ಮತ್ತು ಕುಲಾಧಿಪತಿಯವರು ಮತ್ತು ಸಹಕುಲಾಧಿಪತಿಯವರ ಗೈರುಹಾಜರಿಯಲ್ಲಿ, ವಿಶ್ವವಿದ್ಯಾಲಯದ ಯಾವುದೇ ಘಟಿಕೋತ್ಸವದ ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಪದವಿಗಳು, ಡಿಪ್ಲೊಮಾ ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು, ಅವುಗಳನ್ನು ಸ್ವೀಕರಿಸಲು ಹಕ್ಕುಳ್ಳವರಾಗಿರುವ ವ್ಯಕ್ತಿಗಳಿಗೆ ಪ್ರದಾನ ಮಾಡತಕ್ಕದ್ದು. ಅವರು ಪ್ರಶಾಸನ ಸಭೆಯ, ಪ್ರಶಿಕ್ಷಣ ಪರಿಷತ್ತಿನ ಹಾಗೂ ಹಣಕಾಸು ಸಮಿತಿಯ ಪದನಿಮಿತ್ತ ಸದಸ್ಯರಾಗಿದ್ದು ಅವುಗಳ ಅಧ್ಯಕ್ಷರಾಗಿರತಕ್ಕದ್ದು ಮತ್ತು ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಯಾವುದೇ ಸಭೆಯಲ್ಲಿ ಹಾಜರಿದ್ದು ಅಲ್ಲಿ ಭಾಷಣ ಮಾಡಲು ಹಕ್ಕುಳ್ಳವರಾಗಿರತಕ್ಕದ್ದು. ಆದರೆ ಅವರು, ಸಂಬಂಧಪಟ್ಟ ಪ್ರಾಧಿಕಾರದ ಒಬ್ಬ ಸದಸ್ಯರಾಗಿದ್ದ ಹೊರತು ಅಲ್ಲಿ ಮತ ನೀಡಲು ಹಕ್ಕುಳ್ಳವರಾಗಿರತಕ್ಕದ್ದಲ್ಲ.

(2) ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳನ್ನು ಪಾಲಿಸಲಾಗಿದೆ ಮತ್ತು ಅವುಗಳನ್ನು ನೆರವೇರಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಕುಲಪತಿಯವರ ಕರ್ತವ್ಯವಾಗಿರತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ಅವರು ಅವಶ್ಯಕವಾದ ಎಲ್ಲ ಅಧಿಕಾರಗಳನ್ನು ಚಲಾಯಿಸಬಹುದು.

(3) ಕುಲಪತಿಯವರು ಪ್ರಶಾಸನ ಸಭೆ, ಪ್ರಶಿಕ್ಷಣ ಪರಿಷತ್ತು ಮತ್ತು ಹಣಕಾಸು ಸಮಿತಿಯ ಸಭೆಗಳನ್ನು ಸಮಾವೇಶಗೊಳಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

(4) (ಎ) ಕುಲಪತಿಯವರು ಯಾವುದೇ ವಿಷಯದ ಬಗ್ಗೆ ಕ್ರಮಕೈಗೊಳ್ಳಲು ಅಧಿಕಾರ ಹೊಂದಿರತಕ್ಕದ್ದು ಮತ್ತು ತಾವು ಅವಶ್ಯವೆಂದು

ಭಾವಿಸುವಂಥ ಕ್ರಮವನ್ನು ಆದೇಶದ ಮೂಲಕ ಕೈಗೊಳ್ಳತಕ್ಕದ್ದು. ಆದರೆ, ತದನಂತರ ಸಾಧ್ಯವಾದಷ್ಟು ಬೇಗನೆ, ಕೈಗೊಳ್ಳಲಾದ ಕ್ರಮವನ್ನು, ವಿಷಯ ವನ್ನು ಸಾಮಾನ್ಯವಾಗಿ ವ್ಯವಹರಿಸುತ್ತಿದ್ದ ಅಧಿಕಾರಿ ಅಥವಾ ಪ್ರಾಧಿಕಾರ ಅಥವಾ ನಿಕಾಯಕ್ಕೆ ವರದಿ ಮಾಡತಕ್ಕದ್ದು:

ಪರಂತು, ಬಾಧಿತನಾಗುವ ಸಂಭವವಿರುವ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡಿದ ಹೊರತು ಅಂಥ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(ಬಿ) ಈ ಉಪ-ಪ್ರಕರಣದ ಅಡಿಯಲ್ಲಿ ಕುಲಪತಿಯವರು ಕೈಗೊಂಡ ಕ್ರಮವು ವಿಶ್ವವಿದ್ಯಾಲಯದ ಸೇವೆಯಲ್ಲಿರುವ ಯಾವೊಬ್ಬ ವ್ಯಕ್ತಿಯನ್ನು ಬಾಧಿಸಿದಾಗ, ಅಂಥ ವ್ಯಕ್ತಿಯು, ಅಂಥ ಕ್ರಮದ ಬಗ್ಗೆ ನೋಟೀಸನ್ನು ತಾನು ಪಡೆದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಪ್ರಶಾಸನ ಸಭೆಗೆ ಒಂದು ಅಪೀಲನ್ನು ಸಲ್ಲಿಸಲು ಹಕ್ಕುಳ್ಳವನಾಗಿರತಕ್ಕದ್ದು. ಕುಲಪತಿಯವರು ಅಂಥ ಅಪೀಲಿನ ಮೇಲೆ ಪ್ರಶಾಸನ ಸಭೆಯು ಹೊರಡಿಸಿದ ಆದೇಶವನ್ನು ಜಾರಿತರತಕ್ಕದ್ದು.

(5) ಕುಲಪತಿಯವರು, ವಿಶ್ವವಿದ್ಯಾಲಯದ ಬೋಧಕರು ಮತ್ತು ಇತರ ಉದ್ಯೋಗಿಗಳ ನೇಮಕಾತಿ, ಅಮಾನತ್ತುಗೊಳಿಸುವಿಕೆ ಮತ್ತು ವಜಾ ಇವುಗಳಿಗೆ ಸಂಬಂಧಿಸಿದಂತೆ ಪ್ರಶಾಸನ ಸಭೆಯ ಆದೇಶಗಳನ್ನು ಜಾರಿಗೊ ಳಿಸತಕ್ಕದ್ದು.

(6) ಕುಲಪತಿಯವರು, ವಿಶ್ವವಿದ್ಯಾಲಯದ ವ್ಯವಹಾರಗಳ ಮೇಲೆ ನಿಯಂತ್ರಣವನ್ನು ಹೊಂದಿರತಕ್ಕದ್ದು ಮತ್ತು ವಿಶ್ವವಿದ್ಯಾಲಯದಲ್ಲಿ ಶಿಸ್ತನ್ನು ಯಥೋಚಿತವಾಗಿ ಪಾಲಿಸುವಂತೆ ನೋಡಿಕೊಳ್ಳಲು ಜವಾಬ್ದಾರರಾಗಿರತಕ್ಕದ್ದು.

(7) ಕುಲಪತಿಯವರು, ನಿಯಮಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

14. ಫ್ಯಾಕಲ್ಟಿಗಳ ಡೀನರು.– (1) ಕುಲಪತಿಯವರು, ಪ್ರತಿಯೊಬ್ಬ ಡೀನ್‌ರನ್ನು, ಫ್ಯಾಕಲ್ಟಿಯಲ್ಲಿರುವ ಪ್ರಾಧ್ಯಾಪಕರ ಪೈಕಿಯಿಂದ, ಮೂರು ವರ್ಷಗಳ ಅವಧಿಗಾಗಿ ನೇಮಕ ಮಾಡತಕ್ಕದ್ದು ಮತ್ತು ಅವರು ಪುನರ್ ನೇಮಕಕ್ಕೆ ಅರ್ಹರಾಗಿರತಕ್ಕದ್ದು:

ಪರಂತು, ಫ್ಯಾಕಲ್ಟಿಯಲ್ಲಿ ಯಾವುದೇ ಕಾಲದಲ್ಲಿ ಪ್ರಾಧ್ಯಾಪಕರು ಇರದಿದ್ದರೆ, ಕುಲಪತಿಯವರು ಫ್ಯಾಕಲ್ಟಿಯ ಡೀನರ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(2) ಡೀನರ ಪದವು, ಖಾಲಿಯಾಗಿದ್ದಾಗ, ಅಥವಾ ಅನಾರೋಗ್ಯದ, ಗೈರುಹಾಜರಿಯ ಅಥವಾ ಇತರ ಯಾವುದೇ ಕಾರಣದಿಂದ ತಮ್ಮ ಪದದ ಕರ್ತವ್ಯಗಳನ್ನು ನಿರ್ವಹಿಸಲು ಅಸಮರ್ಥರಾದಾಗ, ಅವರ ಪದದ ಕರ್ತವ್ಯಗಳನ್ನು ಈ ಉದ್ದೇಶಕ್ಕಾಗಿ ಕುಲಪತಿಯವರು ನೇಮಕ ಮಾಡಬಹುದಾದಂಥ ವ್ಯಕ್ತಿಯು ನೆರವೇರಿಸತಕ್ಕದ್ದು.

(3) ಡೀನರು ಫ್ಯಾಕಲ್ಟಿಯ ಮುಖ್ಯಸ್ಥರಾಗಿರತಕ್ಕದ್ದು ಮತ್ತು ಫ್ಯಾಕಲ್ಟಿಯಲ್ಲಿ ಸಂಶೋಧನೆಯನ್ನು ನಡೆಸುವುದಕ್ಕೆ ಮತ್ತು ಗುಣಮಟ್ಟಗಳನ್ನು ಕಾಪಾಡಿಕೊಂಡುಬರುವುದಕ್ಕೆ ಹೊಣೆಗಾರರಾಗಿರತಕ್ಕದ್ದು. ಡೀನ್‌ರು ನಿಯಮಿಸಬಹುದಾದಂಥ ಪ್ರಕಾರ್ಯಗಳನ್ನು ಹೊಂದಿರತಕ್ಕದ್ದು.

(4) ಡೀನರು ಸಂದರ್ಭಾನುಸಾರ ಅಧ್ಯಯನ ಮಂಡಳಿಗಳ ಅಥವಾ ಫ್ಯಾಕಲ್ಟಿಯ ಸಮಿತಿಯ ಯಾವುದೇ ಸಭೆಯಲ್ಲಿ ಹಾಜರಿರಲು ಮತ್ತು ಮಾತನಾಡಲು ಅಧಿಕಾರ ಹೊಂದಿರತಕ್ಕದ್ದು, ಆದರೆ ಅವರು ಅದರ ಸದಸ್ಯರಾಗಿದ್ದ ಹೊರತು ಮತ ನೀಡಲು ಅಧಿಕಾರ ಹೊಂದಿರತಕ್ಕದ್ದಲ್ಲ.

15. ಕುಲಸಚಿವ.- (1) ಕುಲಸಚಿವರು ವಿಶ್ವವಿದ್ಯಾಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು. ಸರ್ಕಾರವು, ಕರ್ನಾಟಕ ಆಡಳಿತ ಸೇವೆಗಳಿಗೆ ಸೇರಿದ, ಹಿರಿಯ ವೇತನ ಶ್ರೇಣಿಯ ಅಥವಾ ಅದಕ್ಕಿಂತ ಹೆಚ್ಚಿನ ಶ್ರೇಣಿಯ ಒಬ್ಬ ಅಧಿಕಾರಿಯನ್ನು ವಿಶ್ವವಿದ್ಯಾಲಯದ ಕುಲಸಚಿವರಾಗಿ ನೇಮಕ ಮಾಡಬಹುದು.

(2) ಕುಲಸಚಿವರು, ಪ್ರಶಾಸನ ಸಭೆ ಮತ್ತು ಪ್ರಶಿಕ್ಷಣ ಪರಿಷತ್ತಿನ ಪದನಿಮಿತ್ತ ಸದಸ್ಯ ಕಾರ್ಯದರ್ಶಿ ಮತ್ತು ಹಣಕಾಸು ಸಮಿತಿಯ ಸದಸ್ಯ ಆಗಿರತಕ್ಕದ್ದು.

(3) ಕುಲಸಚಿವರಿಗೆ ಒಬ್ಬರು ಅಥವಾ ಹೆಚ್ಚು ಉಪ-ಕುಲಸಚಿವರು ಹಾಗೂ ಸಹಾಯಕ ಕುಲಸಚಿವರುಗಳು ಸಹಾಯಕರಾಗಿರಬಹುದು.

16. ಕುಲಸಚಿವರ ಅಧಿಕಾರಗಳು ಮತ್ತು ಕರ್ತವ್ಯಗಳು.- (1) (ಎ) ಕುಲಸಚಿವರು, ಪ್ರಶಾಸನ ಸಭೆಯ ಆದೇಶಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಬೋಧಕರು ಮತ್ತು ಶೈಕ್ಷಣಿಕ ಸಿಬ್ಬಂದಿಯ ಹೊರತಾಗಿ ಅಂಥ

H-252-89

ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಮತ್ತು ವಿಚಾರಣೆ ಇತ್ಯರ್ಥದಲ್ಲಿರುವಾಗ ಅಮಾನತುಗೊಳಿಸಲು, ಅವರಿಗೆ ಎಚ್ಚರಿಕೆ ನೀಡಲು ಅಥವಾ ಅವರಿಗೆ ವಾಗ್ದಂಡನೆ ಅಥವ ವೇತನ ಬಡ್ತಿಗಳನ್ನು ತಡೆಹಿಡಿಯಲು ಅಧಿಕಾರ ಹೊಂದಿರತಕ್ಕದ್ದು:

ಪರಂತು, ಈ ಸಂಬಂಧದಲ್ಲಿ ಕೈಗೊಳ್ಳಲು ಉದ್ದೇಶಿಸಿದ ಕ್ರಮದ ವಿರುದ್ಧ ಕಾರಣ ತೋರಿಸುವ ಸೂಕ್ತ ಅವಕಾಶವನ್ನು ಸಂಬಂಧಪಟ್ಟ ವ್ಯಕ್ತಿಗೆ ನೀಡಿದ ಹೊರತು, ಅಂಥ ಯಾವುದೇ ದಂಡವನ್ನು ವಿಧಿಸತಕ್ಕದ್ದಲ್ಲ.

(ಬಿ) (ಎ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ದಂಡವನ್ನು ವಿಧಿಸುವ ಕುಲಸಚಿವರ ಆದೇಶದ ವಿರುದ್ಧ ಕುಲಾಧಿಪತಿಯವರಿಗೆ ಅಪೀಲನ್ನು ಸಲ್ಲಿಸಬಹುದು.

(ಸಿ) ಕುಲಸಚಿವರ ಅಧಿಕಾರಗಳಿಗೆ ಮೀರಿ ದಂಡ ವಿಧಿಸುವ ಅಗತ್ಯವಿದೆ ಎಂದು ವಿಚಾರಣೆಯಿಂದ ತಿಳಿದು ಬಂದ ಸಂದರ್ಭದಲ್ಲಿ, ಕುಲಸಚಿವರು, ವಿಚಾರಣೆಯಲ್ಲಿಯ ತೀರ್ಮಾನದ ಮೇಲೆ ತನ್ನ ಶಿಫಾರಸ್ಸುಗಳೊಡನೆ ಕುಲಪತಿಯವರಿಗೆ ಒಂದು ವರದಿಯನ್ನು ಸಲ್ಲಿಸತಕ್ಕದ್ದು;

ಪರಂತು, ದಂಡ ವಿಧಿಸುವಂತೆ ಕುಲಪತಿಯವರು ಮಾಡಿದ ಆದೇಶದ ವಿರುದ್ಧ ಪ್ರಶಾಸನ ಸಭೆಗೆ ಅಪೀಲನ್ನು ಸಲ್ಲಿಸತಕ್ಕದ್ದು.

(ಡಿ) (ಬಿ) ಖಂಡದ ಅಥವಾ (ಸಿ) ಖಂಡದ ಅಡಿಯಲ್ಲಿ ಯಾವುದೇ ಅಪೀಲನ್ನು, ಅಪೀಲುದಾರನು ಯಾವ ಆದೇಶದ ವಿರುದ್ಧ ಅಪೀಲು ಸಲ್ಲಿಸಿರುವರೋ ಆ ಆದೇಶದ ದಿನಾಂಕದಿಂದ ಅರವತ್ತು ದಿನಗಳು ಮುಕ್ತಾಯವಾದ ತರುವಾಯ ಸಲ್ಲಿಸತಕ್ಕದಲ್ಲ.

(2) ಕುಲಸಚಿವರು, ಪ್ರಶಾಸನ ಸಭೆಯ, ಪ್ರಶಿಕ್ಷಣ ಪರಿಷತ್ತಿನ ಫ್ಯಾಕಲ್ಟಿಗಳ ಮತ್ತು ಅಧ್ಯಯನ ಮಂಡಲಿಗಳ ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು.

(3) ಈ ಮುಂದಿನವುಗಳು ಕುಲಸಚಿವರ ಕರ್ತವ್ಯಗಳಾಗಿರತಕ್ಕದ್ದು:-

(ಎ) ಕುಲಪತಿಯವರು ಅಥವಾ ಪ್ರಶಾಸನ ಸಭೆಯು ತಮ್ಮ ಪ್ರಭಾರಕ್ಕೆ ಒಪ್ಪಿಸಿದ ವಿಶ್ವವಿದ್ಯಾಲಯದ ದಾಖಲೆಗಳ, ಸಾಮಾನ್ಯ ಮೊಹರಿನ ಮತ್ತು ಇತರ ಸ್ವತ್ತಿನ ಅಭಿರಕ್ಷಕರಾಗಿರತಕ್ಕದ್ದು;

(ಬಿ) ಪ್ರಶಾಸನ ಸಭೆಯ, ಪ್ರಶಿಕ್ಷಣ ಪರಿಷತ್ತಿನ, ಅಧ್ಯಯನ ಮಂಡಳಿಗಳ, ಪರೀಕ್ಷಾ ಮಂಡಳಿಗಳ ಮತ್ತು

ವಿಶ್ವವಿದ್ಯಾಲಯದ ಪ್ರಾಧಿಕಾರಗಳು ನೇಮಕಮಾಡಿದ ಯಾವುದೇ ಸಮಿತಿಯ ಸಭೆಗಳನ್ನು ನಡೆಸುವುದಕ್ಕೆ ನೋಟೀಸುಗಳನ್ನು ನೀಡತಕ್ಕದ್ದು;

(ಸಿ) ಪ್ರಶಾಸನ ಸಭೆಯ, ಪ್ರಶಿಕ್ಷಣ ಪರಿಷತ್ತಿನ, ಅಧ್ಯಯನ ಮಂಡಳಿಗಳ, ಪರೀಕ್ಷಕರ ಮಂಡಳಿಗಳ ಮತ್ತು ವಿಶ್ವವಿದ್ಯಾಲಯದ ಪ್ರಾಧಿಕಾರಗಳು ನೇಮಕ ಮಾಡಿದ ಸಮಿತಿಗಳ ಸಭೆಗಳ ಎಲ್ಲಾ ವ್ಯವಹರಣೆಗಳ ಸಭಾ ನಡೆವಳಿಗಳನ್ನು ಇಟ್ಟುಕೊಂಡು ಬರತಕ್ಕದ್ದು;

(ಡಿ) ಪ್ರಶಾಸನ ಸಭೆಯ ಮತ್ತು ಪ್ರಶಿಕ್ಷಣ ಪರಿಷತ್ತಿನ ಅಧಿಕೃತ ಪತ್ರ ವ್ಯವಹಾರಗಳನ್ನು ನಡೆಸತಕ್ಕದ್ದು;

(ಇ) ವಿಶ್ವವಿದ್ಯಾಲಯದ ಪ್ರಾಧಿಕಾರಗಳ ಸಭೆಗಳ ಕಾರ್ಯಸೂಚಿಯ ಪ್ರತಿಗಳನ್ನು, ಅವುಗಳನ್ನು ಹೊರಡಿಸಿದ ಕೂಡಲೇ ಮತ್ತು ಅಂಥ ಸಭೆಗಳ ಸಭಾ ನಡವಳಿಗಳ ಪ್ರತಿಗಳನ್ನು, ಅಂಥ ಸಭೆ ನಡೆದ ಒಂದು ತಿಂಗಳ ಒಳಗೆ ಕುಲಾಧಿಪತಿಯವರಿಗೆ ಕಳುಹಿಸಿಕೊಡತಕ್ಕದ್ದು; ಮತ್ತು

(ಎಫ್) ಶಾಸನಗಳಲ್ಲಿ, ನಿರ್ದಿಷ್ಟಪಡಿಸಿದ ಅಥವಾ ಪ್ರಶಾಸನ ಸಭೆಯು ಅಥವಾ ಕುಲಪತಿಯವರು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

(4) ಕುಲಸಚಿವರ ಸ್ಥಾನವು ಖಾಲಿಯಾದಾಗ ಅಥವಾ ಕುಲಸಚಿವರು, ಖಾಯಿಲೆ, ಗೈರು ಹಾಜರಿ ಅಥವಾ ಇನ್ನಾವುದೇ ಕಾರಣದಿಂದ ತನ್ನ ಸ್ಥಾನದ ಕರ್ತವ್ಯಗಳನ್ನು ನೆರವೇರಿಸುವುದು ಸಾಧ್ಯವಾಗದಿದ್ದಾಗ ಕುಲಸಚಿವರ ಕರ್ತವ್ಯಗಳನ್ನು ಉದ್ದೇಶವಾಗಿ ಕುಲಪತಿಯವರು ನೇಮಿಸಬಹುದಾದ ವ್ಯಕ್ತಿಯು ನೆರವೇರಿಸತಕ್ಕದ್ದು.

17. ಹಣಕಾಸು ಅಧಿಕಾರಿ.- ಹಣಕಾಸು ಅಧಿಕಾರಿಯು, ಈ ಬಗ್ಗೆ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಅವಧಿಗೆ ಸರ್ಕಾರದಿಂದ ನೇಮಕಗೊಂಡ ವಿಶ್ವವಿದ್ಯಾಲಯದ ಒಬ್ಬ ಪೂರ್ಣಕಾಲಿಕ ವೇತನ ಪಡೆಯುವ ಅಧಿಕಾರಿಯಾಗಿರತಕ್ಕದ್ದು ಮತ್ತು ಹಣಕಾಸು ಅಧಿಕಾರಿಯ ಸೇವಾ

ಷರತ್ತುಗಳು ಮತ್ತು ನಿಬಂಧನೆಗಳು ಮೊದಲನೇ ಶಾಸನ ನಿರ್ದಿಷ್ಟಪಡಿಸಿದಂಥವುಗಳಾಗಿರತಕ್ಕದ್ದು.

18. ಹಣಕಾಸು ಅಧಿಕಾರಿಯ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು.– (1) ಹಣಕಾಸು, ಅಧಿಕಾರಿಯ ಉಪಲಬ್ಧಿಗಳು ಮತ್ತು ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂಥವುಗಳಾಗಿರತಕ್ಕದ್ದು. ಹಣಕಾಸು ಅಧಿಕಾರಿಯು ತನಗೆ ಅರವತ್ತು ವರ್ಷಗಳ ವಯಸ್ಸಾದಾಗ ಅಥವಾ 17ನೇ ಪ್ರಕರಣದಲ್ಲಿ ಸರ್ಕಾರವು ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾದ ಮೇಲೆ, ಇವುಗಳಲ್ಲಿ ಯಾವುದು ಮೊದಲೋ ಆಗ ನಿವೃತ್ತರಾಗತಕ್ಕದ್ದು.

ಪರಂತು, ಹಣಕಾಸು ಅಧಿಕಾರಿಯು ಅರವತ್ತು ವರ್ಷ ವಯಸ್ಸಾಗಿದ್ದರೂ ಅವರ ಉತ್ತರಾಧಿಕಾರಿಯು ನೇಮಕವಾಗಿ ಅಧಿಕಾರವಹಿಸಿಕೊಳ್ಳುವವರೆಗೂ ಅಥವಾ ಒಂದು ವರ್ಷದ ಅವಧಿಯು ಮುಕ್ತಾಯವಾಗುವವರೆಗೂ, ಇವುಗಳಲ್ಲಿ ಯಾವುದು ಮೊದಲೋ ಆ ವರೆಗೆ ಪದದಲ್ಲಿ ಮುಂದುವರಿಯತಕ್ಕದ್ದು.

(2) ಹಣಕಾಸು ಅಧಿಕಾರಿಯ ಸ್ಥಾನವು ಖಾಲಿಯಾಗಿದ್ದಾಗ ಅಥವಾ ಅನಾರೋಗ್ಯ, ಗೈರು ಹಾಜರಿ ಅಥವಾ ಯಾವುದೇ ಇತರ ಕಾರಣದಿಂದ ತಮ್ಮ ಅಧಿಕಾರ ಸ್ಥಾನದ ಕರ್ತವ್ಯಗಳನ್ನು ನಿರ್ವಹಿಸಲು ಅಸಮರ್ಥರಾದಾಗ, ಹಣಕಾಸು ಅಧಿಕಾರಿಯ ಕರ್ತವ್ಯಗಳನ್ನು ಈ ಉದ್ದೇಶಕ್ಕಾಗಿ ಕುಲಪತಿಯವರು ನೇಮಕಮಾಡಬಹುದಾದಂಥ ವ್ಯಕ್ತಿಯು ನೆರವೇರಿಸತಕ್ಕದ್ದು.

(3) ಹಣಕಾಸು ಅಧಿಕಾರಿಯು, ಹಣಕಾಸು ಸಮಿತಿಯ ಪದನಿಮಿತ್ತ ಕಾರ್ಯದರ್ಶಿಯಾಗಿರತಕ್ಕದ್ದು, ಆದರೆ ಅವರು ಆ ಸಮಿತಿಯ ಸದಸ್ಯರೆಂದು ಭಾವಿಸತಕ್ಕದ್ದಲ್ಲ ;

(4) (ಎ) ಹಣಕಾಸು ಅಧಿಕಾರಿಯು, ವಿಶ್ವವಿದ್ಯಾಲಯದ ನಿಧಿಗಳ ಮೇಲೆ ಸಾಮಾನ್ಯ ಮೇಲ್ವಿಚಾರಣೆ ನಡೆಸತಕ್ಕದ್ದು ಮತ್ತು ವಿಶ್ವವಿದ್ಯಾಲಯಕ್ಕೆ ಅದರ ಹಣಕಾಸು ನೀತಿಯ ಸಂಬಂಧದಲ್ಲಿ ಸಲಹೆ ನೀಡತಕ್ಕದ್ದು ; ಮತ್ತು

(ಬಿ) ನಿಯಮಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು :

ಪರಂತು, ಹಣಕಾಸು ಅಧಿಕಾರಿಯು, ಪ್ರಶಾಸನ ಸಭೆಯ ಪೂರ್ವಾನುಮತಿಯಿಲ್ಲದೇ ನಿಯಮಿಸಬಹುದಾದಂಥ ಮೊತ್ತಕ್ಕೆ ಮೀರಿ

ಯಾವುದೇ ವೆಚ್ಚವನ್ನು ವಹಿಸತಕ್ಕದ್ದಲ್ಲ ಅಥವಾ ಯಾವುದೇ ಹೂಡಿಕೆ ಮಾಡತಕ್ಕದ್ದಲ್ಲ

(5) ಪ್ರಶಾಸನ ಸಭೆಯ ನಿಯಂತ್ರಣಕ್ಕೊಳಪಟ್ಟು ಹಣಕಾಸು ಅಧಿಕಾರಿಯು,-

(ಎ) ನ್ಯಾಸದ ಮತ್ತು ದತ್ತಿ ನೀಡಲಾದ ಸ್ವತ್ತು ಒಳಗೊಂಡಂತೆ ವಿಶ್ವವಿದ್ಯಾಲಯದ ಸ್ವತ್ತನ್ನು ಮತ್ತು ಹೂಡಿಕೆಗಳನ್ನು ಧಾರಣಮಾಡತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(ಬಿ) ಒಂದು ವರ್ಷಕ್ಕಾಗಿ ಆವರ್ತಕ ಮತ್ತು ಅನಾವರ್ತಕ ವೆಚ್ಚಗಳು ಪ್ರಶಾಸನ ಸಭೆಯು ನಿಗದಿಪಡಿಸಿದ ಪರಿಮಿತಿಗಳನ್ನು ಮೀರದಂತೆ ಮತ್ತು ಯಾವ ಉದ್ದೇಶಕ್ಕಾಗಿ ಆ ಹಣವನ್ನು ಮಂಜೂರುಮಾಡಲಾಗಿತ್ತೋ ಅಥವಾ ಹಂಚಿಕೆಮಾಡಲಾಗಿತ್ತೋ ಅದಕ್ಕಾಗಿ ಬಳಸುವಂತೆ ನೋಡಿಕೊಳ್ಳತಕ್ಕದ್ದು.

(ಸಿ) ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಗಳು ಆರ್ಥಿಕ ಅಂದಾಜುಗಳು ಮತ್ತು ಬಜೆಟ್‌ಅನ್ನು ಸಿದ್ಧಪಡಿಸುವುದಕ್ಕೆ ಮತ್ತು ಅದನ್ನು ಪ್ರಶಾಸನ ಸಭೆಯ ಮುಂದೆ ಮಂಡಿಸುವುದಕ್ಕೆ ಜಬಾಬ್ದಾರರಾಗಿರತಕ್ಕದ್ದು.

(ಡಿ) ನಗದು ಮತ್ತು ಬ್ಯಾಂಕ್ ಶಿಲ್ಕು ಮತ್ತು ಹೂಡಿಕೆಗಳ ಮೇಲೆ ನಿರಂತರ ಗಮನವಿಡತಕ್ಕದ್ದು.

(ಇ) ರಾಜಸ್ವ ಸಂಗ್ರಹಣೆಯ ಪ್ರಗತಿಯನ್ನು ಮತ್ತು ಅನುಸರಿಸ ಬೇಕಾದ ಸಂಗ್ರಹಣಾವಿಧಾನಗಳ ಮೇಲೆ ಗಮನವಿಡತಕ್ಕದ್ದು.

(ಎಫ್) ಕಟ್ಟಡಗಳ, ಭೂಮಿಯ, ಪೀಠೋಪಕರಣಗಳ ಮತ್ತು ಸಲಕರಣೆಗಳ ರಿಜಿಸ್ಟರುಗಳನ್ನು ಇಂದೀಕರಿಸಿ ನಿರ್ವಹಿಸತಕ್ಕದ್ದು ಮತ್ತು ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ ಎಲ್ಲ ಕಛೇರಿಗಳಲ್ಲಿ ಮತ್ತು ಇತರ ಸ್ಥಳಗಳಲ್ಲಿ ಸಲಕರಣೆಗಳ ಮತ್ತು ಇತರ ಬಳಕೆವಸ್ತುಗಳ ದಾಸ್ತಾನು ಪರೀಕ್ಷೆ ಮಾಡುವಂತೆ ನೋಡಿಕೊಳ್ಳತಕ್ಕದ್ದು.

(ಜಿ) ಯಾವುದೇ ಅನಧಿಕೃತ ವೆಚ್ಚದ ಬಗ್ಗೆ ಅಥವಾ ಇತರ ಹಣಕಾಸು ಅಕ್ರಮಗಳ ಬಗ್ಗೆ ಕುಲಪತಿಯವರ ಗಮನಕ್ಕೆ ತರತಕ್ಕದ್ದು ಮತ್ತು ತಪ್ಪಿತಸ್ಥ ವ್ಯಕ್ತಿಗಳ ವಿರುದ್ಧ ಸೂಕ್ತ ಕ್ರಮಕೈಗೊಳ್ಳುವುದಕ್ಕೆ ಸಲಹೆ ನೀಡತಕ್ಕದ್ದು ; ಮತ್ತು

(ಎಚ್) ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ ಯಾವುದೇ ಕಛೇರಿ ಅಥವಾ ಇತರ ಸ್ಥಳದಿಂದ ತನ್ನ ಕರ್ತವ್ಯಗಳನ್ನು ನೆರವೇರಿಸುವುದಕ್ಕಾಗಿ

ತಾನು ಅಗತ್ಯವೆಂದು ಭಾವಿಸಬಹುದಾದ ಮಾಹಿತಿ ಅಥವಾ ವಿವರಣಾ ಪಟ್ಟಿಗಳನ್ನು ಕೇಳಿ ತರಿಸಿಕೊಳ್ಳತಕ್ಕದ್ದು.

(6) ವಿಶ್ವವಿದ್ಯಾನಿಲಯಕ್ಕೆ ಸಂದಾಯವಾಗತಕ್ಕ ಯಾವುದೇ ಹಣಕ್ಕಾಗಿ ಹಣಕಾಸು ಅಧಿಕಾರಿಯ ಅಥವಾ ಪ್ರಶಾಸನ ಸಭೆಯು ಈ ಸಂಬಂಧದಲ್ಲಿ ವಿಧ್ಯುಕ್ತವಾಗಿ ಪ್ರಾಧೀಕರಿಸಿದ ವ್ಯಕ್ತಿಯು ಅಥವಾ ವ್ಯಕ್ತಿಗಳು ನೀಡಿದ ರಸೀದಿಗಳು ಅಂಥ ಹಣದ ಸಂದಾಯವಾಗಿರುವುದಕ್ಕೆ ಪರ್ಯಾಪ್ತ ತೀರಿಕೆ ಯಾಗಿರತಕ್ಕದ್ದು.

ಅಧ್ಯಾಯ – IV

ವಿಶ್ವವಿದ್ಯಾಲಯದ ಪ್ರಾಧಿಕಾರಗಳು

19. ವಿಶ್ವವಿದ್ಯಾಲಯದ ಪ್ರಾಧಿಕಾರಗಳು.– ಪ್ರಶಾಸನ ಸಭೆ, ಪ್ರಶಿಕ್ಷಣ ಪರಿಷತ್ತು, ಫ್ಯಾಕಲ್ಟಿಗಳು ಮತ್ತು ಹಣಕಾಸು ಸಮಿತಿ, ಅಧ್ಯಯನ ಮಂಡಳಿ ಗಳು, ಮತ್ತು ವಿಶ್ವವಿದ್ಯಾಲಯದ ಪ್ರಾಧಿಕಾರಗಳೆಂದು ಶಾಸನಗಳ ಮೂಲಕ ಘೋಷಿಸಬಹುದಾದಂಥ ಇತರ ಪ್ರಾಧಿಕಾರಗಳು, ವಿಶ್ವವಿದ್ಯಾಲಯದ ಪ್ರಾಧಿಕಾರಗಳಾಗಿರತಕ್ಕದ್ದು.

20. ಪ್ರಶಾಸನ ಸಭೆ.– ಕುಲಾಧಿಪತಿಯವರು, ಪ್ರಥಮ ಕುಲಪತಿ ಯವರ ನೇಮಕವಾದ ಮೇಲೆ ಆದಷ್ಟುಬೇಗನೇ ಈ ಮುಂದಿನ ವ್ಯಕ್ತಿಗಳನ್ನು ಒಳಗೊಂಡ ಪ್ರಶಾಸನಸಭೆಯನ್ನು ರಚಿಸತಕ್ಕದ್ದು, ಎಂದರೆ:–

(ಎ) ಕುಲಪತಿ

(ಬಿ) ಉನ್ನತ ಶಿಕ್ಷಣದ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಅವರ ನಾಮನಿರ್ದೇಶಿತರು.

(ಸಿ) ಆರ್ಥಿಕ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಅವರ ನಾಮನಿರ್ದೇಶಿತರು.

(ಡಿ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಅವರ ನಾಮನಿರ್ದೇಶಿತರು.

(ಇ) ಅಧ್ಯಕ್ಷರು, ವಿಶ್ವವಿದ್ಯಾಲಯ ಅನುದಾನ ಆಯೋಗ ಅಥವಾ ಅವರ ನಾಮನಿರ್ದೇಶಿತರು.

(ಎಫ್) ಮಹಾನಿರ್ದೇಶಕರು, ಪುರಾತತ್ವ ಇಲಾಖೆ, ಭಾರತ ಸರ್ಕಾರ

(ಜಿ) ಪ್ರಸಿದ್ಧ ಶಿಕ್ಷಣ ತಜ್ಞರು, ಸಂಗೀತ, ಪ್ರದರ್ಶನಕಲೆಗಳ ಕ್ಷೇತ್ರದ ಮತ್ತು ಇತರ ತತ್ಸಂಬಂಧಿತ ವೃತ್ತಿಗಳ ವ್ಯಕ್ತಿಗಳ ಪೈಕಿಯಿಂದ ಕುಲಾಧಿಪತಿಯವರು ನಾಮನಿರ್ದೇಶಿಸಿದ ಇಬ್ಬರು ಸದಸ್ಯರು, ಇವರ ಪೈಕಿ ಒಬ್ಬರು ಮಹಿಳೆ ಆಗಿರತಕ್ಕದ್ದು.

(ಎಚ್) ಪ್ರಸಿದ್ಧ ಸಂಸ್ಕೃತ ಶಿಕ್ಷಣ ತಜ್ಞರು ಅಥವಾ ಸಂಸ್ಕೃತ ಸಾಹಿತ್ಯಕೃತಿ ರಚಿಸಿದ ಪ್ರಸಿದ್ಧ ವ್ಯಕ್ತಿಗಳು ಮತ್ತು ಪ್ರಶಸ್ತಿ ವಿಜೇತರು ಹಾಗೂ ಇತರ ವೃತ್ತಿಗಳ ವ್ಯಕ್ತಿಗಳಿಂದ ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಆರು ವ್ಯಕ್ತಿಗಳು ಅವರಲ್ಲಿ,-

(i) ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಒಬ್ಬ ವ್ಯಕ್ತಿ;

(ii) ಇತರ ಹಿಂದುಳಿದ ವರ್ಗಗಳಿಗೆ ಸೇರಿದ ಒಬ್ಬ ವ್ಯಕ್ತಿ,

(iii) ಒಬ್ಬ ಮಹಿಳೆ

(iv) ಧಾರ್ಮಿಕ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಒಬ್ಬ ವ್ಯಕ್ತಿ ಮತ್ತು

(v) ಇತರೆ ಇಬ್ಬರು.

– ಇರತಕ್ಕದ್ದು

ಪರಂತು, ಘಟಕ ಕಾಲೇಜಿನಲ್ಲಿ ಅಥವಾ ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಸಾಮರ್ಥ್ಯದಲ್ಲಿ ನಿಯೋಜಿತನಾದ ಯಾವೊಬ್ಬ ವ್ಯಕ್ತಿಯೂ ನಾಮನಿರ್ದೇಶನಕ್ಕೆ ಅರ್ಹನಾಗಿರತಕ್ಕದ್ದಲ್ಲ.

(ಐ) ಕರ್ನಾಟಕ ವಿಧಾನಸಭೆಯಿಂದ ಮತ್ತು ಕರ್ನಾಟಕ ವಿಧಾನ ಪರಿಷತ್ತಿನಿಂದ ಚುನಾಯಿತರಾದ ಒಬ್ಬೊಬ್ಬ ಸದಸ್ಯರು.

21. ಪದಾವಧಿ.– (1) ಈ ಅಧಿನಿಯಮದ ಅಡಿಯಲ್ಲಿಯ ಯಾವುದೇ ಪ್ರಾಧಿಕಾರಗಳಿಗೆ ನಾಮನಿರ್ದೇಶಿತನಾದ ಯಾವೊಬ್ಬ ಸದಸ್ಯನು ಸಂಬಂಧಪಟ್ಟ ನಾಮನಿರ್ದೇಶಿಸುವ ಪ್ರಾಧಿಕಾರದ ಇಷ್ಟಪರ್ಯಂತ ಪದಧಾರಣ ಮಾಡತಕ್ಕದ್ದು. ಈ ಅಧಿನಿಯಮದ ಅಡಿಯಲ್ಲಿಯ ಯಾವುದೇ ಪ್ರಾಧಿಕಾರಗಳಿಗೆ ನಾಮನಿರ್ದೇಶಿತನಾದ ಯಾವೊಬ್ಬ ವ್ಯಕ್ತಿಯು ಎರಡನೇ ಅವಧಿಗಾಗಿ ನಾಮನಿರ್ದೇಶಿತನಾಗುವುದಕ್ಕೆ ಅಥವಾ ಚುನಾಯಿತನಾಗುವುದಕ್ಕೆ ಅರ್ಹನಾಗಿರತಕ್ಕದ್ದಲ್ಲ:

ಪರಂತು, ನಾಮನಿರ್ದೇಶಿತನಾದ ಒಬ್ಬ ಪ್ರಶಾಸನ ಸಭೆಯ ಸದಸ್ಯನು, ಯಾವ ಹುದ್ದೆಯ ಕಾರಣದಿಂದ ತಾನು ಪ್ರಶಾಸನ ಸಭೆಯ ಸದಸ್ಯನಾಗುವನೋ ಅಂಥ ಒಂದು ಹುದ್ದೆಗೆ ತಾತ್ಕಲಿಕವಾಗಿ ನೇಮಕನಾಗಿರುವಲ್ಲಿ ತಾನು ನೇಮಕನಾದ ಹುದ್ದೆಯ ಪ್ರಭಾರವನ್ನು ತೆಗೆದುಕೊಂಡ ದಿನದಿಂದ ಏಳು ದಿನಗಳ ಒಳಗೆ ತಾನು ಸಹಿಮಾಡಿದ ಲಿಖಿತ ನೋಟೀಸನ್ನು ಕುಲಪತಿಯವರಿಗೆ ನೀಡಿ ತನ್ನ ನಾಮ ನಿರ್ದೇಶನದ ಬಲದಿಂದ ಪ್ರಶಾಸನ ಸಭೆಯ ಸದಸ್ಯನಾಗಿ ಮುಂದುವರೆಯುವನೋ ಅಥವಾ ಅಂಥ ಸದಸ್ಯನ ಪದವನ್ನು ಬಿಟ್ಟುಕೊಟ್ಟು ಹುದ್ದೆಯ ಬಲದಿಂದ ಪದನಿಮಿತ್ತ ಸದಸ್ಯನಾಗುವುದನ್ನು ಆಯ್ಕೆ ಮಾಡಿಕೊಳ್ಳುವನೋ ಎಂಬುದನ್ನು ತಿಳಿಸತಕ್ಕದ್ದು ಮತ್ತು ಸದರಿ ಆಯ್ಕೆಯು ಅಂತಿಮವಾಗಿರತಕ್ಕದ್ದು, ಅಂಥ ಆಯ್ಕೆಯನ್ನು ಮಾಡಲು ತಪ್ಪಿದರೆ ಅವನು ನಾಮನಿರ್ದೇಶಿತ ಸದಸ್ಯನಾಗಿ ತನ್ನ ಸ್ಥಾನವನ್ನು ಖಾಲಿಮಾಡಿದ್ದಾನೆಂದು ಭಾವಿಸತಕ್ಕದ್ದು.

(2) ಒಬ್ಬ ವ್ಯಕ್ತಿಯು ಪ್ರಶಾಸನಸಭೆಯ ಸದಸ್ಯನಾಗಿರುವುದು ನಿಂತುಹೋದಾಗ, ಅವನು ಪ್ರಶಾಸನ ಸಭೆಯ ಸದಸ್ಯನಾಗಿರುವ ಬಲದಿಂದ ವಿಶ್ವವಿದ್ಯಾಲಯದ ಯಾವುದೇ ಇತರ ಪ್ರಾಧಿಕಾರದ ಸದಸ್ಯನಾಗಿರುವುದೂ ನಿಂತುಹೋಗತಕ್ಕದ್ದು.

(3) ಪ್ರಶಾಸನ ಸಭೆಯ ಸದಸ್ಯನು, ಅನುಮತಿಸಬಹುದಾದಂಥ ದಿನಭತ್ಯೆ ಮತ್ತು ಪ್ರಯಾಣ ಭತ್ಯೆಗಳ ಹೊರತಾಗಿ ವಿಶ್ವವಿದ್ಯಾನಿಲಯದಿಂದ ಯಾವುದೇ ಸಂಭಾವನೆಯನ್ನು ಸ್ವೀಕರಿಸಲು ಹಕ್ಕುಳ್ಳವನಾಗಿರತಕ್ಕದ್ದಲ್ಲ ;

ಪರಂತು, ಮೂರನೇ ಉಪ ಪ್ರಕರಣದಲ್ಲಿ ಇರುವುದಾವುದು ತಾನು ಧಾರಣಮಾಡಿದ ಹುದ್ದೆಯ ಬಲದಿಂದ ಹಕ್ಕುಳ್ಳವನಾಗಿರುವ ತನ್ನ ಸಾಮಾನ್ಯ ಉಪಲಬ್ಧಿಗಳನ್ನು ಪಡೆದುಕೊಳ್ಳದಂತೆ ಯಾವುಬ್ಬ ಸದಸ್ಯನನ್ನು ತಡೆಯತಕ್ಕದ್ದಲ್ಲ.

(4) ಪದನಿಮಿತ್ತ ಸದಸ್ಯನಲ್ಲದ ಒಬ್ಬ ಪ್ರಶಾಸನಸಭೆಯ ಸದಸ್ಯನು ತನ್ನ ಪದಾವಧಿಯು ಮುಕ್ತಾಯವಾಗುವ ಮೊದಲು ಯಾವುದೇ ಸಮಯದಲ್ಲಿ ತನ್ನ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಬಹುದು. ಅಂಥ ರಾಜೀನಾಮೆಯನ್ನು ಸದಸ್ಯನು ಲಿಖಿತಪತ್ರದ ಮೂಲಕ ಕುಲಾಧಿಪತಿಯವರಿಗೆ ಕಳುಹಿಸಿಕೊಡತಕ್ಕದ್ದು ಮತ್ತು ರಾಜೀನಾಮೆಯು, ಕುಲಾಧಿಪತಿಯವರು ಅಂಗೀಕರಿಸಿದ ದಿನಾಂಕದಿಂದ ಪರಿಣಾಮಕ್ಕೆ ಬರತಕ್ಕದ್ದು.

(5) ಯಾವುವೇ ಪ್ರಾಧಿಕಾರಗಳಿಗೆ ನಾಮನಿರ್ದೇಶಿತನಾದ ಯಾವೊಬ್ಬ ಸದಸ್ಯನು, ಆತನ ದುರ್ವ್ಯವಹಾರ, ದುರ್ನಡತೆ ಅಥವಾ ಅನ್ಯ ಕಾರಣದ ಮೇಲೆ ಆ ಬಗ್ಗೆ ವಿಚಾರಣೆ ನಡೆಸಿದ ತರುವಾಯ ಕುಲಾಧಿಪತಿ ಯವರು ಯಾವುದೇ ಸಮಯದಲ್ಲಿ ಸದಸ್ಯತ್ವದಿಂದ ತೆಗೆದುಹಾಕುವುದಕ್ಕೆ ಬದ್ಧನಾಗಿರತಕ್ಕದ್ದು.

22. ಪ್ರಶಾಸನ ಸಭೆಯ ಅಧಿಕಾರಗಳು.– ಪ್ರಶಾಸನ ಸಭೆಯು ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ವಿಶ್ವವಿದ್ಯಾಲಯದ ಆಡಳಿತಾತ್ಮಕ ಕಾರ್ಯನೀತಿಗಳು, ಕಾರ್ಯಕ್ರಮಗಳು ಮತ್ತು ಪ್ರಕಾರ್ಯಗಳ ನಿರ್ವಹಣೆಯ ಪರಿಶೀಲನೆಮಾಡತಕ್ಕದ್ದು, ಮತ್ತು ಈ ಮುಂದಿನ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಹೊಂದಿರತಕ್ಕದ್ದು, ಎಂದರೆ :–

(1) ವಿಶ್ವವಿದ್ಯಾಲಯದ ಆಡಳಿತಾತ್ಮಕ ಕಾರ್ಯನೀತಿಗಳನ್ನು ಮತ್ತು ಕಾರ್ಯಕ್ರಮಗಳನ್ನು ಮತ್ತು ಕಾರ್ಯ ನಿರ್ವಹಣೆಯನ್ನು ಕಾಲಕಾಲಕ್ಕೆ ಪರಿಶೀಲಿಸುವುದು ಮತ್ತು ವಿಶ್ವವಿದ್ಯಾಲಯದ ಸುಧಾರಣೆಗಾಗಿ ಕ್ರಮಗಳನ್ನು ಸಲಹೆಮಾಡುವುದು ;

(2) ಸಲಹೆಗಾಗಿ ಕಳುಹಿಸಿಕೊಡಬಹುದಾದ ಯಾವುದೇ ವಿಷಯದ ಸಂಬಂಧದಲ್ಲಿ ಕುಲಾಧಿಪತಿಯವರಿಗೆ ಸಲಹೆ ನೀಡುವುದು ;

(3) ಅದು ನಿರ್ಧರಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಉದ್ದೇಶಗಳಿಗಾಗಿ ಇತರೆ ವಿಶ್ವವಿದ್ಯಾಲಯಗಳೊಡನೆ, ಇತರ ಪ್ರಶಿಕ್ಷಣ ಪ್ರಾಧಿಕಾರಗಳೊಡನೆ ಮತ್ತು ಕಾಲೇಜುಗಳೊಡನೆ ಸಹಕರಿಸುವುದು;

(4) ಸಂಸ್ಕೃತ ಭಾಷೆಯಲ್ಲಿ ಮತ್ತು ಸಾಹಿತ್ಯದಲ್ಲಿ ಸಂಶೋಧನೆ ಮುಂದುವರಿಕೆ ಮತ್ತು ಜ್ಞಾನದ ಪ್ರಸಾರಕ್ಕಾಗಿ ಅವಕಾಶ ಕಲ್ಪಿಸುವುದು ;

(5) ವಿಶ್ವವಿದ್ಯಾಲಯಕ್ಕೆ ಅಗತ್ಯವಾದ ಉಪನ್ಯಾಸಕರ, ರೀಡರುಗಳ, ಪ್ರಾಧ್ಯಾಪಕರ ಮತ್ತು ಯಾವುದೇ ಇತರ ಅಧ್ಯಾಪಕ ವರ್ಗದ ಅಥವಾ ಸಂಶೋಧನೆಯ ಹುದ್ದೆಗಳನ್ನು ಪ್ರಾರಂಭಿಸುವುದು ;

(6) ಪದವಿಗಳು, ಡಿಪ್ಲೋಮ ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರಾರಂಭಿಸುವುದು ;

(7) ನಿಯಮಿಸಬಹುದಾದ ಷರತ್ತುಗಳಿಗೊಳಪಟ್ಟು ಸಂಶೋಧನೆ ನಡೆಸುವ ವ್ಯಕ್ತಿಗಳಿಗೆ ಪದವಿಗಳು, ಡಿಪ್ಲೋಮ ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರದಾನಮಾಡುವುದು ;

H.252-90

(8) ಪ್ರಶಾಸನ ಸಭೆಯ ಸದಸ್ಯರ ಪೈಕಿ ಮೂರನೆ ಎರಡಕ್ಕಿಂತ ಕಡಿಮೆಯಿಲ್ಲದ ಸದಸ್ಯರು ಶಿಫಾರಸ್ಸು ಮಾಡಿದ ಗೌರವ ಪದವಿಗಳು ಅಥವಾ ಇತರ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು.

(9) ಶಾಸನಗಳಿಗೆ ಅನುಸಾರವಾಗಿ, ಫೆಲೋಷಿಪ್‌ಗಳು, ವಿದ್ಯಾರ್ಥಿವೇತನಗಳು, ಬರ್ಸರಿಗಳು, ಪ್ರದರ್ಶಿಕೆಗಳು, ಪದಕಗಳು ಮತ್ತು ಪಾರಿತೋಷಕಗಳನ್ನು ಪ್ರಾರಂಭಿಸುವುದು ಮತ್ತು ಅವುಗಳನ್ನು ನೀಡುವುದು.

(10) ವಾರ್ಷಿಕ ವರದಿ, ವಾರ್ಷಿಕ ಲೆಕ್ಕಪತ್ರಗಳು, ಮತ್ತು ಹಣಕಾಸು ಅಂದಾಜುಗಳನ್ನು ಪರಿಗಣಿಸುವುದು ಮತ್ತು ಅವುಗಳ ಬಗ್ಗೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ಕ್ರಮಕೈಗೊಳ್ಳುವುದು.

(11) ಯಾವುದೇ ಸಂಸ್ಥೆಯ ಆಡಳಿತವನ್ನು ವಹಿಸಿಕೊಳ್ಳುವುದಕ್ಕಾಗಿ ಮತ್ತು ಅದರ ಆಸ್ತಿಗಳನ್ನು ಮತ್ತು ಹೊಣೆಗಾರಿಕೆಗಳನ್ನು ವಹಿಸಿಕೊಳ್ಳುವುದಕ್ಕಾಗಿ ಅಥವಾ ಈ ಅಧಿನಿಯಮದ ಉಪಬಂಧಗಳಿಗೆ ವಿರೋಧವಾಗಿರದ ಯಾವುದೇ ಇತರ ಉದ್ದೇಶಗಳಿಗಾಗಿ ಕೇಂದ್ರ ಅಥವಾ ಯಾವುದೇ ಇತರ ರಾಜ್ಯ ಸರ್ಕಾರದೊಡನೆ ಅಥವಾ ಖಾಸಗಿ ಸಂಸ್ಥೆಯೊಡನೆ ಯಾವುದೇ ಒಪ್ಪಂದ ಮಾಡಿಕೊಳ್ಳುವುದು;

(12) ವಿಶ್ವ ವಿದ್ಯಾಲಯದ ಸ್ವತ್ತುಗಳ ಮತ್ತು ನಿಧಿಗಳನ್ನು ಧಾರಣ ಮಾಡುವುದು, ನಿಯಂತ್ರಿಸುವುದು ಮತ್ತು ಆಡಳಿತ ನಡೆಸುವುದು.

(13) ವಿಶ್ವವಿದ್ಯಾಲಯದ ಸಾಮಾನ್ಯ ಮೊಹರಿನ ಸ್ವರೂಪ, ಅಭಿರಕ್ಷೆ ಮತ್ತು ಬಳಕೆಯನ್ನು ನಿರ್ದೇಶಿಸುವುದು;

(14) ಈ ಅಧಿನಿಯಮಕ್ಕೆ ಮತ್ತು ಶಾಸನಗಳಿಗೆ ಅನುಸಾರವಾಗಿ ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನು ವಿನಿಯಮಗೊಳಿಸುವುದು ಮತ್ತು ನಿರ್ಧರಿಸುವುದು;

(15) ನಿರ್ದಿಷ್ಟ ಉದ್ದೇಶಗಳಿಗಾಗಿ ವಿಶ್ವವಿದ್ಯಾಲಯದ ವಿಲೆಗಾಗಿ ಒಪ್ಪಿಸಿದ ಎಲ್ಲ ಸ್ವತ್ತುಗಳ ಮತ್ತು ಎಲ್ಲ ನಿಧಿಗಳ ಆಡಳಿತ ನಡೆಸುವುದು;

(16) (ಎ) ವಿಶ್ವವಿದ್ಯಾಲಯದ ಉಪನ್ಯಾಸಕರು, ವಿಶ್ವವಿದ್ಯಾಲಯದ ರೀಡರ್‌ಗಳು, ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ವಿಶ್ವವಿದ್ಯಾಲಯದ ಸಂಶೋಧಕರು ಮತ್ತು ವಿಶ್ವವಿದ್ಯಾಲಯದ ಅಧ್ಯಾಪಕರನ್ನು ನೇಮಕ ಮಾಡುವುದು ಮತ್ತು ಅವರ ಉಪಲಬ್ದಿಗಳು ಯಾವುದಾದರು ಇದ್ದರೆ ಅದನ್ನು ನಿಗದಿಪಡಿಸುವುದು; ಅವರ ಕರ್ತವ್ಯಗಳನ್ನು ಮತ್ತು ಸೇವಾ ಷರತ್ತುಗಳನ್ನು

ನಿರ್ದಿಷ್ಟಪಡಿಸುವುದು ಮತ್ತು ತಾತ್ಕಾಲಿಕ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು ;

(ಬಿ) ಆಡಳಿತಾತ್ಮಕ ಮತ್ತು ಅದೇರೀತಿಯ ಇತರ ಹುದ್ದೆಗಳ ನೇಮಕದ ವಿಧಾನವನ್ನು ನಿರ್ದಿಷ್ಟಪಡಿಸುವ ಶಾಸನಗಳನ್ನು ರಚಿಸುವುದು ಮತ್ತು ಅವರ ಉಪಲಬ್ಧಿಗಳು ಯಾವುದಾದರೂ ಇದ್ದರೆ ಅವುಗಳನ್ನು ನಿಗದಿಪಡಿಸುವುದು ಅವರ ಕರ್ತವ್ಯಗಳನ್ನು ಮತ್ತು ಸೇವಾ ಷರತ್ತುಗಳನ್ನು ನಿರ್ದಿಷ್ಟಪಡಿಸುವುದು ಮತ್ತು ತಾತ್ಕಾಲಿಕ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು ;

(17) ವಿಶ್ವವಿದ್ಯಾಲಯದ ಉಪನ್ಯಾಸಕರು, ವಿಶ್ವವಿದ್ಯಾಲಯದ ರೀಡರ್‌ಗಳು, ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ವಿಶ್ವವಿದ್ಯಾಲಯದ ಸಂಶೋಧಕರು ಮತ್ತು ವಿಶ್ವವಿದ್ಯಾಲಯದ ಅಧ್ಯಾಪಕರು ಮತ್ತು ವಿಶ್ವವಿದ್ಯಾಲಯದ ಇತರ ನೌಕರರನ್ನು ಅಮಾನತ್ತು ಮಾಡುವುದು ಮತ್ತು ವಜಾಮಾಡುವುದು;

(18) ವಿಶ್ವವಿದ್ಯಾಲಯದ ಪರವಾಗಿ ದತ್ತಿಗಳನ್ನು, ಉಯಿಲುದಾನ, ದೇಣಿಗೆಗಳನ್ನು, ಅನುದಾನಗಳನ್ನು ಮತ್ತು ಅದಕ್ಕೆ ವರ್ಗಾವಣೆ ಮಾಡಿದ ಸ್ಥಿರ ಮತ್ತು ಚರ ಸ್ವತ್ತುಗಳನ್ನು ಸ್ವೀಕರಿಸುವುದು.

(19) (ಎ) ವಿಶ್ವವಿದ್ಯಾಲಯದ ಪರವಾಗಿ ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಮತ್ತು ವಿಶ್ವವಿದ್ಯಾಲಯದ ಅನುದಾನ ಆಯೋಗದಿಂದ ಅಥವಾ ಸಾರ್ವಜನಿಕರಿಂದ ಅಥವಾ ಕೇಂದ್ರ ಅಥವಾ ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ನಿಗಮದಿಂದ ಸಾಲಗಳನ್ನು ಎತ್ತುವುದು ;

(ಬಿ) ಸರ್ಕಾರದ ಅನುಮೋದನೆಯೊಡನೆ ವಿಶ್ವವಿದ್ಯಾಲಯದ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯದ ಭದ್ರತೆ ಮೇಲೆ ಹಣವನ್ನು ಸಾಲವಾಗಿ ಪಡೆಯುವುದು ;

(20) ವಿದ್ಯಾರ್ಥಿನಿಲಯಗಳ ತಪಾಸಣೆಗಾಗಿ ವ್ಯವಸ್ಥೆ ಮಾಡುವುದು ಮತ್ತು ನಿರ್ದೇಶಿಸುವುದು ;

(21) ಶಾಸನಗಳ ಮೂಲಕ ನಿಯಮಿಸಬಹುದಾದಂತಹ ಇತರ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅಂಥ ಪ್ರಕಾರ್ಯಗಳನ್ನು ನೆರವೇರಿಸುವುದು ;

(22) ಶಾಸನಗಳನ್ನು ರಚಿಸುವುದು ಅಥವಾ ಶಾಸನಗಳನ್ನು ತಿದ್ದುಪಡಿ ಮಾಡುವುದು ಅಥವಾ ನಿರಸನಗೊಳಿಸುವುದು ;

23. ಪ್ರಶಾಸನ ಸಭೆಯ ಸಭೆಗಳು: (1) ಪ್ರಶಾಸನ ಸಭೆಯು ಪ್ರತಿಯೊಂದು ವರ್ಷದಲ್ಲಿ ಕುಲಾಧಿಪತಿಯವರು ನಿಗದಿಪಡಿಸುವ ದಿನಾಂಕ ದಂದು ಕೊನೆಯ ಪಕ್ಷ ಮೂರುಸಲವಾದರೂ ಸಭೆ ಸೇರತಕ್ಕದ್ದು. ಅಂಥ ಸಭೆಗಳಲ್ಲಿ ಒಂದನ್ನು ವಾರ್ಷಿಕ ಸಭೆ ಎಂದು ಕರೆಯತಕ್ಕದ್ದು. ಪ್ರಶಾಸನ ಸಭೆಯು ತಾನು ಕಾಲಕಾಲಕ್ಕೆ ನಿರ್ಧರಿಸಬಹುದಾದಂತಹ ಇತರ ಸಮಯ ಗಳಲ್ಲಿ ಸಭೆ ಸೇರಬಹುದು;

(2) ಒಟ್ಟು ಸದಸ್ಯರ ಸಂಖ್ಯೆಯ ಮೂರನೇ ಒಂದರಷ್ಟು ಸದಸ್ಯರು ಪ್ರಶಾಸನ ಸಭೆಯ ಕೋರಂ ಆಗಿರತಕ್ಕದ್ದು ;

ಪರಂತು ಅಂಥ ಕೋರಂ, ವಿಶ್ವವಿದ್ಯಾಲಯದ ಘಟಿಕೋತ್ಸವದ ಸಭೆಗಾಗಿ ಪದವಿ ಡಿಪ್ಲೋಮಾ ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಗಳ ಪ್ರಧಾನ ಮಾಡುವ ಉದ್ದೇಶಕ್ಕಾಗಿ ನಡೆದ ಪ್ರಶಾಸನ ಸಭೆಯಲ್ಲಿ ಅಗತ್ಯವಿರತಕ್ಕದ್ದಲ್ಲ;

(3) ಕುಲಾಧಿಪತಿಯವರು, ಅವರು ಸೂಕ್ತವೆಂದು ಭಾವಿಸಿದಾಗ ಮತ್ತು ಪ್ರಶಾಸನ ಸಭೆಯ ಸದಸ್ಯರ ಶೇಕಡಾ ಐವತ್ತಕ್ಕೆ ಕಡಿಮೆ ಅಲ್ಲದಷ್ಟು ಸದಸ್ಯರು ಸಹಿಮಾಡಿ ಲಿಖಿತದಲ್ಲಿ ನೀಡಿದ ಕೋರಿಕೆಯ ಮೇರೆಗೆ ಪ್ರಶಾಸನ ಸಭೆಯ ವಿಶೇಷ ಸಭೆಯನ್ನು ಕರೆಯಬಹುದು ;

24. ಪ್ರಶಿಕ್ಷಣ ಪರಿಷತ್ತು: (1) ಕುಲಾಧಿಪತಿಯವರು, ಪ್ರಥಮ ಕುಲಪತಿಯವರ ನೇಮಕವಾದ ಕೂಡಲೆ ಪ್ರಶಿಕ್ಷಣ ಪರಿಷತ್ತನ್ನು ರಚಿಸತಕ್ಕದ್ದು.

(2) ಪ್ರಶಿಕ್ಷಣ ಪರಿಷತ್ತು ಕುಲಪತಿಯವರ ಜೊತೆಗೆ ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು ಎಂದರೆ:–

(ಎ) ಉನ್ನತ ಶಿಕ್ಷಣದ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ;

(ಬಿ) ಆರ್ಥಿಕ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ.

(ಸಿ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಭಾರ ಹೊಂದಿರುವ ಸರ್ಕಾರದ ಕಾರ್ಯದರ್ಶಿ.

(ಡಿ) ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ.

(ಇ) ಫ್ಯಾಕಲ್ಟಿಗಳ ಡೀನರು.

(ಎಫ್) ಸರ್ಕಾರವು ನಾಮ ನಿರ್ದೇಶನ ಮಾಡಿದ ಗೇಯ ಸಂಗೀತ, ಪ್ರದರ್ಶಕ ಕಲೆಗಳು, ವಾದ್ಯ ಸಂಗೀತ ಮತ್ತು ಸಂಗೀತ ಶಾಸ್ತ್ರದ ಕ್ಷೇತ್ರಗಳಲ್ಲಿ ಅಸಾಧಾರಣ ಕೊಡುಗೆ ನೀಡಿರುವಂಥ ಖ್ಯಾತ ನಾಮರಾದ ಎಂಟು ಜನರು.

ಅವರಲ್ಲಿ ಒಬ್ಬರು ಪರಿಶಿಷ್ಟಜಾತಿಗೆ ಸೇರಿದವರಾಗಿರತಕ್ಕದ್ದು ಇನ್ನೊಬ್ಬರು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರತಕ್ಕದ್ದು, ಒಬ್ಬರು ಮಹಿಳೆಯಾಗಿರತಕ್ಕದ್ದು ಒಬ್ಬರು ಮತೀಯ ಆಧಾರದ ಮೇಲೆ ಅಲ್ಪಸಂಖ್ಯಾತರಾಗಿರತಕ್ಕದ್ದು ಮತ್ತು ಒಬ್ಬರು ಸರ್ಕಾರವು ನಿರ್ದಿಷ್ಟಪಡಿಸಿದ ಹಿಂದುಳಿದ ವರ್ಗಗಳಿಗೆ ಸೇರಿದವ ರಾಗಿರತಕ್ಕದ್ದು.

(3) ಕುಲಪತಿಯವರು ಪ್ರಶಿಕ್ಷಣ ಪರಿಷತ್ತಿನ ಪದನಿಮಿತ್ತ ಅಧ್ಯಕ್ಷ ರಾಗಿರತಕ್ಕದ್ದು.

(4) ಶಿಕ್ಷಣ ಇಲಾಖೆ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಆರ್ಥಿಕ ಇಲಾಖೆ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಭಾರದಲ್ಲಿರುವ ಕಾರ್ಯದರ್ಶಿ ಇವರು ಯಾವುದೇ ಕಾರಣಕ್ಕಾಗಿ ಪ್ರಶಿಕ್ಷಣ ಪರಿಷತ್ತಿನ ಸಭೆಗಳಿಗೆ ಹಾಜರಾಗಲು ಸಾಧ್ಯವಾಗದ ಸಂದರ್ಭದಲ್ಲಿ ಸರ್ಕಾರದ ಉಪ ಕಾರ್ಯದರ್ಶಿಯ ದರ್ಜೆಗೆ ಕಡಿಮೆಯಲ್ಲದ ತನ್ನ ಇಲಾಖೆಯ ಯಾವೊಬ್ಬ ಅಧಿಕಾರಿಯನ್ನು ಪ್ರತಿನಿಯೋಜಿಸಬಹುದು.

(5) ಈ ಅಧಿನಿಯಮದ ಅಡಿಯಲ್ಲಿಯ ಯಾವುದೇ ಪ್ರಾಧಿಕಾರಗಳಿಗೆ ನಾಮನಿರ್ದೇಶಿತನಾದ ಯಾವೊಬ್ಬ ಸದಸ್ಯನು ಸಂಬಂಧಪಟ್ಟ ನಾಮನಿರ್ದೇಶಿಸುವ ಪ್ರಾಧಿಕಾರದ ಇಷ್ಟಪರ್ಯಂತ ಪದಧಾರಣ ಮಾಡತಕ್ಕದ್ದು. ಈ ಅಧಿನಿಯಮದ ಅಡಿಯಲ್ಲಿಯ ಯಾವುದೇ ಪ್ರಾಧಿಕಾರ ಗಳಿಗೆ ನಾಮನಿರ್ದೇಶಿತನಾದ ಯಾವೊಬ್ಬ ವ್ಯಕ್ತಿಯು ಎರಡನೇ ಅವಧಿಗಾಗಿ ನಾಮನಿರ್ದೇಶಿತನಾಗುವುದಕ್ಕೆ ಅಥವಾ ಚುನಾಯಿತನಾಗುವುದಕ್ಕೆ ಅರ್ಹನಾ ಗಿರತಕ್ಕದ್ದಲ್ಲ ;

ಪರಂತು, ನಾಮನಿರ್ದೇಶಿತನಾದ ಒಬ್ಬ ಪ್ರಶಿಕ್ಷಣ ಪರಿಷತ್ತಿನ ಸದಸ್ಯನು, ಯಾವ ಹುದ್ದೆಯ ಕಾರಣದಿಂದ ತಾನು ಪ್ರಶಿಕ್ಷಣ ಪರಿಷತ್ತಿನ ಸದಸ್ಯನಾಗುವನೋ ಅಂಥ ಒಂದು ಹುದ್ದೆಗೆ ತಾತ್ಕಾಲಿಕವಾಗಿ ನೇಮಕ ನಾದಲ್ಲಿ, ತಾನು ನೇಮಕನಾದ ಹುದ್ದೆಯ ಪ್ರಭಾರವನ್ನು ತೆಗೆದುಕೊಂಡ ದಿನದಿಂದ ಏಳು ದಿನಗಳ ಒಳಗೆ, ತಾನು ಸಹಿಮಾಡಿದ ಲಿಖಿತ ನೋಟೀ ಸನ್ನು ಕುಲಪತಿಯವರಿಗೆ ನೀಡಿ, ತನ್ನ ನಾಮ ನಿರ್ದೇಶನದ ಬಲದಿಂದ ಪ್ರಶಿಕ್ಷಣ ಪರಿಷತ್ತಿನ ಸದಸ್ಯನಾಗಿ ಮುಂದುವರೆಯುವನೇ ಅಥವಾ ಅಂಥ ಸದಸ್ಯನ ಪದವನ್ನು ಬಿಟ್ಟುಕೊಟ್ಟು ಹುದ್ದೆಯ ಬಲದಿಂದ ಪದನಿಮಿತ್ತ ಸದಸ್ಯ ನಾಗುವುದನ್ನು ಆಯ್ಕೆ ಮಾಡಿಕೊಳ್ಳುವನೇ ಎಂಬುದನ್ನು ತಿಳಿಸತಕ್ಕದ್ದು ಮತ್ತು

ಸದರಿ ಆಯ್ಕೆಯು ಅಂತಿಮವಾಗಿರತಕ್ಕದ್ದು, ಅಂಥ ಆಯ್ಕೆಯನ್ನು ಮಾಡಲು ತಪ್ಪಿದರೆ ಅವನು ನಾಮನಿರ್ದೇಶಿತ ಸದಸ್ಯನಾಗಿ ತನ್ನ ಸ್ಥಾನವನ್ನು ಖಾಲಿಮಾಡಿದ್ದಾನೆಂದು ಭಾವಿಸತಕ್ಕದ್ದು.

(6) ಒಬ್ಬ ವ್ಯಕ್ತಿಯು ಪ್ರಶಿಕ್ಷಣ ಪರಿಷತ್ತಿನ ಸದಸ್ಯನಾಗಿರುವುದು ನಿಂತುಹೋದಾಗ, ಅವನು ಪ್ರಶಿಕ್ಷಣ ಪರಿಷತ್ತಿನ ಸದಸ್ಯನಾಗಿರುವ ಬಲದಿಂದ ವಿಶ್ವವಿದ್ಯಾಲಯದ ಯಾವುದೇ ಇತರ ಪ್ರಾಧಿಕಾರದ ಸದಸ್ಯನಾಗಿರುವುದೂ ನಿಂತುಹೋಗತಕ್ಕದ್ದು.

(7) ಪ್ರಶಿಕ್ಷಣ ಪರಿಷತ್ತಿನ ಸದಸ್ಯನು, ಅನುಮತಿಸಬಹುದಾದಂಥ ದಿನಭತ್ಯೆ ಮತ್ತು ಪ್ರಯಾಣ ಭತ್ಯೆಗಳ ಹೊರತಾಗಿ ವಿಶ್ವವಿದ್ಯಾನಿಲಯದಿಂದ ಯಾವುದೇ ಸಂಭಾವನೆಯನ್ನು ಸ್ವೀಕರಿಸಲು ಹಕ್ಕುಳ್ಳವನಾಗಿರತಕ್ಕದ್ದಲ್ಲ ;

ಪರಂತು, ಮೂರನೇ ಉಪ ಪ್ರಕರಣದಲ್ಲಿ ಇರುವುದಾವುದು ತಾನು ಧಾರಣಮಾಡಿದ ಹುದ್ದೆಯ ಬಲದಿಂದ ಹಕ್ಕುಳ್ಳವನಾಗಿರುವ ತನ್ನ ಸಾಮಾನ್ಯ ಉಪಲಬ್ಧಿಗಳನ್ನು ಪಡೆದುಕೊಳ್ಳದಂತೆ ಯಾವೊಬ್ಬ ಸದಸ್ಯನನ್ನು ತಡೆಯತಕ್ಕದ್ದಲ್ಲ.

(8) ಪದನಿಮಿತ್ತ ಸದಸ್ಯನಲ್ಲದ ಒಬ್ಬ ಪ್ರಶಿಕ್ಷಣ ಪರಿಷತ್ತಿನ ಸದಸ್ಯನು ತನ್ನ ಪದಾವಧಿಯು ಮುಕ್ತಾಯವಾಗುವ ಮೊದಲು ಯಾವುದೇ ಸಮಯದಲ್ಲಿ ತನ್ನ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಬಹುದು. ಅಂಥ ರಾಜೀನಾಮೆಯನ್ನು ಸದಸ್ಯನು ಲಿಖಿತಪತ್ರದ ಮೂಲಕ ಕುಲಾಧಿಪತಿಯವರಿಗೆ ಕಳುಹಿಸಿಕೊಡತಕ್ಕದ್ದು ಮತ್ತು ರಾಜೀನಾಮೆಯು, ಕುಲಾಧಿಪತಿಯವರು ಅಂಗೀಕರಿಸಿದ ದಿನಾಂಕದಿಂದ ಪರಿಣಾಮಕ್ಕೆ ಬರತಕ್ಕದ್ದು.

25. ಪ್ರಶಿಕ್ಷಣ ಪರಿಷತ್ತಿನ ಅಧಿಕಾರಗಳು: ಪ್ರಶಿಕ್ಷಣ ಪರಿಷತ್ತು ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು ಎಂದರೆ,-

(1) ಅಧ್ಯಾಪಕ ವಿದ್ಯಾರ್ಹತೆಗಳನ್ನು ನೇಮಿಸುವುದು.

(2) ನಿಯಮಿಸಬಹುದಾದಂಥ ಶುಲ್ಕಗಳನ್ನು ವಿಧಿಸುವುದು ಮತ್ತು ಸಂಗ್ರಹಿಸುವುದು.

(3) ಶಾಸನಗಳಿಗನುಸಾರವಾಗಿ ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವುದನ್ನು ನಿಯಂತ್ರಿಸುವುದು.

(4) ಅಧ್ಯಯನ ಮಂಡಳಿಗಳಿಗೆ ಸದಸ್ಯರನ್ನು ನೇಮಕ ಮಾಡುವುದು.

(5) (ಎ) ಶಾಸನಗಳಲ್ಲಿ ಹೇಳಿದ ಕಾರ್ಯವಿಧಾನಕ್ಕೆ ಅನುಸಾರವಾಗಿ ಮಂಡಳಿಗಳ ಶಿಫಾರಸ್ಸನ್ನು ಪರಿಗಣಿಸಿದ ತರುವಾಯ ರೆಫರಿ ಮತ್ತು ಪರೀಕ್ಷಕರನ್ನು ನೇಮಕ ಮಾಡುವುದು.

(ಬಿ) ಅವರ ಸಂಭಾವನೆಗಳನ್ನು ನಿಗದಿಪಡಿಸುವುದು.

(6) ವಿಶ್ವವಿದ್ಯಾಲಯದ ನಿವಾಸದ ಮತ್ತು ಶಿಸ್ತಿನ ಮೇಲ್ವಿಚಾರಣೆ ಮತ್ತು ನಿಯಂತ್ರಣ ಮತ್ತು ಅವರ ಆರೋಗ್ಯ ಮತ್ತು ಕ್ಷೇಮವನ್ನು ತಿಳಿದುಕೊಳ್ಳುವುದಕ್ಕಾಗಿ ವ್ಯವಸ್ಥೆ ಮಾಡುವುದು.

(7) ವಿಶ್ವವಿದ್ಯಾಲಯಗಳು ಸ್ಥಾಪಿಸಿದ ಮತ್ತು ನಿರ್ವಹಿಸುತ್ತಿರುವ ಗ್ರಂಥಾಲಯಗಳು, ವಸ್ತು ಸಂಗ್ರಹಾಲಯಗಳು, ಸಂಶೋಧನಾ ಸಂಸ್ಥೆಗಳು ಮತ್ತು ಇತರೆ ಸಂಸ್ಥೆಗಳನ್ನು ಪ್ರಾರಂಭಿಸುವುದು ಮತ್ತು ನಿರ್ವಹಿಸುವುದು;

(8) ವಿಶ್ವವಿದ್ಯಾಲಯವು ಪ್ರಾರಂಭಿಸಿದ ವಿದ್ಯಾರ್ಥಿನಿಲಯಗಳನ್ನು ನಿರ್ವಹಿಸುವುದು;

(9) ವಿಶ್ವವಿದ್ಯಾಲಯವು ಪ್ರಾರಂಭಿಸಿದ ಯಾವುದೇ ಪ್ರಕಟಣಾ ಬ್ಯೂರೋವನ್ನು ನಿರ್ವಹಿಸುವುದು;

(10) ವಿಶ್ವವಿದ್ಯಾಲಯದೊಳಗೆ ಸಂಶೋಧನೆಗೆ ಉತ್ತೇಜಿಸುವುದು; ಮತ್ತು ಅಂಥ ಸಂಶೋಧನೆಯ ವರದಿಗಳನ್ನು ಕಾಲಕಾಲಕ್ಕೆ ಪಡೆದುಕೊಳ್ಳುವುದು;

(11) ಶೈಕ್ಷಣಿಕ ವಿಷಯಕ್ಕೆ ಸಂಬಂಧಪಟ್ಟ ವಿಷಯಗಳನ್ನು ವಿನಿಯಮಗೊಳಿಸುವುದು;

(12) ಅಧ್ಯಯನ ವ್ಯಾಸಂಗ ಕ್ರಮಗಳನ್ನು ವಿನಿಯಮಗೊಳಿಸುವುದು;

(13) ವಿದ್ಯಾರ್ಥಿಗಳನ್ನು ಪರೀಕ್ಷೆಗಳಿಗೆ, ಪದವಿಗಳಿಗೆ, ಡಿಪ್ಲೋಮ ಗಳಿಗೆ, ಪ್ರಮಾಣಪತ್ರ ಕೋರ್ಸುಗಳಿಗೆ ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಗಳಿಗೆ ಪ್ರವೇಶ ನೀಡತಕ್ಕ ವಿಷಯದ ಬಗ್ಗೆ ಪರೀಕ್ಷಾ ಯೋಜನೆಯನ್ನು ಮತ್ತು ಷರತ್ತುಗಳನ್ನು ವಿನಿಯಮಗೊಳಿಸುವುದು;

(14) ವಿಶ್ವವಿದ್ಯಾಲಯದ ವಿವಿಧ ಪರೀಕ್ಷೆಗಳ ಫಲಿತಾಂಶಗಳ ಘೋಷಣೆಯನ್ನು ವಿನಿಯಮಗೊಳಿಸುವುದು;

(15) ಕಾಲೇಜುಗಳಲ್ಲಿ ಮತ್ತು ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಅಧ್ಯಯನ ಮತ್ತು ಬೋಧನೆಯನ್ನು ಸಮನ್ವಯಗೊಳಿಸುವುದನ್ನು ವಿನಿಯಮ ಗೊಳಿಸುವುದು;

(16) ವಿಶ್ವವಿದ್ಯಾಲಯದಲ್ಲಿ ಸಂಶೋಧನೆಗೆ ಉತ್ತೇಜನ ನೀಡುವುದಕ್ಕಾಗಿ ಮತ್ತು ಇತರ ವಿಶೇಷ ಅಧ್ಯಯನಗಳನ್ನು ಉತ್ತೇಜಿಸುವುದಕ್ಕಾಗಿ ಯೋಜನೆಗಳನ್ನು ರೂಪಿಸುವುದು;

(17) ಫ್ಯಾಕಲ್ಟಿಗಳಿಗೆ ವಿಷಯಗಳನ್ನು ಹಂಚಿಕೆ ಮಾಡುವುದಕ್ಕಾಗಿ ಪ್ರಸ್ತಾವಗಳನ್ನು ಮಾಡುವುದು ಮತ್ತು ತನ್ನ ಸದಸ್ಯರುಗಳನ್ನು ಫ್ಯಾಕಲ್ಟಿಗಳಿಗೆ ವಹಿಸಿಕೊಡುವುದು;

(18) ಪರೀಕ್ಷೆಗಳಿಗೆ ವಿದ್ಯಾರ್ಥಿಗಳ ಪ್ರವೇಶಕ್ಕೆ ಸಂಬಂಧಪಟ್ಟಂತೆ ವಿನಾಯತಿ ನೀಡುವುದಕ್ಕಾಗಿ ಮಾನದಂಡಗಳನ್ನು ನಿರ್ಧರಿಸುವುದು;

(19) ವಿಶ್ವವಿದ್ಯಾಲಯವು ಅಗತ್ಯಪಡಿಸಿದ ಪ್ರಾಧ್ಯಾಪಕರ, ರೀಡರುಗಳ, ಉಪನ್ಯಾಸಕರ, ಮತ್ತು ಇತರ ಅಧ್ಯಾಪಕರ ಹುದ್ದೆಗಳನ್ನು ಪ್ರಾರಂಭಿಸುವುದಕ್ಕಾಗಿ ಮತ್ತು ಅಂಥ ಹುದ್ದೆಗಳಿಗಾಗಿ ಕರ್ತವ್ಯಗಳನ್ನು ನಿಯಮಿಸುವುದಕ್ಕಾಗಿ ಪ್ರಸ್ತಾವಗಳನ್ನು ಮಾಡುವುದು;

(20) ಫೆಲೋಶಿಪ್‌ಗಳು, ಟ್ರಾವಲಿಂಗ್ ಫೆಲೋಶಿಪ್, ವಿದ್ಯಾರ್ಥಿ ವೇತನಗಳು, ಶಿಷ್ಯವೇತನಗಳು, ಅಥವಾ ಪ್ರಶಸ್ತಿಗಳನ್ನು ಪ್ರಾರಂಭಿಸುವುದು ಮತ್ತು ನೀಡುವುದಕ್ಕಾಗಿ ಪ್ರಸ್ತಾವಗಳನ್ನು ಮಾಡುವುದು;

(21) ಪರೀಕ್ಷೆಗಳ ಸಮತೆಯನ್ನು ನಿಯಮಿಸುವುದಕ್ಕಾಗಿ ವಿನಿಯಮಗೊಳಿಸುವುದು;

(22) ಪದವಿಗಳು, ಡಿಪ್ಲೋಮಗಳು ಮತ್ತು ಇತರೆ ಶೈಕ್ಷಣಿಕ ಪ್ರಶಸ್ತಿಗಳಿಗಾಗಿ ಅರ್ಹತೆ ನೀಡುವ ಸಂಬಂಧದಲ್ಲಿ ವಿಶ್ವವಿದ್ಯಾಲಯದಲ್ಲಿ ಅನುಮೋದಿತ ಅಧ್ಯಯನ ವ್ಯಾಸಂಗ ಕ್ರಮಗಳಿಂದ ವಿನಾಯಿತಿ ನೀಡುವುದನ್ನು ವಿನಿಯಮಗೊಳಿಸುವುದು;

(23) ಸಂಶೋಧನೆಗಾಗಿ ಮತ್ತು ಕಲಿಕೆಯ ಮುಂದುವರಿಕೆಗೆ ಮತ್ತು ಪ್ರಸಾರಕ್ಕಾಗಿ ಸೂಕ್ತವಾಗಬಹುದಾದಂಥ ಕಲಿಕೆ ಮತ್ತು ಅಧ್ಯಯನ ವ್ಯಾಸಂಗ ಕ್ರಮಗಳ ಶಾಖೆಗಳಲ್ಲಿ ಶಿಕ್ಷಣ, ಬೋಧನೆ ಮತ್ತು ತರಬೇತಿಗಾಗಿ ಅವಕಾಶ ಕಲ್ಪಿಸುವುದು;

(24) ಮಾನ್ಯತೆ ಪಡೆದ ಸಂಸ್ಥೆಗಳು ವ್ಯಾಸಂಗವಿಷಯಗಳಲ್ಲಿ ವಿಶೇಷ ಅಧ್ಯಯನ ಕೈಗೊಳ್ಳುವುದು ಸಾಧ್ಯವಾಗುವಂತೆ ಮಾಡಲು ಏರ್ಪಾಡುಗಳನ್ನು ಮಾಡುವುದು;

(25) ಈ ಅಧಿನಿಯಮದ ಅಥವಾ ಶಾಸನಗಳ ಮೂಲಕ ಅದಕ್ಕೆ ಪ್ರದಾನ ಮಾಡಬಹುದಾದ ಅಥವಾ ವಿಧಿಸಬಹುದಾದಂಥ ಇತರೆ ಅಧಿಕಾರ ಗಳನ್ನು ಚಲಾಯಿಸುವುದು ಮತ್ತು ಅಂಥ ಕರ್ತವ್ಯಗಳನ್ನು ನೆರವೇರಿಸುವುದು;

(26) ಶಾಸನಗಳಿಗನುಸಾರವಾಗಿ ತನ್ನ ಯಾವುವೇ ಅಧಿಕಾರಗಳನ್ನು ಕುಲಪತಿಯವರಿಗೆ ಅಥವಾ ತನ್ನ ಸದಸ್ಯರ ಪೈಕಿಯಿಂದ ರಚಿಸಿದ ಸಮಿತಿಗೆ ಪ್ರತ್ಯಾಯೋಜಿಸುವುದು;

26. ಪ್ರಶಿಕ್ಷಣ ಪರಿಷತ್ತಿನ ಸಭೆಗಳು: (1) ಪ್ರಶಿಕ್ಷಣ ಪರಿಷತ್ತು ನಿಯಮಿಸಬಹುದಾದಂಥ ಸಮಯದಲ್ಲಿ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು ಮತ್ತು (2) ಮತ್ತು (3)ನೇ ಉಪಪ್ರಕರಣಗಳ ಉಪಬಂಧಗಳಿಗೊಳಪಟ್ಟು ಸಭೆಯ ಕೋರಂ ಒಳಗೊಂಡಂತೆ ಅದರ ಸಭೆಯಲ್ಲಿ ವ್ಯವಹರಿಸಬೇಕಾದ ವಿಷಯಗಳ ಸಂಬಂಧದಲ್ಲಿ ನಿಯಮಿಸಬಹುದಾದಂಥ ಕಾರ್ಯವಿಧಾನ ನಿಯಮಗಳನ್ನು ಪಾಲಿಸತಕ್ಕದ್ದು,-

ಪರಂತು ಪ್ರಶಿಕ್ಷಣ ಪರಿಷತ್ತು ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು;

(2) ಕುಲಪತಿಯವರು ಅಥವಾ ಅವರ ಗೈರು ಹಾಜರಿಯಲ್ಲಿ ಸದಸ್ಯರು ಆಯ್ಕೆ ಮಾಡಿದ ಯಾವೊಬ್ಬ ಸದಸ್ಯರು ಪ್ರಶಿಕ್ಷಣ ಪರಿಷತ್ತಿನ ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು.

(3) ಪ್ರಶಿಕ್ಷಣ ಪರಿಷತ್ತಿನ ಯಾವುದೇ ಸಭೆಯಲ್ಲಿ ಎಲ್ಲಾ ಪ್ರಶ್ನೆಗಳನ್ನು ಹಾಜರಿದ್ದ ಮತ್ತು ಮತ ಚಲಾಯಿಸುವ ಸದಸ್ಯರ ಬಹುಮತದಿಂದ ನಿರ್ಧರಿಸತಕ್ಕದ್ದು ಮತ್ತು ಮತಗಳು ಸಮನಾಗಿ ಬಂದ ಸಂದರ್ಭದಲ್ಲಿ ಕುಲಪತಿಯವರು ಅಥವಾ ಸಂದರ್ಭಾನುಸಾರ ಅಧ್ಯಕ್ಷತೆ ವಹಿಸಿದ ಸದಸ್ಯರು ಎರಡನೆಯ ಅಥವಾ ನಿರ್ಣಾಯಕ ಮತ ಚಲಾಯಿಸತಕ್ಕದ್ದು;

(4) (ಎ) ಪ್ರಶಿಕ್ಷಣ ಪರಿಷತ್ತು ಸಮಾಲೋಚನೆಯ ಉದ್ದೇಶಕ್ಕಾಗಿ, ಪರಿಶೀಲನೆಯಲ್ಲಿರುವ ಯಾವುದೇ ವಿಷಯದಲ್ಲಿ ವಾಸ್ತವಿಕ ಅನುಭವದ ವಿಶೇಷ ಜ್ಞಾನವಿರುವ ಯಾವೊಬ್ಬ ವ್ಯಕ್ತಿಯು ಯಾವುದೇ ಸಭೆಗೆ ಹಾಜರಾಗಲು ಆಹ್ವಾನಿಸಬಹುದು. ಅಂಥವ್ಯಕ್ತಿಯು ಸಭೆಯಲ್ಲಿ ಮಾತನಾಡ ಬಹುದು ಮತ್ತು ಅನ್ಯಥಾ ಈ ಸಭೆಯ ನಡೆವಳಿಗಳಲ್ಲಿ ಭಾಗವಹಿಸಬಹುದು, ಆದರೆ ಮತಚಲಾಯಿಸಲು ಹಕ್ಕುಳ್ಳವನಾಗಿರತಕ್ಕದ್ದಲ್ಲ;

(ಬಿ) ಹಾಗೇ ಆಹ್ವಾನಿಸಲಾದ ವ್ಯಕ್ತಿಯು, ಪ್ರಶಿಕ್ಷಣ ಪರಿಷತ್ತಿನ ಸದಸ್ಯನಿಗೆ ಅನುಮತಿಸಬಹುದಾದಂಥ ದಿನಭತ್ಯೆ ಮತ್ತು ಪ್ರಯಾಣ ಭತ್ಯೆ ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು;

27. ಫ್ಯಾಕಲ್ಟಿಗಳ ರಚನೆ ಮತ್ತು ಪ್ರಕಾರ್ಯಗಳು.- (1) ವಿಶ್ವವಿದ್ಯಾನಿಲಯವು, ಗೇಯ (ಹಾಡುಗಾರಿಕೆ) ಸಂಗೀತ, ವಾದ್ಯ ಸಂಗೀತ, ಪ್ರದರ್ಶಕ ಕಲೆಗಳು, ಸಂಗೀತ ಶಾಸ್ತ್ರ ಮತ್ತು ಶಾಸನಗಳಿಂದ ನಿಯಮಿಸಬಹುದಾದಂಥ ಇತರ ಫ್ಯಾಕಲ್ಟಿಗಳನ್ನು ಹೊಂದಿರತಕ್ಕದ್ದು.

(2) ಫ್ಯಾಕಲ್ಟಿಗಳ ರಚನೆ ಮತ್ತು ಪ್ರಕಾರ್ಯಗಳು ಇತರ ಎಲ್ಲ ವಿಷಯಗಳಲ್ಲಿ, ನಿಯಮಿಸಬಹುದಾದಂತೆ ಇರತಕ್ಕದ್ದು.

(3) ಪ್ರತಿಯೊಂದು ಫ್ಯಾಕಲ್ಟಿಯು ಮೊದಲನೇ ಶಾಸನಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವಿದ್ಯಾ ವಿಭಾಗಗಳನ್ನು ಒಳಗೊಂಡಿರತಕ್ಕದ್ದು.

28. ಹಣಕಾಸು ಸಮಿತಿ.- (1) ಹಣಕಾಸು ಸಮಿತಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ಕುಲಪತಿ,

(ಬಿ) ಹಣಕಾಸಿನ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ,

(ಸಿ) ಶಿಕ್ಷಣದ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ,

(ಡಿ) ಪ್ರಶಿಕ್ಷಣ ಪರಿಷತ್ತು ತನ್ನ ಸದಸ್ಯರ ಪೈಕಿಯಿಂದ ನಾಮನಿರ್ದೇಶಿಸಿದ ಇಬ್ಬರು ಸದಸ್ಯರಲ್ಲಿ ಒಬ್ಬರು ಪ್ರಾಧ್ಯಾಪಕರಾಗಿರತಕ್ಕದ್ದು ಮತ್ತು ಇನ್ನೊಬ್ಬರು ಪ್ರಶಿಕ್ಷಣ ಪರಿಷತ್ತಿಗೆ ಕುಲಾಧಿಪತಿಯವರಿಂದ ನಾಮ ನಿರ್ದೇಶಿತರಾದ ವ್ಯಕ್ತಿಯಾಗಿರತಕ್ಕದ್ದು.

(2) ಯಾವುದೇ ಕಾರಣದಿಂದಾಗಿ (1)ನೇ ಉಪ-ಪ್ರಕರಣದ (ಬಿ) ಖಂಡ ಅಥವಾ (ಸಿ) ಖಂಡದಲ್ಲಿ ಉಲ್ಲೇಖಿಸಲಾದ ಅಧಿಕಾರಿಯು ಹಣಕಾಸು ಸಮಿತಿಯ ಯಾವುದೇ ಸಭೆಗೆ ಹಾಜರಾಗಲು ಅಸಮರ್ಥರಾದರೆ ಅವರು ಸರ್ಕಾರದ ಉಪ-ಕಾರ್ಯದರ್ಶಿ ದರ್ಜೆಗೆ ಕಡಿಮೆಯದಲ್ಲದ ದರ್ಜೆಯ ತನ್ನ ಇಲಾಖೆಯ ಯಾವೊಬ್ಬ ಅಧಿಕಾರಿಯನ್ನು ಅಂಥ ಸಭೆಯಲ್ಲಿ ಹಾಜರಿರಲು ಪ್ರತಿನಿಯೋಜಿಸಬಹುದು. ಅಧಿಕಾರಿ ಅಥವಾ ಪ್ರತಿನಿಯೋಜಿತ ವ್ಯಕ್ತಿಯು ಸಮಿತಿಯ ಚರ್ಚೆಗಳಲ್ಲಿ ಭಾಗವಹಿಸಲು ಮತ್ತು ಮತ ನೀಡಲು ಹಕ್ಕುಳ್ಳವನಾಗಿರತಕ್ಕದ್ದು.

(3) ಕುಲಪತಿಯವರು, ಹಣಕಾಸು ಸಮಿತಿಯ ಪದನಿಮಿತ್ತ ಅಧ್ಯಕ್ಷರಾಗಿರತಕ್ಕದ್ದು ಮತ್ತು ಹಣಕಾಸು ಅಧಿಕಾರಿಯು ಪದನಿಮಿತ್ತ ಕಾರ್ಯದರ್ಶಿಯಾಗಿರತಕ್ಕದ್ದು.

(4) ಪದನಿಮಿತ್ತ ಸದಸ್ಯರಲ್ಲದ ಹಣಕಾಸು ಸಮಿತಿಯ ಎಲ್ಲ ಸದಸ್ಯರು ಮೂರು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು.

(5) ಹಣಕಾಸು ಸಮಿತಿಯ ಲೆಕ್ಕಪತ್ರಗಳನ್ನು ಪರೀಕ್ಷಿಸಲು ಮತ್ತು ವೆಚ್ಚಗಳ ಪ್ರಸ್ತಾವಗಳನ್ನು ಪರಿಶೀಲಿಸಲು ಕಡೇಪಕ್ಷ ಮೂರು ತಿಂಗಳಿಗೊಮ್ಮೆಯಾದರೂ ಸಭೆ ಸೇರತಕ್ಕದ್ದು;

(6) ಹಣಕಾಸು ಅಧಿಕಾರಿಯು ಸಿದ್ಧಪಡಿಸಿದ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳನ್ನು ಪರ್ಯಾಲೋಚನೆ ಮತ್ತು ಟೀಕೆ-ಟಿಪ್ಪಣಿಗಳಿಗಾಗಿ ಹಣಕಾಸು ಸಮಿತಿಯ ಮುಂದೆ ಮಂಡಿಸತಕ್ಕದ್ದು ಮತ್ತು ತದನಂತರ ಅನುಮೋದನೆಗಾಗಿ ಪ್ರಶಾಸನ ಸಭೆಗೆ ಸಲ್ಲಿಸತಕ್ಕದ್ದು.

(7) ಹಣಕಾಸು ಸಮಿತಿಯು, ಉತ್ಪಾದನಾಪರ ಕಾರ್ಯಗಳ ಸಂದರ್ಭಗಳಲ್ಲಿ ಸಾಲಗಳಿಂದ ಬರುವ ಉತ್ಪತ್ತಿಗಳನ್ನು ಒಳಗೊಳ್ಳಬಹುದಾದ ವಿಶ್ವವಿದ್ಯಾಲಯದ ಆದಾಯ ಮತ್ತು ಸಂಪನ್ಮೂಲಗಳನ್ನು ಆಧರಿಸಿ ಆ ವರ್ಷದ ಒಟ್ಟು ಆವರ್ತಕ ವೆಚ್ಚ ಮತ್ತು ಒಟ್ಟು ಅನಾವರ್ತಕ ವೆಚ್ಚಗಳಿಗಾಗಿ ಪರಿಮಿತಿಗಳನ್ನು ಶಿಫಾರಸ್ಸು ಮಾಡತಕ್ಕದ್ದು.

(8) ಹಣಕಾಸು ಸಮಿತಿಯು,-

(ಎ) ವಿಶ್ವವಿದ್ಯಾಲಯದ ಹಣಕಾಸು ಸ್ಥಿತಿಯನ್ನು ಆಗಿಂದಾಗ್ಗೆ ಪುನರವಲೋಕನ ಮಾಡತಕ್ಕದ್ದು;

(ಬಿ) ವಾರ್ಷಿಕ ಹಣಕಾಸು ಅಂದಾಜುಗಳಲ್ಲಿ ಬಂಡವಾಳ ಹೂಡಿಕೆ ಅಥವಾ ವೆಚ್ಚಕ್ಕೆ ಯಾವುದೇ ಹಣದ ಏರ್ಪಾಡು ಮಾಡಿಲ್ಲದ ಅಥವಾ ವಾರ್ಷಿಕ ಹಣಕಾಸು ಅಂದಾಜುಗಳಲ್ಲಿ ಏರ್ಪಾಡು ಮಾಡಿರುವ ಮೊಬಲಗನ್ನು ಮೀರಿದ ವೆಚ್ಚವನ್ನು ಒಳಗೊಳ್ಳುವ ಪ್ರತಿಯೊಂದು ಪ್ರಸ್ತಾವದ ಬಗ್ಗೆ ಪ್ರಶಿಕ್ಷಣ ಪರಿಷತ್ತಿಗೆ ಶಿಫಾರಸ್ಸು ಮಾಡತಕ್ಕದ್ದು;

(ಸಿ) ವಿಶ್ವವಿದ್ಯಾಲಯದ ಲೆಕ್ಕಪತ್ರಗಳನ್ನು ನಿರ್ವಹಿಸುವುದಕ್ಕಾಗಿ ವಿಧಾನಗಳನ್ನು ಮತ್ತು ಪ್ರಕ್ರಿಯೆಗಳನ್ನು ಮತ್ತು ರೀತಿಗಳನ್ನು ನಿಯಮಿಸತಕ್ಕದ್ದು;

(ಡಿ) ವಿಶ್ವವಿದ್ಯಾಲಯದ ಹಣಕಾಸಿಗೆ ಸಂಬಂಧಪಟ್ಟ ಎಲ್ಲ ವಿಷಯಗಳ ಬಗ್ಗೆ ಪ್ರಶಿಕ್ಷಣ ಪರಿಷತ್ತಿಗೆ ಶಿಫಾರಸ್ಸುಗಳನ್ನು ಮಾಡತಕ್ಕದ್ದು; ಮತ್ತು

(ಇ) ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(9) ಹಣಕಾಸು ಅಧಿಕಾರಿಯು ಸಿದ್ಧಪಡಿಸಿದ ವಿಶ್ವವಿದ್ಯಾಲಯದ ಹಣಕಾಸು ಅಂದಾಜುಗಳನ್ನು ಪರ್ಯಾಲೋಚನೆ ಮತ್ತು ಟೀಕೆ–ಟಿಪ್ಪಣಿ ಗಳಿಗಾಗಿ ಹಣಕಾಸು ಸಮಿತಿಯ ಮುಂದೆ ಮಂಡಿಸತಕ್ಕದ್ದು. ನಂತರ ಪರ್ಯಾಲೋಚನೆಗಾಗಿ, ಸದರಿ ಅಂದಾಜುಗಳನ್ನು ಹಣಕಾಸು ಸಮಿತಿಯಿಂದ ಮಾರ್ಪಾಟಾದ ರೂಪದಲ್ಲಿ ಪ್ರಶಿಕ್ಷಣ ಪರಿಷತ್ತಿನ ಮುಂದೆ ಮಂಡಿಸತಕ್ಕದ್ದು. ಪ್ರಶಿಕ್ಷಣ ಪರಿಷತ್ತು ಹಣಕಾಸು ಸಮಿತಿಯು ಮಾಡಿದ ಮಾರ್ಪಾಡುಗಳನ್ನು ಅಂಗೀಕರಿಸಬಹುದು.

29. ಅಧ್ಯಯನ ಮಂಡಲಿಗಳು.– ಪ್ರತಿಯೊಂದು ಬೋಧನಾ ವಿಭಾಗಕ್ಕೆ ಲಗತ್ತಾಗಿ ಸೇರಿದಂತೆ ಅಧ್ಯಯನ ಮಂಡಲಿಗಳು ಇರತಕ್ಕದ್ದು. ಅಧ್ಯಯನ ಮಂಡಲಿಗಳ ರಚನೆ ಮತ್ತು ಅಧಿಕಾರಗಳು ಶಾಸನ ನಿಯಮಿಸ ಬಹುದಾದಂತೆ ಇರತಕ್ಕದ್ದು.

30. ಇತರ ಪ್ರಾಧಿಕಾರಗಳ ರಚನೆ.– ಶಾಸನವು ವಿಶ್ವವಿದ್ಯಾಲಯದ ಪ್ರಾಧಿಕಾರಗಳೆಂದು ಘೋಷಿಸಬಹುದಾದಂಥ ಇತರ ನಿಕಾಯಗಳ ರಚನೆಗೆ ನಿಯಮಿಸಬಹುದಾದ ರೀತಿಯಲ್ಲಿ ಉಪಬಂಧ ಕಲ್ಪಿಸತಕ್ಕದ್ದು.

31. ಸದಸ್ಯರ ಅನರ್ಹತೆಗಳು: (1) ಒಬ್ಬ ವ್ಯಕ್ತಿಯು ವಿಶ್ವವಿದ್ಯಾಲಯದ ಯಾವುವೇ ಪ್ರಾಧಿಕಾರಗಳ ಸದಸ್ಯನಾಗಿ ನಾಮನಿರ್ದೇಶಿತನಾಗಲು ಅಥವಾ ನಾಮನಿರ್ದೇಶನದ ದಿನಾಂಕದಂದು ಆತನು,

(i) ಅಸ್ವಸ್ಥ ಚಿತ್ತನಾಗಿದ್ದರೆ;

(ii) ಅನುನ್ಮುಕ್ತ ದಿವಾಳಿಯಾಗಿದ್ದಾನೆಂದು ನ್ಯಾಯನಿರ್ಣಿತನಾಗಿದ್ದರೆ;

(iii) ನೈತಿಕ ಅಧಃಪತನವನ್ನು ಒಳಗೊಳ್ಳುವ ಯಾವುದೇ ಅಪರಾಧಕ್ಕಾಗಿ ಕ್ರಿಮಿನಲ್ ನ್ಯಾಯಾಲಯದಿಂದ ಕಾರವಾಸ ಶಿಕ್ಷೆಗೆ ಅಪರಾಧ ನಿರ್ಣೀತನಾಗಿದ್ದರೆ;

– ಅನರ್ಹನಾಗಿರತಕ್ಕದ್ದು;

(2) ಅನರ್ಹತೆಗೆ ಸಂಬಂಧಪಟ್ಟಂತೆ ಯಾವುದೇ ವಿವಾದ ಅಥವಾ ಸಂದೇಹವಿದ್ದಲ್ಲಿ ಪ್ರಶಾಸನ ಸಭೆಯು (1)ನೇ ಉಪ ಪ್ರಕರಣದ ಅಡಿಯಲ್ಲಿ ಆ ವ್ಯಕ್ತಿಯು ಅನರ್ಹನಾಗಿರುವನೇ ಅಥವಾ ಇಲ್ಲವೇ ಎಂಬುದನ್ನು ನಿರ್ಧರಿಸತಕ್ಕದ್ದು. ಮತ್ತು ಅದರ ತೀರ್ಮಾನವು ಅಂತಿಮವಾಗಿರತಕ್ಕದ್ದು.

(3) ಈ ಅಧಿನಿಯಮದ ಅಡಿಯಲ್ಲಿ ಯಾವುವೇ ಪ್ರಾಧಿಕಾರಗಳಿಗೆ ನಾಮನಿರ್ದೇಶಿತನಾದ ಯಾವೊಬ್ಬ ವ್ಯಕ್ತಿಯು, ಸಂಬಂಧಪಟ್ಟ ನಾಮ ನಿರ್ದೇಶನ ಮಾಡುವ ಪ್ರಾಧಿಕಾರದ ಇಷ್ಟಪರ್ಯಂತ ಪದಧಾರಣ ಮಾಡತಕ್ಕದ್ದು.

(4) ಯಾವುವೇ ಪ್ರಾಧಿಕಾರಗಳಿಗೆ ನಾಮನಿರ್ದೇಶಿತನಾದ ಯಾವೊಬ್ಬ ವ್ಯಕ್ತಿಯನ್ನು, ಆತನ ದುರ್ವರ್ತನೆ, ದುರ್ನಡತೆ ಅಥವಾ ಅನ್ಯಥಾ ಕಾರಣದ ಮೇಲೆ ವಿಚಾರಣೆಯನ್ನು ನಡೆಸಿದ ತರುವಾಯ ಕುಲಾಧಿಪತಿಯವರು ಯಾವುದೇ ಕಾಲದಲ್ಲಿ ಸದಸ್ಯತ್ವದಿಂದ ತೆಗೆದುಹಾಕಬಹುದು.:

ಪರಂತು, ಪ್ರಶಾಸನ ಸಭೆಯ ಮತ್ತು ಪ್ರಶಿಕ್ಷಣ ಪರಿಷತ್ತಿನ ಯಾವೊಬ್ಬ ಸದಸ್ಯನು ವಯೋನಿವೃತ್ತನಾದಾಗ ಆತನು ಸದಸ್ಯತ್ವವನ್ನು ಹೊಂದಿರುವುದು ನಿಂತುಹೋಗತಕ್ಕದ್ದು.

32. ಕೆಲವೊಂದು ಸಂದರ್ಭಗಳಲ್ಲಿ ಪ್ರಶಾಸನ ಸಭೆ ಮತ್ತು ಪ್ರಶಿಕ್ಷಣ ಪರಿಷತ್ತಿಗೆ ನಾಮನಿರ್ದೇಶನ ಹೊಂದಲು ಅನರ್ಹತೆಗಳು: (1) 21 ಅಥವಾ 24ನೇ ಪ್ರಕರಣಗಳಲ್ಲಿ ಏನೇ ಇದ್ದರೂ ಈ ಮುಂದಿನ ಪ್ರಾಧಿಕಾರಗಳಲ್ಲಿ ಯಾವುದಾದರೊಂದರಲ್ಲಿ ಅಥವಾ ಅವೆರಡರಲ್ಲೂ ಒಟ್ಟು ಆರು ವರ್ಷಗಳ ಕಾಲ ಸದಸ್ಯನಾಗಿರುವ ಯಾವೊಬ್ಬ ವ್ಯಕ್ತಿಯು, ಎಂದರೆ,-

(ಎ) ಪ್ರಶಾಸನ ಸಭೆ; ಮತ್ತು

(ಬಿ) ಪ್ರಶಿಕ್ಷಣ ಪರಿಷತ್ತು ಆ ಎರಡು ಪ್ರಾಧಿಕಾರಗಳಲ್ಲಿ ಯಾವುದಕ್ಕೂ ನಾಮನಿರ್ದೇಶನ ಹೊಂದಲು ಅರ್ಹನಾಗಿರತಕ್ಕದ್ದಲ್ಲ.

ವಿವರಣೆ:- ಈ ಉಪ ಪ್ರಕರಣದಲ್ಲಿ ಹೇಳಿದ ಆರು ವರ್ಷಗಳ ಒಟ್ಟು ಅವಧಿಯನ್ನು ಲೆಕ್ಕ ಹಾಕುವಾಗ ಒಬ್ಬ ವ್ಯಕ್ತಿ ಒಂದು ಪ್ರಾಧಿಕಾರದಲ್ಲಿ ನಾಮನಿರ್ದೇಶಿತನಾಗಿ ಅಧಿಕಾರ ಸ್ಥಾನದಲ್ಲಿದ್ದ ಒಟ್ಟು ಮೂರು ವರ್ಷಗಳು ಇನ್ನೊಂದು ಪ್ರಾಧಿಕಾರದಲ್ಲಿ ನಾಮನಿರ್ದೇಶಿತನಾಗಿ ಅಧಿಕಾರ ಸ್ಥಾನದಲ್ಲಿದ್ದ ಒಟ್ಟು ಮೂರು ವರ್ಷಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು ಮತ್ತು

ಅದಕ್ಕನುಸಾರವಾಗಿ ಆ ವ್ಯಕ್ತಿಯು ಅಂಥ ಪ್ರಾಧಿಕಾರಗಳಲ್ಲಿ ಯಾವುದೊಂದಕ್ಕೆ ನಾಮನಿರ್ದೇಶಿತನಾಗಲು ಅರ್ಹನಾಗತಕ್ಕದ್ದಲ್ಲ;

ಪರಂತು ಈ ಉಪ ಪ್ರಕರಣದ ಉದ್ದೇಶಕ್ಕಾಗಿ ಒಬ್ಬ ವ್ಯಕ್ತಿಯನ್ನು ಒಂದು ಪ್ರಾಧಿಕಾರಕ್ಕೆ ನಾಮನಿರ್ದೇಶನ ಮಾಡಿದ್ದು ಮೊದಲು ಹೇಳಿದ ಪ್ರಾಧಿಕಾರದ ಸದಸ್ಯತ್ವದ ಕಾರಣದಿಂದ ಎರಡನೇ ಪ್ರಾಧಿಕಾರಕ್ಕೆ ಅವನು ಸದಸ್ಯನಾದರೆ ಆತನು ಮೊದಲನೆ ಪ್ರಾಧಿಕಾರದ ಸದಸ್ಯನಾಗಿದ್ದ ಅವಧಿಯನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು.

(2) (1) ನೇ ಉಪ ಪ್ರಕರಣದಲ್ಲಿರುವುದು ಯಾವುದೂ,-

(ಎ) (ಜಿ) ಬಾಬಿನಲ್ಲಿ ಹೇಳಲಾದ ಪ್ರಶಾಸನಸಭೆಯ ಸದಸ್ಯರಲ್ಲದ (20)ನೇ ಪ್ರಕರಣದ (2)ನೇ ಉಪಪ್ರಕರಣದ ಸದಸ್ಯರಿಗೆ

(ಬಿ) 24ನೇ ಪ್ರಕರಣದ (2) ನೇ ಉಪಪ್ರಕರಣದ (ಎ) ನಿಂದ (ಎಫ್) ಖಂಡದಲ್ಲಿ ಹೇಳಲಾದ ಸದಸ್ಯರಿಗೆ

-ಅನ್ವಯಿಸತಕ್ಕದ್ದಲ್ಲ.

33. ಆಕಸ್ಮಿಕ ಖಾಲಿಸ್ಥಾನಗಳನ್ನು ಭರ್ತಿ ಮಾಡುವುದು.- ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಥವಾ ಇತರ ನಿಕಾಯದ ಪದನಿಮಿತ್ತ ಸದಸ್ಯರಲ್ಲದ ಸದಸ್ಯರ ಪೈಕಿ ಉಂಟಾಗುವ ಎಲ್ಲ ಆಕಸ್ಮಿಕ ಖಾಲಿಸ್ಥಾನಗಳನ್ನು, ಆ ಸದಸ್ಯನನ್ನು ನಾಮನಿರ್ದೇಶಿಸಿದ ವ್ಯಕ್ತಿ ಅಥವಾ ನಿಕಾಯವು, ಅನುಕೂಲವಾದಷ್ಟು ಬೇಗನೆ ಭರ್ತಿ ಮಾಡತಕ್ಕದ್ದು ಮತ್ತು ಆಕಸ್ಮಿಕ ಖಾಲಿಸ್ಥಾನದಲ್ಲಿ ನಾಮನಿರ್ದೇಶಿತನಾದ ವ್ಯಕ್ತಿಯು, 'ಯಾವ ವ್ಯಕ್ತಿಯ ಸ್ಥಾನದಲ್ಲಿ ಭರ್ತಿಗೊಂಡಿರುವನೋ ಆ ವ್ಯಕ್ತಿಯು ಸದಸ್ಯನಾಗಿರುತ್ತಿದ್ದ ಉಳಿದ ಅವಧಿಯವರೆಗೆ ಅಂಥ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯನಾಗಿರತಕ್ಕದ್ದು:

ಪರಂತು, ಅಂಥ ಯಾವುದೇ ಆಕಸ್ಮಿಕ ಖಾಲಿಸ್ಥಾನವು, ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ಇತರ ನಿಕಾಯದ ಸದಸ್ಯನ ಪದಾವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಮುಂಚಿನ ಆರು ತಿಂಗಳೊಳಗಾಗಿ ಉಂಟಾದರೆ, ಅಂಥ ಯಾವುದೇ ಖಾಲಿಸ್ಥಾನವನ್ನು ಭರ್ತಿಮಾಡತಕ್ಕದ್ದಲ್ಲ.

34. ವಿಶ್ವವಿದ್ಯಾಲಯದ ಪ್ರಾಧಿಕಾರಗಳು ಮತ್ತು ನಿಕಾಯಗಳ ವ್ಯವಹರಣೆಗಳು, ಖಾಲಿಸ್ಥಾನಗಳು ಇರುವುದರಿಂದಾಗಿ ಅಮಾನ್ಯವಾಗತಕ್ಕದ್ದಲ್ಲ.- ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ಇತರ ನಿಕಾಯದ ಯಾವುದೇ ಕೃತ್ಯ ಅಥವಾ ವ್ಯವಹರಣೆಯು, ಯಾವುದೇ ಖಾಲಿಸ್ಥಾನ ಇದೆ ಎಂಬ ಅಥವಾ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ಇತರ ನಿಕಾಯದ ಸದಸ್ಯನ ನೇಮಕಾತಿಯಲ್ಲಿನ ಯಾವುದೇ ದೋಷ ಅಥವಾ ಅಕ್ರಮತೆಯ ಅಥವಾ ಪ್ರಕರಣದ ಗುಣಗಳಿಗೆ ಬಾಧಕವಾಗದ, ಅಂಥ ಕೃತ್ಯ ಅಥವಾ ವ್ಯವಹರಣೆಯಲ್ಲಿನ ಯಾವುದೇ ದೋಷ ಅಥವಾ ಅಕ್ರಮತೆಯ ಕಾರಣ ಮಾತ್ರದಿಂದಲೇ ಅಮಾನ್ಯವಾಗತಕ್ಕದ್ದಲ್ಲ.

35. ವಿಶ್ವವಿದ್ಯಾಲಯದ ಸದಸ್ಯತ್ವದಿಂದ ತೆಗೆದುಹಾಕುವುದು.- (1) ಪ್ರಶಾಸನ ಸಭೆಯು, ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಸದಸ್ಯತ್ವದಿಂದ ಯಾವೊಬ್ಬ ವ್ಯಕ್ತಿಯನ್ನು, ಅಂಥ ವ್ಯಕ್ತಿಯು, ಕಾರ್ಯಕಾರಿ ಸಮಿತಿಯ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನು ಒಳಗೊಳ್ಳುವ ಒಂದು ಅಪರಾಧಕ್ಕಾಗಿ ಕ್ರಿಮಿನಲ್ ನ್ಯಾಯಾಲಯದಿಂದ ಅಪರಾಧ ನಿರ್ಣೀತನಾಗಿ ಅಥವಾ ಗುರುತರ ದುರ್ವರ್ತನೆಯ ದೋಷಿಯಾಗಿದ್ದರೆ ಪ್ರಶಾಸನ ಸಭೆಯು ಒಟ್ಟು ಸದಸ್ಯರ ಬಹುಮತದಿಂದ ಮತ್ತು ಸಭೆಯಲ್ಲಿ ಹಾಜರಿದ್ದು ಮತ ನೀಡುವ ಪ್ರಶಾಸನ ಸಭೆಯ ಮೂರನೇ ಎರಡರಷ್ಟು ಸಂಖ್ಯೆಯ ಸದಸ್ಯರಿಗಿಂತ ಕಡಿಮೆಯಿಲ್ಲದ ಬಹುಮತದಿಂದ ಒಂದು ಗೊತ್ತುವಳಿಯನ್ನು ಅಂಗೀಕರಿಸಿ ಆ ಬಗ್ಗೆ ಲಿಖಿತದಲ್ಲಿ ಆದೇಶವನ್ನು ಹೊರಡಿಸುವ ಮೂಲಕ ತೆಗೆದು ಹಾಕಬಹುದು ಮತ್ತು ಅದೇ ಕಾರಣಕ್ಕಾಗಿ ಪ್ರಶಾಸನ ಸಭೆಯು ವಿಶ್ವವಿದ್ಯಾಲಯವು ಆ ವ್ಯಕ್ತಿಗೆ ಪ್ರದಾನ ಮಾಡಿರುವ ಅಥವಾ ನೀಡಿರುವ ಯಾವುದೇ ಪದವಿ ಅಥವಾ ಡಿಪ್ಲೋಮಾವನ್ನು ಹಿಂತೆಗೆದುಕೊಳ್ಳಬಹುದು.

(2) ಪ್ರಶಾಸನ ಸಭೆಯು, ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಸದಸ್ಯತ್ವದಿಂದ ಯಾವೊಬ್ಬ ವ್ಯಕ್ತಿಯನ್ನು, ಅವನು ಅಸ್ವಸ್ಥಚಿತ್ತದವನಾದರೆ, ಕಿವುಡನಾದರೆ, ಮೂಕನಾದರೆ, ಅಥವಾ ಕುಷ್ಠರೋಗದಿಂದ ನರಳುತ್ತಿದ್ದರೆ ಅಥವಾ ದಿವಾಳಿಯೆಂದು ನ್ಯಾಯ ನಿರ್ಣಯಿಸಬೇಕೆಂದು ಅರ್ಜಿ ಸಲ್ಲಿಸಿದ್ದರೆ ಅಥವಾ ಹಾಗೆಂದು ನ್ಯಾಯ ನಿರ್ಣೀತನಾಗಿದ್ದರೆ, ಈ ಬಗ್ಗೆ ಹೊರಡಿಸಲಾದ ಲಿಖಿತ ಆದೇಶದ ಮೂಲಕ ತೆಗೆದುಹಾಕಬಹುದು.

(3) ಈ ಪ್ರಕರಣದ ಅಡಿಯಲ್ಲಿ ಯಾವೊಬ್ಬ ವ್ಯಕ್ತಿಯ ವಿರುದ್ಧ ತೆಗೆದುಕೊಳ್ಳಲು ಉದ್ದೇಶಿಸಿದ ಕ್ರಮದ ವಿರುದ್ಧ ಕಾರಣ ತೋರಿಸಲು ಅವನಿಗೆ ಒಂದು ಯುಕ್ತ ಅವಕಾಶವನ್ನು ನೀಡಿದ ಹೊರತು, ಅವನ ಮೇಲೆ ಕ್ರಮವನ್ನು ಕೈಗೊಳ್ಳತಕ್ಕದ್ದಲ್ಲ.

(4) ಸಂದರ್ಭಾನುಸಾರ, (1)ನೇ ಉಪ-ಪ್ರಕರಣದ ಅಥವಾ (2)ನೇ ಉಪ-ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಆದೇಶದ ಒಂದು ಪ್ರತಿಯನ್ನು ಅದನ್ನು ಹಾಗೆ ಹೊರಡಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ನಿಯಮಿಸಲಾದ ರೀತಿಯಲ್ಲಿ ಸಂಬಂಧಪಟ್ಟ ವ್ಯಕ್ತಿಗೆ ಕಳುಹಿಸತಕ್ಕದ್ದು.

36. ವಿಶ್ವವಿದ್ಯಾಲಯದ ಪ್ರಾಧಿಕಾರಗಳು ಮತ್ತು ನಿಕಾಯಗಳ ರಚನೆಗೆ ಸಂಬಂಧಪಟ್ಟ ವಿವಾದಗಳು.- ಯಾವೊಬ್ಬ ವ್ಯಕ್ತಿಯು, ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಥವಾ ವಿಶ್ವವಿದ್ಯಾಲಯದ ಇತರ ನಿಕಾಯದ ಸದಸ್ಯನಾಗಿ ಯಥೋಚಿತವಾಗಿ ನಾಮನಿರ್ದೇಶಿತನಾಗಿದ್ದಾನೆಯೇ ಅಥವಾ ಸದಸ್ಯನಾಗಿರಲು ಹಕ್ಕುಳ್ಳವನಾಗಿದ್ದಾನೆಯೇ ಎಂಬ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಪ್ರಶ್ನೆಯನ್ನು ಕುಲಾಧಿಪತಿಯವರಿಗೆ ಕಳುಹಿಸತಕ್ಕದ್ದು ಮತ್ತು ಅದರ ಬಗ್ಗೆ ಅವರ ತೀರ್ಮಾನವು ಅಂತಿಮವಾಗಿರತಕ್ಕದ್ದು.

37. ಸಮಿತಿಗಳ ರಚನೆ.- ವಿಶ್ವವಿದ್ಯಾಲಯದ ಎಲ್ಲ ಪ್ರಾಧಿಕಾರಗಳು ಸಮಿತಿಗಳನ್ನು ರಚಿಸಲು ಅಥವಾ ಪುನರ್ ರಚಿಸಲು ಮತ್ತು ತಾವು ಉಚಿತವೆಂದು ಭಾವಿಸುವ ಅಂಥ ತಮ್ಮ ಅಧಿಕಾರಗಳನ್ನು ಅವುಗಳಿಗೆ ಪ್ರತ್ಯಾಯೋಜಿಸಲು ಅಧಿಕಾರ ಹೊಂದಿರತಕ್ಕದ್ದು. ಅಂಥ ಸಮಿತಿಗಳು, ಅನ್ಯಥಾ ಉಪಬಂಧಿಸಿರುವುದನ್ನುಳಿದು, ಸಂಬಂಧಪಟ್ಟ ಪ್ರಾಧಿಕಾರದ ಸದಸ್ಯರನ್ನು ಮತ್ತು ಪ್ರಾಧಿಕಾರವು ಪ್ರತಿಯೊಂದು ಸಂದರ್ಭದಲ್ಲಿ ತಾನು ಉಚಿತವೆಂದು ಭಾವಿಸಬಹುದಾದಂಥ ಇತರ ವ್ಯಕ್ತಿಗಳು, ಯಾರಾದರೂ ಇದ್ದರೆ, ಅವರನ್ನು ಒಳಗೊಂಡಿರತಕ್ಕದ್ದು.

ಅಧ್ಯಾಯ – V

ಶಾಸನಗಳು

38. ಶಾಸನಗಳು.– ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಶಾಸನಗಳು, ಈ ಮುಂದಿನ ಎಲ್ಲ ಅಥವಾ ಯಾವುವೇ ವಿಷಯಗಳಿಗಾಗಿ ಉಪಬಂಧ ಕಲ್ಪಿಸಬಹುದು, ಎಂದರೆ: –

(1) ಪದವಿಗಳನ್ನು ಪ್ರದಾನ ಮಾಡಲು ಘಟಿಕೋತ್ಸವವನ್ನು ಏರ್ಪಡಿಸುವುದು;

(2) ಗೌರವ ಪದವಿಗಳನ್ನು ಮತ್ತು ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು;

(3) ವಿಶ್ವವಿದ್ಯಾಲಯದ ಪ್ರಾಧಿಕಾರಗಳ ರಚನೆ, ಅಧಿಕಾರಗಳು ಮತ್ತು ಪ್ರಕಾರ್ಯಗಳು;

(4) ವಿಶ್ವವಿದ್ಯಾಲಯದ ಪ್ರಾಧಿಕಾರಗಳ ಸದಸ್ಯರ ಪೈಕಿಯಿಂದ ಖಾಲಿಸ್ಥಾನಗಳನ್ನು ಭರ್ತಿ ಮಾಡುವ ರೀತಿ;

(5) ಪ್ರಾಧಿಕಾರಗಳ ಮತ್ತು ಅವುಗಳ ಸಮಿತಿಗಳ ಸದಸ್ಯರಿಗೆ ಸಂದಾಯ ಮಾಡಬೇಕಾಗಿರುವ ಭತ್ಯೆಗಳು;

(6) ಪ್ರಾಧಿಕಾರಗಳ ಆದೇಶಗಳ ಅಥವಾ ತೀರ್ಮಾನಗಳ ಪ್ರಮಾಣೀಕರಣ;

(7) ಪ್ರಾಧಿಕಾರಗಳ ಸಭೆಗಳಲ್ಲಿನ ಕಾರ್ಯಕಲಾಪಗಳಿಗೆ, ಅಂಥ ಸಭೆಗಳಲ್ಲಿ ಇರಬೇಕಾದ ಗಣಪೂರ್ತಿಯನ್ನೂ ಒಳಗೊಂಡಂತೆ, ಅಂಥ ಸಭೆಗಳ ಕಾರ್ಯವಿಧಾನ;

(8) ವಿಶ್ವವಿದ್ಯಾಲಯದ ಸಂಶೋಧನಾ ಇಲಾಖೆಗಳ ರಚನೆ;

(9) ಕುಲಾಧಿಪತಿಯವರು ಮತ್ತು ಸಹಕುಲಾಧಿಪತಿಗಳಲ್ಲದ ವಿಶ್ವವಿದ್ಯಾಲಯದ ಅಧಿಕಾರಿಗಳ ಪದಾವಧಿ ಮತ್ತು ನೇಮಕಾತಿ ವಿಧಾನಗಳು ಮತ್ತು ಸೇವಾ ಷರತ್ತುಗಳು;

(10) ವಿಶ್ವವಿದ್ಯಾಲಯದಿಂದ ನಿಯೋಜಿತರಾದ ಬೋಧಕರು ಮತ್ತು ಇತರ ವ್ಯಕ್ತಿಗಳ ವಿದ್ಯಾರ್ಹತೆಗಳು;

(11) ವಿಶ್ವವಿದ್ಯಾಲಯದಿಂದ ನಿಯೋಜಿತರಾದ ಬೋಧಕರು ಮತ್ತು ಇತರ ವ್ಯಕ್ತಿಗಳ ವರ್ಗೀಕರಣ, ನೇಮಕಾತಿ ವಿಧಾನ ಮತ್ತು ಸೇವಾ ನಿಬಂಧನೆಗಳು ಮತ್ತು ಷರತ್ತುಗಳ ನಿರ್ಧಾರ;

H-252-92

(12) ವಿಶ್ವವಿದ್ಯಾಲಯದಿಂದ ನಿಯೋಜಿತರಾದ ಅಧಿಕಾರಿಗಳು, ಬೋಧಕರು ಮತ್ತು ಇತರ ವ್ಯಕ್ತಿಗಳ ಪ್ರಯೋಜನಕ್ಕಾಗಿ ನಿವೃತ್ತಿ ವೇತನ, ಉಪದಾನ, ವಿಮೆ ಅಥವಾ ಭವಿಷ್ಯ ನಿಧಿಗಳ ಪ್ರಾರಂಭ;

(13) ಸಂಶೋಧನಾ ವೇತನಗಳು, ಪ್ರವಾಸೀ ಸಂಶೋಧನಾ ವೇತನಗಳು, ವಿದ್ಯಾರ್ಥಿ ವೇತನ, ಶಿಷ್ಯ ವೇತನ, ಬರ್ಸರಿಗಳು, ಪ್ರದರ್ಶನಗಳು, ಪದಕಗಳು ಮತ್ತು ಬಹುಮಾನಗಳನ್ನು ನೀಡುವುದನ್ನು ಪ್ರಾರಂಭಿಸುವುದು ಮತ್ತು ಅವುಗಳನ್ನು ನೀಡುವ ಬಗ್ಗೆ ಷರತ್ತುಗಳು;

(14) ವಸತಿ ನಿಲಯಗಳು ಮತ್ತು ಹಾಸ್ಟೆಲುಗಳ ಸ್ಥಾಪನೆ ಮತ್ತು ನಿರ್ವಹಣೆ;

(15) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ವಸತಿ ಮತ್ತು ವಿಶ್ವವಿದ್ಯಾಲಯವು ನಿರ್ವಹಿಸುವ ಹಾಸ್ಟೆಲುಗಳು ಮತ್ತು ವಸತಿ ನಿಲಯಗಳ ಷರತ್ತುಗಳು ಮತ್ತು ಅಂಥ ವಸತಿಗೆ ಶುಲ್ಕಗಳು ಮತ್ತು ಇತರ ವೆಚ್ಚಗಳನ್ನು ವಿಧಿಸುವುದು;

(16) ವಿಶ್ವವಿದ್ಯಾಲಯದ ಅಧಿಕಾರಿಗಳ ಮೇಲೆ ಪ್ರಾಧಿಕಾರಗಳಲ್ಲಿ ನಿಹಿತವಾಗಿರುವ ಅಧಿಕಾರಗಳ ಪ್ರತ್ಯಾಯೋಜನೆ;

(17) ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಥಿಗಳ ಪ್ರವೇಶ;

(18) ಪರೀಕ್ಷಾ ನಿಕಾಯಗಳು ಮತ್ತು ಪರೀಕ್ಷಕರ ನೇಮಕಾತಿ ಷರತ್ತುಗಳು ಮತ್ತು ವಿಧಾನ ಹಾಗೂ ಅವರ ಕರ್ತವ್ಯಗಳು;

(19) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಮಧ್ಯೆ ಶಿಸ್ತು ನಿರ್ವಹಣೆಯ ಷರತ್ತುಗಳು;

(20) ಸಂಶೋಧನೆಗೆ ವಿಧಿಸಬೇಕಾದ ಶುಲ್ಕಗಳು; ಮತ್ತು

(21) ಪರಿನಿಯಮಗಳಿಂದ ನಿಯಮಿಸುವ ಅಗತ್ಯವಿರುವ ಅಥವಾ ನಿಯಮಿಸಬಹುದಾದ ಇತರ ಯಾವುದೇ ವಿಷಯ.

39. ಶಾಸನಗಳನ್ನು ರಚಿಸುವ ಬಗೆ.- (1) ಪ್ರಶಾಸನ ಸಭೆಯು ಈ ಪ್ರಕರಣದಲ್ಲಿ ಇನ್ನು ಮುಂದೆ ಉಪಬಂಧಿಸಿದ ವಿಧಾನದಲ್ಲಿ ಕಾಲಕಾಲಕ್ಕೆ ಶಾಸನಗಳನ್ನು ರಚಿಸಬಹುದು ಹಾಗೂ ಅವುಗಳನ್ನು ತಿದ್ದುಪಡಿ ಮಾಡಬಹುದು ಅಥವಾ ನಿರಸನಗೊಳಿಸಬಹುದು.

(2) ಪ್ರಶಿಕ್ಷಣ ಪರಿಷತ್ತು ಅಥವಾ ಕುಲಪತಿಯವರು ಯಾವುವೇ ಶಾಸನಗಳ ಅಥವಾ ಅವುಗಳಿಗೆ ಮಾಡಬೇಕಾದ ಯಾವುವೇ ತಿದ್ದುಪಡಿಗಳ

ಕರಡನ್ನು ಅಥವಾ ಶಾಸನದ ನಿರಸನದ ಪ್ರಸ್ತಾವದ ಕರಡನ್ನು ಪ್ರಶಾಸನ ಸಭೆಯ ಅಂಗೀಕಾರಕ್ಕಾಗಿ ಸಲ್ಲಿಸಬಹುದು ಮತ್ತು ಅಂಥ ಕರಡನ್ನು ಪ್ರಶಾಸನ ಸಭೆಯು ತನ್ನ ಮುಂದಿನ ಸಭೆಯಲ್ಲಿ ಪರಿಗಣಿಸತಕ್ಕದ್ದು:

ಪರಂತು, ಕುಲಪತಿಯವರು ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಧಿಕಾರಗಳಿಗೆ ಮತ್ತು ರಚನೆಗೆ ಬಾಧಕವಾಗುವಂತೆ ಯಾವುವೇ ಶಾಸನಗಳಿಗೆ ಯಾವುವೇ ತಿದ್ದುಪಡಿಗಳನ್ನು ಮಾಡುವ ಪ್ರಸ್ತಾವಗಳನ್ನು, ಅಂಥ ಪ್ರಾಧಿಕಾರಕ್ಕೆ ತನ್ನ ಅಭಿಪ್ರಾಯವನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡದೇ ಮಂಡಿಸತಕ್ಕದ್ದಲ್ಲ ಮತ್ತು ಹಾಗೆ ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಪ್ರಶಾಸನ ಸಭೆ ಪರಿಗಣಿಸತಕ್ಕದ್ದು.

(3) ಪ್ರಶಿಕ್ಷಣ ಪರಿಷತ್ತು ಅಥವಾ ಕುಲಪತಿಯವರು (2)ನೇ ಉಪಪ್ರಕರಣದ ಅಡಿಯಲ್ಲಿ ಪ್ರಸ್ತಾವಿಸಿದ ಕರಡನ್ನು ಪ್ರಶಾಸನ ಸಭೆಯು ಪರಿಗಣಿಸಬಹುದು ಮತ್ತು ಆ ಕರಡನ್ನು ಅಂಗೀಕರಿಸಬಹುದು ಅಥವಾ ತಿರಸ್ಕರಿಸಬಹುದು ಅಥವಾ ತಿದ್ದುಪಡಿಗಳೊಡನೆ ಅಥವಾ ತಿದ್ದುಪಡಿಗಳಿಲ್ಲದೆ ಅದನ್ನು ಪುನರ್ ಪರಿಗಣನೆ ಮಾಡಲು ಸಂದರ್ಭಾನುಸಾರ ಪ್ರಶಿಕ್ಷಣ ಪರಿಷತ್ತಿಗೆ ಅಥವಾ ಕುಲಪತಿಯವರಿಗೆ ಹಿಂದಿರುಗಿಸಬಹುದು.

(4) (ಎ) ಪ್ರಶಾಸನ ಸಭೆಯ ಯಾವೊಬ್ಬ ಸದಸ್ಯನು, ಪ್ರಶಾಸನ ಸಭೆಗೆ ಕರಡು ಶಾಸನಗಳನ್ನು ಅಥವಾ ಶಾಸನಗಳ ತಿದ್ದುಪಡಿ ಅಥವಾ ನಿರಸನಕ್ಕಾಗಿ ಪ್ರಸ್ತಾವವನ್ನು ಸಲ್ಲಿಸಬಹುದು ಮತ್ತು ಪ್ರಶಾಸನ ಸಭೆಯು, ಆ ವಿಷಯವು ಪ್ರಶಿಕ್ಷಣ ಸಭೆಯ ಪರಿಮಿತಿಯಲ್ಲಿ ಬರುವಂತಹದಲ್ಲದಿದ್ದರೆ ಕರಡನ್ನು ಒಪ್ಪಿಕೊಳ್ಳಬಹುದು ಅಥವಾ ತಿರಸ್ಕರಿಸಬಹುದು.

(ಬಿ) ವಿಷಯವು ಪ್ರಶಿಕ್ಷಣ ಪರಿಷತ್ತಿನ ಪರಿಮಿತಿಯಲ್ಲಿ ಬರುತ್ತಿದ್ದರೆ ಅಂಥ ಕರಡನ್ನು ಪ್ರಶಾಸನ ಸಭೆಯು ಪ್ರಶಿಕ್ಷಣ ಪರಿಷತ್ತಿಗೆ ಪರಿಗಣನೆಗಾಗಿ ಕಳುಹಿಸತಕ್ಕದ್ದು. ಪ್ರಶಿಕ್ಷಣ ಪರಿಷತ್ತು, ಪ್ರಶಾಸನ ಸಭೆಗೆ ತಾನು ಕರಡನ್ನು ಒಪ್ಪಿಲ್ಲವೆಂದು ವರದಿ ಮಾಡಬಹುದು ಅಥವಾ ಪ್ರಶಿಕ್ಷಣ ಪರಿಷತ್ತು ಅಂಗೀಕರಿಸಬಹುದಾದ ರೂಪದಲ್ಲಿ ಕರಡನ್ನು ಪ್ರಶಾಸನ ಸಭೆಗೆ ಸಲ್ಲಿಸಬಹುದು ಮತ್ತು ಪ್ರಶಾಸನ ಸಭೆಯು ತಿದ್ದುಪಡಿ ಇಲ್ಲದೆ ಅಥವಾ ತಿದ್ದುಪಡಿಗಳೊಡನೆ

ಕರಡನ್ನು ಅಂಗೀಕರಿಸಬಹುದು ಅಥವಾ ತಿರಸ್ಕರಿಸಬಹುದು.

(5) ಪ್ರಶಾಸನಸಭೆಯು, ಹಣಕಾಸಿನ ವಿಷಯಗಳನ್ನು ಒಳಗೊಂಡ ಶಾಸನಗಳ ಸಂಬಂಧದಲ್ಲಿ ಹಣಕಾಸು ಸಮಿತಿಯ ಅಭಿಪ್ರಾಯವನ್ನು ಪಡೆಯತಕ್ಕದ್ದು.

(6) ಪ್ರಶಾಸನ ಸಭೆಯು ಕರಡು ಶಾಸನಗಳ ಸಂಬಂಧದಲ್ಲಿ ಅವುಗಳನ್ನು ಪರಿಗಣಿಸುವುದಕ್ಕೆ ಮುಂಚೆ ತಾನು ಅವಶ್ಯವೆಂದು ಭಾವಿಸಿದರೆ, ವಿಶ್ವವಿದ್ಯಾಲಯದ ಯಾವೊಬ್ಬ ಅಧಿಕಾರಿಯ, ಪ್ರಾಧಿಕಾರದ ಅಥವಾ ನಿಕಾಯದ ಅಭಿಪ್ರಾಯವನ್ನು ಸಹ ಪಡೆಯಬಹುದು.

(7) ಪ್ರಶಾಸನ ಸಭೆಯು ತಾನು ಅಂಗೀಕರಿಸಿದ ಪ್ರತಿಯೊಂದು ಶಾಸನವನ್ನು, ತನ್ನ ನಿರ್ದಿಷ್ಟ ಶಿಫಾರಸ್ಸುಗಳೊಡನೆ ಅನುಮೋದನೆಗಾಗಿ ಕುಲಾಧಿಪತಿಯವರಿಗೆ ಒಪ್ಪಿಸುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(8) ರಾಜ್ಯ ಸರ್ಕಾರವು, ಕರಡು ಶಾಸನಗಳನ್ನು ಸ್ವೀಕರಿಸಿದ ಮೇಲೆ, ಅವುಗಳನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳುಗಳೊಳಗೆ ತನ್ನ ಟೀಕೆ ಟಿಪ್ಪಣಿಗಳು ಮತ್ತು ನಿರ್ದಿಷ್ಟ ಶಿಫಾರಸ್ಸುಗಳೊಡನೆ, ಅಂಥ ಕರಡು ಶಾಸನಗಳನ್ನು ಕುಲಾಧಿಪತಿಯವರಿಗೆ ಕಳುಹಿಸತಕ್ಕದ್ದು ಮತ್ತು ಕುಲಾಧಿಪತಿಯವರು, ರಾಜ್ಯ ಸರ್ಕಾರದಿಂದ ಕರಡು ಶಾಸನಗಳನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳೊಳಗೆ ತನ್ನ ಅನುಮೋದನೆಯನ್ನು ನೀಡಬಹುದು ಅಥವಾ ಅದಕ್ಕೆ ತನ್ನ ಅನುಮೋದನೆಯನ್ನು ತಡೆಹಿಡಿಯಬಹುದು ಅಥವಾ ಅದನ್ನು ಮತ್ತಷ್ಟು ಪರಿಗಣನೆಗಾಗಿ ಪ್ರಶಾಸನ ಸಭೆಗೆ ಕಳುಹಿಸಬಹುದು.

(9) ಪ್ರಶಾಸನ ಸಭೆಯು ಅಂಗೀಕರಿಸಿದ ಶಾಸನಗಳನ್ನು ಕುಲಾಧಿಪತಿಯವರು ಅನುಮೋದಿಸುವವರೆಗೆ ಜಾರಿಗೊಳಿಸತಕ್ಕದ್ದಲ್ಲ.

40. ವಿನಿಯಮಗಳು.– (1) ಪ್ರಶಿಕ್ಷಣ ಪರಿಷತ್ತು ಎಲ್ಲಾ ಅಥವಾ ಯಾವುವೇ ಅಧಿಕಾರಗಳನ್ನು ಚಲಾಯಿಸಲು ಉಪಬಂಧಿಸುವುದಕ್ಕಾಗಿ ಮತ್ತು ವಿಶೇಷವಾಗಿ ಈ ಮುಂದಿನ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸುವುದಕ್ಕಾಗಿ ಈ ಅಧಿನಿಯಮಕ್ಕೆ ಸುಸಂಗತವಾಗಿರುವ ವಿನಿಯಮಗಳನ್ನು ರಚಿಸಬಹುದು, ಎಂದರೆ:–

(ಎ) ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಥಿಗಳ ಪ್ರವೇಶ;

(ಬಿ) ಇತರ ವಿಶ್ವವಿದ್ಯಾಲಯಗಳ ಪರೀಕ್ಷೆಗಳು ಮತ್ತು ಪದವಿಗಳನ್ನು, ವಿಶ್ವವಿದ್ಯಾಲಯದ ಪರೀಕ್ಷೆ ಮತ್ತು ಪದವಿಗಳಿಗೆ ಸಮನಾದುವೆಂದು ಮನ್ನಣೆ ನೀಡುವುದು;

(ಸಿ) ವಿಶ್ವವಿದ್ಯಾಲಯದ ವ್ಯಾಸಂಗ ಕ್ರಮಗಳು ಮತ್ತು ಪರೀಕ್ಷೆಗಳು ಮತ್ತು ವಿಶ್ವವಿದ್ಯಾಲಯದ ಅಥವಾ ಸಂಯೋಜನೆಗೊಂಡ ಕಾಲೇಜುಗಳ ಅಥವಾ ವಿಶ್ವವಿದ್ಯಾಲಯದ ಇತರ ಸಂಸ್ಥೆಗಳ ವಿದ್ಯಾರ್ಥಿಗಳನ್ನು ಯಾವ ಷರತ್ತುಗಳ ಮೇಲೆ ವಿಶ್ವವಿದ್ಯಾಲಯದ ಪರೀಕ್ಷೆಗಳು ಅಥವಾ ಪದವಿಗಳು, ಡಿಪ್ಲೊಮೋಗಳು ಮತ್ತು ಇತರ ಪ್ರಮಾಣ ಪತ್ರಗಳಿಗೆ ಸೇರಿಸಿಕೊಳ್ಳತಕ್ಕದ್ದೋ ಆ ಷರತ್ತುಗಳು;

(ಡಿ) ವಿನಾಯಿತಿಗಳನ್ನು ನೀಡುವುದು ಮತ್ತು

(ಇ) ವಿನಿಯಮಗಳ ಮೂಲಕ ನಿಯಂತ್ರಿಸುವ ಅಗತ್ಯವಿರುವ ಅಥವಾ ನಿಯಂತ್ರಿಸಬಹುದಾದ ಯಾವುವೇ ಇತರ ವಿಷಯಗಳು

(2) ಪ್ರಶಿಕ್ಷಣ ಪರಿಷತ್ತು ಅಂಗೀಕರಿಸಿದ ಎಲ್ಲ ವಿನಿಯಮಗಳನ್ನು ಕುಲಾಧಿಪತಿಯವರ ಅನುಮೋದನೆಗಾಗಿ ಸಲ್ಲಿಸಲು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು. ರಾಜ್ಯ ಸರ್ಕಾರವು, ವಿಶ್ವವಿದ್ಯಾಲಯದಿಂದ ಸ್ವೀಕರಿಸಿದ ವಿನಿಯಮಗಳನ್ನು ಅವುಗಳನ್ನು ಸ್ವೀಕರಿಸಿದ ದಿನದಿಂದ ಎರಡು ತಿಂಗಳೊಳಗೆ ತನ್ನ ಟೀಕೆ ಟಿಪ್ಪಣಿಗಳೊಡನೆ ಕುಲಾಧಿಪತಿಯವರಿಗೆ ಕಳುಹಿಸತಕ್ಕದ್ದು. ಕುಲಾಧಿಪತಿಯವರು, ರಾಜ್ಯ ಸರ್ಕಾರದಿಂದ ಈ ವಿನಿಯಮಗಳನ್ನು ಸ್ವೀಕರಿಸಿದ ದಿನದಿಂದ ಒಂದು ತಿಂಗಳೊಳಗೆ ಅವುಗಳನ್ನು ಅನುಮೋದಿಸಬಹುದು ಅಥವಾ ಮತ್ತಷ್ಟು ಪರಿಶೀಲನೆಗಾಗಿ ಅವುಗಳನ್ನು ಪ್ರಶಿಕ್ಷಣ ಪರಿಷತ್ತಿಗೆ ಹಿಂದಿರುಗಿಸಬಹುದು.

(3) ಎಲ್ಲ ವಿನಿಯಮಗಳು, ಕುಲಾಧಿಪತಿಯವರು ಅವುಗಳನ್ನು ಅನುಮೋದಿಸಿದ ದಿನಾಂಕದಿಂದ ಅಥವಾ ಕುಲಾಧಿಪತಿಯವರು ನಿರ್ದೇಶಿಸಬಹುದಾದಂಥ ಇತರ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

ಅಧ್ಯಾಯ – VI

ಫ್ಯಾಕಲ್ಟಿಗಳು

ಲ್ಟಿಗಳು ಮತ್ತು ವಿಭಾಗಗಳು.– ಈ ಕೆಳಗೆ ಹೇಳಿದ ವಿಭಾಗಗಳನ್ನು ನ್ನ ಅಡಿಯಲ್ಲಿ ಹೊಂದಿರುವಂಥ ಈ ಮುಂದಿನ ಫ್ಯಾಕಲ್ಟಿಗಳು ಇರತಕ್ಕದ್ದು:–

I. ಗೇಯ ಸಂಗೀತ (ಹಾಡುಗಾರಿಕೆ) ಫ್ಯಾಕಲ್ಟಿ

II. ವಾದ್ಯ ಸಂಗೀತ ಫ್ಯಾಕಲ್ಟಿ

III. ಸಂಗೀತ ಶಾಸ್ತ್ರದ ಫ್ಯಾಕಲ್ಟಿ

IV. ನೃತ್ಯದ ಫ್ಯಾಕಲ್ಟಿ

V. ಪ್ರದರ್ಶಕ ಕಲೆಗಳ ಫ್ಯಾಕಲ್ಟಿ

VI. ನಾಟಕ ಫ್ಯಾಕಲ್ಟಿ

VII. ವಿಶ್ವವಿದ್ಯಾಲಯವು ನಿರ್ಧರಿಸಬಹುದಾದ ಇತರ ಫ್ಯಾಕಲ್ಟಿ

I. ಗೇಯ ಸಂಗೀತ (ಹಾಡುಗಾರಿಕೆ) ಫ್ಯಾಕಲ್ಟಿ

ಈ ಫ್ಯಾಕಲ್ಟಿಯ ಅಡಿಯಲ್ಲಿ ಕೆಳಗೆ ತಿಳಿಸಿರುವ ಸಂಗೀತ ವಿಭಾಗಗಳು ಇರುತ್ತವೆ.

ಎ. ಹಿಂದೂಸ್ತಾನೀ ಶಾಸ್ತ್ರೀಯ ಗಾಯನ ಸಂಗೀತ ವಿಭಾಗ

ಬಿ. ಕರ್ನಾಟಕ ಶಾಸ್ತ್ರೀಯ ಗಾಯನ ಸಂಗೀತ ವಿಭಾಗ

II. ವಾದ್ಯ ಸಂಗೀತ ಫ್ಯಾಕಲ್ಟಿ

